JJ50
(B) 25249

ಸುವರ್ಣ ಕರ್ನಾಟಕ - 2006

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ

SECOND SESSION OF THE TWELFTH LEGISLATIVE ASSEMBLY

ಸಂಪುಟ – ೫ (ಕ್ರಮಾಂಕ ೧–೩) **Volume - 5 (No. 1-3)**

(೧೧ನೇ ಮಾರ್ಚ್ ೨೦೦೫, ೧೪ನೇ ಮಾರ್ಚ್ ೨೦೦೫
ಮತ್ತು ೧೫ನೇ ಮಾರ್ಚ್ ೨೦೦೫)

**(11th March 2005, 14th March 2005 and
15th March 2005)**



ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

(B) 025249

ಅಧಿಕೃತ ವರದಿ

OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ

SECOND SESSION OF THE TWELFTH LEGISLATIVE ASSEMBLY

ಸಂಪುಟ – ೫ (ಕ್ರಮಾಂಕ ೧–೩) **Volume - 5 (No. 1-3)**

(೧೧ನೇ ಮಾರ್ಚ್ ೨೦೦೫, ೧೪ನೇ ಮಾರ್ಚ್ ೨೦೦೫ ಮತ್ತು ೧೫ನೇ ಮಾರ್ಚ್ ೨೦೦೫)

(11th March 2005, 14th March 2005 and 15th March 2005)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

139-1

ಕರ್ನಾಟಕ ವಿಧಾನಸಭೆ

ವಿಷಯಾನುಕ್ರಮಣಿಕೆ

ಸಂಪುಟ-5 (ಕ್ರಮಾಂಕ 1 ರಿಂದ 3)

(11ನೇ ಮಾರ್ಚ್ 2005, 14ನೇ ಮಾರ್ಚ್ 2005 ಮತ್ತು 15ನೇ ಮಾರ್ಚ್ 2005)

ಶುಕ್ರವಾರ, ದಿನಾಂಕ 11ನೇ ಮಾರ್ಚ್ 2005

ಪುಟ ಸಂಖ್ಯೆ

1. 2005-06ನೇ ಸಾಲಿನ ಆಯವ್ಯಯ ಅಂದಾಜು ಪತ್ರದ ಮಂಡನೆ: 1-62
   - ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)
2. **Budget Estimates for 2005-06** 63-126
   (English Version)

ಸೋಮವಾರ, ದಿನಾಂಕ 14ನೇ ಮಾರ್ಚ್ 2005

1. ಸಂತಾಪ ಸೂಚನೆ : 127-133
   - ಶ್ರೀ ಗೋವಿಂದರಾವ್ ಲಕ್ಷ್ಮಣರಾವ್ ಅಸ್ತೇಕರ್
   - ಶ್ರೀ ಕೆ. ಎಂ. ರುದ್ರಪ್ಪ
   - ಶ್ರೀ ಗುಡನ್‌ಶಹಾ ಖಾನ್‌ಶಹಾ ಟಕ್ಕೋಡ್
   - ಶ್ರೀ ಐ.ಎನ್.ಎ. ರಾಮರಾವ್ (ಮಾಜಿ ಸದಸ್ಯರುಗಳ ನಿಧನ)
2. ಸಭೆಯ ಮುಂದಿಡಲಾದ ಕಾಗದ ಪತ್ರಗಳು: 133-158
   (ಕಾರ್ಯದರ್ಶಿಯವರ ವರದಿ)
   ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ
   2005ನೇ ಸಾಲಿನ ಬಸವ ಕಲ್ಯಾಣ
   ಅಭಿವೃದ್ಧಿ ಮಂಡಳಿ ವಿಧೇಯಕ - (ಅನುಬಂಧ-I)
   - (ಮಂಡಿಸಲಾಯಿತು)
3. ನಿಯಮ 69ರ ಮೇರೆಗೆ ಚರ್ಚೆ: 159-199
   ರಾಜ್ಯದಲ್ಲಿ ನಕ್ಸಲೀಯರ ಚಟುವಟಿಕೆ ಮತ್ತು ಕಾನೂನು
   ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.
   - ಶ್ರೀ ಬಿ.ಎಸ್. ಯಡಿಯೂರಪ್ಪ
   (ವಿರೋಧ ಪಕ್ಷದ ನಾಯಕರು)
   - ಶ್ರೀ ಜೆ.ಸಿ. ಮಾಧುಸ್ವಾಮಿ
   - ಶ್ರೀ ವಾಟಾಳ್ ನಾಗರಾಜ್
   - ಶ್ರೀ ಜಿ.ವಿ. ಶ್ರೀರಾಮರೆಡ್ಡಿ

ಪುಟ ಸಂಖ್ಯೆ

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ : 199–201
ಸದನದಲ್ಲಿ ಸಚಿವರುಗಳ ಹಾಜರಿ ಬಗ್ಗೆ.
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಶ್ರೀ ಜೆ.ಸಿ. ಮಾಧುಸ್ವಾಮಿ

5. ನಿಯಮ 69ರ ಮೇರೆಗೆ ಚರ್ಚೆ: 201–261
ರಾಜ್ಯದಲ್ಲಿ ನಕ್ಸಲೀಯರ ಚಟುವಟಿಕೆ ಮತ್ತು ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ
– ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)
– ಶ್ರೀ ಕೆ. ಗೋಪಾಲಪೂಜಾರಿ
– ಶ್ರೀ ಕೆ. ಆರ್. ರಮೇಶ್ ಕುಮಾರ್
– ಶ್ರೀ ಗೋವಿಂದ ಎಂ. ಕಾರಜೋಳ
– ಶ್ರೀ ಎಸ್. ರಾಜೇಂದ್ರನ್
– ಶ್ರೀ ಸಿ.ಟಿ. ರವಿ
– ಶ್ರೀ ಕೆ.ಎಂ. ತಿಮ್ಮರಾಯಪ್ಪ
– ಶ್ರೀ ವೈಜನಾಥ್ ಪಾಟೀಲ್
– ಶ್ರೀ ವಿ. ಸುನೀಲ್ ಕುಮಾರ್
– ಶ್ರೀ ಎ. ಪಾಪರೆಡ್ಡಿ
– ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ.

ಮಂಗಳವಾರ, ದಿನಾಂಕ 15ನೇ ಮಾರ್ಚ್ 2005

1. ಅಧ್ಯಕ್ಷರ ಅಪ್ಪಣೆ ಮೇರೆಗೆ: 262–268
ಅ) ಉಡುಪಿ ಘಟನೆ ಬಗ್ಗೆ.
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
ಆ). ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ
– ಶ್ರೀ ವಾಟಾಳ್ ನಾಗರಾಜ್
ಇ) ನಕ್ಸಲೈಟ್ ಸಮಸ್ಯೆ ಬಗ್ಗೆ.
– ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ
ಈ) ಪ್ರಶ್ನೆಗಳಿಗೆ ಉತ್ತರಗಳು ಬಾರದೇ ಇರುವ ಬಗ್ಗೆ.
– ಶ್ರೀ ವಿ. ಸುನೀಲ್ ಕುಮಾರ್

ಪುಟ ಸಂಖ್ಯೆ

2. **ಪ್ರಶ್ನೋತ್ತರಗಳು:** 269–312

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು:

1. ಶ್ರೀ ಬಿ. ಆರ್. ಪಾಟೀಲ್
2. ಶ್ರೀ ಜಿ. ಶಿವಣ್ಣ
3. ಶ್ರೀ ಎ. ಪಾಪರೆಡ್ಡಿ
4. ಶ್ರೀ ಮೋಹನ್ ಕೃಷ್ಣಶೆಟ್ಟಿ
5. ಶ್ರೀ ಎಸ್.ಎಸ್. ಪಾಟೀಲ್
6. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
7. ಶ್ರೀ ಸಿ.ಟಿ. ರವಿ
8. ಶ್ರೀ ಡಿ. ಎನ್. ಜೀವರಾಜ್
9. ಶ್ರೀ ಎಸ್. ರಾಜೇಂದ್ರನ್

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು: (ಅನುಬಂಧ–1)

3. **ಸಭೆಯ ಮುಂದಿಡಲಾದ ಕಾಗದ ಪತ್ರಗಳು:** 312

2004–5ನೇ ಸಾಲಿನ ರಾಜ್ಯ ಹಣಕಾಸು ಪರಿಸ್ಥಿತಿಯ ಮಧ್ಯಮಾವಧಿ ಪರಿಶೀಲನಾ ವರದಿ. (ಅನುಬಂಧ–2)

– ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)

4. **ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:** 312–333

ಅ) ಹಕ್ಕುಚ್ಯುತಿ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುವ ಬಗ್ಗೆ

– ಶ್ರೀ ಜೆ.ಸಿ. ಮಾಧುಸ್ವಾಮಿ

ಆ) ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಬೆಂಚ್ ಸ್ಥಾಪನೆ ಬಗ್ಗೆ.

– ಶ್ರೀ ಜಗದೀಶ್ ಶೆಟ್ಟರ್

– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

– ಶ್ರೀ ಹೆಚ್. ಕೆ. ಪಾಟೀಲ್

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಇ) ಮಹಾರಾಷ್ಟ್ರ ರಾಜ್ಯಪಾಲರಾದ ಶ್ರೀ ಎಸ್. ಎಂ. ಕೃಷ್ಣ ಅವರು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಮಹಾಜನ ವರದಿ ಬಗ್ಗೆ ವಿಶ್ಲೇಷಣೆ ಮಾಡಿರುವ ಕುರಿತು.

– ಶ್ರೀ ವಾಟಾಳ್ ನಾಗರಾಜ್

– ಶ್ರೀ ಜೆ.ಸಿ. ಮಾಧುಸ್ವಾಮಿ

ಪುಟ ಸಂಖ್ಯೆ

– ಶ್ರೀ ಹೆಚ್. ಕೆ. ಪಾಟೀಲ್
(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಈ) ಉಡುಪಿಯಲ್ಲಿ ತಂದೆ–ಮಗ ಇಬ್ಬರನ್ನು ಬೆತ್ತಲೆ ಮಾಡಿ ಹಿಂಸಿಸಿದ್ದರ ಬಗ್ಗೆ.
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಶ್ರೀ ಕೆ. ಜಯಪ್ರಕಾಶ್ ಹೆಗಡೆ
– ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)
– ಶ್ರೀ ಕೆ. ಎಸ್. ಈಶ್ವರಪ್ಪ
– ಶ್ರೀ ಬಿ. ಎಸ್. ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)

ಉ) ದಿದ್ದಗಿ ಗ್ರಾಮದಲ್ಲಿ ಆಲಿಕಲ್ಲು ಮಳೆಯಿಂದ ಬೆಳೆ ಹಾನಿ, ಜಾನುವಾರುಗಳ ಸಾವಿನ ಬಗ್ಗೆ.
– ಶ್ರೀ ಹಂಪನಗೌಡ ಬಾದರ್ಲಿ
– ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಊ) ಮಹಿಳೆಯರ ಮೇಲಿನ ದೌರ್ಜನ್ಯ.
– ಶ್ರೀಮತಿ ಶಕುಂತಲಾ ಶೆಟ್ಟಿ
– ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ

ಋ) ಬೆಂಗಳೂರು ಸುತ್ತಮುತ್ತಲಿನ ನಗರಸಭೆಗಳ ವ್ಯಾಪ್ತಿಯಲ್ಲಿನ ರೆವಿನ್ಯೂ ನಿವೇಶನಗಳಲ್ಲಿರುವ ಮನೆಗಳಿಗೆ ಅಭಿವೃದ್ಧಿ ಶುಲ್ಕ ವಸೂಲು ಮಾಡುವ ಬಗ್ಗೆ.
– ಶ್ರೀ ಆರ್. ಅಶೋಕ್
– ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)

ೠ) ಕಾರ್ಕಳದಲ್ಲಿ ಜನತಾದಳ ಕಾರ್ಯಕರ್ತನ ಹತ್ಯೆ ಬಗ್ಗೆ.
– ಶ್ರೀ ಸುನೀಲ್ ಕುಮಾರ್
– ಶ್ರೀ ಪಿ.ಜಿ. ಆರ್. ಸಿಂಧ್ಯಾ (ಕೈಗಾರಿಕೆ ಸಚಿವರು)

ಎ) ಸದನದ ಅಧಿಕಾರಿಗಳ ಗ್ಯಾಲರಿಯಲ್ಲಿ ಇಲಾಖಾಧಿಕಾರಿಗಳು ಉಪಸ್ಥಿತರಿಲ್ಲದಿರುವ ಬಗ್ಗೆ.
– ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)
– ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ

ಪುಟ ಸಂಖ್ಯೆ

– ಶ್ರೀ ಜೆ.ಸಿ. ಮಾಧುಸ್ವಾಮಿ
– ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)
– ಶ್ರೀ ಪಿ.ಜಿ.ಆರ್. ಸಿಂಧ್ಯಾ
(ಮಧ್ಯಮ ಮತ್ತು ಬೃಹತ್ ಕೈಗಾರಿಕಾ ಸಚಿವರು)

ಏ) ಬೆಳಗಾವಿ ತಾಲ್ಲೂಕಿನ ಯತ್ತೂರ ಗ್ರಾಮದ ಬಳಿ ಇರುವ ಕೋಟೆ ಪ್ರದೇಶದ ಬಗ್ಗೆ.
– ಶ್ರೀ ಮನೋಹರ ಕೆ. ಕಿನೇಕಾರ್
– ಶ್ರೀ ಪಿ.ಜಿ.ಆರ್. ಸಿಂಧ್ಯಾ
(ಮಧ್ಯಮ ಮತ್ತು ಬೃಹತ್ ಕೈಗಾರಿಕಾ ಸಚಿವರು)

ಐ) ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ವಸತಿ ಸಮುಚ್ಛಯ ಮಾಡುತ್ತಿರುವ ಬಗ್ಗೆ.
– ಶ್ರೀ ನರೇಂದ್ರಬಾಬು ನೆ.ಲ.

5. ನಿಯಮ 69ರ ಮೇರೆಗೆ ಚರ್ಚೆ (ಮುಂದುವರೆದ ಚರ್ಚೆ ಮತ್ತು ಸರ್ಕಾರದಿಂದ ಉತ್ತರ): 333–395

ರಾಜ್ಯದಲ್ಲಿ ನಕ್ಸಲೀಯರ ಚಟುವಟಿಕೆ ಮತ್ತು ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.
– ಶ್ರೀ ಡಿ.ಎಸ್. ಜೀವರಾಜ್
– ಶ್ರೀ ಸಿದ್ದು ಕೆ. ಸವದಿ
– ಶ್ರೀ ಆರ್. ಅಶೋಕ್
– ಶ್ರೀ ಕೆ. ಎಸ್. ಈಶ್ವರಪ್ಪ
– ಶ್ರೀ ಕುಮಾರ್ ಬಂಗಾರಪ್ಪ
– ಶ್ರೀ ಬಿ. ಆರ್. ಪಾಟೀಲ್
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

6. ಪ್ರಕಟಣೆ: 395–641

ವಿಧಾನ ಮಂಡಲದ ಉಭಯ ಸದನಗಳ ಸದಸ್ಯರು ಬ್ಲಾಕ್ ಚಿತ್ರವನ್ನು ವೀಕ್ಷಿಸಲು ಏರ್ಪಾಟು ಮಾಡಿರುವ ಬಗ್ಗೆ.

* * * * *

ಕರ್ನಾಟಕ ವಿಧಾನಸಭೆ

ಶುಕ್ರವಾರ 11ನೇ ಮಾರ್ಚ್ 2005 ರಂದು ಸದನವು ವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.

ಅಧ್ಯಕ್ಷರು: ಈಗ ಆಯವ್ಯಯ ಪತ್ರದ ಮಂಡನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯನವರು 2005-06ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸುವುದು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಕ್ಷಮಿಸಬೇಕು. ಪ್ರತೀ ಸಲವೂ ಬಜೆಟ್ ಅಧಿವೇಶನವನ್ನು 15 ದಿವಸಕ್ಕೆ ಮಾತ್ರ ಕರೆಯತಕ್ಕಂಥದ್ದು ಸರಿಯಲ್ಲ. ಆಯವ್ಯಯ ಮಂಡನೆ ಮಾಡತಕ್ಕಂಥದ್ದಕ್ಕೆ ಒಂದು ವಿಶಿಷ್ಟವಾದ ಸ್ಥಾನಮಾನವಿದೆ. ಬಜೆಟ್ ಅಧಿವೇಶನವನ್ನು ಕನಿಷ್ಠ ಪಕ್ಷ 30 ದಿವಸಗಳಾದರೂ ಈ ಸದನದಲ್ಲಿ ನಡೆಸಬೇಕು. ಆದರೆ ಪುನ: ಉಪ ಮುಖ್ಯಮಂತ್ರಿಗಳಿಗೆ ಒಳ್ಳೆಯದಾಗಲಿ ಎಂದು, ನಾನು ಶುಭ ಹಾರೈಸುತ್ತೇನೆ. ಅವರು ಮಂಡಿಸತಕ್ಕಂಥ ಆಯವ್ಯಯದಿಂದ ಈ ರಾಜ್ಯಕ್ಕೆ ಒಳ್ಳೆಯದಾಗಲಿ. ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ....

ಗೊಂದಲ

ಅಧ್ಯಕ್ಷರು: ಆಯಿತು, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಈಗ ತಾವು ಬಜೆಟ್ ಭಾಷಣವನ್ನು ಕೇಳಿ. ಆ ನಂತರ ಅದರ ಬಗ್ಗೆ ಚರ್ಚೆ ಮಾಡಬಹುದು.

ಗೊಂದಲ

1. 2005-06ನೇ ಸಾಲಿನ ಆಯವ್ಯಯ ಅಂದಾಜು ಪತ್ರದ ಮಂಡನೆ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ,

1. ನಾನು ಈಗ ಕರ್ನಾಟಕ ಸರ್ಕಾರದ 2005-06ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ಇದನ್ನು ಪ್ರತಿಭಟಿಸಿ ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಕಪ್ಪುಬಟ್ಟೆಯನ್ನು ಧರಿಸಿಕೊಂಡು ಸಭಾತ್ಯಾಗ ಮಾಡಿದರು).

2. ಮಾನ್ಯರೆ, ಕರ್ನಾಟಕ ರಾಜ್ಯದ ಜನತೆಯ ಮುಂದೆ ನನ್ನ ಏಳನೆಯ ಮುಂಗಡ ಪತ್ರವನ್ನು ಮಂಡಿಸುತ್ತಿರುವುದು ನನ್ನ ಪಾಲಿಗೆ ದೊರೆತ ಗೌರವ ಎಂದು ನಾನು ಭಾವಿಸುತ್ತೇನೆ. ಇಂತಹ ಅಪೂರ್ವ ಅವಕಾಶವನ್ನು ಕಲ್ಪಿಸಿದ ಕರ್ನಾಟಕದ ಜನತೆಗೆ ನಾನು ಸದಾ ಋಣಿಯಾಗಿರುತ್ತೇನೆ.

3. ಇತ್ತೀಚಿನ ಸುನಾಮಿ ದುರಂತವು ಪ್ರಕೃತಿಯ ಮುಂದೆ ಮಾನವರು ತಾವೆಷ್ಟು ಅಲ್ಪರು ಎನ್ನುವುದನ್ನು ಸಾಬೀತುಪಡಿಸಿದೆ. ನಮ್ಮ ರಾಷ್ಟ್ರವು ಈ ಬೃಹತ್ ದುರಂತವನ್ನು ತನ್ನ ಅಂತಃಶಕ್ತಿಯಿಂದಲೇ ಎದುರಿಸಿದ ಬಗೆ ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಈ ರಾಷ್ಟ್ರೀಯ ದುರಂತಕ್ಕೆ ಸ್ಪಂದಿಸಿ, ಪ್ರೀತಿ ಮತ್ತು ಮಾನವೀಯತೆಯ ಮಹಾಪೂರವನ್ನು ಹರಿಸಿ, ನೊಂದವರ ಪುನರ್‌ವಸತಿ ಕಾರ್ಯದಲ್ಲಿ ಕೈಜೋಡಿಸಿದ ಎಲ್ಲರಿಗೂ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

4. ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಪ್ರಪ್ರಥಮವಾಗಿ ಸಮ್ಮಿಶ್ರ ಸರ್ಕಾರ ರಚನೆಯಾದ ಸನ್ನಿವೇಶ ತಮಗೆ ತಿಳಿದೇ ಇದೆ. ಲಕ್ಷಾಂತರ ಮಂದಿ ರೈತರು, ಕೃಷಿ ಕಾರ್ಮಿಕರು, ಹಿಂದುಳಿದ ವರ್ಗದವರು, ನೇಕಾರರು, ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಮಕ್ಕಳು ಹಾಗೂ ಸಂಘಟಿತ ಮತ್ತು ಅಸಂಘಟಿತ ಕೂಲಿಕಾರರ ಕಲ್ಯಾಣವಾಗಬೇಕೆನ್ನುವ ನಮ್ಮ ಕಾಳಜಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಪ್ರತಿಬಿಂಬಿತವಾಗಿವೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಹಾಗೂ ದುರ್ಬಲವರ್ಗದ ಜನರಿಗೆ ನ್ಯಾಯ ಕಲ್ಪಿಸಲು ಸಮ್ಮಿಶ್ರ ಸರ್ಕಾರ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳು ಕಳೆದ ಒಂಭತ್ತು ತಿಂಗಳಲ್ಲಿ ಯಶಸ್ವಿಯಾಗಿ ಜಾರಿಗೊಂಡಿವೆ. ಇದರಲ್ಲಿನ ಕೆಲವು ಪ್ರಮುಖ ಸಾಧನೆಗಳನ್ನು ಹೇಳಲು ಇಚ್ಛಿಸುತ್ತೇನೆ.

- ರಾಜ್ಯದಲ್ಲಿ ಕೋಮು ಸೌಹಾರ್ದ ಸ್ಥಾಪನೆ ಸಮ್ಮಿಶ್ರ ಸರ್ಕಾರದ ಹೆಮ್ಮೆ. ಚಿಕ್ಕಮಗಳೂರು ತಾಲ್ಲೂಕಿನಲ್ಲಿ ನಾವು ದತ್ತ ಜಯಂತಿಯನ್ನು ಶಾಂತಿಯುತವಾಗಿ ನಡೆಸಿದ್ದೇ ಇದಕ್ಕೆ ನಿದರ್ಶನ.
- ಕರ್ನಾಟಕದ ಜನತೆಗೆ ಶಾಪದಂತಿದ್ದ ಆನ್‌ಲೈನ್ ಲಾಟರಿಯನ್ನು ನಾವು ನಿಷೇಧಿಸಿದ್ದೇವೆ.
- ಕುಡಿಯುವ ನೀರಿನ ತೊಂದರೆಯನ್ನು ನಾವು ತೃಪ್ತಿಕರವಾಗಿ ನಿಭಾಯಿಸಿದ್ದೇವೆ.
- ಶಿಕ್ಷಣವನ್ನು ಸಾರ್ವತ್ರೀಕರಿಸಲು ಅಕ್ಷರ ದಾಸೋಹ, ವಿದ್ಯಾವಿಕಾಸ ಮತ್ತು ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮಗಳಿಗೆ ನೀಡಿದ ಹೆಚ್ಚಿನ ಅನುದಾನವು ಪ್ರಾಥಮಿಕ ಶಿಕ್ಷಣದಲ್ಲಿ ಗಣನೀಯ ಪ್ರಗತಿ ತಂದಿದೆ.
- ಸಹಕಾರಿ ಬ್ಯಾಂಕುಗಳಿಂದ ಪಡೆದಿರುವ ಕೃಷಿ ಸಾಲದ ಬಡ್ಡಿ ದರವನ್ನು ನಾವು ಶೇಕಡ 6 ಕ್ಕೆ ಇಳಿಸಿದ್ದೇವೆ.
- ರೈತರ ಮಡಿಲಿಗೆ ಬೆಳೆ ವಿಮೆ ಪರಿಹಾರವನ್ನು ತುಂಬಿದ್ದೇವೆ.
- ಗ್ರಾಮೀಣ ಪ್ರದೇಶಕ್ಕೆ ಉತ್ತಮ ಗುಣಮಟ್ಟದ ವಿದ್ಯುತ್ ಒದಗಿಸಿದ್ದೇವೆ.
- ನೇಕಾರರ ಅನುಕೂಲಕ್ಕಾಗಿ "ನೇಕಾರರ ಪ್ಯಾಕೇಜ್" ನ್ನು ಅನುಷ್ಠಾನಗೊಳಿಸಿದ್ದೇವೆ.
- ಕೇಜಿಗೆ ಮೂರು ರೂ.ಗಳಂತೆ ರಿಯಾಯಿತಿ ದರದಲ್ಲಿ ಬಡವರಿಗೆ ಆಹಾರ ಧಾನ್ಯ ವಿತರಿಸಿದ್ದೇವೆ.
- ಇವೆಲ್ಲದರ ನಡುವೆ ಆರ್ಥಿಕ ಸ್ಥಿರತೆ ಸಾಧಿಸಿ, ಆರ್ಥಿಕವಾಗಿ ಸದೃಢಗೊಂಡಿದ್ದೇವೆ.

5. ಇಂತಹ ಇನ್ನೂ ಹತ್ತು ಹಲವಾರು ಸಾಧನೆಗಳು ನಮ್ಮ ಪಾಲಿಗಿವೆ. ರೈತರು, ಬಡವರು ಮತ್ತು ದುರ್ಬಲ ವರ್ಗದವರ ಬಗ್ಗೆ ನಮಗಿರುವ ಕಾಳಜಿ, ಬದ್ಧತೆಗಳು ಸರ್ಕಾರದ ಪ್ರತಿಯೊಂದು ನಡೆಯಲ್ಲೂ ಮಿಡಿದಿವೆ. ಆದರೂ ನಾವು ಸಾಧಿಸಬೇಕಾಗಿರುವುದು ಇನ್ನೂ ಸಾಕಷ್ಟಿದೆ. ಒಟ್ಟಾರೆಯಾಗಿ, ನಾವು ಸರಿಯಾದ ಮಾರ್ಗದಲ್ಲಿ ನಡೆಯುತ್ತಿದ್ದು ಇದೇ ಹಾದಿಯಲ್ಲಿ ಮುನ್ನಡೆದು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಗುರಿಗಳನ್ನು ಸಾಧಿಸುತ್ತೇವೆ.

ರಾಜ್ಯದ ಆರ್ಥಿಕ ಸ್ಥಿತಿ

6. ಪ್ರಸಕ್ತ ವರ್ಷ, ನಮ್ಮ ರಾಜ್ಯದ ಪಾಲಿಗೆ ಆರ್ಥಿಕ ಚೇತರಿಕೆಯ ವರ್ಷವಾಗಿದೆ. 2003-04 ರ ಸಾಲಿಗೆ ಹೋಲಿಸಿದರೆ 2004-05ನೇ ಸಾಲಿನಲ್ಲಿ ರಾಜ್ಯವು ಶೇಕಡ 11.7 ರಷ್ಟು ವೃದ್ಧಿ ಸಾಧಿಸಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಅತ್ಯಧಿಕ ವೃದ್ಧಿಯಾಗಿದೆ. ಶೇಕಡ 3.9 ರ ಹಣದುಬ್ಬರವನ್ನು ಆಧರಿಸಿ ಪ್ರಸಕ್ತ ವರ್ಷದ ವಾಸ್ತವಿಕ ವೃದ್ಧಿದರವನ್ನು ಶೇಕಡ 7.8 ಎಂದು ಅಂದಾಜು ಮಾಡಲಾಗಿದೆ. 2001-02, 2002-03 ಮತ್ತು 2003-04ನೇ ಸಾಲಿನಲ್ಲಿ ಕ್ರಮವಾಗಿ ಶೇಕಡ 2.5, 5.3 ಮತ್ತು 6.2ರ ವಾಸ್ತವಿಕ ವೃದ್ಧಿದರಗಳಿಗೆ ಹೋಲಿಸಿದರೆ ಪ್ರಸಕ್ತ ವರ್ಷದ ವೃದ್ಧಿದರ ಗಣನೀಯ ಬೆಳವಣಿಗೆಯಾಗಿದೆ.

7. ಈ ಪುನಃಶ್ಚೇತನಕ್ಕೆ ಕೃಷಿ ಮತ್ತು ಕೃಷಿ ಸಂಬಂಧಿ ವಲಯಗಳು ನೀಡಿರುವ ಅತ್ಯಧಿಕ ಕೊಡುಗೆ ಪ್ರಮುಖ ಕಾರಣ. ಪ್ರಾಥಮಿಕ ವಲಯವು 2001-02, 2002-03 ಮತ್ತು 2003-04ನೇ ಸಾಲಿನಲ್ಲಿ ಕ್ರಮವಾಗಿ ಶೇಕಡ (-)14.5, ಶೇಕಡ 0.8 ಮತ್ತು ಶೇಕಡ (-)1.8 ರ ಬೆಳವಣಿಗೆಯನ್ನು ಕಂಡಿತ್ತು. ಆದರೆ ಪ್ರಸಕ್ತ ವರ್ಷ ಪ್ರಾಥಮಿಕ ವಲಯವು ಶೇಕಡ 11.2 ರ ಪ್ರಮಾಣದಲ್ಲಿ ವೃದ್ಧಿಯಾಗಿದೆ. ಪ್ರಾಥಮಿಕ ವಲಯದ ವ್ಯಾಪ್ತಿಯಲ್ಲಿರುವ ಕೃಷಿ ಕ್ಷೇತ್ರದ ವೃದ್ಧಿದರವನ್ನು ಶೇಕಡ 13 ಎಂದು ಅಂದಾಜಿಸಲಾಗಿದೆ. ಪ್ರಸಕ್ತ ಬೆಲೆಗಳನ್ನು ಆಧರಿಸಿ ದ್ವಿತೀಯ ವಲಯದ ವೃದ್ಧಿದರವನ್ನು ಶೇಕಡ 11.3 ಮತ್ತು ಪೂರಕವಲಯದ ವೃದ್ಧಿದರವನ್ನು ಶೇಕಡ 12 ಎಂದು ಅಂದಾಜು ಮಾಡಲಾಗಿದೆ.

8. ರಾಜ್ಯದ ಆರ್ಥಿಕ ರಂಗದಲ್ಲಿ ಪ್ರಾಥಮಿಕ ವಲಯದ ಪಾಲು ಶೇಕಡ 18.7 ಹಾಗೂ ದ್ವಿತೀಯ ವಲಯದ ಪಾಲು ಶೇಕಡ 28.3 ಮತ್ತು ಪೂರಕ ವಲಯದ ಪಾಲು ಶೇಕಡ 53 ಎಂದು ಅಂದಾಜು ಮಾಡಲಾಗಿದೆ. ದ್ವಿತೀಯ ವಲಯದಲ್ಲಿರುವ ಉತ್ಪಾದನಾ ಕ್ಷೇತ್ರವು ಶೇಕಡ 13.5 ರಲ್ಲಿ ವೃದ್ಧಿಯಾಗಿದೆ. ಪೂರಕ ವಲಯದಲ್ಲಿ ಐಟಿ, ಬಿಟಿ ಮತ್ತು ಬಿಪಿಓ ಕ್ಷೇತ್ರಗಳು ಬೆಳವಣಿಗೆಯ ಪ್ರಮುಖ ಚಾಲನಾಶಕ್ತಿಗಳಾಗಿದ್ದು ಶೇಕಡ 22.5 ರ ಗಮನಾರ್ಹ ವೃದ್ಧಿದರವನ್ನು ಸಾಧಿಸಿವೆ.

9. ಈ ಹಿನ್ನೆಲೆಯಲ್ಲಿ ನಮ್ಮ ಭವಿಷ್ಯದ ಮುನ್ನೋಟವು ಆಶಾದಾಯಕವಾಗಿರಬೇಕು, ಜೊತೆಯಲ್ಲಿ ಎಚ್ಚರಿಕೆಯ ಅಂಶವನ್ನೂ ಒಳಗೊಂಡಿರಬೇಕು. ರಾಜ್ಯವು ಶೇಕಡ 8 ರ ವೃದ್ಧಿದರವನ್ನು ಸಾಧಿಸಬೇಕಾದರೆ, ಪ್ರಾಥಮಿಕ ವಲಯದ ವೃದ್ಧಿಯನ್ನು ಕಾಪಾಡಿಕೊಳ್ಳಬೇಕು. ಒಟ್ಟಾರೆಯಾಗಿ

ಅಭಿವೃದ್ಧಿಯ ಹಾದಿಯಲ್ಲಿ ನಮ್ಮ ನೀತಿ ಗ್ರಾಮೀಣ ಕೇಂದ್ರೀಕೃತ ನೋಟವನ್ನು ಕಳೆದುಕೊಳ್ಳಕೂಡದು. ಹಾಗೆಯೇ ರಾಜ್ಯವು ಮೂಲಸೌಕರ್ಯಗಳಲ್ಲಿ ನಿರಂತರವಾಗಿ ಹೂಡಿಕೆ ಮಾಡಬೇಕು.

ಕೇಂದ್ರ ಮುಂಗಡ ಪತ್ರ ಮತ್ತು ರಾಜ್ಯ

10. ಕೇಂದ್ರ ಮುಂಗಡ ಪತ್ರವು ನನ್ನಲ್ಲಿ ಮಿಶ್ರ ಭಾವನೆಗಳನ್ನು ಮೂಡಿಸಿದೆ. ಗ್ರಾಮೀಣ ಉದ್ಯೋಗ ಮತ್ತು ಆರೋಗ್ಯ ಕಾರ್ಯಕ್ರಮಗಳಿಗೆ ಕೇಂದ್ರ ಮುಂಗಡಪತ್ರದಲ್ಲಿ ಹೆಚ್ಚಿಸಿರುವ ಅನುದಾನಗಳು ಗ್ರಾಮೀಣ ಬಡಜನತೆಗೆ ಅನುಕೂಲ ಕಲ್ಪಿಸುತ್ತವೆ. "ಭಾರತ ನಿರ್ಮಾಣ" ಮುನ್ನೋಟವು ಗ್ರಾಮೀಣ ಪ್ರದೇಶದಲ್ಲಿ ಗಮನಾರ್ಹ ಬದಲಾವಣೆ ತರುವ ಆಶೆಯನ್ನು ಮೂಡಿಸಿದೆ. ಸರ್ವಶಿಕ್ಷಣ ಅಭಿಯಾನ ಮತ್ತು ಮಧ್ಯಾಹ್ನದ ಊಟದಂತಹ ಕಾರ್ಯಕ್ರಮಗಳಿಗೆ ನೀಡಿರುವ ಹೆಚ್ಚಿನ ಅನುದಾನವು ಪ್ರಾಥಮಿಕ ಶಿಕ್ಷಣವನ್ನು ಸುಧಾರಿಸಲಿದೆ. ಬೆಂಗಳೂರಿನ ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆಯನ್ನು ಜಾಗತಿಕ ಮಟ್ಟದ ವಿಶ್ವವಿದ್ಯಾಲಯವನ್ನಾಗಿ ರೂಪಿಸಲು ಕೇಂದ್ರ ಸರ್ಕಾರವು 100 ಕೋಟಿ ರೂ.ಗಳನ್ನು ಒದಗಿಸಿರುವುದು ಸಂತಸದ ಸಂಗತಿ.

11. ಆದರೆ 2005-06 ನೇ ಸಾಲಿನ ಕೇಂದ್ರ ಮುಂಗಡ ಪತ್ರದಲ್ಲಿ ರಾಜ್ಯದ ಹಲವಾರು ಸಮಸ್ಯೆಗಳಿಗೆ ಯಾವುದೇ ರೀತಿಯ ಪರಿಹಾರ ದೊರೆತಿಲ್ಲ. ಮೊದಲನೆಯದಾಗಿ, ಹೈದರಾಬಾದ್ ಕರ್ನಾಟಕ ಪ್ರಾಂತ್ಯಕ್ಕೆ ವಿಶೇಷ ಸ್ಥಾನಮಾನ ನೀಡಬೇಕೆಂದು ನಾವೆಲ್ಲರೂ ಪಕ್ಷಾತೀತವಾಗಿ ಮಾಡಿಕೊಂಡಿದ್ದ ಮನವಿಯ ಬಗ್ಗೆ ಕೇಂದ್ರ ಮುಂಗಡ ಪತ್ರದಲ್ಲಿ ಯಾವುದೇ ಪ್ರಸ್ತಾಪವಿಲ್ಲ. ಎರಡನೆಯದಾಗಿ, ಶಿಕ್ಷಣ, ಆರೋಗ್ಯ ಮತ್ತು ಸಮಾಜ ಕಲ್ಯಾಣ ಇತ್ಯಾದಿ ಸಾಮಾಜಿಕ ವಲಯದ ಕಾರ್ಯಕ್ರಮಗಳಿಗೆ ನಾವು ಶೇಕಡಾ 100 ರ ಆರ್ಥಿಕ ನೆರವು ಕೇಳಿದ್ದೆವು. ಆದರೆ ಕೇಂದ್ರ ಸರ್ಕಾರವು ಹಿಂದಿನಂತೆ ರಾಜ್ಯಸರ್ಕಾರದ ಪಾಲುದಾರಿಕೆಯನ್ನು ಒತ್ತಾಯಿಸುವ ಅಂತರ್ಗತ ಷರತ್ತಿನೊಂದಿಗೆ ತನ್ನ ಕಾರ್ಯಕ್ರಮಗಳನ್ನು ಮುಂದುವರಿಸಿದೆ.

12. ರಾಜ್ಯವು ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಜ್ಜಾಗಿದೆ. ಈ ತೆರಿಗೆ ಪದ್ಧತಿಯು ರಾಜ್ಯಕ್ಕೆ ಹೊಸ ಅನುಭವವಾಗಿದೆ. ವ್ಯಾಟ್ ಜಾರಿಯಿಂದ ಉದ್ಯಮಿಗಳಿಗೆ ಮತ್ತು ವ್ಯಾಪಾರಸ್ಥರಿಗೆ ಸಾಕಷ್ಟು ಅನುಕೂಲಗಳು ದೊರೆಯಲಿವೆ. ವ್ಯಾಟ್‌ನ ಜಾರಿಯಿಂದ ಆರಂಭದ ವರ್ಷಗಳಲ್ಲಿ ರಾಜ್ಯದ ರಾಜಸ್ವ ಕಡಿಮೆಯಾಗಲಿದೆ. ಈ ರಾಜಸ್ವ ಕೊರತೆಯನ್ನು ತುಂಬಿಕೊಡಲು ಕೇಂದ್ರ ಸರ್ಕಾರವು ಒಪ್ಪಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಸೇವಾ ತೆರಿಗೆ ವಿಧಿಸಲು ರಾಜ್ಯಗಳಿಗೆ ಅಧಿಕಾರ ನೀಡಬೇಕು ಎನ್ನುವ ನಮ್ಮ ದೀರ್ಘಕಾಲದ ಮನವಿಯನ್ನು ಹಾಗೂ ವೃತ್ತಿ ತೆರಿಗೆಯ ಪ್ರಸ್ತುತ ನಿಗದಿತ ಮಟ್ಟವನ್ನು ಏರಿಸಬೇಕೆನ್ನುವ ನಮ್ಮ ಪ್ರಸ್ತಾವವನ್ನು ಕೇಂದ್ರವು ಇನ್ನೂ ಪರಿಗಣಿಸಿಲ್ಲ.

ಹನ್ನೆರಡನೇ ಹಣಕಾಸು ಆಯೋಗ

13. ಹನ್ನೆರಡನೆ ಹಣಕಾಸು ಆಯೋಗವು ಇತ್ತೀಚೆಗೆ ತನ್ನ ವರದಿಯನ್ನು ಬಿಡುಗಡೆ ಮಾಡಿದೆ. ಈ ವರದಿಯ ರೀತ್ಯಾ ಹಂಚಿಕೆ ನಿಧಿಯಿಂದ ಕರ್ನಾಟಕಕ್ಕೆ ಬರಬೇಕಾಗಿರುವ ಪಾಲು ಕಡಿಮೆಯಾಗಿದೆ. ಈ ಆಯೋಗವು ರಾಜಸ್ವ ಕೊರತೆಯಿರುವ ಕೆಲವು ರಾಜ್ಯಗಳಿಗೆ ವಿಶೇಷ ನೆರವನ್ನು ಒದಗಿಸಿದೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕರ್ನಾಟಕದ ಪ್ರಗತಿಯು ರಾಷ್ಟ್ರೀಯ

ಸರಾಸರಿಗಿಂತ ಹೆಚ್ಚಾಗಿರುವುದರಿಂದ ಈ ಕ್ಷೇತ್ರಗಳಿಗೆ ಕೇಂದ್ರದಿಂದ ಯಾವುದೇ ನೆರವು ದೊರೆಯುತ್ತಿಲ್ಲ. ಆದರೆ ರಸ್ತೆ ಮೂಲಸೌಕರ್ಯ ಅಭಿವೃದ್ಧಿ, ಕಟ್ಟಡ ನಿರ್ವಹಣೆ ಪರಂಪರೆಯ ಸಂರಕ್ಷಣೆ ಮತ್ತು ಅರಣ್ಯ ಸಂರಕ್ಷಣೆಗಳಿಗೆ ಹಾಗೂ ಗ್ರಾಮೀಣ ಮತ್ತು ನಗರ ಪ್ರದೇಶಗಳ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅನುದಾನ ದೊರೆಯಲಿದೆ. ರಾಜ್ಯವು ವಿತ್ತೀಯ ಹೊಣೆಗಾರಿಕೆ ಕಾಯಿದೆಗೆ ಬದ್ಧವಾಗಿರುವುದರಿಂದ ಕೇಂದ್ರ ಸರ್ಕಾರದ ಸಾಲಗಳ ಪುನರ್‌ರಚನೆಯ ಅನುಕೂಲ ನಮಗೆ ದೊರೆಯಲಿದೆ. ಈ ಸಂಬಂಧ ಹೆಚ್ಚಿನ ವಿವರಗಳು ಕೇಂದ್ರದಿಂದ ನಮಗೆ ಇನ್ನೂ ಬರಬೇಕಾಗಿದೆ.

ರಾಜ್ಯ ಹಣಕಾಸು

14. ಹಣಕಾಸು - ಆಡಳಿತ ವ್ಯವಸ್ಥೆಯ ಜೀವದ್ರವ್ಯ. ಸರ್ಕಾರದ ನೀತಿ ನಿಲುವುಗಳಿಗೆ ಪೂರಕವಾಗಿ ಸರಕಾರವು ಎಷ್ಟು ಪ್ರಮಾಣದಲ್ಲಿ ಹಣಕಾಸನ್ನು ಪೂರೈಸಬಲ್ಲದು ಎನ್ನುವುದು ರಾಜ್ಯದ ಹಣಕಾಸು ಆರೋಗ್ಯದ ಮೇಲೆ ಅವಲಂಬನೆ ಆಗಿದೆ. ಕರ್ನಾಟಕವು ಇದೀಗ ವಿತ್ತೀಯ ಸುಧಾರಣೆಯ ಹಾದಿಯಲ್ಲಿದೆ. ಎಂಟು ವರ್ಷಗಳ ಸುದೀರ್ಘ ಅವಧಿಯ ನಂತರ ಪ್ರಥಮ ಬಾರಿಗೆ 2004-05ನೇ ಸಾಲಿನಲ್ಲಿ ಉಳಿಕೆ ರಾಜಸ್ವದ ಮುಂಗಡಪತ್ರವನ್ನು ಮಂಡಿಸಲಾಗಿತ್ತು. ಆ ಮುಂಗಡ ಪತ್ರದಲ್ಲಿ ನಾನು ಸಮಾನ ಆರ್ಥಿಕವೃದ್ಧಿ ಹಾಗೂ ತ್ವರಿತ ಬೆಳವಣಿಗೆಯ ವಿತ್ತೀಯ ನೀತಿಯನ್ನು ಅಳವಡಿಸಿಕೊಂಡಿದ್ದೆ. ತೆರಿಗೆ ಮತ್ತು ತೆರಿಗೆಯೇತರ ಸಂಪನ್ಮೂಲಗಳ ಗರಿಷ್ಠ ಸಂಗ್ರಹಣೆ; ಅಭಿವೃದ್ಧಿಯೇತರ ವೆಚ್ಚಗಳ ಕಡಿತ, ಸಾಮಾಜಿಕ ವಲಯದ ಅಭಿವೃದ್ಧಿ ಚಟುವಟಿಕೆಗಳಿಗೆ ಅಧಿಕ ಹಣ, ಸಹಾಯಧನಗಳ ಸೂಕ್ತ ನಿರ್ವಹಣೆ ಹಾಗೂ ಸಾರ್ವಜನಿಕ ವೆಚ್ಚಗಳ ಉತ್ಪಾದಕತೆಯಲ್ಲಿ ಸುಧಾರಣೆ, ಸಂಪನ್ಮೂಲ ಸಂಗ್ರಹಣೆಯಲ್ಲಿ ಸೋರಿಕೆಗೆ ನಿಯಂತ್ರಣ, ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸೋರಿಕೆಯನ್ನು ತಡೆಯುವುದು ಮತ್ತು ಭ್ರಷ್ಟಾಚಾರ ಹತ್ತಿಕ್ಕುವುದನ್ನು ಯೋಜಿಸಿದ್ದೆವು. ಈ ಎಲ್ಲ ಕಾರ್ಯಕ್ರಮಗಳನ್ನು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯಿದೆಯ ಕಟ್ಟುಪಾಡುಗಳಿಗೆ ಬದ್ಧವಾಗಿ ಅನುಷ್ಠಾನಗೊಳಿಸಲು ನಾವು ನಿರ್ಣಯ ತಳೆದಿದ್ದೆವು.

15. ನಾನು ಈಗ ಗೌರವಾನ್ವಿತ ಸದಸ್ಯರಿಗೆ ನಮ್ಮ ಸಾಧನೆಗಳ ಬಗ್ಗೆ ತಿಳಿಸಬಯಸುತ್ತೇನೆ. ತೆರಿಗೆ ಸ್ವರೂಪಗಳನ್ನು ಸುಧಾರಿಸುವ ಮೂಲಕ ನಾವು ತೆರಿಗೆ ಮತ್ತು ತೆರಿಗೆಯೇತರ ಸಂಪನ್ಮೂಲ ಸಂಗ್ರಹಣೆಯಲ್ಲಿ ಗಣನೀಯ ಏರಿಕೆ ಸಾಧಿಸಿದ್ದೇವೆ. ನಾವು ಸಾಧಿಸಿರುವ ವಾಣಿಜ್ಯ ತೆರಿಗೆ ವೃದ್ಧಿದರವು ಇಡೀ ರಾಷ್ಟ್ರದಲ್ಲಿಯೇ ಹೆಚ್ಚಿನದಾಗಿದೆ. ತೆರಿಗೆ ವಿಧಾನಗಳ ಸರಳೀಕರಣ, ಅಬಕಾರಿ ಶುಲ್ಕ ದರಗಳನ್ನು ಕಡಿಮೆ ಮಾಡುವುದು ಮತ್ತು ತೆರಿಗೆ ಸೋರಿಕೆಗಳ ನಿಯಂತ್ರಣದ ಮೂಲಕ ಅಬಕಾರಿ ತೆರಿಗೆ ಆದಾಯವನ್ನು ಹೆಚ್ಚಿಸಿದ್ದೇವೆ. ಇದೇ ಮಾದರಿಯಲ್ಲಿ ನೋಂದಣಿ ಹಾಗೂ ಮುದ್ರಾಂಕ ಶುಲ್ಕ ಇಲಾಖೆಯಲ್ಲಿಯೂ ಹೆಚ್ಚು ರಾಜಸ್ವ ಸಂಗ್ರಹಿಸಿದ್ದೇವೆ. 2004-05 ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ 14,957 ಕೋಟಿ ರೂ.ಗಳ ತೆರಿಗೆ ಸಂಗ್ರಹಣೆ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಆದರೆ ಮಾರ್ಚ್ 2005 ರಲ್ಲಿ ನಿರೀಕ್ಷಿತ ತೆರಿಗೆ ರಾಜಸ್ವವು 15,747 ಕೋಟಿ ರೂ.ಗಳಾಗಿದೆ.

16. ಹೆಚ್ಚು ಬಡ್ಡಿ ದರದ ಸಾಲಗಳ ಮರುಹೊಂದಾಣಿಕೆ ಹಾಗೂ ಸರ್ಕಾರಿ ಆಡಳಿತ ಸಿಬ್ಬಂದಿಯನ್ನು ಸರಿಗಾತ್ರಕ್ಕೆ ಇಳಿಸುವ ಮೂಲಕ ನಾವು ಅಭಿವೃದ್ಧಿಯೇತರ ವೆಚ್ಚವನ್ನು ಕಡಿತಗೊಳಿಸಿದ್ದೇವೆ. ಸುಧಾರಣಾ ಪ್ರಕ್ರಿಯೆಗಳು ಸುಲಲಿತವಾಗಿ ಜಾರಿಗೊಳ್ಳಲು ಅನುವಾಗುವಂತೆ

ನಾವು ಮಧ್ಯಮಾವಧಿ ಆರ್ಥಿಕ ಯೋಜನೆಯ ಚೌಕಟ್ಟಿನೊಳಗೇ ಸಾಗುತ್ತಿದ್ದೇವೆ. ಹಲವಾರು ವರ್ಷಗಳ ನಂತರ ರಾಜ್ಯವು ಪ್ರಥಮ ಬಾರಿಗೆ ಉಳಿಕೆ ರಾಜಸ್ವ ಆಯವ್ಯಯವನ್ನು ಮಂಡಿಸಿದೆ ಮತ್ತು ಅದನ್ನು ಕಾಪಾಡಿಕೊಳ್ಳುತ್ತಿದೆ. ಪ್ರಥಮ ಬಾರಿಗೆ ಸಂಪನ್ಮೂಲ ಸಂಗ್ರಹಣೆಯಲ್ಲಿ ಆಯವ್ಯಯ ಗುರಿಗಳನ್ನು ಸಾಧಿಸಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಪ್ರಥಮ ಬಾರಿಗೆ ಯೋಜನೆಯ ಅನುಷ್ಠಾನದಲ್ಲಿ ಕಡಿತವನ್ನು ಮಾಡಿಲ್ಲ. ಆದ್ದರಿಂದ ನನಗೆ ಈ ಮುಂಗಡಪತ್ರವನ್ನು ಹಲವಾರು ಪ್ರಥಮಗಳ ಸಾಧನೆಯ ಹಿನ್ನೆಲೆಯಲ್ಲಿ ಮಂಡಿಸಲು ಹೆಮ್ಮೆ ಎನಿಸುತ್ತದೆ.

17. ಪ್ರಮುಖ ಸಾಮಾಜಿಕ ವಲಯಗಳ ಅಭಿವೃದ್ಧಿಗೆ ಹೆಚ್ಚು ಅನುದಾನ ಒದಗಿಸುವುದು ನಮ್ಮ ವಿತ್ತೀಯ ಕಾರ್ಯಸೂಚಿಯ ಮುಖ್ಯ ಅಂಶಗಳಲ್ಲಿ ಒಂದಾಗಿತ್ತು. ನಾವು ಆರ್ಥಿಕ ಮತ್ತು ಸಾಮಾಜಿಕ ಮೂಲಸೌಲಭ್ಯ ಮತ್ತು ಮಾನವ ಸಂಪನ್ಮೂಲಗಳಲ್ಲಿ ಹೆಚ್ಚಿನ ಹೂಡಿಕೆ ಮಾಡಬೇಕು. ಸೂಕ್ತ ಗುರಿ ನಿರ್ದೇಶನವಿಲ್ಲದ ಸಹಾಯ ಧನಗಳು, ಅನುತ್ಪಾದಕ ಆಸ್ತಿಗಳಲ್ಲಿನ ವಿವೇಚನಾರಹಿತ ಬಂಡವಾಳ ಹೂಡಿಕೆ, ಉಬ್ಬುತ್ತಿರುವ ಸಿಬ್ಬಂದಿವೆಚ್ಚ ಇವುಗಳನ್ನು ಕಡಿಮೆ ಮಾಡಬೇಕು. ವೇತನ, ಪಿಂಚಣಿ ಮತ್ತು ಬಡ್ಡಿ ಪಾವತಿ ಒಳಗೊಂಡಂತೆ ರಾಜ್ಯದ ಅಭಿವೃದ್ಧಿಯೇತರ ವೆಚ್ಚವು 2002-03 ರಲ್ಲಿ ರಾಜ್ಯದ ಒಟ್ಟು ರಾಜಸ್ವ ಸಂದಾಯಗಳ ಶೇ.62 ರಷ್ಟಿತ್ತು. ಈ ವೆಚ್ಚವು 2004-05ರಲ್ಲಿ ಶೇಕಡ 45ರ ಪ್ರಮಾಣಕ್ಕೆ ಇಳಿದಿದೆ. ಹೀಗಾಗಿ ಪ್ರಾಥಮಿಕ ಶಿಕ್ಷಣ, ಆರೋಗ್ಯ, ಕೃಷಿ, ಗ್ರಾಮೀಣಾಭಿವೃದ್ಧಿ ವಲಯಗಳ ಆಯವ್ಯಯ ಹಂಚಿಕೆಯನ್ನು ಕಾಪಾಡಲು ಸಾಧ್ಯವಾಗಿದೆ.

18. ಸಮಾನರ ನಡುವೆ ಮಾತ್ರ ಸಮಾನತೆ ಇರಲು ಸಾಧ್ಯ ಎನ್ನುವುದು ನನ್ನ ದೃಢವಾದ ನಂಬಿಕೆ. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯಿಂದ ಬಳಲುತ್ತಿರುವ ಈ ಸಮಾಜದಲ್ಲಿ ಸಮಾನತೆ ತರುವಲ್ಲಿ ಸಹಾಯಧನಗಳು ಒಂದು ಸಾಧನ. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ನಮ್ಮ ಆಡಳಿತದ ಫಲ ಸಿಗಬೇಕು ಎನ್ನುವುದು ನಮ್ಮ ಸರ್ಕಾರದ ಆಶಯ. ಈ ಸಂದರ್ಭದಲ್ಲಿ ಕವಿ ರವೀಂದ್ರನಾಥ ಠ್ಯಾಗೋರರ "*ಎಲ್ಲಿ ಮನಸ್ಸು ಭೀತಿಯಿಲ್ಲದೆ ಸ್ವಾಭಿಮಾನದಿಂದ ತಲೆಯೆತ್ತಿ ನಿಲ್ಲುತ್ತದೋ, ಅಂತಹ ಸ್ವರ್ಗ ಸೀಮೆಗೆ ಹೋಗಲು ನನ್ನ ರಾಷ್ಟ್ರ ಎಚ್ಚರಗೊಳ್ಳಲಿ*" ಎನ್ನುವ ಕವಿವಾಣಿ ನನ್ನ ನೆನಪಿಗೆ ಬರುತ್ತಿದೆ. ಇಂತಹ ಭೀತಿಮುಕ್ತ, ಸ್ವಾಭಿಮಾನಿ ಸಮಾಜದ ನಿರ್ಮಾಣ ನನ್ನ ಕನಸಾಗಿದೆ. ಈ ಹಿನ್ನೆಲೆಯಲ್ಲಿ ವರ್ಗರಹಿತ ಮತ್ತು ಜಾತಿರಹಿತ ಸಮಾಜವನ್ನು ನಿರ್ಮಿಸುವಲ್ಲಿ ಸಹಾಯಧನಗಳು ಅತ್ಯಗತ್ಯ ಎಂದು ಹೇಳಲು ನನಗೆ ಯಾವ ಹಿಂಜರಿಕೆಯೂ ಇಲ್ಲ. ಆದರೆ, ಸರ್ಕಾರದ ಸಹಾಯಧನಗಳು ಅರ್ಹತೆಯುಳ್ಳವರಿಗೆ ಮಾತ್ರ ತಲುಪಬೇಕು ಎನ್ನುವುದು ನಿರ್ವಿವಾದ.

19. ಸಾರ್ವಜನಿಕ ವೆಚ್ಚದ ಉತ್ಪಾದಕತೆಯ ಸುಧಾರಣೆ ಮತ್ತೊಂದು ಪ್ರಮುಖ ವಿಷಯ. ಕಳೆದ ಒಂಭತ್ತು ತಿಂಗಳಲ್ಲಿ ನೀರಾವರಿ, ರಸ್ತೆ ಸಂಪರ್ಕ, ಆರೋಗ್ಯ, ಮೂಲಸೌಕರ್ಯ, ಶಾಲೆ, ಕುಡಿಯುವ ನೀರು ಮತ್ತು ವಸತಿ ಯೋಜನೆಗಳ ಮೇಲಿನ ಸಾರ್ವಜನಿಕ ವೆಚ್ಚದಲ್ಲಿ ಏರಿಕೆಯಾಗಿದೆ. ರಸ್ತೆ ವೆಚ್ಚದ ಗುಣಮಟ್ಟವನ್ನು ಸುಧಾರಿಸಲು ರಸ್ತೆ ಮಾಹಿತಿ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿನ ಸರ್ಕಾರದ ಹಲವಾರು ಕಾರ್ಯಕ್ರಮಗಳು ಪ್ರಾಥಮಿಕ ಶಾಲೆಗಳ ನೋಂದಣಿಯಲ್ಲಿ ಗಮನಾರ್ಹ ಪ್ರಗತಿಯನ್ನು ದೊರಕಿಸಿವೆ. ಈ ರೀತಿಯ ಸಾಧನೆಗಳನ್ನು ಎಲ್ಲಾ ರಂಗಗಳಲ್ಲೂ ಸಾಧಿಸಬೇಕಾಗಿದೆ.

20. ಮಾನ್ಯರೆ, ವಿತ್ತೀಯ ಹೊಣೆಗಾರಿಕೆ ವಿಷಯದಲ್ಲಿ ಕರ್ನಾಟಕವು ಆರ್ಥಿಕ ಬಿಕ್ಕಟ್ಟಿನಿಂದ ಹೊರ ಬಂದಿದೆ ಎಂದು ಸದನಕ್ಕೆ ತಿಳಿಸಲು ನನಗೆ ಸಂತಸವಾಗುತ್ತಿದೆ. ಉಳಿಕೆ ರಾಜಸ್ವದ ನಮ್ಮ ಗುರಿಸಾಧನೆ ಈಡೇರಿದ ನಂತರ ನಮ್ಮ ಚಾಲ್ತಿ ವೆಚ್ಚಗಳನ್ನು ಭರಿಸಲು ಸಾಲ ತರಬೇಕಾಗುವ ಅಗತ್ಯವಿಲ್ಲ. ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯಿದೆಯು, ನಮ್ಮ ವಿತ್ತೀಯ ಕೊರತೆಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ. 3ಕ್ಕೆ ಸೀಮಿತಗೊಳಿಸಬೇಕೆಂದು ಗುರಿ ನಿಗದಿಪಡಿಸಿತ್ತು. 2005-06ರ ವೇಳೆಗೆ ರಾಜಸ್ವ ಕೊರತೆಯನ್ನು ಸಹ ನಿವಾರಿಸಬೇಕೆಂದು ಇದು ಗುರಿ ನಿಗದಿಪಡಿಸಿದೆ. ಈ ಗುರಿಗಳನ್ನು ನಾವು 2004-05 ರಲ್ಲಿಯೇ ಸಾಧಿಸಿದ್ದೇವೆ ಎಂದು ಸದನಕ್ಕೆ ತಿಳಿಸಲು ನಾನು ಹರ್ಷಿಸುತ್ತೇನೆ. ಈ ಸಾಧನೆಗಾಗಿ ನಾವು ಕೇಂದ್ರ ಸರ್ಕಾರದಿಂದ 185 ಕೋಟಿ ರೂ.ಗಳ ವಿತ್ತೀಯ ಸಾಧನೆ ಪ್ರೋತ್ಸಾಹಧನವನ್ನು ಸಹ ಪಡೆದಿದ್ದೇವೆ. ವಿತ್ತೀಯ ಶಿಸ್ತು ಪರಿಪಾಲನೆ ಮಾಡಿದ್ದರಿಂದಾಗಿ ರಾಜ್ಯವು ಆರ್ಥಿಕ ಮತ್ತು ಸಾಮಾಜಿಕ ಮೂಲ ಸೌಕರ್ಯಗಳಲ್ಲಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಮಾಣದ ಸಾರ್ವಜನಿಕ ವೆಚ್ಚ ಮಾಡುವ ಸಾಮರ್ಥ್ಯ ಪಡೆದಿದೆ.

21. ನಾವು ಈ ಪರಿಸ್ಥಿತಿಯನ್ನು ಕಾಪಾಡಿಕೊಳ್ಳಬೇಕಾದರೆ ಆಯವ್ಯಯದ ಸಮಗ್ರತೆಯ ಮೂರು ಸೂತ್ರಗಳನ್ನು ಅನುಸರಿಸಬೇಕು. ಮೊದಲನೆಯದಾಗಿ, ಕಟ್ಟುನಿಟ್ಟಾದ ಪರೀಕ್ಷೆಯಿಲ್ಲದೆ ಯಾವುದೇ ಯೋಜನೆಗಳು ಆಯವ್ಯಯದೊಳಕ್ಕೆ ಸೇರಕೂಡದು. ಎರಡನೆಯದಾಗಿ, ಆಯವ್ಯಯದಲ್ಲಿ ಯಾವುದಕ್ಕೆ ಅವಕಾಶ ಕಲ್ಪಿಸಿದೆಯೋ ಅದನ್ನು ಅನುಷ್ಠಾನಗೊಳಿಸಲು ಸಾಧ್ಯವಾದಷ್ಟು ಅನುಕೂಲ ಮಾಡಿಕೊಡಬೇಕು. ಮೂರನೆಯದಾಗಿ, ಆಯವ್ಯಯದಲ್ಲಿ ಯಾವುದಕ್ಕೆ ಅವಕಾಶ ಕಲ್ಪಿಸಿರುವುದಿಲ್ಲವೋ ಅದನ್ನು ಯಾವುದೇ ಕಾರಣಕ್ಕೂ ಅನುಷ್ಠಾನಗೊಳಿಸಬಾರದು.

22. ಈ ಚೌಕಟ್ಟನ್ನು ಗಮನದಲ್ಲಿಟ್ಟು ವಿತ್ತೀಯ ನೀತಿ ಮತ್ತು ವಿಶ್ಲೇಷಣಾ ಸೆಲ್‌ನ್ನು ರಚಿಸಬೇಕು. ಇದು ಮೂರು ಉದ್ದೇಶಗಳನ್ನು ಹೊಂದಿರಬೇಕು. ಒಂದು ತೆರಿಗೆ ವಿಶ್ಲೇಷಣೆ ಮತ್ತು ರಾಜಸ್ವ ನಿರೀಕ್ಷಣೆ. ಎರಡನೆಯದು, ವೆಚ್ಚಗಳ ಪರಿಶೀಲನೆ, ಯೋಜನೆಗಳ ಅಂದಾಜು ಮತ್ತು ಆಯವ್ಯಯಗಳ ಸುಧಾರಣೆ. ಮೂರನೆಯದು, ಸಾದಿಲ್ವಾರು ಹೊಣೆಗಾರಿಕೆ, ಸಾಲಗಳ ಮತ್ತು ಸರ್ಕಾರದ ಹೂಡಿಕೆಗಳ ವಿವೇಚನಾ ನಿರ್ವಹಣೆ.

ಸಾಲ ನಿರ್ವಹಣೆ

23. ಸಾಲಗಳ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದ ಸ್ಥಾನವು ಭಾರತದ ಯೋಜನಾ ಆಯೋಗವು ಸೂಚಿಸಿರುವ ಮಾನದಂಡಗಳ ಮಿತಿಯಲ್ಲಿದ್ದು ತೃಪ್ತಿಕರವಾಗಿದೆ. ಯಾವುದೇ ರಾಜ್ಯದ ಸಾಲ ಸ್ಥಿತಿಯನ್ನು ವರ್ಗೀಕರಿಸಲು ಯೋಜನಾ ಆಯೋಗವು ಆರು ಮಾನದಂಡಗಳನ್ನು ನಿಗದಿಪಡಿಸಿದೆ. ಮೊದಲನೆಯದು, ಸಾಲದ ಮೊತ್ತವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.30ಕ್ಕಿಂತ ಕಡಿಮೆಯಿರಬೇಕು. ಎರಡನೆಯದು, ರಾಜ್ಯದ ಒಟ್ಟು ರಾಜಸ್ವ ಸಂದಾಯಗಳ ಶೇ. 300ಕ್ಕಿಂತ ಕಡಿಮೆಯಿರಬೇಕು. ಮೂರನೆಯದು, ಬಡ್ಡಿ ಪಾವತಿಯು ಒಟ್ಟು ರಾಜಸ್ವ ಸಂದಾಯದ ಶೇ. 18ಕ್ಕಿಂತ ಕಡಿಮೆಯಿರಬೇಕು. ನಾಲ್ಕನೆಯದು, ಸಾಲದ ವೃದ್ಧಿದರವು ರಾಜಸ್ವ ವೃದ್ಧಿದರದ 1.25ಕ್ಕಿಂತ ಹೆಚ್ಚಾಗಿರಬಾರದು. ಐದನೆಯದು, ವಿತ್ತೀಯ

ಕೊರತೆಯಲ್ಲಿ ರಾಜಸ್ವವು ವಿತ್ತೀಯ ಕೊರತೆಯ ಅರ್ಧಕ್ಕಿಂತ ಹೆಚ್ಚಾಗಿರಬಾರದು, ಆರನೆಯದು, ವಿತ್ತೀಯ ಕೊರತೆಯು ಒಟ್ಟು ರಾಜಸ್ವ ಸಂದಾಯಗಳ ಶೇ.25ಕ್ಕಿಂತ ಹೆಚ್ಚಾಗಿರಬಾರದು.

24. ಈ ಮಾನದಂಡಗಳ ಆಧಾರದಲ್ಲಿ 2004-05ನೇ ಸಾಲಿನಲ್ಲಿ ಕರ್ನಾಟಕವು ಸಾಲದ ಬಿಕ್ಕಟ್ಟಿನಿಂದ ಹೊರಬಂದಿದೆ. ರಾಜ್ಯದ ಸಾಲ ಮತ್ತು ಜಿಎಸ್‌ಡಿಪಿ ಅನುಪಾತವು ಶೇ. 31 ರಷ್ಟಿದೆ. ಸಾಲ ಮತ್ತು ಒಟ್ಟು ರಾಜಸ್ವ ಸಂದಾಯಗಳು ಶೇ. 189 ರಷ್ಟಿದೆ. ಬಡ್ಡಿ ಮತ್ತು ಒಟ್ಟು ರಾಜಸ್ವ ಸಂದಾಯಗಳ ಅನುಪಾತವು ಶೇ. 14 ರಷ್ಟಿದೆ. ರಾಜಸ್ವ ವೃದ್ಧಿಯ ಜೊತೆ ನೋಡಿದರೆ ಸಾಲ ವೃದ್ಧಿಯು 0.8 ರಷ್ಟಿದೆ. ರಾಜಸ್ವ ಕೊರತೆಯನ್ನು ನಿವಾರಿಸಲಾಗಿದೆ. ವಿತ್ತೀಯ ಕೊರತೆಯು ಒಟ್ಟು ರಾಜಸ್ವ ಸಂದಾಯದ ಶೇ.16 ರಷ್ಟಿದೆ. ಇದರ ಆಧಾರದ ಮೇಲೆ ರಾಜ್ಯವು ಹಣಕಾಸು ಸಂಸ್ಥೆಗಳಲ್ಲಿ ಸ್ಪರ್ಧಾತ್ಮಕ ಷರತ್ತು ಮತ್ತು ನಿಬಂಧನೆಗಳಲ್ಲಿ ಸಾಲ ಮಾಡುವ ಅರ್ಹತೆ ಪಡೆದಿದೆ. ಆದರೆ, ವಿವೇಚನಾರಹಿತ ಸಾಲಗಳು ರಾಜ್ಯವನ್ನು ಮತ್ತೆ ಆರ್ಥಿಕ ಬಿಕ್ಕಟ್ಟಿಗೆ ದೂಡುವ ಸಾಧ್ಯತೆಗಳಿವೆ. ಆದ್ದರಿಂದ ಇನ್ನು ಮುಂದೆ ನಮ್ಮ ರಾಜ್ಯವು ಸಾಲ ಸಿಗುತ್ತದೆ ಎನ್ನುವುದಕ್ಕಿಂತ ಹೆಚ್ಚಾಗಿ ತನ್ನ ಸಾಲ ತೀರಿಸುವ ಸಾಮರ್ಥ್ಯವನ್ನು ಆಧರಿಸಿ ಸಾಲ ಮಾಡಬೇಕು ಎನ್ನುವುದು ನನ್ನ ನಿಲುವು.

25. ರಾಜ್ಯವು 2005-06ನೇ ಸಾಲಿನಲ್ಲಿ ರಾಜಸ್ವ ಕೊರತೆಯನ್ನು ನಿವಾರಿಸುವುದರ ಜೊತೆಗೆ ತನ್ನ ವಿತ್ತೀಯ ಕೊರತೆಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.3ಕ್ಕಿಂತ ಕಡಿಮೆಗೊಳಿಸಬೇಕಾಗಿದೆ. ವಿತ್ತೀಯ ಸುಧಾರಣೆಯ ಹಾದಿಯಲ್ಲಿ ಕ್ರೋಢೀಕೃತ ರಾಜಸ್ವ ಕೊರತೆಯನ್ನು ನಿವಾರಿಸಿಕೊಳ್ಳುವ ಮೂಲಕ ನಾವು ಮತ್ತೊಂದು ಮೈಲುಗಲ್ಲನ್ನು ತಲುಪಬೇಕಾಗಿದೆ. 2004-05ನೇ ಸಾಲಿನಲ್ಲಿ ಆಯವ್ಯಯದ ಅಂದಾಜಿನಂತೆ ನಮ್ಮ ಉಳಿಕೆ ರಾಜಸ್ವವು (+)ಶೇ.0.05 ಆಗಿತ್ತು. ಇದು 2005-06ರಲ್ಲಿ ಶೇ.0.52 ಆಗಬೇಕಾಗಿದೆ. ರಾಜಸ್ವ ಬಾಬ್ತಿನಲ್ಲಿ ಈ ಪ್ರಮಾಣದ ಉಳಿಕೆಯನ್ನು ಸಾಧಿಸಿದರೆ ಮಾತ್ರ ಆಯವ್ಯಯೇತರ ಸಾಲದ ಮೇಲಿನ 791 ಕೋಟಿ ರೂ.ಗಳ ಆಂತರಿಕ ಉತ್ಪನ್ನದ ಬಡ್ಡಿಯನ್ನು ರಾಜ್ಯದ ಸ್ವಂತ ರಾಜಸ್ವದಿಂದ ಪಾವತಿಸಲು ನಮಗೆ ಸಾಧ್ಯ.

ಅಭಿವೃದ್ಧಿ ಚಿಂತನೆ

26. ತ್ವರಿತ ಆರ್ಥಿಕ ಅಭಿವೃದ್ಧಿ ಎಂದಾಕ್ಷಣ ಅದು ಬಡಜನತೆಯ ಜೀವನ ಗುಣಮಟ್ಟದ ಸುಧಾರಣೆ ಎಂದು ಅರ್ಥವಲ್ಲ. ಮಾರುಕಟ್ಟೆ ಶಕ್ತಿಗಳನ್ನು ಸರ್ಕಾರವು ನಿಯಂತ್ರಿಸದಿದ್ದರೆ ಅವು ತಮ್ಮ ಹಿತಾಸಕ್ತಿ ಈಡೇರಿಸಿಕೊಳ್ಳುವ ಭರದಲ್ಲಿ ದುರ್ಬಲವರ್ಗದ ಜನರನ್ನು ಮುಕ್ಕಿ ತಿಂದುಬಿಡುತ್ತವೆ. ಆದ್ದರಿಂದ ನಮ್ಮ ಅಭಿವೃದ್ಧಿಯ ಪರಿಕಲ್ಪನೆಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲರಾಗಿರುವ ಜನಸಮುದಾಯಗಳು ಗೌರವಯುತವಾಗಿ ಜೀವನ ಸಾಗಿಸಲು ಪೂರಕವಾಗಿರಬೇಕು ಹಾಗೂ ಕೃಷಿ ಆಧಾರಿತ ಮತ್ತು ಕೆಳವರ್ಗದ ಜನತೆಯ ಆದಾಯ ಹೆಚ್ಚಿಸುವಂತಹ ಕಾರ್ಯಕ್ರಮಗಳತ್ತ ಕೇಂದ್ರೀಕೃತವಾಗಿರಬೇಕು. ಈ ಹಿನ್ನಲೆಯಲ್ಲಿ ನಾನು ಕರ್ನಾಟಕದ 2005-06 ನೇ ಸಾಲಿನ ಮುಂಗಡ ಪತ್ರವನ್ನು ರೂಪಿಸಿದ್ದೇನೆ.

27. ನಮ್ಮ ಆದ್ಯತೆಗಳು 2005-06 ರಲ್ಲಿ ಕೂಡ ಬದಲಾಗಿಲ್ಲ. ಗ್ರಾಮೀಣ ಜನರ, ಬಡವರ್ಗದ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲರಾದ ಜನರ ಅಗತ್ಯಗಳನ್ನು

ಈಡೇರಿಸಲು ಹೆಚ್ಚು ಹಣ ಹರಿಯಬೇಕು ಎನ್ನುವುದು ನಮ್ಮ ಆಶಯ. ಕೃಷಿ ಈಗಲೂ ನಮ್ಮ ಪ್ರಥಮ ಆದ್ಯತೆ. ನಮ್ಮ ಅಭಿವೃದ್ಧಿಯ ತತ್ವಗಳನ್ನು ಆಧರಿಸಿ ಕೃಷಿ, ಗ್ರಾಮೀಣಾಭಿವೃದ್ಧಿ, ನೀರಾವರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ದುರ್ಬಲ ವರ್ಗದವರ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚು ಹಂಚಿಕೆಯನ್ನು ನೀಡಲಾಗಿದೆ.

ಕೃಷಿ ಮತ್ತು ನೀರಾವರಿ :

ಬೆಳಗ್ಯಾಗ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ........
ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯಿ
ನಾನೊಂದು ಗಳಿಗೆ ನಿನ್ನ ನೆನೆದೇನು.

28. ಕೃಷಿ ಈಗಲೂ ನಮ್ಮ ಪ್ರಥಮ ಆದ್ಯತೆ. ರಾಜ್ಯದ ಜನಸಂಖ್ಯೆಯ ಶೇಕಡ 70 ರಷ್ಟು ಜನರು ಕೃಷಿವಲಯವನ್ನೇ ಅವಲಂಬಿಸಿದ್ದಾರೆ. ಆದರೆ ಇವರನ್ನು ಸಲಹಬೇಕಾಗಿರುವ ಕೃಷಿವಲಯವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಕೇವಲ ಶೇ. 18.7 ರಷ್ಟು ಮಾತ್ರ ಕೊಡುಗೆಯನ್ನು ನೀಡುತ್ತಿರುವುದು ಜನರ ಬಡತನಕ್ಕೆ ಪ್ರಮುಖ ಕಾರಣ. ಇಂದು ಕೃಷಿಯು ಇಡೀ ರಾಷ್ಟ್ರದಲ್ಲಿ ಕವಲುಹಾದಿಯಲ್ಲಿದೆ. ಕೃಷಿಯಲ್ಲಿ ಬಂಡವಾಳ ಹೂಡಿಕೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಭಾರತ ಸರ್ಕಾರವು ಪ್ರಕಟಿಸಿರುವ ಬಜೆಟ್ ಪೂರ್ವ ಆರ್ಥಿಕ ಸಮೀಕ್ಷೆಯಲ್ಲಿ ಕೂಡ ಈ ಅಂಶದ ಬಗ್ಗೆ ಹೇಳಲಾಗಿದೆ. ನಮ್ಮ ಕೃಷಿಯೋಗ್ಯ ಜಮೀನಿನ ಶೇ.70 ಕ್ಕೂ ಹೆಚ್ಚು ಪ್ರದೇಶದಲ್ಲಿ ಒಣಭೂಮಿ ಬೇಸಾಯವೇ ನಡೆಯುತ್ತಿದ್ದು, ನಮ್ಮ ರೈತರು ಉತ್ಪಾದನೆ ಕುಸಿತ ಹಾಗೂ ಬೆಲೆ ಕುಸಿತಗಳಿಂದ ತೊಂದರೆಗೀಡಾಗಿದ್ದಾರೆ. ಬೆಳೆ ಬರುವ ಸಮಯದಲ್ಲಿ ಉಂಟಾಗುವ ಮಳೆ ಕೊರತೆಯು ಉತ್ತಮ ಇಳುವರಿಯನ್ನು ಹಾಳು ಮಾಡಬಹುದು ಅಥವಾ ಉತ್ತಮ ಬೆಳೆಯಾದಾಗ ಬೆಲೆ ಕುಸಿತದಿಂದ ರೈತರು ತೊಂದರೆಗೊಳಗಾಗಬಹುದು.

29. ರಾಜ್ಯವು 2000-01 ನೇ ಸಾಲಿನಲ್ಲಿ 106 ಲಕ್ಷ ಟನ್‌ಗಳ ದಾಖಲೆಯ ಆಹಾರ ಧಾನ್ಯ ಉತ್ಪಾದಿಸಿದ ನಂತರ 2001 ರಿಂದ 2004 ರ ಅವಧಿಯಲ್ಲಿ ಸತತವಾಗಿ ಬರ ಪರಿಸ್ಥಿತಿಯನ್ನು ಎದುರಿಸಿತು. 2004-05 ನೇ ಸಾಲಿನಲ್ಲಿ ಕೃಷಿ ಚಟುವಟಿಕೆಗಳು ಆಶಾದಾಯಕವಾಗಿ ಆರಂಭವಾದರೂ ನಂತರದ ತಿಂಗಳುಗಳಲ್ಲಿ ರಾಜ್ಯದ ಹಲವು ಭಾಗಗಳಲ್ಲಿ ಉತ್ತಮ ಮಳೆ ಬರಲಿಲ್ಲ. ಮುಸುಕಿನಜೋಳ, ರಾಗಿ, ಭತ್ತ ಮತ್ತು ಹತ್ತಿ ಬೆಳೆಗಳ ಉತ್ತಮ ಸುಗ್ಗಿಯಾದರೂ ಜೋಳ, ಸೂರ್ಯಕಾಂತಿಯಂತಹ ಇನ್ನಿತರೇ ಬೆಳೆಗಳು ಬರದ ತೊಂದರೆಗೆ ಸಿಲುಕಿದವು.

30. ಇನ್ನೊಂದು ಸಮಸ್ಯೆ ಎಂದರೆ ಕೃಷಿ ಉತ್ಪಾದನೆ ಹೆಚ್ಚಾದಾಗ ಕೂಡ ರೈತರ ಆದಾಯದಲ್ಲಿ ಏರಿಕೆ ಆಗುವುದಿಲ್ಲ. ಆಹಾರ ಧಾನ್ಯಗಳು ಸಂತೃಪ್ತಿ ಆಧಾರಿತ ಬೇಡಿಕೆಯ ಸರಕುಗಳಾಗಿದ್ದು ಬೇಡಿಕೆಯ ಏರಿಕೆ ಮತ್ತು ಇಳಿಕೆಯ ಪ್ರಮಾಣ ಸೀಮಿತವಾಗಿರುತ್ತದೆ. ಈ ಕಾರಣದಿಂದಾಗಿ ಸಮೃದ್ಧ ಸುಗ್ಗಿಯ ವರ್ಷಗಳಲ್ಲಿಯೂ ಸಹ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗದೆ ರೈತರು ಬೆಲೆ ಕುಸಿತದಿಂದ ತೊಂದರೆಗೆ ಒಳಗಾಗುತ್ತಾರೆ. ಉದಾಹರಣೆಗೆ 2004-05 ರಲ್ಲಿ ಮುಸುಕಿನಜೋಳ ಮತ್ತು ತೊಗರಿಯ ಉತ್ತಮ ಸುಗ್ಗಿಯಾಗಿದ್ದರೂ ಬೆಲೆ ಕುಸಿತದಿಂದಾಗಿ ಇದು ರೈತರ ಪಾಲಿಗೆ

ಸಂತಸವನ್ನೇನೂ ತರಲಿಲ್ಲ. ಆದಾಗ್ಯೂ, ಸರ್ಕಾರವು 38 ಸಾವಿರ ಟನ್‌ಗಳಷ್ಟು ಮುಸುಕಿನಜೋಳ ಮತ್ತು 21 ಸಾವಿರ ಕ್ವಿಂಟಾಲ್‌ಗಳಷ್ಟು ತೊಗರಿಯನ್ನು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಲ್ಲಿ ಖರೀದಿಸಿ ನಮ್ಮ ರೈತರ ನೆರವಿಗೆ ಬಂದಿದೆ. ಮಾರುಕಟ್ಟೆ ಆವೃತ್ತ ನಿಧಿಯ ಅನುಕೂಲವನ್ನು ಖುದ್ದಾಗಿ ಕಂಡಿರುವ ನಾನು ಈ ಆವೃತ್ತ ನಿಧಿಗೆ ರಾಜ್ಯದ ಕೊಡುಗೆಯನ್ನು 40 ಕೋಟಿ ರೂ.ಗಳಷ್ಟು ಹೆಚ್ಚಿಸಲು ಉದ್ದೇಶಿಸಿದ್ದೇನೆ. ಇದರಿಂದ ಆವೃತ್ತ ನಿಧಿಗೆ ರಾಜ್ಯದ ಒಟ್ಟು ಕೊಡುಗೆ 200 ಕೋಟಿ ರೂ.ಗಳಾಗಲಿವೆ. ಈ ಆವೃತ್ತ ನಿಧಿಗೆ ಕೇಂದ್ರ ಸರ್ಕಾರದ ಪಾಲಿನ ಕೊಡುಗೆ ಹಣ 200 ಕೋಟಿ ರೂ.ಗಳಿಗೆ ಮನವಿ ಸಲ್ಲಿಸಲಾಗಿದೆ.

31. ಇತ್ತೀಚಿಗೆ ಅನುಭವಿಸಿದ ಬರಗಾಲ ವರ್ಷಗಳ ಹಿನ್ನೆಲೆಯಲ್ಲಿ ನಮ್ಮ ರೈತರನ್ನು ಬರಗಾಲದ ದವಡೆಯಿಂದ ಪಾರುಮಾಡಲು ನಾಲ್ಕು ರೀತಿಯ ಕಾರ್ಯಕ್ರಮಗಳ ಅವಶ್ಯಕತೆಯಿದೆ ಎಂದು ಅನ್ನಿಸುತ್ತಿದೆ. ಮೊದಲನೆಯದಾಗಿ, ಬರವನ್ನು ತಡೆಗಟ್ಟಲು ನೀರಾವರಿ ಸೌಲಭ್ಯ ಒದಗಿಸುವುದೇ ಸೂಕ್ತ ಕಾರ್ಯಕ್ರಮ. ಈ ಹಿನ್ನೆಲೆಯಲ್ಲಿ ನಾವು ನೀರಾವರಿ ವಲಯಕ್ಕೆ ಯೋಜನಾ ಅಂದಾಜನ್ನು 2004-05 ನೇ ಸಾಲಿನಲ್ಲಿನ 3024 ಕೋಟಿ ರೂ.ಗಳಿಂದ 2005-06ನೇ ಸಾಲಿನಲ್ಲಿ 3942 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇವೆ. ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಕಾರಂಜ, ಅಮರ್ಜಾ, ಬೆಣ್ಣೆತೊರ ಯೋಜನೆಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಅಲ್ಲದೆ, ಭದ್ರಾ ಮತ್ತು ತುಂಗಭದ್ರಾ ನೀರಾವರಿ ಯೋಜನೆಗಳ ನಿರ್ವಹಣೆ ಮತ್ತು ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಹಾಗೂ ಈ ಎಲ್ಲ ನೀರಾವರಿ ಯೋಜನೆಗಳಿಗಾಗಿ 200 ಕೋಟಿ ರೂ.ಗಳನ್ನು ಒದಗಿಸಿದ್ದೇನೆ.

32. ನಾವು ಸಣ್ಣ ನೀರಾವರಿ ವಲಯಕ್ಕೆ ಕೂಡ ಹೆಚ್ಚು ಒತ್ತು ನೀಡಲು ಉದ್ದೇಶಿಸಿದ್ದೇವೆ. ವಿಶ್ವಬ್ಯಾಂಕ್ ಮತ್ತು ನಬಾರ್ಡ್ ನೆರವಿನ ಕೆರೆ ನೀರಾವರಿ ಯೋಜನೆಗಳನ್ನು ಕರ್ನಾಟಕದಲ್ಲಿ ಜಾರಿಗೊಳಿಸಲಾಗುತ್ತಿದೆ. 2004-05 ನೇ ಸಾಲಿನಲ್ಲಿ ಸಣ್ಣ ನೀರಾವರಿಗೆ 287 ಕೋಟಿ ರೂ.ಗಳನ್ನು ನೀಡಲಾಗಿತ್ತು. 2005-06 ನೇ ಸಾಲಿನಲ್ಲಿ ಒಟ್ಟು 441 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ನೀಡಲು ಉದ್ದೇಶಿಸಿದ್ದೇನೆ.

33. ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೆಚ್ಚು ಬಿರುಸಿನಿಂದ ಅನುಷ್ಠಾನಗೊಳಿಸುವುದು ಬರಗಾಲವನ್ನು ಎದುರಿಸುವ ಎರಡನೆಯ ತಂತ್ರವಾಗಿದೆ. ನೀರಾವರಿ ಸೌಲಭ್ಯ ಕಲ್ಪಿಸಲು ನಾವು ಎಷ್ಟೇ ಪ್ರಯತ್ನ ಮಾಡಿದರೂ ನಮ್ಮ ಕೃಷಿ ಯೋಗ್ಯ ಭೂಮಿಯ ಶೇ.70ಕ್ಕಿಂತ ಹೆಚ್ಚು ಭೂಮಿಯನ್ನು ನೀರಾವರಿಗೆ ಒಳಪಡಿಸಲು ಸಾಧ್ಯವಿಲ್ಲ. ಇಂತಹ ಭೂಮಿಗೆ ಜಲಾನಯನ ಅಭಿವೃದ್ಧಿ ಯೋಜನೆಯೇ ಸೂಕ್ತ ಉತ್ತರ. ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳು ಸ್ಥಳದಲ್ಲೇ ನೀರನ್ನು ಸಂರಕ್ಷಿಸುವುದರ ಜೊತೆಗೆ ಮಣ್ಣಿನ ಸವಕಳಿಯನ್ನು ತಡೆಗಟ್ಟುತ್ತವೆ. ಆದ್ದರಿಂದ ರಾಜ್ಯ ಸರ್ಕಾರವು ಪ್ರಸ್ತುತ ಜಾರಿಯಲ್ಲಿರುವ ಎಲ್ಲಾ ಜಲಾನಯನ ಕಾರ್ಯಕ್ರಮಗಳನ್ನು ಮುಂದುವರಿಸುವುದರ ಜೊತೆಗೆ ನಬಾರ್ಡ್ ನೆರವಿನಿಂದ ಮತ್ತಷ್ಟು ಪ್ರದೇಶವನ್ನು ಜಲಾನಯನ ಅಭಿವೃದ್ಧಿಗೆ ಒಳಪಡಿಸಲಿದೆ.

34. "ವೈವಿಧ್ಯ ಬೆಳೆ ಪದ್ಧತಿ" ಕರ್ನಾಟಕದ ರೈತರನ್ನು ಬರದಿಂದ ಹಾಗೂ ಮಾರುಕಟ್ಟೆ ಕುಸಿತದಿಂದ ಪಾರು ಮಾಡುವ ಮೂರನೇ ವಿಧಾನವಾಗಿದೆ. ನಮ್ಮ ಕೃಷಿ ಯೋಗ್ಯ ಭೂಮಿಯಲ್ಲಿ

ತೋಟಗಾರಿಕೆ ಬೆಳೆಗಳು ಶೇ. 15 ರಷ್ಟು ಪ್ರದೇಶದಲ್ಲಿ ಇದ್ದರೂ ಸಹ ಕೃಷಿ ವರಮಾನಕ್ಕೆ ಶೇ. 40 ರಷ್ಟು ಪಾಲನ್ನು ನೀಡುತ್ತಿದೆ. ಈ ಹಿಂದಿನ ವರ್ಷಗಳಲ್ಲಿ ತೋಟಗಾರಿಕೆ ವಲಯವು ಅನುದಾನ ಕೊರತೆಗೆ ಒಳಗಾಗಿದೆ. ಆದ್ದರಿಂದ ಈಗ ನಾನು ಅನುದಾನವನ್ನು ಹೆಚ್ಚಿಸಿ ಈಗಿರುವ ಎಲ್ಲಾ ತೋಟಗಾರಿಕಾ ಕಾರ್ಯಕ್ರಮಗಳಿಗೆ ನವಚೈತನ್ಯ ನೀಡಿಕೆ ಮುಂದುವರಿಸಲು ಉದ್ದೇಶಿಸಿದ್ದೇನೆ. ಇದರ ಜೊತೆಗೆ ಹೊಸದಾಗಿ 5,000 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳಿಗೆ ಇಸ್ರೇಲ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಐದು ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಈ ಕಾರ್ಯಕ್ರಮವನ್ನು ಜಾರಿಗೊಳಿಸಲು ಅತ್ಯಂತ ಹಿಂದುಳಿದ 10 ತಾಲ್ಲೂಕುಗಳನ್ನು ಆಯ್ಕೆ ಮಾಡಿ ಪ್ರತೀ ತಾಲ್ಲೂಕಿನಲ್ಲಿ ತಲಾ 500 ಎಕರೆ ಪ್ರದೇಶದಲ್ಲಿ ಹನಿ ನೀರಾವರಿ, ಮಳೆನೀರಿನ ಸಂಗ್ರಹಣೆ, ಸಾವಯವ ಗೊಬ್ಬರದ ಬಳಕೆ ಮತ್ತು ಮಧ್ಯಂತರ ಬೆಳೆ ಇತ್ಯಾದಿ ತಂತ್ರಜ್ಞಾನವನ್ನು ಪ್ರದರ್ಶಿಸಲು ಕ್ರಮ ಕೈಗೊಳ್ಳಲಾಗುವುದು. ಇದಲ್ಲದೆ ರೈತರು ಇನ್ನೂ ಹೆಚ್ಚಿನ ಪ್ರದೇಶದಲ್ಲಿ ಹನಿ ನೀರಾವರಿಯನ್ನು ಅಳವಡಿಸಲು 2005-06ರಲ್ಲಿ ನಾನು 6 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಈಗ ಹನಿ ನೀರಾವರಿಗೆ ನೀಡುತ್ತಿರುವ ಶೇ. 100 ರ ಸಹಾಯಧನವನ್ನು ಮುಂದುವರಿಸಲಾಗುವುದು. ಇತರೆ ಜಿಲ್ಲೆಗಳಿಗೆ ಶೇ.50 ರಂತೆ ಸಹಾಯಧನ ನೀಡಲಾಗುವುದು.

35. ಕೇಂದ್ರ ಸರ್ಕಾರವು ತನ್ನ 2005-06 ರ ಮುಂಗಡಪತ್ರದಲ್ಲಿ "ರಾಷ್ಟ್ರೀಯ ತೋಟಗಾರಿಕಾ ಮಿಷನ್"ನ್ನು ಸ್ಥಾಪಿಸಿರುವುದಾಗಿ ಘೋಷಣೆ ಮಾಡಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನ ನಿಧಿಯನ್ನು ಸಮರ್ಪಕವಾಗಿ ಬಳಸಿಕೊಂಡು ರಾಜ್ಯದ ತೋಟಗಾರಿಕೆ ವಲಯದ ಹೂಡಿಕೆಯನ್ನು ಹೆಚ್ಚಿಸಲು ಅಗತ್ಯವಾದ ರಾಜ್ಯ ಸರ್ಕಾರದ ಪಾಲಿನ ಹಣವನ್ನು ಒದಗಿಸಲಾಗುವುದು.

36. ಬರಗಾಲದ ಹೊಡೆತದಿಂದ ನಮ್ಮ ರೈತರನ್ನು ಸಂರಕ್ಷಿಸಲು ಬೆಳೆವಿಮೆ ಉತ್ತಮ ಯೋಜನೆಯಾಗಿದೆ. ಈ ಯೋಜನೆಯನ್ನು ರೈತ ಸಮುದಾಯದಲ್ಲಿ ಜನಪ್ರಿಯಗೊಳಿಸಲು ನಾವು ಕ್ರಮ ಕೈಗೊಳ್ಳುತ್ತಿದ್ದೇವೆ. ಬೆಳೆವಿಮಾ ಪರಿಹಾರವನ್ನು ಪಾವತಿಸಲು ಸರ್ಕಾರವು 2004-05 ನೇ ಸಾಲಿನಲ್ಲಿ 236 ಕೋಟಿ ರೂ.ಗಳನ್ನು ಒದಗಿಸಿತ್ತು. 2005-06 ರಲ್ಲಿ 200 ಕೋಟಿ ರೂ.ಗಳನ್ನು ನಾನು ಮುಂಗಡಪತ್ರದಲ್ಲಿ ಒದಗಿಸಿದ್ದೇನೆ. ಮುಂದಿನ ವರ್ಷ ಬೆಳೆವಿಮೆಯನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು ಇದು ನಮ್ಮ ರೈತರಿಗೆ ನೆರವಾಗಲಿದೆ.

37. ರೈತರಿಗೆ ಕಡಿಮೆ ಬೆಲೆಯಲ್ಲಿ ಉತ್ತಮ ಕೃಷಿ ಸಲಕರಣೆಗಳನ್ನು, ಗೊಬ್ಬರ ಹಾಗೂ ಬೀಜಗಳನ್ನು ವಿತರಿಸುವ ಅಗತ್ಯವಿದೆ. 2004-05ನೇ ಸಾಲಿನಲ್ಲಿ ನಾವು ಉತ್ತಮ ಗುಣಮಟ್ಟದ ಬೀಜಗಳನ್ನು ರೈತರಿಗೆ ವಿತರಿಸಿದ್ದೇವೆ. 2005-06ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ 32.34 ಕೋಟಿ ರೂ.ಗಳನ್ನು ಒದಗಿಸಿದ್ದೇನೆ.

38. ಕೃಷಿಯಲ್ಲಿ ಅಂತರರಾಷ್ಟ್ರೀಯ ಸ್ಪರ್ಧೆ ಎದುರಿಸಲು ನಮ್ಮ ರೈತರನ್ನು ಸಜ್ಜುಗೊಳಿಸುವುದು ಅಗತ್ಯವಾಗಿದೆ. ಹಾಗೆಯೇ ಬರಪರಿಸ್ಥಿತಿಯ ಹೊಡೆತದಿಂದ ನಮ್ಮ ರೈತರನ್ನು ಸಂರಕ್ಷಿಸುವುದು ಸಹ ಅವಶ್ಯವಾಗಿದೆ. ಈ ಹಿನ್ನೆಲೆಯಲ್ಲಿ ಈ ಎರಡೂ ಉದ್ದೇಶಗಳ ಈಡೇರಿಕೆಗಾಗಿ ನೂತನ ಕೃಷಿ ತಂತ್ರಜ್ಞಾನದ ನೆರವನ್ನು ಪಡೆಯಬೇಕು. ಬೆಳೆ ವೈವಿಧ್ಯ ಪದ್ಧತಿಯನ್ನು ಸೂಕ್ತ ಸಂಶೋಧನಾ

ಬೆಂಬಲದೊಂದಿಗೆ ರೈತರಿಗೆ ನೀಡಿದರೆ ಉಪಯೋಗವಾಗುತ್ತದೆ. ಇತ್ತೀಚೆಗೆ ನುಸಿ ಹಾವಳಿಯಿಂದ ತೆಂಗು ಬೆಳೆಗೆ ಮತ್ತು ಬಿಳಿಉಣ್ಣೆ ರೋಗದಿಂದ ಕಬ್ಬಿಗೆ ಉಂಟಾಗಿರುವ ನಷ್ಟಗಳು ಕೃಷಿ ಸಂಶೋಧನೆಗೆ ಹೆಚ್ಚು ನೆರವು ಬೇಕೆನ್ನುವುದನ್ನು ಪುಷ್ಟೀಕರಿಸುತ್ತಿವೆ. ಕೃಷಿ ವಿಶ್ವವಿದ್ಯಾಲಯಗಳ ಸಂಶೋಧನೆಗಳ ಬಗ್ಗೆ ಅಧ್ಯಯನ ನಡೆಸಲು ರಚಿಸಲಾಗಿದ್ದ ಸಮಿತಿಯು ಕೃಷಿ ಸಂಶೋಧನೆಗೆ ಹೆಚ್ಚು ಹಣ ನೀಡಬೇಕೆಂದು ಶಿಫಾರಸ್ಸು ಮಾಡಿದೆ. ನಾನು ಕೃಷಿ ಸಂಶೋಧನೆಗಾಗಿ 2004-05ನೇ ಸಾಲಿನಲ್ಲಿ ನೀಡಿದ್ದ 17 ಕೋಟಿ ರೂ.ಗಳ ಅನುದಾನವನ್ನು 2005-06ರಲ್ಲಿ 27 ಕೋಟಿ ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ.

39. ಸಕಾಲಿಕ ಕೃಷಿ ಸಾಲವು ಉತ್ತಮ ಗುಣಮಟ್ಟದ ಕೃಷಿಯನ್ನು ಕೈಗೊಳ್ಳಲು ರೈತರಿಗೆ ನೆರವಾಗುತ್ತದೆ. ಪ್ರಸ್ತುತ ಜಾರಿಯಲ್ಲಿರುವ ಬಹುಹಂತದ ಸಹಕಾರಿ ಸಾಲ ವ್ಯವಸ್ಥೆಯು ರೈತರಿಗೆ ತೀರಾ ದುಬಾರಿಯಾಗಿದೆ. ವಾಣಿಜ್ಯ ಬ್ಯಾಂಕುಗಳಲ್ಲಿ 50,000 ರೂ.ಗಳ ವರೆಗಿನ ಕೃಷಿ ಸಾಲಕ್ಕೆ ಶೇ. 8ರ ಬಡ್ಡಿ ಇದೆ. ಇದಕ್ಕಿಂತ ಹೆಚ್ಚಿನ ಸಾಲಕ್ಕೆ ಶೇ. 10ಕ್ಕಿಂತಲೂ ಹೆಚ್ಚಿನ ಬಡ್ಡಿ ದರಗಳಿವೆ. ಇದರ ಜೊತೆಗೆ ಸಾಲ ಪಡೆಯುವಾಗ ಬೆಳೆವಿಮೆ ಕಂತನ್ನು ಸಹ ಕಡ್ಡಾಯವಾಗಿ ಕಡಿತ ಮಾಡಿಕೊಳ್ಳಲಾಗುತ್ತಿದೆ. ಇವೆಲ್ಲ ಅಂಶಗಳು ಒಂದಕ್ಕೊಂದು ಸೇರಿ ಕೃಷಿ ಸಾಲವನ್ನು ರೈತರ ಪಾಲಿಗೆ ದುಬಾರಿಗೊಳಿಸಿದೆ. ಆದ್ದರಿಂದ ನಾನು ರೈತರು ಸಹಕಾರಿ ಬ್ಯಾಂಕ್‌ಗಳಿಂದ ಪಡೆಯುವ ಕೃಷಿಸಾಲದ ಬಡ್ಡಿಯನ್ನು ಶೇಕಡಾ 6ಕ್ಕೆ ದೊರೆಯುವಂತೆ ಸರ್ಕಾರದ ವತಿಯಿಂದ ಬಡ್ಡಿ ಸಹಾಯಧನವನ್ನು 2004-05ನೇ ಸಾಲಿನಲ್ಲಿ ಒದಗಿಸಿದ್ದೆ. ಈ ಕಾರ್ಯಕ್ರಮವನ್ನು 2005-06 ನೇ ಸಾಲಿನಲ್ಲಿಯೂ ಮುಂದುವರಿಸುತ್ತಿದ್ದು ಬಡ್ಡಿ ಸಹಾಯಧನಕ್ಕಾಗಿ 80 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

40. ರಾಜ್ಯದ ರೈತರು 2001 ರಿಂದ 2004 ರ ಅವಧಿಯಲ್ಲಿ ಸತತ ಬರಗಾಲದಿಂದ ತೊಂದರೆಗೆ ಒಳಗಾಗಿದ್ದರು. ಆದ್ದರಿಂದ ರೈತರು ಸಹಕಾರಿ ಬ್ಯಾಂಕ್‌ಗಳಲ್ಲಿ 31.03.2004 ರವರೆಗೆ ಪಡೆದಿರುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಬೆಳೆ ಸಾಲದ ಮೇಲಿನ ಬಡ್ಡಿ ಮತ್ತು ದಂಡಬಡ್ಡಿಯನ್ನು ಮನ್ನಾ ಮಾಡಲು ನಾನು ಉದ್ದೇಶಿಸಿದ್ದೇನೆ. ಈಗ ನೀಡಲಾಗುತ್ತಿರುವ ಬಡ್ಡಿ ಮನ್ನಾ ಯೋಜನೆಯು ಕಾಫಿ ಬೆಳೆಗಾರರಿಗೂ ಅನ್ವಯಿಸುತ್ತದೆ. ರೈತರು ಮತ್ತು ಕಾಫಿ ಬೆಳೆಗಾರರು ತಮ್ಮ ಪೂರ್ಣ ಸಾಲದ ಅಸಲನ್ನು ಜೂನ್ 2005 ರೊಳಗೆ ಪಾವತಿಮಾಡಿ ಈ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ. ಇದು ಒಂದು ಸಲದ ಮತ್ತು ಅಂತಿಮವಾಗಿ ನೀಡುವ ಪರಿಹಾರವಾಗಿರುತ್ತದೆ. ಈ ಉದ್ದೇಶಕ್ಕಾಗಿ 2005-06 ನೇ ಸಾಲಿನಲ್ಲಿ ನಾನು 450 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

41. ರೈತರು ಕೃಷಿ ಸಾಲವನ್ನು ಪಡೆಯುವಾಗ ಶೇಕಡ 1 ರಷ್ಟನ್ನು ನೋಂದಣಿ ಹಾಗೂ ಮುದ್ರಾಂಕ ಶುಲ್ಕವಾಗಿ ಪಾವತಿಸಬೇಕಾಗಿದೆ. ಇದು ರೈತರಿಗೆ ಹೊರೆಯಾಗಿದೆ. ಆದ್ದರಿಂದ ನಾನು ಕೃಷಿ ಸಾಲ ಪಡೆಯುವಾಗ ರೈತರು ಪಾವತಿಸಬೇಕಾಗಿರುವ ನೋಂದಣಿ ಶುಲ್ಕ ಹಾಗೂ ಮುದ್ರಾಂಕ ಶುಲ್ಕಕ್ಕೆ ವಿನಾಯಿತಿ ನೀಡುತ್ತಿದ್ದೇನೆ.

42. "ಯಶಸ್ವಿನಿ" ಯೋಜನೆಯು ಕರ್ನಾಟಕದ ಸಹಕಾರಿ ಸಂಘಗಳ ಸದಸ್ಯರ ಪಾಲಿಗೆ "ಧನ್ವಂತರಿ"ಯಾಗಿದೆ. ಒಟ್ಟು 80,000 ರೈತರು ಈ ಯೋಜನೆಯ ಅನುಕೂಲ ಪಡೆದಿದ್ದಾರೆ.

ಉತ್ತಮ ಫಲ ನೀಡುತ್ತಿರುವ "ಯಶಸ್ವಿನಿ" ಯೋಜನೆಯನ್ನು ಪರಿಷ್ಕರಿಸಿ ಮುಂದುವರಿಸಲು ನಿರ್ಧರಿಸಿದ್ದು, ಈ ಉದ್ದೇಶಕ್ಕಾಗಿ 2005-06ನೇ ಸಾಲಿನಲ್ಲಿ ಐದು ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

43. ರಾಜ್ಯದಲ್ಲಿ ಸಹಕಾರಿ ಚಳುವಳಿಯು ನೂರನೇ ವರ್ಷಕ್ಕೆ ಕಾಲಿಡುತ್ತಿರುವ ಸಂಗತಿ ತಮಗೆಲ್ಲಾ ತಿಳಿದಿದೆ. ಧಾರವಾಡ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಪ್ರಪ್ರಥಮ ಸಹಕಾರಿ ಸಂಘವು ದಿವಂಗತ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರಿಂದ 1905ನೇ ಇಸವಿಯಲ್ಲಿ ಸ್ಥಾಪಿತಗೊಂಡಿತು. ಈ ಶತಮಾನೋತ್ಸವ ಸಮಾರಂಭವನ್ನು ಸ್ಮರಣೀಯವನ್ನಾಗಿ ಆಚರಿಸಲು ಉದ್ದೇಶಿಸಿದ್ದು ಕಣಗಿನಹಾಳ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಅಭಿವೃದ್ಧಿಪಡಿಸಲಾಗುವುದು. ಇದರ ಜೊತೆಗೆ ಧಾರವಾಡದಲ್ಲಿ ಸಹಕಾರಿ ಆಂದೋಲನಕ್ಕೆ ದಿವಂಗತ ಕೆ.ಹೆಚ್. ಪಾಟೀಲರು ಸಲ್ಲಿಸಿರುವ ಸೇವೆಯನ್ನು ಸ್ಮರಿಸಲು ಒಂದು ಸಹಕಾರಿ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗುವುದು. ಈ ಉದ್ದೇಶಗಳಿಗಾಗಿ ನಾನು ಒಂದು ಕೋಟಿ. ರೂ.ಗಳನ್ನು ನಿಗದಿಪಡಿಸಲು ಉದ್ದೇಶಿಸಿದ್ದೇನೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ

44. ಕೃಷಿ ಬದುಕಿನ ಅವಿಭಾಜ್ಯ ಅಂಗವಾಗಿರುವ ಜಾನುವಾರುಗಳು ಹಲವಾರು ರೋಗಗಳಿಂದ ಬಳಲುತ್ತವೆ. ಇವುಗಳಿಗೆ ಚಿಕಿತ್ಸೆ ನೀಡಲು ಪಶು ಆಸ್ಪತ್ರೆಗಳಿಗೆ ಮತ್ತು ಚಿಕಿತ್ಸಾಲಯಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಔಷಧಿಗಳನ್ನು ಪೂರೈಸಲು ಹತ್ತು ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಜಾನುವಾರುಗಳಿಗೆ ತಗಲುವ ಭಯಾನಕ ಕಾಯಿಲೆಯಾದ ಕಾಲುಬಾಯಿ ರೋಗದಿಂದ ಜಾನುವಾರುಗಳನ್ನು ಸಂರಕ್ಷಿಸಲು ರಾಜ್ಯದ ಎಲ್ಲಾ ಪಶು ಚಿಕಿತ್ಸಾಲಯಗಳಿಗೆ ಕಾಲುಬಾಯಿ ರೋಗದ ಲಸಿಕೆಯನ್ನು ಉಚಿತವಾಗಿ ಪೂರೈಸಲು ಉದ್ದೇಶಿಸಿದ್ದೇನೆ. ಇದಕ್ಕಾಗಿ ನಾನು 2005-06ರಲ್ಲಿ 2.25 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

45. ಡಾ|| ನಂಜುಂಡಪ್ಪ ಸಮಿತಿಯ ಶಿಫಾರಸ್ಸಿನಂತೆ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ 69 ಪಶುಸಂಗೋಪನಾ ಕೇಂದ್ರಗಳನ್ನು ತೆರೆಯಲಾಗುವುದು.

46. ಕುರಿ ಸಾಕಾಣಿಕೆ ಹಿಂದುಳಿದ ಜನಸಮುದಾಯದ ಪ್ರಮುಖ ಕಸುಬಾಗಿದೆ. ಕುರಿಗಳಿಗೆ ತಗಲುವ ಹಲವಾರು ಖಾಯಿಲೆ ಮತ್ತು ಅವಘಡಗಳಿಂದಾಗಿ ಕುರಿಗಾರರು ಅನಿರೀಕ್ಷಿತ ಅಪಾಯಗಳಿಗೆ ತುತ್ತಾಗಿ ಅಪಾರ ನಷ್ಟ ಅನುಭವಿಸುತ್ತಿದ್ದಾರೆ. ಆದ್ದರಿಂದ ಈ ವರ್ಗದ ಹಿತ ಕಾಪಾಡಲು ನಾನು "ಕರ್ನಾಟಕ ಜನಶ್ರೀ ವಿಮಾ ಯೋಜನೆ"ಯನ್ನು ಜಾರಿಗೊಳಿಸಲು ಉದ್ದೇಶಿಸಿದ್ದೇನೆ. ಈ ಯೋಜನೆಯಡಿ ಕುರಿ ಸಾಕಾಣಿಕೆಯನ್ನೇ ಸಂಪೂರ್ಣವಾಗಿ ಅವಲಂಬಿಸಿರುವ ಕುರಿಗಾರರು ಮತ್ತು ಕುರಿಗಳಿಗೆ ವಿಮಾ ರಕ್ಷಣೆಯನ್ನು ಒದಗಿಸಲಾಗುವುದು. ಮುಂದಿನ ಮೂರು ವರ್ಷಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಇದಕ್ಕಾಗಿ ಐದು ಕೋಟಿ ರೂ.ಗಳನ್ನು ನಾನು ಒದಗಿಸುತ್ತಿದ್ದೇನೆ.

47. ಪ್ರಸ್ತುತ ಯಾಂತ್ರೀಕೃತ ದೋಣಿಗಳಿಗೆ 50,000 ಕಿಲೋ ಲೀಟರ್‌ವರೆಗೆ ಡೀಸಲ್‌ನ್ನು ಮಾರಾಟ ತೆರಿಗೆ ವಿನಾಯಿತಿಗೊಳಿಸಿ ನೀಡುವ ಮೂಲಕ ಮೀನುಗಾರಿಕೆಯನ್ನು ಆದಾಯದ ಚಟುವಟಿಕೆಯನ್ನಾಗಿ ಮಾಡಲಾಗಿದೆ. ಈ ಡೀಸೆಲ್ ಮಿತಿಯನ್ನು 55,000 ಲೀಟರ್‌ಗಳಿಗೆ ಹೆಚ್ಚಿಸಿ ಯೋಜನೆಯನ್ನು ಮುಂದುವರಿಸಲಾಗುವುದು.

ರೇಷ್ಮೆ ಕೃಷಿ

48. ಕರ್ನಾಟಕದಲ್ಲಿ ರೇಷ್ಮೆ ಕೃಷಿ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಸುಮಾರು ಮೂರು ಲಕ್ಷ ರೈತ ಕುಟುಂಬಗಳು ಜೀವನ ನಿರ್ವಹಣೆಗೆ ರೇಷ್ಮೆಗೂಡು ಉತ್ಪಾದನೆಯನ್ನೇ ಅವಲಂಬಿಸಿವೆ. ಇದರ ಜೊತೆಗೆ 65,000 ಕುಟುಂಬಗಳು ರೇಷ್ಮೆ ಆಧಾರಿತ ಕಸುಬುಗಳಾದ ರೇಷ್ಮೆನೇಯ್ಗೆ, ರೇಷ್ಮೆಸುತ್ತುವುದು, ಬಣ್ಣ ಹಾಕುವುದು, ಮುದ್ರಣ ಇತ್ಯಾದಿ ಚಟುವಟಿಕೆಯನ್ನೇ ತಮ್ಮ ಜೀವನಕ್ಕೆ ಆಧಾರ ಮಾಡಿಕೊಂಡಿದ್ದಾರೆ. ನಾನು ರೇಷ್ಮೆ ಕೃಷಿಗೆ ಉತ್ತೇಜನ ನೀಡಲು ಉದ್ದೇಶಿಸಿದ್ದು ಕೇಂದ್ರ- ರಾಜ್ಯ ಸರ್ಕಾರಗಳ ನೆರವಿನ 25.25 ಕೋಟಿ ರೂ.ಗಳ ಕೆಟಲಿಟಿಕ್ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರದ ಪಾಲಿನ 10.25 ಕೋಟಿ ರೂ.ಗಳನ್ನು ನೀಡುತ್ತಿದ್ದೇನೆ. ರೇಷ್ಮೆಗ್ರೇನೇಜುಗಳಲ್ಲಿ ಗುಣಮಟ್ಟದ ಮೊಟ್ಟೆ ಉತ್ಪಾದನೆಗೆ ಬೆಂಬಲ ನೀಡಲು ನಾನು 7.50 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ರೇಷ್ಮೆ ಮಾರುಕಟ್ಟೆಗಳಿಗೆ ಬರುವ ನಮ್ಮ ರೈತರುಗಳಿಗೆ ಮೂಲಸೌಕರ್ಯಗಳನ್ನು ಕಲ್ಪಿಸುವ ಅಗತ್ಯವಿದೆ. ಆದ್ದರಿಂದ ರಾಮನಗರ, ಶಿಡ್ಲಘಟ್ಟ, ಕೊಳ್ಳೇಗಾಲ, ವಿಜಯಪುರ, ಕನಕಪುರಗಳಲ್ಲಿ ರೇಷ್ಮೆಗೂಡಿನ ಮಾರುಕಟ್ಟೆಗಳಲ್ಲಿ ಮೂಲಸೌಕರ್ಯಗಳನ್ನು ಒದಗಿಸಲಾಗುವುದು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

49. ರೋಗಗಳು ರೋಗಿಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ ಎನ್ನುವುದು ಅನುಭವದ ಮಾತು. ಉತ್ತಮ ಗುಣಮಟ್ಟದ ಕುಡಿಯುವ ನೀರು, ಪೌಷ್ಟಿಕ ಆಹಾರ, ವಸತಿ ಮತ್ತು ಶೌಚಾಲಯಗಳು ಜನರ ಆರೋಗ್ಯ ಸುಧಾರಣೆಗೆ ಕೊಡುಗೆ ನೀಡುತ್ತವೆ. ಈ ಕಾರಣಕ್ಕಾಗಿಯೇ ನಮ್ಮ ಸರ್ಕಾರವು ಕುಡಿಯುವ ನೀರು, ವಸತಿ ಮತ್ತು ಪೌಷ್ಟಿಕತೆ ಕಾರ್ಯಕ್ರಮಗಳಿಗೆ ಹೆಚ್ಚುವರಿ ಅನುದಾನ ಒದಗಿಸಲು ಆದ್ಯತೆ ನೀಡುತ್ತಿದೆ. ಇದಲ್ಲದೆ, ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸರ್ಕಾರವು ಸಕಾಲದಲ್ಲಿ ಪ್ರವೇಶಿಸಿ ಸೂಕ್ತ ಕ್ರಮ ಕೈಗೊಳ್ಳುತ್ತಿರುವುದರಿಂದ ಜನರ ಸಾವು ನೋವುಗಳ ಪ್ರಮಾಣ ಕಡಿಮೆಯಾಗಿದೆ. ಸಾರ್ವಜನಿಕ ಆರೋಗ್ಯ ಸೇವೆಗಳು ನೇರವಾಗಿ ಜನರ ಒಳಿತಿಗೆ ಸಂಬಂಧಿಸಿರುವುದರಿಂದ ಇದಕ್ಕೆ ಸರ್ಕಾರದ ಬೆಂಬಲ ಅತ್ಯಗತ್ಯ. ನಾನು 2005-06 ನೇ ಸಾಲಿನಲ್ಲಿ ಆರೋಗ್ಯ ವಲಯದ ಹಂಚಿಕೆಯನ್ನು 2004-05 ನೇ ಸಾಲಿಗಿಂತ ಶೇಕಡ 18 ರಷ್ಟು ಹೆಚ್ಚಿಸಲು ಉದ್ದೇಶಿಸಿದ್ದೇನೆ. ಸಾರ್ವಜನಿಕ ಆರೋಗ್ಯ ಪದ್ಧತಿಯ ತಾಂತ್ರಿಕ ಮತ್ತು ಅನುದಾನ ಹಂಚಿಕೆ ದಕ್ಷತೆಯನ್ನು ಹೆಚ್ಚಿಸಲು ನಾವು ಕ್ರಮ ಕೈಗೊಳ್ಳಬೇಕಾಗಿದೆ.

50. ಜಿಲ್ಲಾ ಆಸ್ಪತ್ರೆಗಳಲ್ಲಿ ಭೌತಿಕ ಸೌಕರ್ಯ ಕಲ್ಪಿಸುವುದರ ಜೊತೆಗೆ ಎಲ್ಲಾ ಜಿಲ್ಲಾ ಆಸ್ಪತ್ರೆಗಳಿಗೆ ಸಿ.ಟಿ. ಸ್ಕ್ಯಾನ್ ಉಪಕರಣಗಳನ್ನು ಒದಗಿಸಲು ತೀರ್ಮಾನಿಸಿದ್ದು ಈ ಉದ್ದೇಶಕ್ಕಾಗಿ 8 ಕೋಟಿ ರೂ.ಗಳನ್ನು ನಾನು ಮೀಸಲಿಡುತ್ತಿದ್ದೇನೆ. ಆರೋಗ್ಯ ಫಲಿತಾಂಶಗಳು ರಾಜ್ಯಾದ್ಯಂತ ಒಂದೇ ರೀತಿಯಿರುವುದಿಲ್ಲ. ಬೆಂಗಳೂರು, ಮೈಸೂರಿನಂತಹ ಜಿಲ್ಲೆಗಳಲ್ಲಿ ರೋಗಗಳ ಒತ್ತಡ ಕಡಿಮೆಯಿದ್ದರೆ, ಹಿಂದುಳಿದ ರಾಯಚೂರು, ಗುಲ್ಬರ್ಗಾ, ಕೊಪ್ಪಳ, ಚಾಮರಾಜನಗರ ಜಿಲ್ಲೆಗಳು ಸೀಮಿತ ಪ್ರಮಾಣದ ಆರೋಗ್ಯ ಮೂಲಸೌಕರ್ಯಗಳಿಂದ ಬಳಲುತ್ತಿವೆ. ಪ್ರಾಂತೀಯ ಅಸಮಾನತೆಯ ಬಗ್ಗೆ ರಚಿಸಿದ್ದ ಉನ್ನತ ಸಮಿತಿಯು ಈ ತಾರತಮ್ಯವನ್ನು ತನ್ನ ವರದಿಯಲ್ಲಿ ಹೇಳಿದೆ. ಅತ್ಯಂತ

ಹಿಂದುಳಿದ ಮತ್ತು ತೀರಾ ಹಿಂದುಳಿದ ತಾಲ್ಲೂಕುಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು ಅಗತ್ಯವಾಗಿದೆ. ಚಾಮರಾಜನಗರ, ಗುಲ್ಬರ್ಗಾ, ಹಾವೇರಿ ಮತ್ತು ಕೊಪ್ಪಳ ಜಿಲ್ಲಾ ಆಸ್ಪತ್ರೆಗಳನ್ನು ಮುಂದಿನ ವರ್ಷ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ 2005-06 ನೇ ಸಾಲಿಗೆ 23 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

51. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ 2.5 ಲಕ್ಷ ಕುಟುಂಬಗಳಿಗೆ ಭಾರತ ಸರ್ಕಾರದ ಸಾರ್ವತ್ರಿಕ ವಿಮಾ ಯೋಜನೆಯಡಿ ನೆರವು ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಫಲಾನುಭವಿಗಳಿಗೆ 30,000 ರೂ.ಗಳವರೆಗಿನ ಆಸ್ಪತ್ರೆ ವೆಚ್ಚವನ್ನು ನೀಡಲಾಗುವುದು. ಫಲಾನುಭವಿಗಳ ಪಾಲಿನ 248 ರೂ.ಗಳ ಪ್ರೀಮಿಯಂ ಹಣದಲ್ಲಿ 200 ರೂ.ಗಳನ್ನು ರಾಜ್ಯ ಸರ್ಕಾರದ ವತಿಯಿಂದ ಪಾವತಿಸಲು ಉದ್ದೇಶಿಸಿದ್ದೇನೆ. ಫಲಾನುಭವಿಗಳು 48 ರೂ.ಗಳನ್ನು ಪಾವತಿಸಿ ಈ ಆರೋಗ್ಯ ಯೋಜನೆಯ ಫಲ ಪಡೆದುಕೊಳ್ಳಬಹುದಾಗಿದೆ. ಸ್ತ್ರೀಶಕ್ತಿ ಗುಂಪಿನಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರಿಗೆ ಈ ಯೋಜನೆಯಲ್ಲಿ ವಿಮಾ ನೆರವು ಕಲ್ಪಿಸಲಾಗುವುದು. ಈ ಉದ್ದೇಶಕ್ಕಾಗಿ ನಾನು 2005-06ನೇ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ನಿಗದಿಪಡಿಸುತ್ತಿದ್ದೇನೆ.

52. ರಸ್ತೆ ಅಪಘಾತದ ಸಂದರ್ಭಗಳಲ್ಲಿ ಗಾಯಾಳುಗಳನ್ನು ತಕ್ಷಣ ಹತ್ತಿರದ ಆಸ್ಪತ್ರೆಗೆ ಸಾಗಿಸಲು ಅನುಕೂಲವಾಗುವಂತೆ ಎಲ್ಲ ಜಿಲ್ಲಾ ಆಸ್ಪತ್ರೆಗಳಿಗೂ ತಲಾ ಒಂದು ಆಂಬುಲೆನ್ಸ್ ನೀಡಲು ನಾನು 2 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ. ಈ ವಾಹನದ ನಿರ್ವಹಣೆಯನ್ನು ಉತ್ತಮ ಹಿನ್ನೆಲೆಯುಳ್ಳ ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸಲಾಗುವುದು.

53. ಹಿಂದುಳಿದ ತಾಲ್ಲೂಕುಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆಸ್ಪತ್ರೆಯಲ್ಲಿನ ಹೆರಿಗೆ ವ್ಯವಸ್ಥೆಯನ್ನು ಸುಧಾರಿಸಲು ಹಾಗೂ ಲಸಿಕೆ ನೀಡಲು ಅನುವಾಗುವಂತೆ 24 ಗಂಟೆಗಳ ದಿನಪೂರ್ತಿ ನರ್ಸಿಂಗ್ ಸೇವೆಯನ್ನು ಒದಗಿಸಲು ಉದ್ದೇಶಿಸಲಾಗಿದೆ. ಇದರಿಂದ ಬಾಣಂತಿಯರ ಮತ್ತು ಶಿಶುಮರಣ ಪ್ರಮಾಣವನ್ನು ಕಡಿಮೆ ಮಾಡಬಹುದಾಗಿದೆ.

54. ಆರೋಗ್ಯ ಇಲಾಖೆ ಮತ್ತು ಇಸ್ರೋ ಸಹಭಾಗಿತ್ವದಲ್ಲಿ ಟೆಲಿಮೆಡಿಷನ್ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಪ್ರಸ್ತುತ ಈ ಯೋಜನೆಯು 13 ಜಿಲ್ಲಾ ಆಸ್ಪತ್ರೆಗಳಲ್ಲಿ ಜಾರಿಯಲ್ಲಿದೆ. ಇದನ್ನು ಇತರೆ ಎಲ್ಲಾ ಜಿಲ್ಲಾ ಆಸ್ಪತ್ರೆಗಳಿಗೂ ವಿಸ್ತರಿಸಲಾಗುವುದು. ಈ ಉದ್ದೇಶಕ್ಕಾಗಿ ನಾನು 1.5 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

55. ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಶಿಕ್ಷಣ ನೀತಿಯು ತುಂಬಾ ಚರ್ಚೆಗೆ ಒಳಗಾಗುತ್ತಿದೆ. ಖಾಸಗಿ ಮೆಡಿಕಲ್ ಕಾಲೇಜುಗಳ ಶುಲ್ಕವು ತೀರಾ ದುಬಾರಿಯಾಗಿದ್ದು ಬಡ ಮತ್ತು ಮಧ್ಯಮ ವರ್ಗದ ಮೆರಿಟ್ ವಿದ್ಯಾರ್ಥಿಗಳಿಗೆ ಶುಲ್ಕ ತೆರುವುದು ಕಷ್ಟವಾಗುತ್ತಿದೆ. ಆದ್ದರಿಂದ ಕರ್ನಾಟಕದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಸೌಲಭ್ಯ ಕಲ್ಪಿಸಲು ನಮ್ಮ ಸರ್ಕಾರವು ಹಾಸನ, ಮಂಡ್ಯ, ರಾಯಚೂರು, ಶಿವಮೊಗ್ಗ, ಬೆಳಗಾವಿ, ಬೀದರ್‌ಗಳಲ್ಲಿ ಆರು ಹೊಸ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಲು ನಿರ್ಧರಿಸಿದೆ. ಈ ಕಾಲೇಜುಗಳು ಸ್ವಸಾಮರ್ಥ್ಯದಿಂದ

ನಡೆಯಲು ಅನುವಾಗುವಂತೆ ಕೆಲವು ಸೀಟುಗಳನ್ನು ಅನಿವಾಸಿ ಭಾರತೀಯರ ಮಕ್ಕಳಿಗೆ ಮೀಸಲಿಡಲಾಗುವುದು. ಈ ಉದ್ದೇಶಕ್ಕಾಗಿ 30 ಕೋಟಿ ರೂ.ಗಳನ್ನು 2005-06ನೇ ಸಾಲಿಗೆ ಒದಗಿಸುತ್ತಿದ್ದೇನೆ.

56. ಸ್ವಾಯತ್ತ ಸಂಸ್ಥೆಗಳಾದ ಕಿದ್ವಾಯಿ ವೈದ್ಯಕೀಯ ಸಂಸ್ಥೆ, ಜಯದೇವ ಹೃದ್ರೋಗ ಸಂಸ್ಥೆ, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಇವುಗಳು ಬಡ ಜನರಿಗೆ ಪೂರಕ ಆರೋಗ್ಯ ಸೇವೆ ಒದಗಿಸುತ್ತಿವೆ. ಈ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ನೀಡುತ್ತಿರುವ ಆರ್ಥಿಕ ನೆರವನ್ನು 2004-05 ರಲ್ಲಿ 57.67 ಕೋಟಿ ರೂ.ಗಳಷ್ಟಿದ್ದು, ಇದನ್ನು 76.08 ಕೋಟಿಗಳಿಗೆ 2005-06 ರಲ್ಲಿ ಹೆಚ್ಚಿಸುತ್ತಿದ್ದೇನೆ.

57. ಈ ವರ್ಷ ಬೆಂಗಳೂರು ವೈದ್ಯಕೀಯ ಕಾಲೇಜು ತನ್ನ ಶತಮಾನೋತ್ಸವವನ್ನು ಆಚರಿಸುತ್ತಿದೆ. ಇದನ್ನು ಸ್ಮರಣೀಯವನ್ನಾಗಿಸಲು ಬೆಂಗಳೂರು ಮೆಡಿಕಲ್ ಕಾಲೇಜಿನ ಕ್ಲಿನಿಕಲ್ ಸೇವಾ ಆಸ್ಪತ್ರೆಯಾದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅಪಘಾತಗಳ ಚಿಕಿತ್ಸಾ ಬ್ಲಾಕ್‌ನ್ನು ನಿರ್ಮಿಸಲಾಗುವುದು.

58. ಹೆಚ್‌ಐವಿ - ಏಡ್ಸ್‌ನಂತಹ ಮಾರಣಾಂತಿಕ ಖಾಯಿಲೆ ಕರ್ನಾಟಕದಲ್ಲಿ ವೇಗವಾಗಿ ಹರಡುತ್ತಿದೆ. ಈ ಮುಂಚೆ ಕೇವಲ ಕೆಲವೇ ಜನವರ್ಗಕ್ಕೆ ಸೀಮಿತವಾಗಿದ್ದ ಈ ಖಾಯಿಲೆ ಈಗ ಸಾಮಾನ್ಯ ಜನಸಮುದಾಯಕ್ಕೂ ಸಹ ಹರಡುತ್ತಿದೆ. ಮುಗ್ಧ ಗೃಹಿಣಿಯರು ಮತ್ತು ಮುದ್ದುಮಕ್ಕಳು ಹೆಚ್‌ಐವಿ ಸೋಂಕಿಗೆ ಬಲಿಪಶುಗಳಾಗುತ್ತಿರುವುದು ನೋವಿನ ಸಂಗತಿ. ಈ ರೋಗವು ಮತ್ತಷ್ಟು ವ್ಯಾಪಕವಾಗಿ ಹರಡುವುದನ್ನು ತಪ್ಪಿಸಲು ಹೆಚ್‌ಐವಿ ಪೀಡಿತ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ರಾಜ್ಯದ ಆಯ್ದ 20 ತಾಲ್ಲೂಕುಗಳಲ್ಲಿ ಸ್ವಯಂ ಸಲಹಾ ಕೇಂದ್ರಗಳನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ.

ಶಿಕ್ಷಣ

59. ಶಿಕ್ಷಣ - ಅಭಿವೃದ್ಧಿಯ ಅಡಿಗಲ್ಲು. ಪ್ರಾಥಮಿಕ ಶಿಕ್ಷಣವನ್ನು ಸದೃಢಗೊಳಿಸಲು ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಶಿಕ್ಷಣ ವಲಯಕ್ಕೆ ನೀಡುವ ಅನುದಾನ ಮೊತ್ತವನ್ನು ನಾನು 2004-05ನೇ ಸಾಲಿನಲ್ಲಿ ನೀಡಿದ್ದ 4,300 ಕೋಟಿ ರೂ.ಗಳಿಂದ ಶೇಕಡ 11 ರಷ್ಟು ಹೆಚ್ಚಿಸಲು ಉದ್ದೇಶಿಸಿದ್ದು 2005-06ನೇ ಸಾಲಿನಲ್ಲಿ 4,800 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

60. ಈ ಬಾರಿ ನಾವು ಸರ್ಕಾರಿ ಶಾಲಾ ಮಕ್ಕಳಿಗೆ ನೀಡುತ್ತಿರುವ ಉಚಿತ ಸಮವಸ್ತ್ರ ಮತ್ತು ಪಠ್ಯ ಪುಸ್ತಕಗಳನ್ನು ಮುಂದಿನ ಶೈಕ್ಷಣಿಕ ವರ್ಷದ ಆರಂಭದಲ್ಲೇ ನೀಡಲು ಕ್ರಮ ಕೈಗೊಂಡಿದ್ದೇವೆ.

61. ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟ ತರಲು ನೂತನವಾಗಿ "ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯ ನಿರ್ಧಾರ ಸಂಸ್ಥೆ" ಯನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ಉದ್ದೇಶಕ್ಕಾಗಿ ನಾನು 2005-06ನೇ ಸಾಲಿನಲ್ಲಿ ಮೂರು ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

62. ಡಾ: ನಂಜುಂಡಪ್ಪ ಸಮಿತಿಯು ಗುರುತಿಸಿರುವ ಹಿಂದುಳಿದ ಎಲ್ಲ 114 ತಾಲ್ಲೂಕುಗಳಲ್ಲಿ ನೂತನ ಪ್ರೌಢಶಾಲೆಗಳನ್ನು 2005-06 ನೇ ಸಾಲಿನಲ್ಲಿ ತೆರೆಯಲು ಉದ್ದೇಶಿಸಿದ್ದೇನೆ.

63. ಕುವೆಂಪು ಶತಮಾನೋತ್ಸವದ ಸ್ಮರಣೆಗಾಗಿ ತೆರೆಯಲು ಉದ್ದೇಶಿಸಿರುವ 32 ಕುವೆಂಪು ಮಾದರಿ ಕನ್ನಡ ಶಾಲೆಗಳಿಗೆ 10 ಕೋಟಿ ರೂ.ಗಳನ್ನು ನಾನು ಹಂಚಿಕೆ ಮಾಡುತ್ತಿದ್ದೇನೆ.

64. ಅಕ್ಷರ ದಾಸೋಹ ಯೋಜನೆಯಡಿ 39,000 ಅಡಿಗೆ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಇದರಲ್ಲಿ ಇನ್ನೂ ನಿರ್ಮಾಣವಾಗದೆ ಬಾಕಿ ಉಳಿದಿರುವ 17 ಸಾವಿರ ಅಡುಗೆ ಕೊಠಡಿಗಳನ್ನು ಮುಂದಿನ ವರ್ಷದೊಳಗೆ ಪೂರ್ಣಗೊಳಿಸಲಾಗುವುದು. ಈ ಉದ್ದೇಶಕ್ಕಾಗಿ 30 ಕೋಟಿ ರೂ.ಗಳನ್ನು ಮೀಸಲಿಡಲಾಗುವುದು.

65. ಪದವಿಪೂರ್ವ ಕಾಲೇಜುಗಳಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಒತ್ತಡದಿಂದಾಗಿ ಕೊಠಡಿ ಸೌಲಭ್ಯದ ಕೊರತೆ ಎದುರಾಗಿದೆ. ಇದನ್ನು ನಿವಾರಿಸಲು ಆರ್‌ಐಡಿಎಫ್ ಯೋಜನೆಯ ನೆರವಿನೊಂದಿಗೆ ಪದವಿಪೂರ್ವ ಕಾಲೇಜುಗಳಲ್ಲಿ ಹೆಚ್ಚು ಕೊಠಡಿ ನಿರ್ಮಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಈ ಉದ್ದೇಶಕ್ಕಾಗಿ 2005-06ನೇ ಸಾಲಿನಲ್ಲಿ 10 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

66. ಬಿಜಾಪುರ ಮತ್ತು ಮೈಸೂರಿನಲ್ಲಿ ನೂತನ ಪದವಿ ಕಾಲೇಜುಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಮೈಸೂರಿನ ಕಾಲೇಜು ಮಹಿಳೆಯರಿಗೆ ಮೀಸಲಾಗಿರುತ್ತದೆ. ಈ ಉದ್ದೇಶಕ್ಕಾಗಿ ನಾನು 2.6 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

67. ಹಿರಿಯ ಗಾಂಧೀವಾದಿ, ವಿಚಾರವಾದಿ ಮತ್ತು ಶಿಕ್ಷಣ ತಜ್ಞ ಡಾ|| ಹೆಚ್. ನರಸಿಂಹಯ್ಯನವರು ನಮ್ಮನ್ನು ಅಗಲಿದ್ದಾರೆ. ಇವರ ಜೀವನ-ಬದುಕು ಒಂದು ತೆರೆದ ಪುಸ್ತಕ. ಇವರ ಸ್ಮರಣಾರ್ಥ ಗೌರಿಬಿದನೂರಿನಲ್ಲಿ ಸಭಾಂಗಣವನ್ನು ನಿರ್ಮಿಸಲಾಗುವುದು.

ಆಹಾರ ವಿತರಣೆ

68. ಸಮಾಜದ ಕಡು ಬಡವರು ಮತ್ತು ದುರ್ಬಲ ವರ್ಗದವರು ಯಾವುದೇ ಕಾರಣಕ್ಕೂ ಆಹಾರ ಕೊರತೆಯಿಂದ ಬಳಲಬಾರದು ಎನ್ನುವುದು ನಮ್ಮ ಕಾಳಜಿ. ಇದಕ್ಕಾಗಿ ನಾವು ಈಗಾಗಲೇ ಕಿಲೋಗೆ 3 ರೂ.ಗಳಂತೆ ರಿಯಾಯಿತಿ ದರದಲ್ಲಿ ಅಕ್ಕಿ ಮತ್ತು ಗೋದಿ ವಿತರಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಈ ರಿಯಾಯಿತಿಗೆ ಅರ್ಹತೆ ಪಡೆದ ಕುಟುಂಬಗಳ ಸಂಖ್ಯೆ ಹೆಚ್ಚಾಗಿದ್ದು ಸರ್ಕಾರಕ್ಕೆ ಅಧಿಕ ವೆಚ್ಚ ತಗುಲುತ್ತಿದೆ. ಈ ಯೋಜನೆಯನ್ನು ಮುಂದುವರೆಸುತ್ತಿದ್ದು 2005-06ನೇ ಸಾಲಿನಲ್ಲಿ ಆಹಾರ ಸಹಾಯಧನಕ್ಕಾಗಿ 560 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಆಹಾರ ಮತ್ತು ನಾಗರೀಕ ಇಲಾಖೆಯಲ್ಲಿ ಸಮಗ್ರ ಕಂಪ್ಯೂಟರೀಕರಣ ಕಾರ್ಯ ಕೈಗೊಂಡು ಆಹಾರ ಸರಬರಾಜು ವ್ಯವಸ್ಥೆಯನ್ನು ಆಧುನೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಗ್ರಾಮೀಣಾಭಿವೃದ್ಧಿ

69. ಇದೀಗ ಗ್ರಾಮ ಪಂಚಾಯಿತಿಯ ಚುನಾವಣೆಗಳು ಪೂರ್ಣಗೊಂಡಿವೆ. ನೂತನ ಪಂಚಾಯತ್ ಸದಸ್ಯರು ಉತ್ಸಾಹದಿಂದ ಪಂಚಾಯತ್ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈವರೆಗೆ ರಾಜ್ಯವಲಯದಲ್ಲಿ ಅನುಷ್ಠಾನಗೊಳ್ಳುತ್ತಿದ್ದ ಸುಮಾರು 170 ಯೋಜನೆಗಳು ಈಗ ಜಿಲ್ಲಾ ವಲಯಕ್ಕೆ ವರ್ಗಾವಣೆಗೊಂಡಿವೆ. ಜಿಲ್ಲಾ ವಲಯದ ಯೋಜನಾ ಅಂದಾಜು ವೆಚ್ಚ ಗಾತ್ರವು 960 ಕೋಟಿ ರೂ.ಗಳಿಂದ 2500 ಕೋಟಿ ರೂ.ಗಳಿಗೆ ಏರಿದೆ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಈಗ ಪಂಚಾಯತ್ ಸಂಸ್ಥೆಗಳ ಜವಾಬ್ದಾರಿ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಆದ್ದರಿಂದ ನೂತನ ಪಂಚಾಯತ್ ಸದಸ್ಯರು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು

ಅನುಕೂಲವಾಗುವಂತೆ ಸೂಕ್ತ ತರಬೇತಿ ನೀಡಲು ಅಗತ್ಯವಾದ ಹೆಚ್ಚುವರಿ ಅನುದಾನವನ್ನು ಒದಗಿಸಲಾಗಿದೆ.

70. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆಯನ್ನು ಸುಧಾರಿಸಲು 2004-05 ರಲ್ಲಿ 100.55 ಕೋಟಿ ರೂ.ಗಳನ್ನು ನೀಡಲಾಗಿತ್ತು. ಕುಡಿಯುವ ನೀರಿನ ಸೌಲಭ್ಯದ ಮಹತ್ವವನ್ನು ಮನಗಂಡು 2005-06ರಲ್ಲಿ ಈ ಅನುದಾನವನ್ನು 132.11 ಕೋಟಿ ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ.

71. ಗ್ರಾಮೀಣ ಜನರ ಆರೋಗ್ಯದ ದೃಷ್ಟಿಯಿಂದ ಗ್ರಾಮೀಣ ನೈರ್ಮಲ್ಯ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಬೇಕಾಗಿದೆ. ಗ್ರಾಮೀಣ ಪ್ರದೇಶಗಳ ಮೂಲಸೌಕರ್ಯಗಳ ಸಮಗ್ರ ಅಭಿವೃದ್ಧಿಗಾಗಿ "ಸ್ವಚ್ಛಗ್ರಾಮ" ಕಾರ್ಯಕ್ರಮವನ್ನು "ಪಂಚಸೂತ್ರ" ತತ್ವಗಳ ಆಧಾರದ ಮೇಲೆ ಅನುಷ್ಠಾನಗೊಳಿಸಲು 2005-06ನೇ ಸಾಲಿನಲ್ಲಿ 20 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

72. "ಕುಗ್ರಾಮ-ಸುಗ್ರಾಮ" ಎನ್ನುವ ಹೊಸ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಿದ್ದು ಇದರಲ್ಲಿ ಪ್ರತಿ ತಾಲ್ಲೂಕಿನ ಅತ್ಯಂತ ಹಿಂದುಳಿದ ಹಳ್ಳಿಯನ್ನು ಆಯ್ಕೆ ಮಾಡಿ ಆ ಹಳ್ಳಿಗೆ ಅತ್ಯಗತ್ಯವಾದ ರಸ್ತೆ, ಶಾಲೆ, ಚರಂಡಿ ಮತ್ತು ಶೌಚಾಲಯ ಸೌಕರ್ಯವನ್ನು ಒದಗಿಸಿ ಹಳ್ಳಿಯ ಜೀವನ ಸ್ಥಿತಿಯನ್ನು ಸುಧಾರಿಸಲಾಗುವುದು. ಈ ಯೋಜನೆಗೆ 20 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

73. ಗ್ರಾಮೀಣ ರಸ್ತೆಗಳನ್ನು "ಮುಖ್ಯಮಂತ್ರಿ ರಸ್ತೆ ಅಭಿವೃದ್ಧಿ ನಿಧಿ"ಯಿಂದ ನಿರ್ವಹಿಸಲು ಉದ್ದೇಶಿಸಲಾಗಿದ್ದು ಇದಕ್ಕಾಗಿ 80 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ. ಪ್ರಾಂತೀಯ ಅಸಮಾನತೆ ಬಗ್ಗೆ ರಚಿಸಿರುವ ಉನ್ನತ ಮಟ್ಟದ ಸಮಿತಿಯು ರೂಪಿಸಿರುವ ಮಾನದಂಡಗಳನ್ನು ಆಧರಿಸಿ ವಿವಿಧ ಜಿಲ್ಲೆಗಳಿಗೆ ಅನುದಾನ ಹಂಚಿಕೆ ಮಾಡಲಾಗುವುದು.

74. ಸಣ್ಣ ಕೈತೋಟಗಳ ಆದಾಯದಿಂದಲೇ ಜೀವನ ನಿರ್ವಹಣೆ ಸಾಧ್ಯ ಎನ್ನುವುದಕ್ಕೆ ಮೈಸೂರಿನ ವೀಳ್ಯದೆಲೆ ತೋಟಗಳು ಮತ್ತು ಕೋಲಾರದ ತರಕಾರಿ ಮಡಿಗಳು ಮಾದರಿ ಉದಾಹರಣೆಗಳಾಗಿವೆ. "ನಮ್ಮ ಹೊಲ - ನಮ್ಮ ತೋಟ" ಎನ್ನುವ ನೂತನ ಯೋಜನೆಯ ಮೂಲಕ ಭೂರಹಿತ ಕೃಷಿಕಾರ್ಮಿಕರಿಗೆ ಇಂತಹ ಕೈತೋಟಗಳನ್ನು ಮಾಡಲು ಉತ್ತೇಜನ ನೀಡಲಾಗುವುದು. ಈ ಉದ್ದೇಶಕ್ಕಾಗಿ ನಾನು 20 ಕೋಟಿ ರೂ.ಗಳನ್ನು ನಿಗದಿಪಡಿಸಿದ್ದೇನೆ.

ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು

75. ಸರ್ಕಾರವು ಆಯಾ ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ, ಗಡಿ ಪ್ರದೇಶ ಅಭಿವೃದ್ಧಿ ಮಂಡಳಿ ಮತ್ತು ಮೈದಾನ ಅಭಿವೃದ್ಧಿ ಮಂಡಳಿಗಳನ್ನು ರಚಿಸಿದೆ. ಕಳೆದ ಹಲವಾರು ವರ್ಷಗಳಿಂದ ಈ ಮಂಡಳಿಗಳಿಗೆ ನೀಡುತ್ತಿದ್ದ ಹಣದಲ್ಲಿ ಸಾಕಷ್ಟು ಕಡಿತವಾಗಿದೆ. ಈ ಮಂಡಳಿಗಳಿಗೆ ನೀಡುವ ಅನುದಾನವನ್ನು ಹೆಚ್ಚಿಸಲು ನಾನು ಉದ್ದೇಶಿಸಿದ್ದು, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 60 ಕೋಟಿ ರೂ.ಗಳು ಮಲೆನಾಡು ಅಭಿವೃದ್ಧಿ ಮಂಡಳಿಗೆ 20 ಕೋಟಿ ರೂ.ಗಳು, ಮೈದಾನ ಅಭಿವೃದ್ಧಿ ಮಂಡಳಿಗೆ 5 ಕೋಟಿ ರೂ.ಗಳು ಮತ್ತು ಗಡಿ ಅಭಿವೃದ್ಧಿ ಮಂಡಳಿಗೆ 5 ಕೋಟಿ ರೂ.ಗಳನ್ನು ನೀಡುತ್ತಿದ್ದೇನೆ. ಈ ಎಲ್ಲಾ ಕ್ಷೇತ್ರಾಭಿವೃದ್ಧಿ ಮಂಡಳಿಗಳಿಗೆ ನೀಡುತ್ತಿರುವ ಅನುದಾನವು

2004-05ನೇ ಸಾಲಿನಲ್ಲಿದ್ದ 42.50 ಕೋಟಿ ರೂ.ಗಳಿಂದ 2005-06ನೇ ಸಾಲಿನಲ್ಲಿ 94 ಕೋಟಿ ರೂ.ಗಳಿಗೆ ಏರಿಕೆಯಾಗಿದೆ.

76. ಮಾನ್ಯ ಶಾಸಕರುಗಳು ತಮ್ಮ ಮತಕ್ಷೇತ್ರಗಳ ಅಭಿವೃದ್ಧಿಗಾಗಿ ನಿಧಿಯನ್ನು ನೀಡಬೇಕೆಂದು ಒತ್ತಾಯ ಮಾಡಿದ್ದರು. ಇದನ್ನು ಪರಿಗಣಿಸಿ ಕರ್ನಾಟಕ ವಿಧಾನ ಮಂಡಲದ ಪ್ರತಿಯೊಬ್ಬ ಸದಸ್ಯರ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಲು 50 ಲಕ್ಷ ರೂ.ಗಳ ನಿಧಿಯನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ. ಆಸ್ತಿ ನಿರ್ಮಾಣಕ್ಕಾಗಿ ವಿವರವಾದ ಮಾರ್ಗಸೂಚಿಯನ್ನು ಹೊರಡಿಸಲಾಗುವುದು. (ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಒಂದು ಕೋಟಿ ರೂಪಾಯಿಗಳ ನಿಧಿಯನ್ನು ನೀಡುವಂತೆ ಒತ್ತಾಯಿಸಿದರು.)

ಸಮಾಜ ಕಲ್ಯಾಣ

ಪರಿಶಿಷ್ಟ ಜಾತಿ / ಪಂಗಡ ಅಭಿವೃದ್ಧಿ

77. ಸಮಾಜ ಕಲ್ಯಾಣ ಇಲಾಖೆಗೆ 2004-05 ರಲ್ಲಿ 628 ಕೋಟಿ ರೂ.ಗಳ ಹಂಚಿಕೆಯನ್ನು ಒದಗಿಸಲಾಗಿತ್ತು. 2005-06 ರಲ್ಲಿ ಈ ಹಂಚಿಕೆಯನ್ನು 815 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದು ಇದು ಶೇಕಡಾ 30 ರಷ್ಟು ಏರಿಕೆಯಾಗಿರುತ್ತದೆ.

78. ಪರಿಶಿಷ್ಟ ಜಾತಿ/ ಪಂಗಡಗಳ ಕಲ್ಯಾಣಕ್ಕಾಗಿ ವಿವಿಧ ಇಲಾಖೆಗಳಿಂದ ಕ್ರೋಢೀಕರಿಸಿದ ನಿಧಿಯ ಪ್ರಮಾಣ 2005-06ನೇ ಸಾಲಿನಲ್ಲಿ ಈ ನಿಧಿಗೆ 98 ಕೋಟಿ ರೂ.ಗಳನ್ನು ಕ್ರೋಢೀಕರಿಸಲು ಉದ್ದೇಶಿಸಲಾಗಿದೆ. ಈ ನಿಧಿಯ ಮೊತ್ತವನ್ನು ಪ್ರಮುಖವಾಗಿ ಗಂಗಾಕಲ್ಯಾಣ, ಶಿಕ್ಷಣ ಮತ್ತು ವಸತಿ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾಗುತ್ತದೆ.

79. ಗಂಗಾಕಲ್ಯಾಣ ಯೋಜನೆ ಮತ್ತು ಜಮೀನು ಖರೀದಿ ಯೋಜನೆಗಳು ಪರಿಶಿಷ್ಟ ಜಾತಿ / ಪಂಗಡದ ಸಣ್ಣ ರೈತರ ಆಶಾಕಿರಣವಾಗಿದ್ದು ಅವರ ಆರ್ಥಿಕ ಚೈತನ್ಯಕ್ಕೆ ಅಡಿಗಲ್ಲಾಗಿದೆ. ಈ ಯೋಜನೆಗೆ 2004-05 ರಲ್ಲಿ ನೀಡಿದ್ದ 30 ಕೋಟಿ ರೂ.ಗಳ ಹಂಚಿಕೆಯನ್ನು 2005-06 ರಲ್ಲಿ 67 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದು ಈ ಏರಿಕೆ ಗಣನೀಯವಾಗಿದೆ.

80. ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡುವ ರಾಜ್ಯ ಸರ್ಕಾರದ ವಿದ್ಯಾರ್ಥಿ ವೇತನ ಯೋಜನೆಗೆ ಭಾರತ ಸರ್ಕಾರವು ಸಹ ಪೂರಕ ಸೌಲಭ್ಯ ನೀಡಲಿದೆ. ಈ ವಿದ್ಯಾರ್ಥಿ ವೇತನಕ್ಕೆ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ನಾನು ಈ ಯೋಜನೆಗೆ ರಾಜ್ಯ ಸರ್ಕಾರದ ನೆರವನ್ನು 23 ಕೋಟಿ ರೂ.ಗಳಿಂದ 32 ಕೋಟಿ ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ.

81. ಬೆಂಗಳೂರಿನಲ್ಲಿರುವ ಸರ್ಕಾರಿ ವಿಮಾನ ಹಾರಾಟ ತರಬೇತಿ ಶಾಲೆಯು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ವಿಮಾನ ಹಾರಾಟ ತರಬೇತಿಯನ್ನು ನೀಡುವ ವಿನೂತನ ಯೋಜನೆಯನ್ನು ಪ್ರಾರಂಭಿಸಿದೆ. ಆರಂಭದಲ್ಲಿ ಹತ್ತು ಮಂದಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುವುದು. ಮುಂದಿನ ವರ್ಷಗಳಲ್ಲಿ ಹೆಚ್ಚು ಮಂದಿಗೆ ತರಬೇತಿ ನೀಡಲಾಗುವುದು.

ಹಿಂದುಳಿದ ವರ್ಗಗಳ ಅಭಿವೃದ್ಧಿ

82. ಪ್ರಸ್ತುತ ಜಾರಿಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲಾಗಿರುವ ವಿದೇಶದಲ್ಲಿ ವಿದ್ಯಾಭ್ಯಾಸ ಮುಂದುವರೆಸುವ ಯೋಜನೆಯನ್ನು ಹಿಂದುಳಿದ ವರ್ಗದವರಿಗೂ ವಿಸ್ತರಿಸಲು ನಾನು ಉದ್ದೇಶಿಸಿದ್ದೇನೆ.

83. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ಮತ್ತು ನಿರ್ಮಾಣ ಸಂಘವು ಈವರೆಗೆ ಹುಡ್ಕೋ ಸಂಸ್ಥೆಯ ನೆರವು ಪಡೆದು ನೂರು ಹಾಸ್ಟೆಲ್‌ಗಳನ್ನು ನಿರ್ಮಿಸಿದೆ. ಈ ಯೋಜನೆಯನ್ನು ಮುಂದುವರೆಸಲು ಉದ್ದೇಶಿಸಿದ್ದು 60 ಹಾಸ್ಟೆಲ್‌ಗಳನ್ನು ನಿರ್ಮಿಸಲು ನಾನು 20 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ. ಕರ್ನಾಟಕ ವಸತಿ ಶಿಕ್ಷಣ ಸಂಘದ ವಸತಿ ಶಾಲೆಗಳ ನಿರ್ಮಾಣ ಚಟುವಟಿಕೆಗಳಿಗೆ ನಾನು 15 ಕೋಟಿ ರೂ.ಗಳನ್ನು 2005-06ನೇ ಸಾಲಿನಲ್ಲಿ ಒದಗಿಸುತ್ತಿದ್ದೇನೆ.

84. ಹಿಂದುಳಿದ ವರ್ಗಗಳ ಯುವ ಜನರಿಗೆ ಸ್ವಂತ ಉದ್ಯೋಗಕ್ಕೆ ಉತ್ತೇಜನ ನೀಡಲು ಮತ್ತು ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸಲು ಹಾಗೂ ಕುಶಲತೆಯನ್ನು ಸುಧಾರಿಸಿಕೊಳ್ಳಲು ರೂಪಿಸಿರುವ "ಶ್ರಮಶಕ್ತಿ" ಯೋಜನೆಯನ್ನು ಮುಂದುವರೆಸಲು ಉದ್ದೇಶಿಸಿದ್ದೇನೆ.

ಅಲ್ಪಸಂಖ್ಯಾತರು

85. ಅಲ್ಪಸಂಖ್ಯಾತರ ಕಲ್ಯಾಣ ಯೋಜನೆಯಡಿ ಶಾದಿಮಹಲ್‌ಗಳ ನಿರ್ಮಾಣ ಕಾರ್ಯಕ್ಕಾಗಿ 2004-05 ರಲ್ಲಿ 1.20 ಕೋಟಿ ರೂ.ಗಳನ್ನು ನೀಡಲಾಗಿತ್ತು. ನಾನು 2005-06 ನೇ ಸಾಲಿಗೆ 3.25 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

86. ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ 13 ವಸತಿ ಶಾಲೆಗಳನ್ನು ಆರಂಭಿಸಲು ಉದ್ದೇಶಿಸಿದ್ದು ಇದರಿಂದಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಅಲ್ಪಸಂಖ್ಯಾತರಿಗೆ ಒಂದು ವಸತಿ ಶಾಲೆ ದೊರೆಯುತ್ತದೆ.

87. ವಕ್ಫ್ ಸಂಸ್ಥೆಗಳಿಗೆ ಮೂರು ಕೋಟಿ ರೂ.ಗಳ ಅನುದಾನವನ್ನು ನೀಡಲು ಉದ್ದೇಶಿಸಿದ್ದೇನೆ. ವಕ್ಫ್ ಮಂಡಳಿಗೆ ನಿರ್ವಹಣಾ ವೆಚ್ಚಗಳಿಗಾಗಿ 1.20 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ. ವಕ್ಫ್ ಆಸ್ತಿಗಳ ಸಮೀಕ್ಷೆ ಕೈಗೊಳ್ಳಲು ಒಂದು ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

88. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಚಟುವಟಿಕೆಗಳನ್ನು ಹೆಚ್ಚಿಸಲು ಅನುಕೂಲವಾಗುವಂತೆ ಅನುದಾನವನ್ನು 2004-05 ರ 11 ಕೋಟಿ ರೂ.ಗಳಿಂದ 2005-06 ರಲ್ಲಿ 14 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ. ಈ ಮೊತ್ತದಿಂದ ಗಂಗಾಕಲ್ಯಾಣ ಹಾಗೂ ಆದಾಯ ರೂಢಿಸುವ ಇತರೆ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗುವುದು.

89. ದುರ್ಬಲ ವರ್ಗದ ಜನರಿಗೆ ಉತ್ತಮ ಶಿಕ್ಷಣದ ನೆಲಗಟ್ಟನ್ನು ಒದಗಿಸಲು ನಾನು 43 ವಸತಿ ಶಾಲೆಗಳನ್ನು ತೆರೆಯಲು ಉದ್ದೇಶಿಸಿದ್ದೇನೆ. ಇದರಲ್ಲಿ ತಲಾ 10 ಶಾಲೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೀಸಲಾಗಿರುತ್ತವೆ. 10 ಶಾಲೆಗಳು ಹಿಂದುಳಿದ ವರ್ಗಗಳಿಗೆ ಮತ್ತು 13 ಶಾಲೆಗಳು ಅಲ್ಪಸಂಖ್ಯಾತರಿಗೆ ಮೀಸಲಾಗಿರುತ್ತವೆ.

90. ವೃತ್ತಿ ಶಿಕ್ಷಣ ಕಾಲೇಜುಗಳಿಗೆ ಸೇರಿಕೊಳ್ಳುವ ದುರ್ಬಲ ವರ್ಗದ ವಿದ್ಯಾರ್ಥಿಗಳಿಗೆ ಸೂಕ್ತ ಹಾಸ್ಟೆಲ್ ಸೌಲಭ್ಯ ಒದಗಿಸಲು ಬೆಂಗಳೂರು, ಮೈಸೂರು, ಬಳ್ಳಾರಿ ಮತ್ತು ಹುಬ್ಬಳ್ಳಿಗಳಲ್ಲಿ ನಾಲ್ಕು ಹಾಸ್ಟೆಲ್‌ಗಳನ್ನು ತೆರೆಯಲು ನಾನು ಉದ್ದೇಶಿಸಿದ್ದೇನೆ.

91. ರಾಜ್ಯದಲ್ಲಿರುವ ಎಲ್ಲಾ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ವಸತಿನಿಲಯಗಳಲ್ಲಿರುವ ಮೆಟ್ರಿಕ್‌ಪೂರ್ವ ವಿದ್ಯಾರ್ಥಿಗಳ ಭೋಜನ ವೆಚ್ಚವನ್ನು ಪ್ರತೀ ವಿದ್ಯಾರ್ಥಿಗೆ ಪ್ರತೀ ತಿಂಗಳಿಗೆ 400 ರಿಂದ 450 ರೂ.ಗಳಷ್ಟು ಹೆಚ್ಚಿಸಲು ಉದ್ದೇಶಿಸಿದ್ದೇನೆ. ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 450 ರಿಂದ 500 ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

92. ವಕೀಲರುಗಳಿಗೆ ಸ್ಟೈಫೆಂಡರಿ ಭತ್ಯೆ ನೀಡುವ ಯೋಜನೆಯಡಿ ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಲು ಉದ್ದೇಶಿಸಿದ್ದು ಪ್ರತೀ ಜಿಲ್ಲೆಯಲ್ಲಿ 10 ಮಂದಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ, 10 ಮಂದಿ ಹಿಂದುಳಿದ ವರ್ಗದ, 5 ಮಂದಿ ಅಲ್ಪಸಂಖ್ಯಾತ ಸಮುದಾಯದ ಹಾಗೂ 5 ಮಂದಿ ಮಹಿಳಾ ವಕೀಲರಿಗೆ ಸ್ಟೈಫೆಂಡರಿ ಭತ್ಯೆಯನ್ನು ನೀಡಲು ಉದ್ದೇಶಿಸಲಾಗಿದೆ.

93. ನಿರುದ್ಯೋಗಿ ಮಹಿಳೆಯರಿಗೆ ವಿವಿಧ ವ್ಯಾಪಾರಗಳಲ್ಲಿ ತರಬೇತಿ ನೀಡುವ "ಕೌಶಲ್ಯ" ಯೋಜನೆಯನ್ನು 2005-06ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಮತ್ತು ಹಿಂದುಳಿದ ವರ್ಗಗಳ ಮಹಿಳೆಯರಿಗೂ ವಿಸ್ತರಿಸಿ ಅನುಷ್ಠಾನಗೊಳಿಸಲಾಗುವುದು.

94. ದಿವಂಗತ ದೇವರಾಜ ಅರಸುರವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಒಂದು ಸ್ಮಾರಕ ಭವನ ನಿರ್ಮಿಸಲು ಈಗಾಗಲೇ ನಿರ್ಧರಿಸಲಾಗಿದೆ. ಇದರ ಜೊತೆಗೆ ದೇವರಾಜ ಅರಸುರವರ ಸ್ವಕ್ಷೇತ್ರವಾದ ಹುಣಸೂರಿನಲ್ಲಿಯೂ ಒಂದು ಭವನ ನಿರ್ಮಿಸಿ ಅವರ ಜನ್ಮಸ್ಥಳವಾದ ಕಲ್ಲಹಳ್ಳಿಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು. ಈ ಉದ್ದೇಶಗಳಿಗಾಗಿ ನಾನು 5.45 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ

95. ಮಹಿಳೆಯರು ನಮ್ಮ ಸಮಾಜದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಸ್ತ್ರೀಶಕ್ತಿ ಯೋಜನೆಯು ವರ್ಷದಿಂದ ವರ್ಷಕ್ಕೆ ಹೆಚ್ಚು ಚುರುಕುಗೊಳ್ಳುತ್ತಿದೆ. ಸಂಘಟನೆಯಿಂದಾಗಿ ಸಬಲಗೊಂಡಿರುವ ಸ್ತ್ರೀಶಕ್ತಿ ಗುಂಪಿನ ಮಹಿಳೆಯರನ್ನು ಹಲವಾರು ಸರ್ಕಾರಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ತೊಡಗಿಸಿಕೊಂಡಿರುವುದು ಉತ್ತಮ ಫಲಿತಾಂಶ ನೀಡಿದೆ. ಇದರಿಂದ ಸರ್ಕಾರಿ ಯೋಜನೆಗಳ ಕಡೆಗೆ ಜನಸಮೂಹ ಆಕರ್ಷಿತಗೊಳ್ಳುತ್ತಿದ್ದಾರೆ. ಯೋಜನೆಗಳಲ್ಲಿ ಜನರ ಪಾಲ್ಗೊಳ್ಳುವಿಕೆ ಹೆಚ್ಚಾಗುತ್ತಿದೆ. ಹಾಗೆಯೇ ಉತ್ತರದಾಯಿತ್ವವೂ ಹೆಚ್ಚಾಗುತ್ತಿದೆ. ಸ್ತ್ರೀಶಕ್ತಿ ಗುಂಪುಗಳ ಪ್ರಯತ್ನಗಳಿಗೆ ನಾವು ಬೆಂಬಲ ನೀಡುತ್ತೇವೆ. ಸ್ತ್ರೀಶಕ್ತಿ ಗುಂಪುಗಳ ಆವೃತ್ತ ನಿಧಿಗೆ ಸರ್ಕಾರದ ಕೊಡುಗೆಯಾಗಿ 11 ಕೋಟಿ ರೂ.ಗಳನ್ನು 2005-06 ರಲ್ಲಿ ನೀಡಲು ಉದ್ದೇಶಿಸಿದ್ದೇನೆ.

96. ಅಂಗನವಾಡಿ ಕಟ್ಟಡಗಳ ನಿರ್ಮಾಣವನ್ನು ಮುಂದುವರೆಸಲು ಅನುಕೂಲವಾಗುವಂತೆ ವಾರ್ಷಿಕ ಅನುದಾನವನ್ನು 2005-06ನೇ ಸಾಲಿನಲ್ಲಿ 12 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

97. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಉತ್ತರ ಕರ್ನಾಟಕದ ಮಹಿಳೆಯರಿಗೆ ಶೈಕ್ಷಣಿಕ ಅವಕಾಶಗಳು ಸೂಕ್ತವಾಗಿ ದೊರೆಯುತ್ತಿಲ್ಲ. ವಿದ್ಯಾರ್ಥಿನಿಯರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲವಾಗುವಂತೆ ಬಳ್ಳಾರಿ, ಕೊಪ್ಪಳ, ಬೀದರ್, ಗುಲ್ಬರ್ಗಾ,

ರಾಯಚೂರು, ಬಿಜಾಪುರ, ಬಾಗಲಕೋಟೆ, ಹಾವೇರಿ, ಚಾಮರಾಜನಗರ, ಕೋಲಾರ ಜಿಲ್ಲೆಗಳಲ್ಲಿ ಹತ್ತು ಮೆಟ್ರಿಕ್ ನಂತರದ ಹಾಸ್ಟೆಲ್‌ಗಳನ್ನು ತೆರೆಯಲಾಗುವುದು. ಇದರಲ್ಲಿ ಎಂಟು ಹಾಸ್ಟೆಲ್‌ಗಳು ಉತ್ತರ ಕರ್ನಾಟಕದಲ್ಲಿರುತ್ತವೆ.

98. ಅಂಗವಿಕಲರ ಕಲ್ಯಾಣ ಕಾರ್ಯಕ್ರಮದಡಿ ಬೆಳಗಾವಿ ಮತ್ತು ಮೈಸೂರಿನಲ್ಲಿ ಕಿವುಡ ವಿದ್ಯಾರ್ಥಿಗಳಿಗಾಗಿ ನಿರ್ಮಿಸುತ್ತಿರುವ ಶಾಲೆಗಳ ಕಾಮಗಾರಿಯನ್ನು 2005-06ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

99. ಮಹಿಳಾ ಅಭಿವೃದ್ಧಿ ನಿಗಮಕ್ಕೆ 2005-06ನೇ ಸಾಲಿಗೆ 3.5 ಕೋಟಿ ರೂ.ಗಳ ಅನುದಾನ ಒದಗಿಸಲು ಉದ್ದೇಶಿಸಿದ್ದೇನೆ.

100. ಅಂಗವಿಕಲ ವಿದ್ಯಾರ್ಥಿಗಳಿಗೆ ನೀಡುವ ಶಿಷ್ಯ ವೇತನ ಅನುದಾನವನ್ನು 1.20 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದೆ.

ಕನ್ನಡ ಮತ್ತು ಸಂಸ್ಕೃತಿ

101. ಕರ್ನಾಟಕ ಏಕೀಕರಣದ ಸುವರ್ಣ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸಲು ಪೂರ್ವ ಸಿದ್ಧತೆಗಳು ನಡೆಯುತ್ತಿವೆ. ಇದಕ್ಕಾಗಿ 2005-06ನೇ ಸಾಲಿನಲ್ಲಿ ನಾನು 10 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

102. ಕರ್ನಾಟಕದ ಕಲೆ, ಸಾಹಿತ್ಯ ಸಂಸ್ಕೃತಿಗಳ ಉನ್ನತಿಗಾಗಿ ದುಡಿಯುತ್ತಿರುವ ವಿವಿಧ ಅಕಾಡೆಮಿಗಳಿಗೆ ಉತ್ತೇಜನ ನೀಡಲು ನಾನು ಪ್ರತೀ ಅಕಾಡೆಮಿಗೂ ತಲಾ 15 ಲಕ್ಷ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

103. ಕರ್ನಾಟಕ ಖ್ಯಾತ ಸಾಹಿತಿಗಳ ತವರೂರು. ರಾಷ್ಟ್ರದ ಅತ್ಯುನ್ನತ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿರುವ ಏಳು ಮಂದಿ ಸಾಹಿತಿಗಳನ್ನು ಹೊಂದಿರುವ ಹಿರಿಮೆ ನಮಗಿದೆ. ಕುವೆಂಪು ಶತಮಾನೋತ್ಸವದ ಹಿನ್ನೆಲೆಯಲ್ಲಿ ಸರ್ಕಾರವು "ಕುವೆಂಪು ಸಾಂಸ್ಕೃತಿಕ ಕೇಂದ್ರ"ವನ್ನು ಸ್ಥಾಪಿಸಲು ನಿರ್ಧರಿಸಿದೆ. ಈ ಕೇಂದ್ರವು ರಾಷ್ಟ್ರಕವಿ ಕುವೆಂಪುರವರು ಹಾಗೂ ಇತರೆ ಖ್ಯಾತ ಕನ್ನಡ ಸಾಹಿತಿಗಳ ಕೃತಿಗಳ ಭಾಷಾಂತರ ಕಾರ್ಯವನ್ನು ಮಾಡಲಿದೆ. ಕನ್ನಡಿಗರ ಬಹಳ ದಿನದ ಕನಸು "ಸುವರ್ಣ ಕರ್ನಾಟಕ" ಯೋಜನೆಯಡಿ ನನಸಾಗಲಿದೆ.

ವಾರ್ತೆ

104. ಕರ್ನಾಟಕದ ಸಮಗ್ರತೆಗೆ ಕನ್ನಡ ಚಲನಚಿತ್ರಗಳು ಉತ್ತಮ ಕೊಡುಗೆ ನೀಡುತ್ತಿವೆ. ಕನ್ನಡ ಚಲನಚಿತ್ರಗಳಿಗೆ ಉತ್ತೇಜನ ನೀಡಲು ಪ್ರತಿವರ್ಷ ಅತ್ಯುತ್ತಮ ಎರಡು ಕನ್ನಡ ಮಕ್ಕಳ ಚಲನಚಿತ್ರಗಳಿಗೆ ತಲಾ 25 ಲಕ್ಷ ರೂ.ಗಳ ಪ್ರೋತ್ಸಾಹಧನವನ್ನು ನೀಡಲು ಉದ್ದೇಶಿಸಲಾಗಿದೆ. ಇದರ ಜೊತೆಗೆ 2005-06ನೇ ಸಾಲಿನಲ್ಲಿ 20 ಗುಣಮಟ್ಟದ ಚಿತ್ರಗಳಿಗೆ ತಲಾ 10 ಲಕ್ಷ ರೂ.ಗಳಂತೆ ಸಹಾಯಧನ ನೀಡುವುದರ ಜೊತೆಗೆ ಪ್ರಶಸ್ತಿ ಪಡೆದ ಚಿತ್ರಗಳಿಗೆ ಪ್ರತ್ಯೇಕವಾಗಿ ಸಹಾಯಧನವನ್ನು ನೀಡಲಾಗುವುದು.

105. ರಾಜ್ಯದಲ್ಲಿ ವಿಡಿಯೋ ಪೈರಸಿ ಹಾವಳಿಯನ್ನು ತಡೆಗಟ್ಟಲು ಅನುಕೂಲವಾಗುವಂತೆ ಸಂಬಂಧಪಟ್ಟ ಕಾಯಿದೆಗೆ ಸೂಕ್ತ ತಿದ್ದುಪಡಿಯನ್ನು ತರಲಾಗುವುದು.

ಕ್ರೀಡೆ ಮತ್ತು ಯುವಜನ ಸೇವೆ

106. ನೂತನವಾಗಿ ರಚಿತವಾದ ಜಿಲ್ಲೆಗಳಲ್ಲಿ ನಿರ್ಮಾಣದ ವಿವಿಧ ಹಂತಗಳಲ್ಲಿರುವ ಆರು ಜಿಲ್ಲಾ ಕ್ರೀಡಾಂಗಣಗಳನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಂಪೂರ್ಣಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ.

107. ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶಗಳಿಗೆ ಅಭಿವೃದ್ಧಿಯಲ್ಲಿ ಹೆಚ್ಚು ಒತ್ತು ನೀಡುವ ಉದ್ದೇಶದಿಂದ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯು ಈ ಭಾಗದ 39 ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಿ ಉತ್ತರ ಕರ್ನಾಟಕದಲ್ಲಿ ಕ್ರೀಡಾ ಚಟುವಟಿಕೆಗೆ ಉತ್ತೇಜನ ನೀಡಲು ಉದ್ದೇಶಿಸಿದೆ.

108. 2003-04ನೇ ಸಾಲಿನಲ್ಲಿ ಜಾರಿಗೊಂಡಿದ್ದ ರಾಜೀವ್‌ಗಾಂಧಿ ಯುವಶಕ್ತಿ ಸಂಘಗಳನ್ನು 2005-06ನೇ ಸಾಲಿನಲ್ಲಿ ಮುಂದುವರಿಸಲು ಉದ್ದೇಶಿಸಿದ್ದೇನೆ.

109. ಬೆಂಗಳೂರಿನಲ್ಲಿ ನಡೆಯಲಿರುವ ರಾಷ್ಟ್ರೀಯ ಯುವ ಕ್ರೀಡಾಕೂಟಕ್ಕೆ 2005-06ರಲ್ಲಿ 2 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ.

ಪ್ರವಾಸೋದ್ಯಮ

110. ಪ್ರವಾಸೋದ್ಯಮವು ಹೆಚ್ಚು ಉದ್ಯೋಗಾವಕಾಶದ ವಲಯವಾಗಿ ಬೆಳೆಯುತ್ತಿದೆ. ಈ ಹಿನ್ನೆಲೆಯಲ್ಲಿ ಬಿರುಸಿನ ಪ್ರಚಾರದೊಂದಿಗೆ ಕರ್ನಾಟಕ ಪ್ರವಾಸೋದ್ಯಮಕ್ಕೆ ಪುನರ್‌ಚೈತನ್ಯ ನೀಡಲು ಯೋಜಿಸಲಾಗಿದೆ. ವಸತಿ, ರಸ್ತೆ ಬದಿಯ ಸೌಕರ್ಯಗಳು ಇತ್ಯಾದಿ ಪ್ರವಾಸೋದ್ಯಮ ಮೂಲಸೌಕರ್ಯಗಳಲ್ಲಿ ಬಂಡವಾಳ ಹೂಡಲು ಉದ್ಯಮಶೀಲರನ್ನು ಆಕರ್ಷಿಸಲು ರಾಜ್ಯ ಪ್ರವಾಸೋದ್ಯಮ ನೀತಿಯನ್ನು ಮತ್ತಷ್ಟು ಪರಿಷ್ಕರಿಸಲಾಗುವುದು.

111. ಪ್ರವಾಸೋದ್ಯಮ ಇಲಾಖೆಯು "ಸುವರ್ಣ ಕರ್ನಾಟಕ-ಪ್ರವಾಸಿ ತಾಣ" ಎನ್ನುವ ನೂತನ ಯೋಜನೆಯನ್ನು ರೂಪಿಸಿದೆ. ಪ್ರಮುಖ ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ಮಾರ್ಗದಲ್ಲಿ ಪ್ರತಿ 75 ಕಿಲೋಮೀಟರ್‌ಗೆ ಒಂದರಂತೆ ಆಯ್ದ 50 ಸ್ಥಳಗಳಲ್ಲಿ ರಸ್ತೆಬದಿಯ ಮೂಲಸೌಕರ್ಯ ತಾಣಗಳನ್ನು ನಿರ್ಮಿಸುವುದು ಈ ಯೋಜನೆಯ ಉದ್ದೇಶ. ಈ ತಾಣಗಳಲ್ಲಿ ಪ್ರವಾಸಿ ಸ್ಥಳಗಳ ಮಾಹಿತಿ ಕಿಯಾಸ್ಕ್, ಶೌಚಾಲಯಗಳು ಮತ್ತು ಕಾಫಿ ಕೇಂದ್ರಗಳು ಇರುತ್ತವೆ. ಈ ಯೋಜನೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದ ಯೋಜನೆಯಾಗಿದ್ದು ರಾಜ್ಯವು ತನ್ನ ಪಾಲಿನ ಹಣವನ್ನು ಒದಗಿಸುತ್ತಿದೆ.

112. ನಂದಿಬೆಟ್ಟ (ರೋಪ್‌ವೇ ಸೇರಿ) ಚಾಮುಂಡಿಬೆಟ್ಟ (ರೋಪ್‌ವೇ ಸೇರಿ) ಇವುಗಳನ್ನು ಪ್ರವಾಸೋದ್ಯಮಕ್ಕೆ ಅನುಕೂಲವಾಗುವಂತೆ ಸಮಗ್ರವಾಗಿ ಅಭಿವೃದ್ಧಿಪಡಿಸಲು ಖಾಸಗಿ ಉದ್ಯಮಿಗಳಿಗೆ ಸೂಕ್ತ ಕರಾರು ಮತ್ತು ಷರತ್ತುಗಳೊಡನೆ ನೀಡಲು ಉದ್ದೇಶಿಸಲಾಗಿದೆ.

113. ವಿಶ್ವಖ್ಯಾತಿಯ ಬಾಹುಬಲಿ ಮೂರ್ತಿಯು ಅಹಿಂಸಾ ನೀತಿಯ ಪ್ರತೀಕವಾಗಿ ಜಗತ್ತಿನಾದ್ಯಂತ ಆಕರ್ಷಣೆಯ ಕೇಂದ್ರಬಿಂದುವಾಗಿ ನಿಂತಿದೆ. ಪ್ರತಿ 12 ವರ್ಷಗಳಿಗೊಮ್ಮೆ ಆಚರಣೆಗೊಳ್ಳುವ ಮಹಾಮಸ್ತಕಾಭಿಷೇಕ ಉತ್ಸವದ ಸಂದರ್ಭವನ್ನು ಪ್ರವಾಸೋದ್ಯಮ ಅವಕಾಶವೆಂದು ಪರಿಭಾವಿಸಬೇಕು. ಈ ಉತ್ಸವದ ಸಂದರ್ಭದಲ್ಲಿ ಪ್ರವಾಸಿಗರಿಗೆ ಹೆಚ್ಚು ಸೌಕರ್ಯವನ್ನು

ಒದಗಿಸಲಾಗುವುದು. ಶ್ರವಣಬೆಳಗೊಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಎಲ್ಲ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ ನಾನು 75 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

ಲೋಕೋಪಯೋಗಿ ಇಲಾಖೆ:

114. ರಾಜ್ಯದ ರಸ್ತೆಗಳನ್ನು ಸುಧಾರಿಸುವ ಉದ್ದೇಶದಿಂದ ರಸ್ತೆ ವಲಯದ ಹಂಚಿಕೆಯನ್ನು 2004-05 ರಲ್ಲಿ ನೀಡಿದ್ದ 1022 ಕೋಟಿ ರೂ.ಗಳಿಂದ 1444 ಕೋಟಿ ರೂ.ಗಳಿಗೆ 2005-06 ರಲ್ಲಿ ಹೆಚ್ಚಿಸಲು ಉದ್ದೇಶಿಸಿದ್ದೇನೆ. ಇದು ಶೇಕಡ 38 ರಷ್ಟು ಏರಿಕೆಯಾಗಿರುತ್ತದೆ.

115. ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಕೇಷಿಪ್ (ಕೆ.ಎಸ್.ಹೆಚ್.ಐ.ಪಿ.) ಮೂಲಕ 700 ಕಿಲೋಮೀಟರ್ ರಾಜ್ಯದ ಹೆದ್ದಾರಿಯನ್ನು ಪ್ರಸಕ್ತ ವರ್ಷ 550 ಕೋಟಿ ರೂ.ಗಳ ವೆಚ್ಚದಲ್ಲಿ ಪುನರ್‌ನವೀಕರಣಗೊಳಿಸಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ.

116. ರಾಜ್ಯದ ಹೆದ್ದಾರಿಗಳ ನಿರ್ವಹಣೆಯಲ್ಲಿ ಉತ್ತಮ ತಂತ್ರಜ್ಞಾನವನ್ನು ಅಳವಡಿಸುವ ಅಗತ್ಯವಿದೆ. ಆದ್ದರಿಂದ ರಾಜ್ಯ ಹೆದ್ದಾರಿಗಳನ್ನು 450 ಕೋಟಿ ರೂ.ಗಳ ವೆಚ್ಚದಲ್ಲಿ ಮೂರು ವರ್ಷದ ನಿರ್ವಹಣಾ ಗುತ್ತಿಗೆಗೆ ನೀಡಲು ಯೋಜಿಸಿದ್ದು ಇದಕ್ಕಾಗಿ ನಾನು 150 ಕೋಟಿ ರೂ.ಗಳನ್ನು 2005-06ರಲ್ಲಿ ಒದಗಿಸುತ್ತಿದ್ದೇನೆ.

117. ರಾಜ್ಯ ಹೆದ್ದಾರಿಗಳನ್ನು ಹೊರತುಪಡಿಸಿ ಇತರೆ ರಸ್ತೆಗಳನ್ನು ನಿರ್ವಹಿಸಲು ಈಗಿನ ತಾತ್ಕಾಲಿಕ ಪದ್ಧತಿಯಿಂದ ವ್ಯವಸ್ಥಿತವಾದ ಪದ್ಧತಿಗೆ ಬದಲಾವಣೆಗೊಳ್ಳುವ ಅಗತ್ಯವಿದೆ. ಹಾಲಿ ರಸ್ತೆಯ ಸ್ಥಿತಿ, ಅದರ ನಿರ್ವಹಣೆಗೆ ಮಾಡಿದ ವೆಚ್ಚ ಇತ್ಯಾದಿ ಸಮಗ್ರ ಮಾಹಿತಿಗಳನ್ನು ಸಂಗ್ರಹಿಸಿ ರಸ್ತೆ ಮಾಹಿತಿ ವ್ಯವಸ್ಥೆಯಲ್ಲಿ ಇಡಲಾಗುವುದು. ಲೋಕೋಪಯೋಗಿ ಇಲಾಖೆಯವರು ಸಿದ್ಧಪಡಿಸುವ ಕ್ರಿಯಾ ಯೋಜನೆಯಂತೆ ಈ ಕಾರ್ಯವನ್ನು ಅನುಷ್ಠಾನಗೊಳಿಸಲು 83 ಕೋಟಿ ರೂ.ಗಳನ್ನು ನೀಡುತ್ತಿದ್ದೇನೆ. ಇದರ ಜೊತೆಗೆ, ರಸ್ತೆಗಳನ್ನು ಮೇಲ್ದರ್ಜೆಗೇರಿಸಲು 72 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಲಾಗಿದೆ.

118. ಆರ್.ಐ.ಡಿ.ಎಫ್. ನೆರವಿನ ಅಡಿಯಲ್ಲಿ 458 ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು 275 ಕೋಟಿ.ರೂ.ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ.

119. ಇತ್ತೀಚಿನ ದಿನಗಳಲ್ಲಿ ಹೊಸಪೇಟೆ-ಕಾರವಾರ ರಸ್ತೆ, ಧಾರವಾಡ- ಅಳ್ನಾವರ್, ರಾಮನಗರ-ಅನ್ಮೋಡ್‌ರಸ್ತೆ, ಚಿಕ್ಕನಾಯಕನಹಳ್ಳಿ- ಹಾಸನ ರಸ್ತೆಗಳನ್ನು ಅದಿರು ಸಾಗಿಸುವ ಗಣಿ ವಾಹನಗಳು ಹೆಚ್ಚಾಗಿ ಬಳಸುತ್ತಿವೆ. ಈ ವಾಹನಗಳು ಸಾಮರ್ಥ್ಯಕ್ಕಿಂತ ಹೆಚ್ಚಿನ ಸರಕುಗಳನ್ನು ವಾಹನಗಳಲ್ಲಿ ಸಾಗಿಸುತ್ತಿರುವುದರಿಂದ ರಸ್ತೆಗಳು ಹೆಚ್ಚಿಗೆ ಬಾಳಿಕೆ ಬರುತ್ತಿಲ್ಲ. ಈ ರಸ್ತೆಗಳನ್ನು ಸುಧಾರಿಸುವಂತೆ ಸಂಬಂಧಿಸಿದ ಗಣಿ ಮತ್ತು ಸಾರಿಗೆ ವಲಯಗಳು ಮನವಿ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ನಾನು ಈ ರಸ್ತೆಗಳನ್ನು ಕೆ.ಆರ್.ಡಿ.ಸಿ.ಎಲ್. ಮೂಲಕ ಸುಧಾರಿಸಲು ಉದ್ದೇಶಿಸಿದ್ದೇನೆ. ಈ ನಮ್ಮ ಪ್ರಯತ್ನಗಳನ್ನು ಕಾಪಾಡಿಕೊಳ್ಳಲು ನಾನು ಕರ್ನಾಟಕ ರಾಜ್ಯ ಹೆದ್ದಾರಿ ಕಾಯ್ದೆಯಡಿ ಪ್ರತ್ಯೇಕ ಟೋಲ್‌ನ್ನು ವಿಧಿಸಲು ಉದ್ದೇಶಿಸಿದ್ದೇನೆ. ಈ ಶುಲ್ಕದಿಂದ ಸ್ಥಳೀಯ ಪ್ರಯಾಣಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು.

ವಸತಿ, ನಗರಾಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳು

120. ಆಶ್ರಯ ಮತ್ತು ಇಂದಿರಾ ಆವಾಸ್ ಯೋಜನೆಗಳು ಕಡುಬಡವರಿಗೆ ಮೀಸಲಾದ ರಾಜ್ಯ ಸರ್ಕಾರದ ವಸತಿ ಯೋಜನೆಗಳಾಗಿವೆ. ಆಶ್ರಯ ಯೋಜನೆಯಡಿ ನಿರ್ಮಿಸುವ ಮನೆಗಳಿಗೆ ಸಹಾಯಧನ ನೀಡಲು ನಾನು 100 ಕೋಟಿ ರೂ.ಗಳನ್ನು ಮೀಸಲಿರಿಸಿದ್ದೇನೆ. ಇದರ ಜೊತೆಗೆ, ಪರಿಶಿಷ್ಟ ಜಾತಿ/ ಪಂಗಡದ ಫಲಾನುಭವಿಗಳಿಗೆ ಅಂಬೇಡ್ಕರ್ ವಸತಿ ಯೋಜನೆಯಡಿ ಉಚಿತ ವಸತಿ ಸೌಕರ್ಯ ಕಲ್ಪಿಸಲು ನಾನು 50 ಕೋಟಿ ರೂ.ಗಳನ್ನು ಕ್ರೋಢೀಕೃತ ನಿಧಿಯಿಂದ ಒದಗಿಸುತ್ತಿದ್ದೇನೆ. ಇದೇ ರೀತಿ ಇಂದಿರಾ ಆವಾಸ್ ಯೋಜನೆಗಳಿಗೆ 110 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

121. ವಿವಿಧ ಯೋಜನೆಗಳ ಅಡಿಯಲ್ಲಿ ಹೆಚ್ಚು ಮನೆಗಳನ್ನು ನಿರ್ಮಿಸಿದರೆ ನಮ್ಮ ಕಾರ್ಯ ನಿಲ್ಲುವುದಿಲ್ಲ. ಈ ಮನೆಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವುದು ಸಹಾ ಅಷ್ಟೇ ಮುಖ್ಯ. ಈ ಸಮಸ್ಯೆಯನ್ನು ಪರಿಹರಿಸಲು ನಾನು ವಿನೂತನ ವಿಧಾನವನ್ನು ರೂಪಿಸಿದ್ದೇನೆ. ವಸತಿ ಯೋಜನೆಗಳಲ್ಲಿ ಫಲಾನುಭವಿಗಳಿಂದ ವಸೂಲಿ ಮಾಡಿದ ಸಾಲದ ಹಣದಲ್ಲಿ ಒಂದು ಭಾಗವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ವಾಪಸ್ ನೀಡಿ ಆಯಾ ವಸತಿ ಯೋಜನೆಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವಂತೆ ನಿರ್ದೇಶನ ನೀಡಲಾಗುವುದು. ಈ ವಿಧಾನವು ಯಶಸ್ವಿಯಾದರೆ, ಸಾಲ ವಸೂಲಾತಿ ಮತ್ತು ವಸತಿ ಯೋಜನೆಗಳಿಗೆ ಮೂಲ ಸೌಕರ್ಯಗಳ ನಿರ್ಮಾಣ ಎರಡೂ ಏಕಕಾಲಕ್ಕೆ ಆಗುತ್ತವೆ. ಈ ವಸತಿ ಸಮೂಹಗಳಿಗೆ ಮೂಲಸೌಕರ್ಯ ಕಲ್ಪಿಸಲು ಅಗತ್ಯವಾದ ಸಂಪನ್ಮೂಲವು ಸ್ಥಳೀಯ ಸಂಸ್ಥೆಗಳಿಗೆ ಅವರ ಪ್ರಯತ್ನದಿಂದಲೇ ದೊರೆಯುತ್ತದೆ.

122. ತೀವ್ರ ನಗರೀಕರಣದಿಂದ ಕರ್ನಾಟಕದಲ್ಲಿ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ಶೀಘ್ರದಲ್ಲೇ ಪರಿಹರಿಸಬೇಕು. ನಗರ ಪ್ರದೇಶದ ಜನಸಂಖ್ಯಾ ಬೆಳವಣಿಗೆಯ ದರವು ನಗರ ಮೂಲಸೌಕರ್ಯಗಳಲ್ಲಿ ಹೂಡಿಕೆಯಾಗುತ್ತಿರುವ ಬಂಡವಾಳ ದರಕ್ಕಿಂತ ವೇಗವಾಗಿ ಬೆಳೆಯುತ್ತಿದ್ದು ಇದರ ಪರಿಣಾಮಗಳು ಕಣ್ಣಿಗೆ ಕಾಣುತ್ತಿವೆ. ವಸತಿ, ನೀರಿನ ಕೊರತೆ ಮತ್ತು ಅಸಮರ್ಪಕ ಶೌಚಾಲಯ ವ್ಯವಸ್ಥೆಗಳು ನಗರ ಜೀವನವನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆಗಳಾಗಿವೆ. ಬೆಂಗಳೂರು ನಗರದಲ್ಲಿನ ರಸ್ತೆ ಸಂಪರ್ಕದ ದುಸ್ಥಿತಿ ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿದೆ. ಆದ್ದರಿಂದ ಉತ್ತಮ ಗುಣಮಟ್ಟದ ಜೀವನಕ್ಕಾಗಿ ನಗರ ಪ್ರದೇಶದಲ್ಲಿ ಅಪಾರ ಪ್ರಮಾಣದ ಹೂಡಿಕೆಯ ಅಗತ್ಯವಿದೆ.

123. ರಾಜ್ಯದ ಸಂಪನ್ಮೂಲದಿಂದ ಸ್ಥಳೀಯ ಸಂಸ್ಥೆಗಳಿಗೆ ಪಾಲು ನೀಡುವ ಬಗ್ಗೆ ಶಿಫಾರಸ್ಸು ಮಾಡಲು ರಚಿತವಾಗಿದ್ದ ಎರಡನೆ ರಾಜ್ಯ ಹಣಕಾಸು ಆಯೋಗವು ತನ್ನ ವರದಿಯನ್ನು ಸಲ್ಲಿಸಿದೆ. ಮೊದಲನೆ ಆಯೋಗದ ಶಿಫಾರಸ್ಸಿನಂತೆ ರಾಜ್ಯವು ತನ್ನ ಸಂಪನ್ಮೂಲದ ಶೇ.5.4 ರಷ್ಟನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸುತ್ತಿತ್ತು. ಶೀಘ್ರ ನಗರೀಕರಣಗೊಳ್ಳುತ್ತಿರುವ ಈ ದಿನಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಬೇಕೆಂದು ಸೂಚಿಸಿ ಎರಡನೆ ರಾಜ್ಯ ಹಣಕಾಸು ಆಯೋಗವು ಈ ಪಾಲನ್ನು ಶೇ.5.4 ರಿಂದ ಶೇ.8ಕ್ಕೆ ಹೆಚ್ಚಿಸಿದೆ. ಈ ಹೆಚ್ಚಳವನ್ನು ಹಂತ ಹಂತವಾಗಿ ನೀಡಲು ಉದ್ದೇಶಿಸಿದ್ದು, ಮೊದಲನೆ ಹಂತವಾಗಿ ಈ ಪಾಲಿನ ಮೊತ್ತವನ್ನು ಪ್ರಸಕ್ತ ವರ್ಷದ 798 ಕೋಟಿ ರೂ.ಗಳಿಂದ ಮುಂದಿನ ವರ್ಷ 1160 ಕೋಟಿ

ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ. ಇದು ಶೇ.45 ರಷ್ಟು ಏರಿಕೆಯಾಗಿದೆ. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಹೊಣೆಯನ್ನರಿತು ರಾಜ್ಯದ ನಗರ, ಪಟ್ಟಣ ಪ್ರದೇಶದ ನಾಗರೀಕರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುತ್ತವೆ ಎಂದು ನಾನು ಭಾವಿಸಿದ್ದೇನೆ.

124. ರಾಜ್ಯಸರ್ಕಾರವು 57 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಛ ನಗರಜೀವನ ವಾತಾವರಣ ಕಲ್ಪಿಸುವ ಉದ್ದೇಶದಿಂದ ನಿರ್ಮಲನಗರ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.

125. ವಿಶ್ವಬ್ಯಾಂಕ್ ನೆರವಿನಿಂದ ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗಾ ನಗರಗಳ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆಯನ್ನು ಹಾಗೂ ನಗರ ಪ್ರದೇಶಗಳಲ್ಲಿ ನೀರು ಸರಬರಾಜು ಮಾಡುವುದರ ಬಗೆಗೆ ಸಮಗ್ರ ನೀತಿಯನ್ನು ರೂಪಿಸಲು 235 ಕೋಟಿ ರೂ.ಗಳ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದು ವಿನೂತನ ಪ್ರಯೋಗವಾಗಿದ್ದು, ಇದನ್ನು ಮ್ಯಾನೇಜ್‌ಮೆಂಟ್ ಗುತ್ತಿಗೆ ಆಧಾರದಲ್ಲಿ ನೀಡಲಾಗುವುದು. ನಗರ ನೀರು ಪೂರೈಕೆ ಯೋಜನೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕೆ.ಯು.ಡಬ್ಲ್ಯೂ.ಎಸ್. ಮತ್ತು ಡಿಬಿ ಸಂಸ್ಥೆಗೆ 110 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಲಾಗಿದೆ.

126. ಭಾರತದ ಮೊದಲ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣವು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ನಿರ್ಮಾಣಗೊಳ್ಳಲಿದೆ. ಈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಬೆಂಗಳೂರು ನಗರವನ್ನು ವಿಮಾನ ಪ್ರಯಾಣಿಕರ ಮತ್ತು ವಿಮಾನಸರಕು ಸಾಗಣೆಯ ಕೇಂದ್ರವನ್ನಾಗಿ ಮಾಡಲಿದೆ. ಈ ವಿಮಾನ ನಿಲ್ದಾಣದಿಂದ ಪ್ರವಾಸೋದ್ಯಮ ಮತ್ತು ರಫ್ತು ಉದ್ಯಮಕ್ಕೆ ಉತ್ತೇಜನ ದೊರೆಯಲಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಗೆ ರಾಜ್ಯ ಸರ್ಕಾರದ ನೆರವಿನ ಹಣ 95 ಕೋಟಿ ರೂ.ಗಳನ್ನು 2005-06ನೇ ಸಾಲಿನಲ್ಲಿ ನಾನು ಒದಗಿಸುತ್ತಿದ್ದೇನೆ.

127. ಬೆಂಗಳೂರಿನ ನಾಗರಿಕರು ಮೆಟ್ರೋ ರೈಲು ಸೇವೆಯ ಕಾರ್ಯಾರಂಭದ ಬಗ್ಗೆ ತೀವ್ರ ನಿರೀಕ್ಷೆಯಿಟ್ಟುಕೊಂಡಿದ್ದಾರೆ. ಈ ಯೋಜನೆಗೆ ಅನುಮೋದನೆಯನ್ನು ಸಚಿವ ಸಂಪುಟವು ನೀಡಿದೆ. ಭಾರತ ಸರ್ಕಾರದ ಅನುಮೋದನೆ ಸದ್ಯದಲ್ಲೇ ದೊರೆಯಲಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ನಾನು 2005-06ನೇ ಸಾಲಿನಲ್ಲಿ 109 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ. ರಾಜ್ಯ ಸರ್ಕಾರವು ಭಾರತೀಯ ರೈಲ್ವೆಯ ಸಹಯೋಗದೊಂದಿಗೆ ಹಲವು ಯೋಜನೆಗಳನ್ನು ಸಮಾನವೆಚ್ಚ ಹಂಚಿಕೆ ಆಧಾರದಲ್ಲಿ ಜಾರಿಗೊಳಿಸಲು ಯೋಜಿಸುತ್ತಿದೆ. ಈ ಯೋಜನೆಗಳಿಗಾಗಿ ನಾನು 51 ಕೋಟಿ ರೂ.ಗಳನ್ನು ನಿಗದಿಪಡಿಸುತ್ತಿದ್ದೇನೆ.

128. ನಗರ ಪ್ರದೇಶದ ಜೀವನ ಗುಣಮಟ್ಟ ಸುಧಾರಿಸುವಲ್ಲಿ ಉತ್ತಮ ಸಂಚಾರಿ ವ್ಯವಸ್ಥೆಯು ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ನಾನು "ಟ್ರಾಫಿಕ್ ಮ್ಯಾನೇಜ್‌ಮೆಂಟ್ ನಿಧಿ"ಯನ್ನು ಸ್ಥಾಪಿಸಿ ಸಂಚಾರಿ ನಿಯಮ ಉಲ್ಲಂಘನೆಯ ದಂಡದ ಹಣದಲ್ಲಿ ಶೇ.50ನ್ನು ಈ ನಿಧಿಗೆ ವರ್ಗಾಯಿಸಲಾಗುವುದು. ರಾಜ್ಯದ ಆರು ನಗರ ಪಾಲಿಕೆಗಳ ಸಂಚಾರಿ ವ್ಯವಸ್ಥೆಯನ್ನು ಸುಧಾರಿಸಲು ಈ ನಿಧಿಯನ್ನು ಬಳಸಿಕೊಳ್ಳಲಾಗುವುದು.

ಕೈಗಾರಿಕೆ ಮತ್ತು ವಾಣಿಜ್ಯ

129. ನಮ್ಮ ಸರ್ಕಾರ ಕೈಗಾರಿಕೆಗಳ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಿದೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ 29 ಬೃಹತ್ ಕೈಗಾರಿಕೆಗಳ ಮೂಲಕ 31,000 ಕೋಟಿ ರೂ.ಗಳ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲಾಗಿದೆ. ಇದರ ಜೊತೆಗೆ 184 ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳ ಮೂಲಕ 4,000 ಕೋಟಿ ರೂ.ಗಳ ಬಂಡವಾಳ ಹೂಡಿಕೆಯಾಗುತ್ತಿದೆ. 250 ಕೋಟಿ ರೂ.ಗಳ ಬಂಡವಾಳ ಹೂಡಿಕೆಯ 7,000 ಸಣ್ಣ ಕೈಗಾರಿಕೆಗಳಿಗೆ, 33,000 ಜನರಿಗೆ ಉದ್ಯೋಗ ಸೃಜಿಸುವ ಅವಕಾಶದೊಂದಿಗೆ ಅನುಮೋದನೆ ನೀಡಲಾಗಿದೆ. ರಾಜ್ಯದ ಎಲ್ಲ ಪ್ರಾಂತ್ಯ ಮತ್ತು ವಲಯಗಳ ತ್ವರಿತ ಕೈಗಾರಿಕಾ ಬೆಳವಣಿಗೆಗೆ ಚಾಲನೆ ನೀಡಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ "ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಪರಿಷತ್" ನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

130. ಡಾ।। ನಂಜುಂಡಪ್ಪ ಸಮಿತಿಯು ಗುರುತಿಸಿರುವ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ "ಕೈಗಾರಿಕಾ ವಿಕಾಸ" ಯೋಜನೆಯಡಿ ಮುಂದಿನ ಐದು ವರ್ಷಗಳಲ್ಲಿ 1.5 ಲಕ್ಷ ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗುವುದು. ಈ ಉದ್ದೇಶಕ್ಕಾಗಿ 2005-06ನೇ ಸಾಲಿನಲ್ಲಿ ನಾನು 10 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ. ಈ ಯೋಜನೆಯು ವಾರ್ಷಿಕ 300 ಕೋಟಿ ರೂ.ಗಳ ಆದಾಯವನ್ನು ಸೃಷ್ಟಿಸುವ ನಿರೀಕ್ಷೆಯಿದೆ.

131. ಹಾಸನ ಮತ್ತು ಮೈಸೂರಿನಲ್ಲಿ ಜವಳಿ ಉತ್ಪನ್ನಗಳ ವಿಶೇಷ ವಲಯವನ್ನು ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಮಂಗಳೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ರಾಜ್ಯದ ಹನ್ನೊಂದು ಸ್ಥಳಗಳಲ್ಲಿ ನೂತನ ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಮಿಗಳ ಪಾರ್ಕ್‌ಗಳನ್ನು (ಎಸ್‌ಟಿಇಪಿ) ಸ್ಥಾಪಿಸಲಾಗುವುದು. ಈ ಸ್ಥಳಗಳೆಂದರೆ, ಬೆಂಗಳೂರು (ಗ್ರಾಮಾಂತರ), ಬಳ್ಳಾರಿ, ಚಾಮರಾಜನಗರ, ಗುಲ್ಬರ್ಗಾ, ಹಾವೇರಿ, ಕೊಡಗು, ಕೊಪ್ಪಳ, ಕೋಲಾರ, ಮಂಡ್ಯ, ರಾಯಚೂರು ಮತ್ತು ಉತ್ತರಕನ್ನಡ ಜಿಲ್ಲೆಗಳಾಗಿವೆ.

132. ಕೇಂದ್ರ ಸರ್ಕಾರದ ನೆರವಿನೊಂದಿಗೆ ಹುಬ್ಬಳ್ಳಿಯಲ್ಲಿ ಕೈಗಾರಿಕಾವಾಲ್ವ್‌ಗಳ ಸಮುಚ್ಚಯವನ್ನು, ಶಿವಮೊಗ್ಗದಲ್ಲಿ ಆಟೋ ಬಿಡಿಭಾಗಗಳ ಸಂಕೀರ್ಣವನ್ನು, ಮಂಗಳೂರಿನಲ್ಲಿ ಆಹಾರ ಸಂಸ್ಕರಣೆ ಸಮುಚ್ಚಯವನ್ನು, ಚನ್ನಪಟ್ಟಣ ಮತ್ತು ಹಾಸನದಲ್ಲಿ ತೆಂಗಿನ ನಾರು ಕೈಗಾರಿಕಾ ಸಮುಚ್ಚಯವನ್ನು 40.2 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಗ್ರಾಮೀಣ ಕುಶಲಕರ್ಮಿಗಳ ಉತ್ಪನ್ನಗಳಿಗೆ ಗುಲ್ಬರ್ಗಾದಲ್ಲಿ ಸೂಕ್ತ ಮಾರುಕಟ್ಟೆ ನಿರ್ಮಿಸಿ ಸೌಲಭ್ಯ ಕಲ್ಪಿಸಲಾಗುವುದು.

133. ರಾಜ್ಯದಲ್ಲಿ ಗಣಿಶೋಧನಾ ಚಟುವಟಿಕೆಗಳನ್ನು ಬಲಗೊಳಿಸಲಾಗುವುದು. ಅದಿರನ್ನು ಪತ್ತೆ ಹಚ್ಚುವ ಚಟುವಟಿಕೆಗಳಿಗಾಗಿ ಅತ್ಯಾಧುನಿಕ ಉಪಕರಣಗಳನ್ನುಳ್ಳ ಪ್ರಯೋಗಾಲಯವನ್ನು ಸ್ಥಾಪಿಸಲು 2005-06ರಲ್ಲಿ ನಾನು 2.8 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇನೆ.

ನೇಕಾರರ ಪ್ಯಾಕೇಜ್:

134. ನಮ್ಮ ಸರ್ಕಾರವು 2004-05ರ ಮುಂಗಡ ಪತ್ರದಲ್ಲಿ ನೇಕಾರರಿಗಾಗಿ ವಿಶೇಷ ಪ್ಯಾಕೇಜ್‌ನ್ನು ಘೋಷಿಸಿದಂತೆ ಅನುಷ್ಠಾನಗೊಳಿಸಲಾಗಿದೆ. ಇದರಲ್ಲಿ 27 ಕೋಟಿ ರೂ.ವೆಚ್ಚದಲ್ಲಿ ನೇಕಾರರಿಗೆ ವಿದ್ಯುತ್ ಸಹಾಯಧನ, ಆರೋಗ್ಯ ರಕ್ಷಣೆ, ಕಚ್ಚಾವಸ್ತುಗಳ ಪೂರೈಕೆ ಇತ್ಯಾದಿಗಳು ಸೇರಿದ್ದವು. ಈ ಯೋಜನೆಯನ್ನು 2005-06ನೇ ಸಾಲಿನಲ್ಲಿ ಮತ್ತಷ್ಟು ವಿಸ್ತರಿಸಿ ಮುಂದುವರಿಸಲು ಉದ್ದೇಶಿಸಿದ್ದೇನೆ.

ವಿದ್ಯುತ್

135. ವಿದ್ಯುತ್ ವಲಯವು ನಮ್ಮ ಆರ್ಥಿಕತೆಯ ಬಹುಮುಖ್ಯ ಶಕ್ತಿ ಕೇಂದ್ರವಾಗಿದೆ. ನಮ್ಮ ಅಭಿವೃದ್ಧಿಯ ವೇಗವನ್ನು ವಿದ್ಯುತ್ ವಲಯವು ನಿರ್ಧರಿಸುತ್ತದೆ. ಕರ್ನಾಟಕ ವಿದ್ಯುತ್ ನಿಗಮವು ಕೈಗೆತ್ತಿಕೊಂಡಿರುವ ವಿದ್ಯುತ್ ಉತ್ಪಾದನಾ ಯೋಜನೆಗಳು ಬಿರುಸಿನ ಪ್ರಗತಿ ಸಾಧಿಸಿವೆ. 55 ಮೆಗಾವ್ಯಾಟ್ ಸಾಮರ್ಥ್ಯದ ಆಲಮಟ್ಟಿ ವಿದ್ಯುತ್‌ಸ್ಥಾವರದ ಮೂರನೇ ಘಟಕವು 13.1.2005 ರಂದು ಕಾರ್ಯಾರಂಭ ಮಾಡಿದೆ. 55 ಮೆಗಾವ್ಯಾಟ್ ಸಾಮರ್ಥ್ಯದ ಉಳಿದ ಮೂರು ಘಟಕಗಳು ಜುಲೈ 2005 ರ ಅಂತ್ಯದ ವೇಳೆಗೆ ಕಾರ್ಯಾರಂಭ ಮಾಡಲಿವೆ. 500 ಮೆಗಾವ್ಯಾಟ್ ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಕಾಮಗಾರಿಯು ನಿಗದಿತ ಅವಧಿಗಿಂತ ಮುಂಚೆಯೇ ಪೂರ್ಣಗೊಂಡಿದೆ. ಬಿಡದಿ ವಿದ್ಯುತ್ ಘಟಕ, ರಾಯಚೂರು ಶಾಖೋತ್ಪನ್ನ ಕೇಂದ್ರದ ಎಂಟನೇ ಘಟಕ, ನಾಗಝರಿ ವಿದ್ಯುದಾಗಾರದ ಆಧುನೀಕರಣ ಮತ್ತು ನವೀಕರಣ, ಗುಂಡಾಲ್ ಜಲ ವಿದ್ಯುತ್ ಯೋಜನೆಯ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ. ವರಾಹಿ ಜಲ ವಿದ್ಯುತ್ ಯೋಜನೆಯ ಕಾಮಗಾರಿ ಶೀಘ್ರದಲ್ಲಿಯೇ ಆರಂಭವಾಗಲಿದೆ. ಇವು ಪೂರ್ಣಗೊಂಡಾಗ ಪ್ರಸ್ತುತ ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯಕ್ಕೆ ಹೆಚ್ಚುವರಿಯಾಗಿ 3475 ಮೆಗಾವ್ಯಾಟ್ ವಿದ್ಯುತ್‌ನ್ನು ನೀಡಲಿವೆ.

136. ನಮ್ಮ ಸರ್ಕಾರವು 1,35,000 ನೀರಾವರಿ ಪಂಪ್‌ಸೆಟ್‌ಗಳನ್ನು 357.26 ಕೋಟಿ ರೂ.ಗಳ ವೆಚ್ಚದಲ್ಲಿ ಸಕ್ರಮಗೊಳಿಸಲು ತೀರ್ಮಾನಿಸಿದೆ. ಈ ಸಕ್ರಮದ ಖರ್ಚು ಪ್ರತಿ ಪಂಪ್‌ಸೆಟ್‌ಗೆ ರೂ. 26,464 ಆಗಲಿದ್ದು ನೀರಾವರಿ ಪಂಪ್‌ಸೆಟ್‌ನ ಫಲಾನುಭವಿಗಳು ಪ್ರತಿ ಪಂಪ್‌ಸೆಟ್‌ಗೆ 10,000 ರೂ.ಗಳ ವೆಚ್ಚ ಭರಿಸಬೇಕಾಗುತ್ತದೆ. ಸರ್ಕಾರ ಮತ್ತು ಎಸ್ಕಾಮ್‌ಗಳು ಉಳಿದ ಖರ್ಚನ್ನು ಭರಿಸಬೇಕಾಗಿದೆ. ಈ ಸಕ್ರಮದಿಂದ ಸರ್ಕಾರಕ್ಕೆ 173 ಕೋಟಿ. ರೂ.ಗಳ ಹೊರೆಬೀಳಲಿದೆ.

137. ಎಲ್ಲಾ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಗ್ರಾಹಕರಿಗೆ 18 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸಲು ನಾವು ನಿರ್ಧರಿಸಿದ್ದೇವೆ. ಈ ಉಚಿತ ವಿದ್ಯುತ್ ಸೌಲಭ್ಯವು ಮೀಟರ್‌ನ್ನು ಮಾಡಿದ ಸಂಪರ್ಕಗಳಿಗೆ ಮಾತ್ರ ಲಭ್ಯವಿದ್ದು ವಿದ್ಯುತ್ ಕಳುವನ್ನು ತಡೆಯಲು ರೂಪಿಸಲಾಗಿದೆ.

138. ಗ್ರಾಮೀಣ ವಿದ್ಯುತ್ ನಿಗಮದ ನೆರವಿನ "ದಲಿತಬಸ್ತಿ" ಯೋಜನೆಯಡಿ 2,52,798 ಕುಟುಂಬಗಳಿಗೆ ಉಚಿತ ವಿದ್ಯುತ್‌ನ್ನು 202 ಕೋಟಿ ರೂ.ಗಳ ಖರ್ಚಿನಲ್ಲಿ ಒದಗಿಸಲಾಗುವುದು.

ವಿದ್ಯುತ್ ಸಹಾಯಧನ

139. ವಿದ್ಯುತ್ ಸಹಾಯಧನವು ರಾಜ್ಯದ ಬೊಕ್ಕಸಕ್ಕೆ ಭಾರೀ ಹೊರೆಯಾಗುತ್ತಿದೆ. ಸಹಾಯಧನಗಳು ತಮ್ಮಷ್ಟಕ್ಕೆ ತಾವು ಕೆಟ್ಟವೇನಲ್ಲ. ಆದರೆ ಸೂಕ್ತ ಗುರಿ ನಿರ್ದೇಶನವಿಲ್ಲದ ಮತ್ತು

ಕೆಟ್ಟ ವಿನ್ಯಾಸದ ಸಹಾಯಧನಗಳು ರಾಜ್ಯದ ಹಣಕಾಸಿನ ಸೋರಿಕೆಗೆ ಕಾರಣವಾಗುತ್ತವೆ. ಇದರಿಂದ ನಿಜವಾಗಿಯೂ ಅಗತ್ಯವಿರುವ ಬಾಬ್ತುಗಳಿಗೆ ಹಣದ ಕೊರತೆ ಎದುರಾಗುತ್ತದೆ.

140. ಗುರಿ ನಿರ್ದೇಶನವಿಲ್ಲದ ವಿದ್ಯುತ್ ವಲಯದ ನಷ್ಟಗಳು ರಾಜ್ಯ ಸಂಪನ್ಮೂಲಗಳ ಮೇಲೆ ಒತ್ತಡವನ್ನು ಹೇರುತ್ತಿವೆ. ಇದರ ಜೊತೆಗೆ ಸಾರ್ವಜನಿಕ ಉದ್ಯಮಗಳು ತಮ್ಮ ವಿದ್ಯುತ್ ಉತ್ಪಾದನೆ ಮತ್ತು ಪ್ರಸರಣಾ ಸಾಮರ್ಥ್ಯವನ್ನು ವಿಸ್ತರಿಸಿಕೊಳ್ಳಲು ಅಡ್ಡವಾಗಿ ನಿಂತು ಅವುಗಳ ಶೀಘ್ರ ಮತ್ತು ಸಮಾನ ಬೆಳವಣಿಗೆಗೆ ತಡೆಯೊಡ್ಡಿವೆ.

141. ರೈತರು ಗುಣಮಟ್ಟದ ವಿದ್ಯುತ್‌ನ್ನು ಬಯಸುತ್ತಾರೆ. ಕರ್ನಾಟಕದಲ್ಲಿ ಶೇ.49ರಷ್ಟು ವಿದ್ಯುತ್‌ನ್ನು ನೀರಾವರಿ ಪಂಪ್‌ಸೆಟ್‌ಗಳು ಬಳಸುತ್ತಿವೆ ಎಂದು ಲೆಕ್ಕದಲ್ಲಿ ತೋರಿಸಲಾಗಿದೆ. ಕರ್ನಾಟಕದಲ್ಲಿ ಎಲ್ಲ ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿಲ್ಲ. ಆದ್ದರಿಂದ ಈ ಪಂಪ್‌ಸೆಟ್‌ಗಳು ಕೆಪಿಟಿಸಿಎಲ್ ಪೂರೈಸುತ್ತಿರುವ ಶೇ. 49ರ ವಿದ್ಯುತ್‌ನ್ನು ಬಳಸುತ್ತಿವೆಯೆ ಎನ್ನುವುದನ್ನು ಪರೀಕ್ಷಿಸುವುದು ಕಷ್ಟವಾಗುತ್ತಿದೆ. ಹೀಗಾಗಿ ಪಂಪ್‌ಸೆಟ್‌ಗಳು ಬಳಸುತ್ತಿವೆ ಎಂದು ಹೇಳಲಾಗುತ್ತಿರುವ ವಿದ್ಯುತ್‌ನ ಮೊತ್ತದಲ್ಲಿ ಅಕ್ರಮ ವಿದ್ಯುತ್ ಕಳ್ಳತನಗಳನ್ನು ಸೇರಿಸಲು ಅವಕಾಶವಾಗುತ್ತಿದೆ. ಪಂಪ್‌ಸೆಟ್‌ಗಳು ಬಳಸುತ್ತಿರುವ ವಿದ್ಯುತ್ ವೆಚ್ಚದ ಬಾಬ್ತು ಸರಾಸರಿ 1,750 ಕೋಟಿ ರೂ.ಗಳನ್ನು ಸರ್ಕಾರವು ಪಾವತಿಸುತ್ತಿದೆ. ಪಂಪ್‌ಸೆಟ್ ಹೊಂದಿರುವ ರೈತರು ಸ್ವತಃ ಪಾವತಿ ಮಾಡುತ್ತಿರುವ ಕೆ.ಇ.ಆರ್.ಸಿ. ನಿಗದಿಪಡಿಸಿದ ಮೊತ್ತವು ಮೇಲಿನ ಮೊತ್ತದಲ್ಲಿ ಸೇರಿಲ್ಲ. ಪ್ರತೀ ಪಂಪ್‌ಸೆಟ್ ಮೇಲೆ ಸರ್ಕಾರ ವೆಚ್ಚ ಮಾಡುತ್ತಿರುವ ಸಹಾಯಧನವು ವರ್ಷಕ್ಕೆ ಅಂದಾಜು 12,500 ರೂ.ಗಳಾಗಿದೆ. 2005-06ರಲ್ಲಿ ವಿದ್ಯುತ್ ಸಹಾಯಧನಕ್ಕೆ 1,750 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

142. ವಾಣಿಜ್ಯ ನಷ್ಟವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಪ್ರಥಮ ಹೆಜ್ಜೆಯೆಂದರೆ; ನೂರಕ್ಕೆ ನೂರರಷ್ಟು ಮೀಟರುಗಳನ್ನು ಅಳವಡಿಸುವುದು ಮತ್ತು ಕಟ್ಟುನಿಟ್ಟಾಗಿ ವಿದ್ಯುತ್ ಕಳವಿನ ವಿರುದ್ಧ ಕ್ರಮಗಳನ್ನು ಕೈಗೊಳ್ಳುವುದಾಗಿದೆ. ಇದರಿಂದ ಆದಾಯ ಹೆಚ್ಚಾಗಿ ವಿದ್ಯುತ್‌ವಲಯದಲ್ಲಿ ಹೆಚ್ಚಿನ ಹೂಡಿಕೆ ಮಾಡಲು ಸಂಪನ್ಮೂಲಗಳಿಗೆ ದಾರಿಯಾಗುತ್ತದೆ ಮತ್ತು ಪ್ರಸರಣ ನಷ್ಟ ಕಡಿಮೆಯಾಗುತ್ತದೆ. ತತ್ಪರಿಣಾಮವಾಗಿ ವಲಯದ ದಕ್ಷತೆ ಮತ್ತಷ್ಟು ಸುಧಾರಿಸುತ್ತದೆ. ಹೆಚ್ಚು ದಕ್ಷತೆಯ ವಿದ್ಯುತ್ ವಲಯವು ಉತ್ತಮ ಗುಣಮಟ್ಟದ ವಿದ್ಯುತ್‌ನ್ನು ಒದಗಿಸಿ ಹೆಚ್ಚು ಸಂಪನ್ಮೂಲಗಳನ್ನು ಸೃಜಿಸುತ್ತದೆ. ಈ ಸಂಬಂಧ ಸೂಕ್ತ ಕ್ರಮಗಳನ್ನು ಕೈಗೊಳ್ಳದಿದ್ದರೆ ನಮ್ಮ ಮುಂದಿನ ಭವಿಷ್ಯ ಮಸುಕಾಗಲಿದೆ.

143. ಈ ಎಲ್ಲದರ ಹಿನ್ನೆಲೆಯಲ್ಲಿ ನಾನು ಸಬ್ಸಿಡಿ ವಲಯಗಳನ್ನೂ ಸೇರಿದಂತೆ ಎಲ್ಲಾ ವಲಯಗಳಲ್ಲೂ ಶೇಕಡಾ ನೂರರಷ್ಟು ಮೀಟರ್ ಅಳವಡಿಕೆಯಾಗಬೇಕೆಂದು ಪ್ರಸ್ತಾಪಿಸುತ್ತಿದ್ದೇನೆ. ಕಡ್ಡಾಯವಾಗಿ ಮೀಟರ್ ಅಳವಡಿಸುವ ನಮ್ಮ ಉದ್ದೇಶವು ವಿದ್ಯುತ್ ಬಳಕೆಯ ಲೆಕ್ಕ ಇಡಲಿಕ್ಕೆ ಮಾತ್ರ ಎನ್ನುವ ಭರವಸೆಯನ್ನು ನಾನು ಸದನದ ಮೂಲಕ ಎಲ್ಲ ರೈತರಿಗೆ ನೀಡುತ್ತಿದ್ದೇನೆ. ರೈತರು ತಾವು ಎಷ್ಟೇ ವಿದ್ಯುತ್‌ನ್ನು ಬಳಸಿದ್ದರೂ, ಕೆಇಆರ್‌ಸಿ ನಿಗದಿಪಡಿಸಿದ ದರವನ್ನು ಅಥವಾ ತಾವು ಬಳಸಿದ ಮೀಟರ್‌ನ ದರ ಇದರಲ್ಲಿ ಯಾವುದು ಕಡಿಮೆ ಇರುತ್ತದೋ ಅದನ್ನು ಮಾತ್ರ ಪಾವತಿಸಲು ಇಚ್ಛಿಸಬಹುದು. ಸುಧಾರಣೆಯ ಮತ್ತೊಂದು ಪ್ರಮುಖ ಹೆಜ್ಜೆಯೆಂದರೆ ಸರ್ಕಾರ

ಮತ್ತು ಎಸ್ಕಾಂಗಳ ನಡುವೆ "ಖರೀದಿದಾರ- ಒದಗಿಸುವವರು" ಮಾದರಿಯನ್ನು ರೂಪಿಸಬೇಕು. ವಿದ್ಯುತ್ ಸಂಸ್ಥೆಗಳು ಸಹಾಯಧನ ಕೋರುವಾಗ ಸರ್ಕಾರಕ್ಕೆ ಬಿಲ್‌ನ್ನು ಸಲ್ಲಿಸಬೇಕಾಗುತ್ತದೆ. ವಿದ್ಯುತ್‌ನ್ನು ಬಳಸಿದ ಅಥವಾ ವಿದ್ಯುತ್‌ನ್ನು ವಿತರಿಸಿದ ಸ್ಥಳದಲ್ಲಿ ಮಾಡಿದ ಮೀಟರಿಂಗ್‌ನ್ನು ಈ ಬಿಲ್ ಆಧರಿಸಿರುತ್ತದೆ. ಇದರ ಜೊತೆಗೆ, ವಿದ್ಯುತ್ ಕಳ್ಳತನ ಮತ್ತು ನಷ್ಟವನ್ನು ಕಡಿಮೆ ಮಾಡಲು ನಾನು ಕಟ್ಟುನಿಟ್ಟಾದ ವಿದ್ಯುತ್‌ಶಕ್ತಿ ತಪಾಸಣೆಯನ್ನು ಮಾಡಲು ಉದ್ದೇಶಿಸಿದ್ದೇನೆ.

144. ಕೇಂದ್ರ ನೆರವಿನ ಯೋಜನೆಯಡಿಯಲ್ಲಿ ವಿದ್ಯುತ್‌ಸೌಲಭ್ಯವಿಲ್ಲದ 1000 ತಾಂಡಗಳು, ಬಸ್ತಿಗಳು, ಹಟ್ಟಿಗಳಿಗೆ ಸೌರಶಕ್ತಿಯ ವಿದ್ಯುತ್ ದೀಪಗಳನ್ನು ಒದಗಿಸಲಾಗುವುದು. ಈ ಯೋಜನೆಯ ಅಂದಾಜು ವೆಚ್ಚ 26.33 ಕೋಟಿ ರೂ.ಗಳಾಗಿದೆ.

ಕಂದಾಯ

145. ಕಂದಾಯ ಇಲಾಖೆಯು ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಇಲಾಖೆಯಾಗಿದೆ. ಇದು ನಮ್ಮ ರೈತರು ಮತ್ತು ಕೃಷಿಕ ಸಮುದಾಯದ ಜೊತೆ ನಿಕಟ ಸಂಬಂಧ ಹೊಂದಿದೆ. ರಾಜ್ಯದಲ್ಲಿ 36 ಮಿನಿ ವಿಧಾನಸೌಧ ಕಟ್ಟಡಗಳ ನಿರ್ಮಾಣಕಾರ್ಯವು ವಿವಿಧ ಹಂತಗಳಲ್ಲಿದ್ದು ಹಣದ ಕೊರತೆಯಿಂದಾಗಿ ಇನ್ನೂ ಪೂರ್ಣಗೊಂಡಿಲ್ಲ. ಈ ಎಲ್ಲಾ ಅಪೂರ್ಣ ಮಿನಿ ವಿಧಾನಸೌಧ ಕಟ್ಟಡಗಳನ್ನು ಸಂಪೂರ್ಣಗೊಳಿಸಲು ನಾನು 8 ಕೋಟಿ ರೂ.ಗಳನ್ನು 2005-06 ರಲ್ಲಿ ನೀಡುತ್ತಿದ್ದೇನೆ.

146. ಜಮೀನು ಮಾರಾಟವಾದ ಅಥವಾ ವಿಭಾಗಗೊಂಡ ತಕ್ಷಣ ರೈತರ ಜಮೀನನ್ನು ಮೋಜಣಿ ಮಾಡಲು ವಿಳಂಬವಾಗುತ್ತಿರುವುದರಿಂದ ರೈತರ ನಡುವೆ ಘರ್ಷಣೆಗಳು ಉಂಟಾಗುತ್ತಿವೆ. ಇದರ ಜೊತೆಗೆ ಶತಮಾನಗಳಷ್ಟು ಹಳೆಯದಾದ ಸರ್ವೆದಾಖಲೆಗಳು ಜೀರ್ಣಾವಸ್ಥೆಯಲ್ಲಿವೆ. ಆದ್ದರಿಂದ ನೂತನ ತಂತ್ರಜ್ಞಾನದ ಮೂಲಕ ಗ್ರಾಮ ನಕ್ಷೆಗಳು ಮತ್ತು ಜಮೀನಿನ ನಕ್ಷೆಗಳನ್ನು ಸಿದ್ಧಪಡಿಸಿ ಸಾರ್ವಜನಿಕರಿಗೆ ಒದಗಿಸಲಾಗುವುದು. ಈ ನಕ್ಷೆಗಳನ್ನು ಡಿಜಿಟಲ್ ತಂತ್ರಜ್ಞಾನದಡಿ ಸಂಗ್ರಹಿಸುವುದರಿಂದ ಅಗತ್ಯ ಮಾಹಿತಿಯನ್ನು ಬೇಕೆಂದಾಗ ಮೇಲ್ದರ್ಜೆಗೇರಿಸಬಹುದು ಮತ್ತು ಅಗತ್ಯವಿದ್ದಾಗ ತಕ್ಷಣದಲ್ಲಿ ಪಡೆಯಬಹುದಾಗಿದೆ. ಇದಲ್ಲದೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಟ್ಟಡಗಳನ್ನು ನಿರ್ಮಿಸಲು 2 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

147. ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ರೂ.ಗಳನ್ನು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ 3 ಕೋಟಿ ರೂ.ಗಳನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ.

ಸಾರಿಗೆ

148. ಕರ್ನಾಟಕ ಸಾರಿಗೆ ನಿಗಮದ ಪ್ರಗತಿಯಲ್ಲಿ ತೀವ್ರವಾದ ಸುಧಾರಣೆಯಾಗಿದೆ. ಬೆಂಗಳೂರು ಮಹಾನಗರ ಸಾರಿಗೆ ನಿಗಮವು ಲಾಭಗಳಿಸುತ್ತಿರುವ ಕೆಲವೇ ಬೃಹತ್ ಸಾರ್ವಜನಿಕ ಸಾರಿಗೆ ಉದ್ಯಮಗಳಲ್ಲಿ ಒಂದಾಗಿದೆ. ಇದು ಕಾರ್ಯಾಚರಣೆ ಲಾಭವನ್ನು ಗಳಿಸುತ್ತಿದ್ದು ತನ್ನ ಸ್ವಂತ ವರಮಾನದಿಂದಲೇ ಹೊಸ ಬಸ್‌ಗಳನ್ನು ಖರೀದಿಸುವ ಮತ್ತು ಬಸ್ ನಿಲ್ದಾಣಗಳಲ್ಲಿ ಮೂಲಸೌಕರ್ಯಗಳನ್ನು ಸೃಜಿಸುವ ಸಾಮರ್ಥ್ಯ ಪಡೆದಿದೆ. ಕೆ.ಎಸ್.ಆರ್.ಟಿ.ಸಿ. ಮತ್ತು ಎನ್.ಕೆ.ಆರ್.ಟಿ.ಸಿ. ಗಳೂ ಸಹ ಚೇತರಿಕೆಯ ಹಾದಿಯಲ್ಲಿವೆ. 2004-05ರಲ್ಲಿ ಸಾರಿಗೆ ನಿಗಮಕ್ಕೆ ನೂತನ ಬಸ್‌ಗಳನ್ನು ಸೇರಿಸಿಕೊಳ್ಳಲಾಗಿದೆ. ಈ ನಿಗಮಗಳು ವಿವಿಧ ವರ್ಗಗಳಿಗೆ

ನೀಡುತ್ತಿರುವ ಪಾಸ್‌ಗಳಿಗೆ, ಸಂಬಂಧಿಸಿದಂತೆ ಸರ್ಕಾರದ ಪಾಲಿನ ಸಹಾಯಧನವಾಗಿ ನಾನು 70 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ. ಈ ಸಹಾಯ ಧನಗಳನ್ನು ಅರ್ಹರಿಗೆ ತಲುಪಿಸಲು ಸಾರಿಗೆ ನಿಗಮಗಳು "ಖರೀದಿದಾರರು ಮತ್ತು ಒದಗಿಸುವವರ" ಮಾದರಿಯ ಒಪ್ಪಂದ ಮಾಡಿಕೊಳ್ಳಬೇಕು.

ವಿಜ್ಞಾನ ಮತ್ತು ತಂತ್ರಜ್ಞಾನ

149. ಕರ್ನಾಟಕವು ಮಾಹಿತಿ ತಂತ್ರಜ್ಞಾನದಲ್ಲಿ ಮುಂಚೂಣಿ ರಾಜ್ಯವಾಗಿದೆ. ಭಾರತದ ಮಾಹಿತಿ ತಂತ್ರಜ್ಞಾನ ರಾಜಧಾನಿಯಾದ ಬೆಂಗಳೂರಿನ ಹೊರವಲಯದಲ್ಲಿ ಐಟಿ ಉದ್ಯಮದವರ ಕೋರಿಕೆಯಂತೆ ಸೂಕ್ತ ರಸ್ತೆ ಸಂಪರ್ಕವನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಖಾಸಗಿ ಉದ್ಯಮಿಗಳ ಸಹಭಾಗಿತ್ವದಲ್ಲಿ ನಮ್ಮ ಸರ್ಕಾರವು 40 ಕೋಟಿ ರೂ.ಗಳ ವೆಚ್ಚದಲ್ಲಿ ಹೊರವಲಯದ ರಸ್ತೆಗಳ ಸುಧಾರಣೆ ಕೈಗೆತ್ತಿಕೊಂಡಿದೆ. ಕೇಂದ್ರ ಸರ್ಕಾರವು ಐಟಿ ಕಾರಿಡಾರ್ ಮೇಲ್ಸೇತುವೆ ರಸ್ತೆ ನಿರ್ಮಿಸಲು ಮುಂದೆ ಬಂದಿದೆ. ಈ ಮೇಲ್ಸೇತುವೆ ಕಾಮಗಾರಿ ಸುಸೂತ್ರವಾಗಿ ನಡೆಯಲು ಅನುಕೂಲವಾಗುವಂತೆ ರಾಜ್ಯ ಸರ್ಕಾರವು ಪರ್ಯಾಯ ರಸ್ತೆಯನ್ನು ನಿರ್ಮಿಸಲು ಉದ್ದೇಶಿಸಿದೆ. ಇದರ ಜೊತೆಗೆ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಹೊಸೂರು - ಸರ್ಜಾಪುರ ರಸ್ತೆಯಲ್ಲಿ 460 ಕೋಟಿ ರೂ.ಗಳ ವೆಚ್ಚದಲ್ಲಿ ಹೈಟೆಕ್ ಸಿಟಿಯನ್ನು ನಿರ್ಮಿಸಲು ಯೋಜಿಸುತ್ತಿದೆ.

150. ಜೈವಿಕ ತಂತ್ರಜ್ಞಾನವು ಉದಯಿಸುತ್ತಿರುವ ಉದ್ದಿಮೆಯಾಗಿದೆ. ಈ ವಲಯದ ಅಪೂರ್ವ ಅವಕಾಶವನ್ನು ಕಳೆದುಕೊಳ್ಳಲು ನಾವು ಸಿದ್ಧರಿಲ್ಲ. ಕೇಂದ್ರ ಸರ್ಕಾರವು ಬೆಂಗಳೂರು ನಗರದ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕ್‌ನ್ನು ಸ್ಥಾಪಿಸಲು ತಾತ್ವಿಕವಾಗಿ ಒಪ್ಪಿದೆ. ಇದು ಅಸ್ತಿತ್ವಕ್ಕೆ ಬಂದ ನಂತರ ಬೆಂಗಳೂರು ಜೈವಿಕ ತಂತ್ರಜ್ಞಾನ ಕೈಗಾರಿಕೆಯ ಕೇಂದ್ರಬಿಂದುವಾಗಲಿದೆ. ಈ ಉದ್ದೇಶಕ್ಕೆ 6.5 ಕೋಟಿ ರೂ.ಗಳನ್ನು ಒದಗಿಸಿದೆ.

151. ಗ್ರಾಮೀಣ ಪ್ರದೇಶಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಉತ್ತೇಜನ ನೀಡುವ ವಿಶಾಲ ಉದ್ದೇಶದಿಂದ ಸರ್ಕಾರವು ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಉದ್ದೇಶಕ್ಕಾಗಿ ನಾನು 10 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇನೆ. ಗುಲ್ಬರ್ಗಾದಲ್ಲಿ ವಿಜ್ಞಾನ ಶಿಕ್ಷಣವನ್ನು ಉತ್ತೇಜಿಸಲು ಸೀಮಿತ ಮೂಲಸೌಕರ್ಯಗಳಿವೆ. ಈ ಅಸಮಾನತೆಯನ್ನು ನಿವಾರಿಸಲು ನಾನು ಕಾಲೇಜು ನಿರ್ದೇಶನಾಲಯದ ಮೂಲಕ ಗುಲ್ಬರ್ಗಾ ಪ್ರಾಂತ್ಯದಲ್ಲಿ ವಿಜ್ಞಾನ ಶಿಕ್ಷಣಕ್ಕೆ ಉತ್ತೇಜನ ನೀಡಲು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇನೆ.

ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ

152. ಸರ್ಕಾರವು 1999ನೇ ಇಸವಿಯಿಂದ ಈವರೆಗೆ ಹಮ್ಮಿಕೊಂಡಿರುವ ಹಲವಾರು ಅರಣ್ಯೀಕರಣ ಕಾರ್ಯಕ್ರಮಗಳಿಂದ ರಾಜ್ಯದ ಅರಣ್ಯಪ್ರದೇಶ ವ್ಯಾಪ್ತಿ ವಿಸ್ತಾರಗೊಂಡಿದೆ. ರಾಜ್ಯದ ಬಂಜರು ಭೂಮಿಯಲ್ಲಿ ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮ; ಮರದ ಖಾತಾನೀಡಿಕೆ ಯೋಜನೆ; ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣಾ ಕಾರ್ಯಕ್ರಮ; ವನವಿಕಾಸ ಯೋಜನೆ ಇತ್ಯಾದಿ ಯೋಜನೆಗಳ ಅಡಿಯಲ್ಲಿ ಮರ ಬೆಳೆಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕರ್ನಾಟಕ

ಅರಣ್ಯಗಳು ತುಂಬಾ ಸೂಕ್ಷ್ಮವಾದ ಪರಿಸರ ವೈವಿಧ್ಯವನ್ನು ಹೊಂದಿದ್ದು ಇವುಗಳ ಜೈವಿಕ ವೈವಿಧ್ಯತೆಯನ್ನು ನಾವು ಜೋಪಾನವಾಗಿ ಸಂರಕ್ಷಿಸಬೇಕಾಗಿದೆ. ದೀರ್ಘಕಾಲಿಕ ಫಲಿತಾಂಶವನ್ನು ಪಡೆಯಲು ಈ ಸಂರಕ್ಷಣಾ ಪ್ರಯತ್ನಗಳು ನಿರಂತರವಾಗಿರಬೇಕು. ಈ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು "ಕರ್ನಾಟಕ ನಿರಂತರ ಅರಣ್ಯ ನಿರ್ವಹಣೆ ಮತ್ತು ಜೈವಿಕ ವೈವಿಧ್ಯ ಸಂರಕ್ಷಣಾ ಯೋಜನೆ"ಯನ್ನು ಜಪಾನ್ ಅಂತರಾಷ್ಟ್ರೀಯ ಸಹಕಾರ ಬ್ಯಾಂಕ್‌ನ ನೆರವಿನೊಂದಿಗೆ ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಯ ಅವಧಿ 2005-06ರಿಂದ 2012-13ರವರೆಗೆ ಇದ್ದು, ಯೋಜನಾ ವೆಚ್ಚ 745 ಕೋಟಿ ರೂ.ಗಳಾಗಿವೆ.

153. ಶಾಲೆಗಳಲ್ಲಿ ಇಕೋ ಕ್ಲಬ್‌ಗಳನ್ನು ಸ್ಥಾಪಿಸುವುದು ಈಗಾಗಲೇ ಸರ್ಕಾರದ ನೀತಿಯಾಗಿದೆ. ಇದನ್ನು 2005-06ರ ಸಾಲಿನಲ್ಲಿ ಕಾಲೇಜುಗಳಿಗೂ ವಿಸ್ತರಿಸಲಾಗುವುದು.

ಕಾನೂನು ಸುಧಾರಣೆ

154. ನ್ಯಾಯವನ್ನು ಎಲ್ಲರಿಗೂ ಒದಗಿಸಲು ನಮ್ಮ ಸರ್ಕಾರವು ಬದ್ಧವಾಗಿದೆ. ನಮ್ಮ ಸರ್ಕಾರವು ಕಾನೂನು ಇಲಾಖೆಗೆ ಸಂಬಂಧಿಸಿದಂತೆ ನೀತಿ ಮತ್ತು ಕಾರ್ಯಯೋಜನೆಯ ಪತ್ರವನ್ನು ಹೊರತಂದಿದೆ. ಕಾಯಿದೆ ಪುಸ್ತಕಗಳಲ್ಲಿ ನಶಿಸಿಹೋಗುತ್ತಿರುವ ಕಾನೂನುಗಳನ್ನು ಹೊರತೆಗೆದು ಅವುಗಳ ಪ್ರಸ್ತುತತೆಯನ್ನು ಪರಿಷ್ಕರಿಸಿ, ನ್ಯಾಯಯುತವಾಗಿ ಅನ್ವಯಿಸಿ ಆಡಳಿತವನ್ನು ಹಸನುಗೊಳಿಸಲಾಗುವುದು. ನಮ್ಮ ಸಂವಿಧಾನದ ಪಿತಾಮಹರು ರಚಿಸಿರುವ ಸಮಾನತೆ, ಮುಕ್ತತೆ, ನ್ಯಾಯ ಮತ್ತು ಲಿಂಗ ಸಮಾನತೆಗಳ ಕನಸನ್ನು ನನಸುಗೊಳಿಸಲಾಗುವುದು.

155. ಕಾನೂನು ಇಲಾಖೆಯ ನೂತನ ನೀತಿಪುಸ್ತಿಕೆಯಲ್ಲಿರುವ ಕ್ರಿಯಾ ಯೋಜನೆಯನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು. ಈ ನೀತಿಗೆ ಅನುಗುಣವಾಗಿ ಹಮ್ಮಿಕೊಳ್ಳುವ ನಿರ್ದಿಷ್ಟ ಕಾರ್ಯಕ್ರಮಗಳಿಗೆ 2005-06ನೇ ಸಾಲಿನಲ್ಲಿ 25 ಕೋಟಿ ರೂ.ಗಳವರೆಗೆ ಅನುದಾನವನ್ನು ಒದಗಿಸಲಾಗುವುದು. ಉತ್ತರ ಕರ್ನಾಟಕದಲ್ಲಿ ಸರ್ಕ್ಯೂಟ್ ಬೆಂಚ್‌ನ್ನು ಸ್ಥಾಪಿಸಲು 20 ಕೋಟಿ ರೂ.ಗಳನ್ನು ನಾನು ಮೀಸಲಿಡುತ್ತಿದ್ದೇನೆ. ಅಗತ್ಯವಿದ್ದಲ್ಲಿ, ಇನ್ನೂ ಹೆಚ್ಚಿನ ಅನುದಾನ ಒದಗಿಸಲಾಗುವುದು.

ಕಾರ್ಮಿಕ ಇಲಾಖೆ

156. ಕೈಗಾರಿಕಾ ತರಬೇತಿ ಕೇಂದ್ರಗಳನ್ನು ನಿರ್ದಿಷ್ಟ ವೃತ್ತಿಯ ಪರಿಣತಿ ಕೇಂದ್ರಗಳನ್ನಾಗಿ ರೂಪಿಸುವ ಕೇಂದ್ರ ಸರ್ಕಾರದ ಯೋಜನೆ ಜಾರಿಯಲ್ಲಿದೆ. ಈ ಯೋಜನೆಯಡಿ ಆಯ್ದ ಕೆಲವು ಸರ್ಕಾರಿ ಐಟಿಐಗಳಲ್ಲಿ ಒಂದು ವೃತ್ತಿಯನ್ನು ಮೇಲ್ದರ್ಜೆಗೇರಿಸಿ ಇದಕ್ಕೆ ಅಗತ್ಯವಾದ ಉಪಕರಣಗಳು, ತರಬೇತಿ ಸೌಲಭ್ಯ, ಪಠ್ಯದ ಸುಧಾರಣೆ ಇತ್ಯಾದಿಗಳನ್ನು ಒದಗಿಸಲಾಗುವುದು. ರಾಜ್ಯ ಸರ್ಕಾರವು ಈ ಯೋಜನೆಗೆ ತಗುಲುವ ವೆಚ್ಚದ ಶೇ.25 ರಷ್ಟನ್ನು ಪೂರೈಸಲಿದೆ.

157. ಡಿಜಿಇಟಿ ಅನುಮೋದಿಸಿರುವ ಹೊಸ ವೃತ್ತಿಗಳನ್ನು ಸರ್ಕಾರಿ ಐಟಿಐಗಳಲ್ಲಿ ಹಂತ ಹಂತವಾಗಿ ಅಳವಡಿಸಲಾಗುವುದು. ಈ ಉದ್ದೇಶಕ್ಕಾಗಿ ನಾನು 3.3 ಕೋಟಿ ರೂ.ಗಳನ್ನು 2005-06ರ ಆಯವ್ಯಯದಲ್ಲಿ ಒದಗಿಸುತ್ತಿದ್ದೇನೆ.

ಕಾನೂನು ಮತ್ತು ಸುವ್ಯವಸ್ಥೆ

158. ಕರ್ನಾಟಕದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ತೃಪ್ತಿಕರವಾಗಿದೆ. ಕರ್ನಾಟಕಕ್ಕೆ ಹೂಡಿಕೆದಾರರು ಬರಲು ಇದು ಒಂದು ಕಾರಣ. ಆದಾಗ್ಯೂ ಇತ್ತೀಚಿಗೆ ತೀವ್ರಗಾಮಿಗಳು ಮತ್ತು ವಿಭಜಕ ಶಕ್ತಿಗಳು ಸಾರ್ವಜನಿಕ ಹಿತಕ್ಕೆ ವಿರುದ್ಧವಾಗಿ ಕಾರ್ಯಾಚರಣೆಗಿಳಿದಿದ್ದಾರೆ. ಇದು ಗಂಭೀರ ಸಂಗತಿಯಾಗಿದ್ದು ಇದರ ವಿರುದ್ಧ ಪೊಲೀಸ್ ಶಕ್ತಿಯನ್ನು ನಾವು ಸಜ್ಜುಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯ ಕೌಶಲ್ಯವನ್ನು ವೃದ್ಧಿಸಿ ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಾಗಿದೆ. ಜೈಲುಗಳ ಆಧುನೀಕರಣವನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಇದರಿಂದ ಪೊಲೀಸ್ ಇಲಾಖೆಗೆ ಹಂಚಿಕೆಯನ್ನು ಹೆಚ್ಚಿಸಬೇಕಾಗಿದ್ದು, 919 ಕೋಟಿ ರೂ.ಗಳಿಂದ 964 ಕೋಟಿ ರೂ.ಗಳಿಗೆ ಅನುದಾನವನ್ನು ಹೆಚ್ಚಿಸಲಾಗಿದೆ.

159. ಡಾ|| ನಂಜುಂಡಪ್ಪ ಸಮಿತಿಯ ವರದಿಯಲ್ಲಿ ಗುರುತಿಸಿರುವ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಸಾಧ್ಯವಾದಷ್ಟು ಯೋಜನೆಗಳನ್ನು ಸೇರಿಸಲು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ನಾನು ಮಾಡಿದ್ದೇನೆ. ಅದು ಶಾಲೆಯ ಮಂಜೂರಾತಿ ಇರಬಹುದು, ವಸತಿಶಾಲೆಯ ಆರಂಭವಿರಬಹುದು ಅಥವಾ ಶಿಕ್ಷಣ, ಆರೋಗ್ಯ ಮತ್ತು ಕೈಗಾರಿಕಾ ಸಂಬಂಧಿ ಯೋಜನೆಯಿರಬಹುದು. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಅನುದಾನವನ್ನು ಹೆಚ್ಚಿಸಿದ್ದೇನೆ. ಇವೆಲ್ಲ ಮಾಮೂಲಿ ಯೋಜನಾ ಕಾರ್ಯಕ್ರಮಗಳ ಜೊತೆಗೆ ಹೆಚ್ಚುವರಿಯಾಗಿ ನೀಡಿರುವ ಪ್ರಯತ್ನಗಳಾಗಿವೆ. ಹಿಂದುಳಿದ ತಾಲ್ಲೂಕುಗಳಿಗೆ ಆದ್ಯತೆ ನೀಡುವಂತೆ ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ನಿರ್ದೇಶನ ನೀಡಲಾಗುವುದು. ಪ್ರಾಂತೀಯ ಅಸಮಾನತೆಯನ್ನು ನಿವಾರಿಸಲು ನಾನು ಈ ಮುಂಗಡ ಪತ್ರದಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿದ್ದೇನೆ ಎನ್ನುವ ಭಾವನೆ ನನ್ನದು. ಆದರೂ ನಮ್ಮ ಪ್ರಯತ್ನಗಳಿಂದಾಗಿ ಉತ್ತರ ಕರ್ನಾಟಕದ ಪ್ರದೇಶಗಳಿಗೆ ಹರಿದು ಬಂದಿರುವ ಬಂಡವಾಳ ಹೂಡಿಕೆಯ ಬಗ್ಗೆ ನನಗೆ ಸಂಪೂರ್ಣ ತೃಪ್ತಿ ಇಲ್ಲ. ಪ್ರಾಂತೀಯ ಅಸಮಾನತೆಯನ್ನು ಸರಿಪಡಿಸುವುದು ನಮ್ಮ ಆದ್ಯತೆ. ಈ ನಿಟ್ಟಿನಲ್ಲಿ ನಮ್ಮ ಸಮ್ಮಿಶ್ರ ಸರ್ಕಾರವು ಮುಂಬರುವ ವರ್ಷಗಳಲ್ಲಿ ಯೋಜನಾ ಅಂದಾಜನ್ನು ಹೆಚ್ಚಿಸುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ವಾರ್ಷಿಕ ಯೋಜನೆ 2005-06

160. ನಾನು ವಾರ್ಷಿಕ ಯೋಜನೆಯ ಅಂದಾಜನ್ನು 2004-05ರ (ಪರಿಷ್ಕೃತ ಅಂದಾಜು) 11741.17 ಕೋಟಿ ರೂ.ಗಳಿಂದ 2005-06 ರಲ್ಲಿ (ಮುಂಗಡ ಅಂದಾಜು) 13555.00 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇನೆ. ಇದು ಯೋಜನಾ ಅಂದಾಜು ವೆಚ್ಚದಲ್ಲಿ ಶೇಕಡ 15.45 ರಷ್ಟು ಹೆಚ್ಚಳವಾಗಿದೆ. ಪ್ರಮುಖ ವಲಯವಾರು ಹಂಚಿಕೆಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ನಾನು ಈಗ ತೆರಿಗೆ ಪ್ರಸ್ತಾವಗಳನ್ನು ಮಂಡಿಸುತ್ತೇನೆ

161. ಸಭಾಧ್ಯಕ್ಷರೇ, ಎಲ್ಲಾ ತೆರಿಗೆ ಮೂಲಗಳಿಂದ ನಮ್ಮ ಸಂಪನ್ಮೂಲ ಸಂಗ್ರಹಣೆಯಲ್ಲಿ ಬಹಳಷ್ಟು ಏರಿಕೆಯಾಗಿದೆಯೆಂದು ಘೋಷಿಸಲು ನನಗೆ ಸಂತೋಷವಾಗುತ್ತದೆ. ಎಲ್ಲಾ ಸಂಪನ್ಮೂಲ ಗಳಿಸುವ ಇಲಾಖೆಗಳು ಅವರ ಗುರಿಗಳು ಮತ್ತು ನಮ್ಮ ಅಂದಾಜುಗಳನ್ನು ಮೀರಿ ಸಂಪನ್ಮೂಲಗಳನ್ನು ಸಂಗ್ರಹಿಸಿವೆ. ಈ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ಈ

ಫಲಿತಾಂಶಗಳನ್ನು ತಂದ ಅವರ ಪ್ರಯತ್ನಗಳಿಗೆ ಮತ್ತು ತೀವ್ರ ಶ್ರಮಗಳಿಗೆ ಪ್ರಶಂಶಿಸುವ ಅವಶ್ಯಕತೆ ಇರುತ್ತದೆ. ವಿಷದವಾಗಿ ಹೇಳುವುದಾದರೆ ವಾಣಿಜ್ಯ ತೆರಿಗೆಗಳಲ್ಲಿ ಸಾಧಿಸಿರುವ ಸುಮಾರು ಶೇಕಡ 27 ರ ಏರಿಕೆ ದರ ರಾಷ್ಟ್ರದಲ್ಲಿ ಬಹುಶಃ ಅತೀ ಹೆಚ್ಚಿನದಾಗಿರುತ್ತದೆ. ಇದು ಒಂದು ಅದ್ಭುತ ಸಾಧನೆ. ಇದೇ ರೀತಿ ಅಬ್ಕಾರಿ ಶುಲ್ಕದಿಂದ ಸಂಪನ್ಮೂಲ ಹಾಗೂ ಮುದ್ರಾಂಕ ಮತ್ತು ನೊಂದಣಿ ಮತ್ತು ಸಾರಿಗೆಯಿಂದ ಸಂಪನ್ಮೂಲಗಳು ಗಮನಾರ್ಹ ಏರಿಕೆಗಳನ್ನು ದಾಖಲಿಸಿವೆ. ಈ ಎಲ್ಲಾ ಇಲಾಖೆಗಳನ್ನು ಅವರ ಉತ್ತಮ ಕಾರ್ಯನಿರ್ವಹಣೆಗೆ ನಾನು ಅಭಿನಂದಿಸುತ್ತೇನೆ. 2005-06 ನೇ ಸಾಲಿನಲ್ಲಿ ಕೂಡ ಇವರು ಇದೇ ರೀತಿ ಕಾರ್ಯ ನಿರ್ವಹಿಸುತ್ತಾರೆಂದು ಮತ್ತು ನಮ್ಮ ಸಂಪನ್ಮೂಲ ಸಂಗ್ರಹಣೆ ಅಂದಾಜುಗಳನ್ನು ಸಂಪೂರ್ಣವಾಗಿ ಸಾಧಿಸಲು ಅನುವಾಗುತ್ತಾರೆಂದು ನನಗೆ ಭರವಸೆಯಿದೆ.

ವಾಣಿಜ್ಯ ತೆರಿಗೆಗಳು :

ಮೌಲ್ಯವರ್ಧಿತ ತೆರಿಗೆ:

162. ಸಭಾಧ್ಯಕ್ಷರೇ, 2005ನೇ ಏಪ್ರಿಲ್, 1ರಿಂದ ಪೆಟ್ರೋಲ್, ಡೀಸೆಲ್, ವೈಮಾನಿಕ ಇಂಧನ ಮತ್ತು ಕಬ್ಬು ಇವುಗಳನ್ನು ಹೊರತುಪಡಿಸಿ ಮಿಕ್ಕೆಲ್ಲಾ ಸರಕುಗಳ ಮೇಲೆ ಮಾರಾಟ ತೆರಿಗೆಗೆ ಬದಲಾಗಿ ಮೌಲ್ಯವರ್ಧಿತ ತೆರಿಗೆಯನ್ನು (ವ್ಯಾಟ್) ಜಾರಿಗೊಳಿಸಲು ರಾಜ್ಯ ಸಿದ್ಧವಾಗಿರುತ್ತದೆ. ಮೌಲ್ಯವರ್ಧಿತ ತೆರಿಗೆಯ ಜಾರಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಒಟ್ಟುಗೂಡಿ ಮಾಡುತ್ತಿರುವ ಕಾರ್ಯವಾಗಿರುತ್ತದೆ ಹಾಗೂ ರಾಷ್ಟ್ರದಲ್ಲಾಗುತ್ತಿರುವ ಈ ಚಾರಿತ್ರಿಕ ತೆರಿಗೆ ಸುಧಾರಣೆಗೆ ಕೇಂದ್ರ ಸರ್ಕಾರ ಬೆಂಬಲ ನೀಡುತ್ತಿದೆ. ಮೌಲ್ಯವರ್ಧಿತ ತೆರಿಗೆ ಜಾರಿಯಾದ ಮೊದಲ ವರ್ಷದಲ್ಲಿ ನಮ್ಮ ತೆರಿಗೆ ಸಂಗ್ರಹಣೆಯಲ್ಲಿ ಸುಮಾರು 2160 ಕೋಟಿ ರೂಪಾಯಿಗಳಷ್ಟು ನಷ್ಟ ಉಂಟಾಗುವ ಸಂಭವವಿರುತ್ತದೆ. ಮೊದಲ ವರ್ಷದಲ್ಲಾಗುವ ತೆರಿಗೆ ನಷ್ಟವನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ, ಎರಡನೇ ವರ್ಷದಲ್ಲಿ ಶೇಕಡ 75ರಷ್ಟನ್ನು ಮತ್ತು ಮೂರನೇ ವರ್ಷದಲ್ಲಿ ಶೇಕಡ 50ರಷ್ಟನ್ನು ಅದು ತುಂಬಿಕೊಡಲಿದೆ.

163. ಸಭಾಧ್ಯಕ್ಷರೇ, ಹಲವಾರು ಸಂದರ್ಭಗಳಲ್ಲಿ ನಾನು ಸ್ಪಷ್ಟೀಕರಿಸಿದಂತೆ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯಡಿಯಲ್ಲಿ ಸಾಮಾನ್ಯ ಗ್ರಾಹಕರ ಮೇಲಿನ ತೆರಿಗೆ ಪ್ರಸ್ತುತ ತೆರಿಗೆ ಭಾರಕ್ಕಿಂತ ಕಡಿಮೆಯಾಗುತ್ತದೆ. ಸಾಮಾನ್ಯವಾಗಿ ಬಳಸುವ ಬಹಳಷ್ಟು ವಸ್ತುಗಳ ಮೇಲಿನ ಕಡಿಮೆ ದರದ ತೆರಿಗೆಯಿಂದ, ಹೂಡುವಳಿ ತೆರಿಗೆ ಕಡಿತ ಸೌಲಭ್ಯದಿಂದಾಗಿ ತೆರಿಗೆ ಮೇಲೆ ತೆರಿಗೆ ಬೀಳುವುದನ್ನು ತಪ್ಪಿಸುವುದರಿಂದ ಹಾಗೂ ಶೇಕಡ 12.5ರ ಕಡಿಮೆ ಸಾಮಾನ್ಯ ದರವನ್ನು ಅಳವಡಿಸುವುದರಿಂದ, ಹೆಚ್ಚಿನ ಸರಕುಗಳ ಬೆಲೆಗಳು ಕಡಿಮೆಯಾಗುತ್ತವೆ. ಈ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕೆಗಳು ಸಕಾರಾತ್ಮಕ ಪ್ರತಿಕ್ರಿಯೆ ನೀಡುತ್ತವೆಯೆಂದು ನಾನು ನಂಬಿರುತ್ತೇನೆ.

164. ಮೌಲ್ಯವರ್ಧಿತ ತೆರಿಗೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಿರುವಂತೆ ಕಾರ್ಯಸ್ವರೂಪ ಆಧಾರದ ಮೇಲೆ ವಾಣಿಜ್ಯ ತೆರಿಗೆ ಇಲಾಖೆಯನ್ನು ಸಂಘಟಿಸಲು ನಾನು ಪ್ರಸ್ತಾವಿಸುತ್ತೇನೆ. ರಾಜ್ಯದಲ್ಲಿ ಮೌಲ್ಯವರ್ಧಿತ ತೆರಿಗೆಯನ್ನು ಸಫಲವಾಗಿ ಜಾರಿಗೊಳಿಸಲು ಇಲಾಖೆಯ ಸಿದ್ಧತೆ ಮತ್ತು ಸಾಮರ್ಥ್ಯದಲ್ಲಿ ನನಗೆ ಸಂಪೂರ್ಣ ಭರವಸೆ ಇರುತ್ತದೆ.

ಪರಿಹಾರಗಳು:

165. ವಾಣಿಜ್ಯ ಮತ್ತು ಕೈಗಾರಿಕೆಗಳು ಹಲವಾರು ತೆರಿಗೆ ಪರಿಹಾರಗಳು ಮತ್ತು ರಿಯಾಯಿತಿಗಳ ಬಗ್ಗೆ ಕೋರಿಕೆಗಳನ್ನು ಸಲ್ಲಿಸಿವೆ. ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆ ವಿನ್ಯಾಸ, ರಾಷ್ಟ್ರ ಮಟ್ಟದ ಒಟ್ಟಾರೆ ಅಭಿಪ್ರಾಯದ ಆಧಾರದ ಮೇಲಿರುತ್ತದೆ. ಅಂತಹ ಒಟ್ಟಾರೆ ಅಭಿಪ್ರಾಯದ ಮಿತಿಯೊಳಗೆ ನಮ್ಮ ವಾಣಿಜ್ಯ ಮತ್ತು ಕೈಗಾರಿಕೆಗಳ ಹಿತದೃಷ್ಟಿಯಿಂದಲ್ಲದೆ ಸಾಮಾನ್ಯ ಜನರ ಹಿತದೃಷ್ಟಿಯಿಂದ ಕೆಲವು ಕೋರಿಕೆಗಳನ್ನು ಪರಿಗಣಿಸಲು ನನಗೆ ಸಾಧ್ಯವಾಗಿರುತ್ತದೆ.

166. ಆದರಂತೆ ಪ್ರಸ್ತಾವಿತ ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ,

(1) ಒಂದು ವರ್ಷಕ್ಕೆ ಭತ್ತ ಮತ್ತು ಅಕ್ಕಿ,

(2) ಒಂದು ವರ್ಷಕ್ಕೆ ಗೋಧಿ,

(3) ಒಂದು ವರ್ಷಕ್ಕೆ ಬೇಳೆ ಕಾಳುಗಳು (ದ್ವಿದಳ ಧಾನ್ಯಗಳು),

(4) ಬಿತ್ತನೆ ಬೀಜಗಳು,

(5) ಅವಲಕ್ಕಿ,

(6) ಮಂಡಕ್ಕಿ,

(7) ಹಪ್ಪಳ ಮತ್ತು

(8) ಬ್ರಾಂಡ್ ಇರುವ ಬ್ರೆಡ್ ಮತ್ತು ಬನ್‌ಗಳ ಮೇಲೆ ತೆರಿಗೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ.

167. ಟೀ ಮೇಲಿನ ತೆರಿಗೆಯನ್ನು ಶೇಕಡ 4ಕ್ಕೆ ಇಳಿಸಲು ಕೂಡ ನಾನು ಪ್ರಸ್ತಾವಿಸುತ್ತೇನೆ.

168. ರೆಕ್ಟಿಫೈಡ್ ಸ್ಪಿರಿಟ್ ಮತ್ತು ಮದ್ಯ ಪಾನೀಯಗಳ ಮೇಲಿನ ಮಾರಾಟ ತೆರಿಗೆಯನ್ನು ಅಬಕಾರಿ ಶುಲ್ಕದೊಂದಿಗೆ ವಿಲೀನಗೊಳಿಸಿದ್ದರಿಂದ ತೆರಿಗೆ ಸಂಗ್ರಹಣೆ ಕಾರ್ಯ ಪರಿಣಾಮಕಾರಿಯಾಗಿರುತ್ತದೆ. ಇದನ್ನು ಪರಿಗಣಿಸಿ ಕಾಕಂಬಿಯನ್ನೂ ಕೂಡ ಇದೇ ರೀತಿಯ ಒಂದು ವ್ಯವಸ್ಥೆಯಡಿಯಲ್ಲಿ ತರಲು ಮತ್ತು ಮೌಲ್ಯ ವರ್ಧಿತ ತೆರಿಗೆಯಡಿಯಲ್ಲಿ ಕಾಕಂಬಿಯನ್ನು ತೆರಿಗೆಯಿಂದ ವಿನಾಯಿತಿಗೊಳಿಸಲು ಹಾಗೂ ಕಾಕಂಬಿಯಿಂದ ತಯಾರಿಸಲಾದ ರೆಕ್ಟಿಫೈಡ್ ಸ್ಪಿರಿಟ್ ಮೇಲೆ ಅದಕ್ಕೆ ಮಾರಾಟ ತೆರಿಗೆಗೆ ಸಮನಾದ ಅಬಕಾರಿ ಶುಲ್ಕ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

ಸುಧಾರಣಾ ಕ್ರಮಗಳು:

169. ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿಯಲ್ಲಿ ಕೆಲವು ಸುಧಾರಣಾ ಕ್ರಮಗಳನ್ನು ತರಲು ನಾನು ಪ್ರಸ್ತಾವಿಸುತ್ತೇನೆ. ಈ ಕ್ರಮಗಳ ವಿವರಗಳು ಅನುಬಂಧ 2 ರಲ್ಲಿ ಇರುತ್ತವೆ.

170. ಕೆಲವು ತೆರಿಗೆ ಉತ್ತೇಜನಗಳ ಪ್ರಯೋಜನ ಪಡೆಯುತ್ತಿರುವ ಕೆಲವು ಕೈಗಾರಿಕಾ ಘಟಕಗಳು ಈ ರಿಯಾಯಿತಿಗಳನ್ನು ಮೌಲ್ಯವರ್ಧಿತ ತೆರಿಗೆಯಡಿಯಲ್ಲಿಯೂ ಮುಂದುವರಿಸಲು ಕೋರಿರುತ್ತಾರೆ. ರಾಷ್ಟ್ರ ಮಟ್ಟದ ಒಟ್ಟಾಭಿಪ್ರಾಯದಂತೆ, ಮೌಲ್ಯ ಸರಪಣಿ (ವ್ಯಾಲ್ಯೂ ಚೇನ್)

ಮುರಿದು ಹೋಗದಿರುವಂತೆ ಹಾಗೂ ಹೆಚ್ಚುವರಿ ತೆರಿಗೆ ಆದಾಯ ನಷ್ಟವಾಗದಂತೆ ಎಚ್ಚರ ವಹಿಸಿ ಸೂಕ್ತ ಮಾರ್ಪಾಟುಗಳೊಂದಿಗೆ ಅವುಗಳನ್ನು ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಮುಂದುವರಿಸಲು ನಾನು ಪ್ರಸ್ತಾವಿಸುತ್ತೇನೆ.

ಮಾರಾಟ ತೆರಿಗೆ:

ಪರಿಹಾರಗಳು:

171. ಕರ ಸಮಾಧಾನ ಯೋಜನೆ: ಈ ಹಿಂದೆ ಮಾರಾಟ ತೆರಿಗೆ ಬಾಕಿಯನ್ನು ಕಡಿಮೆ ಮಾಡಲು ಹಲವಾರು ತೆರಿಗೆ ಕ್ಷಮಾ ಯೋಜನೆಗಳನ್ನು ಘೋಷಿಸಲಾಗಿದ್ದು ಅವುಗಳಿಗೆ ಸೀಮಿತ ಸಫಲತೆ ದೊರಕಿದೆ. 2005ನೇ ಏಪ್ರಿಲ್‌ನಿಂದ ಮೌಲ್ಯವರ್ಧಿತ ತೆರಿಗೆ ಜಾರಿಯಾಗುತ್ತಿರುವುದನ್ನು ಮತ್ತು ನಾವು ಹೊಸ ವ್ಯವಸ್ಥೆಗೆ ಹೋಗುವಾಗ ಮಾರಾಟ ತೆರಿಗೆ ಬಾಕಿಯನ್ನು ಕಡಿಮೆಗೊಳಿಸುವ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು, ತಮ್ಮ ಬಾಕಿಯನ್ನು ಕಟ್ಟಲು ಇಚ್ಛಿಸುವವರಿಗೆ ಒಂದು ಅಂತಿಮ ಅವಕಾಶವಾಗಿ ನಾನು ಮುಂದಿನ ಯೋಜನೆಯನ್ನು ಘೋಷಿಸಲು ಪ್ರಸ್ತಾವಿಸುತ್ತೇನೆ.

172. ಯಾವುದೇ ವ್ಯಾಪಾರಿ 2005ನೇ ಮೇ, 30ರಂದು ಅಥವಾ ಅದರೊಳಗಾಗಿ, 2004ನೇ ಮಾರ್ಚ್ 31ರ ವರೆಗಿನ ಯಾವುದೇ ವರ್ಷಕ್ಕೆ ಸಂಬಂಧಿಸಿದಂತೆ ಘೋಷಿಸಿದ ಅಥವಾ ನಿರ್ಧರಿಸಲಾದ ಪೂರ್ಣ ತೆರಿಗೆಯ ಜೊತೆಗೆ ವಿಧಿಸಿದ ಅಥವಾ ವಿಧಿಸಬಹುದಾದ ದಂಡಗಳು ಮತ್ತು ಬಡ್ಡಿಯನ್ನು ಪಾವತಿಸುವುದಲ್ಲದೇ, ತೆರಿಗೆ ನಿರ್ಧರಣೆ ಅಥವಾ ದಂಡ ವಿಧಿಸಿದ ಬಗ್ಗೆ ಮಾಡಲಾದ ಯಾವುದೇ ಮೇಲ್ಮನವಿಯನ್ನು ಹಿಂದಕ್ಕೆ ಪಡೆದಲ್ಲಿ, ವಿಧಿಸಿದ ಅಥವಾ ವಿಧಿಸಬಹುದಾದ ಬಾಕಿ ಶೇಕಡ 90ರಷ್ಟರ ದಂಡಗಳನ್ನು ಮತ್ತು ಬಡ್ಡಿಯನ್ನು ವಜಾ ಮಾಡಲಾಗುವುದು.

173. ಯಾವುದೇ ವ್ಯಾಪಾರಿ 2005ನೇ ಮೇ, 30ರಂದು ಅಥವಾ ಅದರೊಳಗಾಗಿ, 2004ನೇ ಮಾರ್ಚ್ 31ರ ವರೆಗಿನ ಯಾವುದೇ ವರ್ಷಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ದಂಡಗಳು ಮತ್ತು ಬಡ್ಡಿಯನ್ನು ಪಾವತಿಸುವುದಲ್ಲದೇ, ದಂಡ ವಿಧಿಸಿದ ಬಗ್ಗೆ ಮಾಡಲಾದ ಯಾವುದೇ ಮೇಲ್ಮನವಿಯನ್ನು ಹಿಂದಕ್ಕೆ ಪಡೆದಲ್ಲಿ, ವಿಧಿಸಿದ ಅಥವಾ ವಿಧಿಸಬಹುದಾದ ಬಾಕಿ ಶೇಕಡ 90ರಷ್ಟರ ದಂಡಗಳನ್ನು ಮತ್ತು ಬಡ್ಡಿಯನ್ನು ವಜಾ ಮಾಡಲಾಗುವುದು.

174. (1) 2004 ನೇ ಆಗಸ್ಟ್‌ನಿಂದ ಪೂರ್ವಾನ್ವಯವಾಗುವಂತೆ ಚಲನಚಿತ್ರಗಳ ಲೀಸಿಂಗ್ ಮೇಲಿನ ತೆರಿಗೆಯನ್ನು ವಿನಾಯಿತಿಗೊಳಿಸಲು, ಮತ್ತು

(2) ಮೀನುಗಾರರಿಗೆ ಮಾರಾಟ ಮಾಡುವ ಡೀಸೆಲ್ ಮೇಲಿನ ಮಾರಾಟ ತೆರಿಗೆ ವಿನಾಯಿತಿಯನ್ನು ಮುಂದುವರಿಸಲು ಹಾಗೂ 2005-06ನೇ ಸಾಲಿಗೆ ಮಾರಾಟ ತೆರಿಗೆ ವಿನಾಯಿತಿಗೆ ಅರ್ಹವಿರುವ ಡೀಸೆಲ್ ಪ್ರಮಾಣವನ್ನು 50,000 ಕಿಲೋ ಲೀಟರುಗಳಿಂದ 55,000 ಕಿಲೋ ಲೀಟರುಗಳಿಗೆ ಏರಿಸಲು, ನಾನು ಪ್ರಸ್ತಾವಿಸುತ್ತೇನೆ.

175. ಅನುಬಂಧ 2 ರಲ್ಲಿರುವಂತೆ ಕೆಲವು ಸುಧಾರಣಾ ಕ್ರಮಗಳನ್ನು ತರಲು ನಾನು ಪ್ರಸ್ತಾವಿಸುತ್ತೇನೆ.

ಕೇಂದ್ರ ಮಾರಾಟ ತೆರಿಗೆ:

ಸುಧಾರಣಾ ಕ್ರಮಗಳು:

176. ನಮ್ಮ ರಾಜ್ಯದಿಂದ ಅಂತರ್ ರಾಜ್ಯ ಮಾರಾಟ ಉತ್ತೇಜಿಸಲು ದ್ವಿಚಕ್ರ ವಾಹನಗಳ, ತ್ರಿಚಕ್ರ ವಾಹನಗಳ ಮತ್ತು ಪ್ಲಾಸ್ಟಿಕ್ ಹೊಲಿಯುವ ನೂಲಿನ ಅಂತರ ರಾಜ್ಯ ಮಾರಾಟದ ಮೇಲಿನ ಕೇಂದ್ರ ಮಾರಾಟ ತೆರಿಗೆಯನ್ನು ಶೇಕಡ 1ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

ವಿಶೇಷ ಪ್ರವೇಶ ತೆರಿಗೆ:

ಸುಧಾರಣಾ ಕ್ರಮಗಳು:

177. 2005 ನೇ ಏಪ್ರಿಲ್‌ನಿಂದ ಮೌಲ್ಯವರ್ಧಿತ ತೆರಿಗೆ ಜಾರಿಯಾಗುವುದನ್ನು ಪರಿಗಣಿಸಿ ಪ್ರಸ್ತುತ ಮಾರಾಟ ತೆರಿಗೆಗೆ ಉಲ್ಲೇಖವಿರುವ ವಿಶೇಷ ಪ್ರವೇಶ ತೆರಿಗೆ ಕಾಯ್ದೆಯ ಸಂಬಂಧಪಟ್ಟ ಉಪಬಂಧಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ನಾನು ಪ್ರಸ್ತಾವಿಸುತ್ತೇನೆ.

178. ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳನ್ನು ತೆರಿಗೆ ಪಾವತಿಯಿಂದ ಸ್ಪಷ್ಟವಾಗಿ ವಿನಾಯಿತಿಗೊಳಿಸಲು ಆಮದುದಾರನಿಗೆ ಸಂಬಂಧಿಸಿದ ಪರಿಭಾಷೆಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ನಾನು ಪ್ರಸ್ತಾವಿಸುತ್ತೇನೆ.

179. ವ್ಯಾಪಾರ ಪಲ್ಲಟವನ್ನು ತಡೆಯಲು ಪ್ಲಾಸ್ಟಿಕ್ ವೋವನ್ ಸ್ಯಾಕ್‌ಗಳು, ಕಾಗದ ಮತ್ತು ಲೇಖನ ಸಾಮಗ್ರಿಗಳ ಮೇಲೆ ವಿಶೇಷ ಪ್ರವೇಶ ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ. ಇದಲ್ಲದೆ 2005ನೇ ಏಪ್ರಿಲ್‌ನಿಂದ ಮೌಲ್ಯವರ್ಧಿತ ತೆರಿಗೆ ಜಾರಿ ಮಾಡದ ನೆರೆ ರಾಜ್ಯಗಳಿಂದಾಗಿ ವ್ಯಾಪಾರ ಪಲ್ಲಟವಾಗಬಹುದಾದ ಎಲ್ಲಾ ಸರಕುಗಳ ಮೇಲೆ ವಿಶೇಷ ಪ್ರವೇಶ ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

ಪರಿಹಾರಗಳು:

180. (1) ಪ್ರದರ್ಶನ, ನಿದರ್ಶನ, ಆಚರಣೆ, ಮೇಳ, ಗೋಷ್ಠಿ ಅಥವಾ ಅಂತಹದೇ ಸಂದರ್ಭಗಳಿಗೆ, ಮತ್ತು

(2) ಹೊರ ದೇಶದಿಂದ ಪುಕ್ಕಟೆಯಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳು, ಮತ್ತು

(3) ವರ್ಗಾವಣೆ ಮೇಲಿರುವ ಅಥವಾ ಗೃಹ ಬದಲಾಯಿಸುತ್ತಿರುವ ವ್ಯಕ್ತಿಗಳು, ರಾಜ್ಯದೊಳಗೆ ತರುವ ಅಧಿಸೂಚಿತ ಸರಕುಗಳ ಮೇಲೆ ತೆರಿಗೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ.

ಪ್ರವೇಶ ತೆರಿಗೆ:

ಸುಧಾರಣಾ ಕ್ರಮಗಳು:

181. ಪ್ರವೇಶ ತೆರಿಗೆ ಕಾಯ್ದೆಯಡಿಯಲ್ಲಿ ಕೆಲವು ಸುಧಾರಣಾ ಕ್ರಮಗಳನ್ನು ತರಲು ನಾನು ಪ್ರಸ್ತಾವಿಸುತ್ತೇನೆ. ಈ ಕ್ರಮಗಳ ವಿವರಗಳು ಅನುಬಂಧ 3 ರಲ್ಲಿ ಇರುತ್ತವೆ.

ಜೂಜು ತೆರಿಗೆ:

ಪರಿಹಾರಗಳು:

182. 2004ನೇ ಜುಲೈನಲ್ಲಿ ಮಂಡಿಸಿದ ನನ್ನ ಹಿಂದಿನ ಆಯವ್ಯಯದಲ್ಲಿ 2004-05ನೇ ಸಾಲಿಗೆ ಕುದುರೆ ಪಂದ್ಯಗಳ ಬಗ್ಗೆ ಪಾವತಿಸಬೇಕಾದ ರಾಜಿ ಮೊತ್ತಗಳನ್ನು ಪಣದ ಮೊತ್ತದ ಶೇಕಡ 4 ಎಂಬುದಾಗಿ ನಿಗದಿಪಡಿಸಲು ನಾನು ಪ್ರಸ್ತಾವಿಸಿದ್ದೆ. ಸನ್ನದುದಾರರು ಅಂಥಹ ಪರಿಷ್ಕರಣೆಯನ್ನು ನಂತರದ ಅವಧಿಗೆ ಜಾರಿ ಮಾಡಲು ಕೋರಿರುತ್ತಾರೆ. ಅವರ ಕೋರಿಕೆಯನ್ನು ಪರಿಗಣಿಸಿ ರಾಜಿ ಮೊತ್ತದ ಪರಿಷ್ಕರಣೆಯನ್ನು 2004ನೇ ಆಗಸ್ಟ್‌ನಿಂದ ಜಾರಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

ವೃತ್ತಿ ತೆರಿಗೆ:

ಸುಧಾರಣಾ ಕ್ರಮಗಳು:

183. ತೆರಿಗೆ ಪಾವತಿಸಲು ಭಾಧ್ಯರಾದ ಸ್ವಯಂ ವೃತ್ತಿ ಕಸುಬುದಾರರು ವಿಳಂಬವಾಗಿ ದಾಖಲಾದಲ್ಲಿ ಆ ಬಗ್ಗೆ ಬಡ್ಡಿ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

ಪರಿಹಾರಗಳು:

184. ಹೊಸದಾಗಿ ವೃತ್ತಿ ಆರಂಭಿಸುತ್ತಿರುವವರಿಗೆ ತೆರಿಗೆ ರಿಯಾಯಿತಿ ಕೋರಿ ಕಾನೂನು ವೃತ್ತಿಗಾರರು ಮಾಡಿದ ಕೋರಿಕೆಯನ್ನು ಪರಿಗಣಿಸಿ ಅವರುಗಳ ವಿನಾಯಿತಿ ಮಿತಿಯನ್ನು 10 ವರ್ಷಗಳಿಗೆ ಏರಿಸಲು ಮತ್ತು ತೆರಿಗೆ ದರಗಳನ್ನು ಅನುಬಂಧ 4 ರಲ್ಲಿ ತೋರಿಸಿರುವಂತೆ ಪರಿಷ್ಕರಿಸಲು ನಾನು ಪ್ರಸ್ತಾವಿಸುತ್ತೇನೆ.

ಲಾಟರಿ ತೆರಿಗೆ:

ಸುಧಾರಣಾ ಕ್ರಮಗಳು:

185. ತಾವು ನೇಮಕ ಮಾಡಲ್ಪಟ್ಟ ಪ್ರವರ್ತಕರಲ್ಲವೆಂದು ತೆರಿಗೆ ವಿಧಿಯನ್ನು ಪ್ರಶ್ನಿಸುತ್ತಿರುವ ಬೇರೆ ರಾಜ್ಯಗಳ ಪ್ರವರ್ತಕರ ಮೇಲೆ ತೆರಿಗೆ ವಿಧಿಸಲು ಪೂರ್ವಾನ್ವಯವಾಗುವಂತೆ ಸೂಕ್ತ ತಿದ್ದುಪಡಿಯನ್ನು ತರಲು ನಾನು ಪ್ರಸ್ತಾವಿಸುತ್ತೇನೆ.

ಮನರಂಜನಾ ತೆರಿಗೆ:

ಪರಿಹಾರಗಳು:

186. ಚಲನಚಿತ್ರೋದ್ಯಮ, ರಾಜಿ ತೆರಿಗೆ ದರಗಳಲ್ಲಿ ಮತ್ತು ಪ್ರದರ್ಶನ ತೆರಿಗೆ ದರಗಳಲ್ಲಿ ರಿಯಾಯಿತಿ ಕೋರಿರುತ್ತಾರೆ. ಅವರ ಕೋರಿಕೆಯನ್ನು ಪರಿಗಣಿಸಿ ಅನುಬಂಧ-5 ರಲ್ಲಿ ತೋರಿಸಿರುವಂತೆ ರಾಜಿ ತೆರಿಗೆ ಮೊತ್ತಗಳನ್ನು ಮತ್ತು ಪ್ರದರ್ಶನ ತೆರಿಗೆ ದರಗಳನ್ನು ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

187. ಕಷ್ಟದಲ್ಲಿರುವ ಸರ್ಕಸ್ ಕಂಪನಿಗಳನ್ನು ಉತ್ತೇಜಿಸಲು, ಅವುಗಳನ್ನು ಮನರಂಜನಾ ತೆರಿಗೆಯಿಂದ ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

ಸುಧಾರಣಾ ಕ್ರಮಗಳು:

188. (1) ತಪ್ಪಾಗಿ ಸಲ್ಲಿಸಿದ ನಮೂನೆಗಳ ಬಗ್ಗೆ ದಂಡ ವಿಧಿಸುವಲ್ಲಿ ಈಗಿರುವ ವಿವೇಚನೆಯನ್ನು ತೆಗೆದುಹಾಕಲು ಮತ್ತು ನಿಶ್ಚಿತ ದಂಡವನ್ನು ನಿಗದಿ ಮಾಡಲು ಹಾಗೂ,

(2) ಆರ್ಥಿಕ ಸಂಕಷ್ಟದಲ್ಲಿರುವ ಪ್ರಕರಣಗಳಲ್ಲಿ ತೆರಿಗೆ ಬಾಕಿಯನ್ನು ಕಂತುಗಳಲ್ಲಿ ಪಾವತಿ ಮಾಡಲು ಅನುಮತಿ ನೀಡಲು ಸೂಕ್ತ ನಿಯಮಗಳನ್ನು ರೂಪಿಸಲು ನಾನು ಪ್ರಸ್ತಾವಿಸುತ್ತೇನೆ.

189. ತತ್ಸಂಬಂಧ ತಿದ್ದುಪಡಿಗಳು: ಮೇಲೆ ಪ್ರಸ್ತಾವಿಸಿದ ಕ್ರಮಗಳನ್ನು ಜಾರಿಗೊಳಿಸಲು ಸಂಬಂಧಪಟ್ಟ ತೆರಿಗೆ ಅಧಿನಿಯಮಗಳಿಗೆ ತಿದ್ದುಪಡಿ ಅವಶ್ಯಕತೆ ಇರುತ್ತದೆ. ಸದರಿ ತಿದ್ದುಪಡಿಗಳಲ್ಲದೇ ಸುಧಾರಣಾ ಕ್ರಮವಾಗಿ ಇತರೆ ತಿದ್ದುಪಡಿಗಳನ್ನು ಮಂಡಿಸಲಾಗುವುದು.

ಅಬಕಾರಿ

190. 2004-05ನೇ ಆಯವ್ಯಯದಲ್ಲಿ ಸಾರಾಯಿ ಮಾರಾಟದಲ್ಲಿ ಪ್ರಮುಖವಾದ ಸುಧಾರಣೆಗಳನ್ನು ಹಾಗೂ ಆಮೂಲಾಗ್ರ ಬದಲಾವಣೆಗಳನ್ನು ತರಲು ಪ್ರಸ್ತಾಪಿಸಿದ್ದೆ. ಐ.ಎಂ.ಎಲ್. ವಲಯದಲ್ಲಿ ಯಾವುದೇ ಹೆಚ್ಚಿನ ತೆರಿಗೆಗಳನ್ನು ಪ್ರಸ್ತಾವಿಸಿರಲಿಲ್ಲ. ನಾವು ಸರ್ಕಾರದ ಬೊಕ್ಕಸಕ್ಕೆ ರೂ.300 ಕೋಟಿ ಅಧಿಕ ಆದಾಯವನ್ನು ನಿರೀಕ್ಷಿಸಿದ್ದೆವು. ಈಗ, ಕಳೆದ ವರ್ಷದ ರಾಜಸ್ವಕ್ಕೆ ಹೋಲಿಸಿದಾಗ, 2004-05ನೇ ಅಬಕಾರಿ ವರ್ಷದಲ್ಲಿ ನಾವು ರೂ.400 ಕೋಟಿಗೂ ಹೆಚ್ಚು ಆದಾಯವನ್ನು ಪಡೆಯಲಿದ್ದೇವೆ ಎಂದು ತಿಳಿಸಲು ಹರ್ಷಿಸುತ್ತೇನೆ.

191. ಈ ಆಯವ್ಯಯದಲ್ಲಿ, ಚಾಲ್ತಿಯಲ್ಲಿರುವ ತೆರಿಗೆ ವ್ಯವಸ್ಥೆಯನ್ನು ಸರಳೀಕರಣಗೊಳಿಸುವುದಕ್ಕಾಗಿ ಕೆಲವು ಬದಲಾವಣೆಗಳನ್ನು ಹೊರತುಪಡಿಸಿ ಅಬಕಾರಿ ನೀತಿಯಲ್ಲಿ ಯಾವುದೇ ಪ್ರಮುಖವಾದ ಬದಲಾವಣೆಯನ್ನಾಗಲೀ ಅಥವಾ ಹೆಚ್ಚಿನ ತೆರಿಗೆಯನ್ನು ವಿಧಿಸುವುದನ್ನಾಗಲೀ ನಾನು ಪ್ರಸ್ತಾಪ ಮಾಡುತ್ತಿಲ್ಲ.

192. ವಾಸ್ತವಿಕತೆಗೆ ಮತ್ತು ಮಾರುಕಟ್ಟೆಯ ಸ್ಥಿತಿಗೆ ಹೆಚ್ಚು ಅನುಗುಣವಾಗಿರುವಂತೆ, ಸಾರಾಯಿಯ ಜಾರಿಯಲ್ಲಿರುವ ಬಲ್ಕ್ ಲೀಟರಿಗೆ 95 ರೂ.ಗಳ ಗರಿಷ್ಟ ಮಾರಾಟದ ಬೆಲೆಯನ್ನು ಬಲ್ಕ್ ಲೀಟರಿಗೆ 115 ರೂ.ಗಳಿಗೆ ಮೀರದಂತೆ ಇರುವಂತೆ ನಾನು ಪ್ರಸ್ತಾವಿಸುತ್ತೇನೆ.

193. ಸ್ವಂತ ಬಳಕೆಗೆ ಉಪಯೋಗಿಸುವ (ಕ್ಯಾಪ್ಟಿವ್) ಮತ್ತು ಬೇರೆಯವರಿಗೆ ಮಾರಾಟ ಮಾಡುವ (ನಾನ್-ಕ್ಯಾಪ್ಟಿವ್) ಡಿಸ್ಟಿಲರಿಗಳ ಮಧ್ಯೆ ಈಗಿರುವ ತಾರತಮ್ಯವನ್ನು ನಿವಾರಿಸುವ ದೃಷ್ಟಿಯಿಂದ, ರೆಕ್ಟಿಫೈಡ್ ಸ್ಪಿರಿಟ್ ಮೇಲೆ ಹಾಲಿ ಅನುಕ್ರಮವಾಗಿ ವಿಧಿಸುತ್ತಿರುವ ಬಲ್ಕ್ ಲೀಟರಿಗೆ 4/- ರೂಪಾಯಿಗಳು ಹಾಗೂ 6-50 ರೂಪಾಯಿಗಳಿಗೆ ಬದಲಾಗಿ ಬಲ್ಕ್ ಲೀಟರಿಗೆ 6/- ರೂಪಾಯಿಗಳ ಸಮಾನ ಶುಲ್ಕವನ್ನು ವಿಧಿಸಲು ಪ್ರಸ್ತಾವಿಸುತ್ತೇನೆ.

194. ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣಕ್ಕಾಗಿ, ಕರ್ನಾಟಕದಿಂದ ಹೊರಗಡೆಗೆ ಡ್ರಾಟ್ (ಬಲ್ಕ್) ಬಿಯರನ್ನು ರಫ್ತು ಮಾಡಲು ಅನುಮತಿ ನೀಡಲು ಪ್ರಸ್ತಾವಿಸುತ್ತೇನೆ.

195. ಅಬಕಾರಿ ರಾಜಸ್ವದ ಬಾಕಿಯು ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಆದುದರಿಂದ ಕರ ಸಮಾಧಾನ ಯೋಜನೆಯನ್ನು ವಿಸ್ತರಿಸಿ, ರಾಜ್ಯದಲ್ಲಿ ನೀರಾ ಚಳುವಳಿಯ ಸಂದರ್ಭದಲ್ಲಿ ಸರ್ಕಾರಕ್ಕೆ ಉಂಟಾದಂತಹ ನಷ್ಟ ಹಾಗೂ ಬಾಕಿಯನ್ನು ಸಹಾ ಒಳಗೊಳ್ಳುವಂತೆ ಅಬಕಾರಿ ಬಾಕಿಯನ್ನು ತೀರಿಸಲು ಇನ್ನೊಂದು ಅವಕಾಶವನ್ನು ಕಲ್ಪಿಸಲು ಇಚ್ಛಿಸುತ್ತೇನೆ.

196. 2005-06ನೇ ವರ್ಷದಲ್ಲಿ ತೆರಿಗೆದಾರರ ಮೇಲೆ ಯಾವುದೇ ಹೆಚ್ಚಿನ ಹೊರೆ ಇಲ್ಲದೆ ರೂ.3000 ಕೋಟಿಗೂ ಹೆಚ್ಚು ಅಬಕಾರಿ ರಾಜಸ್ವವನ್ನು ಸಂಗ್ರಹಿಸುವ ಬಗ್ಗೆ ವಿಶ್ವಾಸವನ್ನು ಹೊಂದಿದ್ದೇವೆ. ಅಬಕಾರಿ ಅಪರಾಧಗಳಿಗೆ ವಿಧಿಸುವ ದಂಡನೆಯನ್ನು ಮತ್ತಷ್ಟು ಕಠಿಣಗೊಳಿಸುವುದರ ಮೂಲಕ ಜಾರಿ ಕ್ರಮಗಳನ್ನು ಹೆಚ್ಚು ಬಿಗಿಗೊಳಿಸಲು ಪ್ರಸ್ತಾವಿಸುತ್ತೇನೆ. ಅದರಂತೆ, ಅಬಕಾರಿ ಅಪರಾಧಗಳನ್ನು ಜಾಮೀನಿನ ಮೇಲೆ ಬಿಡಲಾಗದ ಅಪರಾಧಗಳನ್ನಾಗಿ ಮಾಡಲು ಮತ್ತು ದಂಡನೆಯನ್ನು ಹೆಚ್ಚಿಸಲು ಪ್ರಸ್ತಾವಿಸುತ್ತೇನೆ. ಕರ್ನಾಟಕ ಅಬಕಾರಿ ಕಾಯ್ದೆಗೆ ತಿದ್ದುಪಡಿಯನ್ನು ಮಂಡಿಸಲಾಗುತ್ತದೆ. ಅಬಕಾರಿ ಇಲಾಖೆಯಲ್ಲಿ ಆಡಳಿತದಲ್ಲಿ ದಕ್ಷತೆ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಜಾರಿ ಕ್ರಮಗಳ ಬಗ್ಗೆ ಹೆಚ್ಚಿನ ಒತ್ತನ್ನು ನೀಡಿ ಆಡಳಿತ ವ್ಯವಸ್ಥೆಯನ್ನು ಪುನರ್ ರೂಪಿಸಲಾಗುವುದು.

ನೋಂದಣಿ ಮತ್ತು ಮುದ್ರಾಂಕ

197. ಪ್ರಸಕ್ತ ಸಾಲಿನಲ್ಲಿ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕ ದರವು ಈಗಿರುವಂತೆಯೇ ಮುಂದುವರಿಯುತ್ತದೆ. ಆದರೆ ಸ್ಥಿರಾಸ್ತಿಗಳ ಮೌಲ್ಯವು ನಗರ ಪ್ರದೇಶಗಳಲ್ಲಿ ಏರು ಮುಖವಾಗುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಹಾಗೂ ಇತರೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸ್ಥಿರಾಸ್ತಿಯ ಮಾರ್ಗಸೂಚಿ ಬೆಲೆಯನ್ನು ಪರಿಷ್ಕರಿಸಲಾಗುತ್ತದೆ.

198. ರಾಜ್ಯದ ರೈತಾಪಿ ವರ್ಗದವರು ಕೃಷಿ ಸಾಲ ತೆಗೆದುಕೊಳ್ಳುವಾಗ ಪಾವತಿಸುವ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕಕ್ಕೆ ಪೂರ್ಣ ಪ್ರಮಾಣದಲ್ಲಿ ವಿನಾಯ್ತಿ ನೀಡಲಾಗಿದೆ. ಇದಲ್ಲದೆ ಕೃಷಿ ಸಾಲಕ್ಕಾಗಿ ತೆಗೆದುಕೊಳ್ಳುವ ಋಣಭಾರ ಪತ್ರಗಳಿಗೆ ಸಾಮಾನ್ಯ ದರದ ಬದಲಾಗಿ ಗರಿಷ್ಠ ರೂ. 50 ಮಾತ್ರ ವಿಧಿಸಲಾಗುತ್ತದೆ (ಅನುಬಂಧ-6).

ಮೋಟಾರು ವಾಹನ ತೆರಿಗೆ

199. ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ಪ್ರಸ್ತುತ ಸಾಲಿನಲ್ಲಿ ಗಣಕೀಕರಣಗೊಳಿಸಲಾಗುವುದು. ಡ್ರೈವಿಂಗ್ ಲೈಸೆನ್ಸ್ ಮತ್ತು ವಾಹನ ನೋಂದಣಿ ಪತ್ರಗಳನ್ನು ಸ್ಮಾರ್ಟ್ ಕಾರ್ಡ್ ರೂಪದಲ್ಲಿ ಹಾಗೂ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು ಸಹ ಜಾರಿಗೆ ತರಲಾಗುವುದು. ಈ ಕಾರ್ಯಕ್ರಮಗಳನ್ನು ಖಾಸಗಿಯವರ ಸಹಭಾಗಿತ್ವದೊಂದಿಗೆ ಜಾರಿಗೊಳಿಸಲಾಗುವುದು ಹಾಗೂ ಈ ವೆಚ್ಚವನ್ನು ಬಳಕೆದಾರರ ಶುಲ್ಕ ವಿಧಿಸುವ ಮೂಲಕ ಭರಿಸಲಾಗುವುದು.

200. ಪ್ರವಾಸೋದ್ಯಮವನ್ನು ಉತ್ತೇಜಿಸಲು ಅಖಿಲ ಭಾರತ ಪ್ರವಾಸಿ ರಹದಾರಿ ಹೊಂದಿರುವ ಹವಾನಿಯಂತ್ರಿತ ಇಂಟಿಗ್ರಲ್ -ಮಾನೊಕೋಕ್ ಬಸ್ಸುಗಳಿಗೆ ಪ್ರತ್ಯೇಕ ತೆರಿಗೆ ವಿಧಿಸಲು ಪ್ರಸ್ತಾಪಿಸುತ್ತೇನೆ. ಅಲ್ಲದೆ, ಮಲ್ಟಿ-ಆಕ್ಸಲ್ ಮತ್ತು ಆರ್ಟಿಕ್ಯುಲೇಟೆಡ್ ಸರಕು ಸಾಗಣೆ ವಾಹನಗಳಿಗೆ ತೆರಿಗೆಯನ್ನು ಹೆಚ್ಚಿಸಲು ಹಾಗೂ 50,000/- ರೂ. ಮೌಲ್ಯ ಮೀರಿದ ದ್ವಿಚಕ್ರ ವಾಹನಗಳಿಗೆ ಜೀವಾವಧಿ ತೆರಿಗೆಯನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. ತೆರಿಗೆ ಬದಲಾವಣೆಗಳನ್ನು ಅನುಬಂಧ-7 ರಲ್ಲಿ ನಮೂದಿಸಲಾಗಿದೆ.

201. ಈ ಪ್ರಸ್ತಾವನೆಗಳಿಂದ 9 ಕೋಟಿ ರೂಪಾಯಿಗಳ ಹೆಚ್ಚುವರಿ ಆದಾಯ ನಿರೀಕ್ಷಿಸಲಾಗಿದೆ.

ಪರಿಷ್ಕೃತ ಅಂದಾಜುಗಳು 2004-05

202. 2004-2005ರಲ್ಲಿ ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ಜಮೆಗಳನ್ನು 32065.99 ಕೋಟಿ ರೂ.ಗಳೆಂದು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ಜಮೆಗಳು 33332.84 ಕೋಟಿ ರೂ.ಗಳಾಗಿದೆ. ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು 31591.88 ಕೋಟಿ ರೂ.ಗಳಾಗಿತ್ತು. ಈಗ ಪರಿಷ್ಕೃತ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು 33273.08 ಕೋಟಿ ರೂ.ಗಳಾಗಿದೆ. ಸಾರ್ವಜನಿಕ ವೆಚ್ಚದಲ್ಲಿನ ಹೆಚ್ಚುವರಿಯನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರ ಈ ವರ್ಷದ ಅಂತಿಮ ಕೊರತೆಯು 72.66 ಕೋಟಿ ರೂ.ಗಳಾಗುವ ನಿರೀಕ್ಷೆಯಿದೆ. 2004-2005ರ ಮುಂಗಡ ಪತ್ರವನ್ನು ಮಂಡಿಸುವಾಗ ಈ ಕೊರತೆಯನ್ನು 73.32 ಕೋಟಿ ರೂ.ಗಳೆಂದು ತೋರಿಸಲಾಗಿತ್ತು.

ಆಯವ್ಯಯ ಅಂದಾಜುಗಳು 2005-2006

203. 2005-2006ನೇ ಸಾಲಿನ ಒಟ್ಟು ಜಮೆ 34592.06 ಕೋಟಿ ರೂ.ಗಳಾಗುವ ನಿರೀಕ್ಷೆಯಿದೆ. ಇದರಲ್ಲಿ 29218.47 ಕೋಟಿ ರೂ.ಗಳ ರಾಜಸ್ವ ಜಮೆ ಮತ್ತು 5373.59 ಕೋಟಿ ರೂ.ಗಳ ಬಂಡವಾಳ ಜಮೆ ಸೇರಿರುತ್ತದೆ. ಒಟ್ಟು ವೆಚ್ಚವನ್ನು 35615.15 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 28364.01 ಕೋಟಿ ರೂ.ಗಳು ರಾಜಸ್ವ ವೆಚ್ಚವಾಗಿದ್ದು, 6251.14 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿವೆ.

ಶ್ರೀ ಬಸವರಾಜ್ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಯವರು 203ನೇ ಕಂಡಿಕೆಯಲ್ಲಿ "ಒಟ್ಟು ವೆಚ್ಚವನ್ನು 35615.15 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ" ಎಂದು ಓದಿದರು. ಆದರೆ ಆಂಗ್ಲ ಭಾಷೆಯಲ್ಲಿರುವ ಬಜೆಟ್ ಪುಸ್ತಕದಲ್ಲಿ 34615.15 ಕೋಟಿ ರೂಪಾಯಿಗಳೆಂದು ನಮೂದಿಸಲಾಗಿದೆ. ಆದುದರಿಂದ, ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಸಾವಿರ ಕೋಟಿ ರೂಪಾಯಿಗಳ ಡಿಫರೆನ್ಸ್ ಅಮೌಂಟ್‌ನ್ನು ಓದಿದರು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ನಾನು ಆಯವ್ಯಯ ಪುಸ್ತಕವನ್ನು ಪೂರ್ಣಗೊಳಿಸಿದ ನಂತರ ತಾವು ಪ್ರಸ್ತಾಪಿಸಿ.......

204. ಸರ್ಕಾರವು ತೆರಿಗೆ ರಾಜಸ್ವದ ಮೂಲಕ 18680.16 ಕೋಟಿ ರೂ.ಗಳನ್ನು ಮತ್ತು ತೆರಿಗೆಯೇತರ ರಾಜಸ್ವದ ಮೂಲಕ 4090.30 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನಿಟ್ಟುಕೊಂಡಿದೆ. ಇದಲ್ಲದೆ ಸಣ್ಣ ಉಳಿತಾಯ ಮತ್ತು ಇತರೆ ಒಪ್ಪಂದ ಸಾಲಗಳಿಂದ 1015.00 ಕೋಟಿ ರೂ.ಗಳನ್ನು; ಮಾರುಕಟ್ಟೆ ಎತ್ತುವಳಿಯಿಂದ 1269.00 ಕೋಟಿ ರೂ.ಗಳನ್ನು (ನಿವ್ವಳ); ಮತ್ತು ಕೇಂದ್ರ ಸರ್ಕಾರದ ಒಟ್ಟು ಸಾಲಗಳಿಂದ 2191.12 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಸರ್ಕಾರ ಇಟ್ಟುಕೊಂಡಿದೆ.

205. ಅಭಿವೃದ್ಧಿಯನ್ನು ಕಾಪಾಡಿಕೊಳ್ಳಲು ವಿತ್ತೀಯ ನಿಯಂತ್ರಣವನ್ನು ಅಳವಡಿಸಿಕೊಳ್ಳುವುದು ಪ್ರಮುಖ ವಿಷಯವಾಗಿದೆ. ಕರ್ನಾಟಕ ವಿಧಾನ ಸಭೆಯು 2002ನೇ ಇಸವಿಯಲ್ಲಿ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯಿದೆಯನ್ನು ಜಾರಿಗೊಳಿಸಿ ಕ್ರೋಢೀಕೃತ ರಾಜಸ್ವ ಕೊರತೆಯನ್ನು 2005-06 ನೇ ಸಾಲಿನಲ್ಲಿ ನಿವಾರಿಸಬೇಕೆಂದು ನಿಗದಿಪಡಿಸಿತ್ತು. ಮತ್ತು ಕ್ರೋಢೀಕೃತ ವಿತ್ತೀಯ

ಕೊರತೆಯನ್ನು ಜಿಎಸ್‌ಡಿಪಿ ಯ ಶೇಕಡ 3ಕ್ಕೆ ನಿಯಂತ್ರಿಸಬೇಕೆಂದು ನಿಗದಿಪಡಿಸಿತ್ತು. ಈ ನಿಟ್ಟಿನಲ್ಲಿ ನಮ್ಮ ಮುಂದಿರುವ ವರ್ಷ ಬಹಳ ಪ್ರಮುಖ ವರ್ಷವಾಗಿದೆ. 2005-06 ನೇ ಸಾಲಿನ ರಾಜಸ್ವ ಉಳಿಕೆಯು 854.46 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದು ಜಿಎಸ್‌ಡಿಪಿಯ ಶೇ. 0.52 ರಷ್ಟಾಗಿದೆ. ವಿತ್ತೀಯ ಕೊರತೆಯನ್ನು 4714.46 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದು ಜಿಎಸ್‌ಡಿಪಿಯ ಶೇ. 2.86 ರಷ್ಟಾಗಿರುತ್ತದೆ. ಆಯವ್ಯಯೇತರ ಎತ್ತುವಳಿಗಳ ಮೇಲಿನ ಬಡ್ಡಿ 791.02 ಕೋಟಿ ರೂ.ಗಳನ್ನು ಸೇರಿಸಿದರೆ ಕ್ರೋಢೀಕೃತ ರಾಜಸ್ವ ಉಳಿಕೆಯು 63.44 ಕೋಟಿ ರೂ.ಗಳಾಗುತ್ತದೆ.

206. ಆರಂಭಿಕ ಶಿಲ್ಕು 72.66 ರೂ.ಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅಂತಿಮ ಶಿಲ್ಕು 49.57 ಕೋಟಿ ರೂ.ಗಳಾಗಿದೆ.

ದೃಢವಾದ ಹೆಜ್ಜೆಗಳು

207. ಹಿಂದಿನ ಆಯವ್ಯಯದ ನಮ್ಮ ಕನಸುಗಳು ನನಸಾಗಿವೆ.
ಆರ್ಥಿಕ ಸ್ಥಿರತೆ ಆಯವ್ಯಯದಲ್ಲೇ ಎದ್ದು ಕಾಣುತ್ತಿದೆ.
ನಿರೀಕ್ಷೆಯಂತೆ ಸಂಪನ್ಮೂಲಗಳು ಹರಿದುಬಂದಿವೆ.
ಸಾಮಾಜಿಕ ಚಿಂತನೆಗಳು ನಿಜರೂಪ ತಳೆದಿವೆ.
ಸಮಾನ ಬೆಳವಣಿಗೆ - ಆರ್ಥಿಕ ವೃದ್ಧಿಯ ಆಶಯ ಈಡೇರಿದೆ.
ಮಾತು - ಕೃತಿಗಳ ನಡುವೆ ಅಂತರವಿಲ್ಲದ ದೃಢವಾದ ನಡೆ ನಮ್ಮದು.
ಸಮಾನತೆಯ ಸಮಾಜ-ಚೈತನ್ಯಶೀಲ ಕರ್ನಾಟಕ ನಮ್ಮ ಮುಂದಿನ ಗುರಿ.
ದೂರ ದಿಗಂತದಲ್ಲಿ ಹೊಂಗಿರಣಗಳು ಕಾಣುತ್ತಿವೆ.

ರಾಷ್ಟ್ರಕವಿ ಕುವೆಂಪುರವರು ನುಡಿದಂತೆ :-
ಕನ್ನಡನಾಡಿನೊಳುದಿಸಯ್
ಮುನ್ನಮೆ ಮೈದೋರಿದಂತೆ; ಬೆಳಕಂ ನೀಡಯ್!
ಇನ್ನೊಮ್ಮೆ ಹರಿದು ಕತ್ತಲ್,
ಮುನ್ನಿನ ಚೈತನ್ಯದೋಜೆ ಮೆರೆಯಲಿ, ಪಂಪಾ!

208. ನಾನು ಈಗ 2005-06ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸದನದ ಪರಿಶೀಲನೆಗೆ ಮಂಡಿಸುತ್ತಿದ್ದೇನೆ. ಮುಂಗಡಪತ್ರದ ಬಗ್ಗೆ ಸದನದಲ್ಲಿ ಸವಿವರವಾಗಿ ಚರ್ಚಿಸಲಾಗುವುದು. ಚರ್ಚೆಯ ನಂತರ ಸರ್ಕಾರವು ಪೂರ್ಣ ಮುಂಗಡಪತ್ರಕ್ಕೆ ಲೇಖಾನುದಾನವನ್ನು ಕೋರುತ್ತದೆ. ಈಗ ನಾನು 2005ರ ಜುಲೈ 31ಕ್ಕೆ ಅಂತ್ಯಗೊಳ್ಳುವ ನಾಲ್ಕು ತಿಂಗಳುಗಳಿಗೆ ಲೇಖಾನುದಾನವನ್ನು ಕೋರುತ್ತಿದ್ದೇನೆ.

ಜೈ ಹಿಂದ್ - ಜೈ ಕರ್ನಾಟಕ

ಅಧ್ಯಕ್ಷರು:- ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.00 ಗಂಟೆಗೆ ಮುಂದೂಡಲ್ಪಟ್ಟು ಪುನ: 14ನೇ ಜನವರಿ 2005 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು).

ಬಜೆಟ್ ವಿಹಂಗಮ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2004-05	ಪರಿಷ್ಕೃತ ಅಂದಾಜು 2004-05	ಬಜೆಟ್ ಅಂದಾಜು 2005-06
	ಪ್ರಾರಂಭ ಶಿಲ್ಕು	-400.79	12.90	76.66
	ಎ. ರಾಜಸ್ವ ಲೆಕ್ಕ			
I.	ಜಮೆ :			
	ರಾಜ್ಯ ತೆರಿಗೆ	14957.96	15747.85	18680.16
	ಕೇಂದ್ರ ತೆರಿಗೆಯಲ್ಲಿ ಪಾಲು	3760.41	3449.31	3760.40
	ಕೇಂದ್ರ ಸರ್ಕಾರದ ಅನುದಾನಗಳು	2305.59	2354.86	2687.61
	ತೆರಿಗೆಯೇತರ ರಾಜಸ್ವ	4486.35	3768.32	4090.30
	ಒಟ್ಟು-ಎ. I	25510.31	25320.34	29218.47
II.	ವೆಚ್ಚ :			
	ಸಾಮಾಜಿಕ ಸೇವೆ	7662.30	7698.77	8566.71
	ಆರ್ಥಿಕ ಸೇವೆ	5500.72	6015.15	7020.72
	ಸಾಮಾನ್ಯ ಸೇವೆ	11475.96	10300.25	11616.58
	ಸಹಾಯಾನುದಾನ ಮತ್ತು ಅಂಶದಾನ	798.50	798.50	1160.00
	ಒಟ್ಟು-ಎ. II	25437.48	24812.67	28364.01
ಎ.	ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ	72.83	507.67	854.46

ನೋಟ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2003-04	ಪರಿಷ್ಕೃತ ಅಂದಾಜು 2003-04	ಬಜೆಟ್ ಅಂದಾಜು 2004-05
	ಬಿ. ಬಂಡವಾಳ ಲೆಕ್ಕ			
I.	ಜಮೆ :			
	ಭಾರತ ಸರ್ಕಾರದಿಂದ ಸಾಲ	2238.05	1709.35	2191.12
	ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ)	1087.96	2116.74	1269.00
	ಎಲ್ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	3200.91	4557.65	1015.00
	ಸಾಲಗಳು ಮತ್ತು ಮುಂಗಡಗಳ ವಸೂಲಿ	29.91	29.91	29.91
	ಸಾರ್ವಜನಿಕ ಲೆಕ್ಕ (ನಿವ್ವಳ) ಇತರೆ	-1.15	-401.15	868.56
	ಒಟ್ಟು-ಬಿ. I	6555.68	8012.50	5373.59
II.	ಬಟವಾಡೆ :			
	ಬಂಡವಾಳ ವೆಚ್ಚ (ನಿವ್ವಳ)	3746.61	4117.70	5364.54
	ಕೇಂದ್ರ ಸಾಲಗಳ ಮರುಸಂದಾಯ	1342.49	1156.12	563.42
	ಎಲ್ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ	462.52	2575.10	88.89
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	602.78	611.49	234.29
	ಒಟ್ಟು-ಬಿ. II	6154.40	8460.41	6251.14
ಬಿ.	ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ	401.28	-447.91	-877.55
ಸಿ.	ವರ್ಷದ ಒಟ್ಟು ಹೆಚ್ಚಳ / ಕೊರತೆ	474.11	59.76	-23.09
ಡಿ.	ಮುಕ್ತಾಯ ಶಿಲ್ಕು	73.32	72.66	49.57

ಅನುಬಂಧ - I

2005-2006 ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

ವಿಭಾಗ	ಕೋಟಿ ರೂ.ಗಳಲ್ಲಿ	ಶೇಕಡಾ ಪ್ರಮಾಣ
ಎ. ಆರ್ಥಿಕ ಸೇವೆಗಳು		
ಕೃಷಿ ಮತ್ತು ಸಂಬಂಧಪಟ್ಟ ಸೇವೆ	857.52	6.33
ಗ್ರಾಮೀಣ ಅಭಿವೃದ್ಧಿ	611.30	4.51
ವಿಶೇಷ ಪ್ರದೇಶ ಯೋಜನೆ	166.34	1.23
ನೀರಾವರಿ ಮತ್ತು ಪ್ರವಾಹ ನಿಯಂತ್ರಣ	3942.41	29.08
ಶಕ್ತಿ ಮೂಲಗಳು	1853.92	13.68
ಕೈಗಾರಿಕೆ ಮತ್ತು ಖನಿಜಗಳು	143.18	1.06
ಸಾರಿಗೆ	1629.94	12.02
ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	23.60	0.17
ಸಾಮಾನ್ಯ ಆರ್ಥಿಕ ಸೇವೆಗಳು	376.51	2.78
ಬಿ. ಸಮಾಜ ಸೇವೆಗಳು		
ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ	101201	7.47
ಆರೋಗ್ಯ	332.39	2.45
ನೀರು ಸರಬರಾಜು ಮತ್ತು ನೈರ್ಮಲ್ಯ	621.50	4.59
ವಸತಿ ಮತ್ತು ನಗರಾಭಿವೃದ್ಧಿ	1266.13	9.34
ವಾರ್ತಾ ಮತ್ತು ಪ್ರಚಾರ	2.80	0.02
ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ		
ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ	517.74	3.82
ಕಾರ್ಮಿಕ ಮತ್ತು ಉದ್ಯೋಗ	14.01	0.10
ಸಿ. ಸಾಮಾನ್ಯ ಸೇವೆಗಳು	183.70	1.36
ಒಟ್ಟು	13555.00	100.00

ಅನುಬಂಧ 2

(ಪ್ಯಾರಾ 169 ಮತ್ತು 175)

ಉದ್ದೇಶಿತ ಸುಧಾರಣಾ ಕ್ರಮಗಳು

ಕ್ರಮ ಸಂಖ್ಯೆ	ಸುಧಾರಣಾ ಕ್ರಮದ ವಿವರ
1.	ಹೆಚ್ಚಾಗಿ ಅಥವಾ ತಪ್ಪಾಗಿ ವಸೂಲಿ ಮಾಡಿದ ತೆರಿಗೆಯನ್ನು ಪಾವತಿ ಮಾಡುವ ಬಗ್ಗೆ ಆ ತೆರಿಗೆಯ ವಸೂಲಾಗಿ ಬಗ್ಗೆ ಇರುವ ತಡೆಯಾಜ್ಞೆಯ ಅವಧಿಯಲ್ಲಿಯೂ ಬಡ್ಡಿ ಪಾವತಿ ಮಾಡುವಂತೆ ಮಾಡಲು ಅವಕಾಶ.
2.	ಉಚ್ಚ ನ್ಯಾಯಾಲಯದ ಮುಂದೆ ಪರಿಷ್ಕರಣಾ ಅರ್ಜಿಯನ್ನು ಸಲ್ಲಿಸಲು ನಿಗದಿಯಾಗಿರುವ ಕಾಲಾವಧಿಯನ್ನು 120 ದಿನಗಳಿಂದ 180 ದಿನಗಳಿಗೆ ಏರಿಸುವುದು.
3.	ದಂಡನಾ ಬಡ್ಡಿ ದರದಲ್ಲಿ ಶೇ. 24 ರಿಂದ ಶೇ. 15ಕ್ಕೆ ಇಳಿತ.

ಅನುಬಂಧ 3

(ಪ್ಯಾರಾ 181)

ಉದ್ದೇಶಿತ ಸುಧಾರಣಾ ಕ್ರಮಗಳು

ಕ್ರಮ ಸಂಖ್ಯೆ	ಸುಧಾರಣ ಕ್ರಮದ ವಿವರ
1.	1.4.1995 ರಿಂದ ಮೋಟಾರು ವಾಹನಗಳ ಪ್ರವೇಶದ ಮೇಲೆ ತೆರಿಗೆ ವಿಧಿಸುಂತೆ ಅನುವಾಗಲು ಪ್ರಕರಣ 4-ಬಿ ಮತ್ತು 4-ಬಿಬಿಗಳ ಪೂರ್ವಾನ್ವಯವಾಗುವಂತೆ ಸೇರಿಕೆ.
2.	ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ಉಲ್ಲೇಖವಿರುವ ಉಪಬಂಧಗಳಲ್ಲಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಗೂ ಕೂಡ ಉಲ್ಲೇಖ ಮಾಡಲು ಸೂಕ್ತ ತಿದ್ದುಪಡಿ.
3.	ಉಚ್ಚ ನ್ಯಾಯಾಲಯದ ಮುಂದೆ ಪರಿಷ್ಕರಣಾ ಅರ್ಜಿಯನ್ನು ಸಲ್ಲಿಸಲು ನಿಗದಿಯಾಗಿರುವ ಕಾಲಾವಧಿಯನ್ನು 120 ದಿನಗಳಿಂದ 180 ದಿನಗಳಿಗೆ ಏರಿಸುವುದು.
4.	ದಂಡನಾ ಬಡ್ಡಿ ದರದಲ್ಲಿ ಶೇ. 24 ರಿಂದ ಶೇ. 15ಕ್ಕೆ ಇಳಿತ.

ಅನುಬಂಧ 4
(ಪ್ಯಾರಾ 184)
ಕಾನೂನು ವೃತ್ತಿಗಾರರಿಗೆ ಸಂಬಂಧಪಟ್ಟಂತೆ ಉದ್ದೇಶಿತ ವರ್ಗೀಕರಣ ಮತ್ತು ವೃತ್ತಿ ತೆರಿಗೆ ದರಗಳು

ಪ್ರಸ್ತುತ ನಮೂದು	ಪ್ರಸ್ತುತ ತೆರಿಗೆ ದರ	ಉದ್ದೇಶಿತ ನಮೂದು	ಉದ್ದೇಶಿತ ತೆರಿಗೆ ದರ
ಕಾನೂನು ವೃತ್ತಿಗಾರರು ಹಾಗೂ ಸಾಲಿಸಿಟರ್‌ಗಳು ಮತ್ತು ನೋಟರಿಗಳು		ಕಾನೂನು ವೃತ್ತಿಗಾರರು ಹಾಗೂ ಸಾಲಿಸಿಟರ್‌ಗಳು ಮತ್ತು ನೋಟರಿಗಳು	
ಎ) ಬೆಂಗಳೂರು ನಗರ ಮತ್ತು ಇತರೆ ನಗರ ಸಭೆಗಳ ವ್ಯಾಪ್ತಿಗೆ ಬರುವ ವೃತ್ತಿ ನಿರತರಿಗೆ		ಎ) ಬೆಂಗಳೂರು ನಗರ ಮತ್ತು ಇತರೆ ನಗರ ಸಭೆಗಳ ವ್ಯಾಪ್ತಿಗೆ ಬರುವ ವೃತ್ತಿ ನಿರತರಿಗೆ	
(1) ಐದು ವರ್ಷಗಳವರೆಗೆ	ಇಲ್ಲ	(1) ಐದು ವರ್ಷಗಳವರೆಗೆ	ಇಲ್ಲ
(2) ಐದು ವರ್ಷಗಳಿಂದ ಹದಿನೈದು ವರ್ಷಗಳವರೆಗೆ	ವಾರ್ಷಿಕ ರೂ. 1500	(2) ಐದು ವರ್ಷಗಳಿಂದ ಇಪ್ಪತ್ತು ವರ್ಷಗಳವರೆಗೆ	ವಾರ್ಷಿಕ ರೂ. 1500
(3) ಹದಿನೈದು ವರ್ಷಗಳಿಗೆ ಮೇಲ್ಪಟ್ಟು	ವಾರ್ಷಿಕ ರೂ. 2500	(3) ಇಪ್ಪತ್ತು ವರ್ಷಗಳಿಗೆ ಮೇಲ್ಪಟ್ಟು	ವಾರ್ಷಿಕ ರೂ. 2500
(ಬಿ) ರಾಜ್ಯದ ಇತರೆ ಸ್ಥಳಗಳಲ್ಲಿ		(ಬಿ) ರಾಜ್ಯದ ಇತರೆ ಸ್ಥಳಗಳಲ್ಲಿ	
(1) ಐದು ವರ್ಷಗಳವರೆಗೆ	ಇಲ್ಲ	(1) ಹತ್ತು ವರ್ಷಗಳವರೆಗೆ	ಇಲ್ಲ
(2) ಐದು ವರ್ಷಗಳಿಂದ ಹದಿನೈದು ವರ್ಷಗಳವರೆಗೆ	ವಾರ್ಷಿಕ ರೂ. 1000	(2) ಹತ್ತು ವರ್ಷಗಳಿಂದ ಇಪ್ಪತ್ತು ವರ್ಷಗಳವರೆಗೆ	ವಾರ್ಷಿಕ ರೂ. 1000
(3) ಹದಿನೈದು ವರ್ಷಗಳಿಗೆ ಮೇಲ್ಪಟ್ಟು	ವಾರ್ಷಿಕ ರೂ. 1500	(3) ಇಪ್ಪತ್ತು ವರ್ಷಗಳಿಗೆ ಮೇಲ್ಪಟ್ಟು	ವಾರ್ಷಿಕ ರೂ. 1500

ಅನುಬಂಧ 5

(ಪ್ಯಾರಾ 186)

ಎ. ಚಿತ್ರಮಂದಿರಗಳಿಗೆ ಉದ್ದೇಶಿತ ರಾಜಿ ತೆರಿಗೆ ಮೊತ್ತದ ದರಗಳು

ಕ್ರಮ ಸಂಖ್ಯೆ	ಕೆಳಗಿನ ಜನಸಂಖ್ಯೆ ಇರುವ ಸ್ಥಳೀಯ ಪ್ರದೇಶದಲ್ಲಿದ್ದಲ್ಲಿ	ಪ್ರಸ್ತುತ ತೆರಿಗೆ ದರ	ಉದ್ದೇಶಿತ ತೆರಿಗೆ ದರ
1.	25,000 ಮೀರದ	ಒಟ್ಟು ಆಸನಗಳ ವಸೂಲಾತಿಯ ಶೇ. 10	ಒಟ್ಟು ಆಸನಗಳ ವಸೂಲಾತಿಯ ಶೇ. 5
2.	25,000ಕ್ಕಿಂತ ಹೆಚ್ಚು ಆದರೆ 50,000 ಮೀರದ	ಒಟ್ಟು ಆಸನಗಳ ವಸೂಲಾತಿಯ ಶೇ. 17.5	ಒಟ್ಟು ಆಸನಗಳ ವಸೂಲಾತಿಯ ಶೇ. 10
3.	50,000 ಕ್ಕಿಂತ ಹೆಚ್ಚು ಆದರೆ 75,000 ಮೀರದ	ಒಟ್ಟು ಆಸನಗಳ ವಸೂಲಾತಿಯ ಶೇ. 25	ಒಟ್ಟು ಆಸನಗಳ ವಸೂಲಾತಿಯ ಶೇ. 15

ಬಿ. ಚಿತ್ರಮಂದಿರಗಳಿಗೆ ಉದ್ದೇಶಿತ ಪ್ರದರ್ಶನ ತೆರಿಗೆ ದರಗಳು

ಕ್ರಮ ಸಂಖ್ಯೆ	ಉನ್ನತ ವರ್ಗಕ್ಕೆ ಪ್ರವೇಶ ಶುಲ್ಕ	ಪ್ರತಿ ಪ್ರದರ್ಶನಕ್ಕೆ ಪ್ರಸ್ತುತ ತೆರಿಗೆ ದರ	ಪ್ರತಿ ಪ್ರದರ್ಶನಕ್ಕೆ ಉದ್ದೇಶಿತ ತೆರಿಗೆ ದರ
(1) ಕನ್ನಡ ಮತ್ತು ಇತರ ಪ್ರಾಂತೀಯ ಭಾಷೆಯ ಚಲನಚಿತ್ರಗಳು			
(ಅ) ರಾಜಿ ತೆರಿಗೆಗೆ ಅರ್ಹವಲ್ಲದ ಚಿತ್ರಮಂದಿರಗಳು			
1.	ರೂ. 5 ಮೀರದಲ್ಲಿ	ರೂ. 35	ರೂ. 18
2.	ರೂ. 5ಕ್ಕಿಂತ ಹೆಚ್ಚು ಆದರೆ ರೂ. 15 ಮೀರದಲ್ಲಿ	ರೂ. 60	ರೂ. 30
3.	ರೂ. 15ಕಿಂತ ಹೆಚ್ಚು ಆದರೆ ರೂ. 25 ಮೀರದಲ್ಲಿ	ರೂ. 75	ರೂ. 38
4.	ರೂ. 25 ಮೀರಿದಲ್ಲಿ	ರೂ. 95	ರೂ. 48
(ಆ) 75000 ಮೀರದ ಜನಸಂಖ್ಯೆ ಇರುವ ಸ್ಥಳಗಳಲ್ಲಿರುವ ರಾಜಿ ತೆರಿಗೆಗೆ ಅರ್ಹವಾದ ಚಿತ್ರಮಂದಿರಗಳು:			
1.	ರೂ. 8 ಮೀರದಲ್ಲಿ	ರೂ. 25	ರೂ. 13
2.	ರೂ. 8ಕ್ಕಿಂತ ಹೆಚ್ಚು ಆದರೆ ರೂ. 15 ಮೀರದಲ್ಲಿ	ರೂ. 50	ರೂ. 25
3.	ರೂ. 15 ಮೀರಿದಲ್ಲಿ	ರೂ. 75	ರೂ. 38

(2) ಪರಭಾಷಾ ಚಲನಚಿತ್ರಗಳು

(ಅ) ರಾಜಿ ತೆರಿಗೆಗೆ ಅರ್ಹವಲ್ಲದ ಚಿತ್ರಮಂದಿರಗಳು

1. ರೂ. 5 ಮೀರದಲ್ಲಿ	ರೂ. 85	ರೂ. 43
2. ರೂ. 5ಕ್ಕಿಂತ ಹೆಚ್ಚು ಆದರೆ ರೂ. 15 ಮೀರದಲ್ಲಿ	ರೂ. 110	ರೂ. 55
3. ರೂ. 15ಕ್ಕಿಂತ ಹೆಚ್ಚು ಆದರೆ ರೂ. 25 ಮೀರದಲ್ಲಿ	ರೂ. 135	ರೂ. 68
4. ರೂ. 25 ಮೀರಿದಲ್ಲಿ	ರೂ. 235	ರೂ. 118

(ಆ) 75000 ಮೀರದ ಜನಸಂಖ್ಯೆ ಇರುವ ಸ್ಥಳಗಳಲ್ಲಿರುವ ರಾಜಿ ತೆರಿಗೆಗೆ ಅರ್ಹವಾದ ಚಿತ್ರ ಮಂದಿರಗಳು:

1. ರೂ. 8 ಮೀರದಲ್ಲಿ	ರೂ. 80	ರೂ. 40
2. ರೂ. 8ಕ್ಕಿಂತ ಹೆಚ್ಚು ಆದರೆ ರೂ. 15 ಮೀರದಲ್ಲಿ	ರೂ. 90	ರೂ. 45
3. ರೂ. 15 ಮೀರಿದಲ್ಲಿ	ರೂ. 100	ರೂ. 50

ಅನುಬಂಧ 6
(ಪ್ಯಾರಾ 198)

ಕ್ರಮ ಸಂಖ್ಯೆ	ಋಣಭಾರ ಪ್ರಮಾಣ ಪತ್ರಕ್ಕೆ ವಿಧಿಸಲಾಗುತ್ತಿರುವ ಪ್ರಚಲಿತ ಶುಲ್ಕ	ಕೃಷಿ ಸಾಲದ ಉದ್ದೇಶಕ್ಕಾಗಿ ಪಡೆಯುವ ಋಣಭಾರ ಪ್ರಮಾಣ ಪತ್ರಕ್ಕೆ ಪ್ರಸ್ತಾಪಿಸಲಾದ ಶುಲ್ಕ
1.	ಒಂದು ಸ್ಥಿರಾಸ್ತಿಗೆ ಅಥವಾ ಪತ್ರಕ್ಕೆ ಅಥವಾ ಒಬ್ಬ ವ್ಯಕ್ತಿಯಿಂದ ಅಥವಾ ಒಬ್ಬ ವ್ಯಕ್ತಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರದ ಸಾಮಾನ್ಯ ಶೋಧನಾ ಅರ್ಜಿಗೆ: 1. ಸಂಬಂಧಪಟ್ಟ ಪುಸ್ತಕಗಳಲ್ಲಿ ಮೊದಲನೆ ವರ್ಷದ ಶೋಧನೆಗಾಗಿ ರೂ. 30.00 2. ನಂತರದ ವರ್ಷಗಳ ಶೋಧನೆಗಾಗಿ, ವರ್ಷ ಒಂದಕ್ಕೆ ರೂ. 10.00	1. ಒಂದು ಸ್ಥಿರಾಸ್ತಿಗೆ ಅಥವಾ ಪತ್ರಕ್ಕೆ ಅಥವಾ ಒಬ್ಬ ವ್ಯಕ್ತಿಯಿಂದ ಅಥವಾ ಒಬ್ಬ ವ್ಯಕ್ತಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರದ ಸಾಮಾನ್ಯ ಶೋಧನಾ ಅರ್ಜಿಗೆ: 1. ಸಂಬಂಧಪಟ್ಟ ಪುಸ್ತಕಗಳಲ್ಲಿ ಮೊದಲನೆ ವರ್ಷದ ಶೋಧನೆಗಾಗಿ ರೂ. 30.00 2. ನಂತರದ ವರ್ಷಗಳ ಶೋದನೆಗಾಗಿ, ವರ್ಷ ಒಂದಕ್ಕೆ ರೂ. 10.00 ಗರಿಷ್ಟ ರೂ. 50.00 ಗಳಿಗೆ ಮಿತಿಗೊಳಿಸಲಾಗಿದೆ.

(B) 025249

ಅನುಬಂಧ-7
ಭಾಗ ಎ
ಪ್ರಕರಣ 3(1)ನ್ನು ನೋಡಿ

ಕ್ರ. ಸಂ.	ಐಟಂ. ಸಂ.	ಹಾಲಿ ವಾಹನದ ವರ್ಗ	ಪ್ರತಿ ತ್ರೈಮಾಸಿಕ ಹಾಲಿ ಇರುವ ತೆರಿಗೆ ದರ (ರೂ. ಗಳಲ್ಲಿ)	ಐಟಂ ಸಂ.	ಹಾಲಿ ವಾಹನದ ವರ್ಗ	ಉದ್ದೇಶಿತ ತೆರಿಗೆ ದರ ಪ್ರತಿ ತ್ರೈಮಾಸಿಕಕ್ಕೆ (ರೂ. ಗಳಲ್ಲಿ)
1	2	3	4	5	6	7
1.	3ಎ	ಮಲ್ಟಿ ಆಕ್ಸಲ್ಡ್ ಸರಕು ವಾಹನಗಳು ಐಟಂ 10ರಲ್ಲಿ ತೆರಿಗೆ ವಿಧಿಸಲ್ಪಡುವ ಆರ್ಟಿಕ್ಯುಲೇಟೆಡ್ ವಾಹನಗಳನ್ನು ಹೊರತುಪಡಿಸಿ 15,000 ಕೆ.ಜಿ. ಹೇರು ಭಾರ ಮೀರಿರುವ ವಾಹನ.	2100 ಮತ್ತು 15,000 ಕೆ.ಜಿ. ಮೀರಿದ ಪ್ರತಿ 250 ಕೆ.ಜಿ. ಅದರ ಭಾಗಶ: ರೂ. 50/-ರಂತೆ	3ಎ	ಮಲ್ಟಿ ಆಕ್ಸಲ್ಡ್ ಸರಕು ವಾಹನಗಳು ಐಟಂ 10ರಲ್ಲಿ ತೆರಿಗೆ ವಿಧಿಸಲ್ಪಡುವ ಆರ್ಟಿಕ್ಯುಲೇಟೆಡ್ ವಾಹನಗಳನ್ನು ಹೊರತುಪಡಿಸಿ 15,000 ಕೆ.ಜಿ. ಹೇರು ಭಾರ ಮೀರಿರುವ ವಾಹನ.	2200 ಮತ್ತು 15,000 ಕೆ.ಜಿ. ಮೀರಿದ ಪ್ರತಿ 250 ಕೆ.ಜಿ. ಅಥವಾ ಅದರ ಭಾಗಶ: ರೂ. 75/- ರಂತೆ
2.	6	ಮೋಟಾರು ವಾಹನ (ಸುಖಾಸೀನ ಬಸ್) ಬಾಡಿಗೆಗೆ ಅಥವಾ ಸಂಭಾವನೆಗೆ, 12 ಜನ ಪ್ರಯಾಣಿಕರನ್ನು ಮೀರಿ ಒಯ್ಯಲು ಹಾಗೂ 1989ನೇ ಕೇಂದ್ರ ಮೋಟಾರು ವಾಹನ ನಿಯಮಾವಳಿಯ ನಿಯಮ 128ಕ್ಕೆ ಅನುಗುಣವಾಗಿ ನಿರ್ಮಿಸಲ್ಪಟ್ಟ ಅಥವಾ ಅಳವಡಿಸಿದ (ಚಾಲಕ ಮತ್ತು ನಿರ್ವಾಹಕ/ ಅಟೆಂಡೆಂಟ್ ಹೊರತುಪಡಿಸಿ) ಅಥವಾ				

1	2	3	4	5	6	7
		1993/95ನೇ ಮೋಟಾರು ವಾಹನ (ಅಖಿಲ ಭಾರತ ಪ್ರವಾಸಿ ಪರವಾನಿಗೆಯ ಸಾರಿಗೆ ಪ್ರವರ್ತಕರು) ನಿಯಮದಡಿ ಬಾಡಿಗೆಗೆ ಅಥವಾ ಸಂಭಾವನೆಗೆ 12 ಜನ ಪ್ರಯಾಣಿಕರನ್ನು ಮೀರಿ ಒಯ್ಯುವ (ಚಾಲಕ ಮತ್ತು ನಿರ್ವಾಹಕ / ಅಟೆಂಡೆಂಟ್ ಹೊರತುಪಡಿಸಿ) ಪ್ರತಿ ಪ್ರಯಾಣಿಕನಿಗೆ	2,000-00	6	ಐಟಂ 6ನ್ನು 6ಎ. ಎಂದು ಓದುತಕ್ಕದ್ದು.	
				6 ಬಿ	160 ಅಶ್ವಶಕ್ತಿ ಸಾಮರ್ಥ್ಯವಿರುವ ಅಥವಾ ಹೆಚ್ಚಿನ ಹವಾನಿಯಂತ್ರಿತ ಇಂಟಿಗ್ರಲ್ / ಮೋನೋಕಾಕ್ ಮೋಟಾರು ವಾಹನ ಮತ್ತು 1989ನೇ ಕೇಂದ್ರ ಮೋಟಾರು ವಾಹನ ನಿಯಮಾವಳಿಯ ನಿಯಮ 128ಕ್ಕೆ ಅನುಗುಣವಾಗಿರುವ ಅಥವಾ 1993/95ನೇ ಮೋಟಾರು ವಾಹನ (ಅಖಿಲ ಭಾರತ ಪರವಾನಿಗೆಯ ಪ್ರವಾಸಿ ಸಾರಿಗೆ ಪ್ರವರ್ತಕರು) ನಿಯಮಕ್ಕೆ ಒಳಪಡುವ ಹಾಗೂ 1988ನೇ ಮೋಟಾರು ವಾಹನ ಕಾಯ್ದೆಯ ಪ್ರಕರಣ 88(9)ರ ಅಡಿಯಲ್ಲಿ ಅಖಿಲ ಭಾರತ ಪರವಾನಿಗೆ ಹೊಂದಿರುವ ಬಾಡಿಗೆಗೆ ಅಥವಾ ಸಂಭಾವನೆಗೆ 12 ಜನ ಪ್ರಯಾಣಿಕರನ್ನು ಮೀರಿ ಒಯ್ಯುವ (ಚಾಲಕ ಮತ್ತು ನಿರ್ವಾಹಕ / ಅಟೆಂಡೆಂಟ್ ಹೊರತು ಪಡಿಸಿ) ಪ್ರತಿ ಪ್ರಯಾಣಿಕನಿಗೆ	1,500-00

1	2	3	4	5	6	7
3.	10	ಮೋಟಾರು ವಾಹನ ಸ್ವತ: ಯಾವುದೇ ಸರಕನ್ನು ಸಾಗಿಸಲಾಗದ (ನೀರು, ಇಂಧನ ಅಕ್ಯುಮಲೇಟರ್ಸ್ ಮತ್ತಿತರೆ ಸಲಕರಣೆ, ವಾಹನ ಚಲಿಸಲು ಬೇಕಾದ ಅವಶ್ಯಕ ಬಿಡಿ ಉಪಕರಣ ಹೊರತುಪಡಿಸಿ) ಮುಖ್ಯವಾಗಿ ಹಾಲೇಜ್‌ಗೆ ಮತ್ತು ಎಳೆಯಲು ಉದ್ದೇಶಿಸಲ್ಪಟ್ಟ ಟ್ರೈಲರ್‌ಗಳ ಭಾರವನ್ನು ಸೇರಿದಂತೆ ಒಟ್ಟು ಸಮಗ್ರ ಭಾರ:		10	ಮೋಟಾರು ವಾಹನ ಸ್ವತ: ಯಾವುದೇ ಸರಕನ್ನು ಸಾಗಿಸಲಾಗದ (ನೀರು, ಇಂಧನ ಅಕ್ಯುಮಲೇಟರ್ಸ್ ಮತ್ತಿತರೆ ಸಲಕರಣೆ, ವಾಹನ ಚಲಿಸಲು ಬೇಕಾದ ಅವಶ್ಯಕ ಬಿಡಿ ಉಪಕರಣ ಹೊರತುಪಡಿಸಿ) ಮುಖ್ಯವಾಗಿ ಹಾಲೇಜ್‌ಗೆ ಮತ್ತು ಎಳೆಯಲು ಉದ್ದೇಶಿಸಲ್ಪಟ್ಟ ಟ್ರೈಲರ್‌ಗಳ ಭಾರವನ್ನು ಸೇರಿದಂತೆ ಒಟ್ಟು ಸಮಗ್ರ ಭಾರ:	
		ಎಫ್) 12,000 ಕೆ.ಜಿ. ಮೀರಿದ, ಆದರೆ 15,000 ಕೆ.ಜಿ.ಗೆ. ಮೀರದ	2,200-00		ಎಫ್) 12,000 ಕೆ.ಜಿ. ಮೀರಿದ, ಆದರೆ 15,000 ಕೆ.ಜಿ.ಗೆ. ಮೀರದ	2,300-00
		ಜಿ) 15,000 ಕೆ.ಜಿ. ಮೀರಿದ	2,200 ಮತ್ತು 15,000 ಕೆ.ಜಿ. ಮೀರಿದ ಪ್ರತಿ 250 ಕೆ.ಜಿ. ಅಥವಾ ಅದರ ಭಾಗಶ: ರೂ. 35/- ರಂತೆ		ಜಿ) 15,000 ಕೆ.ಜಿ. ಮೀರಿದ	2,300 ಮತ್ತು 15,000 ಕೆ.ಜಿ. ಮೀರಿದ ಪ್ರತಿ 250 ಕೆ.ಜಿ. ಅಥವಾ ಅದರ ಭಾಗಶ: ರೂ. 75/- ರಂತೆ

ಭಾಗ-ಎ-1

ಪ್ರಕರಣ 3(1)ನ್ನು ನೋಡಿ

ದ್ವಿಚಕ್ರ ವಾಹನಗಳಿಗೆ ಜೀವಾವಧಿ ತೆರಿಗೆ

ಐಟಂ	ವಾಹನದ ವರ್ಗ	75ಸಿಸಿ ಮೀರದ ವಾಹನ (ರೂ.)	ವಾಹನಗಳ ಸಿಸಿ 75ಕ್ಕೆ ಮೀರಿ 300 ಸಿಸಿಗೆ ಮೀರದ (ರೂ.)	ವಾಹನಗಳ ಸಿಸಿ 300ಕ್ಕಿಂತ ಹೆಚ್ಚು ಹೊಂದಿರುವ ಅಥವಾ ಸೈಡ್‌ಕಾರ್/ಟ್ರೈಲರ್ ಅಳವಡಿಸಿದಾಗ (ರೂ.)
1	2	3	4	5
ಎ.	ಹೊಸ ವಾಹನ ನೋಂದಣಿಯ ಸಮಯದಲ್ಲಿ	1100 ಅಥವಾ ವಾಹನ	2500 ಅಥವಾ ವಾಹನ ಮೌಲ್ಯದ ಶೇ. 7-ಇದರಲ್ಲಿ ಯಾವುದು ಹೆಚ್ಚೋ ಅದು	3500 ಅಥವಾ ವಾಹನ ಮೌಲ್ಯದ ಶೇ. 7-ಇದರಲ್ಲಿ ಯಾವುದು ಹೆಚ್ಚೋ ಅದು
ಬಿ.	ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ			
1.	ತಿಂಗಳಿನಿಂದ 2 ವರ್ಷಗಳಿಗೆ ಮೀರದ	1055-00	2400-00	3360-00
2.	2 ವರ್ಷಗಳಿಗೆ ಮೀರಿದ, 3 ವರ್ಷಗಳಿಗೆ ಮೀರದ	1010-00	2300-00	3220-00
3.	3 ವರ್ಷಗಳಿಗೆ ಮೀರಿದ, 4 ವರ್ಷಗಳಿಗೆ ಮೀರದ	965-00	2200-00	3080-00
4.	4 ವರ್ಷಗಳಿಗೆ ಮೀರಿದ, 5 ವರ್ಷಗಳಿಗೆ ಮೀರದ	920-00	2100-00	2940-00
5.	5 ವರ್ಷಗಳಿಗೆ ಮೀರಿದ, 6 ವರ್ಷಗಳಿಗೆ ಮೀರದ	875-00	2000-00	2800-00
6.	6 ವರ್ಷಗಳಿಗೆ ಮೀರಿದ, 7 ವರ್ಷಗಳಿಗೆ ಮೀರದ	830-00	1900-00	2660-00
7.	7 ವರ್ಷಗಳಿಗೆ ಮೀರಿದ, 8 ವರ್ಷಗಳಿಗೆ ಮೀರದ	785-00	1800-00	2520-00
8.	8 ವರ್ಷಗಳಿಗೆ ಮೀರಿದ, 9 ವರ್ಷಗಳಿಗೆ ಮೀರದ	740-00	1700-00	2380-00
9.	9 ವರ್ಷಗಳಿಗೆ ಮೀರಿದ, 10 ವರ್ಷಗಳಿಗೆ ಮೀರದ	695-00	1600-00	2240-00

LEGISLATIVE ASSEMBLY

1	2	3	4	5
10.	10 ವರ್ಷಗಳಿಗೆ ಮೀರಿದ, 11 ವರ್ಷಗಳಿಗೆ ಮೀರದ	650-00	1500-00	2100-00
11.	11 ವರ್ಷಗಳಿಗೆ ಮೀರಿದ, 12 ವರ್ಷಗಳಿಗೆ ಮೀರದ	605-00	1400-00	1960-00
12.	12 ವರ್ಷಗಳಿಗೆ ಮೀರಿದ, 13 ವರ್ಷಗಳಿಗೆ ಮೀರದ	560-00	1300-00	1820-00
13.	13 ವರ್ಷಗಳಿಗೆ ಮೀರಿದ, 14 ವರ್ಷಗಳಿಗೆ ಮೀರದ	515-00	1200-00	1680-00
14.	14 ವರ್ಷಗಳಿಗೆ ಮೀರಿದ, 15 ವರ್ಷಗಳಿಗೆ ಮೀರದ	470-00	1100-00	1540-00
15.	15 ವರ್ಷಗಳಿಗೆ ಮೀರಿದ	425-00	1000-00	1400-00

ಟಿಪ್ಪಣಿ:

1. ದಿನಾಂಕ 1.4.2001ಕ್ಕಿಂತ ಮುಂಚಿನ ಜೀವಾವಧಿ ತೆರಿಗೆ ಬಾಕಿ ಪಾವತಿಯಾಗಿಲ್ಲವೋ ಅಂತಹ ವಾಹನಗಳಿಗೆ ಆ ದಿನಾಂಕಕ್ಕೆ ಮುಂಚಿತ ಜಾರಿಯಲ್ಲಿದ್ದ ತೆರಿಗೆ ದರವನ್ನು ವಸೂಲಿಸುವುದು. ಮೇಲಿನ ಅಂಕಣದಲ್ಲಿ ನಮೂದಿಸಿದ ತೆರಿಗೆ ದರಗಳು ಕೇಂದ್ರ ಸರ್ಕಾರಿ ನೌಕರರು ಹಾಗೂ ರಕ್ಷಣಾ ಸಿಬ್ಬಂದಿಯವರು ಹೊಂದಿರುವ ವಾಹನಗಳಿಗೆ ಅನ್ವಯವಾಗುವುದಿಲ್ಲ.

ಭಾಗ-ಎ-1
ಕಲಂ 3(1)ನ್ನು ನೋಡಿ
ದ್ವಿಚಕ್ರ ವಾಹನಗಳ ಉದ್ದೇಶಿತ ಜೀವಾವಧಿ ತೆರಿಗೆ

ಐಟಂ	ವಾಹನದ ವರ್ಗ	75ಸಿಸಿ ಮೀರದ ಮತ್ತು ವಾಹನ ಮೌಲ್ಯ ರೂ. 50,000 ಮೀರದ ವಾಹನಗಳಿಗೆ	ವಾಹನಗಳ ಸಿಸಿ 75ಕ್ಕೆ ಮೀರಿ 300 ಸಿಸಿಗೆ ಮೀರದ ಮತ್ತು ವಾಹನ ಮೌಲ್ಯ ರೂ. 50,000 ಮೀರದ	ವಾಹನಗಳ ಸಿಸಿ 300ಕ್ಕಿಂತ ಹೆಚ್ಚು ಹೊಂದಿರುವ ಅಥವಾ ಸೈಡ್‌ಕಾರ್ /ಟ್ರೈಲರ್ ಅಳವಡಿಸಿದಾಗ ವಾಹನದ ಮೌಲ್ಯ ರೂ. 50,000 ಮೀರದ	ದ್ವಿಚಕ್ರ ವಾಹನ ಮೌಲ್ಯ ರೂ. 50,000 ಮೀರಿದ
1	2	3	4	5	6
ಎ.	ಹೊಸ ವಾಹನ ನೋಂದಣಿಯ ಸಮಯದಲ್ಲಿ	ವಾಹನದ ಮೌಲ್ಯದ ಮೇಲೆ ಶೇ. 7ರಷ್ಟು	ವಾಹನದ ಮೌಲ್ಯದ ಮೇಲೆ ಶೇ. 7ರಷ್ಟು	ವಾಹನದ ಮೌಲ್ಯದ ಮೇಲೆ ಶೇ. 7ರಷ್ಟು	ವಾಹನದ ಮೌಲ್ಯದ ಮೇಲೆ ಶೇ. 9ರಷ್ಟು
ಬಿ.	ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ	ಉಪವಾಕ್ಯ ಎ ರಲ್ಲಿ ವಿಧಿಸಿರುವ ಜೀವಾವಧಿ ತೆರಿಗೆಯಲ್ಲಿ ಶೇಕಡಾವಾರು	ಉಪವಾಕ್ಯ ಎ ರಲ್ಲಿ ವಿಧಿಸಿರುವ ಜೀವಾವಧಿ ತೆರಿಗೆಯಲ್ಲಿ ಶೇಕಡಾವಾರು	ಉಪವಾಕ್ಯ ಎ ರಲ್ಲಿ ವಿಧಿಸಿರುವ ಜೀವಾವಧಿ ತೆರಿಗೆಯಲ್ಲಿ ಶೇಕಡಾವಾರು	ಉಪವಾಕ್ಯ ಎ ರಲ್ಲಿ ವಿಧಿಸಿರುವ ಜೀವಾವಧಿ ತೆರಿಗೆಯಲ್ಲಿ ಶೇಕಡಾವಾರು
1.	2 ವರ್ಷಗಳಿಗೆ ಮೀರದ 93%	93%	93%	93%	93%
2.	2 ವರ್ಷಗಳಿಗೆ ಮೀರಿದ, 3 ವರ್ಷಗಳಿಗೆ ಮೀರದ	87%	87%	87%	87%
3.	3 ವರ್ಷಗಳಿಗೆ ಮೀರಿದ, 4 ವರ್ಷಗಳಿಗೆ ಮೀರದ	81%	81%	81%	81%
4.	4 ವರ್ಷಗಳಿಗೆ ಮೀರಿದ, 5 ವರ್ಷಗಳಿಗೆ ಮೀರದ	75%	75%	75%	75%

LEGISLATIVE ASSEMBLY

1	2	3	4	5	6
5.	5 ವರ್ಷಗಳಿಗೆ ಮೀರಿದ, 6 ವರ್ಷಗಳಿಗೆ ಮೀರದ	69%	69%	69%	69%
6.	6 ವರ್ಷಗಳಿಗೆ ಮೀರಿದ, 7 ವರ್ಷಗಳಿಗೆ ಮೀರದ	64%	64%	64%	64%
7.	7 ವರ್ಷಗಳಿಗೆ ಮೀರಿದ, 8 ವರ್ಷಗಳಿಗೆ ಮೀರದ	59%	59%	59%	59%
8.	8 ವರ್ಷಗಳಿಗೆ ಮೀರಿದ, 9 ವರ್ಷಗಳಿಗೆ ಮೀರದ	54%	54%	54%	54%
9.	9 ವರ್ಷಗಳಿಗೆ ಮೀರಿದ, 10 ವರ್ಷಗಳಿಗೆ ಮೀರದ	49%	49%	49%	49%
10.	10 ವರ್ಷಗಳಿಗೆ ಮೀರಿದ, 11 ವರ್ಷಗಳಿಗೆ ಮೀರದ	45%	45%	45%	45%
11.	11 ವರ್ಷಗಳಿಗೆ ಮೀರಿದ, 12 ವರ್ಷಗಳಿಗೆ ಮೀರದ	41%	41%	41%	41%
12.	12 ವರ್ಷಗಳಿಗೆ ಮೀರಿದ, 13 ವರ್ಷಗಳಿಗೆ ಮೀರದ	37%	37%	37%	37%
13.	13 ವರ್ಷಗಳಿಗೆ ಮೀರಿದ, 14 ವರ್ಷಗಳಿಗೆ ಮೀರದ	33%	33%	33%	33%
14.	14 ವರ್ಷಗಳಿಗೆ ಮೀರಿದ, 15 ವರ್ಷಗಳಿಗೆ ಮೀರದ	29%	29%	29%	29%
15.	15 ವರ್ಷಗಳಿಗೆ ಮೀರಿದ	25%	25%	25%	25%

ಟಿಪ್ಪಣಿ:

1. ದಿನಾಂಕ 31.3.2005ಕ್ಕೆ ಮೊದಲು ಜೀವಾವಧಿ ತೆರಿಗೆ ಬಾಕಿ ಇದ್ದು ಪಾವತಿಯಾಗಿಲ್ಲದಿರುವ ವಾಹನಗಳಿಗೆ ಆ ದಿನಾಂಕಕ್ಕೆ ಮುಂಚೆ ಜಾರಿಯಲ್ಲಿದ್ದ ತೆರಿಗೆ ದರ ಹಾಗೂ ದಂಡ ಇದ್ದಲ್ಲಿ ದಂಡದೊಂದಿಗೆ ವಸೂಲಿಸುವುದು.

ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದು, ಮಹಾಜನ್ ಆಯೋಗದ ಮುಂದೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಬಲವಾಗಿ ಪ್ರತಿಪಾದಿಸಿದ್ದವರು. ಶ್ರೀಯುತರು 6ನೇ ವಿಧಾನಸಭೆಗೆ ಪರಸ್‌ಗಡ್ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀ ಟಕ್ಕೇದ್ ಅವರು ದಿನಾಂಕ 28.2.2005ರಂದು ನಿಧನ ಹೊಂದಿದರು.

ಶ್ರೀ ಐ ಎನ್ ಎ ರಾಮರಾವ್

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಭಾರತ ಸೇವಾದಳದ ಸಂಘಟನಾ ಕಾರ್ಯದರ್ಶಿಗಳಾಗಿದ್ದ ಶ್ರೀ ಐಎನ್‌ಎ ರಾಮರಾವ್ ಅವರು ನೇತಾಜಿ ಸುಭಾಷ್‌ಚಂದ್ರಬೋಸ್ ಅವರ ನಿಕಟವರ್ತಿಯಾಗಿದ್ದರು, ನೇತಾಜಿಯವರು ಸ್ಥಾಪಿಸಿದ್ದ ಇಂಡಿಯನ್ ನ್ಯಾಷನಲ್ ಆರ್ಮಿಯ ಸದಸ್ಯರಾಗಿ ಅಪಾರ ಸೇವೆಯನ್ನು ಸಲ್ಲಿಸಿದ್ದರು.

ಶ್ರೀ ರಾಮರಾವ್ ಅವರು ದಿನಾಂಕ 17.2.2005ರಂದು ನಿಧನ ಹೊಂದಿದರು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಗೋವಿಂದರಾವ್ ಲಕ್ಷ್ಮಣರಾವ್ ಅಸ್ತೇಕರ್‌ರವರು 6 ಮತ್ತು 7ನೇ ವಿಧಾನಸಭೆಯಲ್ಲಿ ಸದಸ್ಯರಾಗಿದ್ದರು. ಅವರು ಬೆಳಗಾಂ ಜಿಲ್ಲೆಯವರು. ಕೆ.ಎಂ.ರುದ್ರಪ್ಪನವರು 1972ರಲ್ಲಿ ನಾನು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಶಾಸಕರಾಗಿದ್ದಾಗ ಅವರು ಕೂಡ ನಮ್ಮ ಜೊತೆಯಲ್ಲಿದ್ದರು. ಸಕಲೇಶಪುರದಿಂದ ಆರಿಸಿ ಬಂದು, ಕರ್ನಾಟಕ ಯುವಕ ಪರಿಷತ್ತಿನ ಅಧ್ಯಕ್ಷರಾಗಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ, ಕಾರ್ಯನಿರ್ವಹಿಸಿದ್ದರು. ಒಬ್ಬ ದೊಡ್ಡ ಸ್ವಾತಂತ್ರ್ಯ ಹೋರಾಟಗಾರರು. ಮತ್ತು ಆ ಭಾಗದ ದೊಡ್ಡ ಪ್ರಭಾವಿ ನಾಯಕರು ಆಗಿದ್ದರು. ಗುಡನ್‌ಶಹಾ ಖಾನ್‌ಶಹಾ ಟಕ್ಕೇದ್ ಅವರು ಕೂಡ ನಮ್ಮ ಜೊತೆಗೆ ಶಾಸಕರಾಗಿದ್ದರು. ಒಳ್ಳೆಯ ವಾಗ್ಮಿಗಳು ಆಗಿದ್ದರು. ಈ ಒಂದು ಸಭೆಯಲ್ಲಿ, ದಿವಂಗತ ದೇವರಾಜ್ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀಯುತರು ಸದಸ್ಯರಾಗಿ, ಒಳ್ಳೆಯ ಪ್ರಭಾವಿ ಹಾಗೂ ಒಳ್ಳೆಯ ವಾಗ್ಮಿಗಳು ಆಗಿದ್ದರು. ಅವರು ಬೆಳಗಾಂ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ಪರಸ್‌ಗಡ್ ಕ್ಷೇತ್ರದಿಂದ ಆರಿಸಿ ಬಂದು ಅಲ್ಪಸಂಖ್ಯಾತರ ನಾಯಕರಾಗಿ ಪ್ರಭಾವಿ ಎನಿಸಿದ್ದರು. ಇಂಥ ನಾಯಕರನ್ನು ಇವತ್ತು ಕಳೆದುಕೊಂಡಿದ್ದೇವೆ. ಐಎನ್‌ಎ ರಾಮರಾವ್‌ರವರು, ಸುಭಾಷ್‌ಚಂದ್ರ ಬೋಸ್ ಅವರ ಜೊತೆಗೆ ಕೆಲಸ ಮಾಡಿದ್ದಾರೆ. ಮತ್ತು ಅವರು ಅಗಲಿದ ನಂತರ ನಾನು ಹಾಗೂ ಮಾನ್ಯ ಜಾಫರ್ ಷರೀಫ್‌ರವರು ಕೂಡಿಕೊಂಡು ಅವರ ಪಾರ್ಥೀವ ಶರೀರದ ಅಂತಿಮ ದರ್ಶನಕ್ಕೆ ಹೋಗಿದ್ದೆವು. ನೇತಾಜಿಯವರು ಸ್ಥಾಪಿಸಿದ್ದ ಇಂಡಿಯನ್ ನ್ಯಾಷನಲ್ ಆರ್ಮಿಯ ಸದಸ್ಯರಾಗಿ ಅವರ ಜೊತೆಯಲ್ಲಿ ಜರ್ಮನಿಯಲ್ಲಿ ಕೂಡ ದಿವಂಗತ ರಾಮರಾವ್‌ರವರು ಕೆಲಸ ಮಾಡಿದ್ದಾರೆ. ನೇತಾಜಿಯವರ ಆದರ್ಶ ಆ ಒಂದು ದೇಶಭಕ್ತಿ ಭಾವನೆಯಲ್ಲಿ ಅವರೂ ಕೂಡ ಜೊತೆಯಾಗಿ ಒಬ್ಬ ಶಿಸ್ತಿನ ಸಿಪಾಯಿ ಆಗಿ ಕೆಲಸ ಮಾಡಿದ್ದಾರೆ. ಈ ಹಳೆಯ ಪೀಳಿಗೆಯ ಸೇನಾನಿ ನಮ್ಮೆಲ್ಲರಿಗೂ ಅದರಲ್ಲೂ ವಿಶೇಷವಾಗಿ ಯುವಕರಿಗೆ ಹೆಚ್ಚಿನ ಮಾರ್ಗದರ್ಶನ ಕೊಡುವ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಭಾರತ ಸೇವಾ ದಳದ ಮುಖ್ಯಸ್ಥರಾಗಿ ಕೆಲಸ ಮಾಡಿರುತ್ತಾರೆ. ಅವರು ಬಹಳಷ್ಟು ಸಲ ಮಾನ್ಯ ಜಾಫರ್ ಷರೀಫ್ ಹಾಗೂ ನಮ್ಮ ಹನುಮಂತಪ್ಪನವರ ಜೊತೆಗೆ ಬಂದು, ಅನೇಕ ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಅವರು ಒಬ್ಬ

ದೇಶಪ್ರೇಮ ಹಾಗೂ ರಾಷ್ಟ್ರೀಯತೆ ಭಾವನೆಯಿಂದ ಕೂಡಿದ ಒಬ್ಬ ಮೇಧಾವಿಯನ್ನು ಇವತ್ತು ಕಳೆದುಕೊಂಡಂತಾಗಿದೆ. ಈ ರೀತಿಯಾಗಿ ಎಲ್ಲರಿಗೂ ಕೂಡ ಶ್ರದ್ಧಾಂಜಲಿಯನ್ನರ್ಪಿಸಿ ತಾವು ಏನು ಸಂತಾಪ ಸೂಚನೆ ಮಂಡಿಸಿದ್ದೀರಿ ಅದನ್ನು ನಾನೂ ಕೂಡ ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆಗೆ ಬೆಂಬಲ ಕೊಡುತ್ತಾ, ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ, ವಿಧಾನಸಭೆಯ ಮಾಜಿ ಸದಸ್ಯರುಗಳಾದಂಥ ಶ್ರೀ ಗೋವಿಂದರಾವ್ ಲಕ್ಷ್ಮಣರಾವ್ ಅಸ್ತೇಕರ್ ಅವರು, ಶ್ರೀ ಕೆ. ಎಂ. ರುದ್ರಪ್ಪನವರು, ಶ್ರೀ ಗುಡನ್‌ಶಹಾ ಖಾನ್‌ಶಹಾ ಟಕ್ಕೇದ್‌ರವರು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದಂಥ ಶ್ರೀ ಐಎನ್‌ಎ ರಾಮರಾವ್‌ರವರು, ನಿಧನವಾಗಿರತಕ್ಕಂಥದ್ದು ನಮಗೆಲ್ಲರಿಗೂ ತುಂಬಾ ದುಃಖ ತಂದಿರತಕ್ಕಂಥ ಸಂಗತಿ. ಸನ್ಮಾನ್ಯ ಗೋವಿಂದರಾವ್ ಲಕ್ಷ್ಮಣ್‌ರಾವ್ ಅಸ್ತೇಕರ್‌ರವರು, ಬಾಗೇವಾಡಿ ವಿಧಾನಸಭಾ ಕ್ಷೇತ್ರದಿಂದ 6–7ನೇ ವಿಧಾನಸಭೆಗೆ ಚುನಾಯಿತರಾಗಿ ತಮ್ಮದೇ ಆದಂಥ ಒಂದು ಸೇವೆಯನ್ನು ಸಲ್ಲಿಸಿದ್ದಾರೆ. ಕೆ. ಎಂ. ರುದ್ರಪ್ಪನವರು, ಹಿರಿಯ ಸ್ವಾತಂತ್ರ್ಯ ಯೋಧರಾಗಿ, ಕರ್ನಾಟಕ ಏಕೀಕರಣದ ಹೋರಾಟ ಮಾಡುವುದರ ಮೂಲಕ ತಮ್ಮದೇ ಆದಂಥ ಒಂದು ಛಾಪನ್ನು ಮೂಡಿಸಿದ್ದಾರೆ. ಐಎನ್‌ಎ ರಾಮರಾವ್‌ರವರ ಬಗ್ಗೆ ಹೇಳುವುದಾದರೆ, ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ ನಿಕಟವರ್ತಿಗಳಾಗಿದ್ದರು. ನೇತಾಜಿಯವರು ಸ್ಥಾಪಿಸಿದ ಇಂಡಿಯನ್ ನ್ಯಾಷನಲ್ ಆರ್ಮಿಯ ಸದಸ್ಯರಾಗಿ ಅಪಾರ ಸೇವೆ ಮಾಡಿದ್ದರು ಎನ್ನುವಂತದ್ದು ತಮಗೆಲ್ಲರಿಗೂ ಗೊತ್ತಿರುವ ಸಂಗತಿ. ಈ ನಾಡಿಗೆ ಅನೇಕ ರೀತಿಯಲ್ಲಿ ಸೇವೆ ಸಲ್ಲಿಸಿದಂಥ ಧೀಮಂತ ವ್ಯಕ್ತಿಗಳು ದೈವಾಧೀನರಾಗಿದ್ದಾರೆ. ಅವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತಾ, ಈ ದುಃಖವನ್ನು ಭರಿಸುವ ಶಕ್ತಿ ಅವರ ಕುಟುಂಬದವರಿಗೆ ಬರಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತಾ, ತಮ್ಮ ಸಂತಾಪ ಸೂಚನೆಗೆ ನಾನು ಧ್ವನಿಗೂಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯವನ್ನು ನಾನು ಕೂಡ ಬೆಂಬಲಿಸಿ, ಇವತ್ತು ನಮ್ಮನ್ನು ಅಗಲಿರತಕ್ಕಂಥ ಗೋವಿಂದರಾವ್ ಲಕ್ಷ್ಮಣರಾವ್ ಅಸ್ತೇಕರ್‌ರವರು ಕೆ.ಎಂ. ರುದ್ರಪ್ಪನವರು, ಗುಡನ್‌ಶಹಾ ಖಾನ್‌ಶಹಾ ಟಕ್ಕೇದ್‌ರವರು, ಈ ಮನೆಯ ಸದಸ್ಯರಾಗಿ ಸಾರ್ವಜನಿಕ ಜೀವನದಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿರತಕ್ಕಂಥವರು. ಐಎನ್‌ಎ ರಾಮರಾವ್‌ರವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಮತ್ತು ಭಾರತ ಸೇವಾ ದಳದ ಜಂಟಿ ಕಾರ್ಯದರ್ಶಿಯಾಗಿ ಬದುಕಿರುವವರೆಗೂ ಅದರ ಸಂಘಟನಾ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ಭಾರತ ಸೇವಾ ದಳದ ಯಾವುದೇ ಕಾರ್ಯಕ್ರಮವಾದರೂ ನನ್ನನ್ನು ಅನೇಕ ಸಾರಿ ಬಂದು ಭೇಟಿ ಮಾಡಿ ಭಾರತ ಸೇವಾ ದಳಕ್ಕೆ ಹೆಚ್ಚು ಹಣ ಕೊಡಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದರು. ಅವರು ಬಹಳ ಆಗಾಧವಾದಂಥ ದೇಶಪ್ರೇಮವನ್ನು ಇಟ್ಟುಕೊಂಡು, ದೇಶದ ಬಗ್ಗೆ ಚಿಂತನೆ ಮಾಡುತ್ತಿದ್ದಂಥ, ಕೆಲವು ಸ್ವಾತಂತ್ರ್ಯಪ್ರೇಮಿಗಳಲ್ಲಿ ಮಾನ್ಯ ಐಎನ್‌ಎ ರಾಮರಾವ್‌ರವರು ಕೂಡ ಒಬ್ಬರು. ಇವತ್ತು ನಾವು ಇದನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ ಜೊತೆಯಲ್ಲಿ ಅವರ ನಿಕಟವರ್ತಿಯಾಗಿ ಕೆಲಸ ಮಾಡಿದಂಥವರು, ಈ ದೇಶಕ್ಕೆ ಸ್ವಾತಂತ್ರ್ಯ ತರಬೇಕು ಎನ್ನತಕ್ಕಂಥ ಉತ್ಕಟವಾದಂಥ ಛಲವನ್ನು ಇಟ್ಟುಕೊಂಡು,

ನೇತಾಜಿಯವರ ಜೊತೆಯಲ್ಲಿಯೇ ಹೋರಾಟ ಮಾಡಿ, ಇಲ್ಲಿಯವರೆವಿಗೂ ಇದ್ದೂ ದಿನಾಂಕ 17-2-05ರಂದು-ನಮ್ಮನ್ನು ಅಗಲಿದ್ದಾರೆ. ಇವರೆಲ್ಲರ ಬದುಕುಗಳು ಕೂಡ ನಮಗೆ ಹಾಗೂ ನಮ್ಮ ಯುವ ಜನರಿಗೆ ಸ್ಫೂರ್ತಿ ಕೊಡತಕ್ಕಂಥ ಬದುಕನ್ನು, ವಿಚಾರಗಳನ್ನು ಬಿಟ್ಟು ಹೋಗಿದ್ದಾರೆ. ಇವುಗಳನ್ನು ನಾವಿಂದು ನೆನಪಿಸಿಕೊಳ್ಳಬೇಕಾಗಿದೆ. ಆ ಮೂಲಕ ಅವರಿಗೆ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಈ ಸಂದರ್ಭದಲ್ಲಿ ಆಶಿಸುತ್ತೇನೆ. ಅವರ ಕುಟುಂಬ ವರ್ಗದವರಿಗೂ ಕೂಡ ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ಆ ದೇವರು ನೀಡಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇನ್ನು ಕೆ.ಎಂ.ರುದ್ರಪ್ಪನವರು, ಗೋವಿಂದರಾವ್ ಲಕ್ಷ್ಮಣರಾವ್ ಅಸ್ತೇಕರ್‌ರವರು, ನಾವು ಎಂಎಲ್‌ಎ ಆದಾಗ ಇವರು ಯಾರೂ ಇರಲಿಲ್ಲ. ನಮಗಿಂತ ಮುಂಚೆ ಎಂಎಲ್‌ಎ ಆಗಿ ಕೆಲಸ ಮಾಡಿ ಹೋಗಿರತಕ್ಕಂಥವರು. ಇದೇ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಈ ಗುಡನ್‌ಶಹಾ ಖಾನ್‌ಶಹಾ ಟಕ್ಕೇದ್‌ರವರು, ರುದ್ರಪ್ಪನವರು, ಅಸೆಂಬ್ಲಿಯಲ್ಲಿ ಬಹಳ ಆಕ್ಟೀವ್ ಆಗಿ ಇರುತ್ತಿದ್ದರೆಂದು, ಈಗ ಅವರು ಯಾರೂ ಇಲ್ಲ, ಅವರು ಈ ಮನೆಯಲ್ಲಿ ಇದರ ಗೌರವ ಎತ್ತಿಹಿಡಿಯುವಂಥ ಕೆಲಸ ಮಾಡಿ ನಮಗೆಲ್ಲಾ ಮಾರ್ಗದರ್ಶನ ಮಾಡಿದ್ದಾರೆ. ಅವರು ಈ ಅಸೆಂಬ್ಲಿಯಲ್ಲಿ ಏನೇನು ಮಾತನಾಡಿದ್ದಾರೆ ಅವೆಲ್ಲವೂ ಕೂಡ ಮಾರ್ಗದರ್ಶನಗಳಾಗುತ್ತವೆ. ಅವರು ಎಸ್ಟಾಬ್ಲಿಷ್ ಮಾಡಿರತಕ್ಕಂಥ ನಾರ್ಮ್ಸ್, ವ್ಯಾಲ್ಯೂಸ್, ಅವೆಲ್ಲವೂ ಕೂಡ ನಮಗೆ ಹಾಗೂ ಹೊಸ ಸದಸ್ಯರಿಗೆ ಮಾರ್ಗ ದರ್ಶನಗಳಾಗುತ್ತವೆ. ಇದನ್ನು ನೆನಪು ಮಾಡಿಕೊಳ್ಳುತ್ತಾ, ಇವರೆಲ್ಲರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮನ್ನೆಲ್ಲಾ ಅಗಲಿರುವ ಈ ಎಲ್ಲಾ ಹಿರಿಯರುಗಳಿಗೆ ನಾನೂ ಕೂಡ ವೈಯಕ್ತಿಕವಾಗಿ ಹಾಗೂ ನನ್ನ ಪಕ್ಷವಾದ ಸಂಯುಕ್ತ ಜನತಾದಳದ ಪರವಾಗಿ ಶ್ರದ್ಧಾಂಜಲಿ ಅರ್ಪಿಸುತ್ತಾ ಇವರುಗಳ ಅಗಲಿಕೆಯಿಂದ ಆಗಿರತಕ್ಕಂಥ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಭಗವಂತ ಇವರ ಕುಟುಂಬ ವರ್ಗದವರಿಗೆ ನೀಡಲೆಂದು ಪ್ರಾರ್ಥಿಸುತ್ತೇನೆ. ಶ್ರೀಯುತರುಗಳಲ್ಲಿ ಶ್ರೀ ಕೆ.ಎಂ. ರುದ್ರಪ್ಪನವರ ಬಗ್ಗೆ ಕೇಳಿದ್ದೇನೆ. ಇವರೆಲ್ಲರೂ ಬಹಳ ಹಿರಿಯರು. ಆದ್ದರಿಂದ ಇವರೆಲ್ಲರೂ ನಮಗೆ ಪರಿಚಿತರು ಎಂದು ಹೇಳಿಕೊಂಡರೆ ಬಹಳ ತಪ್ಪಾಗುತ್ತದೆ. ಹಾಸನ ಚಿಕ್ಕಮಗಳೂರು ಮತ್ತು ತುಮಕೂರು ಭಾಗಗಳಲ್ಲಿ ಹಿಂದೆ ಆದಂಥ ಹೋರಾಟಗಳಲ್ಲಿ ಶ್ರೀ ಕೆ.ಎಂ. ರುದ್ರಪ್ಪನವರು ಪ್ರಸಿದ್ಧಿಯಾಗಿದ್ದರು. ನಾವು ಹುಡುಗರು ಇದ್ದಂಥ ಸಂದರ್ಭದಲ್ಲಿ ನಮ್ಮ ಭಾಗದಲ್ಲಿ ಏನಾದರೂ ಹೋರಾಟ ಆಗುತ್ತಿದೆ. ಅಂದರೆ ಅಲ್ಲಿ ಶ್ರೀ ಕೆ.ಎಂ.ರುದ್ರಪ್ಪನವರು ಇದ್ದಾರೆ ಎಂದು ಕೇಳಿ ಬರುತ್ತಿತ್ತು. ಇವರು ಅನೇಕರಿಗೆ ಮಾರ್ಗದರ್ಶಕರಾಗಿದ್ದರು ಮತ್ತು ಶ್ರೀಯುತರು ಹಿರಿಯ ವಕೀಲರೂ ಕೂಡ ಆಗಿದ್ದರು. ಹಾಗೆಯೇ ವಕೀಲರ ಪರವಾಗಿಯೂ ಕೂಡ ಅನೇಕ ಹೋರಾಟ ಮಾಡಿದ್ದರು. ಶ್ರೀಯುತರ ಬಗ್ಗೆ ನನಗೆ ಸ್ವಲ್ಪ ಗೊತ್ತಿರುವುದರಿಂದ ಇವರ ಅಗಲಿಕೆಯಿಂದ ಆಗಿರತಕ್ಕಂಥ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಅವರ ಮನೆಯವರಿಗೆ ದೇವರು ಕೊಡಲಿ ಎಂದು ಪ್ರಾರ್ಥನೆ ಮಾಡುತ್ತಾ, ಇವರುಗಳ ಅಗಲಿಕೆಯಿಂದ ನಮಗೆ ನೋವೇನು ಇಲ್ಲ. ಏಕೆಂದರೆ, ಇವರೆಲ್ಲರೂ ಪೂರ್ಣ ವಯಸ್ಸನ್ನು ಅನುಭವಿಸಿ ನಮ್ಮನ್ನು ಬಿಟ್ಟು ಅಗಲಿದ್ದಾರೆ. ಆದರೂ ಕೂಡ ಶ್ರೀಯುತರುಗಳು ಮಾಡಿರತಕ್ಕಂಥ ಕಾರ್ಯ ನಮಗೆಲ್ಲಾ ಮಾರ್ಗದರ್ಶನ ಆಗಲಿ ಎಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಮಾತಿಗೆ ನಾನೂ ಕೂಡ ಧ್ವನಿಗೂಡಿಸಿ ಶ್ರೀಯುತರುಗಳಿಗೆ ಶ್ರದ್ಧಾಂಜಲಿ ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ಸಂಪೂರ್ಣವಾದ ಬೆಂಬಲವನ್ನು ನೀಡುತ್ತೇನೆ. ಹಾಗೆಯೇ, ಈ ಎಲ್ಲಾ ಮಹನೀಯರ ಆತ್ಮಕ್ಕೆ ಶಾಂತಿ ದೊರಕಲೆಂದು ಪ್ರಾರ್ಥನೆ ಮಾಡುತ್ತೇನೆ. ಶ್ರೀಯುತರುಗಳಲ್ಲಿ ಬಹಳ ಜನರು ಇಲ್ಲಿ ಶಾಸಕರಾಗಿ ಮತ್ತು ಹೊರಗಡೆ ಅನೇಕ ಕೆಲಸಗಳನ್ನೂ ಕೂಡ ಮಾಡಿದ್ದಾರೆ. ಶ್ರೀಯುತರುಗಳಲ್ಲಿ ಪ್ರಾಮುಖ್ಯವಾಗಿ ಶ್ರೀ ಐಎನ್‌ಎ ರಾಮರಾವ್‌ರವರು ಈ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ ಜೊತೆಯಲ್ಲಿ ಬಹಳ ವರ್ಷಗಳ ಕಾಲ ಇದ್ದರು. ಐಎನ್‌ಎ ರದ್ದಾದ ನಂತರ ಇವರು ಕರ್ನಾಟಕಕ್ಕೆ ಬಂದರು. ಆಗ ಕರ್ನಾಟಕದಲ್ಲಿ ಶ್ರೀ ನಾ.ಸು. ಹರ್ಡಿಕರ್‌ರವರು ಸ್ಥಾಪನೆ ಮಾಡಿದಂಥ ಭಾರತ ಸೇವಾ ದಳದ ಮುಖ್ಯಸ್ಥರಾಗಿ ಬಹಳ ವರ್ಷ ಶ್ರೀ ಐಎನ್‌ಎ ರಾಮರಾವ್‌ರವರು ಕೆಲಸ ಮಾಡಿದರು. ಕೊನೆಯ ಉಸಿರು ಇರುವವರೆಗೂ ಆ ಕಾರ್ಯಾಲಯದಲ್ಲಿಯೇ ಕೆಲಸ ಮಾಡಿದರು. ಶ್ರೀಯುತರು ನನ್ನ ಕ್ಷೇತ್ರದ ಪಕ್ಕದ ಊರಿನವರಾಗಿದ್ದಾರೆ. ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದಲ್ಲಿ ಕಳಕಳಿಯ ಮನವಿ ಮಾಡುವುದೇನೆಂದರೆ, ದೇಶಪ್ರೇಮವನ್ನು ಹುಟ್ಟಿಸತಕ್ಕಂತಹ ಒಂದು ಪ್ರಮುಖವಾದ ಮತ್ತು ಒಳ್ಳೆಯ ಉತ್ತಮವಾದಂಥ ಭಾರತ ಸೇವಾ ದಳ ಸಂಸ್ಥೆಯನ್ನು ಶ್ರೀ ನಾ.ಸು. ಹರ್ಡಿಕರ್‌ರವರು ಸ್ಥಾಪನೆ ಮಾಡಿದ್ದರು. ಇದನ್ನು ಶ್ರೀಯುತರು ಇಲ್ಲಿಯವರೆಗೆ ನಡೆಸಿಕೊಂಡು ಬಂದಿದ್ದರು. ಈ ಸಂಸ್ಥೆಯ ವೈಭವತೆ ಉತ್ತುಂಗ ಶಿಖರಕ್ಕೆ ಹೋಗಿತ್ತು. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಈ ಭಾರತ ಸೇವಾದಳ ಬಹಳ ಉನ್ನತ ಮಟ್ಟಕ್ಕೆ ಹೋಗಿತ್ತು. ಆ ಕಾಲದಲ್ಲಿ ನಾವೆಲ್ಲರೂ ಭಾರತ ಸೇವಾ ದಳದಲ್ಲಿ ಇದ್ದಂಥವರು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಯವರ ಹಾಗೂ ಎಲ್ಲ ಮಾನ್ಯ ಸಚಿವರ ಗಮನಕ್ಕೆ ತಮ್ಮ ಮೂಲಕ ತರುವುದೇನೆಂದರೆ, ಈ ಸಂದರ್ಭದಲ್ಲಿ ಅವರಿಗೆ ಸಲ್ಲಿಸಬೇಕಾದ ಸ್ಮಾರಕ ಏನೆಂದರೆ, ಭಾರತ ಸೇವಾದಳವನ್ನು ಹೆಚ್ಚಿನ ರೀತಿಯಲ್ಲಿ ಬೆಳೆಯುವುದಕ್ಕೆ ಹಾಗೂ ಈ ಸಂಘಟನೆ ರಾಜ್ಯದ ಎಲ್ಲಾ ಕ್ಷೇತ್ರಗಳ ಪ್ರತಿಯೊಂದು ಹಳ್ಳಿಗಳಲ್ಲಿ ಬೆಳೆಯುವುದಕ್ಕೆ ಇವತ್ತಿನದಿವಸ ಆ ಒಂದು ಸಂಸ್ಥೆಗೆ ಹಣಕಾಸಿನ ಅಡಚಣೆ ಬಹಳ ತೀವ್ರವಾಗಿದೆ. ನಾನು ಶ್ರೀಯುತರ ಪಾರ್ಥಿವ ಶರೀರವನ್ನು ನೋಡುವುದಕ್ಕೆ ಹೋದಾಗ ಈ ಅಂಶ ನನ್ನ ಗಮನಕ್ಕೆ ಬಂತು. ಮಾಜಿ ಶಾಸಕರಾದಂಥ ಶ್ರೀ ಯು. ಆರ್. ಸಭಾಪತಿಯವರು ಭಾರತ ಸೇವಾ ದಳದ ಅಧ್ಯಕ್ಷರಾಗಿದ್ದಾರೆ. ಮತ್ತೆ ಈ ಒಂದು ಸಂಘಟನೆಯ ಉನ್ನತಿಗಾಗಿ ಮಾನ್ಯ ಜಾಫರ್ ಷರೀಫ್‌ರವರು ಸಾಕಷ್ಟು ದುಡಿದಿದ್ದಾರೆ. ಹಾಗೆಯೇ, ಈ ಭಾರತ ಸೇವಾ ದಳವನ್ನು ಉಳಿಸುವುದಕ್ಕೆ ಇವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮತ್ತೆ ಶ್ರೀ ಐಎನ್‌ಎ ರಾಮರಾವ್‌ರವರ ಕಾಲು ಮುರಿದಂಥ ಸಂದರ್ಭದಲ್ಲಿ ಮತ್ತೆ ಅವರಿಗೆ ಮರು ಜೀವವನ್ನು ಶ್ರೀ ಜಾಫರ್ ಷರೀಫ್‌ರವರು ತಂದು ಕೊಟ್ಟರೆಂದು ಶ್ರೀಯುತ ರಾಮರಾವ್‌ರವರು ಹೇಳಿದ್ದರು. ಚಾಮರಾಜನಗರ ಕ್ಷೇತ್ರದ ಪಕ್ಕದಲ್ಲಿರುವ ದಟ್ಟವಾಡಿ ಎಂಬ ಊರಿನಲ್ಲಿರುವ ಅವರ ಮನೆಯಲ್ಲಿ ನಾನು ಅನೇಕ ಸಾರಿ ಅವರನ್ನು ಭೇಟಿ ಮಾಡಿದ್ದೇನೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಹೇಳುವುದೇನೆಂದರೆ, ಇವತ್ತು ಅಥವಾ ನಾಳೆ ದಿವಸ ಆ ಸಂಸ್ಥೆಯವರನ್ನು ಕರೆದು ಅವರ ಸಮಸ್ಯೆ ಮತ್ತು ಪರಿಸ್ಥಿತಿಯನ್ನು ಕೇಳಿ ಅವರಿಗೆ ಮಾಡಬೇಕಾಗಿರತಕ್ಕಂಥ ಸ್ಮಾರಕ ಏನೆಂದರೆ, ಭಾರತ ಸೇವಾ ದಳವನ್ನು ಉನ್ನತಮಟ್ಟಕ್ಕೆ

ಅವರಿಗೆ ಮಾಡಬೇಕಾಗಿರತಕ್ಕಂಥ ಸ್ಮಾರಕ ಏನೆಂದರೆ, ಭಾರತ ಸೇವಾ ದಳವನ್ನು ಉನ್ನತಮಟ್ಟಕ್ಕೆ ತರುವುದರ ಜ್ತೊತೆಗೆ ಅವರಿಗೆ ಹೆಚ್ಚಿನ ಅನುದಾನ ಕೊಟ್ಟು ಆ ಸಂಸ್ಥೆ ನಿರಂತರವಾಗಿ ಮತ್ತು ಚಿರಂಜೀವಿಯಾಗಿ ಬದುಕುವುದಕ್ಕೆ ತಾವು ಸಹಾಯ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಶ್ರೀಯುತರ ಆತ್ಮಕ್ಕೆ ಶಾಂತಿ ದೊರಕಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನಮ್ಮ ಪಕ್ಷದ ಪರವಾಗಿ ನಾನು ಬೆಂಬಲವನ್ನು ಕೊಡುತ್ತಾ, ನಮ್ಮನ್ನು ಅಗಲಿರತಕ್ಕಂಥ ಹಿರಿಯರಿಗೆ ಶ್ರದ್ಧಾಂಜಲಿ ಅರ್ಪಿಸುತ್ತೇನೆ. ಶ್ರೀ ಐಎನ್‌ಎ ರಾಮರಾವ್‌ರವರು ಒಬ್ಬರು ಬಿಟ್ಟರೆ ಬೇರೆಯವರು ನನಗೆ ಅಷ್ಟೇನೂ ಗೊತ್ತಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಈಗಾಗಲೇ ಹೇಳಿದ ಹಾಗೆ ಶ್ರೀ ಐಎನ್‌ಎ ರಾಮರಾವ್‌ರವರು ಕರ್ನಾಟಕದಲ್ಲಿ ಭಾರತ ಸೇವಾ ದಳದ ಮುಖಂಡರಾಗಿದ್ದರು ಎನ್ನತಕ್ಕಂಥದ್ದು ಪ್ರತಿಯೊಬ್ಬರಿಗೂ ಸಹ ಗೊತ್ತಿದೆ. ಸಣ್ಣ ಹುಡುಗನಾಗಿದ್ದಾಗ ನಾನೂ ಕೂಡ ಸೇವಾ ದಳದಲ್ಲಿದ್ದೆ. ಸೇವಾದಳ ಎಂದರೆ ರಾಮರಾವ್, ರಾಮರಾವ್ ಎಂದರೆ ಸೇವಾದಳ ಎಂಬ ಮಟ್ಟಿಗೆ ಈ ಒಂದು ಸಂಘಟನೆಯನ್ನು ಪ್ರಸಿದ್ಧಿಗೊಳಿಸಿದ್ದರು. ಇದನ್ನು ಶ್ರೀ ಹರ್ಡಿಕರ್‌ರವರು ಸ್ಥಾಪನೆ ಮಾಡಿದ್ದರೂ ಕೂಡ ಶ್ರೀ ರಾಮರಾವ್‌ರವರಿಂದ ಈ ಒಂದು ಸೇವಾ ದಳ ಪ್ರಸಿದ್ಧಿಯಾಯಿತು. ಇಡೀ ದೇಶಕ್ಕೆ ತಮ್ಮ ಸರ್ವಸ್ವವನ್ನು ಅರ್ಪಿಸಿದಂಥ ಜನಾಂಗ ಇವತ್ತಿನ ದಿವಸ ಇಲ್ಲ. ನಾನು ದೇಶಕ್ಕೋಸ್ಕರ ಏನು ಮಾಡಿದೆ ಎಂದು ಅವರೇ ಪ್ರಶ್ನೆ ಮಾಡಿಕೊಳ್ಳುತ್ತಿದ್ದಂಥ ಜನಾಂಗ ಆಗ ಇತ್ತು. ಆದರೆ, ಇವತ್ತಿನ ದಿವಸ ಏನಾಗಿದೆ ಎಂದರೆ ನನಗೆ ದೇಶ ಏನು ಮಾಡಿದೆ ಎಂದು ಕೇಳತಕ್ಕಂಥ ಜನಾಂಗ ಇವತ್ತಿನ ದಿವಸ ಇದೆ. ಈ ಎರಡು ಜನಾಂಗಗಳ ಮಧ್ಯೆ ಇಷ್ಟೊಂದು ವ್ಯತ್ಯಾಸವನ್ನು ನೋಡಬಹುದಾಗಿದೆ. ಈಗ ಇರತಕ್ಕಂಥ ಜನರೇಷನ್ ದೇಶ ನನಗೆ ಏನು ಕೊಟ್ಟಿದೆ ಎಂದು ಕೇಳುತ್ತೆ. ಆದರೆ, ಆ ಜನರೇಷನ್ ದೇಶಕ್ಕಾಗಿ ನಾನು ಏನು ಕೊಟ್ಟಿದ್ದೇನೆ ಎಂದು ಕೇಳಿಕೊಳ್ಳುತ್ತಿತ್ತು. ಇಂಥ ಒಂದು ಜನಾಂಗದಿಂದ ಬಂದಂಥ ಶ್ರೀ ರಾಮರಾವ್‌ರವರು ತೀರಿಕೊಂಡಿದ್ದಾರೆ. ಶ್ರೀಯುತರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಇವರ ಕುಟುಂಬ ವರ್ಗದವರಿಗೆ ಶಾಂತಿ ಮತ್ತು ನೆಮ್ಮದಿಯನ್ನು ಭಗವಂತ ನೀಡಲೆಂದು ಕೋರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

Sri Manohar Kallappa Kinekar : Mr. Speaker Sir, Sri Govindarao Lakshmanrao Astekar was always a Member of this House. He was belonging to M.E.S. Party. He was working in Belgaum Taluka for educational and economic development. He had worked for the poor and farmers. He had participated in so many agitations organised by the M.E.S. But till the end, he could not achieve the aim. But still his work will be a guidance for us. What he has worked in his period, was an example of his good work in our area. He was the Chairman of the Maratha Bank, which is a leading bank in

Belgaum District. He was the Director of educational institutions, Dakshina Maharashtra Shikshan Samstha. Many of the villages got schools and high schools due to his effort. Till the end of his life, he has worked for the poor people and farmers. All the other departed members have also worked for their communities. That will be the guidance for us. We have to follow their good work. That will be the way for development. ಮೈ ಸಬ್‌ಕೋ ಶ್ರದ್ಧಾಂಜಲಿ ಅರ್ಪಣ್‌ಕರಕೆ ಭಗವಾನ್ ಸೆ ಪ್ರಾರ್ಥನ್ ಕರ್ತಾಹೂಂ ಉನ್ ಆತ್ಮೊಂಕೊ ಶಾಂತಿ ಮಿಲೆ.

ಅಧ್ಯಕ್ಷರು : ದಿವಂಗತರಾದ ಶ್ರೀ ಗೋವಿಂದರಾವ್ ಲಕ್ಷ್ಮಣರಾವ್ ಅಸ್ತೇಕರ್ ಮತ್ತು ಶ್ರೀ ಕೆ.ಎಂ. ರುದ್ರಪ್ಪ, ಶ್ರೀ ಗುಡನ್‌ಶಹಾ ಖಾನ್‌ಶಹಾ ಟಕ್ಕೇದ್ ಹಾಗೂ ಶ್ರೀ ಐಎನ್‌ಎ ರಾಮರಾವ್‌ರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು.)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2. : ಕಾರ್ಯದರ್ಶಿಯವರ ವರದಿ

ಶ್ರೀ ಟಿ. ರಾಜಣ್ಣ (ಕಾರ್ಯದರ್ಶಿ ವಿಧಾನಸಭೆ) ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಅನುಬಂಧ - I
ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ವಿಧೇಯಕ, 2005
(2005ರ ವಿಧಾನಪರಿಷತ್ತಿನ ವಿಧೇಯಕ ಸಂಖ್ಯೆ 3)
(ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿ)

ಬೀದರ್ ಜಿಲ್ಲೆಯ ಬಸವ ಕಲ್ಯಾಣ ಪಟ್ಟಣದಲ್ಲಿನ ಮತ್ತು ಅದರ ಸುತ್ತಮುತ್ತಲಿನ ಪರಂಪರೆಯ ತಾಣಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಒಂದು ಮಂಡಳಿಯನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

ಬೀದರ್ ಜಿಲ್ಲೆಯ ಬಸವಕಲ್ಯಾಣ ಪಟ್ಟಣದಲ್ಲಿನ ಮತ್ತು ಅದರ ಸುತ್ತಮುತ್ತಲಿನ ಪರಂಪರೆಯ ತಾಣಗಳನ್ನು ಅಂತಾರಾಷ್ಟ್ರೀಯ ಯಾತ್ರಾ ಸ್ಥಳವಾಗಿ, ಸಾಂಸ್ಕೃತಿಕ ಮತ್ತು ಪ್ರವಾಸ ಕೇಂದ್ರವಾಗಿ ಅಭಿವೃದ್ಧಿಗೊಳಿಸಲು ಮತ್ತು ಅದನ್ನು ನಿರ್ವಹಿಸಲು ಒಂದು ಮಂಡಳಿಯ ಸ್ಥಾಪನೆಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

ಅಧ್ಯಾಯ - I

ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು 2ನೇ ಪ್ರಕರಣದ (ಬಿ) ಖಂಡದಲ್ಲಿ ಪರಿಭಾಷಿಸಲಾದಂತೆ ಬಸವ ಕಲ್ಯಾಣದ ಪ್ರದೇಶಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು, ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ''ಸೌಕರ್ಯ'' ಎಂಬುದರಲ್ಲಿ ರಸ್ತೆಗಳು, ಬೀದಿಗಳು, ಸುರಂಗ ಮಾರ್ಗಗಳು, ದೀಪವ್ಯವಸ್ಥೆ, ಚರಂಡಿ ವ್ಯವಸ್ಥೆ, ನಿರ್ಮಲೀಕರಣ, ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಅಥವಾ ಇತರ ಅನುಕೂಲಗಳು; ಲೋಕೋಪಯೋಗಿ ಕಾಮಗಾರಿಗಳು, ಮಾರುಕಟ್ಟೆ ಸ್ಥಳಗಳು, ಅಂಚೆ ಕಚೇರಿ, ಬ್ಯಾಂಕು, ಆಸ್ಪತ್ರೆ, ಚಿಕಿತ್ಸಾಲಯ, ಪೊಲೀಸು ಠಾಣೆ, ನ್ಯಾಯಬೆಲೆ ಅಂಗಡಿ, ಹಾಲಿನ ಕೇಂದ್ರ, ಗ್ರಂಥಾಲಯ, ಮನೋರಂಜನಾ ಕೇಂದ್ರಗಳು, ಮಂಡಳಿಯು ಪ್ರಾಧಿಕೃತಗೊಳಿಸಿದ ಜನೋಪಯೋಗಿ ಸೇವೆಯ ಯಾವುವೇ ಸೇವಾ ಕೇಂದ್ರಗಳು, ಅಥವಾ ಇತರ ಸೌಲಭ್ಯಗಳು; ಮತ್ತು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸೌಕರ್ಯಗಳು ಒಳಗೊಳ್ಳುತ್ತವೆ;

(ಬಿ) 'ಮಂಡಳಿ' ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ;

(ಸಿ) 'ಬಸವ ಕಲ್ಯಾಣ' ಎಂದರೆ, ಅದು ಬಸವ ಕಲ್ಯಾಣ ಪಟ್ಟಣದ ಪುರಸಭಾಸಮಿತಿಯ ಸರಹದ್ದಿನೊಳಗಿನ ಮತ್ತು ಪಟ್ಟಣದಿಂದ ಹನ್ನೆರಡು ಕಿಲೋ ಮೀಟರುಗಳೊಳಗಿನ ಪ್ರದೇಶ ಮತ್ತು ಬಸವಕಲ್ಯಾಣದ ಪರಂಪರೆಯ ತಾಣಗಳ ಅಭಿವೃದ್ಧಿಗಾಗಿ ಕಾಲಕಾಲಕ್ಕೆ ಸರ್ಕಾರವು ಆರ್ಜಿಸಬಹುದಾದ ಭೂ-ಪ್ರದೇಶ ಹಾಗೂ ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರವು ಘೋಷಿಸಬಹುದಾದಂಥ ಇತರೆ ಪ್ರದೇಶಗಳು ಮತ್ತು ಅದು ಅವುಗಳನ್ನು ಒಳಗೊಳ್ಳುತ್ತದೆ.

(ಡಿ) 'ಅಧ್ಯಕ್ಷ' ಎಂದರೆ, ಮಂಡಳಿಯ ಅಧ್ಯಕ್ಷ;

(ಇ) 'ಆಯುಕ್ತ' ಎಂದರೆ, 10ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಮಂಡಳಿಯ ಆಯುಕ್ತ;

(ಎಫ್) 'ನಿಧಿ' ಎಂದರೆ, ಮಂಡಳಿಯ ನಿಧಿ;

(ಜಿ) "ಪರಂಪರೆಯ ತಾಣ" ಎಂದರೆ, ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಹಾಗೂ ಅವಶೇಷಗಳ ಅಧಿನಿಯಮ 1958ರ (1958ರ ಕೇಂದ್ರ ಅಧಿನಿಯಮ 24) ಅಡಿಯಲ್ಲಿ ಸಂರಕ್ಷಿತ ಪ್ರದೇಶವೆಂದು ಉಲ್ಲೇಖಿಸಲಾದ ಪ್ರದೇಶವನ್ನು ಹೊರತುಪಡಿಸಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ, ತಾಣಗಳನ್ನು ಒಳಗೊಳ್ಳುವ ಸಂಪೂರ್ಣ ಪ್ರದೇಶವಾಗಿದೆ.

(ಎಚ್) 'ಸದಸ್ಯ' ಎಂದರೆ, ಮಂಡಳಿಯ ಸದಸ್ಯ;

(ಐ) 'ವಿನಿಯಮಗಳು' ಎಂದರೆ, 46ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಮಂಡಳಿಯ ವಿನಿಯಮಗಳು;

(ಜೆ) 'ಅನುಸೂಚಿ' ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿ;

ಅಧ್ಯಾಯ - II

ಮಂಡಳಿ ಮತ್ತು ಅದರ ಉದ್ಯೋಗಿಗಳು

೩. ಮಂಡಳಿಯ ರಚನೆ.- (1) ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೇ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಎಂದು ಕರೆಯಲಾಗುವ ಒಂದು ಮಂಡಳಿಯನ್ನು ಸ್ಥಾಪಿಸತಕ್ಕದ್ದು.

(2) ಮಂಡಳಿಯು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಸ್ಥಳದಲ್ಲಿ ತನ್ನ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರತಕ್ಕದ್ದು.

(3) ಮಂಡಳಿಯು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(4) ಮಂಡಳಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಮುಖ್ಯಮಂತ್ರಿಗಳು, ಇವರು ಮಂಡಳಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು;

(ಬಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸಚಿವರು;

(ಸಿ) ಕಂದಾಯ ಇಲಾಖೆಯ ಪ್ರಭಾರದಲ್ಲಿರುವ ಸಚಿವರು;

(ಡಿ) ಬಸವಕಲ್ಯಾಣ ಕ್ಷೇತ್ರವನ್ನು ಭಾಗಶಃ ಅಥವಾ ಪೂರ್ಣವಾಗಿ ಪ್ರತಿನಿಧಿಸುವ ಹಾಗೂ ಅದರ ಎಲ್ಲೆಗಳೊಳಗೆ ತಮ್ಮ ಚುನಾವಣಾ ಕ್ಷೇತ್ರವನ್ನು ಹೊಂದಿರುವ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನಮಂಡಲದ ಸದಸ್ಯರು;

(ಇ) ಅಧ್ಯಕ್ಷರು, ಬಸವಸಮಿತಿ, ಬಸವಭವನ, ಬೆಂಗಳೂರು;

(ಎಫ್) ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ, ಬೆಂಗಳೂರು;

(ಜಿ) ಶರಣ ಬಸವೇಶ್ವರರು ಅಂಗೀಕರಿಸಿ ಸಾರಿದ ತತ್ವಗಳ ಅನುಷ್ಠಾನಕ್ಕಾಗಿ ದುಡಿದಂಥ, ರಾಜ್ಯಸರ್ಕಾರವು ನಾಮನಿರ್ದೇಶಿಸಿದ ಐವರಿಗೆ ಮೀರದ ಸದಸ್ಯರು, ಅವರುಗಳಲ್ಲಿ ಒಬ್ಬರು ಮುಖ್ಯ ಇಂಜಿನಿಯರ್, ಸಿವಿಲ್ ಹುದ್ದೆಯನ್ನು ಹೊಂದಿದ್ದ ವ್ಯಕ್ತಿಯಾಗಿರತಕ್ಕದ್ದು;

(ಎಚ್) ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ;

(ಐ) ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ;

(ಜೆ) ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ;

(ಕೆ) ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ/ಪೌರಾಡಳಿತ ಇಲಾಖೆ;

(ಎಲ್) ನಿರ್ದೇಶಕರು, ಪೌರಾಡಳಿತ ಇಲಾಖೆ;

(ಎಂ) ನಿರ್ದೇಶಕರು, ಪಟ್ಟಣ ಮತ್ತು ಗ್ರಾಮಾಂತರ ಯೋಜನೆ;

(ಎನ್) ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ;

(ಓ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್;

(ಪಿ) ಅಧ್ಯಕ್ಷರು, ಪುರಸಭಾ ಪರಿಷತ್, ಬಸವಕಲ್ಯಾಣ;

(ಕ್ಯೂ) ನಿರ್ದೇಶಕರು, ಕರ್ನಾಟಕ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯ ಇಲಾಖೆ;

(ಆರ್) ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಐವರನ್ನು ಮೀರದಂಥ ಇತರ ಪದನಿಮಿತ್ತ ಸದಸ್ಯರು;

(ಎಸ್) ಮಂಡಳಿಯ ಆಯುಕ್ತರು, ಇವರು ಸದಸ್ಯ-ಕಾರ್ಯದರ್ಶಿಯಾಗಿರತಕ್ಕದ್ದು.

4. **ಪದಾವಧಿ ಮತ್ತು ಸೇವಾ ಷರತ್ತುಗಳು.-** (1) ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು, ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಸರ್ಕಾರೇತರ ಸದಸ್ಯರು ಮೂರು ವರ್ಷಗಳ ಅವಧಿಗೆ ಪದಧಾರಣ ಮಾಡತಕ್ಕದ್ದು;

(2) ಯಾವೊಬ್ಬ ಸರ್ಕಾರೇತರ ಸದಸ್ಯನು ತನ್ನ ಸಹಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಬರೆಯುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು. ಆದರೆ ತನ್ನ ರಾಜೀನಾಮೆಯು ಅಂಗೀಕಾರವಾಗುವವರೆಗೂ ಪದದಲ್ಲಿ ಮುಂದುವರೆಯುತಕ್ಕದ್ದು.

(3) ಅಧಿಕಾರೇತರ ಸದಸ್ಯರು ನಿಯಮಿಸಬಹುದಾದಂಥ ಭತ್ಯಗಳನ್ನು ಪಡೆಯತಕ್ಕದ್ದು.

5. **ಸದಸ್ಯತ್ವಕ್ಕೆ ಅನರ್ಹತೆಗಳು.-** ಒಬ್ಬ ವ್ಯಕ್ತಿಯು,-

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದು ಕಾರವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತದವನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ಒಂದು ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದು ಹಾಕಲಾದ ವ್ಯಕ್ತಿಯಾಗಿದ್ದರೆ ಅಥವಾ ವಜಾ ಮಾಡಲಾದ ವ್ಯಕ್ತಿಯಾಗಿದ್ದರೆ; ಅಥವಾ

(ಇ) ಮಂಡಳಿಯ ಆದೇಶದಿಂದ ಮಾಡಲಾದ ಯಾವುದೇ ಕಾಮಗಾರಿಯಲ್ಲಿ ಅಥವಾ ಮಂಡಳಿಯೊಡನೆ ಅಥವಾ ಅದರ ಅಡಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವಯಂ ತಾನೇ ಅಥವಾ ಒಬ್ಬ ಪಾಲುದಾರನ ಅಥವಾ ಏಜೆಂಟನ ಮೂಲಕ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಎಫ್) ಮಂಡಳಿಯ ಪರವಾಗಿ, ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಮಂಡಲಿಯ ವಿರುದ್ಧವಾಗಿ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

-ಅವನು ಸದಸ್ಯನಾಗಿ ನೇಮಕ ಹೊಂದಲು ಅಥವಾ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು:

ಪರಂತು, ಒಬ್ಬ ವ್ಯಕ್ತಿಯು, ಮಂಡಳಿಯ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತನ್ನು ಪ್ರಕಟಿಸಿರುವ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ (1)ನೇ ಉಪ-ಪ್ರಕರಣದ (ಇ) ಖಂಡದ ಅಡಿಯಲ್ಲಿ ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥ ವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂದು ಭಾವಿಸತಕ್ಕದ್ದಲ್ಲ.

6. **ಸದಸ್ಯನನ್ನು ತೆಗೆದು ಹಾಕುವುದು.-** (1) ರಾಜ್ಯ ಸರ್ಕಾರವು ಸದಸ್ಯರೊಬ್ಬರನ್ನು, ಆತ,-

(ಎ) 5ನೇ ಪ್ರಕರಣದಲ್ಲಿ ಹೇಳಲಾದ ಅನರ್ಹತೆಗಳಲ್ಲಿ ಯಾವುದೇ ಅನರ್ಹತೆಗೆ ಒಳಪಟ್ಟರೆ:

ಪರಂತು ಯಾವ ಸದಸ್ಯರನ್ನೂ, ಆತ ಆ ಪ್ರಕರಣದ (1)ನೇ ಉಪ ಪ್ರಕರಣದ (ಇ) ಖಂಡದಲ್ಲಿ ಹೇಳಲಾದ ಅನರ್ಹತೆಗೆ ಒಳಗಾಗಿದ್ದಾನೆಂಬ ಕಾರಣದ ಮೇಲೆ, ಸದರಿ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ತೆಗೆದು ಹಾಕತಕ್ಕದ್ದಲ್ಲ; ಅಥವಾ

(ಬಿ) ಆತ ಕಾರ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಗೈರು ಹಾಜರಾಗಲು ಮಂಡಲಿಯಿಂದ ಅನುಮತಿ ಪಡೆಯದೆ ಮಂಡಳಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ:

ಪರಂತು, ಈ ಖಂಡವು ಪದನಿಮಿತ್ತ ಸದಸ್ಯರಿಗೆ ಅನ್ವಯವಾಗತಕ್ಕದ್ದಲ್ಲ; ಅಥವಾ

(ಡಿ) ಅವರನ್ನು ಆ ಪದದಲ್ಲಿ ಮುಂದುವರಿಸಿದರೆ, ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುವಂತೆ ತನ್ನ ಸ್ಥಾನವನ್ನು ಆತ ದುರುಪಯೋಗಪಡಿಸಿಕೊಳ್ಳುವರೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ,

- ಸದಸ್ಯ ಸ್ಥಾನದಿಂದ ತೆಗೆದುಹಾಕತಕ್ಕದ್ದು;

ಪರಂತು, ಯಾವ ಸದಸ್ಯರನ್ನೂ ಅವರಿಗೆ ಸದರಿ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ಹೊರತು ಈ ಖಂಡದ ಅಡಿಯಲ್ಲಿ ತೆಗೆದು ಹಾಕತಕ್ಕದ್ದಲ್ಲ.

7. **ಮರು ನೇಮಕಾತಿಗೆ ಅರ್ಹತೆ.**- ಸದಸ್ಯತ್ವ ಕೊನೆಗೊಂಡ ಯಾವೊಬ್ಬ ವ್ಯಕ್ತಿಯು, 5ನೇ ಪ್ರಕರಣದಲ್ಲಿ ಹೇಳಲಾದ ಅನರ್ಹತೆಗೊಳಗಾಗಿದ್ದಾಗ ಹೊರತು, ಸದಸ್ಯರಾಗಿ ಮರುನೇಮಕ ಹೊಂದಲು ಅರ್ಹರಾಗಿರತಕ್ಕದ್ದು.

8. **ಮಂಡಳಿಯ ಅಧಿಕಾರಗಳು.**- (1) ಮಂಡಳಿಯು, ಈ ಅಧಿನಿಯಮದ ಆಶಯಗಳು ಮತ್ತು ಉಪಬಂಧಗಳನ್ನು ಜಾರಿಗೆ ತರಲು ತಾನು ಅವಶ್ಯವೆಂದು ಅಭಿಪ್ರಾಯ ಪಡುವಂಥ ಯಾವುವೇ ಕಾರ್ಯಗಳನ್ನು ಮಾಡಲು ಸಾಮಾನ್ಯವಾಗಿ ಅಧಿಕಾರ ಹೊಂದಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಇತರ ಯಾವುದೇ ಪ್ರಾಧಿಕಾರದ ಮೂಲಕ ನೆರವೇರಿಸಬೇಕೆಂದು ಅಧಿನಿಯಮದಲ್ಲಿ ನಿರ್ದಿಷ್ಟವಾಗಿ ತಿಳಿಸಿದಂಥ ಯಾವುದೇ ಕಾರ್ಯವನ್ನು ನೆರವೇರಿಸುವುದಕ್ಕೆ ಮಂಡಳಿಗೆ ಅಧಿಕಾರ ನೀಡುತ್ತದ್ದೆಂದು ಭಾವಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಮಂಡಳಿಯು,-

(ಎ) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಈ ಅಧಿನಿಯಮದ ಯಾವುದೇ ಉದ್ದೇಶವನ್ನು ನೆರವೇರಿಸಲು ಅವಶ್ಯಕ ಅಥವಾ ಯುಕ್ತವೆಂದು ತಾನು ಪರಿಗಣಿಸುವಂಥ ಎಲ್ಲ ಕರಾರುಗಳನ್ನು ಮಾಡಿಕೊಳ್ಳಲು ಮತ್ತು ನಿರ್ವಹಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಪ್ರತಿಯೊಂದು ಕರಾರನ್ನು ಮಂಡಲಿಯ ಪರವಾಗಿ ಆಯುಕ್ತರು ಮಾಡಿಕೊಳ್ಳತಕ್ಕದ್ದು:

ಪರಂತು, ಐದು ಲಕ್ಷ ರೂಪಾಯಿ ಅಥವಾ ಅದಕ್ಕೂ ಹೆಚ್ಚು ವೆಚ್ಚವನ್ನೊಳಗೊಳ್ಳುವ ಯಾವ ಕರಾರನ್ನೂ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ ಮಾಡಿಕೊಳ್ಳತಕ್ಕದ್ದಲ್ಲ.

(ಬಿ) ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ಈ ಸಂಬಂಧವಾಗಿ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ ಕಾಲಕಾಲಕ್ಕೆ ಅಗತ್ಯವಾಗುವ ಯಾವುದೇ ಮೊಬಲಗನ್ನು ಸಾಲವಾಗಿ ಪಡೆಯಲು;

(ಸಿ) 42ನೇ ಪ್ರಕರಣಕ್ಕೆ ಒಳಪಟ್ಟು ಮತ್ತು ನಿಯಮಿಸಬಹುದಾದಂಥ ನಿರ್ಬಂಧಗಳು, ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು ತನಗೆ ಸೇರಿದ ಚರ

ಅಥವಾ ಸ್ಥಿರ ಸ್ವತ್ತನ್ನು ಗುತ್ತಿಗೆ, ಮಾರಾಟ ಅಥವಾ ಇತರ ರೀತಿಯಲ್ಲಿ ವರ್ಗಾವಣೆ ಮಾಡಲು ಮತ್ತು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಯಾವುದೇ ಅಭಿವೃದ್ಧಿ ಯೋಜನೆಯ ಉದ್ದೇಶಕ್ಕಾಗಿ ತನ್ನಲ್ಲಿ ನಿಹಿತವಾಗಿರುವ ಅಥವಾ ತಾನು ಆರ್ಜಿಸಿದ್ದ ಯಾವುದೇ ಭೂಮಿಯನ್ನು, ಮೈದಾನಗಳನ್ನು ರೂಪಿಸುವ ಅಥವಾ ಕಟ್ಟಡ ನಿರ್ಮಿಸುವ ಉದ್ದೇಶಗಳಿಗಾಗಿ ಅಥವಾ ಯಾವುದೇ ಇತರ ರೀತಿಯಲ್ಲಿ ವಿನಿಯೋಗಿಸಲು ಅಥವಾ ಬಳಸಲು,

- ಅಧಿಕಾರ ಹೊಂದಿರತಕ್ಕದ್ದು.

9. **ಮಂಡಳಿಯ ಉಪ-ಸಮಿತಿ.-** (1) ಮಂಡಳಿಯು ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಆಯುಕ್ತರು ಅಧ್ಯಕ್ಷರಾಗಿರುವ ಮತ್ತು ಪ್ರತಿಯೊಂದು ಸಮಿತಿಗೆ ಐವರಿಗೆ ಮೀರದಂತೆ ಇತರ ಸದಸ್ಯರಿರುವ ಒಂದು ಅಥವಾ ಹೆಚ್ಚಿನ ಉಪ-ಸಮಿತಿಗಳನ್ನು ರಚಿಸಬಹುದು.

(2) ಉಪ-ಸಮಿತಿಗಳು, ಮಂಡಳಿಯು ಪ್ರತ್ಯಾಯೋಜಿಸಿದಂಥ ಮಂಡಳಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(3) ಪ್ರತಿಯೊಂದು ಉಪ-ಸಮಿತಿಯು ತಿಂಗಳಿಗೆ ಕನಿಷ್ಠಪಕ್ಷ ಒಂದು ಸಲವಾದರೂ ಸಭೆ ಸೇರತಕ್ಕದ್ದು ಮತ್ತು ವಿನಿಯಮಗಳಿಂದ ಉಪಬಂಧಿಸಬಹುದಾದಂತೆ ಅದರ ಸಭೆಯ ಕಾರ್ಯಕಲಾಪಗಳಿಗೆ ಸಂಬಂಧಿಸಿದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

10. **ಆಯುಕ್ತರ ನೇಮಕಾತಿ.-** (1) ಸರ್ಕಾರವು, ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ಮಂಡಳಿಯ ಆಯುಕ್ತರಾಗಿ ನೇಮಿಸತಕ್ಕದ್ದು;

(2) ಆಯುಕ್ತರು, ರಾಜ್ಯ ಸರ್ಕಾರವು ಕಾಲಕಾಲಕೆ ನಿರ್ಧರಿಸಬಹುದಾದಂಥ ವೇತನ ಮತ್ತು ಇತರ ಭತ್ಯಗಳನ್ನು ಪಡೆಯತಕ್ಕದ್ದು.

(3) ರಾಜ್ಯ ಸರ್ಕಾರವು, ಕಾಲಕಾಲಕ್ಕೆ ತಾನು ಯುಕ್ತವೆಂದು ಭಾವಿಸುವಂಥ ಅವಧಿಗೆ ಆಯುಕ್ತರಿಗೆ ರಜೆಯನ್ನು ಮಂಜೂರು ಮಾಡಬಹುದು.

11. **ಆಯುಕ್ತರ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ಆಯುಕ್ತರು, ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಆಡಳಿತಾಧಿಕಾರಿಯಾಗಿರತಕ್ಕದ್ದು.

(2) ಆಯುಕ್ತರು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ತನಗೆ ಪ್ರದತ್ತವಾಗಿರುವಂಥ ಪ್ರಕಾರ್ಯಗಳನ್ನು ನೆರವೇರಿಸುವುದರ ಜೊತೆಗೆ,-

(ಎ) ಮಂಡಳಿಯ ನಿರ್ಣಯಗಳನ್ನು ಕಾರ್ಯಗತಗೊಳಿಸತಕ್ಕದ್ದು;

(ಬಿ) ಮಂಡಳಿಯ ವ್ಯವಹಾರಗಳನ್ನು ನಿರ್ವಹಿಸಿಕೊಂಡು ಬರತಕ್ಕದ್ದು ಮತ್ತು ಪತ್ರ ವ್ಯವಹಾರವನ್ನು ನಡೆಸಿಕೊಂಡು ಬರತಕ್ಕದ್ದು;

(ಸಿ) ಸರ್ಕಾರವು ನಿರ್ದೇಶಿಸಬಹುದಾದಂಥ ಯೋಜನೆಗಳನ್ನು ಮತ್ತು ಕಾಮಗಾರಿಗಳನ್ನು ನೆರವೇರಿಸಿ ಕಾರ್ಯಗತಗೊಳಿಸತಕ್ಕದ್ದು ಮತ್ತು ಆ ಬಗ್ಗೆ ಅವಶ್ಯವಾಗುವ ವೆಚ್ಚಗಳನ್ನು ಮಾಡತಕ್ಕದ್ದು;

(ಡಿ) ಮಂಡಳಿಯು ಯೋಜನೆಗಳ ಅನುಷ್ಠಾನಕ್ಕೆ ಜವಾಬ್ದಾರರಾಗಿರತಕ್ಕದ್ದು;

(ಇ) ಮಂಡಳಿಯು ಬ್ಯಾಂಕ್ ಖಾತೆಗಳಲ್ಲಿ ವ್ಯವಹಾರ ನಡೆಸತಕ್ಕದ್ದು ಮತ್ತು ಮಂಡಲಿಯ ಲೆಕ್ಕ ಪತ್ರಗಳನ್ನು ನಿರ್ವಹಿಸಲು ಜವಾಬ್ದಾರರಾಗಿರತಕ್ಕದ್ದು;

(ಎಫ್) ಮಂಡಳಿಯು ಅಧಿಕಾರಿಗಳು ಮತ್ತು ನೌಕರರ ಮೇಲೆ, ಕಾರ್ಯನಿರ್ವಹಣೆ, ಆಡಳಿತ ವಿಷಯಗಳು ಮತ್ತು ಅಂಥ ಅಧಿಕಾರಿಗಳು ಮತ್ತು ನೌಕರರ ಸೇವಾ ವಿಷಯಗಳು ಹಾಗೂ ಅವರ ವೇತನ ಮತ್ತು ಭತ್ಯಗಳನ್ನು ವಿನಿಮಯಗೊಳಿಸುವ ಬಗ್ಗೆ ಮೇಲ್ವಿಚಾರಣೆ ಹಾಗೂ ನಿಯಂತ್ರಣವನ್ನು ಹೊಂದಿರತಕ್ಕದ್ದು.

(ಜಿ) ಮಂಡಳಿಯ ನಡವಳಿಗಳ ಸಂಕ್ಷಿಪ್ತ ಟಿಪ್ಪಣಿಗಳ ಮತ್ತು ಯಾವುದೇ ವಿವರಪತ್ರದ ಪ್ರತಿಯನ್ನು ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಕೋರಬಹುದಾದ ಇತರ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು.

(ಎಚ್) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ತನಗೆ ಪ್ರದತ್ತವಾಗುವಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

12. ಮಂಡಳಿಯ ನೌಕರರು.- (1) ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಮಂಡಳಿಯು, ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅದು ಅವಶ್ಯಕವೆಂದು ಭಾವಿಸುವಂಥ ಸಂಖ್ಯೆಯ ನೌಕರರನ್ನು ನೇಮಕ ಮಾಡಿಕೊಳ್ಳಬಹುದು:

ಪರಂತು, ರಾಜ್ಯ ಸರ್ಕಾರವು ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಸೇವೆಯಿಂದ ಅಥವಾ ಕರ್ನಾಟಕ ರಾಜ್ಯ ಲೆಕ್ಕಪತ್ರ ಸೇವೆಯಿಂದ ಎ ಗುಂಪಿನ ಕಿರಿಯ ವೇತನ ಶ್ರೇಣಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ಪ್ರತಿನಿಯೋಜನೆಯ ಮೇಲೆ ಹಣಕಾಸು ಮತ್ತು ಲೆಕ್ಕ ಪತ್ರ ನಿಯಂತ್ರಣಾಧಿಕಾರಿಯಾಗಿ ನೇಮಕ ಮಾಡತಕ್ಕದ್ದು.

(2) ಹಣಕಾಸು ಮತ್ತು ಲೆಕ್ಕಪತ್ರ ನಿಯಂತ್ರಣಾಧಿಕಾರಿಯು ಆಯುಕ್ತನಿಗೆ ವರದಿ ಸಲ್ಲಿಸತಕ್ಕದ್ದು ಮತ್ತು ಅವನು ಹಣಕಾಸು ನಿಯಮಗಳನ್ನು ಪಾಲಿಸಿಕೊಂಡು ಬರುವಂತೆ ಹಾಗೂ ಮಂಡಳಿಯ ಹಣಕಾಸು ವ್ಯವಹಾರಗಳ ಬಗ್ಗೆ ವಾಸ್ತವಿಕವಾದ ಹಾಗೂ ನ್ಯಾಯವಾದ ಚಿತ್ರಣವನ್ನು ನೀಡುವಂತೆ ಲೆಕ್ಕ ಪತ್ರಗಳನ್ನು ಅಂದಂದಿನವರೆಗೆ ನಿರ್ವಹಿಸಿಕೊಂಡು ಬರುವಂತೆ ನೋಡಿಕೊಳ್ಳತಕ್ಕದ್ದು;

(3) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ನೌಕರರ ವೇತನಗಳು, ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತಿರತಕ್ಕದ್ದು.

(4) ಆಯುಕ್ತರು, ಮಂಡಳಿಯ ನೌಕರರಿಗೆ ಸಂಬಂಧಿಸಿದಂತೆ ನೇಮಕಾತಿ ಅಧಿಕಾರಿಯಾಗಿರತಕ್ಕದ್ದು ಮತ್ತು ಮಂಡಳಿಯ ಸಿಬ್ಬಂದಿಯ ಮೇಲೆ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಹೊಂದಿರತಕ್ಕದ್ದು.

13. ಮಂಡಳಿಯ ಅಡಿಯಲ್ಲಿನ ಸೇವೆಗೆ ಸಾಮಾನ್ಯ ಅನರ್ಹತೆಗಳು.- ಯಾವ ವ್ಯಕ್ತಿಯೂ, ಮಂಡಳಿಯ ಅಧಿಕಾರಿ ಅಥವಾ ನೌಕರನಾಗಿ ಅಲ್ಲದೆ, ಖುದ್ದಾಗಿ ಅಥವಾ ತನ್ನ

ಪಾಲುದಾರನ ಮೂಲಕ ಅಥವಾ ತನ್ನ ಏಜಂಟನ ಮೂಲಕ ಮಂಡಳಿಯು ಯಾವುದೇ ಷೇರನ್ನು ಅಥವಾ ಮಂಡಳಿಯು ಮಾಡಿಕೊಂಡ ಇಲ್ಲವೇ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಮಂಡಳಿಯ ಅಡಿಯಲ್ಲಿನ ಯಾವುದೇ ನಿಯೋಜನೆಯಲ್ಲಿ ಹಿತಾಸಕ್ತಿಯನ್ನು ಹೊಂದಿದ್ದರೆ ಆತನು ಮಂಡಳಿಯ ಅಧಿಕಾರಿ ಅಥವಾ ಉದ್ಯೋಗಿಯಾಗತಕ್ಕದ್ದಲ್ಲ ಅಥವಾ ಆಗಿರತಕ್ಕದ್ದಲ್ಲ.

14. ಮಂಡಳಿಯ ಸಭೆಗಳು.- (1) ಆಯುಕ್ತರು ಅಧ್ಯಕ್ಷರ ಪೂರ್ವಾನುಮತಿಯೊಂದಿಗೆ ಮತ್ತು ಅಧ್ಯಕ್ಷರು ಯುಕ್ತವೆಂದು ಭಾವಿಸಬಹುದಾದಂಥ ಅವಧಿಗಳ ಅಂತರದಲ್ಲಿ ಮತ್ತು ಅಧ್ಯಕ್ಷರು ನಿರ್ಧರಿಸಬಹುದಾದಂಥ ಸ್ಥಳದಲ್ಲಿ ಮಂಡಲಿಯ ಸಭೆಗಳನ್ನು ನಡೆಸತಕ್ಕದ್ದು:

ಪರಂತು, ಮಂಡಳಿಯು ಒಂದು ಕ್ಯಾಲೆಂಡರ್ ವರ್ಷದಲ್ಲಿ ಕನಿಷ್ಠ ಪಕ್ಷ ಎರಡು ಬಾರಿಯಾದರೂ ಸಭೆ ಸೇರತಕ್ಕದ್ದು.

(2) ಪ್ರತಿಯೊಂದು ಸಭೆಯಲ್ಲೂ ಅಧ್ಯಕ್ಷರು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಯಾವುದೇ ಕಾರಣದಿಂದಾಗಿ ಅಧ್ಯಕ್ಷರಿಗೆ ಯಾವುದೇ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಸಭೆಯಲ್ಲಿ ಹಾಜರಿರುವ ಸದಸ್ಯರು ತಮ್ಮ ಪೈಕಿ ಆಯ್ಕೆ ಮಾಡುವಂಥ ಯಾವೊಬ್ಬ ಇತರ ಸದಸ್ಯ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಮಂಡಳಿಯ ತೀರ್ಮಾನಗಳನ್ನು, ಹಾಜರಿದ್ದು ಮತ ಹಾಕುವ ಸದಸ್ಯರ ಅವಿರೋಧ ಸಮ್ಮತಿಸೂಚಕ ಮತದ ಮೂಲಕ ಕೈಗೊಳ್ಳತಕ್ಕದ್ದು. ಮಂಡಲಿಯ ಮುಂದೆ ತೀರ್ಮಾನಕ್ಕಾಗಿ ಬಂದ, ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯಗಳಿದ್ದಲ್ಲಿ, ಆಯುಕ್ತರು ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅಂಥ ವಿಷಯಗಳ ಬಗ್ಗೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ಆಯುಕ್ತನು ಮಂಡಳಿಯ ತೀರ್ಮಾನಗಳನ್ನು ಕಾರ್ಯಗತಗೊಳಿಸತಕ್ಕದ್ದು:

ಪರಂತು, ಮಂಡಳಿಯ ಯಾವುದೇ ನಿರ್ಣಯವು ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧವನ್ನು ಅಥವಾ ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಲಾದ ಅಥವಾ ಹೊರಡಿಸಿದ ಯಾವುದೇ ನಿಯಮ ಅಥವಾ ಅಧಿಸೂಚನೆ ಅಥವಾ ವಿನಿಯಮಗಳ ಉಪಬಂಧಗಳನ್ನು ಅಥವಾ ರಾಜ್ಯ ಸರ್ಕಾರವು ಹೊರಡಿಸಿದ ಯಾವುದೇ ಆದೇಶವನ್ನು ಉಲ್ಲಂಘಿಸುತ್ತದೆಯೆಂದು ಅಥವಾ ಮಂಡಲಿಯ ಹಿತಾಸಕ್ತಿಗೆ ಅಥವಾ ಬಸವಕಲ್ಯಾಣ ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣೆಗೆ ಧಕ್ಕೆ ಉಂಟುಮಾಡುತ್ತದೆ ಅಥವಾ ಹಾನಿಕರವಾಗುತ್ತದೆಂದು ಆಯುಕ್ತರು ಭಾವಿಸಿದರೆ, ಅವರು ನಿರ್ಣಯವನ್ನು ಅನುಮೋದಿಸಲಾದ ಹದಿನೈದು ದಿನಗಳ ಒಳಗಾಗಿ, ವಿಷಯದ ಬಗ್ಗೆ ಆದೇಶಗಳನ್ನು ಕೋರಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಮಂಡಳಿಯ ಮುಂದಿನ ಸಭೆಯಲ್ಲಿ ತಾನು ಕೈಗೊಂಡ ಕ್ರಮದ ಬಗ್ಗೆ ಮಂಡಳಿಗೆ ತಿಳಿಸತಕ್ಕದ್ದು ಮತ್ತು ಆಯುಕ್ತರು ಕಳುಹಿಸಿಕೊಟ್ಟ ಅಂಥ ವಿಷಯದ ಬಗ್ಗೆ ರಾಜ್ಯ ಸರ್ಕಾರವು ಆದೇಶವನ್ನು ನೀಡುವವರೆಗೆ, ಆಯುಕ್ತರು ಆ ನಿರ್ಣಯವನ್ನು ಜಾರಿಗೆ ತರಲು ಬದ್ಧರಲ್ಲ.

(5) ಮಂಡಳಿಯು, ವಿನಿಯಮಗಳ ಮೂಲಕ ತನ್ನ ಸಭೆಗಳ ಕಾರ್ಯ ಕಲಾಪಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಅಸಂಗತವಾಗದಂತಹ, ಕಾರ್ಯವಿಧಾನಗಳನ್ನು ಗೊತ್ತುಪಡಿಸಬಹುದು.

15. ವ್ಯವಹರಣೆಗಳು ಸರಿಯಾದುದೆಂದು ಮತ್ತು ಊರ್ಜಿತವಾದುದೆಂದು ಪೂರ್ವಭಾವನೆ ಮಾಡುವುದು.- ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಕಾರ್ಯನಿರ್ವಹಿಸುವ ಯಾವೊಬ್ಬ ವ್ಯಕ್ತಿಯ ಅನರ್ಹತೆ ಅಥವಾ ನೇಮಕಾತಿಯಲ್ಲಿನ ನ್ಯೂನತೆಯು, ಮಂಡಳಿಯ ಯಾವುದೇ ಕೃತ್ಯ ಅಥವಾ ನಡವಳಿಯು ಅನ್ಯಥಾ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿದ್ದರೆ, ಅಂಥ ಕೃತ್ಯ ಅಥವಾ ವ್ಯವಹರಣೆಯನ್ನು ದೂಷಿತಗೊಳಿಸುತ್ತದೆಯೆಂದು ಭಾವಿಸತಕ್ಕದ್ದಲ್ಲ.

16. ಸುತ್ತೋಲೆಯ ಮೂಲಕ ಮಂಡಳಿಯ ತೀರ್ಮಾನಗಳನ್ನು ಸೂಚಿಸುವುದು.- (1) ಅಧ್ಯಕ್ಷನು, ಯಾವುದೇ ಪ್ರಕರಣವನ್ನು ಮಂಡಳಿಯ ಒಂದು ಸಭೆಯಲ್ಲಿ ಚರ್ಚೆಗೆ ತರುವುದಕ್ಕೆ ಬದಲಾಗಿ, ಆ ಬಗ್ಗೆ ಅವರ ಅಭಿಪ್ರಾಯ ಕೋರಿ ನಿಯಮಿಸಲಾದ ನಮೂನೆಯಲ್ಲಿ ಒಂದು ಟಿಪ್ಪಣಿಯನ್ನು ಮಂಡಳಿಯ ಸದಸ್ಯರ ನಡುವೆ ಪರಿಚಲನೆ ಮಾಡಿಸಲು ನಿರ್ದೇಶಿಸಬಹುದು. ಹಾಗೆ ಪರಿಚಲನೆ ಮಾಡಲಾದ ಟಿಪ್ಪಣಿಯಲ್ಲಿರುವ ಪ್ರಸ್ತಾವವನ್ನು ಎಲ್ಲ ಸದಸ್ಯರು ಅವಿರೋಧವಾಗಿ ಅನುಮೋದಿಸಿದರೆ ಅದನ್ನು ಮಂಡಳಿಯ ಸಮ್ಮತಿಸೂಚಕ ನಿರ್ಣಯವೆಂಬುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಮುಂದಿನ ಕ್ರಮ ಕೈಗೊಳ್ಳತಕ್ಕದ್ದು. ಮಂಡಲಿಯ ತೀರ್ಮಾನಕ್ಕಾಗಿ ಪರಿಚಲನೆ ಮಾಡಲಾದ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ವ್ಯಕ್ತವಾದರೆ ಆಯುಕ್ತರು ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಬಗ್ಗೆ ರಾಜ್ಯಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಭಿಪ್ರಾಯಕ್ಕಾಗಿ ಪರಿಚಲನೆ ಮಾಡಲಾದ ಸಂದರ್ಭಗಳಲ್ಲಿ ಯಾವೊಬ್ಬ ಸದಸ್ಯರು ಟಿಪ್ಪಣಿಯಲ್ಲಿ ನಿರ್ದಿಷ್ಟಪಡಿಸಿರುವ ದಿನಾಂಕದೊಳಗೆ ತಮ್ಮ ಅಭಿಪ್ರಾಯವನ್ನು ತಿಳಿಸಲು ತಪ್ಪಿದರೆ, ಅಂಥ ಸದಸ್ಯರು ಸುತ್ತೋಲೆ ಕಳುಹಿಸಲಾದ ಟಿಪ್ಪಣಿಯಲ್ಲಿ ಒಳಗೊಂಡ ಪ್ರಸ್ತಾವವನ್ನು ಒಪ್ಪಿಕೊಂಡಿದ್ದಾರೆಂದು ಭಾವಿಸತಕ್ಕದ್ದು.

(3) 14ನೇ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಈ ಪ್ರಕರಣದ ಅಡಿಯಲ್ಲಿ ಪರಿಚಲನೆ ಮೂಲಕ ಕೈಗೊಂಡ, ಮಂಡಳಿಯ ತೀರ್ಮಾನಗಳಿಗೆ ಅನ್ವಯವಾಗತಕ್ಕದ್ದು.

17. ಕೆಲವೊಂದು ತೀರ್ಮಾನಗಳನ್ನು ಕೈಗೊಳ್ಳಲು ಅಧ್ಯಕ್ಷರ ಅಧಿಕಾರ.- (1) ಯಾವೊಂದು ವಿಷಯವು, 14ನೇ ಪ್ರಕರಣದ ಅಡಿಯಲ್ಲಿ ಮಂಡಳಿಯ ಸಭೆ ಕರೆಯಲು ಅಗತ್ಯಪಡಿಸುವಷ್ಟು ಅಥವಾ 16ನೇ ಪ್ರಕರಣದ ಅಡಿಯಲ್ಲಿ ಸುತ್ತೋಲೆಯ ಮೂಲಕ ಮಂಡಳಿಯು ತೀರ್ಮಾನಿಸುವವರೆಗೂ ಕಾಯಲು ಸಾಧ್ಯವಾಗದಷ್ಟು ತುರ್ತು ಸ್ವರೂಪದ್ದಾಗಿದೆಯೆಂದು ಅಥವಾ ವಿಷಯವು ಗಹನವಾದುದಲ್ಲವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟಲ್ಲಿ, ಅವರು ತಾವು ಯುಕ್ತವೆಂದು ಭಾವಿಸುವಂಥ ಆದೇಶಗಳನ್ನು ನೀಡಬಹುದು ಮತ್ತು ಅದನ್ನು ಮಂಡಳಿಯ ತೀರ್ಮಾನಗಳ ರೀತಿಯಲ್ಲಿಯೇ ಅನುಷ್ಠಾನಗೊಳಿಸತಕ್ಕದ್ದು:

ಪರಂತು ಅಧ್ಯಕ್ಷರು ಈ ಪ್ರಕರಣದ ಅಡಿಯಲ್ಲಿ ಕೈಗೊಂಡ ಪ್ರತಿಯೊಂದು ತೀರ್ಮಾನವನ್ನು ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದು.

ಅಧ್ಯಾಯ III

ಬಸವ ಕಲ್ಯಾಣ ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣೆ

18. ಬಸವಕಲ್ಯಾಣದಲ್ಲಿನ ಪರಂಪರೆಯ ತಾಣಗಳನ್ನು ಮಂಡಳಿಯಲ್ಲಿ ನಿಹಿತಗೊಳಿಸುವುದು.- (1) ಯಾವುದೇ ಪದ್ಧತಿ, ಸಂಪ್ರದಾಯ, ರೂಢಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸೃಜಿಸಲಾದ ಮತ್ತು ಅಸ್ತಿತ್ವದಲ್ಲಿರುವ ನ್ಯಾಸದ ನಿಬಂಧನೆಗಳಲ್ಲಿ ಏನೇ ಇದ್ದರೂ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಬಸವಕಲ್ಯಾಣದಲ್ಲಿರುವ ಎಲ್ಲಾ ಅಥವಾ ಯಾವುವೇ ಪರಂಪರೆಯ ತಾಣಗಳ ಸಂಪೂರ್ಣ ನಿಯಂತ್ರಣ, ಆಡಳಿತ ವ್ಯವಸ್ಥೆ ಮತ್ತು ಮೇಲ್ವಿಚಾರಣೆಯು ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಆ ತರುವಾಯ ರಾಜ್ಯಸರ್ಕಾರವು ಅಧಿಸೂಚಿಸಿದ ದಿನಾಂಕದಿಂದ ಅದು ಮಂಡಳಿಗೆ ವರ್ಗಾವಣೆಯಾಗತಕ್ಕದ್ದು.

(2) ರಾಜ್ಯ ಸರ್ಕಾರವು ತಾತ್ಕಾಲಿಕ ಉಪಬಂಧಗಳನ್ನು ಕಲ್ಪಿಸುವುದು ಅವಶ್ಯವೆಂದು ಭಾವಿಸಿದರೆ, ಅದು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ತಾತ್ಕಾಲಿಕ ಉಪಬಂಧಗಳನ್ನು ರಚಿಸಬಹುದು.

19. ಅನುಸೂಚಿಯ ತಿದ್ದುಪಡಿಗೆ ಅಧಿಕಾರ.- ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ ಅನುಸೂಚಿಯಲ್ಲಿ ಯಾವುದೇ ನಮೂದನ್ನು ಸೇರಿಸಿ ಅಥವಾ ಮಾರ್ಪಡಿಸಿ ಅದನ್ನು ತಿದ್ದುಪಡಿಮಾಡಬಹುದು.

20. ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು, ಅದರ ಅನುಮೋದನೆ ಹಾಗೂ ಅದನ್ನು ಕಾರ್ಯಗತ ಗೊಳಿಸುವುದು.- (1) ಮಂಡಳಿಯು, ಅದರ ರಚನೆಯಾದ ಮೇಲೆ, ಆದಷ್ಟು ಬೇಗನೆ ಬಸವಕಲ್ಯಾಣವನ್ನು ಅಂತಾರಾಷ್ಟ್ರೀಯ ಯಾತ್ರಾ ಸ್ಥಳವನ್ನಾಗಿ ಮತ್ತು ಸಾಂಸ್ಕೃತಿಕ ಹಾಗೂ ಪ್ರವಾಸಿ ಕೇಂದ್ರವನ್ನಾಗಿ ಮತ್ತು ಜಗಜ್ಯೋತಿ ಶ್ರೀ ಬಸವೇಶ್ವರರ, ಅವರ ಸಮಕಾಲೀನರ ಮತ್ತು ಶಿಷ್ಯರ ವಚನ-ಸಿದ್ಧಾಂತಗಳ ಚಿಂತನ ಹಾಗೂ ಪ್ರಚಾರದ ಕೇಂದ್ರವನ್ನಾಗಿ ಮಾಡಿ ಅಭಿವೃದ್ಧಿಗೊಳಿಸಲು ಯೋಜನೆಯನ್ನು ಸಿದ್ಧಪಡಿಸತಕ್ಕದ್ದು. ಅಭಿವೃದ್ಧಿ ಯೋಜನೆಯು ಈ ಮುಂದಿನವುಗಳನ್ನು ಒಳಗೊಂಡಿರಬಹುದು, ಎಂದರೆ:-

(ಎ) ಯಾವುದೇ ಪರಂಪರೆ ತಾಣದ ಅಥವಾ ನಿರ್ಮಿತಿಯ ಮರುಜೋಡಣೆ ನಿರ್ಮಾಣ ಮತ್ತು ಅದರ ನಿರ್ವಹಣೆಗಾಗಿ ಕಾರ್ಯಕ್ರಮಗಳು;

(ಬಿ) ಮಂಡಳಿಯ ಅಭಿಪ್ರಾಯದಲ್ಲಿ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು ಅವಶ್ಯವಾದ ಭೂಮಿಯನ್ನು, ಭೂಸ್ವಾಧೀನ ಅಥವಾ ಖರೀದಿ ಅಥವಾ ವಿನಿಮಯದ ಮೂಲಕ ಅಥವಾ ಅನ್ಯಥಾ ಆರ್ಜಿಸುವುದಕ್ಕಾಗಿ ಪ್ರಸ್ತಾವಗಳು;

(ಸಿ) ಸಾರ್ವಜನಿಕ ಉದ್ಯಾನವನಗಳು, ಫಲಪುಷ್ಪ ತೋಟಗಳು ಅಥವಾ ಮೃಗಾಲಯಗಳು, ಕಾರಂಜಿ ಬನಗಳು, ಕೃತಕ ಜಲಪಾತಗಳು, ವನ್ಯಮೃಗ ಉದ್ಯಾನವನಗಳು, ದೋಣಿ ವಿಹಾರ ಅಥವಾ ಇತರ ಜಲ ಕ್ರೀಡಾ ಸೌಲಭ್ಯವಿರುವ ಸರೋವರಗಳನ್ನು ಅಥವಾ ಇಂಥವೇ ಪ್ರವಾಸಿಗಳಿಗೆ ಆಕರ್ಷಣೆಯನ್ನುಂಟುಮಾಡುವಂಥ ಇತರ ಕೇಂದ್ರಗಳನ್ನು ನಿರ್ಮಿಸುವುದು;

(ಡಿ) ವಿವಿಧ ವರ್ಗದ ಪ್ರವಾಸಿಗರ ಅವಶ್ಯಕತೆ ಪೂರೈಸಲು ಛತ್ರಗಳು, ವಸತಿ-ಗೃಹಗಳು, ಕುಠೀರಗಳು, ಹೋಟೆಲುಗಳು, ರೆಸ್ಟೋರಾಗಳು ಮತ್ತು ಭೋಜನಾಲಯಗಳನ್ನು ನಿರ್ಮಿಸುವುದು;

(ಇ) ಅವಶ್ಯಕ ಸಾಲು ಅಂಗಡಿಗಳನ್ನು ಅಥವಾ ವಾಣಿಜ್ಯ-ಸಂಕೀರ್ಣಗಳನ್ನು ನಿರ್ಮಿಸುವುದು;

(ಎಫ್) ಅನುಭವ ಮಂಟಪದ ಮಾದರಿಯಲ್ಲಿ ಒಂದು ಸಭಾಂಗಣವನ್ನು ನಿರ್ಮಿಸುವುದು;

(ಜಿ) ಆಯಕಟ್ಟಿನ ಸ್ಥಳಗಳಲ್ಲಿ ಪ್ರಾರ್ಥನಾ ಮಂದಿರಗಳ ಮತ್ತು ಧ್ಯಾನ ಮಂದಿರಗಳ ನಿರ್ಮಾಣ;

(ಎಚ್) 2ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಸೌಕರ್ಯಗಳನ್ನು ಕಲ್ಪಿಸುವುದು;

(ಐ) ಕಟ್ಟಡಗಳ ನಿರ್ಮಾಣ ಹಾಗೂ ಪುನರ್-ನಿರ್ಮಾಣವೂ ಸೇರಿದಂತೆ ಎಲ್ಲಾ ಅಥವಾ ಯಾವುದೇ ಭೂಮಿಯ ವಿನ್ಯಾಸ ಮತ್ತು ಮರು ವಿನ್ಯಾಸ;

(ಜೆ) ಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ ಮತ್ತು ನೀರು ಪೂರೈಕೆ ಮತ್ತು ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವುದು;

(ಕೆ) ಮಂಡಳಿಯು, ಸಾಧಾರಣವಾಗಿ ತನ್ನ ಯೋಜನಾ ಕಾರ್ಯಕ್ಕೆ ಅನುಕೂಲವಾಗುವಂತೆ ಮತ್ತು ಮುಖ್ಯವಾಗಿ ಉತ್ತಮ ನೀರು ಹರಿವಿನ ವ್ಯವಸ್ಥೆಯನ್ನು ಒದಗಿಸಲು, ಯಾವುದೇ ಭೂಮಿಯನ್ನು ಎತ್ತರಿಸುವುದು ಸೂಕ್ತವೆಂದು ಭಾವಿಸಿದರೆ ಅಂಥ ಭೂಮಿಯನ್ನು ಎತ್ತರಿಸುವುದು;

(ಎಲ್) ಬಸವ ಕಲ್ಯಾಣ ಪ್ರದೇಶದಲ್ಲಿ ಅಥವಾ ಅದಕ್ಕೆ ಲಗತ್ತಾಗಿರುವ ಪ್ರದೇಶದಲ್ಲಿ ಉತ್ತಮ ಗಾಳಿ-ಬೆಳಕು ದೊರಕುವಂತೆ ಖಾಲಿ ಜಾಗಗಳನ್ನು ಬಿಡುವುದು;

(ಎಮ್) ಜನರ ವಾಸಕ್ಕೆ ಯೋಗ್ಯವಲ್ಲದ ಹಾಗೂ ಅಭಿವೃದ್ಧಿ ಯೋಜನೆಗೆ ತಕ್ಕದಲ್ಲದ ಎಲ್ಲ ಕಟ್ಟಡಗಳನ್ನು ಕೆಡವುವುದು;

(ಎನ್) ಅಡಚಣೆಯನ್ನುಂಟುಮಾಡುವ ಕಟ್ಟಡಗಳನ್ನು ಅಥವಾ ಕಟ್ಟಡಗಳ ಭಾಗಗಳನ್ನು ಕೆಡವುವುದು;

(ಒ) ಕಟ್ಟಡಗಳ ನಿರ್ಮಾಣ ಮತ್ತು ಪುನರ್‌ನಿರ್ಮಾಣ, ಅವುಗಳ ನಿರ್ವಹಣೆ ಮತ್ತು ಸಂರಕ್ಷಣೆ;

(ಪಿ) 26ನೇ ಪ್ರಕರಣದಲ್ಲಿನ ಉಪಬಂಧಗಳಿಗೆ ಒಳಪಟ್ಟು, ಯೋಜನೆಯಲ್ಲಿ ಸೇರಿರುವ ಯಾವುದೇ ಸ್ವತ್ತನ್ನು ಮಾರಾಟ ಮಾಡುವುದು, ಬಾಡಿಗೆಗೆ ಕೊಡುವುದು, ಅಥವಾ ವಿನಿಮಯ ಮಾಡಿಕೊಳ್ಳುವುದು;

(ಕ್ಯು) ಮಂಡಲಿಯ ನೌಕರರಿಗೆ ವಸತಿ ಸೌಲಭ್ಯವನ್ನು ಒದಗಿಸುವುದು;

(ಆರ್)ಸಂಪರ್ಕ ಮತ್ತು ಸಾಗಣೆ ಸೌಲಭ್ಯಗಳನ್ನು ಒದಗಿಸುವುದು;

(ಎಸ್)ಅಭಿವೃದ್ಧಿ ಯೋಜನೆಯ ಭೌಗೋಳಿಕ ಪ್ರದೇಶದಲ್ಲಿ ಈಗಿರುವ ಮತ್ತು ಮುಂದುವರಿಸಲು ಅನುಮತಿಸಬಹುದಾದಂಥ ಮತೀಯ ಸಂಸ್ಥೆಗಳೊಂದಿಗೆ, ಅವು ಅಭಿವೃದ್ಧಿ ಯೋಜನೆಯ ಪರಿಕಲ್ಪನೆಗೆ ಸರಿಹೊಂದುತ್ತಿರುವವರೆಗೆ ಹೊಂದಾಣಿಕೆಗಳು ಮತ್ತು ಒಪ್ಪಂದಗಳನ್ನು ಮಾಡಿಕೊಳ್ಳುವುದು;

(ಟಿ) ಬಸವ ಕಲ್ಯಾಣವನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ, ಯಾತ್ರಾಸ್ಥಳವನ್ನಾಗಿ ಮತ್ತು ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಮತ್ತು ಜಗಜ್ಯೋತಿ ಶ್ರೀ ಬಸವೇಶ್ವರರ ವಚನ-ಸಿದ್ಧಾಂತಗಳ ಚಿಂತನ ಹಾಗೂ ಪ್ರಚಾರದ ಕೇಂದ್ರವನ್ನಾಗಿ ಮತ್ತು ಬಸವ ಧರ್ಮವನ್ನು, ಜಗಜ್ಯೋತಿ ಬಸವೇಶ್ವರರ ವಚನ ಸಾಹಿತ್ಯ ಮಾತ್ರವಲ್ಲದೆ, ಅವರ ಸಮಕಾಲೀನರ ಹಾಗೂ ಶಿಷ್ಯರ ವಚನ ಸಾಹಿತ್ಯವನ್ನು ಪ್ರಚಾರ ಮಾಡುವ ದೃಷ್ಟಿಯಿಂದ ಮತ್ತು ಜಗಜ್ಯೋತಿ ಶ್ರೀ ಬಸವೇಶ್ವರರ, ಅವರ ಸಮಕಾಲೀನರ ಮತ್ತು ಶಿಷ್ಯರ ಜೀವನ ಮತ್ತು ಧರ್ಮಕ್ಕೆ ಸಂಬಂಧಪಟ್ಟ ಇತರ ಮಹತ್ವದ ಸ್ಥಳಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಹಾಗೂ ಬಸವ ತತ್ವಗಳ ಅಧ್ಯಯನಕ್ಕಾಗಿ ಶೈಕ್ಷಣಿಕ ಮತ್ತು ಸಂಶೋಧನಾ ಕೇಂದ್ರದ ಮತ್ತು ಆ ವಿಷಯಕ್ಕೆ ಸಂಬಂಧಪಟ್ಟಂತೆ ವಿಶಿಷ್ಟ ಗ್ರಂಥಾಲಯದ ಸ್ಥಾಪನೆಗಾಗಿ, ಉಪಬಂಧಕಲ್ಪಿಸುವುದು ಯುಕ್ತ ಹಾಗೂ ಆನುಷಂಗಿಕವೆಂದು ಮಂಡಳಿಯು ಅಭಿಪ್ರಾಯಪಡುವಂಥ ಇತರ ಯಾವುವೇ ವಿಷಯಗಳು;

(ಯು) ಮಂಡಳಿಯ ಪ್ರಾದೇಶಿಕ ಪರಿಮಿತಿಯೊಳಗಿನ ಐತಿಹಾಸಿಕ ಮತ್ತು ಪರಂಪರೆಯ ಯಾವುದೇ ಸ್ಥಳದಲ್ಲಿ ಮಣ್ಣಿನಲ್ಲಿ ಹೂತು ಹೋಗಿವೆ ಎಂದು ನಂಬಲಾದ ಪ್ರಾಚೀನ ಸ್ಮಾರಕಗಳ ಯಾವುವಾದರೂ ಇದ್ದರೆ ಅವನ್ನು ಭೂಮಿಯಿಂದ ಹೊರಗೆ ತೆಗೆಯುವುದಕ್ಕಾಗಿ ಉತ್ಖನನ ಮತ್ತು ಪುರಾತತ್ವ ಸ್ವರೂಪದ ಅನ್ವೇಷಣೆ:

ಪರಂತು, ಈ ಖಂಡದಲ್ಲಿ ಒಳಗೊಂಡಿರುವುದು ಯಾವುದೂ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1958ರ (1958ರ ಕೇಂದ್ರ ಅಧಿನಿಯಮ, 24) ಉಪಬಂಧಗಳನ್ನು ಅಧ್ಯಾರೋಹಿಸುತ್ತದೆಂದು ಭಾವಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಡಿ ಸಿದ್ಧಪಡಿಸಲಾದ ಅಭಿವೃದ್ಧಿ ಯೋಜನೆಯನ್ನು ಆಯುಕ್ತರು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. ರಾಜ್ಯ ಸರ್ಕಾರವು, ಮಾರ್ಪಾಟುಗಳ ಸಹಿತವಾಗಿ ಅಥವಾ ಯಾವುವೇ ಮಾರ್ಪಾಟುಗಳಿಲ್ಲದೆ ಯೋಜನೆಯನ್ನು ಅನುಮೋದಿಸಬಹುದು.

(3) (2)ನೇ ಉಪ-ಪ್ರಕರಣದಡಿ ಅಭಿವೃದ್ಧಿ ಯೋಜನೆಯನ್ನು ಅನುಮೋದಿಸಿದ ತರುವಾಯ, ರಾಜ್ಯ ಸರ್ಕಾರವು ಮಂಡಳಿಯ ಶಿಫಾರಸ್ಸುಗಳ ಮೇಲೆ ಕಾಲ ಕಾಲಕ್ಕೆ ತಾನು ಅವಶ್ಯಕವೆಂದು ಭಾವಿಸುವಂಥ ಮಾರ್ಪಾಟುಗಳನ್ನು ಯೋಜನೆಯಲ್ಲಿ ಮಾಡಬಹುದು.

(4) ಈ ಪ್ರಕರಣದಡಿ ರಾಜ್ಯ ಸರ್ಕಾರವು ಅನುಮೋದಿಸಿದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕಾಮಗಾರಿಗಳನ್ನು ಕೈಗೊಳ್ಳುವ ಮತ್ತು ವೆಚ್ಚವನ್ನು ಮಾಡುವ ಅಧಿಕಾರವನ್ನು ಮಂಡಳಿಯು ಹೊಂದಿರತಕ್ಕದ್ದು.

21. ಬಸವ ಕಲ್ಯಾಣದ ನಿರ್ವಹಣೆ.- ರಾಜ್ಯ ಸರ್ಕಾರವು ಮಂಡಳಿಯ ಶಿಫಾರಸ್ಸಿನ ಮೇಲೆ ಅಥವಾ ಅನ್ಯಥಾ, ಬಸವ ಕಲ್ಯಾಣದ ನಿರ್ವಹಣೆಗಾಗಿ ಉಪಬಂಧಗಳನ್ನು ರಚಿಸತಕ್ಕದ್ದು, ಈ ಉಪಬಂಧಗಳಲ್ಲಿ ಅದರ ಪರಂಪರೆ ತಾಣಗಳೂ ಸೇರಿದಂತೆ ಮಂಡಳಿಯ ಸ್ವತ್ತನ್ನು ಬಳಸಿಕೊಳ್ಳಬಹುದಾದ ರೀತಿ, ಪಟ್ಟಣಕ್ಕೆ ಬರುವ ಭಕ್ತರು, ಯಾತ್ರಿಕರು, ಪ್ರವಾಸಿಗರು ಮತ್ತು ಇತರ ಸಂದರ್ಶಕರು ಬಳಸಿಕೊಳ್ಳಬಹುದಾದ ವಿವಿಧ ಸೌಲಭ್ಯಗಳಿಗಾಗಿ ಅವರಿಂದ ವಸೂಲು ಮಾಡಬಹುದಾದ ದರಗಳು, ಶುಲ್ಕಗಳು ಅಥವಾ ಇತರ ವೆಚ್ಚಗಳು ಮತ್ತು ಪರಂಪರೆ ತಾಣಗಳ ಆವರಣಕ್ಕೆ ಸಂಬಂಧಿಸಿದ ಯುಕ್ತವಾದಂಥ ಇತರ ವಿಷಯಗಳು; ಭೂ ಕಂದಾಯದ ಬಾಕಿ ಎಂಬಂತೆ ಬಾಡಿಗೆ ಅಥವಾ ನಷ್ಟಪರಿಹಾರವನ್ನು ವಸೂಲು ಮಾಡುವ ಅಧಿಕಾರ ಮುಂತಾದ ಇತರ ವಿಷಯಗಳು ಒಳಗೊಂಡಿರತಕ್ಕದ್ದು.

22. ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಯು ಬಸವಕಲ್ಯಾಣಕ್ಕೆ ನಗರಾಭಿವೃದ್ಧಿ ಪ್ರಾಧಿಕಾರವಾಗಿರುವುದು.- (1) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 ರಲ್ಲಿ (1963ರ ಕರ್ನಾಟಕ ಅಧಿನಿಯಮ 11) ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 ರಲ್ಲಿ (1987ರ ಕರ್ನಾಟಕ ಅಧಿನಿಯಮ 37) ಏನೇ ಒಳಗೊಂಡಿದ್ದರೂ, ಮಂಡಳಿಯ ರಚನೆಯ ದಿನಾಂಕದಂದು ಮತ್ತು ಆ ದಿನಾಂಕದಿಂದ, ಮಂಡಳಿಯನ್ನು ಬಸವ ಕಲ್ಯಾಣದ ನಗರಾಭಿವೃದ್ಧಿ ಪ್ರಾಧಿಕಾರವೆಂದು ಭಾವಿಸತಕ್ಕದ್ದು ಮತ್ತು ಮಂಡಳಿಯು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ (1987ರ ಕರ್ನಾಟಕ ಅಧಿನಿಯಮ 34) 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರಾಧಿಕಾರವಾಗಿದ್ದರೆ ಹೇಗೋ ಹಾಗೆ ನಗರಾಭಿವೃದ್ಧಿ ಪ್ರಾಧಿಕಾರದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಬಸವ ಕಲ್ಯಾಣ ಪಟ್ಟಣ ಯೋಜನೆ ಪ್ರಾಧಿಕಾರದ ಸಿಬ್ಬಂದಿ, ಆಸ್ತಿ ಮತ್ತು ಹೊಣೆಗಾರಿಕೆಗಳು ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗವಾಗತಕ್ಕದ್ದು.

೨೩. ಮಂಡಳಿಯು ಅನುಮತಿ ಇಲ್ಲದೆ ಯಾವುದೇ ಇತರ ಪ್ರಾಧಿಕಾರ ಅಥವಾ ವ್ಯಕ್ತಿಯು ಅಭಿವೃದ್ಧಿಯನ್ನು ಕೈಗೊಳ್ಳಕೂಡದು.- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಮಂಡಳಿಯ ಪೂರ್ವಾನುಮತಿಯೊಂದಿಗೆ ಹೊರತು, ಬಸವಕಲ್ಯಾಣದೊಳಗೆ, ಮಂಡಳಿಯು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಮಾದರಿಗಳ ಯಾವುದೇ ಅಭಿವೃದ್ಧಿಯನ್ನು ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯು ಕೈಗೊಳ್ಳತಕ್ಕದ್ದಲ್ಲ.

(2) ಬಸವಕಲ್ಯಾಣದೊಳಗೆ, (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಅಭಿವೃದ್ಧಿ ಕೈಗೊಳ್ಳಲು, ಅಂಥ ಅಭಿವೃದ್ಧಿಗಾಗಿ ಮಂಡಳಿಯು ಅನುಮತಿಯನ್ನು ನೀಡಿದ್ದ ಹೊರತು, ಯಾವುದೇ ಸ್ಥಳೀಯ ಪ್ರಾಧಿಕಾರವು ಅನುಮತಿಯನ್ನು ನೀಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಭಿವೃದ್ಧಿಯನ್ನು ಕೈಗೊಳ್ಳಲು ಇಚ್ಛಿಸುವ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯು ಅಂಥ ಅಭಿವೃದ್ಧಿಯನ್ನು ಕೈಗೊಳ್ಳಲು ಅನುಮತಿಯನ್ನು ಕೋರಿ ಲಿಖಿತ ಅರ್ಜಿಯನ್ನು ಮಂಡಳಿಗೆ ಸಲ್ಲಿಸತಕ್ಕದ್ದು.

(4) ಮಂಡಳಿಯು, ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ತಾನು ವಿಧಿಸುವುದು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳೊಡನೆ ಅಥವಾ ಷರತ್ತುಗಳಿಲ್ಲದೆ ಅಂಥ ಅನುಮತಿಯನ್ನು ನೀಡಬಹುದು ಅಥವಾ ಅಂಥ ಅನುಮತಿಯನ್ನು ನೀಡಲು ನಿರಾಕರಿಸಬಹುದು.

(5) (4)ನೇ ಉಪ ಪ್ರಕರಣದ ಅಡಿಯಲ್ಲಿಯ ಮಂಡಳಿಯ ತೀರ್ಮಾನದಿಂದ ಬಾಧಿತವಾದ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯು, ತೀರ್ಮಾನದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಂಥ ತೀರ್ಮಾನದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು, ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ಅಂಥ ಅಪೀಲನ್ನು ಸಲ್ಲಿಸುವ ಬಾಧಿತವಾದ ಪ್ರಾಧಿಕಾರವು, ಕೇಂದ್ರ ಸರ್ಕಾರದ ಆಡಳಿತ ನಿಯಂತ್ರಣದಲ್ಲಿದ್ದರೆ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸಿದ ತರುವಾಯ ಅಪೀಲನ್ನು ತೀರ್ಮಾನಿಸತಕ್ಕದ್ದು.

(6) ಯಾವೊಬ್ಬ ವ್ಯಕ್ತಿ ಅಥವಾ ಪ್ರಾಧಿಕಾರವು (5)ನೇ ಉಪ ಪ್ರಕರಣದಲ್ಲಿ ಮಾರ್ಪಡಿಸಲಾದಂತೆ (4)ನೇ ಉಪ ಪ್ರಕರಣದ ಅಡಿಯಲ್ಲಿ ನೀಡಿದ ತೀರ್ಮಾನಕ್ಕೆ ವಿರುದ್ಧವಾಗಿ ಯಾವುದೇ ಕಾರ್ಯವನ್ನು ಕೈಗೊಂಡಿದ್ದರೆ, ಅಂಥ ತೀರ್ಮಾನಕ್ಕೆ ವಿರುದ್ಧವಾಗಿ ಕೈಗೊಂಡ ಯಾವುದೇ ಅಭಿವೃದ್ಧಿಯನ್ನು ಕೆಡಹುವ, ನಾಶಪಡಿಸುವ ಅಥವಾ ತೆಗೆದುಹಾಕುವ ಅಧಿಕಾರವನ್ನು ಮತ್ತು ಅಂಥ ಕೆಡಹುವ, ನಾಶಪಡಿಸುವ ಅಥವಾ ತೆಗೆದುಹಾಕುವ ವೆಚ್ಚವನ್ನು ಸಂಬಂಧಪಟ್ಟ ವ್ಯಕ್ತಿಯಿಂದ ಅಥವಾ ಪ್ರಾಧಿಕಾರದಿಂದ ವಸೂಲ್ಮಾಡುವ ಅಧಿಕಾರವನ್ನು ಮಂಡಳಿಯು ಹೊಂದಿರತಕ್ಕದ್ದು.

24. ಪ್ರವೇಶಕ್ಕೆ ಅಧಿಕಾರ.- ಮಂಡಳಿಯು, ಯಾವುದೇ ಭೂಮಿ ಅಥವಾ ಕಟ್ಟಡವನ್ನು, ಕೆಲಸಗಾರರ ಸಹಾಯಪಡೆದು ಅಥವಾ ಸಹಾಯವನ್ನು ಪಡೆಯದೆ,

(ಎ) ಅಂಥ ಭೂಮಿ ಅಥವಾ ಕಟ್ಟಡಕ್ಕಾಗಿ ಯಾವುದೇ ವಿಚಾರಣೆ, ತಪಾಸಣೆ, ಅಳತೆ ಅಥವಾ ಸಮೀಕ್ಷೆ ಅಥವಾ ಮಟ್ಟ ತೆಗೆದುಕೊಳ್ಳುವ;

(ಬಿ) ನಿರ್ಮಾಣದಲ್ಲಿರುವ ಕಾಮಗಾರಿಗಳನ್ನು ಪರೀಕ್ಷಿಸುವ ಮತ್ತು ಒಳಚರಂಡಿ ಹಾಗೂ ಚರಂಡಿಗಳ ಮಾರ್ಗವನ್ನು ಖಚಿತಪಡಿಸಿಕೊಳ್ಳುವ;

(ಸಿ) ಕೆಳ ಮಣ್ಣಿನಲ್ಲಿ ತೋಡುವ ಅಥವಾ ಕೊರೆಯುವ;

(ಡಿ) ಕಾಮಗಾರಿಯ ಗಡಿಗಳನ್ನು ಮತ್ತು ಉದ್ದೇಶಿತ ರೇಖೆಗಳನ್ನು ಹಾಕುವ;

(ಇ) ಗುರುತುಗಳನ್ನು ಇರಿಸುವ ಹಾಗೂ ಕಂದಕಗಳನ್ನು ತೋಡುವ ಮೂಲಕ ಅಂಥ ಮಟ್ಟಗಳನ್ನು, ಗಡಿಗಳನ್ನು ಮತ್ತು ರೇಖೆಗಳನ್ನು ಹಾಕುವ;

(ಎಫ್) ಯಾವುದೇ ಯೋಜನೆಯನ್ನು ಉಲ್ಲಂಘಿಸಿ ಅಥವಾ ಯಾವ ಷರತ್ತುಗಳಿಗೆ ಒಳಪಟ್ಟು ಅಂಥ ಅನುಮತಿಯನ್ನು ನೀಡಲಾಗಿತ್ತೋ ಆ ಷರತ್ತುಗಳನ್ನು ಉಲ್ಲಂಘಿಸಿ ಯಾವುದೇ

ಭೂಮಿಯನ್ನು ಅಭಿವೃದ್ಧಿಪಡಿಸಲಾಗುತ್ತಿದೆಯೇ ಅಥವಾ ಅಭಿವೃದ್ಧಿಪಡಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ; ಅಥವಾ

(ಜಿ) ಈ ಅಧಿನಿಯಮದ ದಕ್ಷ ಆಡಳಿತಕ್ಕಾಗಿ ಅವಶ್ಯಕವಾದ ಇತರ ಯಾವುದೇ ಕಾರ್ಯಗಳನ್ನು ಮಾಡುವ,-

- ಉದ್ದೇಶಕ್ಕಾಗಿ ಪ್ರವೇಶಿಸಲು ಯಾವೊಬ್ಬ ವ್ಯಕ್ತಿಯನ್ನು ಪ್ರಾಧಿಕರಿಸಬಹುದು: ಪರಂತು,

(i) ಸೂರ್ಯೋದಯ ಮತ್ತು ಸೂರ್ಯಾಸ್ತದೊಳಗಿನ ಅವಧಿಯ ಹೊರತಾಗಿ ಮತ್ತು ಅಧಿಭೋಗದಾರನಿಗೆ ಅಥವಾ ಅಲ್ಲಿ ಯಾವೊಬ್ಬ ಅಧಿಭೋಗದಾರನು ಇರದಿದ್ದರೆ ಭೂಮಿಯ ಅಥವಾ ಕಟ್ಟಡದ ಮಾಲೀಕನಿಗೆ ಸೂಕ್ತ ನೋಟೀಸನ್ನು ಕೊಡದೆ ಹಾಗೆ ಪ್ರವೇಶಿಸತಕ್ಕದ್ದಲ್ಲ;

(ii) ಮಹಿಳೆಯರು ಅಥವಾ ಮಕ್ಕಳು, ಯಾರಾದರೂ ಇದ್ದರೆ ಅವರು, ಅಂಥ ಭೂಮಿ ಅಥವಾ ಕಟ್ಟಡದಿಂದ ಹೊರ ಹೋಗಲು ಸಾಕಷ್ಟು ಅವಕಾಶವನ್ನು ಪ್ರತಿ ಸಂಧರ್ಭದಲ್ಲಿಯೂ ನೀಡತಕ್ಕದ್ದು;

(iii) ಪ್ರವೇಶ ಮಾಡಿದ ಉದ್ದೇಶದ ಜರೂರು ಅವಶ್ಯಕತೆಗೆ ಸರಿಹೊಂದುವಷ್ಟರ ಮಟ್ಟಿಗೆ ಪ್ರವೇಶಿಸಿದ ಭೂಮಿ ಅಥವಾ ಕಟ್ಟಡದ ಅಧಿಭೋಗದಾರನ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗೆ ಯಾವಾಗಲೂ ಸೂಕ್ತ ಗೌರವ ನೀಡತಕ್ಕದ್ದು.

25. ಶುಲ್ಕ ವಿಧಿಸುವುದು.- 23ನೇ ಪ್ರಕರಣದ ಅಡಿಯಲ್ಲಿ ಅನುಮತಿಗಳ ನೀಡಿಕೆಗಾಗಿ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದರದಲ್ಲಿ ಶುಲ್ಕವನ್ನು ವಿಧಿಸುವುದು ಪ್ರಾಧಿಕಾರಕ್ಕೆ ಕಾನೂನುಬದ್ಧವಾಗಿರತಕ್ಕದ್ದು.

26. ಮಂಡಳಿಗೆ ರಾಜ್ಯ ಸರ್ಕಾರದ ಅಧಿಕಾರಗಳ ಪ್ರತ್ಯಾಯೋಜನೆ.- ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಹಾಗೂ ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961 ರಲ್ಲಿ (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 7) ಏನೇ ಇದ್ದರೂ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ತಾನು ಚಲಾಯಿಸಬಹುದಾದ ಯಾವುವೇ ಅಧಿಕಾರಗಳನ್ನು ಮಂಡಳಿಗೆ ಪ್ರತ್ಯಾಯೋಜಿಸಬಹುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಮಂಡಳಿಯು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

27. ಬೀದಿ ಮುಂತಾದವುಗಳ ನಿರ್ವಹಣೆ ಕರ್ತವ್ಯ.- ಕರ್ನಾಟಕ ಪೌರಸಭೆ ಅಧಿನಿಯಮ, 1964 ರಲ್ಲಿ (1964ರ ಕರ್ನಾಟಕ ಅಧಿನಿಯಮ 22) ಏನೇ ಇದ್ದರೂ, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ತಾನು ಕಾನೂನು ಬದ್ಧವಾಗಿ ಬಳಸಬಹುದಾದ ಯಾವುದೇ ಸಾಧನ ಅಥವಾ ತೆಗೆದುಕೊಳ್ಳಬಹುದಾದ ಯಾವುದೇ ಕ್ರಮದ ಮೂಲಕ ಸಮಂಜಸವಾದ ಮತ್ತು ಸಮರ್ಪಕವಾದ ಉಪಬಂಧಗಳನ್ನು ರಚಿಸುವುದು ಮಂಡಳಿಯ ಕರ್ತವ್ಯವಾಗಿರತಕ್ಕದ್ದು; ಎಂದರೆ:-

(ಎ) ಬಸವಕಲ್ಯಾಣ ಪ್ರದೇಶದಲ್ಲಿ ಬೀದಿಗಳ ನಿರ್ವಹಣೆ, ದುರಸ್ತಿ ಮಾಡಿಸುವುದು, ದೀಪ ವ್ಯವಸ್ಥೆ ಮತ್ತು ಸ್ವಚ್ಛಗೊಳಿಸುವುದು; ಮತ್ತು

(ಬಿ) ಬಸವಕಲ್ಯಾಣ ಪ್ರದೇಶದಲ್ಲಿಯ ಬೀದಿಗಳ ಸಂಬಂಧದಲ್ಲಿ ಚರಂಡಿ, ನೈರ್ಮಲ್ಯ ವ್ಯವಸ್ಥೆ ಮತ್ತು ನೀರು ಸರಬರಾಜು.

28. 1974ರ ಕರ್ನಾಟಕ ಅಧಿನಿಯಮ 32ನ್ನು ಮಂಡಳಿಯ ಆವರಣಕ್ಕೆ ಅನ್ವಯಿಸುವುದು.- (1) ರಾಜ್ಯ ಸರ್ಕಾರವು, (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974 ಆ ಅಧಿನಿಯಮವು ಸಾರ್ವಜನಿಕ ಆವರಣಗಳಿಗೆ ಸಂಬಂಧಿಸಿ ಅನ್ವಯಿಸುವಂತೆ ಮಂಡಳಿಗೆ ಸೇರಿದ, ಅದರಲ್ಲಿ ನಿಹಿತವಾದ ಅಥವಾ ಅದು ಗುತ್ತಿಗೆಗೆ ತೆಗೆದುಕೊಂಡ ಆವರಣಕ್ಕೆ , ಅನ್ವಯಿಸತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಮೇಲ್ಕಂಡ ಅಧಿನಿಯಮವು ಮತ್ತು ಅದರಡಿ ರಚಿಸಿದ ನಿಯಮಗಳು ಈ ಮುಂದಿನ ಮಾರ್ಪಾಡುಗಳೊಡನೆ ಮಂಡಳಿಗೆ ಸೇರಿದ ಆವರಣಗಳಿಗೆ ಅನ್ವಯವಾಗತಕ್ಕದ್ದು, ಎಂದರೆ,-

(ಎ) ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂತೆ ರಾಜ್ಯ ಸರ್ಕಾರದ ಅಥವಾ ಮಂಡಳಿಯ ಒಬ್ಬ ಅಧಿಕಾರಿಯನ್ನು ಮೇಲ್ಕಂಡ ಅಧಿನಿಯಮದ ಉದ್ದೇಶಗಳಿಗಾಗಿ ಸಕ್ಷಮ ಅಧಿಕಾರಿ ಎಂದು ನೇಮಿಸಬಹುದು;

(ಬಿ) ಆ ಅಧಿನಿಯಮದಲ್ಲಿ ಮತ್ತು ಆ ನಿಯಮಗಳಲ್ಲಿ "ಸಾರ್ವಜನಿಕ ಆವರಣ"ಕ್ಕೆ ಮಾಡಿದ ಉಲ್ಲೇಖಗಳು ಮಂಡಳಿಯ ಆವರಣಗಳಿಗೆ ಮಾಡಿದ ಉಲ್ಲೇಖಗಳೆಂದು ಭಾವಿಸತಕ್ಕದ್ದು ಮತ್ತು ಆ ಅಧಿನಿಯಮದ 6, 7, 8, 14, 15, 16 ಮತ್ತು 17ನೇ ಪ್ರಕರಣಗಳಲ್ಲಿ " ರಾಜ್ಯ ಸರ್ಕಾರ"ಕ್ಕೆ ಮಾಡಿದ ಉಲ್ಲೇಖಗಳನ್ನು, ಮಂಡಳಿಗೆ ಮಾಡಿದ ಉಲ್ಲೇಖಗಳೆಂದು ಭಾವಿಸತಕ್ಕದ್ದು.

29. ಪ್ರವಾಸೋದ್ಯಮಕ್ಕೆ ಮತ್ತು ಯಾತ್ರೆ ಕೈಗೊಳ್ಳುವುದಕ್ಕೆ ಮಂಡಳಿಯು ಉತ್ತೇಜಿಸುವುದು.- ಈ ಪಾರಂಪರಿಕ ತಾಣಗಳಿಗೆ ಸಾಕಷ್ಟು ಪ್ರಚಾರವನ್ನು ನೀಡಲು ಸಾಂಸ್ಕೃತಿಕ, ಚಾರಿತ್ರಿಕ ಮತ್ತು ಯಾತ್ರಿಕ ಪ್ರವಾಸೋದ್ಯಮವನ್ನು ಉತ್ತೇಜಿಸುವುದಕ್ಕಾಗಿ ಮಂಡಳಿಯು ಕಾರ್ಯಕ್ರಮಗಳನ್ನು ಮತ್ತು ಕಾರ್ಯಚಟುವಟಿಕೆಗಳನ್ನು ವ್ಯವಸ್ಥೆ ಮಾಡಬಹುದು. ಅಂಥ ಕಾರ್ಯಕ್ರಮಗಳು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು:-

(ಎ) ಬಸವಕಲ್ಯಾಣ ಉತ್ಸವ
(ಬಿ) ಶರಣ ಸಾಹಿತ್ಯೋತ್ಸವ
(ಸಿ) ಕಲಾ ಪ್ರದರ್ಶನಗಳು ಮತ್ತು ಮಾರಾಟ
(ಡಿ) ಸಮ್ಮೇಳನಗಳು, ವಿಚಾರಗೋಷ್ಠಿಗಳು, ಕಾರ್ಯಾಗಾರಗಳು
(ಇ) ವಾರ್ಷಿಕ ಜಾತ್ರೆಗಳು ಮತ್ತು ವಿಶೇಷ ಸ್ವರೂಪದ ಹಬ್ಬಗಳು.

30. ಅಧಿಕಾರಗಳ ಪ್ರತ್ಯಾಯೋಜನೆ.- (1) 45ನೇ ಪ್ರಕರಣದಡಿ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದಡಿ ಅಥವಾ ಅಧಿನಿಯಮದ ಮೂಲಕ ಅದಕ್ಕೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು, ಯಾವುದೇ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಬಹುದು.

(2) 46ನೇ ಪ್ರಕರಣದಡಿಯ ವಿನಿಯಮ ರಚನಾಧಿಕಾರವನ್ನು ಹೊರತುಪಡಿಸಿ, ಮಂಡಳಿಯು ವಿನಿಯಮಗಳ ಮೂಲಕ, ಈ ಅಧಿನಿಯಮದಡಿ ಅಥವಾ ಅಧಿನಿಯಮದ ಮೂಲಕ ಅದಕ್ಕೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಆಯುಕ್ತರಿಗೆ ಅಥವಾ ಮಂಡಳಿಯ ಇತರ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದು.

ಅಧ್ಯಾಯ IV
ಹಣಕಾಸು ಮತ್ತು ಸ್ವತ್ತು

31. ಮಂಡಳಿಯ ನಿಧಿ.- (1) ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ನಿಧಿಯೆಂದು ಕರೆಯಲಾಗುವ ಒಂದು ನಿಧಿಯು ಇರತಕ್ಕದ್ದು.

(2) ಸದರಿ ನಿಧಿಗೆ,-

(i) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮಿತವಾದ ಇಲ್ಲವೇ ನಿಗಮಿತವಲ್ಲದ ಯಾವುದೇ ನಿಕಾಯ ಅಥವಾ ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ಅನುದಾನಗಳು, ಧನ ಸಹಾಯ, ದೇಣಿಗೆಗಳು ಮತ್ತು ದಾನಗಳನ್ನು;

(ii) ಮಂಡಳಿಯು ಸಾಲ ಪಡೆದ ಮೊಬಲಗನ್ನು; ಮತ್ತು

(iii) ಯಾವುದೇ ಮೂಲದಿಂದಾಗಲೀ, ಮಂಡಳಿಯು ಅಥವಾ ಮಂಡಳಿಯ ಪರವಾಗಿ ಪಡೆದುಕೊಂಡ ಇತರ ಎಲ್ಲ ಮೊತ್ತಗಳನ್ನು,

-ಜಮೆ ಮಾಡತಕ್ಕದ್ದು.

(3) ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು, ನಿಧಿಗೆ ಜಮೆಮಾಡಲಾದ ಎಲ್ಲ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ರಾಜ್ಯ ಸರ್ಕಾರದ ಖಜಾನೆಯಲ್ಲಿ ಇರಿಸತಕ್ಕದ್ದು.

(4) ಮಂಡಳಿಯ ಆಯುಕ್ತರಿಗೆ ಮತ್ತು ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳು ಮತ್ತು ನಿವೃತ್ತಿವೇತನವೇನಾದರೂ ಇದ್ದಲ್ಲಿ, ಅದನ್ನೂ ಒಳಗೊಂಡಂತೆ ಮಂಡಳಿಯ ಆಡಳಿತಾತ್ಮಕ ವೆಚ್ಚಗಳನ್ನು ಮಂಡಳಿಯ ನಿಧಿಯಿಂದ ಭರಿಸತಕ್ಕದ್ದು.

32. ನಿಧಿಯ ಬಳಕೆ.- ನಿಧಿಯನ್ನು ಮತ್ತು ಮಂಡಳಿಯು ಹೊಂದಿರುವ ಅಥವಾ ಅದರಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತನ್ನು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಬಳಸಿಕೊಳ್ಳತಕ್ಕದ್ದು.

33. ಸರ್ಕಾರದಿಂದ ಅನುದಾನ.- ರಾಜ್ಯ ಸರ್ಕಾರವು ಪ್ರತಿ ವರ್ಷವೂ ಮಂಡಳಿಗೆ, ಮಂಡಲಿಯು ತನ್ನದೇ ಸಂಪನ್ಮೂಲಗಳಿಂದ ಸ್ವಯಂ ನಿರ್ವಹಣೆ ಮಾಡಿಕೊಳ್ಳುವ ಹಂತವನ್ನು ತಲುಪುವವರೆಗೆ, ಅದರ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ಮೊತ್ತವನ್ನು ಅನುದಾನದ ರೂಪದಲ್ಲಿ ನೀಡತಕ್ಕದ್ದು.

34. ಮಂಡಲಿಯ ಆಯುವ್ಯಯ.- (1) ಮಂಡಳಿಯು, ಪ್ರತಿ ವರ್ಷವೂ ನಿಯಮಿಸಬಹುದಾದಂಥ ದಿನಾಂಕಕ್ಕೆ ಮೊದಲು ಮತ್ತು ಅಂಥ ನಮೂನೆಯಲ್ಲಿ, ಮುಂಬರುವ ಏಪ್ರಿಲ್ ಒಂದನೆಯ ದಿನಾಂಕದಂದು ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ಆದಾಯ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಮಂಜೂರಾತಿಗಾಗಿ ಕಳುಹಿಸತಕ್ಕದ್ದು. ಮಂಡಳಿಯು ಅವಶ್ಯವಾದರೆ, ಯಾವುದೇ ಹಣಕಾಸು ವರ್ಷದ ಅವಧಿಯಲ್ಲಿ ಪೂರಕ ಆಯವ್ಯಯ ಅಂದಾಜುಗಳನ್ನು ಸಹ ಸಿದ್ಧಪಡಿಸಬಹುದು.

(2) ರಾಜ್ಯ ಸರ್ಕಾರವು, ಈ ಆಯುವ್ಯಯ ಅಂದಾಜುಗಳನ್ನು ಮತ್ತು ಪೂರಕ ಬಜೆಟ್ ಅಂದಾಜುಗಳನ್ನು, ಅವುಗಳಲ್ಲಿ ಮಾರ್ಪಾಟುಗಳನ್ನು ಮಾಡಿ ಅಥವಾ ಮಾಡದೆ ಅನುಮೋದಿಸತಕ್ಕದ್ದು.

(3) ಅತ್ಯಂತ ತುರ್ತು ಸಂದರ್ಭಗಳಲ್ಲಿ, ಆಯುಕ್ತರು ಒಂದು ಹಣಕಾಸು ವರ್ಷದಲ್ಲಿ ಐದು ಲಕ್ಷ ರೂಪಾಯಿಗಳಿಗೆ ಮೀರದಂತೆ ವೆಚ್ಚವನ್ನು, ಅಂಥ ವೆಚ್ಚವನ್ನು (2) ನೇ ಉಪ-ಪ್ರಕರಣದಡಿ ರಾಜ್ಯ ಸರ್ಕಾರವು ಅನುಮೋದಿಸಿದ ವಾರ್ಷಿಕ ಅಥವಾ ಪೂರಕ ಆಯವ್ಯಯ ಅಂದಾಜಿನಲ್ಲಿ ಸೇರಿಸಿಲ್ಲದಿದ್ದಾಗ್ಯೂ, ಮಾಡಲು ಸಕ್ಷಮರಾಗಿರತಕ್ಕದ್ದು.

(4) ಆಯುಕ್ತರು, ಒಂದು ಬಾರಿಗೆ, ಒಂದು ಲಕ್ಷ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟು, ವೆಚ್ಚದ ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ನಿಧಿಗಳ ಪುನರ್‌ವಿನಿಯೋಗ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು.

35. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ.- (1) ಆಯುಕ್ತರು, ನಿಯಮಿಸಬಹುದಾದಂಥ ಲೆಕ್ಕ ಪತ್ರಗಳ ಪುಸ್ತಕಗಳನ್ನು ಮತ್ತು ಇತರ ರಿಜಿಸ್ಟರುಗಳನ್ನು ನಿರ್ವಹಿಸಿಕೊಂಡು ಬರುವಂತೆ ಮಾಡತಕ್ಕದ್ದು ಮತ್ತು ನಿಯಮಿಸಲಾದ ವಿಧಾನದಲ್ಲಿ ವಾರ್ಷಿಕ ಲೆಕ್ಕ ಪತ್ರಗಳ ತಃಖ್ತೆಯನ್ನು ತಯಾರಿಸತಕ್ಕದ್ದು.

(2) ಮಂಡಳಿಯ ಹಣಕಾಸು ವರ್ಷವು ಪ್ರತಿ ಕ್ಯಾಲೆಂಡರ್ ವರ್ಷದ ಏಪ್ರಿಲ್ ಒಂದನೆಯ ದಿನಾಂಕದಂದು ಪ್ರಾರಂಭವಾಗತಕ್ಕದ್ದು ಮತ್ತು ಮುಂಬರುವ ಕ್ಯಾಲೆಂಡರ್ ವರ್ಷದ ಮಾರ್ಚಿ 31ನೇ ದಿನದಂದು ಕೊನೆಗೊಳ್ಳತಕ್ಕದ್ದು.

(3) ಮಂಡಳಿಯ ಲೆಕ್ಕ ಪತ್ರಗಳನ್ನು ರಾಜ್ಯ ಲೆಕ್ಕ ಪತ್ರಗಳ ಇಲಾಖೆಯ ನಿಯಂತ್ರಣಾಧಿಕಾರಿಯು ವಾರ್ಷಿಕವಾಗಿ ಲೆಕ್ಕ ಪರಿಶೋಧನೆ ನಡೆಸತಕ್ಕದ್ದು. ಮಂಡಲಿ ಅಥವಾ

ರಾಜ್ಯ ಸರ್ಕಾರವು ಸಮವರ್ತಿ ಮತ್ತು ವಿಶೇಷ ಲೆಕ್ಕ ಪರಿಶೋಧನೆಗಾಗಿಯೂ ಆದೇಶಿಸಬಹುದು.

(4) ಲೆಕ್ಕ ಪರಿಶೋಧಕನು, ಲೆಕ್ಕ ಪರಿಶೋಧನೆಯ ಉದ್ದೇಶಗಳಿಗಾಗಿ, ಮಂಡಳಿಯ ಎಲ್ಲ ಲೆಕ್ಕ ಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು.

(5) ಮಂಡಳಿಯು, ಲೆಕ್ಕ ಪತ್ರಗಳ ವಾರ್ಷಿಕ ತಃಖ್ತೆಯನ್ನು ಮತ್ತು ಲೆಕ್ಕ ಪರಿಶೋಧಕನ ವರದಿಯನ್ನು ಸ್ವೀಕರಿಸಿದ ತರುವಾಯ, ಸಾಧ್ಯವಾಗಬಹುದಾದಷ್ಟು ಬೇಗನೆ, ತನ್ನ ಸಭೆಯಲ್ಲಿ ಅದನ್ನು ಪರಿಶೀಲಿಸತಕ್ಕದ್ದು ಮತ್ತು ವಾರ್ಷಿಕ ಲೆಕ್ಕ ಪತ್ರಗಳ ತಃಖ್ತೆ ಹಾಗೂ ಲೆಕ್ಕ ಪರಿಶೋಧಕನ ವರದಿಯ ಪ್ರತಿಯನ್ನು, ಲೆಕ್ಕ ಪರಿಶೋಧಕನು ಮಾಡಿದ ಟೀಕೆಗಳೇನಾದರೂ ಇದ್ದಲ್ಲಿ, ಅದಕ್ಕೆ ನೀಡಿದ ತನ್ನ ವಿವರಣೆ ಮತ್ತು ಲೆಕ್ಕ ಪರಿಶೋಧಕನು ಸೂಚಿಸಿದ ಅಕ್ರಮತೆಗಳು ಅಥವಾ ಲೋಪದೋಷಗಳೇನಾದರೂ ಇದ್ದಲ್ಲಿ, ಅವುಗಳ ಪರಿಹಾರೋಪಾಯಕ್ಕಾಗಿ ಮಂಡಳಿಯು ಕೈಗೊಂಡ ಕ್ರಮದ ವಿವರಣೆಗಳ ಜೊತೆಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(6) ರಾಜ್ಯ ಸರ್ಕಾರವು, ಲೆಕ್ಕ ಪರಿಶೋಧಕನ ವರದಿಯನ್ನು ಮತ್ತು (5) ನೇ ಉಪ-ಪ್ರಕರಣದ ಅಡಿಯಲ್ಲಿ ತನಗೆ ಸಲ್ಲಿಸಲಾದ ಇತರ ದಸ್ತಾವೇಜುಗಳನ್ನು ಪರಿಶೀಲಿಸಿದ ನಂತರ, ಮಂಡಳಿಗೆ, ಅದು ಸೂಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಮಂಡಲಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

36. ವರದಿಗಳು.- (1) ಮಂಡಳಿಯು, ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ, ತನ್ನ ಕಾರ್ಯನಿರ್ವಹಣೆ ಬಗ್ಗೆ ವಾರ್ಷಿಕ ವರದಿಯೊಂದನ್ನು ತಯಾರಿಸತಕ್ಕದ್ದು ಮತ್ತು 32ನೇ ಪ್ರಕರಣದ ಅಡಿಯ ಇತರ ವರದಿಗಳೊಂದಿಗೆ ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಮಂಡಳಿಯು, ನಿಯಮಿಸಬಹುದಾದಂಥ ದಿನಾಂಕಕ್ಕಿಂತ ಮೊದಲು, ಅಂಥ ನಮೂನೆಯಲ್ಲಿ ಮತ್ತು ಅಂಥ ಅವಧಿಯ ಅಂತರದಲ್ಲಿ, ನಿಯಮಿಸಲಾದ ವರದಿಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಅಧ್ಯಾಯ V
ಸಂಕೀರ್ಣ

37. ಮಂಡಳಿಯು ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಜಮೀನನ್ನು ಮಾರಾಟ ಮಾಡಕೂಡದು.- ಮಂಡಳಿಯು, ಸರ್ಕಾರದ ಪೂರ್ವಾನುಮೋದನೆ ಪಡೆಯದೆ, ಯಾವುದೇ ಉದ್ದೇಶಕ್ಕಾಗಿ ಮತ್ತು ಯಾವೊಬ್ಬ ವ್ಯಕ್ತಿಗೆ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಯಾವುದೇ ಜಮೀನನ್ನು ಮಾರಾಟ ಮಾಡತಕ್ಕದ್ದಲ್ಲ.

38. ಕೆಲವು ವ್ಯಕ್ತಿಗಳು ಸಾರ್ವಜನಿಕ ನೌಕರರಾಗಿರತಕ್ಕದ್ದು.- ಮಂಡಳಿಯ ಎಲ್ಲ ಸದಸ್ಯರು, ಅಧಿಕಾರಿಗಳು ಮತ್ತು ನೌಕರರನ್ನು, ಅವರು ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯ ನಿರ್ವಹಿಸುತ್ತಿರುವರೆಂದು ತಾತ್ಪರ್ಯವಾದಾಗ ಅವರನ್ನು ಭಾರತ ದಂಡ

ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರು ಎಂಬುದಾಗಿ ಭಾವಿಸತಕ್ಕದ್ದು.

39. ಈ ಅಧಿನಿಯಮದ ಅಡಿ ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.- ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

40. ಕರ್ತವ್ಯ ನಿರ್ವಹಣೆಯಲ್ಲಿ ಲೋಪ.- (1) ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ವಿಧಿಸಲಾದ ಯಾವುದೇ ಕರ್ತವ್ಯದ ನಿರ್ವಹಣೆಯನ್ನು ಮಂಡಳಿಯು ಮಾಡಿಲ್ಲ ಎಂದು ರಾಜ್ಯ ಸರ್ಕಾರಕ್ಕೆ ಮನವರಿಕೆಯಾದರೆ, ಆ ಕರ್ತವ್ಯದ ನಿರ್ವಹಣೆಗಾಗಿ ಅದು ಒಂದು ಅವಧಿಯನ್ನು ನಿಗದಿಪಡಿಸತಕ್ಕದ್ದು.

(2) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ಅದರ ಕರ್ತವ್ಯ ನಿರ್ವಹಣೆಗಾಗಿ ಹಾಗೆ ನಿಗದಿಪಡಿಸಿದ ಅವಧಿಯೊಳಗೆ ಅಂಥ ಕರ್ತವ್ಯ ನಿರ್ವಹಣೆ ಮಾಡುವಲ್ಲಿ ಮಂಡಳಿಯು ವಿಫಲವಾದರೆ ಅಥವಾ ನಿರ್ಲಕ್ಷ್ಯ ತೋರಿದರೆ 3ನೇ ಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಮಂಡಳಿಯನ್ನು ರದ್ದುಗೊಳಿಸುವುದು ಮತ್ತು ಅದನ್ನು ನಿಗದಿತ ರೀತಿಯಲ್ಲಿ ಪುನಃ ರಚಿಸುವುದು ಸರ್ಕಾರಕ್ಕೆ ಕಾನೂನು ಸಮ್ಮತವಾಗಿರತಕ್ಕದ್ದು.

(3) ಮಂಡಳಿಯನ್ನು ರದ್ದುಪಡಿಸಿದ ತರುವಾಯ ಮತ್ತು ಅದನ್ನು ಪುನಾರಚಿಸುವವರೆಗೆ ಈ ಅಧಿನಿಯಮದ ಅಡಿಯಲ್ಲಿನ ಮಂಡಳಿಯ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ರಾಜ್ಯ ಸರ್ಕಾರ ಅಥವಾ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಅಧಿಕಾರಿ ಅಥವಾ ಅಧಿಕಾರಿಗಳು ನಿರ್ವಹಿಸತಕ್ಕದ್ದು.

41. ಮಂಡಳಿಯ ವಿಘಟನೆ.- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ, ಮಂಡಳಿಯು ವಿಘಟಿತವಾಗತಕ್ಕದ್ದೆಂದು ಘೋಷಿಸಬಹುದು:

ಪರಂತು, ಅಂಥ ಯಾವುದೇ ಘೋಷಣೆಯನ್ನು, ಆ ಅಭಿಪ್ರಾಯದ ಒಂದು ನಿರ್ಣಯವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಿ ಅವುಗಳು ಅದನ್ನು ಅನುಮೋದಿಸಿದ ಹೊರತು, ರಾಜ್ಯ ಸರ್ಕಾರವು ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ,-

(ಎ) ಮಂಡಳಿಯಲ್ಲಿ ನಿಹಿತವಾದ ಮತ್ತು ಅದರಿಂದ ವಸೂಲಾಗತಕ್ಕ ಎಲ್ಲ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು ವಸೂಲಿ ಮಾಡಬಹುದಾಗಿರತಕ್ಕದ್ದು.

(ಬಿ) ಮಂಡಳಿಯ ವಿರುದ್ಧ ಅಮಲು ಜಾರಿಮಾಡಬಹುದಾದ ಎಲ್ಲ ಹೊಣೆಗಳು, ರಾಜ್ಯ ಸರ್ಕಾರದಲ್ಲಿ ನಿಹಿತವಾದ ಮತ್ತು ಅದರಿಂದ ವಸೂಲಿಯಾದ ಸ್ವತ್ತು, ನಿಧಿ ಮತ್ತು ಬಾಕಿಗಳಷ್ಟರ ಮಟ್ಟಿಗೆ ರಾಜ್ಯ ಸರ್ಕಾರದ ವಿರುದ್ಧ ಅಮಲು ಜಾರಿಯಾಗಬಹುದಾಗಿರತಕ್ಕದ್ದು.

42. ರಾಜ್ಯ ಸರ್ಕಾರದ ನಿಯಂತ್ರಣ.- (1) ಮಂಡಳಿಯು ಎಲ್ಲ ಕಾರ್ಯಚಟುವಟಿಕೆಗಳು ಮತ್ತು ವ್ಯವಹಾರಗಳ ಮೇಲೆ ರಾಜ್ಯ ಸರ್ಕಾರವು ಸಾಮಾನ್ಯ ಆಡಳಿತಾತ್ಮಕ ನಿಯಂತ್ರಣ ಮತ್ತು ಅಧೀಕ್ಷಣೆ ಹೊಂದಿರತಕ್ಕದ್ದು.

(2) ರಾಜ್ಯ ಸರ್ಕಾರವು, ಮಂಡಳಿಯ, ಆಯುಕ್ತರ ಅಥವಾ ಮಂಡಳಿಯ ಅಧೀನದ ಯಾವೊಬ್ಬ ಅಧಿಕಾರಿಯ ಯಾವುವೇ ವ್ಯವಹರಣೆಗಳ ದಾಖಲೆಗಳನ್ನು, ಅಂಥ ವ್ಯವಹರಣೆಗಳ ಸರಿಯಾಗಿರುವಿಕೆ, ಕಾನೂನು ಬದ್ಧತೆ ಅಥವಾ ಔಚಿತ್ಯಗಳ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಅವುಗಳ ಬಗ್ಗೆ ತಾನು ಸೂಕ್ತವೆಂದು ಭಾವಿಸಿದಂಥ ಆದೇಶಗಳನ್ನು ಹೊರಡಿಸಬಹುದು.

43. ನಿರ್ದೇಶನಗಳನ್ನು ನೀಡುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರ.- ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ತಾನು ಅವಶ್ಯಕ ಮತ್ತು ಸಮಯೋಚಿತವೆಂದು ಅಭಿಪ್ರಾಯ ಪಡುವಂಥ ನಿರ್ದೇಶನಗಳನ್ನು ಮಂಡಳಿಗೆ ಕೊಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಮಂಡಳಿಯ ಕರ್ತವ್ಯವಾಗಿರತಕ್ಕದ್ದು.

44. ತೊಂದರೆಗಳ ನಿವಾರಣೆ.- ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆ ತೊಂದರೆಯ ನಿವಾರಣೆಗಾಗಿ, ತಾನು ಅವಶ್ಯಕ ಮತ್ತು ಸಮಯೋಚಿತವೆಂದು ಅಭಿಪ್ರಾಯಪಡುವಂಥ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ಮಾಡಬಹುದು.

45. ನಿಯಮಗಳ ರಚನಾಧಿಕಾರ.- (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅಥವಾ ಅಧಿಸೂಚನೆಯನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮವು ಅಥವಾ ಅಧಿಸೂಚನೆಯು ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

46. ವಿನಿಯಮಗಳ ರಚನಾಧಿಕಾರ.- ಮಂಡಳಿಯು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 45ನೇ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕೆ ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

47. ನಿರಸನ ಮತ್ತು ಉಳಿಸುವಿಕೆಗಳು.- (1) ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ಅಧ್ಯಾದೇಶ, 2004ನ್ನು (2004ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 4) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಅನುಸೂಚಿ

(2ನೇ ಪ್ರಕರಣದ (ಜಿ) ಖಂಡವನ್ನು ನೋಡಿ)

ಬಸವಕಲ್ಯಾಣದಲ್ಲಿ ಪರಂಪರೆಯ ತಾಣಗಳು ಮತ್ತು ಸ್ಮಾರಕಗಳು

1. ಕೋಟೆ
2. ಪರುಷಕಟ್ಟೆ
3. ಬಸವೇಶ್ವರ ಗುಡಿ
4. ಕಿನ್ನರಿ ಬೊಮ್ಮಯ್ಯನ ಗವಿ
5. ಮೋಳಿಗೆಯ ಮಾರಯ್ಯನಗುಡಿ
6. ದೇವರ ದಾಸಿಮಯ್ಯ / ಜೇಡರ ದಾಸಿಮಯ್ಯ ಗವಿಗಳು
7. ಕಂಬಳಿ ಮಠ
8. ಬಸವ ಭವನ
9. ಸದಾನಂದ ಮಠ
10. ಹರಳಯ್ಯನ ಗವಿ ಮತ್ತು ಗುಡಿ
11. ಬಸವ ವನ
12. ಜಾತ್ರೆ ಮೈದಾನ
13. ಪ್ರಭುದೇವರ ಗದ್ದಿಗೆ
14. ಮಡಿವಾಳ ಮಾಚಯ್ಯನ ಗದ್ದಿಗೆ ಮತ್ತು ಹೊಂಡ
15. ಶಿವಪುರ ಶಿವಗುಡಿ
16. ನಾರಾಯಣಪುರ ಶಿವಗುಡಿ
17. ಅಕ ನಾಗಮ್ಮನ ಗವಿ

18. ಬಸವೇಶ್ವರ ಮಹಾಮನೆ ಇದ್ದ ಸ್ಥಳ - ಅರಿವಿನ ಗವಿ
19. ತ್ರಿಪುರಾಂತಕೇಶ್ವರನ ಗುಡಿ
20. ಧರ್ಮಶಾಲೆ
21. ತ್ರಿಪುರಾಂತಕ ಹಳ್ಳಿಯ ಪವಿತ್ರ ಸ್ಥಳಗಳು
22. ತ್ರಿಪುರಾಂತಕ ಕೆರೆ
23. ರುದ್ರಮುನಿ ಮತ್ತು ವಿಜ್ಞಾನೇಶ್ವರ ಗವಿಗಳು
24. ನೂತನ ಅನುಭವ ಮಂಟಪ
25. ಪಂಚಸೂತ್ರ ಗವಿ
26 ನುಲಿಯ ಚಂದಯ್ಯನ ಗವಿ
27. ಬಾಂದವರ ಓಣಿ - ಸಾಂಪ್ರದಾಯಿಕವಾಗಿ ಹಾಗೆಂದು ಕರೆಯುತ್ತಾರೆ.
28. ಯಲಹೂಟಿ ಸ್ಥಳ
29. ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯ

ಉದ್ದೇಶ ಮತ್ತು ಕಾರಣಗಳ ಹೇಳಿಕೆ
(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಬೀದರ್ ಜಿಲ್ಲೆಯ ಬಸವಕಲ್ಯಾಣ ಪಟ್ಟಣದಲ್ಲಿನ ಮತ್ತು ಅದರ ಸುತ್ತ ಮುತ್ತಲಿನ ಪರಂಪರೆಯ ತಾಣಗಳ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಮತ್ತು ಬಸವಕಲ್ಯಾಣವನ್ನು ಅಂತಾರಾಷ್ಟ್ರೀಯ ಯಾತ್ರಾಸ್ಥಳವನ್ನಾಗಿ, ಸಾಂಸ್ಕೃತಿಕ ಮತ್ತು ಪ್ರವಾಸ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸುವುದಕ್ಕಾಗಿ ಕಾನೂನಿನ ಮೂಲಕ ಒಂದು ಮಂಡಳಿಯನ್ನು ರಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಈ ವಿಧೇಯಕವು ಇತರೆ ವಿಷಯುಗಳೊಂದಿಗೆ ಮಂಡಳಿಯ ರಚನೆಗಾಗಿ ಮತ್ತು ಅದರಲ್ಲಿ ಶುಲ್ಕ ವಿಧಿಸುವುದು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುವುದು ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುವುದು ಹಾಗೂ ಪ್ರಾಸಂಗಿಕವಾಗಿ ತನ್ನದೇ ಆದ ವಿನಿಯಮಗಳನ್ನು ರಚಿಸುವುದು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದು ಇವೇ ಮುಂತಾದವುಗಳು ಒಳಗೊಂಡಂತೆ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರದ ಅಧಿಕಾರಗಳನ್ನು ಆ ಮಂಡಳಿಯಲ್ಲಿ ನಿಹಿತಗೊಳಿಸಲು ಉಪಬಂಧಕಲ್ಪಿಸುತ್ತದೆ.

ವಿಷಯವು ತುರ್ತು ಸ್ವರೂಪದ್ದಾದುದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ಅಧ್ಯಾದೇಶ, 2004ನ್ನು (2004ರ ಕರ್ನಾಟಕ ಅಧ್ಯಾದೇಶ 4) 2004ರ ನವೆಂಬರ್ 12 ರಂದು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ. ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ರಾಜ್ಯದ ಬೊಕ್ಕಸಕ್ಕೆ ಎರಡು ಕೋಟಿ ರೂಪಾಯಿಗಳ ಆವರ್ತಕ ವೆಚ್ಚ ಉಂಟಾಗುವ ಸಂಭವವಿದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ 77ನೇ ನಿಯಮದ (1)ನೇ ಉಪ ನಿಯಮದ ಮೂಲಕ ಅಗತ್ಯಪಡಿಸಿದಂತೆ ವಿವರಣಾತ್ಮಕ ಹೇಳಿಕೆ

ಬೀದರ್ ಜಿಲ್ಲೆಯ ಬಸವಕಲ್ಯಾಣ ಪಟ್ಟಣದಲ್ಲಿನ ಮತ್ತು ಅದರ ಸುತ್ತ ಮುತ್ತಲಿನ ಪರಂಪರೆಯ ತಾಣಗಳ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಮತ್ತು ಬಸವಕಲ್ಯಾಣವನ್ನು ಅಂತಾರಾಷ್ಟ್ರೀಯ ಯಾತ್ರಾಸ್ಥಳವನ್ನಾಗಿ, ಸಾಂಸ್ಕೃತಿಕ ಮತ್ತು ಪ್ರವಾಸ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸುವುದಕ್ಕಾಗಿ ಕಾನೂನಿನ ಮೂಲಕ ಒಂದು ಮಂಡಳಿಯನ್ನು ರಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಈ ವಿಧೇಯಕವು ಇತರೆ ವಿಷಯಗಳೊಂದಿಗೆ ಮಂಡಳಿಯ ರಚನೆಗಾಗಿ ಮತ್ತು ಅದರಲ್ಲಿ ಶುಲ್ಕ ವಿಧಿಸುವುದು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುವುದು ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುವುದು ಹಾಗೂ ಪ್ರಾಸಂಗಿಕವಾಗಿ ತನ್ನದೇ ಆದ ವಿನಿಯಮಗಳನ್ನು ರಚಿಸುವುದು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದು ಇವೇ ಮುಂತಾದವುಗಳು ಒಳಗೊಂಡಂತೆ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರದ ಅಧಿಕಾರಗಳನ್ನು ಆ ಮಂಡಳಿಯಲ್ಲಿ ನಿಹಿತಗೊಳಿಸಲು ಉಪಬಂಧ ಕಲ್ಪಿಸುತ್ತದೆ.

ವಿಷಯವು ತುರ್ತು ಸ್ವರೂಪದ್ದಾದುದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ಅಧ್ಯಾದೇಶ, 2004ನ್ನು (2004ರ ಕರ್ನಾಟಕ ಅಧ್ಯಾದೇಶ 4) 2004ರ ನವೆಂಬರ್ 12 ರಂದು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಜ್ಞಾಪನ ಪತ್ರ

ಖಂಡ 2: (ಎ) ಉಪ ಖಂಡವು, ಸದರಿ ಉಪ ಖಂಡದ ಅಡಿಯಲ್ಲಿ ಸೌಕರ್ಯಗಳನ್ನು ಅಧಿಸೂಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(ಸಿ) ಉಪಖಂಡವು, ಬಸವ ಕಲ್ಯಾಣದ ಸರಹದ್ದಿನೊಳಗೆ ಒಳಗೊಳ್ಳ ಬೇಕಾದಂಥ ಇತರ ಪ್ರದೇಶಗಳನ್ನು ಘೋಷಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 4: (3)ನೇ ಉಪ ಖಂಡವು, ಮಂಡಳಿಯ ಅಧಿಕಾರೇತರ ಸದಸ್ಯರ ಭತ್ಯೆಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 10: (2)ನೇ ಉಪ ಖಂಡವು, ಆಯುಕ್ತರ ವೇತನ ಮತ್ತು ಇತರ ಭತ್ಯಗಳನ್ನು ನಿರ್ಧರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 12: (3)ನೇ ಉಪ ಖಂಡವು, ಮಂಡಳಿಯ ನೌಕರರ ವೇತನಗಳು, ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 18: (1)ನೇ ಉಪ ಖಂಡವು, ಸರ್ಕಾರದಲ್ಲಿ ನಿಹಿತವಾದ ಪರಂಪರೆಯ ತಾಣಗಳನ್ನು ಮಂಡಳಿಯಲ್ಲಿ ನಿಹಿತವಾಗುವ ದಿನಾಂಕವನ್ನು ಅಧಿಸೂಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
(2)ನೇ ಉಪ ಖಂಡವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ತಾತ್ಕಾಲಿಕ ಉಪಬಂಧಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 19: 19ನೇ ಖಂಡವು, ಅಧಿಸೂಚನೆಯ ನಮೂದುಗಳನ್ನು ತಿದ್ದುಪಡಿ ಮಾಡಲು, ಸೇರಿಸಲು ಅಥವಾ ಮಾರ್ಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 26: 26ನೇ ಖಂಡವು, ರಾಜ್ಯ ಸರ್ಕಾರವು ಚಲಾಯಿಸಬಹುದಾದ ಅಧಿಕಾರಗಳನ್ನು ಮಂಡಳಿಗೆ ಪ್ರತ್ಯಾಯೋಜಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 28: 28ನೇ ಖಂಡವು, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ ಉಪಬಂಧಗಳು ಮಂಡಳಿಯ ಆವರಣಗಳಿಗೆ ಅನ್ವಯಿಸುವ ದಿನಾಂಕವನ್ನು ಅಧಿಸೂಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 30: 30ನೇ ಖಂಡವು, 45ನೇ ಪ್ರಕರಣದಡಿ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು ಯಾವುದೇ ಇತರ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 45: 45ನೇ ಖಂಡವು, ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿದೆ.

ಎಂ.ಪಿ. ಪ್ರಕಾಶ್

ಕಂದಾಯ ಸಚಿವರು

ಟಿ. ರಾಜಣ್ಣ
ಕಾರ್ಯದರ್ಶಿ

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

3. ನಿಯಮ 69ರ ಮೇರೆಗೆ ಚರ್ಚೆ

ವಿಷಯ : ರಾಜ್ಯದಲ್ಲಿ ನಕ್ಸಲೀಯರ ಚಟುವಟಿಕೆ ಮತ್ತು ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಮೂಲಕ ಪ್ರತಿಪಕ್ಷದಲ್ಲಿ ಕುಳಿತಿರುವಂಥ ನಾವೆಲ್ಲಾ, ನಮ್ಮೆಲ್ಲಾ ಹಿರಿಯ ಸದಸ್ಯರಾದ ಸನ್ಮಾನ್ಯ ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು ಈ ಭಾಗದಲ್ಲಿರುವಂಥ ಮಾನ್ಯ ಜಗದೀಶ್ ಶೆಟ್ಟರ್‌ರವರು, ಈಶ್ವರಪ್ಪನವರು ಎಲ್ಲರೂ ಮುಖಂಡರುಗಳು ಸೇರಿ ಒಂದು ನಿಲುವಳಿ ಸೂಚನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ಅದು ಎಷ್ಟೊಂದು ಅಗತ್ಯತೆ ಇದೆ ಎನ್ನುವಂಥದ್ದು ವಿಧಾನಸೌಧದ ಸುತ್ತಮುತ್ತಲ ವಾತಾವರಣವನ್ನು ನೋಡಿದರೆ ಇದರ ಗಂಭೀರತೆ ಅರ್ಥವಾಗುತ್ತದೆ. ನಾನು ಇಲ್ಲಿಗೆ ಬರಬೇಕಾದರೆ, ಶಾಸಕರ ಸುತ್ತಮುತ್ತ ಇರುವ ವಾತಾವರಣವನ್ನು ನೋಡಿಕೊಂಡು ವಿಧಾನಸೌಧದ ಒಳಗಡೆ ಬರಬೇಕಾದರೆ ಒಂದು ರೀತಿಯ ಭಯಾನಕ ವಾತಾವರಣ, ಏನೋ ಒಂದು ದೊಡ್ಡ ಘಟನೆ ಆಗಿ ಹೋಗಿದೆ ಆ ರೀತಿಯ ಒಂದು ಪೊಲೀಸರ ಸರ್ಪಗಾವಲು ವಿಧಾನಸೌಧದ ಸುತ್ತಮುತ್ತ ಇರುವ ಒಂದು ವಾತಾವರಣವನ್ನು ನೋಡಿ ಇಲ್ಲಿ ಏನೋ ಆಗಿರಬಹುದೆನ್ನುವ ಒಂದು ಗಾಬರಿಯಿಂದ ಒಳಗಡೆ ಬಂದೆ. ನಾನು ಸರ್ಕಾರಕ್ಕೆ ಸೂಕ್ತವಾದ ಬಂದೋಬಸ್ತಿನ ದೃಷ್ಟಿಯಿಂದ ತಾವು ಮಾಡಿದ್ದೀರಿ, ಅದರ ಬಗ್ಗೆ ನನ್ನದೇನು ಆಕ್ಷೇಪಣೆ ಇಲ್ಲ. ಆದರೆ ವಿಧಾನಸೌಧದ ಸುತ್ತಮುತ್ತ ಶಾಸಕರು ರಕ್ಷಣೆಯಿಂದ ಒಳಗಡೆ ಬಂದು ನಾವೆಲ್ಲರೂ ಕುಳಿತು ಕೊಳ್ಳಬಹುದು. ನಮ್ಮ ಕ್ಷೇತ್ರದಿಂದ ನಾವು ಇಲ್ಲಿಗೆ ಬಂದು, ವಾಪಸ್ಸು ನಮ್ಮ ಊರಿಗೆ ಹೋಗುತ್ತೇವೆಯೇ ಎನ್ನುವ ಒಂದು ಭಯದ ವಾತಾವರಣ ಇವತ್ತು ನಮ್ಮನ್ನು ಕಾಡುತ್ತಿದೆ. ಶಾಸಕರಿಗೆ, ಚುನಾಯಿತ ಪ್ರತಿನಿಧಿಗಳಿಗೆ ಒಂದು ರೀತಿಯಾದ ರಕ್ಷಣೆ ಸಿಗಬಹುದು, ಆದರೆ ಶ್ರೀಸಾಮಾನ್ಯನ ಸ್ಥಿತಿ ಏನು ಕರ್ನಾಟಕ ರಾಜ್ಯದಲ್ಲಿ, ಈ ಬಗ್ಗೆ ಯೋಚನೆ ಮಾಡಬೇಕಾದ ಒಂದು ಪರಿಸ್ಥಿತಿ ಇರುವಂಥ ಈ ಒಂದು ಸಂದರ್ಭದಲ್ಲಿ ಈ ನಿಲುವಳಿ ಸೂಚನೆಯ ಮೂಲಕ, ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ವೆಂಕಟಮ್ಮನಹಳ್ಳಿಯಲ್ಲಿ ನಕ್ಸಲೀಯರಿಂದ ಪೊಲೀಸರ ಮಾರಣಹೋಮ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಜನರು ಹಾಗೂ ಜನಪ್ರತಿನಿಧಿಗಳಿಗೆ ನಕ್ಸಲೀಯರಿಂದ ಜೀವಬೆದರಿಕೆ ಮತ್ತು ಇತ್ತೀಚೆಗೆ ಬೆಂಗಳೂರಿನಲ್ಲಿ ಉಗ್ರಗಾಮಿಗಳಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿರುವುದು. ಕರ್ನಾಟಕ ರಾಜ್ಯ ಈ ನಕ್ಸಲೇಟ್ ಹಾಗೂ ಉಗ್ರಗಾಮಿಗಳ ಒಂದು ಕಾರ್ಯಸ್ಥಾನಕ್ಕೆ ಕೇಂದ್ರವಾಗಿರುವಂಥದ್ದು, ಇದರಿಂದ ರಾಜ್ಯದ ಜನರು ಭಯಭೀತರಾಗಿದ್ದಾರೆ ಎನ್ನುವಂಥ ಒಂದು ವಿಷಯದ ಬಗ್ಗೆ ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡಿ, ಸರ್ಕಾರಕ್ಕೆ ನಮ್ಮಲ್ಲಿರುವಂಥ ಮಾಹಿತಿಗಳನ್ನು ಕೊಟ್ಟು ಇದಕ್ಕೆ ಒಂದು ಏನಾದರೂ ಪರಿಹಾರವನ್ನು ಹುಡುಕಬೇಕು ಎನ್ನುವ ಸದುದ್ದೇಶದಿಂದ ನಿಲುವಳಿ ಸೂಚನೆಯನ್ನು ನಾವೆಲ್ಲರೂ ಒಟ್ಟಿಗೆ ಸೇರಿ ಇದಕ್ಕೊಂದು ಪ್ರಾಮುಖ್ಯತೆಯನ್ನು ಕೊಟ್ಟು ತಂದಿರುತ್ತೇವೆ. ನನಗೆ ಆಶ್ಚರ್ಯವೆಂದರೆ, ನಮ್ಮ ಹಣಕಾಸು ಸಚಿವರು ಹಾಗೂ ಹಿರಿಯರಾದಂಥ ಮಾನ್ಯ ಸಿದ್ದರಾಮಯ್ಯನವರು ಆ ಬಜೆಟ್‌ನಲ್ಲಿ ಕರ್ನಾಟಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ತೃಪ್ತಿಕರವಾಗಿದೆ ಎಂದು ಒಂದು ಮಾತನ್ನು ತಾವು ಹೇಳಿರುತ್ತೀರಿ. ಮಾನ್ಯ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿ ಅದರಲ್ಲೂ ಹಿರಿಯರಾಗಿ ನೀವು ಹೇಳುವಂಥ

ಒಂದೊಂದು ಮಾತಿಗೂ ಮನ್ನಣೆ ಮತ್ತು ಮಾನ್ಯತೆ ಹಾಗೂ ಗೌರವ ಇರುತ್ತದೆ. ವಾಸ್ತವಿಕ ಸಂಗತಿಗಳ ಆಧಾರದ ಮೇಲೆ ಮಾತನಾಡುವುದನ್ನು ಬಿಟ್ಟು ಯಾವ ಪರಿಸ್ಥಿತಿ ಇದೆಯೋ ಅದಕ್ಕೆ ತದ್ವಿರುದ್ಧವಾಗಿ ತಾವು ಹೇಳಿರುವುದು ಅದರ ಬಗ್ಗೆ ಚರ್ಚೆಯಾದಾಗ, ಅದರ ಸತ್ಯಾಂಶಗಳನ್ನು ಸರಿತಪ್ಪುಗಳನ್ನು ನಾವು ಮಾತನಾಡೋಣ. ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನಲ್ಲಿ ಆಗಿರುವಂಥ ಘಟನೆ, ಕರ್ನಾಟಕ ಉಗ್ರಗಾಮಿಗಳ, ನಕ್ಸಲೀಯರ ಭಯೋತ್ಪಾದಕರ ಒಂದು ತಂಗುದಾಣವಾಗಿ ಪರಿವರ್ತನೆಯಾಗುತ್ತಿದೆ. ನಾನು ಅಂದುಕೊಂಡಿದ್ದೇನೆ, ಸರ್ಕಾರ ಕಾನೂನು ಸುವ್ಯವಸ್ಥೆಯನ್ನು ಹದ್ದುಬಸ್ತಿನಲ್ಲಿಟ್ಟು ನಾಗರೀಕರಿಗೆ ರಕ್ಷಣೆ ಕೊಡುವಂಥದ್ದು ಸರ್ಕಾರದ ಒಂದು ಆದ್ಯ ಕರ್ತವ್ಯ. ಆದರೆ ಇವತ್ತು ನಿರ್ಭೀತಿಯಿಂದ ಬೆಂಗಳೂರು ಮಹಾನಗರದಲ್ಲಿ ಕರ್ನಾಟಕ ರಾಜ್ಯದ ಪ್ರಮುಖ ನಗರಗಳಲ್ಲಿ ಓಡಾಟವನ್ನು ಮಾಡುವುದಕ್ಕಾಗದಿರುವಂಥ ಉಸಿರುಗಟ್ಟುವಂಥ ಒಂದು ಪರಿಸ್ಥಿತಿ ಬಂದಿದೆ ಎನ್ನುವುದಾದರೆ ಸರ್ಕಾರ, ಗೃಹ ಇಲಾಖೆ, ಏನು ಮಾಡುತ್ತಿದೆ ಎನ್ನುವ ಒಂದು ಪ್ರಶ್ನೆ ಇಲ್ಲಿ ಉದ್ಭವವಾಗುತ್ತಿದೆ. ಆಶ್ಚರ್ಯವೆಂದರೆ, ಯಾವ ಒಂದು ಐ.ಟಿ. ಉದ್ಯಮದಿಂದ ಇಡೀ ಜಗತ್ತಿನಲ್ಲಿ ಬೆಂಗಳೂರು ನಗರಕ್ಕೆ ಒಂದು ಹೆಸರು ಬಂದಿದೆಯೋ ಆ ಐ.ಟಿ. ಉದ್ಯಮಿಗಳ ಮೇಲೂ ಸಹ ಒಂದು ರೀತಿಯ ಉಗ್ರಗಾಮಿಗಳ ಧಾಳಿ, ವ್ಯವಸ್ಥಿತವಾದ ಒಂದು ಷಡ್ಯಂತ್ರ ನಡೆಯುತ್ತಿದೆ ಎನ್ನುವಂಥದ್ದೂ ಸಹ ಅನೇಕ ತನಿಖಾ ವರದಿಗಳಲ್ಲಿ ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಅವರಿಗೆ ರಕ್ಷಣೆ ಇಲ್ಲದೆ ಬೆಂಗಳೂರನ್ನು ಬಿಟ್ಟು ಅವರು ಹೊರಗೆ ಹೋಗುವುದಕ್ಕೆ ಅವರೆಲ್ಲರೂ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಚುನಾಯಿತ ನಮ್ಮ ಪ್ರತಿನಿಧಿಗಳು ಮಲೆನಾಡಿನ ಆ ಭಾಗದಲ್ಲಿ ಕೆಲಸ ಮಾಡುವುದಕ್ಕಾಗದೆ ಓಡಾಟವನ್ನು ಮಾಡುವುದಕ್ಕಾಗದಂಥ ಪ್ರಾಣದ ಭಯಭೀತಿಯಿಂದ ಓಡಾಟ ಮಾಡುವಂಥ ಒಂದು ಪರಿಸ್ಥಿತಿ ಇದೆ. ಒಂದು ರೀತಿಯ ನೇರವಾದ ಒಂದು ಬೆದರಿಕೆ, ಗ್ರಾಮೀಣ ಪ್ರದೇಶದಲ್ಲಿ ಹೋಗಿ, ಈ ಶಾಸಕರಿಗೆ ಇಲ್ಲಿ ಓಡಾಡುವುದಕ್ಕೆ ಬಿಡಕೂಡದು ಎನ್ನುವಂಥದ್ದು, ಒತ್ತಾಯದ ಮೇಲೆ ಜನರಿಂದ ಹಣ ಸಂಗ್ರಹಣೆ ಮಾಡುತ್ತಿರುವಂಥದ್ದು ಈ ರೀತಿಯ ಒಂದು ಭಯಾನಕ ವಾತಾವರಣ ಚಿಕ್ಕಮಗಳೂರು ಜಿಲ್ಲೆ ಹಾಗೂ ಮಲೆನಾಡು ಪ್ರದೇಶದಲ್ಲಿರುವಂಥದ್ದು, ನಮ್ಮ ಶಾಸಕರ ಪ್ರಾಣಕ್ಕೆ ಧಕ್ಕೆ ಬಂದು ಅವರು ರಕ್ಷಣೆಯಲ್ಲಿ ಓಡಾಟ ಮಾಡುತ್ತಿರುವ ಒಂದು ಪರಿಸ್ಥಿತಿ ಇವತ್ತು ನಮ್ಮ ರಾಜ್ಯದಲ್ಲಿದೆ. ಸ್ವಾಮಿ, ನಾನು ಆ ವಿವರಕ್ಕೆ ಹೋಗುವುದಕ್ಕೆ ಮುಂದೆ, ಸರ್ಕಾರದ ಗಮನಕ್ಕೆ ತರುವ ಒಂದು ದೃಷ್ಟಿಯಿಂದ ನೀವೇ ಕೊಟ್ಟಿರುವ ಒಂದು ಅಂಕಿ ಅಂಶಗಳ ಪ್ರಕಾರ 2003–04ನೇ ಸಾಲಿನವರೆಗೆ 6617 ರಷ್ಟು ಮಹಿಳೆಯರ ಮೇಲೆ ದೌರ್ಜನ್ಯ ನಡೆದಿದೆ. ಬೆಂಗಳೂರು ನಗರ ಒಂದರಲ್ಲಿಯೇ 2002 ರಿಂದ 2004 ರವರೆಗೆ 718 ಕೊಲೆಗಳಾಗಿದೆ, 619 ದರೋಡೆಗಳಾಗಿದೆ. 456 ಸರಗಳ ಅಪಹರಣವಾಗಿದೆ. 1079 ಪ್ರಕರಣಗಳಲ್ಲಿ ಹಗಲುಹೊತ್ತಿನಲ್ಲಿ ದರೋಡೆಯಾಗಿದೆ. 4452 ಪ್ರಕರಣಗಳಲ್ಲಿ ರಾತ್ರಿ ಹೊತ್ತು ದರೋಡೆಯಾಗಿದೆ. 8343 ವಾಹನಗಳ ಕಳವಾಗಿದೆ, ಇವೆಲ್ಲಾ ದಾಖಲೆಗಳಲ್ಲಿ ಸಿಗುತ್ತದೆ. ದಾಖಲೆಯಲ್ಲಿ ಸಿಗದಿರುವಂಥದ್ದು ಇದರ 10 ಪಟ್ಟು ಜಾಸ್ತಿ ಇರಬಹುದೆಂದು ನನ್ನ ಒಂದು ಅನಿಸಿಕೆ. ವಿಧಾನಸೌಧದ ಪಕ್ಕದಲ್ಲಿರುವ ಶಾಸಕರ ಭವನದಲ್ಲಿಯೇ ಶಾಸಕರ ಕೊಠಡಿಯಲ್ಲಿಯೇ ಕಳವಾಯಿತು. ಬಳ್ಳಾರಿ ಜಿಲ್ಲೆ, ಹಿರಿಯ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರು ಇಲ್ಲಿಯೇ ಇದ್ದಾರೆ, ಈ ಸುಪಾರಿ ಹಂತಕರಿಗೆ ಹೇಳಿ ಮಾಡಿಸಿರುವಂಥ ಒಂದು ಭದ್ರ ಕೋಟೆಯಾಗಿದೆ. ಇವತ್ತು ಎಲ್ಲಾ ಅಂಕಿ ಅಂಶಗಳಲ್ಲಿ ನಮಗೆ ಸಿಗುತ್ತಿದೆ. ಆಂಧ್ರಪ್ರದೇಶದ ಈ ನಮ್ಮ ಗಡಿ ಭಾಗದಲ್ಲಿ

ದಿನಕ್ಕೊಂದು ತಲೆ ಕತ್ತರಿಸಿ ಕೊಲೆ ಮಾಡತಕ್ಕಂಥದ್ದು ಮರುಕಳಿಸುತ್ತಿದೆ. ಇತ್ತೀಚೆಗೆ ಆಂಧ್ರಪ್ರದೇಶದ ಭೂ ಮಾಲೀಕರ ಸಂಖ್ಯೆ ನಮ್ಮ ಬಾರ್ಡರ್‌ಗೆ ಬರುವ ಸಂಖ್ಯೆ ಜಾಸ್ತಿಯಾಗಿ ಈ ರಾಯಲ್ ಸೀಮಾ ಪ್ರದೇಶದ ಕರ್ನಾಟಕದ ರಾಯಚೂರು, ಬಳ್ಳಾರಿ ಈ ಕಡೆ ಕೋಲಾರ ಜಿಲ್ಲೆಯ ಗಡಿ ಭಾಗದಲ್ಲಿ ಈ ಭೂಮಿಯನ್ನು ಖರೀದಿ ಮಾಡುತ್ತಿದ್ದು ಈ ರಾಯಲ್ ಸೀಮಾ ಎಷ್ಟು ಕೊಲೆಗಳಿಗೆ ಕಾರಣ, ಈ ಬಳ್ಳಾರಿಯ ಸುಪಾರಿ ಕೊಲೆ ಮಾಡುತ್ತಿರುವುದಕ್ಕೆ ಅವರು ಸಹ ಕಾರಣ ಅಂತ ಮಾಹಿತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಬಳ್ಳಾರಿ ನಗರಸಭೆಯ ಮ್ಯಾನೇಜರ್ ವಿಜಯ ಕುಮಾರ್‌ರವರ ಹತ್ಯೆಯಾಯಿತು. ಇಂಜನೀಯರ್ ರಾಮಕೃಷ್ಣರವರ ಹತ್ಯೆಯಾಯಿತು. ಲಿಕ್ಕರ್ ದೊರೆ ಬಿ. ಪ್ರಸಾದನ್ ಅವರ ಬರ್ಬರ ಕೊಲೆಯಾಯಿತು. ನಗರ ಸಭೆಯ ಸದಸ್ಯ ರಾಘವೇಂದ್ರನ ಕೊಲೆಯಾಯಿತು. ಇವರ ತಂದೆ ಮಾಜಿ ನಗರಸಭೆಯ ಸದಸ್ಯ, ಕುಮಾರಸ್ವಾಮಿಯ ಕೊಲೆಯಾಯಿತು. ರಾಯಲ್ ಸೀಮಾದಲ್ಲಿ ಕಿಂಗ್ ಎಂದು ಕರೆಸಿಕೊಳ್ಳುತ್ತಿದ್ದ ವೆಂಕಟೇಶ್ವರರಾವ್‌ರವರ ಕೊಲೆಯಾಯಿತು. ಬಳ್ಳಾರಿಯಲ್ಲಿ ಆಂಧ್ರ ಮಾದರಿಯಲ್ಲಿಯೇ ಬರ್ಬರ ಹತ್ಯೆಯಾಯಿತು. ಗುಲ್ಬರ್ಗಾ ಜಿಲ್ಲೆ ಇದಕ್ಕೇನೂ ಹೊರತಾಗಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರತಿನಿಧಿಸತಕ್ಕಂಥ ಆ ಜಿಲ್ಲೆಯಲ್ಲಿ ಇತ್ತೀಚೆಗೆ ಶಿರವಾಳ ಗ್ರಾಮದಲ್ಲಿ ಶಸ್ತ್ರಾಸ್ತ್ರ ಗುಂಪೊಂದು ಅಮಾಯಕರ ಮೇಲೆ ಗುಂಡು ಹಾರಿಸಿ ನಾಲ್ವರನ್ನು ಬಲಿ ತೆಗೆದುಕೊಂಡರು. ಈ ಘಟನೆ ನಡೆದು 7 ತಿಂಗಳಾದರೂ ಇದುವರೆಗೆ ಅಪರಾಧಿಗಳ ಬಂಧನವಾಗಲಿಲ್ಲ. ಯಾರನ್ನು ಹಿಡಿದಿಲ್ಲ, ಗುಲ್ಬರ್ಗಾ ನಗರದಲ್ಲಿ ನೂರಾರು ಜನರ ಎದುರು ಆ ಎಎಸ್‌ಐ, ಒಬ್ಬ ಆಟೋ ಚಾಲಕನನ್ನು ಕೊಂದು ಹಾಕಿದರು, ಇದುವರೆಗೆ ಪೋಲೀಸ್ ಇಲಾಖೆ ಕ್ರಮ ತೆಗೆದುಕೊಂಡಿಲ್ಲ. ನನಗೆ ಅನಿಸುವಂಥದ್ದು ಈ ರೀತಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಡುತ್ತಿರಬೇಕಾದರೆ ಈ ಸರ್ಕಾರಕ್ಕೆ ಖಚಿತವಾಗಿ ಕಾನೂನು ಸುವ್ಯವಸ್ಥೆ ಮಾಡುವುದಕ್ಕೆ ಅದನ್ನು ನಿಭಾಯಿಸುವುದಕ್ಕೆ ಈ ರಾಜಕೀಯ ಚಾಕಚಕ್ಯತೆ ಇದೆ ಎಂದು ನಮಗೆ ಎಲ್ಲೂ ಅನಿಸುತ್ತಿಲ್ಲ. ಎಲ್ಲಾ ಕಡೆ ಅಧಿಕಾರಿಗಳ ದರ್ಬಾರು, ಇಲ್ಲವಾದರೆ ಸಮ್ಮಿಶ್ರ ಸರ್ಕಾರದ ಪಾಲುದಾರ ಕಾರ್ಯಕರ್ತರ ಹಸ್ತಕ್ಷೇಪ, ಅವರು ಮಧ್ಯೆ ಪ್ರವೇಶ ಮಾಡಿ ಪೋಲೀಸ್ ಸ್ಟೇಶನ್ನೇ ನಮ್ಮದು ಎಂದು ಅವರು ತಿಳಿದುಕೊಂಡಿದ್ದಾರೆ. ಇಲ್ಲಿರುವಂಥ ಉನ್ನತ ಪೋಲೀಸ್ ಅಧಿಕಾರಿಗಳಿಗೆ ಈ ವಿಷಯ ಗೊತ್ತಿದೆಯೋ ಅಥವಾ ಇಲ್ಲವೋ?

ಮಾನ್ಯ ಮುಖ್ಯಮಂತ್ರಿಗಳು ಒಂದು ಗಂಭೀರವಾದ ಮಾತನ್ನು ಹೇಳಿದರು. ಯೋಚನೆ ಮಾಡಿ ಹೇಳಿದರೋ ಏನೋ ಗೊತ್ತಿಲ್ಲ. ಈ ನಕ್ಸಲೀಯರ ಚಟುವಟಿಕೆಗಳು ಅದೊಂದು ಸಾಮಾಜಿಕ ಚಳುವಳಿ ಎಂದು, ಒಂದು ರೀತಿಯಾಗಿ ಗೊತ್ತಿದ್ದೊ ಅಥವಾ ಗೊತ್ತಿಲ್ಲದೆಯೋ ಸರ್ಟಿಫಿಕೇಟನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಕೊಟ್ಟು ಬಿಟ್ಟರು. ನಂತರ ಅವರನ್ನು ಮಾತುಕತೆಗೆ ಕರೆದರು, ಮಾತುಕತೆಗೆ ಕರೆದಾಗ ಆಹ್ವಾನ ಹೇಗಿತ್ತು ಎಂದರೆ, ಚಿಕ್ಕಮಗಳೂರು ಜಿಲ್ಲೆ ಮೆಣಸಿನ ಹಾಡ್ಯದಲ್ಲಿ ಅಲ್ಲಿ ಚಕಮುಕಿಯಾಯಿತು, ಆ ಹಿನ್ನೆಲೆಯಲ್ಲಿ ಮಾತುಕತೆಯ ಬಗ್ಗೆ ಆಹ್ವಾನವನ್ನು ಕೊಟ್ಟಿದ್ದೀರಿ. ಎಸ್.ಟಿ.ಎಫ್.ನ್ನು ಕಳುಹಿಸುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಇದು ಸದನದಲ್ಲಿ ಕೊಟ್ಟ ಭರವಸೆಯಾಗಿದೆ. ಪ್ರತಿಪಕ್ಷದ ನಾಯಕರ ಜೊತೆ ಸಮಾಲೋಚನೆ ಮಾಡಿ ಕೊಟ್ಟಂತಹ ಭರವಸೆಯಾಗಿದೆ. ಈ ಲೆಕ್ಕಾಚಾರವನ್ನು ಹಾಕುವುದರೊಳಗಾಗಿ ವೆಂಕಟಮ್ಮನಹಳ್ಳಿಯಲ್ಲಿ ಪೋಲೀಸರ ಹೆಣಗಳು ಬಿದ್ದವು, ಇಂತಹ ಸಂದರ್ಭದಲ್ಲಿ ನಮ್ಮ ಪೋಲೀಸ್ ಉನ್ನತ ಅಧಿಕಾರಿಗಳು

ಗಮನಿಸಬೇಕಾದುದು. ಎಂದರೆ, ನಮ್ಮ ಗೃಹಸಚಿವರಾದ ಸನ್ಮಾನ್ಯ ಮುಖ್ಯಮಂತ್ರಿಗಳು ಈ ನಕ್ಸಲೀಯರ ಭೇಟಿಯಾಡುವ ನೆಪದಲ್ಲಿ ಸನ್ಮಾನ್ಯ ವಾಟಾಳ್ ನಾಗರಾಜರವರೆ, ಆ ನೆಪದಲ್ಲಿ ಬೆಂಗಳೂರಿನಲ್ಲಿ ಬೀದಿಗಳಲ್ಲಿ ರಾತ್ರಿ ಹೊತ್ತು ವಾಹನಗಳನ್ನು ತಡೆದು ಪರಿಶೀಲನೆ ಮಾಡುವುದು, ಅವರಿಗೆ ಕಿರುಕುಳವನ್ನು ಕೊಟ್ಟು, ಆಗ ರಾತ್ರಿ ಗಸ್ತು ತಿರುಗುವವರು ಏನೇನು ದೋಚಿದರೋ ಗೊತ್ತಿಲ್ಲ. ಕಿರುಕುಳದ ಮೇಲೆ ಕಿರುಕುಳವನ್ನು ಕೊಟ್ಟರು. ಒಂದು ರೀತಿಯಲ್ಲಿ ಸರ್ಕಾರಿ ಭಯೋತ್ಪಾದನೆ ಪ್ರಾರಂಭವಾಯಿತು. ರಾತ್ರಿ ಗಸ್ತು ತಿರುಗಬಾರದು, ತನಿಖೆ ಮಾಡಬಾರದು ಎಂದು ನಾನು ಹೇಳಲಿಲ್ಲ. ಅದರ ಬಗ್ಗೆ ವಿವರವನ್ನು ಪತ್ರಿಕೆಗಳಲ್ಲಿ ನೋಡಿದಾಗ, ಪತ್ರಿಕೆಗಳಲ್ಲಿ ಬಂದ ವರದಿಯನ್ನು ನೋಡಿದಾಗ ಇದೊಂದು ಕಿರುಕುಳಕ್ಕೆ ಹಾದಿಯಾಯಿತೇ ಹೊರತು, ಪ್ರಾಮಾಣಿಕವಾಗಿ ಈ ರೀತಿ ಭಯೋತ್ಪಾದಕರನ್ನು, ನಕ್ಸಲೀಯರ ಚಟುವಟಿಕೆಗಳಲ್ಲಿ ಭಾಗವಹಿಸುವವರನ್ನು ಐ.ಎಸ್.ಐ. ಚಟುವಟಿಕೆಗಳಲ್ಲಿ ಭಾಗವಹಿಸುವವರನ್ನು, ದೇಶದ್ರೋಹಿ ಚಟುವಟಿಕೆಗಳಲ್ಲಿ ಭಾಗವಹಿಸುವವರನ್ನು ಹಿಡಿಯಬೇಕು ಎನ್ನುವ ಯಾವುದೇ ಒಂದು ಪ್ರಯತ್ನದಿಂದ ಆ ಮೂಲಕ ಜನರ ವಿಶ್ವಾಸಕ್ಕೆ ಬರಲಿಲ್ಲ. ಯಾರೋ ಕೆಲವು ಹುಡುಗರು ಕುಡಿದು ಹೋಗುತ್ತಿದ್ದರು, ಅವರು ಯಾರೂ ಮಾಡದ ಪಾಪವನ್ನು ಮಾಡಲಿಲ್ಲ, ಯಾರು ತಲೆಯನ್ನು ಕಡಿದರು ಅವರನ್ನು ಬಿಟ್ಟರು, ರಾತ್ರಿ ಯಾರೋ ಯುವಕರು ಹೋಗುವವರನ್ನು ಬರುವವರನ್ನು ಬಂಧಿಸಿ ಕಿರುಕುಳವನ್ನು ಕೊಡುವುದು ಪ್ರಾರಂಭವಾಯಿತು. ಇದು ಎಲ್ಲಿಯವರೆವಿಗೆ ಹೋಯಿತು ಎಂದರೆ ಲೋಕಾಯುಕ್ತರವರಾದ ಮಾನ್ಯ ವೆಂಕಟಾಚಲಯ್ಯನವರು ಇದನ್ನು ಗಮನಿಸಿ ಈ ರೀತಿಯಾಗಿ ಕಿರುಕುಳವನ್ನು ಕೊಡಬಾರದು ಎಂದು ಸೂಚನೆಯನ್ನು ಹಾಗೂ ಅವರ ಅಭಿಪ್ರಾಯವನ್ನು ಕೊಡುವ ಮಟ್ಟಕ್ಕೆ ಅದು ಆಯಿತು. ಆದರೆ ಅದು ಇನ್ನೂ ನಿಂತಿಲ್ಲ, ನಕ್ಸಲೀಯರ ಮೇಲೆ ಒಂದು ರೀತಿಯ ಸೇಡನ್ನು ತೀರಿಸಿಕೊಳ್ಳುವ ರೀತಿಯಲ್ಲಿ, ಆ ನೆಪದಲ್ಲಿ ಈ ಪೋಲೀಸ್‌ನವರು ನಾಗರೀಕರ ಮೇಲೆ ಈ ರೀತಿಯಾಗಿ ಕಿರುಕುಳವನ್ನು ಕೊಡುವಂತಹ ಮಾರ್ಗವನ್ನು ಅನುಸರಿಸಿದರು. ಇವರು ಎಲ್ಲೆಲ್ಲಿ ಗಸ್ತು ತಿರುಗಿದರು, ಇವರು ವಿಧಾನಸೌಧದ ಸುತ್ತಮುತ್ತ ಮತ್ತು ಮಂತ್ರಿಗಳ ಮನೆಯ ಸುತ್ತಮುತ್ತ ಗಸ್ತು ತಿರುಗುತ್ತಾರೆ. ಮುಖ್ಯಮಂತ್ರಿಗಳ ಮನೆಯ ಸುತ್ತಮುತ್ತ ಗಸ್ತು ತಿರುಗುತ್ತಾರೆ. ನಾಗರೀಕರಿಗೆ ಭಯೋತ್ಪಾದಕರು ಇಲ್ಲಿಯೇ ತಂಗುದಾಣ ಮಾಡಿರಬಹುದು, ಪೋಲೀಸರೆ ರಕ್ಷಣೆಯನ್ನು ಕೊಡುತ್ತಾರೆ ಎನ್ನುವಂತಹ ರೀತಿಯಲ್ಲಿ ವಿ.ಐ.ಪಿ.ಗಳ ಮನೆಯ ಸುತ್ತಮುತ್ತ ರಾತ್ರಿ ಹೊತ್ತು ಗಸ್ತು ತಿರುಗಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದೇವೆನ್ನುವಂತಹ ರೀತಿಯಲ್ಲಿ ಮಾಡಿದರು. ಗಸ್ತು ತಿರುಗುತ್ತಿರುವುದು ಮೇಲ್ನೋಟಕ್ಕೆ ಕಾಣುತ್ತಿರುವುದು ಪ್ರತ್ಯಕ್ಷವಾಗಿ ನೋಡಿದ್ದೇನೆ. ಬಹುಶಃ ಆಡಳಿತವನ್ನು ನಡೆಸುವವರಿಗೆ ಜನತೆಗೆ ಅನುಮಾನ ಬರುವಂತಹ ರೀತಿಯಲ್ಲಿ ಈ ಒಂದು ಕೆಲಸಗಳು ಪ್ರಾರಂಭವಾಯಿತು. ಬಹುಶಃ ಈ ರೀತಿಯಾಗಿ ಸರ್ಕಾರಿ ಭಯೋತ್ಪಾದನೆ ಪೋಲೀಸ್‌ನವರಿಂದ ಪ್ರಾರಂಭವಾದರೆ ಬಹುಶಃ ಜನರು ದಂಗೆ ಏಳುವಂತಹ ಕಾಲ ಬರಬಹುದು, ಇದರ ಬಗ್ಗೆ ತಾವು ಎಚ್ಚರವನ್ನು ವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಚಿಕ್ಕಮಗಳೂರಿನಲ್ಲಿ ಮತ್ತು ಬಾಗಲಕೋಟೆಯಲ್ಲಿ ಮತ್ತು ಇತರ ಭಾಗಗಳಲ್ಲಿ ಸ್ಥಳೀಯ ಶಾಸಕರ ಜೊತೆಯಲ್ಲಿಯೇ ಒಂದು ರೀತಿಯಾಗಿ ಎಸ್.ಪಿ. ಮತ್ತು ಡಿ.ಸಿ.ಯವರ ಅಧಿಕಾರಿಗಳ ದೌರ್ಜನ್ಯ, ಒಂದು ರೀತಿಯಾಗಿ ಭಯದ ವಾತಾವರಣದಲ್ಲಿ ಚುನಾಯಿತ ಪ್ರತಿನಿಧಿಗಳಾದ ಶಾಸಕರುಗಳು ಕೆಲಸ ಮಾಡದಂಥ ಉಸಿರು ಕಟ್ಟುವಂತಹ ಪರಿಸ್ಥಿತಿ, ಇವತ್ತು ಅದು ಎಲ್ಲಿಗೆ ಬಂದಿದೆ ಎಂದರೆ,

ಪ್ರತಿಪಕ್ಷದಲ್ಲಿ ಕುಳಿತಿರುವಂತಹ ಯಾವುದೇ ಶಾಸಕರಿಗೆ, ಯಾವುದೇ ರೀತಿಯಾದಂತಹ ಮನ್ನಣೆ, ಗೌರವ, ಪೊಲೀಸ್ ಇಲಾಖೆಯಲ್ಲಿ ನಾವು ಕಾಣುವುದಿಲ್ಲ. ಒಂದು ರೀತಿಯಾಗಿ ಆಡಳಿತ ಪಕ್ಷದ ಆಜ್ಞೆಗೆ ತಕ್ಕಂತೆ ನಾವು ಕಾನೂನು ಪರಿಪಾಲನೆ ಮಾಡಬೇಕಾದರೆ ನಮಗೆ ಎಲ್ಲಿ ರಕ್ಷಣೆ ಸಿಗುತ್ತದೆ ಎನ್ನುವಂತಹ ಕೆಟ್ಟ ವಾತಾವರಣ, ನಾನು ಕಳೆದ 20 ವರ್ಷಗಳಿಂದ ಈ ಸದನದಲ್ಲಿ ಕೆಲಸವನ್ನು ಮಾಡಿದ್ದೇನೆ, ಬಹುಶಃ ಆಡಳಿತ ಪಕ್ಷದ ನಮ್ಮ ಸ್ನೇಹಿತರುಗಳಿಗೆ ಈ ಕಡೆ ಇರುವಂತಹವರಿಗೆ ಅನುಭವಕ್ಕೆ ಬಂದಿರಬಹುದು, ಹಿಂದೆಂದೂ ಸಹ ಈ ರೀತಿಯಾಗಿ ಪೊಲೀಸ್‌ನವರು ಕೆಟ್ಟ ರೀತಿಯಲ್ಲಿ ಚುನಾಯಿತ ಪ್ರತಿನಿಧಿಗಳ ಜೊತೆ ವರ್ತನೆ ಮಾಡುತ್ತಿರುವುದನ್ನು ಇದುವರೆವಿಗೆ ಸನ್ಮಾನ್ಯ ಸಭಾಧ್ಯಕ್ಷರೆ ನಾನು ಕಾಣಲಿಲ್ಲ. ಈ ರಾಜ್ಯದಲ್ಲಿ ಈ ರೀತಿಯಾಗಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತಿರಬೇಕಾದರೆ ನೀವು ಏನು ಮಾಡುತ್ತಿದ್ದೀರಿ? ನಿಮ್ಮ ಇಂಟಲಿಜೆನ್ಸ್ ಏನು ಮಾಡುತ್ತಿತ್ತು? ಏತಕ್ಕಾಗಿ ಈ ಕಡೆಗೆ ಗಮನವನ್ನು ಕೊಡಲಿಲ್ಲ. ನಿಮಗೆ ಆಶ್ಚರ್ಯವಾಗಬಹುದು, ಇದರ ಬಗ್ಗೆ ನಾನು ಹೇಳಿದೆ, ಬಹಳ ಹಗುರವಾಗಿ ಈ ನಮ್ಮ ಆಡಳಿತ ಪಕ್ಷದ ಸದಸ್ಯರು ಎರಡೂ ಮನೆಯಲ್ಲಿ ತೆಗೆದುಕೊಂಡರು. ಯಾವ ನಕಲಿ ಛಾಪಾ ಕಾಗದದ ಕರೀಂಲಾಲನ ಹಗರಣ ಪ್ರಾರಂಭವಾಯಿತೋ ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳು ಈ ರೀತಿಯಾಗಿ ದೇಶದ್ರೋಹಿ ಚಟುವಟಿಕೆಗೆ ಈ ಹಣ ಉಪಯೋಗವಾಗುತ್ತಿದೆ, ಬಂದೋಬಸ್ತು ಆಗಬೇಕು, ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು, ಎಂದು ನಮ್ಮ ಪ್ರಾಣದ ಹಂಗನ್ನು ತೊರೆದು ಇಲ್ಲಿ ಹೋರಾಟವನ್ನು ಮಾಡಿದೆವು. ಇದರ ಬಗ್ಗೆ ನಾನು ಹೇಳುವುದು ಬೇಡ ಸ್ವಾಮಿ, ಇದು ಇವತ್ತು ನಿಮಗೆ ಗೊತ್ತಾಗಲಿಲ್ಲ, ಇದು ಅವತ್ತೆ ನಿಮಗೆ ಗೊತ್ತಿರುವಂತಹದ್ದು. ಈ ಜುಡಿಷಿಯಲ್ ಕಸ್ಟಡಿಯಲ್ಲಿದ್ದಂತಹ ವ್ಯಕ್ತಿಗಳನ್ನು ಬಿಡುಗಡೆ ಮಾಡಬಾರದು ಎಂದು ದಿನಾಂಕ : 29-11-2001 ಜಿ.ಎ. ಭಾವಾರವರು ಅಸಿಸ್ಟೆಂಟ್ ಕಮೀಷನರ್ ಆಫ್ ಪೊಲೀಸ್ ಅಬ್ದುಲ್ ಕರೀಂಲಾಲ್ ಬಗ್ಗೆ ಇತರ ಅಪರಾಧಿಗಳ ಬಗ್ಗೆ ಅರ್ಜಿಯನ್ನು ಹಾಕಿದಂತಹ ಸಂದರ್ಭದಲ್ಲಿ ಅವರು ಏನು ಹೇಳಿದ್ದಾರೆ,

> "Further it is learnt that this racket has connection with neighbouring countries of India like Nepal, Bangla Desh. Further there is definite information that the prime accused in this case Abdul Kareem Telgi has connections with underworld people".

ಎಂದು ನಾನು ಹೇಳುತ್ತಿಲ್ಲ. ಈ ಮನೆಯಲ್ಲಿ ಎರಡು ಕಡೆ ಸಾಕ್ಷ್ಯಾಧಾರಗಳೊಂದಿಗೆ ನಾವು ಏನು ಆರೋಪವನ್ನು ಮಾಡಿದ್ದೆವೋ, ಈ ಕರೀಂಲಾಲ ಏನೂ ಅದು 25 ಅಥವಾ 30 ಸಾವಿರ, 40 ಸಾವಿರ ಕೋಟಿನೋ ಅದು ಬೇರೆ ವಿಷಯ. ಆ ಹಣ ಎಲ್ಲೂ ಇಲ್ಲ, ಅದು ಸಿಕ್ಕಿಲ್ಲ. ನಕಲಿ ಛಾಪಾ ಕಾಗದದ ವ್ಯವಹಾರ ನಡೆದಿರುವುದು ನಿಜ, ಆ ದುಡ್ಡು ಈ ದೇಶದಲ್ಲಿ ದೇಶದ್ರೋಹಿ ಚಟುವಟಿಕೆಗೆ ಐಎಸ್‌ಐಗೆ ಕುಮ್ಮಕ್ಕು ಕೊಡುವುದಕ್ಕೋಸ್ಕರ ಈ ಹಣ ಉಪಯೋಗವಾಗುತ್ತಿದೆ ಎಂದು ಸಾರಿಸಾರಿ ಈ ಸದನದಲ್ಲಿ ಹೇಳುವಂತಹ ಪ್ರಯತ್ನವನ್ನು ಮಾಡಿದೆವು. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮಾತನ್ನು ಹೇಳುತ್ತೇನೆ, ನಾನು ಬಹಳ ಜವಾಬ್ದಾರಿಯಿಂದ ಹಾಗೂ ಅನುಭವದಿಂದ

ಹೇಳುತ್ತಿದ್ದೇನೆ, ಇವತ್ತು ಈ ದೇಶದ ಇತಿಹಾಸದಲ್ಲಿ ಜೈಲಿನ ಒಳಗಡೆ, ನಮ್ಮ ಜೈಲಿನ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಅವನ ಜೊತೆ ನಕಲಿ ಛಾಪಾಕಾಗದ ವ್ಯವಹಾರ ಮಾಡುವುದಕ್ಕೆ ಬಂದು ಶಾಮೀಲಾಗಿರುವಂತಹ ವ್ಯಕ್ತಿಗಳು ಕೆಲವರು ಈಗ ಜೈಲಿನೊಳಗಡೆ ಇದ್ದಾರೆ, ಕೆಲವರು ಹೊರಗಡೆ ಇದ್ದಾರೆ, ಇವತ್ತು ಹೊರಗಡೆ ಇರುವಂತಹ ಟಾಪ್ ಪೊಲೀಸ್ ಆಫೀಸರ್‌ಗಳೂ ಸ್ವತಃ ಈ ಸ್ಟಾಂಪಿಟ್ ಇಲಾಖೆಯ ಅಧಿಕಾರಿಯ ಆ ಗುಪ್ತ ವರದಿಗಳನ್ನು ಟೇಬಲ್ ಮಾಡಿ ಇನ್ನು ಅನೇಕ ಜನ ಟಾಪ್ ಪೊಲೀಸ್ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎನ್ನುವಂತಹ ವರದಿಯನ್ನು ಕೊಟ್ಟ ಮೇಲೂ ಸಹ, ರಕ್ಷಣೆಯನ್ನು ಕೊಡುವಂತಹ ಪ್ರಯತ್ನವನ್ನು ಮಾಡಿದ್ದೀರಿ. ಸುಪ್ರೀಂಕೋರ್ಟ್ ನಾಲ್ಕು ವಾರದಲ್ಲಿ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಇವರನ್ನು ಪ್ರಾಸಿಕ್ಯೂಟ್ ಮಾಡಬೇಕು ಎಂದು ಹೇಳಿದ ಮೇಲೂ ಸಹ ಕೆಲವರು ಬಂಧನವಾಗಿರುವವರನ್ನು ತೋರಿಸಿಕೊಟ್ಟೆವು. ಉಳಿದಂತಹ ಆ ಸ್ಟಾಂಪಿಟ್ ಅಧಿಕಾರಿಗಳು ಕೊಟ್ಟಂತಹ ವರದಿಯ ಆಧಾರದ ಮೇಲೆ ಆ ಟಾಪ್ ಪೊಲೀಸ್ ಅಧಿಕಾರಿಗಳನ್ನು ನೀವು ಮುಟ್ಟುವುದಕ್ಕೆ ಹೋಗುತ್ತಿಲ್ಲ. ಇವರೆಲ್ಲರೂ ಒಂದು ರೀತಿಯಾಗಿ ಅಂಡರ್‌ವರ್ಲ್ಡ್‌ನವರ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ಐಎಸ್‌ಐನವರ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ದೇಶದ್ರೋಹಿ ಚಟುವಟಿಕೆಗೆ ಕುಮ್ಮಕ್ಕು ಕೊಡುತ್ತಿದ್ದಾರೆ, ಇವೆಲ್ಲವೂ ಗೊತ್ತಿದ್ದು ಸಹ ಅವರನ್ನು ರಕ್ಷಣೆ ಮಾಡುವಂತಹ ಪ್ರಯತ್ನ ಮತ್ತೆ ಅವರನ್ನು ಮುಟ್ಟಿದರೆ ಅನೇಕ ವಿಷಯಗಳು ಬಹಿರಂಗವಾಗಿ ನಮ್ಮ ಸ್ಥಾನಮಾನಕ್ಕೆ, ಸರ್ಕಾರ ಮುಂದುವರಿಯುವುದಕ್ಕೆ ಅಡ್ಡಿಯಾಗುತ್ತದೆ, ಎನ್ನುವ ಭಯದ ವಾತಾವರಣಕ್ಕೋಸ್ಕರ ಇವರನ್ನು ರಕ್ಷಣೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೀರಾ? ಇದನ್ನು ಇವತ್ತು ರಾಜ್ಯದ ಜನ ಕೇಳುತ್ತಿರುವಂತಹ ಪ್ರಶ್ನೆಯಾಗಿದೆ. ಆಡಳಿತದಲ್ಲಿ ಯಾರೇ ಇರಬಹುದು, ನಾನು ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಬೆಟ್ಟು ತೋರಿ ನಿಮ್ಮನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದಕ್ಕೋಸ್ಕರ ಈ ಮಾತನ್ನು ಆಡುತ್ತಿಲ್ಲ. ಎಲ್ಲೋ ಒಂದು ಕಡೆ ಇದನ್ನು ಗಂಭೀರವಾಗಿ ತೆಗೆದುಕೊಳ್ಳುವಂತಹ ಪ್ರಯತ್ನವನ್ನು ನೀವು ಮಾಡಲಿಲ್ಲ. ಇದರ ಪರಿಣಾಮ ಇಡೀ ದೇಶಕ್ಕೆ ಕರ್ನಾಟಕ ಎಂದರೆ ಯಾರು ಬೇಕಾದರೂ ಇಲ್ಲಿಗೆ ಬಂದು ಶಾಂತಿಗೌರವದಿಂದ ಬಾಳಿ ಬದುಕಬಹುದು ಎಂಬ ವಾತಾವರಣವಿತ್ತೋ ಅದು ಸಂಪೂರ್ಣ ಬದಲಾವಣೆಯಾಗಿ ನಮಗೆ ರಕ್ಷಣೆ ಇಲ್ಲದೆ ಇರುವಂತಹ ಪರಿಸ್ಥಿತಿ ಬಂದಿದೆ. ಇವತ್ತು ಈ ಸದನದಲ್ಲಿ ನಿಂತುಕೊಂಡು ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಈ ನಕ್ಸಲೀಯರ ಚಳುವಳಿ ಜನ್ಮ ತಾಳಿದ್ದೇ ಈ ಹಿಂಸಾಚಾರದ ಸಿದ್ಧಾಂತದ ಆಧಾರದ ಮೇಲೆ. ಶೋಷಣೆ ವಿರುದ್ಧ ಹೋರಾಟ ಎಂಬ ಸಿದ್ಧಾಂತದಿಂದ ಆರಂಭವಾದ ಈ ಚಳುವಳಿ ಇವತ್ತು ಈ ಪರಿಸ್ಥಿತಿಗೆ ಬಂದು ಮುಟ್ಟಿದೆ, ಭಾರತದ 15 ರಾಜ್ಯಗಳಲ್ಲಿ ಈ ನಕ್ಸಲೀಯರ ಚಟುವಟಿಕೆಗಳು ಹರಡಿಕೊಂಡಿದೆ. ಅನೇಕ ರಾಜಕೀಯ ಪಕ್ಷಗಳ ಸಂಪರ್ಕ ಇಟ್ಟುಕೊಂಡಿದ್ದಾರೆ. ಆ ರೀತಿಯ ರಾಜಕೀಯ ಪಕ್ಷಗಳ ಸಂಪರ್ಕವೇ ಅವರ ಶಕ್ತಿ ಹೆಚ್ಚಾಗುವುದಕ್ಕೆ ಕಾರಣವಾಯಿತು ಎಂದು ಆಂಧ್ರದ ಉದಾಹರಣೆ ಕೊಟ್ಟು ನಾನು ಬಹಳ ನೇರವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ನಕ್ಸಲೀಯರ ಬೇಡಿಕೆಗಳು ಕೆಲವು ರೀತಿ ನ್ಯಾಯಸಮ್ಮತವಾಗಿರಬಹುದು, ನಾನು ಇಲ್ಲವೆಂದು ಹೇಳುತ್ತಿಲ್ಲ. ಯಾರು ಶೋಷಣೆಗೆ ಒಳಗಾಗಿದ್ದಾರೆ, ತೊಂದರೆಗೆ ಒಳಗಾಗಿದ್ದಾರೆ, ಅವರಿಗೆ ನ್ಯಾಯ ಸಿಗಬೇಕು ಎನ್ನುವ ನೆಪದಲ್ಲಿ ಈ ಚಳುವಳಿ ಪ್ರಾರಂಭವಾಗಿದೆ. ಈ ರೀತಿಯ ಸಮಸ್ಯೆಗಳ ಈಡೇರಿಕೆಗಾಗಿ ಅವರು ತಾಳಿರುವಂತಹ ಹಿಂಸಾ

ಮಾರ್ಗಕ್ಕೆ ಯಾರೂ ಸಹ ನಾಗರೀಕ ಸಮಾಜ ಅದಕ್ಕೆ ಸಹಕಾರ, ಬೆಂಬಲ ಕೊಡಲಿಕ್ಕೆ ಸಾಧ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲರಿಗೂ ಗೊತ್ತಿರುವಂತಹ ಅಂಕಿಅಂಶ, ಕಳೆದ 10 ವರ್ಷಗಳಲ್ಲಿ ಈ ನಕ್ಸಲೀಯರು ನಡೆಸಿದಂತಹ ಹಿಂಸಾಚಾರದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಸುಮಾರು ಆರು ಸಾವಿರಕ್ಕೂ ಹೆಚ್ಚು ಜನ ಪ್ರಾಣವನ್ನು ಕಳೆದುಕೊಂಡಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಕ್ರಿಯಾಲೋಪ ಎತ್ತುತ್ತೇನೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ಮಾನ್ಯ ಬಸವರಾಜ ರಾಯರೆಡ್ಡಿ ಅವರದ್ದು ಪಾಯಿಂಟ್ ಆಫ್ ಆರ್ಡರ್ ಅಂತ ಹೇಳುತ್ತಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಈಗ ಬಜೆಟ್‌ನ ಮಂಡನೆಯಾಗಿದೆ. ಇದರ ಬಗ್ಗೆ ಸುದೀರ್ಘವಾದ ಚರ್ಚೆ ಪ್ರಾರಂಭವಾಗಬೇಕು. ಅದಕ್ಕೆ ನಾವು ಪ್ರಾಮುಖ್ಯತೆಯನ್ನು ಕೊಡಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಈಗ ಲಾ ಅಂಡ್ ಆರ್ಡರ್ ಬಗ್ಗೆ ಮಾತನಾಡುತ್ತಿರುವುದನ್ನು ಪ್ರಾಮುಖ್ಯ ಅಲ್ಲವೆಂದು ನಾನು ಹೇಳುವುದಿಲ್ಲ. ತಾವು ಈಗ ನಿಲುವಳಿ ಸೂಚನೆ ತಂದಿದ್ದೀರಿ. ಆ ನಿಲುವಳಿ ಸೂಚನೆಗೆ ಪ್ರಿಲಿಮನರಿಯಾಗಿ ತಾವು ದಯವಿಟ್ಟು ಸಂಕ್ಷಿಪ್ತವಾಗಿ ಹೇಳಿ. ಅದನ್ನು ಅಧ್ಯಕ್ಷರ ತೀರ್ಮಾನಕ್ಕೆ ಬಿಟ್ಟರೆ ಅವರು ಆ ಬಗ್ಗೆ ತೀರ್ಮಾನ ಮಾಡುತ್ತಾರೆ. ಈಗಾಗಲೇ ತಾವು ಇಪ್ಪತ್ತು ನಿಮಿಷ ಮಾತನಾಡಿದ್ದೀರಿ. ಈಗ ಇಲ್ಲಿಗೆ ಇದನ್ನು ಮುಗಿಸಿ ದಯಮಾಡಿ ವಿತ್ತೀಯ ಕಾರ್ಯಕಲಾಪಗಳು ನಡೆಯಲಿಕ್ಕೆ ಅವಕಾಶ ಮಾಡಿಕೊಡಬೇಕಾಗಿ ವಿನಂತಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇದು ಪಾಯಿಂಟ್ ಆಫ್ ಆರ್ಡರ್‌ಗೆ ಬರುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಸುದೀರ್ಘವಾದ ಚರ್ಚೆ ಮಾಡಲಿಕ್ಕೆ ಬೇರೆ ಅವಕಾಶವಿದೆ, ಇದು ತಪ್ಪು.

ಅಧ್ಯಕ್ಷರು : ಆಯಿತು, ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಬಸವರಾಜ್ ರಾಯರೆಡ್ಡಿಯವರೆ, ಇದರಲ್ಲಿ ಪಾಯಿಂಟ್ ಇಲ್ಲ, ಆರ್ಡರ್ ಇಲ್ಲ, ಯಾಕೆ ಸುಮ್ಮನೆ? ಮಾನ್ಯ ಯಡಿಯೂರಪ್ಪನವರು ಸುದೀರ್ಘವಾಗಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ ಬೇಗ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಬೇಕೇವಿನಹ ಬೇರೆ ವಿಚಾರ ಮಾತನಾಡುವುದಲ್ಲ. ಸದನದ ನಿಯಮಾವಳಿಯ ವಿರುದ್ಧವಾಗಿ ಮಾತನಾಡುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ನಿಯಮಾವಳಿಯನುಸಾರವೇ ಮಾತನಾಡುತ್ತಿದ್ದಾರೆ. ಅದರ ಬಗ್ಗೆ ನೀವು ಏನು ತಲೆಯನ್ನು ಕೆಡಿಸಿಕೊಳ್ಳಬೇಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಸರ್ಕಾರ ಒಪ್ಪಿದರೆ, ಸ್ಟೇಟ್‌ಸ್ಟೈಸ್ ಚರ್ಚೆಯನ್ನು ಪ್ರಾರಂಭ ಮಾಡಬಹುದು ವೆಂದು ಕಾಣುತ್ತದೆ. ಪ್ರಿಲಿಮನರಿ ಸಬ್‌ಮಿಷನ್ ಅಗತ್ಯ ಇಲ್ಲದಿದ್ದರೆ ಸೀದಾ ಚರ್ಚೆಯನ್ನು ಪ್ರಾರಂಭ ಮಾಡಬಹುದು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಪ್ರಿಲಿಮನರಿ ಸಬ್‌ಮಿಷನ್‌ಗೆ ಅರ್ಧ ಗಂಟೆ ತೆಗೆದುಕೊಂಡರೆ ಹೇಗೆ? ಸಂದರ್ಭ ಬಂದಾಗ ಮಾತನಾಡಿ, ಪ್ರಿಲಿಮನರಿ ಸಬ್‌ಮಿಷನ್ ಸಾಕು ಅಂತ ನಾನು ಹೇಳಿದ್ದಷ್ಟೆ. That is my request to you.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ರಾಯರೆಡ್ಡಿಯವರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ನಾನು ಪ್ರಾರಂಭದಲ್ಲಿ ಒಂದು ಮಾತು ಹೇಳಿದೆ, ಬೇರೆ ಯಾವುದೇ ಒಂದು ನಿಲುವಳಿ ಸೂಚನೆಯನ್ನು ತಂದು ಪ್ರಿಲಿಮನರಿ ಸಬ್‌ಮಿಷನ್ ಮಾಡಿ ಅಧ್ಯಕ್ಷರ ಅನುಮತಿಯನ್ನು ಪಡೆಯುವುದು ಒಂದು ವಾಡಿಕೆ. ಸನ್ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ನಾವುಗಳು ವಿಧಾನಸೌಧದೊಳಗೆ ಬರಲಿಕ್ಕೆ ಯೋಚನೆ ಮಾಡಿ ಬರುವಂತಹ ಪರಿಸ್ಥಿತಿ ಬಂದಿದೆ. ನಾಗರಿಕರು ಓಡಾಡಲಿಕ್ಕೆ ಆಗದಂತಹ ಪರಿಸ್ಥಿತಿ ಬಂದಿದೆ, ಪೊಲೀಸರು ಕೈಚೆಲ್ಲಿ ಕುಳಿತಿರುವಂತಹ ಈ ಸಂದರ್ಭದಲ್ಲಿ, ನಾನು ಮಾನ್ಯ ರಾಯರೆಡ್ಡಿ ಅಂತಹವರಿಗೆ, ಈ ಒಂದು ರಾಜ್ಯ ಸರ್ಕಾರದ ಚುನಾಯಿತ 224 ಸದಸ್ಯರ ಮೊದಲನೇ ಕರ್ತವ್ಯ ಅಂದರೆ, ಈ ನಾಡಿನ ಜನತೆಯ ರಕ್ಷಣೆ ಮಾಡುವಂತಹ ಹಾಗೂ ಕಾನೂನು ಸುವ್ಯವಸ್ಥೆ ಹದಗೆಡದಿರುವಂತೆ ನೋಡಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ. ಎಲ್ಲೋ ಒಂದು ಕಡೆ ಸಡಿಲವಾಗಿ, ಆ ಬಿಗಿ ತಪ್ಪಿ ಹೋಗಿ, ಎಲ್ಲವೂ ಕೈಮೀರಿ ಹೋಗುವಂತಹ ಪ್ರಸಂಗ ಬಂದಿರುವುದರಿಂದ ನೇರವಾಗಿ ಒಂದು ರೀತಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆಂದು ಅರ್ಥ.

ಶ್ರೀ ಬಸವರಾಜ ರಾಯರೆಡ್ಡಿ : ನಿಮ್ಮ ಮಾತಿಗೆ ನಾನು ಆಕ್ಷೇಪಣೆ ಮಾಡುತ್ತಿಲ್ಲ, ನಾನು ಹೇಳಿದ್ದು ಪ್ರಿಲಿಮನರಿ ಚರ್ಚೆ ಸಾಕು, ವಿತ್ತೀಯ ಕಾರ್ಯಕಲಾಪಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಹೇಳಿದ್ದಷ್ಟೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೊಡುವಂತಹ ಮಾಹಿತಿಯಿಂದ ಸರ್ಕಾರಕ್ಕೆ, ಗೃಹ ಇಲಾಖೆಗೆ ಕೆಲವು ದಾಖಲೆಗಳು, ಮಾಹಿತಿಗಳು ಸಿಕ್ಕಿ, ಅದನ್ನು ಕಂಟ್ರೋಲ್, ಮಾಡಿ ರಾಜ್ಯದ ಜನತೆ ನೆಮ್ಮದಿಯಿಂದ ಬದುಕುವುದನ್ನು ನೋಡುವಂತಹ ಜವಾಬ್ದಾರಿ ಆ ಕಡೆ, ಈ ಕಡೆ ಇರುವಂತಹ ಸದಸ್ಯರುಗಳಿಗೆ ತೋರಿಸುವಂತಹ ದೃಷ್ಟಿಯಿಂದ ಕೆಲವು ಮಾಹಿತಿಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಆಂಧ್ರ ಹತ್ತಿಕೊಂಡು ಉರಿಯುತ್ತಿದೆ. ಬೇರೆ ಬೇರೆ ದೇಶಗಳಲ್ಲಿ ಈ ಉಗ್ರಗಾಮಿಗಳ, ನಕ್ಸಲೀಯರ ಹಾವಳಿಯಿಂದ ಆ ಭಾಗದ ಜನ ತತ್ತರಿಸಿ ಹೋಗಿದ್ದಾರೆ. ಆ ವಿವರಗಳು ನಿಮ್ಮಲ್ಲೂ ಇವೆ, ದಾಖಲೆಗಳಲ್ಲಿ ಹೋಗಬೇಕಾಗಿದೆ. ನಾನು ಆಗಲೇ ಹೇಳಿದ್ದೇನೆ, ಕಳೆದ ಹತ್ತು ವರ್ಷಗಳಲ್ಲಿ ನಕ್ಸಲೀಯರು ನಡೆಸಿದಂತಹ ಹಿಂಸಾಚಾರದಿಂದ ಭಾರತದ ವಿವಿಧ ಭಾಗಗಳಲ್ಲಿ ಆರು ಸಾವಿರಕ್ಕೂ ಹೆಚ್ಚು ಜನರು ಪ್ರಾಣವನ್ನು ಕಳೆದುಕೊಂಡಿದ್ದಾರೆ. ನೂರಾರು ಜನ ಪೊಲೀಸರು ಅವರಿಂದ ಹತ್ಯೆಗೆ ಒಳಗಾಗಿದ್ದಾರೆ, ಹತ್ತಾರು ಜನ ರಾಜಕೀಯ ಮುಖಂಡರು ಇಲ್ಲಿ ಸಿಕ್ಕಿ ಪ್ರಾಣವನ್ನು ಕಳೆದುಕೊಂಡಿದ್ದಾರೆ... People's War Group, ಈ ಮಾವೋವಾದಿ ಸಂಘಟನೆ, ನಕ್ಸಲೀಯರು ಹೀಗೆ ಬೇರೆ ಬೇರೆ ಹೆಸರುಗಳಲ್ಲಿ ಕಾರ್ಯಾಚರಣೆ ನಡೆಯುತ್ತಿದೆ. ಇವರಿಗೆ ಭಾರತದ ಸಂವಿಧಾನದ ಮೇಲೆ ಗೌರವವಿಲ್ಲ, ರಾಜ್ಯಾಂಗದ ಬಗ್ಗೆ ನಂಬಿಕೆ ಇಲ್ಲ, ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಇವರು ಒಪ್ಪುವುದಿಲ್ಲ. ದೇಶದ ಎಲ್ಲೆಡೆ ಹಿಂಸೆಯ ಒಂದು ವಾತಾವರಣ ತಂದಿದ್ದಾರೆ.

ಅಧ್ಯಕ್ಷರು : ಈಗ ತಾವು ಲಾ ಅಂಡ್ ಆರ್ಡರ್ ಬಗ್ಗೆ ಮಾತನಾಡಿದ್ದೀರಿ, ಲಾ ಅಂಡ್ ಆರ್ಡರ್ ಬಗ್ಗೆ ಏನು ಅಡ್ಜರ್ನ್‌ಮೆಂಟ್ ಮೋಷನ್ ಇದೆ, ಅದನ್ನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲವೆಂಬ ಬಗ್ಗೆ ಬೇಕಾದಷ್ಟು ರೂಲಿಂಗ್ಸ್ ಇವೆ. ಅದನ್ನು ನಾನು 69 ರಡಿಯಲ್ಲಿ ಕನ್‌ವರ್ಟ್ ಮಾಡಿ ಅದಕ್ಕೆ ನಾನು ಟೈಮ್‌ಫಿಕ್ಸ್ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಆಗಬಹುದು ಅಧ್ಯಕ್ಷರೆ, ಯಾವುದೇ ನಿಯಮಾವಳಿಯಡಿ ತಾವು ಟೈಮ್‌ಫಿಕ್ಸ್ ಮಾಡಿ.

ಅಧ್ಯಕ್ಷರು : ನಾನು ನಿಮಗೆ ಮಾತನಾಡಲಿಕ್ಕೆ ಟೈಮ್ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೋ, ನೋ, ಹಾಗಾಗುವುದಿಲ್ಲ. ಚರ್ಚೆಯಾಗಬೇಕು.

ಶ್ರೀ ವಾಟಾಳ್ ನಾಗರಾಜ್ : ಚರ್ಚೆ ಈಗಲೇ ಆಗಬೇಕು.

ಅಧ್ಯಕ್ಷರು : ಆಯಿತು, ನಿಯಮ 69 ರಡಿ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದೇನೆ. ಸರ್ಕಾರದವರು ಇದಕ್ಕೆ ಒಪ್ಪಿದ್ದಾರೆ, ಸಂಕ್ಷಿಪ್ತವಾಗಿ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ನಿಯಮ 69 ರಡಿ ಚರ್ಚೆ ಈಗಲೇ ಆಗಬೇಕು.

ಅಧ್ಯಕ್ಷರು : ಆಯಿತು, ಆದರೆ ಒಂದು ಗಂಟೆಯೊಳಗಾಗಿ ಮಾತನಾಡಬೇಕು.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಸಿಗ್ನಟರೀಸ್‌ಗಳೆಲ್ಲಾ ಇದ್ದೇವೆ. ಅನೇಕ ವಿಚಾರಗಳು ಇವೆ, ಯಾರ್‍ಯಾರೂ ಸಿಗ್ನಟರೀಸ್ ಇದ್ದಾರೆ ಅವರಿಗೆಲ್ಲಾ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಈಗ ನಿಯಮ 69 ರ ಅಡಿ ಅವಕಾಶ ಮಾಡಿಕೊಡಲಾಗಿದೆ. ಬೇರೆಯವರಿಗೂ ಅದರಲ್ಲಿ ಅವಕಾಶವಿದೆ, ಆದ್ದರಿಂದ ಆದಷ್ಟು ಬೇಗ ಚರ್ಚೆ ಮಾಡಿ ಮುಗಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ಒಂದು ಗಂಟೆ ಸಮಯ ನಿಗದಿ ಮಾಡಿದರೆ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಜ್ಞಾನೇಂದ್ರ ಅವರೆ ಒಂದು ನಿಮಿಷ. ಇವತ್ತು ಮುಖ್ಯಮಂತ್ರಿಗಳು ಇರುವ ಸಂದರ್ಭದಲ್ಲಿ ತಮಗೆ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾವು ವಿರೋಧಪಕ್ಷದವರೆಲ್ಲಾ ಕುಳಿತು ಮಾತನಾಡಿದ್ದೇವೆ, ಏನೆಂದರೆ ಈ ಬಾರಿ ಯಾವುದಕ್ಕೂ ಸಮಯವನ್ನು ನಿಗದಿ ಮಾಡಬೇಡಿ. ಏಕೆಂದರೆ, ನಾವು ಏಪ್ರಿಲ್ 15 ರಿಂದ 20ನೇ ತಾರೀಖಿನವರೆಗೂ ಸಹ ಇವತ್ತು ರಾಜ್ಯದ ಆಗುಹೋಗುಗಳ ಬಗ್ಗೆ, ರಾಜ್ಯದ ಅಭಿವೃದ್ಧಿ ಕಾರ್ಯಗಳು ನೆನೆಗುದಿಗೆ ಬಿದ್ದಿರುವ ಬಗ್ಗೆ, ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಸಮಯ ಕೊಟ್ಟು ಶಾಂತವಾಗಿ ಕುಳಿತು ಚರ್ಚೆ ಮಾಡಬೇಕೆಂದು ನಮ್ಮ ಅಪೇಕ್ಷೆಯಾಗಿದೆ. ನಿನ್ನೆ ಬಜೆಟ್ ಭಾಷಣದ ಸಂದರ್ಭದಲ್ಲಿ ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್ ಅವರು ಈ ಸದನ ಎಷ್ಟು ದಿವಸ ನಡೆಯಬೇಕೋ ಅಷ್ಟು ದಿವಸ ನಡೆಯದೆ ಚರ್ಚೆಗೆ ಅವಕಾಶವಾಗುತ್ತಿಲ್ಲ ಎಂದು ಹೇಳಿ ಬಜೆಟ್ ಮಂಡನೆ ಸಂದರ್ಭದಲ್ಲಿ ಪ್ರತಿಭಟನೆ ಮಾಡಿ ಅವರು ವಾಕ್‌ಔಟ್ ಮಾಡಿದರು. ಅದರ ಹಿನ್ನೆಲೆ, ಉದ್ದೇಶ ಏನೆಂದರೆ, ಈ ಮನೆಯಲ್ಲಿ, ಈ ನಾಡಿನ ಜನತೆಯ ಬಗ್ಗೆ ವ್ಯಾಪಕವಾದ ಚರ್ಚೆ ಆಗಲಿಕ್ಕೆ ಅವಕಾಶ ಸಿಗುತ್ತಿಲ್ಲ, ಅವಕಾಶ ಸಿಗಬೇಕು ಎನ್ನುವುದೇ ಹಿರಿಯ ಸದಸ್ಯರ ಅಪೇಕ್ಷೆಯಾಗಿದೆ. ಹಾಗಾಗಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಈ ಬಗ್ಗೆ ನಮ್ಮ ಈ ಭಾಗದ ಎಲ್ಲಾ ಸದಸ್ಯರು ಮಾಹಿತಿ ಕೊಟ್ಟ ಮೇಲೆ, ಆ ಭಾಗದ ಆಡಳಿತ ಪಕ್ಷದ ಸದಸ್ಯರು ಮಾಹಿತಿಯನ್ನು ಕೊಡುವುದರ ಮೂಲಕ ಸರ್ಕಾರವನ್ನು

ಸರಿದಾರಿಯಲ್ಲಿ ತಂದು ಈ ಜನತೆಗೆ ರಕ್ಷಣೆ ಕೊಡಬೇಕು ಎನ್ನುವ ದೃಷ್ಟಿಯಿಂದ ಇವತ್ತು ಇದಕ್ಕೆ ಸಮಯವನ್ನು ನಿಗದಿ ಮಾಡದೆ, ಇವತ್ತು ನಿಯಮ 69 ರಡಿ ಕನ್‌ವರ್ಟ್ ಮಾಡಿದ್ದೀರಿ. ಹಾಗಾಗಿ ನಮ್ಮ ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆ ಬೇರೆ ಬೇರೆ ಜಿಲ್ಲೆಯ ಅನೇಕ ಶಾಸಕರು ಸಹ ಅವರಲ್ಲಿರುವ ಮಾಹಿತಿಯನ್ನು ಸರ್ಕಾರಕ್ಕೆ ಕೊಡಬೇಕೆಂದು ಅಪೇಕ್ಷಿಸಿರುವುದರಿಂದ ತಾವು ಎಲ್ಲರಿಗೂ ಸಹ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಈ ರಾಜ್ಯದಲ್ಲಿ ಅರಾಜಕತೆ, ಆಂತರಿಕ ಕಲಹ ಉಂಟು ಮಾಡುವುದು ಈ ನಕ್ಸಲೀಯರ ಮೂಲ ಉದ್ದೇಶ. ಇದು ಒಂದು ರೀತಿಯ ಭಯೋತ್ಪಾದಕತೆ ಪ್ರಾರಂಭವಾಗಿದೆ. ಫೆಬ್ರವರಿ 8 ರಂದು ಬೆಂಗಳೂರಿಗೆ ಬಂದಂತಹ ಕೇಂದ್ರ ಸರ್ಕಾರದ ರಕ್ಷಣಾ ಸಚಿವರಾದ ಮಾನ್ಯ ಪ್ರಣಬ್ ಮುಖರ್ಜಿಯವರು ನೇಪಾಳದಲ್ಲಿ ಈ ಮಾವೋವಾದಿಗಳಿಂದ ಆಂತರಿಕ ಭದ್ರತೆಗೆ ಯಾವ ರೀತಿ ಧಕ್ಕೆ ಆಗುತ್ತಿದೆ, ಮಾವೋವಾದಿಗಳ ಪ್ರಭಾವ ಹೇಗೆ ಹೆಚ್ಚಾಗುತ್ತಿದೆ ನೇಪಾಳದಲ್ಲಿ ಈ ಮಾವೋವಾದಿಗಳ ಪ್ರಭಾವ ಹೆಚ್ಚಾಗಿ ರಕ್ಷಣಾ ವ್ಯವಸ್ಥೆಗೆ ಧಕ್ಕೆಯುಂಟಾಗಿ ಕುಸಿದು ಹೋಗುತ್ತಿದೆ. ಇದು ಭಾರತದ ಆಂತರಿಕ ಭದ್ರತೆಯ ಮೇಲೆ ನೇರವಾಗಿ ಯಾವ ರೀತಿ ಪರಿಣಾಮ ಬೀರುತ್ತಿದೆ ಎನ್ನುವಂತಹ ಅನೇಕ ವಿಷಯಗಳನ್ನು ಅವರು ಇಲ್ಲಿ ಬಂದಾಗ ಹೇಳಿದ್ದಾರೆ. ನೇಪಾಳ ಮತ್ತು ಭಾರತದ ಮಾವೋವಾದಿಗಳು ನಕ್ಸಲೀಯರ ಜೊತೆ ನೇರವಾದ ಸಂಪರ್ಕವನ್ನು ಅವರು ಇಟ್ಟುಕೊಂಡಿದ್ದಾರೆ ಇದರ ಬಗ್ಗೆ ರಾಜ್ಯಗಳು ಕಟ್ಟೆಚ್ಚರ ವಹಿಸಬೇಕೆಂದು ಅವರು ಹೇಳಿದ ಮಾತು ನಮಗೆ ಒಂದು ಎಚ್ಚರಿಕೆಯ ಗಂಟೆಯೆಂದು ನಾನು ತಿಳಿದುಕೊಂಡಿದ್ದೇನೆ. ಅಂದರೆ ನೇಪಾಳದ ನಕ್ಸಲೀಯರು ನೇಪಾಳದಲ್ಲಿ ಈ ಆಂತರಿಕ ಕ್ಷೋಭೆ ನಿರ್ಮಾಣ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಭಾರತದಲ್ಲಿರುವಂಥ ಶಾಂತಿಯನ್ನು ಕದಡುವಂಥ ಕೆಲಸ, ನಮ್ಮ ರಕ್ಷಣಾ ವ್ಯವಸ್ಥೆಯ ಮಾನಸಿಕ ಸ್ಥೈರ್ಯವನ್ನು ಕುಗ್ಗಿಸುವಂಥ ಕೆಲಸ, ಈ ನಕ್ಸಲೀಯರ ಉದ್ದೇಶ್ಯ ಆಗಿರುವಂಥಾದ್ದು. ನಮ್ಮ ರಾಜ್ಯದ ಈ ಪಶ್ಚಿಮ ಘಟ್ಟಗಳಲ್ಲಿ ಶಾಶ್ವತವಾಗಿ ನೆಲೆ ಊರಿರುವಂಥ ನಕ್ಸಲೀಯರು ಏನು ಸಿದ್ಧತೆ ನಡೆಸಿದ್ದಾರೆ. ಶ್ರೀಮಂತ ರೈತರನ್ನು ಬೆದರಿಸಿ ದೇಣಿಗೆ ಪಡೆಯುವಂಥಾದ್ದು, ಕೃಷಿಕರ ವಿರುದ್ಧ ಕೃಷಿ ಕಾರ್ಮಿಕರನ್ನು ಎತ್ತಿಕಟ್ಟುವಂಥಾದ್ದು, ಈ ಎಲ್ಲಾ ವಿಚಾರಗಳನ್ನು ಗುಪ್ತಚರ ಇಲಾಖೆಯವರು ಈಗಾಗಲೇ ವರದಿ ಮಾಡಿದ್ದಾರೆ. ಆಧುನಿಕ ಶಸ್ತ್ರಾಸ್ತ್ರಗಳು ಅವರಲ್ಲಿದೆ ಎನ್ನುವಂಥಾದ್ದು ಮಾಹಿತಿಗಳು ನಮಗೆ ಸಿಕ್ಕಿವೆ. ಎ.ಕೆ.47 ಆರ್.ಡಿ.ಎಕ್ಸ್. ಅವರು ಹೊಂದಿರಬೇಕಾದರೆ ನಮ್ಮ ಪೊಲೀಸ್ ಅಧಿಕಾರಿಗಳ ಕೈಗೆ ನೀವು ಏನು ಕೊಟ್ಟಿದ್ದೀರಿ? ಅವರು ಹೇಗೆ ಈ ವಾತಾವರಣವನ್ನು ಎದುರಿಸಬೇಕು? ಇವತ್ತು ಪತ್ರಿಕೆಯಲ್ಲೂ ಸಹ ಬಂದಿದೆ. ಯಾವ ರೀತಿ ನಕ್ಸಲೀಯರು, ಎಲ್.ಟಿ.ಟಿ.ಇ. ಜೊತೆಗೆ, ಐ.ಎಸ್.ಐ. ಜೊತೆಗೆ ಲಷ್ಕರ್ ತೋಯಿಬಾರಂಥ ಭಯೋತ್ಪಾದಕ ಸಂಘಟನೆಗಳ ಜೊತೆ ಇವರ ಸಂಪರ್ಕ ಇದೆಯೆನ್ನುವಂಥಾದ್ದು ಪ್ರತಿನಿತ್ಯ ಪತ್ರಿಕೆಗಳಲ್ಲಿ ಬರುತ್ತಾ ಇದೆ. ರಾಯಚೂರು, ಬಳ್ಳಾರಿ, ತುಮಕೂರು ಈ ಜಿಲ್ಲೆಗಳಲ್ಲಿ ಕಳೆದ 6–7 ವರ್ಷಗಳಿಂದ ನಕ್ಸಲೀಯ ಚಟುವಟಿಕೆ ನಡೆಯುತ್ತಾ ಇದೆಯೆನ್ನುವ ವರದಿ ಇದ್ದರೂ ಸಹ, ಅದನ್ನು ಹದ್ದುಬಸ್ತಿನಲ್ಲಿ ತರುವಂಥ, ಅದನ್ನು ಮೊಟಕು ಮಾಡುವಂಥ, ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಯಾವುದೇ ಪ್ರಾಮಾಣಿಕ ಪ್ರಯತ್ನ ಈ ಸರ್ಕಾರ ಮಾಡಲಿಲ್ಲ. ಕರ್ನಾಟಕದಲ್ಲಿ ಮೊದಲ ಈ ಎನ್ ಕೌಂಟರ್ 1998ರಲ್ಲಿ ರಾಯಚೂರು ಜಿಲ್ಲೆ ಇಬ್ರಾಹಿಂ ದೊಡ್ಡಿಯಲ್ಲಿ ನಡೆಯಿತು. ಆ ಕಾರ್ಯಾಚರಣೆಯಲ್ಲಿ ಪೊಲೀಸರು ನಕ್ಸಲ್‌ವಾದಿ ಭಾಸ್ಕರನನ್ನು ಕೊಂದರು.

ಅವತ್ತಿನಿಂದ ಇವತ್ತಿನವರೆಗೆ ಸರ್ಕಾರ ಜಾಗೃತವಾಗಬೇಕಾಗಿತ್ತು. ಪಕ್ಕದ ರಾಜ್ಯವಾದ ಆಂಧ್ರದಲ್ಲಿ ನಡೆಯುತ್ತಾ ಇದ್ದಂಥ ನಕ್ಸಲೀಯ ಚಟುವಟಿಕೆ, ಅದರ ದುಷ್ಪರಿಣಾಮ ಏನಾಯಿತು? ಇದರ ಬಗ್ಗೆ ನಾವು ಎಚ್ಚರ ವಹಿಸುವಂಥ ಕೆಲಸ ಮಾಡಬೇಕಾಗಿತ್ತು. ಬಹುಶಃ ಸರ್ಕಾರದ ನಿರ್ಲಕ್ಷ್ಯ, ನಾನು ನೇರವಾಗಿ ಆರೋಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ, ಸರ್ಕಾರದ ನಿರ್ಲಕ್ಷ್ಯದಿಂದ ಈ ನಕ್ಸಲೀಯ ಚಟುವಟಿಕೆ ಕರ್ನಾಟಕದಲ್ಲಿ ಉಲ್ಬಣಗೊಂಡಿದೆ. ಅದಕ್ಕೆ ಸರ್ಕಾರವೇ ಜವಾಬ್ದಾರಿ ಹೊರಬೇಕಾಗುತ್ತದೆ. ಆಗಸ್ಟ್ 6, 2003ರಲ್ಲಿ ಕುದುರೆಮುಖ ಬಳಿ ಶಿಂಸಾಗರದಲ್ಲಿ ಅರಣ್ಯ ಇಲಾಖೆ ಮತ್ತು ನಕ್ಸಲೀಯರ ನಡುವೆ ಗುಂಡಿನ ಚಕಮಕಿ ನಡೆಯಿತು. ಆಗಲಾದರೂ ಸಹ ಸರ್ಕಾರ ಎಚ್ಚರ ವಹಿಸಬೇಕಾಗಿತ್ತು. ಆದರೆ, ಆ ರೀತಿಯ ಎಚ್ಚರ ವಹಿಸಲಿಲ್ಲ. 2003ರ ನವೆಂಬರ್‌ನಲ್ಲಿ ಕಾರ್ಕಳ ತಾಲ್ಲೂಕಿನ ಈದು ಗ್ರಾಮದಲ್ಲಿ ಪಾರ್ವತಿ ಮತ್ತು ಹಾಜಿಗಳ ಹತ್ಯೆ ಈ ನಕ್ಸಲೀಯ ಚಟುವಟಿಕೆಯ ತೀವ್ರತೆಯನ್ನು ಬಯಲು ಮಾಡಿತ್ತು. ಆಗಲೂ ಸಹ ತಾವು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಮೆಣಸಿನ ಹಾಡ್ಯದಲ್ಲಿ ನಡೆದ ಎನ್ ಕೌಂಟರ್‌ನಲ್ಲಿ ಪ್ರೇಮ್ ಮತ್ತು ಶಿವಲಿಂಗು ಹತ್ಯೆಯಾದ ನಂತರ ಬಂದ ಗದ್ದರ್ ಮತ್ತು ವರವರರಾವ್ ಮುಖ್ಯಮಂತ್ರಿ ಮನೆ ಮುಂದೆಯೇ ಬಂದೂಕಿಗೆ ಬಂದೂಕಿನಿಂದಲೇ ಉತ್ತರ ಕೊಡುತ್ತೇನೆ ಎನ್ನುವಂಥ ಉದ್ಧಟತನದ ಮಾತನಾಡಿದರು. ಇದೊಂದು ಜೀವಂತ ಉದಾಹರಣೆ. ಸರ್ಕಾರ ಬದುಕಿದ್ದಿದ್ದರೆ, ಜವಾಬ್ದಾರಿ ಇದ್ದರೆ ತಕ್ಷಣ ಅಲ್ಲಿಯೇ ಅವರನ್ನು ಬಂಧಿಸಬೇಕಾಗಿತ್ತು ; ಆ ಕೆಲಸ ನಿಮ್ಮಿಂದ ಆಗಲಿಲ್ಲ. ಧೈರ್ಯವಾಗಿ ಮಾತನಾಡಿ ಸರ್ಕಾರವನ್ನು ಬೆದರಿಸಿ, ಆನಂದವಾಗಿ ಅವರು ವಾಪಸ್ ಹೋದರು. ಮತ್ತೆ ಶಾಂತಿಗಾಗಿ ನಾಗರೀಕ ವೇದಿಕೆ. ಆ ಸಂದರ್ಭದಲ್ಲಿ ಬುದ್ಧಿಜೀವಿಗಳು ಎನ್ನುವವರು ನಡೆದುಕೊಂಡಂಥ ರೀತಿ, ಮೊನ್ನೆ ಮೈಸೂರು ಯೂನಿವರ್ಸಿಟಿಯಲ್ಲಿ ಮುಖ್ಯಮಂತ್ರಿಗಳು ವಾರನ್ ಮಾಡಿದರೆ, ಆ ಬುದ್ಧಿಜೀವಿಗಳೆಂದು ಕರೆಸಿಕೊಂಡವರು ಮುಖ್ಯಮಂತ್ರಿಗಳ ಬಗ್ಗೆ ಮಾತನಾಡುವಂಥ ಉದ್ಧಟತನದ ಮಾತು ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಬಂದಿದೆ. ಯಾರು ಯಾರು ಈ ನಕ್ಸಲೀಯರ ಜೊತೆಗೆ ಅವರ ಚಟುವಟಿಕೆಯಲ್ಲಿ ಪಾಲುದಾರರಿದ್ದಾರೆ, ಅವರಿಗೆ ರಕ್ಷಣೆ ಕೊಡುತ್ತಿದ್ದಾರೆ, ಬೆಂಬಲ ಕೊಡುತ್ತಿದ್ದಾರೆ ಇವರ ಮೇಲೆ ನಾವು ಕ್ರಮ ತೆಗೆದುಕೊಳ್ಳದೇ ಇದ್ದರೆ ಏನಾಗಬಹುದು? ನಮ್ಮ ಈ ಗೌರಿಲಂಕೇಶ್‌ರವರು, ಪ್ರೊಫೆಸರ್ ಶ್ರೀಧರ್, ನಗರೀಬಾಬಯ್ಯ ಇವರನ್ನು ತಕ್ಷಣ ಬಂಧಿಸಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಕೇಸ್ ಹಾಕಿದ್ದೇವೆಂಬ ಕುಂಟು ನೆಪ ಹೇಳುತ್ತಾ ಇದ್ದೀರಿ. ಆದರೆ, ಕೇಸೂ ಹಾಕಲಿಲ್ಲ ಮತ್ತು ಅವರನ್ನು ಬಂಧಿಸಲೂ ಇಲ್ಲ. ಮುಖ್ಯಮಂತ್ರಿಗಳ ಮನೆ ಮುಂದೆ ಬಂದೂಕಿಗೆ ಬಂದೂಕಿನಿಂದಲೇ ಉತ್ತರ ಕೊಡುತ್ತೇನೆಂದು ಹೇಳಿದ ಐದೇ ದಿವಸದಲ್ಲಿ ವೆಂಕಟಮ್ಮನಹಳ್ಳಿಯಲ್ಲಿ ಏಳು ಜನ ಪೋಲೀಸರ ಬರ್ಬರ ಹತ್ಯೆ ಆಯಿತು. ಗದ್ದರ ಅವತ್ತೇನು ಸವಾಲು ಹಾಕಿದ್ದರು, ಅದನ್ನು ಸತ್ಯ ಮಾಡಿ ತೋರಿಸಿದ. ಅಮಾಯಕ ಪೋಲೀಸಿನವರು ಬಲಿಯಾದರು. ಅದಾದ ಮೇಲೆ ಮುಖ್ಯಮಂತ್ರಿಗಳು ಪ್ರತಿಪಕ್ಷದ ನಾಯಕರ ಸಭೆಯಲ್ಲಿ ಎಸ್.ಟಿ.ಎಫ್. ಕಳುಹಿಸುತ್ತೇನೆಂದು ಹೇಳಿದರು. ಏಕೆ ಕಳುಹಿಸಲಿಲ್ಲ? ವೆಂಕಟಮ್ಮನಹಳ್ಳಿಯ ಘಟನೆ ನಂತರ, ಅವರು ಏಕೆ ಹಿಂದೆ ಸರಿದರು? ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಈ ಬಗ್ಗೆ ದ್ವಂದ್ವ ಹೇಳಿಕೆಯನ್ನು ಕೊಡಲು ಶುರು ಮಾಡಿದರು. ಇದರಿಂದ ಜನರು ಗೊಂದಲದಲ್ಲಿ ಸಿಕ್ಕಿಹಾಕಿಕೊಂಡರು. ಈ ತರಹ ಹೇಳಿಕೆಯನ್ನು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಕೊಡುವುದಕ್ಕೆ ಶುರುಮಾಡಿದರೆ ಎಲ್ಲಿಯವರೆಗೆ ಅಂದರೆ, ಡೈರೆಕ್ಟರ್ ಆಫ್ ಜನರಲ್ ಪೋಲೀಸ್‌ನವರ ಬಗ್ಗೆಯೂ ತನಿಖೆ ಆಗಬೇಕೇನೂ ಎನ್ನುವಂಥ ವಾತಾವರಣ ಸೃಷ್ಟಿಯಾಯಿತು. ಆ ರೀತಿಯ

ವಾತಾವರಣ ಸೃಷ್ಟಿ ಮಾಡುವುದಕ್ಕೆ ಆಡಳಿತ ನಡೆಸುವಂಥ ಪ್ರಮುಖರೇ ಕಾರಣಕರ್ತರಾದಿರಿ. ಯಾವುದೇ ಉನ್ನತ ಪೊಲೀಸ್ ಅಧಿಕಾರಿ ನಿರ್ಭೀತಿಯಿಂದ ಈ ರೀತಿ ತೀರ್ಮಾನಗಳನ್ನು ಕೈಗೊಳ್ಳುವುದಕ್ಕಾಗುವುದಿಲ್ಲವೆನ್ನುವ ವಾತಾವರಣವನ್ನು, ಒಂದು ಮೆಸೇಜನ್ನು ತಾವು ಕಳುಹಿಸುವಂಥ ಪ್ರಯತ್ನ ಮಾಡಿದಿರಿ. ಈ ನಕ್ಸಲೀಯ ಚಟುವಟಿಕೆಗಳಿಗೆ ವಿಶ್ವವಿದ್ಯಾನಿಲಯದ ಪ್ರೊಫೆಸರುಗಳೇ ಕೆಲವರು ಕುಮ್ಮಕ್ಕು ಕೊಡುತ್ತಾ ಇದ್ದಾರೆಂಬ ಮಾಹಿತಿ ನಿಮಗೆ ಸಿಕ್ಕಿದೆ. ಗುಪ್ತ ವರದಿ ನಿಮಗೆ ಇದೆ. ಅವರು ಯಾರು ಎಂದು ನಿಮಗೆ ಗೊತ್ತಿದೆ. ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವಂಥ ತಾಕತ್ತು, ಧೈರ್ಯವನ್ನು ನೀವು ತೋರಿಸುತ್ತಾ ಇಲ್ಲ. ಯಾವ ಯಾವ ವಿಶ್ವವಿದ್ಯಾನಿಲಯದಲ್ಲಿ ಯಾರು ಯಾರು ಈ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ, ಇದಕ್ಕೆ ಕುಮ್ಮಕ್ಕು ಕೊಡುತ್ತಾ ಇದ್ದಾರೆ ಈ ಬಗ್ಗೆ ಕ್ರಮ ತೆಗೆದುಕೊಳ್ಳದೇ ಇದ್ದರೆ ಸರ್ಕಾರ ಬದುಕಿದೆಯೇ ಎನ್ನುವಂಥ ಪ್ರಶ್ನೆ ಎದ್ದೇಳುತ್ತೆ. ನಾವು ಬಹಳ ವರ್ಷಗಳಿಂದ ಹೇಳುತ್ತಾ ಇದ್ದೇವೆ, ಮಾಹಿತಿಗಳನ್ನು ಕೊಟ್ಟಿದ್ದೇವೆ. ಬೆಂಗಳೂರು ಒಂದುರೀತಿ ಈ ಚಟುವಟಿಕೆಗಳಿಗೆ ಕೇಂದ್ರಸ್ಥಾನ, ತಂಗುದಾಣ ಆಗಿದೆ. ಇದನ್ನು ನಾನು ಹೇಳುತ್ತಾ ಇಲ್ಲ. ಉನ್ನತ ಪೊಲೀಸ್ ಅಧಿಕಾರಿಗಳು, ನಿಮಗೆ ಗೊತ್ತಿರಬಹುದು ಕೇಂದ್ರದ ಗೃಹ ಇಲಾಖೆ, ಕರ್ನಾಟಕದಲ್ಲಿ ನಾಲ್ಕು ನೂರಕ್ಕೂ ಹೆಚ್ಚು ಜನ ಐ.ಎಸ್.ಐ. ಏಜೆಂಟ್ ಇದ್ದಾರೆಂದು ನಿಮಗೆ ವರದಿ ಕಳುಹಿಸಿದ್ದಾರೆ. ಬೇಕಿದ್ದರೆ ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಆದ್ದರಿಂದ, ನಿಮ್ಮ ಹತ್ತಿರ ಗುಪ್ತ ವರದಿ ಇದೆ. ಆದರೆ, ರಾಜ್ಯದ ಗುಪ್ತಚರ ಇಲಾಖೆ ಗಮನ ಕೊಡಲಿಲ್ಲ. ಬೆಂಗಳೂರು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವೀಸಾ ಮತ್ತು ಪಾಸ್‌ಪೋರ್ಟ್ ಇಲ್ಲದೇ ನೂರಾರು ಪಾಕಿಸ್ತಾನ ಮತ್ತು ಬಾಂಗ್ಲಾದ ಪ್ರಜೆಗಳು ನುಸುಳಿ ಬರುತ್ತಾ ಇದ್ದಾರೆನ್ನುವಂಥ ಮಾಹಿತಿಗಳು ನಿಮ್ಮಲ್ಲಿದೆ. ಅವರು ರಾಜ್ಯದಲ್ಲಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆಂಬುದು ನಿಮಗೆ ಗೊತ್ತಿದೆ. ನೈಜೀರಿಯಾ, ಕೀನ್ಯಾ, ವಿಯೆಟ್ನಾಮ್‌ಗಳಂಥ ಹೊರದೇಶಗಳಿಂದ ನಕಲಿ ಪಾಸ್‌ಪೋರ್ಟಿನ ಮೂಲಕ ಭಾರತಕ್ಕೆ ಬಂದಿದ್ದಾರೆಂಬ ಮಾಹಿತಿ ನಿಮ್ಮಲ್ಲಿದೆ. ಅವರು ಬೆಂಗಳೂರು, ಬಳ್ಳಾರಿ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಬೀಡು ಬಿಟ್ಟಿದ್ದಾರೆಂಬ ಮಾಹಿತಿ ನಿಮ್ಮಲ್ಲಿದೆ. ಬೆಂಗಳೂರಿನ ಸುತ್ತಮುತ್ತ ಇರುವಂಥ ಸ್ಲಮ್‌ಗಳಲ್ಲಿ ಐದು ಸಾವಿರಕ್ಕೂ ಹೆಚ್ಚು ಜನ ವಿದೇಶಿಯರು ಇದ್ದಾರೆನ್ನುವಂಥ ಮಾಹಿತಿ ಗುಪ್ತಚಾರ ಇಲಾಖೆಯಿಂದ ನಿಮಗೆ ಸಿಕ್ಕಿದೆ. ನೈಜೀರಿಯಾ ಮೂಲಕ ಇಬ್ಬರು ವಿದ್ಯಾರ್ಥಿಗಳು, ಆಭರಣ ವ್ಯಾಪಾರಿಯೊಬ್ಬರನ್ನು ವಂಚಿಸಿ ನಾಲ್ಕು ಲಕ್ಷ ಲೂಟಿ ಮಾಡಿದಾಗ ಕಬ್ಬನ್‌ಪಾರ್ಕ್ ಪೊಲೀಸ್ ಸ್ಟೇಷನ್‌ಗೆ ಸಿಕ್ಕಿ ಬಿದ್ದರು. ಇದಕ್ಕೆ ಇವೆಲ್ಲಾ ಉದಾಹರಣೆ ಎಂದು ನಾನು ತಿಳಿದುಕೊಂಡಿದ್ದೇನೆ. ಇವರು ಯಾರು, ಎಲ್ಲಿದ್ದಾರೆ, ಇವರಿಗೆ ಯಾರು ರಕ್ಷಣೆ ಕೊಡುತ್ತಿದ್ದಾರೆ, ಇವರ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತಾ ಇದ್ದೀರಿ? ಇದು ಯಾವುದರ ಬಗ್ಗೆಯೂ ಏನೂ ಗೊತ್ತಾಗುತ್ತಾ ಇಲ್ಲ. ಭೂಗತ ದೊರೆಗಳಿಗೆ ರಕ್ಷಣೆ ಕೊಡುವಂಥ, ದೇಶದ್ರೋಹಿ ಚಟುವಟಿಕೆಗೆ ಕುಮ್ಮಕ್ಕು ಕೊಡುವಂಥ, ಈ ನಕಲಿ ಛಾಪಾ ಕಾಗದದ ಸಾವಿರಾರು ಕೋಟಿ ರೂಪಾಯಿಗಳು ಇದಕ್ಕೆ ವಿನಿಯೋಗವಾಗುತ್ತಾ ಇದೆಯೆನ್ನುವುದನ್ನು ಇಲ್ಲಿ ಸಾಕ್ಷ್ಯಾಧಾರಗಳೊಂದಿಗೆ ನಾವು ಕೊಟ್ಟೆವು.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರ ನೋಟೀಸ್ ನನ್ನ ಕೈಯಲ್ಲಿದೆ. ಅಧ್ಯಕ್ಷರು ಈ ವಿಷಯವನ್ನು ನಿಯಮ 69ಕ್ಕೆ ಕನ್‌ವರ್ಟ್ ಮಾಡಿದ್ದೇನೆಂದು ಹೇಳಿದರು. ಆಗ ನಾನೂ ಕೂಡ ಸದನದಲ್ಲಿದ್ದೆ. ತಾವು ಈ ರಾಜ್ಯದ ಲಾ ಅಂಡ್

ಆರ್ಡರ್ ಚರ್ಚೆ ಮಾಡುತ್ತಿದ್ದೀರೋ ಅಥವಾ ವೆಂಕಟಮ್ಮನಹಳ್ಳಿ ಮತ್ತು ಅದಕ್ಕೆ ಸೀಮಿತವಾದುದನ್ನು ಮಾತನಾಡುತ್ತಿದ್ದೀರೋ ಏಕೆಂದರೆ, ಅವರು ನೈಜೀರಿಯಾ, ಐ.ಎಸ್.ಐ ಇತ್ಯಾದಿ . . . .

ಶ್ರೀ ವಾಟಾಳ್ ನಾಗರಾಜ್ : ತಾವು ಏನೂ ತಪ್ಪು ತಿಳಿದುಕೊಳ್ಳಬೇಡಿ. ಸ್ವಲ್ಪ ಆಜುಬಾಜು ಮಾತನಾಡುತ್ತಿದ್ದಾರೆ. ಏಕೆಂದರೆ, ಪೊಲೀಸ್ ಸ್ಟೇಷನ್ ಎಂದರೆ, ಪಕ್ಕದಲ್ಲಿ ಏನೇನು ಇದೆ ಎಂಬುದನ್ನು ಸ್ವಲ್ಪ ಹೇಳಬೇಕಲ್ಲಾ. ತಾವು ಕೂಡ ಅಧ್ಯಕ್ಷರಾಗಿದ್ದವರು, ಈ ತರಹ ಆಗಿಬಿಟ್ಟರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಕರ್ನಾಟಕ ರಾಜ್ಯ ನಕ್ಸಲೀಯ ಚಟುವಟಿಕೆಗಳಿಗೆ ಕೇಂದ್ರ ಸ್ಥಾನವಾಗಿರುತ್ತದೆ. ಇದರಿಂದ ರಾಜ್ಯದ ಜನತೆ ಭಯಭೀತರಾಗಿದ್ದಾರೆ ಎಂಬುದಾಗಿಯೇ ನೋಟೀಸ್ ಕಳುಹಿಸಿಕೊಡಲಾಗಿದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಕ್ಸಲೈಟ್ಸ್ ಪ್ರಾಬ್ಲಂ ಅದು ಪೊಲಿಟಿಕಲ್ ಪ್ರಾಬ್ಲಂ ಅದರಿಂದಾಗಿ ಅವರ ವಿಭಿನ್ನವಾದಂತಹ ರಾಜಕೀಯ ನಿಲುವಿನಿಂದ ಲಾ ಅಂಡ್ ಆರ್ಡರ್ ಪ್ರಾಬ್ಲಂ ಉದ್ಭವವಾಗಿದೆ, ಲಾ ಅಂಡ್ ಆರ್ಡರ್ ಪ್ರಾಬ್ಲಂ ಅನ್ನು ಚರ್ಚೆ ಮಾಡೋಣ. ಐ.ಎಸ್.ಐ.ನವರು ಅಥವಾ Lashkar-E-Toiba ಅವರು They are coming as international . . . .

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ರಮೇಶ್‌ಕುಮಾರ್‌ರವರೇ, ಒಂದೇ ಒಂದು ನಿಮಿಷ. ರೂಲ್ 69 ರ ಮೇರೆಗೆ ಅಧ್ಯಕ್ಷರು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಆಮೇಲೆ ತಾವೂ ಸಹ ಭಾಗವಹಿಸಿ ಮಾತನಾಡಬಹುದು, ಅನುಕೂಲವಾಗುತ್ತದೆ.

Sri K.R. Ramesh kumar : It is not that. you will agree with me they are totally two different things. ಹೇಗೆ ಸಾಧ್ಯವಾಗುತ್ತದೆ ನಾನು ಏನು ಹೇಳುತ್ತೇನೆಂದರೆ, with due respect to the Leader of the Opposition, ಅವರನ್ನು ಡಿಸ್ಟರ್ಬ್ ಮಾಡಬೇಕು ಎನ್ನುವ ಉದ್ದೇಶ ನನಗಿಲ್ಲ. ನಕ್ಸಲೈಟ್ಸ್ ಪ್ರಾಬ್ಲಂ ಅನ್ನು ಏನು ನೀವು ಚರ್ಚೆ ಮಾಡುತ್ತಿದ್ದೀರಿ, ಅದರ ದಿಕ್ಕೇ ಬೇರೆಯಾಗುತ್ತಿದೆ. ಐ.ಎಸ್.ಐ. ಅಥವಾ ಉಳಿದವರು ಯಾರು ಇದ್ದಾರೆ ಪರದೇಶಗಳಿಂದ ಬರತಕ್ಕಂಥವರು ಸ್ಪೈಸ್ ಆಗಿ ಬರತಕ್ಕಂಥವರು ಅವರ ಕಾರ್ಯಕ್ಷೇತ್ರ, ಅವರ ಆಲೋಚನೆ, ಇದೇ ಬೇರೆ ಆಗುತ್ತದೆ. ಅದೂ ಇದೂ ಎಲ್ಲಾ ಕ್ಲಬ್ ಮಾಡುತ್ತಿದ್ದೀರಿ, ಈಗ ತಾವು ಎಕ್ಸ್‌ಕ್ಲೂಸೀವ್ ಆಗಿ ರಾಜ್ಯದಲ್ಲಿ ಉದ್ಭವವಾಗಿರತಕ್ಕಂಥ ಲಾ ಅಂಡ್ ಆರ್ಡರ್ ಪ್ರಾಬ್ಲಂ ಅನ್ನು ಸೆಟ್‌ರೈಟ್ ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಿದ್ದೀರಾ, ಅಥವಾ ನಕ್ಸಲ್ ವಾದದಲ್ಲಿ ನಂಬಿಕೆ ಇರತಕ್ಕಂಥವರು ರಾಜಕೀಯವಾಗಿ ವಿಭಿನ್ನವಾದಂತಹ ನಿಲುವನ್ನು ತಳೆದಿದ್ದಾರೆ ಸಂಸದೀಯ ಪ್ರಜಾಪ್ರಭುತ್ವಕ್ಕೆ ಅದು ತಕ್ಕದಾದುದು ಅಲ್ಲ ಅವರು ಹಿಂಸೆಯನ್ನು ನಂಬುತ್ತಾರೆ, ನಾವು ಅಹಿಂಸೆಯಲ್ಲಿ ನಂಬಿಕೆ ಇರತಕ್ಕಂಥವರು ಆದ್ದರಿಂದ ತಾವು ನಾವು ಎಲ್ಲರೂ ಈ ಸದನದ ಮುಖಾಂತರ ಇದಕ್ಕೆ ರಾಜಕೀಯವಾದ ಉತ್ತರ ಕೊಡಬೇಕು ಎನ್ನತಕ್ಕಂಥ ಪ್ರಯತ್ನ ಮಾಡುತ್ತಿದ್ದೀರಾ ಎನ್ನುವ ಬಗ್ಗೆ ನನಗೆ ಕ್ಲಾರಿಫಿಕೇಶನ್ ಮಾಡಿದರೆ I will be grateful to you.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇದೆಲ್ಲದ್ದಕ್ಕೂ ಕೂಡ ಒಂದಕ್ಕೊಂದು ಲಿಂಕ್

ಇದೆ. ಐ.ಎಸ್.ಐ. ನಕ್ಸಲ್‌ವಾದಿಗಳು ಯಾರಿದ್ದಾರೆ ಇವರ ಕೈಯಲ್ಲಿ ಇವತ್ತು ಆಧುನಿಕ ವಿದೇಶಿ ಶಸ್ತ್ರಾಸ್ತ್ರಗಳು ಎಲ್ಲಿಂದ ಬರಬೇಕು? ಇವೆಲ್ಲವೂ ಕೂಡ ಒಂದು ರೀತಿಯಿಂದ ಚೈನ್ ಇದೆ. ಪೊಲೀಸ್ ವರದಿಗಳು ಇವೆ. ಮಾಧ್ಯಮಗಳಲ್ಲಿ ಪ್ರತಿನಿತ್ಯ ಬರುತ್ತಿವೆ. ಇವೆಲ್ಲವನ್ನೂ ಕೂಡ ಕ್ರೋಢೀಕರಿಸಿಕೊಂಡೆ ಇವತ್ತು ಚರ್ಚೆ ಮಾಡಬೇಕಾಗುತ್ತದೆ. ಅದನ್ನು ಬಿಡಿ, ಇದನ್ನು ಬಿಡಿ, ವಿಭಿನ್ನ ನಿಲುವುಗಳು ರಾಜಕೀಯದ್ದು, ರಾಜಕೀಯದ್ದು ಏನಾದರೂ ಇದ್ದರೆ ನೇರವಾಗಿ ಬರಬೇಕು ಅವರು. ಅವರು ಬಂದೂಕು ಇಟ್ಟುಕೊಂಡು, ಕಾಡಿನಲ್ಲಿದ್ದುಕೊಂಡು, ನಾವು ಗುಂಡು ಹೊಡೆಯುತ್ತೇವೆ, ಯಾರನ್ನು ಬೇಕಾದರೂ ಕುತ್ತಿಗೆ ಹಿಡಿದುಕೊಂಡು ಹತ್ತು ಸಾವಿರ ಇಪ್ಪತ್ತು ಸಾವಿರ, ಲಕ್ಷ ಕೋಟಿ ರೂಪಾಯಿ ವಸೂಲಿ ಮಾಡಿಕೊಂಡು ಹೋಗುತ್ತೇವೆಂದರೆ ಹೇಗೆ? ಮಲೆನಾಡಿನಂತಹ ಭಾಗದಲ್ಲಿ ತಾವು ಇವತ್ತು ನೋಡಬೇಕು, ಅವರ ಹತ್ತಿರ ಇದ್ದಂತಹ ಶಸ್ತ್ರಾಸ್ತ್ರಗಳನ್ನು ಪೊಲೀಸಿನವರು ಮೊನ್ನೆ ಶೃಂಗೇರಿ ಪೊಲೀಸ್ ಸ್ಟೇಷನ್‌ನಲ್ಲಿ ಎಗ್ಸಿಬಿಟ್ ಮಾಡಿದ್ದರು, ನೋಡಿದರೆ ಭಯಾನಕವಾದಂತಹ ವಾತಾವರಣ ಇತ್ತು. ಈ ರೀತಿಯಲ್ಲಿ ನಾವು ಎಲ್ಲೋ ಒಂದು ಕಡೆ ಅದನ್ನು ಮಾತನಾಡದೆ ಹಾಗೆ, ಇದನ್ನು ಮಾತನಾಡದಿದ್ದ ಹಾಗೆ ಎಲ್ಲೋ ಡಿಲೀಂಗ್ಸ್ ಮಾಡುತ್ತಾ ಹೋದರೆ, ಖಂಡಿತವಾಗಿ ಈ ಚರ್ಚೆ ಪರಿಪೂರ್ಣವಾಗುವುದಿಲ್ಲ ಮತ್ತೆ ಪಕ್ಷಭೇದವನ್ನು ಮರೆತು ಎಲ್ಲವನ್ನೂ ಮೀರಿ ನಿಂತು ಚರ್ಚೆಯಾಗಬೇಕಾಗುತ್ತದೆ. ಆದ್ದರಿಂದ ಇದನ್ನು ಎಲ್ಲೋ ಒಂದು ಕಡೆ ಡಿಸ್ಟರ್ಬ್ ಮಾಡುವುದು ಒಳ್ಳೆಯದಾಗುವುದಿಲ್ಲ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ರಾಜಕೀಯದ ಇತಿಹಾಸ ಪರಿಚಯವು ಬೇಕಾಗುತ್ತದೆ. ಯಾವುದನ್ನೋ ನಿಲ್ಲಿಸಿ, ಮೊಟಕು ಮಾಡಿ, ಸಪರೇಟ್ ಮಾಡಿ ಅಂತ ನಾನು ಅಡ್ವೈಸ್ ಮಾಡುತ್ತಿಲ್ಲ. ನಕ್ಸಲ್‌ವಾದ ಎನ್ನತಕ್ಕಂಥಾದ್ದು ಈ ದೇಶದಲ್ಲಿ ಎಲ್ಲಿ ಪ್ರಾರಂಭವಾಯಿತು? ಯಾವಾಗ ಪ್ರಾರಂಭವಾಯಿತು? ಯಾರಿಂದ ಪ್ರಾರಂಭವಾಯಿತು? ಅದು ಬೇಕಾದರೆ ಒಂದು ದಿನ ವಿಶೇಷವಾಗಿ ಚರ್ಚೆಗೆ ತೆಗೆದುಕೊಳ್ಳೋಣ. ನಾನು ತಮ್ಮಲ್ಲಿ ಕೇಳತಕ್ಕಂಥಾದ್ದು ಇಷ್ಟೆ. ಅವರ ಒಂದು ಸಿದ್ಧಾಂತ ಅವರ ಒಂದು ಆಲೋಚನೆ ಬೇರೆ ಇದೆ. ಇವರದ್ದೇ ಬೇರೆ ಇದೆ. ನಾವು ಆಡಳಿತಾತ್ಮಕವಾಗಿ ಇಲ್ಲಿ ಉದ್ಭವವಾಗಿರತಕ್ಕಂಥ ಲಾ ಅಂಡ್ ಆರ್ಡರ್ ಪ್ರಾಬ್ಲಂ ಅನ್ನು ಚರ್ಚೆ ಮಾಡುತ್ತಿದ್ದೇವೆಯೇ ಅಥವಾ ಐಡಿಯಾಲಾಜಿಕಲ್ ಆಗಿ ಅವರು ತೆಗೆದುಕೊಂಡಿರತಕ್ಕಂಥ ಸ್ಟ್ಯಾಂಡ್‌ಗೆ as a House having faith in parliamentary democracy.....

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದಂತಹ ಮಾನ್ಯ ರಮೇಶ್‌ಕುಮಾರ್‌ರವರ ಮಾತನ್ನು ನಾನು ಒಪ್ಪುತ್ತೇನೆ. ಇಲ್ಲಿ ಇವತ್ತು ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಡುವುದಕ್ಕೋಸ್ಕರ ಕೇವಲ ಈ ನಕ್ಸಲೀಯರ ಇತ್ತೀಚಿನ ಚಟುವಟಿಕೆಗಳು ಕಾರಣ ಮಾತ್ರವಲ್ಲ, ಆ ಕರೀಂ ಲಾಲನಿಂದ ಇವತ್ತಿನವರೆಗೆ ಹತ್ತಾರು ಸಾವಿರ ಕೋಟಿ ರೂಪಾಯಿಯನ್ನು ಈ ರಾಜ್ಯದಲ್ಲಿ, ಈ ದೇಶದಲ್ಲಿ ಅಭದ್ರತೆಯನ್ನು ಉಂಟು ಮಾಡುವುದಕ್ಕೆ ಏನು ಹಣವನ್ನು ವಿನಿಯೋಗ ಮಾಡುವಂತಾದ್ದು ಆಯಿತು ಅದನ್ನು ನೋಡಿಕೊಂಡು ನಾವು ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದ್ದೆವು. ಎಲ್ಲಾ ಪತ್ರಿಕೆಗಳಲ್ಲಿ " ಉಲ್ಫ್ ಮೂಲಕ ನಕ್ಸಲೀಯರಿಗೆ ಶಸ್ತ್ರಾಸ್ತ್ರ" ಎನ್ನುವ ಡೆಲ್ಲಿ ರಿಪೋರ್ಟ್‌ನಲ್ಲಿ ನಕ್ಸಲೀಸ್‌ಗೂ ಐ.ಎಸ್.ಐ.ಗೆ ಇರುವ ಚಟುವಟಿಕೆಗೆ ಇರುವಂತಹ ಸಂಬಂಧದಿಂದ ಶಸ್ತ್ರಾಸ್ತ್ರ ಒದಗಿಸುವಂತಹ ಪ್ರಸ್ತಾಪ ಇವತ್ತು ಡಿಟೇಲ್ಸ್ ಇದೆ. ಅಂದರೆ ನಮಗೆ

ಎಲ್ಲಾ ಮಾಹಿತಿಗಳು ಇದ್ದರೂ ಸಹ ನಾವು ಕೈ ಕಟ್ಟಿಕೊಂಡು ಕುಳಿತುಕೊಂಡು ಬಿಗಿಯಾದಂತಹ ಕ್ರಮವನ್ನು ತೆಗೆದುಕೊಳ್ಳದೇ ಇದ್ದಂತಹ ಪರಿಣಾಮ ಇವತ್ತು ಆಂಧ್ರ ಪ್ರದೇಶವನ್ನು ಮೀರಿಸುವಂತಹ ರೀತಿಯಲ್ಲಿ ನಕ್ಸಲ್ ಚಟುವಟಿಕೆಯ ಕೇಂದ್ರವಾಗಿ ಕರ್ನಾಟಕ ಪರಿವರ್ತನೆಯಾಗಿ ಕಾನೂನು ಸುವ್ಯವಸ್ಥೆಗೆ ಅಡ್ಡಿಯಾಗಿ ಚುನಾಯಿತ ಪ್ರತಿನಿಧಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಆಗದೇ ಇರುವಂತಹ, ಶ್ರೀ ಸಾಮಾನ್ಯರು ರಸ್ತೆಯಲ್ಲಿ ಓಡಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಬಂದಿದೆ ಎನ್ನುವಂತಹ ವಿವರವನ್ನು ಕೊಡುವಂತಹ ಒಂದು ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ, ವಿನಹ ಇದರ ಮೂಲಕ ಸರ್ಕಾರ ಯಾವುದೋ ಒಂದು ಘಟನೆಯನ್ನು ಅಲ್ಲಿರುವಂತಹ ಅಪರಾಧಿಯನ್ನು ಹಿಡಿಯುವುದರಿಂದ ಈ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಮಾನ್ಯ ರಮೇಶ್‌ಕುಮಾರ್ ಅವರು ಹಿರಿಯ ಸದಸ್ಯರಿದ್ದಾರೆ, ಅವರು ಸಭಾಧ್ಯಕ್ಷರಾಗಿ ಕೆಲಸ ಮಾಡಿ ನಮಗೆ ಮಾರ್ಗದರ್ಶನ ಮಾಡಿದ್ದೀರಿ, ಯಾವ ಟಾಪ್ ಪೋಲೀಸ್ ಅಧಿಕಾರಿಗಳು ತಮ್ಮದೇ ಆದಂತಹ ಒಂದು ರೀತಿಯಲ್ಲಿ ಈ ರೀತಿ ದೇಶದ್ರೋಹ ಚಟುವಟಿಕೆ ಮಾಡುತ್ತಿದ್ದಾರೆ ಎನ್ನುವುದರ ಜೊತೆಗೆ ಕೈ ಜೋಡಿಸಿದರ ಪರಿಣಾಮ ಇವತ್ತು ಅವರು ನಿರ್ಭೀತಿಯಿಂದ ಅದೇ ಉನ್ನತ ಸ್ಥಾನದಲ್ಲಿದ್ದು ಅವರು ಕೆಲಸ ಮಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಇದೆ. ಸುಪ್ರೀಂಕೋರ್ಟ್ ಡೈರೆಕ್ಷನ್ ಕೊಡಬೇಕಾಯಿತು ಅವನನ್ನು ಪ್ರಾಸಿಕ್ಯೂಷನ್ ಮಾಡಿ ಅಂತ. ಅದು ಮುಚ್ಚಿ ಹಾಕುವಂತಾದ್ದು ಆಗುತ್ತಿದೆ. ಅಂದರೆ ಎಲ್ಲೋ ಒಂದು ಕಡೆ ಟಾಪ್ ಪೋಲೀಸ್ ಅಧಿಕಾರಿಗಳೇ ಈ ರೀತಿಯಾದ ಚಟುವಟಿಕೆಗೆ ಕುಮ್ಮಕ್ಕು ಕೊಡುವಂತಹ ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ ಎನ್ನುವುದಾದರೆ ಈ ರಾಜ್ಯದ ಜನತೆಯನ್ನು ಯಾರು ರಕ್ಷಣೆ ಮಾಡಬೇಕು ಎನ್ನುವಂತಹ ಮೂಲ ಪ್ರಶ್ನೆ ಇಲ್ಲಿದೆ. ಅದು ಹೌದೋ ಇಲ್ಲವೋ ಎನ್ನುವಂತಾದ್ದನ್ನು ಉತ್ತರ ಕೊಡುವಂತಹ ಸಂದರ್ಭದಲ್ಲಿ ಕೊಡಿ ನಾನು ಸಹ ಮಾಹಿತಿಯನ್ನು ಕೊಡುವಂತಹ ಪ್ರಯತ್ನ ಮಾಡುತ್ತಿದ್ದೇನೆ. ಅಂದರೆ ಕಳೆದ ನಾಲ್ಕಾರು ವರ್ಷಗಳಲ್ಲಿ ಈ ರಾಜ್ಯದಲ್ಲಿ ನಡೆದಂತಹ ಘಟನೆಗಳು, ಇದರ ಪರಿಣಾಮಗಳು ಎಲ್ಲಿಗೆ ಬಂದು ಮುಟ್ಟಿದೆ ಎನ್ನುವಂತಾದ್ದನ್ನು, ನಾನು ಒಂದು ಮಾತು ತಮಗೆ ಹೇಳುತ್ತೇನೆ. ಇವತ್ತು ನಕ್ಸಲೀಯ ಚಟುವಟಿಕೆಗಳನ್ನು ನಿಗ್ರಹಿಸುವುದಕ್ಕೋಸ್ಕರ ನಾವು ಮಲೆನಾಡು ಪ್ರದೇಶದಲ್ಲಿ ನಾವು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಅದಕ್ಕಾಗಿ ನಾವು ಈ ಕುದುರೆಮುಖ ರಾಷ್ಟ್ರೀಯ ಉದ್ಯಾನವನಕ್ಕೆ 60 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆಂದು ಹೇಳಿದರು. ಇವತ್ತು ಆಶ್ಚರ್ಯವಾಗುತ್ತದೆ ಮಾನ್ಯ ಮುಖ್ಯಮಂತ್ರಿಗಳೇ ತಾವು ನೋಡಿ. ಇಲ್ಲಿ ಸರ್ಕಾರ ಕೊಟ್ಟಂತಹ ಭರವಸೆ, ನಿಮ್ಮ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮುಖ್ಯ ವನ್ಯಜೀವಿ ಪರಿಪಾಲಕರು, ಲಿಖಿತ ಮೂಲಕ ಉತ್ತರ ಕೊಟ್ಟಿದ್ದಾರೆ, ಕರ್ನಾಟಕ ಮಾಹಿತಿ ಪಡೆದ ಹಕ್ಕು ಕಾಯ್ದೆ 2000, ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾಹಿತಿಯನ್ನು ಒದಗಿಸುವ ಬಗ್ಗೆ, ದಿನಾಂಕ 24-2-2005 ರಂದು ಶ್ರೀ ಗಿರೀಶ್ ಮಟ್ಟಣ್ಣನವರಿಗೆ ಕೊಟ್ಟಂತಹ ಉತ್ತರ. ಏನು ಉತ್ತರ ಕೊಟ್ಟಿದ್ದಾರೆ ? ತಮ್ಮ ಪತ್ರ 24-2-2005 ಕ್ಕೆ ಸಂಬಂಧಿಸಿದಂತೆ ತಿಳಿಸುವುದೇನೆಂದರೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನಕ್ಕೆ 60 ಕೋಟಿ ರೂಪಾಯಿಗಳ ಯೋಜನೆಯ ಪ್ರಸ್ತಾಪಿತ ಮಾಹಿತಿ ಈ ಕಛೇರಿಗೆ ಸರ್ಕಾರದಿಂದ ಬಂದಿಲ್ಲ ಮತ್ತು ಇದರ ಬಗ್ಗೆ ನಾವು ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ. ಅಂದರೆ ಅಲ್ಲಿ ಈ ಅಭಯಾರಣ್ಯದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಅಭಿವೃದ್ಧಿಗಾಗಿ ನಾವು 60

ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಈ ಸದನದಲ್ಲಿ ಹೇಳಿ ಇವತ್ತು ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ ಎನ್ನುವುದಾದರೆ ನೀವು ಏಕೆ ಈ ಭರವಸೆಯನ್ನು ಕೊಡುತ್ತೀರಿ? ಈ ಚಟುವಟಿಕೆಯನ್ನು ಹತ್ತಿಕ್ಕುವುದಕ್ಕೋಸ್ಕರ ಅಲ್ಲಿ ಬೇಕಾದಂತಹ ವ್ಯವಸ್ಥೆಯನ್ನು ಮಾಡುತ್ತೇವೆ ಅಲ್ಲಿನ ಜನರಿಗೆ ರಕ್ಷಣೆ ಕೊಡುತ್ತೇವೆ ಎನ್ನುವಂತಹ ದಿಟ್ಟ ನಿಲುವನ್ನು ನೀವು ತೆಗೆದುಕೊಂಡ ಮೇಲೆ ಈ ಸದನದಲ್ಲಿ 60 ಕೋಟಿ ರೂ. ಬಿಡುಗಡೆ ಮಾಡುತ್ತೇವೆಂದು ಹೇಳಿ ಇದುವರೆಗೂ ನೀವು ಒಂದು ಪೈಸೆ ಬಿಡುಗಡೆ ಮಾಡಿಲ್ಲವೆಂದು ಹೇಳುವುದಾದರೆ ನೀವು ಎಲ್ಲಿದ್ದೀರಾ ಅಂತ. ನಿಮಗೆ ಯಾವುದರ ಬಗ್ಗೆಯೂ ಆಸಕ್ತಿ ಇಲ್ಲ. ಈ ರೀತಿ ಒಂದು ಗೊಂದಲದ ವಾತಾವರಣ ಇವತ್ತು ರಾಜ್ಯದಲ್ಲಿದೆ. 2000ದ ಜುಲೈ–ಆಗಸ್ಟ್ ತಿಂಗಳಲ್ಲಿ ಗುಲ್ಬರ್ಗಾ ವಾಡಿ ಚರ್ಚ್‌ನಲ್ಲಿ ಬಾಂಬ್ ಸ್ಫೋಟವಾಯಿತು. ಹುಬ್ಬಳ್ಳಿ ಚರ್ಚ್‌ನಲ್ಲಿ ಬಾಂಬ್ ಸ್ಫೋಟ ಮಾಡುವಂತಹ ಪ್ರಯತ್ನವಾಯಿತು. ಅಂದರೆ ಆವೊತ್ತಿನ ಆರೋಪವನ್ನು ಸಂಘ ಪರಿವಾರದ ಮೇಲೆ, ವಿಶ್ವ ಹಿಂದೂ ಪರಿಷತ್ತಿನ ಮೇಲೆ ಹಾಕುವಂತಹ ಪ್ರಯತ್ನ ಅವತ್ತು ಸರ್ಕಾರ ಮಾಡಿತು. ಆದರೆ ಅವತ್ತು ಕಾರು ಸ್ಫೋಟವಾದಾಗ ಇದರ ಸತ್ಯಾಸತ್ಯತೆ ಹೊರಗಡೆ ಬಂತು, ದೀನ್‌ದಾರ್ ಅಂಜುಮಾಮ್ ಸಂಸ್ಥೆಗೆ ಸೇರಿದವರು ಈ ಕಾರ್ಯ ಮಾಡಿದ್ದಾರೆ ಅಂತ ವಿವರ ಸಿಕ್ಕಿತು, ಇಲ್ಲದಿದ್ದರೆ ಪೊಲೀಸ್ ಅಧಿಕಾರಿಗಳು ಗೊಂದಲದಲ್ಲಿ ಈ ನಾಡಿನ 5 ಕೋಟಿ ಜನ ಯಾರನ್ನು ಅಪನಂಬಿಕೆಯಿಂದ ನೋಡುವಂತಹ ಪರಿಸ್ಥಿತಿ ಹಿಂದೆ ಬಂದಿತ್ತು. ಆ ಕಾರು ಸ್ಫೋಟವಾದ ಮೇಲೆ ಸಿಕ್ಕಿದಂತಹ ವರದಿ ಆಧಾರದ ಮೇಲೆ ಇದಕ್ಕೆ ಯಾರು ಸಂಬಂಧ ಇದೆ ಎನ್ನುವಂತಾದ್ದು ಗೊತ್ತಾಯಿತು. ಅದಾದ ಮೇಲೆ ನೀವು ವಿವರಕ್ಕೆ ಹೋದಾಗ ಇದಕ್ಕೆ ಐ.ಎಸ್.ಐ. ಸಂಬಂಧ ಇದೆ ಎನ್ನುವ ವಿವರ ಗೊತ್ತಾಯಿತು. ಅಂದರೆ ಎಲ್ಲೋ ಒಂದು ಕಡೆ ಇವತ್ತು ನಮ್ಮ ಸರ್ಕಾರ ಇವೆಲ್ಲವನ್ನೂ ನೋಡಿಕೊಂಡು ಕೈಕಟ್ಟಿಕೊಂಡು ಕುಳಿತುಕೊಳ್ಳುವಂತಹ ಒಂದು ಪ್ರಯತ್ನ ಮಾಡುತ್ತಿದೆ. ಬೆಂಗಳೂರಿನಲ್ಲಿ ಹತ್ತಾರು ಸಾವಿರಕ್ಕೂ ಹೆಚ್ಚು ಹಣವನ್ನು ಕೊಟ್ಟು ಬಾಡಿಗೆ ಕೊಟ್ಟು ಬಹಳ ಜನನಿಬಿಡ ಪ್ರದೇಶದಲ್ಲಿ ಈ ಚಟುವಟಿಕೆಗಳನ್ನು ನಡೆಸುವಂತಹವರು ಇದ್ದಾರೆ ಎನ್ನುವಂತಹ ಮಾಹಿತಿ ತಮಗೆ ಗೊತ್ತಿದೆ. 2003ರಲ್ಲಿ ಲಷ್ಕರ್ ತೋಹಿಬಾದ ನಾಯಕ ಫೈಜಲ್‌ಖಾನ್ ಈ ಮುಂಬೈ ಪೊಲೀಸ್ ಗುಂಡಿಗೆ ಬಲಿಯಾದಾಗ ಅವನಿಗೆ ಬೆಂಗಳೂರಿನ ಸಂಪರ್ಕ ಇತ್ತು ಎನ್ನುವಂತಾದ್ದು ತನಿಖೆಯಿಂದ ಗೊತ್ತಾಗಿದೆ. ಬೆಂಗಳೂರಿನ ಯುವಕರನ್ನು ಈ ಭಯೋತ್ಪಾದಕ ಚಟುವಟಿಕೆಗೆ ತೊಡಗಿಸುತ್ತಿರುವಂತಾದ್ದು, ಪ್ರೇರಣೆ ನೀಡುತ್ತಿರುವಂತಾದ್ದು ಮಾಹಿತಿಗಳು ಸಿಗುತ್ತಿದೆ. 2002ರಲ್ಲಿ ತಮಿಳುನಾಡಿಗೆ ಸೇರಿದ 13 ಜನ ಉಗ್ರರನ್ನು ಬೆಂಗಳೂರಿನಲ್ಲಿ ಬಂಧನ ಆಯಿತು, ಆ ಸಮಯದಲ್ಲಿ ಎಂ.ಎಸ್.ರಾಮಯ್ಯ ಲೇ ಔಟ್‌ನಲ್ಲಿ ಹಿಮಾಮ್ ಆಲಿ ಮತ್ತು ಇತರ ನಾಲ್ವರು ಪೊಲೀಸ್ ಧಾಳಿಯಲ್ಲಿ ಹತ್ಯೆಯಾದರು. ಆದ್ದರಿಂದ ಇವತ್ತು ಬೆಂಗಳೂರು ಕರಾವಳಿ ಪ್ರದೇಶ ರಕ್ಷಣೆ ಇಲ್ಲದೇ ಇರುವಂತಹ ಒಂದು ಪರಿಸ್ಥಿತಿಯಲ್ಲಿ ಬಂದಿದೆ. ಮೊನ್ನೆ ನಗರಕ್ಕೆ ಬಂದಂತಹ ರೈಲಿನಲ್ಲಿ ಶಸ್ತ್ರಾಸ್ತ್ರದ ಒಂದು ಸೂಟ್‌ಕೇಸ್ ಸಿಕ್ಕಿತು. ಅಂದರೆ ಇದೆಲ್ಲವೂ ಬೆಂಗಳೂರು ಒಂದು ದೇಶದ್ರೋಹಿ ಚಟುವಟಿಕೆಗೆ ಒಂದು ಸುರಕ್ಷಿತ ತಾಣವಾಗಿದೆ ಎನ್ನುವುದು ಸ್ಪಷ್ಟವಾಗುತ್ತಿದೆ. ಗೂಢಾಚಾರ ಇಲಾಖೆ ಬಿಗಿ ಮಾಡಲಿಲ್ಲ. ಬೆಂಗಳೂರಿಗೆ ಬರುವಂತಹ ಅಪರಿಚಿತರ ಮೇಲೆ ನಿಗಾ ಇಡುತ್ತಿಲ್ಲ. ಐಟಿ ಸಂಸ್ಥೆಗಳನ್ನು ಸ್ಫೋಟ ಮಾಡುವಂತಹ ವಾತಾವರಣದ ಗುರಿ ಇದೆ ಎನ್ನುವ ಮಾಹಿತಿಗಳು ಸಿಕ್ಕಿದೆ. ನಮ್ಮ ಪೊಲೀಸ್‌ನವರು ಈ ಉಗ್ರರನ್ನು, ದೇಶದ್ರೋಹಿಗಳನ್ನು ಬಂಧಿಸುವುದಕ್ಕೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ

ಎಷ್ಟು ಶಕ್ತರಿದ್ದಾರೆ, ಎಷ್ಟೊಂದು ಕಳಕಳಿ ಇದೆ, ಆ ಪೊಲಿಟಿಕಲ್ ವಿಲ್ ಇದೆ ಎನ್ನುವುದು ಅನುಮಾನಕ್ಕೆ ಆಸ್ಪದವಾಗಿದೆ ಕಾನೂನು ಸುವ್ಯವಸ್ಥೆ ರಾಜ್ಯದಲ್ಲಿ ಸಂಪೂರ್ಣ ಹದಗೆಟ್ಟಿದೆ. ಇಂತಹ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿರುವ ಸಂದರ್ಭದಲ್ಲಿ, ನಮ್ಮ ಇತರೆ ಎಲ್ಲಾ ಸದಸ್ಯರು ಮಾತನಾಡುತ್ತಾರೆ. ನಾನು ಒಂದನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ, ನೀವು ಟಾಪ್ ಪೊಲೀಸ್ ಆಫೀಸರ್ಸ್ ಮೇಲೆ ಈ ಜವಾಬ್ದಾರಿಯನ್ನು ತಾವು ಹೊರಿಸುತ್ತೀರಾ? ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಅವರು ಡಿಜಿ ಇರಬಹುದು, ಪೊಲೀಸ್ ಕಮೀಷನರ್ ಇರಬಹುದು, ಐಜಿ ಇರಬಹುದು, ಇಂತಹ ಘಟನಾವಳಿಗಳನ್ನು ಬಂದೋಬಸ್ತಿನಲ್ಲಿಡಬೇಕಾದ ಟಾಪ್ ಮೋಸ್ಟ್ ಪೊಲೀಸ್ ಅಧಿಕಾರಿಗಳು ಬೇರೆ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿದ್ದಾರಾ? ಪಕ್ಷದ ಕಾರ್ಯಕರ್ತರನ್ನು ಬೆಳೆಸುವುದಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದೀರಾ? ಒಂದು ರೀತಿಯಾಗಿ ನಿಮ್ಮ ಪೊಲೀಸ್ ಇಲಾಖೆ ಸಂಪೂರ್ಣವಾಗಿ ಫೇಲ್ ಆಗಿರುವ ಈ ಸಂದರ್ಭದಲ್ಲಿ, ಈ ರಾಜ್ಯದಲ್ಲಿ ಆತಂಕಕಾರಿಯಾದ ಬೆಳವಣಿಗೆಯಾಗಿರುವಂತಹ ಈ ಸಂದರ್ಭದಲ್ಲಿ, ಆ ಟಾಪ್‌ಮೋಸ್ಟ್ ಪೊಲೀಸ್ ಆಫೀಸರ್ಸ್ ಮೇಲೆ ರೆಸ್ಪಾನ್ಸಿಬಲಿಟಿ ಫಿಕ್ಸ್ ಮಾಡಿ ಕ್ರಮ ತೆಗೆದುಕೊಳ್ಳದೆ ಇದ್ದರೆ, ಬಹುಶಃ ಕೆಳಗಡೆ ಇರುವ ಸಾಮಾನ್ಯ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು, ಇದನ್ನು ಸರಿಪಡಿಸಬಹುದೆಂದು ನನಗೇನೂ ಅನಿಸುವುದಿಲ್ಲ. ನೂರಾರು ಘಟನೆಗಳಿವೆ ಬಹುಶಃ ಎರಡು ದಿವಸ ಚರ್ಚೆ ಮಾಡುವಷ್ಟು ಮಾಹಿತಿ ಇದೆ, ನಿಮ್ಮ ಇಲಾಖೆಯವರಿಗೂ ಅದು ಗೊತ್ತಿದೆ. ಆದರೆ ಆ ಪೊಲಿಟಿಕಲ್ ವಿಲ್ ಇದೆಯಾ? ಇವತ್ತು ನಿಮಗೇನು ಅನಿಸುವುದಿಲ್ಲವೇನೂ? ಬೆಂಗಳೂರಿನ ಸುತ್ತಮುತ್ತ ಭಯಾನಕ ವಾತಾವರಣ, ವಿಧಾನಮಂಡಲದ ಅಧಿವೇಶನ ಪ್ರಾರಂಭವಾದ ಎರಡನೇ ದಿವಸ ಇಲ್ಲಿಗೆ ಕಾರ್ಯಕಲಾಪಗಳಿಗೆ ನಾವು ಬರಬೇಕಾದರೆ ಬರುವಂತಹ ಜನ ಆತಂಕದಿಂದ, ಭಯದಿಂದ ಇಲ್ಲಿಗೆ ಬರುವಂತಹ ಒಂದು ಪರಿಸ್ಥಿತಿ, ನಾವು ಶಾಸಕರು, ಪೊಲೀಸರ ಬಂದೋಬಸ್ತಿನಲ್ಲಿ, ರಕ್ಷಣೆಯಲ್ಲಿ ಓಡಾಡುವಂತಹ ಪರಿಸ್ಥಿತಿ, ಮೊನ್ನೆ ನಾನು ಮಂಗಳೂರಿನಿಂದ ಶಿವಮೊಗ್ಗಕ್ಕೆ ಬರಬೇಕಾದರೆ, ಚಿಕ್ಕಮಗಳೂರು ಜಿಲ್ಲೆಯ ಆ ಭಾಗದಲ್ಲಿ ನಕ್ಸಲೀಯ ಚಟುವಟಿಕೆ ಇದೆ ರಾತ್ರಿ ಪ್ರಯಾಣ ಮಾಡಬಾರದೆಂದು 150 ಕಿಲೋಮೀಟರ್ ಬಳಸಿಕೊಂಡು ಕದ್ದು ನಾನು ಪೊಲೀಸ್ ರಕ್ಷಣೆಯಲ್ಲಿ ನಾನು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರಕ್ಕೆ ಹೋಗಬೇಕಾಯಿತು. ಈ ರೀತಿಯ ಒಂದು ವಾತಾವರಣ ಇರಬೇಕಾದರೆ, ನಿಮ್ಮ ಸರ್ಕಾರ ಕೈಕಟ್ಟಿಕೊಂಡು ಕುಳಿತಿದೆ, ಪೊಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ, ಗೃಹ ಇಲಾಖೆ ಸಂಪೂರ್ಣ ವಿಫಲವಾಗಿದೆ ಮುಖ್ಯಮಂತ್ರಿಗಳಿಗೆ ಈ ಕಡೆಗೆ ಗಮನಕೊಡಲು ಬಿಡುವಿಲ್ಲ. ಈ ರೀತಿಯ ಒಂದು ಪರಿಸ್ಥಿತಿ ಇದ್ದರೆ ಬಹುಶಃ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಒಂದು ಸರ್ಕಾರದ ಕರ್ತವ್ಯವೇನಿದೆ ಅದನ್ನು ಬಿಟ್ಟು, ಉಳಿದೆಲ್ಲಾ ಕೆಲಸವನ್ನು ಗೃಹ ಇಲಾಖೆಯ ಪೊಲೀಸ್ ಅಧಿಕಾರಿಗಳು ಮಾಡುತ್ತಿದ್ದಾರೆ ಇದಕ್ಕೆ ನೀವೇ ಜವಾಬ್ದಾರರು ಎಂದು ನಾನು ನೇರ ಆರೋಪ ಮಾಡಿ, ಇದನ್ನು ಸರಿಪಡಿಸುವುದರ ಕಡೆಗೆ ಗಮನ ಕೊಡಿ, ನಮ್ಮ ಟಾಪ್‌ಮೋಸ್ಟ್ ಪೊಲೀಸ್ ಅಧಿಕಾರಿಗಳ ಹಿಂದಿನ ಮಾಹಿತಿಯನ್ನು ತೆಗೆದು ನೋಡಿದರೆ, ಅನೇಕ ವಿವರಗಳು ನಿಮಗೆ ಸಿಗುತ್ತದೆ ಏಕೋ ಏನೋ ಯಾವುದೋ ಮುಲಾಜಿಗೆ ಸಿಲುಕಿ ಕೈಕಟ್ಟಿಕೊಂಡು ನೀವು ಕುಳಿತಿದ್ದೀರಿ. ಸರ್ಕಾರಗಳು ಬರುತ್ತವೆ ಹೋಗುತ್ತವೆ ಆದರೆ ಅಧಿಕಾರಿಗಳು ಶಾಶ್ವತವಾಗಿ ಸರ್ವೀಸ್ ಪೂರ್ಣ ಅಲ್ಲಿ ಕುಳಿತಿರುವಂತಹ ಸಂದರ್ಭದಲ್ಲಿ ಈ ರೀತಿಯ ಚಟುವಟಿಕೆಗೆ ಪರೋಕ್ಷವಾಗಿ ಅಪರಾಧಿಗಳಿಗೆ ಕುಮ್ಮಕ್ಕು ಕೊಟ್ಟು, ಅಪರಾಧಿಗಳು ನಿಮ್ಮ ಸುತ್ತಮುತ್ತ ಇದ್ದಾರೆ. ಟಾಪ್ ಪೊಲೀಸ್

ಅಧಿಕಾರಿಗಳೆ ಇವರ ಜೊತೆ ಶಾಮೀಲಾಗಿದ್ದಾರೆ. ಯುನಿವರ್ಸಿಟಿಯ ಪ್ರೊಫೆಸರ್ಸ್‌ಗಳೇ ಇವರ ಜೊತೆ ಕೈ ಜೋಡಿಸಿದ್ದಾರೆ ಇದೆಲ್ಲಾ ಗೊತ್ತಿದ್ದು ನೀವು ಕೈಕಟ್ಟಿಕೊಂಡು ಕುಳಿತುಕೊಳ್ಳುವುದು ಅಕ್ಷಮ್ಯ ಅಪರಾಧ, ಈ ನಾಡಿನ ಜನತೆಗೆ ಮಾಡುತ್ತಿರುವ ದ್ರೋಹ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗಲಾದರೂ ಬಿಗಿ ಕ್ರಮ ತೆಗೆದುಕೊಂಡು ಇದನ್ನು ಹತ್ತಿಕ್ಕುವಂತಹ, ರಾಜ್ಯದಲ್ಲಿ ಹದಗೆಟ್ಟಿರುವ ಕಾನೂನು ಸುವ್ಯವಸ್ಥೆಯನ್ನು ಸರಿಪಡಿಸುವ ಕಡೆ ಸರ್ಕಾರ ತೀವ್ರವಾದ ಗಮನವನ್ನು ಕೊಡಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಸರ್ಕಾರದ ಮೇಲೆ ವಿಶ್ವಾಸವಿಲ್ಲವೆಂದು ಸೂಚನೆಯನ್ನು ಕೊಟ್ಟು ಈ ಚರ್ಚೆಯನ್ನು ಆರಂಭ ಮಾಡಬೇಕಾಗಿತ್ತು ಎಂಬುದು ನನ್ನ ಭಾವನೆ. ಆದರೆ ಅದು ಬಹಳ ಪ್ರಿ ಮೆಚ್ಯುರ್ ಆಗುತ್ತದೆ, ಹಾಗಾಗಿ ಅದನ್ನು ಒಂದು ಅಡ್ಜರ್ನ್ಮೆಂಟ್ ಮೋಷನ್‌ನಲ್ಲಿ ರೈಸ್ ಮಾಡೋಣವೆಂದು ಮಾತನಾಡಿ ಇದನ್ನು ಇಲ್ಲಿ ಎತ್ತಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ನಾನು ಮತ್ತು ನಮ್ಮ ಪಕ್ಷದವರು ವೆಂಕಟಮ್ಮನಹಳ್ಳಿಗೆ ಹೋಗಿ ಬಂದಿದ್ದೇವೆ. ವೆಂಕಟಮ್ಮನಹಳ್ಳಿಯಲ್ಲಿ ಏನು ನಡೆಯಿತೆಂಬುದನ್ನು ಸರ್ಕಾರದ ಮಟ್ಟದಲ್ಲಿ ಎಲ್ಲೂ ವಿಶ್ಲೇಷಣೆ ಮಾಡಿದ್ದು ನನಗೆ ಕಾಣಲಿಲ್ಲ. ತುಮಕೂರು ಜಿಲ್ಲೆಯ ಗಡಿಭಾಗದ ಆಂಧ್ರ ಪ್ರದೇಶದ ಆ ಭಾಗದಲ್ಲಿ ರೆಡ್ಡಿ ಮುತ್ತೆಲ್ಲಪ್ಪನವರ ಕಾಲದಿಂದ ಹಿಡಿದು, ಈವರೆಗೆ ಇಂತಹ ಆತಂಕಕಾರಿ ಘಟನೆಗಳು ನಡೆಯುತ್ತಲೇ ಇವೆ. ಅದು ನಕ್ಸಲರ, ಮಾವೋವಾದಿಗಳ, ಎಲ್‌ಟಿಟಿಗಳ ನಾನು ಆಳಕ್ಕೆ ಹೋಗಿ ಮಾತನಾಡುವುದಕ್ಕೆ ಇಚ್ಛೆ ಪಡುವುದಿಲ್ಲ. ಈ ಘಟನೆಗೆ ಮಾವೋವಾದಿ ಪಕ್ಷದವರು ಕಾರಣರೆಂದು ಅವರು ಕಾಗದ ಬರೆದಿದ್ದಾರೆ, ದುರ್ದೈವವೆಂದರೆ ಅವರು ಬೆಂಗಳೂರಿನಲ್ಲಿ ಬೇಸ್ ಆಗಿದ್ದಾರೆ. ನಿಮ್ಮ ಯಾವುದೇ ಘಟನೆಯನ್ನು ಒಪ್ಪಿಕೊಂಡು ಇದನ್ನು ಮಾಡಿದವರು ನಾವೇ ಎಂದು ಹೇಳುವ ಜನ ಬೆಂಗಳೂರಿನಿಂದಲೇ ಪತ್ರವ್ಯವಹಾರವನ್ನು ಮಾಡುತ್ತಿದ್ದಾರೆ. ರಾಜೀವ್ ಗಾಂಧಿಯವರನ್ನು ಕೊಂದವರನ್ನು ಹಿಡಿಯಬೇಕಾದರೆ ಬೆಂಗಳೂರಿಗೆ ಬಂದು ಹಿಡಿಯಬೇಕಾಗುತ್ತದೆ. ವೆಂಕಟಮ್ಮನಹಳ್ಳಿಯಲ್ಲಿ ಪೊಲೀಸ್‌ನವರನ್ನು ಹತ್ಯೆ ಮಾಡಿದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಅದು ಧಾರುಣವಾದ ಹತ್ಯೆ. ಚೈನಾ ಗಡಿಯಲ್ಲಿ ನಮ್ಮ ಸೈನಿಕರನ್ನು ನಿಲ್ಲಿಸಿಬಿಟ್ಟು, ಚೀನದವರ ಕೈಯಲ್ಲಿ ಗನ್ ಕೊಟ್ಟು ಹೇಗೆ ಹೊಡಿಸಿದರು, ಅದೇ ರೀತಿಯಾಗಿ ಪೊಲೀಸ್‌ನವರನ್ನು, ಆ ಗಡಿಯಲ್ಲಿ ನಿಲ್ಲಿಸಿ ಸರ್ಕಾರದವರು ಹೊಡಿಸಿದರು. ಅವರ ಮನೆಯ ಹೆಣ್ಣುಮಕ್ಕಳ ಕತೆ ಕೇಳಿದರೆ, ಯಾರೂ ಶಾಸಕರಾಗಿರುವುದಕ್ಕೆ ಗೌರವ ಬರುವುದಿಲ್ಲ, ಹೊಟ್ಟೆಪಾಡಿಗೆ ನೌಕರಿಗೆ ಸೇರಿಕೊಂಡು ಗಂಡನನ್ನು ಕಳೆದುಕೊಂಡವೆಲ್ಲಾ ಸ್ವಾಮಿ ಎಂದು ಅವರು ಹೇಳುತ್ತಾರೆ. ನೀವು 3 ಲಕ್ಷ 5 ಲಕ್ಷ ರೂಪಾಯಿ ಪರಿಹಾರವನ್ನು ಅವರಿಗೆ ಕೊಡಬಹುದು, ನೀವು ಯಾವ ಸ್ಥಿತಿಯಲ್ಲಿ ಅಲ್ಲಿ ಪೊಲೀಸ್‌ನವರನ್ನು ನಿಲ್ಲಿಸಿದ್ದೀರೆಂಬುದು ಬಹಳ ಮುಖ್ಯ. ನಾಗರೀಕ ಜಗತ್ತು ಇವತ್ತು ಬಳಸುತ್ತಿರುವ ಯಾವುದೇ ಶಸ್ತ್ರಾಸ್ತ್ರ ಇಲ್ಲ. ಒಂದೇ ಒಂದು ಎಕೆ 47 ಗನ್ ಬಿಟ್ಟರೆ, ಇನ್ನು ಮ್ಯೂಸಿಯಂನಲ್ಲಿಡಬೇಕಾದ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕೊಟ್ಟು, ಒಂದು ಸಾರ್ವಜನಿಕವಾಗಿರುವ ಶಾಲೆಯಲ್ಲಿ, 30–32 ಜನ ಪೊಲೀಸ್‌ರನ್ನು ನೀವು ಬೀದಿಯಲ್ಲಿ ನಿಲ್ಲಿಸಿದ್ದೀರಿ, ಬ್ಯಾರಕೇಡ್ ಇಲ್ಲ, ಅವರು ಒಳಗಡೆ ನಿಂತುಕೊಂಡು ಅವರ ರಕ್ಷಣೆ ಮಾಡಿಕೊಂಡು ಯಾರು ಬರುತ್ತಾರೆ ಏನು ಮಾಡುತ್ತಾರೆಂದು ಕಾಯುವಂತಿಲ್ಲ, ಇಂಟಲಿಜೆನ್ಸ್

ಶೇಕಡ 100 ಇಲ್ಲವೇ ಇಲ್ಲ. ಅಲ್ಲಿ ಜನ ಎಷ್ಟು ನಿಸ್ತೇಜರಾಗಿದ್ದಾರೆಂದರೆ, ನಾವು ಊರಿನೊಳಗೆಲ್ಲಾ ಹೋದೆವು ಸರ್, ಏನ್ರಿ ಇಷ್ಟೆಲ್ಲಾ ನಡೆಯುತ್ತಿದ್ದರು, ಮಾನವೀಯತೆ ಅಲ್ಲವೇ, ಹೊರಗೆ ನೀವು ಬರಬೇಕಾಗಿತ್ತಲ್ಲವಾ, ರಕ್ಷಣೆ ಕೊಡಬಾರದಿತ್ತಾ ಪೊಲೀಸ್‌ನವರು ಮನುಷ್ಯರಲ್ಲವೇ ನಮಗೋಸ್ಕರ ಸೇವೆ ಮಾಡುತ್ತಿಲ್ಲವೇ ಎಂದು ಕೇಳಿದರೆ ಏನು ಹೇಳುತ್ತಾರೆಂದರೆ, 6.30 ರಿಂದ 8.30 ರವರೆಗೆ ನಕ್ಸಲೆಟ್ಸ್ ಟಾಮ್ ಟಾಮ್ ಹಾಕಿದರು. ನಿಮಗೂ ನಮಗೂ ಯಾವುದೇ ದ್ವೇಷವಿಲ್ಲ. ದಯಮಾಡಿ ಯಾರೂ ಆಚೆ ಬರಬೇಡಿ, ನಮಗೇನು ಬೇಕೋ ಅದನ್ನು ಮಾಡಿಕೊಂಡು ಹೋಗುತ್ತೇವೆಂದರು. ಆ ಟಾಮ್ ಟಾಮ್ ಸದ್ದು ಕೇಳಿಸಿತು. ಮತ್ತೆ ಕೇಳಿದ್ದು, ದೀಪಾವಳಿ ಹಬ್ಬದ ಸಮಯದಲ್ಲಿ ಪಟಾಕಿ ಹೊಡೆಯುತ್ತಾರಲ್ಲಾ ಆ ತರಹ ಸದ್ದು ಕೇಳಿಸಿದ್ದು ಬಿಟ್ಟರೆ, ನಾವು ಬೆಳಿಗ್ಗೆ 6.00 ಗಂಟೆವರೆಗೆ ಆಚೆಗೆ ಬರಲಿಲ್ಲ. ಆಳಕ್ಕೆ ಇಳಿದು ಏತಕ್ಕೆ ಈ ಸ್ಥಿತಿ ನಿರ್ಮಾಣವಾಗಿದೆ ಎಂದು ನಾವು ಕೇಳಿದೆವು ಸರ್ ಅಲ್ಲಿ ಒಂದು ಸಣ್ಣ ಸಮಸ್ಯೆ ಇತ್ತು. ಅರ್ರ್ಯಾಕ್ ಅನ್ನು ನಮ್ಮ ಊರಿನಲ್ಲಿ ಮಾರಬೇಡಿ ಎಂದು ಅವರು ಕೇಳಿದ್ದರು. ಅರ್ರ್ಯಾಕ್ ಮಾರಬೇಡಿ ಎನ್ನುವವರಿಗೆ, ಬಂದೂಕುಗಳನ್ನು ಪೊಲೀಸ್‌ನವರಿಗೆ ಕೊಟ್ಟು, ಒಬ್ಬ ಎಕ್ಸೈಸ್ ಕಂಟ್ರಾಕ್ಟರ್ ಪರವಾಗಿ ಪೊಲೀಸ್‌ನವರನ್ನು ಜೀಪ್‌ನಲ್ಲಿ ಕಳುಹಿಸಿ ಅರ್ರ್ಯಾಕ್ ಅನ್ನು ಇವರು ಮಾರಿಸಿದರು. ಅವರು ಅಲ್ಲಿ ಪೊಲೀಸ್‌ನವರು ರಕ್ಷಣೆ ಕೊಡುವುದು ಅರ್ರ್ಯಾಕ್‌ನವನಿಗಲ್ಲ, ನಮಗೆ ಕೊಡುವುದಕ್ಕಿರುವುದು ಎಂದು ಅರ್ರ್ಯಾಕನ್ನು ಕಿತ್ತುಕೊಂಡರು. ಬಂದೂಕು ಕಿತ್ತುಕೊಂಡು ನಾವು ಈ ದೇಶದ ಜನರೆಂದು ಹೇಳಿ ಕಳುಹಿಸಿಬಿಟ್ಟರು. ಪೊಲೀಸ್ ಇನ್‌ಸ್ಪೆಕ್ಟರ್ ಹೋಗಿಬಿಟ್ಟು ಮನೆ ಮನೆಯಲ್ಲಿರುವವರನ್ನೆಲ್ಲಾ ಎಬ್ಬಿಸಿ ಹೊಡೆದಿದ್ದಾರೆ. ಮನೆ ಮನೆಯಲ್ಲಿರುವವರನ್ನು ಎಳೆದುಕೊಂಡು ಬಂದು ಬಂದೂಕು ಕಿತ್ತುಕೊಂಡವರ್ಯಾರು ಹೇಳಿ ಎಂದು ಹೊಡೆದಿದ್ದಾರೆ. ಈ ದುಸ್ಸಾಹಸಕ್ಕೆ ಅವರು ಕೈ ಹಾಕಿದ್ದಕ್ಕೆ, ಇವತ್ತು ಪೊಲೀಸ್‌ನವರು ನಗ್ನರಾಗಿ ಸಾಯುತ್ತಿದ್ದರೂ ಅಳುವ ಸಾರ್ವಜನಿಕರೊಬ್ಬರೂ ಇಲ್ಲ. ಒಬ್ಬರಿಗೂ ಅವರ ಸಹವಾಸ ಬೇಕಾಗಿಲ್ಲ. ಏಕೆಂದರೆ ಎಲ್ಲರ ಮನೆಯವರನ್ನು ಹೊಡೆದರು. ಈ ಚಟುವಟಿಕೆಯಲ್ಲಿ ಯಾರಿದ್ದಾರೆ ಎಂದು ತಿಳಿದುಕೊಳ್ಳಲು ನಾವು ಪ್ರಯತ್ನ ಮಾಡಿದೆವು. ಆ ಊರಿನಿಂದ ಹೊರಗೆ ಹೋಗಿರುವವರು ಮೂರು ಜನರಿದ್ದಾರೆ. ಒಂದೇ ಕುಟುಂಬದ ಇಬ್ಬರು ಗಂಡಸರು ಒಬ್ಬರು ಹೆಂಗಸರು ಇದ್ದಾರೆ. ಏಕೆ ಹೋದರೆಂದರೆ? ಒಬ್ಬ ಹುಡುಗನನ್ನು ಚೆನ್ನಾಗಿ ಹೊಡೆದು ಎಳೆದುಕೊಂಡು ಹೋದರು. ನೀನು ನಕ್ಸಲೀಯರ ಗುಂಪಿಗೆ ಸೇರಿದ್ದೀಯಾ ನಿನ್ನಿಂದಲೇ ಇದೆಲ್ಲಾ ಆಗಿರುವುದೆಂದು. ಅವನು ಹೋದ ಮೇಲೆ ಅವನ ಹೆಂಡತಿ ಗಂಡನನ್ನು ಅನುಸರಿಸಿ ಹೋಗಲೇಬೇಕಾಯಿತು. ಅದೊಂದು ಪರಿಶಿಷ್ಟ ಜಾತಿಯ ಕುಟುಂಬ. ಪಿ.ಯು.ಸಿ. ಓದುತ್ತಿದ್ದ ಅವನ ತಮ್ಮನು, ಏನೂ ಕಾಣದವನನ್ನು ನಿನಗೆಲ್ಲಾ ಗೊತ್ತು ಹೇಳೆಂದು ಯದ್ವಾ ತದ್ವಾ ಹೊಡೆದುಬಿಟ್ಟರು ಅನಿವಾರ್ಯವಾಗಿ ಇವತ್ತು ಆ ಗುಂಪನ್ನು ಅವನು ಹೋಗಿ ಸೇರಿಕೊಂಡಿದ್ದಾನೆ. ಅನಿವಾರ್ಯವಾಗಿ, ಬೇರೆ ಏನೂ ಕಾರಣವಿಲ್ಲ. ಇದು ಬಿಟ್ಟರೆ ವೆಂಕಟಮ್ಮನಹಳ್ಳಿಗೂ, ಈ ನಕ್ಸಲ್ ಚಟುವಟಿಕೆಗೂ ಯಾವುದೇ ರೀತಿಯ ಸಂಬಂಧವಿಲ್ಲ. ಆ ಊರಿನಲ್ಲಿ ನಕ್ಸಲೈಟ್ಸ್ ಇಲ್ಲ, ಮಾವೋವಾದಿಗಳೂ ಇಲ್ಲ, ಟೆರರಿಸ್ಟೂ ಇಲ್ಲ, ಎಲ್‌ಟಿಟಿಇಗಳು ಇಲ್ಲ, ಆ ಊರಿನಲ್ಲಿರುವವರು ಅತ್ಯಂತ ಬಡತನದಲ್ಲಿ ಬದುಕಿರುವಂತಹ ದಟ್ಟದಾರಿದ್ರ್ಯದ ಹಿಂದೂಸ್ಥಾನದ ಜನಗಳು. ಇದು ನೋವಿನ ಸಂಗತಿ. ಆ ಊರಿನಲ್ಲಿ ಶೋಷಣೆ ಹೇಗೆ ನಡೆದಿದೆ? ನಿಮ್ಮ ಆಡಳಿತದಲ್ಲಿ ಎಲ್ಲಾ ಊರಿನಲ್ಲಿ ನಡೆದಿದೆ ಬಿಡಿ ನಿಮ್ಮ ಆಡಳಿತದಲ್ಲಿ ಆದರೆ ಆ ಊರಿನ ಬಗ್ಗೆ ಹೇಳಬೇಕೆಂದರೆ, ಯಾರೋ ಹೆಸರಿಗೆ ಮನೆ ಕೊಟ್ಟರೆ, ಆ ಮನೆ ಕೊಡಿಸಿದ ದಳ್ಳಾಳಿ ಅವನೇ ಮನೆಗಳನ್ನು

ಇಟ್ಟುಕೊಂಡಿದ್ದಾನೆ ಫಲಾನುಭವಿ ಆ ಮನೆಗೆ ಬಾಡಿಗೆ ಕೊಟ್ಟುಕೊಂಡು ಇವತ್ತು ವಾಸ ಮಾಡುತ್ತಿದ್ದಾನೆ. ನಾನು ವೆಂಕಟಮ್ಮನಹಳ್ಳಿಗೆ ಪ್ರಸ್ತುತವಾಗಿ ಒಂದು ಸೂಕ್ಷ್ಮವಾದ ವಿಷಯವನ್ನು ನಾನು ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ, ವೆಂಕಟಮ್ಮನಹಳ್ಳಿ ಕರ್ನಾಟಕದಲ್ಲಿರುವುದಾದರೆ, ಒಂದು ನೂರು ಮೀಟರ್ ಧಾಟಿದರೆ ಆಂಧ್ರಪ್ರದೇಶ ಆರಂಭವಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿಗಳು ಗಮನ ಕೊಡಬೇಕು. ವೆಂಕಟಮ್ಮನಹಳ್ಳಿಗೆ ಸೇರಿದ ಸುಮಾರು ಜಮೀನು ಕೃಷಿ ಒಡೆತನಕ್ಕೆ ಸೇರಿದ ಜಮೀನು ಆಂಧ್ರಪ್ರದೇಶದಲ್ಲಿದೆ. ಅದು ಆಂಧ್ರಪ್ರದೇಶದಲ್ಲಿರುವ ಒಂದೇ ಕಾರಣಕ್ಕೆ ಇವರು ಅಲ್ಲಿ ಸಾಲ ತೆಗೆದುಕೊಳ್ಳುವಂತಿಲ್ಲ. ಆ ಜಮೀನನ್ನು ಅಭಿವೃದ್ಧಿ ಮಾಡುವಂತಿಲ್ಲ, ಯಾರೇ ಒಬ್ಬ ಆಫೀಸರ್ ಕೂತು ಇವತ್ತು ಅವರಿಗೆ ಇವರಿಗೆ ಲಯಸನ್ ಮಾಡಿ ಈ ಸ್ಥಿತಿಯನ್ನು ನಿಭಾಯಿಸುವುದಕ್ಕೆ ಪ್ರಯತ್ನ ಮಾಡಲೇ ಇಲ್ಲ. ಪೊಲೀಸ್‌ನವರು ಏತಕ್ಕೆ ಇಡುತ್ತೇವೆಂದರೆ ಬಾರ್ಡರ್‌ನಿಂದ ನಕ್ಸಲೇಟ್ಸ್ ನಮ್ಮ ರಾಜ್ಯದೊಳಗೆ ಬರಬಾರದೆಂದು. ಏಕೆ? ಅದು ನಮಗೆ ಗೊತ್ತು, ಪಕ್ಕದಲ್ಲಿ, ಇವತ್ತು ಆಂಧ್ರಪ್ರದೇಶದ ಪೆನುಗೊಂಡ ಕ್ಷೇತ್ರದ ಶಾಸಕರಾದ ಪೆರಿಟಾಲ್ ರವಿಯವರು ಏನು ಕೊಲೆಯಾದರು, ಅವರ ಸ್ವಂತ ಊರು ಅಲ್ಲಿಂದ 3 ಕಿಲೋ ಮೀಟರ್ ದೂರದಲ್ಲಿದೆ. ಆ ಬಾರ್ಡರ್ ಧಾಟಿದರೆ, ನಂತರದ ಊರೇ ಅವರದು. ಪೆನುಗೊಂಡ ಕ್ಷೇತ್ರ, ಅನಂತಪುರ ಜಿಲ್ಲೆ ನಕ್ಸಲೇಟ್ ಚಟುವಟಿಕೆಗೆ ಬಹಳ ಹೆಸರುವಾಸಿಯಾದ ಜಿಲ್ಲೆ ಮತ್ತೆ ಅವರು ಪೆನುಗೊಂಡ ಕ್ಷೇತ್ರದಿಂದ ಮಡಕಸಿರಾಕ್ಕೆ ಬರಬೇಕೆಂದರೆ ನಮ್ಮ ಪಾವಗಡವನ್ನು ಧಾಟಿ ಬರಬೇಕು. ಅವರು ಎಲ್ಲಾ ಚಟುವಟಿಕೆಗಳಿಗೆ ಪಾವಗಡವನ್ನು ಇವತ್ತು ಬಳಸಲೇಬೇಕಾದಂತಹ ಪರಿಸ್ಥಿತಿ ಇದೆ. ಹಿಂದೆ ಒಂದ್ಸಲ ಪಾವಗಡದಲ್ಲಿ ಏನಾಗಿತ್ತು? ಮುತ್ತು ರತ್ನ ಸಿಗುತ್ತವೆ, ಗುಡ್ಡಗಳಲ್ಲೆಲ್ಲ ಏನೇನೋ ಬಹಳ ಬಾಚಿಕೊಂಡು ಹೋಗುತ್ತಾ ಇದ್ದಾರೆ ಅಂತ ಅಡಗುತಾಣಗಳನ್ನು ಮಾಡಿಕೊಂಡಿದ್ದರು ಅಲ್ಲಿ. ಜನವೆಲ್ಲಾ ನುಗ್ಗುವರು ಅಲ್ಲಿಗೆ. ಜಾತ್ರೆ ಸಾರ್ ಮಣ್ಣು ಬಾಚುವುದಕ್ಕೆ, ಇಲ್ಲೇನೋ ಇದೆ ಅಂತ ಹೇಳಿ ಆಗಿನಿಂದ ಪಾವಗಡದಲ್ಲಿ ಒಂದು ದೊಡ್ಡ ಹುನ್ನಾರ ಸ್ಟಾರ್ಟಾಯಿತು. ಅಲ್ಲಿ ಕೂಡ ಎರಡು ವರ್ಗ. ಜಾಸ್ತಿ ಜಮೀನಿರುವವರ ಒಂದು ವರ್ಗ, ಜಮೀನಿಲ್ಲದಿದ್ದವರದೊಂದು ವರ್ಗ. ಹೇಗೆ ಆಂಧ್ರ ಪ್ರದೇಶದಲ್ಲಿ ಕಮ್ಮರೆಡ್ಡಿ ಅಂತ ನಾವು ಕರೆಯುತ್ತೇವೆ ಹಾಗೆ ಆ ಭಾಗದಲ್ಲಿ ಅದೇ ಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಅಂತಹ ವೈಷಮ್ಯ, ಅಥವಾ ಕರ್ನಾಟಕ ಸರ್ಕಾರಕ್ಕೆ ಆಘಾತಕಾರಿ ಸ್ಥಿತಿ ನಿರ್ಮಾಣ ಮಾಡಬೇಕು ಅಂತ ಆ ಭಾಗದ ಜನಗಳಿಗಿಲ್ಲ. ಅಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳ ಪ್ರತಿಬಿಂಬ ಅಲ್ಲಿ ಇಲ್ಲ. ಅಲ್ಲಿ ನಡೆಯುವುದರ ಪರಿಣಾಮ ಇಲ್ಲಿ ರಿಫ್ಲೆಕ್ಟ್ ಆಗುತ್ತದೆ. ಇದನ್ನು ತಡೆಯುವುದಕ್ಕೆ ಅಂತ ಇವರೊಂದು ಪೊಲೀಸ್ ಚಾಕಿಯನ್ನು ಅಲ್ಲಿ ಹಾಕಿದರು. 31, 32 ಜನ ಪೊಲೀಸರನ್ನು ಹಾಕಿ ಬೇರೆ ಎಲ್ಲೂ ಪೋಸ್ಟಿಂಗ್ ಕೊಡಲಾರದವರನ್ನು ತೆಗೆದುಕೊಂಡು ಹೋಗಿ ಅಲ್ಲಿ ಕೂರಿಸಿಬಿಟ್ಟು, ಸಾರ್ ಈಗೇನಾದರೂ ನೀವು ಸೈರನ್ ಕೊಟ್ಟು ಓಡು ಅಂದರೆ ಅವರ ಜೀಪ್ ಜೊತೆ ನಾವು ಓಡಬಹುದು. ಖಂಡಿತ ಓಡಬಹುದು ಸ್ವಲ್ಪ ಚೆನ್ನಾಗಿ ಪ್ರಾಕ್ಟೀಸ್ ಇರುವವರು ಆ ಪೊಲೀಸ್ ಜೀಪ್‌ಗಳ ಜೊತೆ ಓಡಬಹುದು. ಅಂಥಾ ಸ್ಥಿತಿಯಲ್ಲಿರುವ ಜೀಪ್‌ಗಳು, ಎತ್ತಿಕೊಂಡು ಅವನ್ನೆಲ್ಲಾ ಮಾಲಿಶ್ ಮಾಡಿ ನಾನು ಟ್ರಿಗರ್ ಆನ್ ಮಾಡುತ್ತೇನೆ ಅನ್ನುವುದರೊಳಗೆ ಸತ್ತುಹೋಗುವಂತಹ ಬಂದೂಕುಗಳು ಇಂಥ ವ್ಯವಸ್ಥೆಯನ್ನು ನೀವು ಅಲ್ಲಿಗೆ ಕೊಟ್ಟು ಕೊಂದಿರಿ ಪೊಲೀಸರನ್ನು. ಅಮಾಯಕರನ್ನು ನಿಲ್ಲಿಸಿಕೊಂಡು ಕೊಂದಿದ್ದಾರೆ ಸಾರ್. ಬಯಲಲ್ಲಿ ನಿಲ್ಲಿಸಿಕೊಂಡು ಹೊಡೆದಿದ್ದಾರೆ 300 ಜನ, ನಾಚಿಕೇಗೇಡಿನ ಸಂಗತಿ ಇವತ್ತು ಸರ್ಕಾರಕ್ಕೆ ಇದು. ಒಬ್ಬ ಮಂತ್ರಿ ಹೋಗಿಲ್ಲ. ವೆಂಕಟಮ್ಮನಹಳ್ಳಿಗೆ

ಇದುವರೆಗೆ. ಉಸ್ತುವಾರಿ ಸಚಿವರು ಪಾವಗಡಕ್ಕೆ ಹೋಗಿ ವಾಪಸ್ ಬಂದರು. ಅಥವಾ ಹೋಗಿದ್ದಕ್ಕೆ ದಾಖಲೆ ಇದ್ದರೆ ಹೇಳಿ ನಾನು ನನ್ನ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ, ಪಾವಗಡ ಐಬಿಯಲ್ಲಿ ಕೂತುಕೊಂಡು ಒಂದು ಪ್ರೆಸ್‌ಮೀಟ್ ಆಯಿತು, ಆ ಊರಿಗೆ ಸರ್ಕಾರದ ಪರವಾಗಿ ಯಾರಾದರೂ ಹೋಗಿದ್ದಾರಾ ಅಂದರೆ ಸೊನ್ನೆ, ಎರಡನೆಯದು ಈ ಪೊಲೀಸರಿಗೆ ಯಾರಾದರೂ ಇವತ್ತು ಸಮಾಧಾನದ ಮಾತು ಆಡಿದ್ದಾರಾ ಅಂತ ಕೇಳಬೇಕಾಗುತ್ತದೆ. ಆ ಕುಟುಂಬಗಳು ಎಲ್ಲೆಲ್ಲಿವೆ ಒಬ್ಬರನ್ನೂ ನಾವು ಗುರ್ತಿಸಲಿಲ್ಲ. ಪರಿಹಾರ ಘೋಷಣೆ ಮಾಡಿರುವುದು ಬಿಟ್ಟರೆ ಕರೆದು ನಾವು ಎರಡು ಒಳ್ಳೆ ಮಾತು ಆಡಲೇ ಇಲ್ಲ ನಾಳೆ ಈ ಪೊಲೀಸರಿಂದ ನೀವು ರಾಜ್ಯದ ರಕ್ಷಣೆ ಹೇಗೆ ನಿರೀಕ್ಷಿಸುತ್ತೀರಿ? ನಾಳೆ ಇದೇ ಪೊಲೀಸ್ ಫೋರ್ಸ್ ನಾನು ಈ ರಾಜ್ಯಕ್ಕೋಸ್ಕರ ತ್ಯಾಗ ಮಾಡಬೇಕು ಅಂತ ಫೈಟ್ ಮಾಡುವುದಕ್ಕೆ ನೀವೇನು ಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ? ಮತ್ತೆ ಇಂತಹ ಕಡೆ ಒಂದು ಶಸ್ತ್ರಸಜ್ಜಿತ ಪ್ಲೆಟೂನ್ ಹಾಕಬೇಕಾದರೆ ಟ್ರೈನಿಂಗ್ ಕೊಟ್ಟಿದ್ದೀರಾ? ಅವರಿಗೇನಾದರೂ ಇನ್‌ಫರ್ಮೆಂಟ್ಸ್ ಇಟ್ಟಿದ್ದೀರಾ? ಅವರಿಗೇನಾದರೂ ಇಂಟೆಲಿಜೆನ್ಸ್ ವ್ಯವಸ್ಥೆ ಕೊಟ್ಟಿದ್ದೀರಾ? ಸುಮ್ಮನೆ ನಿಂತುಕೊಳ್ಳುವುದು ಹೊಡೆಸಿಕೊಳ್ಳುವುದು ಸಾಯುವುದು ಪುಣ್ಯ ಸಾರ್, ಒಂದೇ ಒಂದು ಟ್ರೈನಿಂಗ್ ಇತ್ತು ಅವರು ಕದ್ದು ಓಡಿ ಹೋಗುವುದು ಹೆಂಚು ತಕ್ಕೊಂಡು ಬಂದೂಕ ಹೊಡೆದರೆ ಆ ಆರ್‌ಸಿಸಿ ಬಿಲ್ಡಿಂಗಿನಿಂದ ಬಂದು ಬುಲೆಟ್ ಇವರಿಗೆ ತಗಲುತ್ತದೆ ಎಂಬ ಸ್ಥಿತಿಯಲ್ಲಿರುವ ಕಟ್ಟಡವದು, ನಾನು ಫೋಟೋನೆಲ್ಲಾ ಇಟ್ಟುಕೊಂಡಿದ್ದೆ ಅಕಸ್ಮಾತ್ ಮರೆತುಬಂದೆ ಅಧ್ಯಕ್ಷರೇ, ನಿಮಗೆ ಕಳುಹಿಸಿ ಕೊಡುತ್ತೇನೆ. ಇಂಥ ಹೀನ ಸ್ಥಿತಿಗೆ ನಮ್ಮ ಪೊಲೀಸರನ್ನು ಅವರ ಕಾರ್ಯಪಡೆಯನ್ನು ತಳ್ಳಿದ್ದಕ್ಕೆ ಸರ್ಕಾರ ಬಿಟ್ಟು ಇನ್ಯಾರೂ ಕಾರಣ ಅಲ್ಲ ಅಧ್ಯಕ್ಷರೇ You have created the whole mess in Venkatammanahally. ಸರ್ಕಾರವೇ ಒಂದು ಸೃಷ್ಟಿ ಮಾಡಿದಂತಹ ಸ್ಥಿತಿ ಬಿಟ್ಟರೆ ಸತ್ಯವಾಗಿಯೂ ಕರ್ನಾಟಕದ ಜನಗಳಲ್ಲಾಗಲಿ ಆಂಧ್ರ ಪ್ರದೇಶದ ಜನಗಳಲ್ಲಾಗಲಿ ಅಲ್ಲಿ ನಕ್ಸಲ್‌ಸ್ಥಿತಿ ಆಗುವಂತಹ ಸ್ಥಿತೀನೇ ಇಲ್ಲ. ಎರಡನೆಯದು ಸಿದ್ಧಾಂತ, ನಾನು ಅದಕ್ಕೆ ಹೋಗುವುದಿಲ್ಲ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳುತ್ತಿದ್ದರು, ನಕ್ಸಲೈಟ್ಸ್ ಬೇರೆ, ಮಾವೋವಾದಿಗಳೇ ಬೇರೆ, ನಕ್ಸಲೈಟ್ ಅಂತ ಹೇಳಿಕೊಂಡು ಬೇರೆಯವರು ಮಾಡುವ ಎಲ್ಲಾ ಕೃತ್ಯಗಳನ್ನು ನಕ್ಸಲ್ ಗುಂಪಿಗೆ ಹಾಕುವುದು ಗೌರವವಲ್ಲ ಅಂತ. ನಾನೂ ಕೂಡ ಒಪ್ಪುತ್ತೇನೆ. ಇದೆಲ್ಲ ತಾತ್ವಿಕ ಸಿದ್ಧಾಂತ. ನಕ್ಸಲೈಟ್ಸ್ ಯಾರದೋ ಪ್ರಾಣ ಕೊಡುವುದಕ್ಕೆ ಆಗಿರುವ ಗುಂಪು ಅಂತ ನಾವೆಲ್ಲೂ ಓದಲಿಲ್ಲ. ಶೋಷಣೆ ತಪ್ಪಿಸಬೇಕು. ದಬ್ಬಾಳಿಕೆ ತಪ್ಪಿಸಬೇಕು, ಯಾರ್‍ಯಾರು ಇನ್ನೂ ರಾಜಮಹರಾಜರ ಹಾಗೆ ವರ್ತಿಸುತ್ತಾ ಇನ್ಯಾರನ್ನೋ ಗುಲಾಮರಂತೆ ಇಟ್ಟುಕೊಂಡಿರುವವರ ಸ್ವಲ್ಪ ಅಂತರ ಕಡಿಮೆ ಮಾಡಬೇಕು ಅಂತ ಹೊರಟ್ಟಂಥ ಒಂದು ಸಿದ್ಧಾಂತ ಅಂತ ನಾನು ತಿಳಿದುಕೊಂಡಿದ್ದೇನೆ. ಈಗ ನಡೆಯುತ್ತಿರುವ ಕೃತ್ಯ ಎಲ್ಲಾ anti-social elements in the State, ಯಾರದೋ ಹೆಸರಲ್ಲಿ ಮಾಡಬಾರದ ಕೆಲಸ ಮಾಡಿ ಏನೋ ಒಂದು ಲೇಬಲ್ ಹಾಕಿಕೊಂಡು ಬಿಡುವುದು. ಇದರ ಪರಿಣಾಮ ಏನಾಗಿದೆ ಸಾರ್ ಇವತ್ತು ಜನಗಳು ಆಚೆ ಬರುವುದಕ್ಕೆ ಆಗುತ್ತಾ ಇಲ್ಲ. ಪೊಲೀಸರೇ ಹೇಳುತ್ತಾರೆ ನೀವು ಅಲ್ಲಿಗೆ ಹೋಗಬೇಡಿ, ಅಲ್ಲಿ ರಕ್ಷಣೆ ಇಲ್ಲ, ನೆಲಬಾಂಬ್ ಇಟ್ಟಿದ್ದಾರೆ, ಎಲ್ಲೋ ಕೂತುಕೊಂಡು ಹಚ್ಚುತ್ತಾರೆ, ರಿಮೋಟ್ ಕಂಟ್ರೋಲಿದೆ. ಯಾವುದೇ ಕಾರಣಕ್ಕೆ ಕರ್ನಾಟಕ ಪೊಲೀಸ್ ವೆಂಕಟಮ್ಮನಹಳ್ಳಿ ಧಾಟಿ ಪಕ್ಕದ ಗಡಿ ಒಳಕ್ಕೆ ಹೋಗುವ ಸ್ಥಿತಿ ಇಲ್ಲ ಅಧ್ಯಕ್ಷರೇ. ಪೊಲೀಸರನ್ನು ಕಂಡರೆ ಯಾವತ್ತು ಮುಗಿಸಿ ಬಿಡುತ್ತಾರೋ ಜನ ಎಂಬ ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡಿಕೊಂಡಿದ್ದೇವೆ ಎನ್ನುವ ಭಾವನೆ

ಬಂದಿದೆ. ನನಗೆ ಕೂಡ ಹೋಗಕೂಡದು ಅಂದರು, ನಾನು ಹೋಗಿದ್ದೆ ಸನ್ಮಾನ್ಯ ಪೆರಿಟಾಲ ರವಿ ಮನೆಗೆ ನಾನು ಹೋಗಿಬಂದೆ, ಅವರು ಶಾಸಕರು, ಸತ್ತು ಹೋಗಿದ್ದಾರೆ ಅಲ್ಲಿ ಹೋದ ಮೇಲೆ ಹೋಗಬೇಕು ಅಂತ. ನನಗೆ ಬಹಳ ಹೇಳಿದರು, ಹೋಗಬೇಡಿ ಹೋಗಬೇಡಿ ಅಲ್ಲಿ ಬಹಳ ಏನೋ ಆಗಬಾರದ್ದು ಆಗಿಬಿಡುತ್ತದೆ ನಿಮಗೆ ಅಂತ. ಏನು ಆಗುತ್ತ ರೀ ಅಂದೆ, ಅಲ್ಲಿನ ಜನ ನನಗೆ ಬಂದು ಹೇಳಿದರು ನೀವು ಹೋಗಿ ಸಾರ್, ಏನೂ ಆಗುವುದಿಲ್ಲ ಈ ಸ್ಥಿತೀನ ನಿರ್ಮಾಣ ಮಾಡಿಕೊಂಡು ಕೂತುಬಿಟ್ಟಿದ್ದಾರೆ ಇಲ್ಲಿ. ನೂರಾರು ಜನ ಹೇಳಿದರು, ನೀವು ಹೋಗಿ ಸಾರ್, ನಾವು ಬರುತ್ತೇವೆ ನಿಮಗೇನಾದರೂ ಆದರೆ ಅಂದರು. ಏನೂ ಆಗಲಿಲ್ಲ. ಅವರ ಮನೆಗೆ ಹೋಗಿ ಫಸ್ಟ್‌ಕ್ಲಾಸಾಗಿ ಕಾಫಿ ಕುಡಿದುಕೊಂಡು ಬಂದೆ. ಅಲ್ಲೇನಾಗಿದೆ? ಆ ರಾಜ್ಯದ ವಿಷಯ ಮಾತನಾಡುವುದು ಬೇಡ. ಅಲ್ಲಿ ನಡೆದ ಘಟನೆಗೆ ಪೋಲೀಸರ ಮೇಲೆ ಅಲ್ಲಿ ಜನರಿಗೆ ರೋಷ ಬಂದುಬಿಟ್ಟಿದೆ. ಅದನ್ನೇ ನಮ್ಮ ರಾಜ್ಯದ ಪೋಲೀಸರು ದೊಡ್ಡದು ಮಾಡಿಕೊಂಡು ನೀವು ಹೋಗುವ ಹಾಗಿಲ್ಲ ಹೊಡೆದು ಹಾಕುತ್ತಾರೆ ಅನ್ನುತ್ತಾರೆ. ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ಮಾಡಬಾರದ ರೀತಿಯಲ್ಲಿ ಆ ಊರಲ್ಲಿ ವರ್ತಿಸಿದ್ದಾರೆ, ಸಿಕ್ಕಸಿಕ್ಕ ಹುಡುಗರನ್ನು ಹಿಡಿದುಕೊಂಡು ಹೋಗಿ ಹೊಡೆದ ಅವನ್ನ ಎಳೆದುಕೊಂಡು ಹೋಗಿ ಹೊಡೆದಿದ್ದಾರೆ, ಹೀಗಾದರೆ ನಾವು ಹೇಗೆ ಸಹಕರಿಸುವುದು ಎಂದು ಜನ ಕೇಳುತ್ತಾರೆ ಪಾಪ ಈಗ ಬಂದಿರುವ ಸರ್ಕಲ್ ಇನ್ಸ್‌ಪೆಕ್ಟರನ್ನು ಅಷ್ಟೇ ಪ್ರಮಾಣದಲ್ಲಿ ಜನ ಒಪ್ಪುತ್ತಾರೆ. ಇಲ್ಲ, ಇಲ್ಲ, ಕಲ್ಲಪ್ಪ ಅಂತ ಇನ್‌ಸ್ಪೆಕ್ಟರ್ ಬಂದಿದ್ದಾರೆ, ಆತನಂಥವರೇ ಇದ್ದರೆ ನಮಗೆ ಯಾವ ಬಾಧೇನೂ ಇರ್ಲಿಲ್ಲ. ಹಿಂದಿದ್ದ ಇನ್‌ಸ್ಪೆಕ್ಟರ್ ನಮಗೆ ಕೊಟ್ಟಿರುವ ಕಿರುಕುಳ ಸಹಿಸಿಕೊಂಡು ನಾವು ಯಾವ ರೀತಿ ಪೋಲೀಸರಿಗೆ ಸಪೋರ್ಟ್ ಮಾಡಲಿ ಅಂತ. ಇದನ್ನು ಸರ್ಕಾರ ಚಿಂತನೆ ಮಾಡಲಿ. ಸಾರ್ ಇದಕ್ಕೆ ಎರಡನ್ನು ನಾನು ಸಜೆಸ್ಟ್ ಮಾಡುತ್ತೇನೆ. ಒಂದು, ಜನಗಳ ಮೂಲಭೂತ ಸಮಸ್ಯೆ ಅರ್ಥ ಮಾಡಿಕೊಂಡು ಪರಿಹಾರ ಕಂಡುಹಿಡಿಯಬೇಕು. ಹೇಗಾದರೂ ಕಂಡುಹಿಡಿಯಬೇಕು. ಸಾರ್ ಆ ಭಾಗದಲ್ಲಿ ವಾಸ ಮಾಡುವವರ ಬಗ್ಗೆ ನಿಮಗೆ ಕಲ್ಪನೆ ಇರಬೇಕು. ಒಂದು ಬ್ಯಾಂಕ್‌ನಲ್ಲಿ ಇವತ್ತು ಅವರು ಸಾಲ ತೆಗೆದುಕೊಳ್ಳುವ ಹಾಗಿಲ್ಲ. ಸಿಗುವುದಿಲ್ಲ. ನಿನ್ನ ಹೋಲ್ಡಿಂಗ್ ಆಂಧ್ರದಲ್ಲಿದೆ ಮನೆ ಕರ್ನಾಟಕದಲ್ಲಿದೆ, ಸಹಕಾರ ಬ್ಯಾಂಕ್ ವ್ಯಾಪ್ತಿಗೇ ಬರುವುದಿಲ್ಲ, ಕಮರ್ಶಿಯಲ್ ಬ್ಯಾಂಕಿನವರು ನಿಮ್ಮದು ಗ್ಯಾರಂಟಿ ಇಲ್ಲ, ಲಿಟಿಗೇಶನ್ ಪ್ರಾಬ್ಲಂ ಆಗುತ್ತದೆ. ಯಾವ ಕೋರ್ಟಿನಲ್ಲಿ ಕೇಸ್ ಹಾಕುವುದು ಅಂತ ಲೋನೇ ಕೊಡುವುದಿಲ್ಲ. ಲೋನ್ ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲ, ಇನ್ನು ಬಯಲು ಪ್ರದೇಶ ಮಳೆ ಬೀಳುವುದಿಲ್ಲ. ಶೇಂಗಾ ಬಿಟ್ಟು ಬೇರೆ ಬೆಳೆ ಹಾಕುವುದಕ್ಕೆ ಆಗುವುದಿಲ್ಲ. ಅವರಿಗೆ ವರ್ಷದಲ್ಲಿ ಎರಡರಿಂದ ಮೂರು ಒಳ್ಳೆ ಬೆಳೆ ಬರಲೇ ಇಲ್ಲ ಶಾಲೆಯನ್ನು ಇವತ್ತು ಪೋಲೀಸರಿಗೆ ವಹಿಸಿಕೊಟ್ಟ ಘನತೆವೆತ್ತ ಸರ್ಕಾರದವರು ಇಡೀ ಶಾಲೆಯನ್ನು ಒಂದು ದೇವಸ್ಥಾನದಲ್ಲಿ ನಡೆಸುತ್ತಿದ್ದಾರೆ. ಅಲ್ಲಿ ಕೂಡ ಇಂಥವರು ಬರಬೇಕು ಇಂಥವರು ಬರಬಾರದು ಅನ್ನುವ ಸ್ಥಿತಿ ನಿರ್ಮಾಣ ಮಾಡಿದ್ದಾರೆ. ಶಾಲೆಯನ್ನು ದೇವಸ್ಥಾನದಲ್ಲಿ ನಡೆಸಿದರೆ ಎಲ್ಲಾ ಜನಾಂಗದವರು ಹೋಗುವುದಕ್ಕೆ ಆಗುತ್ತದಾ ಅಂತ ತಾವೇ ತೀರ್ಮಾನಿಸಿ. ಅವರು ಹೇಳಿದರು, ನೋಡಿ ಶಾಲೆ ಎಲ್ಲಿ ನಡೆಯುತ್ತಿದೆ, ಅಲ್ಲಿದ್ದ ಟೀಚರನ್ನು ಕರೆದು ನಿಲ್ಲಿಸಿಕೊಂಡು ಫೋಟೋ ತೆಗೆಸಿದ್ದಾಯ್ತು. ಇದು ವೆಂಕಟಮ್ಮನಹಳ್ಳಿಯಲ್ಲಿ ನಾವೇ ಮಾಡಿದಂತಹ ಸೃಷ್ಟಿ. ನಾನು ಒತ್ತಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ವೆಂಕಟಮ್ಮನಹಳ್ಳಿ ಜನಕ್ಕೂ ಈ ಘಟನೆಗೂ ಯಾವುದೇ ರೀತಿ ನೇರ ಸಂಬಂಧ ಇಲ್ಲ ನೀವೇನು ಪೋಲೀಸ್ ಚೌಕಿ ಹಾಕಿದ್ದಿರಿ ನೀವು ಎಲ್ಲೋ ಯಾರನ್ನೋ ಇಬ್ಬರನ್ನು ಚಟುವಟಿಕೆ ಮಾಡುತ್ತಾ ಇದ್ದಾರೆ ಅಂತ ಹೊಡೆದಿರಿ ಆ ಸೇಡಿಗೆ

ಸಾರಾಸಗಟು ಬಯಲಲ್ಲಿ ನಿಂತಿದ್ದವರನ್ನು 200–300 ಜನ ಬಂದು ಹೊಡೆದುಹೋದರು. ಇನ್ನೊಂದು ಮಾಹಿತಿ ಪ್ರಕಾರ ವೆಪನ್ಸ್ ಕದಿಯುವುದು, ಯಾವುದೋ ಸಿಕ್ಕಲಿ ಹೊತ್ತುಕೊಂಡು ಹೋಗಬೇಕು ಒಂದು ಕಾರಣ, ಬಂದೂಕ ಎತ್ತಿಕೊಳ್ಳಿ ಅಂತ ಅವರು ಸಿಕ್ಕಿ ಸಿಕ್ಕಿದ್ದನ್ನೆಲ್ಲಾ ಬಾಚಿಕೊಂಡು ಹೋಗಿ ಬಿಟ್ಟಿದ್ದಾರೆ ಅಧ್ಯಕ್ಷರೇ ಏಳೆಂಟು ವ್ಯಾನಿನಲ್ಲಿ ಬಂದು. ದಾರಿಯಲ್ಲಿ ಹೋಗುತ್ತಿದ್ದವರನ್ನು ನಿಲ್ಲಿಸಿ ವ್ಯಾನನ್ನು ಕಿತ್ತುಕೊಂಡು ಬಂದು. ಈ ಎಲ್ಲಾ ಇಂಟೆಲಿಜೆನ್ಸ್ ನಿಮಗಿರಲಿಲ್ಲವಾ? ಯಾಕೆ ಅಲ್ಲಿದ್ದ ಇಬ್ಬರು ಜವಾಬ್ದಾರಿಯುತ ಪೊಲೀಸ್ ಆಫೀಸರು ರಜೆ ಮೇಲೆ ಏಕೆ ಹೋಗಿದ್ದರು? ಈ ತನಿಖೆ ಆಗಬೇಕಾಗಿತ್ತು. ಇದರ ವರದಿ ಇಲ್ಲಿ ಬರಬೇಕಾಗಿತ್ತು, ಬರಲಿಲ್ಲ. ನಮ್ಮ ಮಾಹಿತಿ ಪ್ರಕಾರ ಎರಡು ದಿವಸ ಮೊದಲೇ ಅಲ್ಲಿ ಏನೋ ಒಂದು ಟೆನ್‌ಷನ್ ಕ್ರಿಯೇಟಾಗುತ್ತದೆ ಎಂಬ ವರದಿ ಇತ್ತು. ಎರಡು ದಿವಸ ಮೊದಲೇ ಅಲ್ಲಿನ ಜನ ನಮ್ಮ ಊರಿನಲ್ಲಿ ಏನೋ ಆಗಬಾರದು ಆಗುತ್ತದೆ ಎಂಬ ಭೀತಿಯಲ್ಲಿದ್ದರು. ಗಾಬರಿಯಲ್ಲಿದ್ದರು. ಬಾಗಿಲು ತೆರೆದು ಆಚೆ ಬರುವ ಸ್ಥಿತಿಯಲ್ಲೇ ಇರಲಿಲ್ಲ ಯಾರಿಗೆ ಏನಾಗುತ್ತದೋ ಅಂತ. ಇಷ್ಟೆಲ್ಲ ಇದ್ದೂ ಇಂಟೆಲಿಜೆನ್ಸನ್ನು ನೂರಕ್ಕೆ ನೂರು ನಿಷ್ಕ್ರಿಯೆ ಮಾಡಿಸಿ ಇವತ್ತೊಂದು ಧಾರುಣ ಕೃತ್ಯ ನನ್ನ ಜಿಲ್ಲೆಯಲ್ಲಿ ನಡೆದಿರುವುದಕ್ಕೆ ನಾನು ನಿಜವಾಗಿಯೂ ತಲೆಬಾಗಿಸಬೇಕಾಗುತ್ತದೆ, ಇದು ಇಡೀ ವೆಂಕಟಮ್ಮನಹಳ್ಳಿ ಜನಗಳು ತಲೆತಗ್ಗಿಸುತ್ತಿದ್ದಾರೆ ಇವತ್ತು. ನಮ್ಮೂರಿಗೆ ಇದ್ಯಾಕೆ ಈ ಸ್ಥಿತಿ ಬಂತು, ನಾವು ಯಾವ ಪಾಪ ಮಾಡಿದ್ದೇವೆ ನಮಗೂ ನಕ್ಸಲ್ ಚಟುವಟಿಕೆಗೂ ಏನು ಸಂಬಂಧ ಅಂತ ಜನ ಕೇಳುತ್ತಾರೆ, ಏನೂ ಸಂಬಂಧವೇ ಇಲ್ಲ ಯಾವುದೋ ಸಮಸ್ಯೆಯನ್ನು ಕೊಂಡುತಂದು ಇವತ್ತು ಅಲ್ಲಿ ಹಾಕಿಕೊಂಡಿದ್ದೇವೆ, ನನ್ನದು ಸರ್ಕಾರಕ್ಕೆ ಒಂದು ಭಿನ್ನಹ. ದಯಮಾಡಿ ಪೊಲೀಸರನ್ನು ಏನು ಹಾಕಿದ್ದೀರಿ ಅವರ ಹೆಂಡತಿ ಮಕ್ಕಳಿಗೆ 60, 70 ವರ್ಷದ ತನಕ ಗಂಡಂದಿರು ಬದುಕುತ್ತಾರೆ ಅನ್ನುವ ಗ್ಯಾರಂಟಿ ಸೃಷ್ಟಿ ಮಾಡಿರಿ. ಅವರೂ ಮನುಷ್ಯರು, ಅವರೇನು ಮೃಗಗಳಾ? ಏನು ಬೇಕಾದರೂ ಆಗಲಿ, ಬೆಂಕಿಗೆ ನೂಕಿ ಬಂದೂಕಿನೆದುರು ನಿಂತುಕೊಳ್ಳಿ ನಿಮಗೆ ನಾವು ಪರಿಹಾರ ಕೊಡುತ್ತೇವೆ ಎಂಬ ಹೀನ ಸ್ಥಿತಿಗೆ ಸರ್ಕಾರಗಳು ಬರಬಾರದು. ಇಷ್ಟಾದರೂ ಸುಸಜ್ಜಿತ ವೆಹಿಕಲ್ ಇಲ್ಲ, ಇಷ್ಟಾದರೂ ಇವತ್ತಿನ ಕಾಲಕ್ಕೆ ತಕ್ಕ ವೆಪನ್ಸ್ ಇಲ್ಲ ಇಷ್ಟಾದರೂ ಅವರು ಮರೆಯಲ್ಲಿ ನಿಂತು ಯಾರು ಬರುತ್ತಾರೆ ಹೋಗುತ್ತಾರೆ ಅಂತ ನೋಡುವಂತಹ ಸ್ಥಿತಿ ವೆಂಕಟಮ್ಮನ ಹಳ್ಳಿಯಲ್ಲಿ ಅಥವಾ ಆಂಧ್ರ ಗಡಿಯಲ್ಲಿ ಸರ್ಕಾರದವರು ನಿರ್ಮಾಣ ಮಾಡಿಲ್ಲ. ಇಷ್ಟಾದರೂ ನಕ್ಸಲೈಟ್ ಯಾರು? ಮಾವೋವಾದಿ ಯಾರು? ಎಂಎಲ್ಎ ಯಾರು? ಮಂತ್ರಿ ಯಾರು? ಅಂತ ಯಾರಿಗೂ ಅಲ್ಲಿ ಗೊತ್ತಾಗುತ್ತಿಲ್ಲ. ಬಸ್ ನಿಲ್ಲಿಸಿ ಎಳೆದುಕೊಂಡು ಬಂದು ಕೊಚ್ಚಿದಾಗಲೇ ನಾವು ಹುಷಾರಾಗಬೇಕಾಗಿತ್ತು. ಪಾವಗಡದಲ್ಲಿ ಒಂದು ಅಂಗಡಿಯಲ್ಲಿ ಬಾಗಿಲು ಹಾಕಿ ಕೊಂದಾಗಲೇ ನಾವು ಹುಷಾರಾಗಬೇಕಾಗಿತ್ತು. ಇದರ ವ್ಯಾಪಕ ವಿಸ್ತೀರ್ಣ ಹೇಗಾಗಿದೆ ಅಂದರೆ ಅಧ್ಯಕ್ಷರೇ, ಐದು ವರ್ಷದ ಹಿಂದೆ ಚಿಕ್ಕನಾಯ್ಕನಹಳ್ಳಿಯಲ್ಲಿ ಒಬ್ಬರು ಅರೆಸ್ಟಾದರು. ಎರಡು ವರ್ಷ ಅಲ್ಲಿ ಅವರು ಮನೆ ಮಾಡಿಕೊಂಡು ಪಾವಗಡದಲ್ಲಿನ ನಕ್ಸಲ್ ಚಟುವಟಿಕೆಯನ್ನು ಮಾನಿಟರ್ ಮಾಡಿದ್ದಾರೆ. ನನ್ನ ಗಮನಕ್ಕೆ ಬಂತು. ಇಲ್ಲಿ ಯಾರೋ ನಕ್ಸಲೈಟಿದ್ದಾನೆ ಇಲ್ಲಿಂದ ಭಾರಿ ಮದ್ದನ್ನು ತಯಾರು ಮಾಡಿ ಕಳುಹಿಸುತ್ತಿದ್ದಾರೆ ಸಿಡಿಮದ್ದು ಇದೆಲ್ಲಾ ನಡೀತಿದೆ ಅಂತ, ನನಗೇ ಗೊತ್ತಿಲ್ಲ, ಅಕಸ್ಮಾತ್ ನಮ್ಮ ಪೊಲೀಸರು ಅವನನ್ನು ಹಿಡಿದರು. ಅವತ್ತಿಂದ ನಾವು ಕಾಯ ಬೇಕಾಗಿದೆ. ಚಿಕ್ಕನಾಯ್ಕನಹಳ್ಳಿಯಲ್ಲಿ ಯಾರಿದ್ದಾರೆ ಸಿರಾದಲ್ಲಿ ಯಾರಿದ್ದಾರೆ ಮಧುಗಿರಿಯಲ್ಲಿ ಯಾರಿದ್ದಾರೆ ತುಮಕೂರು ಟೌನ್‌ನಲ್ಲಿ ಯಾರಿದ್ದಾರೆ ಅಂತ. ಮತ್ತೆ ಇದರ ಆಪರೇಷನ್ ಬೆಂಗಳೂರಿನಿಂದ ನಡೀತಾ ಇತ್ತು. ಇದು

ಹುಡುಗಾಟದ ಪ್ರಶ್ನೆಯಲ್ಲ, ಏನು ಅರಣ್ಯದಲ್ಲಿ ವೀರಪ್ಪನ್ ಅಂತ ಸೃಷ್ಟಿ ಮಾಡಿಕೊಂಡಿದ್ದೆವು ಇವತ್ತು ಬಯಲುಸೀಮೆ ಜನ ನಾವು ಬದುಕಲಾರದ ಸ್ಥಿತಿಗೆ ಬಂದುಬಿಟ್ಟಿದ್ದೇವೆ. ದಯಮಾಡಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಪಾವಗಡದ ವೆಂಕಟಮ್ಮನಹಳ್ಳಿಯ ಬಗ್ಗೆ ಒಂದು ಸದನದ ಸಮಿತಿಯನ್ನು ತಾವು ನೇಮಕ ಮಾಡಬೇಕು. ವೆಂಕಟಮ್ಮನಹಳ್ಳಿಯಲ್ಲಿ ಆದ ಘಟನೆಗೆ ಯಾರ್ಯಾರು ಕಾರಣ, ಆ ಪೊಲೀಸರನ್ನು ನಿಷ್ಕ್ರಿಯ ಮಾಡುವುದಕ್ಕೆ ಯಾರ್ಯಾರು ಕಾರಣ ಎನ್ನುವ ಒಂದು ವರದಿ ಇಲ್ಲಿಗೆ ಬರಬೇಕು. ಪೊಲೀಸರೂ ಕೂಡ ಮನುಷ್ಯರು. ಆ ಒಂದು ಮಾನವೀಯ ದೃಷ್ಟಿಯಿಂದ ನಾವು ಅವರನ್ನು ನೋಡಬೇಕು. ಇನ್ನು ಇದನ್ನು ಬಿಟ್ಟು ಆಚೆಗೆ ಬಂದರೆ ಕರ್ನಾಟಕದಲ್ಲೇನಾದರೂ ಕೈಗಾರಿಕೆಗಳು prosper ಆಗುವುದಿದ್ದರೆ ಕರ್ನಾಟಕಕ್ಕೆ ಯಾರಾದರೂ ಇನ್‌ವೆಸ್ಟರ್ಸ್ ಬರುತ್ತಿದ್ದರೆ, ಕರ್ನಾಟಕಕ್ಕೆ ಯಾರಾದರೂ ಇಲ್ಲಿ ಬಂದು ಜೀವನ ಮಾಡಬಹುದು ಎಂದು ಆಸೆಯನ್ನು ಇಟ್ಟುಕೊಂಡು ಬರುತ್ತಿದ್ದರೆ, ಇಲ್ಲಿ ಕಾನೂನು ವ್ಯವಸ್ಥೆ ಚೆನ್ನಾಗಿತ್ತು ಎಂದು ಹೇಳಿ ಬರುತ್ತಿದ್ದರು. ಆದರೆ ಈಗ ಆ ಸ್ಥಿತಿ ಇಲ್ಲ. ಯಾರೇ ಪ್ರಮುಖ ಉದ್ಯಮಿ ಇಲ್ಲಿ ಬಂದು ಬಂಡವಾಳ ಉಪಯೋಗ ಮಾಡಬೇಕು, ಬಳಸಬೇಕು ಅಥವಾ ವಿನಿಯೋಗ ಮಾಡಬೇಕೆಂದರೆ ಇವತ್ತು ಸೆಕ್ಯೂರಿಟಿ ಬಗ್ಗೆ ಯೋಚನೆ ಮಾಡುವ ಸ್ಥಿತಿಗೆ ಬಂದಿದೆ. ನಾವೇ ಇದನ್ನು ನಿರ್ಮಾಣ ಮಾಡಿದ್ದೇವೆ. ಒಂದು, ಬೆಂಗಳೂರನ್ನು ಕಾರ್ಯಸ್ಥಾನ ಮಾಡಿದ್ದೇವೆ. ಒಂದು ಕಾಲದಲ್ಲಿ ಬೆಂಗಳೂರು ನಾರ್ಕಾಟಿಕ್ ಆಕ್ಟಿವಿಟೀಸ್ ಸೆಂಟರ್ ಆಗಿತ್ತು. ಇವತ್ತು 'ಬೆಂಗಳೂರು ಟೆರ್ರರಿಸಂ ಆಕ್ಟಿವಿಟೀಸ್ ಸೆಂಟರ್ ಆಗಿದೆ ಇವತ್ತು ಹದ್ದುಮೀರಿ ಹೋಗಿದೆ. ಯಾವುದೇ ಸರ್ಕಾರದ ಇಂಟೆಲಿಜೆನ್ಸ್‌ನ್ನು ಧಾಟಿ ಬೆಂಗಳೂರಿನಲ್ಲಿ ರೆಸಿಡೆನ್ಸಿಯಲ್ ಏರಿಯಾಗಳಲ್ಲಿ ಹಲವಾರು ಕೇಂದ್ರಗಳಲ್ಲಿ ಇಂಥ ಕಾರ್ಯಗಳು ನಡೆಯುತ್ತಿವೆ. ಬೆಂಗಳೂರಿನ ಯಾವ ಭಾಗದಲ್ಲಿ ಆಗುತ್ತಿದೆ, ಯಾವ ಭಾಗದಲ್ಲಿ ಆಗುತ್ತಿಲ್ಲ ಎಂದು ಸರ್ಕಾರದ ಬಗ್ಗೆ ಗುಪ್ತ ದಳದವರು ಹೇಳುವುದಕ್ಕೆ ಸಮರ್ಥರಾಗಿಲ್ಲ. ಬೆಂಗಳೂರು ಎಲ್ಲದಕ್ಕೂ ಸೆಂಟರ್ ಆಗಿದೆ. ಬೆಂಗಳೂರನ್ನು ಎಲ್ಲರೂ ಯಾವುದಕ್ಕೂ ಬೇಕಾದರೂ ಬಳಸಬಹುದು ಎನ್ನುವ ಸ್ಥಿತಿಯಾಗಿದೆ. ಬೆಂಗಳೂರು ಬೆಳೆಯುತ್ತಿರುವುದು ಬಿಟ್ಟರೆ ಬೆಂಗಳೂರಿನಲ್ಲಿ ಆಡಳಿತ ಬೆಳೆಯಿತು ಎಂದು ಹೇಳಿ ನಾವು ನಂಬುವುದಕ್ಕಾಗುವುದಿಲ್ಲ. ಇದು ಇಡೀ ದಕ್ಷಿಣ ಭಾರತಕ್ಕೆ ನಾಳೆ ಪಿಡುಗಾಗುತ್ತದೆ. ಇಲ್ಲಿಂದ ಎಲ್ಲಾ ಕಡೆಗೆ ಹೋಗಬಹುದು. ಇಲ್ಲಿಂದ ಚೆನ್ನೈಗೆ ಹೋಗುತ್ತದೆ. ಆಂಧ್ರಪ್ರದೇಶದ ಹೈದರಾಬಾದ್‌ಗೆ ಹೋಗುವುದಕ್ಕೆ ಇಲ್ಲಿಂದ ತ್ರಿವೇಂಡ್ರಮ್‌ಗೆ ಹೋಗುವುದಕ್ಕೆ ಇಲ್ಲಿಂದ ಗೋವಾಕ್ಕೆ ಹೋಗುವುದಕ್ಕೆ access ಇರುವುದರಿಂದ ಮತ್ತೆ ಮತ್ತೆ ನಿರ್ಭೀತವಾಗಿ ಪ್ರಯಾಣ ಮಾಡಬಹುದು ಎನ್ನುವ ಸ್ಥಿತಿಯನ್ನು ನಿರ್ಮಾಣ ಮಾಡಿಕೊಟ್ಟಿರುವುದರಿಂದ ಇವತ್ತಲ್ಲ ನಾಳೆ ಕರ್ನಾಟಕ ಒಂದು ಟೆರ್ರರಿಸ್ಟ್ ಸ್ಟೇಟ್ ಆಗುತ್ತದೆ. ಇದರಲ್ಲಿ ಎರಡು ಮಾತೇ ಇಲ್ಲ. ಎಲ್ಲಾ ಕಡೆಯವರು ಬಂದು ಇಲ್ಲಿ ವಸಾಹತುಗಳನ್ನು ಸ್ಥಾಪನೆ ಮಾಡಿಕೊಂಡು ಇಲ್ಲಿಂದ ಆಪರೇಟ್ ಮಾಡುವ ಸ್ಥಿತಿಯನ್ನು ನಾವು ನಿರ್ಮಾಣ ಮಾಡುತ್ತೇವೆ. ಖಂಡಿತವಾಗಿ ಈ ಸರ್ಕಾರ ನಿರ್ಮಾಣ ಮಾಡುತ್ತಿದೆ. ಇದಕ್ಕೆ ಮೊದಲೇ ತಾವು ಎಚ್ಚರಿಕೆಯನ್ನು ವಹಿಸಬೇಕಾಗಿತ್ತು. ಇದರ ಜೊತೆಗೆ ಅಧಿಕಾರಿಗಳು ಬಹಳ ಅವರಿಗೆ ಬೇಕಾದ ರೀತಿಯಲ್ಲಿ ವರ್ತನೆ ಮಾಡುವ ಸ್ಥಿತಿ ಕರ್ನಾಟಕದಲ್ಲಿ ಪ್ರಾರಂಭವಾಗಿದೆ. ನಾನು ಕೇಳಿದೆ, ಪಾವಗಡದಲ್ಲಿ ಇಂಥ ಸ್ಥಿತಿ ಇದೆ, ಅಡಿಷನಲ್ ಎಸ್.ಪಿ. ತುಮಕೂರಿಗೆ ಒಬ್ಬರು ಇದ್ದೀರಿ, ಏಕೆ ಅಲ್ಲಿ ಮೊಕ್ಕಾಂ ಮಾಡಬಾರದು ಎಂದು. ಯಾರೋ ಸಬ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್‌ನ್ನೋ ಕಳುಹಿಸಿ ನೀವು ಕುಳಿತುಕೊಳ್ಳುವ ಬದಲು ಸ್ಪಾಟ್‌ಗೆ ಹೋಗಿ ಡಿಷಿಷನನ್ನು ತೆಗೆದುಕೊಳ್ಳಬಾರದೇ ಎಂದು

ಕೇಳಿದೆ. ನಾನು ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ, ತುಮಕೂರಿನಲ್ಲಿರುವ ಅಡಿಷನಲ್ ಎಸ್‌ಪಿ ಅವರಿಗೆ ಎಕ್ಸ್‌ಟ್ರಾ ಫೋರ್ಸ್ ಕೊಡುವುದಿದ್ದರೆ ಬೇಡ. ಏಕೆ ನೀವು ಪಾವಗಡಕ್ಕೆ shift ಮಾಡುವುದಿಲ್ಲ. What is the job chart for the Additional Superintendent of Police in Tumkur? ಏನೂ ತೊಂದರೆ ಇಲ್ಲ ಸಾರ್. ಅಲ್ಲಿ ಮಾಡಿ. ಪಾವಗಡದಲ್ಲಿ ಮೊಕ್ಕಾಂ ಮಾಡಿಸಿ. ಅವರಿಗೊಂದಷ್ಟು ಫೋರ್ಸ್ ಕೊಡಿ. ಅವರಿಗೊಂದಿಷ್ಟು ಡಿಷಿಷನ್‌ಗಳನ್ನು ತೆಗೆದುಕೊಳ್ಳುವಂಥ ಪವರ್‌ನ್ನು ಕೊಡಿ. ಏನಾದರೂ ಇಂಥ ಸನ್ನಿವೇಶಗಳು ಸೃಷ್ಟಿಯಾದಾಗ. ಯಾರನ್ನು ಇವತ್ತು ಇನ್ಸ್‌ಪೆಕ್ಟರ್‌ಗಳು ಕಾಯುತ್ತಾ ಕುಳಿತುಕೊಳ್ಳಬೇಕು. ಅದನ್ನೇನಾದರೂ ನೀವು ತಕ್ಷಣ ಸುಧಾರಣೆ ಮಾಡಬೇಕು. ಇದನ್ನು ಬಿಟ್ಟು (ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಬಳಿ ಮೂರು–ನಾಲ್ಕು ಜನ ಮಾನ್ಯ ಮಂತ್ರಿಗಳು ಸುತ್ತುವರೆದು ಮಾತನಾಡುತ್ತಿದ್ದರು) ನೋಡಿ, ನಮ್ಮ ಸ್ಥಿತಿ. ಅಲ್ಲಿ ಟೆರರಿಸಂ ಬಗ್ಗೆ ಮಾತನಾಡಲಾ? ಇಲ್ಲಿಯದರ ಬಗ್ಗೆ ಮಾತನಾಡಲಾ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ನಿಮ್ಮ ಮೇಲೆ ಮೂರು ಜನ ಮಂತ್ರಿಗಳು ಧಾಳಿ ಮಾಡುತ್ತಿದ್ದಾರೆ. ರಕ್ಷಣೆ ಕೊಡುವವರ್‍ಯಾರು?

ಶ್ರೀ ಜೆ.ಸಿ.ಮಾಧುಸ್ವಾಮಿ : ನಿಮಗೆ ರಕ್ಷಣೆ ಇಲ್ಲ ಎಂದು ನಾವು ಇವತ್ತು ಅಧ್ಯಕ್ಷರಿಗೆ ಹೇಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಈಗ ನಾವು ರಕ್ಷಣೆಯನ್ನು ಕೊಡೋಣವೇ ಅಥವಾ ನಿಮಗೆ ಬೇರೆ ರಕ್ಷಕರು ಇದ್ದಾರಾ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವು ರಾಜ್ಯಕ್ಕೆ ರಕ್ಷಣೆ ಇಲ್ಲದ ಹಾಗೆ ಮಾಡಿದಿರಿ. ಶಾಸನಸಭೆಯೊಳಗೆ ನಿಮಗೆ ರಕ್ಷಣೆಯನ್ನು ನಾವು ಕೊಡಿಸಬೇಕಾಗಿದೆ ಮಾನ್ಯ ಅಧ್ಯಕ್ಷರನ್ನು ಕೇಳಿ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಕೇಳುತ್ತಿದ್ದೇನೆ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅದೇಗೆ? ನಿಮಗೆ ಹತ್ತು ಕಿವಿ ಇದೆಯಾ? ಆ ಕಡೆ ಕಿವಿ, ಈ ಕಡೆ ಕಿವಿ ಅವರೇ ಆಕ್ರಮಿಸಿಕೊಂಡುಬಿಟ್ಟಿದ್ದಾರೆ. ನನ್ನ ಮಾತನ್ನು ಬಾಯಿಂದ ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಬಹಳ ಕಷ್ಟ ನಿಮ್ಮದು. ಒಬ್ಬರು ಕಿವಿ ಹಿಡಿದುಕೊಳ್ಳುತ್ತಾರೆ. ಒಬ್ಬರು ಮೂಗು ಹಿಡಿದುಕೊಳ್ಳುತ್ತಾರೆ, ಒಬ್ಬರು ಕೈ ಹಿಡಿದುಕೊಳ್ಳುತ್ತಾರೆ. ನೀವು ಬಹಳ ಕಷ್ಟದಲ್ಲಿದ್ದೀರಿ. ಇಲ್ಲಾದರೂ ನಿಮ್ಮನ್ನು ಬಿಡುಗಡೆ ಮಾಡಿ ಎಂದು ಅವರಿಗೆ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಮಂತ್ರಿಗಳು. ಯಾವಾಗ ಬೇಕಾದರೂ ನಿಮ್ಮನ್ನು ಬಂದು ನೋಡಬಹುದು. ಅಂಥವರು ಶಾಸನಸಭೆಯಲ್ಲಿ ಮುಖ್ಯಮಂತ್ರಿಗಳನ್ನು ನೋಡುತ್ತಾರೆ ಎನ್ನುವ ದುಸ್ಥಿತಿ ಕರ್ನಾಟಕಕ್ಕೆ ಬಂದರೆ ಹೇಗೆ ಸಾರ್ ? They are all Ministers, colleagues, we call them colleagues. ಅವರು ಸಹೋದ್ಯೋಗಿಗಳು. ಈ ಶಾಸನಸಭೆಗೆ ಸೌಜನ್ಯ ಬೇಕು.

ಶ್ರೀ ಹೆಚ್.ಸಿ.ಮಹದೇವಪ್ಪ : ಮುಖ್ಯಮಂತ್ರಿಗಳೇ ಕರೆದಿದ್ದರು.

ಶ್ರೀ ಜೆ.ಸಿ.ಮಾಧುಸ್ವಾಮಿ : ಇಷ್ಟೊಂದು ಜನರನ್ನು ಕರೆದಿದ್ದಿರಾ? ಇಲ್ಲಿ ಕ್ಯಾಬಿನೆಟ್ ಮೀಟಿಂಗನ್ನು ಮಾಡುತ್ತಿದ್ದಾರಾ? ಇಲ್ಲೇನು ಸಚಿವ ಸಂಪುಟವನ್ನು ನಡೆಸುತ್ತಿದ್ದೀರಾ? ಏನೋ ನಾವು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನೋಡುವುದಕ್ಕಾಗುವುದಿಲ್ಲ ಎಂದು ಎರಡು ನಿಮಿಷ ಬಳಸಿಕೊಂಡರೆ ಒಂದು ಅರ್ಥ ಇರುತ್ತದೆ. ನೀವೇ ಮಂತ್ರಿಗಳು ಈ ರೀತಿಯಾದರೆ ಹೇಗೆ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಕೆಲವೊಂದು ಸಮಯದಲ್ಲಿ ಮಾನ್ಯ ಸದಸ್ಯರು ಮಾತನಾಡುವ ವಿಷಯಗಳಲ್ಲಿ ಮುಖ್ಯಮಂತ್ರಿಗಳು ನಮಗೆ ಸೂಚನೆಯನ್ನು ಕೊಡುತ್ತಾರೆ. ಮಂತ್ರಿಗಳೇ ಹೋಗಬಾರದು ಎಂದು ಹೇಳುವುದು ಯಾವ ನ್ಯಾಯ?

ಶ್ರೀ ವಾಟಾಳ್ ನಾಗರಾಜ್ : ತಮ್ಮ ಜಾಗಗಳಲ್ಲಿ ನಿಂತು ಮಾತನಾಡುವುದನ್ನು ಕಲಿತುಕೊಳ್ಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳು ಸೂಚನೆ ತೆಗೆದುಕೊಳ್ಳುವುದಕ್ಕೆ ಅವರಿಗೆ ಎಡಪಾರ್ಶ್ವ ಇದೆ. ಅವರಿಗೆಲ್ಲಾ ಐಎಎಸ್ ಎಂದು ಡಿಗ್ರಿಯನ್ನು ಕೊಟ್ಟು ಅಲ್ಲಿ ಕೂಡಿಸಿದೆ. ಅವರು ಸೂಚನೆಯನ್ನು ತೆಗೆದುಕೊಳ್ಳುತ್ತಾರೆ. ತಾವು ತಮ್ಮ ಖಾತೆ ಕೆಲಸಗಳನ್ನು ನಿರ್ವಹಿಸಿಬಿಟ್ಟರೆ ಸಾಕು.

ಶ್ರೀ ಕೆ. ಶ್ರೀನಿವಾಸಗೌಡ : ಕೆಲವು ವಿಷಯಗಳಲ್ಲಿ ಸೂಚನೆಯನ್ನು ಮುಖ್ಯಮಂತ್ರಿಗಳು ಕೊಡುತ್ತಾರೆ.

ಅಧ್ಯಕ್ಷರು : ಸಾಕು ಅಲ್ಲಿಗೆ ನಿಲ್ಲಿಸಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಶ್ರೀನಿವಾಸಗೌಡರೇ, ನಮ್ಮ ಜಿಲ್ಲೆ ಬರ್ನ್ ಆಗಿದೆ ಎಂದಾಗ ನಾನು ಮುಖ್ಯಮಂತ್ರಿಗಳ ಏಕಾಗ್ರತೆಯನ್ನು ನನ್ನ ಕಡೆಗೆ ಸೆಳೆಯಬೇಕಾ ಅಥವಾ ಬೇಡವಾ? ನೀವೇ ಹೇಳಿ. ಯಾರನ್ನು ಕೇಳಬೇಕು ಎಂದು. ಇದನ್ನು ಬಿಟ್ಟು ಬೆಂಗಳೂರು ಸಿಟಿಯಲ್ಲಿ ಕೂಡ ಆತಂಕವನ್ನು ಸೃಷ್ಟಿ ಮಾಡಿದ್ದಾರೆ. ಬಾಂಬ್ ಹಾಕುತ್ತೇವೆ, ಬೆಂಗಳೂರಿನಲ್ಲಿ ಇಂಥ ಕೇಂದ್ರಗಳಿಗೆ ನಾವು ಬಾಂಬ್‌ನ್ನು ಹಾಕುತ್ತೇವೆ, ಇಂಥ ಫ್ಲರಿಷಿಂಗ್ ಇಂಡಸ್ಟ್ರೀಸ್‌ಗಳನ್ನೇ ನೆಲಸಮ ಮಾಡುತ್ತೇವೆ ಎಂದು, ಅದು ಸತ್ಯ ಇರಬಹುದು, ಅಥವಾ ಸುಳ್ಳು ಇರಬಹುದು, ಆದರೆ ಭೀತಿ ನಿರ್ಮಾಣವಾಗುತ್ತದೆ. ಇನ್‌ವೆಸ್ಟರ್ಸ್ ಯೋಚನೆ ಮಾಡುವ ಸ್ಥಿತಿ ನಿರ್ಮಾಣವಾಗುತ್ತಿದೆ. ಇದಕ್ಕೆಲ್ಲಾ ಎಲ್ಲೋ ಒಂದು ಕಡೆ ಮುಕ್ತಾಯವನ್ನು ಹಾಡಬೇಕು. ಇದು ಬೆಂಗಳೂರು, ತಮ್ಮನ್ನು ನಾನು ಕೇಳಿದೆ, ನಿಮಗೆ ನಾನೊಂದು ಮಾಹಿತಿಯನ್ನು ಹೇಳಬೇಕೆಂದರೆ ಬಹುಶಃ ಅತ್ಯಂತ ಫಾಸ್ಟ್ ಗ್ರೋಯಿಂಗ್ ಸಿಟೀಸ್‌ನಲ್ಲಿ ನಾವು ರ್‍ಯಾಂಕಿಂಗ್ ಸ್ಟೇಜ್‌ಗೆ ನಾವು ಬಂದಿರುವವರು. 2015 ನೇ ಇಸವಿಗೆ 550 ನಗರಗಳು ಹತ್ತು ಲಕ್ಷಕ್ಕೂ ಮೀರಿ ಬೆಳೆಯುತ್ತವೆ ಎನ್ನುವ ಒಂದು forecast ಏನು ಇದೆ, ಅದರಲ್ಲಿ ಬೆಂಗಳೂರಷ್ಟು ಫಾಸ್ಟ್ ಆಗಿ ಬೆಳೆಯುವ ನಗರ ಇನ್ನೊಂದು ಇಲ್ಲವೇ ಇಲ್ಲ. ಅಷ್ಟು ವೇಗವಾಗಿ ಇವತ್ತು ಬೆಂಗಳೂರು ನಗರ ಬೆಳೆಯುತ್ತಿದೆ. ಇವತ್ತು 400 ನಗರಗಳು ಪ್ರಪಂಚದಲ್ಲಿ ಹತ್ತು ಲಕ್ಷ ಜನಸಂಖ್ಯೆಯನ್ನು ಮೀರಿರುವ ನಗರಗಳಿವೆ. 2015 ಕ್ಕೆ 550 ಬೆಳೆಯುತ್ತದೆ. Population of the world 50 ಪರ್‌ಸೆಂಟಿಗಿಂತ ಜಾಸ್ತಿ ನಗರ ಪ್ರದೇಶದಲ್ಲಿ ಬೆಳೆಯುತ್ತೆ ಎಂದು forecast ಆಗಿದೆ. ನಾವು ಏನು ಗ್ರಾಮೀಣದಲ್ಲಿ 70 ಇದ್ದೇವೆ, 65 ಇದ್ದೇವೆ, 80 ಇದ್ದೇವೆಂದು ಭಾಷಣವನ್ನು ಮಾಡುತ್ತಿದ್ದೇವೆ, 2015ನೇ ವರ್ಷಕ್ಕೆ ನಗರಪ್ರದೇಶದ ಜನಸಂಖ್ಯೆ ಗ್ರಾಮೀಣ ಪ್ರದೇಶದ ಜನಸಂಖ್ಯೆಯನ್ನು ದಾಟುತ್ತದೆ. ಅದಕ್ಕೊಂದು ಇನ್‌ಫ್ರಾಸ್ಟ್ರಕ್ಚರನ್ನು ...

Sri M.P. Prakash (Minister for revenue) : 36% is the decadal growth. ಹತ್ತು ವರ್ಷಕ್ಕೆ 36 ಪರ್‌ಸೆಂಟ್.

ಶ್ರೀ ಜೆ.ಸಿ.ಮಾಧುಸ್ವಾಮಿ : ಇದಕ್ಕೆ ನಾವು ಸಜ್ಜಾಗಬೇಕಾಗುತ್ತದೆ. ನೀವೇನು ಇನ್‌ಫ್ರಾಸ್ಟ್ರಕ್ಚರನ್ನು ಸೃಷ್ಟಿಮಾಡುವುದಕ್ಕೆ ಹೊರಟಿದ್ದೀರಿ. Priority must be given to law and order. ನೀವು ಅಲ್ಲಿ ಜನಗಳ ಜೀವನಕ್ಕೆ ಮೊದಲನೇ ಆದ್ಯತೆಯನ್ನು ಕೊಡಬೇಕು. ರಾಜ ಅಂದರೆ ಅದೇ. ದರಿದ್ರರಿಗೆ ರಕ್ಷಣೆಯನ್ನು ಕೊಡುವವನು ಶಾಂತಿಯನ್ನು ಸ್ಥಾಪನೆ ಮಾಡುವವನು ಎಂದೇ ಅರ್ಥ ಸಂಸ್ಕೃತದಲ್ಲಿ. ನಾವೇನೊ ಕುಳಿತುಕೊಂಡು ವಿಮಾನದಲ್ಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟನ್ನು ಕಟ್ಟುತ್ತೇವೆಂದರೆ ಆಗುವುದಿಲ್ಲ. ಇಂಟರ್‌ನ್ಯಾಷನಲ್ ಏರ್‌ಪೋರ್ಟನ್ನು ಇಲ್ಲಿ ನೀವು ಮಾಡಿದರೆ ಬಂದು ಹೋಗುವವರಿಗೆ ಸುರಕ್ಷತೆ ಇದೆ ಎಂದರೇನೆ ಅವರು ಬರುವುದು. ಇನ್ನು ಈ ಬೆಂಗಳೂರಿನ ಗ್ರೋಥ್‌ಗೆ ಸಮನಾಗಿ ಇನ್‌ಫ್ರಾಸ್ಟ್ರಕ್ಚರೂ ಡೆವಲಪ್‌ಮೆಂಟ್ ಆಗಿಲ್ಲ. ಲಾ ಅಂಡ್ ಆರ್ಡರ್ ವ್ಯವಸ್ಥೆ ಕೂಡ ಇವತ್ತು ಆಗಿಲ್ಲ. ದುರ್ದೈವದ ಮಾತು. ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಇವತ್ತು ಬೇರೆ ನಗರಗಳಿಗೆ ಹೋಲಿಸಿದರೆ ನಂಬರ್ ಒನ್ ಸ್ಟೇಜ್‌ನಲ್ಲಿದ್ದ ಬೆಂಗಳೂರು ಇವತ್ತು ಹಿಂದಕ್ಕೆ ಬರುತ್ತಾ ಇದೆ. ಏಕೆ? ಇಂಟೆಲಿಜೆನ್ಸ್ ಹಂಡ್ರೆಡ್ ಪರ್‌ಸೆಂಟ್ ಫೇಲ್ ಆಗಿದೆ. ನಾನು ಒತ್ತಿ ಹೇಳುತ್ತಿದ್ದೇನೆ, ಕಳೆದ ಐದಾರು ವರ್ಷಗಳಿಂದ ಕರ್ನಾಟಕದ ಇಂಟೆಲಿಜೆನ್ಸ್ ನೂರಕ್ಕೆ ನೂರರಷ್ಟು ಫೇಲ್ ಆಗಿದೆ. ಡೆಕನ್ ಹೆರಾಲ್ಡ್ ಪೇಪರ್‌ನಲ್ಲಿ ಬಂದಮೇಲೆ ಮಾಹಿತಿಯನ್ನು ಡಿಐಜಿ ಇಂಟೆಲಿಜೆನ್ಸ್ ತೆಗೆದುಕೊಂಡು ಹೋಗಿ ಕೊಡುತ್ತಾರೆ. ನೋಡಿ ಈ ಊರಿನಲ್ಲಿ ಹೀಗೆ ಆಗಿದೆ, ಅಲ್ಲಿ ಯಾರದೊ ಸಭೆಗೆ ಇಷ್ಟು ಜನರು ಸೇರಿದ್ದರು, ಇನ್ನ್ಯಾರದೋ ಸಭೆಗೆ ಇಷ್ಟು ಎಂದು ಹೇಳುವುದು. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೋಗುತ್ತಿರುವ ಮಾಹಿತಿ ಯಾವ ಯಾವ ಸಭೆಯಲ್ಲಿ ಎಷ್ಟೆಷ್ಟು ಜನರು ಸೇರಿದ್ದರು ಎಂದು ಪ್ರಜಾವಾಣಿ, ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಮೇಲೆ ಹೋಗುತ್ತಿದೆ. ಇದು ತಪ್ಪಬೇಕು ಸಾರ್. ಇಂಟಲಿಜೆನ್ಸ್‌ನ್ನು ತಾವು ಸನ್ನದ್ಧು ಮಾಡಬೇಕಾಗಿದೆ. ಚುರುಕು ಮಾಡಬೇಕಾಗಿದೆ. ಇವತ್ತು ಟ್ರೈನ್‌ಅಪ್ ಮಾಡಬೇಕಾಗಿದೆ. ರಾಜ್ಯದ ಮೂಲೆ ಮೂಲೆಗಳಿಂದ ನಾಳೆ ಏನಾಗುತ್ತೆ ಎಂದು ನಿಮಗೆ ಮಾಹಿತಿ ಬರದೇ ಹೋದರೆ ಖಂಡಿತವಾಗಿ ಗಂಡಾಂತರವನ್ನು ನಾವು ಎದುರು ನೋಡಬೇಕಾಗುತ್ತದೆ. ಮತ್ತೆ ನಾವು ಇವತ್ತು ಫೋರ್ಸ್‌ಗಳನ್ನೂ ಕೂಡ ಡೀಸ್ಟೆಬಿಲೈಜ್ ಮಾಡುತ್ತಿದ್ದೇವೆ. ಪೋಲೀಸ್‌ನವರಿಗೆ ಅಂಥ ಆತ್ಮವಿಶ್ವಾಸ ಇಲ್ಲ. ನಾನು ಬಿಚ್ಚಿ ಹೇಳುತ್ತಿದ್ದೇನೆ. ಪೋಲೀಸ್‌ನವರು ಇವತ್ತು ಗೂಂಡಾ ಎಲಿಮೆಂಟನ್ನು ಇವತ್ತು ಕಂಟ್ರೋಲ್ ಮಾಡುವ ಸ್ಥಿತಿಯಲ್ಲಿ ಇಲ್ಲ. ಕಳ್ಳರನ್ನೂ ಕಂಟ್ರೋಲ್ ಮಾಡುವ ಸ್ಥಿತಿಯಲ್ಲಿಲ್ಲ. ಕೊಲೆಗಾರರನ್ನು ಪತ್ತೆ ಮಾಡುವ ಸ್ಥಿತಿಯಲ್ಲಿಲ್ಲ. ಬರೀ ನಮಗೆ ಕಾನೂನು ಎಷ್ಟಿದೆ, ಎಫ್‌ಐಆರ್ ಎಷ್ಟು ಇದೆ, ಛಾರ್ಜ್‌ಸೀಟ್ ಎಷ್ಟಿದೆ, ಇಷ್ಟಕ್ಕೇ ಸೀಮಿತವಾಗಿದೆ. ನನ್ನ ಕ್ಷೇತ್ರದಲ್ಲಿಯೇ ಈಗ ಐದಾರು ತಿಂಗಳಿಂದ ಏಳೆಂಟು ಮರ್ಡರ್‌ಗಳಾಗಿವೆ. ಒಂದೇ ಒಂದು ಮರ್ಡರ್ ಕೂಡ ಟ್ರೇಸ್ ಆಗಿಲ್ಲ. ಒಂದು ಮರ್ಡರ್ ಕೂಡ ಇವತ್ತಿನವರೆಗೆ ಟ್ರೇಸ್ ಆಗಿಲ್ಲ. ಒಬ್ಬರು ಅರೆಸ್ಟ್ ಆಗಿಲ್ಲ, ಒಬ್ಬರಿಗೆ ಕನ್‌ವಿಕ್ಷನ್‌ಗೆ ನಾವು ರೆಕಮೆಂಡ್ ಮಾಡಿಲ್ಲ ನಿಮ್ಮ ಛಾರ್ಜ್‌ಸೀಟ್‌ನಲ್ಲಿ. ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ಮಧ್ಯೆ ರೋಡು, ರೋಡು ಸೈಡ್ ಇರುವ ಅಂಗಡಿಯನ್ನು ಹಿಂದುಗಡೆ ಕರೆಕ್ಟ್ ಆಗಿ ಕುಯ್ದು 24–30 ಲಕ್ಷ ರೂಪಾಯಿ ಆಭರಣವನ್ನು ನೀಟಾಗಿ ತೆಗೆದುಕೊಂಡು ಹೋಗಿದ್ದಾರೆ. ಇವತ್ತಿನವರೆಗೆ ಟ್ರೇಸ್ ಮಾಡುವುದಕ್ಕಾಗಿಲ್ಲ. ಏಳೆಂಟು–ಹತ್ತು ಈ ರೀತಿಯಾಗಿವೆ. ನಾನು ಪೋಲೀಸ್‌ನವರನ್ನು ದೂರುವುದಿಲ್ಲ. ಇಂಟೆಲಿಜೆನ್ಸ್ ಫೇಲ್ ಆಗಿದೆ. ನೂರಕ್ಕೆ ನೂರು. ನಮ್ಮ ಹತ್ತಿರ ಇರುವ ಯಾರೋ ಆಫೀಸರ್ ಕೆಟ್ಟವರು ಎಂದು ನಾನು ಮಾತನಾಡುವುದಿಲ್ಲ. ನಿಮಗೇನು

ಮಾಹಿತಿಯೇ ಸಿಗುತ್ತಿಲ್ಲ. ಅಕಸ್ಮಾತ್ ನನ್ನ ಕ್ಷೇತ್ರ ತಿಪಟೂರು ತಾಲ್ಲೂಕು ಬೆಳಗೆರೆಯಲ್ಲಿ 11 ಗಂಟೆಯಲ್ಲಿ ಸೀದಾ ಬಂದು ಇಡೀ ಬ್ಯಾಂಕನ್ನೇ ರಾಬ್ ಮಾಡಿಕೊಂಡು ಹೊರಟುಹೋದರು. ಇದು ಐದಾರು ತಿಂಗಳ ಹಿಂದೆ ನಡೆದಿದೆ. ಸುಮ್ಮನೆ ನೀವು ಅಕೌಂಟ್ ಹೋಲ್ಡರ್ಸ್ ಯಾರ್‍ಯಾರು ಇದ್ದೀರಿ, ನೀವು ನಿಂತುಕೊಳ್ಳಿ, ನಾವೇನು ಮಾಡುವುದಿಲ್ಲವೆಂದು ಹೇಳಿ ಎರಡೇ ಎರಡು ಮೋಟಾರ್ ಸೈಕಲ್ ಸೀದಾ ತೆಗೆದುಕೊಂಡು ಹೋಗಿ ಅಲ್ಲಿ 11–12 ಲಕ್ಷ ರೂಪಾಯಿಗಳನ್ನು ತುಂಬಿಕೊಂಡು ಹೊರಟುಹೋಗಿದ್ದಾರೆ. ಇವತ್ತಿನವರೆಗೆ ಟ್ರೇಸ್ ಆಗಿಲ್ಲ. ಒಂದೇ ಒಂದು ಚೂರು . . . . .

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಇಂಟಲಿಜೆನ್ಸ್ ಫೇಲ್ ಆಗುವುದಕ್ಕೂ ಕೂಡ ರೀಸನ್ಸ್ ಇರುತ್ತದೆ. ನಿಮಗೆ ಗೊತ್ತಿಲ್ಲ. You are an experienced man. Let it go on record. ಹೇಳಿ. ಸಭೆಗೆ ಅನುಕೂಲವಾಗುತ್ತೆ ಹೇಳಿ. ಏಕೆ ಫೇಲ್ ಆಗುತ್ತೆ? ಸಿಓಡಿ ಏಕೆ ಫೇಲ್ ಆಗುತ್ತೆ? ಟ್ರಾಫಿಕ್‌ನಲ್ಲಿ ಏಕೆ ಸಕ್ಸಸ್ ಆಗುತ್ತೆ? ಪೋಸ್ಟಿಂಗ್ಸ್ ಹೇಗೆ ಹೋಗುತ್ತೆ? Politicalisation of police administration.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಸ್ಪಷ್ಟವಾಗಿ ಹೇಳುತ್ತೇನೆ, ನಾನು ಹೇಳಲು ಹೊರಟಿದ್ದೆ. ನಾನು ವೆಂಕಟಮ್ಮನಹಳ್ಳಿನಲ್ಲೇ ಹೇಳಿದೆ, ಯಾರಿಗೂ ಬೇಡದವರನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಅಧಿಕಾರಿಗಳನ್ನು ಹಾಕಿದ್ದೀರಿ. ನಾನು ಹತ್ತಾರು ಸಲ ರಿಕ್ವೆಸ್ಟ್ ಮಾಡಿದ್ದೇನೆ. ಹಾಡುಹಗಲು ಹನ್ನೊಂದು ಗಂಟೆಯಲ್ಲಿ ನ್ಯಾಶನಲ್ ಹೈವೇಯ ದಂಡೆಯಲ್ಲಿರುವ ಬ್ಯಾಂಕುಗಳು ರಾಬರಿಯಾಗುತ್ತವೆ ಎಂದರೆ ಯಾರು ಉತ್ತರ ಕೊಡುವವರು? ತಾವು ನಮ್ಮ ಸ್ಥಿತಿಯನ್ನು ಕೇಳಬೇಕು. ಎಲ್ಲಾ ಟಿ.ವಿ.ಗಳಲ್ಲಿ ನಾವು ಬಿಂಬಿತರಾಗುತ್ತಿದ್ದೇವೆ. ಕ್ರೈಮ್ ನ್ಯೂಸ್‌ನಲ್ಲಿ ಎಂ.ಎಲ್.ಎ. ಏನೂ action ತೆಗೆದುಕೊಳ್ಳಲಿಲ್ಲ. ಎಂ.ಎಲ್.ಎ. ಬಾಯಿಮುಚ್ಚಿಕೊಂಡಿದ್ದಾರೆ, ಎಂ.ಎಲ್.ಎ. ಅಪರೋಕ್ಷವಾಗಿ ಸಪೋರ್ಟ್ ಆಗುತ್ತಾರೆಂದು ಎಲ್ಲಾ ಕ್ಷೇತ್ರದ ಎಂ.ಎಲ್.ಎ. ಸ್ಥಿತಿ ಅಲ್ಲಿಗೆ ಬರುತ್ತಿದೆ. ಯಾವುದೂ ಕೊಲೆ ಟ್ರೇಸ್ ಆಗಲಿಲ್ಲವೆಂದರೆ ನಾವು ಉತ್ತರ ಹೇಳಬೇಕು. ನಾವು ಸಂಭಾವಿತರಾಗಿ ಮಾತನಾಡುವಂತಿಲ್ಲ, ಈ ಕೇಸ್‌ಗೂ ಶಾಸಕರಿಗೂ ಸಂಬಂಧವಿಲ್ಲ I cannot meddle with the investigation of murder case or 302 offence, ಎಂದು ಈಗ ಹೇಳುವಂತಿಲ್ಲ. ಜನ ನಮ್ಮನ್ನು ದೂರುತ್ತಿದ್ದಾರೆ. ನಿಮ್ಮ ಕ್ಷೇತ್ರದಲ್ಲೇ ನಡೆಯಿತು. ನಿಮ್ಮ ಕ್ಷೇತ್ರದಲ್ಲೇ ಸ್ವಾಮೀಜಿಗಳ ಹಗರಣ ಬಂದಾಗ ಇವತ್ತು ಒಂದು ವರದಿ, ನಾಳೆ ಒಂದು ನಾಡಿದ್ದು ಮತ್ತೊಂದು, ಟಿ.ವಿ.ಯನ್ನು ನೋಡುತ್ತಿರುವವರಿಗೆ ಆ ಕಷ್ಟ ಏನೆಂಬುದು ಗೊತ್ತಾಗುತ್ತದೆ. ನೀವು ಈಗ ಎಲ್.ಹೆಚ್.ನಲ್ಲಿ ಕೇಬಲ್ ಟಿ.ವಿ. ನೆಟ್‌ವರ್ಕ್ ಇಲ್ಲದಂತೆ ಮಾಡಿ ನಮ್ಮ ಕಷ್ಟವನ್ನು ತಪ್ಪಿಸಿಬಿಟ್ಟಿದ್ದೀರಾ, ಸುಮ್ಮನೆ ಮಲಗಿಕೊಳ್ಳಿ ಎಂಬ ಸ್ಥಿತಿಗೆ ತಂದಿದ್ದೀರಿ. ತಾವು ರೆಗ್ಯುಲರ್ ಆಗಿ ಟಿ.ವಿ. ಯನ್ನೇನಾದರು view ಮಾಡಿಬಿಟ್ಟರೆ ನಾವೇ ಯಾವ್ಯಾವ ಸ್ಥಿತಿಯಲ್ಲಿರುತ್ತೇವೆ, ಇದು ಸತ್ಯವೋ? ಅದು ಸತ್ಯವೊ ಎಂದು ವಿಮರ್ಶೆ ಮಾಡಲು ಹೊರಟರೆ ನೂರಕ್ಕೆ ನೂರಕ್ಕೆ ಇಂಟಲಿಜೆನ್ಸ್ ರಾಜ್ಯದಲ್ಲಿ fail ಆಗಿದೆ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಮಾತನ್ನು Yes, I endorse. ಪೊಲೀಸ್ ಪೋಸ್ಟಿಂಗ್‌ನ್ನು, ಪೊಲೀಸ್ ಇಲಾಖೆಯಲ್ಲಿ ನೀವು ಹಾಕುತ್ತಿರುವ ಅಧಿಕಾರಿಗಳನ್ನು ಅತ್ಯಂತ ನಿರುಪಯುಕ್ತರಾದ ಅಧಿಕಾರಿಗಳನ್ನು COD ಗೆ ತರುವುದು intelligence ಗೆ ತರುವುದು ಮಫ್ತಿನಲ್ಲಿ ಬಿಡುವ ಕೆಲಸವನ್ನು ನೀವು ಮಾಡಿಕೊಂಡು ಬಂದರೆ,

ಮಫ್ತಿಯಲ್ಲಿರುವ ಪೊಲೀಸಿನವರೂ ಯಾರು? ಹತ್ತು ಹನ್ನೆರಡು ವರ್ಷದಿಂದ ಇದ್ದಾರೆ. They have acquainted with them ನಮ್ಮ ಭಾಗದಲ್ಲಿ ಯಾರನ್ನಾದರೂ ಒಬ್ಬರು ಇಂಥವರನ್ನು ಹಿಡಿದುಕೊಂಡು ಬನ್ನಿ ಎಂದರೆ ನಾಲ್ಕು ಕಾಯಿ ಕೊಟ್ಟುಬಿಟ್ಟರೆ ನೀನು ಇರಲಿಲ್ಲ ಎಂದು ಹೇಳುತ್ತೇನೆ, ನೀನು ಕಾಣಬೇಡ ಎಂದು ಹೇಳುವ ಪರಿಸ್ಥಿತಿಗೆ ಪೊಲೀಸ್‌ನವರು ಇವತ್ತು ಬಂದಿದ್ದಾರೆ, ಖಂಡಿತ, I stand by it. ನಾವು ಕಳುಹಿಸಿದ ಪೊಲೀಸ್‌ನವರೇ ಅವರಿಗೆ ಹೋಗಪ್ಪ ಎಂದು ಹೇಳಿಬಿಡುತ್ತಾರೆ, ಸಾಹೇಬರು ಬಂದು ಕೇಳಿದರೆ ನಾನು ಮನೆಯಲ್ಲಿ ಇರಲಿಲ್ಲವೆಂದು ಹೇಳಯ್ಯಾ ಎಂದು ಹೇಳುತ್ತಾರೆ. ಆ ಸ್ಥಿತಿಯಲ್ಲಿ ಇವತ್ತು officers ಇದ್ದಾರೆ. ಆ ಸ್ಥಿತಿಯ officers ನ್ನು ತಾವು ಪೋಸ್ಟಿಂಗ್‌ನ್ನು ಕೊಟ್ಟಿದ್ದೀರಿ. ಇಲ್ಲಿ ನಿಮ್ಮ ಡಿ.ಜಿ., ಐ.ಜಿ. ರೆಕಮಂಡೇಷನ್‌ಗೆ ಏನೂ ಸ್ಥಾನನೇ ಇಲ್ಲ. ಪೊಲೀಸ್‌ಗೆ ಒಂದು ಗೌರವವಿತ್ತು. ಅವರ ಎಸ್.ಆರ್.ಗಳನ್ನು ನೋಡಿ ಪೋಸ್ಟಿಂಗ್‌ಗಳನ್ನು ಕೊಡುತ್ತಿದ್ದರು. ಅವರ ಸಿ.ಆರ್. ಗಳನ್ನು ಗಮನದಲ್ಲಿಟ್ಟುಕೊಳ್ಳುತ್ತಿದ್ದರು. ಎಸ್.ಪಿ. ಸಬ್‌ಇನ್ಸ್‌ಪೆಕ್ಟರ್ ಬಗ್ಗೆ ಏ.ಎಸ್.ಐ ಬಗ್ಗೆ, ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ ಏನು ಬರೆಯುತ್ತಾನೆ ಎಂಬುವುದನ್ನು ಮೊದಲೆಲ್ಲಾ ನೋಡುತ್ತಿದ್ದರು. ಒಂದು key position ಗೆ ಯಾರ್‍ಯಾರನ್ನು ಪೋಸ್ಟಿಂಗ್ ಕೊಟ್ಟರೆ ವ್ಯವಸ್ಥೆ ಚೆನ್ನಾಗಿರುತ್ತದೆಯೋ ಎಂಬುದನ್ನು ನೋಡುತ್ತಿದ್ದರು. ಆದಷ್ಟು ಸ್ಥಳೀಯವಾದ ಅಕ್ವೆಟೆನ್ಸ್ ಇಲ್ಲದವರಿಗೆ ಪೋಸ್ಟಿಂಗ್‌ನ್ನು ಕೊಟ್ಟುಕೊಂಡು ನ್ಯೂಟ್ರಲ್ ಆಗಿ ಪೊಲೀಸ್ officers ನ್ನು ಹಾಕುತ್ತಿದ್ದನ್ನು ನಾವು ನೋಡಿದ್ದೇವೆ. ಆದರೆ ಇವತ್ತು ಆ ರೀತಿ ಇಲ್ಲ. ಆ ಊರು ಆ ಕ್ಷೇತ್ರದಲ್ಲಿ ಅಲ್ಲೇ ಹುಟ್ಟಿ ಅಲ್ಲೇ ಜಮೀನು ಮಾಡುವನು ಅಲ್ಲಿ ಏ.ಎಸ್.ಐ. ಇದ್ದಾನೆ, ಎಸ್.ಐ. ಇದ್ದಾನೆ, ಅವನೆ ಬಯಾಸ್ ಆಗಿದ್ದಾನೆ, ಇವತ್ತು ಪೊಲೀಸ್ ಆಫೀಸರ್ಸ್ ನಲ್ಲಿ ಅವನ ಬಗ್ಗೆಯೇ ಪರ ವಿರೋಧ ಇದೆ. I will give hundred of officers list. ನೂರು ಜನ ಸಬ್ ಇನ್ಸ್‌ಪೆಕ್ಟರ್‌ಗೆ local acquaintance ಇರುವವರ ಲಿಸ್ಟ್‌ನ್ನು ಬೇಕಾದರೆ ನಾಳೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಕಳುಹಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗಿ. ಈ ವಿಚಾರದಲ್ಲಿ ನಾನು ಪೊಲೀಸ್ ಮಹಾ ನಿರ್ದೇಶಕರಿಗೆ ಮತ್ತು ಗೃಹ ಕಾರ್ಯದರ್ಶಿಯವರಿಗೆ ಸ್ಪೆಸಿಫಿಕ್ ಆಗಿ ಇಂಥ ಅಧಿಕಾರಿಗಳ ಬಗ್ಗೆ ನಾನು ಶಾಸಕನಾಗಿ ಬಂದ ಎರಡೇ ತಿಂಗಳಿನಲ್ಲಿ ಬರೆದುಕೊಟ್ಟರೂ ಇವತ್ತಿನವರೆಗೆ ಅದು ಏನೂ ಆಗಿಲ್ಲ, ಅವರು ಆರಾಮವಾಗಿದ್ದಾರೆ, ಅದಲ್ಲದೆ ನಮ್ಮ ಬಗ್ಗೆ ಎಷ್ಟು ಲೈಟಾಗಿ ಮಾತನಾಡುತ್ತಾರೆಂದರೆ, ನಮ್ಮ ಜನರ ಮುಂದೆ, ಯಾರು ನಮ್ಮ ಹತ್ತಿರ ತಕರಾರು ಬಂದು ಹೇಳಿದ್ದರು ಅವರನ್ನು ಕೇಳಿಕೊಂಡು ನಾವೇನು ಬರೆದಿದ್ದೇವೋ ಅವರ ಹತ್ತಿರ ಹೋಗಿ ನಿಮ್ಮ ಎಂ.ಎಲ್.ಎ. ನಿಂದ ಏನೂ ಮಾಡಿಕೊಳ್ಳಲು ಆಗುವುದಿಲ್ಲವೆಂದು ಅವರಿಗೆ ಹೋಗಿ ಹೇಳು ಎಂದು ಹೇಳುತ್ತಾರೆ. ಈ ಮಟ್ಟಕ್ಕೆ ಅವರು ಬಂದಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಬಹಳ ಹೊತ್ತು ಮಾತನಾಡಲು ಸಮಯ ತೆಗೆದುಕೊಂಡೆ ಎಂದು ಕೇಳಿಕೊಂಡು ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ನನ್ನ ಅಪ್ರಹೆನ್‌ಷನ್, ನಮ್ಮದು ಮೈನಿಂಗ್ ಏರಿಯಾ. ಈಗಾಗಲೇ ಕಾಗದಗಳು ಶುರುವಾಗಿಬಿಟ್ಟಿದೆ. ನಾವು ಐರನ್ ಓರ್, ಮ್ಯಾಂಗನೀಸ್ ಓರನ್ನು ಮೈನ್ ಮಾಡುತ್ತಿಲ್ಲ. ನೇರವಾಗಿ ಚಿನ್ನದ ಮೈನಿಂಗ್ ಮಾಡುತ್ತಿದ್ದೇವೆ. ಎರಡು ವರ್ಷದ ಹಿಂದೆ ಒಂದು ಟನ್ ಓರ್‌ಗೆ 65 ರೂಪಾಯಿ ಇದ್ದ ಬೆಲೆ ಇವತ್ತು ಎರಡು ಸಾವಿರ ರೂಪಾಯಿ ಧಾಟಿದೆ. ಎಲ್ಲಾ ದುಡ್ಡಿರುವವರು, ಎಲ್ಲರೂ, ಈ ರಾಜ್ಯದಲ್ಲಿ,

ಆಂಧ್ರ ಪ್ರದೇಶದಲ್ಲಿ ಯಾರ್‍ಯಾರ ಹತ್ತಿರ ದುಡ್ಡಿದೆ ಅವರೆಲ್ಲಾ ಚಿಕ್ಕನಾಯಕನಹಳ್ಳಿ, ಹೊಸಪೇಟೆ, ಹೊಸದುರ್ಗ ಈ ಭಾಗವನ್ನು ಬಹಳ ಆಸಕ್ತಿಯಿಂದ ನೋಡುವ ಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿಬಿಟ್ಟಿದೆ. ಇನ್ನೊಂದು ಕಡೆ ಇನ್ನೊಂದು ಗುಂಪು ಬೆಳೆಯುತ್ತಿದೆ. ನಮ್ಮದೆಲ್ಲಾ ಲೂಟಿಯಾಗುತ್ತಿದೆ, ನಾವು ನಕ್ಸಲ್ಸ್ ಜೊತೆ ಹೋಗಬೇಕು, ನಾವು ರೈತ ಸಂಘದವರ ಜೊತೆ ಹೋಗಬೇಕು, ನಾವು ಲಾರಿ ತಡೆಯಬೇಕು. ನನ್ನ ಕ್ಷೇತ್ರದಲ್ಲಿ ಇವತ್ತು ನಿತ್ಯ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಇದೆ. ನಾವೆಲ್ಲರೂ ನಾಚಿಕೆಯಿಂದ ತಲೆತಗ್ಗಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಏಕೆ ಲಾರಿಯನ್ನು ತಡೆದಿರಿ ಎಂದರೆ ಮೈನ್ಸ್‌ನವರಿಂದ ದುಡ್ಡು ತೆಗೆದುಕೊಂಡಿದ್ದೀರಿ ಎಂದು ಹೇಳುತ್ತಾರೆ. ಏಕೆ ತಡೆಯುತ್ತೀರೆಂದರೆ ಲಾ ಅಂಡ್ ಆರ್ಡರ್ ಹಾಳು ಮಾಡುತ್ತಿದ್ದಾರೆ ಎಂದು ಪೋಲೀಸ್‌ನವರು ಹೇಳುವಂಥ ಸ್ಥಿತಿಗೆ ಬಂದಿದೆ. ಹೋಗಲಿ ಬಿಡಿ ಲಾರಿ ಲೀಸ್ ಇದೆಯೆಂದು ನಾನು ಅಂದುಬಿಟ್ಟರೆ ಇವರು ಮೈನ್ಸ್ ಲಾಬಿಗೆ ಈಲ್ಡ್ ಆಗಿಬಿಟ್ಟಿದ್ದಾರೆ, ಇವರಿಗೆ ಮೈನ್ಸ್‌ನವರು ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದು ಹೇಳುವ ಸ್ಥಿತಿಗೆ ಬಂದಿದೆ. ತಡೆಯಬೇಡಿ ಎಂದರೆ ಆ ಸ್ಥಿತಿ, ತಡೆಯಿರಿ ಎಂದರೆ ಲಾ ಅಂಡ್ ಆರ್ಡರ್ ಸ್ಥಿತಿ, ಕಾನೂನು ಪಾಲನೆಯ ಸ್ಥಿತಿ, ಇದರ ಜೊತೆಗೆ ಸರ್ಕಾರ ನಡೆಸುತ್ತಿರುವವರು ಹೇಗಿದ್ದಾರೆಂದರೆ, ನಮ್ಮ ಉಸ್ತುವಾರಿ ಸಚಿವರು stop mines ಎಂದು ಹೇಳುತ್ತಾರೆ, release mines ಎಂದು ಹೇಳುತ್ತಾರೆ. ಇದು ಲಾ ಅಂಡ್ ಆರ್ಡರ್ ನಡೆಯುವ ಸ್ಥಿತಿಯೇ? I challenge this House, who has given powers to the District Minister to stop or seize the records of the Mines and Geology's office. ಏಕಾಏಕಿ ನಾನೆಲ್ಲಾ ರೆಕಾರ್ಡ್‌ನ್ನು ಸೀಜ್ ಮಾಡಿದ್ದೇನೆ, ನಾಳೆಯಿಂದ ಮೈನಿಂಗ್ ಆಗಬಾರದು, ನಾಡಿದ್ದು ಬೆಳಿಗ್ಗೆ ಅದನ್ನು ಬಿಟ್ಟುಬಿಡಿ, ನನ್ನ ಹತ್ತಿರ ಬಂದು ಮಾತನಾಡಿ ಹೋಗಿದ್ದಾರೆ ಎಂದು ಹೇಳುತ್ತಾರೆ. What is going on in this State? ತಾವು ಹೇಳಬೇಕು? ತಾವು ಮುಖ್ಯಮಂತ್ರಿಯವರು ತಾವು ಆ ಖಾತೆಯ ಸಚಿವರು, ತಾವು ಪೋಲೀಸ್ ಖಾತೆಯ ಸಚಿವರು, ಯಾರ್‍ಯಾರಿಗೆ ಮೈನ್ಸ್‌ನ್ನು ಅಡವಿಟ್ಟಿದ್ದೀರಿ ಎಂದು ಇಲ್ಲಿ ಹೇಳಬೇಕು. ನಾನು ಮೈನ್ಸ್‌ನ್ನು ಏಕೆ ಬಳಕೆ ಮಾಡುತ್ತಿದ್ದೇನೆಂದರೆ the entire law and order is spoiled in Chikkanayakanahalli, because of these mining operations. ದಿನ ನೂರು, ಇನ್ನೂರು, ಮುನ್ನೂರು ಲಾರಿ ಅಡ್ಡಗಟ್ಟಿ ನಿಲ್ಲಿಸುತ್ತಾರೆ, ಯಾರಿಗೆ ದುಡ್ಡು ಬೇಕೋ ಅವನು ಓಡೋಗಿ ಕುಳಿತುಕೊಳ್ಳುತ್ತಾನೆ, ನನಗೆ ದುಡ್ಡುಕೊಟ್ಟರೆ ಲಾರಿ ಮುಂದಕ್ಕೆ ಬಿಡುತ್ತೇನೆಂದು ಹೇಳುತ್ತಾನೆ, ಕೊಟ್ಟು ಕೊಟ್ಟು ಎಲ್ಲರಿಂದ ಮೈನ್ಸ್‌ನವರು ಕಲೆಕ್ಟ್ ಮಾಡುತ್ತಿದ್ದಾರೆ, ಇವತ್ತು ಸ್ವಲ್ಪ ವಿಶ್ವಾಸವನ್ನು ಇಟ್ಟುಕೊಂಡು ಜನರ ಜೊತೆ ಕೆಲಸ ಮಾಡಲು ಆಗುತ್ತಿಲ್ಲ. ಯಾರಿಗೆ ಬೇಕೋ ಅವನು ಹೋಗಿ ಲಾರಿಯನ್ನು ತಡೆಯುತ್ತಾನೆ. ಮಾನ್ಯ ಮಂಜುನಾಥ್‌ನವರಿಗೆ ಇದರ ಅನುಭವವಿದೆ, ಅವರು ಇದನ್ನು ಎಂಡಾರ್ಸ್ ಮಾಡುತ್ತಾರೆ, ಹೊಸದುರ್ಗದವರು ಇದನ್ನು ಎಂಡಾರ್ಸ್ ಮಾಡಬೇಕು. ನಾನು ಚಿಕ್ಕನಾಯಕನಹಳ್ಳಿಯವನು ಹೇಳಬೇಕು, ಕಿರಣ್‌ಕುಮಾರ್ ಹೇಳಬೇಕು, ಇವತ್ತು ಕಷ್ಟವಾಗಿಬಿಟ್ಟಿದೆ, ಇನ್ನೊಂದು ಗುಂಪು ಉದ್ಯೋಗ ಇಲ್ಲದ Youngsters ದ್ದು ಬೆಳೆಯುತ್ತಿದೆ. ಹೆದುರಿಸಬೇಕಾ? ಹೋಗಿ ಲಾರಿ ತಡೆ, ಜೆ.ಸಿ.ಬಿ. ನಿಲ್ಲಿಸು, ರಸ್ತೆಗೆ ಬಂದು ಕುಳಿತುಕೋ ಎಂದು ಆಗಿದೆ. ಇದಕ್ಕೆ ಹೇಳುವವರು ಯಾರು? ಕೇಳುವವರು ಯಾರು? ಇದಕ್ಕೆ ತಕ್ಕನಾಗಿ ಸಚಿವರುಗಳೂ ನಡೆದುಕೊಳ್ಳುತ್ತಿದ್ದಾರೆ. ಏಕಾಏಕಿ ಮೈನ್ ಸೀಜ್ ಆಗುತ್ತದೆ, ಏಕಾಏಕಿ ಮೈನಿಂಗ್ start ಆಗುತ್ತದೆ,

ನಾವು concerned MLA ಗಳಿಗೆ ಗೊತ್ತಿಲ್ಲ, ಇವತ್ತೂ ಕೂಡ ಅವರು ಚಿಕ್ಕನಾಯಕನಹಳ್ಳಿಯಲ್ಲಿ ಏಕೆ ಮೈನ್ಸ್‌ನ್ನು ನಿಲ್ಲಿಸಿಲ್ಲವೆಂದು ಹೇಳುತ್ತಿದ್ದಾರೆ. If your colleagues feels, if a Minister of the District Incharge feels ನೀವೇನು ಅವರಿಗೆ ರಾಜತ್ವವನ್ನು ವಹಿಸಿಕೊಟ್ಟಿದ್ದೀರಿ ಅಲ್ಲಿ environment ಹಾಳಾಗುತ್ತಿದೆ, pollution ಆಗುತ್ತಿದೆ, please ಕೈಮುಗಿಯುತ್ತೇನೆ ಆ mines lease ನಿಲ್ಲಿಸಿಬಿಡಿ. ನಮಗೇನೂ ಆಗಬೇಕಾಗಿಲ್ಲ, ನಡೆಸಬೇಕಾ, ಮೊದಲೇ ನಿಮ್ಮ ಹತ್ತಿರ ಇರುವವರಿಗೆ ಹೇಳಿ. It is an illegal order. ಇಂಥದಿಕ್ಕೆಲ್ಲಾ ಅಧಿಕಾರಿಗಳನ್ನು, ಜನರನ್ನು ಬಲಿಪಶುಗಳನ್ನಾಗಿ ಮಾಡಬೇಡಿ ಎಂದು ಹೇಳಿ, ಎಸ್.ಪಿ; ಡಿ.ಸಿ. ಅಲ್ಲಿಗೆ ಬಂದು ಏನು ಮಾಡಬೇಕು? Where is the law and order in the District? ಹೇಳುವವರು ಕೇಳುವವರು ಯಾರು? ಯಾರ್‍ಯಾರದೋ ಆದೇಶ, ಯಾರೋ ಒಬ್ಬ ನಿಲ್ಲಿಸುವುದು, ಯಾರೋ ಪಾಪ ರಿಲೀಸ್ ಮಾಡುವುದು, ನಾವು ಯಾರಿಗೆ ಹೇಳುವುದು, ಅದೂ ಇವರ ಕಾಲದಲ್ಲಿ both portfolios are with the Chief Minister. Home, Mines ನಿಮ್ಮ ಹತ್ತಿರ ಇದೆ, ನಡೆಯಬಾರದ್ದೆಲ್ಲಾ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ನಮ್ಮಲ್ಲಿ ನಡೆಯುತ್ತಿದೆ. ಚಿಕ್ಕನಾಯಕನಹಳ್ಳಿಯಲ್ಲಿ just because of mininig operations ಕಳೆದ ಮೂರು ತಿಂಗಳಿನಿಂದ ನಾಲ್ಕು ಸಲ 144 ಸೆಕ್ಷನ್ ಡಿಕ್ಲೇರ್ ಮಾಡಿದ್ದಾರೆ. ನಾಲ್ಕು ಸಲ 144 ವಿಧಿಯನ್ನು ಅಲ್ಲಿ impose ಮಾಡಿದ್ದಾರೆ. ನಮ್ಮ ಊರು ಗಲಾಟೆಗೆ ಅಥವಾ ಗಲಭೆಗೆ ಯಾವತ್ತೂ ಕೇಳಿದ್ದ ಊರಲ್ಲ, ಆದರೆ ಈಗ ಪ್ರಾರಂಭವಾಗಿದೆ, ಏಕೆ? There is money and that money is exploited. Exploitation ಆಗುವ ಕಡೆಯೇ ನಿಮ್ಮ ನಕ್ಸಲ್ಸ್ ಬೆಳೆಯುವುದು. ಅದರಿಂದ ರಾಜ್ಯಕ್ಕಾಗಲೀ ತಾಲ್ಲೂಕಿಗಾಗಲೀ ಜಿಲ್ಲೆಗಾಗಲೀ ಒಂದು ರೂಪಾಯಿ ವರಮಾನ ಇಲ್ಲದ ಸ್ಥಿತಿ ನಿರ್ಮಾನ ಮಾಡಿದ್ದೀರಿ, ತೀರಾ ಶ್ರೀಮಂತರು ಬಂದು ಅಲ್ಲಿ ಯಜಮಾನಿಕೆಯನ್ನು ಮಾಡುತ್ತಿದ್ದಾರೆ,.ಲೋಕಲ್‌ನವರಿಗೆ ಅದನ್ನು ಸಹಿಸುವ ಸ್ಥಿತಿ ಇಲ್ಲ. They will one day convert as Naxalites. They will one day convert as terrorists. ಆ ಹುಡುಗರಿಗೆ ಇವತ್ತು ಕೊರಳ ಪಟ್ಟಿ ಹಿಡಿದುಕೊಂಡರೆ ನಮಗೆ ಏನಾದರೂ ಕೊಡುತ್ತಾರೆ, ದಯ ದಾಕ್ಷಿಣ್ಯ ತೋರಿದರೆ ನಮಗೆ ಏನೂ ಬರುವುದಿಲ್ಲವೆಂಬ ಭಾವನೆ ಬಂದುಬಿಟ್ಟಿದೆ. ಈ ಮನೋಭಾವನೆಯನ್ನು change ಮಾಡುವುದಕ್ಕೆ ತಾವು ಏನಾದರೂ ಪ್ರಯತ್ನ ಮಾಡಬೇಕು, otherwise ಶಾಂತಿಪ್ರಿಯವಾದ ಜಿಲ್ಲೆಗಳು ನಾಳೆ ಇವತ್ತು ಆಳ್ವಿಕೆಯನ್ನು ಮೀರಿ ಹೋಗಿಬಿಡುತ್ತವೆ. ನೂರು ಜನ, ಇನ್ನೂರು ಜನರ ಗ್ಯಾಂಗ್ ಆರಂಭವಾದ ಮೇಲೆ ನೀವು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ This is the right time, ನಿಮ್ಮ ಜೊತೆ ಇದ್ದೇವೆ, ದಯಮಾಡಿ ರಾಜ್ಯದ ಕಾನೂನನ್ನು ನೀವು ವ್ಯವಸ್ಥೆಗೆ ತರಬೇಕಾಗಿದೆ, ಒಂದು ಕಡೆ ನಿಜವಾಗಿ ಆಂಧ್ರ ಪ್ರದೇಶದ border ನಲ್ಲೇನು ಪ್ರಾರಂಭವಾಗಿದೆ, ಈ ಮುತ್ತುರತ್ನ ಬಾಚಿದಾಗನಿಂದಲೇ ಈ ಗಲಾಟೆ, ಇನ್ನೊಂದು ಕಡೆ ನಮಗೆ ಮೈನ್ಸ್ ನಡೆಯುತ್ತಿರುವ ಕಡೆ start ಆಗಿದೆ, ತಾವು ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ನಾವು ಆ ರೀತಿ ಕೊಡುವುದು ತಪ್ಪು ಅದಕ್ಕೆ ರಾಜಸ್ವ ಬರುತ್ತಿಲ್ಲವೆಂದು ಹೇಳುತ್ತೇವೆ. ವರಮಾನ ಬರುತ್ತಿಲ್ಲ, ನಮ್ಮ ನಾಡಿನ ಸಂಪತ್ತು ಲೂಟಿಯಾಗುತ್ತಿದೆ, ಏನಾದರೂ ಮಾಡಿ ಅದರಲ್ಲಿ ಸ್ವಲ್ಪ ಸರ್ಕಾರಕ್ಕೆ ತೆಗೆದುಕೊಳ್ಳಬಹುದಾಗಿತ್ತು ಎಂದು ಅನೇಕ ಸಲ ಇಲ್ಲಿ ಹೇಳಿದ್ದೇವೆ, ಆದರೆ ನೀವು ಕೇಳುವುದಿಲ್ಲ, ನೀವು ಒಂದು ಟನ್‌ಗೆ 17 ಇಲ್ಲವೆ 65 ರೂಪಾಯಿಗಳನ್ನೊ ಲೀಸ್ ಅಮೌಂಟ್ fix ಮಾಡಿ

ಅವರು ಎರಡು ಇಲ್ಲವೆ ಎರಡೂವರೆ ಸಾವಿರ ದುಡಿದುಕೊಳ್ಳುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ, 17 ಟನ್ ಹಾಕಿಕೊಂಡು ಹೋಗುವ ಲಾರಿಯಲ್ಲಿ 34 ಇಲ್ಲವೆ 35 ಟನ್ 70 ಟನ್ ತೆಗೆದುಕೊಂಡು ಹೋಗುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ, ಯಾರೂ ತಡೆಯುವುದಿಲ್ಲ, ಒಂದು ಸಿಗರೇಟ್ ಕಾಗದದ ಮೇಲೆ ಬರೆದುಕೊಡುತ್ತಾರೆ, ಅದು ನಾಲ್ಕು ಆರ್.ಟಿ.ಓ. ಆಫೀಸ್ ಪಾಸ್ ಆಗುತ್ತದೆ, ಎಂಟು ಸಾವಿರ ರೂಪಾಯಿ ಒಂದು ಲಾರಿಗೆ ನಿಗದಿಯಾಗಿದೆ. I challenge ಈ ಸಭೆಯಲ್ಲಿ ಎಂಟು ಸಾವಿರ ರೂಪಾಯಿಗಳನ್ನು ಒಂದು ಲಾರಿಯವರು ಕೊಟ್ಟುಬಿಟ್ಟರೆ ನಾಲ್ಕು ಆರ್.ಟಿ.ಓ. ಏರಿಯಾವನ್ನು ಪಾಸ್ ಮಾಡಿಕೊಂಡು ಮಂಗಳೂರಿನವರೆಗೆ ಹೋಗಿಬಿಡುತ್ತಾನೆ, ಕೊಡಲಿಲ್ಲವೆಂದರೆ ಲಾರಿ ಸೀಜ್ ಆಗುತ್ತದೆ. ಕೊಡಲಿಲ್ಲವೆಂದರೆ ಓವರ್ ಲೋಡ್ ಆಗುತ್ತದೆ, ಪ್ರತಿದಿವಸ 35 ಟನ್ ಹಾಕಿಕೊಂಡು ಹೋಗುವುದು ಇವರಿಗೆ ಗೊತ್ತಿಲ್ಲವೆ? ರೆವಿನ್ಯೂ ಜನರೇಜ್ ಮಾಡಬಾರದಿತ್ತೆ? ಅಲ್ಲಿ ಇಷ್ಟೊಂದು ಮೈನ್ಸ್ ಹೋಗುತ್ತಿದೆ, ಸ್ಥಳೀಯರಿಗೆ ಏನಾದರೂ ಉದ್ಯೋಗ ಕೊಡಿ ಎಂದು ಹೇಳಬಾರದಿತ್ತಾ? ಒಂದು ಸಣ್ಣ ಕೈಗಾರಿಕೆಯನ್ನು ಮಾಡಿ ಅಸಂತೃಪ್ತರೇನಿದ್ದರು, Youngsters ಯಾರಿದ್ದರು, job ಇಲ್ಲವೆಂದು ಯಾರು ಬೀದಿ ಬೀದಿಯಲ್ಲಿ ಅಲೆಯುತ್ತಿದ್ದರು ಅವರಿಗೆ ಕೆಲಸವನ್ನು ಕೊಟ್ಟು ಅವರನ್ನು ಶಾಂತಿಪ್ರಿಯರಾಗಿ ಬಾಳಿ ಎಂದು ಹೇಳುವುದು ಇವತ್ತು ನಮ್ಮ ಜವಾಬ್ದಾರಿಯಾಗಿರಲಿಲ್ಲವೆ? ಇವರನ್ನೆಲ್ಲಾ ನಾವೇ ಟೆರರಿಸ್ಟ್‌ಗಳನ್ನಾಗಿ ಮಾಡಿ ಇವರನ್ನೆಲ್ಲಾ ನಾವೇ ನಕ್ಸಲ್ಸ್‌ರನ್ನಾಗಿ ಮಾಡಿ ಕೊಂದುಬಿಡಿ, ನಮ್ಮನ್ನೂ ಸೇರಿಸಿ ಕೊಂದುಬಿಡಿ. ನಾವು ಟೆರರಿಸ್ಟೇ ಏಕೆಂದರೆ ನಿಮಗೆ ಇಲ್ಲಿ ನಿಂತುಕೊಂಡು ವಿರೋಧ ಮಾಡುತ್ತೇವೆ ಅಲ್ಲಾ. ರಾಜ್ಯದಲ್ಲಿ ಈ ಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ, ನಾನು ಅತ್ಯಂತ ವಿನಯದಿಂದ ತಮ್ಮ ಮೂಲಕ ಸರ್ಕಾರದಲ್ಲಿ ಪ್ರಾರ್ಥಿಸಿ ಕೊಳ್ಳುವುದೇನೆಂದರೆ, ನಮ್ಮದು ನಿಜವಾಗಿಯೂ ಒಳ್ಳೆಯ ರಾಜ್ಯವಾಗಿದ್ದು, ಇಲ್ಲಿ ಉತ್ತಮ ಸಂಭಾವಿತರು, ಶಾಂತಿಪ್ರಿಯರು ನೆಲೆಸಿರುವ ರಾಜ್ಯವನ್ನು ಅಧೋಗತಿಗೆ ತೆಗೆದುಕೊಂಡು ಹೋಗುವ ಮೊದಲು ಇಲ್ಲಿನ ಕಾನೂನು ಹಾಗೂ ಸುವ್ಯವಸ್ಥೆಯತ್ತ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಬೇಕು. ನನ್ನನ್ನೂ ಒಳಗೊಂಡಂತೆ ಅಡಚಣೆಯುಂಟಾಗಿದ್ದರೆ ನನ್ನನ್ನೂ ಸೇರಿಸಿ ಈ ಎಲ್ಲಾ ಕಾರಣಗಳಿಂದಾಗಿ ಈ ರಾಜ್ಯಕ್ಕೆ ಮುಂದಿನ ದಿವಸಗಳು ಬಹಳ ಗಂಡಾಂತರಕಾರಿಯಾಗಿದೆಯೆಂದು ಹೇಳುತ್ತಾ ತಮಗೆ ವಾದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆ ಅಥವಾ ನಿಯಮ 69ರಡಿ ಚರ್ಚಿಸುವುದರ ಬದಲು ಈ ಮೊದಲು ಸರ್ಕಾರವೇ ಒಂದು ಹೇಳಿಕೆ ನೀಡಬೇಕಾಗಿತ್ತು. ಚಿಕ್ಕಮಗಳೂರಿನಲ್ಲಿ ಆದದ್ದೇನು? ಪಾವಗಡದಲ್ಲಿ ಆದದ್ದೇನು? ಈ ಬಗ್ಗೆ ಏನೇನು ಜರುಗಿದೆ ಎಂಬ ಬಗ್ಗೆ ಸರ್ಕಾರವೇ ನೇರವಾಗಿ ಹೇಳಬೇಕಾಗಿತ್ತು. ಈ ಎಲ್ಲದರ ಬಗ್ಗೆಯೂ ಸವಿಸ್ತಾರವಾಗಿ ಈ ಸದನ ಆರಂಭವಾದ ತಕ್ಷಣ ಗೃಹಮಂತ್ರಿಗಳಾಗಿರುವ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ನೀಡುವ ಮೂಲಕ ಇವೆಲ್ಲಾ ನಡೆದಿದೆ ಎಂದು ಚರ್ಚೆಗೆ ಅವರೇ ದಾರಿ ತೋರಬೇಕಾಗಿತ್ತು. ಆದರೂ ಇವೊತ್ತು ಆ ಕುರಿತಂತೆ ಚರ್ಚಿಸಲು ತಾವು ಒಳ್ಳೆಯ ಅವಕಾಶ ದೊರಕಿಸಿಕೊಟ್ಟಿದ್ದೀರಿ. ಇದು ನಿಜವಾಗಿಯೂ ಚರ್ಚೆಯಾಗಬೇಕಾದ ಪ್ರಾಮುಖ್ಯವಾಗಿರುವ ವಿಚಾರವಾಗಿದೆ. ಈ ವಿಚಾರದಲ್ಲಿ ನಾವು ನಾನಾ ದಿಕ್ಕುಗಳಿಗೆ ಹೋಗುತ್ತೇವೆ. ಇದು ಬರೀ ಸೀಮಿತವಾಗಿ ನಿಲ್ಲತಕ್ಕಂಥ ಪ್ರಶ್ನೆಯಲ್ಲ. ಒಂದೆಡೆ ಪ್ರಜಾತಂತ್ರ ವ್ಯವಸ್ಥೆ, ಮತ್ತೊಂದೆಡೆ ಈ ವ್ಯವಸ್ಥೆ ಕುಸಿದು ಬೀಳುತ್ತಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿನ ಎಲ್ಲಾ ನಂಬಿಕೆಗಳೂ ನಾಶವಾಗುತ್ತಿವೆಯೆಂದು ಯುವ ಜನಾಂಗ

ಇಂದು ಬೇರೆ ದಿಕ್ಕಿನೆಡೆ ಚಲಿಸುತ್ತಿದೆ. ಚುನಾವಣೆಗಳಲ್ಲಿ ಯಾವ ರೀತಿ ಗೆದ್ದು ಬರಬೇಕು? ಶಾಸನಸಭೆಯಲ್ಲಿ ಶಾಸಕರಾಗಿ ಇರಬೇಕು, ಶಾಸನಸಭೆಯಲ್ಲಿ ಚರ್ಚಿಸಬೇಕು, ಐದು ವರ್ಷಗಳ ಕಾಲ ಇರಬೇಕು . . . ಈ ತರಹದಲ್ಲಿ ನಾವು ಕಾಲ ನೂಕಿಕೊಂಡು ಹೋಗುತ್ತಿದೆಯೇ ಹೊರತು ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಹೇಳುವುದಾದರೆ, ಚುನಾಯಿತ ಪ್ರತಿನಿಧಿಗಳಾಗಿ ಎಂತಹವರು ಬರುತ್ತಿದ್ದಾರೆ? ಚುನಾವಣೆಗೆ ಯಾರು ನಿಲ್ಲುತ್ತಿದ್ದಾರೆ? ಅವರ ಹಿನ್ನೆಲೆಗಳು ಏನು? ಚುನಾವಣೆ ನಡೆಸುವವರು ಯಾರು? ಸ್ವಾತಂತ್ರ್ಯಪೂರ್ವದ ಚುನಾವಣೆ ಹೇಗಿತ್ತು? ಸ್ವಾತಂತ್ರ್ಯ ನಂತರದ ಚುನಾವಣೆ ಹೇಗಿತ್ತು? ಅದರ ನಂತರ ಜರುಗಿದ ಚುನಾವಣೆಗಳ ಪರಿಸ್ಥಿತಿಗಳೇನು? ಪ್ರಸ್ತುತ ಚುನಾವಣೆಗಳು ಯಾವ ರೀತಿ ಜರುಗುತ್ತಿವೆ? ಹಣದ ಪ್ರಭಾವ, ದಬ್ಬಾಳಿಕೆ, ಜಾತಿ. . . ಹೀಗೆ ಇನ್ನು ಮುಂತಾದ ವಿಷಯಗಳು ಚುನಾವಣೆಯಲ್ಲಿ ಪ್ರಭಾವ ಬೀರುತ್ತಿವೆ ! ಒಂದೊಂದು ಶಾಸನ ಸಭಾ ಕ್ಷೇತ್ರಕ್ಕೂ ಇಂತಿಷ್ಟು ಹಣ ಖರ್ಚು ಮಾಡಲೇಬೇಕೆಂದು ...ಮತದಾರರನ್ನು ನಾವೇ ಕೆಡಿಸಿದ್ದೇವೆ. ಇಂದು ಚುನಾವಣಾ ವ್ಯವಸ್ಥೆಯೇ ನಾಶವಾಗಿದೆ. ಇವೆಲ್ಲವೂ ಸೇರಿ ಇವೊತ್ತು ನಮ್ಮನ್ನು ಎಲ್ಲಿಯೋ ಒಂದು ಕಡೆ ಅಪರಾಧ ಮತ್ತು ಅನಾಯಕತ್ವದತ್ತ ತೆಗೆದುಕೊಂಡು ಹೋಗುತ್ತಿದೆ. ಇದು ತಮಗೆ ಗೊತ್ತಿದೆ. ಇದು ಬಹಳ ನೋವಿನ ಪ್ರಸಂಗವೂ ಕೂಡ ಆಗಿದೆ.

ಇವೊತ್ತು ಜಾರ್ಖಂಡ್ ರಾಜ್ಯದಲ್ಲಿ ಜರುಗುತ್ತಿರುವ ವಿದ್ಯಮಾನದತ್ತ ಗಮನ ಹರಿಸುವುದಾದರೆ, "ನೀವು ಇಂತಹ ತಾರೀಖಿನಂದೇ ಚುನಾವಣೆ ನಡೆಸಬೇಕು" ಎಂದು ಸರ್ವೋಚ್ಚ ನ್ಯಾಯಾಲಯ ಅಲ್ಲಿನ ಶಾಸಕಾಂಗಕ್ಕೆ ನೇರವಾಗಿ ಹೇಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ಇನ್ನು ಮುಂದೆ ಇದೇ ಪರಿಸ್ಥಿತಿ ಮುಂದುವರೆಯುವುದಾದರೆ, ನಾವು ಇರಬಹುದು, ಹೋಗಬಹುದು. ಇನ್ನು 10–15–20 ವರ್ಷಗಳಾದ ಬಳಿಕ ಶಾಸನಸಭೆಗೆ ಬರಬಹುದು. ಆಗ ಅರಾಜಕತೆ ಆರಂಭವಾಗುತ್ತದೆ. ಈಗಾಗಲೇ ಅರಾಜಕತೆ ಆರಂಭವಾಗಿದೆ. ನಾವು ರಾಷ್ಟ್ರೀಯ ಪಕ್ಷಗಳಲ್ಲಿರಬಹುದು, ರಾಜ್ಯದ ಪಕ್ಷಗಳಲ್ಲಿರಬಹುದು, ಪಕ್ಷೇತರರಾಗಿರಬಹುದು. ಎಲ್ಲಿಯೋ ಒಂದು ಕಡೆ ಈ ಚುನಾವಣಾ ವ್ಯವಸ್ಥೆ ಸಮಗ್ರವಾಗಿ ಬದಲಾವಣೆಯಾಗಲಿಲ್ಲವೆಂದರೆ, ಆಡಳಿತದ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತದೆ. ಇವೊತ್ತು ಚಿಕ್ಕಮಗಳೂರಿನ ಮೆಣಸಿನಹಾಡ್ಯದ ಪ್ರಕರಣ ತೆಗೆದುಕೊಂಡರೆ, ನಮ್ಮಲ್ಲಿ ನಕ್ಸಲೈಟ್ಸ್ ಇರಲಿಲ್ಲ. "ಕರ್ನಾಟಕವು ಶಾಂತಿಯ ತೋಟ" ವೆಂದು ರಾಷ್ಟ್ರಕವಿ ಕುವೆಂಪು ಬಹಳ ಹಿಂದೆಯೇ ಸಾರಿದ್ದಾರೆ. ರಾಜ್ಯದಲ್ಲಿ ಎಲ್ಲಿಯೂ ಅಶಾಂತ ವಾತಾವರಣವಿರಲಿಲ್ಲ. ಬಹಳ ಹಿಂದೆ ಬೆಂಗಳೂರು ನಗರದಲ್ಲಿ ಕೊಲೆ ಎಂಬುದೇ ಇರಲಿಲ್ಲ. ಗಾಂಧಿನಗರದಲ್ಲಿ ಉನ್ನತ ಮಟ್ಟದ ವಕೀಲರಾಗಿದ್ದ ಬೇಲೂರು ಶ್ರೀನಿವಾಸ ಅಯ್ಯಂಗಾರ್‌ರವರ ಕೊಲೆಯಾದ ಬಳಿಕ ಮತ್ತು ಗಾಂಧಿಬಜಾರಿನಲ್ಲಿ ಜೋಡಿ ಕೊಲೆಗಳಾಗಿರುವ ಪ್ರಕರಣಗಳನ್ನು ಹೊರತುಪಡಿಸಿದರೆ, ಬೆಂಗಳೂರಿನಲ್ಲಿ ಕೊಲೆ, ಸುಲಿಗೆ, ದರೋಡೆ ಎಂಬುದು ಇರದೆ, ಬೆಂಗಳೂರು ಕಲ್ಯಾಣ ಪಟ್ಟಣವಾಗಿ ಪವಿತ್ರವಾಗಿತ್ತು. ಈ ರಾಜ್ಯದಲ್ಲಿ ಕೆ.ಸಿ.ರೆಡ್ಡಿ ಮತ್ತು ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿ ಅಧಿಕಾರ ನಡೆಸಿ ಹೋದ ಬಳಿಕ ನನಗನಿಸುತ್ತದೆ. 1972ರಿಂದ ಇಲ್ಲಿಯ ತನಕ ಸುಮಾರು 40 ಲಕ್ಷದಷ್ಟು ಜನಸಂಖ್ಯೆ ಹೆಚ್ಚಾಗಿದೆ. ಬೆಂಗಳೂರನ್ನು ನಾವು ಯದ್ವಾತದ್ವಾ ಬೆಳೆಯಲು ಬಿಟ್ಟಿದ್ದೇವೆ. ಇದರಲ್ಲಿ ತಮ್ಮ ಗಮನಕ್ಕೆ ನಾನು ತರುವುದೇನೆಂದರೆ, ಅಧಿಕವಾಗಿರುವ ಈ 40 ಲಕ್ಷ ಜನರು ಹೊರಗಡೆಯಿಂದ ಬಂದರು, ಯಾರ್‍ಯಾರು ಬಂದರು? ಎಲ್ಲಿಂದ ಬಂದರು? ಹೇಗೆ ಬಂದರು? ಇವರುಗಳ ಹಿನ್ನೆಲೆಗಳೇನು? ಏತಕ್ಕಾಗಿ ಬಂದರು? ಈ ಕುರಿತಂತೆ ಒಬ್ಬರ ಮಾಹಿತಿಯನ್ನೂ ಪಡೆದುಕೊಂಡಿಲ್ಲ.

ಬೆಂಗಳೂರಿನಲ್ಲಿ ಭೂಗತ ದೊರೆಗಳಿದ್ದಾರೆ, ಕೊಲೆಪಾತಕರಿದ್ದಾರೆ, ಕೊಲೆ ಮಾಡುವ ಬಾಡಿಗೆ ಹಂತಕರಿದ್ದಾರೆ. ಎಲ್ಲಾ ರೀತಿಯ ದುಷ್ಕೃತ್ಯಗಳು ಬೆಂಗಳೂರಿನಲ್ಲಿ ಜರುಗುತ್ತಿದೆ. ಬೆಂಗಳೂರಿನ ಸುತ್ತಮುತ್ತಲಿರುವ ಹೊಸ ಬಡಾವಣೆಗಳ ಹೊಸ ಮನೆಗಳಿಗೆ ಯಾರ್‍ಯಾರು ಬಂದಿದ್ದಾರೆ? ಅವರ ಚಲನ–ವಲನಗಳೇನು? ಇವರು ಪಂಜಾಬ್‌ನಿಂದ ಬಂದಿದ್ದಾರೆಯೇ? ತಮಿಳುನಾಡು, ಗುಜರಾತ್‌ನಿಂದ ಬಂದಿದ್ದಾರೆಯೇ? ಈ ಬಗ್ಗೆ ಯಾರ ಬಳಿಯೂ ಸೂಕ್ತ ಮಾಹಿತಿ ಇಲ್ಲ. ಬೆಂಗಳೂರಿನಂಥ ಶಾಂತಿಯುತ ನಗರ ಭಯೋತ್ಪಾದಕ ನಗರವಾಗಿ ಪರಿಣಮಿಸುತ್ತಿದೆ. ಬೆಂಗಳೂರು ಇವೊತ್ತು ಎಲ್ಲರಿಗೂ ಬೇಕಾಗಿದೆ. ಆದರೆ, ಬೆಂಗಳೂರಿಗೆ ರಕ್ಷಣೆ ಏನಿದೆ? ಬೆಂಗಳೂರಿಗೆ ಯಾವ ರೀತಿಯ ರಕ್ಷಣೆ ಇದೆಯೆಂದರೆ, ರಾಜೀವ್‌ಗಾಂಧಿಯವರ ಹತ್ಯೆಯ ರೂವಾರಿಯಾಗಿದ್ದ ಶಿವರಾಸನ್ ಸುಮಾರು ಎರಡು ತಿಂಗಳ ಕಾಲ ಬೆಂಗಳೂರಿನಲ್ಲಿ ಅವಿತುಕೊಂಡಿದ್ದು ಯಾರಿಗೂ ಗೊತ್ತಿರಲಿಲ್ಲ. ಮುತ್ತುರಾಯನ ದೇವಸ್ಥಾನವಿರುವ ಮುತ್ತತ್ತಿಯಲ್ಲಿಯೇ ಕೆಲವರು ಇದ್ದುದ್ದು. ಅಲ್ಲಿ ದೊರೆತ ಡೈರಿಯಿಂದ ಆತ ಬೆಂಗಳೂರಿನಲ್ಲಿ ಅವಿತುಕೊಂಡಿದ್ದ ವಿಷಯ ತಿಳಿದು ಬಂದಾಗ ಅವರೆಲ್ಲರೂ ಸಿಕ್ಕಿಬಿದ್ದದ್ದು. ಅಲ್ಲಿಯವರೆಗೂ ಶಿವರಾಸನ್ ಪೊಲೀಸ್ ಕಮೀಷನರ್ ಕಚೇರಿ ಹತ್ತಿರವಿರುವ ಹೋಟೆಲಿನಲ್ಲಿಯೇ ತಿಂಡಿ ತಿನ್ನುತ್ತಿದ್ದುದ್ದು. ಈತ ಯಾರು? ಎಲ್ಲಿದ್ದಾನೆ ಎಂಬುದು ಗೊತ್ತಿರಲಿಲ್ಲ. ಇದು ಬೆಂಗಳೂರಿನ ಪರಿಸ್ಥಿತಿ !

ಮತ್ತೊಂದು ನೋವಿನ ಪ್ರಸಂಗವನ್ನು ತಮಗೆ ಹೇಳುವುದಾದರೆ, ಯಾರನ್ನಾದರೂ ಬಾಡಿಗೆ ಮನೆಯಿಂದ ಬಿಡಿಸಬೇಕಾದರೆ ಪೊಲೀಸರು ಬೇಕಾಗಿಲ್ಲ, ನ್ಯಾಯಾಲಯ ಬೇಕಾಗಿಲ್ಲ. ಬದಲಿಗೆ ಗೂಂಡಾಗಳಿದ್ದಾರೆ ! ಅವರಿಗೆ ಇಂತಿಷ್ಟು ದುಡ್ಡು ಕೊಟ್ಟರೆ ಬಾಡಿಗೆ ಮನೆಯಲ್ಲಿರುವವರನ್ನು ಬೆದರಿಸುತ್ತಾರೆ. "ಇಪ್ಪತ್ತನಾಲ್ಕು ಗಂಟೆಯೊಳಗೆ ಮನೆ ಖಾಲಿ ಮಾಡಲಿಲ್ಲವೆಂದರೆ ಕೊಲ್ಲುತ್ತೇವೆ, ನಿಮ್ಮ ಗಂಡನನ್ನು ಕೊಲ್ಲುತ್ತೇವೆ, ಹೆಂಡತಿಯನ್ನು ಕೊಲ್ಲುತ್ತೇವೆ, ಮಕ್ಕಳನ್ನು ಎತ್ತಿಕೊಂಡು ಹೋಗುತ್ತೇವೆ" ಎನ್ನುತ್ತಾರೆ. ಇದು ಬೆಂಗಳೂರಿನಲ್ಲಿ ಒಂದು ವ್ಯಾಪಾರವಾಗಿದೆ. ಇದು ಬೆಂಗಳೂರಿನಲ್ಲಿ ಮಾತ್ರವಾಗಿರದೆ ಎಲ್ಲಾ ಕಡೆಗಳಲ್ಲೂ ನಡೆಯುತ್ತಿದೆ. ಆದರೆ, ಯಾರೂ ಕೂಡ ಇದನ್ನು ಹೇಳಿಕೊಳ್ಳಲಾರರು. ಅವರ ಬಗ್ಗೆ ಪೊಲೀಸಿನವರಿಗೆ ದೂರು ನೀಡಿದರೆ, "ನಿನ್ನನ್ನು ಉಳಿಸುವುದಿಲ್ಲ. ಎಲ್ಲರೂ ಗಂಟು ಮೂಟೆ ಕಟ್ಟಿಕೊಂಡು ಮನೆ ಬಿಟ್ಟು ಹೋಗಿ" ಎನ್ನುತ್ತಾರೆ. ಏನಿದು ದೌರ್ಜನ್ಯ? ಬೆಂಗಳೂರಿನ ಪರಿಸ್ಥಿತಿ ಬಗ್ಗೆ ತಮಗೆ ಹೇಳುವುದಾದರೆ, ಈ ಕುರಿತಂತೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ಇಡೀ ಪೊಲೀಸ್ ಇಲಾಖೆಯನ್ನೇ ಪುನರ್ ನಿರ್ಮಾಣ ಮಾಡಬೇಕು.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಹೇಳಿದ್ದು ಒಳ್ಳೆಯದು. ಆದರೆ, ಯಾವ ರೀತಿಯಲ್ಲಿ ಪುನರ್ ನಿರ್ಮಾಣವಾಗಬೇಕು ಎಂಬುದರ ಬಗ್ಗೆ ಸಲಹೆ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈಗ ನಮ್ಮಲ್ಲಿರುವ ಪರಿಸ್ಥಿತಿಯನ್ನು ನಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳೋಣ. ವರ್ಗಾವರ್ಗಿಗೆ ರಾಜಕಾರಣಿಗಳಾದವರು ಯಾರೂ ಕೂಡ ಕೈಹಾಕಬಾರದು. ಇದು ಸ್ಪಷ್ಟ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಇತ್ತ ಗಮನಹರಿಸಬೇಕು. ನಾನು ತಮಗೆ ಹೇಳುತ್ತಿರುವುದೇನೆಂದರೆ, ರಾಜಕಾರಣಿಗಳಾಗಿರುವ ನಾವು ಒಬ್ಬ ಪೊಲೀಸರನ್ನು ಬದಲಾಯಿಸಬೇಕೆಂದು ನಿಮಗೆ ಅರ್ಜಿ ಸಲ್ಲಿಸಬಾರದು. ಬೇಕಿದ್ದರೆ, ದೂರು

ನೀಡೋಣ. ಆದರೆ, ಯಾವ ಪೊಲೀಸರನ್ನು ನೇಮಿಸಬೇಕು, ಬಿಡಬೇಕೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳಾದ ನೀವೇ ತೀರ್ಮಾನ ಮಾಡಬೇಕು. ಇವೊತ್ತು ಸ್ಟೇಷನ್‌ಗಳ ರೇಟು ಏನಾಗಿದೆಯೆಂದರೆ, ಒಂದನೇ ದರ್ಜೆ, ಮೂರನೇ ದರ್ಜೆಯ ಸ್ಟೇಷನ್‌ಗೆ ಬರಬೇಕಾದರೆ ಜಾತಿ, ಕುಲ, ಗೋತ್ರ ಹಣ... ಬಹುಶಃ ರಾಷ್ಟ್ರಪತಿಯಿಂದ ಫೋನ್ ಮಾಡಿಸಬಹುದಾದಂಥ ವ್ಯವಸ್ಥೆ ಇವೊತ್ತು ನಿರ್ಮಾಣವಾಗಿದೆ. ಮುಖ್ಯಮಂತ್ರಿಗಳಿರಬಹುದು, ಉನ್ನತಾಧಿಕಾರಿಗಳಿರಬಹುದು, ಅವರಿಗೆ ಬಹಳ ಕಷ್ಟವಿದೆ. ಏನೂ ಮಾಡುವುದಿಲ್ಲ. ಆದುದರಿಂದ, ಇಂತಹ ಪರಿಸ್ಥಿತಿಯನ್ನು ತಡೆಗಟ್ಟಬೇಕಾದರೆ, ಮೊದಲು ಪೊಲೀಸ್ ವರ್ಗಾವರ್ಗಿ ನೀತಿಯನ್ನು ಸಮಗ್ರವಾಗಿ ಬದಲಾವಣೆ ಮಾಡಬೇಕು. ಇದು ಮೊದಲನೆಯದು. ಎರಡನೆಯದಾಗಿ, ಪೊಲೀಸ್ ಠಾಣೆಗಳು ಸಮಗ್ರವಾಗಿ ನವೀಕರಣಗೊಳ್ಳಬೇಕು. ಪೊಲೀಸ್ ಇಲಾಖೆಯ ಸುಧಾರಣೆ ಕುರಿತಂತೆ ರಚಿಸಲಾಗಿದ್ದ ಧರ್ಮವೀರ ಸಮಿತಿಯ ವರದಿ ಧೂಳು ತಿನ್ನುತ್ತಾ ಮೂಲೆಯಲ್ಲಿ ಬಿದ್ದಿದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತಮವಾದ ಸಲಹೆ ಕೊಡುತ್ತಿದ್ದಾರೆ. ಆಗಲೆ ತಾವು ಮಾತನಾಡುತ್ತಾ ಒಂದು ಮಾತನ್ನು ಹೇಳಿದಿರಿ. ಬೆಂಗಳೂರಿನಲ್ಲಿ ಬಾಡಿಗೆ ಮನೆಯೊಂದನ್ನು ಖಾಲಿ ಮಾಡಿಸಬೇಕಾದರೆ ಪೊಲೀಸ್‌ನವರ ಮೊರೆಹೊಕ್ಕರೆ ಏನೂ ಪ್ರಯೋಜನವಾಗುವುದಿಲ್ಲ, ಅದಕ್ಕೆ ಬೇರೆ ಏಜನ್ಸಿಸೇ ಇದ್ದಾವೆ ಎಂದು ಒಂದು ಮಾತನ್ನು ಹೇಳಿದಿರಿ. ಹಾಗೆಯೇ ಬೆಂಗಳೂರಿನ ಸುತ್ತಮುತ್ತ ಬೆಲೆಬಾಳುವ ಕೋಟ್ಯಾಂತರ ರೂಪಾಯಿಯ ಜಮೀನು ನ್ಯಾಯವಾಗಿ ಪಾಪ ಯಾರದ್ದೋ ಆಗಿದ್ದರೂ ಅವರು ಮಾರಾಟವನ್ನೂ ಮಾಡುವಂತಿಲ್ಲ, ಅನುಭವಿಸುವಂತೆಯೂ ಇಲ್ಲ, ಅದು ಬೇರೆಯವರ ಖಬ್ಜದಲ್ಲಿದೆ. ಇವರಲ್ಲಿ ಯಾರು ಪ್ರಮುಖರು? ಇವರಿಗೆಲ್ಲಾ ಯಾರು ರಕ್ಷಣೆ ಕೊಡುವವರು? ಈ ಘಟನೆಗಳಿಗೆಲ್ಲಾ ಯಾರು ಪ್ರೋತ್ಸಾಹ ಕೊಡುವವರು? ತಾವು ಚುನಾವಣೆಯ ವಿಚಾರವನ್ನು ಮಾತನಾಡಲು ಪ್ರಾರಂಭವಾಗಿ ಕೆ.ಸಿ.ರೆಡ್ಡಿಯವರು, ಮಾನ್ಯ ಹನುಮಂತಯ್ಯನವರ ಬಗ್ಗೆ ಮಾತನಾಡಿದಿರಿ, ನನಗೆ ಬಹಳ ಖುಷಿಯಾಯಿತು, ಚುನಾವಣಾ ವ್ಯವಸ್ಥೆ ಸುಧಾರಿಸಬೇಕೆಂದು you have started with the main issue, ನಿಜ, ಇಡೀ ಸಮಸ್ಯೆಗೆ ಪರಿಹಾರ ಅಲ್ಲಿದೆ, ಚುನಾವಣೆ ಭ್ರಷ್ಟವಾಗಿರುವುದರಿಂದ ಹೀಗೆಲ್ಲಾ ಆಗತಕ್ಕದ್ದು. ಪಾಪ ಪೊಲೀಸ್‌ನವರೇನು ಮಾಡುತ್ತಾರೆ? ನಾವು ಪ್ರಾಮಾಣಿಕವಾಗಿದ್ದರೆ ಅವರೂ ಪ್ರಾಮಾಣಿಕರಾಗಿರುತ್ತಾರೆ, ದುಡ್ಡು ಕೊಟ್ಟೇ ಬರಬೇಕೆಂದರೆ ದುಡ್ಡು ತೆಗೆದುಕೊಂಡು ಬರುತ್ತಾರೆ. ನಾವು, ನಮ್ಮ ಕತೆ ಸ್ವಲ್ಪ ಹೇಳಿ. ನಾವಂತೂ ಹೇಳಲು ಆಗುವುದಿಲ್ಲ, ನೀವು ಧೈರ್ಯವಾಗಿ ಹೇಳುತ್ತೀರಿ. ನೀವು ನಮಗೆಲ್ಲಾ ಮಾರ್ಗದರ್ಶಿಗಳು.

ಶ್ರೀ ವಾಟಾಳ್ ನಾಗರಾಜ್ : ನಾನು ಅದನ್ನೇ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾವು ಚುನಾವಣೆಗಳಲ್ಲಿ.

ಅಧ್ಯಕ್ಷರು : ಅವರ ಮನಸ್ಸಿನಲ್ಲಿರುವುದನ್ನು ನೀವು ಹೇಳಬೇಕೆಂದು ಅವರ ಉದ್ದೇಶವೇ!

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ತಮ್ಮ ಕಷ್ಟ ನನಗೆ ಗೊತ್ತು.ನ ನಿಮ್ಮ ಮನಸ್ಸಿನಲ್ಲಿರುವುದನ್ನು ಊಹೆ ಮಾಡಿ ನಾನು ಅವರಿಗೆ ಸೂಚನೆ ಕೊಟ್ಟೆ !

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮನೋಧರ್ಮವೂ ನನಗೆ ಅರ್ಥವಾಯಿತು !

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ತಾವು ಮಾಜಿ ಅಧ್ಯಕ್ಷರು, ತಮಗೆ ಆ ವಿಚಾರ ಮೊದಲೇ ಬಂದಿತ್ತೋ? ಆಮೇಲೆ ಅದು ಲೇಟಾದ ಮೇಲೆ ಅದಕ್ಕೆ ನಾನು ಇಲ್ಲಿದ್ದೇನೆ, ನೀವು ಹೇಳಿಬಿಡಿ ಎಂದು ಅವರ ಪರವಾಗಿ ಹೇಳುತ್ತಿದ್ದಾರೆ !

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಶ್ರೀರಾಮರೆಡ್ಡಿಯವರು ಕಪ್ಪು ಬಟ್ಟೆಯನ್ನು ಹಾಕಿಕೊಂಡು ಬಂದು ಏಕೆ ಪ್ರೊಟೆಸ್ಟ್ ಮಾಡುತ್ತಿದ್ದರೆ ಎಂಬ ಬಗ್ಗೆ ಮೊದಲು ಹೇಳಬೇಕು !

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಚುನಾವಣೆಯ ಪದ್ಧತಿಯ ಪ್ರಶ್ನೆ ಬಂದಾಗ ನಾವೆಲ್ಲರೂ ಎಲ್ಲೊ ಒಂದು ಕಡೆ ಎಲ್ಲಾ ಪಕ್ಷದವರೂ ಪ್ರಾಮಾಣಿಕತೆ ಇರಬೇಕು. ನಾವು ಯಾರನ್ನು ಆರಿಸಬೇಕು ಎನ್ನುವಾಗ ಅವರ ಹಿನ್ನೆಲೆಯೇನು ಎಂಬ ಬಗ್ಗೆ ಪ್ರಾಮಾಣಿಕತೆ ಇರಬೇಕು. ಇದರ ಬಗ್ಗೆ ನಾನು ಯಾರನ್ನೂ ಕುರಿತು ಮಾತನಾಡುತ್ತಿಲ್ಲ. ಇವತ್ತು ಲೂಟಿ ಮಾಡಿರತಕ್ಕವರು, ಭೂಗಳ್ಳರು, ಅಕ್ರಮ ಮಾಡಿರತಕ್ಕವರು, ಇವರೆಲ್ಲರೂ ಚುನಾವಣೆಗೆ ನಿಲ್ಲಬೇಕು, ಇವರೆಲ್ಲರೂ ಅಧಿಕಾರಕ್ಕೆ ಬರಬೇಕು, ಇವರೆಲ್ಲರೂ ಮಂತ್ರಿಗಳಾಗಬೇಕು ಎಂಬ ಹುಚ್ಚು ಬೆಳೆದಿದೆ. ಇದಕ್ಕೆ ನಾವು ಎಲ್ಲೋ ಒಂದು ಕಡೆ, ನಾವೇನು ' ಬಿ ' ಫಾರಂ ಎಂದು ಕೊಡುತ್ತೇವಲ್ಲಾ, ನಮಗೇನು ಹುಚ್ಚು ಇದೆ ಎಂದರೆ, ಹೇಗೂ ಗೆಲ್ಲುತ್ತಾರೆ 'ಬಿ' ಫಾರಂನ್ನು ಕೊಡಿ, ಅವರು ರೌಡಿಯೋ ಮತ್ತೊಂದೋ ಒಟ್ಟಿನಲ್ಲಿ ಅವರಿಗೆ ಕೊಟ್ಟುಬಿಡೋಣ, ಅವರು ಗೆಲ್ಲಲಿ, ಗೆಲ್ಲಬೇಕಾದರೆ ಅವರಿಗೆ ಕೊಡಿ, ಈ ನೀತಿ ಸರಿಯಲ್ಲ. ಇದರಿಂದ ನಮ್ಮಲ್ಲೂ ಒಂದು ರಾಷ್ಟ್ರೀಯ ಪಕ್ಷವಿರಬಹುದು, ರಾಜ್ಯ ಪಕ್ಷವಿರಬಹುದು, ಯಾವುದೇ ಪಕ್ಷಗಳು ಇರಬಹುದು, ನಮ್ಮ ಪಕ್ಷಗಳಲ್ಲೂ ಶಿಸ್ತು ಇರಬೇಕು, ಎಂಥವರಿಗೆ ಚುನಾವಣೆಗೆ 'ಬಿ' ಫಾರಂನ್ನು ಕೊಡಬೇಕು ಎಂಬ ಬಗ್ಗೆ ಶಿಸ್ತು ಇರಬೇಕಾಗುತ್ತದೆ. ನಾವೇನು ಹೇಳುತ್ತಿದ್ದೇನೆ ಅದರಿಂದ ಪ್ರಯೋಜನವಿಲ್ಲ, ಎಮ್ಮೆಯ ಮುಂದೆ ಕಿಂದರಿ ಬಾರಿಸಿದಂತೆ ಆಗುತ್ತದೆ. ಹಿಂದೆ ಇಲ್ಲಿ ಒಬ್ಬರು ಮಂತ್ರಿಯಾಗಬೇಕಾಗಿದ್ದರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಎಮ್ಮೆಯಲ್ಲ, ಕೋಣನ ಮುಂದೆ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್: ಕೋಣ ಮತ್ತು ಎಮ್ಮೆ ಎರಡೂ ಒಂದೇ. ಹಾಗಾದರೆ ಎಮ್ಮೆ ಬುದ್ಧಿವಂತ ಎಂದುಕೊಂಡಿರೋ?

ಶ್ರೀ ಎಂ.ಪಿ.ಪ್ರಕಾಶ್ : ಎಮ್ಮೆ ಬುದ್ಧಿವಂತ ಅಲ್ಲ, ಆದರೆ ಕೋಣ ತುಂಬ ದಡ್ಡ !

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರ ಮಾತಿಗೆ ಬೆಂಬಲ ಕೊಟ್ಟು ಹೇಳುವುದಾದರೆ ಕೋಣನ ಮುಂದೆ ಕಿಂದಿರಿ ಬಾರಿಸಿದಂತೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಒಬ್ಬರು ಮಂತ್ರಿಯಾಗಬೇಕಾಗಿದ್ದರೆ, ಅಲ್ಲಿ ಬಂದು ಕುಳಿತುಕೊಳ್ಳಬೇಕಾಗಿದ್ದರೆ, ಎಷ್ಟು ತ್ಯಾಗ ಮಾಡಿರುತ್ತಿದ್ದರು. ಹೆಚ್.ಎಂ. ಚೆನ್ನಬಸಪ್ಪನವರು, ಜಿಲ್ಲಾ ಬೋರ್ಡ್ ಸದಸ್ಯರು, ಜಿಲ್ಲಾ ಬೋರ್ಡ್ ಅಧ್ಯಕ್ಷರು, ತಾಲ್ಲೂಕು ಬೋರ್ಡ್ ಅಧ್ಯಕ್ಷರು ಎಲ್ಲವನ್ನೂ ಮಾಡಿ ಹೋರಾಟ ಮಾಡಿ ಮಂತ್ರಿಗಳಾಗಿದ್ದರು. ಆದರೆ ಈಗ ಏನೂ ಇಲ್ಲ. ನಮ್ಮ ಪಕ್ಷದ ಐದು ಮಂತ್ರಿಗಳಿಗೆ ಕೊಡು, ಅವನಿಗೆ ಇವನಿಗೆ ಕೊಟ್ಟು ನೆಗೆದೇಬಿದ್ದು ಹೋಯಿತು, ಇದಕ್ಕೇನು ಲೆಕ್ಕ ಬುಕ್ಕ ಇಲ್ಲ, ಹೇಳುವಂತೆ ಇಲ್ಲ, ಯಾವುದೂ ಬೇಕಾಗಿಲ್ಲ, ನಾನು ಹಿಂದಿನಿಂದ ಎಂತೆಂಥ ಸುವರ್ಣ ರತ್ನಗಳನ್ನು ನೋಡಿದ್ದೇನೆ, ಈ ಸದನದಲ್ಲಿ ರತ್ನಗಳನ್ನು ನೋಡಿದ್ದೆ, ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ನನಗನ್ನಿಸುತ್ತದೆ ಅವರ ಪಾದಗಳಿಗೆ ಸಾಷ್ಟಾಂಗ, ಶರಣಾರ್ಥಿ. ಪೊಲೀಸ್ ಇಲಾಖೆ ಇವತ್ತು ಹಸ್ತಕ್ಷೇಪ ಪ್ರಾಮಾಣಿಕವಾಗಿ ನಿಲ್ಲಬೇಕು, ಎರಡನೆಯದಾಗಿ, ಉತ್ತಮ ಶಸ್ತ್ರಾಸ್ತ್ರಗಳು ಅವರಿಗೆ ಒದಗಿಸಬೇಕು, ಇವತ್ತು ಅದು ಬದಲಾವಣೆಯಾಗಬೇಕಾದರೆ ಮೊದಲು ಅದರಲ್ಲಿ ರಾಜಕಾರಣಿಗಳ ಪೊಲೀಸ್ ಠಾಣೆಗಳನ್ನು

ಅಗೋಚರವಾಗಿ ನೋಡಬೇಕು, ಸಿ.ಓ.ಡಿ. ಮತ್ತು ಇನ್ನಿತರೆ ಮೂರ್‍ನಾಕು ವಿಭಾಗ, ಯಾವುದು ಆಗಲಿಲ್ಲವೋ ಸಿ.ಓ.ಡಿ. ಗೆ ಹಾಕು, ಯಾರು ಬೇಕೋ ಮೆಜೆಸ್ಟಿಕ್‍ಗೆ ಹಾಕು, ಬೇಡವೋ ಬೇರೆಯದ್ದಕ್ಕೆ ಹಾಕು, ಇದು ಬಂದುಬಿಟ್ಟಿದೆ. ಇದರಿಂದ ಅವರಲ್ಲಿ ಅಸಮಧಾನ ಪ್ರಾರಂಭವಾಗಿದೆ, ಸಬ್‍ಇನ್ಸ್‍ಪೆಕ್ಟರ್‍ನ ಕೆಳಗಿನವರಿಗೆ ಮೂವತ್ತು ವರ್ಷಗಳಿಂದ ಬಡ್ತಿಯನ್ನೇ ಕೊಟ್ಟಿಲ್ಲ, ಹೀಗಾದರೆ ಅವರ ಪರಿಸ್ಥಿತಿ ಏನಾಗಬೇಕು? ಇವತ್ತು ಅವರಿಗೆ ಕೊಡತಕ್ಕಂಥ ಊಟ, ನನಗನ್ನಿಸುತ್ತದೆ, ಪೋಲೀಸ್ ನಾಯಿಗೆ ಎಷ್ಟು ವ್ಯವಸ್ಥೆ ಎಂದರೆ, ರಾಜಮರ್ಯಾದೆ, ಅದಕ್ಕೇ ಒಂದು ಮನೆ, ನೋಡಿಕೊಳ್ಳಲು ನಾಲ್ಕು ಜನ, ವೈದ್ಯರು, ಔಷಧಿ, ವ್ಯವಸ್ಥೆ, ಈ ರೀತಿ ಪೋಲೀಸ್ ನಾಯಿಗಿರುವ ವ್ಯವಸ್ಥೆ, ಇಲ್ಲೆಲ್ಲಾ ಬಂದು ಮೂಸಿ ನೋಡುತ್ತದೆ ನೋಡಿ ಆ ನಾಯಿಗೆ ಇರುವ ವ್ಯವಸ್ಥೆ, ವೈಭವ, ವೈಭವೀಕರಣ, ಮತ್ತು ಆ ನಾಯಿ ಸತ್ತ ದಿವಸ ಸಂತಾಪವನ್ನೂ ಮಾಡಿದರು, ಒಂದು ನಾಯಿ ಸತ್ತ ತಕ್ಷಣ ಮನುಷ್ಯನಷ್ಟೆ ಸಂತಾಪವನ್ನು ಸಹ ಮಾಡಿದರು, ಅದರಲ್ಲಿ ತಪ್ಪೇನಿಲ್ಲ, ಒಳ್ಳೆಯದೆ, ಆದರೆ ಆ ಪೋಲೀಸ್ ನಾಯಿಗಿಂತಲೂ ಈ ಪೋಲೀಸ್‍ನವರದ್ದು ಕಡೆಯ ಜೀವನ, ಇದು ಒಳ್ಳೆಯದಲ್ಲವೆಂದು ನನಗನ್ನಿಸುತ್ತದೆ. ಅದು ಒಳ್ಳೆಯದಲ್ಲವೇ ಅಲ್ಲ. ಆದ್ದರಿಂದ ಇಡೀ ಇಲಾಖೆ ಅಸಮದಾನದ ಹೊಗೆ ಎದ್ದು ಕಾಣುತ್ತಿದೆ. ಆ ರೀತಿ ಅಸಮದಾನದ ಹೊಗೆ ಎದ್ದು ಕಾಣುವುದರಿಂದ ಅವರಲ್ಲಿ ಕಾನೂನು ಸುವ್ಯವಸ್ಥೆ ತರುವುದರಲ್ಲಿ ಅಸಮರ್ಥರಾಗಿದ್ದಾರೆ, ಪ್ರಾಮಾಣಿಕವಾಗಿ ಅಸಮರ್ಥರಾಗಿದ್ದಾರೆ, ಅದರಲ್ಲಿ ಎರಡು ಮಾತಿಲ್ಲ. ನಕ್ಸಲೀಯರದ್ದು ಏನಿದು? ನನಗನ್ನಿಸುತ್ತದೆ, ಮೊದಲನೆಯದು ಇವರು ಚಿಕ್ಕಮಗಳೂರಿನಲ್ಲಿ ನೇರವಾಗಿ ಅವರನ್ನು ಕೊಂದ ಬಗ್ಗೆ ನನಗೆ ಸಮಾಧಾನವಿಲ್ಲ. ಆ ವಿಚಾರದಲ್ಲಿ ನಾನು ಸ್ಪಷ್ಟ. ಕಾರಣವೇನು? ಆಂಧ್ರ ಪ್ರದೇಶದಲ್ಲಿದ್ದಷ್ಟು ಉದ್ವೇಗ ನಮ್ಮಲ್ಲಿ ಇನ್ನೂ ಇರಲಿಲ್ಲ. ನಮ್ಮಲ್ಲಿ ಎಲ್ಲೋ ಒಂದು ಕಡೆ ನೋಟೀಸ್ ಹಾಕುತ್ತಿದ್ದರು, ಬರುತ್ತಿದ್ದರು, ಬೀದಿಗೆ ಬರುತ್ತಿದ್ದರು, ಹೇಳುತ್ತಿದ್ದರು, ಮಾತನಾಡುತ್ತಿದ್ದರು, ಅವರನ್ನು ಏಕೆ ಕೊಂದಿರಿ? ಏನು ಕಾರಣ? ಅವರನ್ನು ಕೊಲ್ಲಲು ತಮಗೆ ತಕ್ಷಣ ಸಿಕ್ಕಂಥ ವ್ಯವಸ್ಥೆ ಏನು? ಅಲ್ಲಿ ಸತ್ತವರ ಬಗ್ಗೆ ಇಡೀ ರಾಜ್ಯದ ಎಲ್ಲರಿಂದಲೂ ಅನುಕಂಪ, ಮುಖ್ಯಮಂತ್ರಿಗಳ ಪ್ರಕಾರವೇ 'ನಕ್ಸಲೀಯ ಮುಖಂಡರ ಸಾವಿಗೆ ಮರುಕ ಪಟ್ಟ ಮುಖ್ಯಮಂತ್ರಿಗಳು' ಮುಖ್ಯಮಂತ್ರಿಗಳೂ ಇದರ ಬಗ್ಗೆ ಮರುಕಪಟ್ಟಿದ್ದಾರೆ, ಅತ್ಯಂತ ಮೇಧಾವಿಯೊಬ್ಬರನನ್ನು ಕೊಂದುಹಾಕಿಬಿಟ್ಟಿದ್ದೇವೆ ಎಂಬ ಮನೋ ಚಿಂತನೆ ಪ್ರಗತಿ ವರ್ಗದವರು ಅವರನ್ನು ಭೇಟಿ ಮಾಡಲು ಹೋದಾಗ ಈ ಮಾತನ್ನು ಹೇಳಿದ್ದಾರೆ. ಮೊದಲನೆಯದಾಗಿ ಇವರು ಏಕೆ ನಕ್ಸಲೀಯರಾದರು? ನಮ್ಮ ಪ್ರದೇಶಕ್ಕೆ ನಕ್ಸಲೀಯರು ಏಕೆ ಬಂದರು? ಅವರ ಬೇಡಿಕೆ ಏನು? ಪರಿಸ್ಥಿತಿ ಏನು? ಇದರ ಬಗ್ಗೆ ಯಾರೂ ಅರಿತುಕೊಳ್ಳುವುದನ್ನು ಮಾಡಲಿಲ್ಲವಲ್ಲಾ? ಮೊದಲು ಅವರ ಬೇಡಿಕೆ, ಒತ್ತಾಯ, ಮನವಿಯ ಬಗ್ಗೆ ಇಡೀ ಪ್ರದೇಶದಲ್ಲಿ ಬಡತನದ ಬೇಗೆಯಿಂದ ಸತ್ತು ನರಳುತ್ತಿರತಕ್ಕಂಥ ಜನರ ಕಲ್ಯಾಣದ ಬಗ್ಗೆ ನಾವ್ಯಾರೂ ಚಿಂತನೆ ಮಾಡಲಿಲ್ಲ, ನಮ್ಮಲ್ಲಿ ಬಂದೂಕಿನ ಒಂದೇ ಚಿಂತನೆಯೆ? ಗುಂಡಿನ ಕಾಳಗ ಒಂದೆಯೆ? ಇದು ಸಾಧ್ಯವಿಲ್ಲ, ಅದು ಆದಮೇಲೆ ಮುಖ್ಯಮಂತ್ರಿಗಳ ಹತ್ತಿರ ಬಂದಾಗ ಅವರು ಏನು ಹೇಳಬೇಕು, ಆ ರೀತಿ ಸತ್ತಿರುವವರ ಹೆಣವನ್ನು ನಾವು ನಿಮಗೆ ಕೊಡುತ್ತೇವೆ ಎಂದರು, ಅದು ಆದಮೇಲೆ ಮುಖ್ಯಮಂತ್ರಿಗಳ ಗಮನಕ್ಕೂ ಬಾರದೆಯೆ ಆ ಹೆಣಗಳನ್ನು ಪೋಲೀಸಿನವರು ಸುಟ್ಟರು, ಏಕೆ? ಏಕೆ ಅಷ್ಟೊಂದು ತರಾತುರಿಯಲ್ಲಿ ಸುಡಬೇಕಾಗಿತ್ತು ಎಂಬುದೊಂದೇ ನನ್ನ ಪ್ರಶ್ನೆ? ಏಕೆ ತರಾತುರಿಯಲ್ಲಿ ಸುಟ್ಟಿರಿ ಎಂಬ ನೇರವಾದ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಸತ್ತಿರುವ ಹೆಣವನ್ನು ತರಾತುರಿಯಿಂದ

ಸುತ್ತಲೂ ಪೋಲೀಸ್‌ನ ಬಂದೋಬಸ್ತನ್ನು ಹಾಕಿಕೊಂಡು ಆ ಹೆಣವನ್ನು ಸುಟ್ಟು ಬೂದಿ ಮಾಡುವ ಉದ್ದೇಶವೇನು? ಸಾಕ್ಷ್ಯವನ್ನು ಸಂಪೂರ್ಣವಾಗಿ ಮರೆಮಾಚಿ ಸಾಕ್ಷ್ಯವನ್ನು ನಾಶ ಮಾಡತಕ್ಕ ಒಂದೇ ಒಂದು ಉದ್ದೇಶ ಅದರಲ್ಲಿ ಇತ್ತು. ಅದು ಬಿಟ್ಟು ಬೇರೆ ಯಾವುದೇ ಉದ್ದೇಶವಿಲ್ಲ. ಮೊದಲನೆಯದಾಗಿ ಅವರನ್ನು ಹೊಡೆಯಬಾರದಿತ್ತು. ಹೊಡೆದ ಮೇಲೆ ನೀವು ನಡೆದಂಥ ರೀತಿ ನೀತಿಗಳಿದೆಯಲ್ಲಾ ಅದರ ಬಗ್ಗೆ ನನಗೇನು ಅಂಥ ಸಮಾದಾನ ತರತಕ್ಕ ಉದ್ದೇಶವಲ್ಲ, ನಕ್ಸಲೀಯರಿಂದಲೇ ಈ ದೇಶದ ಉದ್ಧಾರ ಎಂಬ ಪ್ರಶ್ನೆಯಲ್ಲ, ನಕ್ಸಲೀಯರು ಇವತ್ತು ಶಸ್ತ್ರಾಸ್ತ್ರಗಳನ್ನು ಬದಿಗೊತ್ತಿ ಪ್ರಜಾತಂತ್ರ ವ್ಯವಸ್ಥೆಗೆ ಬರಬೇಕು, ಪ್ರಜಾತಂತ್ರ ಚಿಂತನೆಗೆ ಬರಬೇಕು, ಪ್ರಜಾತಂತ್ರದ ಒಕ್ಕೂಟಕ್ಕೆ ಬರಬೇಕು, ಪ್ರಜಾತಂತ್ರದ ಜೊತೆಯಲ್ಲಿ ಬೆಳೆದು ಸಂಯಮದಿಂದ ಅವರು ಹೋರಾಟವನ್ನು ಜೊತೆಯಲ್ಲಿ ಸೇರಿ ಸಮಗ್ರವಾದ ಹೋರಾಟವನ್ನು ಮಾಡಬೇಕಾದದ್ದು ಅವರ ಕರ್ತವ್ಯ. ಅಲ್ಲಿ ಇಬ್ಬರು ಸತ್ತ ಮೇಲೆ ನಮ್ಮ ಗಡಿ ಪ್ರದೇಶಗಳಲ್ಲಿ ಪೋಲೀಸ್ ಬಂದೋಬಸ್ತು ಎಷ್ಟಿರಬೇಕಾಗಿತ್ತು? ಇದಾದ ಮೇಲೆ ನಿಮ್ಮ ಕರ್ತವ್ಯವೇನು? ಪೋಲೀಸ್‌ರ ಕರ್ತವ್ಯವೇನು? ಪಾವಗಡ ಮುಂತಾದ ಎಲ್ಲೆಲ್ಲಿ ಗಡಿ ಪ್ರದೇಶಗಳಿವೆಯೋ, ಅಲ್ಲಿ ಪೋಲೀಸ್ ಬಂದೋಬಸ್ತು ಮಾಡಬೇಕಾಗಿತ್ತು. ಪೋಲೀಸಿನವರ ಬೇಜವಾಬ್ದಾರಿತನದಿಂದ ಮತ್ತು ವಿಫಲತೆಯಿಂದಾಗಿ ಪಾವಗಡದಲ್ಲಿ ನಮ್ಮ ಪೋಲೀಸರು ಸತ್ತರು. ನಕ್ಸಲೈಟ್‌ರು ಅಲ್ಲಿ ಸತ್ತ ತಕ್ಷಣ ನೀವು ಸಮಗ್ರವಾಗಿ ಪಾವಗಡ ಮುಂತಾದ ಗಡಿ ಪ್ರದೇಶಗಳಲ್ಲಿ ಬಿಗಿಯಾದ ಬಂದೋಬಸ್ತನ್ನು ಏರ್ಪಡಿಸಬೇಕಾಗಿತ್ತು. ಆ ಕೆಲಸವನ್ನು ನೀವು ಮಾಡಲಿಲ್ಲ. ಇದರಿಂದ ಅಲ್ಲಿ ಪೋಲೀಸಿನವರು ಸತ್ತರು. ಅಲ್ಲಿ ಸತ್ತ ಪೋಲೀಸರ ಕುಟುಂಬಕ್ಕೆ 5 ಲಕ್ಷ ರೂಪಾಯಿಗಳಂತೆ ಪರಿಹಾರ ಕೊಡುವುದು ಏನೇನೂ ಅಲ್ಲ. ಇದು ಹರಾಜಲ್ಲ, ವ್ಯಾಪಾರ ಅಲ್ಲ. ಸತ್ತ ಐದು ಜನ ಪೋಲೀಸರು ಎಂತಹ ಪರಿಸ್ಥಿತಿಯಲ್ಲಿ ಅಲ್ಲಿ ಮಲಗಿದ್ದರು? ಹಳ್ಳಿಯ ರೈತರು ವಾಸ ಮಾಡುವುದಕ್ಕಿಂತ ಕಡೆಯದಾದ ಒಂದು ಹಳೆಯ ಸೋರುವ ಶಾಲೆಯೊಂದರಲ್ಲಿ ಅವರು ಮಲಗಿದ್ದರು. ರಾತ್ರೋರಾತ್ರಿ 150 ಜನರು ಬಂದು ಅಲ್ಲಿ ಧಾಳಿ ಮಾಡುವವರೆಗೂ ಪೋಲೀಸರಿಗೆ ಇದರ ಸುದ್ದಿಯೇ ಗೊತ್ತಿರಲಿಲ್ಲ. ಪೋಲೀಸರಿಗೆ ಇದರ ಮುನ್ಸೂಚನೆ ಸಿಕ್ಕಿರಲಿಲ್ಲ. ಈ ವಿಚಾರ ಗೊತ್ತಿಲ್ಲವೆಂದರೆ ಹೇಗೆ? ಅನವಶ್ಯಕವಾಗಿ ನಮ್ಮ ನಿರಪರಾಧಿ ಪೋಲೀಸರು ಇದರಿಂದಾಗಿ ಸಾಯುವಂತಾಯಿತು. ಮೊದಲನೆಯದಾಗಿ, ನಕ್ಸಲೈಟರು ಸತ್ತ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಎರಡನೆಯದಾಗಿ, ಇಲ್ಲಿ ನಮ್ಮ ಪೋಲೀಸಿನವರು ಸತ್ತಿರುವ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಸದನ ಸಮಿತಿ ಮಾಡುವುದು ಬೇರೆ, ಅದು ಇರಲಿ. ಅದರ ಪ್ರಕಾರ ನಾವು ಹೋಗೋಣ. ನ್ಯಾಯಾಂಗ ತನಿಖೆಯೂ ಆಗಬೇಕು. ನ್ಯಾಯಾಂಗ ತನಿಖೆಯಾಗಿ, ಕನಿಷ್ಠ ಒಂದು ತಿಂಗಳಲ್ಲಿ ಅದು ನಮಗೆ ವರದಿಯನ್ನು ಸಲ್ಲಿಸತಕ್ಕಂಥದ್ದು ಆಗಲೇಬೇಕು. ಇಲ್ಲದಿದ್ದರೆ ಎಲ್ಲೋ ಒಂದು ಕಡೆ ಅಪರಾಧವೊಂದನ್ನು ನಾವು ಮಾಡುತ್ತಿದ್ದೇವೇನೋ ಎಂಬ ಪ್ರಶ್ನೆ ನಿರಂತರವಾಗಿ ನಮ್ಮನ್ನು ಕಾಡುತ್ತಿದೆ. ಬಹಳ ದಿವಸಗಳ ಕಾಲ ಈ ವ್ಯವಸ್ಥೆ ಹೀಗೇ ಮುಂದುವರೆದರೆ, ಮಾನ್ಯ ಅಧ್ಯಕ್ಷರೇ, ನಾವು ಮತ್ತು ನೀವು ಓಡಾಡುವುದಕ್ಕೆ ಭಯ–ಭೀತಿ ಪಡತಕ್ಕಂಥ ಪರಿಸ್ಥಿತಿ ಬರುತ್ತದೆ . . . . .

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ವಾಟಾಳ್‌ರವರೇ, ತಾವು House Committee ಮಾಡಬೇಕೆಂದಿರಿ. ಅದರ ವ್ಯಾಪ್ತಿ ಏನು? ಅದು ಯಾವ ವಿಷಯದ ಬಗ್ಗೆ ತನಿಖೆ ಮಾಡಬೇಕೆಂಬುದು ತಮ್ಮ ಅಭಿಪ್ರಾಯವಾಗಿದೆ?

ಶ್ರೀ ವಾಟಾಳ್ ನಾಗರಾಜ್ : ನಾನು ನ್ಯಾಯಾಂಗ ತನಿಖೆಯಾಗಬೇಕೆಂದು ಹೇಳಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ವೆಂಕಟಮ್ಮನಹಳ್ಳಿಯ ಘಟನೆ ಬಗ್ಗೆ ಸದನ ಸಮಿತಿಯನ್ನು ರಚನೆ ಮಾಡಿ, ವರದಿಯನ್ನು . . . . .

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ವಾಟಾಳ್ ನಾಗರಾಜ್‌ರವರು ಚಿಕ್ಕಮಗಳೂರು ಘಟನೆಯನ್ನು ಪ್ರಸ್ತಾಪ ಮಾಡುವಾಗ, ಅದರ ಬಗ್ಗೆ ಅವರು ಮರುಕ ಪಟ್ಟರು, ಹೀಗೆ ಮಾಡಬಾರದಾಗಿತ್ತು ಎಂದರು. ಅವರು ಸ್ಪಷ್ಟವಾಗಿ ಹೇಳಲಿಲ್ಲ. ಅವರಿಗೆ ಎನ್‌ಕೌಂಟರ್ ಬಗ್ಗೆ ಅನುಮಾನ ಇದೆ. ಇದು fake ಎನ್‌ಕೌಂಟರ್‍ರೇ ಅಥವಾ genuine ಎನ್‌ಕೌಂಟರ್‍ರೇ? ಪೋಲೀಸಿನವರು first fire open ಮಾಡಿದರಾ? ಅವರು ಮಾಡಿದ್ದಕ್ಕೆ ಇವರು defence ಮಾಡಿದರಾ? ಅದನ್ನು he must clarfiy? House Committee ವ್ಯಾಪ್ತಿ ಏನು? ಅದು "fake encounter" ಎಂದು ನೀವು charge ಮಾಡುತ್ತೀರಾ ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಗೃಹ ಮಂತ್ರಿಗಳಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ನನಗೆ ಅವರ ಬಗ್ಗೆ ಅಪಾರವಾದ ಗೌರವ ಇದೆ. STF ನವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದೇನೂ ಹೊಗಳುವುದಕ್ಕೆ ನಾನು ತಯಾರಾಗಿಲ್ಲ. ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಬರಲಿ. ಆ ವರದಿ ಬಂದಾಗ ಏನೇನಾಗಿದೆ, ಎಷ್ಟು ಜನ ನಿರಪರಾಧಿಗಳು ಏನೇನಾಗಿದ್ದಾರೆ ಎಂಬುದು ನಮಗೆ ಗೊತ್ತಾಗುತ್ತದೆ. STF ನವರನ್ನು ಒಂದು ಸಾರಿ ನಕ್ಸಲೈಟ್ ಹಿಡಿಯುವುದಕ್ಕೆ ಹಾಕುತ್ತೇವೆ ಎಂದು ಹೇಳುತ್ತೀರಿ. ಮತ್ತೊಂದು ಸಾರಿ ಹಾಕುವುದಿಲ್ಲ ಎಂದು ಹೇಳುತ್ತೀರಿ. ಇನ್ನೊಂದು ಸಾರಿ ನಾವು ಇದಕ್ಕಾಗಿ ಭದ್ರವಾದಂತಹ ಬುನಾದಿ ಇರತಕ್ಕಂಥ ಪಡೆಗಳನ್ನು ರಚನೆ ಮಾಡಿದ್ದೇವೆ ಎಂದು ಹೇಳುತ್ತೀರಿ. ಯಾವ ಪಡೆಗಳನ್ನು ನೀವು ರಚನೆ ಮಾಡಿದ್ದೀರಿ? ನಕ್ಸಲೈಟ್ಸ್ ಹಿಡಿಯುವುದಕ್ಕೆ ವೀರಪ್ಪನ್ ಹಿಡಿಯಲು ರಚಿಸಿದಂತಹ ತಂಡ ಬೇಡ. ವೀರಪ್ಪನ್ ಹಿಡಿಯಲು ನೇಮಿಸಿದಂತಹ ತಂಡಕ್ಕೆ ವಹಿಸಿದಂತಹ ವಿಚಾರವೇ ಬೇರೆ. ವೀರಪ್ಪನ್‌ನ ವಿಚಾರಧಾರೆಗಳೇ ಬೇರೆ, ಈ ನಕ್ಸಲೈಟ್‌ಗಳ ವಿಚಾರಧಾರೆಗಳೇ ಬೇರೆ. STF ನವರನ್ನು ಇದಕ್ಕೆ ನೇಮಿಸಿದರೆ ಸರಿ ಹೋಗುವುದಿಲ್ಲ. STF ನವರ ಬಗ್ಗೆ ನನಗೆ ಅಪಾರವಾದಂತಹ ಗೌರವ ಇದೆ. ನಾನು ಅವರ ಇತಿಹಾಸವನ್ನೆಲ್ಲಾ ನೋಡಿದ್ದೇನೆ. ಇವತ್ತು ರೈತ ಮುಖಂಡರೊಬ್ಬರು ಏನು ಹೇಳಿದ್ದಾರೆ ಎಂದರೆ, ತಾವು ಅದನ್ನು ಓದಿರಬಹುದು, ಅದು ತಮ್ಮ ಗಮನಕ್ಕೂ ಸಹ ಬಂದಿರಬಹುದು. 'ವೀರಪ್ಪನ್ ಸಾಯಬಾರದಾಗಿತ್ತು, ವೀರಪ್ಪನ್ ಕೊಂದದ್ದು ತಪ್ಪು, ಅವನು ಸತ್ತದ್ದರಿಂದ ಅಲ್ಲಿ ಗ್ರಾನೈಟ್ ದಂಧೆ ಶುರುವಾಯಿತು, ಲೂಟಿ ಶುರುವಾಯಿತು, ಇದೆಲ್ಲಾ ಶುರುವಾಯಿತು' ಎಂದು ರೈತ ಮುಖಂಡರೊಬ್ಬರು ಮಾತನಾಡುವಂತಹ ಮಟ್ಟಕ್ಕೆ ಪರಿಸ್ಥಿತಿ ಬಂದು ಮುಟ್ಟಿದೆ. ವೀರಪ್ಪನ್ ಸಾಯುವುದನ್ನೇ ನಮ್ಮಲ್ಲಿ ಕಾಯ್ದುಕೊಂಡಿದ್ದರು. ವೀರಪ್ಪನ್ ಸತ್ತರೆ ಸಾಕು, ಗ್ರಾನೈಟ್ ದಂಧೆಗೆ ಕೈ ಹಾಕೋಣ ಎಂದು ಕಾಯುತ್ತಿದ್ದರು. ಮಹದೇಶ್ವರ ಬೆಟ್ಟದಲ್ಲಿ ಈಗ ಸಮಗ್ರವಾಗಿ ಲೂಟಿ ಮಾಡುವುದಕ್ಕೆ ಹೊರಟಿದ್ದಾರೆ. ವೀರಪ್ಪನ್ ಇದ್ದಾಗ ಮಹದೇಶ್ವರ ಬೆಟ್ಟದ ಪ್ರದೇಶದಲ್ಲಿ ಬಹಳಷ್ಟು ಪರಿಣಾಮಕಾರಿಯಾಗಿ ಗ್ರಾನೈಟ್ ಲೂಟಿ ನಿಂತಿತ್ತು. ಅದು ತಮಗೂ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ ಮಹದೇಶ್ವರ ಬೆಟ್ಟದ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ಕೊಡಬಾರದು. ಈಗ ಅಲ್ಲಿ ವೀರಪ್ಪನ್ ಸತ್ತಿದ್ದಾನೆ. ವೀರಪ್ಪನ್‌ನನ್ನು ಮೀರಿಸತಕ್ಕಂಥ ಗ್ರಾನೈಟ್ ಕಳ್ಳರು ಅಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ಕೋರಿ ತಮ್ಮ ಮೇಲೆ ಇನ್ನಿಲ್ಲದ ಪ್ರಭಾವ ಬೀರಲಿಕ್ಕೆ ಬರತಕ್ಕಂಥ ವ್ಯವಸ್ಥೆ ಇದೆ. ದಯಮಾಡಿ ತಾವು ಯಾವುದೇ ಕಾರಣಕ್ಕೂ,

ತಾವು ಇರುವವರೆಗೆ, ಅಲ್ಲಿ ಗಣಿಗಾರಿಕೆಗೆ ಅವಕಾಶವನ್ನು ಕೊಡಬಾರದು. ಒಂದು ವೇಳೆ ಅನುಮತಿ ಕೊಟ್ಟರೆ, ಅದರಿಂದಾಗಿ ಆ ಪ್ರದೇಶದ ಪಾವಿತ್ರತೆ ಹಾಳಾಗುತ್ತದೆ ಮತ್ತು ಮಹದೇಶ್ವರ ಬೆಟ್ಟದ ಇತಿಹಾಸ ಹಾಳಾಗುತ್ತದೆ. ನಾಳೆ ಇದರಿಂದಾಗಿ ತಾವು ಕೆಟ್ಟ ಅಪವಾದಕ್ಕೆ ಗುರಿಯಾಗಬಾರದೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಬೆಂಗಳೂರು ನಗರದ ರೈಲ್ವೆ ನಿಲ್ದಾಣ ಮತ್ತು ವಿಮಾನ ನಿಲ್ದಾಣ ಮುಂತಾದ ಕಡೆಗಳಲ್ಲೆಲ್ಲಾ ಭಯೋತ್ಪಾದಕರು ಎಷ್ಟು ಧಾರಾಳವಾಗಿ ಬಂದು, ಅವರ ಶಸ್ತ್ರಾಸ್ತ್ರಗಳನ್ನು ಇಟ್ಟು ಹೋಗುತ್ತಿದ್ದಾರೆ. ಇದನ್ನೆಲ್ಲಾ ನೋಡಿದಾಗ, ಬೆಂಗಳೂರು ನಗರಕ್ಕೇ ಒಂದು ವಿಶೇಷ ಪೊಲೀಸ್ ವ್ಯವಸ್ಥೆ ಬೇಕೆನಿಸುತ್ತದೆ. ಇಡೀ ರಾಜ್ಯಕ್ಕೆ ಬೇರೆ ಪೊಲೀಸರಾದರೆ, ಬೆಂಗಳೂರು ನಗರಕ್ಕೆಂದೇ ಬೇರೆ ಪೊಲೀಸ್ ವ್ಯವಸ್ಥೆಯನ್ನು ಮಾಡಬೇಕು. ಬೆಂಗಳೂರು ನಗರದ ಸಮಗ್ರ ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತು ಭಯೋತ್ಪಾದನೆ ಮತ್ತಿತರ ಎಲ್ಲಾ ಬಗೆಯ ಅನಿಷ್ಟಗಳನ್ನು ತಡೆಯಲಿಕ್ಕೆ ಬೆಂಗಳೂರಿಗಾಗಿಯೇ ವಿಶೇಷವಾದಂತಹ ಹೊಸ ಪೊಲೀಸ್ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕಾಗಿ ಚಿಂತನೆ ಮಾಡಬೇಕು. ಹದ್ದಿನ ಕಣ್ಣಿನ ರೀತಿಯಲ್ಲಿ ಕಟ್ಟೆಚ್ಚರ ವಹಿಸುವಂತಹ ವಿಶೇಷ ಪೊಲೀಸ್ ವ್ಯವಸ್ಥೆಯೊಂದನ್ನು ಬೆಂಗಳೂರಿಗಾಗಿಯೇ ಮಾಡಬೇಕು. ಇದಲ್ಲದೆ ರಾಜ್ಯಕ್ಕಾಗಿಯೇ ವಿಶೇಷ ಪೊಲೀಸ್ ವ್ಯವಸ್ಥೆಯೊಂದನ್ನೂ ಸಹ ಮಾಡಬೇಕು. ಇದನ್ನು ಮಾಡಲಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಇನ್ನು ಮೂರನೆಯದಾಗಿ, ಸರ್ವೋಚ್ಛ ನ್ಯಾಯಾಲಯ ಹೇಳಿದಾಕ್ಷಣ ಜಯಲಲಿತಾರವರ ವಿಚಾರಣೆ ಇಲ್ಲಿಯ ನ್ಯಾಯಾಲಯದಲ್ಲಿ ನಡೆಯಬೇಕು ಎಂಬುದರಲ್ಲಿ ಅರ್ಥ ಇಲ್ಲ. ಈಗಾಗಲೇ ನಾವು ಅಪಾಯದಲ್ಲಿ ಸಿಕ್ಕಿದ್ದೇವೆ, ನಮ್ಮಲ್ಲಿ ಭಯೋತ್ಪಾದಕರು ಬರುತ್ತಿದ್ದಾರೆ, ಬೇರೆ ಬೇರೆ ಕೊಲೆಪಾತಕರು ಬರುತ್ತಿದ್ದಾರೆ, ಅಂತಾದ್ದರಲ್ಲಿ ಜಯಲಲಿತಾಗೆ ರಕ್ಷಣೆ ಕೊಡುವುದಕ್ಕೆ ನಮಗೆ ಎಲ್ಲಿಂದ ಸಾಧ್ಯ? ಈ ಬಗ್ಗೆ ಕರ್ನಾಟಕ ಸರ್ಕಾರ ಸರ್ವೋಚ್ಛ ನ್ಯಾಯಾಲಯಕ್ಕೆ ನೇರವಾಗಿ, 'ನಮ್ಮ ಕೈಯ್ಯಲ್ಲಿ ಆಗುವುದಿಲ್ಲ, ನಮಗೆ ನಮ್ಮದೇ ಕಷ್ಟ ಬಹಳ ಇದೆ, ಇಲ್ಲಿ ನಾವು ನ್ಯಾಯಾಲಯ ಮಾಡುವುದಕ್ಕಾಗುವುದಿಲ್ಲ' ಎಂದು ಹೇಳಿದ್ದರೆ ಚೆನ್ನಾಗಿತ್ತು. ಅವರ ವಿಚಾರಣೆ ಉತ್ತರ ಪ್ರದೇಶ ಅಥವಾ ಇನ್ನಿತರ ರಾಜ್ಯಗಳಲ್ಲಿ ಬೇಕಾದರೆ ನಡೆಯಲಿ. ಅವರ ವಿಚಾರಣೆ ಎಲ್ಲಿ ಬೇಕಾದರೂ ನಡೆಯಲಿ. ಕರ್ನಾಟಕ ರಾಜ್ಯಕ್ಕೆ ಎಲ್ಲರನ್ನೂ ಕೂಡ ಆಹ್ವಾನ ಮಾಡುವುದು ಎಷ್ಟರಮಟ್ಟಿಗೆ ಸರಿ? ಇದೇನು ಎಂದು ನನಗೆ ಅರ್ಥವಾಗುತ್ತಿಲ್ಲ. ಯಾರ ಪ್ರೀತಿಗೋಸ್ಕರ ಅವರ ವಿಚಾರಣೆ ಇಲ್ಲಿ ನಡೆಯುತ್ತಿದೆ? ಇದು ಸರಿಯಾದ ಮಾರ್ಗವಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ, ಜಯಲಲಿತಾರವರ ವಿಚಾರಣೆ ಇಂದು ಆರಂಭವಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೈ ಮುಗಿದು ಕೇಳುತ್ತೇನೆ, ತಾವು ಇವತ್ತೇ ಸರ್ವೋಚ್ಛ ನ್ಯಾಯಾಲಯಕ್ಕೆ ಮನವಿಯೊಂದನ್ನು ಸಲ್ಲಿಸಿ, 'ನಮ್ಮ ಕೈಯಲ್ಲಿ ಇವರಿಗೆ ಭದ್ರತೆ ಕೊಡುವುದಕ್ಕೆ ಆಗುವುದಿಲ್ಲ' ಎಂದು ನೇರವಾಗಿ ಹೇಳಬೇಕು. ಇದರಿಂದ ತಪ್ಪೇನೂ ಮಾಡಿದಂತಾಗುವುದಿಲ್ಲ. ಕಾವೇರಿ ಬಗ್ಗೆ ಮತ್ತು ಇತರ ವಿಚಾರಗಳ ಬಗ್ಗೆ ನಮ್ಮಲ್ಲಿ ಚಳುವಳಿಗಳು ನಡೆದಿರುವಾಗ, ಅವರಿಗೆ ನಾವು ಭದ್ರತೆ ಕೊಡಲು ಹೇಗೆ ಸಾಧ್ಯ? ನಮ್ಮ ರಾಜ್ಯದ ಜನಕ್ಕೇ ನೀವು ರಕ್ಷಣೆ ಕೊಡಲಿಕ್ಕೆ ಸಾಧ್ಯವಾಗದಿರುವಾಗ, ನೀವು ಜಯಲಲಿತಾಗೆ ರಕ್ಷಣೆ ಕೊಡಲು ಹೊರಟಿದ್ದೀರಿ. ಬೇರೆ ಯಾರಿಗೂ ಬೇಡ, ನಮ್ಮ ಪೊಲೀಸರಿಗೇ ರಕ್ಷಣೆ ಕೊಡಲು ಆಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಬೇರೆ ಇನ್ಯಾರಿಗೆ ನೀವು ರಕ್ಷಣೆ ಕೊಡಬಲ್ಲಿರಿ? ಆದುದರಿಂದ ತಾವು ಇದರ ಬಗ್ಗೆ ಚಿಂತನೆ ಮಾಡಿ, ಬೇರೆ ರೀತಿಯಲ್ಲಿ ಹೋಗುವುದು ಒಳ್ಳೆಯದು. ಕೊನೆಯದಾಗಿ, ನಾವೆಲ್ಲರೂ ಪಕ್ಷಾತೀತವಾಗಿ ಕುಳಿತು ಈ ರಾಜ್ಯದ ಕಾನೂನು ಸುವ್ಯವಸ್ಥೆ ಮತ್ತು ಪೊಲೀಸ್ ಇಲಾಖೆಯ ಪುನರ್ ನಿರ್ಮಾಣದ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ತಮ್ಮ ಅಧ್ಯಕ್ಷತೆಯಲ್ಲಿ ಒಂದು ವ್ಯವಸ್ಥೆ ಮಾಡಿ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :. ಸದನವನ್ನು ಮಧ್ಯಾಹ್ನ 2.30 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1.30 ನಿಮಿಷಕ್ಕೆ ಮುಂದೂಡಲಾಯಿತು)

(ಸಭೆಯು ಪುನಃ ಮಧ್ಯಾಹ್ನ 2.57ಕ್ಕೆ ಸಮಾವೇಶಗೊಂಡಿತು, ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.)

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಸದನದಲ್ಲಿ ಸಚಿವರುಗಳ ಗೈರು ಹಾಜರಿ ಬಗ್ಗೆ.

ಅಧ್ಯಕ್ಷರು : ಈಗ ಮಾನ್ಯ ಶ್ರೀರಾಮರೆಡ್ಡಿಯವರೆ ಮಾತನಾಡಿ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾರೂ ಮಂತ್ರಿಗಳೇ ಇಲ್ಲವಲ್ಲಾ.

ಅಧ್ಯಕ್ಷರು : ಮಂತ್ರಿಗಳು ಬರುತ್ತಾರೆ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ : ಯಾರಿದ್ದಾರೆ? ಪಾಪ, ಮಾನ್ಯ ಸತ್ಯನಾರಾಯಣ್ ಅವರಿಗೂ ನಕ್ಸಲೈಟ್‌ಗೂ ಏನು ಸಂಬಂಧ?

ಅಧ್ಯಕ್ಷರು : ಈ ಕಡೆ ಮಂತ್ರಿಗಳನ್ನು ನೋಡಿ, ಬಹಳ ಜನ ಇದ್ದಾರೆ. ಮಾನ್ಯ ಸತ್ಯನಾರಾಯಣ್ ಇದ್ದಾರೆ, ಬಹಳ ಜನ ಇದ್ದಾರಲ್ಲಾ ಮಂತ್ರಿಗಳು.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ : ಮಾನ್ಯ ಬಸವರಾಜ ರಾಯರೆಡ್ಡಿಯವರೆ, ನೀವು ಸಮರ್ಥನೆ ಮಾಡಿ, ಆದರೆ ಇಷ್ಟು ಕೆಟ್ಟದಾಗಿ ಸಮರ್ಥನೆ ಮಾಡಿಕೊಳ್ಳಬೇಡಿ.

ಅಧ್ಯಕ್ಷರು : ಮಂತ್ರಿಗಳು ಬರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ನನಗೆ ಹೇಳಿ ಹೋಗಿದ್ದಾರೆ, ಬೇರೆ ಮಂತ್ರಿಗಳು ಬರೆದುಕೊಳ್ಳುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ರಾಯರೆಡ್ಡಿಯವರಿಗೆ ಡೆಲಿಗೇಟ್ ಮಾಡೋದು .

ಅಧ್ಯಕ್ಷರು : ಇಲ್ಲ, ಮಂತ್ರಿಗಳು ಇದ್ದಾರಲ್ಲ, ಮಾನ್ಯ ಸತ್ಯನಾರಾಯಣ್ ಇದ್ದಾರೆ, ಶ್ರೀಮತಿ ಭಾಗೀರಥಿಯವರು ಇದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ನಮಗೆ ಏನೂ ಆಗುವುದಿಲ್ಲ, ರಾಮಲಿಂಗಾರೆಡ್ಡಿಯವರು ಇದ್ದಾರೆ. You say there is no Home Minister.

ಶ್ರೀ ಜೆ.ಸಿ.ಮಾಧುಸ್ವಾಮಿ : ಜೆ.ಪಿ.ಎ. ಏನಾದರೂ ಇದೆಯಾ?

ಶ್ರೀ ಬಸವರಾಜ ರಾಯರೆಡ್ಡಿ : ಹೋಮ್ ಮಿನಿಸ್ಟರ್ ಇಲ್ಲವೆಂದರೆ ನಾನು ಒಪ್ಪುತ್ತೇನೆ. ಆದರೆ ಮಂತ್ರಿಗಳಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಹೋಮ್ ಮಿನಿಸ್ಟರ್ ಅವರು ಹೇಳಿ ಹೋಗಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಜನರಲ್ ಪವರ್ ಆಫ್ ಅಟಾರ್ನಿ ಇದೆಯಾ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಅಲ್ಲ; ಇಲ್ಲಿ ಇರಬೇಕಾಗಿರುವವರು ಹೋಮ್ ಮಿನಿಸ್ಟರ್, ಫಾರಸ್ಟ್ ಮಿನಿಸ್ಟರ್ . . .

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ ಮಾತನಾಡಿ. ಮಾನ್ಯ ಮುಖ್ಯಮಂತ್ರಿಗಳು ಯಾವುದೋ ಒಂದು ವಿಚಾರದಲ್ಲಿ ಯಾರನ್ನೋ ಭೇಟಿಯಾಗುವುದಕ್ಕೆ ನನಗೆ ಹೇಳಿ ಹೋಗಿದ್ದಾರೆ. ಉಳಿದಂತಹ ಮಂತ್ರಿಗಳು ಇಲ್ಲಿ ಇದ್ದಾರೆ, ಮಾತನಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಅದಕ್ಕಿಂತ ಮೊದಲು ನಾಳೆ ಯಾವುದೋ ಸಿನಿಮಾಕ್ಕೆ ನಮ್ಮನ್ನು ಕರೆದಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಸೈಡ್ ಹೇಳಿದರು, ಎರಡೂ ಸೈಡ್ ಸದಸ್ಯರು ಇಲ್ಲ. ಆ ಕಡೆನೂ ಇಲ್ಲ, ಈ ಕಡೆನೂ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾಳೆ ಯಾವುದೋ ಸಿನಿಮಾ ನೋಡಿ ಎಂದು ಕಾಮನ್ ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ರವರು ಕರೆದಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಮಂತ್ರಿಗಳು ಇಲ್ಲ ಎಂದು ಹೇಳುತ್ತಿರುವುದು, ನಮ್ಮ ಕಡೆ ಇಲ್ಲ ಎಂದಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ಎಲ್ಲರೂ ಇರಬೇಕು, ಮಂತ್ರಿಗಳೂ ಇರಬೇಕು, ಅವರು ಇರಬಾರದು ಎಂದು ನಾನು ಹೇಳುತ್ತಿಲ್ಲ. ಆದರೆ ಅಸೆಂಬ್ಲಿ ತುಂಬಾ ಸದಸ್ಯರು ಇರಬೇಕು ಇದ್ದರೆ ಚೆನ್ನಾಗಿ ಇರುತ್ತದೆ. ಎರಡೂ ಕಡೆನೂ ಪರಿಸ್ಥಿತಿ ಹಾಗೆ ಇದೆ. ಮಂತ್ರಿಗಳು ಇರಬಾರದು ಎಂದು ಹೇಳಬಲ್ಲ, ನಾನು ನಿಮ್ಮ ವಾದಕ್ಕೆ ಒಪ್ಪುತ್ತೇನೆ. ಆದರೆ ಅಲ್ಲಿಯಾದರೂ ಸದಸ್ಯರು ಇರಬೇಕಲ್ಲಾ.

ಶ್ರೀ ಜೆ.ಸಿ.ಮಾಧುಸ್ವಾಮಿ : ಇಲ್ಲಿಯವರು ಇದ್ದೇವೆ, ಅಲ್ಲಿ ನಿಮ್ಮ ಕಡೆ ಹೇಳಿ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ನಾಳೆ 5.00 ಘಂಟೆಗೆ ಲೆಜಿಸ್ಲೇಚರ್ ಬಸ್ಸುಗಳ ವ್ಯವಸ್ಥೆ ಇದೆ, ತಾವು ಫಿಲಂ ಬಗ್ಗೆ ತಾನೇ ಹೇಳುತ್ತಿದ್ದೀರಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಗೃಹಮಂತ್ರಿಗಳನ್ನು ಕೇಳಿದಿರಿ, ಗೃಹಿಣಿ ಮಂತ್ರಿ ಇದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಗೃಹಿಣಿ ಮಂತ್ರಿಯನ್ನು ಅಲ್ಲ ನಾನು ಕೇಳಿದ್ದು, ಗೃಹ ಮಂತ್ರಿಯನ್ನು.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾಳೆ ಸಿನಿಮಾ ನೋಡುವುದಕ್ಕೆ ಕನ್ಸೆಂಟ್ ಕೊಡಿ ಎಂದು ನಮಗೆಲ್ಲಾ ಕಾಗದ ಬರೆದಿದ್ದಾರೆ. ಏನು ಸಿನಿಮಾ? ಏಕೆ ತೋರಿಸುತ್ತೀರಿ? ಯಾವ ಸಿನಿಮಾ ಎಂದು ಗೊತ್ತಿಲ್ಲವಲ್ಲಾ. ಅದು ಕಮರ್ಷಿಯಲ್ ಸಿನಿಮಾನ, ಡಾಕ್ಯುಮೆಂಟರಿನಾ? ಇದನ್ನು ಸಿ.ಪಿ.ಎ. ನವರು ಏಕೆ ತೋರಿಸುತ್ತಾರೆ? ಅದನ್ನು ಹೇಳಬೇಕು.

ಅಧ್ಯಕ್ಷರು : ಇರಲಿ, ಏನೋ ಅರೆಂಜ್ ಮಾಡಿದ್ದೇವೆ, ನೀವು ನೋಡಿ ಸ್ವಾಮಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ವಿಧಾನಪರಿಷತ್ತಿನವರು ಸಿನಿಮಾ ನೋಡುವುದಕ್ಕೆ ನಮಗೆ ಕಾಗದ ಬರೆದು, ನೀವು ನಕ್ಕರೆ ಹೇಗೆ ಸ್ವಾಮಿ?

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ಲವ್ ಸ್ಟೋರಿ.

ಶ್ರೀ ವಾಟಾಳ್ ನಾಗರಾಜ : ಇದು ಸಮ್ಮಿಶ್ರ ಸರ್ಕಾರ, 13 ಜನ ಇಲ್ಲಿ ಇದ್ದಾರೆ ಅದರಲ್ಲಿ 3 ಜನ ಮಂತ್ರಿಗಳು ಇದ್ದಾರೆ. ಮಿಕ್ಕವರು ಎಲ್ಲಿ ಹೋಗಿದ್ದಾರೆ? ಏನಾಗಿದ್ದಾರೆ ಅಥವಾ ಸರ್ಕಾರಕ್ಕೆ ಏನಾದರೂ ಅಪಾಯ ಇದೆಯಾ? ಅಥವಾ ಈ ಸಮ್ಮಿಶ್ರ ಸರ್ಕಾರ ಏನಾದರೂ . . .

ಶ್ರೀ ಜೆ.ಸಿ.ಮಾಧುಸ್ವಾಮಿ : ಇದರಲ್ಲಿ ತಿದ್ದುಪಡಿ ಮಾಡಬೇಕು, ಎರಡೂವರೆ ಮಂತ್ರಿಗಳು ಇರುವಂಥಾದ್ದು, ಮೂರು ಜನ ಮಂತ್ರಿಗಳು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇರಲಿ, ಮೂರು ಜನ ಮಂತ್ರಿಗಳು ಇರುವುದು. ಮಾನ್ಯ ಅಧ್ಯಕ್ಷರೆ, ತಾವು ಹೇಳಬೇಕು. ಈ ಶಾಸನ ಸಭೆ ನಡೆಯುತ್ತಿರುವಂಥಾದ್ದು ಮೊದಲನೆಯ ದಿವಸವಾಗಿದೆ. ಅದರಲ್ಲೂ ಆಯವ್ಯಯದ ಬಹಳ ಪರಮ ಪವಿತ್ರವಾದಂತಹ ಆರಂಭದ ದಿವಸವಾಗಿದೆ. ಇಲ್ಲಿ 13 ಜನ ಅಂದರೆ, ತಾವು ಅಧ್ಯಕ್ಷರು, ಈ ಬಗ್ಗೆ ಹೇಳಬೇಕು.

ಶ್ರೀ ಬಿ.ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಚರ್ಚೆಯನ್ನು ಮುಂದುವರೆಸಲಿ, ಅದನ್ನು ನಾನು ನೋಟ್ ಮಾಡಿಕೊಂಡು ಮಾನ್ಯ ಗೃಹಮಂತ್ರಿಯವರಿಗೆ ಹೇಳುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ವಿಷಯಗಳನ್ನು ನೋಟ್ ಮಾಡಿಕೊಳ್ಳುವುದಕ್ಕೆ ಇಷ್ಟು ಜನರು ಇದ್ದಾರೆ. ಇಲ್ಲಿ ಎಸ್ಟಾಬ್ಲಿಶ್‌ಮೆಂಟ್ ಎಲ್ಲಾ ನೋಟ್ ಮಾಡಿಕೊಳ್ಳುವಂಥಾದ್ದಕ್ಕೆ ಇರುವುದು. ಇವರು ಮಾತು ಮಾತಿಗೂ ನೋಟ್ ಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಇಲ್ಲಿ ಅದು ನೋಟ್ ಆಗುವುದಿಲ್ಲವೇ?

ಅಧ್ಯಕ್ಷರು : ಆಯಿತು ಬಿಡಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಇವರು ಇಷ್ಟು ಸಣ್ಣದಾಗಿ ಯೋಚನೆ ಮಾಡುತ್ತಾರೆಂದು ನಾವು ತಿಳಿದುಕೊಂಡಿರಲಿಲ್ಲ. ಇಲ್ಲಿ ನೀವು ಬೇರೆ, ನಾವು ಬೇರೆಯೆಂಬ ಭಾವನೆಯೇ ಇಲ್ಲ ನನಗೆ, ನಾವೆಲ್ಲರೂ ಒಂದೇ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಏನಾಯಿತೆಂದರೆ, ತೀರಾ "ವ್ರತ ಕೆಟ್ಟರೂ ಸುಖ ಇರಬೇಕು" ಆ ಸುಖ ಇಲ್ಲ. ಜಾತಿ ಕೆಟ್ಟು ಅಲ್ಲಿ ಕುಳಿತುಕೊಂಡು, ಮತ್ತೆ ನಮ್ಮನ್ನೂ ಜಾತಿ ಕೆಡಿಸುವುದಕ್ಕೆ ಹೋಗಿದ್ದಾರೆ. ಅವರು ಆ ಕಡೆಗೆ ಹೋಗಬಾರದಿತ್ತು, ಹೋಗಿದ್ದಾರೆ. ಆದರೆ ಅವರಿಗೆ ಸುಖವೇ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ್ದು ಸತ್ಯ. ಅವರಿಗೆ ಆ ಭಾವನೆಯೇ ಇಲ್ಲ. ಇಲ್ಲಿ ಆಳುವ ಪಕ್ಷ ಬೇರೆ ವಿರೋಧ ಪಕ್ಷ ಬೇರೆ ಎಂದು ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ವಾಟಾಳ್ ನಾಗರಾಜ್‌ರವರೆ, ಅವರು ಹೇಳಿದ್ದು, ಅವರು ನಿಮ್ಮ ಜೊತೆಗೆ ಇದ್ದಾರೆಂದು ಹೇಳಿದ್ದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು ಒಬ್ಬರೇ ಅಲ್ಲ, ನೀವು ನಮ್ಮ ಜೊತೆಗೆ ಇದ್ದೀರಿ.

Sri Basavaraja Rayareddy : I am with you guy.

ನಾನು ನಿಮ್ಮ ಜೊತೆಗೆ ಇದ್ದೇನೆ.

5. ನಿಯಮ 69ರ ಮೇರೆಗೆ ಚರ್ಚೆಮುಂದುವರೆದಿದೆ

ವಿಷಯ : ರಾಜ್ಯದಲ್ಲಿ ನಕ್ಸಲೀಯರ ಚಟುವಟಿಕೆ ಹೆಚ್ಚಾಗಿರುವ ಬಗ್ಗೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ತಾವು ಬಹಳ ಮುಖ್ಯವಾದಂತಹ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ನಾವು ನಿಮಗೆ ನಿಜವಾಗಿಯೂ ಧನ್ಯವಾದಗಳನ್ನು ಅರ್ಪಿಸಬೇಕು, ಏಕೆಂದರೆ ಇವತ್ತು ಇಡೀ ದೇಶದಲ್ಲಿ, ಅದರಲ್ಲೂ ವಿಶೇಷವಾಗಿ ನಮ್ಮ ರಾಜ್ಯದಲ್ಲಿ, ಬಹಳ ಗಂಭೀರವಾಗಿ ಚರ್ಚೆಯಾಗುತ್ತಿರುವಂತಹದ್ದು, ಈ ನಕ್ಸಲೀಯರ ಚಟುವಟಿಕೆಗಳ ಬಗ್ಗೆ ಚರ್ಚೆಯಾಗುತ್ತಿದೆ. ಇದು ತಾತ್ವಿಕವಾದಂತಹ ವಿಚಾರ, ಇದನ್ನು ನಾನು ರಾಜಕೀಯ ವಿಚಾರವೆಂದು ಭಾವಿಸುವುದಿಲ್ಲ. ಇದು ಬಹಳ ಮೂಲಭೂತವಾಗಿ ತಾತ್ವಿಕವಾದ ವಿಚಾರವಾಗಿದೆ. ಆದರೆ ಈ ತಾತ್ವಿಕವಾದಂತಹ ವಿಚಾರವನ್ನು ತಿರುಚಿ, ಅದನ್ನು ತಪ್ಪು ದಾರಿಗೆ ಎಳೆದುಕೊಂಡು ಹೋಗುವಂತಹ, ಪ್ರಜ್ಞಾಪೂರ್ವಕವಾದಂತಹ ಪ್ರಯತ್ನವನ್ನು ಕೆಲವು ಶಕ್ತಿಗಳು ಮಾಡುತ್ತಿರುವಂಥಾದ್ದನ್ನು, ನಾವು ಈ ರಾಜ್ಯದಲ್ಲಿ ಪ್ರತ್ಯೇಕವಾಗಿ ನೋಡುತ್ತಿದ್ದೇವೆ. ನಾನು ಮಹಾತ್ಮ ಗಾಂಧೀಜಿಯವರನ್ನು ಕೊಲೆ ಮಾಡಿದಂತಹ ಸಂದರ್ಭದಲ್ಲಿ, ಈ ದೇಶದಲ್ಲಿ ಹುಟ್ಟಿರಲಿಲ್ಲ. ಅವತ್ತಿನ ಮಾಧ್ಯಮಗಳ ಪರಿಸ್ಥಿತಿ ಹೇಗೆ ಇತ್ತೆಂಬುದು ನನಗೆ ಗೊತ್ತಿಲ್ಲ. ಆದರೆ ಮೊನ್ನೆ ಸಾಕೇತ್‌ರಾಜ್‌ನನ್ನು ಕೊಲೆ ಮಾಡಿದಂತಹ ಸಂದರ್ಭದಲ್ಲಿ, ಇಡೀ ದೇಶದ ಮಾಧ್ಯಮಗಳು ವರ್ತಿಸಿದಂತಹ ವಿಧಾನ, ಕೊಟ್ಟಂತಹ ಪ್ರಚಾರವನ್ನು ನೋಡಿದರೆ, ಮಹಾತ್ಮ ಗಾಂಧೀಜಿಯವರನ್ನು ಕೊಲೆ ಮಾಡಿದಂತಹ ಸಂದರ್ಭದಲ್ಲಿ ಇಷ್ಟು ಪ್ರಚಾರವನ್ನು ಕೊಟ್ಟಿದ್ದರಾ ಎನ್ನುವಂತಹ ಅನುಮಾನ ನನಗೆ ಬರುತ್ತದೆ. ಇವತ್ತು ನಮ್ಮ ಸ್ಥಿತಿ ಎಲ್ಲಿಗೆ ತಲುಪಿದೆ ಎಂದರೆ . . . .

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಗೃಹ ಕಾರ್ಯದರ್ಶಿಯವರಾದರೂ ಇರಬೇಕಲ್ಲಾ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರ ಆಫೀಸರ್ಸ್ ಇದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಗೃಹ ಕಾರ್ಯದರ್ಶಿಯವರಾದರೂ ಇರಬೇಕಲ್ಲಾ . .

ಮಾನ್ಯ ಸದಸ್ಯರು : ಶ್ರೀ ಬಿಪಿನ್ ಗೋಪಾಲಕೃಷ್ಣ ಇದ್ದಾರೆ, ಪೊಲೀಸ್ ಕಮೀಷನರ್ ಇದ್ದಾರೆ, ಸಾಕು ಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಗೃಹ ಕಾರ್ಯದರ್ಶಿಯವರನ್ನು ಕರೆಸಿದರೆ ಉತ್ತಮ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಭೆಯಲ್ಲಿ ಗೃಹ ಮಂತ್ರಿಯವರು ಇರಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ) : ನಾನು ಇದ್ದೇನಲ್ಲಾ . .

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಆಯಿತು, ಮಾನ್ಯ ಸಿದ್ದರಾಮಯ್ಯನವರು ಸಭೆಯಲ್ಲಿ ಇದ್ದರೆ, ನಮಗೆ ಎಲ್ಲಾ ಇದ್ದ ಹಾಗೆ . .

ಅಧ್ಯಕ್ಷರು : ಅವರು ಬರುತ್ತಾರೆ, ನಾನು ಹೇಳಿಕಳುಹಿಸಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾವು ಯಾವ ಸ್ಥಿತಿಗೆ ತಲುಪಿದ್ದೇವೆಂದರೆ, ಯಾವುದನ್ನು ಎಷ್ಟು ವೈಭವೀಕರಣ ಮಾಡುವುದಕ್ಕೆ ಅವಶ್ಯಕತೆ ಇಲ್ಲವೋ ಅಷ್ಟನ್ನು ವೈಭವೀಕರಣ ಮಾಡಿದ್ದು, ಮತ್ತು ವಾಸ್ತವಾಂಶಗಳನ್ನು ತಿರುಚಿದ್ದು, ಕೆಲವು ಪತ್ರಿಕೆಗಳು ಬರೆದಿತ್ತು. ಸಾಕೇತ್

ರಾಜನ್‌ರವರನ್ನು ಕೊಲೆ ಮಾಡಿದಂತಹ ಸಂದರ್ಭದಲ್ಲಿ ಫಿಡಲ್ ಕ್ಯಾಸ್ಟ್ರೋ, ಶೇಕ್‌ಅವೇರಾ, ಕ್ರಿಸ್ಟಫರ್ ಕಾರ್ಡ್‌ವೆಲ್, ಭಗತ್‌ಸಿಂಗ್‌ಗೆ ಹೋಲಿಕೆ ಮಾಡಿದರು. ನಾನು ಪ್ರಾಮಾಣಿಕವಾಗಿ ಬರೆದಂತಹ ವ್ಯಕ್ತಿಯನ್ನು ಕೇಳುತ್ತೇನೆ. ಕ್ರಿಸ್ಟೊಫರ್ ಕಾರ್ಡ್‌ವೆಲ್ ಎಲ್ಲಿದ್ದ, ಏನು ಮಾಡಿದರು ಎಂಬ ಬಗ್ಗೆ ಅವರಿಗೆ ಗೊತ್ತಿದೆಯಾ ಎಂದು. ಈ ಕ್ರಿಸ್ಟೊಫರ್ ಕಾರ್ಡ್‌ವೆಲ್ ಜಗತ್ತಿನ ಒಬ್ಬ ಸುಪ್ರಸಿದ್ಧ ತತ್ವಶಾಸ್ತ್ರಜ್ಞರ ಸಾಲಿಗೆ ಸೇರತಕ್ಕಂಥ ವ್ಯಕ್ತಿ, ಇವರು ಅತಿ ಸಣ್ಣ ವಯಸ್ಸಿನಲ್ಲಿಯೇ, ಸ್ಪ್ಯಾನಿಷ್ ಅಂತರ್ ಯುದ್ಧದಲ್ಲಿ ಮಾರ್ಕೋಸ್ ಸೈನ್ಯಕ್ಕೆ ಬಲಿಯಾದಂತಹ ಒಬ್ಬ ಮಹಾನ್ ತತ್ವಜ್ಞಾನಿ, ಹಾಗೂ ಕ್ರಾಂತಿಕಾರಿ ಆತ. ಆತನ ವಿಚಾರವೇ ಗೊತ್ತಿಲ್ಲದೆ ಇರುವವರು ಸಾಕೇತ್‌ರಾಜನ್ ಅನ್ನು ಕ್ರಿಸ್ಟಫರ್ ಕಾರ್ಡ್‌ವೆಲ್‌ಗೆ ಹೋಲಿಸಿರುವಂಥಾದ್ದು. ಈ ಕ್ರಿಸ್ಟಫರ್ ಕಾರ್ಡ್‌ವೆಲ್ ಎಂತಹ ತತ್ವಜ್ಞಾನಿ ಎಂದರೆ ಹೆಗೆಲ್, ಮಾರ್ಕ್ಸ್ ನಂತರದ ಸುಪ್ರಸಿದ್ಧ ತತ್ವಶಾಸ್ತ್ರಜ್ಞರ ಮೊದಲನೆಯ ಸಾಲಿಗೆ ಸೇರತಕ್ಕಂಥವರು. ಇವರ ಸಾಹಿತ್ಯವನ್ನು ಓದಿದರೆ ಗೊತ್ತಾಗುತ್ತದೆ, ಇವರು ಎಂತಹ ಮಹಾನ್ ತತ್ವಶಾಸ್ತ್ರಜ್ಞ ಎಂದು. ಇಂಥವರನ್ನು ಸಾಕೇತ್‌ರಾಜನ್‌ಗೆ ಹೋಲಿಸಿದ್ದಾರೆ. ಇನ್ನು ಶೇಕ್‌ಅವೇರಾ, ಇಡೀ ಲ್ಯಾಟಿನ್ ಅಮೇರಿಕಾದ ತುಳಿತಕ್ಕೆ ಒಳಗಾದಂತಹ ಜನರನ್ನು ಸಂಘಟನೆ ಮಾಡಿ, ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ನೇರವಾಗಿ ಘರ್ಷಣೆಯನ್ನು ನಡೆಸಿದಂತಹ ಒಬ್ಬ ಮಹಾನ್ ಕ್ರಾಂತಿಕಾರಿಯನ್ನು ಹೋಲಿಸಿದ್ದು. ಫಿಡಲ್‌ಕ್ಯಾಸ್ಟ್ರೋ, ಈಗಲೂ ಜೀವಂತವಾಗಿ, ದಂತ ಕತೆಯಾಗಿ, ಕ್ಯೂಬಾದಲ್ಲಿ ಉಳಿದಿದ್ದಾರೆ. ಅಮೇರಿಕನ್ ದೈತ್ಯಶಕ್ತಿಯ ವಿರುದ್ಧ ಹೋರಾಟವನ್ನು ನಡೆಸುತ್ತಾನೆ. ಇವರು ಕ್ಯೂಬ ರಾಷ್ಟ್ರವನ್ನು ರಕ್ಷಣೆ ಮಾಡಿಕೊಂಡು ಬರುತ್ತಿರುವಂತಹ ಒಬ್ಬ ಮಹಾನ್ ನಾಯಕರಾಗಿದ್ದಾರೆ. ಆತನಿಗೆ ಇವನನ್ನು ಹೋಲಿಸುವಂಥಾದ್ದು. ಇಡೀ ಭಾರತ ದೇಶ ಹೆಮ್ಮೆ ಪಡುವಂತಹ ಒಬ್ಬ ಪುತ್ರನನ್ನು ಪಡೆದಿದ್ದೇವೆ, ಅವರು ಭಗತ್‌ಸಿಂಗ್, ಇಡೀ ಭಾರತ ದೇಶ ಹೆಮ್ಮೆ ಪಡುವಂತಹ ವ್ಯಕ್ತಿಯಾಗಿದ್ದಾರೆ. ಆತನಿಗೆ ಹೋಲಿಸುವಂಥಾದ್ದು, ನಾವು ಎಲ್ಲಿಗೆ ತಲುಪಿದ್ದೇವೆ? ನಾಳೆ ದಿವಸ ಗಾಂಧೀಜಿಯವರನ್ನು ಕೂಡ ಇನ್ನು ಯಾರಿಗಾದರೂ ಹೋಲಿಸಿ ಬಿಡುತ್ತಾರೆನೋ, ಎಂಬ ಭಯ ಬಂದು ಬಿಟ್ಟಿದೆ. ಶೇಕ್ ಎವೇರಾರವರ ಇತಿಹಾಸ ಗೊತ್ತಿಲ್ಲ. ಫಿಡಲ್ ಕ್ಯಾಸ್ಟ್ರೋ ಇತಿಹಾಸ ಗೊತ್ತಿಲ್ಲ. ಕ್ರಿಸ್ಟಫರ್ ಕಾರ್ಡ್‌ವೆಲ್‌ರವರ ಇತಿಹಾಸ ಗೊತ್ತಿಲ್ಲ. ಇಲ್ಲಿ ಯಾರು ಯಾರಿಗೊ ಹೋಲಿಸಿ ಬಿಡುವರು. ಇಲ್ಲಿ ಭಗತ್ ಸಿಂಗ್‌ನ ಇಡೀ ಜೀವನವನ್ನು ಅಭ್ಯಾಸ ಮಾಡಿದರೆ ಗೊತ್ತಾಗುತ್ತದೆ. ಈ ವ್ಯಕ್ತಿ ಹಿಂಸೆಯನ್ನಾಗಲೀ ಕೊಲೆಗಳನ್ನು ಯಾವತ್ತೂ ಅವನು ಸಮರ್ಥನೆಯನ್ನು ಮಾಡಿದವನಲ್ಲಾ ಇವನು ಸೆಂಟ್ರಲ್ ಹಾಲ್‌ನಲ್ಲಿ ಬಾಂಬ್ ಹಾಕಿ, ಯಾರಿಗೂ ಗಾಯ ಆಗದ ಹಾಗೆ, ಪೊಲೀಸರಿಗೆ ತಾನೇ ಸಿಕ್ಕಿ, ಅವನು ನಾನು ಬಾಂಬನ್ನು ಹಾಕಿ, ಓಡಿ ಹೋಗುವವನಲ್ಲ. ಇಲ್ಲಿ ಕಿವುಡನೊಬ್ಬನಿಗೆ ಕೇಳಬೇಕಾದರೆ ಗಟ್ಟಿಯಾಗಿ ಕೂಗಬೇಕು, ಅದಕ್ಕೋಸ್ಕರ ನಾನು ಬಾಂಬನ್ನು ಹಾಕಿದ್ದು, ನನಗೆ ಯಾರನ್ನು ಸಾಯಿಸಬೇಕೆಂಬ ಉದ್ದೇಶವಿಲ್ಲವೆಂಬ ಮಾತನ್ನು ನೇರವಾಗಿ ಪೊಲೀಸರಿಗೆ ಭಗತ್‌ಸಿಂಗ್ ಹೇಳಿದರು. ಇವರನ್ನು ಮಾರ್ಚ್ 23 ರಂದು ಕೊನೆ ಗಳಿಗೆಯಲ್ಲಿ ಲಾಹೋರ್ ಜೈಲಿನಲ್ಲಿ, ನೇಣುಗಂಬಕ್ಕೆ ಹಾಕುವ ಸಂದರ್ಭದಲ್ಲಿ, 22ನೇ ದಿವಸದಂದು ಬೆಳಿಗ್ಗೆ ಅವರ ತಂದೆ ಜೈಲಿಗೆ ಬರುತ್ತಾರೆ. ಅವರು ಮಗನನ್ನು ಭೇಟಿ ಮಾಡಬೇಕೆಂದು ಬರುತ್ತಾರೆ. ಅಧಿಕಾರಿಗಳು ಬಂದು ಭಗತ್‌ಸಿಂಗ್‌ಗೆ ನಿಮ್ಮ ತಂದೆ ನಿಮ್ಮನ್ನು ಭೇಟಿ ಮಾಡಲು ಬಂದಿದ್ದಾರೆ, ಭೇಟಿ ಮಾಡುತ್ತೀಯಾ ಎಂದು ಕೇಳುತ್ತಾರೆ. ಅದಕ್ಕೆ ಭಗತ್‌ಸಿಂಗ್ ಭೇಟಿ ಯಾಗುವುದಿಲ್ಲವೆಂದು ಹೇಳುತ್ತಾರೆ. He refused to meet his father. ಇದರಿಂದ ಅಧಿಕಾರಿಗಳಿಗೆ ಆಶ್ಚರ್ಯವಾಗುತ್ತದೆ. ಇವನು ನಾಳೆ ಸಾಯುತ್ತಿದ್ದಾನೆ, ಇವನು ತಂದೆ ಬಂದರೆ ಏಕೆ ಮಾತನಾಡುವುದಿಲ್ಲವೆಂದು ಹೇಳುತ್ತಾನೆಂದರೆ, ಇದಕ್ಕೆ ಭಗತ್‌ಸಿಂಗ್

ಕೊಟ್ಟಂತಹ ಉತ್ತರ, ನಮ್ಮ ದೇಶದ ಯಾವ ಒಬ್ಬ ಮನುಷ್ಯನಿಗೂ, ಆತನ ಬಗ್ಗೆ ಎಂತಹ ಹೆಮ್ಮೆ ಉಂಟಾಗುತ್ತದೆಂದರೆ, ಯಾವ ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ಈ ದೇಶದಿಂದ ಓಡಿಸಬೇಕೆಂದು, ನನ್ನ ಇಡೀ ಜೀವನದ ಯೌವನ ಜೀವನವನ್ನು ಮುಡುಪಾಗಿ ಇಟ್ಟೆನೋ, ಅಂತಹ ನಮ್ಮ ದೇಶದ ಶತ್ರುಗಳ ಹತ್ತಿರ ಹೋಗಿ, ನನ್ನ ಮಗನ ಪ್ರಾಣವನ್ನು ಉಳಿಸಿ ಎಂದು ಅರ್ಜಿಯನ್ನು ನನ್ನ ತಂದೆ ಕೊಟ್ಟಿರುವಂಥವರು, ಅದಕ್ಕೋಸ್ಕರ ಆತನ ಮುಖವನ್ನು ನಾನು ನೋಡುವುದಿಲ್ಲವೆಂದು ನಿರಾಕರಣೆಯನ್ನು ಮಾಡಿದಂಥವರು. ಇಂತಹ ಮಹಾನ್ ವ್ಯಕ್ತಿ ಈ ಭಗತ್‌ಸಿಂಗ್ ಆಗಿದ್ದಾರೆ. ಆತನಿಗೆ ಇವನನ್ನು ಹೋಲಿಸಿರುವಂಥಾದ್ದು. ಅಂದರೆ ವಾಸ್ತವಗಳನ್ನು ಹೇಗೆ ವಿಕೃತ ಮಾಡುತ್ತೇವೆಂಬುದು ನೋಡಬೇಕು. ಇವತ್ತು ವಾಸ್ತವವಾಗಿ ವೆಂಕಟಮ್ಮನಹಳ್ಳಿಯಲ್ಲಿ ನಡೆದಂತಹ ಘಟನೆಗೂ ಚಿಕ್ಕಮಗಳೂರಿನಲ್ಲಿ ನಡೆದಂತಹ ಘಟನೆಗೂ ಇದು ಇವತ್ತಿಗೂ ಕ್ರಾಂತಿಗೂ, ಮಾರ್ಕ್ಸ್ ವಾದಕ್ಕೂ ಮಾವೋವಾದಕ್ಕೂ ಯಾವುದೇ ಸಂಬಂಧವಿಲ್ಲ. ಅವರು ಮಾವೋವಾದಿಗಳು ಅಲ್ಲ, ಮಾರ್ಕ್ಸ್‌ವಾದಿಗಳು ಅಲ್ಲ, ಲೆನಿನ್‌ವಾದಿಗಳು ಅಲ್ಲ, ಕ್ರಾಂತಿಕಾರಿಗಳೂ ಅಲ್ಲ. ಅವರನ್ನು ವೈಭವೀಕರಿಸಿಬಿಟ್ಟು, ಇಡೀ ನಮ್ಮ ದೇಶದಲ್ಲಿ ಇರುವಂತಹ ಒಂದು ವಿಭಾಗದ ಜನರಿಗೆ, ಅವರ ಬಗ್ಗೆ ಸಹಾನುಭೂತಿ ಬರುವಂತಹ ರೀತಿಯಲ್ಲಿ ವರ್ತನೆಯನ್ನು ಮಾಡಿದಂತಹ ಜನರು ಇದ್ದಾರಲ್ಲಾ, ಆ ವಾತಾವರಣವನ್ನು ಸೃಷ್ಟಿಮಾಡಿದಂತಹ ವ್ಯಕ್ತಿಗಳು ನಿಜವಾದಂತಹ ಭಯೋತ್ಪಾದಕರು ಇವರಾಗಿದ್ದಾರೆ. ಇವರು ದಾರಿ ತಪ್ಪಿಸತಕ್ಕಂಥವರು. ಇನ್ನು "ಕರ್ನಾಟಕ ವಿಮೋಚನಾ ರಂಗ" ಎಂಬ ಹೆಸರನ್ನು ಕೇಳಿರಬಹುದು. ಇದು 5–6 ವರ್ಷಗಳ ಹಿಂದೆ ಕರ್ನಾಟಕ ರಾಜ್ಯದಲ್ಲಿ ಹುಟ್ಟಿ ಹಾಕಿದಂತಹ ಸಂಘಟನೆಯಾಗಿದೆ. ಇದನ್ನು ಯಾರು ಹುಟ್ಟು ಹಾಕಿದ್ದಾರೆಂದರೆ, ಯಾರು ನಕ್ಸಲೈಟ್‌ಗಳು, ಪೀಪಲ್ಸ್ ವಾರ್ ಗ್ರೂಪ್ ಎಂದು ಹೆಸರುಗಳನ್ನು ಇಟ್ಟುಕೊಂಡಿದ್ದಾರೊ, ಅಥವಾ "ಪೀಪಲ್ಸ್ ವಾರ್ ಗ್ರೂಪ್" ಎಂದು ಹೆಸರನ್ನು ಬದಲಾವಣೆ ಮಾಡಿ, ಮಾವೋವಾದಿಗಳು ಎಂದು ಯಾರು ಹೆಸರನ್ನು ಇಟ್ಟುಕೊಂಡಿದ್ದಾರೊ ಅವರು ಹುಟ್ಟು ಹಾಕಿದಂತಹ ಸಂಘಟನೆಯ ಮುಖವಾಣಿ ಇದು. ಕರ್ನಾಟಕ ರಾಜ್ಯದ ಹಲವಾರು ಬುದ್ಧಿಜೀವಿಗಳು, ಪತ್ರಕರ್ತರು, ಅವರ ಜೊತೆಗೆ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ಸಾಹಿತಿಗಳು ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ನಾನು ಅವರನ್ನು ಬಹಳ ಸಮ್ರತೆಯಿಂದ ಕೇಳುತ್ತಿದ್ದೇನೆ. ಕರ್ನಾಟಕವನ್ನು ಎಲ್ಲಿಂದ ನೀವು ವಿಮೋಚನೆ ಮಾಡಬೇಕೆಂದು ಇದ್ದೀರಿ. ಈ "ಕರ್ನಾಟಕ ವಿಮೋಚನಾ ರಂಗ" ಎಂದರೆ ಏನು? ಕರ್ನಾಟಕವನ್ನು ವಿಮೋಚನೆ ಮಾಡುವಂಥಾದ್ದು, ಇದನ್ನು ಎಲ್ಲಿಂದ ವಿಮೋಚನೆ ಮಾಡುವುದಕ್ಕೆ ಹೊರಟಿದ್ದೀರಿ? ಅಂದರೆ ಭಾರತ ದೇಶದಿಂದ ಕರ್ನಾಟಕವನ್ನು ವಿಮೋಚನೆ ಮಾಡುವಂಥಾದ್ದು ಅಂದರೆ, ಪ್ರತ್ಯೇಕ ಮಾಡುವಂಥಾದ್ದು, ಎಂದು ಅದರ ಅರ್ಥ. ಯಾವುದೋ ಒಂದು ಥಿಯರಿ ಇದೆ. ಅದೇನೆಂದರೆ, ಭಾರತ ದೇಶ 'It is a prison of different nationalities,' ಎನ್ನತಕ್ಕಂಥ ಅವರದ್ದು ಒಂದು ಥಿಯರಿ ಇದೆ. India is a prison of different nationalities, ವಿಭಿನ್ನ ರಾಷ್ಟ್ರೀಯತೆಗಳ ಬಂಧೀಖಾನೆ ಎಂದು ಹೇಳುವಂಥ ವಾದ ಅವರದಾಗಿದೆ. ಈ ಬಂಧೀಖಾನೆಯಿಂದ ಕರ್ನಾಟಕವನ್ನು ವಿಮೋಚನೆ ಮಾಡತಕ್ಕಂಥದ್ದು ನಮ್ಮ ಗುರಿ ಎಂದು ಹೇಳುವಂಥ ಒಂದು ಕರ್ನಾಟಕ ವಿಮೋಚನಾ ರಂಗವಾಗಿದೆ. ಅದಕ್ಕೆ ಬೆಂಬಲ ಕೊಟ್ಟವರು ಯಾರು? ಅದರ ಜೊತೆ ಸಂಪರ್ಕ ಇಟ್ಟುಕೊಂಡವರು ಯಾರು? ಇವತ್ತು ಅದರ ಹೆಸರಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಪೇಪರ್

ಬರುತ್ತಿದೆ. ಈ ಬಗ್ಗೆ ನಿಮ್ಮ Intelligence ರವರನ್ನು ಕೇಳಿ. ಕರ್ನಾಟಕದ ವಿಮೋಚನೆ ಎನ್ನುವ ಒಂದು ಪೇಪರನ್ನು ಅವರು ತರುತ್ತಿದ್ದಾರೆ. ಇದು ಎಲ್ಲಿಂದ ವಾದ ಹುಟ್ಟಿದುದು ಎಂದರೆ, ಈ ಭಾರತ ದೇಶ prison of different nationalities ಎನ್ನುವ theory ಹುಟ್ಟಿರತಕ್ಕಂಥದ್ದು it is the brain child of American C.I.A. ಅವರು ಯಾವಾಗ ಇದನ್ನು ಪ್ರಾರಂಭ ಮಾಡಿದರು ಎನ್ನುವುದು ಗೊತ್ತೆ? 1975ನೇ ಇಸವಿಯಲ್ಲಿ ಭಾರತ ದೇಶದಲ್ಲಿ ತುರ್ತು ಪರಿಸ್ಥಿತಿ ಇದ್ದಂಥ ಸಂದರ್ಭದಲ್ಲಿ American CIA ರವರು ಒಂದು report ಅನ್ನು ತಯಾರು ಮಾಡಿದರು. ಆ ರಿಪೋರ್ಟ್ `Project Brahmaputra' ಎಂದು CIA ರವರು ತಯಾರು ಮಾಡಿದಂಥ ರಿಪೋರ್ಟ್ ಆಗಿರುತ್ತದೆ. ಆ Project Brahma putraದಲ್ಲಿ ಇಡೀ ಈಶಾನ್ಯ ಭಾರತವನ್ನು ಪ್ರತ್ಯೇಕ ಮಾಡಬೇಕೆನ್ನುವಂಥ ವಾದ ಅದರಲ್ಲಿದೆ. ಅದಕ್ಕೆ ಯಾರು ಕಾರಣವೆನ್ನುವುದರ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇಡೀ ಈಶಾನ್ಯ ಭಾರತವನ್ನು ಭಾರತ ದೇಶದಿಂದ ಪ್ರತ್ಯೇಕ ಮಾಡಬೇಕೆಂದು ಅವರು ಏಕೆ ವಾದವನ್ನು ಹುಟ್ಟುಹಾಕಿದರೆಂದರೆ, ಈಶಾನ್ಯ ಭಾರತದ ನಾಗರೀಕತೆ, ಸಂಸ್ಕೃತಿ, ಜನಜೀವನ ಭಾರತದ ಸಂಸ್ಕೃತಿಯ ನಾಗರೀಕತೆಗೆ ವಿಭಿನ್ನವಾಗಿದೆ, ಅದು ಭಾರತ ದೇಶದ ಅವಿಭಾಜ್ಯ ಅಂಗವಲ್ಲ, ಭಾರತ ದೇಶ ಅದನ್ನು ಆಕ್ರಮಿಸಿಕೊಂಡಿದೆ, ಆದ್ದರಿಂದ ಈಶಾನ್ಯ ಭಾರತ ಪ್ರತ್ಯೇಕವಾಗಬೇಕೆಂಬ ವಾದವನ್ನು ಹುಟ್ಟು ಹಾಕಿದಂಥ `Project Brahmaputra' ಆ ವರದಿಯ ಆಧಾರದ ಮೇಲೆ All Assam Students' Union ಸ್ಥಾಪನೆಯಾಗಿ ಕಡೆಗೆ ಅದು AGP ಯಾಗಿ ಪರಿವರ್ತನೆ ಹೊಂದಿ ಇಡೀ ಈಶಾನ್ಯ ಭಾರತವನ್ನು ಪ್ರತ್ಯೇಕ ಮಾಡತಕ್ಕಂಥ ಚಳುವಳಿಯನ್ನು ಅದು ಹುಟ್ಟುಹಾಕಿತು. All Tripura Tribals' Organisation, Naga Vimochana Ranga, All Assam Students' Union, ULFA, ಇವೆಲ್ಲವೂ ಕೂಡ ಆ CIA ಯ brain child ಅದರ ಭಾಗವೇ ಕರ್ನಾಟಕ ವಿಮೋಚನಾ ರಂಗವಾಗಿರುತ್ತದೆ. It is a brain child of American CIA. ಅಮೇರಿಕಾದ ಸಿಐಎ ಭಾರತ ದೇಶವನ್ನು ಛಿದ್ರ ಮಾಡಬೇಕೆನ್ನುವ ಒಂದು ಪಿತೂರಿ. ಅದಕ್ಕೋಸ್ಕರವೇ ಅದರ ಭಾಗವಾಗಿ ಅವರು ಕರ್ನಾಟಕ ವಿಮೋಚನಾ ರಂಗ ಎಂದು ಇಟ್ಟುಕೊಂಡಿದ್ದಾಗಿರುತ್ತದೆ. ಇದರ ಜೊತೆಗೆ ಆ ನಕ್ಸಲೈಟ್ಸ್ ಚಳುವಳಿ ಎಂದು ಏನು ಹೇಳಿದ್ದಾರೆ, ಅದನ್ನು ಸಂಪೂರ್ಣವಾಗಿ ತಪ್ಪುದಾರಿಗೆ ಎಳೆದುಕೊಂಡು ಹೋಗಿದ್ದಾರೆ. ನಾನು ಆಗಲೇ ಹೇಳಿದ ಹಾಗೆ ಅದು ಮಾರ್ಕ್ಸ್‌ವಾದವೂ ಅಲ್ಲ, ಲೆನಿನ್ ವಾದವೂ ಅಲ್ಲ, ಮಾವೋವಾದವೂ ಅಲ್ಲ. ಇವತ್ತು ಏನು ಮಾವೋವಾದಿಗಳು ಎಂದು ಹೇಳಿಕೊಳ್ಳುತ್ತಿದ್ದಾರೆ . . .

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಈಗ ತರಮಲ ನಾಗರೆಡ್ಡಿಯವರು ಇದ್ದರು. ಅವರು, ಚಾರು ಮಜುಂದಾರ್‌ರವರು, Kanu Sanyal, ನಾಗಭೂಷಣ್ ಪಟ್ನಾಯಕ್ ಅವರು ಏನು ಮೂವ್‌ಮೆಂಟ್ಸ್ ಹುಟ್ಟುಹಾಕಿದರು, ಅದಕ್ಕೂ ಇದಕ್ಕೂ ಏನಾದರೂ ಸಂಬಂಧ ಇದೆಯೇ ಅಥವಾ ಇದು ಮಾನ್ಯ ಸದಸ್ಯರು ಹೇಳಿದಂತೆ 1975ರಿಂದ ಆಚೆಗೆ CIA ಯ brain child ಆಗಿ ಬಂದಿದ್ದಾ ಅಥವಾ ಅವರೂ ಕೂಡ CIA Agents?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, Kanu Sanyal, ಚಾರು ಮಜುಂದಾರ್, ತರಮಲ ನಾಗಿರೆಡ್ಡಿ ಹುಟ್ಟು ಹಾಕಿದಂಥ ನಕ್ಸಲ್‌ಬಾರಿ ಚಳುವಳಿಗಳು ಮತ್ತು ಈಗಿರುವಂಥ ನಕ್ಸಲ್‌ಬಾರಿ ಚಳುವಳಿಗೂ ಯಾವುದೇ ಸಂಬಂಧವಿಲ್ಲ. ಇವರು individual annihilation ಎನ್ನುವ

ಹೆಸರಿನಲ್ಲಿ ಕೆಲವು ವ್ಯಕ್ತಿಗಳನ್ನು ಕೊಲೆ ಮಾಡಿದರೆ ವ್ಯವಸ್ಥೆ ನಾಶವಾಗುತ್ತದೆ ಎನ್ನುವ ತಪ್ಪು ಸಿದ್ಧಾಂತವನ್ನು ಹೇಳತಕ್ಕಂಥವರು. ಯಾವನೋ ಒಬ್ಬ ಜಮೀನ್ದಾರನನ್ನು ಕೊಲೆ ಮಾಡಿಬಿಟ್ಟರೆ ಈ ದೇಶದಲ್ಲಿ ಜಮೀನ್ದಾರಿ ವ್ಯವಸ್ಥೆ ಹೋಗುವುದಿಲ್ಲ. ಆದರೆ ಜಮೀನ್ದಾರಿಗಳನ್ನು ಕೊಲೆ ಮಾಡಬೇಕೆಂದು ಇವರ ವಾದವಾಗಿರುತ್ತದೆ. ಆದರೆ ನಕ್ಸಲ್‌ಬಾರಿಯಲ್ಲಿ ಪ್ರಾರಂಭವಾದಂಥ ಚಳುವಳಿ ....

ಶ್ರೀ ಕೆ.ಆರ್.ರಮೇಶ್‌ಕುಮಾರ್ : 1960ರ ಚಳುವಳಿಯಲ್ಲಿ ನಿಮ್ಮ ಪಾರ್ಟಿ ಲೈನ್‌ನಿಂದ differ ಆಗಿ ಚಾರು ಮಜುಂದಾರ್‌ರವರು ಹೊರಗೆ ಹೋದಾಗ ಸಿಲಿಗುರಿ ಏರಿಯಾದಲ್ಲಿ ಈ movement ಅನ್ನು ಪ್ರಾರಂಭ ಮಾಡಿದಾಗ individual annihilation of the class enemy is the programme. No democracy, No freedom through ballet, only by bullet ಎಂದು ಅವರು ಹೋದದ್ದು. They also advocated annihilation of the class enemy.

Sri G.V. Srirama Reddy : Theory annihilation of class enemy is different from annihilation of the individuals. Annihilation of the class enemy is totally different from that of the annihilation of the individual. Now position is the theory of individual annihilation. ಚಾರು ಮಜುಂದಾರ್, ನಾಗಿರೆಡ್ಡಿ, Kanu Sanyal advocated for the annihilation of the class enemy. That also is not correct. I am not going to out part of the aspect. But, present day's aspect is that it is a theory of individual annihilation. ಅವರು ಸಶಸ್ತ್ರ ಕ್ರಾಂತಿ, armed struggle ಎಂದು ಏನು ವಾದ ಮಾಡುತ್ತಿದ್ದಾರೆ, ಯಾವುದು Adventism ಎಂದು ಕರೆಯುತ್ತಿದ್ದಾರೆ, 1950ರಲ್ಲಿ 'Left wing communism is an infantile disorder,' ಎಂದು ಲೆನಿನ್‌ರವರು ಹೇಳಿದರು. ಏಕೆಂದರೆ ಆವತ್ತು Adventism, Left Wing ನಲ್ಲಿಯೇ ಇತ್ತು. That is a part of it. I am not going to all those details. But, problem to-day is ಏಕೆ ಈ ಪರಿಸ್ಥಿತಿ ನಿರ್ಮಾಣವಾಗಿದೆ? ಏಕೆಂದರೆ ಮೂಲತಃ ನಮ್ಮ ಪಕ್ಷದ ವತಿಯಿಂದ ನಾವು ಚಿಕ್ಕಮಗಳೂರು ಜಿಲ್ಲೆಗೆ ಹೋಗಿ ಅಭ್ಯಾಸ ಮಾಡಿದ್ದೇವೆ. ಅಲ್ಲಿ tribal population ಬಹಳ ಕಡಿಮೆಯಲ್ಲಿದೆ. ಅವರನ್ನೆಲ್ಲಾ ಇವತ್ತು ಸಂಪೂರ್ಣವಾಗಿ ಅವರು convince ಮಾಡಿದ್ದಾರೆ. ಇವರು ಯಾರು ಬೇಕಾದರೂ ಏನಾದರೂ ಹೇಳಲಿ. ತಪ್ಪು ಸಿದ್ಧಾಂತವೋ ಸರಿಯಾದ ಸಿದ್ಧಾಂತವೋ ಒಟ್ಟಿನಲ್ಲಿ ಅವರನ್ನು convince ಮಾಡಿದ್ದಾರೆ. Convince ಮಾಡಲಿಕ್ಕೆ ಕಾರಣವೇನೆಂದರೆ, ಅಲ್ಲಿರತಕ್ಕಂಥ ಬಡತನ, ಅಲ್ಲಿರತಕ್ಕಂಥ ಅನಕ್ಷರತೆ, ಅಲ್ಲಿರುವ ಶೋಷಣೆ, ಅಲ್ಲಿರತಕ್ಕಂಥ ದಬ್ಬಾಳಿಕೆ ಅದಕ್ಕೆ ಒಳಗಾಗಿರತಕ್ಕಂಥ ಆ ಗುಡ್ಡಗಾಡು ಜನಾಂಗವನ್ನು ಸಂಪೂರ್ಣವಾಗಿ ಅವರು convince ಮಾಡಿದ್ದಾರೆ. ಅಂದರೆ ಅದರ ಅರ್ಥವೇನು? ಆ ಚಟುವಟಿಕೆಗಳಿಗೆ ಮೂಲ ಕಾರಣ ಅದು ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳೇ ಹೊರತು ಅದು law and order problem ಅಲ್ಲ. ಇಂಥ ಮೂಲಭೂತವಾದಂಥ ಸಮಸ್ಯೆಗಳ ಪರಿಹಾರ ಮಾಡಲಿಕ್ಕೆ ಸಾಧ್ಯವಿಲ್ಲದಿರತಕ್ಕಂಥ ಸರ್ಕಾರಗಳು ಕೇವಲ ಪೋಲೀಸ್‌ರವರನ್ನು ಛೂಬಿಟ್ಟು ಅವರನ್ನು ಕೊಲೆ ಮಾಡುವುದರಿಂದ, ಅವರನ್ನು

ಅರೆಸ್ಟ್ ಮಾಡುವುದರಿಂದ, ಅವರನ್ನು ಜೈಲಿಗೆ ಹಾಕುವುದರಿಂದ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದು ಸರ್ಕಾರವೇನಾದರೂ ತಿಳಿದುಕೊಂಡಿದ್ದರೆ ಅದು ಮೂರ್ಖತನದ ಪರಮಾವಧಿಯಾಗಿರುತ್ತದೆ. ಅದು ಸಾಧ್ಯವೇ ಇಲ್ಲ. ಆ basis ಇರತಕ್ಕಂಥದ್ದೇ root cause is socio-economic problem. ಆ socio-economic problem ಗೆ ನಾವು ಗಮನಕೊಡದೆ ಹೋದರೆ ಬಹಳ ಕಷ್ಟವಾಗುತ್ತದೆ. ಉದಾಹರಣೆಗೆ ಮೊನ್ನೆ ಒಂದು ಪ್ಯಾಕೇಜ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಅನೌನ್ಸ್ ಮಾಡಿದರು. ಆ ಪ್ಯಾಕೇಜ್‌ನಲ್ಲಿ ಎಲ್ಲವೂ ಇದೆ, ಆದರೆ ಈ ಒಂದು ಮೂಲಭೂತವಾದಂಥ ಅಂಶ ಇಲ್ಲ. ಅದೇನೆಂದರೆ, land to the tiller ಇಲ್ಲ. ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸಬಾರದು ಎನ್ನುವುದಕ್ಕೆ ಪ್ಯಾಕೇಜ್‌ನಲ್ಲಿ ಯಾವುದೇ ಅಂಶ ಇಲ್ಲ. ರಸ್ತೆ ಮಾಡಿಸುತ್ತೇವೆ, ನೀರು ಕೊಡಿಸುತ್ತೇವೆ, ಈ ಸರ್ಕಾರ ಅವರಿಗೆಂದು ಪ್ಯಾಕೇಜ್ ಅನ್ನು ಹೊರಡಿಸಿದ್ದಾರೆ. ರಸ್ತೆ ಮಾಡಿಸುತ್ತೇವೆಂದು ಆ ಹೆಸರಿನಲ್ಲಿ ಕಡೆಗೆ ultimate ಆಗಿ ದುಡ್ಡು ತಿನ್ನುವವರು ಯಾರೆಂಬುದು ನಮಗೆ ಗೊತ್ತಿದೆ. ರಸ್ತೆ ಮಾಡಿಸುತ್ತೇವೆಂದು ಅದರ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಅಲ್ಲಿಗೆ ಕೊಟ್ಟರೆ ಕಡೆಗೆ ಆ ಹಣ ಯಾರಿಗೆ ಹೋಗುತ್ತದೆ ಎನ್ನುವುದು ನಮಗೆ ಗೊತ್ತಿದೆ. ಬೇರೆ ಬೇರೆ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೇವೆಂದು ಅದರ ಹೆಸರಿನಲ್ಲಿ ಲಕ್ಷಾಂತರ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಅದು ಎಲ್ಲಿಗೆ ತಲುಪುತ್ತದೆಂಬುದು ನಮಗೆ ಗೊತ್ತಿದೆ. ಆದರೆ ಆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂಲ ಸಮಸ್ಯೆ ಏನಿದೆ, ಅಲ್ಲಿಯ ಗುಡ್ಡಗಾಡು ಪ್ರದೇಶದ ಜನ ಏನಿದ್ದಾರೆ, ಅವರು ನೂರಾರು ವರ್ಷಗಳಿಂದ ವಾಸ ಮಾಡುತ್ತಿರುವ ಭೂಮಿಯಿಂದ ಅವರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ಪ್ರಾರಂಭ ಮಾಡಿದರು. ಅದನ್ನು ತಪ್ಪಿಸುವುದಕ್ಕೆ ಪ್ಯಾಕೇಜ್‌ನಲ್ಲಿ ಹೇಳಿಲ್ಲ. ಅವರು ಆ ಭೂಮಿಯಲ್ಲಿ ಏನು ಉಳುಮೆ ಮಾಡಿಕೊಳ್ಳುತ್ತಿದ್ದಾರೆ, ಆ ಭೂಮಿಯನ್ನು ಅವರಿಗೆ ಕೊಡಬೇಕೆನ್ನುವುದರ ಬಗ್ಗೆ ಪ್ಯಾಕೇಜ್‌ನಲ್ಲಿ ಹೇಳಿಲ್ಲ. ಈ ಮೂಲ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಗಮನ ಹರಿಸದೆ .ಯಾವುದೋ ಒಂದು ಪ್ಯಾಕೇಜ್ ಅನ್ನು ಕೊಟ್ಟು ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದರೆ ಖಂಡಿತವಾಗಿ ಸಾಧ್ಯವಿಲ್ಲ. ಅದಕ್ಕೆ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ, ಪ್ರಾಮಾಣಿಕವಾಗಿ ನೀವು ಆ ಸಮಸ್ಯೆಯನ್ನು ಪರಿಹಾರ ಮಾಡುವುದಾದರೆ, ಮೊದಲು ಅವರಿಗೆ ಭೂಮಿ ಕೊಡಿ. ಅವರನ್ನು ಒಕ್ಕಲೆಬ್ಬಿಸುವುದಿಲ್ಲವೆಂದು ಕಾನೂನು ತನ್ನಿ. ಅವರಿಗೆ ಇವತ್ತಿಗೂ ಕೂಡ minimum wage ಜಾರಿಯಾಗುತ್ತಿಲ್ಲ.. ಕನಿಷ್ಠ ವೇತನ ಕೊಡಬೇಕೆಂದು ಈ ದೇಶದಲ್ಲಿ ಕಳೆದ 50 ವರ್ಷಗಳಿಂದ ಕಾನೂನು ಆಗಿದ್ದರೂ ಕೂಡ ಅದನ್ನು ಇವತ್ತು ಇಲ್ಲಿ ಜಾರಿಗೆ ತರುತ್ತಿಲ್ಲ. ಹಾಗಾಗಿ ಇವತ್ತು ಅವರ ತಪ್ಪು ಸಿದ್ಧಾಂತಗಳಿಗೆ ಸಹಜವಾಗಿ ಆ ಗುಡ್ಡಗಾಡು ಜನರು ಮನಸೋತಿದ್ದಾರೆ. ನಾವು ಅಲ್ಲಿಗೆ ಹೋಗಿ ಆ ಜನರ ಜೊತೆ ಮಾತನಾಡಿದ್ದೇವೆ. ಅಲ್ಲಿ 2ನೇ ಕ್ಲಾಸ್ 3ನೇ ಕ್ಲಾಸ್ ಓದಿರತಕ್ಕಂಥ ಯುವಕರು ದೇಶದ ರಾಜಕಾರಣವನ್ನು ಅಂತರರಾಷ್ಟ್ರೀಯ ರಾಜಕಾರಣವನ್ನು ಮಾತನಾಡುವ ಮಟ್ಟಿಗೆ ಅವರು ರಾಜಕೀಯವಾಗಿ ಪ್ರಬುದ್ಧರಾಗುವಂತೆ ಅವರು ಬೆಳೆಸಿದ್ದಾರೆ. ಹಾಗಾಗಿ ಇವತ್ತು ಆ ಮೂಲ ಸಮಸ್ಯೆಯನ್ನು ನಾವು ಅರ್ಥ ಮಾಡಿಕೊಳ್ಳದೇ ಹೋದರೆ ಸಮಸ್ಯೆ ಪರಿಹಾರ ಮಾಡಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಸಿದ್ಧರಾಮಯ್ಯನವರು ದಯಮಾಡಿ ನಾನು ಹೇಳುವುದನ್ನು ಕೇಳಿಸಿಕೊಳ್ಳಬೇಕು. ಏನೆಂದರೆ, ವೆಂಕಟಮ್ಮನಹಳ್ಳಿಯಲ್ಲಿ 7 ಜನ ಪೊಲೀಸರನ್ನು ಹತ್ಯೆ ಮಾಡಿದರು. ಅದಕ್ಕೆ ಎರಡು ದಿವಸಗಳ ಮೊದಲು ಮಾನ್ಯ ಮುಖ್ಯಮಂತ್ರಿಗಳ ಮನೆ ಮುಂದೆ ಬಂದು ಗದ್ದರ್ ಮತ್ತು ವರವರರಾವ್ 'We will answer through

the bullets only,' ಎಂದು ಅವರು ಸವಾಲು ಹಾಕಿದ್ದರು. ನೀವು ಏನು ಮಾಡಿದಿರಿ? ಮಾನ್ಯ ಮಾಧುಸ್ವಾಮಿಯವರು ಹೇಳಿದ್ದು ಬಹಳ ಕರೆಕ್ಟ್ ಇದೆ. ಸರ್ಕಾರದ ಫೇಲ್ಯೂರ್ ಬಗ್ಗೆ ಬಹಳಷ್ಟು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಮೊನ್ನೆ ಯಡಿಯೂರಿನಲ್ಲಿ ಗಲಾಟೆ ಆಗಿದೆ ಅರ್ಜೆಂಟ್ ಹೋಗಿ ಎಂದು ಹೋಂ ಕಮೀಷನರ್ ಹೇಳಿದರೆ, ಎಲ್ಲಿ ಸಾರ್ ಆ ಹಳ್ಳಿ ಇರುವುದು ಎಂದು ಡಿಜಿಪಿ ಕೇಳುತ್ತಾರೆ. ಅಂದರೆ, ಆ ಗಲಾಟೆಯಾಗಿರುವ ಹಳ್ಳಿ ಎಲ್ಲಿದೆ ಎಂಬುದು ಗೊತ್ತಿಲ್ಲ. ಆ ಹಳ್ಳಿ ಯಡಿಯೂರು ಹತ್ತಿರವಿದೆ. ಅಂದರೆ, ಈ ಸ್ಥಿತಿಯಲ್ಲಿ ನಿಮ್ಮ ಪೊಲೀಸ್ ಇಲಾಖೆ, ಇಂಟೆಲಿಜೆನ್ಸ್ ಇದೆ. ಬೆಂಗಳೂರಿನಲ್ಲಿ ದಿನಕ್ಕೆ 5 ಮಕ್ಕಳನ್ನು ಅಪಹರಿಸಿಕೊಂಡು ಹೋಗುತ್ತಾರೆ. ಇದು ಪೊಲೀಸ್‌ನವರಿಗೆ ಗೊತ್ತಾಗುವುದಿಲ್ಲ. 14 ವರ್ಷದ ಒಂದು ಹೆಣ್ಣು ಮಗುವನ್ನು ಇತ್ತೀಚೆಗೆ ಕೊಲೆ ಮಾಡಿದರು. ಇಂಥ ಘಟನೆಗಳು ಬೆಂಗಳೂರಿನಲ್ಲಿ ನೂರಾರು ನಡೆಯುತ್ತಿವೆ. ಅಂದರೆ, ಪೊಲೀಸ್ ಫೇಲ್ಯೂರ್ ಆಗಿದೆ. ಗೃಹ ಮಂತ್ರಿಗಳ ಮನೆ ಮುಂದೆ ಬಂದು, "We will answer through bullet," ಎಂದು ನೇರವಾಗಿ ಹೇಳಿದರೂ ಕೂಡ ನಾವು ಸುಮ್ಮನಿದ್ದೇವೆ. ಏಕೆ ಸುಮ್ಮನಿದ್ದೀರಿ ನೀವು? ಉಳಿದ ವಿಚಾರವನ್ನು ಮಾನ್ಯ ವಾಟಾಳ್ ನಾಗರಾಜ್ ಮತ್ತು ಇತರ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಅದನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಬಹಳ ಮುಖ್ಯವಾಗಿ ಇವತ್ತು ನಕ್ಸಲೀಯ ಚಟುವಟಿಕೆ ವಿರುದ್ಧ ಹೋರಾಟ ಮಾಡಬೇಕು, ಅವರನ್ನು ಸದೆಬಡಿಯಬೇಕೆಂಬ ಹೆಸರಿನಲ್ಲಿ, ಅವರು ಮಾಡುವ ತಪ್ಪು ಧೋರಣೆಗಳನ್ನು ಸದೆ ಬಡಿಯಬೇಕೆಂಬ ಹೆಸರಿನಲ್ಲಿ ಜನ ಸಾಮಾನ್ಯರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಸ್ಥಿತಿಗೆ ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಒಂದು ಕಡೆ. ಇನ್ನೊಂದು ಕಡೆ ಕೋಮುವಾದಿಗಳೇನು ಮಾಡುತ್ತಿದ್ದಾರೆ? ಕೋಮುವಾದವನ್ನು ವಿರೋಧ ಮಾಡಿದರೆಂದು ನಕ್ಸಲೈಟ್ ಎಂದು ಬ್ರಾಂಡ್ ಮಾಡುತ್ತಿದ್ದಾರೆ. ಅವರನ್ನು ಹಿಡಿದುಕೊಂಡು ಬನ್ನಿ ಎಂದು ಹೇಳುವುದು ಆಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜಾತಂತ್ರ ರೀತಿಯಲ್ಲಿ ಚಳುವಳಿ ಮಾಡುವವರನ್ನು ಅರೆಸ್ಟ್ ಮಾಡಿದರು. ಮೊನ್ನೆ ವಿಮಾ ನೌಕರರು ಜಾತಾ ತೆಗೆದಿದ್ದರು. ಅದು ಮಾನ್ಯ ಪ್ರಕಾಶ್‌ರವರಿಗೆ ಗೊತ್ತಿರಬಹುದು. All-India Conference ಅವರು ಶೃಂಗೇರಿಗೆ ಬಂದರೆ, ಪೊಲೀಸರು ಅವರನ್ನು ಹಿಡಿದುಕೊಂಡು ಹೋಗಿ ಒಳಗೆ ಹಾಕಿದರು. ಅವರು ಹಾಡು ಹೇಳುತ್ತಾರೆ, ಆ ಹಾಡು ಉದ್ವೇಗ ಹುಟ್ಟಿಸುವ ಹಾಡು ಎಂದು ಹೇಳಿ ಜೈಲಿಗೆ ಹಾಕಿದರು. ಅವರು ಪ್ರಚೋದನೆ ಮಾಡುತ್ತಾರೆಂದು ಹೇಳಿ ಹಾಗೆ ಮಾಡಿದರು. ನಾನು ಡಿವೈಎಸ್‌ಪಿಯವರಿಗೆ ಫೋನ್ ಮಾಡಿದ್ದೆ, ಆಗ ಅವರು ಇರಲಿಲ್ಲ. ಆಗ ನಾನು ಶೃಂಗೇರಿ ಶಾಸಕರಿಗೆ ಫೋನ್ ಮಾಡಿದೆ. ಅವರು ಅಲ್ಲಿನ ಪೊಲೀಸ್ ಸ್ಟೇಷನ್‌ಗೆ ಹೋಗಿ ಮಾತನಾಡಿ ಅವರನ್ನು ಬಿಡಿಸಿ ಕಳುಹಿಸಿದರು. ಪೊಲೀಸರು ಯಾವ್ಯಾವುದನ್ನೋ ನೋಡಿ, ಯಾರ್‍ಯಾರನ್ನೋ ಜೈಲಿಗೆ ಹಾಕುತ್ತಾರೆ. ಯಾವ್ಯಾವುದನ್ನೋ ನೋಡಿ, ಯಾವ್ಯಾವುದೋ ರೀತಿಯಲ್ಲಿ ಜೈಲಿಗೆ ಹಾಕುವುದು. ಅಂದರೆ ಪ್ರಜಾಪ್ರಭುತ್ವ ಚಳವಳಿಗಳನ್ನು ದಮನ ಮಾಡಲಿಕ್ಕೆ ಪೊಲೀಸರು ಇಂಥದ್ದನ್ನು ಯಾವ ರೀತಿಯಲ್ಲಿ ಅವಕಾಶ ಮಾಡಿಕೊಳ್ಳುತ್ತಾರೆ. . . .

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಮ್ಮ ಮುಂದೆ ತೀವ್ರ ಭಿನ್ನಾಭಿಪ್ರಾಯಗಳಿಗಿರುವಾಗ ಒಬ್ಬರ ವಾದದ ಬಗ್ಗೆ ಇನ್ನೊಬ್ಬರು ಬೇರೆ ಬೇರೆ ಅರ್ಥ ಕೊಡುವಾಗ, ಪೊಲೀಸ್ ಅಧಿಕಾರಿಗಳಿಂದ ಹೇಗೆ ಎಕ್ಸ್‌ಪೆಕ್ಟ್ ಮಾಡುತ್ತೀರಿ? ಒಬ್ಬ ಇನ್ಸ್‌ಪೆಕ್ಟರ್‌ಗೆ ಅಕಾಡೆಮಿಕ್ ಕ್ವಾಲಿಫಿಕೇಷನ್ ಏನಿರುತ್ತದೆ?

Degree, Double Degree, physical fitness. There is no competence to differentiate violence, non-violence, leftist movement, rightist movement, fanatics, communalists, rational people. Have we trained him? Is it fair to expect it from him? ಯಾರು ಎಂದು ಹೇಗೆ ಗೊತ್ತಾಗಬೇಕು? ಉದ್ವೇಗದಿಂದ ಹಾಡು ಹೇಳುತ್ತಿದ್ದವರನ್ನು ನಕ್ಸಲೈಟರು ಎಂಬ ತೀರ್ಮಾನಕ್ಕೆ ಬಂದರು.

Sri G.V. Srirama Reddy : I am not blaiming the police. I am only blaming the authorities, the system. I am not blaiming any police constable or the Sub-Inspector, because they are helpless in the system. ಬೆಳಿಗ್ಗೆ ಅದರ ಬಗ್ಗೆ ಮಾತನಾಡಿದ್ದಾರೆ. ಸಬ್-ಇನ್ಸ್‌ಪೆಕ್ಟರ್ ಒಬ್ಬ ನನಗೆ ಇಷ್ಟವಿಲ್ಲದವನು ನನ್ನ ಕ್ಷೇತ್ರಕ್ಕೆ ಹಾಕಿಸಿಕೊಂಡು ಬಂದರೆ ಒಂದು ದಿವಸ ಇರಲಿಕ್ಕಾಗುವುದಿಲ್ಲ. ನಾವೆಲ್ಲಾ ಮಾಡುವ ಕೆಲಸವದು. ನನ್ನ ಕ್ಷೇತ್ರಕ್ಕೆ ಬಂದರೆ, ಒಂದು ದಿವಸ ಇಟ್ಟುಕೊಳ್ಳಲು ಸಾಧ್ಯವಿಲ್ಲ. ನನಗೆ ಗೊತ್ತಿಲ್ಲದೆ, ಒಬ್ಬ ಸಬ್-ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್‌ರನ್ನು ಹಾಕಿದರೆ, 2 ದಿವಸ ಇರಲಿಕ್ಕೆ ಸಾಧ್ಯವಿಲ್ಲ. ಅದಕ್ಕೆಲ್ಲಾ ನಾವು ಹೊಣೆಗಾರರು ಇದ್ದೇವೆ. ಅದಕ್ಕೆ ನಮ್ಮನ್ನು ನಾವೇ ಬ್ಲೇಮ್ ಮಾಡಿಕೊಳ್ಳಬೇಕು. ಈ ಬಗ್ಗೆ ಮಾನ್ಯ ವಾಟಾಳ್‌ರವರು, ಮಾಧುಸ್ವಾಮಿಯವರು ಹೇಳಿದ್ದಾರೆ. ಮತ್ತೆ ನಾನು ರಿಪೀಟ್ ಮಾಡಲು ಹೋಗುವುದಿಲ್ಲ. ನಾನು ಪೊಲೀಸರನ್ನು ಬಯ್ಯುವುದಿಲ್ಲ. It is an authority. ನಾವ್ಯಾರು ನೇತಾರರಿದ್ದೇವೆ, ನಮಗೆ ಗೊತ್ತಾಗಬೇಕಲ್ಲವೇ? ಯಾರು ಕ್ರಿಮಿನಲ್ಸ್? ಯಾರು ರೆವಲ್ಯೂಷನಿಸ್ಟ್? ಯಾರು ಡಕಾಯಿತರು ಎಂದು ಹೇಳುವುದು ನಮಗೆ ಗೊತ್ತಿರಬೇಕಲ್ಲವೇ? ಇವತ್ತು ಮಾನ್ಯ ಮಾಧುಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದರು. ನಕ್ಸಲೈಟ್ ಹೆಸರಿನಲ್ಲಿ ದರೋಡೆಕೋರರು ಶುರುವಾಗಿದ್ದಾರೆ. ಬೆದರಿಕೆ ಹಾಕಿ ಹಣ ವಸೂಲಿ ಮಾಡುವುದು ನಡೆಯುತ್ತಿದೆ. ಬಾಗೇಪಲ್ಲಿ ತಾಲ್ಲೂಕಿನಲ್ಲಿ ನಕ್ಸಲೈಟ್‌ರ ಗಲಾಟೆ ಇದೆ ಎಂದು ಹೇಳಿ ರಿಪೋರ್ಟ್ ಇದೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಶ್ರೀರಾಮರೆಡ್ಡಿಯವರ ಹತ್ತಿರ ನಕ್ಸಲೈಟರ ವಿಷಯದಲ್ಲಿ ನಮಗಿಂತಲೂ ಹೆಚ್ಚಿನ ಮಾಹಿತಿ ಇದೆ. ಪೆರಿಟಾಲ್ ರವಿ ಅವರ ಪಕ್ಕದ ಕ್ಷೇತ್ರದವರು. ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ವಿಷದವಾಗಿ ಹೇಳಿದರೆ, ಈ ಮನೆಗೆ ವಿಷಯಗಳು ಗೊತ್ತಾಗುತ್ತದೆಂದು ನಾನು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನನ್ನ ಕ್ಷೇತ್ರದ ಪಕ್ಕದಲ್ಲಿದ್ದಾರೆ ಎನ್ನುವುದಕ್ಕೋಸ್ಕರ ಅವರ ಬಗ್ಗೆ ಮಾಹಿತಿ ಇಟ್ಟಿರುವವನಲ್ಲ ನಾನು. ಮಾನ್ಯ ಶ್ರೀನಿವಾಸಗೌಡರು ದಾರಿ ತಪ್ಪಿಸುವುದರಲ್ಲಿ ಭಾರೀ ನಿಪುಣರು. ವೈಯಕ್ತಿಕವಾಗಿ ವಿಶ್ವಾಸ, ಸ್ನೇಹಕ್ಕೂ, ತತ್ವಕ್ಕೂ ವ್ಯತ್ಯಾಸವಿದೆ. 2 ತಿಂಗಳ ಹಿಂದೆ ನಾನು ನಾಗಿರೆಡ್ಡಿಯವರ ಪ್ರತಿಮೆ ಅನಾವರಣಕ್ಕೆ ಹೋಗಿದ್ದೆ although I am basically opposing their philosophy. ನಾಗಿರೆಡ್ಡಿಯವರು ಸಾಯುವುದಕ್ಕೆ 15 ದಿವಸ ಮುಂಚೆ ಅವರು ನನ್ನ ಮನೆಯಲ್ಲಿದ್ದರು. ಅದು ಬೇರೆ ವಿಷಯ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಅವರು ಸತ್ತ ಮೇಲೆ ಅವರ ಡೆಡ್‌ಬಾಡಿಯನ್ನು ಅವರ ಸಿಸ್ಟರ್ ಮನೆಯಲ್ಲಿಟ್ಟಿದ್ದರು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಹೌದು. ಮೊದಲು ಅವರು ನಮ್ಮ ಮನೆಯಲ್ಲಿದ್ದರು. ನಂತರ, ಆಸ್ಪತ್ರೆಗೆ ಹೋದರು. ಅವರು ಸತ್ತಂಥ ದಿನ ಭಾರೀ ದುರಂತ. ಅವರು ಹೇಗೆ ಸತ್ತರೆಂದು ತಿಳಿಯಲು ಆಸ್ಪತ್ರೆಗೆ ಕರೆದುಕೊಂಡು ಹೋದರೆ, ಡಾಕ್ಟರೇ ಅವರ ಗುರುತು ಹಿಡಿಯಲಿಲ್ಲ. ಅವರು ಆ ಸ್ಥಿತಿಗೆ ಬಂದಿದ್ದರು. ಅದು ಬಿಡಿ. ಹಾಗಾಗಿ, ಮಾನ್ಯ ಶ್ರೀನಿವಾಸಗೌಡರು ಕಾಂಗ್ರೆಸ್ ಅಲ್ಲ. ಯಾವುದೋ ಕಾರಣಕ್ಕಾಗಿ ಅಲ್ಲಿ ಹೋಗಿ ಸೇರಿಕೊಂಡುಬಿಟ್ಟಿದ್ದಾರಷ್ಟೆ.. ಅವರ ಜೀವಮಾನದಲ್ಲಿ ಅವರು ಕಾಂಗ್ರೆಸ್ ತತ್ವವನ್ನು ಒಪ್ಪಿದವರಲ್ಲ. ಇರಲಿ, ಅದು ಬೇರೆ ಪ್ರಶ್ನೆ. ಈಗ ಮುಖ್ಯವಾಗಿ ಗೃಹ ಮಂತ್ರಿಗಳು ಬಂದಿದ್ದಾರೆ. ದಯವಿಟ್ಟು ಗಮನಿಸಬೇಕು. ಅವರ ಗಮನಕ್ಕೆ ನಮ್ಮ ಪಕ್ಷ . . . .

ಶ್ರೀ ಕೆ. ಶ್ರೀನಿವಾಸಗೌಡ : ಜೀವಮಾನದಲ್ಲಿ ಕಾಂಗ್ರೆಸ್ ತತ್ವ ಒಪ್ಪಿದವರಲ್ಲ ಎಂದಿರಿ. ಈಗ ಒಪ್ಪಿ ನಾನು ಇಲ್ಲೇ ಇದ್ದೇನೆ. ದಯವಿಟ್ಟು ತಪ್ಪು ಗ್ರಹಿಕೆ ಹೇಳುವುದು ಬೇಡ. ಕಾಂಗ್ರೆಸ್ ತತ್ವವನ್ನು ಒಪ್ಪಿ ನಾನು ಈ ಕಡೆ ನಿಂತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅನಿವಾರ್ಯವಾಗಿ ಹೋಗಿದ್ದೇನೆ ಎಂದು ಹೇಳಿದವರು ನೀವು. ಈಗ ಅವರು ತತ್ವ, ಅದು ಒಪ್ಪಿ ಹೋಗಿದ್ದೇನೆಂದು ಹೇಳುತ್ತಿದ್ದಾರೆ. ಅನಿವಾರ್ಯವಾಗಿ ಹೋಗಿದ್ದೇನೆಂದು ಹೇಳಿದವರು ನೀವು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕಟ್ಟಾ ಕಾಂಗ್ರೆಸ್ ವಾದಿಗಳೆಂದು ಹೇಳಿದರೆ ನಮಗೇನೂ ನಷ್ಟವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾರು ಯಾವ್ಯಾವ ಪಕ್ಷಕ್ಕೆ ಹೋಗ ತಕ್ಕಂಥವರು, ಪಕ್ಷ, ಸಿದ್ಧಾಂತ, ಇವರ ಆಧಾರದ ಮೇಲೆ ಪ್ರಾಮಾಣಿಕವಾಗಿ ಹೋಗುತ್ತಿಲ್ಲ. ಅವಕಾಶವಾದಿಗಳು. ಹೋದ ವರ್ಷ ಒಂದು; ಈ ವರ್ಷ ಒಂದು, ಮುಂದಿನ ವರ್ಷ ಒಂದು. ನಾವು ದಿನಾ ನೋಡುತ್ತಿದ್ದೇವೆ. ಅದು ಅರ್ಥ ಇಲ್ಲ. ಪಕ್ಷಾಂತರ ಮಾಡಿ, ಪಕ್ಷಾಂತರ ಒಂದು ಪಿಡುಗಾಗಿದೆ. ಅವಕಾಶವಾದಿಗಳು. ಬೇರೆ ಮಾತಿಲ್ಲ. ನೀವು ಪ್ರಾಮಾಣಿಕವಾಗಿ ತತ್ವದ ಆಧಾರದ ಮೇಲೆ ಕಾಂಗ್ರೆಸ್‌ಗೆ ಹೋದವರಲ್ಲ. ಮತ್ತು ಮಾನ್ಯ ಪ್ರಕಾಶ್‌ರವರು ತತ್ವದ ಆಧಾರದ ಮೇಲೆ ಆ ಕಡೆ ಹೋದವರಲ್ಲ. ಪ್ರಾಮಾಣಿಕವಾಗಿ ಒಪ್ಪಿಕೊಳ್ಳೋಣ. ಸುಮ್ಮನೆ ಇದೆಲ್ಲಾ ಬೇಡ. ಅವಕಾಶ ಸಿಗಬೇಕು, ಅಧಿಕಾರಕ್ಕೆ ಬರಬೇಕು. ಈಗ ನಡೆಯುತ್ತಿಲ್ಲವೇ? ನಾಳೆ ಬೆಳಗ್ಗೆ ಜನತಾ, ನಾಳೆ ಬೆಳಿಗ್ಗೆ ಬಿಜೆಪಿ, ನಾಳೆ ಬೆಳಗ್ಗೆ ಕಾಂಗ್ರೆಸ್. ನಾವು ಮಾಡಿದ್ದೇ ಸರಿ. ಪತ್ರಿಕೆಗಳು ಅದಕ್ಕೆ ವೈಭವೀಕರಣ ಮಾಡುತ್ತವೆ. ಪಕ್ಷಾಂತರಕ್ಕೆ ಪತ್ರಿಕೆಗಳು ಕೊಡುವ ಪ್ರಚಾರವನ್ನು ನಾನು ಹಿಂದೆಂದೂ ನೋಡಿಲ್ಲ. ಎಷ್ಟು ಪ್ರಚಾರ ಕೊಡುತ್ತಿದ್ದೀರಿ. ನಿಮಗೆ ನಮೋ ನಮಃ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ವತಿಯಿಂದ ನಾವು ಮುಖ್ಯಮಂತ್ರಿಗಳ ಹತ್ತಿರ ಹೋಗಿ ಒಂದು ವಿಚಾರವನ್ನು ಭಾರೀ ಸ್ಪಷ್ಟ ಮಾಡಿದ್ದೇವೆ. ನಾನು ಆಗಲೇ ಹೇಳಿದ ಹಾಗೆ, ಅವರು ಇರಲಿಲ್ಲ. ಭೂಮಿ ಹಂಚುವ ಕೆಲಸವನ್ನು ಮೊದಲು ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ನಲ್ಲಿ ಮಾಡಬೇಕು. ಒಕ್ಕಲೆಬ್ಬಿಸಬಾರದು. ಸನ್ಮಾನ್ಯ ಸಿದ್ದರಾಮಯ್ಯನವರೆ, ಅದಕ್ಕಿಂತ ಬಹಳ ಮುಖ್ಯವಾಗಿ ನಾನು ಮುಖ್ಯಮಂತ್ರಿಗಳ ಗಮನಕ್ಕೆ ಮತ್ತು ಈ ಸದನದ ಗಮನಕ್ಕೆ ತರಲು ಇಚ್ಛೆಪಡುತ್ತಿದ್ದೇನೆ. ನಾವು ಒಂದನ್ನು ಆಲೋಚನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳೆ, ಸಿದ್ದರಾಮಯ್ಯನವರೆ, ಒಂದು ವಿಚಾರವನ್ನು ಸದನ ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ತರಲು ಇಷ್ಟಪಡುವುದೇನೆಂದರೆ, ಚಿಕ್ಕಮಗಳೂರು ಮತ್ತು ಪಶ್ಚಿಮ ಘಟ್ಟಗಳಲ್ಲಿ ಏಕೆ ಅವರು ನೆಲೆ

ಮಾಡಿಕೊಂಡಿದ್ದಾರೆನ್ನುವುದನ್ನು ನಿಮ್ಮ ಇಂಟೆಲಿಜೆನ್ಸ್‌ನವರು ಇವತ್ತಿಗಾದರೂ ಏನಾದರೂ ಫೈಂಡ್-ಔಟ್ ಮಾಡಿದ್ದಾರೆಯೇ? ಕೇಳಿ. ನಾನು ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ, ವೆಸ್ಟರ್ನ್ ಘಾಟ್ಸ್ ಅನ್ನು ಏಕೆ ಅವರು ಆಯ್ಕೆ ಮಾಡಿಕೊಂಡಿದ್ದಾರೆ ಎನ್ನುವುದು ನಾನು ಇವತ್ತು ಕೂಡ ಸವಾಲು ಹಾಕಿ ಕೇಳುತ್ತೇನೆ, ನಮ್ಮ ಪೋಲೀಸ್ ಇಂಟೆಲಿಜೆನ್ಸ್‌ಗೆ ಗೊತ್ತಿಲ್ಲ. ಏಕೆ ಅವರು ವೆಷ್ಟರ್ನ್ ಘಾಟ್ಸ್ ಅನ್ನು ಆಯ್ಕೆ ಮಾಡಿಕೊಂಡಿರುವುದು? ಈ ಕಡೆ ಆಂಧ್ರಪ್ರದೇಶದ ಮಾವೋವಾದಿಗಳು, ಆ ಕಡೆ ಛತ್ತೀಸ್‌ಘಡದ ಮಾವೋವಾದಿಗಳು, ನೇಪಾಳದ ಮಾವೋವಾದಿಗಳು. ಇವರಿಗೆ ದಕ್ಷಿಣ ಭಾರತದಲ್ಲಿ ಅಡಗುತಾಣಗಳು ಬೇಕಾಗಿದೆ. ದಕ್ಷಿಣ ಭಾರತದಲ್ಲಿ ಏಕೆ ಅಡಗುದಾಣಗಳು ಬೇಕಾಗಿವೆ ಎಂದರೆ ಆಂಧ್ರದಲ್ಲಿ ನಡೆಯುತ್ತಿರುವ ಪೋಲೀಸ್ ಕಾರ್ಯಾಚರಣೆ, ಛತ್ತೀಸ್‌ಘಡ, ಉತ್ತರಾಂಚಲದಲ್ಲಿ ನಡೆಯುತ್ತಿರುವ ಪೋಲೀಸ್ ಕಾರ್ಯಾಚರಣೆ, ನೇಪಾಳದಲ್ಲಿ ಆದಂಥ ಕಾರ್ಯಾಚರಣೆಗಳನ್ನು ತಪ್ಪಿಸಿಕೊಂಡು ಬಂದು ನೆಲೆಸುವುದಕ್ಕೆ ಅವರಿಗೆ ಅಡಗುದಾಣಗಳು ಬೇಕು. ಅವರಿಗೆ ಅಡಗುದಾಣ ದಕ್ಷಿಣ ಭಾರತದ safest place is western ghats. ಇದು western ghats ಅನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ಮೊದಲನೇ ಕಾರಣವಾಗಿದೆ. ಇನ್ನು ವೆಂಕಟಮ್ಮನಹಳ್ಳಿಯಲ್ಲಿ ಆ ಘಟನೆ ಏಕೆ ನಡೆಯಿತು, ಪಾವಗಡ ತಾಲ್ಲೂಕನ್ನೇ ಅವರು ಏಕೆ ಆಯ್ಕೆ ಮಾಡಿಕೊಂಡಿದ್ದಾರೆಂದರೆ, ಅದಕ್ಕೆ ಇನ್ನೊಂದು ಪ್ರಮುಖವಾದ ಕಾರಣವಿದೆ. ತೆಲಗು ಮತ್ತು ಕನ್ನಡ ಹೀಗೆ ಎರಡೂ ಭಾಷೆಗಳನ್ನು ಬಲ್ಲಂಥ ಜನ ಅವರಿಗೆ ಬೇಕಾಗಿದೆ. ಪಾವಗಡ, ಬಾಗೇಪಲ್ಲಿಯಂಥ ತಾಲ್ಲೂಕುಗಳಲ್ಲಿ ತೆಲಗು ಮತ್ತು ಕನ್ನಡ ಭಾಷೆ ಮಾತನಾಡುವುದಕ್ಕೆ ಬರತಕ್ಕಂಥ ಜನ ಇದ್ದಾರೆ. ಅವರನ್ನು ಉಪಯೋಗಿಸಿ ಭಾಷೆಯ ಸಮಸ್ಯೆಯನ್ನು ಪರಿಹಾರ ಮಾಡಿಕೊಂಡು western ghats ಅನ್ನು ಅಡಗುದಾಣಗಳನ್ನಾಗಿ ಮಾಡಿ, ನಾಳೆಯ ದಿವಸ ಛತ್ತೀಸ್‌ಗಡದ ಮಾವೋವಾದಿಗಳು, ಜಾರ್ಖಂಡ್‌ನಿಂದ ಶಸ್ತ್ರಾಸ್ತ್ರಗಳು ಬೆಂಗಳೂರಿಗೆ ಬಂದಿದೆ ಎಂದು ಪತ್ರಿಕೆಯಲ್ಲಿ ಬಂದಿರುವುದು ಈಗಾಗಲೇ ಎಲ್ಲರಿಗೆ ಗೊತ್ತಿದೆ. ಜಾರ್ಖಂಡ್, ಛತ್ತೀಸ್‌ಗಡ, ನೇಪಾಳದ ಮಾವೋವಾದಿಗಳು, ಬಿಹಾರದ ಮಾವೋವಾದಿಗಳು ಹೀಗೆ ಇವರೆಲ್ಲಾ ಪಲಾಯನ ಮಾಡಿದಾಗ ನಮ್ಮ ರಾಜ್ಯದ western ghats ಬಹಳ safest ತಂಗುದಾಣಗಳು ಅವರಿಗೆ ಆಗುತ್ತದೆ. ಅದಕ್ಕೋಸ್ಕರ ಅವರು western ghats ಅನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎನ್ನತಕ್ಕಂಥ ವಿಚಾರವು ಇಲ್ಲಿಯ intelligence police ನವರಿಗೆ ಗೊತ್ತಿದೆಯೇ? ಆ ಸ್ಥಳವನ್ನು ಏಕೆ ಆಯ್ಕೆ ಮಾಡಿಕೊಂಡರು ಎಂಬುದನ್ನು ನೀವು ಕೇಳಿ ನೋಡಿ. ಆದ್ದರಿಂದ ಇದನ್ನು ಕೇವಲ ಕಾನೂನಿನ ದೃಷ್ಟಿಯಿಂದ ನೋಡಬಾರದು. ಇದರಲ್ಲಿ ರಾಜಕೀಯ ಪ್ರಶ್ನೆ ಅಡಗಿದೆ, ಭೂಮಿ ಪ್ರಶ್ನೆ ಅಡಗಿದೆ, ಕೂಲಿ ಪ್ರಶ್ನೆ ಅಡಗಿದೆ, ಅಂದರೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆ ಇಲ್ಲಿ ಮೂಲಭೂತವಾಗಿದೆ ಹೊರತು ಇದು ಕಾನೂನಿನ ಪ್ರಶ್ನೆಯಲ್ಲ. ಕಾನೂನು ಮುಖಾಂತರವೇ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದರೆ ಅದು ಸಂಪೂರ್ಣವಾಗಿ ಸರ್ಕಾರದ ದಡ್ಡತನವಾಗುತ್ತದೆ. ಅದರಿಂದ ಪರಿಹಾರವಾಗುವುದಿಲ್ಲ. ಮೂಲಭೂತ ಸಮಸ್ಯೆಗೆ ಪರಿಹಾರ ಹುಡುಕಬೇಕಾಗಿದೆ ಎಂದು ನಾನು ಸ್ಪಷ್ಟವಾಗಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಕಡೆಯದಾಗಿ ಒಂದು ವಿಚಾರವನ್ನು ಹೇಳುವುದೇನೆಂದರೆ, ಕುವೆಂಪು ಯೂನಿವರ್ಸಿಟಿಯಲ್ಲಿ ನಕ್ಸಲೈಟ್ ಪರವಾಗಿರುವಂಥ ಪ್ರೊಫೆಸರುಗಳಿದ್ದಾರೆ, ಲೆಕ್ಚರರುಗಳಿದ್ದಾರೆ ಎಂದು ಒಂದು ಗುಲ್ಲೆಬ್ಬಿಸಿದ್ದಾರೆ. ಇದು ಖಂಡಿತವಾಗಿಯೂ ತಪ್ಪು ಅಭಿಪ್ರಾಯ. ಈಗ ಯಾರೋ ಪ್ರೊಫೆಸರ್ ಆಗಬಹುದು, ಒಬ್ಬ

ಇತಿಹಾಸ ತಜ್ಞ ಆಗಬಹುದು, ಒಬ್ಬ ಅರ್ಥಶಾಸ್ತ್ರಜ್ಞ ಆಗಬಹುದು, ಆತನದೇ ಆದಂಥ ಕೆಲವು ಸಿದ್ಧಾಂತಗಳು ಆತನಲ್ಲಿ ಇರುತ್ತವೆ. ಅದರ ಅರ್ಥ ಇವರಿಗೆಲ್ಲಾ ಬೆಂಬಲ ಕೊಟ್ಟಿದ್ದಾರೆಂದು ಹೇಳುವಂಥ ಅರ್ಥವಲ್ಲವಿದು. JNU University, Hyderabad Central University, JNU is a international reputed University. ಅದರಲ್ಲಿ ಇವತ್ತು ಎಲ್ಲಾ ಸಿದ್ಧಾಂತಗಳನ್ನು ಬಹಿರಂಗವಾಗಿ ಪ್ರತಿಪಾದನೆ ಮಾಡತಕ್ಕಂಥ ಪ್ರೊಫೆಸರುಗಳಿದ್ದಾರೆ. ಇದೇ ತರಹ ಹೈದರಾಬಾದ್ ಸೆಂಟ್ರಲ್ ಯೂನಿವರ್ಸಿಟಿಯಲ್ಲಿದ್ದಾರೆ. IIT Kharagpur ದಲ್ಲಿದ್ದಾರೆ. ಹೀಗೆ ಎಲ್ಲಾ ಕಡೆ ಇದ್ದಾರೆ. ಆದರೆ ಯಾರೋ ಒಬ್ಬರು ಗುಲ್ಲೆಬ್ಬಿಸಿದರೆಂದು ಸಾರಾಸಗಟಾಗಿ ಎಲ್ಲಾ ಪ್ರೊಫೆಸರುಗಳು, ಎಲ್ಲಾ ಲೆಕ್ಚರರುಗಳು ನಕ್ಸಲೀಯರ ಪರವಾಗಿದ್ದಾರೆಂದು ಇವತ್ತು ನಿಮ್ಮ ಪೊಲೀಸ್‌ನವರು ಅವರಿಗೆ ಹಿಂಸೆ ಕೊಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಗಮನಹರಿಸಿ ಇದನ್ನು ಮೊದಲು ತಪ್ಪಿಸಬೇಕು.

ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಈ ಚಟುವಟಿಕೆ ನಡೆಯುತ್ತಿದೆಯೆಂದು ಹೇಳುತ್ತಿರುವುದು ನಮಗೆ ಗೊತ್ತಾದ ಮೇಲೆ ನಾನು ಅಲ್ಲಿಯ ರಿಜಿಸ್ಟ್ರಾರ್ ಮತ್ತು ವೈಸ್‌ಚಾನ್ಸಲರನ್ನು ಹಾಗೂ ಕೆಲವು ಪ್ರೊಫೆಸರುಗಳನ್ನು ಕರೆಸಿ ಚರ್ಚೆ ಮಾಡಿದ್ದೇನೆ. ಅಲ್ಲಿ ಅಂಥ ಚಟುವಟಿಕೆಗಳು ಯಾವುದೂ ನಡೆಯುತ್ತಿಲ್ಲವೆಂದು, ಅಲ್ಲಿ ಅಂಥವರು ಯಾರೂ ಇಲ್ಲವೆಂದು ಅವರು ಬಹಳ ಸ್ಪಷ್ಟವಾಗಿ ಹೇಳಿದರು. ಅದನ್ನು ನಾನು ಪತ್ರಿಕೆಯಲ್ಲಿ ಸಹ ಹೇಳಿದ್ದೇನೆ. ಅದರಂತೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಯಾವುದೇ ಈ ತರಹದ ನಕ್ಸಲೈಟ್ ಚಟುವಟಿಕೆ ನಡೆಯುತ್ತಿಲ್ಲವೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ತಿಳಿಸಬಯಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನೀವು ಹೇಳಿದ್ದೀರಿ. ಈಗ ನಾನು ನಿಮ್ಮ ಬಗ್ಗೆ ಹೇಳಲಿಲ್ಲ. ಪೊಲೀಸ್‌ನವರು interrogate ಮಾಡತಕ್ಕಂಥ ಹೆಸರಿನಲ್ಲಿ ಹಲವಾರು ಪ್ರೊಫೆಸರ್ಸ್ ಮತ್ತು ಲೆಕ್ಚರರ್ಸ್ ಅನ್ನು ಹಿಡಿದುಕೊಂಡು ಬಂದು Interrogate ಮಾಡುತ್ತಿದ್ದಾರೆ. ಮೊನ್ನೆ ವಿರಾಜಪೇಟೆಯಲ್ಲಿ ಒಬ್ಬರು ಪ್ರೊಫೆಸರನ್ನು ಹಿಡಿದು interrogate ಮಾಡಿದ್ದಾರೆ. ಇದನ್ನೇ ನಾನು ಇಲ್ಲಿ ಹೇಳುತ್ತಿರುವಂಥದ್ದು. ನೀವು ಸ್ಪಷ್ಟವಾಗಿ ಹೇಳಿದ್ದೀರಿ. ನಮಗೆ ಗೊತ್ತಿದೆ. ನಿಮ್ಮ ಹೇಳಿಕೆಯನ್ನು ನಾನು ನೋಡಿದ್ದೇನೆ. ಆದರೆ ಪೊಲೀಸ್‌ನವರು ಇವತ್ತು ಆ ಕೆಲಸವನ್ನು ಮಾಡುತ್ತಿದ್ದಾರೆ. ಈ ರೀತಿ ಮಾಡುತ್ತಿರುವುದನ್ನು ತಕ್ಷಣ ಕೈಬಿಡಬೇಕು. ಇದು ಸರಿಯಾದದ್ದು ಅಲ್ಲ. ಸಾಹಿತಿಗಳು ಇದ್ದಾರೆ, ಮೇಧಾವಿಗಳಿದ್ದಾರೆ, ಅವರು ಸಹಾನುಭೂತಿಯನ್ನು ವ್ಯಕ್ತಪಡಿಸಿದ ಕಾರಣಕ್ಕೋಸ್ಕರವಾಗಿ ಅವರು ನಕ್ಸಲೈಟ್ ಸಿದ್ಧಾಂತವನ್ನು ಒಪ್ಪಿದ್ದಾರೆಂದಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ವಿಚಾರವನ್ನು ಹೇಳತಕ್ಕಂಥವರು ವಿಚಾರವಾದಿಗಳು ಅಂಥವರು ಇದ್ದರೆ ಅವರನ್ನು ನಕ್ಸಲಿಸ್ಟ್ ಎಂದು ಹೇಳಿಬಿಡುವುದು! ಅವರ ಮೇಲೆ ಪೊಲೀಸ್‌ರಿಂದ ವಿಚಾರಣೆ ನಡೆಸುವುದು ಇದು ಒಳ್ಳೆಯ ಸೂಚನೆ ಅಲ್ಲ. ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲೆಲ್ಲಿ ವಿಚಾರವಾದಿಗಳು ಯಾರ್‍ಯಾರು ಇದ್ದಾರೆ ಇವರೆಲ್ಲರೂ ಸಂಪೂರ್ಣವಾಗಿ ನಕ್ಸಲೈಟ್ಸ್ ಎನ್ನುವ ಭಾವನೆ ಬರುವ ರೀತಿಯಲ್ಲಿ ಇವತ್ತು ಗುಲ್ಲೆಬ್ಬಿಸುತ್ತಿದ್ದಾರೆ. ಇದು ಒಳ್ಳೆಯದಲ್ಲ. ಆದ್ದರಿಂದ ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಅವರ ಉತ್ತರದಲ್ಲಿ ಹೇಳಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ವಿಚಾರವಾದಿಗಳನ್ನೆಲ್ಲಾ ನೀವು ನಕ್ಸಲೈಟ್‌ರ ಜೊತೆ ಕೈಜೋಡಿಸಿದ್ದೀರಿ ಎಂದು ಹೇಳಿದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆ. ಆದರೆ ನಿಮ್ಮ intelligence department ಇದೆ. ವರದಿಗಳು ಇವೆ. ಯಾರು ಈ ಟ್ರೈನಿಂಗ್ ಕೊಡುತ್ತಿದ್ದಾರೆ, ಯಾರು ಅವರ ಜೊತೆ ನೇರವಾಗಿ ಸಂಪರ್ಕ ಇಟ್ಟುಕೊಂಡಿದ್ದಾರೆ ಅವರು ಅಪರಾಧಿಗಳು ಅಲ್ಲವೇ? ಅಂಥವರಿಗೆ ರಕ್ಷಣೆ ಕೊಡಬೇಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇವೆ. ಈಗ ಏನಾಗಿದೆ ಎಂದರೆ ಸಾರಾಸಗಟಾಗಿ ಎಲ್ಲರನ್ನೂ ಒಂದೇ ಸಾಲಿನಲ್ಲಿ ನಿಲ್ಲಿಸುವುದಕ್ಕಾಗುವುದಿಲ್ಲ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ಯಾರು ಇದಕ್ಕೆ ಚಿತಾವಣೆ ಮಾಡಿದ್ದಾರೆ ಮತ್ತು ಅದಕ್ಕೆ ಏನು ಸಾಕ್ಷ್ಯಾಧಾರಗಳಿವೆ, ಇದನ್ನು ತನಿಖೆ ಮಾಡುವುದರ ಕಡೆಗೆ ಈ ಸರ್ಕಾರ ಗಮನ ಕೊಡುತ್ತಿಲ್ಲ. ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಿ ಎನ್ನುವುದು ಎಲ್ಲರ ಅಭಿಪ್ರಾಯವಾಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಆದರೆ ನಾನು ಹೇಳುತ್ತಿರುವುದೇನೆಂದರೆ, ಆ ಹೆಸರಿನಲ್ಲಿ ಎಲ್ಲರನ್ನೂ ಸಾರಾಸಗಟಾಗಿ ಈಗ ಪತ್ರಕರ್ತರು ಸಾಹಿತಿಗಳು ಬುದ್ಧಿಜೀವಿಗಳು, ಪ್ರೊಫೆಸರ್ಸ್ ಇವರುಗಳು ಅವರ ಬಗ್ಗೆ ಏನೋ ಎರಡು ಮಾತು ಬರೆದರೆ ಅವರು ನಕ್ಸಲೈಟ್ ಪರ ಎಂದು ತೀರ್ಮಾನ ಮಾಡುವುದು ಸರಿಯೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ವಿಚಾರ ಪರವಾದಂಥ ಭಾಷಣ ಮಾಡುವುದು, ವಿಚಾರಪರವಾದಂಥ ಲೇಖನಗಳನ್ನು ಬರೆಯುವುದು, ವಿಚಾರಪರವಾದಂಥ ಚಿಂತನೆ ಮಾಡುವವರು ಹೀಗೆ ಇವರೆಲ್ಲರೂ ನಕ್ಸಲೈಟ್ಸ್ ಎನ್ನುವ ತೀರ್ಮಾನಕ್ಕೆ ಬರುವುದಾದರೆ ಇದರಿಂದ ಕಷ್ಟವಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ತಪ್ಪು ಗ್ರಹಿಕೆಯಿಂದ ಕೆಲವರಿಗೆ ಆ ಅಭಿಪ್ರಾಯ ಸಹಾನುಭೂತಿ ಬಂದಿರುವುದಕ್ಕೆ ಸಾಧ್ಯವಿದೆ. ಉದಾಹರಣೆಗೆ ಹೇಳುವುದಾದರೆ, 1983ರಲ್ಲಿ ಆವತ್ತಿನ ಆಂಧ್ರದ ಮಹಾನಾಯಕ, ಮುಖ್ಯಮಂತ್ರಿಯಾಗಿದ್ದ ದಿವಂಗತ ಎನ್. ಟಿ. ರಾಮರಾವ್‌ರವರು ಒಂದು ದಿವಸ ಒಂದು ಹೇಳಿಕೆಯನ್ನು ಮುಖ್ಯಮಂತ್ರಿಯಾಗುವುದಕ್ಕೆ ಮೊದಲು ಕೊಟ್ಟಿದ್ದರು. "ಈ ದೇಶದ ಮಹಾನ್ ದೇಶಭಕ್ತರು ಯಾರೆಂದರೆ ನಕ್ಸಲೈಟ್ಸ್ ಎಂದು" ಅವರೇ ಹೇಳಿದ್ದರು. ದಿವಂಗತ ಎನ್.ಟಿ. ರಾಮರಾವ್‌ರವರು ಹೇಳಿದ ಆ ವಿಚಾರ ಬಹುಶಃ ಮಾನ್ಯ ರಮೇಶ್‌ಕುಮಾರ್‌ರವರಿಗೆ ಗೊತ್ತಿರ ಬಹುದು. ಆದರೆ ಅದೇ ಎನ್.ಟಿ. ರಾಮರಾವ್ ಮುಖ್ಯಮಂತ್ರಿಯಾದ ಮೇಲೆ ಅವರ ಪೊಲೀಸ್ ನವರೇ ನೂರಾರು ನಕ್ಸಲೈಟ್ಸ್‌ರನ್ನು ಕೊಲೆ ಮಾಡಿದರು. ಕೆಲವು ತಪ್ಪು ಗ್ರಹಿಕೆಗಳಿಂದ ಆ ರೀತಿಯ ಅಭಿಪ್ರಾಯ ಕೆಲವರಿಗೆ ಬಂದಿರಬಹುದು. ಆದ್ದರಿಂದ ಸಾರಾಸಗಟಾಗಿ ಅವರನ್ನು interrogate ಮಾಡತಕ್ಕಂಥದ್ದು ಸರಿಯಲ್ಲ ಮತ್ತು ಪಶ್ಚಿಮಘಟ್ಟಗಳನ್ನು ಅಡಗುದಾಣಗಳಾಗಿ ಏನು ಮಾಡ ಬೇಕೆಂದಿದ್ದಾರೆ ಅದರ ಬಗ್ಗೆ ಪೊಲೀಸ್‌ನವರು ಎಚ್ಚರಿಕೆಯಿಂದರಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇನ್ನು ಅವರು ಮಾವೋವಾದಿಗಳಲ್ಲ. ಅವರು ಮಾವೋವಾದಕ್ಕೆ ಸಂಪೂರ್ಣವಾದಂಥ ವಿರೋಧಿಗಳು. ಅವರು ಲಿಂಗ್‌ಪಿಯೋವಾದಿಗಳು.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರ ಮಾತಿಗೆ ಪೂರಕವಾಗಿ ಹೇಳುತ್ತಿದ್ದೇನೆ. ಆಯಾ ಸಂದರ್ಭಗಳಿಗೆ ಸಂಬಂಧಪಟ್ಟಂತೆ ಹಿಂಸೆ ಅಹಿಂಸೆ ಈ ವಿಚಾರದಲ್ಲಿ ಇತಿಹಾಸದಲ್ಲಿ ಬೇಕಾದಷ್ಟು ಚರ್ಚೆಗಳು ಆಗಿವೆ. ಭಗತ್‌ಸಿಂಗ್‌ರವರು ಮತ್ತು ಆಜಾದ್‌ರವರೆಲ್ಲಾ ತೆಗೆದುಕೊಂಡಂಥ ಹಿಂಸೆಯನ್ನು ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರು ಅದನ್ನು ಖಂಡಿಸಿರುತ್ತಾರೆ. ಆದರೆ ಭಗತ್‌ಸಿಂಗ್‌ರಂಥ ದೇಶಪ್ರೇಮಿ ಮತ್ತೊಬ್ಬರು ಹುಟ್ಟಲಾರ ಎಂದು ತಮ್ಮ ಪತ್ರಿಕೆಯಲ್ಲಿ ಕೂಡ ಬರೆಯುತ್ತಾರೆ. ಅದೇ ರೀತಿಯಾಗಿ ಅರವಿಂದರ ಬಗ್ಗೆ ಅವರು ಮುಂದೆ ಪರಿವರ್ತನೆ ಆದಂಥ ಸಂದರ್ಭದಲ್ಲಿ ಯಾವ ಸದುದ್ದೇಶದಿಂದ ಯಾವ ಮಾರ್ಗದಲ್ಲಿ ಹೋಗುತ್ತಾರೆ ಎನ್ನುವುದರ ಬಗ್ಗೆ ಮತ್ತು ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡಿರತಕ್ಕಂಥ ಸುಭಾಷ್‌ಚಂದ್ರ ಭೋಸ್‌ರ ಬಗ್ಗೆ ನೆಹರೂರವರು ವಕಾಲತ್ತು ಮಾಡುವುದನ್ನು ಬಿಟ್ಟು 30 ವರ್ಷಗಳ ನಂತರ ಪ್ರಥಮಬಾರಿಗೆ ಅವರ ಪರವಾಗಿ ವಕಾಲತ್ತು ಮಾಡಿರುವಂಥದ್ದನ್ನು ಕಾಣುತ್ತೇವೆ. ಇದು ಬುದ್ಧಿಜೀವಿಗಳಾದಂಥವರು ಪ್ರಗತಿಪರರಾಗಿರತಕ್ಕಂಥವರು ಆಯಾ ಸಂದರ್ಭ ಘಟನೆ ಇವುಗಳನ್ನು ನೋಡಿ ವಿಶ್ಲೇಷಿಸುತ್ತಾರೆ. ಆದ್ದರಿಂದ ಯಾರೋ ಒಬ್ಬ ರಾಜೇಂದ್ರ ಚನ್ನಿ ಎನ್ನುವಂಥವರು ಪ್ರಗತಿಪರವಾಗಿ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಯಾವಾಗಲೂ ಮಾತನಾಡುತ್ತಾರೆ. ರಾಜಾರಾಂ ಹೆಗಡೆಯಂಥವರು ಲೇಖನಗಳನ್ನು ಬರೆಯುತ್ತಾರೆಂದು ಅನಾವಶ್ಯಕವಾಗಿ ಅವರ ಬಗ್ಗೆ ಸಂಶಯವನ್ನು ಸರ್ಕಾರ ಪಡುತ್ತಿಲ್ಲ. ಅಕಸ್ಮಾತ್ ಯಾರಾದರೂ ಆ ರೀತಿ ಪಡತಕ್ಕಂಥವರು ಇದ್ದರೆ ಅದು ತಪ್ಪು ಗ್ರಹಿಕೆಯಿಂದ ಆಗಿರತಕ್ಕಂಥದ್ದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಇದಕ್ಕೆ ಪೂರಕವಾಗಿ ಮಾನ್ಯ ಪ್ರಕಾಶ್‌ರವರು ಬಹಳ ಒಳ್ಳೆಯ ಮಾತನ್ನು ಹೇಳಿದರು. ಪಂಡಿತ್ ಜವಾಹರಲಾಲ್‌ರವರು Meerut conspiracy case ನಲ್ಲಿ ಅಪರಾಧಿಗಳಾಗಿದ್ದಂಥ ದಾಂಗೆ, ಬಿ.ಟಿ.ರಣದೇವ್, ಮುಜಾಫರ್ ಅಹಮದ್‌ರವರ ಪರವಾಗಿ ಕಾನೂನು ರಕ್ಷಣೆ ಮಾಡಲಿಕ್ಕೆ ಒಂದು ವೇದಿಕೆಯನ್ನು ರಚನೆ ಮಾಡಿ ಅವರೇ ವಾದ ಮಾಡಿದರು. Meerut conspiracy case ಇದು ಜಗತ್‌ಪ್ರಸಿದ್ಧ ಕೇಸ್ ಆಗಿತ್ತು. ವೆಂಕಟಮ್ಮನಹಳ್ಳಿಯಲ್ಲಿ ಪೋಲೀಸರನ್ನು ಕೊಲೆ ಮಾಡಿರುವುದನ್ನು ಆ ರೀತಿ ಮಾಡಿರುವುದು ಸರಿಯಲ್ಲವೆಂದು ಪ್ರಗತಿಪರರು ಸಾಹಿತಿಗಳು ಕೆಲವರು ಖಂಡನೆ ಮಾಡಿದರು.

ಶ್ರೀ ಕೆ.ಎಂ.ತಿಮ್ಮರಾಯಪ್ಪ : ಮಾನ್ಯ ಅಧ್ಯಕ್ಷರೆ, ವೆಂಕಟಮ್ಮನಹಳ್ಳಿಗೆ ಮಾವೋವಾದಿಗಳು ಬಂದಿಲ್ಲ ಅವರು ಮಾವೋವಾದಿ ಅಲ್ಲ ಎನ್ನುವ ಮಾತನ್ನು ಹೇಳಿದರು. ಆದರೆ ವೆಂಕಟಮ್ಮನ ಹಳ್ಳಿಯ ವಿಚಾರವಾಗಿ ನಾನು ಹೇಳುವುದಾದರೆ ಆವತ್ತು ನಡೆದ ಘಟನೆಯಲ್ಲಿ ನಾವೂ ಸಹ ಸ್ವಲ್ಪ ತಡವಾಗಿಯಾದರೂ ಆ ಗ್ರಾಮಕ್ಕೆ ಭೇಟಿ ನೀಡಿದ್ದೆವು. ಅದು ನನ್ನ ಕ್ಷೇತ್ರಕ್ಕೆ ಬರತಕ್ಕಂಥ ಒಂದು ಹಳ್ಳಿ. ಅದು ಆಂಧ್ರಪ್ರದೇಶದಿಂದ ಸುತ್ತುವರೆದಿರತಕ್ಕಂಥ ಒಂದು ಪ್ರದೇಶವಾಗಿರುತ್ತದೆ. ಅಲ್ಲಿ ಆವತ್ತು ರಾತ್ರಿ ನಡೆದಿರತಕ್ಕಂಥ ಘಟನೆಯನ್ನು ನಾನು . . .

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿ ಮುಗಿಸಿದ ಮೇಲೆ ಬೇಕಾದರೆ ಅವರಿಗೆ ಅವಕಾಶ ಕೊಡಿ. ಅವರು ಆ ಕ್ಷೇತ್ರದ ಶಾಸಕರಾಗಿರುವುದರಿಂದ ಮಾತನಾಡಬಹುದು. ಆ ಮೇಲೆ ಅವರು ಮಾತನಾಡಲಿ. ನಾನು ಮೊದಲು ಮಾತನಾಡಿ ಮುಗಿಸಿಬಿಡುತ್ತೇನೆ. ನಂತರ ಅವರು ಮಾತನಾಡಲಿ. ಆದ್ದರಿಂದ ಇವರನ್ನು ಮಾವೋವಾದಿಗಳೆಂದು

ಕರೆಯುವುದಾಗಲಿ, ವೈಭವೀಕರಣ ಮಾಡತಕ್ಕಂಥದ್ದಾಗಲಿ, ಸರ್ಕಾರದವರು ಆ ಹೆಸರಿನಲ್ಲಿ ಕಾನೂನುಬಾಹಿರವಾದಂಥ ಚಟುವಟಿಕೆಗಳನ್ನು ಮಾಡುವುದಾಗಲಿ, ಯಾರೋ ಕೆಲವರು ಅವರು ಕೋಮುವಾದಿಗಳ ವಿರೋಧಿ ಎಂದ ತಕ್ಷಣವೇ ಅವರೆಲ್ಲರು ನಕ್ಸಲೈಟ್ಸ್ ಎಂದು ಹೇಳತಕ್ಕಂಥ ವಾದವಾಗಲಿ, ಅವೆಲ್ಲವೂ ಸರಿಯಲ್ಲ. ಇದನ್ನು ಸಮಗ್ರವಾಗಿ ಸರ್ಕಾರ ಪರಿಶೀಲನೆ ಮಾಡಿ ಇದಕ್ಕೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿ ಎಂದು ಇದಕ್ಕೆ ಪರಿಹಾರವನ್ನು ಹುಡುಕಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬಹ್ಮಾವರ) : ಮಾನ್ಯ ಅಧ್ಯಕ್ಷರೆ, ಈ ಒಂದು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಮಾನ್ಯ ಅರಣ್ಯ ಸಚಿವರು ಇಲ್ಲಿ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನನ್ನ ಅಭಿಪ್ರಾಯ, ಏಕೆಂದರೆ ಈ ನಕ್ಸಲೈಟ್ ಚಟುವಟಿಕೆಗಳ ಬಗ್ಗೆ ಚರ್ಚೆಯಾಗುತ್ತಿದೆ. ಅವರದ್ದು ಇಲ್ಲಿ ಬಹಳ ಅಗತ್ಯವಿತ್ತು. ಮಾನ್ಯ ಮುಖ್ಯಮಂತ್ರಿಗಳು ಚಿಕ್ಕಮಗಳೂರು ಜಿಲ್ಲೆಗೆ ಒಂದು ಪ್ಯಾಕೇಜನ್ನು ಅನೌನ್ಸ್ ಮಾಡಿದ್ದಾರೆ. ಈ ಚಟುವಟಿಕೆಗಳು ಚಿಕ್ಕಮಗಳೂರು ಭಾಗದಲ್ಲಿ ಮಾತ್ರ ಇಲ್ಲ. ಪಶ್ಚಿಮಘಟ್ಟದಲ್ಲಿ ಇದೆ ಎಂದು ನಮ್ಮ ಮಾನ್ಯ ರೆಡ್ಡಿಯವರು ಹೇಳಿದರು. ಉಡುಪಿ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸಹ ವ್ಯಾಪಕವಾಗಿ ಹಬ್ಬುತ್ತಿದೆ. ಆ ಎಲ್ಲಾ ಘಾಟ್ ಸೆಕ್ಷನ್‌ನಲ್ಲಿ ಇದ್ದಾರೆ. ಇದರ ಸಮಸ್ಯೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಕೇವಲ ಪರಿಹಾರವನ್ನು ನಾವು ಕಂಡು ಹಿಡಿಯಲಿಕ್ಕೆ ಸಾಧ್ಯವಾಗುವುದಿಲ್ಲ. ಪರಿಹಾರ ಕಂಡು ಹಿಡಿಯಬೇಕಾದರೆ ಇದರ ಸಮಸ್ಯೆ ಏನೆಂದು ಅರ್ಥ ಮಾಡಿಕೊಳ್ಳಲಿಲ್ಲವೆಂದರೆ ಪರಿಹಾರ ಕಂಡು ಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಈ ಎನ್‌ಕ್ರೋಚ್‌ಮೆಂಟ್ ಸಮಿತಿಯ ಅಧ್ಯಕ್ಷನಾಗಿದ್ದೇನೆ. ನಮ್ಮ ಭಾಗದಲ್ಲಿ ಅರಣ್ಯವೆಂಬುದು ಸ್ವಲ್ಪ ಸೂಕ್ಷ್ಮವಾಗಿ ನೋಡುವುದಾದರೆ ಅಲ್ಲಿ ಮರಗಳೇ ಇಲ್ಲ. 10–50 ವರ್ಷಗಳಿಂದ ಆ ಭಾಗದಲ್ಲಿ ರೈತರು ಕುಳಿತು ತೋಟವನ್ನು ಮಾಡಿ, ಮನೆಯನ್ನು ಕಟ್ಟಿ, ಬಾವಿಯಲ್ಲಾ ತೋಡಿ, ಅಲ್ಲಿ ಇದೆಲ್ಲಾ ಮಾಡಿ ಅವರು ಅದನ್ನು ಅನುಭವಿಸುತ್ತಾ ಬರುವಾಗ, ಸರ್ವೋಚ್ಚ ನ್ಯಾಯಾಲಯದ ಆದೇಶ ಇದೆ ಎಂದು ಮನೆಯನ್ನು ಒಡೆಯಲಿಕ್ಕೆ ಬಂದರೆ, ಈ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೇ ಅರಣ್ಯ ಇಲಾಖೆಯವರು ಈ ರೀತಿ ಮಾಡಿದರೆ ಹೇಗೆ? ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಜಾರಿಗೆ ತರದಿದ್ದರೆ ಅರಣ್ಯ ಇಲಾಖೆಯವರ ಕೆಲಸ ಹೋಗುತ್ತದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಆ ಆದೇಶವನ್ನು ಜಾರಿಗೆ ತಂದರೆ ಅಲ್ಲಿರುವವನು ಮನೆ–ಮಠ ಕಳೆದುಕೊಳ್ಳುತ್ತಾನೆ. ಆಗ ಅವನು ಏನು ಮಾಡುತ್ತಾನೆ? ಸರ್ವೋಚ್ಚ ನ್ಯಾಯಾಲಯಕ್ಕೆ ಇದನ್ನು ತಿಳಿ ಹೇಳುವಂಥ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ? ಅಲ್ಲಿ ಅಕ್ರಮ–ಸಕ್ರಮದಲ್ಲಿ ನಾವು ಅನೇಕ ಭೂಮಿಗಳನ್ನು ಗ್ರಾಂಟ್ ಮಾಡಿದ್ದೇವೆ. ಅಲ್ಲಿ ಅದರ ಆರ್‌ಟಿಸಿ ಯಲ್ಲಿ ಏನು ಇದೆ ಎಂದರೆ ಸರ್ಕಾರಿ ಎಂದು ಇದೆ. ಸರ್ಕಾರಿ ಎಂದು ಇರುವುದು ಈಗ ಅರಣ್ಯಕ್ಕೆ ಕೊಟ್ಟಿರುವುದು ಎಂದು ಈಗ ಹೇಳುವಂಥದ್ದು ಆದರೆ ಈ ಮೊದಲೇ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಇದರ ಬಗ್ಗೆ ಗೊತ್ತಿರಲಿಲ್ಲವೆ? ಅದರ ಎಂಟ್ರಿಯನ್ನು ಚೇಂಜ್ ಮಾಡಿಸಬೇಕು, ಕಮಿಟಿಯ ಮುಂದೆ ಬರುವುದಕ್ಕೆ ಮುಂಚೆ ಇದನ್ನು ಸರಿಪಡಿಸಬೇಕು ಎಂಬುದು ಅಧಿಕಾರಿಗಳಿಗೆ ಗೊತ್ತಿರಲಿಲ್ಲವೆ? ನಾವು ಅದನ್ನು ಸರ್ಕಾರಿ ಭೂಮಿ ಎಂದು ಸಮಿತಿಯವರಿಗೆ ಆದೇಶಿಸಿದ್ದೇವೆ. ಇದಕ್ಕೇನು ಕಾರಣ ಎಂದರೆ, ನಾವು ಅದನ್ನೆಲ್ಲಾ ನೋಡಿ, ಇವರು ಇಲ್ಲಿಯೇ ಕುಳಿತು ಅಭಿವೃದ್ಧಿ

ಮಾಡಿದ್ದಾರೆ, ಇದನ್ನೆಲ್ಲಾ ನೋಡಿಯೇ ನಾವು ಮಾಡಿರುವುದು. ಹೀಗಿರುವಾಗ ಅದನ್ನು ಒಡೆಯಲಿಕ್ಕೆ ಬಂದರೆ, ನಾವು ಬಿಡುವುದಿಲ್ಲ. ನಕ್ಸಲೈಟ್ ಅವರು ಬೇರೆ ಅವರ ಚಟುವಟಿಕೆ ಬೇರೆ. ನಾವು ಅಲ್ಲಿ ಜನಪ್ರತಿನಿಧಿಗಳಾಗಿ ನಾವೇ ಅವರಿಗೆ ಆ ಮನೆಗಳನ್ನು ಒಡೆಯಲಿಕ್ಕೆ ಬಿಡಲಿಲ್ಲ ಅವರನ್ನು ಒಕ್ಕಲೆಬ್ಬಿಸಲಿಕ್ಕೂ ಬಿಡಲಿಲ್ಲ. ಇದು ನಾವು ತೆಗೆದುಕೊಂಡ ನಿಲುವು. ಅದಕ್ಕೆ ಉಡುಪಿಯಲ್ಲಿ ಈ ಚಟುವಟಿಕೆಗಳ ಬಗ್ಗೆ ಚರ್ಚೆ ಮಾಡಲು ಒಂದು ಸಭೆಯಲ್ಲಿ ನನ್ನನ್ನು ಕರೆದಿದ್ದರು, ನಾನು ಹೋಗಿ ಒಂದು ಮಾತು ಹೇಳಿದೆ. ನಮ್ಮದು ಚಿಂತನೆ ಒಂದೇ ನಮ್ಮ ದಾರಿ ಬೇರೆ ಬೇರೆ, ನಿಮ್ಮದು ಬುಲೆಟ್ ನಮ್ಮದು ಬ್ಯಾಲೆಟ್ ಎಂದು ಹೇಳಿದೆ. ಅರಣ್ಯದಲ್ಲಿ ಅವಿತುಕೊಂಡು, ಶಸ್ತ್ರಾಸ್ತ್ರವನ್ನು ಹಿಡಿದುಕೊಂಡು ಹೋರಾಟ ಮಾಡುವುದನ್ನು ನಾನು ಒಪ್ಪುವುದಿಲ್ಲ ಹಾಗೂ ಇದಕ್ಕೆ ಬೆಂಬಲಿಸುವುದಿಲ್ಲ. ಅವರೂ ಸಹ ಮುಖ್ಯವಾಹಿನಿಗೆ ಬಂದು ಜನರ ಮಧ್ಯದಲ್ಲಿ ಹೋರಾಟ ಮಾಡಬೇಕು ಎನ್ನುವಂಥವನು ನಾನು. ಏಕೆಂದರೆ, ಒಂದು ಕಡೆ ಶಸ್ತ್ರವನ್ನು ಹಿಡಿದುಕೊಂಡು ಹೋರಾಟ ಮಾಡಿದರೆ ಪರಿಹಾರ ಸಿಗುತ್ತದೆ ಎನ್ನುವುದರಲ್ಲಿ ನನಗೆ ನಂಬಿಕೆಯಿಲ್ಲ. ಇದರಲ್ಲಿ ಕೂಡ ನಂಬಿಕೆಯಿಲ್ಲ ಎನ್ನುವ ಪರಿಸ್ಥಿತಿಯಲ್ಲಿ ಅವರು ಬಂದಿದ್ದಾರೆ. ಎಲ್ಲೋ ಒಂದು ಕಡೆ ಎರಡು ಕಡೆಯವರು ಕುಳಿತು ಚರ್ಚೆ ಮಾಡಿದಾಗ, ಪರಿಹಾರವನ್ನು ಕಂಡು ಹಿಡಿಯಲಿಕ್ಕೆ ಸಾಧ್ಯವಾಗಬಹುದು ಎನ್ನುವ ಭಾವನೆ ನನ್ನದು. ಅದಕ್ಕೋಸ್ಕರ ಸರ್ಕಾರದವರು ಎರಡು ಕಡೆಯವರನ್ನು ಕರೆದು ಒಂದು ಕಡೆ ಕುಳಿತು ಚರ್ಚೆಯನ್ನು ಮಾಡಬೇಕು ಮತ್ತು ಒಕ್ಕಲೆಬ್ಬಿಸುವ ಕೆಲಸವನ್ನು ಅದು ಚಿಕ್ಕಮಗಳೂರು ಜಿಲ್ಲೆಯಾಗಲೀ ದಕ್ಷಿಣ ಕನ್ನಡ ಜಿಲ್ಲೆಯಾಗಲೀ ಉಡುಪಿ ಜಿಲ್ಲೆಯಾಗಲೀ ಅಥವಾ ಅದು ಯಾವುದೇ ಭಾಗದಲ್ಲಾಗಲೀ ಒಕ್ಕಲೆಬ್ಬಿಸುವ ಕಾರ್ಯವನ್ನು ನಿಲ್ಲಿಸುವಂಥ ತೀರ್ಮಾನವನ್ನು ತಕ್ಷಣ ಸರ್ಕಾರದವರು ತೆಗೆದುಕೊಳ್ಳಬೇಕು. ಮಾನ್ಯ ಪ್ರಕಾಶ್‌ರವರು ಕಂದಾಯ ಸಚಿವರು, ಪ್ರತಿಯೊಂದು ದಾಖಲೆಗಳನ್ನು ತರಿಸಿ–ನೋಡಿ ಸಚಿವರೇ ಅದರಲ್ಲಿ ಸರ್ಕಾರಿ ಎಂದು ಇದೆ, ಎಲ್ಲಿಯೂ ಅರಣ್ಯ ಎಂದು ಇಲ್ಲ. ಹಾಗಾದರೆ ಇವರು ಒಕ್ಕಲೆಬ್ಬಿಸಲಿಕ್ಕೆ ಏನು ಕಾರಣ ಇದೆ? ಅರಣ್ಯ ಎಂದು ಬದಲಾವಣೆಯಾದ ಮೇಲೆ ಅವರಿಗೆ ಅಧಿಕಾರ ಬರುತ್ತದೆ. ಅರಣ್ಯ ಎಂದು ಬದಲಾವಣೆಯಾಗುವವರೆವಿಗೂ ಅವರಿಗೆ ಅಧಿಕಾರ ಬರುವುದಿಲ್ಲ ಎನ್ನುವ ಅಭಿಪ್ರಾಯವನ್ನು ನಾನು ತಮಗೆ ತಿಳಿಸಲಿಕ್ಕೆ ಬಯಸುತ್ತೇನೆ. ದಯವಿಟ್ಟು ತಾವು ಕಂದಾಯ ಇಲಾಖೆಯವರಿಗೂ ಇದನ್ನು ತಿಳಿಸಬೇಕು, ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಜಿಲ್ಲಾಧಿಕಾರಿಗಳು, ಜಿಲ್ಲೆಯ ಅರಣ್ಯಾಧಿಕಾರಿಗಳು, ಇಬ್ಬರು ಕುಳಿತು ಒಂದು ಮೀಟಿಂಗ್‌ನ್ನು ಮಾಡಿ ಒಂದು ವೇಳೆ ಅವರು ಈಗಾಗಲೇ ಅಲ್ಲಿ ಅಭಿವೃದ್ಧಿಯನ್ನು ಮಾಡಿದ್ದರೆ ಅದಕ್ಕೆ ಪರ್ಯಾಯವಾದ ಜಾಗವನ್ನು ಅರಣ್ಯ ಇಲಾಖೆಗೆ ಅಭಿವೃದ್ಧಿ ಮಾಡಲಿಕ್ಕೆ ಕೊಡಿ. ಇವರನ್ನು ಒಕ್ಕಲೆಬ್ಬಿಸಲಿಕ್ಕೆ ಹೋಗಬೇಡಿ. ಇದು ಮುಂದಿನ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಸಮಸ್ಯೆ ಬಹಳ ಉಲ್ಬಣಗೊಂಡಿದ್ದು, ತತ್ಥಲ ಅರಣ್ಯ ಪ್ರದೇಶದಲ್ಲಿ ಒಕ್ಕಲೆಬ್ಬಿಸಿರುವುದು ಇದು ಸುಪ್ರೀಂಕೋರ್ಟಿನ ಆದೇಶದ ಮೇಲೆ ಆಗಿರುವಂಥದ್ದು. ಮಾನ್ಯ ಚಿಕ್ಕಮಗಳೂರು ಶಾಸಕರಾದ ಮಾನ್ಯ ರವಿಯವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ ಒಂದು ವಾರದೊಳಗೆ ನಾವು ಒಂದು ಸಭೆಯನ್ನು ಮಾಡಿದ್ದೇವೆ. ಇದಾದನಂತರ ಸುಮಾರು 3-/4 ಸಭೆಗಳನ್ನು, ಜಿಲ್ಲಾಧಿಕಾರಿಗಳು,

ಅರಣ್ಯಾಧಿಕಾರಿಗಳು, ಮತ್ತು ಸಂಬಂಧಿಸಿದಂಥ ಎಲ್ಲರನ್ನು ಕರೆಸಿ, ಇದರ ಬಗ್ಗೆ ಚರ್ಚಿಸಿ, 1978ರ ಆಚೆ ಯಾರ್ಯಾರು ಸಾಗುವಳಿ ಚೀಟಿಯನ್ನು ಪಡೆದುಕೊಂಡಿರುತ್ತಾರೆ ಸಾಗುವಳಿ ಚೀಟಿ ಪಡೆದುಕೊಳ್ಳದೇ ಇದ್ದಾಗಲೂ ಕೂಡ ಅವರು ಫೆನಾಲ್ಟಿ ಮೊದಲಾಗಿ ಕಟ್ಟಿದಂಥ ನಿರಂತರವಾಗಿ ಆ ಭೂಮಿಯಲ್ಲಿ ಸ್ವಾಧೀನದಲ್ಲಿದ್ದಾರೆ, ಸಾಗುವಳಿಯಲ್ಲಿದ್ದಾರೆ ಎನ್ನುವಂಥ ವಿವರಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಿ, ಅಲ್ಲಿರುವಂಥ ಕಂದಾಯ ಗ್ರಾಮಗಳು ಏನಾದರೂ ಇದ್ದರೆ ಅವುಗಳನ್ನು ಕೂಡ ಗುರ್ತಿಸಬೇಕು, ಅವುಗಳನ್ನು ಯಾವ ಕಾರಣಕ್ಕೂ ಕೂಡ ಒಕ್ಕಲೆಬ್ಬಿಸಬಾರದು ಎನ್ನತಕ್ಕಂಥ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಬಹಳ ಸಲ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಆದರೆ, 1980ರ ನಂತರದಲ್ಲಿ ಮಾಡತಕ್ಕಂಥದ್ದಲ್ಲ ಎಂದು ಸುಪ್ರೀಂಕೋರ್ಟಿನ ಕಾನೂನಿನ ವ್ಯಾಪ್ತಿಯಲ್ಲಿ ಅದನ್ನು ಹೇಳುತ್ತಿದ್ದಾರೆ. ಆದರೆ ನಾವು ಅದನ್ನು ಕಟ್–ಆಫ್–ಡೇಟ್ 1978 ಎಂದು ಇಟ್ಟುಕೊಂಡಿದ್ದೇವೆ. ಈಗ ಜಂಟಿ ಸರ್ವೆ ಆಗುತ್ತಾ ಇದೆ, ಆ ಸಭೆಗೆ ಅರಣ್ಯ ಸಚಿವರೂ ಕೂಡ ಬಂದಿದ್ದರು, ಎಲ್ಲಾ ಶಾಸಕರು ಕೂಡ ಆ ಸಭೆಗೆ ಬಂದಿದ್ದರು. ಜಂಟಿ ಸರ್ವೆಯಲ್ಲಿ ಸರ್ವೆ ಆಫ್ ಇಂಡಿಯಾದವರಿಗೆ ನಾವೇ ದುಡ್ಡು ಕಟ್ಟಿದ್ದೇವೆ. ಆಗ ನಾವು ಅವರಿಗೆ ಹೇಳಿದೆವು, ಈ ಜಂಟಿ ಸರ್ವೆ ಮಾಡುವಂಥ ಸಂದರ್ಭದಲ್ಲಿ, ಮೊದಲು ಸರ್ಕಾರ 1908ರಲ್ಲಿ ಆಗಲಿ 2003 ರಲ್ಲಾಗಲಿ ಅದಕ್ಕಿಂತ ಪೂರ್ವದಲ್ಲಿ ಆಗಲಿ ಭೂಮಿಯನ್ನು ಅರಣ್ಯಕ್ಕೆ ವಹಿಸಿಕೊಟ್ಟಿದ್ದಾರೆ. ಅದಾದ ನಂತರ ಅರಣ್ಯ ಇಲಾಖೆಯವರು ಪುನಃ ಕಂದಾಯ ಇಲಾಖೆಗೆ ಸ್ವಲ್ಪ ಭೂಮಿಯನ್ನು ಮತ್ತೆ ಮರಳಿಸಿದ್ದಾರೆ. ಈ ಎಲ್ಲಾ ಗೊಂದಲಗಳಲ್ಲಿ ಪೋಡಿಗಳಾಗಿವೆ, ಅವರ ಗಡಿಗಳನ್ನು ಗುರುತು ಮಾಡಿಲ್ಲ, ಈ ಒಂದು ಕಾರಣದಿಂದಲೂ ತೊಂದರೆಯಾಗಿದೆ. ಇದನ್ನು ಈಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾಡುತ್ತಿದ್ದೇವೆ. ಇದನ್ನು ಕೊಡಗು, ಪಶ್ಚಿಮಘಟ್ಟದ ಎಲ್ಲಾ ಪ್ರದೇಶಗಳಿಗೂ ಮಾಡಿ, ಅದಕ್ಕೆ ಒಂದು ಸೂಕ್ತವಾದಂಥ ನಿರ್ಧಾರವನ್ನು ಹಿಂದಿನ ಸರ್ಕಾರವೂ ತೆಗೆದುಕೊಂಡಿದೆ, ನಾವು ಕೂಡ ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸುವಂಥ ಕೆಲಸವನ್ನು ಮಾಡಲಾರದಂತೆ ಕಾನೂನಿನ ಚೌಕಟ್ಟಿನಲ್ಲಿ ಅದನ್ನು ವಿವರಿಸುತ್ತೇವೆ. ಒಂದು ತೊಂದರೆ ಏನಾಗಿತ್ತು ಎಂದರೆ, ಒಬ್ಬ ಜಿಲ್ಲಾಧಿಕಾರಿ, ಅದು ಯಾವ್ಯಾವ ಕಾರಣವೋ ಗೊತ್ತಿಲ್ಲ, ವರ್ಗಾವಣೆಯಾಗುವ ಸಮಯದಲ್ಲಿ ಇಷ್ಟು ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ನಾನು ವಹಿಸಿ ಕೊಟ್ಟಿದ್ದೇನೆ, ಅದರ ಸರ್ವೆ ಮಾಡಿದ ನಂತರ ಇದರ ನಿರ್ಧಾರ ತೆಗೆದುಕೊಳ್ಳುವುದು. ಸರ್ವೆ ಮಾಡಿದ ನಂತರ ಎನ್ನುವುದಾದರೆ, ಇಷ್ಟು ಎಕರೆ ಭೂಮಿ ಎಂದು ನಿಗದಿಪಡಿಸುವ ಅವಶ್ಯಕತೆ ಆತನಿಗೆ ಇರಲಿಲ್ಲ, ಅದು ಆಗಿರತಕ್ಕಂಥ ಕಾರಣವೇ ಇವೆಲ್ಲಾ ಗೊಂದಲಕ್ಕೆ ಕಾರಣವಾಗಿದೆ. ಇದು ಒಂದೇ ಕಾರಣ ಎಂದಲ್ಲ, ಇಂಥ ಅನೇಕ ಕಾರಣಗಳು ಗೊಂದಲವನ್ನು ಸೃಷ್ಟಿ ಮಾಡಿವೆ. ಅದನ್ನು ಪರಿಹಾರ ಮಾಡುವುದರಲ್ಲಿ ಸರ್ಕಾರ ಬಹಳ ಭದ್ರವಾಗಿದೆ ಮತ್ತು ಬದ್ಧವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಮಾತನಾಡುವಂಥ ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆ ಅಥವಾ ಬೇರೆ ಯಾವುದೇ ಒಂದು ಜಿಲ್ಲೆ ಎಂದು ಹೇಳದೇ, 1980ರವರೆಗೆ ಈ ರೀತಿ ಅನ್ ಅಥಾರೈಸ್ಡ್ ಕಲ್ಟಿವೇಷನ್ ಏನು ಮಾಡುತ್ತಿದ್ದಾರೆ, ಕೆಲವು ಜಮೀನು ಕಳೆದುಕೊಂಡವರಿಗೆ ಬೇರೆ ಕಡೆ ಜಮೀನು ಕೊಡುವಂಥ ಪ್ರಯತ್ನ ಮಾಡಿದ್ದೇವೆ, ನೀರಾವರಿ ಯೋಜನೆಗಳಿಗೆ ಅವರು ಜಮೀನು ಬಿಟ್ಟಿದ್ದಾರೆ, ಪ್ರಾಜೆಕ್ಟ್‌ನಲ್ಲಿ ಬಂದಿದೆ, ಆ ರೀತಿ

ಶಿವಮೊಗ್ಗ ಜಿಲ್ಲೆಯೂ ಇದೆ ಹಾಗೂ ಬೇರೆ ಬೇರೆ ಜಿಲ್ಲೆಗಳು ಇವೆ. ಆದುದರಿಂದ ಈ ಒಂದು ಅನುಕೂಲ ಮಾಡಿಕೊಡಬೇಕು ಎನ್ನುವ ನಿರ್ಧಾರವನ್ನು ಅದು ಉತ್ತರ ಕನ್ನಡ ಜಿಲ್ಲೆ ಇರಲಿ, ಶಿವಮೊಗ್ಗ ಜಿಲ್ಲೆ ಇರಲಿ, ಯಾರು ಈ ರೀತಿ ತಮ್ಮ ಸರ್ವಸ್ವವನ್ನು ಕಳೆದುಕೊಂಡು ಎರಡು ಹೊತ್ತಿನ ಗಂಜಿಗೆ ಏನು ಮೊದಲಿನಿಂದ ಜಮೀನು ಮಾಡಿಕೊಂಡಿದ್ದಾರೆ ಅವರಿಗೆ ಅನುಕೂಲ ಮಾಡಿಕೊಡುವಂಥದ್ದು ಆಗಬೇಕು. ರೆವಿನ್ಯೂ ಸಚಿವರು ಆಗಿರುವ ತಮಗೆ ತಮ್ಮ ಅನುಭವದಲ್ಲಿ ಇದೆಲ್ಲಾ ಗೊತ್ತಿದೆ. ಸಿ ಅಂಡ್ ಡಿ ಲ್ಯಾಂಡ್ ಸಂದರ್ಭದಲ್ಲಿ ಈ ಚರ್ಚೆ ವ್ಯಾಪಕವಾಗಿ ದಿವಸಗಟ್ಟಲೆ ಆಯಿತು. ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಲಕ್ಷಾಂತರ ಎಕರೆ ಜಮೀನನ್ನು ನಾವು ಅರಣ್ಯ ಇಲಾಖೆಗೆ ಕೊಟ್ಟಿದ್ದೇವೆ. ಆದರೆ ಅಧಿಕಾರಿಗಳ ಒಂದು ತಪ್ಪಿನಿಂದ ಸುಪ್ರೀಂಕೋರ್ಟು ನಮಗೆ ಬರೆ ಎಳೆಯುವಂಥಾಯಿತು. ಈ ಒಂದು ಅನುಕೂಲತೆಗಳನ್ನು ಅದು ಶಿವಮೊಗ್ಗ ಇರಲಿ ಅಥವಾ ಉತ್ತರ ಕನ್ನಡ ಜಿಲ್ಲೆ ಇರಲಿ ಎಲ್ಲಾ ಜಿಲ್ಲೆಗಳಿಗೂ ಇದು ಅನ್ವಯವಾಗಬೇಕು, ಆ ಬಗ್ಗೆ ತಾವು ಒಂದು ಮಾತು ಹೇಳದೇ ಇದ್ದರೆ ನಾಳೆ ಅದು ಪತ್ರಿಕೆಗಳಲ್ಲಿ ಬಂದಾಗ ವ್ಯತ್ಯಾಸವಾಗಬಾರದು ಎನ್ನುವ ದೃಷ್ಟಿಯಿಂದ ನಾನು ಈ ಮಾತು ಹೇಳಬೇಕಾಯಿತು.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಮಾಡಿದಂಥ ಹೋರಾಟ, ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡಿರುವಂಥದ್ದು, ಮಾನ್ಯ ಚಂದ್ರೇಗೌಡರವರು ಮಾತನಾಡಿರುವಂಥದ್ದು, ಹಿಂದಿನ ಸರ್ಕಾರದಲ್ಲಿ ಮಾತನಾಡಿರುವಂಥದ್ದು ಎಲ್ಲಾ ಗಮನದಲ್ಲಿದೆ, ತಾವು ಹೇಳಿದಂತೆ, ಚಿಕ್ಕಮಗಳೂರು ಒಂದು ಉದಾಹರಣೆಯಾಗಿ ಕೊಟ್ಟೇ ವಿನಹ ಈ ರೀತಿ ಆಗಿರತಕ್ಕಂಥ ಎಲ್ಲಾ ಪ್ರದೇಶಗಳಲ್ಲಿ ನಾವು ಮಾಡಬೇಕಾಗುತ್ತದೆ, ಈ ಅಧಿವೇಶನ ಮುಗಿದ ತಕ್ಷಣವೇ ಪ್ರತಿ ಜಿಲ್ಲೆಗೂ ಹೋಗಿ ತಮ್ಮೆಲ್ಲರನ್ನು ಕರೆಸಿ ಇದರ ಬಗ್ಗೆ ಚರ್ಚೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ತಾವು ಈಗ ಒಂದು ಸಮಿತಿಯನ್ನು ಮಾಡುವುದಕ್ಕೆ ಹೊರಟಿದ್ದೀರಿ, ಅದು ಯಾವುದು ಎಂದರೆ . .

ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಅಧ್ಯಕ್ಷರೆ, ಈ ನಕ್ಸಲೈಟ್ ವಿಚಾರವಾಗಿ ಹೇಳುವುದಾದರೆ, ಇದು ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಭಾಗದಲ್ಲಿ ಹಬ್ಬುತ್ತಿದೆ. ಈ ನಕ್ಸಲೈಟ್ಸ್‌ರವರು ಯಾರ್‍ಯಾರು ಅಲ್ಲಿರುವ ಮನೆಗಳಿಗೆ ಬಂದು ಊಟ ಮಾಡಿದ್ದಾರೆ ಅವರ ಭಾವನೆಯನ್ನು ಜಿಲ್ಲಾಧಿಕಾರಿಯ ಎದುರಿನಲ್ಲಿ ಅವರು ವ್ಯಕ್ತಪಡಿಸಿದ್ದಾರೆ. ಒಂದು ಮಾತು ಏನೆಂದರೆ, ಅವರು ಕೇಳುವುದು ಏನೆಂದರೆ, ಅವರ ಒತ್ತುವರಿ ಜಮೀನನ್ನು ಖಾಲಿ ಮಾಡಿಸದೆ ಹಾಗೆ ನಾವು ಅವರಿಗೆ ರಕ್ಷಣೆ ಕೊಡುತ್ತೇವೆ ಎನ್ನುವ ಆಸೆ ತೋರಿಸಿದ್ದಾರೆ, ಎರಡನೆಯದಾಗಿ ಕಾಡು ಉತ್ಪತ್ತಿ ಏನು ಇದೆ ಅದನ್ನು ನೀವೇ ತೆಗೆಯಬೇಕು ಎನ್ನುವ ಪ್ರಚೋದನೆ ಕೊಡತಕ್ಕಂತಹ ರೀತಿಯಲ್ಲಿ ರಕ್ಷಣೆ ಕೊಡುವ ಕೆಲಸ ಅವರು ಮಾಡಿದ್ದಾರೆ. ನಾವು ಕೇಳಿದಾಗ ನೇರವಾಗಿ ಅವರೊಟ್ಟಿಗೆ ಶಾಮೀಲಾಗಿರುವ ಜನ ಏನು ಹೇಳುತ್ತಾರೆಂದರೆ, ನಿಮ್ಮಿಂದ ಆಗದಿರುವ ಕೆಲಸವನ್ನು ನಕ್ಸಲೈಟ್ಸ್ ಬಂದ ಮೇಲೆ ನಮಗೆ ರಕ್ಷಣೆ ಸಿಗುತ್ತದೆ, ಕಾಡು ಉತ್ಪತ್ತಿ ತೆಗೆಯುವುದಕ್ಕೆ ನಮಗೆ ಅವಕಾಶವಾಗಿದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದರು. ಅವರಿಗೆ ಏನಾಗಿದೆ, ಅವರ ಮೂಲಭೂತ ಸೌಕರ್ಯ ಏನು ಅರಣ್ಯ ಒತ್ತುವರಿ ಜಾಗದಲ್ಲಿ ಕುಳಿತುಕೊಂಡಿರುವುದರಿಂದ ಅವರಿಗೆ ವಿದ್ಯುದ್ದೀಕರಣ ಮಾಡಲಿಕ್ಕೆ ಆಗಲಿಲ್ಲ, ಅವರಿಗೂ ಇನ್ನೂ ಕರೆಂಟ್ ಸಿಗಲಿಲ್ಲ. ಮತ್ತೆ ಅವರಿಗೆ ಇನ್ನುವರೆಗೂ ರೇಷನ್ ಕಾರ್ಡ್ ಸಿಕ್ಕಿಲ್ಲ. ಇವತ್ತಿನವರೆಗೂ ಅವರಿಗೆ ಯಾವುದೇ ನ್ಯಾಯವನ್ನು ಒದಗಿಸಿಕೊಡುವುದಕ್ಕೆ ಆಗಿಲ್ಲ.

ಸುಪ್ರೀಂಕೋರ್ಟ್‌ನ ತೀರ್ಮಾನದ ಪ್ರಕಾರ ಅಕ್ರಮ ಸಕ್ರಮದ ಅಡಿಯಲ್ಲಿ ಇದನ್ನು ಸಕ್ರಮೀಕರಣ ಮಾಡುವುದಕ್ಕೆ ಆಗುವುದಿಲ್ಲವೆಂದು ಒಂದು ಕಡೆ ಅವರು ಹೇಳುತ್ತಾರೆ. ಇವತ್ತಿನ ದಿವಸ ಮಲೆನಾಡು, ಪಶ್ಚಿಮಘಟ್ಟ ಪ್ರದೇಶಗಳಲ್ಲಿರುವ ಎಷ್ಟೋ ಹಳ್ಳಿಗಳಿಗೆ ಇದುವರೆಗೆ ವಿದ್ಯುತ್ ಕನೆಕ್ಷನ್ ಮತ್ತು ದೂರವಾಣಿ ಕನೆಕ್ಷನ್ ಕೊಡುವುದಕ್ಕೆ ಆಗಿಲ್ಲ. ಈ ರೀತಿಯಾದ ಒಂದು ಪ್ರಚೋದನಕಾರಿ ವಿಚಾರಗಳನ್ನು ಹೇಳಿ ಪ್ರತಿ ರಾತ್ರಿ ಅಲ್ಲಿರುವ ಮನೆಗಳಲ್ಲಿ ಅಡುಗೆ ಮಾಡಿ ಊಟ ಮಾಡಿಕೊಂಡು ಹೋಗತಕ್ಕಂಥ ವ್ಯವಸ್ಥೆ ಆ ಪ್ರದೇಶದಲ್ಲಿ ಆಗುತ್ತಿದೆ. ಇಂಥ ಒಂದು ವ್ಯವಸ್ಥೆ ಅಲ್ಲಿ ಆಗುತ್ತಿರುವ ಸಂದರ್ಭದಲ್ಲಿ ಅಲ್ಲಿನ ಜಿಲ್ಲಾಧಿಕಾರಿಗಳು ನೇರವಾಗಿ ಆ ಪ್ರದೇಶದಲ್ಲಿರುವ ಜನರ ಪುನಃಪರಿವರ್ತನೆ ಮಾಡುವುದಕ್ಕೆ ಕಾನೂನಿನ ಅಡಿಯಲ್ಲಿ ಏನು ಪ್ರಯತ್ನ ಮಾಡುವುದಕ್ಕೆ ಆಗುತ್ತದೆ ಎಂಬುದರ ಬಗ್ಗೆ ಜನರ ಜೊತೆಯಲ್ಲಿ ನೇರವಾಗಿ ಚರ್ಚೆ ಮಾಡಿದಾಗ ಬಹುಶಃ ನಮ್ಮ ಮೇಲೆ ಮತ್ತು ಸರ್ಕಾರದ ಮೇಲೆ ಜನರಲ್ಲಿ ನಂಬಿಕೆ ಬರತಕ್ಕಂಥ ಕೆಲಸ ಇವತ್ತಿನ ದಿವಸ ನಾವು ಮಾಡದಿದ್ದರೆ ಅಲ್ಲಿನ ಜನರು ನೇರವಾಗಿ ನಕ್ಸಲೈಟ್‌ರವರ ಜೊತೆ ಕೈ ಜೋಡಿಸತಕ್ಕಂಥ ವ್ಯವಸ್ಥೆ ಅಲ್ಲಿದೆ. ನನ್ನ ತಾಲ್ಲೂಕಿನಲ್ಲಿ ನಾನು ಈಗಾಗಲೇ ಮೂರು ಬಾರಿ ಅಲ್ಲಿನ ಜನರ ಹತ್ತಿರ ನೇರವಾಗಿ ಸಭೆ ನಡೆಸಿದ್ದೇನೆ. ಈ ಒಂದು ವ್ಯವಸ್ಥೆ ಸರಿಯಾಗಬೇಕಾದರೆ ಸರ್ಕಾರ ಅಲ್ಲಿ ಹೆಚ್ಚು ಸ್ಪಂದಿಸಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಇವತ್ತಿನ ದಿವಸ ನಕ್ಸಲೈಟ್‌ಗಳು ಅಲ್ಲಿಗೆ ಬಂದು ಇನ್ನೊಂದು ಆಶ್ವಾಸನೆ ಕೊಡುತ್ತಿದ್ದಾರೆ ಇದರ ಬಗ್ಗೆ ನಾವು ಮುಂಚಿತವಾಗಿ ಸ್ಪಂದಿಸದಿದ್ದರೆ ಅಲ್ಲಿರತಕ್ಕಂಥ ಜನರು ಮತ್ತು ಅದರಲ್ಲಿಯೂ ಕೂಡ ಯುವಕರು ಅವರ ಜೊತೆ ಕೈ ಜೋಡಿಸುವಂಥ ಒಂದು ವ್ಯವಸ್ಥೆ ಅಲ್ಲಿಯಾಗುತ್ತಿದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರದ ನಿಲುವೇನು ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, 1978ರ ಪೂರ್ವದ ಬಗ್ಗೆ ಮಾನ್ಯ ಎಂ.ಪಿ.ಪ್ರಕಾಶ್‌ರವರು ಇಲ್ಲಿ ಹೇಳಿದರು. ಲ್ಯಾಂಡ್ ರೀಫಾರ್ಮ್ ಆಕ್ಟ್ ಜಾರಿಗೆ ಬಂದು ಮೇಲೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಅನೇಕ ಜನರನ್ನು ಎಲ್ಲಿ ಒಕ್ಕಲೆಬ್ಬಿಸಿದ್ದರೋ ಅವರೇ ಅಲ್ಲಿ ಅಂದರೆ ಅದೇ ಸ್ಥಳದಲ್ಲಿ ಕುಳಿತುಕೊಂಡಿರತಕ್ಕಂಥವರಾಗಿದ್ದಾರೆ. ಇವರೆಲ್ಲರೂ 1978ರ ಪೂರ್ವದಲ್ಲಿಯೇ ಅಲ್ಲಿ ಕುಳಿತುಕೊಂಡಿದ್ದಾರೆ. ಆದರೆ, ಇದರ ಬಗ್ಗೆ ಹೆಚ್ಚಿನವರಿಗೆ ಗೊತ್ತಿಲ್ಲ. ಮತ್ತೆ ಇದರ ಬಗ್ಗೆ ದಾಖಲೆಗಳನ್ನು ಮಾಡಿಕೊಳ್ಳಬೇಕೆಂಬುದೂ ಕೂಡ ಗೊತ್ತಿಲ್ಲ. ಇದಕ್ಕೊಂದು ಸಮಿತಿ ಮಾಡಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ನಾನು ಹೇಳುವುದೇನೆಂದರೆ, ಅವರು ಅಲ್ಲಿ ಎಷ್ಟು ವರ್ಷಗಳಿಂದ ಮನೆ ಕಟ್ಟಿಕೊಂಡು ಇದ್ದಾರೆಂಬುದು ನಿಮಗೆ ಗೊತ್ತಾಗುತ್ತದೆ. ಹಾಗೆಯೇ ಅಲ್ಲಿರುವ ಮರ ಎಷ್ಟು ದೊಡ್ಡದಾಗಿ ಬೆಳೆದಿದೆ ಎಂಬುದು ಮತ್ತು ಅದರ ವಯಸ್ಸು ಎಷ್ಟೆಂಬುದು ತೋಟಗಾರಿಕೆ ಅಥವಾ ಕೃಷಿ ಇಲಾಖೆಯವರಿಗೆ ಗೊತ್ತಾಗುತ್ತದೆ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂಥ ದಾಖಲೆಗಳನ್ನು ಇವರಿಗೆ ಕೊಡಿ ಎಂದು ಹೇಳಿದ್ದೇವೆ. ಈ ದಾಖಲೆಗಳನ್ನು ಬೇರೆಯವರಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಎಷ್ಟು ವರ್ಷಗಳಿಂದ ಅಲ್ಲಿದ್ದಾರೆ ಎಂಬುದನ್ನು ದಾಖಲೆ ನೋಡಿದರೆ ಗೊತ್ತಾಗುತ್ತದೆ. ಇವತ್ತಿನ ದಿವಸ ಪರಿಹಾರ ಕೊಡುವುದಕ್ಕೆ ಇಲಾಖೆಯವರು ಯಾವ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತಾರೆಯೋ ಅದೇ ರೀತಿಯಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಅವರಿಗೆ ಪ್ರತ್ಯೇಕವಾಗಿ ಇದರ ಬಗ್ಗೆ ಮಾಹಿತಿ ಕೊಡಬೇಕಾಗುತ್ತದೆ. ನಾನೂ ಕೂಡ ಆ ಸಮಿತಿಯಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಇವತ್ತಿನ ದಿವಸ ಎನ್‌ಕೌಂಟರ್ ಮತ್ತು ಫೇರ್

ಎನ್‌ಕೌಂಟರ್ ಬಗ್ಗೆ ಒಂದು ನಿರ್ಣಾಯಕವಾದ ತೀರ್ಮಾನಕ್ಕೆ ಬರಬೇಕಾಗುತ್ತದೆ. ಒಂದು ವೇಳೆ ಫೇರ್ ಎನ್‌ಕೌಂಟರ್ ಆಗಿದ್ದರೆ, ಇದು ಏಕೆ ಆಯಿತು ಮತ್ತು ಹೇಗಾಯಿತು ಎಂಬುದರ ಬಗ್ಗೆ ಗೊತ್ತಾಗಬೇಕಾಗುತ್ತದೆ. ವೀರಪ್ಪನ್‌ನನ್ನು ಹಿಡಿದುಕೊಂಡು ಬರಬೇಕಾಗಿತ್ತೆಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು. ಆದರೆ, ಇದನ್ನು ನಾನು ಒಪ್ಪುವುದಿಲ್ಲ. ಹಿಡಿದುಕೊಂಡು ಬರಬೇಕೆಂದು ಹೇಳುವವರೇ ಅಲ್ಲಿಗೆ ಹೋಗಬೇಕಾಗಿತ್ತು. ಒಂದು ವೇಳೆ ಆತನನ್ನು ಹಿಡಿದುಕೊಂಡು ಬಂದಿದ್ದರೆ ಆತನ ಕಡೆಯವರು ಮತ್ತೆ ನಾಲ್ಕು ಜನರನ್ನು ಕಿಡ್ನಾಪ್ ಮಾಡಿಕೊಂಡು ಹೋಗಿ ಈತನನ್ನು ಬಿಡಿ ಎನ್ನತಕ್ಕಂಥ ಕೆಲಸ ಆಗುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ...

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವು ಹೇಳಿದ್ದೀರೆಂದು ನಾನು ಹೇಳಲಿಲ್ಲ. ನೀವು ಗ್ರಾನೈಟ್ ಬಗ್ಗೆ ಹೇಳಿರತಕ್ಕಂಥದ್ದು ನನಗೆ ಗೊತ್ತಿದೆ. ನೀವು ಹೇಳಿರತಕ್ಕಂಥದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅದರ ಬಗ್ಗೆ ನಾನು ಎಕ್ಸ್‌ಪ್ಲೈನ್ ಮಾಡುತ್ತೇನೆ. ವೀರಪ್ಪನ್ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಚರ್ಚೆ ಪ್ರಾರಂಭ ಮಾಡಿದರು ಎಂದು ಹೇಳುತ್ತಾ ನನ್ನ ಮಾತನ್ನು ಮುಂದುವರಿಸುತ್ತಿದ್ದೆ. ಆದ್ದರಿಂದ, ನಿಮ್ಮ ಬಗ್ಗೆ ನಾನು ಹೇಳಲಿಲ್ಲ. ಅವನನ್ನು ಹಿಡಿದುಕೊಂಡು ಬನ್ನಿ ಎಂದು ಅನೇಕ ಮಂದಿ ಹೇಳಿದ್ದಾರೆ. ಆದ್ದರಿಂದ ಈ ರೀತಿ ಹೇಳಿದರು ಆತನನ್ನು ಹಿಡಿದುಕೊಂಡು ಬರುವುದಕ್ಕೆ ಹೋಗಬೇಕಾಗಿತ್ತು. ಮನೆಯಲ್ಲಿ ಕುಳಿತುಕೊಂಡು ಹಿಡಿದುಕೊಂಡು ಬನ್ನಿ ಎಂದು ಹೇಳತಕ್ಕಂಥದು ಸಮಂಜಸವಲ್ಲ. ಅನೇಕ ಮಂದಿ ಭಯೋತ್ಪಾದಕರನ್ನು ಹಿಡಿದುಕೊಂಡು ಬಂದಾಗ ಆಗಿರತಕ್ಕಂಥ ಬೆಳವಣಿಗೆಗಳನ್ನು ನಾವು ನೋಡಿದ್ದೇವೆ. ಅಂದರೆ, ಹಿಡಿದಿರತಕ್ಕಂಥ ಭಯೋತ್ಪಾದಕರನ್ನು ವಿಮಾನದ ಮೂಲಕ ಕಾಂದಾರ್‌ರವರಿಗೆ ಬಿಟ್ಟು ಬರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದ್ದರಿಂದ ಅವರೆಲ್ಲರೂ ಹೇಳಿದಂಥದನ್ನು ನಾವು ಕೇಳುತ್ತಾ ಹೋದರೆ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ ಎಂಬುದು ನಮಗೆ ಗೊತ್ತಿದೆ. ಆದರೆ, ಅವರು ಯಾವ ಕಾರಣಕ್ಕಾಗಿ ಪ್ರಾರಂಭ ಮಾಡಿದರು ಎಂಬುದು ಮತ್ತು ವಿಚಾರವಾದಿಗಳು ಇದರ ಬಗ್ಗೆ ಚಿಂತನೆ ಮಾಡತಕ್ಕಂಥದ್ದು ನೋಡಿದರೆ ಇದರ ಬಗ್ಗೆ ನನಗೆ ಟೋಟಲಿ ಕನ್‌ಫ್ಯೂಸ್ ಆಗಿದೆ. ಆದ್ದರಿಂದ ಇದರ ಬಗ್ಗೆ ಚರ್ಚೆಯಾಗದಿದ್ದರೆ ಏನಾಗುತ್ತದೆ ಎಂದರೆ, ಯಾರು ವಿಚಾರವಾದಿಗಳು, ಯಾರು ನಕ್ಸಲೈಟ್ಸ್ ಎಂಬುದರ ಬಗ್ಗೆ ಸಂಪೂರ್ಣವಾದ ವಿವರ ಬೇಕಾಗುತ್ತದೆ. ಇಲ್ಲದಿದ್ದರೆ ಯಾರನೋ ನಕ್ಸಲೈಟ್ಸ್ ಎಂದು ಹೇಳತಕ್ಕಂಥದು ತಪ್ಪಾಗುತ್ತದೆ. ಹಿಂದೆ ನಾನು ಮಾತನಾಡುವಂಥ ಸಂದರ್ಭದಲ್ಲಿ ಪೋಲೀಸ್ ಮತ್ತು ಅರಣ್ಯ ಇಲಾಖೆ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೆ.

ಅಧ್ಯಕ್ಷರು : ತಾವು ಬೇಗ ಮುಗಿಸಬೇಕು. ಏಕೆಂದರೆ, ಇನ್ನು ಮಾತನಾಡುವವರು ಬಹಳ ಜನ ಇದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇರತಕ್ಕಂಥ ಸಮಸ್ಯೆಯನ್ನು ಕಂಡು ಹಿಡಿದರೆ ಮಾತ್ರ ಇದಕ್ಕೆ ಪರಿಹಾರ ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನ ದಿವಸ ಅರಣ್ಯ ಇಲಾಖೆಯಲ್ಲಿ ಯಾರಿಗೆ ಇನ್‌ಫ್ಲುಯೆನ್ಸ್ ಇದೆಯೋ ಅವರು ಶಾಶ್ವತವಾಗಿ ಕೆಲವು ಕಡೆ ಕುಳಿತುಕೊಂಡು ಬಿಡುತ್ತಾರೆ. ಅವರ ಜಾತಿ ಧರ್ಮ ಮತ್ತು ಅವರ ಹತ್ತಿರ ಹಣವಿದ್ದರೆ ಮತ್ತು ಬೇರೆ ಬೇರೆ ಆಧಾರದ ಮೇಲೆ ಕೆಲವರು ಶಾಶ್ವತವಾಗಿ ಒಂದೇ ಜಾಗದಲ್ಲಿ ಕುಳಿತುಕೊಂಡು ಬಿಡುತ್ತಾರೆ. ಆದ್ದರಿಂದ, ಇದು ಬದಲಾಗಬೇಕು. ಇವತ್ತಿನ ದಿವಸ ಇದರಿಂದ ಏನಾಗಿದೆ ಎಂದರೆ, ಅಧಿಕಾರಿಗಳಿಗೆ ಸರ್ಕಾರದ

ಮೇಲೆ ನಂಬಿಕೆ ಇಲ್ಲ. ಏಕೆಂದರೆ ಅವರು ಎಷ್ಟು ಕೆಲಸ ಮಾಡಿದರು ಕೂಡ ಅವರನ್ನು ತೆಗೆದು ಸಿ.ಓ.ಡಿ. ಅಥವಾ ಇಂಟಲಿಜೆನ್ಸಿಗೆ ವರ್ಗಾವಣೆ ಮಾಡುವುದರಿಂದ ಅವರಿಗೆ ಕೆಲಸ ಮಾಡುವುದಕ್ಕೆ ಆಸಕ್ತಿ ಇಲ್ಲದಂತಾಗಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಒಬ್ಬ ಅಧಿಕಾರಿ ಇಲಾಖೆಯ ಎಲ್ಲಾ ಅಂಗಗಳಲ್ಲಿ ಕೆಲಸ ಮಾಡದಿದ್ದರೆ ಅವರಿಗೆ ಪ್ರಮೋಷನ್ ಕೊಡುವುದಿಲ್ಲವೆಂಬ ನಿಯಮ ಮಾಡಿ. ಇವತ್ತಿನ ದಿವಸ ಇವರಲ್ಲಿಯೂ ಕೂಡ ಲ್ಯಾಂಡ್ ಮಾಫಿಯಾಗಳ ಜೊತೆ ಅನೇಕ ಜನರು ಸೇರಿಕೊಂಡಿದ್ದಾರೆ. ಮತ್ತೆ ಜನಪ್ರತಿನಿಧಿಗಳ ಜೊತೆ ಸೇರಿಕೊಂಡಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ಕಾನೂನು ಸುವ್ಯವಸ್ಥೆ ಹದಗೆಡುವುದಕ್ಕೆ ಮುಖ್ಯವಾದ ಕಾರಣಗಳು ಯಾವುದೆಂದರೆ, ಮಟ್ಕಾ ಮತ್ತು ಲ್ಯಾಂಡ್ ಮಾಫಿಯ ಹಾಗೂ ಲಿಕ್ಕರ್ಸ್‌ನವರು Illgotten wealth is the main cause for all these problems. ಇದರಲ್ಲಿ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳೂ ಕೂಡ ಸೇರಿಕೊಂಡಿದ್ದಾರೆ. ಆದ್ದರಿಂದ, ಎಲ್ಲರ ಮೇಲೆ ಆಪಾದನೆ ಹೊರಿಸತಕ್ಕಂಥದ್ದು ತಪ್ಪಾಗುತ್ತದೆ. It is a joint stock company. ಇದಕ್ಕೆ ಎಲ್ಲರೂ ಭಾಗಿದಾರರಾಗಿದ್ದಾರೆ. ಇವತ್ತಿನ ದಿವಸ ಏನಾಗಿದೆ ಎಂದರೆ ಬೆಂಗಳೂರು ನಗರದಲ್ಲಿ ಯಾರಾದರೊಬ್ಬರಿಗೆ ಒಳ್ಳೆಯ ಜಾಗದಲ್ಲಿ ಬಿ.ಡಿ.ಎ.ಯಿಂದ ಸೈಟ್ ಅಲಾಟ್‌ಮೆಂಟ್ ಆಗಿದ್ದರೂ ಕೂಡ ಆ ಜಾಗದಲ್ಲಿ ಬೇರೆಯವರು ಬಂದು ಸೇರಿಕೊಳ್ಳುವುದಕ್ಕೆ ಅನೇಕ ಮಂದಿ ಸಹಾಯ ಮಾಡುತ್ತಾರೆ. ಬಿಡಿಎಯಿಂದ ಅಲಾಟ್‌ಮೆಂಟ್ ಪತ್ರ ಇದ್ದರೂ ಕೂಡ ಆ ಜಾಗದಲ್ಲಿ ಕುಳಿತುಕೊಂಡಿರುವವನ ವಿರುದ್ಧ ಕೋರ್ಟ್‌ನಿಂದ ಇನ್‌ಜಂಕ್ಷನ್ ಆರ್ಡರ್ ತಂದರೂ ಕೂಡ ಇದಕ್ಕೆ ಅಧಿಕಾರಿಗಳು ಬೆಂಬಲವನ್ನು ಕೊಡುವುದಿಲ್ಲ. ಏಕೆಂದರೆ, ಹಿಂದೆ ಒಬ್ಬ ಪ್ರತಿನಿಧಿ ಇರುತ್ತಾನೆ. ಕೇಳುವುದಕ್ಕೆ ಹೋದರೆ ಇದರ ಹಿಂದೆ ಪವರ್ ಫುಲ್ ಪೊಲಿಟಿಶಿಯನ್ ಇದ್ದಾರೆಂದು ಹೇಳುತ್ತಾರೆ. ಇವತ್ತಿನ ದಿವಸ ನ್ಯಾಯಾಧೀಶರೂ ಕೂಡ ಅವರ ಹತ್ತಿರ ಹೋಗಿ ಸಹಕಾರ ಕೇಳುವಂಥ ಪರಿಸ್ಥಿತಿ ಬಂದಿದೆ ಎಂದು ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಹೇಳುತ್ತಿದ್ದಾರೆ. ಮೊನ್ನೆ ದಿವಸ ನ್ಯಾಯಾಧೀಶರ ಮುಂದೆ ಒಂದು ಮಾತನ್ನು ಹೇಳಿದೆ. ಅದೇನೆಂದರೆ, Law is not justice and trial is not the scientific enquiry into the truth. A trail is the resolution of the dispute. ಲಾಯರ್‌ಗಳು ವಾದ ಮಾಡಿ ಸುಳ್ಳು ಸಾಕ್ಷಿಯನ್ನು ಕೊಡುವುದರಿಂದ ಆತನಿಗೆ ಕನ್‌ವಿಕ್ಷನ್ ಆಗುತ್ತದೆ. ಇವತ್ತಿನ ದಿವಸ ಎಷ್ಟು ಜನ ನಿಜವಾದ ಹಾರ್ಡ್‌ಕೋರ್ ಕ್ರಿಮಿನಲ್‌ಗಳಿಗೆ ಕನ್‌ವಿಕ್ಷನ್ ಆಗಿದೆ? ಗಂಧವನ್ನು ಕಳ್ಳತನ ಮಾಡುವವನ ವಿರುದ್ಧ ಮತ್ತು ರೆಗ್ಯುಲರ್ ಹಾರ್ಡ್‌ಕೋರ್ ಕ್ರಿಮಿನಲ್‌ಗಳ ವಿರುದ್ಧ ಸಾಕ್ಷಿ ಹೇಳುವುದಕ್ಕೆ ಇವತ್ತಿನ ದಿವಸ ಯಾರೂ ತಯಾರಿಲ್ಲ. ಒಂದು ವೇಳೆ ಸಾಕ್ಷಿ ಹೇಳಿದರೆ ಆತ ಮನೆಗೆ ವಾಪಸ್ಸು ಹೋಗುವುದಿಲ್ಲ. ಇದು ಇವತ್ತಿನದಿವಸ ಇರತಕ್ಕಂಥ ಪರಿಸ್ಥಿತಿಯಾಗಿದೆ.

ಅಧ್ಯಕ್ಷರು : ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ತಾವು ಬೇಗ ಮುಗಿಸಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇವತ್ತಿನ ದಿವಸ ಅನೇಕ ಮಂದಿಗೆ ಅಕ್ವಿಟಲ್ ಆಗಿದೆ. ಮತ್ತೆ ಸುಳ್ಳು ಸಾಕ್ಷಿ ಹೇಳಿಸಿ ಅನೇಕ ಮಂದಿಗೆ ಕನ್‌ವಿಕ್ಷನ್ ಕೂಡ ಆಗಿದೆ. ಎಷ್ಟೋ ಸಾರಿ ಅರೆಸ್ಟ್ ಮಾಡಿದ ಮೇಲೆ I have built the case ಎಂದು ಒಬ್ಬ ಪೊಲೀಸ್ ಅಧಿಕಾರಿ ನನ್ನ ಹತ್ತಿರ ಹೇಳಿದರು. ಕಾರಣ ಏನೆಂದರೆ, ಯಾರೋಬ್ಬರ ಒತ್ತಡಕ್ಕೆ ಅರೆಸ್ಟ್ ಮಾಡುತ್ತೇನೆ . . .

ಶ್ರೀ ಜೆ.ಸಿ.ಮಾಧುಸ್ವಾಮಿ : ಆಲ್ ಪೋಸ್ಟ್ ಆಲ್ ಕೇಸಸ್‌ನಲ್ಲಿ ಅಂದರೆ, ಪ್ರೊಟೆಸ್ಟ್, ಸ್ಟ್ರೈಕ್ ಮಾಡಿದಂಥವರನ್ನು ಅರೆಸ್ಟ್ ಮಾಡಿದ ಮೇಲೆಯೇ ಕೇಸ್ ಹಾಕುವುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರ ಹಿನ್ನೆಲೆಯನ್ನು ನೋಡುವುದಿಲ್ಲ. ಒಬ್ಬ ಅಧಿಕಾರಿಯನ್ನು ಬೇರೆ ಕಡೆಗೆ ಪೋಸ್ಟಿಂಗ್ ಮಾಡುವಾಗ ಆತನ ಜಾತಿ ಮತ್ತು ಹಣದ ಶಕ್ತಿ ನೋಡುವುದನ್ನು ಬಿಟ್ಟು ಆತನ ಸರ್ವಿಸ್ ರೆಕಾರ್ಡ್ಸ್ ನೋಡಿ ಪೋಸ್ಟಿಂಗ್ ಮಾಡಿ. ಒಂದು ವೇಳೆ ಇಂಥವರನ್ನು ಪೋಸ್ಟಿಂಗ್ ಮಾಡಿ ಎಂದು ನಾನು ಪತ್ರ ಕೊಟ್ಟರೂ ಆತನ ಹಿನ್ನೆಲೆಯನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುನೋಡಿ ತೀರ್ಮಾನ ತೆಗೆದುಕೊಳ್ಳಲಿ. ಇಂಥವನು ಬೇಡ ಎಂದು ಹೇಳುವುದಕ್ಕೆ I have the right. ಹಾಗೆಯೇ, ನನಗೆ ಇಂಥವನು ಬೇಕು ಎಂಬ ಹಕ್ಕನ್ನೂ ಕೂಡ ಕೊಡಬೇಡಿ. ನನ್ನ ಕ್ಷೇತ್ರದಲ್ಲಿ ಎಲ್ಲರನ್ನೂ ವರ್ಗಾವಣೆ ಮಾಡಿಸಿದಾಗ ನಾನು ಪುನಃ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವಂಥ ಪರಿಸ್ಥಿತಿ ಬೇಡ. ಅಂದರೆ, ಈ ಒಂದು ವಿಷಯಕ್ಕೆ ನಾನು ಬೇರೆಯವರ ಹಿಂದೆ ಹೋಗುವಂಥ ಪರಿಸ್ಥಿತಿ ಬೇಡ. ಆದರೆ, ಇವತ್ತಿನ ದಿವಸ ಏನಾಗಿದೆ ಎಂದರೆ ಒಬ್ಬ ಅಧಿಕಾರಿ ವರ್ಗಾವಣೆ ಮಾಡಿಸಿಕೊಳ್ಳುವುದಕ್ಕೆ ಮತ್ತು ವರ್ಗಾವಣೆಯನ್ನು ತಡೆ ಹಿಡಿಯುವ ಅಧಿಕಾರಿಗಳ ಗುಂಪು ಬೆಂಗಳೂರಿನಲ್ಲಿಯೇ ಕುಳಿತುಕೊಂಡಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಯವರಿಗೂ ಮತ್ತು ನಮಗೂ ಒಂದು ದೊಡ್ಡ ಸಮಸ್ಯೆ ಆಗಿರತಕ್ಕಂಥದ್ದು ಈ ವರ್ಗಾವಣೆ ವ್ಯವಹಾರ. 10 ಬಾರಿ ನಾನು ವೈಯಕ್ತಿಕವಾಗಿ ನಿಮ್ಮನ್ನು ಬಂದು ಭೇಟಿ ಮಾಡಿದ್ದೇನೆ. ನಾವೇನು ಜಿಲ್ಲಾ ಮಟ್ಟದ ಟಾಪ್ ಅಧಿಕಾರಿಗಳಾದ ಐ.ಪಿ.ಎಸ್. ಮತ್ತು ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಮಾತನಾಡುತ್ತಿಲ್ಲ. ಆಯಾಯ ಕ್ಷೇತ್ರದ ಶಾಸಕರು ಹೇಳಿದಂತ ವರ್ಗಾವಣೆಗಳು ಅಂದರೆ, ಬಿ.ಡಿ.ಓ. ಅಥವಾ ಎ.ಇ.ಓ. ಅಥವಾ ಸಣ್ಣ ಸಣ್ಣ ಹುದ್ದೆಗಳಲ್ಲಿರತಕ್ಕಂಥವರ ಬಗ್ಗೆ ಸುಮಾರು 10-10 ಬಾರಿ ನಿಮ್ಮ ಹತ್ತಿರ ನಮ್ಮ ಶಾಸಕರು ಬಂದು ವಿನಂತಿ ಮಾಡಿದ ಮೇಲೆ ಅವರನ್ನು ಕರೆದು ತಾವು ಮಾತನಾಡಿದ ಮೇಲೂ ಕೂಡ ವರ್ಗಾವಣೆ ಆಗಿಲ್ಲ. ಅಂದರೆ ಇಲ್ಲಿ ನಿಮ್ಮ ಮಾಜಿ ಮತ್ತು ಹಾಲಿ ಸಚಿವರುಗಳು ಹಠವಿರಬಹುದು. ಶೃಂಗೇರಿ, ಮಂಗಳೂರು, ಉಡುಪಿ ಮತ್ತು ಚಿಕ್ಕಮಗಳೂರು, ಸೌತ್ ಕೆನರಾ ಹಾಗೂ ಕಾರ್ಕಳ ಭಾಗದ ಶಾಸಕರಿಗೆ ಈ ರೀತಿಯಾದ ಒಂದು ಪರಿಸ್ಥಿತಿಯಾಗಿದೆ. ವರ್ಗಾವಣೆ ಬಗ್ಗೆ ತಾವು ಒಂದು ತೀರ್ಮಾನ ತೆಗೆದುಕೊಳ್ಳಿ. ಆಗ ನಾವೂ ಕೂಡ ತಮ್ಮ ಹತ್ತಿರ ಬಂದು ಕಾಡಿಸುವುದಿಲ್ಲ. ಇವತ್ತು ಸಾಯಂಕಾಲ 6-00 ಗಂಟೆಗೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮನ್ನು ಭೇಟಿ ಮಾಡುತ್ತೇವೆ. ವರ್ಗಾವಣೆ ವಿಷಯಕ್ಕೆ ಸಂಬಂಧಪಟ್ಟಂತೆ ಏಕೆ ಈ ರೀತಿಯಾದ ಹ್ಯುಮಿಲಿಯೇಷನ್? ಆತ ಅಲ್ಲಿಗೆ ವರ್ಗಾವಣೆಯಾಗಿ ಇನ್ನು ಒಂದೆರಡು ತಿಂಗಳು ಆಗಿರುವುದಿಲ್ಲ. ಆದರೆ, ಮಾಜಿ ಸಚಿವರು ಅಥವಾ ಜಿಲ್ಲಾ ಉಸ್ತುವಾರಿ ಸಚಿವರು ಅಥವಾ ಇನ್ಯಾರೋ ಬಲವಂತ ಮಾಡಿದ್ದಾರೆಂದು ದಿನನಿತ್ಯ ಬದಲಾವಣೆ ಮಾಡಿ ಕಾಡಿಸುವುದಾದರೆ ಅಲ್ಲಿರತಕ್ಕಂಥ ಚುನಾಯಿತ ಶಾಸಕರು ಗೌರವದಿಂದ ಕೆಲಸ ಮಾಡುವುದು ಬೇಡವೆ? ಬೇಕಾದರೆ ನಿಮ್ಮ ವರ್ಗಾವಣೆ ನೀತಿಯನ್ನು ಬದಲಾವಣೆ ಮಾಡಿ. ಮತ್ತೆ ಇದಕ್ಕೆ ಯಾವುದೇ ಶಾಸಕರು ಇಂಟರ್‌ಫಿಯರ್ ಆಗಬಾರದು. ಮತ್ತೆ ಆತ ಮೂರ್‍ನಾಲ್ಕು ವರ್ಷ ಕೆಲಸ ಮಾಡಿರುವಂಥದನ್ನು ನೋಡಬೇಕು ಮತ್ತು ಆತ ತಪ್ಪು

ಮಾಡಿದ್ದಲ್ಲಿ ಆತನ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂಬ ನಿರ್ಧಾರ ತೆಗೆದುಕೊಳ್ಳಿ. ಇದನ್ನು ನಾವೂ ಕೂಡ ಸ್ವಾಗತ ಮಾಡುತ್ತೇವೆ. ಇವತ್ತಿನ ದಿವಸ ನಾವು 79 ಜನ ಶಾಸಕರು ಅನುಭವಿಸಿರತಕ್ಕಂಥದ್ದು ಆ ದೇವರಿಗೆ ಗೊತ್ತಿದೆ. ಮತ್ತೆ ಇದನ್ನು ಆ ದೇವರೇ ಕಾಪಾಡಬೇಕು. ಅಲ್ಲಿ ಹೇಳುತ್ತಾರೆ, ಏನು ಮಾಡಿದರು ನಿಮ್ಮ ಶಾಸಕರು, ನೋಡಿ ನಾವು ದುಡ್ಡು ಕೊಟ್ಟು ಮಾಡಿಸಿಕೊಂಡು ಬಂದಿದ್ದೇವೆ, ಈ ರೀತಿ ಮಾತನಾಡುತ್ತಾರೆ, ನಮ್ಮ ಡೆಪ್ಯುಟಿ ಲೀಡರ್ ಕೂಡ ಅದನ್ನೇ ಹೇಳುತ್ತಿದ್ದಾರೆ. ನಿಮಗೆ ನಾವು ಅನೇಕ ಸಲ ಹೇಳಿದ್ದೇವೆ. ಏನಾದರೂ ಇದಕ್ಕೊಂದು ಕ್ರಮ ನೀವು ತೆಗೆದುಕೊಳ್ಳದಿದ್ದರೆ, ನೀವು ಅವರಿಗೆ ಹೇಳಿ, ಮಾಜಿ ಸಚಿವರಿಗೆ ನೀವು ಇನ್ನೊಂದು ಸಲ ಗೆದ್ದು ಬನ್ನಿ ನೀನು ಹೇಳಿದ್ದೇ ಮಾಡುತ್ತೇನೆಂದು ಹೇಳಿ. ಈಗ ಜನ ನಿಮ್ಮನ್ನು ಮನೆಗೆ ಕಳುಹಿಸಿದ್ದಾರೆ. ಅಲ್ಲಿ ಇರುವವರು ಏನೋ ಮಾಡಿಕೊಳ್ಳುತ್ತಾರೆ ಎಂದು ಧೈರ್ಯವಾಗಿ ನೀವು ಹೇಳದಿದ್ದರೆ ಖಂಡಿತವಾಗಿ ಯಾರಿಗೂ ಇದರ ಬಗ್ಗೆ ಗೌರವ ಬರುವುದಿಲ್ಲ. ಈ ಹ್ಯುಮಿಲಿಯೇಶನ್‌ನ್ನು ಶಾಸಕರು ಅನುಭವಿಸುವುದಕ್ಕಾಗುವುದಿಲ್ಲ. ಬಹಳ ದೊಡ್ಡವರು, ಮಾಜಿ ಸಚಿವರಾಗಿದ್ದವರು, ಮಾಜಿ ಮುಖ್ಯಮಂತ್ರಿಗಳಾಗಿದ್ದವರು ಅವರು ದೊಡ್ಡ ದೊಡ್ಡ ಸ್ಥಾನದಲ್ಲಿ ಇದ್ದವರು ಅವರು. ಅವರ ಕಾಟವನ್ನು ಹೊಸದಾಗಿ ಆಯ್ಕೆಯಾಗಿ ಬಂದಿರುವ ಶಾಸಕರನ್ನು ಆ ದೇವರೇ ಕಾಪಾಡಬೇಕು. ಈ ಶಾಸಕರು ತಲೆ ತಗ್ಗಿಸಿ ಓಡಾಡುವಂಥ ಒಂದು ದಯನೀಯ ಸ್ಥಿತಿ, ಅಧಿಕಾರದ ದರ್ಪ, ಹೇ ನೋಡು ಮಾಡಿಸಿಕೊಂಡು ಬಂದಿದ್ದೇನೆ, ಅಲ್ಲಿರುವ ಅಧಿಕಾರಿಗಳು ಚೆನ್ನಾಗಿದ್ದಾರೆ ಅವರನ್ನು ಮುಂದುವರೆಸಿ, ಅದಕ್ಕೂ ಅವಕಾಶವಿಲ್ಲ, ಇದನ್ನು ಪ್ಲೀಸ್ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಸ್ಯಾಂಡಲ್‌ವುಡ್ಸ್ ಸ್ಮಗ್ಲಿಂಗ್ ನಮ್ಮಲ್ಲಿ ಜಾಸ್ತಿಯಾಗುತ್ತಿದೆ. ಮೊನ್ನೆ ದಿವಸ ಒಬ್ಬ ಕಾನ್‌ಸ್ಟೇಬಲ್ ಸ್ಯಾಂಡಲ್‌ವುಡ್ಸ್ ತೆಗೆದುಕೊಂಡು ರಿಕ್ಷಾದಲ್ಲಿ ಹೋಗುವಾಗ ಅಧಿಕಾರಿಗಳು ಹಿಡಿದಿದ್ದಾರೆ. ಎರಡು ದಿವಸದ ಕೆಳಗೆ ಪ್ರೆಸ್ ಎಂದು ಬೋರ್ಡ್ ಹಾಕಿಕೊಂಡು, ಪ್ರೆಸ್ ಎನ್ನುವುದರ ಬಗ್ಗೆ ಅಥವಾ ಯಾವುದು ಎನ್ನುವುದರ ಬಗ್ಗೆ ಇನ್ನೂ ತನಿಖೆಯಾಗಬೇಕು. ಪ್ರೆಸ್ ಎಂದು ವಾಹನದ ಮೇಲೆ ಬೋರ್ಡ್ ಹಾಕಿಕೊಂಡು ಹೋಗುವವರನ್ನು ಹಿಡಿದಿದ್ದಾರೆ, ಅಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸುವಂಥದ್ದು, ಯಾರು ಕೇಸ್ ಹಿಡಿಯುತ್ತಾರೆ, ಅವರಿಗೆ ವರ್ಗಾವಣೆ ಯಾರು ಇಂತಹ ಕೆಲಸದಲ್ಲಿ ಅವರೊಂದಿಗೆ ಸೇರಿಕೊಳ್ಳುತ್ತಾರೆ ಅಂಥವರಿಗೆ ವರ್ಗಾವಣೆ ಇಲ್ಲ. ಇಂತಹ ಪರಿಸ್ಥಿತಿ ಬರಬಾರದು. ಇಲಾಖೆಯ ಮೊರೆಲ್ ಹಾಳಾಗುತ್ತಿದೆ. It is going to dogs. ಅದನ್ನು ಸರಿಪಡಿಸಬೇಕು. ಅವರಿಗೆ ಎಲ್ಲಿಯವರೆಗೆ ಧೈರ್ಯ ಬರುವುದಿಲ್ಲ, ನೀವು ಯಾವ ಸರ್ಕಾರ ಹೇಳಿದರೂ ಕೂಡ ಅವರು ಕೇಳುವುದಿಲ್ಲ. ವೆಂಕಟಮ್ಮನಹಳ್ಳಿ ಬಗ್ಗೆ ಹೇಳಿದರು ನಮ್ಮ ಮನೆಯವರು ವಾಪಸ್ಸು ಬರುತ್ತಾರೆನ್ನುವ ಬಗ್ಗೆ ಅವರ ಮನೆಯವರಿಗೆ ಧೈರ್ಯ ಬೇಕು. ಎಲ್ಲವನ್ನೂ ಮಾಡಲಿಕ್ಕಾಗುವುದಿಲ್ಲ, ಹೇಗೆ ಗೊತ್ತಾಗುವುದು. ಅಟ್ಮಾಸ್ಫಿಯರ್ ಕ್ರಿಯೇಟ್ ಆಗಬೇಕು, We should create an atmosphere, ಆಫೀಸರ್ ವರ್ಕ್ ಮಾಡಬೇಕಾಗುತ್ತದೆ. ಜನರಿಗೂ ಧೈರ್ಯ ಬರಬೇಕಾಗುತ್ತದೆ. ಎಲ್ಲರನ್ನೂ ಅವರಿಗೆ ಹಿಡಿಯುವುದಕ್ಕಾಗುವುದಿಲ್ಲ, ರಿಯಲ್ ಎಸ್ಟೇಟ್ ಏಜೆಂಟರ್‌ಗಳನ್ನು ಕಿಡ್ನಾಪ್ ಮಾಡುತ್ತಾರೆ, ಮಗುವನ್ನು ಕಿಡ್ನಾಪ್ ಮಾಡಿ ಕೊಲ್ಲುವಂಥದ್ದು, ಇವೆಲ್ಲಾ ಅಟ್ಮಾಸ್ಫಿಯರ್ ಹಾಳಾಗಿರುವುದರಿಂದ ಆಗುತ್ತವೆ, ಅದನ್ನು ಬಿಟ್ಟರೆ, ಇದೆಲ್ಲವನ್ನೂ ಸರಿಪಡಿಸುವುದಕ್ಕಾಗುತ್ತದೆ. ಆದರೆ

ದೊಡ್ಡ ದೊಡ್ಡವರನ್ನು ಹಿಡಿದರೆ, ಹೊಡೆದರೆ ಕೊಲೆ ಮಾಡಿದರೆ ಇಮ್ಮಿಡಿಯೇಟ್ ಆಗಿ ಎರಡು ದಿವಸದಲ್ಲಿ ಹಿಡಿಯುತ್ತಾರೆ. ನಾನು ನಿಮಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ, ನನ್ನ ಪರಿಸ್ಥಿತಿಯ ಬಗ್ಗೆ, ನನ್ನ ವೈಯಕ್ತಿಕ ಆಕ್ಸಿಡೆಂಟ್ ಆದ ಕೇಸ್ ಅದು, ಕೇಸ್ ರಿಜಿಸ್ಟರ್ ಆಯಿತೋ ಇಲ್ಲವೋ ಗೊತ್ತಿಲ್ಲ 3–4 ವರ್ಷ ಆಯಿತು ಮೊಬೈಲ್ ಕಳ್ಳತನವಾಯಿತು, Rampant in the city. ಅದರ ಬಗ್ಗೆ ಪೊಲೀಸ್ ಸ್ಟೇಶನ್‌ಗೆ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ, ಏಕೆ ಈ ಕಂಪ್ಲೇಂಟ್ ಕೊಡುವುದಕ್ಕೆ ಬರುತ್ತೀರಿ ಎಂದು ಹೇಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಬೇರೆ ಯಾರೂ ಅಲ್ಲ, ಕಂಪ್ಲೇಂಟ್ ಕೊಟ್ಟು ಬಾ ಎಂದು ನನ್ನ ಮಗಳನ್ನೇ ಕೊಟ್ಟು ಕಳುಹಿಸಿದ್ದೆ, ಅವರು ಎಂ.ಎಲ್.ಎ. ಅವರಿಂದ ಏಕೆ ಫೋನ್ ಮಾಡಿಸಿದಿರಿ ಎಂದು ಕೇಳಿದರಂತೆ, ಅದಕ್ಕೆ ನಮ್ಮ ಅಪ್ಪನವರು ಎಂದು ಅವಳು ಹೇಳಿದ್ದಾಳೆ. This is the position, ಯಾವ ನಮ್ಮ ಸೆಲ್‌ಫೋನ್ ಕಳೆದು ಹೋಗಿತ್ತು, ಅವನು ಒಂದು ತಿಂಗಳವರೆಗೆ ಬೇರೆ ಫೋನ್‌ಗೆ ಟೆಲಿಫೋನ್ ಮಾಡಿದ್ದಾನೆ. ಸೇಮ್ ನಂಬರದಿಂದ, ಅದನ್ನು ಹಚ್‌ದಿಂದ ತೆಗೆದುಕೊಂಡು ಪೊಲೀಸ್ ಸ್ಟೇಶನ್‌ಗೆ ಕೊಟ್ಟರೂ ಸಹ ಇವತ್ತಿನವರೆಗೆ ಅವರಿಂದ ಅವನನ್ನು ಹಿಡಿದುಕೊಡಲಿಕ್ಕೆ ಆಗಲಿಲ್ಲ. ಅವನಿಗೆ ಫೋನ್ ಬಂದಿದ್ದು ಅಲ್ಲ, ಅದೇ ಫೋನ್‌ದಿಂದ ಅವರು ಯಾರಿಗೆ ಫೋನ್ ಮಾಡಿದ್ದರು ಅದನ್ನು ಇವರಿಂದ ಹಿಡಿಯಲಿಕ್ಕೆ ಸಾಧ್ಯವಾಗಲಿಲ್ಲ. ಇದು ಇರುವಂಥ ಪರಿಸ್ಥಿತಿ. ಏನ್ ಮೇಡಂ, ಇದೊಂದು ಸೆಲ್ ಫೋನ್‌ಗಾಗಿ ಇಷ್ಟೊಂದು ಕಷ್ಟಪಡುತ್ತಿದ್ದೀರಿ ಅನ್ನತಕ್ಕ ಪರಿಸ್ಥಿತಿ ಆ ಪೊಲೀಸ್ ಸ್ಟೇಶನ್‌ದಲ್ಲಿ. ನನಗೆ ಗೊತ್ತಿರುವಂತೆ ನಾನು ಶಾಸಕನಾಗುವುದಕ್ಕಿಂತ ಮುಂಚೆ ಬಿಪಿನ್ ಗೋಪಾಲಕೃಷ್ಣ ಎ.ಎಸ್.ಪಿ. ಆಗಿ ಅವರು ಉಡುಪಿಯಲ್ಲಿ ಇದ್ದರು, ನಮಗೆ ಆಗ ಈ ಇಲಾಖೆಯ ಬಗ್ಗೆ ಸ್ವಲ್ಪ ಹೆದರಿಕೆ ಇತ್ತು, ಈಗ ಯಾರಿಗೂ ಯಾವ ಇಲಾಖೆಯ ಬಗ್ಗೆ ಹೆದರಿಕೆ ಇಲ್ಲ. ಆಗ ಮಟ್ಕಾ ಇರಲಿಲ್ಲ, ಇವತ್ತು ದೊಡ್ಡ ದೊಡ್ಡ ಲೀಡರ್ಸ್‌ಗಳು, ಯಾರು ಈ ಹೋರಾಟವನ್ನು ಮಾಡುತ್ತಾರೆ, ಅವರಿಗೆ ಈ ರಿಯಲ್ ಎಸ್ಟೇಟ್ ಏಜೆಂಟ್ಸ್ ಕಾಣುವುದಿಲ್ಲವೆ? ಮಟ್ಕಾದವರು ಕಾಣುವುದಿಲ್ಲವೆ? ಇಲ್ಲಿ ಸಿಟ್ ಲಿಕ್ಕರ್‌ರವರು ಕಾಣುವುದಿಲ್ಲವೆ? ಬರೀ ರೈತರು ಭೂಮಿ ಜಾಸ್ತಿ ಇದ್ದವರು ಮಾತ್ರ ಕಾಣುವುದೆ? ಎಲ್ಲವನ್ನೂ ಕಾಣಬೇಕಾಗುತ್ತದೆ. ಎಲ್ಲದರ ಮೇಲೆ ಹೋರಾಟವನ್ನು ಮಾಡಬೇಕಾಗುತ್ತದೆ, ಆ ಹೋರಾಟ ಏಕೆ ಮಾಡುವುದಕ್ಕಾಗುತ್ತಿಲ್ಲವೆಂದರೆ ದೊಡ್ಡ ದೊಡ್ಡ ಖುರ್ಚಿಯ ಮೇಲೆ ಕುಳಿತವರೆಲ್ಲರೂ ಇದಕ್ಕೆ ಬೆಂಬಲವನ್ನು ಕೊಡುತ್ತಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿಯೇ ಕುಳಿತಿದ್ದಾರೆ, ಅವರು ಕಿಸ್ತನ್ನು ಎಷ್ಟು ಕಟ್ಟುತ್ತಾರೆ, ಅವರಿಗೆ ಡೈರೆಕ್ಟಾಗಿ ಸ್ಯಾಚೆಟ್ಸ್ ಮಾಡುವುದಕ್ಕೆ ಕೊಟ್ಟಿರುವುದರಿಂದ ಅವರು ಕಿಸ್ತನ್ನು ಎಷ್ಟು ಕಟ್ಟುತ್ತಾರೆ, ಅವರು ಸರ್ಕಾರದಿಂದ ಎಷ್ಟು ಲಿಕ್ಕರ್‌ನ್ನು ಡ್ರಾ ಮಾಡಿದ್ದಾರೆನ್ನುವುದು ಗೊತ್ತಾದರೆ, ಖಂಡಿತವಾಗಿ ಇವರೆಲ್ಲರೂ ಇನ್‌ವಾಲ್ವ್ಡ್. ಮೇಲಿಂದ ಕೆಳಗೆ, ಎಲ್ಲಾ ದೊಡ್ಡ ದೊಡ್ಡ ಗುತ್ತಿಗೆದಾರರು, ಮತ್ತು ರಿಯಲ್ ಎಸ್ಟೇಟ್ ಏಜೆನ್ಸಿಯವರು ಇನ್‌ವಾಲ್ವ್ಡ್. ಮಟ್ಕಾ ಮತ್ತು ಪ್ರೈವೇಟ್ ಫೈನಾನ್ಸಿಯವರು ಇನ್‌ವಾಲ್ವ್ಡ್. ಈಗ ಹೆಚ್ಚು ಕೊಲೆಗಳು ಆಗುತ್ತಿರುವಂಥದ್ದು ಇದರಲ್ಲಿಯೆ? ಪ್ರೈವೇಟ್ ಫೈನಾನ್ಸ್‌ನವರು ಕೊಡುವ ಹಣಕ್ಕೆ ಯಾವ ಆಧಾರವಿಲ್ಲ. ಕೇಳಿದಾಗ, ವಾಪಸ್ಸು ಹಣವನ್ನು ಕಟ್ಟಲಿಕ್ಕೆ ಆಗದವರು ಅವರನ್ನು ಕೊಲೆ ಮಾಡುವುದು, ಒಂದು ವೇಳೆ ಹಣ ಕೊಡದಿದ್ದರೂ ಅವರು ಕೊಲೆ ಆಗುವುದು. ಅಥವಾ ಅವರ ಮಕ್ಕಳನ್ನು ತೆಗೆದುಕೊಂಡು ಹೋಗಿ ಕೊಲೆ ಮಾಡುವುದು ಮತ್ತು ಇನ್ನೊಸೆಂಟ್ಸ್ ಇದ್ದವರನ್ನು ಕೊಲೆ ಮಾಡುವುದು. ಇದು ಎಲ್ಲಾ ಎಲ್ಲಿ ಹೋಗಿ ನಿಲ್ಲುತ್ತದೆ

ಎನ್ನುವುದು ಗೊತ್ತಾಗುವುದಿಲ್ಲ. ಈ ಒಂದು ಅಟ್ಮಾಸ್ಫಿಯರ್‌ನ್ನು ಕ್ರಿಯೇಟ್ ಮಾಡಬೇಕಾದರೆ ಮೇಲಿಂದ ಕೆಳಗಡೆಯವರಿಗೆ ಸ್ಟಾಫ್ ಸರಿಯಾಗಿರಬೇಕು. ವ್ಯವಸ್ಥೆ ಸರಿಯಾದರೆ ನಾನು ಹೇಳಿದ ಹಾಗೆ ಸರ್ಕಾರ ಮತ್ತು ಮೇಲಾಧಿಕಾರಿಗಳು, ಕೆಳಗಡೆ ಸ್ವಲ್ಪ ಅಡ್ಮಿನಿಸ್ಟ್ರೇಶನ್‌ನ್ನು ಟ್ರೈಟ್ ಮಾಡಬೇಕಾಗುತ್ತದೆ. ದಯವಿಟ್ಟು ನೀವು ನಾನು ಕೇಳಿರುವ ವರ್ಗಾವಣೆ, ನೀವು ಬೇರೆಯವರ ಮಾತನ್ನು ಕೇಳಿ ವರ್ಗಾವಣೆ ಮಾಡಿದಾಗ ನಾನು ನಿಮ್ಮ ಹತ್ತಿರ ಬರುತ್ತೇನೆ. ನಾನು ಬೇರೆ ಯಾವ ವರ್ಗಾವಣೆಗೂ ನಿಮ್ಮ ಹತ್ತಿರ ಬರುವುದಿಲ್ಲ. ಟೀಚರ್ಸ್ ಬಗ್ಗೆ ಕೆಲವೊಂದು ಅಲ್ಲಿ ಇಲ್ಲಿ ಕೇಳಿದ್ದೇನೆ ಅದನ್ನು ಬಿಟ್ಟರೆ ಯಾವ ವರ್ಗಾವಣೆಗೂ ನಿಮ್ಮ ಹತ್ತಿರ ಬರುವುದಿಲ್ಲ. ಇದನ್ನು Let us not take it as an agency. ಟ್ರಾನ್ಸ್‌ಫರ್ ಮಾಡುವಂಥದ್ದು. ನಾನು ಮಾನ್ಯ ವಾಟಾಳ್‌ರವರು ಎಂದು ಹೆಸರು ಹೇಳಿರುವುದಿಲ್ಲ. ನಾನು ಇನ್ನೊಬ್ಬರ ಮೇಲೆ ಆಪಾದನೆ ಮಾಡುವುದಿಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಿದಾಗಲೂ ಅದನ್ನೇ ಹೇಳಿದರು. ಪ್ರತಿಪಕ್ಷದವರು ಹಾಗೂ ಆಡಳಿತ ಪಕ್ಷದವರೆಲ್ಲರೂ ಸೇರಿ, ಏನಾದರೊಂದು ನೀತಿ ಸಂಹಿತೆಯನ್ನು ರೂಪಿಸಿಬಿಟ್ಟರೆ ಬಹುಶಃ ಈ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಇಂಪ್ರೂವ್ ಆಗಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾಡಬಹುದು.

ಅಧ್ಯಕ್ಷರು : ಎಲ್ಲರೂ ಸೇರಿ ಒಂದು ನೀತಿ ಸಂಹಿತೆಯನ್ನು ರೂಪಿಸಿ ಮಾಡಬಹುದು. ಬಹಳಷ್ಟು ಮಟ್ಟಿಗೆ ಸುಧಾರಣೆಯಾಗುತ್ತದೆ. ಮಟ್ಕಾ ಆಗಬಹುದು, ಇನ್ನೊಂದು ಆಗಬಹುದು, ಅವೆಲ್ಲಾ ನಿಲ್ಲುತ್ತವೆ. ಏಕೆ ಮಾಡಬಾರದು? ನಾನು ಏನು ಹೇಳುತ್ತೇನೆಂದರೆ, ಎಲ್ಲಾ ಪ್ರತಿಪಕ್ಷದ ನಾಯಕರುಗಳು ಎಲ್ಲರೂ ಇಲ್ಲಿ ಮಾತನಾಡಿದ್ದೀರಿ, ಆದರೆ ಎಲ್ಲರೂ ಕುಳಿತುಕೊಂಡು ದೀರ್ಘವಾಗಿ ಇದರ ಬಗ್ಗೆ ಚರ್ಚೆ ಮಾಡಿ ಒಂದು ನೀತಿ ಸಂಹಿತೆಯನ್ನು ರೂಪಿಸಿಕೊಂಡು ಅದರ ಪ್ರಕಾರ ಅವರವರ ಪಕ್ಷದ ಎಲ್ಲಾ ಸದಸ್ಯರಿಗೂ ಹೇಳಿ, ಅದನ್ನು ಮಾಡುವುದು ಒಳ್ಳೆಯದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ಪೋಲೀಸ್ ಸ್ಟೇಶನ್‌ದವರಿಗೆ ಎಲ್ಲಿ ಮಟ್ಕಾ ಮಾಡುತ್ತಿದ್ದಾರೆಂದು ಗೊತ್ತಿದೆ. ಎಲ್ಲಿ ಇಲ್ಲಿ ಸಿಟ್‌ಲಿಕ್ಕರ್ ತಯಾರಾಗುತ್ತಿದೆ ಎಂದು ಪ್ರತಿ ಎಕ್ಸೈಸ್ ಆಫೀಸರ್‌ಗೂ ಗೊತ್ತಿದೆ. ಎಲ್ಲಿಗೆ ಹೋಗುತ್ತಿದೆ, ಅದನ್ನು ಹಿಡಿದುಕೊಡಿ ಅಂದರೆ ನಾನು ಅದನ್ನು ಮಾಡುವುದಕ್ಕೂ ತಯಾರಾಗಿದ್ದೇನೆ. ಒಂದು ವೇಳೆ ಆ ಅಧಿಕಾರಿಗಳಿಗೆ ಗೊತ್ತಾಗದಿದ್ದರೆ, ಇದನ್ನೇನೂ ಜೇಬಿನಲ್ಲಿ ಇಟ್ಟುಕೊಂಡು ಹೋಗುತ್ತಿಲ್ಲ, ಪೇಪರ್‌ನಲ್ಲಿ ಪಾಸ್ ಮಾಡುತ್ತಿಲ್ಲ. ಪ್ರತಿಯೊಬ್ಬರಿಗೂ ಗೊತ್ತಿದೆ. ನಮ್ಮಲ್ಲೆಲ್ಲಾ ಮೊಬೈಲ್ ಇಲ್ಲಿ ಸಿಟ್‌ಲಿಕ್ಕರ್ ತಯಾರು ಮಾಡುವಂಥ ಮ್ಯಾನುಫ್ಯಾಕ್ಚರ್ ಮಾಡುವಂಥ ಯೂನಿಟ್ಸ್ ಇವೆ. ಕಾರ್‌ನಲ್ಲಿ ಮೆಷನ್‌ನ್ನು ತೆಗೆದುಕೊಂಡು ಹೋಗುತ್ತಾರೆ, ಕಾರ್‌ನಲ್ಲಿ ತೆಗೆದುಕೊಂಡು ಹೋಗಿ ಸ್ಪಾಟ್‌ನಲ್ಲಿ ತಯಾರು ಮಾಡಿ ಕೊಟ್ಟು ಬರುವಂಥ ಪರಿಸ್ಥಿತಿ ಇದೆ. ಮಟ್ಕಾವನ್ನು ಇವತ್ತು ಪ್ರತಿಯೊಂದು ಗಲ್ಲಿಗಲ್ಲಿಯಲ್ಲಿ ಮಾಡುತ್ತಾರೆ. ಏಕೆ ಹಿಡಿಯುತ್ತಿಲ್ಲ ಎನ್ನುವಂಥದ್ದನ್ನು ಮೇಲಾಧಿಕಾರಿಗಳು ಕೆಳಗಿನ ಅಧಿಕಾರಿಗಳನ್ನು ಕೇಳಬೇಕು. ಕೆಳಗಿನ ಅಧಿಕಾರಿಗಳ ಮೇಲೆ ಸಿವಿಯರ್ ಆಕ್ಷನ್ ತೆಗೆದುಕೊಳ್ಳ ಬೇಕಾಗುತ್ತದೆ. ಇದನ್ನು ಮಾಡದಿದ್ದರೆ, ಹೊಸ ಹೊಸ ಕಾನೂನಿಗಳಿಗಿಂತ ಇರುವ ಇಂತಹ ಕಾನೂನುಗಳನ್ನೇ ಜಾರಿಗೆ ತರುವಂಥದ್ದು ಬಹಳ ಮುಖ್ಯವೆಂಬುದು ನನ್ನ ಅಭಿಪ್ರಾಯ, ಹೊಸ ಕಾನೂನನ್ನು ಮಾಡಿದಾಗ ಜಾಸ್ತಿ ಕನ್‌ಫ್ಯೂಸನ್

ಆಗುತ್ತವೆ. ಇದ್ದ ಕಾನೂನನ್ನು ಜಾರಿಗೆ ತನ್ನಿ, ಅಷ್ಟೆ ಸಾಕಾಗುತ್ತದೆಂದು ಹೇಳುತ್ತಾ, ಇನ್ನೊಂದು ವಿಷಯವೆಂದರೆ, ಪಾಪದವನು ಪೊಲೀಸ್ ಸ್ಟೇಶನ್‌ಗೆ ಹೋಗಿ ನಿಂತುಕೊಂಡು ಕಂಪ್ಲೇಂಟ್ ಹೇಳುವಂಥ ಒಂದು ಪರಿಸ್ಥಿತಿ, ಕ್ರಿಮಿನಲ್ ಹೋಗಿ ಅಲ್ಲಿ ಕುಳಿತುಕೊಳ್ಳುತ್ತಾನೆ, ಏಕೆಂದರೆ ಅವನ ಹತ್ತಿರ ದುಡ್ಡು ಇದೆ, ಬಟ್ಟೆ ಗಲೀಜು ಇದ್ದವನಿಗೆ ಯಾರಾದರೂ ಹೊಡೆದರೂ ಅವನು ಹೋಗಿ ಕಂಪ್ಲೇಂಟ್ ಕೊಡುವಂಥ ಪರಿಸ್ಥಿತಿ ಇವತ್ತು ಇಲ್ಲ. ಏಕೆಂದರೆ ಅವನು ಕೇಸ್ ತೆಗೆದುಕೊಳ್ಳುವುದಿಲ್ಲ. ಒಂದು ಕೇಸನ್ನು ಕೊಟ್ಟರೆ ಮಾರನೆಯ ದಿವಸ ಪುನಃ ಇವನನ್ನೇ ಕರೆಸುತ್ತಾರೆ, ಏಕೆಂದರೆ ಇನ್ನೊಂದು ಕೌಂಟರ್ ಕೇಸನ್ನು ತೆಗೆದುಕೊಂಡಿರುತ್ತಾರೆ, ಇದನ್ನು ವಾಪಸ್ಸು ತೆಗೆಯಿಸಬೇಕು. ಏಕೆಂದರೆ ಕೌಂಟರ್ ಕೇಸ್ ತೆಗೆದುಕೊಂಡಿರುವುದರಿಂದ ಬೇರೆ ದಾರಿ ಇಲ್ಲದೆ ವಾಪಸ್ಸು ತೆಗೆಯಿಸಬೇಕು. ಇದು ಪರಿಸ್ಥಿತಿ ಇದೆ. ಇದನ್ನು ಹೇಗೆ ಸರಿಪಡಿಸಬೇಕು ಎನ್ನುವುದರ ಬಗ್ಗೆ ಆಲೋಚನೆ ಮಾಡ ಬೇಕಾಗುತ್ತದೆ. ಇದನ್ನು ಚರ್ಚೆ ಮಾಡಬೇಕಾಗಿಲ್ಲ, ಇದಕ್ಕೆ ಹೊಸ ಕಾನೂನು ಏನೂ ಬೇಕಾಗಿಲ್ಲ. ಪ್ರತಿ ಸ್ಟೇಶನ್‌ದಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ಪ್ರತಿಯೊಬ್ಬರಿಗೂ ಗೊತ್ತಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಏನು ಇರುತ್ತಾರೆ, ಅವನಿಗೆ ಇದರ ಬಗ್ಗೆ ಮಾಹಿತಿ ಇಲ್ಲದಿದ್ದರೆ He is unfit to hold that post. Remove him from there. ಮೊನ್ನೆ ದಿವಸ ಬೆಂಗಳೂರಿಗೆ ಜಾರ್ಖಂಡದಿಂದ ತಂದ ವೆಪನ್ಸ್‌ನ್ನು ಒಂದೇ ದಿವಸದಲ್ಲಿ ಹಿಡಿಯುವುದಕ್ಕೆ ಸಾಧ್ಯವಾದರೆ, ಅಲ್ಲಿ ದಿನನಿತ್ಯ ನಡೆಯುತ್ತದೆ. ಇನ್ನೊಂದು ವಿಷಯ ಥೆಫ್ಟ್ ಕೇಸ್‌ಗಳನ್ನು ರಿಜಿಸ್ಟರ್ ಮಾಡುವುದಿಲ್ಲ. ಏಕೆ ಮಾಡುವುದಿಲ್ಲವೆಂದರೆ ಅವರ ಪ್ರಾಪರ್ಟಿ ರಿಕವರಿ ತೋರಿಸಬೇಕಾಗುತ್ತದೆ. ಪ್ರಾಪರ್ಟಿ ರಿಕವರಿ ತೋರಿಸುವುದ ಕ್ಕಾಗುವುದಿಲ್ಲವೆಂದು, ಅಲ್ಲಿ ಎಷ್ಟು ಕೇಸ್‌ಗಳು ಪೆಂಡಿಂಗ್ ಇವೆ ಎಂದು ಗೊತ್ತಾಗುತ್ತದೆಂದು ಅವರ ಮೇಲೆ ರಿಫ್ಲೆಕ್ಟ್ ಆಗಿ, it reflects on the Station House Officer. ಅದಕ್ಕೋಸ್ಕರವಾಗಿ ಕೇಸನ್ನು ರಿಜಿಸ್ಟರ್ ಮಾಡುವುದಿಲ್ಲ. ನಮ್ಮಲ್ಲಿರುವ ಅನೇಕ ಉದಾಹರಣೆಗಳನ್ನು ನಾನು ಕೊಡುತ್ತೇನೆ, ಅನೇಕ ಮನೆಗಳನ್ನು ಬೀಗ ಒಡೆದಿರುವ ಬಗ್ಗೆ ಕೇಸ್ ರಿಜಿಸ್ಟರ್ ಮಾಡಿರುವುದಿಲ್ಲ. ಇದು ಪರಿಸ್ಥಿತಿ ಇದೆ. ಹೀಗಾದರೆ ಜನರು ಪೊಲೀಸ್ ಸ್ಟೇಶನ್‌ಗೆ ಹೋಗಬೇಕೊ ಅಥವಾ ಬೇಡವೆ? ಇವತ್ತು ಪೊಲೀಸ್ ಸ್ಟೇಶನ್‌ಗೆ ಹೋಗುವ ಧೈರ್ಯ ಯಾರಿಗೂ ಇಲ್ಲ. ಈ ವಾತಾವರಣವನ್ನು ನೀವು ಬದಲಾವಣೆ ಮಾಡಲಿಕ್ಕೆ ಏನು ಆಲೋಚನೆ ಸರ್ಕಾರ ಮಾಡಿದೆ ಎಂಬುದನ್ನು ಹೇಳಬೇಕು. ನಾನು ಎಷ್ಟು ಮಾತನಾಡಿದರೂ ಇದಕ್ಕಿಂತ ವ್ಯತ್ಯಾಸ ಏನೂ ಇಲ್ಲ. ಇದನ್ನು ನಾನು ಪುನಃ ಅವರ ಗಮನಕ್ಕೆ ತರುತ್ತೇನೆ. ಈಗಾಗಲೆ ಇಷ್ಟನ್ನು ನಾನು ಹೇಳಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳಿಗೆ ಗೊತ್ತಿದೆ, ಸರ್ಕಾರಕ್ಕೂ ಗೊತ್ತಿದೆ, ಲೋಕಲ್ ಆಫೀಸರ್ಸ್‌ಗಳಿಗೂ ಗೊತ್ತಿದೆ. ಅದನ್ನು ನಿಲ್ಲಿಸುವಂಥ ಪ್ರಯತ್ನವನ್ನು ಎಲ್ಲರೂ ಸೇರಿ ಮಾಡಬೇಕಾಗುತ್ತದೆ. ಸರ್ಕಾರ ಮತ್ತು ಅಧಿಕಾರಿಗಳು ಸೇರಿ ಮಾಡಬೇಕಾಗುತ್ತದೆಂದು ಹೇಳುತ್ತಾ, ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ (ಶ್ರೀನಿವಾಸಪುರ) : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಇತರ ಗೆಳೆಯರು ಮಾತನಾಡಿರುವುದನ್ನು ಕೇಳಿದೆ, ಒಂದು ಹಂತದಲ್ಲಿ ಹೋಂ ಡಿಪಾರ್ಟ್‌ಮೆಂಟಿನ ಡಿಮಾಂಡ್ಸ್ ಮೇಲೆ ಚರ್ಚೆ ಮಾಡುತ್ತಿದ್ದೇವಾ ಎನ್ನುವಂತಹ ಭಾವನೆ ಬಂತು. ಮಾನ್ಯ ವಿರೋಧಪಕ್ಷದ ನಾಯಕರು ಚರ್ಚೆಯನ್ನು ಮಾಡುತ್ತಾ ಲಾ ಅಂಡ್ ಆರ್ಡರ್ ತೊಂದರೆಗೆ ಸಂಬಂಧಿಸಿದಂತೆ ಹೆಚ್ಚು ಮಾತನಾಡಿದರು. ಗೆಳೆಯ ಶ್ರೀರಾಮರೆಡ್ಡಿಯವರು

ಲಾ ಅಂಡ್ ಆರ್ಡರ್ ಪ್ರಾಬ್ಲಮ್‌ಗಿಂತ ಹೆಚ್ಚಾಗಿ ರಾಜಕೀಯ ಸಮಸ್ಯೆ ಅನ್ನತಕ್ಕಂತಹ ವಿಷಯವನ್ನು ಪ್ರಸ್ತಾಪ ಮಾಡಿದರು. ನಾನು ಅವರ ಜೊತೆಗೆ ಪೂರ್ಣ ಸಹಮತವನ್ನು ಹೊಂದಿದ್ದೇನೆ. ನಾನು ಮಾತನಾಡುವುದಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ, ನಾನು 3 ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ರೆಡ್ಡಿಯವರು ಮಾತುಮಾತಿಗೆ ಹೇಳಿದರು ಪೆಸ್ಟರ್ಸ್ ಗಾಟ್ಸ್‌ನ್ನು ಏತಕ್ಕಾಗಿ ಸೆಲೆಕ್ಟ್ ಮಾಡಿದ್ದಾರೆ ಎಂದು ಹೇಳಿದರು. ಗೆರಿಲ್ಲಾ ವಾರ್‌ನ್ನು ಮಾಡಬೇಕೆಂದು ಹೇಳಿ ಬಯಸಿದವರು ಆ ಸಿದ್ಧಾಂತದಲ್ಲಿ ನಂಬಿಕೆಯನ್ನು ಇಟ್ಟುಕೊಂಡವರು ಅವರು ಹೆಚ್ಚಾಗಿ ಅರಣ್ಯ ಪ್ರದೇಶಗಳನ್ನು ಬಯಸುತ್ತಾರೆ. ಶ್ರೀಕಾಕುಳಂ ಜಿಲ್ಲೆಯ ಪಾರ್ವತಿಪುರಂ ಸ್ಟೇಷನ್‌ನಲ್ಲಿ ಆವಾಗಲೂ ಕೂಡ ಅಷ್ಟೆ ಆದದ್ದು. ಕೇರಳದಲ್ಲಿ ಅಜಿತ ಕುಣಿಕಲ್ ನಾರಾಯಣನ್ ಮತ್ತು ಮಂದಾಕಿನಿ ನಾರಾಯಣನ್‌ರವರ ಮಗಳು ಮಾಡಿದಾಗಲೂ ಕೂಡ ಮಲಬಾರ್ ಹಿಲ್ಸ್ ಮಧ್ಯದಲ್ಲಿಯೇ ಆ ಹೋರಾಟ ಪ್ರಾರಂಭವಾದದ್ದು. Telangane armed movement ಆಗಲಿ, ಇವತ್ತು ನಡೆಯುತ್ತಿರುವಂತಹ ಪೀಪಲ್ಸ್ ವಾರ್ ಗ್ರೂಪ್ ಮೂವ್‌ಮೆಂಟ್ ಕೂಡ ಫಾರೆಸ್ಟ್ ಏರಿಯಾದಲ್ಲಿ ನಡೆಯುತ್ತಿರುವುದು. camouflage ಮಾಡಲಿಕ್ಕೆ ಅವರಿಗೆ ಅನುಕೂಲವಿರಬೇಕು. ಅವರ ಸಿದ್ಧಾಂತವನ್ನು ನಾವು ಒಪ್ಪತಕ್ಕಂತಹದ್ದು ಮತ್ತು ಬಿಡತಕ್ಕಂತಹದ್ದು ಅದು ಬೇರೆ ಪ್ರಶ್ನೆ ಅವರು ಅವರ ಪಾರ್ಟಿಯ ಲೈನನ್ನು ಹೇಳಿದರು, ಇವರು ಲಿಮ್‌ಕಿಯಾ ವಾದಿಗಳು ಮತ್ತೊಂದು, ಮತ್ತೊಂದು ಆದರೆ, ಸರ್ಕಾರದಲ್ಲಿ ನಾನು ಇಷ್ಟು ನಿವೇದನೆಯನ್ನು ಮಾಡಿಕೊಳ್ಳುತ್ತೇನೆ. ಇಷ್ಟು ದಿವಸಗಳ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇದ್ದಂತಹ ಸರ್ಕಾರಗಳು ಸತತವಾಗಿ ಬಂದಂತಹವು, ಆ ಭಾಗದಲ್ಲಿ ವಾಸವಾಗಿರುವಂತಹ ಜನರ ಕೆಲವು ಸಮಸ್ಯೆಗಳ ಕಡೆಗೆ ಗಮನವನ್ನು ಕೊಡುವುದು ಸಾಧ್ಯವಾಗಿಲ್ಲ ; ಅದು ಕಟುಸತ್ಯ. ಅವರು ಶೋಷಣೆಗೆ ಒಳಗಾಗಿದ್ದಾರೆ. ಶೋಷಣೆ ಇದ್ದ ಕಡೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಹೋರಾಟ ಪ್ರಾರಂಭವಾಗತಕ್ಕಂತಹದ್ದು ಅನಿವಾರ್ಯ. Every suppression is met with counter suppression. ಈ ಅವಕಾಶವನ್ನು ಅವರು ಸದುಪಯೋಗಪಡಿಸಿಕೊಂಡಿದ್ದಾರೆ. ಅವರು ಚಾರುಮಜುಂದಾರ್ ಕಾನೂಸನ್ಯಾಲ ವಾದದಲ್ಲಿ ನಂಬಿಕೆ ಇದ್ದವರು ಅಥವಾ ಲಿಮ್‌ಕಿಯಾ ವಾದಿಗಳು ಅದರ ಸಂಬಂಧ ನಮಗೆ ಬೇಕಾಗಿಲ್ಲ. ಆದರೆ ಸ್ಥಳೀಯ ಜನರ ಸಮಸ್ಯೆಗಳನ್ನು ಅವರು ಕೈಗೆತ್ತಿಕೊಂಡಿದ್ದಾರೆ, ಆ ಜನರಿಗೆ ನನ್ನ ಮಿತ್ರ ಗೋಪಾಲಪೂಜಾರಿಯವರು ಹೇಳಿದಂತೆ ಅವರು ಒಂದು ರೀತಿಯಲ್ಲಿ ಹೀರೋಗಳಂತೆ ಕಾಣುತ್ತಿದ್ದಾರೆ. ನಾವು ಫೇಲಾಗಿದ್ದೇವೆ, The best and the immediate task the Government should attend to, is attend to the basic issues raised by these people. ಬಹುಶಃ ಇನ್ನು ಕೆಲವೇ ದಿವಸಗಳಲ್ಲಿ ಬಿಳಿಗಿರಿರಂಗನ ಬೆಟ್ಟದಲ್ಲಿ ಸೋಲಿಗರೂ ಕೂಡ ನಕ್ಸಲೈಟ್ ತರಹ ಸಿಂಪತೈಸ್ ಆದರೆ ನೀವು ಆಶ್ಚರ್ಯಪಡಬೇಕಾಗಿಲ್ಲ. ಅವರು ಎಷ್ಟು ದಿವಸಗಳ ಕಾಲ ಶೋಷಣೆಯನ್ನು ತಡೆಯುತ್ತಾರೆ? ನಮಗೆ ಇರುವಂತಹ ಎಲ್ಲಾ ಇತಿಮಿತಿಗಳಲ್ಲಿ ನಾವು ಅವರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರಲ್ಲಿ ವಿಫಲರಾಗಿ ಅವರ ಮೇಲೆ ಗೂಬೆಯನ್ನು ಕೂರಿಸಿದರೆ ಹೇಗೆ? ನನಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆ, ಅವನಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರಬೇಕೆಂದು ಬಲವಂತ ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ನಾವು ಯಾರು ಮರೆಯುವುದಕ್ಕೆ ಸಾಧ್ಯವಿಲ್ಲ. ಮತ್ತೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಬಹುತೇಕ ಈ ಎಲ್ಲಾ ಸಮಸ್ಯೆಗಳು ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಅತ್ಯಂತ ನಮ್ರತೆಯಿಂದ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಈ ಇಲಾಖೆಯಲ್ಲಿರುವಂತಹ ಕೆಲವು ಸೀನಿಯರ್ ಆಫೀಸರ್ಸ್ ಅವರು ಮೂಲತಃ ಕರ್ನಾಟಕದವರಲ್ಲ, ಆಲ್ ಇಂಡಿಯಾ ಸರ್ವೀಸ್‌ಗೆ ಸೇರಿ ಬಂದವರಾಗಿದ್ದಾರೆ, ಅವರು ಹ್ಯಾಂಡಲ್ ಮಾಡಿರುವಂತಹ ಸ್ಯಾಂಪಲ್‌ಗಾಗಿ 50 ಫೈಲ್‌ಗಳನ್ನು ತರಿಸಿ ಸ್ವತಃ ಮುಖ್ಯಮಂತ್ರಿಗಳು ನೋಡಲಿ. ಯಾವ ಫೈಲ್‌ನಾದರೂ ನೋಡುವುದು, ಓದುವುದು, ಸಮಸ್ಯೆ ಏನೆಂದು ತಿಳಿದುಕೊಳ್ಳುವುದು ಇದರಲ್ಲಿ ಏನು ಬರೆಯಬೇಕೆಂದು ಆಲೋಚನೆ ಮಾಡಿ ಬರೆದರೆ ಪರವಾಗಿಲ್ಲ. ಅವರು ಏನು ಈ ರಾಜ್ಯಕ್ಕೆ ವಿರುದ್ಧವಾಗಿದ್ದಾರೋ ಅಥವಾ ಓದು ಬರಹ ಬರೆಯುವುದು ಅವರಿಗೆ ಗೊತ್ತಿಲ್ಲವೋ ಅಥವಾ ಬೇರೆ ಯಾರಾದರೂ ಅವರ ಕೈಯಲ್ಲಿ ಈ ರೀತಿ ಕೆಲಸ ಮಾಡಿಸುತ್ತಿದ್ದಾರೋ ನನಗೆ ಗೊತ್ತಿಲ್ಲ. ಮಾನ್ಯ ಪ್ರಕಾಶ್‌ರವರು ಮಧ್ಯದಲ್ಲಿ ಇಂಟರ್‌ವಿನ್ ಆಗಿ ಬಹಳ ಮೀನಿಂಗ್‌ಫುಲ್ ಎಕ್ಸ್‌ಪ್ಲನೇಷನ್‌ನ್ನು ಹೌಸ್‌ಗೆ ಕೊಟ್ಟರು. ಅನೇಕ ವೇಳೆಗೆ ಕಾಡನ್ನು ಕಾಪಾಡುವುದಕ್ಕೆ ಮುನ್ನ ಕಾಡು ಬೆಳೆಯುವುದಕ್ಕೆ ಮುನ್ನ ಈ ರೀತಿಯಾದಂತಹ ಒಂದು ವಿಚಿತ್ರ ವಾದಂತಹ ನಿಲುವನ್ನು ತಾಳಿ ಸರ್ಕಾರವೇ ಜನರಿಗೆ ವಿರುದ್ಧ ಎನ್ನುವಂತಹ ಭಾವನೆಗಳನ್ನು ಅವನ ಮನಸ್ಸಿನಲ್ಲಿ ಸೃಷ್ಟಿ ಮಾಡುವುದರಲ್ಲಿ ಇವರು ಯಶಸ್ವಿಯಾಗಿದ್ದಾರೆ. ನಾವು ಇಂತಹವರನ್ನು ಎಲ್ಲಿಯವರೆವಿಗೆ ನಮ್ಮ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನಗಳಲ್ಲಿ ಇಟ್ಟುಕೊಂಡಿರುತ್ತೇವೆ, ಅಲ್ಲಿಯವರೆವಿಗೆ ರಾಜ್‌ಸಂಕೇತ ಅಂದರೆ ಅವನ ಜಾಗದಲ್ಲಿ ಇನ್ನೊಬ್ಬ ಹುಟ್ಟಿಕೊಳ್ಳುತ್ತಾನೆ. ನೀವು ಅದಕ್ಕೆ ಯಾವುದೇ ವಾದ ಎಂದು ಕರೆಯಬಹುದು, ಆ ಬೇಸಿಕ್ ಇಷ್ಯೂವನ್ನು ರೀಸಾಲ್ವ್ ಮಾಡುವುದರಿಂದ ನಾವು ಈ ಸಮಸ್ಯೆಯನ್ನು ಪರಿಹಾರವನ್ನು ಮಾಡಬಹುದು ಎಂಬುದು ನನ್ನ ಅಭಿಪ್ರಾಯ. ಮತ್ತೆ ಪೊಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ನಾವು ಮಾರ್ಡನೈಸ್ ಮಾಡಬೇಕಾಗಿದ್ದರೆ ಅವರನ್ನು ನಾವು ಇಂತಹ ಒಂದು ಕಾಂಟಿನ್‌ಜೆನ್ಸಿಗೆ ತಯಾರೇ ಮಾಡಿಲ್ಲ, ಇವತ್ತು ಅನೇಕ ಜನರು ಡೈರೆಕ್ಟರ್ ಆಫ್ ಇನ್‌ಫರ್ಮೇಷನ್ ಐಪಿಎಸ್ ಆಫೀಸರ್, ಟೂರಿಸಂ ಡೈರೆಕ್ಟರ್ ಐಪಿಎಸ್ ಆಫೀಸರ್, ಯೂನಿವರ್ಸಿಟಿಗೆ ರಿಜಿಸ್ಟಾರ್ ಐಪಿಎಸ್ ಆಫೀಸರ್, ಏಕೆ ಅವರು ಅಲ್ಲಿಗೆ ಹೋಗುವುದಕ್ಕೆ ಯಾರೂ ಬೇರೆ ಸೀನಿಯರ್ ಐಎಎಸ್ ಆಫೀಸರ್ ಇಲ್ಲವಾ ಅಥವಾ ಕೆಎಎಸ್‌ನವರು ಹೋಗುವುದಕ್ಕೆ ಆಗುವುದಿಲ್ಲವಾ? ಇವರಿಗೆ ಯೂನಿಫಾರಂ ಹಾಕಿಕೊಳ್ಳುವುದಕ್ಕೆ ಕಷ್ಟನಾ? ಇವರೆಲ್ಲರನ್ನೂ ಕರೆಸಿಬಿಡಿ Send them back. ನಿಮಗೆ ಅಷ್ಟು ಸರ್‌ಪ್ಲಸ್ ಇದ್ದರೆ ಐಪಿಎಸ್ ಕೇಡರ್ ಆಲ್ ಇಂಡಿಯಾ ಸರ್ವೀಸ್‌ನವರು ನಮಗೆ ಬೇಕಾಗಿಲ್ಲ, ಇವರ ಹೊರೆಯನ್ನು ನಾವು ಸಹಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿ ಅವರನ್ನು ಇಲ್ಲಿಗೆ ಕರೆದುಕೊಂಡು ಬಂದು ನಾನೆ ಐಪಿಎಸ್ ಪೋಸ್ಟ್‌ಗೆ ಎಕ್ಸಿಕ್ಯೂಟಿವ್ ಪೋಸ್ಟ್‌ಗೆ ಹಾಕಿಕೊಂಡು ಇವರು ಮಾಡಬೇಕಾದಂತಹ ಕೆಲಸವನ್ನೆಲ್ಲಾ ಬಿಟ್ಟು ಪಾಪ ಆ ಬಡ ಕಾನ್ಸ್‌ಟೇಬಲ್‌ಗಳಿಗೆ ಫೀಲ್ಡ್ ಸ್ಟಾಫ್‌ಗಳನ್ನು ಇನ್‌ಕ್ರೀಸ್ ಮಾಡುವುದಿಲ್ಲ, ವಾಟಾಳ್ ನಾಗರಾಜುರವರು ಹೇಳಿದಂತೆ ಅವರ ಬಗ್ಗೆ ನಮಗೆ ಕರುಣೆ ಇಲ್ಲ, ಅವರ ದಿನನಿತ್ಯದ ಬದುಕು ಸುಧಾರಿಸುವ ಕಡೆಗೆ ನಾವು ಗಮನ ಕೊಡುವುದಿಲ್ಲ. ಗಲಾಟೆಯಾದ ಕಡೆಗಳಿಗೆ ಕಾನ್ಸ್‌ಟೇಬಲ್‌ಗಳನ್ನು ಹೋಗಿ ಎಂದು ಹೇಳುತ್ತಾರೆ, ಅವನಿಗೆ ಅವನ ಹೆಂಡತಿ ಮಕ್ಕಳು ನೆನಪಿಗೆ ಬರುತ್ತಾರೆ, ಅವನು ಏತಕ್ಕಾಗಿ ಮುಂದಕ್ಕೆ ಹೋಗುತ್ತಾನೆ. ಇವತ್ತು ವೆಂಕಟಮ್ಮನಹಳ್ಳಿಯಲ್ಲಿ ಸತ್ತಿದ್ದಾರೆ, ಕಾಂಪನ್‌ಸೇಷನ್‌ನ್ನು ಕೊಟ್ಟರೆ ಆಯಿತು. ಆ ಮಗುವಿಗೆ ತಂದೆಯನ್ನು ಕೊಡುತ್ತೇವಾ ನಾವು? ಆ ಹೆಂಡತಿಗೆ ಗಂಡನನ್ನು ಕೊಡುತ್ತೀವಾ? ಆ ಲಕ್ಷ ರೂಪಾಯಿ ಗಳಿಗೆ ಗಂಡ ಸಿಗುವಹಾಗಿದ್ದರೆ ಖರೀದಿ ಮಾಡುವ ಹಾಗಿದ್ದರೆ, alright, we will do

that. ಫೀಲ್ಡ್ ಸ್ಟ್ಯಾಫ್ ಮುಂದೆ ಹೋಗಬೇಕೇ ಹೊರತು ಯಾವ ಐಪಿಎಸ್ ಆಫೀಸರ್, ಯಾವ ಅಡಿಷನಲ್ ಎಸ್‌ಪಿ, ಯಾವ ಡಿವೈಎಸ್‌ಪಿ ಮುಂದಕ್ಕೆ ಹೋಗುವುದಿಲ್ಲ. ಫೀಲ್ಡ್ ಸ್ಟ್ಯಾಫನ್ನು ಇನ್‌ಕ್ರೀಸ್ ಮಾಡಬೇಕು. ಇಂಟಲಿಜೆನ್ಸ್ ಮೊದಲು ಲೇಬರ್ ವಿಂಗ್‌ಗೆ ಬೇರೆ ಇರುತ್ತಿದ್ದರು. ಸ್ಟೂಡೆಂಟ್ಸ್‌ಗೆ ಹಾಗೂ ಪೊಲಿಟಿಕಲ್ ವಿಂಗ್‌ಗೆ ಬೇರೆ ಬೇರೆ ಇರುತ್ತಿದ್ದರು, ಸರ್ಕಾರದ ವಿರುದ್ಧ ಯಾರಾದರೂ ಪಿತೂರಿಯನ್ನು ಮಾಡುತ್ತಿದ್ದಾರೆಯೇ ಎಂದು ನೋಡುತ್ತಿದ್ದರು. ಟ್ಯಾಕ್ಸ್ ಇವೇಡರ್ಸ್ ಬೇರೆ ಇರುತ್ತಿದ್ದರು, ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಯಾರು ಥೆಫ್ಟ್ ಮಾಡುತ್ತಾರಲ್ಲಾ ಇಂತಹದ್ದಕ್ಕೆಲ್ಲಾ ಸಮಾಜದಲ್ಲಿ ಅವರು ಮಫ್ತಿ ಹಾಕಿಕೊಂಡು ಓಡಾಡುತ್ತಿದ್ದರು. ಇವತ್ತು ಯಾರು ಎಲ್ಲಿದ್ದಾರೋ? ಯಾರಿಗೂ ಗೊತ್ತಿಲ್ಲ. ಇಂಟಲಿಜೆನ್ಸ್ ಫೆಲ್ಯೂರ್ ಎಂದರೆ ಅವನು ಯಾವ ಇಂಟಲಿಜೆನ್ಸ್‌ನಲ್ಲಿ ಕೆಲಸ ಮಾಡಬೇಕು ಎಂಬುದರ ಬಗ್ಗೆ ಓರಿಯೆಂಟೇಷನ್ ಕೊಟ್ಟಿದ್ದರೇ ತಾನೇ? ಅವನಿಗೆ ಟ್ರೈನಿಂಗ್ ಇದ್ದರೆ ತಾನೇ ಮಾಡುತ್ತಾನೆ. ಒಂದು ದಿವಸ ಬೆಳಗಾಗಿ ಎದ್ದು ಈ ಸಮಸ್ಯೆ ಉದ್ಭವವಾಯಿತೆಂದು ಹೇಳಿ ನಾವೆಲ್ಲರೂ ಮಾತನಾಡಿಕೊಳ್ಳುತ್ತೇವೆ. ಮಾನ್ಯ ಅಧ್ಯಕ್ಷರೆ, ತಮ್ಮ ಪೀಠದಿಂದ ಕುಳಿತು ಒಂದು ಉತ್ತಮವಾದಂತಹ ಸಲಹೆಯನ್ನು ಕೊಟ್ಟಿದ್ದೀರಿ. ಹಾಗಾದರೆ ಕಾನ್ಸೆಸ್ ಅರೈಸ್ ಆಗಲಿ, ಪೊಲೀಸ್ ಅಡ್ಮಿನಿಸ್ಟ್ರೇಷನ್‌ನಲ್ಲಿ ನಾವ್ಯಾರು ಇಂಟರ್‌ಫೀಯರ್ ಆಗುವುದು ಬೇಡವೆಂದರೆ ಹೇಳಿದಿರಿ. ಆಲ್‌ರೈಟ್ ಇವತ್ತು ಅದನ್ನು ಮೂವ್ ಮಾಡಲಿ, ಮಾನ್ಯ ಮುಖ್ಯಮಂತ್ರಿಗಳು. We are all for it. ನಮಗೆ ಯಾವ ಆಸಕ್ತಿಯೂ ಇಲ್ಲ. ಇವನು ನನ್ನ ಜಾತಿಯವನು, ಇವನು ನನ್ನ ಉಪಜಾತಿಯವನು ಇವನು ನನ್ನ ಬಂಧು ಮತ್ತು ಬಾವಮೈದ ಇವನು ನಮ್ಮ ಚಿಕ್ಕಪ್ಪ, ದೊಡ್ಡಪ್ಪ, ಇವನಿಗೆ ಅಷ್ಟು ದಿವಸವಾಯಿತು, ಎಂದಾಗ the result is what you are having today. ಸಮಸ್ಯೆಗೆ ಕಾರಣಕರ್ತರು ನಾವು. ನಾವು ಆತ್ಮವಂಚನೆಯನ್ನು ಮಾಡಿಕೊಳ್ಳದೆ, ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿದುಕೊಳ್ಳಬೇಕಾದರೆ ನಮ್ಮನ್ನು ನಾವು ಅಪರಾಧಿ ಸ್ಥಾನದಲ್ಲಿಟ್ಟುಕೊಂಡು ಆತ್ಮವನ್ನು ಶುದ್ಧಿ ಮಾಡಿಕೊಂಡು ಈ ತಪ್ಪಿಗೆ ನಾವು ಪಶ್ಚಾತ್ತಾಪ ಮಾಡಿಕೊಳ್ಳುತ್ತೇವೆ, ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇವೆ ಎಂದು ಹೇಳಿ ನಾವು ಪರಿಹಾರಕ್ಕೆ ಕೈಹಾಕಬೇಕು. ಆ ಜನರು ಎದುರಿಸುತ್ತಿರುವ ಸಮಸ್ಯೆಗೆ ನಾವು ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. of collectively, I am speaking. ನಾವು ಬ್ಯಾಲೆಟ್ ಮೇಲೆ ನಂಬಿಕೆಯನ್ನು ಇಟ್ಟಿರತಕ್ಕಂತಹವರು, ಬುಲೆಟ್ ಮೇಲೆ ನಂಬಿಕೆ ಇಟ್ಟವರಲ್ಲ. We may disagree with those people. ಆದರೆ ನಾವು ಯಾರೋ ಹೇಳಿದಂತೆ extortionists ಪೋಲಿಪುಂಡರು, ಲುಚ್ಚಾಗಳು ಎಂದು ನಾನು ಹೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಾಕೇತ್‌ರಾಜ್ ಸತ್ತ ದಿವಸ ಮರುಕಪಟ್ಟರು, ಎಂಬ ಮಾತನ್ನು ಹೇಳಿದರು. ಅದು ಮುಖ್ಯಮಂತ್ರಿಗಳಲ್ಲ, ಧರ್ಮಸಿಂಗ್‌ರವರು ಹೃದಯದ ಒಳಗಿರುವಂತಹ ಭಾವನೆ, ಯಾವುದೇ ಮನುಷ್ಯನಿಗೆ ಸಾರ್ವಜನಿಕ ಜೀವನದಲ್ಲಿ ಇರುವವನಿಗೆ ಹೃದಯ ಜೀವಂತವಾಗಿರಬೇಕು. ಹೃದಯ ಸತ್ತುಹೋದ ಮೇಲೆ ಅವನು ಯಾವ ಅಧಿಕಾರಕ್ಕೆ ಬಂದರೆ ಏನು ಪ್ರಯೋಜನ? ನಿಮ್ಮಲ್ಲಿ ಆ ಹೃದಯ ಜೀವಂತವಾಗಿದೆ. ಅದಕ್ಕಾಗಿ ಅವತ್ತು ಅವನು ಸತ್ತಾಗ ನಿಮಗೆ ನಾಡಿಮಿಡಿಯಿತು, ಯಾವುದೇ ದೊಡ್ಡ ಸಂಬಂಧವಿರಬೇಕೆಂದಲ್ಲ, ಅಥವಾ ನೀವು ಜನರ ಮೆಚ್ಚುಗೆಯನ್ನು ಗಳಿಸುವುದಕ್ಕೆ ಮಾಡಲಿಲ್ಲ. ನೀವು ತಡೆಯುವುದಕ್ಕೆ ಆಗದೇ ಇರುವಂತಹ ಭಾವನೆ ನಿಮ್ಮನ್ನು ಓವರ್‌ಟೇಕ್ ಮಾಡಿಕೊಂಡು

ಹೊರಗಡೆ ಬಂತು. That should come into effect. ಇನ್ನು ಮುಂದೆ ಮತ್ತೆ ಸಾಕೇತ್‌ರಾಜ ಎನ್ನುವವರು ಯಾರಿದ್ದಾರೆ ಅವರು ಸಾಯಕೂಡದು, ಎನ್‌ಕೌಂಟರ್ಸ್ ಆಗಕೂಡದು ಎನ್‌ಕೌಂಟರ್ ಆಗತಕ್ಕಂತಹ ಸೆನ್ಸಿಟಿವ್ ಸಿಚ್ಯೂಯೇಷನ್ ನಾವು ಉದ್ಭವವಾಗುವುದಕ್ಕೆ ಅವಕಾಶವನ್ನು ಮಾಡಕೂಡದು, ಈ ಜಾಣ್ಮೆಯನ್ನು, ತಾಳ್ಮೆಯನ್ನು ಬುದ್ಧಿವಂತಿಕೆಯನ್ನು, ಧೈರ್ಯವನ್ನು, ಸಮಯಪ್ರಜ್ಞೆಯನ್ನು ಸರ್ಕಾರ ಪ್ರದರ್ಶನ ಮಾಡಬೇಕು. ಅವರು ಎತ್ತಿರುವಂತಹ ಮೈನ್ ಇಷ್ಯೂ ಕಡೆಗೆ ಗಮನ ಕೊಡಬೇಕು. ಇದನ್ನು ನಾವು ಮಾಡಿದರೆ ಬಹುಶಃ ಈ ಸದನದಲ್ಲಿ ಪುನಃ ಪುನಃ ನಕ್ಸಲ್ ವಾದದ ಬಗ್ಗೆ ನಾವು ಮಾತನಾಡಬೇಕಾದ ಅವಶ್ಯಕತೆ ಉದ್ಭವವಾಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ರೆಡ್ಡಿಯವರೇ, ತಮಗೆ ಗೊತ್ತಿದೆ, 1967ನೇ ಇಸವಿಯಲ್ಲಿ ಆದಂತಹ ರಾಜಕೀಯ ಪರಿಣಾಮದಿಂದ ಸಿ.ಪಿ.ಎಂ.ಪಾರ್ಟಿಯನ್ನು ಬಿಟ್ಟುಹೋದಂತಹ ನಕ್ಸಲ್ ವಾದವನ್ನು ಅಡ್ವೋಕೇಟ್ ಮಾಡತಕ್ಕಂತಹವರು ಯಾರಿದ್ದರೋ ಅವರ ಕಾರ್ಯಾಚರಣೆಯ ಫಲವಾಗಿ ಹೈಯಸ್ಟ್ ನಂಬರ್ ಆಫ್ ಕೇಡರ್ಸ್‌ಗಳನ್ನು ಕಳೆದುಕೊಂಡವರು ನಿಮ್ಮ ಪಾರ್ಟಿ. 1967 ರಿಂದ 1972ರವರೆಗೆ ನಡೆದಂತಹ ತೀವ್ರ ಕಾರ್ಯಾಚರಣೆಯಲ್ಲಿ ವೆಸ್ಟ್‌ಬೆಂಗಾಲ್ ರಾಜ್ಯದಲ್ಲಿ ಸತ್ತಷ್ಟು ಸಿಪಿಎಂ ಕಾರ್ಯಕರ್ತರು ಯಾರಿದ್ದಾರೆ ಅಷ್ಟು ಜನ ಯಾರೂ ಎಲ್ಲೂ ಬಲಿಯಾಗಲಿಲ್ಲ. ಅವರು ಇವರನ್ನು renegades ಎಂದರು, ಇವರು ಅವರನ್ನು ಡೆಮಗಾಗ್ಸ್ ಎಂದರು. ಆದರೆ 1977ರಲ್ಲಿ ಅಧಿಕಾರ ಸೂತ್ರವನ್ನು ಕೈಹಿಡಿದಂತಹ ಮಾನ್ಯ ಜ್ಯೋತಿಬಸುರವರು ಸಂಸದೀಯ ಪ್ರಜಾಪ್ರಭುತ್ವ ಇದಕ್ಕೆ ಉತ್ತರ ಎಂದು ಸಾಬೀತು ಮಾಡಿದ್ದಾರೆ. We should salute that man. ಬಹುಶಃ ಆ ತರಹದ ಒಂದು ಸಿಚ್ಯುಯೇಷನ್ ಹ್ಯಾಂಡಲ್ ಆಗದಿದ್ದರೆ ಇವತ್ತು ಇಡೀ ಇಂಡಿಯಾ ದೇಶ ಬೇರೆಯದೇ ಆದ ಒಂದು ಪರಿಸ್ಥಿತಿ ಉಂಟಾಗಿ ನಾವು ಅದನ್ನು ಹೇಳುವುದಕ್ಕಾಗುವುದಿಲ್ಲದಿರುವಂತಹ ಸ್ಥಿತಿಯಲ್ಲಿ ಲ್ಯಾಂಡ್ ಆಗಬೇಕಾಗಿತ್ತು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ರಮೇಶ್‌ಕುಮಾರ್ ಅವರು ಹೇಳಿದ್ದಕ್ಕೆ ಪೂರಕವಾಗಿ ನಾನು ಹೇಳುವುದಾದರೆ ನಕ್ಸಲೈಟ್ ಚಳುವಳಿ ಪ್ರಾರಂಭವಾಗಿದ್ದೇ ಬಂಗಾಳದಲ್ಲಿ. ಬಂಗಾಳದಲ್ಲಿ ಇವತ್ತು ಏಕೆ ಕಡಿಮೆಯಾಗಿದೆಯೆಂದರೆ ಅವರು ಯಾವ ಭೂಮಿ ಸಮಸ್ಯೆಯನ್ನು ಎತ್ತಿಕೊಂಡು ಹೋರಾಟ ಮಾಡಿದರೋ ಅದನ್ನು ಪರಿಣಾಮಕಾರಿಯಾಗಿ ಎಡರಂಗ ಸರ್ಕಾರ ತನ್ನ ಅಧಿಕಾರಾವಧಿಯಲ್ಲಿ ಸಂಪೂರ್ಣ ಮಾಡಿದೆ. ಉಳುವವನಿಗೆ ಭೂಮಿ ಕೊಟ್ಟಿದೆ. ಇಡೀ ಲ್ಯಾಂಡ್ reforms ಬಿಲ್ ಅನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ಹಳ್ಳಿಗಾಡಿನ ಜನಕ್ಕೆ ಭೂಮಿಯನ್ನು ಕೊಟ್ಟಿದೆ. Today, West Bengal stands first state in the country producing highest quantity of rice. It is just because of distribution of lands to the tillers. ಅದೇ ರೀತಿ ಕೇರಳದಲ್ಲಿ ನಮ್ಮ ಪಕ್ಷದ ಸರ್ಕಾರ ಅದೇ ಕೆಲಸ ಮಾಡಿದ್ದರಿಂದ ಆ ಚಳುವಳಿಯನ್ನು ನಿಲ್ಲಿಸಲಿಕ್ಕೆ ಸಾಧ್ಯವಾಯಿತೇ ಹೊರತು, ನಾವು ಬಂದೂಕಿನಿಂದ ಅದನ್ನು ನಿಲ್ಲಿಸಲಿಲ್ಲ, ಬಂದೂಕಿನಿಂದ ನಿಲ್ಲಿಸುವಂತಹ ಪ್ರಯತ್ನವನ್ನು ನಾವು ಮಾಡಲಿಲ್ಲ. We are the victims for their individual annihiliation. ಸಾವಿರಾರು ಕಾರ್ಯಕರ್ತರನ್ನು ನಮ್ಮ ಪಕ್ಷ ಕಳೆದುಕೊಂಡಿದೆ. ಆದರೂ ಕೂಡ ನಮಗೆ ಅವರ ಬಗ್ಗೆ ವೈಯಕ್ತಿಕವಾದ ದ್ವೇಷವಿಲ್ಲ. ಇವತ್ತು ನಾವು ಅವರನ್ನು ಅಪೀಲ್

ಮಾಡಿಕೊಳ್ಳುತ್ತಿದ್ದೇವೆ, ತಪ್ಪು ದಾರಿಗೆ ಹೋಗಿದ್ದೀರಿ, ಶಸ್ತ್ರಾಸ್ತ್ರವನ್ನು ಬಿಟ್ಟು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹೋರಾಟದ ಮುಖಾಂತರ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೇ ಹೊರತು ಯಾರೋ ಕೆಲವು ವ್ಯಕ್ತಿಗಳನ್ನು ಕೊಲೆ ಮಾಡುವುದರಿಂದ ವ್ಯವಸ್ಥೆ ಬದಲಾವಣೆಯಾಗುವುದಿಲ್ಲ. ವ್ಯವಸ್ಥೆ ಬದಲಾವಣೆಗೋಸ್ಕರ ಹೋರಾಟ ನಡೆಸಬೇಕು ಎನ್ನುವ ಅಪೀಲನ್ನು ನಾವು ಇವತ್ತೂ ಕೂಡ ಮಾಡುತ್ತಿದ್ದೇವೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಲೋಕೋ ವಿಭಿನ್ನ ರುಚಿ ಅಂತ ಹೇಳಿ ಯುನಿವರ್ಸಿಟಿ ಕ್ಯಾಂಪಸ್‌ನಲ್ಲಿ ಆರ್.ಎಸ್.ಎಸ್. ಸಿದ್ಧಾಂತವನ್ನು ಪ್ರತಿಪಾದನೆ ಮಾಡುವಂತಹ ಪ್ರೊಫೆಸರ್ಸ್ ಇದ್ದಾರೆ, ಮಾರ್ಕ್ಸ್‌ವಾದವನ್ನು ಪ್ರತಿಪಾದನೆ ಮಾಡುವವರಿದ್ದಾರೆ. ಮಾವೋವಾದವನ್ನು ಹಾಗೂ ಲೆನಿನ್ ವಾದವನ್ನು ಪ್ರತಿಪಾದನೆ ಮಾಡುವಂತಹವರು ಇದ್ದಾರೆ, ಯುನಿವರ್ಸಿಟಿ ಅಂದರೆ it is a campus of learning. ಪ್ರತಿಯೊಬ್ಬರೂ ಕೂಡ ತಾವು ನಂಬಿರತಕ್ಕಂತಹ ಸಿದ್ಧಾಂತವನ್ನು ಪ್ರಾಪಗೇಟ್ ಮಾಡಲಿಕ್ಕೆ they choose it; that is the most fertile area. Nothing wrong with it. Sympatheser ಹಂಟ್ ಮಾಡಬೇಕು ಅನ್ನ ತಕ್ಕದ್ದಲ್ಲಿ ಅವರನ್ನು crucify ಮಾಡಬೇಕು ಎನ್ನತಕ್ಕದ್ದಲ್ಲ. ಆ ರೀತಿಯ ಸ್ಟ್ಯಾಂಡ್ ಅನ್ನು ನಾವು ತೆಗೆದುಕೊಳ್ಳುವುದರಿಂದ ಅದನ್ನು ಮತ್ತಷ್ಟು ಹೆಚ್ಚು ಮಾಡಿ militants, militancy ಹೆಚ್ಚು ಮಾಡುತ್ತೇವೆ. ಆ ಒಂದು ಆಘಾತಕಾರಿಯಾದ ಕೆಲಸಕ್ಕೆ ಕೈ ಹಾಕಬಾರದು ಎನ್ನುವ ಮಾತನ್ನು ಹೇಳಿ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ, ಅವರು ರೈಸ್ ಮಾಡಿರುವಂತಹ ಬೇಸಿಕ್ ಇಷ್ಯೂಸ್ ಅನ್ನು ಅತ್ಯಂತ ಶೀಘ್ರದಲ್ಲಿ ನಿವಾರಣೆ ಮಾಡಲಿಕ್ಕೆ ನಾವು ಪ್ರಯತ್ನ ಮಾಡತಕ್ಕದ್ದು, ಪೊಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿರುವ ನಿಷ್ಠಾವಂತ ಅಧಿಕಾರಿಗಳನ್ನು ಚೂಸ್ ಮಾಡಿ ಇದಕ್ಕೊಂದು squad ಅನ್ನು ಮಾಡಿಕೊಂಡು ಅವರಿಗೆ ಸ್ಪೆಷಲ್ ಓರಿಯಂಟೇಷನ್ ಕೊಟ್ಟು ಡಿಪಾರ್ಟ್‌ಮೆಂಟನ್ನು ಮಾಡ್ರನೈಸ್ ಮಾಡುವಂತಹದ್ದು, field staff ಕಡೆಗೆ ಹೆಚ್ಚು ಒತ್ತು ಕೊಡುವಂತಹದ್ದು, ನಕ್ಸಲ್‌ವಾದದ ಬಗ್ಗೆ ಏನು ಅಭಿಪ್ರಾಯ ಕೊಡುತ್ತಾರೆ. ಉದಾಹರಣೆಗೆ ಅವರು ಹೆದರಿಸಿಲಿಕ್ಕೆ ಬಂದು ಊಟ ಕೇಳಿದರು, ದುಡ್ಡು ಕೇಳಿದರು, ಹಾಸ್ಟೆಲ್‌ಗೆ ನುಗ್ಗಿದರು ಕೆಲವು stray incidences ಅಲ್ಲಿ ಇಲ್ಲಿ ಆಗಿರಬಹುದು, ಆಗಿಲ್ಲ ಅಂತ ನಾನು ಹೇಳುವುದಿಲ್ಲ. ಆದ ಮಾತ್ರಕ್ಕೆ that is the contents of naxalism or naxalites ಎಂದು ಹೇಳತಕ್ಕಂಥದ್ದು ಅಪರಾಧವಾಗುತ್ತದೆ. ಮಾನ್ಯ ರೆಡ್ಡಿಯವರು ಹೇಳಿದಂತೆ ಅವರು they are misguided youth, ಅಂತ ತಿಳಿದುಕೊಳ್ಳಬಹುದು, ನಮಗೆ ತಾಳ್ಮೆ ಇದೆ, ಅವರಿಗೆ ತಾಳ್ಮೆ ಇಲ್ಲ, disgruntled ಆಗಿದ್ದಾರೆ disillusioned ಆಗಿದ್ದಾರೆ ಈ ವ್ಯವಸ್ಥೆ ವಿರುದ್ಧ ಹೋರಾಡಬೇಕು ಎಂದು ಬಂದೂಕನ್ನು ಕೈಯಲ್ಲಿಟ್ಟುಕೊಂಡಿದ್ದಾರೆ. ನಾವು ಅವರಿಗೆ ಇದು ಸರಿಯಲ್ಲ ಅಂತ ಹೇಳಬೇಕೆನ್ನುವ ಮಾತನ್ನು ಹೇಳಿ ನನಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಸನ್ಮಾನ್ಯ ಅಧ್ಯಕ್ಷರೆ, ನಕ್ಸಲೈಟ್ ಮತ್ತು ಉಗ್ರಗಾಮಿಗಳ ಸಮಸ್ಯೆಯಿಂದ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆಯೆಂದು ಇದುವರೆಗೆ ಚರ್ಚೆಯಾಗಿದೆ. ನಾನು ಒಂದು ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ.

ಬೆಂಗಳೂರಿನಲ್ಲಿ ಸಾಕಷ್ಟು ಐ.ಟಿ.ಕಂಪನಿಗಳು, ಕಾರ್ಖಾನೆಗಳು 24 ಗಂಟೆಗಳ ಕಾಲ ಕೆಲಸ ಮಾಡುತ್ತಿವೆ. ಇಂತಹ ಕಂಪೆನಿಗಳಲ್ಲಿ ಕೆಲಸ ಮಾಡುವಂತಹ ಕೆಲವು ಇಂಜಿನಿಯರ್ಸ್ ರಾತ್ರಿ ಹೊತ್ತು ಸ್ವಲ್ಪ ಲೇಟಾಗಿ ಮನೆಗೆ ವಾಪಸ್ಸಾಗುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ನಮ್ಮ ಪೋಲೀಸರು ಅವರನ್ನು ತಡೆದು ಹೆದರಿಸಿ, ಬೆದರಿಸಿ ಅವರಿಂದ ಹಣವನ್ನು ವಸೂಲು ಮಾಡುತ್ತಿದ್ದಾರೆ. ಇದು ನಮ್ಮ ಡಿ.ಜಿ.ಪಿ.ಯವರ ಗಮನಕ್ಕೆ ಬರಲಿಲ್ಲವೇ? ಇದು ಎಲ್ಲಿ ನಡೆಯುತ್ತದೆ ಎಂದರೆ ನಮ್ಮ ಶಾಸಕರ ಭವನದ ಹಿಂದೆ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳ ಮನೆಯ ಮುಂದಿನ ರಸ್ತೆಯಲ್ಲಿ ನಡೆಯುತ್ತಿದೆ. ರಾತ್ರಿ ಹೊತ್ತು ಮರ್ಯಾದಸ್ಥ ಮನೆತನದ ಹುಡುಗರನ್ನು ಹೆದರಿಸಿ ಬೆದರಿಸಿ ವಸೂಲು ಮಾಡುತ್ತಾರೆ, ಅವರೆಲ್ಲಾ ಐ.ಟಿ.ಕಂಪೆನಿಗಳಲ್ಲಿ ಕೆಲಸ ಮಾಡುವಂತಹ ಯುವ ಇಂಜಿನಿಯರ್ಸ್, ಅವರು ಮನೆಗೆ ಹೋಗುವಾಗ ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೊರಟಿದ್ದೀಯೇ ಯಾಕೆ ಬಂದಿರಿ ಎಂದು ಪ್ರಶ್ನಿಸುವುದು. ಅದಕ್ಕೆ ಅವರು ನಮ್ಮ ಕಂಪೆನಿಯಲ್ಲಿ ಸ್ವಲ್ಪ ಕೆಲಸ ಇತ್ತು ಅದಕ್ಕೆ ಲೇಟಾಗಿ ಮನೆಗೆ ಹೋಗುತ್ತಿದ್ದೇನೆಂದು ಹೇಳಿದರೆ ಅವರು ಕೇಳುವುದಿಲ್ಲ, ಇಲ್ಲ ನೀನು ಕುಡಿದಿರುವೆ ಅಂತ ಕೇಸ್ ಹಾಕುತ್ತೇವೆ, ಮತ್ತೊಂದು ಕೆಲಸ ಮಾಡಿರುವೆ ಅಂತ ಕೇಸ್ ಹಾಕುತ್ತೇವೆ ಎಂದು ಹೆದರಿಸಿದಾಗ ಅವರು ಮರ್ಯಾದೆಗೆ ಅಂಜಿ ಏನು ಕೇಳಿದರೂ ಕೊಟ್ಟು ಹೋಗುತ್ತಾರೆ. ಒಂದು ವೇಳೆ ಅವರಲ್ಲಿ ಸಫಿಷಿಯೆಂಟ್ ಹಣ ಇಲ್ಲದಿದ್ದಾಗ ಕೈಯಲ್ಲಿರುವ ಉಂಗುರ, ಕೊರಳಲ್ಲಿರುವ ಚೈನು, ಕೈಗಡಿಯಾರವನ್ನು ಕಸಿದುಕೊಳ್ಳುವುದು. ಇದು ದಿನನಿತ್ಯ ನಮ್ಮ ಬೆಂಗಳೂರಿನಲ್ಲಿ ನಡೆಯುವಂತಹ ಘಟನೆಯಾಗಿದೆ. ಹಾಗಾಗಿ ನಾನು ಡಿ.ಜಿ.ಪಿ. ಯವರಿಗೆ ಒಂದು ವಿನಂತಿ ಮಾಡುತ್ತೇನೆ ಏನೆಂದರೆ ರಾತ್ರಿ ಹೊತ್ತು ಅವರು ತಮ್ಮ ಕೆಂಪು ಲೈಟಿನ ವಾಹನವನ್ನು ಬಿಟ್ಟು ಒಂದು ಆಟೋ, ಮೋಟಾರ್ ಬೈಕ್‌ನಲ್ಲಿ ಹೋಗಿ ನೋಡಲಿ ನಾನು ಹೇಳಿದ್ದು ಸತ್ಯವೇ? ಅಥವಾ ಅಸತ್ಯವೇ ಎಂದು, ಈ ರೀತಿಯಾದರೆ ನಮ್ಮ ಕಾನೂನು ಸುವ್ಯವಸ್ಥೆ ಯಾವ ರೀತಿ ಸುಧಾರಿಸುತ್ತದೆ? ಪ್ರಾಮಾಣಿಕರನ್ನು, ದಕ್ಷರನ್ನು ಆರಿಸಿ ನೀವು ಪೋಸ್ಟಿಂಗ್ ಮಾಡಿದರೆ ಮಾತ್ರ ಪರಿಸ್ಥಿತಿ ಸುಧಾರಿಸುತ್ತದೆ. ಇವತ್ತು ಎಸ್.ಪಿ.ಲೆವಲ್‌ನ ಜಿಲ್ಲಾಧಿಕಾರಿಗಳು 1ನೇ ತಾರೀಖಿಗೆ ಪೋಲೀಸ್ ಸ್ಟೇಷನ್‌ಗಳಿಗೆ ತಿಂಗಳ ವಸೂಲಿ ಮಾಡುವುದಕ್ಕೆ ತಿರುಗಾಡಿದರೆ ನೀವು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಯಾವ ರೀತಿ ಕಾಪಾಡಲಿಕ್ಕೆ ಸಾಧ್ಯವಾಗುತ್ತದೆ?

(ಈ ಹಂತದಲ್ಲಿ ಸಭಾಧ್ಯಕ್ಷರ ಪೀಠವನ್ನು ಮಾನ್ಯ ಎ.ಟಿ.ರಾಮಸ್ವಾಮಿಯವರು ಅಲಂಕರಿಸಿದರು)

ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರಕ್ಕೆ ನಾನು ಒಂದು ಸಲಹೆಯನ್ನು ಮಾಡಲಿಕ್ಕೆ ಇಷ್ಟಪಡುತ್ತೇನೆ. ಆಗಲೇ ಮಾನ್ಯ ಜಯಪ್ರಕಾಶ್ ಹೆಗ್ಡೆ ಹಾಗೂ ರಮೇಶ್‌ಕುಮಾರ್ ಅವರು ಹೇಳಿದರು ಯಾರದೇ ರೆಕ್‌ಮೆಂಡೇಷನ್ ಮೇಲೂ ಮಾಡುವ ಅವಶ್ಯಕತೆ ಇಲ್ಲವೆಂದು ಹೇಳಿದರು. ಮಾಡುವುದು ಬೇಡ. ಆದರೆ ಒಂದು ಮಾತನ್ನು ಸರ್ಕಾರ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಯಾವುದೇ ಶಾಸಕರು ಇರಲಿ, ಯಾವುದೇ ಸಚಿವರು ಇರಲಿ ಅವರ ಕ್ಷೇತ್ರದಲ್ಲಿ ಯಾವ ಜನಾಂಗದ ಅಧಿಕಾರಿಗಳು ಹೆಚ್ಚಾಗಿದ್ದಾರೆ ಆ ಜನಾಂಗದ ಅಧಿಕಾರಿಗಳನ್ನು ನೀವು ಪೋಸ್ಟಿಂಗ್ ಮಾಡಿದರೆ ಅಲ್ಲಿ ಲಾ ಅಂಡ್ ಆರ್ಡರ್ ವ್ಯವಸ್ಥೆ ಸರಿಯಾಗಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ಬಹುಸಂಖ್ಯಾತ ಜನರಿರುವ ಕಾರಣದಿಂದ, ಈ ಓಟಿನ ಒಂದು ಅಂಜಿಕೆಗಾಗಿ ಅಂತಹ ಭ್ರಷ್ಟ ಅದಕ್ಷ ಅಧಿಕಾರಿಗಳನ್ನು

ನಾವು ಇಟ್ಟುಕೊಳ್ಳಬೇಕಾಗಿದೆ ಆದ್ದರಿಂದ ನಾವು ಈಗಾಗಲೇ ಸಲಹೆ ಮಾಡಿದಂತೆ ಉತ್ತಮ ಅಧಿಕಾರಿಗಳನ್ನು ಹುಡುಕಿ, ಗುರುತಿಸಿ ಪೋಸ್ಟಿಂಗ್ ಮಾಡಿದರೆ ಸ್ವಲ್ಪಮಟ್ಟಿಗೆ ಅವ್ಯವಸ್ಥೆಯನ್ನು ಕಡಿಮೆ ಮಾಡಬಹುದು. ಇನ್ನು ಕೆಲವು ಅಧಿಕಾರಿಗಳು ಮಟ್ಕಾ ಅಡ್ಡೆಗಳನ್ನು ಕೆಲವು ಗುಂಡಾ ಹುಡುಗರನ್ನು ಇಟ್ಟುಕೊಂಡು ನಡೆಸುತ್ತಿದ್ದಾರೆ, ಇಸ್ಪೀಟು ಕ್ಲಬ್‌ಗಳನ್ನು ಅವರೇ ನಡೆಸುತ್ತಿದ್ದಾರೆ, ಇದು ಸತ್ಯವಾದಂತಹ ಮಾತು, ಇದರಲ್ಲಿ ಏನೂ ಅಸತ್ಯವಿಲ್ಲ, ನಾವು ಎಷ್ಟೋ ಕಡೆ ಹೇಳಿದ್ದೇವೆ, ಸಂಬಂಧಪಟ್ಟವರ ಗಮನಕ್ಕೆ ತಂದರೂ ಏನೂ ಉಪಯೋಗವಾಗಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಸುವುದೇನೆಂದರೆ, ಈ ದುಷ್ಟ, ದುರಹಂಕಾರಿ ಅಧಿಕಾರಿಗಳನ್ನು ಒಂದೇ ಸ್ಥಳದಲ್ಲಿ ಬಹಳ ವರ್ಷಗಳ ಕಾಲ ಕೆಲಸ ಮಾಡಲಿಕ್ಕೆ ಬಿಡದೆ ಅವರನ್ನು ಇಮ್ಮಿಡಿಯೇಟ್ ಆಗಿ ನಾನ್–ಎಕ್ಸಿಕ್ಯೂಟೀವ್ ಕಡೆ ಪೋಸ್ಟಿಂಗ್ ಕೊಡಿ, ಬೇರೆ ಬೇರೆ ಕಡೆ ಹೋದರೆ ಅವರಿಗೆ ಕಷ್ಟ ಗೊತ್ತಾಗುತ್ತದೆ. ಇಂತಹ ಕೆಲಸವನ್ನು ಸರ್ಕಾರ ಮಾಡಿದರೆ ಮಾತ್ರ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲಿಕ್ಕೆ ಆಗುತ್ತದೆ, ಜನರ ರಕ್ಷಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಇಲ್ಲದೇ ಹೋದರೆ ಇದು ಯಾವ ಕಾಲಕ್ಕೂ ಸರಿ ಮಾಡಲಿಕ್ಕೆ ಆಗುವುದಿಲ್ಲ, ಆದ್ದರಿಂದ ಮೊದಲು ಭ್ರಷ್ಟರನ್ನು ಗುರುತಿಸಿ ಅವರನ್ನು ಹೊರಗೆ ಹಾಕುವಂತಹ ಕೆಲಸವನ್ನು ಸರ್ಕಾರ ಮಾಡಲಿ ಎಂದು ಸಲಹೆ ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) : ಮಾನ್ಯ ಛೇರ್ಮನ್‌ರವರೆ, ಎರಡೇ ನಿಮಿಷದಲ್ಲಿ ನಕ್ಸಲೈಟ್ ಬಗ್ಗೆ ಯಾವ ರೀತಿ ನಾವು ಅವರನ್ನು ಸೇವ್ ಮಾಡಬೇಕೊ ಅಥವಾ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕೊ ಅನ್ನುವುದರ ಬಗ್ಗೆ ಹೇಳುತ್ತೇನೆ. ನಕ್ಸಲೈಟ್‌ರವರಿಂದ ಬಹಳ ತೊಂದರೆ ಯಾರಿಗೆಂದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ, ಅವರು ಯಾವ ಗುರಿಯಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಯೋಚಿಸುತ್ತಾರೆ. ನಕ್ಸಲೇಟ್ಸ್ ಬಹಳ ತೊಂದರೆ ಕೊಟ್ಟರೆ ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದಾರೆಂದು ಹೇಳುತ್ತಾರೆ. ಒಂದು ವೇಳೆ ಅವರ ಮೇಲೆ ಕ್ರಮ ಕೈಗೊಂಡರೆ ಎನ್‌ಕೌಂಟರ್ ಮಾಡಿಬಿಟ್ಟರು ಅಂತ ಹೇಳುತ್ತಾರೆ. ಮುಖ್ಯಮಂತ್ರಿಯವರಿಗಿಂತ ನಕ್ಸಲೈಟ್ ಪೋಸ್ಟ್ ಈಜಿಯಾಗಿದೆ. ಸುಮ್ಮನಿದ್ದರೆ ಮುಖ್ಯಮಂತ್ರಿಗಳಿಗೆ ಕ್ರಮ ತೆಗೆದುಕೊಳ್ಳಬೇಕು ಅಂತ ಹೇಳುತ್ತಾರೆ. ಕ್ರಮ ಕೈಗೊಂಡರೆ ಅವರನ್ನು ಕರೆದು, ಕುಳಿತು, ಅವರೊಂದಿಗೆ ಮಾತನಾಡಿ ಏನಾದರೊಂದು ವ್ಯವಸ್ಥೆ ಮಾಡಬೇಕೆಂದು ಹೇಳುತ್ತಾರೆ. ಈಗ ಅವರಿಗೆ ಲ್ಯಾಂಡ್ಸ್ ಕೊಟ್ಟರೆ ನಕ್ಸಲೈಟ್ ಬಿಡುತ್ತೇವೆ ಅಂತ ಹೇಳುತ್ತಾರೆ ಅವರು ಬಂದು ಕೇಳಿದಾಗ ಕೊಡಿ ಬೇಕಾದಷ್ಟು ಲ್ಯಾಂಡ್ಸ್ ಇದೆ, ನಾಳೆ ಬಂದು ಅವರು 50–80 ಕೊಡಿ ಅಂತ ಕೇಳುತ್ತಾರೆ, ಆಗ ಏನು ಮಾಡುತ್ತೀರಿ? ಇವನ್ನೆಲ್ಲಾ ಚಿಂತನೆ ಮಾಡಿಕೊಂಡು you must take appropriate action on this. Who is naxalite? What for they are naxalites? ಅವರು ಯಾವ ರೀತಿಯಿಂದ ನಕ್ಸಲೈಟ್ ಆಗಿದ್ದಾರೆ ಈಗ ಮಾಜಿ ಸ್ಪೀಕರ್ ಮಾನ್ಯ ರಮೇಶ್‌ಕುಮಾರ್ ಹೇಳಿದರು, ಪೋಲೀಸರಾಗಲೀ, ಅಧಿಕಾರಿಗಳಾಗಲೀ ನಮ್ಮೂರಿನಲ್ಲಿ ಇಲ್ಲ, ಅವರುಗಳು ಬೇರೆ ಕಡೆಯಿಂದ ಬರುವುದರಿಂದ they are taking it easy etc. Of course, it is true, or may not be true. But ನನ್ನ ಅಭಿಪ್ರಾಯವೇನೆಂದರೆ ನಕ್ಸಲೈಟ್ಸ್ ನಿಜವಾಗಿಯೂ ಸರ್ಕಾರಕ್ಕೆ ತೊಂದರೆ ಮಾಡಬೇಕೆಂದು ಪ್ರಯತ್ನಿಸುತ್ತಿದ್ದಾರೆಯೇ? ಯಾರಾದರೂ ಶಾಸ್ತ್ರವನ್ನು

ನೋಡಿದ್ದೀರಾ? ನಕ್ಸಲೈಟ್ಸ್ ಅವರದು ವಾಟ್ ಈಸ್ ದಿ ರಿಯಾಲಿಟಿ ಅಂತ ಕೇಳಿದ್ದೀರಾ? ಕೆಲವರು ಹೇಳುತ್ತಾರೆ. I read it in the paper also. Some Judge said: ಅವರು ಕಾಡಿನಲ್ಲಿ ಏತಕ್ಕೆ ಇರಬೇಕು, ಸಿಟಿಯಲ್ಲಿ ಬಂದು ಇರಬಹುದು ತಾನೇ, ಕಾಡಿನಿಂದ ಏಕೆ ಹೋರಾಟ ಮಾಡಬೇಕು ಎಂದು ಕೇಳುತ್ತಾರೆ. Already, we have naxalites here. ಯಾವನಾದರೂ ಒಬ್ಬ ಅಂಗಡಿಯಲ್ಲಿ ಸಾಮಾನ್ಯ ನೌಕರನಿಗೆ ಸಂಬಳ ಕೊಟ್ಟಿಲ್ಲವೆಂದರೆ, ಅವನು ಹೋಗಿ ದಾದಾಗಿರಿ ಮಾಡುವನ ಹತ್ತಿರ ಹೇಳಿದರೆ, ಅವನ ಯಜಮಾನ ಹೋಗುತ್ತಾನೆ. ಏನ್ರಿ ನೀವು ಹೀಗೆ ಮಾಡಿದಿರಿ, ಇನ್ನೂರು ರೂಪಾಯಿಗೋಸ್ಕರ ಇವನು ಅವನನ್ನು ಥ್ರಟನ್ ಮಾಡಿ, 20 ಸಾವಿರ ರೂ. ಕೊಡಿ ಎಂದು ಕೇಳುತ್ತಾನೆ. Already we have here. ಅವನಾದರೂ ಕೊನೇಪಕ್ಷ ಅರಣ್ಯದಲ್ಲಿ ಕುಳಿತುಕೊಂಡು ಈ ತರಹ ಕೆಲಸ ಮಾಡಬೇಕೆಂದು ಹೇಳುತ್ತಾನೆ. ಜೊತೆಗೆ ನಾವು ಏನು ಹೇಳುತ್ತೇವೆ, ನಕ್ಸಲೈಟ್ಸ್ ಎಂದರೆ, ಅವರು ಸ್ಯಾಂಡಲ್ ವುಡ್‌ನ್ನೆಲ್ಲಾ ಕಟ್ ಮಾಡುತ್ತಾರೆ ಎಂದು ಹೇಳುತ್ತಾರೆ. ನನ್ನ ಊರಿನಲ್ಲಿ, ನನ್ನ ಎಸ್.ಪಿ. ಮನೆಯಲ್ಲೆ ಸ್ಯಾಂಡಲ್‌ವುಡ್ ಕಟ್ ಮಾಡಿದ್ದಾನೆ. ಅವನನ್ನು ಕಳ್ಳ ಎಂದು ಹೇಳುತ್ತೀರಾ, ನಕ್ಸಲೈಟ್ಸ್ ಎಂದು ಹೇಳುತ್ತೀರಾ? In my city, in my SP's house, they cut off. what you see then? ಸ್ಯಾಂಡಲ್ ವುಡ್ ಕಟ್ ಮಾಡುವವರೆಲ್ಲಾ ನಕ್ಸಲೈಟ್‌ಗಳಲ್ಲ. ಯಾವನು ಸ್ಯಾಂಡಲ್ ವುಡ್ ಕಟ್ ಮಾಡುವುದೇ ಇಲ್ಲ, ಅವನು ನಕ್ಸಲೈಟ್ ಅಲ್ಲ. These are all not segregated in this. Naxalites are depressed persons. ಯಾವ ಕಾರಣದಿಂದ depressed person ಆಗುತ್ತಾನೆ? Take it this way. ಯಾವುದೇ ಒಂದು ಕಾರಣದಿಂದ ಅವನು ಪೋಲೀಸ್ ಸ್ಟೇಷನ್‌ಗೆ ಹೋಗುತ್ತಾನೆ. ನಿಜವಾಗಿಯೂ ಕೆಲವು ಪೋಲೀಸ್ ಆಫೀಸರು ಇರಬಹುದು ಅಥವಾ ಇಲ್ಲವೋ. But, in my life, in my constituency, it is very difficult to find out such good officers. ಅವರದು ಏನು ಐಡಿಯಾ ಎಂದರೆ, ಅವನನ್ನು ಕೇರ್‌ಲೆಸ್ ಆಗಿ, ನೆಗ್ಲೆಟ್ ಮಾಡಿ, ಮಾಡಿ he will get depressed ಕೊನೆಗೆ, ಅವನು ಯಾರ ಮೇಲೆ ಚಾಲೆಂಜ್ ಮಾಡುತ್ತಾನೆ ಎಂದರೆ ಈ ಪೋಲೀಸಿನವರಿಗೆ ಪಾಠ ಕಲಿಸಬೇಕೆಂದು ನಕ್ಸಲೈಟ್ ಆಗಿ, ಕೊನೆಗೆ ಅವನು ಸರ್ಕಾರದ ಮೇಲೆಯೇ ಬರುತ್ತಾನೆ. ಒಬ್ಬ ಮಂತ್ರಿಯನ್ನು ಕಿಡ್ನಾಪ್ ಮಾಡಿದರೆ ನನಗೆ ಪಾಪ್ಯುಲಾರಿಟಿ ಆಗುತ್ತೆ, ಒಬ್ಬ ಮುಖ್ಯಮಂತ್ರಿಗೆ ಬಾಂಬ್ ಇಟ್ಟರೆ ನನಗೆ ಪಾಪ್ಯುಲಾರಿಟಿ ಆಗುತ್ತೇನೋ, ಅವತ್ತೇ ಇವರು ನಮ್ಮನ್ನು ಕರೆದು ಮಾತನಾಡುವುದು, ಇಲ್ಲವಾದರೆ ಅವರು ನಮಗೆ ಬೆಲೆ ಕೊಡುವುದಿಲ್ಲವೆಂಬ ಅಭಿಪ್ರಾಯ ಅವರಿಗೆ ಬಂದಿದೆ. ಅಂಥವರಿಗೆ ಬೆಳೆಸುವುದು ಯಾರೆಂದರೆ, the Police Department, no doubt. ನೀವು ಏನು ಮಾಡುತ್ತೀರೆಂದರೆ, ನಕ್ಸಲೈಟ್‌ಗಳನ್ನು ಹಿಡಿಯುವುದಕ್ಕೆ ಕಳುಹಿಸುತ್ತಾರೆಂದರೆ, ಆ ಪೋಲೀಸ್ ಬಾಯಲ್ಲಿ ಏನು ಬರುತ್ತದೆಂದರೆ, ನಮಗೆ ಪನಿಷ್‌ಮೆಂಟ್‌ಗೆ ಹಾಕುತ್ತಾರೇನೋ ಎಂಬ ಸುದ್ದಿ ಇದೆ, ಆ ಫಾರೆಸ್ಟ್‌ಗೆ ಹಾಕುತ್ತಾರೆ ಎಂದರೆ ಅದು ಪನಿಷ್‌ಮೆಂಟೇ? ಸಿಟಿ ಕಮೀಷನರ್ ಆಗಬೇಕು, ಸಿಟಿ ಅಸಿಸ್ಟೆಂಟ್ ಕಮೀಷನರ್ ಆಗಬೇಕು, ಸಿಟಿಯಲ್ಲಿರತಕ್ಕ ಒಳ್ಳೆಯ ಪೋಲೀಸ್ ಸ್ಟೇಷನ್‌ಗಳಲ್ಲಿ ಹಾಕಬೇಕು, ಯಾರು ಯಾರಿಗೆ ಆಸಕ್ತಿ ಇದೆಯೆಂದು ನಮ್ಮ ಮುಖ್ಯಮಂತ್ರಿಗಳು ಒಂದು ಪ್ರಕಟಣೆ ಮಾಡಲಿ, 99% police officers will put an application. ಆ ತರಹದ ನಕ್ಸಲೈಟ್ಸ್‌ಗಳನ್ನು

ಕಂಟ್ರೋಲ್ ಮಾಡುವುದಕ್ಕೂ ಸಬ್ ಇನ್‌ಸ್ಪೆಕ್ಟರ್‌ನಿಂದ ಹಿಡಿದು ಹೈಯರ್ ಆಫೀಸರ್‌ವರೆಗೂ ಯಾರು ವಿಲ್ಲಿಂಗ್‌ನಲ್ಲಿ ಹೋಗುತ್ತೇವೆಂದು ಅಪ್ಲಿಕೇಷನ್ ಕೊಡಿ ಎಂದು ಕೇಳಿ. ಅವತ್ತೇ ಇವರು ನನ್ನ ಮಕ್ಕಳು ಓದುತ್ತಿದ್ದಾರೆ. My children studying here. ನನಗೆ ಹೀಗೆ ಆಗಿದೆ, ಹಾಗೆ ಆಗಿದೆ ಎಂದು ಹೇಳುತ್ತಾರೆ. That is their administration. ನಕ್ಸಲೈಟ್ಸ್‌ನ್ನು ಕರೆದು ನಾನು ಮಾತನಾಡುತ್ತೇನೆಂದು ಏನು ಮುಖ್ಯಮಂತ್ರಿಗಳು ಹೇಳಿದ್ದಾರೆ, that is reasonable. You have to speak to them. ಯಾರನ್ನು ಕರೆಯುತ್ತೀರಿ? How do you know, who is the leader? How do you know that he is a Naxalite? ಅವರ ಗುಂಪಿನಲ್ಲಿ ಇನ್ನೂರು ಜನ ಇರಬಹುದು. ಒಬ್ಬರು ನಕ್ಸಲೈಟ್ ಹೆಸರಿನಲ್ಲಿ ಕ್ರಿಮಿನಲ್ ಮೈಂಡ್ ಇಟ್ಟುಕೊಳ್ಳುತ್ತಾನೋ ಯಾವನಾದರೂ ದೊಡ್ಡವರನ್ನು ಸಾಯಿಸಬೇಕು ಎಂದು ಮೈಂಡ್‌ನಲ್ಲಿ ಇರುವವನೂ ಈ ನಕ್ಸಲೈಟ್ ಆಗಿ ತೆಗೆದುಕೊಳ್ಳುತ್ತೀರಾ ಇಲ್ಲವೇ vengeance ಮೇಲೆ ತೆಗೆದುಕೊಳ್ಳುತ್ತೀರಾ, ಇಲ್ಲವೇ ಇವರನ್ನು ಕ್ರೈಮ್ ಎಂದು ತೆಗೆದುಕೊಳ್ಳುತ್ತೀರಾ? How you are going to segregate? But, give an opportunity to the Naxalites to know what their demands, reforms, socioeconomic development ಕೇಳುತ್ತಾರೋ, ಹೌದು ನಿಜವಾಗಿಯೂ ಕೇಳುತ್ತಾರೋ, ಜಮೀನು ಕೇಳುತ್ತಾರೋ ಕೊಡಿ. ಆಮೇಲೆ ನಮಗೆ ಬೌಂಡರಿ ಹಾಕಿಕೊಡಿ ಎಂದು ಕೇಳುತ್ತಾನೆ, ಕೊಡಿ. ನೀವು ಇಲ್ಲಿರುವ ಜನಕ್ಕೆ ಏಕೆ ಕೊಡುವುದಿಲ್ಲ? ಇಲ್ಲಿರುವವರಿಗೇ ಮನೆ ಕೊಡುವುದಿಲ್ಲ. ಇಲ್ಲಿರುವವರಿಗೇ ಅರ್ಕಾವತಿ ಕ್ಲಿಯರ್ ಮಾಡಿಲ್ಲ. ಇನ್ನು ಫಾರೆಸ್ಟ್‌ನಲ್ಲಿರುವವರಿಗೆ ಹೇಗೆ ಕ್ಲಿಯರ್ ಮಾಡುತ್ತೀರಿ? ಅದು ಒಂದು. ಎರಡನೆಯದು, ಚಿಕ್ಕಮಗಳೂರಿನಲ್ಲಿ ಸರ್ಕಾರದವರು ಏನು ಮಾಡಿದ್ದಾರೆಂದರೆ, ಅಲ್ಲಿ ವಿಲೇಜ್‌ನಲ್ಲಿ ಇರುವವರೆಲ್ಲರೂ ಫಾರೆಸ್ಟ್‌ನಲ್ಲಿದ್ದಾರೆ. They are living in the forest. As a safety measure, they have shifted. What for? ಕೇರಳದಲ್ಲಿರುವವರು ಯಾರೋ ಇವರನ್ನು ಉಪಯೋಗ ಮಾಡಿ ಸ್ಯಾಂಡಲ್ ವುಡ್‌ನ್ನೆಲ್ಲಾ ಕಟ್ ಮಾಡುತ್ತಾರೆಂದು ಹೇಳಿದರೆ, What about your Conservators? Why that Department? What about your Forest Officer? ಒಬ್ಬ ಅಸಿಸ್ಟೆಂಟ್ ಫಾರೆಸ್ಟ್ ಆಫೀಸರೋ, ಒಬ್ಬರು ಫಾರೆಸ್ಟ್ ಆಫೀಸರೋ ಡಬಲ್ ರೋಡ್ ಹಾಕುವುದಕ್ಕೋ, my constituency work, I am telling.

ಶ್ರೀ ಎಸ್.ಎಲ್.ಧರ್ಮೇಗೌಡ (ಬೀರೂರು) : ಮಾನ್ಯ ಸಭಾಧ್ಯಕ್ಷರೆ, ನನ್ನದೊಂದು ಚಿಕ್ಕ ಸಬ್‌ಮಿಷನ್, ಆಮೇಲೆ ಮಾನ್ಯ ಸದಸ್ಯರು ಮುಂದುವರೆಸಬಹುದು. ಇವತ್ತು ನಾವು ನಕ್ಸಲೈಟ್ಸ್ ಬಗ್ಗೆ ಮಾತನಾಡುತ್ತಿದ್ದೇವೆ. ಪ್ರಾಯಶಃ ಮಾತನಾಡಿದಂಥ ಪ್ರತಿಯೊಬ್ಬ ಸದಸ್ಯರೂ ಕೂಡ, Naxalism has risen because of police failure. ಎಂದು ತಾವು ಮಾತನಾಡುತ್ತಿದ್ದೀರಿ. ಪೊಲೀಸ್ ಫೇಲ್ಯೂರ್ ಒಂದು ಕಡೆ ಇರಬಹುದು. ಆದರೆ Naxalism has deep-rooted problem. ಒಬ್ಬ ಗಂಧದ ಮರ ಕದ್ದ, ಲೋಕಲ್ ಕಳ್ಳನಿಗಿಂತ, ಹಳ್ಳಿಯಲ್ಲಿರುವ, ಕಾಡಿನಲ್ಲಿರುವ ನಕ್ಸಲೈಟ್ಸ್‌ನ ಹೋಲಿಕೆ ಮಾಡುವುದು ಭಾರಿ ತಪ್ಪು. ಕಾರಣ ಎಂದರೆ, ನಕ್ಸಲಿಸಂ ಬೆಳೆದಂಥ ಸಿದ್ಧಾಂತ ಎಂದರೆ, 'haves and have-nots'.

'Have-nots' ಗೆ 'haves' ನಿಂದ ಕಿತ್ತು ಕೊಡುವುದು. ಅದಕ್ಕೂ ಜೊತೆಗೆ ನಮ್ಮ ಲೋಕಲ್ ಸಿಟಿ ಕ್ರಿಮಿನಲ್‌ಗೂ ಬಹಳ ವ್ಯತ್ಯಾಸ ಇದೆ. ಹಾಗಾಗಿ, this is not a problem connected only with failure of police officers. ಅಲ್ಲ, ಇದು ಇಡೀ ರಾಷ್ಟ್ರದ ಸಮಸ್ಯೆ. ರಾಷ್ಟ್ರದ ಸಮಸ್ಯೆ ಎಂದರೆ, ಇದು ಎಲ್ಲಿಂದ ಪ್ರಾರಂಭವಾಗುತ್ತೆ. ಈಗ ಮಾನ್ಯ ಶ್ರೀರಾಮರೆಡ್ಡಿಯವರು, ರಮೇಶ್‌ಕುಮಾರ್‌ರವರು ಮಾತನಾಡುತ್ತಾ ಇದ್ದರು. It started from Naxalbari. It started with Kanu Sanyal and Majumdar. ಅವರೂ ಕೂಡ, ಅವರದೇ ಆದಂಥ ಸೈದ್ಧಾಂತಿಕವಾದ ಹೋರಾಟದಲ್ಲಿ ಯಾವ ಯಾವುದೋ ದಿಕ್ಕಿನಲ್ಲಿ ಹೋಗಿ ಮಾವಿಸ್ಟೋ ಮತ್ತು ಚೈನಾ ಪಾಲೀಸಿನೋ ಅಥವಾ ಸೋವಿಯತ್ ಯೂನಿಯನ್ ದಿಕ್ಕಿನಲ್ಲಿ ಹೋಗಬೇಕೆಂದು ಬೆಳೆದಂಥ ಸಿದ್ಧಾಂತ. ಕೆಲವರಿಗೆ ಏನಾಗಿದೆ, ಈ ನಕ್ಸಲಿಸಂನಲ್ಲಿ ಎರಡು ದಿಕ್ಕು ಇದೆ. ಮಾನ್ಯ ರಾಜೇಂದ್ರರವರು ಗಮನಿಸಬೇಕು. ಒಂದು ಅರ್ಬನ್ ನಕ್ಸಲಿಸಂ. ಈ ಅರ್ಬನ್ ನಕ್ಸಲಿಸಂ ಎಂದರೆ ಕಳ್ಳರು, they are taking a form. ಒಂದು ನಕ್ಸಲಿಸಂ ಅಂದರೆ ಏನೋ ಒಂದು ಸಿದ್ಧಾಂತ ಅಂತ. Actually they are all thieves. ಆದರೂ ಕೂಡ ಅದಕ್ಕೆ ನಕ್ಸಲಿಸಂ ಎಂದು ಹೆಸರು ಕೊಟ್ಟುಕೊಳ್ಳುತ್ತಾರೆ. ಇನ್ನು ಕೆಲವರು ಹಳ್ಳಿಗಾಡು ಪ್ರದೇಶಗಳಲ್ಲಿ ಸೇರಿಕೊಂಡು ಲೋಕಲ್ ಇಷ್ಯೂಸನ್ನು, they are picking up local issues. ಚಿಕ್ಕಮಗಳೂರಿನಲ್ಲಿ ಏಕೆ ನಕ್ಸಲಿಸಂ ಬರಬೇಕು ಹೇಳಿ? ಲೋಕಲ್ ಇಷ್ಯೂಸ್ ಇಟ್ಟುಕೊಂಡು, ಅವರದೇ ಆದಂಥ ಬೇಳೆ ಬೇಯಿಸಿಕೊಳ್ಳುವುದಕ್ಕೆ they are trying to give a local colour to it. ಹಾಗಾಗಿ, ತಾವು ಏನು ಮಾತನಾಡುತ್ತಿದ್ದೀರಿ, but my name is not listed. ಆದರೂ ಕೂಡ ನಾನು ನಿಮಗೆ ಹೇಳಲೇಬೇಕೆಂದು ಕೊಂಡಿದ್ದೇನೆ. Naxalism to-day cannot be justified at any cost. ಸರ್ಕಾರ ಯಾವುದೇ ಕಾರಣಕ್ಕೂ ಕೂಡ ಅವರ ಜೊತೆಗೆ ಮಾತನಾಡತಕ್ಕ ಅಗತ್ಯ ಇಲ್ಲ. They need not negotiate. Naxalism has to be put down. Even it is said that there is human face. But, that is not correct. ಇಲ್ಲಿ ನಾವೆಲ್ಲಾ ಕುಳಿತುಕೊಂಡು ನಕ್ಸಲೈಟ್ಸ್ ಬಗ್ಗೆ ಸಿಂಪಥಿಟಿಕ್ ಆಗಿ ಮಾತನಾಡಿದರೆ it will have different repercussions ಎಂಬುದು ನನ್ನ ಅನಿಸಿಕೆ.

ಶ್ರೀ ಎಸ್.ರಾಜೇಂದ್ರನ್ : ಮಾನ್ಯ ಛೇರ್ಮನ್‌ರವರೆ, in what way my friend has taken it I did not know. I am explaining what is Naxalite. How it is to be? Who is going to be interrogated? How you are going to assess? ಅದರ ಬಗ್ಗೆ ನಾನು ಮಾತನಾಡುತ್ತಿದ್ದೆ. ಚಿಕ್ಕಮಗಳೂರು ಏಕೆ ಉದಾಹರಣೆ ಕೊಟ್ಟೆ ಎಂದರೆ, ಅಲ್ಲಿ ವಾಸ ಮಾಡಿಕೊಂಡಿರುವವರನ್ನು ನೀವು ಕಟ್ ಮಾಡುತ್ತೀರಿ, ಷಿಫ್ಟ್ ಮಾಡಿ ಎಂದು ಸರ್ಕಾರ ಹೇಳಿದ್ದಾರೆಯೇ? What is the Forest Department doing? It is their duty. ಅವರು ಕೆಲಸ ಮಾಡುವುದಿಲ್ಲ. ಸುಮ್ಮನೆ ನಾಟಕ ಮಾಡುತ್ತಿದ್ದಾರೆ. lapse in the administration ಎಂದು ನಾನು ಹೇಳುತ್ತಾ ಇದ್ದೇನೆ. ಫಾರೆಸ್ಟ್ ಆಫೀಸರು

ಏನು ಮಾಡುತ್ತಾರೆಂದರೆ, ಆ ಮರಗಳನ್ನು ಕಟ್ ಮಾಡಿ ಎಂದರೆ, ಸಾರ್ ಅದರ ವ್ಯಾಲ್ಯುಯೇಷನ್ 1 ಲಕ್ಷ 70 ಸಾವಿರ ರೂ. ಎಂದು ಹೇಳುತ್ತಾರೆ. ಅದಕ್ಕೆ 2 ಲಕ್ಷ ರೂ. ಇರಲಿ 50 ಲಕ್ಷ ರೂ. ಇರಲಿ ನಮಗೇನು? ರಸ್ತೆ ವಿಸ್ತರಣೆ ಮಾಡಬೇಕು. ಕಟ್ ಮಾಡಿ ಎಂದು ಹೇಳಿದರೆ, ಅವನು ಹೇಳುವುದೇನು ನೋಡಿ. ಅದು ಇಷ್ಟು ಬೆಲೆ ಎಂದು ಹೇಳುತ್ತಾನೆ. ಅದು ಎಷ್ಟಾದರೂ ಆಗಲೀ, ನೀವು ಕಟ್ ಮಾಡಿ ಸೇಲ್ ಮಾಡಿ ಎಂದು ಹೇಳಿದರೆ, ಅದಕ್ಕೆ ಟೆಂಡರ್ ಕರೆಯಬೇಕು ಎಂದು ಹೇಳುತ್ತಾರೆ. ಕೊಡಿ, ಅದಕ್ಕೆ 20 ದಿವಸ ಆಗುತ್ತೆ ಸ್ವಾಮಿ. ರೋಡ್ ಮಾಡುವವನು ಸುಮ್ಮನೇ ಇರುತ್ತಾನೆಯೇ? ಇದು ಒಂದು ಕಡೆ. ಇದೇ ಇವರು ಕಟ್ ಮಾಡಿಕೊಂಡು ಹೋದರೆ, ಅದು ಬಿದ್ದುಹೋಗಿದ್ದು ಸ್ವಾಮಿ ಎಂದು ಹೇಳುತ್ತಾರೆ. ನೋಡಿ, ಲೂಟಿ ಮಾಡುವುದು ಹೇಗೆ? ಆ ತರಹ ಅಲ್ಲಿಯೂ ಆಗುತ್ತಿದೆ. Forest Department is there. ನಿಜವಾಗಿಯೂ, ಯಾರು ಇಲ್ಲೀಗಲ್ ಆಗಿ ಇನ್‌ವಾಲ್ವ್ ಆಗುತ್ತಾದೆಂಬ ಸತ್ಯಾಂಶವನ್ನು ಹೇಳಬೇಕಲ್ಲವೇ. ಇಡೀ ಹಳ್ಳಿಯವರೆಲ್ಲಾ ಷಿಫ್ಟ್ ಮಾಡಿಕೊಳ್ಳಿ, ನೀವೆಲ್ಲಾ ತಪ್ಪು ಮಾಡಿದ್ದೀರಿ ಎಂದರೆ, You are not giving an opportunity for them i.e., freedom of living in this state. You are not controlling. But, ನಕ್ಸಲೈಟ್ಸ್ ಮೇಲೆ ಸಿಂಪಥಿ ಇದೆಯೇ ಇಲ್ಲವೇ ಎಂಬ ಬಗ್ಗೆ ನನ್ನ ಅಭಿಪ್ರಾಯ ಅಲ್ಲ. Who are the real Naxalites? Call them and speak to them as to what is their demand ನಮಗೆ ಲ್ಯಾಂಡ್ ಇಲ್ಲ ಸ್ವಾಮಿ, ಊಟಕ್ಕೆ ವ್ಯವಸ್ಥೆ ಇಲ್ಲಸ್ವಾಮಿ, ಅದರಿಂದ ನಾನು ಹೋರಾಟ ಮಾಡುತ್ತೇನೆಂದರೆ, provide. ಅದನ್ನೂ ತೆಗೆದುಕೊಂಡು ಇರತಕ್ಕ ಜಮೀನನ್ನು ಕಂಟ್ರೋಲ್ ಮಾಡಬೇಕು ಎಂದು ಹೇಳಿದರೆ, it is arrogancy. It shows his power. ಸಿಂಪಥಿ ಒಂದು ಕಡೆ, ಸಿಂಪಥಿ ಎಂದು ಹೇಳಿಕೊಂಡೇ ಒಬ್ಬ ಹೇಳುತ್ತಾನೆ. ಕೈಯಿಲ್ಲದವನು ರೌಡಿ ನಂಬರ್ 'ಒನ್' ಕೈಯಿಲ್ಲ, ಒಂದು ಕೈಯಲ್ಲಿ ಗನ್ ಇಟ್ಟುಕೊಂಡು ಹೊಡೆಯುತ್ತಾನೆ. ಪಾಪ ಅವನಿಗೆ ಕೈ ಇಲ್ಲವೆಂದು ಹೇಳುತ್ತೀರಾ? That person is there. He is in the rowdy list. ಅವನಿಗೆ ಒಂದು ಕೈ ಇಲ್ಲ, ಏತಕ್ಕೆ ಇಲ್ಲ. ಅವನ ಕೈಯನ್ನು ಕತ್ತರಿಸಿರುವುದು. ಆದ್ದರಿಂದ, ಅವನು ಒಂದು ಗ್ಯಾಂಗ್ ಇಟ್ಟುಕೊಂಡು ಗನ್‌ನಲ್ಲಿ ಹೊಡೆಯುತ್ತಿದ್ದಾನೆ. ಅವನು ಹೋಗಿ, ನೋಡಿ ನಾನು ಹೊಡೆಯುವುದಕ್ಕಾಗುತ್ತದೆಯೇ, ನನಗೆ ಕೈ ಇಲ್ಲವೆಂದರೆ, ಪಾಪ ಅವನ ಮೇಲೆ ಏಕೆ ಸುಳ್ಳು ಹೇಳುತ್ತೀರಿ ಎಂದು ಹೇಳುತ್ತೀರಾ? These are all government duty. We are supporting you. In what way? ಈಗ ಪೊಲೀಸ್ ಆಫೀಸರ್ಸ್ ಮೇಲೆ ನಾವು ಪೂರ್ತಿ ಚಾರ್ಜಸ್ ಮಾಡುವುದಕ್ಕಾಗುವುದಿಲ್ಲ. ನನಗೂ ಭಯ. They are waiting eagerly. ಇವರು ಅಲ್ಲಿ ಏನೇನೋ ಭಾಷಣ ಮಾಡಲಿಲ್ಲವೇ, ಇವರ ಮೇಲೆ ಫಿಕ್ಸ್ ಮಾಡಿಬಿಡಿ ಎಂದು ಹೇಳಿದರೆ, ನಾನೇನು ಎಂದು ಹೇಳಿದರೆ, ನಾನೇನು ಮಾಡುವುದಕ್ಕಾಗುತ್ತದೆ? ಕೊನೆಗೆ ನಾನು ಜಡ್ಜ್ ಹತ್ತಿರ ಹೋಗಿ ನಾನು ಅದನ್ನು ಪ್ರೂವ್ ಮಾಡಬೇಕು. ಆಮೇಲೆ ಅದೊಂದು ಐದು ವರ್ಷ ಆಗುತ್ತೆ. Mental torture. ಕೊನೆಗೆ ನಾನು ಏನಾಗುತ್ತೇನೆಯೋ. depressed ಒಂದು ನಾಲ್ಕೈದು ಸಾರಿ ಈ ರೀತಿ ಆದರೆ, I will become a Naxalite. ನಕ್ಸಲೈಟ್ಸ್‌ಗೆ ಇರುವ ಗೌರವ, ಅದರಲ್ಲಿ ಯಾರು ಪವರ್‌ಫುಲ್ ಆಗಿದ್ದಾರೆ, ಅವನಿಗಿರತಕ್ಕ ಗೌರವ ಈಗ ಮಂತ್ರಿಗಳಿಗೂ ಇರುವುದಿಲ್ಲ.

ಅವರು ಬಂದರೆ, ಅಷ್ಟು ಗೌರವ ಕೊಡುತ್ತಾರೆ. These things government should take very carefully. ಏನು ಮುಖ್ಯಮಂತ್ರಿಗಳು ಹೇಳಿದರು, ಅವರನ್ನು ಕರೆದು ಮಾತನಾಡುತ್ತೇನೆಂದು, ಅದು ಸತ್ಯಾಂಶದಿಂದ ಹೇಳಿದ ಮಾತುಗಳೇ. You have to speak to them. You have to give an opportunity for them. ಏನು ಅವರ ಡಿಮಾಂಡ್, ಅದು ಮುಖ್ಯಮಂತ್ರಿಗಳಿಗೆ ಗೊತ್ತಾಗಬೇಕು. ಮುಖ್ಯಮಂತ್ರಿ ಹತ್ತಿರ ಆ ಮೀಡಿಯೇಟರುಗಳು ಏನು ಮಾಡುತ್ತಾರೆ, ಸ್ವಾಮಿ ; ಇವನು ನಾಲ್ಕೈದು ಕೊಲೆ ಮಾಡಿಬಿಟ್ಟಿದ್ದಾನೆ, ಕೊಲೆ ಮಾಡುವುದಕ್ಕೆ ಇವನೂ ಹೋಗಿದ್ದಾನೆ. ಅದರಿಂದ ತಪ್ಪಿಸಿಕೊಳ್ಳುವುದಕ್ಕೆ ಅವನು ಸೇಫ್ಟಿಯಾಗಿದ್ದಾನೆ. Because of his efficiency he is doing that. ಆದರೆ ಹೆಸರು ಏನು ಬರುತ್ತದೆ. ಇವನು ಮಾಡಿದ್ದಾನೆ ಎಂದು ಆಗುತ್ತದೆ. How do we know? In the name of encounter, ಇನ್ನೋಸೆಂಟ್‌ಗಳನ್ನು ಶೂಟ್ ಮಾಡಿದರೆ ಏನಾಗುತ್ತದೆ? ಅವರು ಅವರ ಜೊತೆಯಲ್ಲಿ ಹೋಗಿದ್ದಾರೆ ಸ್ವಾಮಿ. To escape his skin, they put the blame on that side. There fore, you find out. It is not only in Karnataka. Universally it is there. In Andhra Pradesh, what happened? ಫಾರ್ಮರ್ ಚೀಫ್ ಮಿನಿಸ್ಟರ್‌ಗೆ ಏನು ಮಾಡಿದರು? ಬಾಂಬ್ ಇಟ್ಟಿದ್ದರು. ಯಾರು ಇಟ್ಟಿದ್ದರು? ಪರ್‌ಪಸ್ ಆಗಿ ಮಾಡಿದ್ದರಾ. ಇಲ್ಲ ಇನ್ನೋಸೆಂಟ್ ಆಗಿ ಮಾಡಿದ್ದರಾ? ಇಲ್ಲಾ ಪಬ್ಲಿಕ್‌ಸಿಟಿಗೆ ಮಾಡಿದ್ದರಾ? That examination, we are not bothering. It may affect an ordinary person or it may affect our Chief Minister also.. Call them. Speak to them. Be firm. But, ಕಾನ್‌ಷಿಯಸ್ ಇರಬೇಕು. ಅಧಿಕಾರಿಗಳು ಕಾನ್‌ಷಿಯಸ್ ಇದ್ದರೆ ಸತ್ಯವಾಗಲೂ ನಕ್ಸಲೈಟ್ಸ್ ಬೆಳೆಯುವುದಿಲ್ಲ. You don't have that consicence. ಕಾನ್‌ಷಿಯಸ್ ಕೆಲಸ ಮಾಡಬೇಕು. ಒಂದು ಸಿಂಪಲ್ ಸ್ಮಾಲ್ ವರ್ಕ್‌ಗೆ ಹೋದರೆ 20 ಸಲ ಹೋಗಬೇಕು ನಾವು ಗುಲಾಮ್ ಸೆಲ್ಯೂಟ್ ಹೊಡೆಯಬೇಕು. So, the Chief Minister should give more attention to the Legislators. ಲೆಜಿಸ್‌ಲೇಟರ್ ಯಾರಾದರೂ ಒಂದು ಚಾರ್ಜ್ ತೆಗೆದುಕೊಂಡು ಬಂದರೆ ಆ ಅಧಿಕಾರಿ ಮೇಲೆ You must suspend them and throw them out. ಆಗ ಅವರಿಗೆ ಭಯ ಆಗುತ್ತದೆ. ಅವರಿಗೇನೆಂದರೆ ಬಿಡ್ರಿ ಈ ಎಂ.ಎಲ್.ಎ. ಬಿಟ್ಟರೆ ನನಗೆ ಹತ್ತು ಎಂ.ಎಲ್.ಎ. ಗೊತ್ತಿದೆ. ನನಗೆ ಮಂತ್ರಿ ಗೊತ್ತಿದೆ ಎಂಬ ಅಹಂಕಾರ. They are negligent only. To-day extra rowdyism, extra-ordinary rowdyism, powerful rowdyism is there. ಇದೆಲ್ಲಾ ಬೆಳೆಸುವುದೇ, to be frank, majority of the police officers No dobut, no doubt. ನೀವು ಅವರಿಗೆ ಕೊಡಿ, ಅವನು ಸುಳ್ಳು ಹೇಳುತ್ತಾನೆ ನಿಮ್ಮ ಶಾಸಕರೇ ಸ್ಮಗಲಿಂಗ್‌ನಲ್ಲಿದ್ದಾನೆ ಸಾರ್ ಅಂತಾರೆ. You have Intelligence. You find out from your Intelligence, whether it is true or not. If he gives false information, you neck him out. Number of graduates are there.

Number of students are there. Number of qualified people are there in this country, in this state. No, there is no part. ನಾವು ಅದು ಮಾಡುವುದಿಲ್ಲ. They are taking advantage. ಈಗ ನಾನು ಏನಾದರೂ ಜೋರಾಗಿ ಹೇಳಿಬಿಟ್ಟರೆ ಒಂದು ಅಧಿಕಾರಿ ಮೇಲೆ ಅಥವಾ ನಾನು ಕಂಪ್ಲೇಂಟ್ ಮಾಡಿದರೆ ಸಿ.ಎಂ.ಹತ್ತಿರ, ಸಿ.ಎಂ. ಅದರ ಡಿಟೇಲ್ಸ್‌ನ್ನು ಕೇಳುತ್ತಾರೆ ಏನ್ರಿ ಅದರ ವಿಚಾರಣೆ ಮಾಡಿ ಕೊಡಿ ಅಂತ. ಅವರು ಐ.ಪಿ.ಎಸ್. ಆಫೀಸರ್ ಏನು ಇನ್‌ಫರ್ಮೇಷನ್ ಕೊಡುತ್ತಾರೋ ಅದನ್ನೇ ನಮ್ಮ ಸಿ.ಎಂ. ಕೊಡುವುದು, ಸಿ.ಎಂ. ಏನು ಮಾಡುತ್ತಾರೆ, ಇಲ್ರಿ ರಾಜೇಂದ್ರನ್ ನೀವು ತಪ್ಪು ಮಾಡಿದ್ದೀರಿ, ಇಲ್ಲಾ ರೀ ನಮಗೆ ರಿಪೋರ್ಟ್ ಬಂದಿದೆ ಅನ್ನುತ್ತಾರೆ. No, it is not. You should have 90% faith about your legislators. If your legislator is giving wrong information to you, if your legislator is doing wrong things to you, then you take action on them also. ಆದ್ದರಿಂದ ನಕ್ಸಲೈಟ್ಸ್, really they are depressed people, no doubt. What for they are depressed? there is no proper food for them. No land is available. No house is available. 10 ಜನ ರಿಯಲಿಟಿಕ್ ಆಗಿ ಫೈಟ್ ಮಾಡಿದರೆ ಯಾವನೋ ಒಂದು ಎರಡು ಜನ ನಿಜವಾಗಲೂ ಕ್ರಿಮಿನಲ್ ಆಕ್ಟಿವಿಟೀಸ್ ಮಾಡಬಹುದು, ಆದರೆ majority of naxalites are fighting for the right cause. ಕೆಲವು ಸಂದರ್ಭದಲ್ಲಿ ನನಗೂ ಮನಸ್ಸಿನಲ್ಲಿ ಬರಬಹುದು ಛೇ,ಛೇ ಪಾಲಿಟಿಕ್ಸ್‌ಗಿಂತ ನಕ್ಸಲೈಟ್ಸ್ ಆಗಬೇಕಪ್ಪ ಅವತ್ತೇ ಈ ಅಧಿಕಾರಿಗಳಿಗೆ ಒಳ್ಳೆಯ ಪಾಠ ಸಿಕ್ಕುವುದು ಅಂತ it is in my mind. ಅದು ಮನಸ್ಸಿನ ಮೇಲೆ ಬಂದರೆ, you cannot predict. Definitely I may go there also. ಕಾರಣ ಏನು? Depressed. ಆ ಡಿಪ್ರೆಸ್ಡ್‌ಗೆ ಕಾರಣ ಏನು? ಅಧಿಕಾರಿಗಳು ಅವರವರ ಕೆಲಸಗಳನ್ನು ಇನ್‌ಟೈಮ್‌ಗೆ ಮಾಡಿದರೆ, there will not be Naxalites. ಅವರು ವೈರ್ ಹಾಕಿಕೊಳ್ಳುವುದಕ್ಕೆ ಪರ್ಮೀಶನ್ ಕೊಡುವುದು. ಅವರು ಬಾಂಬ್ ಹಾಕುವುದಕ್ಕೂ ಪರ್ಮೀಶನ್ ಕೊಡುವುದು. ಎಲ್ಲಾ ಪೂರ್ತಿ ಸೆಕ್ಯುರಿಟಿ ಚೆನ್ನಾಗಿದೆ ಅಂತ ಹೇಳುವುದು. ಇಷ್ಟೆಲ್ಲಾ ಅವನು ಹಾಕಿದ್ದಾನೆ ಎಲ್ಲಿ ನಿಮ್ಮ ಸೆಕ್ಯುರಿಟಿ ಚೆನ್ನಾಗಿದೆ? You think about it. ನಾವು ಬಹಳ ಸ್ಟ್ರಿಕ್ಟ್ ಆಗಿದ್ದೇವೆ. ಎಲ್ಲಾ ವಾಚ್ ಮಾಡಿದ್ದೇವೆ? ಎಲ್ಲಿ ವಾಚ್ ಮಾಡಿದ್ದೀರಿ? ಅವನು ಎಲ್ಲಾ ಬಾಂಬ್ ಹಾಕಿ ಡಮಾರ್ ಎಂದು ಶಬ್ದ ಬರುವ ಟೈಮ್‌ನಲ್ಲಿ ಎಲ್ಲಾ ಸೆಕ್ಯುರಿಟಿ ರೌಂಡ್ ಮಾಡುವುದು. What is the use? ಆದ್ದರಿಂದ, it is not only in the forest, even in the local areas also, in the name of Naxalites or Dadas, that is there. ಇನ್ ಸೈಡ್ ಆಫ್ ದಿ ಫಾರೆಸ್ಟ್ ಅಂದರೆ ಅವರು ನಕ್ಸಲೈಟ್ಸ್ ಆಗುತ್ತಾರೆ. If they come outside the forest, ಅವರು ರೌಡಿ ನಂಬರ್ ಒನ್ ಆಗುತ್ತಾರೆ. ಅಷ್ಟೇ ಬೇರೆ ಏನೂ ಇಲ್ಲ. ಆದ್ದರಿಂದ ನಕ್ಸಲೈಟ್ಸ್‌ಗೆ ಏನೇನು ಪರಿಹಾರ ಮಾಡಬೇಕೋ ಮಾಡಲಿಕ್ಕೆ ಚೀಫ್ ಮಿನಿಸ್ಟರ್ ಅವರನ್ನು ಕರೆದು ಮಾತನಾಡಿ; You give a reformed life to them. give a renascence to them. Give a re-birth to them. Definitely,

they will co-operate with you. ಚರಿತ್ರೆಯಲ್ಲಿ ನಿಮ್ಮ ಹೆಸರು ಇರುತ್ತದೆ. ನಕ್ಸಲೈಟ್ಸ್‌ನ್ನು ಕನ್‌ವಿನ್ಸ್ ಮಾಡಿ ಈಗ ನಮ್ಮ ಪುರಾಣ ಕಥೆಗಳಲ್ಲಿ ಬಹಳ ದೊಡ್ಡ ರೌಡಿಯಾಗಿರುವವರು ವಾಲ್ಮೀಕಿಯಾಗಿರುವವರು, ಬಹಳ ಕೆಟ್ಟ ಕೆಲಸ ಮಾಡಿ ಆಗ ರಾಮಾಯಣ ಬರೆದಿದ್ದು ಈ ಪುರಾಣ ಕಥೆಗಳು ಹೇಳುವುದಕ್ಕಿಂತ try this present Purana. Call all the Naxalites. Ask their demands. Give your suggestions. If they convert, give life to them. If they do not convert, take action according to the law. Law will take its own course always. ಅದರ ಉಪಯೋಗ ಆಮೇಲೆ ಮಾಡಿ. ಇವರನ್ನು ಖಂಡಿತವಾಗಿ ಮುಖ್ಯಮಂತ್ರಿಯವರು ಕರೆದು ನೀವು ಮಾತನಾಡಿ. ಅವರಿಗೆ ಒಂದು ಒಳ್ಳೆಯ ಲೈಫ್ ಕೊಡಬೇಕು ಎಂದು it is my suggestion which I am giving on the floor of the House. I thank the chair for giving this opportunity, and conclude.

† **ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು)** : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಾನೂನು ಸುವ್ಯವಸ್ಥೆ ಬಗ್ಗೆ ಸಾಕಷ್ಟು ವಿವರವಾದ ಚರ್ಚೆ ನಡೆದಿದೆ. ಬಹಳಷ್ಟು ಜನ ಹಿಂದಿನಿಂದ ಸರ್ಕಾರವನ್ನು ಸಮರ್ಥನೆ ಮಾಡಿಕೊಳ್ಳುತ್ತಿದ್ದವರು ಹೇಳುತ್ತಿದ್ದುದು ಏನೆಂದರೆ ಈ ಸರ್ಕಾರದ ಕಾಲ್ಗುಣ, ಮುಖ್ಯಮಂತ್ರಿಗಳ ಕಾಲ್ಗುಣ ಬಹಳ ಚೆನ್ನಾಗಿದೆ, ಇವರು ಮುಖ್ಯಮಂತ್ರಿಯಾದ ನಂತರ ಬಹಳ ಚೆನ್ನಾಗಿ ಮಳೆ ಬೆಳೆ ಆಯಿತು, ಒಳ್ಳೆಯ ಬೆಳೆ ಆಯಿತು, ವೀರಪ್ಪನ್ ಹತ್ಯೆ ಕೂಡ ಆಯಿತು. ಅಂತ ಹೇಳಿ, ಆದರೆ ಇವತ್ತು ಈ ರಾಜ್ಯದಲ್ಲಿ ತಲೆದೋರಿರತಕ್ಕಂಥ ಕಾನೂನು ಸುವ್ಯವಸ್ಥೆಗೆ ಯಾರ ಕಾಲ್ಗುಣ ಕಾರಣ ಅಂತ ಹೇಳಿ ಯಾರೂ ಸಮರ್ಥನೆ ಮಾಡಿಕೊಳ್ಳುತ್ತಿಲ್ಲ, ಇದಕ್ಕೆ ಕಾರಣ ಏನು ಅಂತ ಹೇಳಿ. ಇವತ್ತು 2003 ರಿಂದ 2004ರವರೆಗೂ 6617 ರಷ್ಟು ಮಹಿಳೆಯರ ಮೇಲೆ ದೌರ್ಜನ್ಯವಾಗಿದೆ ಅಂತ ಹೇಳಿ ಪೊಲೀಸ್ ಇಲಾಖೆ ವರದಿ ಹೇಳುತ್ತದೆ. ಬೆಂಗಳೂರು ಒಂದರಲ್ಲಿಯೇ ಎರಡು ವರ್ಷದಲ್ಲಿ 718 ಕೊಲೆ, 619 ದರೋಡೆ 456 ಸರ ಅಪಹರಣ, 1079 ಹಗಲು ಹೊತ್ತಿನಲ್ಲಿ ಕಳ್ಳತನ, 4452 ರಾತ್ರಿ ಹೊತ್ತಿನಲ್ಲಿ ಕಳ್ಳತನ, 8343 ವಾಹನಗಳ ಕಳವು ನಡೆದಿದೆ ಅಂತ ಹೇಳಿ ಪೊಲೀಸ್ ಕೇಸ್ ದಾಖಲಾಗಿರತಕ್ಕಂಥ ವರದಿ ಇವತ್ತು ಹೇಳುತ್ತಿದೆ. ಹಾಗಾಗಿ ಮಾನ್ಯ ಸಭಾಧ್ಯಕ್ಷರೇ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಎನ್ನತಕ್ಕಂಥಾದ್ದು ಇವತ್ತು ಸಂಪೂರ್ಣ ನೆಲ ಕಚ್ಚಿ ಕುಸಿದು ಹೋಗಿದೆ. ಇವತ್ತು ರಿಯಲ್ ಎಸ್ಟೇಟ್ ಮಾಫಿಯಾ ನಾವೇನು ಮುಂಬೈನಲ್ಲಿ ಕೇಳುತ್ತಿದ್ದೆವು ಅದು ಇವತ್ತು ಬೆಂಗಳೂರಿಗೆ ಕಳೆದ ಮೂರು ವರ್ಷದಿಂದ ಕಾಲಿಟ್ಟು ಈಗ ಒಂದು ರೀತಿಯಲ್ಲಿ ವಿಜೃಂಭಿಸುವಂತಹ ಸ್ಥಿತಿಯಲ್ಲಿದೆ. ಯಾರು ಯಾವಾಗ ಬೇಕಾದರೂ ಅಪಹರಣ ಮಾಡಿಕೊಂಡು ಹೋಗುತ್ತಾರೆ ಬ್ಲಾಕ್‌ಮೇಲ್ ಮಾಡುತ್ತಾರೆ, ಹಣ ಕೀಳುತ್ತಾರೆ, ಮತ್ತು ಭೂಗತ ಜಗತ್ತು ಪರೋಕ್ಷವಾಗಿ ಈ ರಿಯಲ್ ಎಸ್ಟೇಟ್ ಮಾಫಿಯಾವನ್ನು ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ ನಿಯಂತ್ರಿಸುತ್ತಿದೆ ಅಂತ ಹೇಳಿದರೆ ತಪ್ಪಿಲ್ಲ. ಇದಲ್ಲದೇ ಇವತ್ತು ಹೊಸ ಹೊಸ ಗೇಮ್‌ಗಳು ಆವಿಷ್ಕಾರಗೊಂಡಿವೆ. ಅವೆಲ್ಲಾ ಕ್ರಿಮಿನಲ್‌ಗಳಿಗೆ ಒಂದು ರೀತಿ ಪರೋಕ್ಷವಾಗಿ ಅವರ ಒಂದು ಚಟುವಟಿಕೆಗಳ ತಾಣವಾಗಿ ಪರಿವರ್ತನೆಯಾಗುತ್ತಿವೆ. ಅದೇನೋ ಸಿಲ್ಲಿಗೇಮ್ ಅಂತೆ. ಡಿಲ್ಲಿಗೇಮ್ ಅಂತೆ, ಚಕ್ರದ ಗೇಮ್ ಅಂತೆ, ವಿಕೃತ ಹಮಾಮ್ ಬಾತ್‌ಗಳು ಮತ್ತು ಅದಲ್ಲದೇ ವೇಶ್ಯಾವಾಟಿಕೆ ಕೇಂದ್ರಗಳು, ಮಟ್ಕಾ, ಲೈವ್ ಬ್ಯಾಂಡ್, ಇವೆಲ್ಲದರ

ಹಿಂದುಗಡೆ ಯಾರು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಬೇಕು ಆ ಅಧಿಕಾರಿಗಳು ಮತ್ತು ಕೆಲವು ರಾಜಕಾರಣಿಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪಾಲುದಾರಿಕೆ ಹೊಂದಿ ಕಾರಣ ಆಗುತ್ತಾ ಅಪರಾಧಿ ಲೋಕದ ತಾಣವನ್ನಾಗಿ ರಾಜ್ಯವನ್ನು ಪರಿವರ್ತನೆ ಮಾಡಲಿಕ್ಕೆ ಕಾರಣೀಭೂತ ರಾಗುತ್ತಿದ್ದಾರೆ. ಇದಲ್ಲದೇ ಸುದೈವವೋ ದುರ್ದೈವವೋ ನಾವು ಕೇಳಿದ್ದೆವು, ಒಂದು ಸತ್ಯ ಹರಿಶ್ಚಂದ್ರನ ನಾಟಕ ಮಹಾತ್ಮ ಗಾಂಧೀಜಿಯವರ ಜೀವನದ ಮೇಲೆ ಪರಿಣಾಮ ಬೀರಿ ಆತ ಸತ್ಯಸಂದನಾಗಲಿಕ್ಕೆ ಕಾರಣವಾಯಿತು ಅಂತ ಹೇಳಿ. ದಿನಾ ರಾತ್ರಿ ಆ ಕ್ರೈಮ್ ಸ್ಟೋರಿ, ಮತ್ತೆ ಕ್ರೈಮ್ ಡೈರಿ ಸೀರಿಯಲ್ ಗಳು ಅದೆಷ್ಟು ಜನ ಈ ರೀತಿ ಕ್ರಿಮಿನಲ್ಸ್‌ಗಳನ್ನು ತಯಾರು ಮಾಡುತ್ತಿದೆ ಅಂತ ಹೇಳಿ. ಒಂದು ನಾಟಕ ಅಷ್ಟು ಪರಿವರ್ತನೆ ಮಾಡಲು ಕಾರಣವಾಗುವುದಾದರೆ ಈ ಕ್ರೈಮ್ ಡೈರಿ ಮತ್ತು ಕ್ರೈಮ್ ಸ್ಟೋರಿಗಳನ್ನು ನೋಡತಕ್ಕಂಥ ಜನಸಾಮಾನ್ಯರ ಮೇಲೆ ಯಾವ ಮಟ್ಟದ ಕ್ರಿಮಿನಲ್ ಚಟುವಟಿಕೆ ಬೆಳೆಸತಕ್ಕಂಥ ವಾತಾವರಣ ಆಗುತ್ತಿದೆ? ಇಷ್ಟೆಲ್ಲಾ ಆಗುತ್ತಿದ್ದರೂ ಕೂಡ ಇದನ್ನು ನಿಯಂತ್ರಿಸತಕ್ಕಂಥ ಯಾವುದೇ ರೀತಿಯ ಚಟುವಟಿಕೆ ಕಾರ್ಯಕ್ರಮ ಇಲ್ಲಿ ಹಾಕಿಕೊಳ್ಳುತ್ತಿಲ್ಲ. ಇದು ಒಂದು ರೀತಿ ಕ್ರಿಮಿನಲ್‌ಗಳ ತಾಣವಾಗಿ ಪರಿವರ್ತನೆಯಾಗುತ್ತಿದೆ. ನಕ್ಸಲೈಟ್ಸ್ ಚಟುವಟಿಕೆ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯಿತು. ದುರ್ದೈವದ ಸಂಗತಿ ಅಂದರೆ ನಾನು ಅಂದುಕೊಂಡಿದ್ದೆ ನಮ್ಮೆಲ್ಲಾ ಹಿರಿಯರಿಂದ ನಮಗೆ ಸಾಕಷ್ಟು ಮಾರ್ಗದರ್ಶನ ಸಿಗುತ್ತದೆ ಅಂತ ಅಂದುಕೊಂಡಿದ್ದೆವು. ಆದರೆ ಇದೊಂದು ರೀತಿ ಬಹಳಷ್ಟು ಜನ ಮಾತನಾಡುತ್ತಾ ಮಾತನಾಡುತ್ತಾ ಪರೋಕ್ಷವಾಗಿ ನಕ್ಸಲೈಟ್ಸ್ ಚಟುವಟಿಕೆಗಳನ್ನು ಸಮರ್ಥನೆ ಮಾಡತಕ್ಕಂಥ ವಾದವನ್ನೇ ಮುಂದಿಟ್ಟು ಬಹುಶಃ ಮುಂದಿನ ದಿನಗಳಿಗೆ ನಿಮಗೇನಾದರೂ ಪರಿಹಾರ ಆಗಬೇಕು ಅಂದರೆ ಬಂದೂಕು ಹಿಡಿಯಿರಿ ಎನ್ನುವಂತಹ ಪ್ರೇರಣೆ ಕೊಡುತ್ತಿದ್ದಾರೋ ಏನೋ ಎನ್ನುವಂತಹ ಭೀತಿ ನನಗೆ ಅನಿಸಿತು. ನಕ್ಸಲೈಟ್ಸ್ ಅಂದರೆ ಅದು ಒಂದು ರೀತಿ ಸಾಮಾಜಿಕ ಸಿದ್ಧಾಂತದ ಹೆಸರಿನಲ್ಲಿ ಸಿಹಿ ಗುಳಿಗೆಯಲ್ಲಿ ಸಿಹಿ ಲೇಪನದ ಅಡಿಯಲ್ಲಿ ಭಯೋತ್ಪಾದನೆ ಮಾಡುತ್ತಿರತಕ್ಕಂಥ ಒಂದು ಭಯೋತ್ಪಾದಕರೇ ಹೊರತು ಇನ್ನು ಸಾಮಾಜಿಕ ಸಾಮರಸ್ಯ, ದಲಿತ ಬಡವ, ಇವೆಲ್ಲವೂ ಕೂಡ ಒಂದು ಮುಖವಾಡಗಳು ಮಾತ್ರ ವಸ್ತು ಸ್ಥಿತಿಯ ಮುಖವಾಡಗಳು. ನಾನು ಚಿಕ್ಕಮಗಳೂರಿನ ಮಲೆನಾಡು ಭಾಗದಿಂದ ಬಂದವನು. ಅಲ್ಲಿ ನಮ್ಮ ಭಾಗದಲ್ಲಿ ಹೇಳಿಕೊಳ್ಳತಕ್ಕಂಥ ಸಮಸ್ಯೆಗಳು ನಿರ್ಮಾಣವಾಗಿದ್ದವು ಎನ್ನುವಂತಾದ್ದು ಇಲ್ಲ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಒಕ್ಕಲೆಬ್ಬಿಸುತ್ತಾರೆ ಎನ್ನುವಂತಹ ಭೀತಿ ತಲೆದೋರಿದ್ದು ನಿಜ. ಆದರೆ ಸರ್ಕಾರ ಮಧ್ಯೆ ಪ್ರವೇಶ ಮಾಡಿ ಯಾರನ್ನೂ ಬಲಾತ್ಕಾರವಾಗಿ ಒಕ್ಕಲೆಬ್ಬಿಸುವುದಿಲ್ಲ ಪ್ಯಾಕೇಜ್ ಘೋಷಣೆ ಮಾಡಿ ಯಾರು ಪ್ಯಾಕೇಜನ್ನು ಒಪ್ಪಿಕೊಳ್ಳುತ್ತಾರೆ ಅವರು ಬೇಕಾದರೂ ಹೋಗಬಹುದು, ಎನ್ನುವಂತಹ ಮಾತನ್ನು ಹೇಳಿದ ನಂತರವೂ ಕೂಡ ಮತ್ತೆ ಅದು ನಕ್ಸಲೈಟರಿಗೆ ತಾಣವಾಗಿ ಬೆಳೆಯುತ್ತಿದೆ ಅಂದರೆ ಇದರಲ್ಲಿ ಸಮಸ್ಯೆ ಮುಖ್ಯ ಕಾರಣವಲ್ಲ. ಅಲ್ಲಿರತಕ್ಕಂಥ ಅರಣ್ಯ ಮತ್ತು ನಾಲ್ಕು ಜಿಲ್ಲೆಗಳ ಗಡಿ ಭಾಗ, ಅಡಗಿಕೊಳ್ಳುವುದಕ್ಕೆ ತಮ್ಮ ಅಡ್ಡ ನಿರ್ಮಾಣಕ್ಕೆ ತಮ್ಮ ಒಂದು ಆಕಾಡವನ್ನು ಬೆಳೆಸಿಕೊಳ್ಳುವುದಕ್ಕೆ ಆ ಒಂದು ನಕ್ಸಲ್ ದಂಡಕಾರಣ್ಯ ರಾಷ್ಟ್ರದ ಸ್ಥಾಪನೆಗೆ ಅದೊಂದು ರೀತಿ ಕೋಟೆಯಾಗುತ್ತದೆ ಎನ್ನುವ ಕಾರಣದಿಂದ ಚಿಕ್ಕಮಗಳೂರನ್ನು ತಮ್ಮ ಕೋಟೆ ಮಾಡಿಕೊಳ್ಳುವುದಕ್ಕೆ ಇವತ್ತು ನಕ್ಸಲೀಯರು ಅಲ್ಲಿ ತಲೆ ಎತ್ತಿದ್ದಾರೆ. ಅದು ಸಾಮಾಜಿಕ ಕಾರಣದಿಂದ ಇನ್ನೊಂದು ಕಾರಣದಿಂದ ಬಂದಿದ್ದಾರೆ ಎಂಬುದು ತಪ್ಪು ಮಾಹಿತಿಯಾಗುತ್ತದೆ, ಯೋಚನೆ ಮಾಡಬೇಕು. ಇವತ್ತು ಬರೀ ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ ರಾಜ್ಯಕ್ಕೆ ಮಾತ್ರ ಇದು ಸೀಮಿತವಾಗಿ ಬೆಳೆದು ಬಂದಿದೆ ಎಂದಲ್ಲ. ಪಕ್ಕದ ನೇಪಾಳದಿಂದ

† ಮಾನ್ಯ ಸದಸ್ಯರು ಭಾಷಣವನ್ನು ಪರಿಷ್ಕರಿಸಿರುತ್ತಾರೆ.

ಹಿಡಿದು ರಾಷ್ಟ್ರದ 15ಕ್ಕೂ ಹೆಚ್ಚು ರಾಜ್ಯಗಳಲ್ಲಿ, 153ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ, ಈ ಒಂದು ನಕ್ಸಲ್ ಚಟುವಟಿಕೆ ಇವತ್ತು ಪ್ರಾರಂಭವಾಗಿದೆ. ಹಾಗಾಗಿ ಸರ್ಕಾರವು ಇದನ್ನು ಸಾಮಾಜಿಕ ಸಮಸ್ಯೆ ಎಂದು ಮಾತ್ರ ಪರಿಗಣಿಸದೆ ಇದೊಂದು ರಾಷ್ಟ್ರವಿರೋಧಿ ಕೃತ್ಯ, ಭಯೋತ್ಪಾದನಾ ಚಟುವಟಿಕೆ ಎಂದು ಪರಿಗಣಿಸಬೇಕು. ಹೇಳುವಾಗೆಲ್ಲಾ ನಮ್ಮ ಹಿರಿಯರಾದ ಮಾನ್ಯ ರಮೇಶ್‌ಕುಮಾರ್ ಮತ್ತಿತರರು ಮಾತನಾಡುತ್ತಿದ್ದರು. ಅದು ಹೇಗಿತ್ತೆಂದರೆ, ರಾವಣ ಬಹಳ ದೈವ ಭಕ್ತ, ನಿಜ. ರಾವಣ ದೈವಭಕ್ತ ನಲ್ಲವೆಂದು ಯಾರೂ ಎರಡನೇ ಮಾತನಾಡುತ್ತಿಲ್ಲ. ಆದರೆ ರಾಮ ರಾವಣರ ಯುದ್ಧ ಏತಕ್ಕೆ ಆಯಿತು, ಎಂದು ನಾವು ಅಪರಾಧದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಸೈದ್ಧಾಂತಿಕವಾಗಿ ಹೋರಾಟ ಮಾಡುತ್ತೇವೆಂದು ಎಕೆ 47 ಹಿಡಿದು ಕಾನೂನು ಸುವ್ಯವಸ್ಥೆಗೆ ಭಂಗ ತರುವುದು ಯಾವ ಸೈದ್ಧಾಂತಿಕ ಹೋರಾಟ ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಇದರ ಅಡಿಯಲ್ಲಿ, ಸಾಮಾಜಿಕ ಸಮಸ್ಯೆಯ ನೆಪದಲ್ಲಿ ತಾವು ಮಾಡುವ ಅಪರಾಧಗಳನ್ನು ಮುಚ್ಚಿ ಹಾಕಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ರಾಜಕೀಯವಾಗಿ ಅಧಿಕಾರ ಗಳಿಸುವುದು ಕೂಡ ಈ ಕೋವಿ ಹಿಡಿದು ಹೋರಾಟ ಮಾಡುವವರ ಧ್ಯೇಯವಾಗಿದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದನ್ನು ಬಲವಾಗಿ ನಂಬಿಕೊಂಡೆ, ಅವರಿಗೆ ಯಾವುದೇ ಶಾಂತಿ ಸಂಧಾನ ಬೇಕಾಗಿಲ್ಲ. ಎಕೆ 47 ಬಳಸಿ ಭಯೋತ್ಪಾದನೆ ಮಾಡುವುದೇ ಅವರ ಗುರಿಯಾಗಿದೆ. Political power grows out of the barrel of a gun.

ಈ ಬೆಳವಣಿಗೆಯನ್ನು ಸರ್ಕಾರ ರಾಜ್ಯದ ಕಾನೂನು ಸುವ್ಯವಸ್ಥೆಗೆ ಒದಗಿರುವ ಆಪತ್ತು ಎಂದು ಪರಿಗಣಿಸಬೇಕು. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಇದೊಂದು ತಾತ್ಕಾಲಿಕ ಸಮಸ್ಯೆ ಎಂದು ಪರಿಗಣಿಸುವುದಾದರೆ, ಶಿವನಿಂದ ಮೂರು ವರಗಳನ್ನು ಪಡೆದ ಭಸ್ಮಾಸುರನ ಅಂತ್ಯಕ್ಕೆ ಶಿವಪಟ್ಟಂತ ಕಷ್ಟವನ್ನು ಸರ್ಕಾರ ಪಡಬೇಕಾಗುತ್ತದೆ, ಆದಾಗದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು. ನಕ್ಸಲೈಟ್ ಚಟುವಟಿಕೆಯಿಂದಾಗಿ ಈ ದೇಶದಲ್ಲಿ 2004 ರವರೆಗೆ ಸುಮಾರು ಇಪ್ಪತ್ತೆರಡು ಸಾವಿರ ನಾಗರೀಕರ ಹತ್ಯೆ, 515 ಪೊಲೀಸರ ಹತ್ಯೆ, 16927 ಜನರು ಮಿಸ್ ಆಗಿ ನಕ್ಸಲೈಟ್ ಚಟುವಟಿಕೆಯಲ್ಲಿ ಸೇರಿಕೊಂಡಿದ್ದಾರೆ. 1994–2000 ಈ ಆರು ವರ್ಷಗಳ ಅವಧಿಯಲ್ಲಿ 1042 ಜನ ಹತ್ಯೆಯಾಗಿದ್ದಾರೆ 1991–2001 ಈ ಹತ್ತು ವರ್ಷಗಳಲ್ಲಿ 4847 ಮಹಿಳೆಯರ ಮೇಲೆ ದೌರ್ಜನ್ಯದ ಪ್ರಕರಣಗಳಾಗಿವೆ. ಈ ನಕ್ಸಲರಿಗೆ ವಿದೇಶಿ ಭಯೋತ್ಪಾದನಾ ಸಂಘಟನೆಗಳಾದ ಐಎಸ್‌ಐ, ಅಲ್‌ಖೈದಾ, ಎಲ್‌ಟಿಟಿಇ ಮುಂತಾದವುಗಳಿಂದ ಶಸ್ತ್ರಾಸ್ತ್ರ ಪೂರೈಕೆಯಾಗುತ್ತಿದೆ ಎಂದು ಕೇಂದ್ರ ಗುಪ್ತಚಾರ ಇಲಾಖೆಯ ಮಾಹಿತಿ ಇದೆ. ಇದೆಲ್ಲಾ ಇದ್ದಾಗ್ಯೂ ಇದೊಂದು ಸಾಮಾಜಿಕ ಸಮಸ್ಯೆ ಹಿನ್ನೆಲೆಯಲ್ಲಿ ನಡೆಯುತ್ತಿರುವ ಚಳುವಳಿ ಎಂದು ಸರ್ಕಾರ ಸುಮ್ಮನೆ ಕುಳಿತರೆ ಅದೊಂದು ರಾಷ್ಟ್ರ ವಿರೋಧಿ ಕ್ರಮವಾಗುತ್ತದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಇದನ್ನು ಹತ್ತಿಕ್ಕಲು ತೀವ್ರವಾದ ಕ್ರಮಗಳನ್ನು ತೆಗೆದುಕೊಂಡು, ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕಾದ್ದು ಅದರ ಕರ್ತವ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ದೇಶದಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗವನ್ನುಂಟು ಮಾಡುವುದರ ಮೂಲಕ ಪರ್ಯಾಯ ಪ್ರಜಾಪ್ರಭುತ್ವ ವ್ಯವಸ್ಥೆ ತರುವ ನೆಪದಲ್ಲಿ ಅಪರಾಧ ಮಾಡುತ್ತಿರುವುದನ್ನು ಯಾರು ಸಮರ್ಥಿಸಲು ಆಗುವುದಿಲ್ಲ. ನಕ್ಸಲರು ನಡೆಸುತ್ತಿರುವ ಚಟುವಟಿಕೆಗಳಿಗೆ ವಿವಿಧ ರೀತಿಯ ವಿಶ್ಲೇಷಣೆಗಳನ್ನು ಕೊಡಲಾಗುತ್ತಿದೆ. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಹೇಳಿದಂತೆ, ನಕ್ಸಲ್ ಚಟುವಟಿಕೆ ಅದೊಂದು ಉಗ್ರವಾದಿ

ಚಟುವಟಿಕೆ ಎಂದು ಸರ್ಕಾರ ಪರಿಗಣಿಸಬೇಕು. ಹಿಟ್ಲರ್ ಮಹಾಶಯ, ತನ್ನ ಸಿದ್ಧಾಂತಕ್ಕೆ ವಿರುದ್ಧವಾಗಿರುವವರೆಲ್ಲಾ ಸಾಯುವುದಕ್ಕೆ ಅರ್ಹರೆಂದು ಪರಿಗಣಿಸಿ ಗ್ಯಾಸ್ ಛೇಂಬರ್‌ಗೆ ವಿರೋಧಿಗಳನ್ನು ತಳ್ಳಿ ಕೊಂದಂತೆ ಈ ನಕ್ಸಲ್‌ರ ವಾದ ಇರುತ್ತದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಅದನ್ನು ಹತ್ತಿಕ್ಕಲು ಉಗ್ರಕ್ರಮಗಳನ್ನು ತೆಗೆದುಕೊಳ್ಳಬೇಕು. ಕರ್ನಾಟಕ ವಿಮೋಚನಾ ರಂಗ ಇತ್ಯಾದಿ ಹೆಸರಿನಲ್ಲಿ ಏನು ಚಟುವಟಿಕೆ ಇವತ್ತು ರಾಜ್ಯದಲ್ಲಿ ನಡೆಯುತ್ತಿದೆ, ಅದೆಲ್ಲಾ ಪೀಪಲ್ಸ್ ವಾರ್ ಗ್ರೂಪ್‌ನ ಮತ್ತೊಂದು ಮುಖವಾಗಿದೆಯೇ ಹೊರತು ಮತ್ತೇನೂ ಅಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸಾಮಾಜಿಕ ಸಮಸ್ಯೆಯನ್ನು ಮುಂದಿಟ್ಟುಕೊಂಡು ಎಕೆ 47 ಕೈಯಲ್ಲಿ ಹಿಡಿದುಕೊಂಡು ಹೊಸ ರಾಜಕೀಯ ಆಯಾಮ ನಿರ್ಮಾಣ ಮಾಡುವ ಕ್ರಮವನ್ನು ಯಾವ ರಾಜ್ಯ ಸರ್ಕಾರದ ಕಾನೂನು ಸುವ್ಯವಸ್ಥೆಯು ಒಪ್ಪುವಂತಹದ್ದಲ್ಲ. ಇಂತಹ ಸಂದರ್ಭದಲ್ಲಿ ಪೋಲೀಸ್ ಇಲಾಖೆ ತುಂಬಾ ಚುರುಕಾಗಿ ಕೆಲಸ ಮಾಡಬೇಕಾಗುತ್ತದೆ ಅದಕ್ಕೆ ರಾಜಕೀಯ ಇಚ್ಛಾಶಕ್ತಿಯೂ ಬೇಕಾಗುತ್ತದೆ. ಗದ್ದರ್‌ರವರು ಮಾನ್ಯ ಮುಖ್ಯಮಂತ್ರಿಯವರ ಮನೆಯ ಮುಂದೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಮುಖ್ಯಮಂತ್ರಿಗಳಾಗಿ ನಡೆದುಕೊಂಡ ರೀತಿ ಸಮರ್ಥನೀಯವಲ್ಲ. ಗದ್ದರ್‌ರವರು ಸರ್ಕಾರಕ್ಕೆ ಧಮಕಿ ಹಾಕುವ ರೀತಿಯಲ್ಲಿ ಮಾತನಾಡಿದ್ದಾರೆ. ಇದರ ಪರಿಣಾಮ ವೆಂಕಟಮ್ಮನಹಳ್ಳಿಯ ಪೋಲೀಸರ ಹತ್ಯೆಗೆ ಕಾರಣವಾಯಿತೆಂದು ನಾನು ನೇರವಾಗಿ ಹೇಳುತ್ತೇನೆ. ವೈಯಕ್ತಿಕ ಅಭಿಪ್ರಾಯ ಏನೇ ಇದ್ದರೂ ಸರ್ಕಾರದ ಚುಕ್ಕಾಣಿ ಹಿಡಿದಾಗ ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ನಡೆದುಕೊಳ್ಳಬೇಕಾಗುತ್ತದೆ. ಹಾಗಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ನಿರ್ಭೀತಿಯಿಂದ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಚಿಕ್ಕಮಗಳೂರಿನಲ್ಲಿ ಕಾನೂನು ಯಾವುದನ್ನು ನಿಯಂತ್ರಿಸಬೇಕೋ ಅದು ಆಗುತ್ತಿಲ್ಲ, ಬೇಲಿಯೇ ಎದ್ದು ಹೊಲ ಮೇಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಚಿಕ್ಕಮಗಳೂರಿನಲ್ಲಿ ರಸ್ತೆ ವಿಸ್ತರಣೆಯಾಯಿತು ಆ ರಸ್ತೆ ವಿಸ್ತರಣೆಯ ಸಂಬಂಧವಾಗಿ ಯಾವುದೇ ರೀತಿಯ ಕಾನೂನು ನಿಯಮಗಳನ್ನು ಅನುಸರಿಸಲಿಲ್ಲ. ಒಬ್ಬ ಶಾಸಕನಾಗಿ ರಸ್ತೆ ಅಗಲೀಕರಣಕ್ಕೆ ನನ್ನ ವಿರೋಧವಿರಲಿಲ್ಲ. ಆದರೆ ಜಿಲ್ಲಾ ನ್ಯಾಯಾಲಯ, ಜಿಲ್ಲಾ ಮ್ಯಾಜಿಸ್ಟ್ರೇಟರು ಅವರು ಗುಂಡಾಗಳ ರೀತಿಯಲ್ಲಿ ವರ್ತನೆ ಮಾಡುವುದಕ್ಕೆ ನನ್ನ ವಿರೋಧವಿತ್ತು. ಯಾವುದನ್ನೇ ಮಾಡುವುದಾದರೆ ಕಾನೂನಿನ ಪ್ರಕಾರ ಮಾಡಿ ಎಂದು ಹೇಳಿದ್ದೆ. ಮಾನ್ಯ ಸಭಾಧ್ಯಕ್ಷರೆ, ಶ್ರೀಮತಿ ಇಂದಿರಾಗಾಂಧಿಯವರನ್ನು ಹತ್ಯೆ ಮಾಡಿದವರನ್ನೂ ಕೂಡ ಹತ್ತು ವರ್ಷ ವಿಚಾರಣೆ ನಡೆಸಿ ಆಮೇಲೆ ಗಲ್ಲಿಗೇರಿಸುವಂತಹ ತೀರ್ಪನ್ನು ಕೊಟ್ಟು ತೀರ್ಪು ಬಂದ ನಂತರವೂ ಕೂಡ ಜಾರಿಗೊಳಿಸುವುದಕ್ಕಿಂತ ಮುಂಚೆ, ಅವರಿಗೊಂದು ಮೇಲ್ಮನವಿಯನ್ನು ಸಲ್ಲಿಸುವುದಕ್ಕೆ ಅವಕಾಶ ಕೊಟ್ಟಿತ್ತು. ಚಿಕ್ಕಮಗಳೂರಿನಲ್ಲಿ 125,100,80 ವರ್ಷಗಳಿಂದ ಏನು 1964 ರ ಮುನಿಸಿಪಲ್ ಕಾಯಿದೆ ಜಾರಿಗೆ ಬರುವುದಕ್ಕಿಂತ ಮುಂಚಿತವಾಗಿ ಮನೆಯನ್ನು ಕಟ್ಟಿಕೊಂಡಿದ್ದಂತಹ ಜನರನ್ನು, ಯಾವುದೇ ರೀತಿಯ ಕಾನೂನನ್ನು ಅನುಸರಿಸದೆ ಬುಲ್ಡೋಜರ್ ತೆಗೆದುಕೊಂಡು ಬಂದು, ಇವತ್ತು ಅವರ ಮನೆಗಳನ್ನು ಹೊಡೆದು ನರಕ ಮಾಡಲಾಗಿದೆ. ಇಡೀ ಚಿಕ್ಕಮಗಳೂರು ಸ್ಮಶಾನವಾಗಿದೆ. ಯಾವುದೇ ಕಾನೂನಿನ ನಿಯಮಗಳನ್ನು ಇಲ್ಲಿ ಅನುಸರಿಸಿಲ್ಲ. ಬುಲ್‌ಡೋಜ್ ಮಾಡಿ 86ಕ್ಕೂ ಹೆಚ್ಚು ಕುಟುಂಬಗಳು ಜೀರೋ ಆಗಿವೆ. ಅವರಿಗೆ ಏನೂ ಇಲ್ಲ ನಾಲ್ಕಡಿ ಜಾಗಾನೂ ಇಲ್ಲ, ಅವರ ಹತ್ತಿರ 100, 125, 25,

50 ವರ್ಷಗಳ ದಾಖಲೆ ಇದೆ. ಆ ದಾಖಲೆ ಇದ್ದರೂ ಯಾವುದೇ ರೀತಿಯ ಕೋರ್ಟ್ ಹಿಯರಿಂಗ್ ಮಾಡಲು ತಯಾರಿಲ್ಲ. ಒಬ್ಬ ಶಾಸಕನಾಗಿ ಅವರ ಅಹವಾಲಿಗೆ ಬೆಲೆ ಕೊಟ್ಟು ನಾನು ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ಕೇಳಿದೆ, ನೋಡಿ ಇಂಡಿವಿಜ್ಯುವಲ್ ಹಿಯರಿಂಗ್ ಮಾಡಿದ್ದೀರಾ ಆದೇಶ ಎಲ್ಲಿದೆ ತೋರಿಸಿ ಅಂತ ಕೇಳಿದರೆ ನಾನು ಚೇಂಬರಿನಲ್ಲಿ ಕೂತಿದ್ದೇನೆ ಅವರು ಒಬ್ಬರಿಗೊಬ್ಬರು ನಾಪತ್ತೆಯಾಗುತ್ತಾರೆ, ನಾನು ಚೇಂಬರಿನಲ್ಲಿದ್ದಾಗಲೀ ಬುಲ್‌ಡೋಜ್ ಮಾಡಲು ಆದೇಶ ಕೊಟ್ಟು ಅಲ್ಲಿಗೆ ಕಳುಹಿಸುತ್ತಾರೆ. ಅಂದರೆ ಎಲ್ಲಿ ಕಾನೂನು ಅನುಸರಿಸಬೇಕೋ ಅಲ್ಲಿ ಅನುಸರಿಸುವುದಿಲ್ಲ. ಯಾರು ಮುಗ್ಧ ನಾಗರೀಕರಿದ್ದಾರೆ ಅವರಿಗೆ ಈ ಕಾನೂನಿನಡಿಯಲ್ಲೇ ದುರುಪಯೋಗ ಮಾಡಿಕೊಂಡು ಬೇಲಿಯೇ ಎದ್ದು ಹೊಲ ಮೇಯುವಂತಹ ಪರಿಸ್ಥಿತಿ ಚಿಕ್ಕಮಗಳೂರಿನಲ್ಲಿ ನಿರ್ಮಾಣವಾಗಿದೆ. ಮಾನ್ಯ ಮುಖ್ಯಮಂತ್ರಿಗಳೇ, ತಾವು ದಯಮಾಡಿ ಗಮನಿಸಿ; ಚಿಕ್ಕಮಗಳೂರಿಗೆ ನೀವು ಯಾವುದೇ ರೀತಿಯ ತನಿಖೆ ಏರ್ಪಡಿಸಿ. ರಸ್ತೆ ವಿಸ್ತರಣೆ ನೆಪದಲ್ಲಿ ನಿಮ್ಮ ಅಧಿಕಾರಿಗಳು ಮಾಡಿರುವ ಗೂಂಡಾಗಿರಿಯನ್ನು ಪ್ರತ್ಯಕ್ಷ ಕಾಣಿ. ನೀವು ಯಾವುದೇ ರೀತಿಯ ತನಿಖೆ ಮಾಡಿಸಿ, ಆ ತನಿಖೆಯಲ್ಲಿ ಅವರು ನಿಯಮ ಪಾಲಿಸಿರುವುದು ನಿಜವಾಗಿದ್ದರೆ ನಾನು ನನ್ನದೇ ತಪ್ಪು ಅಂತ ಒಪ್ಪಿಕೊಳ್ಳುತ್ತೇನೆ. ನಿಯಮವನ್ನು ಪಾಲಿಸದೇಹೋಗಿದ್ದರೆ ಇವತ್ತು ಜನರ ಹಕ್ಕನ್ನು ನೀವು ರಕ್ಷಿಸಬೇಕಾಗಿದೆ. ಪ್ರಜಾಪ್ರತಿನಿಧಿಯಾಗಿ ನಾನು ಈ ವ್ಯವಸ್ಥೆಯ ಭಾಗವೆಂದು ಭಾವಿಸಿದ್ದೇನೆ. ಆದರೆ ಶಾಸಕನಾದ ನನ್ನ ಮಾತು ಕೇಳಲೂ ನಿಮ್ಮ ಅಧಿಕಾರಿಗಳು ತಯಾರಿರಲಿಲ್ಲ. ಒಂದು ರೀತಿ ಅಪಮಾನ ಮಾಡುವ ಕೆಲಸ ಮಾಡಿದರು. ಒಂದು ರೀತಿ ಗೂಂಡಾಗಿರಿ ಮಾಡತಕ್ಕ ಕೆಲಸ ಮಾಡಿದರು. ನನ್ನ ಜೊತೆ ಚರ್ಚೆಗೂ ತಯಾರಿಲ್ಲದೆ ಎಲ್ಲವನ್ನು ಕತ್ತಲಲ್ಲಿಟ್ಟು ಜನರ ಬದುಕನ್ನು ಇವತ್ತು ನಾಶ ಮಾಡಿದ್ದಾರೆ. 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪಿಯುಸಿ ಡಿಗ್ರಿ ಪರೀಕ್ಷೆ ಬರೆಯಬೇಕಾದವರಿಗೆ ನಾಲ್ಕೈದು ದಿವಸದಿಂದ ಕರೆಂಟಿರಲಿಲ್ಲ. ಕುಡಿಯುವುದಕ್ಕೆ ನೀರಿಲ್ಲ. ನಿಮ್ಮ ನಗರಸಭೆ ಮಾಡಿದ ಕೃತ್ಯದಿಂದ ಕುಡಿಯಲು ನೀರಿಲ್ಲ. ಹೆಣ್ಣು ಮಕ್ಕಳು ಅಳುತ್ತಾ ಹೇಳುತ್ತವೆ ನಮ್ಮ ಪರೀಕ್ಷೆ ಮುಂದೂಡಿಸಿ ನಾವು ಮೊಂಬತ್ತಿ ಹಿಡಿದು ಓದೋಣ ಅಂದರೆ ನಮ್ಮಪ್ಪ ಅಮ್ಮ ಕಷ್ಟ ಪಡುತ್ತಿರುವುದು ಮನೆ ಬಿದ್ದು ಹೋಗಿರುವುದು ಕಣ್ಮುಂದೆ ಬರುತ್ತದೆ, ನಾವು ಓದುವುದಕ್ಕಾಗುತ್ತಿಲ್ಲ, ಪರೀಕ್ಷೆ ಮುಂದೂಡಿಸಿ ನಮ್ಮ ಲೈಫ್ ಹಾಳಾಯಿತು ಅಂತ ಕಣ್ಣೀರು ಹಾಕುತ್ತಾರೆ. ಈ ರೀತಿ ಏಕಾಏಕಿ ತೆಗೆದುಕೊಂಡಿರುವ ನಿರ್ಧಾರ, ಬದುಕನ್ನು ನಾಶ ಮಾಡಿರುವಂತಹ ಆ ನಿರ್ಧಾರದ ಬಗ್ಗೆ ತಾವು ತನಿಖೆ ಮಾಡಿಸಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಬೇಕು. ಮತ್ತು ಯಾರು ದಾಖಲೆ ಸರಿಯಾಗಿ ಹೊಂದಿದ್ದಾರೆ, ನಾನು ಎನ್‌ಕ್ರೋಚ್ ಮಾಡಿದವರಿಗೆಲ್ಲಾ ಪರಿಹಾರ ಕೊಡಿ ಅನ್ನುವುದಿಲ್ಲ ಆದರೆ ಯಾರು ಎಲ್ಲವನ್ನೂ ಕಾಯಿದೆ ಪ್ರಕಾರ ನಿರ್ಮಾಣ ಮಾಡಿಕೊಂಡಿದ್ದಾರೆ ಅವರ ಕಟ್ಟಡ ಹೊಡೆದಿರುವವರಿಗೆ ಪರಿಹಾರ ಕೊಟ್ಟು ಅವರ ಬದುಕು ಸರಿ ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು ಅಂತ ವಿನಂತಿ ಮಾಡುತ್ತಾ, ತಾವು ಲೈವ್‌ಬ್ಯಾಂಡನ್ನು ನಿಷೇಧಿಸಿದಿರಿ. ಹಾಗೇ ಕ್ರೈಂ ಸ್ಟೋರಿ ಕ್ರೈಂ ಡೈರಿಗಳಿಂದ ಇನ್ನಷ್ಟು ಅಪರಾಧೀಕರಣ ಜಾಸ್ತಿಯಾಗುತ್ತಿದೆ, ಕುಮ್ಮಕ್ಕು ಸಿಗುತ್ತಿದೆ ಅದನ್ನು ನಿಷೇಧಿಸಬೇಕು. ಪೊಲೀಸ್ ಇಲಾಖೆಗೆ ಒಂದು ರೀತಿ ಸ್ವಾಯತ್ತತೆ ಕೊಡುವುದರ ಮೂಲಕ ಅಂದರೆ ಅವರೇನು ಬೇಕಾದರೂ ಮಾಡಲಿ ಅಂತ ಅಲ್ಲ, ಹೆಚ್ಚು ರಾಜಕೀಯ ಹಸ್ತಕ್ಷೇಪ ಇಲ್ಲದಂತೆ ಇವತ್ತಿನ ಅಗತ್ಯತೆಗೆ ತಕ್ಕಂತೆ ಪೊಲೀಸ್ ಇಲಾಖೆಯನ್ನು ಆಧುನೀಕರಣಗೊಳಿಸಿ ಆ ಮೂಲಕ ಈ ರಾಜ್ಯ ಅಪರಾಧಿಗಳ ತಾಣ ಆಗದಂತೆ ತಾವು ನೋಡಿಕೊಳ್ಳಬೇಕು ಅಂತ ವಿನಂತಿ ಮಾಡಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ.ಎಂ.ತಿಮ್ಮರಾಯಪ್ಪ (ಪಾವಗಡ) : ಮಾನ್ಯ ಅಧ್ಯಕ್ಷರೆ, ಈ ದಿನ ಕಾನೂನು ಸುವ್ಯವಸ್ಥೆ ಮತ್ತು ನಕ್ಸಲೀಯರ ಸಮಸ್ಯೆ ವಿಚಾರವಾಗಿ ಏನು ಸುದೀರ್ಘ ಚರ್ಚೆಯಾಗುತ್ತಿದೆ ಸದನದಲ್ಲಿ ಅದರಲ್ಲಿ ವಿಶೇಷವಾಗಿ ನನ್ನ ತಾಲ್ಲೂಕು ಪಾವಗಡ, ಅದರಲ್ಲಿನ ವೆಂಕಟಮ್ಮನಹಳ್ಳಿಯ ಘಟನೆ ಬಗ್ಗೆ ಎಲ್ಲ ಸದಸ್ಯರು ಸದನದ ಮುಂದೆ ಅಲ್ಲಿ ನಡೆದಿರುವ ಘಟನೆಗಳನ್ನು ಎಲ್ಲ ವಿವರಗಳನ್ನು ನೀಡಿದ್ದಾರೆ. ಈ ಒಂದು ಸನ್ನಿವೇಶದಲ್ಲಿ ನಾನು ಆ ಭಾಗದ ಶಾಸಕನಾಗಿ ನನ್ನ ತಾಲ್ಲೂಕಿನ ನಕ್ಸಲೀಯ ಇತರ ಸಮಸ್ಯೆಗಳ ಬಗ್ಗೆ ಈ ಸದನದ ಮುಂದೆ ತರಲು ಇಚ್ಛೆ ಪಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಪಾವಗಡ ತಾಲ್ಲೂಕಿನಲ್ಲಿ ಮೂಲತಃ ನಕ್ಸಲೀಯರು ಯಾರೂ ಇಲ್ಲ.ಎಂದು ನನಗೆ ಗೊತ್ತು. ಕಾರಣ ಇಷ್ಟೆ : ಇದು ಆಂಧ್ರಪ್ರದೇಶದಿಂದ ಕಳೆದ 30–35 ವರ್ಷಗಳಿಂದಲೂ ನನ್ನ ತಾಲ್ಲೂಕಿನ ಬಡಜನರ ಸಮಸ್ಯೆಗಳ ವಿಚಾರದಡಿ ಅವರ ಬೇಡಿಕೆಗಳನ್ನು ಈಡೇರಿಸುತ್ತೇವೆ ಅಂತ ಬಂದು ನನ್ನ ತಾಲ್ಲೂಕನ್ನು ಅಡಗುತಾಣ ಮಾಡಿಕೊಳ್ಳಲು ಅವರು ಹೊರಟಿರುವ ಈ ಸನ್ನಿವೇಶದಲ್ಲಿ ಅನೇಕ ಜನ ಅನುಕೂಲಗಳಿಗಾಗಿ ಅವರ ಮಾತಿನ ಮೋಡಿಗಾಗಿ ನಮಗೆಲ್ಲ ಸೌಲಭ್ಯಗಳನ್ನು ಸರ್ಕಾರ ಕೊಡುವುದಕ್ಕೆ ಆಗುವುದಿಲ್ಲ ಇವರು ಮೂಲಭೂತ ಸೌಕರ್ಯ ಒದಗಿಸುತ್ತಾರೆ ಎಂಬ ದೃಷ್ಟಿಯಲ್ಲಿ ಪ್ರೇರೇಪಿಸುವ ವಿಚಾರಗಳಿಗೆ ಬಲಿಯಾಗುವ ಸನ್ನಿವೇಶದಲ್ಲಿ ಜನರ್ಯಾರೂ ಅವರಿಗೆ ಪ್ರೇರೇಪಣೆ ಕೊಡುವುದಿಲ್ಲ ನಮ್ಮ ಸರ್ಕಾರ, ನಾವು ಅಲ್ಲಿನ ಮೂಲಭೂತ ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ಯೋಚಿಸದೆ ನಮ್ಮ ಸರ್ಕಾರಗಳು ಅವರನ್ನು ವಂಚಿಸುತ್ತಾ ಬಂದಿವೆ. ನನ್ನ ತಾಲ್ಲೂಕಿನಲ್ಲಿ ರಸ್ತೆಗಳಿರಬಹುದು ಪ್ರಸೂತಿ ಗೃಹಗಳಿರಬಹುದು ಆಸ್ಪತ್ರೆ ಶಾಲಾ ಕಾಲೇಜು ಇರಬಹುದು ಯಾವೂ ಸುಸ್ಥಿತಿಯಲ್ಲಿಲ್ಲ. ಅಲ್ಲಿ ವಾಸ ಮಾಡುವ ಬಡವರಿಗೆ ಕುಡಿಯಲು ನೀರಿಲ್ಲ ವಾಸಿಸಲು ಮನೆ ಇಲ್ಲ ಈಗಾಗಲೇ ಕೊಟ್ಟಿರುವಂತಹ ಅನೇಕ ಮನೆಗಳು ಆಡಳಿತ ವ್ಯವಸ್ಥೆ ಸರಿಯಿಲ್ಲದೆ ಅನೇಕ ಮನೆಗಳು ಉಳ್ಳವರ ಪಾಲಾಗಿ ಬಡವರಿಗೆ ಅನಾನುಕೂಲವಾಗಿವೆ. ನಾನು ಶಾಸಕನಾಗಿ ಬಂದ ಮೇಲೆ ನಮ್ಮ ತಾಲ್ಲೂಕಿನ ಜ್ವಲಂತ ಸಮಸ್ಯೆಗಳನ್ನೆಲ್ಲಾ ಅದು ನಕ್ಸಲೀಯ ಸಮಸ್ಯೆ ಇರಬಹುದು ನಕ್ಸಲೀಯ ಸಮಸ್ಯೆಗೆ ಪ್ರೇರೇಪಣೆ ಕೊಡುವ ಜನರಿರಬಹುದು ಅಂಥವರ ಎಲ್ಲಾ ವಿಚಾರವನ್ನೂ ಸರ್ಕಾರದ ಗಮನಕ್ಕೆ ತಂದಿದ್ದೇನೆ. ನನ್ನ ತಾಲ್ಲೂಕಿನಲ್ಲಿ ಶೇಕಡ 75 ಭಾಗ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಹಿಂದುಳಿದ ವರ್ಗಗಳಿಂದ ಕೂಡಿದೆ ಅಲ್ಲಿ ಭೂರಹಿತರು ಅನೇಕರಿದ್ದಾರೆ. ಅಲ್ಲಿ ವಾಸಿಸಲು ಜೀವನ ಸಾಗಿಸಲು ತುಂಬ ಕಷ್ಟ ಇದೆ. ನನ್ನ ತಾಲ್ಲೂಕಿನಲ್ಲಿ ಕೇವಲ 5 ತಿಂಗಳ ಕೃಷಿ ಚಟುವಟಿಕೆ ಬಿಟ್ಟರೆ ಉದ್ಯೋಗಕ್ಕಾಗಿ ಬೇರೆ ಯಾವುದೇ ದಾರಿ ಇಲ್ಲ. ಅಲ್ಲಿ ಅನೇಕ ಸಮಸ್ಯೆಗಳಿವೆ. ಜನರು ಗೊಂದಲಕ್ಕೀಡಾಗಿದ್ದಾರೆ. ವೆಂಕಟಮ್ಮನಹಳ್ಳಿಯ ನಕ್ಸಲೀಯರ ಬಗ್ಗೆ ಎಲ್ಲ ಜನರು ಪತ್ರಿಕೆಗಳಲ್ಲಿ ಬಂದಿರುವ ಹಿನ್ನೆಲೆಯಲ್ಲಿ ವೆಂಕಟಮ್ಮನಹಳ್ಳಿಯಲ್ಲಿ ಯಾರೂ ನಕ್ಸಲೀಯರಿಲ್ಲ, ಅದು ಗಡಿಭಾಗ ವಾಗಿರುವುದರಿಂದ ಅವರಿಗೆ ಬೇಕಾದ ಸವಲತ್ತುಗಳಿಗಾಗಿ ಆ ಜನತೆಯನ್ನು ರಾತ್ರಿ 10–40ರ ವೇಳೆಯಲ್ಲಿ ಮಾವೋವಾದಿಗಳು ನಾವು ಬರುತ್ತಾ ಇದ್ದೇವೆ ದಯವಿಟ್ಟು ನೀವ್ಯಾರೂ ಹೊರಗಡೆ ಬರಬೇಡಿ, ನಾವು ಬರುತ್ತಿರುವುದು ಕೇವಲ ಗುಂಡುಗಳಿಗಾಗಿ ಯಾರನ್ನೂ ಹಿಂಸಿಸಲು ನಾವು ಬರುತ್ತಿಲ್ಲ ಅಂತ ಹೇಳಿ ಯಾರೂ ಹೊರಗೆ ಬರದ ಸನ್ನಿವೇಶ ಅಲ್ಲಿ ಸೃಷ್ಟಿ ಮಾಡಿ ಪೊಲೀಸರ ಅಡಗುತಾಣದ ಮೇಲೆ ಅಟ್ಯಾಕ್ ಮಾಡಿ ಅವರ ಶಸ್ತ್ರಾಸ್ತ್ರಗಳನ್ನು ಕೊಂಡೊಯ್ದಿರುವ ವ್ಯವಸ್ಥೆ ಇದು. ಮತ್ತೆ ಅಲ್ಲಿನ ಜನರಿಗೆ ದೊಡ್ಡ ಆಘಾತ ಕಾದಿದೆ ನಾವೆಲ್ಲ ನಕ್ಸಲೀಯರ ಬಗ್ಗೆ ಸಹಾನುಭೂತಿ ಪರವಾಗಿದ್ದೇವೆ ಎಂದು ಪೊಲೀಸರು ಭಾವನೆ ಇಟ್ಟುಕೊಂಡು ನಮ್ಮನ್ನು ವಿಚಾರಣೆ ನಡೆಸಲು ಬರುತ್ತಾರೆ ನಮಗೆ ತುಂಬಾ ಭಯವಾಗುತ್ತಿದೆ ನಮಗೆ ಯಾವ ರೀತಿಯಲ್ಲೂ ಅವರ ಜೊತೆ ಸಂಪರ್ಕವಿಲ್ಲ ವಿನಾಕಾರಣ ನಮಗೆ

ತೊಂದರೆ ಕೊಡುತ್ತಾರೆ ಎಂಬ ಹಿನ್ನೆಲೆಯಲ್ಲಿ ಅಲ್ಲಿನ ಜನ ಘಟನೆ ನಡೆದ 15 ದಿನದಲ್ಲಿ ಹೊರಗಡೆ ಬರಲಿಲ್ಲ.

(ಮಾನ್ಯ ಶ್ರೀ ಅರಗ ಜ್ಞಾನೇಂದ್ರ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ರೈತರಿರಬಹುದು ಕೂಲಿ ಕಾರ್ಮಿಕರಿರಬಹುದು ಹೊರಗೆ ಬಂದು ಸುಸೂತ್ರವಾಗಿ ತಿರುಗಾಡಲೂ ಸಹ ಕಷ್ಟವಾಗಿತ್ತು. ಅಂತಹ ಹಿನ್ನೆಲೆಯಲ್ಲಿ ಮಾಧ್ಯಮಗಳಲ್ಲಿ ಬಂದ ವರದಿ ಹಿನ್ನೆಲೆಯಲ್ಲಿ ನಾವೂ ಸಹ ಆ ಸ್ಥಳಕ್ಕೆ ಭೇಟಿ ನೀಡಿ ಆ ಘಟನೆ ಹಿಂದಿನ ದಿವಸ ನಾನು ಆ ಸ್ಥಳಕ್ಕೆ ಹೋಗಿದ್ದೆ ಅಲ್ಲಿನ ಸಮಸ್ಯೆಗಳನ್ನು ಕೂಲಂಕಷವಾಗಿ ನಾನು ಗಮನಿಸಿ ಸಂಬಂಧಪಟ್ಟ ಅಧಿಕಾರಿಗಳ ಮತ್ತು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಬರೀ ವೆಂಕಟಮ್ಮನಹಳ್ಳಿ ಸಮಸ್ಯೆ ಒಂದೇ ಅಲ್ಲ. ತಾಲ್ಲೂಕಿನ ಎಲ್ಲಾ ಸಮಸ್ಯೆಗಳನ್ನೂ ನಮ್ಮ ಅಭಿವೃದ್ಧಿ ಆಯುಕ್ತರಾದ ಚಿರಂಜೀವಿ ಸಿಂಗರ ಗಮನಕ್ಕೆ ತಂದಿದ್ದೇವೆ. ನನ್ನ ತಾಲ್ಲೂಕಿಗೆ ಭೇಟಿ ನೀಡಲು ಅವರನ್ನು ನಾನು ಕೇಳಿದಾಗ ಅವರು ಭೇಟಿ ಕೊಟ್ಟಿದ್ದರು. ಒಟ್ಟಿನಲ್ಲಿ ವೆಂಕಟಮ್ಮನಹಳ್ಳಿಯ ಘಟನೆ ನನ್ನ ತಾಲ್ಲೂಕಿನಲ್ಲಿ ಅದು ದೊಡ್ಡ ದುರಂತ ಅಂತ ನಾವು ಭಾವಿಸಿ ಅಲ್ಲಿನ ಜನರಿಗೆ ಈಗ ಪೊಲೀಸರಿಂದ ಆಗುವ ವಿಚಾರಣೆಯಲ್ಲಿ ಅವರು ತುಂಬಾ ಹೆದರಿ ಅಲ್ಲಿ ಜೀವನ ಮಾಡುವುದೇ ದುಸ್ತರವಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ತಪ್ಪಿತಸ್ಥರನ್ನು ಕೂಲಂಕಷವಾಗಿ ಪರಿಶೀಲಿಸಲು ವ್ಯವಸ್ಥೆ ಮಾಡಿ ಇಡೀ ಊರಿನ ಜನರೆಲ್ಲಾ ಆ ಘಟನೆಗೆ ಸಂಬಂಧ ಇರುವವರು ಅಂತ ಯಾರೂ ಭಾವಿಸಬಾರದು. ಅಲ್ಲಿ ಯಾರೂ ಸಹ ಅಂಥವರಿಲ್ಲ. ಹೊರಗಡೆ ಬಂದಿರುವ ಜನ ಅವರ ಆಶ್ರಯವನ್ನು ಪಡೆಯಲಿಕ್ಕೂ ಸಹಾ ಅವರು ಹೋಗಿಲ್ಲ. ಅವರು ಬಂದು ಕ್ಷಣ ಮಾತ್ರದಲ್ಲಿ ಯಾರೂ ತಾವು ಹೊರಗಡೆ ಬರಬೇಡಿ ಎಂದು ಹೇಳಿದ ನಿದರ್ಶನದಲ್ಲಿ ಇಡೀ ವ್ಯವಸ್ಥೆಯಲ್ಲಿ ಪೊಲೀಸರು ಒಂದು ತಪ್ಪನ್ನು ಅರ್ಥ ಮಾಡಿಕೊಂಡಿದ್ದಾರೆ. ಈ ಊರಿನ ಜನರಿಗೆ ಈ ಒಂದು ಘಟನೆಯ ಹಿನ್ನೆಲೆಯೂ ಗೊತ್ತಿದೆ ಎನ್ನುವ ಭಾವನೆ ಅವರಲ್ಲಿದೆ. ದಯವಿಟ್ಟು ತಾವು ಆ ರೀತಿ ಯಾರೂ ಭಾವಿಸಬಾರದು. ಸರ್ಕಾರ ಈ ಬಗ್ಗೆ ಆ ಒಂದು ಗ್ರಾಮದ ಬಡ ಕೂಲಿ ಕಾರ್ಮಿಕರಾಗಿರಬಹುದು, ರೈತರಾಗಿರಬಹುದು. ಅಲ್ಲಿ ಯಾರೂ ಮೂಲ ನಕ್ಸಲೈಟ್‌ಗಳು ಇಲ್ಲ ಎಂದು ಭಾವಿಸಿ ನನಗೂ ಸಹಾ ಆ ಒಂದು ಊರಿನ ಎಲ್ಲಾ ಹಿನ್ನೆಲೆ ಗೊತ್ತಿದೆ. ಸರ್ಕಾರ ಕೂಡಲೇ ಆ ದಿಕ್ಕಿನಲ್ಲಿ ಯಾವುದೇ ಜನರಿಗೂ ಅನ್ಯಾಯವಾಗದಂತೆ ತಾವು ನೋಡಿಕೊಳ್ಳಬೇಕು. ಆ ಜನರಿಗೆ ಒಂದು ಧೈರ್ಯ ಮತ್ತು ಸ್ಥೈರ್ಯವನ್ನು ತುಂಬಿ ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿ ಅಲ್ಲಿನ ಸಮಸ್ಯೆಗಳ ಬಗ್ಗೆ ಮತ್ತು ಆ ಜನರಿಗೆ ಆಗಿರುವ ನೋವು ನಲಿವಿನ ಬಗ್ಗೆ ಸರ್ಕಾರ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಬೇಕೆಂದು ಕೇಳುತ್ತಾ ಮತ್ತೆ ನಮ್ಮ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಒಂದು ಮಾತನ್ನು ಹೇಳಿದರು. ಯಾರೂ ಜನಪ್ರತಿನಿಧಿಗಳು ಅಲ್ಲಿಗೆ ಹೋಗಿಲ್ಲ, ಸರ್ಕಾರದ ಪರವಾಗಿ ಯಾರೂ ಹೋಗಿಲ್ಲವೆಂದು ಹೇಳಿದರು. ಅವತ್ತಿನ ಒಂದು ಸನ್ನಿವೇಶದಲ್ಲಿ ಆ ಘಟನೆ ನಡೆದ ಬೆಳಿಗ್ಗೆ ಆರುಕಾಲು ಗಂಟೆಯಲ್ಲಿ ನಾನು ಪಾವಗಡಕ್ಕೆ ಬಂದೆ. ಆ ಘಟನೆ ಬಗ್ಗೆ ನನಗೆ ಗೊತ್ತೇ ಇರಲಿಲ್ಲ. ಕೂಡಲೇ ನಾನು ಆಸ್ಪತ್ರೆಗೆ ಧಾವಿಸಿ ಇಬ್ಬರು ಪೊಲೀಸ್ ಪೇದೆಗಳು ಅಲ್ಲಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಅವರನ್ನು ವಿಚಾರ ಮಾಡಲಾಗಿ ನಮಗೆ ಯಾವುದೇ ರೀತಿ ಪ್ರಾಣಕ್ಕೆ ತೊಂದರೆ ಇಲ್ಲ ಈಗಾಗಲೇ ತೊಂದರೆಯಾಗಿರುವವರು ಇಷ್ಟು ಜನರು ಸತ್ತು ಹೋಗಿದ್ದಾರೆ ಮತ್ತು ಇಬ್ಬರು–ಮೂವರು ಜನ ಈಗಾಗಲೇ ರಾತ್ರಿಯೇ ಆಸ್ಪತ್ರೆಗೆ ಹೋಗಿದ್ದಾರೆ, ನಮಗೇನೂ ತೊಂದರೆ ಇಲ್ಲವೆಂದು ಹೇಳಿದರು. ಈ ಘಟನೆಯ ಬಗ್ಗೆ ನಾವು ವಿಷಾದವನ್ನು ವ್ಯಕ್ತಪಡಿಸುವುದರ ಜೊತೆಗೆ

ಅವರ ಒಂದು ಯೋಗಕ್ಷೇಮವನ್ನು ವಿಚಾರಿಸಿ ಅವರಿಗೆ ಧೈರ್ಯವನ್ನು ತುಂಬಿದ್ದೇವೆ. ಜೊತೆಗೆ ನಮ್ಮ ಸರ್ಕಾರದಿಂದ ಬಂದ ಸಚಿವರು ಮಾನ್ಯ ಚನ್ನಿಗಪ್ಪನವರೂ ಸಹಾ ಬಂದರು. ಅವರು ಬಂದ ಸಂದರ್ಭದಲ್ಲಿ ಅಲ್ಲಿ ಡಿಐಜಿ ಅವರು ಮತ್ತು ಇನ್ನಿತರೆ ಪೊಲೀಸ್ ಅಧಿಕಾರಿಗಳು ಈ ಸನ್ನಿವೇಶದಲ್ಲಿ ಅಲ್ಲಿ ಯಾರೂ ಸಹಾ ದಯವಿಟ್ಟು ಭೇಟಿ ನೀಡಬೇಡಿ, ಅಲ್ಲಿ ಲ್ಯಾಂಡ್ ಮೈನ್ಸ್ ಇದ್ದಾರೆ, ಇನ್ನು ಅನೇಕ ಬೇರೆ ಬೇರೆಯಾದ ಬಾಂಬ್‌ಗಳನ್ನು ಇಟ್ಟಿರುವ ಸನ್ನಿವೇಶವನ್ನು ಅಲ್ಲಿ ಅಲ್ಲಿ ನಾವು ಪತ್ತೆ ಹಚ್ಚುತ್ತಿದ್ದೇವೆ. ಕೂಡಲೇ ದಯವಿಟ್ಟು ಯಾರೂ ಹೋಗಬೇಡಿ ಎಂದು ಅವರು ನಮಗೆ ಸೂಚನೆಯನ್ನು ಕೊಟ್ಟರು. ಆ ಸೂಚನೆಯ ಹಿನ್ನೆಲೆಯಲ್ಲಿ ಸಚಿವರು ಮತ್ತು ನಾವ್ಯಾರೂ ಹೋಗಲಿಕ್ಕೆ ಆಗಲಿಲ್ಲ. ತದನಂತರ ಬಂದ ಪತ್ರಿಕೆಗಳಲ್ಲಿ ಬಂದ ಅನೇಕ ಸುದ್ದಿಗಳು ಅಲ್ಲಿ ಆ ಗ್ರಾಮದ ಜನತೆಗೆ ಬಂದಿರುವ ನೋವು ನಲಿವುಗಳ ಬಗ್ಗೆ ಸ್ಪಂದಿಸುವುದಕ್ಕೋಸ್ಕರ ನಾನು ಕೂಡ ಒಂದು ವಾರದ ನಂತರ ಹೋಗಿ ಆ ಗ್ರಾಮದ ಜನತೆಯೊಂದಿಗೆ ಕೂತು ಅಲ್ಲಿನ ಸಮಸ್ಯೆ ಬಗ್ಗೆ ಚರ್ಚಿಸಿ ವಿಚಾರಗಳನ್ನೆಲ್ಲಾ ತಿಳಿದು ಬಂದಿದ್ದೇನೆ. ಸರ್ಕಾರ ನನ್ನ ತಾಲ್ಲೂಕಿನ ಸಮಸ್ಯೆಗಳ ಜೊತೆಗೆ ಆ ಗ್ರಾಮದ ಸಮಸ್ಯೆಗಳ ಜೊತೆಗೆ ಎಲ್ಲವನ್ನೂ ಒಟ್ಟಾರೆ ಸೇರಿಸಿ ನನ್ನ ತಾಲ್ಲೂಕಿನಲ್ಲಿ ಈಗೇನು ಸುಮಾರು 18 ಬೇಡಿಕೆಗಳನ್ನು ನಾನು ಈಗಾಗಲೇ ಸರ್ಕಾರಕ್ಕೆ ಒಂದು ಪಟ್ಟಿಯನ್ನು ಮಾಡಿ ಸಲ್ಲಿಸಿದ್ದೇನೆ. ಆ 18 ಬೇಡಿಕೆಗಳಲ್ಲಿ ಅನೇಕ ಪ್ರಾಮುಖ್ಯವಾದ ಬೇಡಿಕೆಗಳು ತುಂಬಾ ಇದ್ದಾವೆ. ಅದರಲ್ಲಿ ಆಸ್ಪತ್ರೆಗಳ ವಿಚಾರ, ಮತ್ತೆ ರಸ್ತೆಗಳ ವಿಚಾರ, ಕುಡಿಯುವ ನೀರಿನ ವಿಚಾರ, ವಸತಿ ಯೋಜನೆಗಳ ವಿಚಾರ, ಇನ್ನು ಪಡಿತರ ವ್ಯವಸ್ಥೆಯಲ್ಲಿ ಆಗಿರುವ ಲೋಪದೋಷಗಳ ವಿಚಾರ, ಅವುಗಳನ್ನು ಈಗಾಗಲೇ ಸರ್ವೆ ಮುಖಾಂತರ ಸರಿಪಡಿಸುವುದಕ್ಕೆ ನಮ್ಮ ಸರ್ಕಾರ ಹೊರಟಿದೆ. ಕೂಡಲೇ ಅವರಿಗೆ ಏನು ಈಗಾಗಲೇ ಪಡಿತರ ಚೀಟಿಗಳು ಸಿಗದೇ ಇರತಕ್ಕ ಅನೇಕ ಬಡ ಕುಟುಂಬಗಳಿಗೆ ಅವುಗಳನ್ನು ಒದಗಿಸಬೇಕೆಂದು ನಾನು ಈ ಸದನದ ಮೂಲಕ ಸರ್ಕಾರವನ್ನು ಕೋರುತ್ತೇನೆ. ನನ್ನ ತಾಲ್ಲೂಕಿಗೆ ಏನು ಹಿಂದೆ 1989ರಿಂದ ಏನು ನಕ್ಸಲೈಟ್ ಪ್ರಭಾವ ನನ್ನ ತಾಲ್ಲೂಕಿಗೆ ಅಂಟಿಕೊಂಡಿದೆ, ಆ ಪ್ರಭಾವದ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ದಿವಂಗತ ವೀರೇಂದ್ರ ಪಾಟೀಲರ ಕಾಲದಲ್ಲಿ ಫಾಡರ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಎಂದು ಹೇಳಿ ಅದನ್ನು ಜಾರಿಗೆ ತಂದು 1989 ರಿಂದೀಚೆಗೆ ಸುಮಾರು 91 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟು ವಿಶೇಷವಾದ ಕಾರ್ಯಕ್ರಮಗಳನ್ನು ಅಲ್ಲಿ ಜಾರಿ ಮಾಡಿಸಿದ್ದರು. ಅಲ್ಲಿಗೆ ಅವು ನಿಂತುಹೋದ ಸನ್ನಿವೇಶದಲ್ಲಿ ಈಗ ಇನ್ನು ಬೃಹದಾಕಾರ ಸಮಸ್ಯೆಗಳು ತಲೆದೋರಿದೆ. ಈಗ ಅಲ್ಲಿ ಬಡತನ ರೇಖೆಗಿಂತ ಕೆಳಗಡೆ ಇರುವ ರೈತರಿಗೆ ಭೂ ರಹಿತ ಕೃಷಿ ಕಾರ್ಮಿಕರಿಗೆ ಅಲ್ಲಿ ಭೂಮಿ ಕೊಡುವ ಒಂದು ವ್ಯವಸ್ಥೆ ಈಗಾಗಲೇ ನಮ್ಮ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವತಿಯಿಂದ ಭೂ ಒಡೆತನದ ಯೋಜನೆಯಲ್ಲಿ ಅಲ್ಲಿ ಭೂಮಿಯನ್ನು ಕೊಡಲಿಕ್ಕೆ ಅನೇಕ ರೈತರು ಮುಂದೆ ಬಂದಿದ್ದಾರೆ. ದಯವಿಟ್ಟು ನಮ್ಮ ತಾಲ್ಲೂಕಿಗೆ ಆ ಒಂದು ಯೋಜನೆಯ ಅಡಿಯಲ್ಲಿ ಹೆಚ್ಚಿನ ಸೌಲಭ್ಯವನ್ನು ಕೊಡಿಸಬೇಕೆಂದು ಈ ಸದನದ ಮೂಲಕ ನಾನು ಸರ್ಕಾರವನ್ನು ಕೋರುತ್ತಾ ನನ್ನ ತಾಲ್ಲೂಕಿನ ಜ್ವಲಂತ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಬೇಕೆಂದು ಎಂದು ಹೇಳುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಛೇರ್ಮನ್‌ರವರೆ, ಈ ನಕ್ಸಲೈಟ್ಸ್ ಸಮಸ್ಯೆ ಬಗ್ಗೆ ಈಗಾಗಲೇ ಬಹಳಷ್ಟು ಸದಸ್ಯರು ಮಾತನಾಡಿದ್ದಾರೆ. ವೆಸ್ಟ್ ಬೆಂಗಾಲ್‌ನಲ್ಲಿ 1965ರಲ್ಲಿ ಏನು ಕಮ್ಯುನಿಸ್ಟ್ ಸರ್ಕಾರ ಬಂತು, ಆ ನಂತರ ಅಲ್ಲಿ ನಕ್ಸಲ್‌ಬಾರಿ ಒಂದು ಗ್ರಾಮದಿಂದಲೇ ಇದು ಕನ್‌ಫ್ರಂಟೇಷನ್ ಪ್ರಾರಂಭವಾಯಿತು. ಕಮ್ಯುನಿಸ್ಟ್ ಸರ್ಕಾರ ಮತ್ತು ಅದೇ ಕಮ್ಯುನಿಸ್ಟ್ ಪಕ್ಷದ

ಕೆಲವು ಎಕ್ಸಿಟ್ರಿಮಿಸ್ಟ್ ಜನರಿದ್ದರು. ವ್ಯವಸ್ಥೆಯ ಬಗ್ಗೆ ಕನ್‌ಫ್ರಂಟೇಷನ್ ಸ್ಟಾರ್ಟ್ ಆಯಿತು. ಬರು ಬರುತ್ತಾ ಅದು ಹೆಚ್ಚು ಪ್ರಭಾವ ಅವರು ಬೆಳೆದಿದ್ದು ಆಂಧ್ರಪ್ರದೇಶದಲ್ಲಿ. ಏನು ಭಾರತ ಸ್ವಾತಂತ್ರ್ಯವಾಗುವುದಕ್ಕೆ ಮೊದಲು ಆ ನಂತರ ಕೂಡ ತೆಲಂಗಾಣದಲ್ಲಿ ಕಮ್ಯುನಿಸ್ಟ್ ಚಳುವಳಿ ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅವರು ಕೆಲವೊಂದು ಕಡೆ ಅವರದೇ ಒಂದು ಪ್ಯಾರಲಲ್ ಗೌರ್‍ನಮೆಂಟನ್ನು ನಡೆಸುತ್ತಿದ್ದರು. ಈಗಲೂ ಕೂಡ ಕೆಲವು ಜಿಲ್ಲೆಗಳಲ್ಲಿ ಆಂಧ್ರಪ್ರದೇಶದಲ್ಲಿ ಅಲ್ಲಲ್ಲಿ ಸರ್ಕಾರವನ್ನು ನಡೆಸುತ್ತಿದ್ದಾರೆ. ಕೆಲವೊಂದು ಕಡೆ ಸರ್ಕಾರ ಎಷ್ಟು ಯಾವ ರೀತಿ ನಡೆಸುತ್ತಾರೋ ಅದಕ್ಕಿಂತಲೂ ಚಲೋ ಅವರು ಕೆಲವು ಕಡೆ ನಡೆಸುತ್ತಿದ್ದಾರೆ. ಇದರ ಅರ್ಥ ನಾವು ಅದನ್ನು ಜಸ್ಟಿಫೈ ಮಾಡುತ್ತಿಲ್ಲ. ಆದರೆ ಈ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಕೆಲವು ಫಿಲಾಸಫಿ ಮಾರ್ಕಿಸ್ಟ್ ಫಿಲಾಸಫಿ, ಮಾವೋ ಫಿಲಾಸಫಿ ಕೆಲವು ಯುವಕರು ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಸಾಮಾಜಿಕ ವ್ಯವಸ್ಥೆಯನ್ನು ನೋಡಿ ಅದರ ವಿರುದ್ಧ ಬಂದೇಳುತ್ತಾರೆ. ಕೆಲವರು ಎಮೋಷನಲ್ ಆಗುತ್ತಾರೆ. ಆದುದರಿಂದಲೇ ಜಯಪ್ರಕಾಶ್ ನಾರಾಯಣರೂ ಕೂಡ ಅವರ ಬಗ್ಗೆ ಅವರ ಕಾರ್ಯ ವೈಖರಿಗಳ ಬಗ್ಗೆ ಅವರು ಜಸ್ಟಿಫೈ ಮಾಡಿಲ್ಲ. ಆದರೆ ಅವರ ಭಾವನೆಗಳಿಗೆ ಅವರೂ ಕೂಡ ಈ ದೇಶದ ದೊಡ್ಡ ರಾಷ್ಟ್ರಭಕ್ತರು ಎಂದು ಹೇಳಿದ್ದಾರೆ. ಅದರಲ್ಲಿ ಕೆಲವು ಮಿಸ್-ಯೂಸ್ ಮಾಡುವ ಎಲಿಮೆಂಟ್ಸ್‌ಗಳೂ ಇವೆ. ನಕ್ಸಲೈಟ್ಸ್ ಮೂವ್‌ಮೆಂಟ್ ಸಾಮಾಜಿಕ ವ್ಯವಸ್ಥೆಯನ್ನು ಬದಲಾವಣೆ ಮಾಡುತ್ತೇವೆ, ಸಮಾನತೆ ತರುತ್ತೇವೆ ಎಂದು ಹೇಳಿ ಕೆಲವು ಕಡೆ ಲೂಟಿ ಮಾಡುವ ಎಲಿಮೆಂಟ್ಸ್‌ಗಳೂ ಇದ್ದಿರಬಹುದು. ಕೆಲವು ಅವರ ಆರ್ಗನೈಷೇಷನ್ಸ್ ನಡೆಸುವ ಸಲುವಾಗಿ ಇಲ್ಲೀಗಲ್ ಆಗಿ ಯಾರು ಹಣವನ್ನು ಸಂಪಾದಿಸುತ್ತಾರೋ ಅಂಥವರಲ್ಲಿ ಅವರಿಗೆ ಥ್ರೆಟನಿಂಗನ್ನು ಕೊಟ್ಟು ಹೆದರಿಸಿ ಅವರಿಂದ ಹಣವನ್ನೂ ಕೂಡ ತೆಗೆದುಕೊಳ್ಳುತ್ತಾರೆ. ಇದು ಎಲ್ಲಾ ಇದೆ. ಆದರೆ ಆಂಧ್ರಪ್ರದೇಶದಲ್ಲಿ ಎಷ್ಟು ಅವರು ಆರ್ಗನೈಸ್ ಇದ್ದಾರೆ, ಆದರೆ ನಮ್ಮಲ್ಲಿ ಇರಲಿಲ್ಲ. ಅಲ್ಲಿ ನೂರಾರು ಕೊಲೆಗಳಾಗಿವೆ. ಎಷ್ಟೋ ಕಡೆ ಅವರೇ ಜಮೀನನ್ನು ಹಂಚಿಬಿಟ್ಟಿದ್ದಾರೆ. ಜಮೀನುದಾರರು ಅಲ್ಲಿಂದ ಓಡಿಹೋಗಿದ್ದಾರೆ. ಕೆಲವು ಹಳ್ಳಿಗಳಲ್ಲಿ ಅವರೇ ಸರ್ಕಾರವನ್ನು ನಡೆಸುತ್ತಾರೆ. ಇಷ್ಟು ದೊಡ್ಡ ಸಮಸ್ಯೆ ನಮ್ಮಲ್ಲಿ ಇರಲಿಲ್ಲ. ಯಾವುದೋ ಒಂದು ಫಿಲಾಸಫಿ ಎಲ್ಲೋ ಬಂದು ಹಿಡಿದುಕೊಟ್ಟು ಎಲ್ಲಿಯೋ ಯೂಸೇ ಮಾಡುವುದು ಜೀವಗಳನ್ನು ತೆಗೆದುಕೊಳ್ಳುವಂಥ ಸಮಸ್ಯೆಯೇನೂ ಇರಲಿಲ್ಲ. ಆದರೆ ಇಲ್ಲಿ ಕೆಲವು ಯುವಕರಿಗೆ ಪೊಲೀಸರಿಂದ ಫೈರಿಂಗನ್ನು ಮಾಡಿ ಎನ್‌ಕೌಂಟರ್ ಎಂದು ಅದಕ್ಕೆ ಹೆಸರನ್ನು ಕೊಟ್ಟು ಅವರನ್ನು ಹತ್ಯೆ ಮಾಡಲಾಯಿತು. ಇದು ಹೆಚ್ಚು ಬೆಳೆಯುತ್ತಿದೆ. ನಕ್ಸಲೈಟ್ ಬಗ್ಗೆ ಹೆಚ್ಚು ಸಹಾನುಭೂತಿ ಬೆಳೆಯುತ್ತಿದೆ. ಅದನ್ನು ಬಹಳ ಬುದ್ಧಿವಂತಿಕೆಯಿಂದ ಸರ್ಕಾರ ಟ್ಯಾಕಲ್ ಮಾಡಬಹುದಾಗಿತ್ತು. ಅವರನ್ನು ಹಿಡಿಯಬಹುದಾಗಿತ್ತು. ಅರೆಸ್ಟ್ ಮಾಡಬಹುದಾಗಿತ್ತು. ಬೇರೆ ರೀತಿಯಿಂದ ಕಾನೂನು ರೀತಿಯಿಂದ ಅವರನ್ನು ಒಳಗಡೆ ಹಾಕಬಹುದಾಗಿತ್ತು. ಅದೇನೂ ಮಾಡಲಾರದೆ ಸಿಕ್ಕಾಪಟ್ಟೆ ಏಕ್‌ದಂ ಫೈರಿಂಗನ್ನು ಮಾಡಿ ಅವರನ್ನು ಹೊಡೆದು ಮಾಡುವ ಅವಶ್ಯಕತೆ ಇರಲಿಲ್ಲ. ಇದು ಸಮಸ್ಯೆ ಇದೆ. ಈ ರೀತಿ ಬಂದೂಕಿನಿಂದ ನಕ್ಸಲೈಟ್ಸ್ ಈ ದೇಶದಲ್ಲಿ ಸಮಾಜವಾದ ತರುವುದು ಅಥವಾ ಈ ವ್ಯವಸ್ಥೆ ಬದಲಾವಣೆ ಮಾಡುವುದು ಅವರಿಂದಲೂ ಸಾಧ್ಯವಿಲ್ಲ. ಅಥವಾ ನೀವು ಅದನ್ನು ಬಂದೂಕಿನಿಂದಲೇ ತಡೆಗಟ್ಟುವುದೂ ಸಾಧ್ಯವಿಲ್ಲ. ಕೆಲವು ಸಲ ವಿಶ್ವಾಸಕ್ಕೆ ತೆಗೆದುಕೊಳ್ಳ ಬೇಕಾಗುತ್ತದೆ. ಕೆಲವು ಸಲ ಅವರನ್ನು ಕಾನೂನು ರೀತ್ಯಾ ಅವರಿಗೆ ಕಾರುಬಾರು ಮಾಡಿ ಆ ಕೆಲಸವನ್ನು ಬಂದ್ ಮಾಡಿಸಬೇಕಾಗುತ್ತದೆ. ಅದನ್ನು ಮಾಡಲಾರದೆ ಈಗ ಕೆಲವು ಅಧಿಕಾರಿಗಳು

ಬಂದೂಕಿನಿಂದಲೇ ಅವರನ್ನೆಲ್ಲಾ ತಣ್ಣಗೆ ಮಾಡುತ್ತೇವೆಂದು ಹೇಳುತ್ತಾರೆ. ಅದು ಸಾಧ್ಯ ಇಲ್ಲ. ಕರ್ನಾಟಕದಲ್ಲಿ ಇದು ಆಗಲಾರದ ಹಾಗೆ ಅಂಥ ಅಧಿಕಾರಿಗಳನ್ನು ಕಂಟ್ರೋಲ್ ಮಾಡಬೇಕು. ಇಲ್ಲದಿದ್ದರೆ ಅಧಿಕಾರಿಗಳು ಪೊಲೀಸ್‌ನವರು ಡೀಮೋರಲೈಸ್ ಆಗುತ್ತಾರೆ ಅದರ ಸಲುವಾಗಿ ಅವರು ಮಾಡಿದ್ದಕ್ಕೆಲ್ಲಾ ಜಸ್ಟಿಫೈ ಮಾಡುತ್ತಾ ಹೋಗುವುದು ಸರ್ಕಾರದ ತಪ್ಪು ನೀತಿ. ಹೀಗೆ ಮಾಡಿ ಸಿಕ್ಕಾಪಟ್ಟೆ ಕರ್ನಾಟಕದಲ್ಲಿ ಮತ್ತೆ ಅನ್ಯಾಯವನ್ನು ಮಾಡಬಹುದು. ಆ ದೃಷ್ಟಿಯಿಂದ ಕೆಲವರನ್ನು ಕಂಟ್ರೋಲ್ ಮಾಡುವ ಅವಶ್ಯಕತೆ ಇದೆ. ಇದಕ್ಕೆ ಮಾನವೀಯ ದೃಷ್ಟಿಯಿಂದ ಮತ್ತೆ ಬೇರೆ ಬುದ್ಧಿವಂತಿಕೆಯಿಂದ ಇದಕ್ಕೆ ಟ್ಯಾಕಲ್ ಮಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ. ಎರಡೂ ಕಡೆ ಬಂದೂಕಿನಿಂದಲೇ ಸಮಸ್ಯೆಯೇನೂ ಬಗೆಹರಿಯುವುದಿಲ್ಲ. ಆ ದೃಷ್ಟಿಯಿಂದ ಸರ್ಕಾರ ಇದರ ಬಗ್ಗೆ ಪೊಲೀಸ್‌ನವರಿಗೆ ಅಥವಾ ಆ ಅಧಿಕಾರಿಗಳಿಗೆ ಸಿಕ್ಕಾಪಟ್ಟೆ ಅಧಿಕಾರವನ್ನು ಕೊಟ್ಟು ಇದನ್ನು ಕ್ರಷ್ ಮಾಡುವುದು ತಪ್ಪು. ಅದರ ಜೊತೆಗೆ ಮಾತು ಆಡುವುದಕ್ಕೆ ಸರ್ಕಾರ ತಯಾರಿರಬೇಕು. ಮಾತನ್ನು ಆಡಬೇಕು. ಕನ್‌ಫ್ರಂಟೇಷನ್‌ಗೆ ಇಳಿಯಬಾರದು. ಬೇರೆ ರೀತಿಯಿಂದ ಹರ್‍ಯಾಸ್‌ಮೆಂಟ್ ಕೊಟ್ಟಿರುವುದೂ ನಡೆದಿದೆ. ವರವರರಾವ್ ಆಯಿತು ಅಥವಾ ಗದ್ದಾರ್ ಆಯಿತು. ಅವರೂ ಕೂಡ ಒಳ್ಳೆಯ ರೀತಿಯಿಂದ ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡಬೇಕು ಎಂಬುದು ನನ್ನ ವಿನಂತಿ.

† **ಶ್ರೀ ಎ. ಸುನೀಲ್ ಕುಮಾರ್ (ಕಾರ್ಕಳ)** : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವಂತಹ ಈ ಹಿನ್ನೆಲೆಯಲ್ಲಿ ಒಂದೆರಡು ಸಂಗತಿಗಳನ್ನು ಪ್ರಸ್ತಾವನೆ ಮಾಡಲು ಅವಕಾಶ ಕೊಟ್ಟಂತಹ ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಕ್ಸಲೀಯ ಚಟುವಟಿಕೆ ಕುರಿತಂತೆ ಸಾಕಷ್ಟು ಜನ ಹಿರಿಯರು ಸಾಕಷ್ಟು ಸಂಗತಿಗಳನ್ನು ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದ್ದಾರೆ. ನೇರವಾಗಿ ನಕ್ಸಲೀಯ ಚಟುವಟಿಕೆಯಿಂದ ನನ್ನ ಕ್ಷೇತ್ರದಲ್ಲಿ ವೈಯಕ್ತಿಕವಾಗಿ 7 ಪಂಚಾಯತಿಗಳಲ್ಲಿ ತೊಂದರೆ ಆಗಿದೆ. ನಕ್ಸಲೀಯ ಚಟುವಟಿಕೆಯಿಂದಾಗಿ ಜನರು ಇವತ್ತು ಭಯಭೀತರಾಗಿ ಜನಜೀವನವನ್ನು ನಡೆಸುವಂತಹ ದುಸ್ಥಿತಿಗೆ ಕಾರಣವಾಗಿದೆ. ನಕ್ಸಲೀಯ ಚಟುವಟಿಕೆ ನಡೆಯುತ್ತಿರುವಂತಹ ಆರಂಭದ ದಿನಗಳಲ್ಲಿ, 2001ನೇ ಇಸವಿಯಲ್ಲಿಯೇ ಚಿಕ್ಕಮಗಳೂರಿನ ಜಿಲ್ಲಾಡಳಿತಕ್ಕೆ ನಾವು ತಿಳಿಸಿದ್ದೆವು. ಪಶ್ಚಿಮ ಘಟ್ಟದ ಈ ಮಲೆನಾಡಿನ ಭಾಗದಲ್ಲಿ ನಕ್ಸಲೀಯ ಚಟುವಟಿಕೆಗಳು ನಡೆಯುತ್ತಿವೆ, ಇದನ್ನು ನಿಯಂತ್ರಿಸಬೇಕು ಎನ್ನುವಂತಹ ಮುನ್ಸೂಚನೆಯನ್ನು 2001ರಲ್ಲಿಯೇ ಅವತ್ತಿನ ಜಿಲ್ಲಾಡಳಿತಕ್ಕೆ ನಾವು ಕೊಟ್ಟಿದ್ದೆವು. ಆದರೆ ಆವತ್ತು ಸರ್ಕಾರ ಯಾವುದೇ ರೀತಿಯಾದಂತಹ ಒಂದು ಕ್ರಮವನ್ನು ಆಗಲೀ ಅಥವಾ ಇದರ ಬಗ್ಗೆ ಒಂದು ಆಸಕ್ತಿಯನ್ನು ತೋರಿಸದೇ ಇರುವಂತಹ ಪರಿಣಾಮವಾಗಿ ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಪಶ್ಚಿಮ ಘಟ್ಟದ ಮಲೆನಾಡಿನ ಭಾಗದಲ್ಲಿ ನಕ್ಸಲೀಯ ಚಟುವಟಿಕೆ ಬೆಳೆಯುತ್ತಿದೆ. ನಕ್ಸಲೀಯ ಚಟುವಟಿಕೆಯನ್ನು ಹತ್ತಿಕ್ಕುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ ಎನ್ನುವಂತಹ ಮಾತನ್ನು ನಾನು ಒಪ್ಪುವುದಕ್ಕೆ ಹೋಗುವುದಿಲ್ಲ. ಸರ್ಕಾರದ ನಿಲುವಿನಲ್ಲಿ ವ್ಯತ್ಯಾಸಗಳು ಪದೇ ಪದೇ ಆಗುತ್ತಿರುವುದರಿಂದ ನಕ್ಸಲೀಯ ಚಟುವಟಿಕೆಯನ್ನು ಇವತ್ತು ಪರಿಣಾಮಕಾರಿಯಾಗಿ ಹತ್ತಿಕ್ಕಲಿಕ್ಕೆ ಆಗುತ್ತಿಲ್ಲ. ಎನ್‌ಕೌಂಟರ್ ಆದಂತಹ ಸಂದರ್ಭದಲ್ಲಿ ಪೊಲೀಸ್ ಇಲಾಖೆಯನ್ನು ಬೆನ್ನು ತಟ್ಟುವಂತಹ ಕೆಲಸವನ್ನು ಸರ್ಕಾರ ಮಾಡ ಬೇಕಾಗಿತ್ತು. ಅದನ್ನು ಮಾಡದೇ ಇರುವಂತಹ ಪರಿಣಾಮವಾಗಿ ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ನಕ್ಸಲೀಯ ಚಟುವಟಿಕೆ ಇಡೀ ರಾಜ್ಯದಲ್ಲಿ ಬೆಳೆಯುತ್ತಿದೆ. ಸಾಕಷ್ಟು ಜನ ಹೇಳಿದರು. ನಕ್ಸಲೀಯ ಚಟುವಟಿಕೆ ಬೆಳೆಯುತ್ತಿರುವಂತಹ ಹಿನ್ನೆಲೆಯಲ್ಲಿ ಚಿಕ್ಕಮಗಳೂರಿನಲ್ಲಿ ಕುದುರೆಮುಖ ರಾಷ್ಟ್ರೀಯ

ಉದ್ಯಾನವನದ ಹೋರಾಟ, ಅಲ್ಲಿರುವಂತಹ ಗಿರಿಜನರ ಹೋರಾಟ, ಇತ್ಯಾದಿ ಸಂಗತಿಗಳನ್ನು ಸಾಕಷ್ಟು ಜನ ಮಾತನಾಡುತ್ತಾ ಹೋದರು. ನಾನು ಈ ಸಂದರ್ಭದಲ್ಲಿ ನಿಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿರುವಂತಹದು, ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಹೋರಾಟವೇ ಬೇರೆ. ಅಲ್ಲಿರುವಂತಹ ಗಿರಿಜನರ ಸಮಸ್ಯೆಯೇ ಬೇರೆ. ನಕ್ಸಲೀಯ ಸಮಸ್ಯೆಯೇ ಬೇರೆ. ಗಿರಿಜನರ ಸಮಸ್ಯೆಗೂ ನಕ್ಸಲೀಯರ ಸಮಸ್ಯೆಗೂ ಯಾವುದೇ ರೀತಿಯ ಸಂಬಂಧ ಇಲ್ಲ. ಆ ಎರಡೂ ಸಮಸ್ಯೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಸರ್ಕಾರ ಇವತ್ತು ನೋಡಬೇಕು. ಗಿರಿಜನರ ಸಮಸ್ಯೆಯಿಂದ ಅಥವಾ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಹೋರಾಟದಿಂದ ನಕ್ಸಲೀಯರ ಸಮಸ್ಯೆ ಆರಂಭವಾಯಿತು ಎನ್ನುವುದಕ್ಕೆ ಯಾವುದೇ ಆಧಾರ ಇಲ್ಲ. ಅಥವಾ ಅದು ಯಾವುದೇ ಕಾರಣಕ್ಕೂ ಸತ್ಯವಲ್ಲ. ಅವೆರಡೂ ಸಮಸ್ಯೆಗಳು ಇವತ್ತು, ಬೇರೆ ಬೇರೆಯಾಗಿ ಕೆಲಸವನ್ನು ಮಾಡುತ್ತಿದೆ. ಆಂಧ್ರಪ್ರದೇಶದಲ್ಲಿ ನಕ್ಸಲೀಯ ಚಟುವಟಿಕೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವಂತಹ ಸಂದರ್ಭದಲ್ಲಿ ಆ ಇಡೀ ನಕ್ಸಲೀಯ ಚಟುವಟಿಕೆಗಳಿಗೆ ಒಂದು ಆಶ್ರಯ ತಾಣ ಆಗಬೇಕು ಎನ್ನುವಂತಹ ಹಿನ್ನೆಲೆಯಲ್ಲಿ ಆಂಧ್ರದಿಂದ ಸಾಕಷ್ಟು ಜನ ನಕ್ಸಲೀಯರು ಇವತ್ತು ಪಶ್ಚಿಮ ಘಟ್ಟದಲ್ಲಿ ತಮ್ಮ ಆಶ್ರಯ ತಾಣಗಳನ್ನು ಕಂಡುಕೊಳ್ಳುತ್ತಿದ್ದಾರೆ. ಅದನ್ನು ಮಾನ್ಯ ಶ್ರೀರಾಮರೆಡ್ಡಿಯವರು ಬಹಳ ಚೆನ್ನಾಗಿ ಉಲ್ಲೇಖ ಮಾಡಿದರು. ಇವತ್ತು ಬಹಳ ಮುಖ್ಯವಾಗಿ ನನಗೆ ದುಃಖ ಮತ್ತು ವಿಚಿತ್ರ ಎನಿಸುತ್ತಿರುವುದು ನಕ್ಸಲೀಯರ ಸಮಸ್ಯೆ ಇವತ್ತು ಸಾಮಾಜಿಕ ಸಮಸ್ಯೆ ಎಂದು ಹೇಳಿರುವುದು. ಸರ್ಕಾರ ಮತ್ತು ಮುಖ್ಯಮಂತ್ರಿಗಳಾದಿಯಾಗಿ ನಕ್ಸಲೀಯ ಸಮಸ್ಯೆ ಅದೊಂದು ಸಾಮಾಜಿಕ ಸಮಸ್ಯೆ ಎಂದು ಹೇಳಿ ಬಹಳ ದೊಡ್ಡ ಪ್ರಮಾಣದಲ್ಲಿ ಪ್ರಚಲಿತದಲ್ಲಿ ಮಾತನಾಡುತ್ತಿರುವಂತಹದ್ದು. ನಕ್ಸಲೀಯ ಚಟುವಟಿಕೆ ಯಾವತ್ತು ಆರಂಭ ಆಯಿತೋ, ಅವತ್ತಿನಿಂದ ಇಲ್ಲಿಯತನಕ ಯಾವುದೇ ಒಂದೇ ಒಂದು ಭಾಗದಲ್ಲಿ ನಕ್ಸಲೀಯರ ಗುಂಪು ಒಂದೇ ಒಂದು ಸಾಮಾಜಿಕ ಆಂದೋಲನವನ್ನು ಇಲ್ಲಿಯ ತನಕ ಮಾಡಲೇ ಇಲ್ಲ. ಬಂದೂಕಿನ ಮುಖಾಂತರ ಅಧಿಕಾರವನ್ನು ಪಡೆಯುತ್ತೇವೆ ಎಂದು ಹೇಳಿ ಹೊರಟಂತಹ ಜನರಿಗೆ ಅದೊಂದು ಸಾಮಾಜಿಕ ಸಮಸ್ಯೆ ಎಂದೇಕೆ ಪರಿಗಣಿಸುತ್ತೀರಿ? ಇಲ್ಲಿಯತನಕ 15 ರಾಜ್ಯಗಳಲ್ಲಿ 153 ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕೆಲಸ ಮಾಡುತ್ತಿರುವಂತಹ ನಕ್ಸಲೀಯ ಚಟುವಟಿಕೆಗಳು ಸಾಮಾಜಿಕವಾದಂತಹ ಯಾವುದೇ ಚಳುವಳಿಗಳಾಗಲೀ, ಸಾಮಾಜಿಕವಾದಂತಹ ಯಾವುದೇ ಸಮಸ್ಯೆಗಳಿಗೆ ಇವತ್ತಿನತನಕ ಫಲಿತಾಂಶವನ್ನು ಕಂಡುಕೊಳ್ಳಲಿಲ್ಲ. ಅಂತಹ ಒಂದು ಪ್ರಜಾಪ್ರಭುತ್ವದ ವಿರೋಧಿಯಾದಂತಹ, ಭಯೋತ್ಪಾದನೆಯಿಂದ ಕೂಡಿರುವಂತಹ ಈ ಸಿದ್ಧಾಂತ, ಇದೊಂದು ಸಾಮಾಜಿಕ ಸಿದ್ಧಾಂತ, ಇದೊಂದು ಸಾಮಾಜಿಕ ಹೋರಾಟ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಏಕೆ ಈ ಹಿನ್ನೆಲೆಯಲ್ಲಿ ಹೇಳುತ್ತಿದ್ದಾರೆಂಬುದು ನಮಗೆ ಅರ್ಥ ಆಗುತ್ತಿಲ್ಲ. ಒರಿಸ್ಸಾ ಮತ್ತು ಬಿಹಾರದಲ್ಲಿ ನಾವು ರಸ್ತೆಯನ್ನು ಪರಿವರ್ತನೆ ಮಾಡುತ್ತೇವೆ. ರಸ್ತೆಯನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿ, ರಸ್ತೆ ರಿಪೇರಿಯನ್ನು ಮಾಡುತ್ತಿದ್ದಂತಹ ಕೂಲಿ ಕಾರ್ಮಿಕರನ್ನು ಆ ಎರಡೂ ರಾಜ್ಯದಲ್ಲಿ ಅಪಹರಣ ಮಾಡಿದಂತಹ ಕೆಲಸಗಳನ್ನು ನಕ್ಸಲೀಯರು ಮಾಡಿದ್ದಾರೆ. ಒಂದು ಸಾಮಾಜಿಕ ಬದಲಾವಣೆ ಮಾಡುತ್ತೇವೆ, ಅಭಿವೃದ್ಧಿ ಮಾಡುತ್ತೇವೆಂದು ಹೇಳಿ ಹೊರಟಂತಹ ಕೂಲಿ ಕಾರ್ಮಿಕರನ್ನು ಆ ಒರಿಸ್ಸಾ ಮತ್ತು ಬಿಹಾರದಲ್ಲಿ ಅಪಹರಣ ಮಾಡಿದಂತಹ ಉದಾಹರಣೆಗಳು ನಮಗೆ ಇತ್ತೀಚಿನ ದಿನಗಳಲ್ಲಿ ಕಾಣುತ್ತಿದೆ. ಹಾಗಾಗಿ ಅವರನ್ನು ಯಾವುದೇ ಹಂತದಲ್ಲಿ ಮಾತುಕತೆಗೆ ಕರೆಯುತ್ತೇವೆ, ಅವರ ಜೊತೆಗೆ ಮಾತುಕತೆಯನ್ನು ಮಾಡುತ್ತೇವೆ ಎನ್ನುವಂತಹ ಮಾತುಗಳಲ್ಲಿ

† ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿರುತ್ತಾರೆ.

ಇವತ್ತು ಯಾವುದೇ ಸತ್ಯಾಂಶ ಇಲ್ಲ. ಇತ್ತೀಚಿನ ಗ್ರಾಮ ಪಂಚಾಯತಿ ಚುನಾವಣೆ ಆದಂತಹ ಸಂದರ್ಭದಲ್ಲಿ ಕಾರ್ಕಳದ ನನ್ನ 7 ಪಂಚಾಯತಿ ಕ್ಷೇತ್ರಗಳಲ್ಲಿ ನಕ್ಸಲೀಯರ ಗುಂಪುಗಳು ಮನೆ-ಮನೆಗೆ ಬಂದು ಹೇಳಿ ಹೋಗಿದ್ದರು. ಈ ಬಾರಿಯ ಗ್ರಾಮ ಪಂಚಾಯತಿಯ ಚುನಾವಣೆಯನ್ನು ಬಹಿಷ್ಕರಿಸಬೇಕು ಎಂದು ಹೇಳಿ ಹೋಗಿದ್ದರು. ಪ್ರಜಾಪ್ರಭುತ್ವದಲ್ಲಿ ಚುನಾವಣೆ ಇವತ್ತು ನಮಗೆ ಬಹಳ ಪ್ರಮುಖವಾದಂತಹ ಅಂಗ. ಆ ಚುನಾವಣೆಯನ್ನೇ ಬಹಿಷ್ಕರಿಸಬೇಕು ಎಂದು ಹೇಳಿದಂತಹ ವ್ಯಕ್ತಿಗಳ ಜೊತೆ ಮಾತುಕತೆಯನ್ನು ಮಾಡುತ್ತೇವೆ ಎಂದು ಹೊರಟಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಪ್ರಜಾಪ್ರಭುತ್ವದಲ್ಲಿ ಯಾರಿಗೆ ನಂಬಿಕೆ ಇಲ್ಲ. ಯಾರಿಗೆ ಮಾತುಕತೆಯಲ್ಲಿ ನಂಬಿಕೆ ಇಲ್ಲ, ಅಂತಹವರ ಜೊತೆಗೆ ನಾನು ಮಾತುಕತೆಯನ್ನು ಮಾಡುತ್ತೇನೆ. ಅದೊಂದು ಸಾಮಾಜಿಕ ಸಮಸ್ಯೆ ಎಂದು ಹೇಳಿ ಇವತ್ತು ಸರ್ಕಾರ ಹೇಳುತ್ತಿದೆ. ಆಂಧ್ರ ಪ್ರದೇಶದಲ್ಲಿ ನೂತನ ಸರ್ಕಾರ ಬಂದ ನಂತರ ನಕ್ಸಲೀಯರನ್ನು ಮಾತುಕತೆಗೆ ಆಹ್ವಾನ ಮಾಡಿದ್ದರು. ಆ ನಕ್ಸಲೀಯರನ್ನು ಮಾತುಕತೆಗೆ ಆಹ್ವಾನ ಮಾಡಿದಾಗ ಅಲ್ಲಿರುವಂತಹ ನಕ್ಸಲೀಯ ಮುಖಂಡರು ಕೊಟ್ಟಂತಹ ಹೇಳಿಕೆ ಏನು ಎಂದರೆ, ನಾವು ಮಾತುಕತೆಗೆ ಸಿದ್ಧ ಆದರೆ ಇದು ನಮ್ಮ ಕಾರ್ಯತಂತ್ರದ ಭಾಗ ಎಂದು ಹೇಳುತ್ತಲೇ, ಶಸ್ತ್ರಗಳನ್ನು ಇಟ್ಟುಕೊಂಡೇ ಮುಖ್ಯಮಂತ್ರಿಗಳ ಜೊತೆಗೆ ಮಾತುಕತೆಗೆ ಹೋದಂತಹ ಉದಾಹರಣೆ ಆಂಧ್ರ ಪ್ರದೇಶದಲ್ಲಿ ನಮಗೆ ಸಿಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಯಾವುದೇ ನಂಬಿಕೆಯನ್ನು ಇಡದಿರುವಂತಹ ಜನ, ಯಾವುದೋ ಚೀನಾದಿಂದ ಬಂದಂತಹ, ಇನ್ಯಾವುದೋ ಭಯೋತ್ಪಾದಕ ಸಂಘಟನೆಗಳಿಂದ ಬಂದಂತಹ, ಬಂದೂಕುಗಳನ್ನು ಇಟ್ಟುಕೊಂಡೇ ಕಾಡುಗಳಲ್ಲಿ ಓಡಾಟ ಮಾಡುತ್ತಿರುವಂತಹ ಜನರ ಜೊತೆಗೆ ನಾನು ಮಾತುಕತೆಯನ್ನು ಮಾಡುತ್ತೇನೆ, ಅದು ಒಂದು ಸಾಮಾಜಿಕ ಸಮಸ್ಯೆ ಎಂದು ಸರ್ಕಾರ ಹೇಳುತ್ತಿದೆ ಎಂದರೆ ಇವತ್ತು ಇಡೀ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ನಾನು ಅಂದುಕೊಳ್ಳುತ್ತೇನೆ. ಇವತ್ತು ಬರ್ಕಣದಲ್ಲಿ ಕಳೆದ ಎರಡು ತಿಂಗಳುಗಳ ಹಿಂದೆ ಒಂದು ಎನ್‌ಕೌಂಟರ್ ಆಗುವಂತಹ ಒಂದು ಪ್ರಯತ್ನ ನಡೆಯಿತು. ಆ ಬರ್ಕಣದ ಗುಂಡಿನ ಚಕಮಕಿಯಲ್ಲಿ ನಕ್ಸಲೀಯರ ಅಡಗುತಾಣದಲ್ಲಿ ಇವತ್ತು ಸಿಕ್ಕಿದ್ದು ಏನು? ಸಾಮಾಜಿಕ ಆಂಧೋಲನ, ಸಾಮಾಜಿಕ ಸಮಸ್ಯೆ ಎಂದು ಸರ್ಕಾರ ಹೇಳುತ್ತಿರುವುದರಿಂದ ಅವತ್ತು ಸಿಕ್ಕಂತಹ ಘಟನೆಗಳನ್ನು ನೆನಪು ಮಾಡಿಕೊಳ್ಳಬೇಕು. ಅವತ್ತು ಮಾತುಕತೆ ಆದಂತಹ ಸಂದರ್ಭದಲ್ಲಿ ನಕ್ಸಲೀಯರ ಅಡಗು ತಾಣದಲ್ಲಿ ಸಿಕ್ಕಿದ್ದು, ಯಾವುದೋ ಸ್ತ್ರೀಯರ ಜೊತೆಗೆ ಓಡಾಟ ಮಾಡುತ್ತಿರುವಂತಹ ಸಂದರ್ಭಗಳಲ್ಲಿ ಗರ್ಭಧಾರಣೆಯನ್ನು ಮುಂದೂಡಬೇಕು ಎನ್ನುವ ಕಾರಣಕ್ಕೋಸ್ಕರ ಇರತಕ್ಕ ಮಾತ್ರೆಗಳು ಅಲ್ಲಿ ಸಿಕ್ಕಿತು. ಭಯಾನಕವಾದಂತಹ ಬಂದೂಕುಗಳು, ಮತ್ತು ನೆಲ ಬಾಂಬುಗಳು ಅಲ್ಲಿ ಸಿಕ್ಕಿದ್ದವು. 300 ಚದರ ಮೀಟರ್ ಇರುವಂತಹ ಕಟ್ಟಡಗಳನ್ನು ಧ್ವಂಸ ಮಾಡುವಂತಹ ಅತ್ಯಾಧುನಿಕವಾದಂತಹ ಶಸ್ತ್ರಾಸ್ತ್ರಗಳು ಅಲ್ಲಿ ಸಿಕ್ಕಿದೆ ಎನ್ನುವಂತಹ ವರದಿಯನ್ನು ಪೋಲೀಸ್ ಇಲಾಖೆ ಕೊಟ್ಟಿತು. ಈ ರೀತಿ ಗರ್ಭಧಾರಣೆಯನ್ನು ಮುಂದೂಡುವಂತಹ ಮಾತ್ರೆಗಳು, ನಿರೋಧ್‌ಗಳನ್ನು ಇಟ್ಟುಕೊಂಡಿರುವಂತಹ, ಅಡಗು ತಾಣಗಳನ್ನು ಹೊಂದಿದ ನಕ್ಸಲೀಯರ ಬಗ್ಗೆ ಇವತ್ತು ಸರ್ಕಾರ ಸಾಮಾಜಿಕ ಸಮಸ್ಯೆ ಎಂದು ಹೇಳಲಿಕ್ಕೆ ಹೊರಟಿದೆ. ಹಾಗಾಗಿ ಇವತ್ತು ಯಾವ ರೀತಿಯಲ್ಲಿ ಹಿಂಸೆಗಳನ್ನು ಪ್ರಚೋದಿಸಿದ್ದರು? ಕಳೆದ 15 ರಾಜ್ಯಗಳಲ್ಲಿ, ಇತ್ತೀಚಿನ ವರ್ಷಗಳಲ್ಲಿ ಪ್ರಚೋದಿಸಿದ್ದರು ಎನ್ನುವುದಕ್ಕೆ ಪತ್ರಿಕೆಯಲ್ಲಿ ಬಂದಂತಹ ಒಂದೇ ಒಂದು ತುಣುಕನ್ನು ಮಾತ್ರ ನಾನು ಉಲ್ಲೇಖ ಮಾಡುತ್ತಿದ್ದೇನೆ. ಏಕೆಂದರೆ ಆ ರೀತಿ

ಹಿಂಸೆಯನ್ನು ಪ್ರಚೋದನೆ ಮಾಡಿ ಇಡೀ ಬಡ ಜನರನ್ನು ದಿಕ್ಕು ತಪ್ಪಿಸುತ್ತಿರುವಂತಹ ಹಿಂಸೆಯನ್ನೇ ಒಂದು ಪ್ರವೃತ್ತಿ ಮಾಡಿಕೊಂಡಿರುವಂತಹ ಜನಾಂಗದ ಜೊತೆಗೆ ಮಾತುಕತೆ ಮಾಡುತ್ತೇವೆ ಎಂದು ಹೇಳಿ ಸರ್ಕಾರ ಏನು ಹೊರಟಿದೆ, ಪಕ್ಕದ ಎರಡು ಮೂರು ರಾಜ್ಯಗಳಲ್ಲಿ ಯಾವ ರೀತಿ ಹಿಂಸೆ ಮಾಡಿದ್ದರು ಎನ್ನುವುದಕ್ಕೆ ಪತ್ರಿಕೆಯಲ್ಲಿ ಒಂದೇ ಒಂದು ತುಣುಕು ಬಂದಿದೆ. ಅದನ್ನು ಉಲ್ಲೇಖ ಮಾಡುತ್ತಿದ್ದೇನೆ ಅಷ್ಟೇ. "ಚಂದ್ರಾಚಲಂನಲ್ಲಿ ಜೀಪ್ ಒಂದರಲ್ಲಿ ಪ್ರಯಾಣಿಸುತ್ತಿದ್ದ ಮಾರ್ಕಿಸ್ಟ್ ಚಿಂತಕರನ್ನು ನಕ್ಸಲೀಯರು ಅಡ್ಡಗಟ್ಟಿದರು. ಅದರಲ್ಲಿದ್ದಂತಹ ಶಾಸಕ ಕೆ.ಬೊಕ್ಕಿ, ಬಿ.ಚಂದ್ರ ಮತ್ತು ಭೀಷ್ಮ ರಾವ್ ಅವರನ್ನು ಹೊರಗೆಳೆದರು. ಭೀಷ್ಮ ರಾವ್ ಅವರ ಕೈ ಮತ್ತು ಕಾಲುಗಳನ್ನು ಗರಗಸದಿಂದ ಕೊಯ್ದರು. ಅವರು ರಕ್ತ ಸ್ರಾವದಿಂದ ಸಾವನ್ನಪ್ಪಿದ್ದು ನೋಡಿ ನಕ್ಸಲೀಯರು ಆನಂದಿಸಿದರು." ಎಂದು ಹೇಳಿ ಒಂದು ಪತ್ರಿಕೆ ಇತ್ತೀಚೆಗೆ ನಡೆದಂತಹ ಘಟನೆಯನ್ನು ಉಲ್ಲೇಖ ಮಾಡುತ್ತದೆ. ಈ ರೀತಿ ಹಿಂಸೆಯನ್ನು ಅತ್ಯಂತ ಬಹಳ ದೊಡ್ಡ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮಾಡುತ್ತಿರುವಂತಹ ಜನರ ಜೊತೆಗೆ ನಾನು ಮಾತುಕತೆ ಮಾಡುತ್ತೇನೆ. ಅದೊಂದು ಸಾಮಾಜಿಕ ಸಮಸ್ಯೆ ಎಂದು ಸರ್ಕಾರ ಹೇಳಲಿಕ್ಕೆ ಹೊರಟಿದೆ: ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ವಿನಂತಿಯನ್ನು ಮಾಡುವಂತಹದ್ದು ಏನು ಅಂದರೆ ನಕ್ಸಲೀಯರ ಜೊತೆಗೆ ಯಾವುದೇ ಮಾತುಕತೆಯನ್ನು ಮಾಡುವಂತಹ ಅಗತ್ಯ ಇಲ್ಲ. ಬದಲಾಗಿ ಇವತ್ತು ನಕ್ಸಲೀಯ ಪ್ರಭಾವಗಳು ಯಾವ್ಯಾವ ಪ್ರದೇಶಗಳಿಗೆ ಒಳಗಾಗಿವೆ? ಅಲ್ಲಿರುವಂತಹ ಜನ ಪ್ರತಿನಿಧಿಗಳನ್ನು, ಅಲ್ಲಿ ಯಾವ ಸಮಸ್ಯೆಗಳು ಆಗಿವೆ ಎನ್ನುವಂತಹ ಬಗ್ಗೆ ಒಮ್ಮೆಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಮಾತುಕತೆಗೆ ಕರೆಯಲಿಲ್ಲ. ಇವತ್ತು ನಕ್ಸಲೀಯ ಚಟುವಟಿಕೆ ಬೆಳೆಯುತ್ತಿರುವಂತಹ ಶೃಂಗೇರಿ ಇರಬಹುದು, ಮೂಡಿಗೆರೆ, ಕಾರ್ಕಳ, ಹೊಸನಗರ ಅಥವಾ ಕುಂದಾಪುರ, ತೀರ್ಥಹಳ್ಳಿ. ಈ ಭಾಗದ ಯಾವುದೇ ಜನಪ್ರತಿನಿಧಿಗಳನ್ನು ಅಲ್ಲಿ ಯಾವ ಸಮಸ್ಯೆ ಇವತ್ತು ನಿರ್ಮಾಣ ಆಗಿದೆ? ಇಷ್ಟು ಉಲ್ಬಣ ಆಗಲಿಕ್ಕೆ ಕಾರಣ ಏನು ಎನ್ನುವಂತಹ ಯಾವುದೇ ಸಂಗತಿಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿರುವ ಜನ ಪ್ರತಿನಿಧಿಗಳ ಜೊತೆ ಮಾತುಕತೆ ಮಾಡಲಿಲ್ಲ. ಪ್ರತ್ಯಕ್ಷವಾಗಿ ನಕ್ಸಲೀಯ ಚಟುವಟಿಕೆಯ ಜೊತೆಗೆ ನಾವು ಕೆಲಸವನ್ನು ಮಾಡುತ್ತಿದ್ದೇವೆ. ಅವರ ವಿರುದ್ಧ ಹೋರಾಟ ಮಾಡುವಂತಹ ಶಾಸಕರು ನಾವಿದ್ದೇವೆ. ಇವರನ್ನು ಕರೆಸಿ ಮಾತುಕತೆ ಮಾಡುವಂತಹ, ಅವರ ಸಮಸ್ಯೆಗಳನ್ನು ಕೇಳುವಂತಹ ಪ್ರಯತ್ನವನ್ನು ಇಲ್ಲಿಯವರೆಗೂ ಮಾನ್ಯ ಮುಖ್ಯಮಂತ್ರಿಗಳು ಮಾಡಲೇ ಇಲ್ಲ. ನಾನು ಈ ಸದನದಲ್ಲಿ ಹೇಳುತ್ತಿದ್ದೇನೆ. ಎನ್‌ಕೌಂಟರ್ ಕಳೆದ ವರ್ಷ ಏನಾಯಿತು? ಮೊನ್ನೆ ಮೆಣಸಿನಹಾಡಿನಲ್ಲಿ ನಡೆದಂತಹ ಎನ್‌ಕೌಂಟರ್ ಈ ಎನ್‌ಕೌಂಟರನ್ನು ಸಮರ್ಥಿಸಲೇಬೇಕು. ಪೊಲೀಸರನ್ನು ಬೆನ್ನು ತಟ್ಟುವಂತಹ ಕೆಲಸವನ್ನು ನಾವು ಮಾಡಲೇ ಬೇಕು. ಇವತ್ತು ಮಾನ್ಯ ಗದ್ದಾರ್ ಅವರು ಬಂದಂತಹ ಸಂದರ್ಭದಲ್ಲಿ ಇದಕ್ಕೆ ಗುಂಡಿನ ಮುಖಾಂತರ ಉತ್ತರವನ್ನು ಕೊಡುತ್ತೇವೆ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳ ಮನೆಯಿಂದ ಹೇಳಿ ಹೋಗುತ್ತಾರೆ ಎಂದಾದರೆ ನಾವೂ ಕೂಡ ನಕ್ಸಲೀಯರಿಗೆ ಇವತ್ತು ಗುಂಡಿನ ಮುಖಾಂತರವೇ ಉತ್ತರ ಕೊಡುತ್ತೇವೆ ಎನ್ನುವಂತಹ ಅತ್ಯಂತ ಪೌರುಷದ ಮಾತನ್ನು ಸರ್ಕಾರ ಹೇಳಬೇಕಾಗಿತ್ತು. ಅದರ ಬದಲಾಗಿ ಎನ್‌ಕೌಂಟರ್ ಆದಂತಹ ಸಂದರ್ಭದಲ್ಲಿ ಅದರಲ್ಲಿ ಸತ್ತಂತಹ ಭಯೋತ್ಪಾದಕ ನಕ್ಸಲೀಯನನ್ನು ಹುತಾತ್ಮ ಎಂದು ಚಿತ್ರಣ ಮಾಡಿದ್ದು. ಮೊನ್ನೆ ಎರಡು ಜನ ಸತ್ತು ಹೋದಂತಹ ಸಂದರ್ಭದಲ್ಲಿ ಅವರೂ ಕೂಡ ಇನ್ನಾವುದೋ ಹುತಾತ್ಮರ ತರಹ ಹಾಡಿ ಹೊಗಳಿದಂತಹ ಸಂಗತಿಗಳನ್ನು ಮಾಡಿದಾಗ, ಸರ್ಕಾರ ಪೊಲೀಸರಿಗೆ ಬೆನ್ನು ತಟ್ಟುವಂತಹ ಕೆಲಸವನ್ನು

ಮಾಡಬೇಕಾಗಿತ್ತು. ಮಾನ್ಯ ಸಿ.ಟಿ. ರವಿ ಅವರು ಉಲ್ಲೇಖ ಮಾಡಿದರು. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಿಂದ ಪೊಲೀಸರಿಗೆ ಎಷ್ಟು ಹತಾಶೆ ಆಯಿತು ಎಂದು ಹೇಳಿದರು. ಮೆಣಸಿನ ಹಾಡಿ ಘಟನೆ ಆಯಿತು. ಆ ಸಂದರ್ಭದಲ್ಲಿ ಅಲ್ಲಿಂದ ಓಡಿ ಬಂದ 6 ಜನ ನಕ್ಸಲರು ಕಾರ್ಕಳಕ್ಕೆ ಬಂದಿದ್ದಾರೆ ಎಂಬ ಸುದ್ದಿ ಬಂತು. ತಕ್ಷಣ ಅಲ್ಲಿನ ಸ್ಥಳೀಯರು ಬಂದು ನನಗೆ ಸುದ್ದಿ ಮುಟ್ಟಿಸಿದರು. ನಾನು ಅಂದಿನ ಪೊಲೀಸ್ ಮುಖ್ಯಾಧಿಕಾರಿಗಳನ್ನು ಉದ್ದೇಶಿಸಿ, ಯಾವ ಮನೆಯಲ್ಲಿ ಆರು ಜನ ನಕ್ಸಲೈಟರು ಬಂದು ಉಳಿದುಕೊಂಡಿದ್ದಾರೆ? ಎಷ್ಟೊತ್ತಿಗೆ ಬಂದು ಉಳಿದುಕೊಂಡಿದ್ದಾರೆ? ಆ ಸ್ಥಳಕ್ಕೆ ಯಾವ ರೀತಿ ತೆರಳಬೇಕೆಂಬ ಮಾರ್ಗದ ಸಮೇತ ವಿಳಾಸವನ್ನು ಅವರಿಗೆ ನೀಡಿದ್ದೆ. ಆದರೆ, ಈ ನಿಟ್ಟಿನಲ್ಲಿ ಅಂದಿನ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಕಾರಣವೇನೆಂದರೆ, ಅವ್ರೊತ್ತಿನ ಎನ್‌ಕೌಂಟರ್ ಅನ್ನು ಸಮರ್ಥಿಸಿಕೊಳ್ಳುವುದಕ್ಕೆ ಬದಲು ಪೊಲೀಸರ ಮಾನಸಿಕ ಸ್ಥೈರ್ಯ ಕುಗ್ಗಿಸುವ ಪ್ರಯತ್ನ ಸರ್ಕಾರದಿಂದ ಆಗಿಹೋಗಿತ್ತು ! ಈದು ಎನ್‌ಕೌಂಟರ್ ನಡೆದ ಸಂದರ್ಭದಲ್ಲಿ ಅಲ್ಲಿನ ಪೊಲೀಸ್ ಮುಖ್ಯಾಧಿಕಾರಿಗಳನ್ನೇ ಅಪರಾಧಿ ಎನ್ನುವ ರೀತಿಯಲ್ಲಿ ಚಿತ್ರಿಸಲಾಯಿತು. ಹೀಗಾಗಿ, ಇನ್ನೊಂದು ಹೊಸ ಸಾಹಸ ಮಾಡಬೇಕೆನ್ನುವ ಉತ್ಸಾಹ ಅಂದಿನ ಪೊಲೀಸ್ ಮುಖ್ಯಾಧಿಕಾರಿಗಳಿಗೆ ಇರಲಿಲ್ಲ. ಅಕಸ್ಮಾತ್ ಎನ್‌ಕೌಂಟರ್‌ಗೆ ಸಂಬಂಧಿಸಿದಂತೆ ಸರ್ಕಾರ ಅವರ ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದರೆ, ಮತ್ತೊಮ್ಮೆ ಆರು ಜನ ನಕ್ಸಲೈಟ್ ಭಯೋತ್ಪಾದಕರನ್ನು ಕಾರ್ಕಳದಲ್ಲಿ ಹಿಡಿಯುವ ಪ್ರಯತ್ನವನ್ನು ಅಲ್ಲಿನ ಪೊಲೀಸ್ ಇಲಾಖೆಯವರು ಮಾಡುತ್ತಿದ್ದರೆಂಬ ಬಗ್ಗೆ ನನಗೆ ವಿಶ್ವಾಸವಿತ್ತು. ಆದರೆ, ಸರ್ಕಾರ ಈ ರೀತಿ ನಿಲುವು ತಳೆದ ಪರಿಣಾಮ ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ. ಈ ಸಂದರ್ಭದಲ್ಲಿ ನನಗನ್ನಿಸುವಂಥಾದ್ದು: ಪೊಲೀಸ್ ಇಂಟೆಲಿಜೆನ್ಸಿಯನ್ನು ಯಾವ ರೀತಿ ಪ್ರೋತ್ಸಾಹಿಸಬೇಕಿತ್ತೋ, ಆ ರೀತಿಯಲ್ಲಿ ಸರ್ಕಾರ ಪ್ರೋತ್ಸಾಹಿಸಲಿಲ್ಲ. ಪ್ರತಿನಿತ್ಯವೂ ನಕ್ಸಲೈಟ್ ಚಟುವಟಿಕೆ ನಡೆಯುತ್ತಿರುವ ಸಂದರ್ಭದಲ್ಲಿ ಬೇರೆ ಬೇರೆ ಹೇಳಿಕೆಗಳು ಬರುತ್ತಿವೆ. 'ಗಂಗಾಧರನ್' ಎನ್ನುವ ವ್ಯಕ್ತಿ ಹೇಳಿಕೆಗಳನ್ನು ಕೊಡುತ್ತಲೇ ಇದ್ದಾರೆ. ಇವೊತ್ತಿನ ತನಕವೂ ಗಂಗಾಧರನ್ ಎನ್ನುವ ವ್ಯಕ್ತಿ ಯಾರು ಎನ್ನುವ ಮಾಹಿತಿ ಸರ್ಕಾರದ ಬಳಿ ಇಲ್ಲವೆಂದು ನಾನು ಭಾವಿಸುತ್ತೇನೆ, ಏಕೆಂದರೆ, ಯಾರೋ ಒಂದಿಷ್ಟು ಜನರು ಇಷ್ಟು ದೊಡ್ಡ ಪ್ರಮಾಣದಲ್ಲಿ ಬಂದೂಕುಗಳನ್ನು ಹಿಡಿದುಕೊಂಡು ಕಾಡಿನಲ್ಲಿ ವಾಸಿಸುತ್ತಿದ್ದರೆ, ಇನ್ನೊಂದಿಷ್ಟು ಜನರು ಪರೋಕ್ಷವಾಗಿ ನಕ್ಸಲೈಟರಿಗೆ ಬೆಂಬಲ ನೀಡುತ್ತಾ ನಾಡಿನಲ್ಲಿ ವಾಸಿಸುತ್ತಿದ್ದಾರೆ. ಅವರನ್ನು ಗುರ್ತಿಸುವ ಕೆಲಸವನ್ನು ಸರ್ಕಾರ ಮಾಡಬೇಕಿತ್ತು, ಮಾಡಲಿಲ್ಲ.

ಆದಕಾರಣ, ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯಿಸುತ್ತಿರುವುದೇನೆಂದರೆ, ಮೆಣಸಿನ ಹಾಡ್ಯ ಘಟನೆ ಜರುಗಿದ ಸಂದರ್ಭದಲ್ಲಿ ಗದ್ದರ್ ನೇತೃತ್ವದಲ್ಲಿ ಸಾಕಷ್ಟು ಜನರು ಮುಖ್ಯಮಂತ್ರಿಗಳ ಮನೆ ಮುಂದೆ ಪ್ರತಿಭಟನೆ ನಡೆಸುವ ಮೂಲಕ ಎಚ್ಚರಿಕೆ ಕೊಟ್ಟರು. ಒಂದಷ್ಟು ಜನ ಪತ್ರಕರ್ತರು ಕೂಡ ಆ ಹೋರಾಟದಲ್ಲಿದ್ದರು. ಆ ಹೋರಾಟದಲ್ಲಿ ಪಾಲ್ಗೊಂಡ ಒಬ್ಬ ಮಹಿಳಾ ಪತ್ರಕರ್ತರ ಫೋಟೋ ಕೂಡ ನನ್ನ ಬಳಿ ಇದೆ. ತಮ್ಮ ಬಾಯಿಗೆ ಕಪ್ಪು ಬಟ್ಟೆ ಬಿಗಿದುಕೊಳ್ಳುವ ಮೂಲಕ ಒಬ್ಬ ಮಹಿಳಾ ಪತ್ರಕರ್ತರು ಹೋರಾಟದಲ್ಲಿ ಭಾಗವಹಿಸಿದ್ದರು. "ಗದ್ದರ್ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ" ಎಂದು ಸರ್ಕಾರ ಹೇಳಿತು. ಗದ್ದರ್ ಅವರನ್ನು ಇಲ್ಲಿಯವರೆಗೂ ಕರೆದುಕೊಂಡು ಬಂದು ಹೋರಾಟ ರೂಪಿಸಿ ಅವರ ಮುಖಾಂತರ ಹೇಳಿಕೆ ಕೊಟ್ಟ ನಮ್ಮ ರಾಜ್ಯದ ಒಬ್ಬ ಮಹಿಳಾ ಪತ್ರಕರ್ತರ ವಿರುದ್ಧ ಸರ್ಕಾರ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇಷ್ಟೆಲ್ಲಾ ಅನಾಹುತಗಳಾಗಲು ಆ ಗುಂಪು ಒಂದು ರೀತಿ ಕಾರಣವೆಂದು ಸರ್ಕಾರಕ್ಕೆ ಗೊತ್ತಿದ್ದರೂ, ಮತ್ತು

ಆ ಕುರಿತಂತೆ ಪೊಲೀಸ್ ಇಲಾಖೆಗೆ ತಿಳಿಸಿದ್ದರೂ, ಈ ನಿಟ್ಟಿನಲ್ಲಿ ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಮಾತನಾಡುತ್ತಾ, 'ಕರ್ನಾಟಕ ವಿಮೋಚನ ರಂಗದ ನೇತೃತ್ವದಲ್ಲಿ ಇಷ್ಟೆಲ್ಲಾ ಕೆಲಸಗಳು ನಡೆಯುತ್ತಿದೆ' ಎಂದು ತಿಳಿಸಿದ್ದಾರೆ. ನಕ್ಸಲೈಟ್ ಚಟುವಟಿಕೆಯನ್ನು ಹತ್ತಿಕ್ಕಬೇಕಾದರೆ ಸರ್ಕಾರಕ್ಕೆ ಇಚ್ಛಾಶಕ್ತಿಯ ಅಗತ್ಯವಿದೆ. ಆ ಇಚ್ಛಾಶಕ್ತಿಯನ್ನು ಉಪಯೋಗಿಸಿಕೊಂಡು ಕರ್ನಾಟಕ ವಿಮೋಚನ ರಂಗವು ಇವೊತ್ತು ಬೇರೆ ಬೇರೆ ವಿಶ್ವವಿದ್ಯಾಲಯಗಳ ಮುಖಾಂತರ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ತನ್ನತ್ತ ಸೆಳೆಯುವ ಪ್ರಯತ್ನ ಮಾಡುತ್ತಿದೆ. ಈ ಕಾರಣಕ್ಕಾಗಿ ಕರ್ನಾಟಕ ವಿಮೋಚನ ರಂಗವನ್ನು ನಿಷೇಧಿಸಬೇಕು. ಪೊಲೀಸರಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಿ ನಕ್ಸಲೈಟ್‌ಗಳನ್ನು ಹತ್ತಿಕ್ಕಲು ಮುಕ್ತ ಅವಕಾಶ ಕಲ್ಪಿಸಿಕೊಡಬೇಕು. ಈ ವಿಚಾರದಲ್ಲಿ ಯಾವುದೇ ರೀತಿಯಲ್ಲೂ ಮೂಗು ತೂರಿಸುವ ಪ್ರಯತ್ನವನ್ನು ಸರ್ಕಾರ ಮುಂದಿನ ದಿವಸಗಳಲ್ಲಿ ಮಾಡಬಾರದು. ಶಾಸಕನಾಗಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಕ್ಸಲೈಟ್ ಪೀಡಿತ ಭಾಗದ ಜನರೊಂದಿಗೆ ನೇರವಾಗಿ ಮಾತುಕತೆ ನಡೆಸುತ್ತಿದ್ದೇನೆ. ದಕ್ಷ ಪೊಲೀಸ್ ಅಧಿಕಾರಿಗಳನ್ನು ಎಲ್ಲಾ ಸ್ಥಳಗಳಲ್ಲೂ ನೇಮಿಸಿದಲ್ಲಿ ನಕ್ಸಲೈಟರ ವಿರುದ್ಧ ಹೋರಾಟ ನಡೆಸುತ್ತಿರುವ ಅಲ್ಲಿನ ಜನರ ಮುಖಾಂತರ ನಕ್ಸಲೈಟರನ್ನು ನಿಶ್ಚಿತವಾಗಿಯೂ ಹಿಮ್ಮೆಟ್ಟಿಸಲು ನಮಗೆ ಸಾಧ್ಯವಾಗುತ್ತದೆ. ಹಾಗಾಗಿ, ನನ್ನ ಕ್ಷೇತ್ರದಲ್ಲಿ ನಕ್ಸಲೈಟ್ ಚಟುವಟಿಕೆ ತೀವ್ರವಾಗಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಅಲ್ಲಿನ 10-15 ಗ್ರಾಮಗಳಲ್ಲಿರುವ ಎಲ್ಲಾ ಮನೆಗಳಿಗೂ ವೈಯಕ್ತಿಕವಾಗಿ ಭೇಟಿ ಕೊಟ್ಟಿದ್ದೇನೆ. ತನ್ಮೂಲಕ ಅಲ್ಲಿನ ಎಲ್ಲಾ ಜನರಿಗೂ ವಿಶ್ವಾಸವಿಡುವ ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ದಕ್ಷ ಪೊಲೀಸ್ ಅಧಿಕಾರಿಗಳನ್ನು ನೇಮಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ನಾವು ಪರಿಪರಿಯಾಗಿ ಬೇಡಿಕೊಂಡಿದ್ದರೂ ಇಲ್ಲಿಯ ತನಕವೂ ಒಬ್ಬ ದಕ್ಷ ಅಧಿಕಾರಿಯನ್ನು ನೇಮಿಸಲಿಲ್ಲ. ನಮ್ಮ ಭಾಗದಲ್ಲಿ ನೇಮಿಸಿರುವ ಪೊಲೀಸ್ ಅಧಿಕಾರಿಗಳು ನಕ್ಸಲೈಟ್‌ರೊಂದಿಗೆ ಕೈ ಜೋಡಿಸುವವರಾಗಿರುವುದರಿಂದ ಅವರನ್ನು ಬದಲಾಯಿಸಿದರೆ ನನ್ನ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಕ್ಸಲೈಟರನ್ನು ಹಿಮ್ಮೆಟ್ಟಿಸಲು ಸಾಮಾನ್ಯ ಜನರೊಂದಿಗೆ ಕಾರ್ಯತಂತ್ರ ರೂಪಿಸುತ್ತೇವೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ನೀಡಲು ಇಚ್ಛಿಸುತ್ತೇನೆ. ಇಚ್ಛಾಶಕ್ತಿಯ ಕೊರತೆಯಿಂದ ನಕ್ಸಲೈಟರನ್ನು ಹತ್ತಿಕ್ಕಲಿಲ್ಲವೆಂದರೆ, ಪಶ್ಚಿಮಘಟ್ಟದಲ್ಲಿ ಮುಂದಿನ ದಿನಗಳಲ್ಲಿ ಯಾವ ರೀತಿಯ ಅನಾಹುತವಾಗುತ್ತದೆಂದರೆ, ಇವೊತ್ತು ಅತ್ಯಂತ ಪ್ರಸಿದ್ಧ ಪ್ರವಾಸಿ ತಾಣಗಳಾಗಿರುವ ಶೃಂಗೇರಿ, ಹೊರನಾಡು, ಕಾರ್ಕಳದ ಗೊಮ್ಮಟೇಶ್ವರ ಬೆಟ್ಟ, ಚತುರ್ಮುಖ ಬಸದಿ, ಆ ಕಡೆಯ ಕೊಲ್ಲೂರು ಮೂಕಾಂಬಿಕೆ ದೇವಸ್ಥಾನ ಮತ್ತು ಈ ಕಡೆಯ ಉಡುಪಿಯ ಶ್ರೀ ಕೃಷ್ಣ ದೇಗುಲದ ಅಕ್ಕಪಕ್ಕದ ಪ್ರದೇಶಗಳಲ್ಲಿ ನಕ್ಸಲೈಟ್ ಚಟುವಟಿಕೆಗಳು ನಡೆಯುತ್ತಿವೆ. ಈ ರೀತಿ ಪ್ರಸಿದ್ಧ ಪ್ರವಾಸಿ ತಾಣಗಳು ಪ್ರವಾಸಿಗರಿಂದ ಸುತ್ತುವರೆದಿರುವ ಭಾಗಗಳಲ್ಲಿ ನಕ್ಸಲೈಟ್ ಚಟುವಟಿಕೆಗಳು ದೊಡ್ಡ ಪ್ರಮಾಣದಲ್ಲಿ ಜರುಗುತ್ತಿದ್ದರೂ ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುವುದಿಲ್ಲವೆಂದರೆ, ಮುಂದಿನ ದಿವಸಗಳಲ್ಲಿ ಪ್ರವಾಸಿಗರು ಈ ಭಾಗದ ಪ್ರದೇಶಗಳಲ್ಲಿ ನಿರ್ಭೀತಿಯಿಂದ ಓಡಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ, ಸರ್ಕಾರ ಈ ನಿಟ್ಟಿನಲ್ಲಿ ವಿಶೇಷ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಆಗ್ರಹಿಸುತ್ತಾ, ಪೊಲೀಸ್ ಇಲಾಖೆಗೆ ಈ ಸಂಬಂಧ ಸಂಪೂರ್ಣ ಅಧಿಕಾರ ನೀಡಬೇಕೆಂಬ ಮಾತನ್ನು ಹೇಳಬಯಸುತ್ತೇನೆ.

ಕೊನೆಯದಾಗಿ, ಕಳೆದ ಒಂದು ವರ್ಷದ ಹಿಂದೆ ನನ್ನ ಮತಕ್ಷೇತ್ರದಲ್ಲಿ ಸುಚಿತಾ ಶೆಟ್ಟಿ ಎನ್ನುವ ಒಬ್ಬ ವಿದ್ಯಾರ್ಥಿನಿಯ ಕೊಲೆಯಾಯಿತು. ಕೊಲೆ ಪ್ರಕರಣದ ಬಗ್ಗೆ ಸಿ.ಓ.ಡಿ.ಯಿಂದ

ತನಿಖೆಯಾಗಿದ್ದರೂ ವಿದ್ಯಾರ್ಥಿನಿಯನ್ನು ಯಾರು ಅತ್ಯಾಚಾರ ಮಾಡಿ ಕೊಲೆ ಮಾಡಿದರೆಂಬ ಬಗ್ಗೆ ಸಂಬಂಧಪಟ್ಟ ಆರೋಪಿಗಳನ್ನು ಬಂಧಿಸಬೇಕೆಂದು ಸಾಕಷ್ಟು ಮನವಿಗಳನ್ನು ಸಲ್ಲಿಸಿ, ಹೋರಾಟಗಳನ್ನು ನನ್ನ ಕ್ಷೇತ್ರದ ಎಲ್ಲಾ ಭಾಗಗಳಲ್ಲೂ ನಡೆಸಲಾಯಿತು. ಇದು ನಡೆದು ಒಂದು ವರ್ಷ ಕಳೆದರೂ ದಿವಂಗತ ಸುಚಿತಾ ಶೆಟ್ಟಿಯ ಕೊಲೆ ಆರೋಪಿಗಳನ್ನು ಬಂಧಿಸುವ ಯಾವುದೇ ಕ್ರಮಗಳನ್ನು ಸರ್ಕಾರ ಇಲ್ಲಿಯವರೆಗೆ ಕೈಗೊಳ್ಳಲಿಲ್ಲ. ಇದರಿಂದಾಗಿ ಕ್ಷೇತ್ರದ ಜನರು ಇವೊತ್ತು ಪೊಲೀಸ್ ಇಲಾಖೆಯನ್ನು ಅನುಮಾನದಿಂದ ನೋಡುವ ಸ್ಥಿತಿ ನಿರ್ಮಾಣವಾಗಿದೆ. ಒಂದು ವರ್ಷದ ಹಿಂದೆ ಸುಚಿತಾ ಶೆಟ್ಟಿಯ ಕೊಲೆಯಾಗಿತ್ತೋ, ಅವರನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾರೋ, ಈ ಸಂಬಂಧದ ಆರೋಪಿಗಳನ್ನು ಸರ್ಕಾರ ಇವೊತ್ತು ಬಂಧಿಸುವ ಮೂಲಕ ಪೊಲೀಸ್ ಇಲಾಖೆ ಮೇಲೆ ಜನರಿಗೆ ವಿಶ್ವಾಸವುಂಟು ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಆಗ್ರಹಿಸುತ್ತಾ, ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಛೇರ್ಮನ್‌ರಿಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಪಾಪರೆಡ್ಡಿ (ರಾಯಚೂರು): ಮಾನ್ಯ ಛೇರ್ಮನ್‌ರವರೆ, ಕರ್ನಾಟಕದಲ್ಲಿ ಮೊತ್ತಮೊದಲ ಬಾರಿಗೆ ನಕ್ಸಲೈಟರು ಕಾಣಿಸಿಕೊಂಡದ್ದು ನನ್ನ ಮತಕ್ಷೇತ್ರವಾದ ರಾಯಚೂರಿನಲ್ಲಿ, ಅಲ್ಲಿ ಕಾಣಿಸಿಕೊಂಡ ನಕ್ಸಲೈಟ್ ಚಟುವಟಿಕೆ ಸುಮಾರು ಹತ್ತು ವರ್ಷಗಳ ಕಾಲ ನಡೆಯುತ್ತಾ ಬಂದಿದೆ. ಆ ಭಾಗದಲ್ಲಿ ಈ ಹಿಂದೆ ಅಲ್ಲಿದ್ದ ನಾಲ್ಕು ಜನ ನಕ್ಸಲೈಟರ ವಿರುದ್ಧ ಜರುಗಿದ ಒಂದು ಕಾರ್ಯಾಚರಣೆಯಲ್ಲಿ ಒಬ್ಬರು ಸತ್ತು ಮೂರು ಜನರು ಉಳಿದುಕೊಂಡರು. ಉಳಿದುಕೊಂಡಿರುವ ನಕ್ಸಲೈಟರು ಈಗ ಪಶ್ಚಿಮಘಟ್ಟದತ್ತ ಬರುತ್ತಿದ್ದಾರೆ. ನಕ್ಸಲೈಟ್ಸ್ ಚಟುವಟಿಕೆ ಬಗ್ಗೆ ಈಗ ತಾನೇ ಹಿರಿಯ ಮಾನ್ಯ ಸದಸ್ಯರು ಮಾತನಾಡುತ್ತಾ, "ಜನರನ್ನು ಸುಧಾರಿಸುವ ಸಲುವಾಗಿ ನಕ್ಸಲೈಟರು ಹೋರಾಟ ಮಾಡುತ್ತಿದ್ದಾರೆ" ಎಂದು ಏನು ಹೇಳಿದ್ದಾರೆ, ಆ ರೀತಿಯಲ್ಲಿ ಅವರು ಹೋರಾಟ ಮಾಡುತ್ತಿಲ್ಲ. ನನಗೆ ಗೊತ್ತಿರುವಂತೆ, ಆಗ ನಾನು ಕ್ಷೇತ್ರದ ಶಾಸಕನಾಗಿರಲಿಲ್ಲ. 'ಆರ್ಥಿಕ ಸ್ಥಿತಿ ಕೆಳಮಟ್ಟದಲ್ಲಿರುವ ಜನರಿಗೆ ಸಹಾಯ ಮಾಡುತ್ತೇವೆ' ಎಂದು ಹೇಳಿದ ರಮೇಶ್‌ಕುಮಾರ್ ಎಂಬ ಒಬ್ಬ ನಕ್ಸಲೈಟ್ ಇವೊತ್ತು ಜೈಲಿನಲ್ಲಿದ್ದಾರೆ. ಅವರು ಹಿಂದೊಮ್ಮೆ ನನಗೆ ಫೋನ್ ಮಾಡುವ ಮೂಲಕ ಜೀವ ಬೆದರಿಕೆ ಹಾಕಿದರು. ಕಾರಣ, "ನೀನು ನಿನ್ನ ಮತಕ್ಷೇತ್ರದ ಹಳ್ಳಿಗಳಲ್ಲಿ ತಿರುಗಾಡಬಾರದು, ತೊಂದರೆಯಲ್ಲಿರುವ ರೈತರಿಗೆ ಸಹಾಯ ಮಾಡಬಾರದು. ಸಹಾಯ ಮಾಡುವುದರಿಂದ ಆ ರೈತರು ಈಗ ನನ್ನ ಬಳಿ ಬರುತ್ತಿಲ್ಲ. ಈ ಕಾರಣಕ್ಕೋಸ್ಕರ ನೀನು ನಮಗೆ ಐವತ್ತು ಸಾವಿರ ರೂಪಾಯಿಗಳನ್ನು ಕೊಡಬೇಕು" ಎಂದಿದ್ದರು. ಅವರು ಈ ಬಗ್ಗೆ ಮೂರು ಸಲ ಫೋನ್ ಮಾಡಿ ಜೀವ ಬೆದರಿಕೆ ಹಾಕಿದರೂ ನಾನು ಅವರಿಗೆ ಅಂಜಿಕೊಳ್ಳಲಿಲ್ಲ. ಅದೇ ತರಹ ಅಲ್ಲಿ ಕಷ್ಟದಲ್ಲಿದ್ದ ಜನರಿಗೆ ಸಹಾಯ-ಸಹಕಾರ ನೀಡಿದೆ. ಅಲ್ಲೊಬ್ಬರು ದಕ್ಷ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಇದ್ದರು. ಅವರು ನಮಗೆ ಎಲ್ಲಾ ರೀತಿಯ ರಕ್ಷಣೆ ನೀಡುವ ಮೂಲಕ ಸಹಾಯ, ಸಹಕಾರವಿತ್ತರು. ಆ ಕಾರಣದಿಂದಾಗಿ ಅಲ್ಲಿದ್ದ ನಕ್ಸಲೈಟರನ್ನು ನಾನು ಎದುರಿಸಲು ಅನುಕೂಲವಾಯಿತು. ಈಗ ಹಳ್ಳಿಗಳು ಬಹಳಷ್ಟು ಉತ್ತಮ ರೀತಿಯಿಂದಿವೆ.

ಆದುದರಿಂದ, ಅಲ್ಲಿನ ನಕ್ಸಲೀಯ ಚಳವಳಿಗೂ ಪಶ್ಚಿಮಘಟ್ಟದಲ್ಲಿನ ನಕ್ಸಲೀಯ ಚಳವಳಿಗೂ ಸಂಬಂಧವಿದೆ. ನಮ್ಮ ಗಡಿ ಭಾಗದ ಎಲ್ಲಾ 31 ಹಳ್ಳಿಗಳೂ ನಕ್ಸಲೀಯರ ಪ್ರಭಾವ ಹೊಂದಿವೆ. ಅಲ್ಲಿನ ಹಳ್ಳಿಗಳು ಸುಧಾರಣೆಯಾಗುವ ದಿಸೆಯಲ್ಲಿ ಸುಮಾರು 15 ಕೋಟಿ ರೂಪಾಯಿಗಳ

ವೆಚ್ಚದಲ್ಲಿ ಒಂದು ಯೋಜನೆ ಹಮ್ಮಿಕೊಳ್ಳಬೇಕೆಂಬ ಪ್ರಸ್ತಾವವನ್ನು ಅಲ್ಲಿನ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದರೆ, ಸದರಿ ಯೋಜನೆ ಇಲ್ಲಿಯವರೆಗೂ ಜಾರಿಯಾಗಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡಾಗ ನಕ್ಸಲೈಟ್ ಪೀಡಿತ ಭಾಗದ ಹಳ್ಳಿಗಳಲ್ಲಿರುವ ಜನರಿಗೆ ಒಂದು ಸಾವಿರ ಮನೆಗಳನ್ನು ಕಟ್ಟಿಕೊಟ್ಟರು. ಅದಾದ ನಂತರ ಮತ್ತೆ ಹೊಸದಾಗಿ ಮನೆಗಳನ್ನು ಕಟ್ಟಿಕೊಡಲಿಲ್ಲ, ಹಳ್ಳಿಯ ಅಭಿವೃದ್ಧಿಯೂ ಆಗಲಿಲ್ಲ. ಅಭಿವೃದ್ಧಿಯಾಗದ ಕಾರಣ ಅಲ್ಲಿನ ಜನರು ಅದೇ ಸ್ಥಿತಿಯಲ್ಲಿದ್ದಾರೆ. ಈ ನಕ್ಸಲೈಟರು ಜನರನ್ನು ಶೋಷಿಸುವುದಕ್ಕೆ ಇದ್ದಾರೆಯೇ ಹೊರತು ಅವರು ಜನರಿಗೆ ಸಹಾಯ ಮಾಡುವುದಕ್ಕಲ್ಲ. ತಮ್ಮ ಹೊಟ್ಟೆಪಾಡಿಗಾಗಿ, ತಮ್ಮ ವಿಚಾರಧಾರೆಗಾಗಿ ಅವರು ಹೋರಾಟ ನಡೆಸುತ್ತಿದ್ದಾರೆಯೇ ವಿನಾ ನಾವೇನಾದರೂ ಸುಧಾರಣೆ ಮಾಡಿದರೆ ಅವರು ವಿರೋಧಿಸುತ್ತಾರೆ. "ಈಗ ಹಳ್ಳಿಗಳು ಸುಧಾರಣೆಯಾಗದ ಕಾರಣಕ್ಕಾಗಿ ಸುಧಾರಿಸಲು ಅವರು ಬಂದಿದ್ದಾರೆ" ಎಂಬ ವಿಚಾರ ಹೇಳುತ್ತಿದ್ದಾರಲ್ಲ, ಇದು ಶುದ್ಧ ಸುಳ್ಳು. ಅವರು ಜನರನ್ನು ಶೋಷಿಸುವಂತಹವರು, ಶ್ರೀಮಂತರನ್ನು ಬೆದರಿಸಿ ರೊಕ್ಕ ವಸೂಲು ಮಾಡಿ ತಮ್ಮ ಉಪ ಜೀವನ ನಡೆಸುವಂತಹವರು. ರೈಫಲ್, ಪಿಸ್ತೂಲು ಮತ್ತು ಬಾಂಬುಗಳನ್ನು ಹಿಡಿದುಕೊಂಡು ಜನರನ್ನು ಹೆದರಿಸಿ ಅವರನ್ನು ಭಯಭೀತರನ್ನಾಗಿಸುವ ಮೂಲಕ ಅವರಿಂದ ತಮ್ಮ ಉಪ ಜೀವನ ನಡೆಸುತ್ತಿದ್ದಾರೆಯೇ ಹೊರತು ಅವರಿರುವುದು ಜನರ ಉದ್ಧಾರಕ್ಕಲ್ಲ. ಜನರಿಗೆ ಸಹಾಯವಾಗಬೇಕಾದರೆ, ಯಾವ್ಯಾವ ಹಳ್ಳಿಗಳಲ್ಲಿ ಮೂಲಭೂತ ಸೌಲಭ್ಯಗಳ ತೊಂದರೆ ಇದೆಯೋ, ಅಂತಹ ಹಳ್ಳಿಗಳಲ್ಲಿ ಸದರಿ ಸೌಲಭ್ಯಗಳನ್ನು ಕಲ್ಪಿಸಿಕೊಡುವುದರ ಜೊತೆಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸಿಕೊಡಬೇಕು. ಈ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಾಗ ಮಾತ್ರ ಜನರು ಸುಧಾರಿಸುತ್ತಾರೆ. ಅಲ್ಲದೆ, ಅಲ್ಲಿನ ಕ್ಷೇತ್ರದ ಶಾಸಕರಿಗೆ ರಕ್ಷಣೆ ಒದಗಿಸಿಕೊಡುವ ಮೂಲಕ ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಹಳ್ಳಿಗಳ ಜನರಿಗೆ ಸೌಲಭ್ಯಗಳನ್ನು ಒದಗಿಸಿ ಹಳ್ಳಿಗಳನ್ನು ಸುಧಾರಿಸಲು ಅವರಿಗೆ ಅನುಕೂಲ ಮಾಡಿಕೊಡಬೇಕು. ಆ ಹಳ್ಳಿಯ ಜನರು ಸುಧಾರಿಸಬೇಕು, ಯಾವ ಜನರು ಕಷ್ಟದಿಂದ ಶೋಷಣೆಗೆ ಒಳಗಾಗಿದ್ದಾರೆ, ಯಾರು ಕಷ್ಟದಿಂದ ಇದ್ದಾರೆ ಅವರಿಗೆಲ್ಲಾ ಮೂಲಭೂತ ಸೌಕರ್ಯಗಳನ್ನು ಕೊಟ್ಟಾಗ ಈ ನಕ್ಸಲ್‌ಗಳು ಅಲ್ಲಿಂದ ಪಲಾಯನ ಮಾಡುತ್ತಾರೆ. ಅಲ್ಲಿರಲು ಸಾಧ್ಯವಿಲ್ಲ. ಎಲ್ಲಿ ಜನರು ಕಷ್ಟದಲ್ಲಿದ್ದಾರೆ ಅಂಥವರನ್ನು ಉಪಯೋಗ ಮಾಡಿಕೊಂಡು ಈ ಜನ ಇಂಥ ಎಲ್ಲಾ ಜನರಿಗೆ ಭಯಭೀತರನ್ನಾಗಿ ಮಾಡಿ ಆ ಜನರ ಶೋಷಣೆ ಮಾಡುತ್ತಾರೆ. ಯಾವ ಹಳ್ಳಿಗಳಲ್ಲಿ ನಕ್ಸಲೈಟ್ಸ್‌ನ ಪ್ರಭಾವವಿದೆ ಆ ಹಳ್ಳಿಗಳು ಸುಧಾರಣೆಯಾಗಬೇಕು, ಆ ಹಳ್ಳಿಯ ಜನರಿಗೆ ವ್ಯವಸ್ಥಿತವಾದಂಥ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಾನೂನು ವ್ಯವಸ್ಥೆಗಳು ಹದಗೆಟ್ಟುಹೋಗಿರುವ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ತಾವು ನಿಯಮ 69ರ ಅಡಿಯಲ್ಲಿ ಪರಿವರ್ತಿಸಿ ನಮಗೆಲ್ಲಾ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ಧನ್ಯವಾದವನ್ನು ಸಲ್ಲಿಸುತ್ತಾ ಕಳೆದ ಸುಮಾರು ಹತ್ತು ತಿಂಗಳಿನಿಂದ ಹೊಸ ಸಮ್ಮಿಶ್ರ ಸರ್ಕಾರದ ಪ್ರಯೋಗ ರಾಜ್ಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದಕ್ಕೆ ಇದೂ ಒಂದು ಉದಾಹರಣೆಯನ್ನು ನಾವು ಸಾಕಷ್ಟು ಆಧಾರ ಸಹಿತವಾಗಿ ಹೇಳಬಹುದು. ಸಮ್ಮಿಶ್ರ ಸರ್ಕಾರದ ಪ್ರಯೋಗ ಸಫಲವಾಗುತ್ತಿಲ್ಲವೆನ್ನುವಂಥದ್ದು ಈಗ ಮತದಾರರ ಭಾವನೆಯೂ ಆಗಿದೆ.

ಮುಂಬರುವಂಥ ದಿನಗಳಲ್ಲಿ ಅದು ಅನೇಕ ರೂಪದಲ್ಲಿ ವ್ಯಕ್ತವಾಗುವಂಥದ್ದಿದೆ. ಈಗಾಗಲೇ ಅದು ವ್ಯಕ್ತವಾಗಲು ಪ್ರಾರಂಭವಾಗಿದೆ. ಮೊನ್ನೆ ಗ್ರಾಮಪಂಚಾಯಿತಿ ಚುನಾವಣೆಯ ಫಲಿತಾಂಶವೇ ಅದಕ್ಕೊಂದು ಸಾಕ್ಷಿ ಇದೆ. ನಾನು ಅದರ ವಿವರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಈ ಸಮ್ಮಿಶ್ರ ಸರ್ಕಾರ ಹೇಗೆ ಕಾನೂನು ಸುವ್ಯವಸ್ಥೆಯಂಥ ಸಂವಿಧಾನಬದ್ಧವಾಗಿ ಈ ರಾಜ್ಯದ ನಾಗರೀಕರಿಗೆ ಕೂಡಲೇ ಬೇಕಾಗಿರುವಂಥ ತನ್ನ ಒಂದು ಅಧಿಕಾರದ ಆ ಸದ್ಬಳಕೆಯನ್ನು ಮಾಡಿಕೊಳ್ಳಲು ವಿಫಲವಾಗಿದೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಸಂವಿಧಾನವನ್ನು ಪ್ರತಿಜ್ಞೆ ಮಾಡಿ ಅಧಿಕಾರ ಸ್ವೀಕಾರ ಮಾಡುವುದು ನಮ್ಮೆಲ್ಲರ ರೂಢಿಯಾಗಿದೆ. ಸಂವಿಧಾನದಲ್ಲಿ ಇರುವಂಥ ಅಂಶಗಳನ್ನು ನಾವು ಪಾಲಿಸಿದಾಗ, ನಾನು ಈ ಮೊದಲು ಒಂದು ಸಲ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಅದರ ಪ್ರತ್ಯಕ್ಷವಾದ ನೋವನ್ನು ಉಂಡಂತವರು ನಾವು. ಡಾ: ಚಿತ್ತರಂಜನ್, ಎಂ.ಎಲ್.ಎ. ಯವರನ್ನು ನಾವು ಕಳೆದುಕೊಂಡಂತವರು. ವಸಂತ್ ಅಸ್ನೋಟಿಕರ್, ಎಂ.ಎಲ್.ಎ. ರವರನ್ನು ಕಳೆದುಕೊಂಡಿದ್ದೇವೆ. ತಿಮ್ಮಪ್ಪ ನಾಯಕರು, ನಮ್ಮ ಪಕ್ಷದ ಅಧ್ಯಕ್ಷರನ್ನು ನಾವು ಕಳೆದುಕೊಂಡಿದ್ದೇವೆ. ಜವಾಬ್ದಾರಿಯುತವಾದಂಥ ಪ್ರಜಾಪ್ರಭುತ್ವದ ರೀತಿಯಲ್ಲಿ ಆಯ್ಕೆಯಾಗಿರುವಂಥ ಸರ್ಕಾರದ ಪ್ರಥಮ ಕರ್ತವ್ಯ ಅಂದರೆ ಈ ರಾಜ್ಯದ ಪ್ರತಿಯೊಬ್ಬ ನಾಗರೀಕರ ಜೀವನವನ್ನು, ಆಸ್ತಿಪಾಸ್ತಿಯ ರಕ್ಷಣೆ ಮಾಡುವಂಥದ್ದು. ಅದರಲ್ಲಿ ಈ ಸಮ್ಮಿಶ್ರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅಂಕಿಸಂಖ್ಯೆಗಳನ್ನು ನಮ್ಮ ಅನೇಕ ಹಿರಿಯರು ಉದಾಹರಣೆ ಮಾಡಿದ್ದಾರೆ. ಎಷ್ಟು ಕೊಲೆ ಸುಲಿಗೆಯಾಯಿತು, ಎಷ್ಟು ದರೋಡೆಗಳಾಯಿತು, ಯಾವ್ಯಾವ ರೀತಿ ಅಪರಾಧಗಳು ರಾಜ್ಯದಲ್ಲಿ ನಡೆಯುತ್ತಿದೆ, ಎಲ್ಲಾ ಅಪರಾಧಿ ಕೃತ್ಯಗಳಿಗೆ ತಾಣ ಇವತ್ತು ಕರ್ನಾಟಕ ಆಗುತ್ತಿದೆ ಎಂಬ ರೀತಿಯಲ್ಲಿ ಇವತ್ತು ವರದಿಗಳು ಬರುತ್ತಿರುವುದನ್ನು ನೋಡುತ್ತಿದ್ದೇವೆ, ಪ್ರತ್ಯಕ್ಷವಾದ ಘಟನೆಗಳನ್ನು ನಾವು ಕಾಣುತ್ತಿದ್ದೇವೆ, ಆದ್ದರಿಂದ ಇವತ್ತು ಸರ್ಕಾರ ಜನರ ಜೀವನವನ್ನು ಆಸ್ತಿಪಾಸ್ತಿಯನ್ನು ರಕ್ಷಣೆ ಮಾಡುವುದಕ್ಕೆ ಸಂಪೂರ್ಣವಾಗಿ ವಿಫಲವಾಗುತ್ತಿರುವ ಸಂದರ್ಭದಲ್ಲಿ ಈ ಸರ್ಕಾರ ನಿಜವಾಗಿ ಸಂವಿಧಾನಬದ್ಧವಾಗಿ ನಡೆದುಕೊಳ್ಳಲು ಆಗದೇ ಇರುವಂಥ ಗಂಭೀರವಾದ ಸ್ಥಿತಿಯನ್ನು ಈಗ ಅನುಭವಿಸುತ್ತಿದ್ದೇವೆ, ಎಲ್ಲಿ ಶಾಂತಿ ಇದೆ? ಎಲ್ಲಿ ಜನ ನೆಮ್ಮದಿಯಿಂದ ಬದುಕುವಂಥ ಸ್ಥಿತಿ ಇದೆ? ಇವತ್ತು ಶಾಲೆಗೆ ಹೋದ ಮಕ್ಕಳು ವಾಪಸ್ ಬರುತ್ತಾರೋ ಇಲ್ಲವೋ ಎಂಬ ಚಿಂತೆ ಇದೆ. ಅದು ಟ್ರಾಫಿಕ್ ಸಮಸ್ಯೆಯಿಂದಲ್ಲ, ಯಾರಾದರೂ ಹಾರಿಸಿಕೊಂಡು ಹೋಗಿಬಿಡುತ್ತಾರೋ ಎಂಬ ಭಯದಿಂದ, ಈ ಸರ್ಕಾರ ಇವತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ವಿಫಲ ವಾಗಿರುವುದಕ್ಕೆ ಅನೇಕ ಉದಾಹರಣೆಗಳು ಇದೆ. ಇವತ್ತು ಬೆಳಿಗ್ಗೆಯಿಂದ ಪೋಲೀಸ್ ಇಲಾಖೆಯ ವೈಫಲ್ಯದ ಬಗ್ಗೆ ಚರ್ಚೆಯಾಯಿತು. ಮಾನ್ಯ ವಾಜಪೇಯಿಯವರು ಇದ್ದಾಗ ಎನ್.ಡಿ.ಎ. ಸರ್ಕಾರದವರು ಸಾವಿರಾರು ಕೋಟಿ ರೂಪಾಯಿಗಳನ್ನು ಪೋಲೀಸ್ ವ್ಯವಸ್ಥೆ ಸುಧಾರಣೆ ಮಾಡಲು ಕೊಟ್ಟರು, ಅದಕ್ಕಾಗಿ ಅವರಿಗೆ ನಾವು ಅಭಿನಂದನೆಯನ್ನು ಸಲ್ಲಿಸಬೇಕು. ಆದರೆ ಪೋಲೀಸ್ ವ್ಯವಸ್ಥೆಯಲ್ಲಿ ಸುಧಾರಣೆ ಏನಾಗಿದೆ? ಇದು ಬಹಳ ಗಂಭೀರವಾದ ಪ್ರಶ್ನೆ. ಇಡೀ ವ್ಯವಸ್ಥೆಯನ್ನು ಸುಧಾರಣೆ ಮಾಡುವುದಕ್ಕೆ ಸಾಕಷ್ಟು ರೀತಿಯ ಸಹಾಯವನ್ನು ಕೇಂದ್ರ ಸರ್ಕಾರದಿಂದ ನಾವು ತೆಗೆದುಕೊಂಡರೂ ಸಹ ಇವತ್ತು ಭಯೋತ್ಪಾದಕರು ಅಥವಾ ಕಾನೂನು ಬಾಹಿರವಾದ ಚಟುವಟಿಕೆಗಳನ್ನು ನಡೆಸುತ್ತಿರುವಂಥ ಶಕ್ತಿಗಳು, ಗುಂಪುಗಳು ಯಾವ ವೇಗಕ್ಕೆ ಅವರು

ಆಧುನೀಕರಣಗೊಳ್ಳುತ್ತಿದ್ದಾರೋ ಆ ವೇಗಕ್ಕೆ ನಮ್ಮ ಇಲಾಖೆಯನ್ನು ಆಧುನೀಕರಣಗೊಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.- ಇವತ್ತು ಸರ್ಕಾರಕ್ಕೆ ರಾಜಕೀಯ ಅಧಿಕಾರವನ್ನು ಇಟ್ಟುಕೊಳ್ಳುವುದು ಮುಖ್ಯವೇ ಹೊರತು ರಾಜಕೀಯ ಅಧಿಕಾರದ ಮೂಲಕ ಜನರನ್ನು ರಕ್ಷಣೆ ಮಾಡಿ ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡುವಂಥದ್ದು ಮುಖ್ಯವಾಗಿಲ್ಲವೆನ್ನುವಂಥದ್ದು ಗೋಚರವಾಗುತ್ತಿದೆ, ಈ ಸಂದರ್ಭದಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ, ಪೊಲೀಸ್ ಇಲಾಖೆಯನ್ನು ಅಥವಾ ಗುಪ್ತಾಚಾರ ಇಲಾಖೆಯನ್ನು ಅಪ್‌ಡೇಟ್, ಅಪ್‌ಗ್ರೇಡ್ ಮಾಡಬೇಕಾದ ಸಂಗತಿ ಬಹಳ ಮುಖ್ಯವಾಗಿದೆ. ಅದಕ್ಕೆ ಬೇಕಾದ ಗಮನವನ್ನು ಕೊಡುತ್ತಾರೆಂದು ಭಾವಿಸುತ್ತೇನೆ. ಅನೇಕ ಸಂದರ್ಭದಲ್ಲಿ ಇಂಥ ಘಟನೆಗಳು ನಡೆಧಂಥ ಸಂದರ್ಭದಲ್ಲಿ ನ್ಯಾಯಾಂಗ ತನಿಖೆ ಎಂದು ಹೇಳುತ್ತಾರೆ ಅಥವಾ ಸಿ.ಓ.ಡಿ., ಸಿ.ಬಿ.ಐ. ತನಿಖೆಯೆಂದು ಹೇಳುತ್ತಾರೆ. ಎಲ್ಲಾ ತನಿಖೆಗಳ ರಚನೆ ಬಗ್ಗೆ ಸದನದಲ್ಲಿ ಘೋಷಣೆಯಾಗುತ್ತದೆ ಅಥವಾ ಹೊರಗಡೆ ಘೋಷಣೆಯಾಗುತ್ತದೆ. ಆದರೆ ಅದರ ವರದಿಗಳೆಲ್ಲಾ ಎಲ್ಲಿ ಹೋಗುತ್ತವೆ? ಇವತ್ತಿನ ತನಕ ಜಗನ್ನಾಥಶೆಟ್ಟಿಯ ಆಯೋಗದ ವರದಿ ಬಂದಿಲ್ಲ. ರಾಮಚಂದ್ರಯ್ಯ ಆಯೋಗದ ವರದಿ ಬರಲಿಲ್ಲ, ಏಕೆ ಭಟ್ಕಳದ ಕೋಮುಗಲಭೆಯಾಯಿತು ಅಥವಾ ಕಾನೂನು ಬಾಹಿರ ಚಟುವಟಿಕೆ ನಡೆಯಿತು ಅಥವಾ ಏಕೆ ಭಯೋತ್ಪಾದಕ ಚಟುವಟಿಕೆ ನಡೆಯಿತು ಎಂಬುದು ಗೊತ್ತಾಗಲಿಲ್ಲ. ಇವತ್ತು ರಾಮಚಂದ್ರಯ್ಯ ಆಯೋಗ ಡಾ: ಚಿತ್ತರಂಜನ್‌ರವರ ಹತ್ಯೆ ಏಕಾಯಿತು ಎಂಬುದು ಗೊತ್ತಾಗಲಿಲ್ಲ. ಹೀಗೆ ಅನೇಕ ಸಂಗತಿಗಳ ಬಗ್ಗೆ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ರಚನೆಯಾಗಿರುವಂಥ ಆಯೋಗಗಳು, ಸಮಿತಿಗಳು ಅದು ಕೊಟ್ಟಿರುವ ವರದಿಗಳೆಲ್ಲವೂ ಕೋಲ್ಡ್‌ಸ್ಟೋರೇಜ್‌ನಲ್ಲಿದೆಯೇ ಹೊರತು ಆ ವರದಿಯ ಪಾಯಿಂಟ್ಸ್ ಏನಿದೆ ಅದರ ಆಧಾರದ ಮೇಲೆ ನಮ್ಮ ಆಡಳಿತ ವ್ಯವಸ್ಥೆಯನ್ನು ಹೇಗೆ ಸುಧಾರಿಸಿಕೊಳ್ಳಬೇಕು ಎಂಬ ಬಗ್ಗೆ ಚಿಂತನೆಯೇ ಸರ್ಕಾರದಲ್ಲಿ ನಡೆಯುತ್ತಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ನಾನು ಇನ್ನು ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ, ನಮ್ಮ ರಾಜ್ಯದ ಜನರು ಸರ್ಕಾರಕ್ಕೆ ಬಹಳ ಗಂಭೀರವಾಗಿ ಹೇಳಬೇಕಾದ ಸನ್ನಿವೇಶ ಹೊಂದಿದೆ ಎಂದರೆ, ನಮ್ಮ ರಾಜ್ಯವನ್ನು ನಕ್ಸಲೀಯರ ಚಟುವಟಿಕೆಯ ಕೇಂದ್ರ ಸ್ಥಾನವನ್ನಾಗಿ ಮಾಡುವುದಕ್ಕೆ ಅವಕಾಶ ಮಾಡಬೇಡಿ, ಐ.ಎಸ್.ಐ. ಚಟುವಟಿಕೆ ಮಾಡಲು ಅವಕಾಶ ಮಾಡಿಕೊಡಬೇಡಿ, ಮಾವೋವಾದಿಗಳು ಇತ್ಯಾದಿಗಳ ಹೆಸರಿನಲ್ಲಿ ಚಟುವಟಿಕೆ ಕೇಂದ್ರವಾಗಲು ಕರ್ನಾಟಕವನ್ನು ಬಿಡಬೇಡಿ, ಬೆಂಗಳೂರಿನಲ್ಲಿ ಆ ರೀತಿ ಚಟುವಟಿಕೆ ಮಾಡಲು ಬಿಡಬೇಡಿ, ಅದಕ್ಕೆ ಬೇಕಾಗಿರುವಂಥ ಬಲವಾದ ಆಡಳಿತ ಯಂತ್ರವನ್ನು ಚುರುಕುಗೊಳಿಸಿ ರಾಜಕೀಯ ಇಚ್ಛಾಶಕ್ತಿಯಿಂದ ಈ ರೀತಿ ಕಾನೂನು ಬಾಹಿರವಾದ ಚಟುವಟಿಕೆಯನ್ನು ಹತ್ತಿಕ್ಕುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹ ಮಾಡುತ್ತೇನೆ. ನನಗೆ ಸರ್ಕಾರ ಏನು ಮಾಡಲು ಆಗುತ್ತದೆ ಎನ್ನುವುದು ಈ ಮಾತನ್ನು ಹೇಳುವಾಗಲೇ ಅವರಿಗೆ ತೀರಾ ಅನುಮಾನ ಇದೆ. ಕಾಲಬುಡದಲ್ಲಿ 144ನೇ ಸೆಕ್ಷನ್ ಜಾರಿಯಲ್ಲಿದೆ, ಮೊನ್ನೆ ಬಜೆಟ್ ಮಂಡಿಸುವಾಗ ವಿಧಾನಸೌಧದ ಸುತ್ತಮುತ್ತ 144ನೇ ಸೆಕ್ಷನ್ ಜಾರಿಯಲ್ಲಿದೆ. ಮಾನ್ಯ ಹಣಕಾಸಿನ ಸಚಿವರು ಬಜೆಟ್ ಮಂಡಿಸಲು ಒಳಗೆ ಬಂದರೆ, ಮಾನ್ಯ ಮುಖ್ಯಮಂತ್ರಿಗಳು ಒಳಕ್ಕೆ ಬಂದರೆ 144ನೇ ಸೆಕ್ಷನ್ ಜಾರಿಯಲ್ಲಿರುವ ಸಂದರ್ಭದಲ್ಲಿ ಅವರದ್ದೇ ಪಕ್ಷದ, ತುಮಕೂರು ಜಿಲ್ಲೆಯ ಕಾಂಗ್ರೆಸ್ ಪಕ್ಷದ ಮಾಜಿ ಎಂ.ಪಿ.ಯವರು, ಡಾ: ಪರಮೇಶ್ವರ್‌ರಂಥ ಶಾಸಕರು, ಎಂ.ಎಲ್.ಸಿ. ಉಗ್ರಪ್ಪನಂಥವರು, ಮಾಜಿ ಎಂ.ಎಲ್.ಎ. ಮುದ್ದಹನುಮೇಗೌಡರು ಇವರೆಲ್ಲರೂ ತಮಗೇ ಪ್ರತಿಭಟನೆ ಮಾಡಿದರು, ಅವರನ್ನು ತಪ್ಪಿಸಿಕೊಂಡು ಬರಲು ಮುಖ್ಯಮಂತ್ರಿಯವರಿಗೆ, ಉಪ

ಮುಖ್ಯಮಂತ್ರಿಯವರಿಗೆ ಸಾಕಾಯಿತು. 144ನೇ ಸೆಕ್ಷನ್ ಜಾರಿಯಲ್ಲಿದೆ, ಬರೀ ಇಷ್ಟೇ ಜನರಲ್ಲ, ಅಂದರೆ 144ನೇ ಸೆಕ್ಷನ್ ಎಲ್ಲವೂ ಇದ್ದೂ ನೀವು ಒಳಕ್ಕೆ ಬರಲು ಇಷ್ಟು ಕಷ್ಟ ಪಡಬೇಕಾದ ಸಂದರ್ಭ ನಮ್ಮ ವಿಧಾನಸೌಧದ ಕಾಲುಬುಡದಲ್ಲಿ, ಇಂಥ ಪರಿಸ್ಥಿತಿ ನಮ್ಮ ಕಾಲಬುಡದಲ್ಲಿದೆ, ಹಾಗಾಗಿ ನಾವು ರಾಜ್ಯದಲ್ಲಿ ಎಂತೆಂಥ ಪರಿಸ್ಥಿತಿ ಇದೆ ಎಂಬುದನ್ನು ಊಹೆ ಮಾಡಿಕೊಳ್ಳಬಹುದು. ಆದ್ದರಿಂದ ಸರ್ಕಾರ ಬಹಳ ಗಂಭೀರವಾಗಿ ಈ ವಿಷಯವನ್ನು ತೆಗೆದುಕೊಳ್ಳಬೇಕಾದ ಅಗತ್ಯವಿದೆ. ನಾನು ಇನ್ನೆರಡು ವಿಷಯವನ್ನು ಮಾತ್ರ ಪ್ರಸ್ತಾಪ ಮಾಡಲು ಬಯಸುತ್ತೇನೆ. ಮೊದಲನೆಯದು ಹೈದ್ರಾಬಾದ್ ಕರ್ನಾಟಕದ ಜೊತೆಯಲ್ಲಿ, ಮಾನ್ಯ ಪಾಪರೆಡ್ಡಿಯವರು ಮಾತನಾಡುತ್ತಾ ಹೇಳಿದರು. ಹೈದ್ರಾಬಾದ್ ಕರ್ನಾಟಕದಲ್ಲಿ ನಕ್ಸಲೀಯ ಚಟುವಟಿಕೆ ಪ್ರಾರಂಭವಾಗಿರುವುದು. ಆ ನಕ್ಸಲೀಯ ಚಟುವಟಿಕೆಯ ಬಗ್ಗೆ ಸಾಕಷ್ಟು ವಿಸ್ತಾರವಾಗಿ ಚರ್ಚೆಯಾಗಿದೆ. ಇವತ್ತು ತುಮಕೂರು ಕೋಲಾರ ಜಿಲ್ಲೆಯ ಜೊತೆಯಲ್ಲಿ ಹೈದ್ರಾಬಾದ್ ಕರ್ನಾಟಕದ ಭಾಗ ನಿರ್ಲಕ್ಷ್ಯಕ್ಕೆ ಒಳಪಟ್ಟಿರುವುದರಿಂದ ಇವತ್ತು ಉತ್ತರ ಕರ್ನಾಟಕವೂ ನಿರ್ಲಕ್ಷ್ಯಕ್ಕೆ ಒಳಪಟ್ಟಿರುವುದರಿಂದ ಆ ಭಾಗ ಇವತ್ತು ನಕ್ಸಲೀಯ ಚಟುವಟಿಕೆಯ ಕೇಂದ್ರವಾಗಿರುವುದು ನಮಗೆಲ್ಲಾ ಗೊತ್ತಿದೆ. ಏಕೆಂದರೆ ಅದು ಆಂಧ್ರ ಪ್ರದೇಶದ ಗಡಿ ಭಾಗವೂ ಹೌದು. ಅಲ್ಲಿಯ ಸಮಸ್ಯೆಗಳ ಬಗ್ಗೆ, ಅಭಿವೃದ್ಧಿಯ ಬಗ್ಗೆ, ಡಾ: ನಂಜುಂಡಪ್ಪನವರ ವರದಿಯ ಆಧಾರವಾಗಿ ಇನ್ನೂ ಅನೇಕ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ, ಅದೇ ರೀತಿಯ ಸಮಸ್ಯೆಗಳು ಇವತ್ತು ಮಲೆನಾಡಿನ ಬೆಲ್ಟ್‌ನಲ್ಲಿದೆ. ಇವತ್ತು ಚಿಕ್ಕಮಗಳೂರು, ಶಿವಮೊಗ್ಗ ಅಥವಾ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ನಕ್ಸಲೀಯ ಚಟುವಟಿಕೆಗಳು ಬೆಳೆದಿರುವುದಕ್ಕೆ ಕಾರಣ ನಮಗೆಲ್ಲಾ ಇದುವರೆಗೆ ಚರ್ಚೆಯಾದಂತೆ ಅಬಿವೃದ್ಧಿಗೆ ಗಮನ ಕೊಡದಿರುವಂಥದ್ದು, ನಾನು ಮಾನ್ಯ ಉಪ ಮುಖ್ಯಮಂತ್ರಿಯವರಲ್ಲಿ ವಿನಂತಿಸುತ್ತೇನೆ, ಹೇಗೆ ಸರ್ಕಾರ ಜನರಿಗೆ ಸ್ವತಃ ಭಯೋತ್ಪಾದಕ ಮನೋಭಾವನೆಯನ್ನು ಬೆಳೆಸಲು ಕಾರಣವಾಗುತ್ತದೆಂದರೆ, ನನ್ನ ಕ್ಷೇತ್ರದಲ್ಲಿ ಮೊನ್ನೆ ಸ್ವಜಲಧಾರ ಯೋಜನೆಯಲ್ಲಿ ಒಂದೂವರೆ ಲಕ್ಷ ರೂಪಾಯಿ ಒಂದು ಹಳ್ಳಿಗೆ ಮಂಜೂರಾಗಿದೆ, ನಮ್ಮದು 80 percent forest, ನಮ್ಮ ಸರ್ಕಾರಿ ದಾಖಲೆಗಳ ಪ್ರಕಾರವಾಗಿ. ಆ ಸ್ವಜಲಧಾರ ಒಂದೂವರೆ ಲಕ್ಷ ಯೋಜನೆಯಲ್ಲಿ ಎಷ್ಟು ದೊಡ್ಡ ಕಾಮಗಾರಿಯಾಗಬಹುದು ಎಂಬುದು ನಮಗೆಲ್ಲಾ ಗೊತ್ತಿದೆ. ಒಂದು ಫೌಂಡೇಷನ್ ಹಾಕಿ ಒಂದು ಟ್ಯಾಂಕ್ ಇಡುವುದು, ನಮ್ಮ ....Pipe type ಬರುತ್ತದಲ್ಲಾ ಅದನ್ನು ಇಡುವುದು, ಅದನ್ನು ಇಡಲು 6X6 ಇದ್ದರೆ ಸಾಕು, ಅದು ಬಹಳ ದೊಡ್ಡ ಜಾಗವಾಯಿತು. ಅದಕ್ಕೆ ಫೌಂಡೇಷನ್ ಹಾಕಿದ್ದಾರೆ, ಮೇಲುಗಡೆ ಬೆಟ್ಟ, ಅಲ್ಲಿ ಅರಣ್ಯ ಜಾಗ, ಅರಣ್ಯ ಜಾಗದಲ್ಲಿ ಫೌಂಡೇಷನ್ ಹಾಕಿದ್ದಾರೆ, ಇಲಾಖೆಯವರು ಹೋಗಿ ನಿಲ್ಲಿಸುತ್ತಾರೆ, ಕುಡಿಯುವ ನೀರಿಗೆ ಅಭಾವವಿದೆ, ನಮಗೆ ಆ ಜಾಗ ಬಿಟ್ಟರೆ ಬೇರೆ ಜಾಗ ಇಲ್ಲ, 80 Percent forest ಹಳ್ಳಿಯ ಮೇಲಿದೆ, ನಾವು ಮರ ಕಡಿದಿಲ್ಲ, ಕಾಡನ್ನು ಕಡಿದಿಲ್ಲ, ಏನೂ ಮಾಡಿಲ್ಲ, ಅಲ್ಲಿ ಮಣ್ಣು ತೆಗೆದು ಫೌಂಡೇಷನ್ ಹಾಕಿದ ಮೇಲೆ system ಕೂರಿಸಲು ಹೋದರೆ ತಡೆ ಹಾಕಿ ಇಟ್ಟಿದ್ದಾರೆ. ಇದರಿಂದ ಜನರಿಗೆ ಸಿಟ್ಟು ಬಾರದಿರಲು ಸಾಧ್ಯವೇ? ನನಗೇ ಸಿಟ್ಟು ಬರುತ್ತದೆ, ಆ RFO ಎದುರಿಗೆ ಬರಲಿ ಎಂದು ನಾನೇ ಅನ್ನುವಂತಹ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ನನಗೇ ಈ ರೀತಿಯ ಭಾವನೆಗಳು ಸಹಜವಾಗಿ ಬರುವುದಕ್ಕೆ ಸರ್ಕಾರದ ಅನೇಕ ಇಲಾಖೆಗಳು ಕಾರಣವಾಗಿವೆ. ಇವತ್ತು ZP, PWD ಅಥವಾ ಬರಗಾಲ ಪರಿಹಾರ ಕಾಮಗಾರಿ ಇತ್ಯಾದಿ ಯಾವುದೇ ಯೋಜನೆಯ ಅಡಿಯಲ್ಲಿ ಹಳ್ಳಿಯೊಂದರಲ್ಲಿ ಒಂದು ಸಣ್ಣ ರಸ್ತೆಯೊಂದನ್ನು ನಿರ್ಮಿಸಬೇಕೆಂದರೆ, ಅದಕ್ಕೆ forest guards ಅಡ್ಡಿ ಮಾಡುತ್ತಾರೆ. ಸಣ್ಣ ಪುಟ್ಟ ಅಭಿವೃದ್ಧಿ

ಕೆಲಸಕ್ಕೆ ಅವರೇಕೆ ಅಡ್ಡಿ ಪಡಿಸಬೇಕು? ನಾವೇನೂ ದೊಡ್ಡ ಕಾಡನ್ನು ಕಡಿಯುತ್ತಿಲ್ಲ. ಕಾಡುಗಳ್ಳರನ್ನು ಬೇಕಾದರೆ ಇವರು ಹಾಡು ಹಗಲೇ ಬಿಟ್ಟು ಬಿಡುತ್ತಾರೆ. ಸರ್ಕಾರದಲ್ಲಿರುವಂತಹ ಅನೇಕ ಅಧಿಕಾರಿಗಳೂ ಸಹ ಕಾಡುಗಳ್ಳರೊಂದಿಗೆ ಶಾಮೀಲಾಗಿದ್ದಾರೆ. ಆದರೆ ನಾವು ಅಭಿವೃದ್ಧಿ ಕೆಲಸಗಳನ್ನು ಮಾಡಬೇಕೆಂದರೆ, ಇವರಿಂದ ಯಾವುದೇ ರೀತಿಯ ಸಹಕಾರ ನಮಗೆ ಸಿಗುತ್ತಿಲ್ಲ. ಕರೆಂಟ್ ಲೈನ್ ಅನ್ನು ಹಾಕಲಿಕ್ಕೂ ಸಹ ಬಿಡುವುದಿಲ್ಲ. ಮಾನ್ಯ ಅಧ್ಯಕ್ಷರೇ, ಇದು ನಿಮಗೂ ಗೊತ್ತಿದೆ. ನಿಮ್ಮ ಜಿಲ್ಲೆ ಸಹ ಮಲೆನಾಡಿನ ಭಾಗವೇ ಆಗಿದೆ. ನಾವು ರಸ್ತೆ ಬದಿಗೆ ಕರೆಂಟ್ ಲೈನ್ ಹಾಕುತ್ತೇವೆಂದರೆ ....

ಶ್ರೀ ಎಸ್.ರಾಜೇಂದ್ರನ್: ಯಾವ್ಯಾವ ಜಾಗದಲ್ಲಿ ಏನೇನು ಮಾಡಬೇಕೆಂಬುದನ್ನು ಸರ್ಕಾರದವರು ಹೇಳಿದ್ದಾರೆ. ಕಾಡಿನಲ್ಲಿ ಮರಗಳನ್ನು ಕಟ್ ಮಾಡಬೇಕು, ಅದನ್ನು ಬಿಟ್ಟು ನೀವು ಅಲ್ಲಿ ಟ್ಯಾಂಕ್ ಮಾಡಿದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು ಕರೆಂಟ್ ಲೈನ್ ಹಾಕುವ ಬಗ್ಗೆ ಮಾತನಾಡುತ್ತಿದ್ದೆ. ಅಕೇಶಿಯಾ ಗಿಡ ಇರಬಹುದು, ಬಾಂಬೂ ಪೋಲ್ಸ್ ಇರಬಹುದು, ಇದನ್ನು ಕಟ್ ಮಾಡಲಿಕ್ಕೂ ಕೂಡ ಅವಕಾಶ ಕೊಡುವುದಿಲ್ಲ. ರಸ್ತೆ ಪಕ್ಕದಲ್ಲಿರುವುದನ್ನು ಕಟ್ ಮಾಡಲಷ್ಟೇ ನಾವು ಕೇಳುತ್ತಿರುವುದು, ನಾವೇನೂ ಅರಣ್ಯ ಮಧ್ಯ ಭಾಗದಲ್ಲಿ ಕರೆಂಟ್ ಲೈನ್ ತೆಗೆದುಕೊಂಡು ಹೋಗಲು ಕೇಳುತ್ತಿಲ್ಲ. ಈ ರೀತಿ ಅಧಿಕಾರಿಗಳು ಕಾನೂನನ್ನು ಮಾನವೀಯ ದೃಷ್ಟಿಕೋನದಲ್ಲಿ ಸ್ಪಂದನೆ ಮಾಡುವಂತಹ ರೀತಿಯಲ್ಲಿ ಅಳವಡಿಸದೇ ಹೋದರೆ ಜನ ಆಕ್ರೋಶಗೊಳ್ಳುತ್ತಾರೆ. ಅವರು ಆಕ್ರೋಶಗೊಂಡಿರುವಂತಹ ಧ್ವನಿ ಬೇರೆ ಬೇರೆ ರೀತಿಯಲ್ಲಿ ಪ್ರಕಟವಾಗುವುದಿದೆ. ಹಾಗಾಗಿ ಸರ್ಕಾರದಲ್ಲಿರುವವರ ಜವಾಬ್ದಾರಿ, ವಿಶೇಷವಾಗಿ ಅಧಿಕಾರಿಗಳ ಜವಾಬ್ದಾರಿ, ಕಾನೂನನ್ನು ಸರಿಯಾಗಿ ಜಾರಿಗೆ ತರಬೇಕು. ಯಾರಿಗೋ ತೊಂದರೆ ಕೊಡಬೇಕೆನ್ನುವ ದೃಷ್ಟಿಯಿಂದ ನಾವ್ಯಾರೂ ಇಲ್ಲಿ ಕಾನೂನುಗಳನ್ನು ಮಾಡಿಲ್ಲ. ನಮಗೆ ಜವಾಬ್ದಾರಿ ಇದೆ. ಆದರೆ ಆ ಕಾನೂನನ್ನು ಅಳವಡಿಕೆ ಮಾಡುವಾಗ ಅದಕ್ಕೆ ಮಾನವೀಯ ಸ್ಪಂದನ ಬೇಕಾಗುತ್ತದೆ. ಮಾನವೀಯ ಸ್ಪಂದನ ಇಲ್ಲದಿರುವಂತಹ ಕಾನೂನಿನ ಅಳವಡಿಕೆ ಏನಿದೆಯೋ, ಅದರಿಂದಾಗಿ ಇವತ್ತು ಜನ ಆಕ್ರೋಶಗೊಳ್ಳುತ್ತಿದ್ದಾರೆ, ರೋಸಿ ಹೋಗುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಬಹಳ ಮುಖ್ಯವಾಗಿ ಯೋಚನೆ ಮಾಡಬೇಕಾಗಿದೆ. ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಐ.ಎ.ಎಸ್. ಅಧಿಕಾರಿಗಳಿಂದ ಹಿಡಿದು ಎಲ್ಲಾ ಅಧಿಕಾರಿಗಳಿಗೆ, ನಿಮ್ಮ ಕಾನೂನುಗಳಲ್ಲಿ ಮಾನವೀಯ ಸ್ಪಂದನ ಇರಬೇಕು ಎನ್ನುವಂತಾದ್ದರ ಬಗ್ಗೆ, ಅವರಿಗೆ ಯಾವ ರೀತಿಯಲ್ಲಿ ಹೇಳಬೇಕೋ, ಆ ರೀತಿಯಲ್ಲಿ ಹೇಳಿ. ಏಕೆಂದರೆ, ಅವರು ಪೇಪರ್ ಅಂದರೆ ಬರೇ ಪೇಪರ್ ಒಂದನ್ನು ಮಾತ್ರ ನೋಡುತ್ತಾರೆ. ಅದರಲ್ಲಿ ಮಾನವೀಯ ಭಾವನೆ ಮತ್ತು ದೃಷ್ಟಿ ಕೋನಗಳು ಎಳ್ಳಷ್ಟೂ ಅವರಿಗೆ ಇರುವುದಿಲ್ಲ. ಬ್ರಿಟಿಷ್ ಕಾಲದ ವ್ಯವಸ್ಥೆಯಲ್ಲಿ ಅವನ್ನೆಲ್ಲಾ ಕಲಿಸಲೇ ಇಲ್ಲವೆಂದು ಕಾಣುತ್ತದೆ. ಅದೇ ವ್ಯವಸ್ಥೆಯಲ್ಲೇ ಅವರು ಇರುವುದರಿಂದ, ಅವರು ಹಾಗೆಯೇ ಮುಂದುವರೆಯುತ್ತಿದ್ದಾರೆ. ಕಾನೂನಿನ ಅಳವಡಿಕೆಗಳಲ್ಲಿ ಮತ್ತು ಕಾನೂನನ್ನು implement ಮಾಡುವಲ್ಲಿ ಮಾನವೀಯ ಸ್ಪಂದನದ ಅಗತ್ಯತೆ ಇದೆ. ಅದಕ್ಕೆ ಬೇಕಾಗಿರುವಂತಹ ಮಹತ್ವವನ್ನು, ಆ ರೀತಿಯ ಒಂದು ವಿಶೇಷವಾದಂತಹ ಗಮನವನ್ನು ಸರ್ಕಾರ ಕೊಡಬೇಕಾಗಿದೆ ಅನ್ನುವಂತಹ ಮಾತನ್ನು ಹೇಳುತ್ತೇನೆ. ನಮ್ಮ ಜಿಲ್ಲೆಗಳಿಗಿಂತಲೂ ಮಲೆನಾಡಿನ ಜಿಲ್ಲೆಗಳಲ್ಲಿ ಅನೇಕ ಈ ರೀತಿಯ ಪ್ರಾಥಮಿಕ ಸೌಲಭ್ಯದ ಕೊರತೆಗಳು ಇವೆ. ಆ ಸೌಲಭ್ಯಗಳನ್ನು ಸರ್ಕಾರ ಮುಂಚೂಣಿಯಲ್ಲಿ ನಿಂತು ಕೊಡುವುದಕ್ಕೆ ಮುಂದಾಗಬೇಕು.

ಹಾಗಾದಾಗ ಈ ರೀತಿಯ ಚಟುವಟಿಕೆಗಳು ನಡೆಯುವುದಕ್ಕೆ ಅವಕಾಶವಾಗುವುದಿಲ್ಲ. ಇನ್ನು ಬುದ್ಧಿಜೀವಿಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನು ಮತ್ತೆ ಮತ್ತೆ ಅದರ ಬಗ್ಗೆ ಹೇಳುವುದಕ್ಕೆ ಬಯಸುವುದಿಲ್ಲ. ಬುದ್ಧಿಜೀವಿಗಳ ಬುದ್ಧಿ ಯಾವ ಮಟ್ಟದ್ದು ಎಂದು ಅರಿಯುವಂತಹ ಬುದ್ಧಿ ಸರ್ಕಾರಕ್ಕೆ ಇರಬೇಕು. ಅವರನ್ನು ಕರೆದು, ಅವರನ್ನು ಓಲೈಸಿಕೊಂಡು, ಅವರು ಹೇಳಿದಂತೆ ಕೇಳುವಂತಹ ಸರ್ಕಾರಗಳೇ ಆದರೆ, ಆ ಬುದ್ಧಿಜೀವಿಗಳ ವಿಕೃತ ಬುದ್ಧಿಯಂತೆ ಸರ್ಕಾರವೂ ವಿಕೃತವಾದಂತಹ ದಾರಿಯಲ್ಲಿ ಮುನ್ನಡೆಯಬೇಕಾದಂತಹ ಸಂದರ್ಭಗಳು ಇರುತ್ತದೆ. ಬುದ್ಧಿಜೀವಿಗಳು ರಚನಾತ್ಮಕವಾಗಿ ಸಲಹೆಗಳನ್ನು ಕೊಟ್ಟರೆ, ಅವರು ಸಮಾಜದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ, ಸಮಾಜದಲ್ಲಿ ಸಾಮರಸ್ಯ, ಪ್ರೀತಿ, ವಿಶ್ವಾಸ ಮೂಡಿಸುವುದಕ್ಕೆ ಸಲಹೆ ಕೊಟ್ಟರೆ, ಅದನ್ನು ಸ್ವೀಕಾರ ಮಾಡೋಣ. ಆದರೆ ವಿಕೃತವಾದಂತಹ ಮನೋಭಾವನೆಯನ್ನು ಬೆಳೆಸುವಂತಹ ಬುದ್ಧಿಜೀವಿಗಳು, ತಮ್ಮ ವಿಕೃತಿಯನ್ನು ಸರ್ಕಾರದ ಮೇಲೆ ಹೇರಿ, ಅದನ್ನು ಆಡಳಿತ ವ್ಯವಸ್ಥೆಯಲ್ಲಿ ತರುವುದಕ್ಕೆ ಮುಂದಾದರೆ, ಅದಕ್ಕೆ ಸರ್ಕಾರ ಕಡಿವಾಣ ಹಾಕಬೇಕು. ನಕ್ಸಲೀಯ ಚಟುವಟಿಕೆ ಇರಬಹುದು, ಕಾನೂನು ಬಾಹಿರವಾಗಿ ನಡೆಯುತ್ತಿರುವಂತಹ ಚಟುವಟಿಕೆಗಳು ಇರಬಹುದು, ಇದನ್ನು ನಿಗ್ರಹಿಸುವುದಕ್ಕೆ ತನ್ನ ರಾಜಕೀಯ ಇಚ್ಛಾಶಕ್ತಿಯನ್ನು ಸರ್ಕಾರ ತೋರಿಸಬೇಕು ಎನ್ನುವಂತಹ ಆಗ್ರಹವನ್ನು ಮಾಡುತ್ತೇನೆ. ನಿಜವಾಗಿ ಸರ್ಕಾರ ಸಂಪೂರ್ಣವಾಗಿ ಈ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ವಿಫಲವಾಗಿದೆ. ಆ ವೈಫಲ್ಯತೆಯ ಹಿನ್ನೆಲೆಯಲ್ಲಿ ಸರ್ಕಾರ ಇಂತಹ ಒಂದು ಸಂದರ್ಭದಲ್ಲಾದರೂ ಎಚ್ಚೆತ್ತುಕೊಳ್ಳಬೇಕು. ರಾಜ್ಯದ ಜನತೆಗೆ ಉತ್ತಮವಾದಂತಹ ಆಡಳಿತ ಕೊಡಬೇಕಾದಂತಹ ಸಂದರ್ಭ ಇಲ್ಲಿದೆ. ಆ ದಿಕ್ಕಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಲಿ ಎಂದು ಆಗ್ರಹಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 53 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 15ನೇ ಮಾರ್ಚ್ 2005ರಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

ಕರ್ನಾಟಕ ವಿಧಾನಸಭೆ

ಮಂಗಳವಾರ 15ನೇ ಮಾರ್ಚ್ 2005ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು. ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ. ವಿಷಯ : ಉಡುಪಿ ಘಟನೆ ಬಗ್ಗೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಇರಾಕ್‌ನಲ್ಲಿ ಆಗದೇ ಇರತಕ್ಕಂಥ ಅಮಾನುಷ ಕೃತ್ಯ ಉಡುಪಿಯಲ್ಲಿ ಆಗಿದೆ ಎಂದು ಇವತ್ತಿನ ಪತ್ರಿಕೆಗಳಲ್ಲಿ ಬಂದಿದೆ.

ಅಧ್ಯಕ್ಷರು : ಮೊದಲು ಪ್ರಶ್ನೋತ್ತರ ಅನಂತರ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ಇರಾನ್ ಮತ್ತು ಇರಾಕ್ ದೇಶಗಳಲ್ಲಿಯೂ ಕೂಡ ಆಗುವುದಿಲ್ಲ. ಈ ಕೆಲಸವನ್ನು ಪೋಲಿಸ್‌ನವರು ಕೂಡ ಮಾಡಿಲ್ಲ. ಯಾವುದೋ ಒಂದು ಗ್ಯಾಂಗ್ ಅವರನ್ನು ಹಿಡಿದು ಬಟ್ಟೆ ಬಿಚ್ಚಿ ಎರಡು ರಾತ್ರಿ ಇಟ್ಟುಕೊಂಡು ಹಿಂಸಿಸಿದ್ದಾರೆ.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ. ಪ್ರಶ್ನೋತ್ತರ ಆದಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಈ ದೃಶ್ಯವನ್ನು ನೋಡಿಯಾದರು ತಾವು ಹೇಳಬೇಕು, ಪ್ರಶ್ನೋತ್ತರಕ್ಕಿಂತ ಇದು ಗಂಭೀರವಾದಂಥದ್ದು. ನಾಗರೀಕರು, ಪ್ರಜ್ಞಾವಂತರು ತಲೆ ಎತ್ತಿ ಓಡಾಡುವುದಕ್ಕೆ ಆಗುತ್ತದೆಯೇ? ಈ ರೀತಿ ಮಾಡಿರತಕ್ಕಂಥದ್ದು ಕರ್ನಾಟಕ ರಾಜ್ಯಕ್ಕೆ ಅವಮಾನವಾಗಿದೆ. ಯಾರೋ ಒಬ್ಬರು ದನದ ವ್ಯಾಪಾರ ಮಾಡುತ್ತಿದ್ದಾರೆಂದು ತಿಳಿದು...

ಅಧ್ಯಕ್ಷರು : ಪ್ರಶ್ನೋತ್ತರ ಆದಮೇಲೆ ತಮಗೆ ಅವಕಾಶ ಕೊಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಆ. ವಿಷಯ : ಕರ್ನಾಟಕ ಮಹಾರಾಷ್ಟ ಗಡಿ ವಿವಾದದ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಇನ್ನೊಂದು ಬಹಳ ಗಂಭೀರವಾದ ಪರಿಸ್ಥಿತಿಯನ್ನು ಈ ಸಮಯದಲ್ಲಿ ಹೇಳಬೇಕಾಗಿದೆ. ಅದೇನೆಂದರೆ, ಮಹಾರಾಷ್ಟ್ರದ ಮಾನ್ಯ ರಾಜ್ಯಪಾಲರು ನಮ್ಮ ರಾಜ್ಯದ ಹಿತವನ್ನು ಕಾಪಾಡುವ ಬದಲು ಬೆಳಗಾಂನ್ನು ಬಿಡತಕ್ಕಂಥ ವಿಚಾರವನ್ನು ಜಂಟಿ ಅಧಿವೇಶನದಲ್ಲಿ ಅವರು ಮಾತನಾಡಿದ್ದಾರೆ. ಈ ಸದನದಲ್ಲಿ ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಮ್ಮ ರಾಜ್ಯದ ಹಿತವನ್ನು ಕಾಪಾಡುವ ಬಗ್ಗೆ ತೀವ್ರವಾಗಿ ಹೋರಾಟ ಮತ್ತು ಮಾತನಾಡಿ ಇದಕ್ಕೆ

ಸಂಬಂಧಪಟ್ಟಂತೆ ನಿಯೋಗದಲ್ಲಿ ಬಂದಂಥ ಒಬ್ಬ ಮುಖ್ಯಮಂತ್ರಿಯಾಗಿದ್ದಂಥವರು ಮತ್ತು ಈ ರಾಜ್ಯದವರು ಹಾಗೂ ಈ ರಾಜ್ಯದ ಗಂಡು ಮೆಟ್ಟಿದ ನೆಲದವರು ಅಲ್ಲಿ ರಾಜ್ಯಪಾಲರು ಆದ ತಕ್ಷಣ ಈ ರಾಜ್ಯವನ್ನು ಅವರು ಕಡೆಗಾಣಿಸಿದ್ದಾರೆ.

ಅಧ್ಯಕ್ಷರು : ಪ್ರಶ್ನೋತ್ತರವಾದ ಮೇಲೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟನೆ ಕೊಡಬೇಕು. ಮತ್ತೆ ನಮ್ಮ ರಾಜ್ಯದ ನಿಲುವೇನು ಎಂಬುದನ್ನೂ ಕೂಡ ತಿಳಿಸಬೇಕು.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಬೇಕು. ಪ್ರಶ್ನೋತ್ತರ ಆದಮೇಲೆ ತಮಗೆ ಅವಕಾಶ ಕೊಡುತ್ತೇನೆ. ಇದೊಂದು ಕೆಟ್ಟ ಸಂಪ್ರದಾಯ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಪ್ರಶ್ನೋತ್ತರಕ್ಕಿಂಥ ಬಹಳ ಪ್ರಾಮುಖ್ಯವಾದುದು. ತಾವು ನನ್ನ ಬಗ್ಗೆ ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ.

ಅಧ್ಯಕ್ಷರು : ಬೇಜಾರು ಮಾಡಿಕೊಳ್ಳುವುದಿಲ್ಲ. ಪ್ರಶ್ನೋತ್ತರ ಆದಮೇಲೆ ತಮಗೆ ಅವಕಾಶ ಕೊಡುತ್ತೇನೆ. ಕೆಟ್ಟ ಸಂಪ್ರದಾಯಗಳನ್ನು ನಡೆಸಿಕೊಂಡು ಹೋಗುವುದು ಬೇಡ. ಮಾನ್ಯ ಮುಖ್ಯಮಂತ್ರಿಯವರು ಇಲ್ಲಿಯೇ ಇದ್ದಾರೆ. ಅವರು ತಮಗೆ ಉತ್ತರ ಕೊಡುತ್ತಾರೆ. ತಾವು ಅನಂತರ ಪ್ರಸ್ತಾಪ ಮಾಡಿ. ತಾವು ಈಗ ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಇದೇ ಸ್ಥಳದಲ್ಲಿ ಮುಖ್ಯಮಂತ್ರಿಯಾಗಿ ಮಹಾಜನ್ ವರದಿಯನ್ನು ಒಪ್ಪಿಕೊಂಡಿದ್ದರು. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ನಿಯೋಗದಲ್ಲಿ ಬಂದಂಥವರು. ಆದರೆ, ಇವತ್ತಿನ ದಿವಸ ಅವರು ಅಲ್ಲಿಗೆ ಹೋಗಿ ಸರಿ ಎಂದು ವಾದ ಮಾಡತಕ್ಕಂಥದ್ದು ಸರಿಯಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದದು.

ಅಧ್ಯಕ್ಷರು : ತಾವು ಮೊದಲು ದಯಮಾಡಿ ಕುಳಿತುಕೊಳ್ಳಿ. ಅನಂತರ ಮಾತನಾಡಿ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದನ್ನು ತಾವು ದಯಮಾಡಿ ಕೇಳಬೇಕು. ಏನೆಂದರೆ, ಇವತ್ತು ಪ್ರಶ್ನೋತ್ತರ ಆದಮೇಲೆ ತಾವು ಎತ್ತಿರತಕ್ಕಂಥ ಗಂಭೀರವಾದ ವಿಚಾರವನ್ನು ಹೇಳುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರೂ ಕೂಡ ಇಲ್ಲಿಯೇ ಇರುವುದರಿಂದ ಅದಕ್ಕೆ ಉತ್ತರ ಕೊಡುತ್ತಾರೆ. ಆದ್ದರಿಂದ, ಈಗ ಪ್ರಶ್ನೋತ್ತರ ನಡೆಯುವುದಕ್ಕೆ ಅವಕಾಶವನ್ನು ದಯಮಾಡಿ ಮಾಡಿಕೊಡಿ.

ಇ. ವಿಷಯ : ನಕ್ಸಲೈಟ್ ಸಮಸ್ಯೆ ಬಗ್ಗೆ.

ಶ್ರೀ ಚಿಕ್ಕಣ್ಣಗೌಡ್ರ ಸಿದ್ದನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೆ ನಕ್ಸಲೈಟ್ ಬಗ್ಗೆ ಮಾತನಾಡುವುದಕ್ಕೆ ಇವತ್ತು ನನಗೆ ಅವಕಾಶ ಕೊಡುತ್ತೇನೆಂದು ನೆನ್ನೆ ದಿವಸ ಹೇಳಿದ್ದರು. ಆದ್ದರಿಂದ, ನನಗೆ ಮಾತನಾಡಲು ಎರಡು ನಿಮಿಷ ಅವಕಾಶ ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಅವಕಾಶ ಕೊಡುತ್ತೇನೆ. ಈಗ ಮಾನ್ಯ ಬಿ.ಆರ್.ಪಾಟೀಲ್‌ರವರು ತಮ್ಮ ಪ್ರಶ್ನೆಯನ್ನು ಪ್ರಸ್ತಾಪ ಮಾಡಿ.

ಈ. ಪ್ರಶ್ನೆಗಳಿಗೆ ಉತ್ತರಗಳು ಬಾರದೇ ಇರುವ ಬಗ್ಗೆ

ಶ್ರೀ ವಿ.ಸುನೀಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ನಾನು ಕಳುಹಿಸಿದಂಥ 17 ಪ್ರಶ್ನೆಗಳಿಗೆ ಇದುವರೆಗೂ ಉತ್ತರ ಬಂದಿಲ್ಲ. ಈಗ ಮತ್ತೆ ಪ್ರಶ್ನೋತ್ತರ ಪ್ರಾರಂಭ ಆಗಿದೆ. ಮತ್ತೆ ಈ ಸಾರಿ ಕೂಡ ಉತ್ತರ ಬಂದಿಲ್ಲ. ಈ ರೀತಿಯಾದರೆ ನಾವು ಯಾತಕ್ಕೋಸ್ಕರ ಪ್ರಶ್ನೆಯನ್ನು ಕಳುಹಿಸಿಕೊಡಬೇಕು?

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ಕಳೆದ ಅಧಿವೇಶನದಲ್ಲಿ ಸುಮಾರು 139 ಪ್ರಶ್ನೆಗಳಿಗೆ ಸರ್ಕಾರದವರು ಉತ್ತರ ಕೊಟ್ಟಿಲ್ಲ. ಆದ್ದರಿಂದ, ಇದರ ಬಗ್ಗೆ ಬಹಳ ಗಂಭೀರವಾಗಿ ನಾವು ಪರಿಗಣಿಸಬೇಕಾಗುತ್ತದೆ. ಮತ್ತೆ ಇದೊಂದು ಸರ್ಕಾರದ ಮೇಲೆ ಪರಿಣಾಮ ಕೂಡ ಆಗುತ್ತದೆ. ಆದ್ದರಿಂದ, ದಯಮಾಡಿ ಎಲ್ಲಾ ಸಚಿವರಲ್ಲಿ ಮತ್ತು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಈ ಅಧಿವೇಶನ ಮುಗಿಯುವದರೊಳಗೆ ಕಳೆದ ಅಧಿವೇಶನದಲ್ಲಿ ಯಾವ್ಯಾವ ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲವೋ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಸಂಬಂಧಪಟ್ಟಂಥ ಸದಸ್ಯರಿಗೆ ಕಳುಹಿಸಬೇಕೆಂದು ನಾನು ಎಲ್ಲಾ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗ ಪ್ರಶ್ನೋತ್ತರ ವೇಳೆ. ಮಾನ್ಯ ಬಿ.ಆರ್.ಪಾಟೀಲ್‌ರವರು ತಮ್ಮ ಪ್ರಶ್ನೆಯನ್ನು ಪ್ರಸ್ತಾಪ ಮಾಡಿ.

ಪ್ರಶ್ನೋತ್ತರ

ಅನಿರ್ಬಂಧಿತ ಮರಳು ಗಣಿಗಾರಿಕೆ

136 (2145) ಶ್ರೀ ಪಾಟೀಲ್ ಬಿ.ಆರ್. (ಆಳಂದ)ರವರು ಕೆಳಕಂಡ ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಅನಿರ್ಬಂಧಿತ ಮರಳು ಗಣಿಗಾರಿಕೆಯಿಂದ ರಾಜ್ಯದ ಪರಿಸರ ಮತ್ತು ಅಂತರ್ಜಲ ಮಟ್ಟದ ಮೇಲೆ ಆಗಿರುವ ಪರಿಣಾಮ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಇದರಲ್ಲಿ ಈ ರೀತಿ ಗಣಿಗಾರಿಕೆ ಮಾಡುವವರು ಸರ್ಕಾರದಿಂದ ಪರವಾನಗಿ ಪಡೆದಿರುವವರ ಸಂಖ್ಯೆ ಎಷ್ಟು ;

ಇ. ಅವರಿಗೆ ನಿಗದಿಪಡಿಸಿರುವ ವಿಸ್ತೀರ್ಣವೇನು;

ಈ. ಇದು ಖಾಸಗಿಯದೇ ಅಥವಾ ಸರ್ಕಾರದ್ದೇ;

ಉ. ಗಣಿಗಾರಿಕೆಯಿಂದ ಪ್ರತಿ ಎಕರೆಯಲ್ಲಿ ದೊರಕುವ ಮರಳು ಪ್ರಮಾಣಕ್ಕೆ ಸರಿಯಾಗಿ ಸರ್ಕಾರಕ್ಕೆ ರಾಜಧನ ಸಂದಾಯವಾಗಿದೆಯೇ;

ಊ. ಆಗಿದ್ದರೆ, ಎಷ್ಟು ಹಣ ಸಂಧಾಯವಾಗಿದೆ (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಅಂಕಿ-ಅಂಶಗಳನ್ನು ಒದಗಿಸುವುದು);

ಋ. ಆಹಾರ ಪ್ರಮಾಣದ ಕಟ್ಟಡ ಸಾಮಾಗ್ರಿ ಮತ್ತು ಮರಳನ್ನು ಮಿತಿಮೀರಿ ಹೇರಿಕೆಯಿಂದ ಸಾಗಿಸುತ್ತಿದ್ದ ವಾಹನಗಳಿಂದ ರಾಜ್ಯದ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ೠ. ಕಾನೂನು ಬಾಹಿರ ಗಣಿಗಾರಿಕೆ ಮಾಡಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;

ಎ. ಕಟ್ಟಡ ಸಾಮಾಗ್ರಿಗಳನ್ನು ಹೊತ್ತು ರಸ್ತೆಗಳಲ್ಲಿ ಓಡಾಡುವ ವಾಹನಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಲು ಸರ್ಕಾರ ಚಿಂತಿಸುತ್ತಿದೆಯೇ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ. ಹೌದು. ಇದರಿಂದ ಒಂದು ಮೀಟರ್ ಆಳದವರೆಗೆ ಮಾತ್ರ ಮರಳು ಗಣಿಗಾರಿಕೆ ಮಾಡಲು ನಿರ್ಬಂಧ ವಿಧಿಸಿ, ಹರಾಜು ಪ್ರಕ್ರಿಯೆ ಮಾಡಲಾಗುತ್ತಿದೆ.

ಆ. 1026

ಇ. ಗುತ್ತಿಗೆ ನೀಡಿರುವ ವಿಸ್ತೀರ್ಣ 4661.27 ಎಕರೆ ಇರುತ್ತದೆ.

ಈ. ಸರ್ಕಾರಿ ಜಮೀನು.

ಉ. ಹೌದು.

ಊ. ರೂ.4,63,22,711/– ಸಂದಾಯವಾಗಿದೆ, ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಋ. ಹೌದು.

ೠ. ಕಾನೂನು ಬಾಹಿರ ಗಣಿಗಾರಿಕೆ ಮಾಡಿದವರನ್ನು ಗುರ್ತಿಸಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ ಅನ್ವಯ ಅವರಿಂದ ದಂಡ ವಸೂಲಿ ಮಾಡಲಾಗಿತ್ತಿದೆ. ಈ ನಿಟ್ಟಿನಲ್ಲಿ ರೂ.43,54,812/– ಮೊತ್ತ ಸಂಗ್ರಹವಾಗಿದೆ. 119 ಪ್ರಕರಣಗಳಲ್ಲಿ ಪೋಲೀಸ್ ಇಲಾಖೆಯ ಸಹಕಾರ ಕೋರಿ ಪತ್ರ ಬರೆದಿದೆ. 3 ಪ್ರಕರಣಗಳಲ್ಲಿ ಎಫ್,ಐ,ಆರ್, ದಾಖಲಿಸಿದೆ.

ಎ. ಇಲ್ಲ.

ಅನುಬಂಧ

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ಮರಳು ದೊರಕುವ ಪ್ರಮಾಣಕ್ಕೆ ಸಂದಾಯವಾಗಿರುವ ರಾಜಧನ ರೂ.ಗಳಲ್ಲಿ.	ಜಿಲ್ಲಾವಾರು ಸಂಗ್ರಹಣೆಯಾದ ರಾಜಧನ
1	ಬೆಂಗಳೂರು (ಉತ್ತರ)	–	–	
2	ಬೆಂಗಳೂರು ದಕ್ಷಿಣ	–	–	
3	ಚಾಮರಾಜನಗರ	ಕೊಳ್ಳೆಗಾಲ	31,30,000	31,30,000
4	ಚಿಕ್ಕಮಗಳೂರು	1. ಮೂಡಿಗೆರೆ	84,300	2,46,120
		2. ಶೃಂಗೇರಿ	87,000	
		3. ಕೊಪ್ಪ	38,200	
		4. ಎನ್.ಆರ್.ಪುರ	1,36,620	
5	ದಕ್ಷಿಣ ಕನ್ನಡ ಜಿಲ್ಲೆ	1. ಮಂಗಳೂರು	1,29,500	3,65,250
		2. ಬೆಳ್ತಂಗಡಿ	69,500	
		3. ಬಂಟ್ವಾಳ	1,18,750	
		4. ಸುಳ್ಯ	15,000	
		5. ಪುತ್ತೂರು	32,500	

6	ಉಡುಪಿ ಜಿಲ್ಲೆ	ಉಡುಪಿ	15,500	28,000
		ಕಾರ್ಕಳ	12,500	
7	ಹಾಸನ	1. ಆಲೂರು	74,000	5,45,070
		2. ಅರಕಲಗೂಡು	60,000	
		3. ಬೇಲೂರು	11,550	
		4. ಹಾಸನ	30,000	
		5. ಹೊಳೆ ನರಸೀಪುರ	35,750	
		6. ಸಕಲೇಶಪುರ	3,33,770	
8	ಕನಕಪುರ	1. ಕನಕಪುರ	11,30,800	11,55,800
		2. ರಾಮನಗರ	25,000	
9	ಕೋಲಾರ	1. ಬಾಗೇಪಲ್ಲಿ	1,20,486	22,37,546
		2. ಚಿಕ್ಕಬಳ್ಳಾಪುರ	7,53,650	
		3. ಚಿಂತಾಮಣಿ	61,000	
		4. ಗೌರಿಬಿದನೂರು	2,55,160	
		5. ಗುಂಡಿ ಬಂಡೆ	6,48,250	
		6. ಮುಳಬಾಗಿಲು	17,500	
		7. ಶಿಡ್ಲಘಟ್ಟ	2,25,000	2237546
10	ಮಂಡ್ಯ	1. ಮಳವಳ್ಳಿ	87.47,500	8747500
11	ಮೈಸೂರು ಜಿಲ್ಲೆ	1. ಟಿ.ನರಸೀಪುರ(ಗುತ್ತಿಗೆ)	8,81,796	
		2. ಟಿ.ನರಸೀಪುರ(ಹರಾಜು)	63,59,000	
		3. ಹೆಚ್.ಡಿ.ಕೋಟೆ(ಹರಾಜು)	2,200	
		4. ನಂಜನಗೂಡು(ಹರಾಜು)	7,513	
		5. ಪಿರಿಯಾಪಟ್ಟಣ(ಗುತ್ತಿಗೆ)	–	
		6. ಪಿರಿಯಾಪಟ್ಟಣ(ಹರಾಜು)	77,500	
		7. ಹುಣಸೂರು(ಹರಾಜು)	44,100	
		8. ಕೆ.ಆರ್.ನಗರ(ಹರಾಜು)	26,300	
				7397409
	ಕೊಡಗು	1. ಸೋಮವಾರ ಪೇಟೆ(ಗುತ್ತಿಗೆ)	10,876	
		2. ಸೋಮವಾರ ಪೇಟೆ(ಹರಾಜು)	4,51,600	
		3. ವೀರಾಜ ಪೇಟೆ (ಗುತ್ತಿಗೆ)	1,27,697	
		4. ವೀರಾಜ ಪೇಟೆ(ಹರಾಜು)	3,44,100	

		5. ಕೊಡಗು(ಗುತ್ತಿಗೆ)	3,700	
		6. ಕೊಡಗು(ಹರಾಜು)	63,500	
				1003073
12	ಶಿವಮೊಗ್ಗ	1. ತೀರ್ಥಹಳ್ಳಿ	41,27,000	
		2. ಸಾಗರ	60,000	
		3. ಭದ್ರಾವತಿ	20,000	
		4. ಶಿವಮೊಗ್ಗ	4,100	
		5. ಹೊಸನಗರ	1,80,600	
				6391700
	ದಾವಣಗೆರೆ ಜಿಲ್ಲೆ	1. ಹೊನ್ನಾಳಿ	16,95,900	1695900
13	ತುಮಕೂರು	1. ಕೊರಟಗೆರೆ	18,37,500	
		2. ಕುಣಿಗಲ್	4,27,000	2364500
14	ಬೆಳಗಾಂ	ಗೋಕಾಕ	23,75,150	
		ಬೈಲಹೊಂಗಲ	2,37,500	
		ಸವದತ್ತಿ	40,000	
		ಖಾನಾಪುರ	5,96,350	
		ಉಕ್ಕೇರಿ	2,54,950	53,93,400
		ಅತ್ತೇನಿ	7,21,500	
		ಚಿಕ್ಕೋಡಿ	11,07,950	
		ರಾಯ್‌ಬಾನ್	60,000	
15	ಬಳ್ಳಾರಿ	ಬಳ್ಳಾರಿ	9,38,700	
		ಸಿರಿಗುಪ್ಪ	1,42,300	13,38,500
		ಹಡಗಲಿ	2,57,500	
16	ಬಿಜಾಪುರ	ಇಂಡಿ	17,13,800	2,56,500
		ಸಿಂದಗಿ	84,700	
17	ಚಿತ್ರದುರ್ಗ	ಹೊಸದುರ್ಗ	2,88,485	3,07.845
		ಚಳ್ಳಕೆರೆ	19,360	
18	ದಾವಣಗೆರೆ	ಹರಪ್ಪನಹಳ್ಳಿ	60,000	
19	ಧಾರವಾಡ	ರಾಣಿಬೆನ್ನೂರು	89,000	
			5,08,275	7,13,525
		ಹಾವೇರಿ	56,250	

20	ಗುಲ್ಬರ್ಗಾ	ಚಿತ್ತಾಪುರ	13,05,250	
		ಅಫಜಲಪುರ	5,34,600	18,72,350
		ಜೇವರ್ಗಿ	32,500	
		ಸೇಡಂ	5,11,000	
21	ಬಾಗಲಕೋಟೆ	ಹುನಗುಂದ	93,000	
	(ಇಳಕಲ್)	ಬಾದಾಮಿ	42,500	1,87,000
		ಮುದ್ದೋಳ	51,000	
22	ಕೊಪ್ಪಳ	ರಾಯಚೂರು	65,000	
		ಮಾನವಿ	45,000	2,12,000
		ಸಿಂದನೂರು	81,000	
		ಲಿಂಗಹೊಸೂರು	21,000	
23	ಕಾರವಾರ	ಕಾರವಾರ	4,27,323	
		ಕುಮುಟ	28,000	5,57,173
		ಹೊನ್ನಾವರ	1,01,850	
			ಒಟ್ಟು ಮೊತ್ತ	4,63,22,711

ಪ್ರಶ್ನೋತ್ತರಗಳು

ಅ. ಚುಕ್ಕೆಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅನಿರ್ಬಂಧಿತ ಮರಳು ಗಣಿಗಾರಿಕೆಗೆ ಸಂಬಂಧಪಟ್ಟಂತೆ ಒಂದು ಮೀಟರ್ ಆಳದವರೆಗೆ ಮಾತ್ರ ಮರಳು ಗಣಿಗಾರಿಕೆ ಮಾಡುವುದಕ್ಕೆ ಅವರಿಗೆ ಪರ್ಮಿಷನ್ ಕೊಡಲಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಉತ್ತರದ ಪ್ರತಿಯಲ್ಲಿ ತಿಳಿಸಿದ್ದಾರೆ. ಆದರೆ, ವಾಸ್ತವಿಕವಾಗಿ ಹೇಳುವುದಾದರೆ ಸುಮಾರು 50 ಅಡಿಗಳವರೆಗೆ ಈ ಗಣಿಗಾರಿಕೆ ಮಾಡಿ ಈ ಭೂಮಿಯಲ್ಲಿರತಕ್ಕಂಥ ಅಂತರ್ಜಲವನ್ನು ಸಂಪೂರ್ಣವಾಗಿ ಹಾಳು ಮಾಡು ವಂಥ ಒಂದು ದೊಡ್ಡ ಅಪಾಯಕಾರಿಯಾದ ಕೆಲಸ ಇವತ್ತಿನ ದಿವಸ ನಡೆಯುತ್ತಿದೆ. ಆದ್ದರಿಂದ , ಸರ್ಕಾರದವರು ಕೊಟ್ಟಿರತಕ್ಕಂಥ ಉತ್ತರ ಅಷ್ಟೊಂದು ಸಮಂಜಸವಾಗಿಲ್ಲ ಎಂಬುದನ್ನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಇದು ಖಾಸಗಿಯವರದೇ ಅಥವಾ ಸರ್ಕಾರದ್ದೇ ಎಂದು ಕೇಳಿರತಕ್ಕಂಥ ಪ್ರಶ್ನೆಗೆ ಇದು ಸರ್ಕಾರಿ ಜಮೀನು ಎಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಲೀಜ್ ಕೊಟ್ಟಿರತಕ್ಕಂಥ ಏರಿಯಾಗಳು ಅಲ್ಲದೆ ಬೇರೆ ಕಡೆಯೂ ಕೂಡ ಅತಿಕ್ರಮಣ ಮಾಡಿ ಸಾಕಷ್ಟು ಪ್ರಮಾಣದಲ್ಲಿ ಈ ರೀತಿಯಾದ ಗಣಿಗಾರಿಕೆ ನಡೆಯುತ್ತಿದೆ. ಆದ್ದರಿಂದ, ಈ ಉತ್ತರ ಕೂಡ ಸತ್ಯಕ್ಕೆ ದೂರವಾದದು ಎಂಬ ಮಾತನ್ನು ಹೇಳುತ್ತಾ ಕಾನೂನು ಬಾಹಿರ ಗಣಿಗಾರಿಕೆ ಮಾಡಿದವರ ಮೇಲೆ ಸರ್ಕಾರ ಕೈಗೊಂಡಿರತಕ್ಕಂಥದ್ದನ್ನು ನೋಡಿದರೆ ನಾನು ಕೇಳಿರತಕ್ಕಂಥ ಪ್ರಶ್ನೆಗೂ ಮತ್ತು ಸರ್ಕಾರ ನೀಡಿರತಕ್ಕಂಥ ಉತ್ತರಕ್ಕೂ ಅಜಗಜಾಂತರ ವ್ಯತ್ಯಾಸ ಕಾಣುತ್ತದೆ. ಏಕೆಂದರೆ, ಇಲ್ಲಿಯವರೆಗೆ ಕೇವಲ ಎಫ್.ಐ.ಆರ್.ಕೇಸ್ ಹಾಕಿದ್ದೇವೆಂದು ಹೇಳಿದ್ದಾರೆ. ಆದರೆ, ಸುಮಾರು ವರ್ಷಗಳಿಂದ ಕಾನೂನು ಬಾಹಿರ ಗಣಿಗಾರಿಕೆ ನಡೆದುಕೊಂಡು ಬಂದಿದ್ದರು ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಮತ್ತು ಸಂಬಂಧಪಟ್ಟಂಥ ಅಧಿಕಾರಿಗಳು ಇದುವರೆವಿಗೂ ಏನು ಕ್ರಮ ಕೈಗೊಂಡಿಲ್ಲ. ಮತ್ತೆ ನಾನು ಕಣ್ಣಾರೆ ನೋಡಿರತಕ್ಕಂಥ ವಿಚಾರ ಏನೆಂದರೆ ಬೆಂಗಳೂರು ನಗರಕ್ಕೆ ಸುಮಾರು 1000 ಲಾರಿಗಳು ಮರಳು ತುಂಬಿಕೊಂಡು ಬರುತ್ತವೆ. ಮತ್ತೆ ಇವರು ಬರುವಾಗ ಪೊಲೀಸ್‌ನವರಿಗೆ ದುಡ್ಡು ಕೊಟ್ಟೇ ಬರುತ್ತಾರೆ. ಅವರೇನೂ ಸುಮ್ಮನೆ ಬರುವುದಿಲ್ಲ. ಇದರಿಂದ ರಸ್ತೆಗಳೂ ಕೂಡ ಹಾಳಾಗುತ್ತಿವೆ. ಹೊಸಪೇಟೆ ಅಥವಾ ಕುದುರೆ ಮುಖದ ಗಣಿಯಿಂದ ಅದಿರು ಇರಬಹುದು ಅಥವಾ ಗ್ರಾನೈಟ್ ಕಲ್ಲುಗಳು ಮತ್ತೆ ನಮ್ಮ ಕಡೆ ಇರುವ ಶಹಬಾದ್ ಪರ್ಸಿ ಮತ್ತು ಸಿಮೆಂಟ್ ಸಾಗಾಣಿಕೆ ಮಾಡುತ್ತಾರೆ. ಆದರೆ ನಮ್ಮ ರಸ್ತೆಗಳು 8 ರಿಂದ 10 ಟನ್ ಭಾರ ಹೊರತಕ್ಕಂಥ ಶಕ್ತಿ ಇದೆ. ಆದರೆ ಇವತ್ತಿನ ದಿವಸ ಈ ರಸ್ತೆಗಳ ಮೇಲೆ 40 ಟನ್‌ವರೆಗೆ ಟ್ರಾಲಿ ಮೇಲೆ ಸಿಮೆಂಟ್ ಮತ್ತು ಅದಿರು ಕಲ್ಲು ಸಾಗಾಣಿಕೆ ಮಾಡುತ್ತಿದ್ದಾರೆ. ಆದರೆ, ಇವತ್ತಿನ ದಿವಸ ಆರ್ ಟಿ ಓರವರು ಕೂಡ ಇವರ ಬಗ್ಗೆ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಮತ್ತೆ ಸರ್ಕಾರದವರೂ ಕೂಡ ಇದರ ಬಗ್ಗೆ ಏನೂ ಮಾಡುತ್ತಿಲ್ಲ. ಆದಕಾರಣ ಈಗ ಇರತಕ್ಕಂಥ ರಸ್ತೆಗಳೆಲ್ಲಾ ಹಾಳಾಗಿವೆ. ಮತ್ತೆ ಇವತ್ತಿನದಿವಸ ಪರಿಸರದ ಮೇಲೂ ಕೂಡ ಬಹಳ ಗಂಭೀರವಾದ ಪರಿಣಾಮವಾಗಿದೆ ಮತ್ತೆ ಕುದುರೆ ಮುಖದಲ್ಲಿ ಮಾಡತಕ್ಕಂಥ ಗಣಿಗಾರಿಕೆಯಿಂದ....

ಅಧ್ಯಕ್ಷರು : ಮಾನ್ಯ ಬಿ.ಆರ್.ಪಾಟೀಲ್‌ರವರೆ, ತಾವು ಕೇವಲ ಉಪಪ್ರಶ್ನೆಗಳನ್ನು ಮಾತ್ರ ಕೇಳಿ.

ಶ್ರೀ ಬಿ.ಆರ್.ಪಾಟೀಲ್ : ಈಗ ನಾನು ಕೇಳಿರತಕ್ಕಂಥದರ ಬಗ್ಗೆ ಉತ್ತರ ಹೇಳಲಿ. ಅನಂತರ ಮತ್ತೆ ಪ್ರಶ್ನೆ ಕೇಳುತ್ತೇನೆ.

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮರಳು ಗಣಿಗಾರಿಕೆ ಬಗ್ಗೆ ಕೇಳಿದಂಥ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇವೆ. ಮತ್ತೆ ಇದರ ಬಗ್ಗೆ ನಾನು ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಮತ್ತೆ ಇದು ನನಗೂ ಕೂಡ ಅಷ್ಟೊಂದು ಸಮಂಜಸವಾಗಿ ಕಾಣುತ್ತಿಲ್ಲ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಒಂದು ಮೀಟರ್ ಆಳದವರೆಗೆ ಗಣಿಗಾರಿಕೆ ಮಾಡಬೇಕೆಂದು ಇದ್ದರೂ ಕೂಡ ಇವತ್ತಿನ ದಿವಸ 3 ರಿಂದ 10 ಅಡಿಗಳವರೆಗೆ ಗಣಿಗಾರಿಕೆ ಮಾಡುತ್ತಿದ್ದಾರೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಆಗುತ್ತಿಲ್ಲ. ಇದನ್ನು ನಿಯಂತ್ರಣ ಮಾಡಬೇಕೆಂದು ಹೇಳಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶಾಸಕರು ಕೋರ್ಟ್‌ಗೆ ಹೋಗಿದ್ದಾರೆ. ಈಗ ಇದಕ್ಕೆ ಒಂದು ಕಾನೂನು ಮಾಡಬೇಕೆಂಬ ಒಂದು ಅಂತಿಮ ನಿರ್ಧಾರಕ್ಕೆ ನಾವು ಬಂದಿದ್ದೇವೆ. ಇವತ್ತಿನ ದಿವಸ ವಿಶೇಷವಾಗಿ ಕೋಲಾರ ಮತ್ತು ತುಮಕೂರು ಭಾಗಗಳಿಂದ ಮರಳು ಸಾಗಾಣಿಕೆ ಮಾಡುವುದರಿಂದ ಈ ಒಂದು ಸಮಸ್ಯೆ ಉದ್ಭವವಾಗಿದೆ. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಶಿವಶಂಕರ್ ರೆಡ್ಡಿಯವರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಹೈ ಕೋರ್ಟ್‌ನಲ್ಲಿದೆ. ಮಾನ್ಯ ಬಿ.ಆರ್.ಪಾಟೀಲ್‌ರವರು ಹೇಳಿದ ಹಾಗೆ ಮರಳು ಗಣಿಗಾರಿಕೆ 3 ಅಥವಾ 4 ಫೀಟ್ ಆಳಕ್ಕೆ ಹೋದರೆ ಅಂತರ್ಜಲದ ಮಟ್ಟ ಕಡಿಮೆಯಾಗಿ ಕುಡಿಯುವ ನೀರಿನ ಸಮಸ್ಯೆ ಕೂಡ ಆಗುತ್ತದೆ. ಇದೊಂದು ದೊಡ್ಡ ಸಮಸ್ಯೆಯಾಗಿದ್ದು ಇದನ್ನು ಸಹ ಇತ್ಯರ್ಥ ಕೂಡ ಮಾಡಬೇಕಾಗಿದೆ. ಇದಕ್ಕೆ ಸಂಬಂದಪಟ್ಟಂತೆ ತಾವು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಈಗ ಉತ್ತರ ಕೊಟ್ಟರೂ ಸಹ ಇದಕ್ಕೊಂದು ಪರಿಹಾರವನ್ನು ಸರ್ಕಾರ ಕಂಡುಹಿಡಿಯುತ್ತದೆ ಎಂಬ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಶೀಘ್ರವಾಗಿ ಇದಕ್ಕೊಂದು ಯೂನಿಫಾರಂ ಆಗಿ ಒಂದು ಕಾನೂನು ತರತಕ್ಕಂಥದ್ದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಮತ್ತೆ ಲಾರಿಗಳಲ್ಲಿ ಹೆಚ್ಚು ಲೋಡ್ ಹಾಕುವುದರಿಂದ ರಸ್ತೆಗಳು ಸಂಪೂರ್ಣವಾಗಿ ಹಾಳಾಗುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ, ಅದನ್ನು ನಿಯಂತ್ರಣಕ್ಕೆ ತರತಕ್ಕಂಥ ರೀತಿಯಲ್ಲಿ ಸರ್ಕಾರ ವಿಚಾರ ಮಾಡುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಹಣಕಾಸಿನ ಮಂತ್ರಿಗಳು ಬಜೆಟ್‌ನಲ್ಲಿ ಏನು ಹೇಳಿದ್ದಾರೆಂದರೆ, ಅದಿರು ಸಾಗಾಣಿಕೆ ಮಾಡತಕ್ಕಂಥ ಲಾರಿಗಳಿಗೆ ಪ್ರತ್ಯೇಕ ಟೋಲ್‌ಹಾಕಿ, ಇದರಿಂದ ಕಲೆಕ್ಟ್ ಆಗತಕ್ಕಂಥ ಟೋಲ್ ಹಣವನ್ನು ರಸ್ತೆ ಅಭಿವೃದ್ಧಿಗೆ ಉಪಯೋಗ ಮಾಡಲಾಗುತ್ತದೆಂದು ಹೇಳಿದ್ದಾರೆ. ಇವತ್ತಿನ ದಿವಸ ಮರಳು ಮತ್ತು ಶಹಬಾದ್ ಸ್ಟೋನ್ ಸಾಗಾಣಿಕೆ ಮಾಡತಕ್ಕಂಥ ಹೆವಿ ಟ್ರಕ್‌ಗಳಿಗೆ ಒಂದೇ ಸಮನಾದ ಪ್ಯಾರಾ ಮೀಟರ್ ಟೋಲ್ ಹಾಕಿ ಆ ಭಾಗದ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಉಪಯೋಗ ಮಾಡಬೇಕು. ಆದರೆ ಈ ಹಣವನ್ನು ಕಲೆಕ್ಟ್ ಮಾಡಿ ಬೇರೆ ಕೆಲಸಕ್ಕೆ ಉಪಯೋಗ ಮಾಡತಕ್ಕಂಥದ್ದು ಸರಿಯಲ್ಲ. ಅದಿರು ಲಾರಿಗಳನ್ನು ನಿಲ್ಲಿಸಿ ಬೈಂದೂರಿನಲ್ಲಿ ಪುನಃ ಸ್ಟ್ರೈಕ್ ಮಾಡುತ್ತಿದ್ದಾರೆ. ಪ್ರತಿಯೊಂದು ಭಾಗದಲ್ಲಿ ಇದನ್ನು ನಿಲ್ಲಿಸುವಂಥ ಪ್ರಕ್ರಿಯೆ ನಡೆಯಬಾರದು. ಹೆವಿ ಟ್ರಕ್‌ಗಳನ್ನು ಮ್ಯಾನುಫ್ಯಾಕ್ಚರ್ ಮಾಡುವುದಕ್ಕೆ ಬಿಟ್ಟು ಇದರಲ್ಲಿ ಟ್ರಾನ್ಸ್‌ಪೋರ್ಟ್ ಮಾಡಬಾರದೆಂದು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇರತಕ್ಕಂಥ ರಸ್ತೆಗಳನ್ನು ಮತ್ತು ಬ್ರಿಡ್ಜ್‌ಗಳನ್ನು ಸ್ಟ್ರೆಂಥನ್ ಮಾಡುವುದಕ್ಕೆ ತಕ್ಷಣವೇ ಕ್ರಮ ತೆಗೆದು ಕೊಳ್ಳುತ್ತಾರೆಯೇ ಎಂಬ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಯರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮರಳುಸಾಗಾಣಿಕೆ ಬಗ್ಗೆ ನನ್ನದೊಂದು ಉಪ ಪ್ರಶ್ನೆ ಇದೆ.

ಅಧ್ಯಕ್ಷರು : ಉಪ ಪ್ರಶ್ನೆಯನ್ನು ಒಂದೊಂದು ನಿಮಿಷದಲ್ಲಿ ಮುಗಿಸಬೇಕು. ಏಕೆಂದರೆ, ಪ್ರಶ್ನೋತ್ತರವನ್ನು ಒಂದು ಗಂಟೆ ಎಂದು ಅವಧಿ ನಿಗದಿ ಮಾಡಲಾಗಿದೆ. ಅನಂತರ ಬರುವ ಪ್ರಶ್ನೆಗಳನ್ನು ತೆಗೆದುಕೊಳ್ಳುವುದಿಲ್ಲ.

ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ, ನನ್ನ ತಾಲ್ಲೂಕಿನಲ್ಲಿ ಕೂಡ ಇದೇ ಸಮಸ್ಯೆ ಇದೆ. ಆದ್ದರಿಂದ ಒಂದು ನಿಮಿಷ ನಾನು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು : ಹೆಚ್ಚು ಮಾತನಾಡುವುದಕ್ಕೆ ಹೋಗಬೇಡಿ. ಕೇವಲ ಪ್ರಶ್ನೆ ಏನೆಂಬುದನ್ನು ಮಾತ್ರ ಹೇಳಿ.

ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಗೌರಿಬಿದನೂರಿನಲ್ಲಿ ಈ ರೀತಿಯಾದ ಗಣಿಗಾರಿಕೆ ಯಾವುದೇ ಲೈಸೆನ್ಸ್ ನೀಡಿಲ್ಲ. ಆದರೆ, ಪ್ರತಿದಿವಸ ಸುಮಾರು 800 ರಿಂದ 1000 ರೋಡ್ ಅನಧಿಕೃತವಾಗಿ ಮರಳು ತುಂಬಿಕೊಂಡು ಹೋಗುತ್ತಿದ್ದಾರೆ. ಖಾಸಗಿ ಜಮೀನಿನಲ್ಲಿ ಕೂಡ ಈ ಮರುಳು ಗಣಿಗಾರಿಕೆ ನಡೆಯುತ್ತಿದೆ. ಇದರಿಂದ ನಮ್ಮ ತಾಲ್ಲೂಕಿನ ಬಹಳಷ್ಟು ರಸ್ತೆಗಳು ಹದಗೆಟ್ಟಿರುತ್ತವೆ. ಕುಡಿಯುವ ನೀರಿಗೆ ಬಹಳಷ್ಟು ಸಮಸ್ಯೆಯಾಗಿದೆ, ಹಾಗಾಗಿ ಇದನ್ನು ನಿಷೇಧ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ(ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ನಾವು ಕಳೆದ 5–6 ವರ್ಷಗಳಿಂದ ಈ ಮರಳನ್ನು ತೆಗೆಯಬಾರದೆಂದು ಹೇಳಿ ತೀವ್ರ ರೀತಿಯಲ್ಲಿ ಸರ್ಕಾರದ ಮೇಲೆ ಒತ್ತಾಯವನ್ನು ತಂದಿರುತ್ತೇವೆ. ಹೈಕೋರ್ಟಿನಲ್ಲಿ ಕೇಸ್ ಹಾಕಿದೆವು. ಹೈ ಕೋರ್ಟಿನಲ್ಲಿ ವಿಚಾರಣೆಗೆ ಬಂದಾಗ ಮೈನ್ಸ್ ಅಂಡ್ ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನ ಹಿಂದಿನ ಡೈರೆಕ್ಟರರಾದ ಶ್ರೀ. ಬಸಪ್ಪರೆಡ್ಡಿಯವರು ಒಂದು ಅಫಿಡವಿಟ್‌ನ್ನು ಹಾಕುತ್ತಾರೆ, ಸೆಂಟ್ರಲ್ ಜಿಯಾಲಿಸ್ಟ್‌ರವರನ್ನು ಹೈಕೋರ್ಟಿನಲ್ಲಿ ಪ್ರಶ್ನೆ ಕೇಳಿದಾಗ ಎಷ್ಟು ಅಡಿ ತೆಗೆಯಬಹುದೆಂದಾಗ 20 ಅಡಿ ತೆಗೆದರೂ ಕೂಡ ಅಂಡರ್‌ಗ್ರೌಂಡ್ ವಾಟರ್ ಲೆವೆಲ್‌ಗೆ ತೊಂದರೆಯಾಗುವುದಿಲ್ಲ ಎಂದು ಅಫಿಡವಿಟ್‌ನ್ನು ಹಾಕುತ್ತಾರೆ. ಇದರಿಂದಾಗಿ ಇವತ್ತು ಏನಾಗಿದೆ ಎಂದರೆ, ಸರ್ಕಾರವೇ ಆ ಅಫಿಡವಿಟ್‌ನ್ನು ಹಾಕಿಸಿದೆ, ಮಾನ್ಯ ಮುಖ್ಯಮಂತ್ರಿಗಳು ಈಗ ಹೇಳಿದರು 5–6 ಅಡಿ ತೆಗೆಯಲು ರೂಲ್ಸ್ ಇದೆ ಎಂದು ಹೇಳಿದರು. ಆದರೆ 20 ಅಡಿ ತೆಗೆದರು ಏನೂ ಆಗುವುದಿಲ್ಲವೆಂದು ಸರ್ಕಾರದ ಪರವಾಗಿ ಹೈಕೋರ್ಟಿನಲ್ಲಿ ಅಫಿಡವಿಟ್ ಹಾಕಿದ್ದಾರೆ ನೀವು ತೆಗೆಸಿ ನೋಡಿ. ಇದರಿಂದ ಇಡೀ ನಮ್ಮ ಕೋಲಾರ ಜಿಲ್ಲೆಯಲ್ಲಿ ಅಂಡರ್‌ಗ್ರೌಂಡ್ ವಾಟರ್ ಲೆವಲ್ ಇವತ್ತು ಸಂಪೂರ್ಣವಾಗಿ ಕುಸಿದು ಹೋಗಿಬಿಟ್ಟಿದೆ. ದಯವಿಟ್ಟು ಮರಳು ಎತ್ತತಕ್ಕಂಥದ್ದನ್ನು ಸಂಪೂರ್ಣವಾಗಿ ನಿಷೇಧ ಮಾಡಲೇಬೇಕು, ಇಲ್ಲದಿದ್ದರೆ ನಮ್ಮ ಜಿಲ್ಲೆ ಉಳಿಯುವುದಿಲ್ಲ. ಇಲ್ಲದಿದ್ದರೆ ನಮ್ಮ ಜಿಲ್ಲೆ ಉಳಿಯುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಮರಳು ತೆಗೆಯುವ ಈ ಲಾ ಏನು ಇದೆ, ಇದು ಸಾಮಾನ್ಯವಾದ ಲಾ ಅಲ್ಲ. ತುಂಗಾನದಿಯ ಶಿವಮೊಗ್ಗದ ನನ್ನ ಕ್ಷೇತ್ರದಲ್ಲಿ ರಾತ್ರಿ

ಸಮಯದಲ್ಲಿ ಮರಳನ್ನು ಲೋಡ್ ಮಾಡಬಾರದೆಂದು ಹೇಳಿ, ಏಕೆಂದರೆ ದಡದಲ್ಲಿರುವ ಲಕ್ಷಾಂತರ ರೂಪಾಯಿಗಳ ಬೆಲೆಬಾಳುವ ಸಾಗುವಾಣಿ ಮರಗಳನ್ನು ಮರಳು ಲಾರಿಯಲ್ಲಿ ಶಿವಮೊಗ್ಗ ನಗರಕ್ಕೆ ಸಾಗಾಣಿಕೆ ಮಾಡುತ್ತಾರೆಂದು ಹೇಳಿ ಒಂದೆರಡು ಸಲ ಹಿಡಿದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಕ್ರಮ ತೆಗೆದುಕೊಂಡರೆ ಅಲ್ಲಿರುವಂಥ ಡೈರೆಕ್ಟರು ರಾತ್ರಿ ವೇಳೆಯಲ್ಲಿ ಮರಳನ್ನು ಲೋಡ್ ಮಾಡಲಿಕ್ಕೆ ಸ್ಪೆಷಲ್ ಪರ್ಮಿಷನ್ ಕೊಡುತ್ತಾರೆ. ಇದೊಂದು ವಿಚಿತ್ರವಾದ ಸಂಗತಿ. ಆರುವರೆ ಗಂಟೆ ನಂತರ ಲೋಡ್ ಮಾಡಬಾರದೆಂದು ಹೇಳಿದ್ದರೂ ಕೂಡ ಮಾಡುತ್ತಿದ್ದಾರೆ. ಜೆಸಿಬಿ ಗಳನ್ನು ಇಟ್ಟು ಮರಳನ್ನು ಲೋಡ್ ಮಾಡುತ್ತಿದ್ದಾರೆ. 20 ರಿಂದ 25 ಅಡಿಯವರೆಗೆ ಆಳದ ಮರಳನ್ನು ತೆಗೆದು ಸಾಕಾಣಿಕೆ ಮಾಡುತ್ತಿದ್ದಾರೆ. ದಯಮಾಡಿ ರಾತ್ರಿ ಲೋಡ್ ಮಾಡುವಂಥದ್ದನ್ನು ನಿಲ್ಲಿಸಬೇಕು, ಮತ್ತು 20–30 ಟನ್ ಭಾರದ ಆ ಲಾರಿಗಳು ಸಾಮಾನ್ಯ ರಸ್ತೆಗಳಲ್ಲಿ ಹೋದರೆ ನೀವು ಎಷ್ಟು ಕೋಟಿ ರೂಪಾಯಿಗಳನ್ನು ರಸ್ತೆಗೆ ಹಾಕಿದರೂ ಅದು ಉಳಿಯುವುದಿಲ್ಲ. ಅದನ್ನು ನಿಯಂತ್ರಣ ಮಾಡಬೇಕು.

ಶ್ರೀ ಧರ್ಮಸಿಂಗ್ : ಶ್ರೀ ಜಯಪ್ರಕಾಶ್‌ಹೆಗ್ಡೆರವರು ಕೇಳಿದ ಹಾಗೆ, ಬಜೆಟ್‌ನಲ್ಲಿ ರೋಡ್ ಸೆಸ್ ಕೂಡ ಮಾಡಿ ರೋಡ್ ರಿಪೇರಿಗೆಂದು ಹಣವನ್ನು ಕೊಡಬೇಕು, ಅದರ ಉದ್ದೇಶದಿಂದ ಅದನ್ನು ಇಂಟ್ರಡ್ಯೂಸ್ ಮಾಡಿರುತ್ತೇವೆ. ಶ್ರೀ ಶಿವಶಂಕರರೆಡ್ಡಿಯವರು ಕೇಳಿದ್ದಾರೆ, ಇದರಿಂದ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ, ಮತ್ತು ಇದನ್ನು ನಿಷೇಧ ಮಾಡಬೇಕೆಂದು ಹೇಳಿ ಶ್ರೀರಾಮರೆಡ್ಡಿಯವರು ಹೇಳಿದ್ದಾರೆ. ಇದು ಬಹಳ ಕಷ್ಟದ ಕೆಲಸವಾಗಿದೆ, ಏನೆಂದರೆ ನಿಲ್ಲಿಸಬಾರದೆಂದು ಏನೂ ಇಲ್ಲ, ನಾನು ಏನು ಹೇಳಿದ್ದೇನೆಂದರೆ, ಸುಪ್ರೀಂ ಕೋರ್ಟಿನವರು ಒಂದು ಮೀಟರ್ ಮಾಡಬೇಕು ಎಂದರೆ 8–10 ಮೀಟರ್‌ವರೆಗೆ ಕೆದರುತ್ತಾರೆ ಅದನ್ನು ನಾನು ಮಾಡಬೇಕೆಂದು ಹೇಳಿಲ್ಲ, ಶ್ರೀ ಬಸಪ್ಪರೆಡ್ಡಿಯವರ ಉದಾಹರಣೆಯನ್ನು ಕೊಟ್ಟಿದ್ದಾರೆ, ಅದು ಬೇರೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಒಟ್ಟಾರೆ ತಾವು ಹೇಳತಕ್ಕಂಥದ್ದು ಮರಳನ್ನು ಬಹಳಷ್ಟು ಲೋಡ್ ಮಾಡುವುದರಿಂದ ರಸ್ತೆ ಹಾಳಾಗುತ್ತದೆಂದು ಹೇಳಿ, ಇದೆ ಒಂದು ಸದನದಲ್ಲಿ ಅಥವಾ ಮುಂದಿನ ಸದನದಲ್ಲಿ ಇದರ ಬಗ್ಗೆ ಒಂದು ನಿಯಂತ್ರಣವನ್ನು ಮಾಡಲೇಬೇಕಾಗುತ್ತದೆ. ಬಹಳಷ್ಟು ಟನ್ ಮರಳನ್ನು ಹಾಕುವುದರಿಂದ ರಸ್ತೆಗಳು ಹಾಳಾಗುತ್ತವೆ, ಅದಕ್ಕೆ ದುಡ್ಡನ್ನು ರಸ್ತೆ ರಿಪೇರಿಗೆಂದು ಸಮಗ್ರವಾಗಿ ಕೊಡುವುದಕ್ಕಾಗುವುದಿಲ್ಲ. ರಸ್ತೆ ಅಭಿವೃದ್ಧಿಗೆ ಹಣ ಕೊಟ್ಟಿದ್ದೇವೆ ಅದನ್ನು ಮಾಡಬೇಕೆಂದು ಇದೆ, ಅದಕ್ಕೆ ಒಂದು ಸಮಗ್ರವಾದಂಥ ರೀತಿಯಲ್ಲಿ ಕಾನೂನು ಮಾಡಬೇಕು ಮತ್ತು ನೀವು ಸ್ಯಾಂಡಿ ಅನ್ನು ತೆಗೆಯಬಾರದು ಅಂದರೆ ಬಿಲ್ಡಿಂಗ್‌ಗಳನ್ನು ಹೇಗೆ ಕಟ್ಟಿಸಬೇಕು. That is one of the importatnt materials. ಇವೆಲ್ಲಾ ಇವೆ, ಅದಕ್ಕಾಗಿ ಒಂದು ಸಮಗ್ರವಾದಂಥ ನೀತಿಯನ್ನು ತರುತ್ತೇವೆ, ಇದನ್ನು ನಿಯಂತ್ರಣ ಮಾಡುತ್ತೇವೆ ಆಗಲೇ ಇದಕ್ಕೆ ಒಂದು ಪರಿಹಾರವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು : ದಯಮಾಡಿ ಕೇಳಿ, ಇನ್ನು ಬೇರೆ ಯಾರಿಗೂ ಅವಕಾಶವಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅಂಡರ್‌ಗ್ರೌಂಡ್ ಲೆವಲ್‌ಗೆ ಹೋದರೂ ಸಹ ವಾಟರ್ ಸಿಗುತ್ತಿಲ್ಲ, ಮರಳನ್ನು ತೆಗೆಯುವುದಕ್ಕೆ ಸಂಪೂರ್ಣವಾಗಿ ನಿಷೇಧ ಮಾಡುವುದಕ್ಕಾಗುವುದಿಲ್ಲವೆಂದು ತಾವು ಹೇಳಿದರೆ ಬದುಕುವುದು ಕಷ್ಟವಾಗಿದೆ.

ಶ್ರೀ ಧರ್ಮಸಿಂಗ್ : ಇದರ ಬಗ್ಗೆ ತಮಗೆ ಸ್ಪಷ್ಟವಾಗಿ ಹೇಳಬೇಕೆಂದರೆ ಇವತ್ತು ಬೆಳಿಗ್ಗೆ 10 ಗಂಟೆಗೆ ಅಧಿಕಾರಿಗಳ ಮೀಟಿಂಗನ್ನು ಕರೆಸಿದ್ದೆ, I had a discussion with all the officers. ಇವತ್ತು ಒಂದು ಕಡೆ ಅಂತರ್ಜಲ ನೀರಿನ ಮೇಲೆ ಪರಿಣಾಮವಾಗುತ್ತದೆ, ಮರಳು ಬಿಲ್ಡಿಂಗ್ ಕೆಲಸಕ್ಕಾಗಿ ಬೇಕಾಗುತ್ತದೆ, ಅದನ್ನು ತೆಗೆದರೂ ಒಂದು ತೊಂದರೆಯಾಗುತ್ತದೆ, ಅದಕ್ಕೆ ಎಲ್ಲಿ Permissible, non-permissible ಎಂಬುದನ್ನು ಈಗಾಗಲೇ ನೋಡಬೇಕಾಗಿದೆ. ಇದರ ಬಗ್ಗೆ ಅಸಿಸ್ಟೆಂಟ್ ಕಮಿಷನರ್ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಮಾಡಿದ್ದೇವೆ, ಅವರು ಕೊಡಬೇಕೆಂದು ಹೇಳಿ, ಪಂಚಾಯಿತಿಯವರು ಕೊಡಬೇಕೆಂದೂ ಕುಡ ಮಾಡಿದ್ದೇವೆ, ಪಂಚಾಯಿತಿಗೆ ಅಧಿಕಾರ ಕೊಟ್ಟರೂ ಕೂಡ ಅಲ್ಲಿ ಅದು ಫೆಲ್ಯೂರ್ ಆಗಿದೆ. ಇದನ್ನು ನಿಯಂತ್ರಣ ಮಾಡಬೇಕಾದರೆ ಕಟ್ಟುನಿಟ್ಟಾದ ಒಂದು ಕಾನೂನು ತರಲೇಬೇಕು, ಅದನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಗೋವಿಂದ ಎಂ.ಕಾರಜೋಳ : ಮರಳು ವಿಚಾರದಲ್ಲಿ ಅಂತರರಾಜ್ಯ ಪ್ರಾಬ್ಲಮ್ ಇದೆ. ಏಕೆಂದರೆ ನಾವು ಬಾರ್ಡರ್‌ನಲ್ಲಿದ್ದೇವೆ.

ಅಧ್ಯಕ್ಷರು : ಈ ಪ್ರಶ್ನೆಗೆ 15 ನಿಮಿಷ ಸಮಯವಾಯಿತು.

ಶ್ರೀ ಗೋವಿಂದ ಎಂ.ಕಾರಜೋಳ : ಇದನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : 15 ಪ್ರಶ್ನೆಗಳು ಒಂದು ಗಂಟೆಯಲ್ಲಿ ಮುಗಿಸಬೇಕು, ದಯಮಾಡಿ ಮತ್ತೆ ಅದೆ ಚಾಳಿಯನ್ನು ಮುಂದುವರೆಸಿದರೆ, ನಾನು ಒಂದು ಗಂಟೆಯಾದ ನಂತರ ಒಂದು ನಿಮಿಷ ಸಮಯವನ್ನು ಕೊಡುವುದಿಲ್ಲ. ಎಷ್ಟು ಕ್ವೆಶ್ಚನ್ ಆಗುತ್ತದೋ ಆಗಲಿ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ ಇಂಡಿ ತಾಲ್ಲೂಕಿನಲ್ಲಿ ಭೀಮಾನದಿಯ ಬಾರ್ಡರ್‌ನಲ್ಲಿ ಮರಳನ್ನು ಮಹಾರಾಷ್ಟ್ರಕ್ಕೆ ಸಾಗಿಸುತ್ತಿದ್ದಾರೆ. ಡೈಲಿ ಸಾವಿರಾರು ಮರಳು ಲಾರಿಗಳು ಮಹಾರಾಷ್ಟ್ರಕ್ಕೆ ಹೋಗುತ್ತಿವೆ, ಸರ್ಕಾರ ಅದನ್ನು ಯಾವ ರೀತಿಯಾಗಿ ನಿಯಂತ್ರಣ ಮಾಡುತ್ತದೆ ಎನ್ನುವುದರ ಬಗ್ಗೆ ಸರ್ಕಾರದಿಂದ ಉತ್ತರ ಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳಿಂದ ಅಧಿಕಾರಿಗಳು ಉತ್ತರವನ್ನು ಕೊಡಿಸುವಾಗ ಬಹಳ ಬೇಜವಾಬ್ದಾರಿಯಿಂದ ಈ ಕಾಗದ ಪತ್ರಗಳನ್ನು ತಯಾರು ಮಾಡುತ್ತಾರೆ. ಇಂಡಿ ತಾಲ್ಲೂಕಿನದ್ದು 17,13,800 ಎಂದು ಹೇಳಿದ್ದಾರೆ, ಸಿಂಧಗಿ ತಾಲ್ಲೂಕಿನದ್ದು 84,700 ಎಂದು ಹೇಳಿದ್ದಾರೆ. ಟೋಟಲ್ ಎರಡು ಸೇರಿ 2,56,500 ಎಂದು ಮಾಡಿದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರವನ್ನು ಕೊಡಿಸುವಾಗ ಕರೆಕ್ಟಾಗಿ ಕೊಡಿಸುವುದಕ್ಕೆ ಏನು ಕಷ್ಟವಿದೆ. ಇಷ್ಟೊಂದು ಬೇಜವಾಬ್ದಾರಿಯಿಂದ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ಸಂಬಳ ತೆಗೆದುಕೊಂಡು ಮನೆಗೆ ಹೋಗುತ್ತಾರೆ ಎಂದರೆ ಇದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ರಾಜ್ಯಕ್ಕೆ ಬರಬೇಕಾದ ರಾಯಲ್ಟಿ ಬಗ್ಗೆ ಬಹಳ ವ್ಯಾಪಕವಾಗಿ ಬಹಳಷ್ಟು ಹಾನಿಯಾಗುತ್ತಿದೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಿಲ್ಲವೆಂದು ಕಾಣಿಸುತ್ತದೆ, ಮೊನ್ನೆ ಗೌರಿಬಿದನೂರಿನಲ್ಲಿ ವಕೀಲರುಗಳು ಪ್ರತಿಭಟನೆ ಮಾಡಿದ್ದಾರೆ. ಪೋಲೀಸರು ಕೆಲವರನ್ನು ವಸೂಲಿಗೆಂದು ಕೆಲವರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಹಗಲೆಲ್ಲಾ ಹೋಗಿ ವಸೂಲು ಮಾಡುವುದಕ್ಕಾಗುವುದಿಲ್ಲವೆಂದು, ಅವರೆ ಕೆಲವೊಂದು ಅಪಾಯಿಂಟ್ ಮೆಂಟ್‌ಗಳನ್ನು ಮಾಡಿಕೊಂಡಿದ್ದಾರೆ. ಇದು ಬಹಿರಂಗವಾಗಿ ನಡೆಯುತ್ತಿರಬೇಕಾದರೆ ಆರ್.ಟಿ.ಓ.

ಡಿಪಾರ್ಟ್‌ಮೆಂಟ್‌ನವರು ಏನು ಮಾಡುತ್ತಿದ್ದಾರೆ, ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನವರು ಏನು ಮಾಡುತ್ತಿದ್ದಾರೆ, ಜಿಯಾಲಜಿಕಲ್ ಡಿಪಾರ್ಟ್‌ಮೆಂಟ್‌ನವರು ಏನು ಮಾಡುತ್ತಾರೆ, ಇದರ ಬಗ್ಗೆ ಸಮಗ್ರವಾಗಿ ನೋಡಬೇಕಾಗುತ್ತದೆ. ಇಷ್ಟು ಹಾನಿ ಮಾಡಿಕೊಂಡು, ಈ ವಿಚಾರದಲ್ಲಿ ಕಂಟ್ರಾಕ್ಟರುಗಳು, ಪೊಲೀಸರು ಮತ್ತು ಅಧಿಕಾರಿಗಳು ಶಾಮೀಲಾಗಿರುವುದರಿಂದ ಇದು ನಡೆಯುತ್ತಿದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಹೇಳಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಇಂಡಿ ತಾಲ್ಲೂಕು ಮತ್ತೆ ಬೇರೆ ಕಡೆ ನಡೆಯುತ್ತಿದೆ ಆ ಲೆಕ್ಕ ಹಾಗೆ ಬೆಳೆದುಕೊಂಡು ಬರುತ್ತಿದೆ, ಅದಕ್ಕೆ ಏನೂ ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಸರಿಪಡಿಸಬೇಕೆಂದರೆ, ಈಗ ಏನಾಗಿದೆ ಎಂದರೆ, 2003–04 ರಲ್ಲಿ 2.23 ಕೋಟಿ ರೂಪಾಯಿಗಳಾದರೆ ಈ ವರ್ಷ 4.63 ಕೋಟಿ ರೂಪಾಯಿಗಳಾಗಿದೆ. ಇದರಲ್ಲಿ ಹೆಚ್ಚು ಕಡಿಮೆ ಸ್ವಲ್ಪ ಮಾಡಿದ್ದಾರೆ. ಆದರೂ ಕೂಡ 8–9 ಕೋಟಿ ರೂಪಾಯಿಗಳ ವರಮಾನ ಬರಬೇಕಾಗಿತ್ತು ಅದು ಬಂದಿಲ್ಲ. ಅದರ ಬಗ್ಗೆ ಕೂಡ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ರಾಣಿಬೆನ್ನೂರು ನಗರಸಭೆ ಆಸ್ತಿ ಸಿಟಿಎಸ್ ನಂ 2111ನ್ನೆ ಲೀಸ್ ನೀಡಿರುವುದು.

138(2176) ಶ್ರೀ ಶಿವಣ್ಣ ಜಿ. (ರಾಣಿಬೆನ್ನೂರು) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1. ರಾಣಿಬೆನ್ನೂರು ನಗರದಲ್ಲಿ ಸರ್ಕಾರದ ಅನುಮತಿ ಇಲ್ಲದೆ ಸಿಟಿಎಸ್ ನಂ 2111ರಲ್ಲಿ 33176 ಚದರ ಅಡಿ ಆಸ್ತಿಯನ್ನು ಆಡಳಿತಾಧಿಕಾರಿಗಳು 1972ನೇ ಇಸವಿಯಲ್ಲಿ 99 ವರ್ಷ ಲೀಜ್‌ನ್ನು ಪುಕ್ಕಟೆಯಾಗಿ ಕೊಡಲು ನಗರಸಭೆಗೆ ಅಧಿಕಾರವಿದೆಯೇ;

2. ಕೊಡುವ ಅಧಿಕಾರ ಇದ್ದಲ್ಲಿ ಸದ್ಯ ಇರುವ ನಗರಸಭೆಯ ಆಸ್ತಿಗಳನ್ನು ಹೊಂದಿರುವವರಿಗೆ ಲೀಜ್.ಪ್ರಕಾರ ಪುಕ್ಕಟೆಯಾಗಿ ಏಕೆ ಕೊಡಬಾರದು;

3. ಕೊಡುವ ಅಧಿಕಾರ ಅಥವಾ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸುವ ಅಧಿಕಾರ ನಗರಸಭೆಯ ಆಡಳಿತಾಧಿಕಾರಿಯವರಿಗೆ ಇಲ್ಲದೇ ಇದ್ದಲ್ಲಿ ಈ ರೀತಿಯಾಗಿ ಪ್ರಸ್ತಾವನೆಯಾಗಿ ಕಳಿಸಿದ ಆಡಳಿತಾಧಿಕಾರಿಯ ಮೇಲೆ ಯಾವ ಕ್ರಮ ತೆಗೆದುಕೊಳ್ಳಬಹುದು?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

1. ಇಲ್ಲ.
2. ಉದ್ಭವಿಸುವುದಿಲ್ಲ.
3. ಇದಕ್ಕೆ ಸಂಬಂಧಿಸಿದ ಕಡತವು ನ್ಯಾಯಾಲಯದಿಂದ ಹಿಂದಿರುಗಿರುವುದಿಲ್ಲ. ಕಡತವನ್ನು ನ್ಯಾಯಾಲಯದಿಂದ ವಾಪಸ್ಸು ಪಡೆದು ಈ ಮಾಹಿತಿಯನ್ನು ಒದಗಿಸಲಾಗುವುದು.

ಶ್ರೀ ಜಿ.ವಿ.ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಕೇಳಿರುವ ಪ್ರತಿಯೊಂದಕ್ಕೂ "ಇಲ್ಲ" ಎನ್ನುವ ಉತ್ತರವನ್ನು ಸರ್ಕಾರದವರು ಕೊಟ್ಟಿದ್ದಾರೆ. ಈಗಾಗಲೇ 33000 ಚದರ ಅಡಿಯವರೆಗೆ ಸಂಬಂಧಪಟ್ಟ ಒಂದು ಕ್ಷೇತ್ರದ ಬಿಲ್ಡಿಂಗ್ ಆ ಸಂಸ್ಥೆಯ ಪರವಾಗಿ ಇವತ್ತಿಗೂ ಕೂಡ ಅವರು ನಡೆಸುತ್ತಾರೆಂದಾಗ ಇವರು ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ ಅವರ ಕಬ್ಜಾದಲ್ಲಿರುವುದನ್ನು ನಮಗೆ ಬಿಡಿಸಿ ಕೊಡಬೇಕು. ನಗರಸಭೆಗೆ ಸಂಬಂಧಪಟ್ಟಂತೆ ಅದು ಇರುವುದರಿಂದ ದಯವಿಟ್ಟು ಅದನ್ನು ಬಿಡಿಸಿ ಕೊಡಬೇಕೆಂದು ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಇದು ಸುಮಾರು 32 ವರ್ಷಗಳಷ್ಟು ಹಳೆಯ ವ್ಯಾಜ್ಯ, ಆದರೂ ಕೂಡ ಈಗ ನಮ್ಮ ಮಾನ್ಯ ಶಾಸಕರ ವಿನಂತಿಯ ಮೇರೆಗೆ ಅದರ ಪೇಪರ್‌ಗಳನ್ನು ಕೋರ್ಟಿನಿಂದ ತರಿಸಿ ಆದಷ್ಟು ಬೇಗ ಅದನ್ನು ಯಾವ ರೀತಿಯಾಗಿ ಖಾಲಿ ಮಾಡಿಸಬೇಕೋ ಅದನ್ನು ನಾವು ಮಾಡುತ್ತೇವೆ.

ಶ್ರೀ ಜಿ.ಶಿವಣ್ಣ : ಮಾನ್ಯ ಅಧ್ಯಕ್ಷರೆ ನಾನು ಎಷ್ಟು ಪತ್ರ ಬರೆದರೂ ಇದಕ್ಕೆ ಉತ್ತರವನ್ನು ಸರ್ಕಾರ ಕೊಟ್ಟಿರುವುದಿಲ್ಲ. ಕೋರ್ಟಿನಲ್ಲಿ ಇರತಕ್ಕಂಥ ವ್ಯಾಜ್ಯ ಇದು. ಸಂಬಂಧಪಟ್ಟ ಮಂತ್ರಿಗಳು ಪ್ರಭಾವಿಗಳು ಇರುವುದರಿಂದ, ಸರಿಯಾದ ಮಾಹಿತಿಗಳನ್ನು ಕೋರ್ಟಿಗೆ ನಗರಸಭೆಯವರು ಕೊಡದಿರುವುದರಿಂದ ಕೋರ್ಟಿನಲ್ಲಿ ನಮ್ಮ ಈ ಕೇಸ್ ಬಿದ್ದು ಹೋಗಿದೆ. ಇದರಿಂದ ನಗರಸಭೆಗೆ ಒಂದು ರೂಪಾಯಿಗಳ ಆದಾಯವಿಲ್ಲ, 99 ವರ್ಷಗಳವರೆಗೆ ಲೀಸ್ ಕೊಟ್ಟಿದ್ದೇವೆಂದು ಹೇಳಿಕೊಂಡು ಬಂದಿದ್ದಾರೆ. 99 ವರ್ಷಗಳ ಲೀಸನ್ನು ಯಾವ ಪ್ರಕಾರವಾಗಿ ಕೊಟ್ಟರು, ಏಕೆ ಅವರು ಮಾಹಿತಿ ಇಲ್ಲವೆಂದು ಹೇಳುತ್ತಿದ್ದಾರೆ. ಇದು ಏನೋ ತಿಳಿಯದಾದ ಪ್ರಶ್ನೆ ಇದೆ. ಒಂದು ಕೋಟಿ ರೂಪಾಯಿಗಳ ಆಸ್ತಿ ಇದು ಇದೆ. ದಯವಿಟ್ಟು ಇದನ್ನು ನಗರಸಭೆಗೆ ಹಸ್ತಾಂತರ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ನಮ್ಮ ಶಿವಣ್ಣನವರು ಪ್ರೆಸಿಡೆಂಟ್ ಇದ್ದಾಗ ಕೋರ್ಟಿಗೆ ಹೋಗಿದ್ದರು, ಧಾರವಾಡ ಡಿಸ್ಟ್ರಿಕ್ಟ್ ಕೋರ್ಟಿಗೆ ಅಲ್ಲಿ ನಮ್ಮ ಕೇಸ್ ಹೋಯಿತು. ಅದು Lessee ಪರವಾಗಿ ಆಗಿರುವುದರಿಂದ ಮುಂದೆ ಅದನ್ನು ಹಾಗೆ ಬಿಡಲಾಗಿದೆ. ಇದು 32 ವರ್ಷದ ಹಳೆಯದಾಯಿತು. ಅದರ ಪೇಪರ್ಸ್ ಕೂಡ ನಮ್ಮ ಸರ್ಕಾರದ ಕಡೆ ಇಲ್ಲ, ಅದನ್ನು ತರಿಸಿ ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳಬಹುದು ಎನ್ನುವುದರ ಬಗ್ಗೆ ಪ್ರಯತ್ನ ಮಾಡಬೇಕು, ಅದನ್ನು ನಾನು ಮಾಡುತ್ತೇನೆ.

ಶ್ರೀ ಜಿ.ಶಿವಣ್ಣ : ಮಾನ್ಯ ಅಧ್ಯಕ್ಷರೆ, ನಗರಸಭೆಯಲ್ಲಿ ಈ ಫೈಲ್ ಇದೆ, ಇಲ್ಲವೆಂದು ಅವರು ಸುಮ್ಮನೆ ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂಥ ಕಾಗದ ಪತ್ರಗಳು ಬೇಕಾದರೆ ನನ್ನ ಹತ್ತಿರ ಇದೆ. 1993 ರಿಂದ ಇದರ ಬಗ್ಗೆ ನಾನು ಸರ್ಕಾರಕ್ಕೆ ಪತ್ರ ಬರೆಯುತ್ತಿದ್ದೇನೆ. ಅದರ ವಿಸ್ತೀರ್ಣ 33,000 ಚದರ.ಅಡಿ ಇದೆ. ಅದನ್ನು ಒಂದು ಸಂಸ್ಥೆಗೆ ಅವರು ಪುಕ್ಕಟೆಯಾಗಿ ಕೊಡುತ್ತಾರೆಂದರೆ, ಅದರ ಅರ್ಥ ಏನೆಂದು ನಾವು ತಿಳಿದುಕೊಳ್ಳಬೇಕಾಗಿದೆ. ದಯವಿಟ್ಟು ಅದನ್ನು ನಗರಸಭೆಗೆ ಹಸ್ತಾಂತರ ಮಾಡಿ ಕೊಡಿಸಲೇಬೇಕೆಂದು ಕೇಳಿಕೊಳ್ಳುತ್ತೇವೆ. ಏಕೆಂದರೆ ಅದರಿಂದ ಆದಾಯ ಕೂಡ ಇಲ್ಲ, ಇವತ್ತು ಅದನ್ನು ಹರಾಜು ಹಾಕಿದರೆ ಒಂದು ಕೋಟಿ ರೂ.ಗಳಾಗುತ್ತದೆ, ಬೇಕಾದರೆ ನಾವೇ ಕೊಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಅದರ ಸಂಬಂಧಪಟ್ಟ ಕಾಗದ ಪತ್ರಗಳನ್ನು ತರಿಸಿಕೊಡಲಿ ಅದನ್ನು ಮಾಡುವುದಕ್ಕೆ ನಾವು ಮಾಡುತ್ತೇವೆ. ಸರ್ಕಾರದ ಕಡೆ ಯಾವ ಪೇಪರ್‌ಗಳೂ ಇಲ್ಲ.

ಶ್ರೀ ಜಿ.ಶಿವಣ್ಣ : ಸರ್ಕಾರದ ಕಡೆ ಕಾಗದ ಪತ್ರಗಳು ಇಲ್ಲವೆಂದರೆ ನಾವು ಏನು ಮಾಡುವುದು ಹೇಳಿ ಹಾಗಾದರೆ?

ಅಧ್ಯಕ್ಷರು : ಮಾನ್ಯ ಶಿವಣ್ಣನವರೆ, ಯಾವ ಕಾಗದ ಪತ್ರಗಳು ಸರ್ಕಾರದ ಕಡೆ ಇಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ, ತಮ್ಮ ಕಡೆ ಯಾವುದಾದರೂ ಕಾಗದ ಪತ್ರಗಳು ಇದ್ದರೆ, ಮಾನ್ಯ ಸಚಿವರ ಹತ್ತಿರ ಕುಳಿತುಕೊಳ್ಳಿ, ಪರಸ್ಪರ ಚರ್ಚೆ ಮಾಡಿ ಏನಾದರೊಂದು ಪರಿಹಾರವನ್ನು ಕಂಡುಕೊಳ್ಳಿ.

ಶ್ರೀ ಜಿ.ಶಿವಣ್ಣ : ಮಾನ್ಯ ಅಧ್ಯಕ್ಷರೆ, ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ನಾವು ತಯಾರಿದ್ದೇವೆ ಸ್ವಾಮಿ. ಮಾನ್ಯ-ಸಚಿವರು ಎಷ್ಟು ದಿವಸದೊಳಗೆ ಅದನ್ನು ವಾಪಸ್ಸು ಕೊಡಿಸುತ್ತಾರೆ ಎನ್ನುವುದನ್ನು ಅವರು ದಯುವಿಟ್ಟು ಹೇಳಬೇಕಾಗುತ್ತದೆ. ಅನಧಿಕೃತವಾಗಿ ಆ ಬಿಲ್ಡಿಂಗ್ ಅವರು ತೆಗೆದುಕೊಂಡಿರುವುದರಿಂದ ಎಷ್ಟು ದಿಸದೊಳಗಾಗಿ ತೀರ್ಮಾನ ಮಾಡಿಕೊಡುತ್ತೀರಿ ಎನ್ನುವುದನ್ನು ಹೇಳಿ ಬಿಡಿ. ನಾನು ಅಷ್ಟು ದಿವಸದೊಳಗಾಗಿ ಸಂಬಂಧಪಟ್ಟ ಕಾಗದಪತ್ರಗಳನ್ನು ನಾನು ತೆಗೆದುಕೊಡುತ್ತೇನೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಇದೇ ಗ್ರೌಂಡಮೇಲೆ ಕೋರ್ಟಿಗೆ ಹೋದಾಗ ಕೋರ್ಟಿನಲ್ಲಿ ಆ ಕೇಸನ್ನು ಮುನಿಸಿಪಾಲಿಟಿಯವರು ಕಳೆದುಕೊಂಡು ಬಿಟ್ಟಿದ್ದಾರೆ. ಅದನ್ನು 32 ವರ್ಷದಿಂದ ಹಾಗೆಯೇ ಬಿಟ್ಟು ಬಿಟ್ಟಿದ್ದಾರೆ, ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು ನಮ್ಮ ಸರ್ಕಾರದಲ್ಲಿ ಇಲ್ಲ. ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ತರಿಸಿಕೊಟ್ಟರೆ ಅದರ ಆಧಾರದ ಮೇಲೆ ಮತ್ತೇ ನಾವು ಕೋರ್ಟಿನಿಂದ ಪೇಪರ್ ತರಿಸಿ ನಾವು ಮತ್ತು ನೀವು ಕುಳಿತುಕೊಂಡು ಅದರ ಬಗ್ಗೆ ಚರ್ಚೆಯನ್ನು ಮಾಡೋಣ.

ರಾಯಚೂರು ಕ್ಷೇತ್ರದಲ್ಲಿ ಕೈಗೊಂಡ ಮೀನುಗಾರಿಕೆ ಯೋಜನೆಗಳು

2182 ಪಾಪರೆಡ್ಡಿ ಎ. (ರಾಯಚೂರು)ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಯಚೂರು ಕ್ಷೇತ್ರದಲ್ಲಿ ಮೀನುಗಾರಿಕೆ ಇಲಾಖೆಗೆ 2004–05 ರಲ್ಲಿ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು ;

ಆ. ಇಲಾಖೆಯಿಂದ ರೂಪಿಸುವ ಕ್ರಿಯಾ ಯೋಜನೆಗಳು ಹಾಗೂ ಜನರಿಗೆ ನೀಡಿರುವ ಸೌಲಭ್ಯಗಳು ಯಾವುವು ; (ವಿವರಣೆ ನೀಡುವುದು)

ಇ. ಕೈಗೊಂಡ ಯೋಜನೆಗಳು ಜಾರಿಗೊಳಿಸಲಾಗಿದೆಯೇ; ಎಲ್ಲೆಲ್ಲಿ ಹಾಗೂ ಯಾವ ಫಲಾನುಭವಿಗಳಿಗೆ ಯೋಜನೆಗಳನ್ನು ತಲುಪಿಸಲಾಗಿದೆ ಇಂದಿನ ವಾಸ್ತವ ಸ್ಥಿತಿಗತಿಗಳೇನು ತಿಳಿಸುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು):

ಅ. ರಾಯಚೂರು ಜಿಲ್ಲೆಗೆ ಮೀನುಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ 2004–05ರಲ್ಲಿ ಸರ್ಕಾರದಿಂದ ರೂ. 14.923 ಲಕ್ಷ ಹಣ ಬಿಡುಗಡೆಯಾಗಿದೆ. ಕ್ಷೇತ್ರವಾರು ಅನುದಾನವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡಿರುವುದಿಲ್ಲ.

ಆ. ಇಲಾಖೆಯಿಂದ ರೂಪಿಸಿದ ಕ್ರಿಯಾ ಯೋಜನೆಯಡಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1) ಮೀನುಮರಿ ಉತ್ಪಾದನೆ, ಸಾಕಣೆ ಮತ್ತು ಹಂಚಿಕೆ .

2) ಬಾವಿ ಮತ್ತು ಹೊಂಡಗಳಲ್ಲಿ ಮೀನುಮರಿ ಬಿತ್ತನೆ ಮಾಡುವುದು.

3) ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ಮುಖಾಂತರ ಕೊಳ ನಿರ್ಮಾಣಕ್ಕಾಗಿ ಸಹಾಯಧನ ಒದಗಿಸುವುದು.

4) ಜೌಗು, ಚೌಳು ಪ್ರದೇಶದಲ್ಲಿ ಮೀನು ಕೃಷಿಗೆ ಕೊಳ ನಿರ್ಮಾಣ ಮಾಡಲು ಸಹಾಯಧನ ಒದಗಿಸುವುದು.

5) ಮೀನು ಮಾರಾಟಕ್ಕಾಗಿ ಸೈಕಲ್ ಮತ್ತು ಐಸ್ ಬಾಕ್ಸ್ ಖರೀದಿಸಲು ಸಹಾಯಧನ ಒದಗಿಸುವುದು.

ರಾಯಚೂರು ಕ್ಷೇತ್ರಕ್ಕೆ ಸಂಬಂಧಿಸಿದಂತೆ 7 ಕೆರೆಗಳಲ್ಲಿ 4.50 ಲಕ್ಷ ಮೀನುಮರಿಗಳನ್ನು ಬಿತ್ತನೆ ಮಾಡಲಾಗಿದೆ. ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ಮುಖಾಂತರ ಮೀನು ಕೃಷಿ ಕೊಳ ನಿರ್ಮಾಣ ಮಾಡಿರುವುದಕ್ಕೆ ಸಹಾಯಧನ ನೀಡಲು 10 ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು ಈ ಅರ್ಜಿಗಳು ಪರಿಶೀಲನೆಯಲ್ಲಿದೆ. (ವಿವರ ಅನುಬಂಧದಲ್ಲಿ ನೀಡಲಾಗಿದೆ)

ರಾಯಚೂರು ಜಿಲ್ಲೆಯಲ್ಲಿ 28 ದೊಡ್ಡ ಕೆರೆಗಳನ್ನು ಮೀನು ಪಾಲನೆಗಾಗಿ ವಿಲೇ ಮಾಡಿ ಅವುಗಳಿಂದ ಸರ್ಕಾರಕ್ಕೆ ರೂ. 1.36 ಲಕ್ಷಗಳ ಆದಾಯ ಬಂದಿರುತ್ತದೆ. ಈ ಕೆರೆಗಳಲ್ಲಿ 23.56 ಲಕ್ಷ ಮೀನುಮರಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲಾಗಿರುತ್ತದೆ. ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ಮುಖಾಂತರ ಕೊಳ ನಿರ್ಮಿಸಲು ಮಂಜೂರಾತಿ ಕೋರಿ ಈ ಸಾಲಿನಲ್ಲಿ 89 ಅರ್ಜಿಗಳು ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿವೆ. ತುಂಗಾಭದ್ರಾ ಜೌಗು/ಚೌಳು ಪ್ರದೇಶದಲ್ಲಿ ಮೀನು ಕೃಷಿ ಕೊಳ ನಿರ್ಮಾಣ ಮಾಡಲು ಮಾನ್ವಿ ತಾಲ್ಲೂಕಿನ 1 ಫಲಾನುಭವಿಗೆ ಹಾಗೂ ಸಿಂಧನೂರು ತಾಲ್ಲೂಕಿನ 1 ಫಲಾನುಭವಿಗೆ ಅನುಮತಿ ನೀಡಲಾಗಿದ್ದು, ರೂ.30,000-00 ದಂತೆ ಸಹಾಯಧನ ಮಂಜೂರು ಮಾಡಲಾಗಿದೆ.

ಮೀನು ಮಾರುಕಟ್ಟೆ ಯೋಜನೆಯಡಿ ಲಿಂಗಸುಗೂರು ತಾಲ್ಲೂಕಿನ 8 ಫಲಾನುಭವಿಗಳಿಗೆ ರೂ.10,000-00 ಮಂಜೂರು ಮಾಡಲಾಗಿದೆ.

ಇ. ಹೌದು ಕೈಗೊಂಡ ಯೋಜನೆಗಳು ಜಾರಿಗೊಳಿಸಲಾಗುತ್ತಿದೆ. ಜಿಲ್ಲೆಯಲ್ಲಿ ಲಭ್ಯವಿರುವ ದೊಡ್ಡ ಕೆರೆಗಳನ್ನು ಮೀನುಗಾರಿಕೆ ಅಭಿವೃದ್ಧಿಗಾಗಿ ನೀಡಲಾಗಿದೆ ಹಾಗೂ ಮೀನುಮರಿಗಳನ್ನು ಬಿತ್ತನೆ ಮಾಡಲಾಗಿದೆ.

ರಾಯಚೂರು ಕ್ಷೇತ್ರದಲ್ಲಿ ಇಲಾಖೆಯ ಯೋಜನೆಯಂತೆ ಸೌಲಭ್ಯ ನೀಡಿದ ಹಾಗೂ ನೀಡಬೇಕಾದ ಫಲಾನುಭವಿಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ವತಿಯಿಂದ ಫಲಾನುಭವಿಗಳಿಗೆ ಸಹಾಯಧನ ನೀಡುವ ಬಗ್ಗೆ ಜಿಲ್ಲಾ ಖಜಾನೆಗೆ ಬಿಲ್ಲುಗಳನ್ನು ಸಲ್ಲಿಸಲಾಗಿದ್ದು, ಪಾವತಿಯಾದ ನಂತರ ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗುವುದು.

ಜೌಗು/ಚೌಳು ಪ್ರದೇಶದಲ್ಲಿ ಮೀನು ಕೃಷಿ ಕೊಳ ನಿರ್ಮಾಣ ಮಾಡಲು ಸಿಂಧನೂರು ಮತ್ತು ಮಾನ್ವಿ ತಾಲ್ಲೂಕುಗಳ 2 ಫಲಾನುಭವಿಗಳಿಗೆ ಅನುಮತಿ ನೀಡಲಾಗಿದೆ. ಹಾಗೂ ರೂ. 30,000-00 ಮಂಜೂರಾಗಿದ್ದು, ಫಲಾನುಭವಿಗೆ ಪಾವತಿಸಲು ಬಾಕಿ ಇದೆ.

ಮೀನು ಮಾರಾಟಕ್ಕಾಗಿ ಸಹಾಯಧನ ಒದಗಿಸಲು ರೂ.10,000-00ಗಳ ಮಂಜೂರಾತಿ ದೊರೆತಿದ್ದು, ಅದನ್ನು ಬೇಗನೆ ಲಿಂಗಸುಗೂರು ತಾಲ್ಲೂಕಿನ ಫಲಾನುಭವಿಗಳಿಗೆ ವಿತರಿಸಲಾಗುವುದು.

ಅನುಬಂಧ

ರಾಯಚೂರು ಮತಕ್ಷೇತ್ರದ ಮೀನುಗಾರಿಕೆ ಇಲಾಖೆಯ ಕೆರೆಗಳಿಂದ ಬಂದ ಆದಾಯ ಹಾಗೂ ಮೀನುಮರಿಗಳ ಬಿತ್ತನೆಗಳ ವಿವರ.

ರಾಯಚೂರು ತಾಲ್ಲೂಕು

ಕ್ರಮ ಸಂಖ್ಯೆ	ಕೆರೆಗಳ ಹೆಸರು	ಬಂದ ಆದಾಯ	ಯಾರಿಗೆ ಕೊಟ್ಟಿದ್ದು	ಕೆರೆಯಲ್ಲಿ ಮೀನುಮರಿ ದಾಸ್ತಾನು ಸಂಘದವರಿಂದ ರೂ.ಲಕ್ಷಗಳಲ್ಲಿ	ಷರಾ
1.	ಮಾವಿನ ಕೆರೆ	22055–00	ಮೀನುಗಾರರ ಸಹಕಾರ ಸಂಘ. ರಾಯಚೂರು	1.50	ದಾಸ್ತಾನು ಮಾಡ ಲಾಗಿದೆ
2.	ದೇವನಪಲ್ಲ ಕೆರೆ	7080–00	ಮೀನುಗಾರರ ಸಹಕಾರ ಸಂಘ, ರಾಯಚೂರು	0.50	– " –
3.	ಮಲಯಾಬಾದ್ ದೊಡ್ಡಕೆರೆ	7272–00	ಮೀನುಗಾರರ ಸಹಕಾರ ಸಂಘ, ಮಲಯಾಬಾದ್	1.50	– " –
4.	ಗೋನವಾರ ಕೆರೆ	2000–00	ಮೀನುಗಾರರ ಸಹಕಾರ ಸಂಘ, ಮಲಯಾಬಾದ್	0.50	– " –
5.	ವೇಣುಗೋಪಾಲ ತುಂಟಾಪೂರು ಕೆರೆ	8850–00	ಕೆರೆ ಅಭಿವೃದ್ಧಿ ಸಂಘ, ತುಂಟಾಪೂರು	0.50	– " –
6.	ಜಾಲಬಿಂದ ದೊಡ್ಡಕೆರೆ	500–00	ಶಿವಪ್ಪ ತಮ ತಾಯಪ್ಪ ರಾಯಚೂರು	–	
7.	ಗುಂಜಳ್ಳೆ ಕೆರೆ	800–00	ಕೆ. ರಾಮಚಂದ್ರಪ್ಪ	–	
			ಒಟ್ಟು	4.50	

ರಾಯಚೂರು ಕ್ಷೇತ್ರದಲ್ಲಿ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ವತಿಯಿಂದ ಸಹಾಯಧನ ಪಡೆಯಲು ಅರ್ಜಿ ಸಲ್ಲಿಸಿದ ಫಲಾನುಭವಿಗಳ ವಿವರ.

ಶ್ರೀ/ ಶ್ರೀಮತಿ

1) ಲಕ್ಷ್ಮಿಬಾಯಿ ಕೊಂ ಧೀರಲಾಲ್, ಏಗನೂರು
2) ಮಾಣಿಕಮ್ಮ ಕೊಂ ಮುತ್ತಪ್ಪ, ಕೊತ್ತಲದೊಡ್ಡಿ
3) ನಾಗೇಶ್ ಬಿನ್ ಸೂರಪ್ಪ, ಕುಕ್ಕನೂರು
4) ಸಂತೋಷ್‌ಕುಮಾರ್ ಬಿನ್ ಸದಾಶಿವ ಪಾಟೀಲ್, ಎರಮರಸ್
5) ವೆಂಕನಗೌಡ ಬಿನ್ ಸಿದ್ದರಾಮಪ್ಪ, ಹರನೂರು
6) ಚಂದ್ರಕಾಂತ್ ಬಿನ್ ವೆಂಕಯ್ಯ, ಎರಗೇರ
7) ಬಿ.ವೆಂಕಟೇಶ್ ಬಿನ್ ಶಿವಣ್ಣ, ಉದಮ್‌ಗಲ್, ಖಾನಾಪುರ
8) ವೆಂಕನಗೌಡ ಪಾಟೀಲ್ ಬಿನ್ ಚನ್ನಪ್ಪಗೌಡ ಪಾಟೀಲ್, ಹರಸೂರು
9) ಕೆ.ಪ್ರತಾಪರೆಡ್ಡಿ ಬಿನ್ ಮಂತಿನರೆಡ್ಡಿ, ಬುರುದಿವಾಡ್
10) ಅನುಷಾ ಪಾಟೀಲ್ ಬಿನ್ ಸಿದ್ದನಗೌಡ ಪಾಟೀಲ್, ಗಾರಲದಿನ್ನಿ.

ಶ್ರೀ ಎ.ಪಾಪರೆಡ್ಡಿ : ಮಾನ್ಯ ಅಧ್ಯಕ್ಷರೆ, ನನ್ನ ರಾಯಚೂರು ಕ್ಷೇತ್ರದಲ್ಲಿ ನಾಲ್ಕೂವರೆ ಲಕ್ಷ ಮೀನುಗಳನ್ನು ಬಿತ್ತವಗೆ ಬಿಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಅಲ್ಲಿ ಮೀನುಗಾರರ ಸಂಘಕ್ಕೆ ಆ ಕೆರೆಗಳನ್ನು ಮಾಡುವುದಕ್ಕೆ ಮೀನುಗಳನ್ನು ಬಿಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಿಲ್ಲ. ಅಲ್ಲಿ ಕೆಲವು ಶ್ರೀಮಂತರು ತಾವೇ ಸಂಘಗಳನ್ನು ಮಾಡಿಕೊಂಡು, ಅದರ ಮುಖಾಂತರ ಶ್ರೀಮಂತರುಗಳು ಅಲ್ಲಿ ವ್ಯಾಪಾರ ಮಾಡುತ್ತಿದ್ದಾರೆಯೇ ಹೊರತಾಗಿ ಅಲ್ಲಿರುವಂತಹ ಮೀನುಗಾರರಿಗೆ ಅವಕಾಶವನ್ನು ಮಾಡಿಕೊಡುತ್ತಿಲ್ಲ. ಆ ಕಾರಣದಿಂದಾಗಿ ಸರ್ಕಾರ ಇದರ ಬಗ್ಗೆ ಪರಿಶೀಲಸಿ ಅದು ಅಲ್ಲಿಯ ಮೀನುಗಾರರಿಗೆ ಸಿಗಬೇಕು, ಮೀನುಗಾಕರ ನೂರಾರು ಕುಟುಂಬಗಳು ಈ ಒಂದು ವ್ಯವಸ್ಥೆಯನ್ನು ನಂಬಿಕೊಂಡು ಬದುಕಿದ್ದಾರೆ. ಅಂತಹ ಜನರಿಗೆ ಮೋಸ ಮಾಡಿ ಅಲ್ಲಿ ವ್ಯಾಪಾರಸ್ಥರಿಗೆ ಕೊಡುತ್ತಿದ್ದಾರೆ. ಅದು ನಿಲ್ಲಬೇಕು, ಅಲ್ಲಿಯ ಮೀನುಗಾರರ ಕುಟುಂಬಗಳಿಗೆ ಕೆಲಸ ಕೊಡುವಂತಹ ಸಹಾಯವನ್ನು ಮಾಡಬೇಕು, ಆ ಕಾರಣದಿಂದ ಕೆಲವು ಅಧಿಕಾರಿಗಳು ಬಹಳ ದಿವಸದಿಂದ ಅಲ್ಲಿಯೇ ಇದ್ದಾರೆ, ಅಲ್ಲಿ ಆಫೀಸ್‌ನಲ್ಲಿ ಯಾರು ಇರುವುದಿಲ್ಲ. ನಾವು ಕೇಳಿದಂತಹ ವಿಚಾರಗಳಿಗೆ ಅಲ್ಲಿರುವಂತಹ ಅಧಿಕಾರಿಗಳು ಉತ್ತರ ಕೊಡುತ್ತಿಲ್ಲ. ಅಲ್ಲಿರುವಂತಹ ಅಧಿಕಾರಿಗಳು ಬಹಳ ದಿವಸಗಳಿಂದ ಅಲ್ಲಿ ಇದ್ದಾರೆ. ಅವರನ್ನು ವರ್ಗಾವಣೆ ಮಾಡಿ ಒಳ್ಳೆಯ ಅಧಿಕಾರಿಗಳನ್ನು ಅಲ್ಲಿಗೆ ವರ್ಗಾವಣೆ ಮಾಡಬೇಕು. ನನ್ನ ರಾಯಚೂರು ಕ್ಷೇತ್ರ ಇದು ಬರಗಾಲ ಬಂದಿರುವಂತಹ ಕ್ಷೇತ್ರವಾಗಿದೆ 4–5 ಕೆರೆಗಳಲ್ಲಿ ಮೀನುಗಳನ್ನು ಸಾಕುತ್ತಿದ್ದಾರೆ. ಇದು ಅಲ್ಲಿಯ ಮೀನುಗಾರರ ಕುಟುಂಬದವರಿಗೆ ಸಿಗಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಪಾಪಾರೆಡ್ಡಿಯವರು ನನಗೆ ಆತ್ಮೀಯ ಸ್ನೇಹಿತರು, 'ಅವರು ನಗರಾಭಿವೃದ್ಧಿ ಅಧ್ಯಕ್ಷರಾಗಿದ್ದರು, ಮತ್ತೆ ಅವರು ನಮ್ಮ ಕಡೆ ಬಿಟ್ಟು ಈಗ ಬಿಜೆಪಿಗೆ ಹೋಗಿ ಈಗ ಆ ಕಡೆಗೆ ಹೋಗಿದ್ದಾರೆ. ಅವರು ಬಹಳ ಪ್ರಭಾವಿಗಳಾಗಿದ್ದಾರೆ, ಅವರಿಂದಲೇ ನಿಯಂತ್ರಣ ಮಾಡುವುದಕ್ಕೆ ಆಗಲಿಲ್ಲವೆಂದರೆ ಹೇಗೆ? he is one of the effective MLAs, ಆಗಿದ್ದಾರೆ.

ಅಲ್ಲಿ 14 ಲಕ್ಷರೂಪಾಯಿ ಅನುದಾನ ಇಟ್ಟು 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನಾನು ನಿನ್ನೆ ದಿನ ಶ್ರೀ ರಾಜುಪ್ರೇಮ್‌ಕುಮಾರ್‌ರವರಿಗೆ ಹೇಳಿದ್ದೇನೆ. ನಾವು ಮೀನುಗಾರಿಕೆಗೆ 14 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ, ಅದರಲ್ಲಿ 10 ಲಕ್ಷ ರೂಗಳು ಖರ್ಚಾಗಿದೆ, ಹೇಗೆ ಖರ್ಚಾಗಿದೆ, ಹೇಗೆ ಖರ್ಚಾಗಿದೆ ಎಂಬುದರ ಬಗ್ಗೆ ಹೇಳಿದ್ದೇವೆ. ಎಲ್ಲೆಲ್ಲಿ ಬೇರೆಯವರು ಉಪಯೋಗ ಮಾಡುತ್ತಿದ್ದಾರೆಂದರೆ ನೀವು ಸ್ವಲ್ಪ ಅವರ ಜೊತೆ ಮಾತನಾಡಿರಿ. ಮತ್ತೇ ಅದರ ಬಗ್ಗೆ ಏನು ಬೇಕಾಗುತ್ತದೆಯೋ ನಾನು ಅಧಿಕಾರಿಗಳಿಂದ ಏನು ಸಹಾಯ ಮಾಡಬೇಕೋ ಆ ಪ್ರಯತ್ನವನ್ನು ಮಾಡುತ್ತೇನೆ. ಇವತ್ತು ಮೀನುಗಾರರ ಸಮಸ್ಯೆಗಳಿಗೆ ಬಜೆಟ್‌ನಲ್ಲಿ ಹೋದ ಸಲ 9 ಕೋಟಿ ರೂ ಇದ್ದು ಈ ಸಾರಿ 21 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಅದರ ಬಗ್ಗೆ ಪ್ರತಿಯೊಂದು ಕ್ಷೇತ್ರದ ಸಂಬಂಧಪಟ್ಟ ಶಾಸಕರು ಕೂಡ ಹೆಚ್ಚಿನ ಆಸಕ್ತಿಯನ್ನು ವಹಿಸಿ ನಿಯಂತ್ರಣ ಮಾಡಬಹುದು. ಇದೇನೂ ದೊಡ್ಡ ಕೆಲಸವಲ್ಲ. ಇವತ್ತು ಏನಾಗುತ್ತಿದೆ, ನೀವೂ ಕೂಡ ಅದರ ಬಗ್ಗೆ ನಿಯಂತ್ರಣವನ್ನು ಮಾಡಬಹುದು, ನಾನೂ ಕೂಡ ಜಿಲ್ಲಾಧಿಕಾರಿಗಳಿಗೆ ಹೇಳಿ ಇದನ್ನು ಸರಿ ಮಾಡತಕ್ಕಂತಹ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಒಳನಾಡು ಮೀನುಗಾರಿಕೆ ಬಜೆಟ್ ಬಹಳ ಕಡಿಮೆ ಇದೆ, ಮೀನು ಮರಿ ಉತ್ಪಾದನೆ ಇದಕ್ಕೆ ಬಹಳ ಜಾಸ್ತಿ ಆಗಬೇಕಾಗಿದೆ. ಪಂಚಾಯಿತಿಗಳ ಆದಾಯ ಜಾಸ್ತಿಯಾಗಬೇಕಾದರೆ ಈ ಕೆರೆಗಳನ್ನು ಸದ್ಬಳಕೆ ಮಾಡಿಕೊಂಡು ಅಲ್ಲಿ ಮೀನು ಮರಿಗಳನ್ನು ಬಿಟ್ಟು ಅದರಿಂದ ಆದಾಯವನ್ನು ಜಾಸ್ತಿ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಸ್ವಲ್ಪ ಹೆಚ್ಚು ಒತ್ತನ್ನು ಕೊಡುವುದು ಒಳ್ಳೆಯದು. ತಾವು ಡೀಸೆಲ್ ಸಬ್ಸಿಡಿಯ ಬಗ್ಗೆ 3 ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೀರಿ, ಇನ್‌ಲ್ಯಾಂಡ್ ಫಿಷರೀಸ್‌ಗೆ ಜಾಸ್ತಿ ಇಲ್ಲ.

ಅಧ್ಯಕ್ಷರು :ಮಾನ್ಯ ಖರ್ಗೆಯವರು ದೆಹಲಿಗೆ ಹೋಗಿದ್ದಾರೆ. ಎನ್.ವೈ.ಗೋಪಾಲಕೃಷ್ಣರವರ ಪ್ರಶ್ನೆಗೆ, ಸಂಬಂಧಿಸಿದಂತೆ ಅವರು ಅನುಮತಿಯನ್ನು ಪಡೆದುಕೊಂಡಿದ್ದಾರೆ. ಈ ಪ್ರಶ್ನೆಯನ್ನು ಮುಂದಿನ ಸಾರಿ ತೆಗೆದುಕೊಳ್ಳಲಾಗುವುದು. ಮುಂದಿನ ವಾರ ಆ ಪ್ರಶ್ನೆಗೆ ಉತ್ತರವನ್ನು ಕೊಡಿಸುತ್ತೇನೆ.

ಪ್ರಶ್ನೆ ಸಂಖ್ಯೆ: 141 : 2165

ಅಧ್ಯಕ್ಷರು : ಮೋಹನ ಕೃಷ್ಣ ಶೆಟ್ಟಿಯವರೇ, ನಿಮ್ಮ ಪ್ರಶ್ನೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಎನ್.ವೈ.ಗೋಪಾಲ ಕೃಷ್ಣರವರ ಪ್ರಶ್ನೆಗೆ ಇವತ್ತೇ ಉತ್ತರವನ್ನು ಹೇಳಿಸಿಬಿಡಿ ಸಾರ್. ಅವರಿಗೆ ಪುನಃ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಇಲ್ಲದಂತಾಗಿಬಿಡುತ್ತದೆ.

ಅಧ್ಯಕ್ಷರು : ಈಗ ಜಲಸಂಪನ್ಮೂಲ ಇಲಾಖೆಯ ಸಚಿವರು ದೆಹಲಿಗೆ ಸಂಸತ್ ಸದಸ್ಯರನ್ನು ಭೇಟಿ ಮಾಡುವುದಕ್ಕೆ ಹೋಗಿದ್ದಾರೆ. ಮುಂದಿನ ವಾರ ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮುಂದಿನ ವಾರ ಏನಾದರೂ ಅವರ ಪರಿಸ್ಥಿತಿಗಳು ...

ಶ್ರೀ ಜೆ.ಸಿ.ಮಾಧುಸ್ವಾಮಿ : ವಾಟಾಳ್‌ನಾಗರಾಜ್‌ರವರೆ, ಅವರು ಡೆಪ್ಯುಟಿ ಸ್ಪೀಕರ್ ಆಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇವರು ಉಪಾಧ್ಯಕ್ಷರಾದರೆ ಅವರ ಪ್ರಶ್ನೆಯನ್ನು ಕೇಳುವುದಕ್ಕೆ ಇಕ್ಕಟ್ಟಾಗುತ್ತದೆ. ಅದಕ್ಕೆ ಕೇಳುವುದೆಲ್ಲವನ್ನೂ ಈಗಲೇ ಕೇಳಿಬಿಡಲಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಡೆಪ್ಯೂಟಿ ಸ್ಪೀಕರ್‌ರವರು ಪ್ರಶ್ನೆಯನ್ನು ಕೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ಕೇಳಬಹುದು. ಸಾಮಾನ್ಯವಾಗಿ ಕೇಳಿಲ್ಲ. ಸಾಮಾನ್ಯವಾಗಿ ಅವರು ಇಲ್ಲಿ ಬಂದು ಕುಳಿತುಕೊಳ್ಳುತ್ತಾರೆ.

ಅಧ್ಯಕ್ಷರು : ಆಯಿತು ಬಿಡಿ.

ಪ್ರಶ್ನೆ ಸಂಖ್ಯೆ : 142(2016)

(ಮಾನ್ಯ ಸದಸ್ಯರು ಹಾಜರಿರುವುದಿಲ್ಲ.)

ಪ್ರಶ್ನೆ ಸಂಖ್ಯೆ : 143(2213)

ಶ್ರೀ ಅಶೋಕ ಗುರಪ್ಪ ಶಾಬಾದಿ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಮಾನ್ಯ ಅಶೋಕ ಗುರಪ್ಪ ಶಾಬಾದಿಯವರೆ, ಉತ್ತರ ಇನ್ನು ಬಂದಿಲ್ಲ, ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಇದನ್ನು ಕಂದಾಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಮಾನ್ಯ ಮಂತ್ರಿಗಳು ಇದಕ್ಕೆ ಸಂಬಂಧಪಟ್ಟಂತೆ ಮುಂದಿನ ವಾರ ಉತ್ತರವನ್ನು ಕೊಡುತ್ತಾರೆ.

ಶ್ರೀ ಗೋವಿಂದ ಎಂ ಕಾರಜೋಳ : ಮಾನ್ಯ ಮುಖ್ಯಮಂತ್ರಿಯವರೆ, ಇದರಲ್ಲಿ ಏನೂ ಇಲ್ಲ, ತಾವು ಪರಿಹಾರವನ್ನು ಘೋಷಣೆ ಮಾಡಿದರೆ ಇದು ಮುಗಿದು ಹೋಗುತ್ತದೆ. ಬಡವರು ಮಹಾರಾಷ್ಟ್ರಕ್ಕೆ ಹೋಗಿ ದುಡಿದುಕೊಂಡು ಬಂದಂತಹ ಸಂದರ್ಭದಲ್ಲಿ ಆಕ್ಸಿಡೆಂಟ್‌ನಲ್ಲಿ ಸತ್ತಿದ್ದಾರೆ, ಅಲ್ಲಿ 4 ಕುಟುಂಬಗಳು ನಾಶವಾಗಿದೆ.

ಶ್ರೀ ಧರ್ಮಸಿಂಗ್ : ಉತ್ತರವನ್ನು ತರಿಸಿಕೊಡುತ್ತೇನೆ.

ರಾಜ್ಯದಲ್ಲಿ ಗ್ರಾಮೀಣ ಕೃಪಾಂಕ ವಂಚಿತ ನೌಕರರು.

144 (1826) ಶ್ರೀ.ಪಾಟೀಲ ಎಸ್.ಎಸ್. (ಮುಂಡರಗಿ)ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗ್ರಾಮೀಣ ಕೃಪಾಂಕ ಸುಪ್ರೀಂ ಕೋರ್ಟಿನಲ್ಲಿ ರದ್ದಾದ ನಂತರ ರಾಜ್ಯದಲ್ಲಿ ಹಿಂದಿದ್ದ ಮೀಸಲಾತಿಯಲ್ಲಿಯೇ ಶೇಕಡಾ 25ರಂತೆ ಮೀಸಲಾತಿ ಗ್ರಾಮೀಣ ಅಭ್ಯರ್ಥಿಗಳಿಗೆ ನೀಡಿದ್ದು ನಿಜವೇ?

ಆ. ಇದು ಈಗಾಗಲೇ ಚಾಲ್ತಿಯಲ್ಲಿದ್ದು ಇದನ್ನು ಜಾರಿಗೆ ತರುವ ಮೊದಲು ಇದರ ಸಾಧಕ ಬಾಧಕಗಳನ್ನು ಪರಿಶೀಲಿಸಿ ಶೇಕಡಾ 25 ಇರುವುದನ್ನು ಗ್ರಾಮೀಣ ಜನಸಂಖ್ಯೆ ಆಧಾರದ ಮೇಲೆ ಶೇಕಡಾ 25 ಇರುವುದನ್ನು ಗ್ರಾಮೀಣ ಜನಸಂಖ್ಯೆ ಆಧಾರದ ಮೇಲೆ ಶೇಕಡಾ 70ಕ್ಕೆ ಹೆಚ್ಚಿಸಲು ಸರ್ಕಾರ ಒಪ್ಪಿಕೊಂಡಂತೆ ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಾತಿಯಲ್ಲಿ ಶೇಕಡ 70 ಭಾಗವನ್ನು ನೀಡಲಾಗುವುದೇ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿ) :

ಅ) ಹೌದು.

ಆ) ಸಮತಳ ಮೀಸಲಾತಿಯ ಪ್ರಮಾಣ ಈಗ ಶೇ.80ರಷ್ಟಿರುವುದರಿಂದ ಗ್ರಾಮೀಣ ಮೀಸಲಾತಿ ಪ್ರಮಾಣವನ್ನು ಶೇ.25 ರಿಂದ ಶೇ.70ಕ್ಕೆ ಹೆಚ್ಚಿಸುವುದು ಸಾಧ್ಯವಿರುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಅಧಿಕಾರಿಗಳು ಸರಿಯಾಗಿ ನೋಡುತ್ತಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಗ್ರಾಮೀಣ ಕೃಪಾಂಕದ ಸರ್ಕಾರಿ ಆಜ್ಞೆ ರದ್ದಾದ ನಂತರ ಹಿಂದಿದ್ದ ಮೀಸಲಾತಿಯಲ್ಲಿಯೇ ಶೇಕಡ 25ರಂತೆ ಮೀಸಲಾತಿ ಕೊಡುವುದು ನಿಜವೇ? ಎಂದು ಕೇಳಿರುವ ಪ್ರಶ್ನೆಗೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇನ್ನು ನಾನು ಕೇಳಿರುವ 2ನೇ ಪ್ರಶ್ನೆಗೆ ಉತ್ತರವಾಗಿ ಈಗಾಗಲೇ ಮೀಸಲಾತಿ ಪ್ರಮಾಣ 80 ರಷ್ಟು ಇದೆ ಎಂದು ಹೇಳುತ್ತಾರೆ. ಇದು ಮೀಸಲಾತಿ ಅಲ್ಲ ಅಧ್ಯಕ್ಷರೆ, ನಾನು ಕಳೆದ ಅಧಿವೇಶನದಲ್ಲಿ ಈ ಬಗ್ಗೆ ಒಂದು ಪ್ರಶ್ನೆಯನ್ನು ಹಾಕಿದ್ದೇ ಮೀಸಲಾತಿಯಲ್ಲಿ ಇದು ಒಳಮೀಸಲಾತಿಯಾಗಿದೆ, ಇದರಿಂದ ಮೀಸಲಾತಿ ಹೆಚ್ಚಾಗುವುದಿಲ್ಲ. 18 ಪರ್ಸೆಂಟ್ ಇವತ್ತು ಎಸಿ: ಎಸ್‌ಟಿಗೆ ಇಟ್ಟರೆ ಅದರೊಳಗೆ 25 ಪರ್ಸೆಂಟ್ ಗ್ರಾಮೀಣರಿಗೆ ಕೊಡುತ್ತಾರೆ ಇದು ನಡೆಯುತ್ತಿದೆ. ಆಗ ಮಾನ್ಯ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದರು, ಮಾನ್ಯ ಚಂದ್ರೇಗೌಡರಿಗೆ ನಾನು ನೀವಿಬ್ಬರೂ ಕುಳಿತುಕೊಂಡು ನಿರ್ಣಯ ಮಾಡಿ ಎಂದು ಹೇಳಿದೆ, ಆಗ ಅವರು ಸದ್ಯ 25 ಮಾಡೋಣ, ಇದರ ಸಾಧಕ ಮತ್ತು ಭಾಧಕಗಳನ್ನು ನೋಡಿಕೊಂಡು ಗ್ರಾಮೀಣ ಜನಸಂಖ್ಯೆ ಎಷ್ಟು ಇರುತ್ತದೆ ಅಷ್ಟು ಪ್ರಮಾಣಕ್ಕೆ ಏರಿಸೋಣ ಎಂದು ಹೇಳಿದರು. ಇಲ್ಲಿ 80 ಪರ್ಸೆಂಟ್ ಇದೆ ಎಂದು ತಪ್ಪು ಉತ್ತರವನ್ನು ಕೊಡುತ್ತಿದ್ದಾರೆ. ಅದಕ್ಕಾಗಿ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹಿಂದೆ ನಿರ್ಣಯವಾಗಿದೆ, ಈಗ 25ರಷ್ಟು ಕೊಡುತ್ತಿದ್ದಾರೆ, ಇದು ಮೀಸಲಾತಿಯಲ್ಲಿ ಒಳಮೀಸಲಾತಿ 80 ಪರ್ಸೆಂಟ್ ಎಂದು ತಪ್ಪು ಉತ್ತರವನ್ನು ಕೊಟ್ಟಿದ್ದಾರೆ. ಆ ಕಾರಣದಿಂದಾಗಿ ದಯವಿಟ್ಟು ಮೀಸಲಾತಿಯಲ್ಲಿ 25ರಷ್ಟು ಗ್ರಾಮೀಣ ಜನಸಂಖ್ಯೆಯ ಪ್ರಕಾರ ಇದ್ದದ್ದು ಕನಿಷ್ಠ ಇದರ ಬಗ್ಗೆ ಲೆಕ್ಕವನ್ನು ಹಾಕಿದರೆ ಗ್ರಾಮೀಣ ಜನಸಂಖ್ಯೆ ಶೇಕಡ 60 ಆಗುತ್ತದೆ. ಅಷ್ಟಾದರೂ ಏರಿಸುತ್ತೀರಾ ಎಂದು ತಾವು ದಯವಿಟ್ಟು ಹೇಳಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಎಸ್‌ಎಸ್ ಪಾಟೀಲ್‌ರವರು ಇದಕ್ಕೂ ಮುಂಚೆಯೂ ಕೂಡ ಈ ರೂರಲ್ ವೇಟೇಜ್ ಬಗ್ಗೆ ಕೊಶ್ಚನನ್ನು ಕೇಳಿದರು. ಈ ಪ್ರಶ್ನೆಯಲ್ಲಿ ಈ ವರ್ಟಿಕಲ್ ರಿಸರ್ವೆಶನ್ ಮತ್ತು ಹಾರಿಜಂಟಲ್ ರಿಸರ್ವೆಶನ್ ಇವೆಲ್ಲವನ್ನೂ ಕೊಡತಕ್ಕಂಥದ್ದು ಶೇಕಡ 25ಕ್ಕೆ ಅನುಷ್ಠಾನಕ್ಕೆ ತರತಕ್ಕಂಥದ್ದರೂ ಕೂಡ ಸರ್ವೋಚ್ಚ ನ್ಯಾಯಾಲಯಕ್ಕೆ ಶ್ರೀ ಗುರುರಾಜ್ ರಾಯ್ಕರ್ ಎಂಬುವವರು ಇದನ್ನು ಪ್ರಶ್ನಿಸಿ ಸುಪ್ರಿಂಕೋರ್ಟಿಗೆ ಹೋಗಿದ್ದಾರೆ. ಇದು ಸುಪ್ರೀಂ ಕೋರ್ಟಿನಲ್ಲಿ ಇತ್ಯರ್ಥವಾದ ನಂತರ ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್ : ಸುಪ್ರಿಂಕೋರ್ಟಿನಲ್ಲಿ ಇದರ ಬಗ್ಗೆ ಏನೂ ಹೇಳುತ್ತಿಲ್ಲ. ಇದು ಸುಪ್ರಿಂಕೋರ್ಟಿಗೆ ಹೋಗಿದ್ದರೆ ದಯವಿಟ್ಟು ಎನು ಆಗುತ್ತದೆಯೋ ನೋಡಿಕೊಂಡು ಮಾಡಿ. ಬೇಡ ಎಂದು ಹೇಳುವುದಿಲ್ಲ. ಅವರು ಕೋರ್ಟಿಗೆ ಹೋಗಿದ್ದಾರೆಂದು ನನಗನ್ನಿಸುವುದಿಲ್ಲ. ಅದು ಏನೋ ತಪ್ಪು ಅಭಿಪ್ರಾಯವಾಗಿದೆ, ಸುಪ್ರಿಂಕೋರ್ಟಿಗೆ ಹೋಗಿರುವುದು 10 ಪರ್ಸೆಂಟ್ ಮೀಸಲಾತಿಯ ಬಗ್ಗೆ. ಈ ಒಳಮೀಸಲಾತಿಯ ಬಗ್ಗೆ ಯಾವುದೂ ಕೂಡ ಚಾಲೆಂಜ್ ಆಗಿರುವುದಿಲ್ಲ. ಆ ರೀತಿಯಾಗಿ ಮಾಡುವುದಕ್ಕೆ ಬರುವುದಿಲ್ಲ. ಈ ಕಾರಣಕ್ಕಾಗಿ ಚಾಲೆಂಜ್ ಆಗದಿದ್ದರೆ ದಯವಿಟ್ಟು ಅದರ ಒಳ ಮೀಸಲಾತಿಯನ್ನು 25 ರಿಂದ ಕನಿಷ್ಠ 50ಕ್ಕಾದರೂ ಏರಿಸುತ್ತಾರೆಯೇ ಎಂದು ನಮಗೆ ಹೇಳಬೇಕಾಗಿದೆ. ಇದನ್ನು ನಮ್ಮ ಗ್ರಾಮೀಣ ಜನಸಂಖ್ಯೆಯ ಆಧಾರದ ಮೇಲೆ ನಾವು ಕೇಳುತ್ತಿರುವುದು, ಇದು ಚಾಲೆಂಜ್ ಆಗಿಲ್ಲ.

ಶ್ರೀ ಧರ್ಮಸಿಂಗ್ : ತಾವು ಹಿರಿಯ ಸದಸ್ಯರಾಗಿದ್ದೀರಿ, ನಿಮ್ಮ ಪ್ರಶ್ನೆಯ ಉತ್ತರದ ಬಗ್ಗೆ ನಾನು ಈಗಾಗಲೇ ಬಹಳ ಸೂಕ್ಷ್ಮವಾಗಿ ಪರಿಶೀಲನೆ ಮಾಡಿದ್ದೇನೆ. ಗುರುರಾಜ್ ಎಂದು ಹೇಳಿ ಸುಪ್ರೀಂಕೋರ್ಟಿಗೆ ಹೋಗಿದ್ದಾರೆ. ಅದು ಸುಪ್ರೀಂಕೋರ್ಟ್‌ನ ಮುಂದೆ ಇರುವ ಕಾರಣ ಅದರ ಬಗ್ಗೆ ಖಚಿತವಾದ ಅಭಿಪ್ರಾಯ ನೀಡಲಿಕ್ಕೆ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಗ್ರಾಮೀಣ ವಂಚಿತರು ಅವರ ಮರುನೇಮಕಾತಿ ಬಗ್ಗೆ ಒಬ್ಬ ಅಧಿಕಾರಿ ತಪ್ಪು ಮಾಡಿದ್ದಾರೆಂದು ಹೇಳಿದ ಸಂದರ್ಭದಲ್ಲಿ ಅವರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದರು ಆದರೆ ಅವರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ 182 ಜನ ಗ್ರಾಮೀಣ ಅಭ್ಯರ್ಥಿಗಳೆನಿಸಿದ ಶಿಕ್ಷಕರು ಬೀದಿಗೆ ಬಿದ್ದಿದ್ದಾರೆ, ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡಿದರು, ಮಾನ್ಯ ಹೊರಟ್ಟಿಯವರಿಗೂ ಗೊತ್ತು ಅವರು ಸಹ ಇಲ್ಲಿದ್ದಾರೆ, ಆದರೂ ಸಹ ಇದುವರೆವಿಗೂ ಅವರಿಗೆ ಯಾವುದೇ ರೀತಿಯ ಪರಿಹಾರ ಸಿಕ್ಕಿಲ್ಲ. ಅದರ ಬಗ್ಗೆ ಮುಖ್ಯಮಂತ್ರಿಗಳು ಅಭಿಪ್ರಾಯ ಹೇಳಲಿ, ತಪ್ಪು ಮಾಡಿರುವ ಅಧಿಕಾರಿಯ ವಿರುದ್ಧ ಇನ್ನು ಕ್ರಮ ಕೈಗೊಂಡಿಲ್ಲ.

ಡಾ: ಶಿರಿಯಣ್ಣನವರ್.ಆರ್.ಬಿ (ನವಲಗುಂದ) : ಇದರ ಸಂಬಂಧವಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆದರೂ ಸಹ ದಿನಾಂಕ: 1–2–2005ರ ಪ್ರಜಾವಾಣಿಯಲ್ಲಿ ತಪ್ಪು ಮಾಡಿದ ಡಿ.ಡಿ.ಪಿ.ಐ. ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆಂದು ವರದಿಯಾಗಿ ಎರಡು ತಿಂಗಳಾದರೂ ಇನ್ನು ಕ್ರಮ ಕೈಗೊಂಡಿಲ್ಲ. ಆ ಡಿ.ಡಿ.ಪಿ.ಐ. ರಾಜಾರೋಷವಾಗಿ ಓಡಾಡುತ್ತಿದ್ದಾನೆ. ಆ 181 ಜನ ಶಿಕ್ಷಕರು ಬೀದಿಯಲ್ಲಿದ್ದಾರೆ ದಯವಿಟ್ಟು ಇವರ ಬಗ್ಗೆ ಸರ್ಕಾರ ಕೆ.ಎ.ಟಿ.ಯಲ್ಲಿ ಅವರ ಪರವಾಗಿ ಒಂದು ಅರ್ಜಿಯನ್ನು ಸಲ್ಲಿಸಿ ನ್ಯಾಯ ದೊರಕಿಸುವಂತೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಹೋದ ಸಾರಿ ಅಧಿವೇಶನದಲ್ಲಿ ಪ್ರಶ್ನೆಯನ್ನು ಹಾಕಿದಾಗ ಮಾನ್ಯ ಮುಖ್ಯಮಂತ್ರಿಗಳು ಯಾರ್ಯಾರು ತಪ್ಪು ಮಾಡಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದರು ಧಾರವಾಡ ಜಿಲ್ಲೆಯಲ್ಲಿ 391 ಖಾಲಿ ಇದ್ದವು, ಹಾವೇರಿಯಲ್ಲಿ 77 ಖಾಲಿ ಇದ್ದವು, ಗದಗ್‌ನಲ್ಲಿ 30 ಖಾಲಿ ಇದ್ದವು. ಇಷ್ಟು ಜಾಗಗಳು ಖಾಲಿಯಿದ್ದರೂ ಸಹ 187 ಮಂದಿಗೆ ವಂಚಿಸಿ ಆರ್ಡರ್ ಸಹ ಕೊಡದೆ ಸರ್ಕಾರವನ್ನು ಸಹ ಇವತ್ತು ಪೇಚಿಗೆ ಸಿಲುಕಿಸಿದ್ದಾರೆ. ಈ ರೀತಿ ತಪ್ಪು ಮಾಡಿದ ಅಧಿಕಾರಿಗಳ ಬಗ್ಗೆ ಇನ್ನು ಸಹ ಕ್ರಮ ಕೈಗೊಂಡಿಲ್ಲ. ಹಾಗಾಗಿ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಕಳೆದ ಅಧಿವೇಶನದಲ್ಲಿಯೇ ಹೇಳಿದ್ದರು ಆದರೆ ಕ್ರಮ ಕೈಗೊಳ್ಳದಿದ್ದಲ್ಲಿ ಯಾರ ಒಂದು ಕ್ರಮ ನಡೆದಿಲ್ಲ. ದಯವಿಟ್ಟು ಅದರ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೀರಾ ಅಲ್ಲದೆ ಆ 18 ಮಂದಿಗೆ ಯಾವಾಗ ನೌಕರಿ ಕೊಡುತ್ತೀರಿ ಅನಿವಾರ್ಯವಾಗಿ ಅವರು ಯಾವುದೇ ತಪ್ಪು ಇಲ್ಲದೆ ಅಡ್ಡಾಡುತ್ತಿದ್ದಾರೆ ದಯಮಾಡಿ ಅವರಿಗೆ ಯಾವಾಗ ನೌಕರಿ ಕೊಡುತ್ತೀರಿ ಎಂದು ಹೇಳಬೇಕು. ಎಂಬುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯ ಮಂತ್ರಿಗಳೆ, ಆ ಶಿಕ್ಷಕರಿಗೆ ಪರಿಹಾರ ಸಿಗಬೇಕು ಸಂಬಂಧಪಟ್ಟ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಬೇಕು.

ಶ್ರೀ ಧರ್ಮಸಿಂಗ್ : ಡಿ.ಡಿ.ಪಿ.ಐ.ನವರಿಂದ ತಪ್ಪು ಆಗಿದೆ ಎಂದು ಎಸ್.ಎಸ್.ಪಾಟೀಲ್‌ರವರ ಉಪ ಪ್ರಶ್ನೆಯಲ್ಲಿ ತಾವೂ ಕೂಡ ಕೇಳಿದ್ದಿರಿ. ಈಗಾಗಲೇ ನಾವು ಅವರನ್ನು ಸಸ್ಪೆಂಡ್ ಮಾಡಿದ್ದೇವೆ, ಕ್ರಮ ಕೈಗೊಂಡಿದ್ದೇವೆ. ಬೇರೆ ಪರ್ಯಾಯ ಪರಿಹಾರಕ್ಕೆ ವಿಚಾರ ಮಾಡುತ್ತಿದ್ದೇವೆ, ಅದು ಕೆ.ಎ.ಟಿ. ಮುಂದೆ ಹೋಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಆ ಅಧಿಕಾರಿ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಸರ್ಕಾರ ಇದುವರೆಗೂ ಆಕ್ಷನ್ ತೆಗೆದುಕೊಂಡಿಲ್ಲ.

ಶ್ರೀ ಧರ್ಮಸಿಂಗ್ : ಎಸ್.ಎಸ್.ಪಾಟೀಲರೆ, ಕೆ.ಎ.ಟಿ. ಎಂದು ಒಂದಿದೆ ನಾವು ಯಾರಿಗಾದರೂ ಸಸ್ಪೆಂಡ್ ಮಾಡಿದರೆ ಕೆ.ಎ.ಟಿ.ಗೆ ಹೋಗುತ್ತಾರೆ. ಅವರನ್ನು ಸಸ್ಪೆಂಡ್ ಮಾಡಿರುವಂತಹ ಆರ್ಡರ್ ಕಾಪಿಯನ್ನು ಅವರು ಕೆ.ಎ.ಟಿ.ಮುಂದಿಟ್ಟಿರತಕ್ಕಂತದ್ದು ನಿಮಗೆ ಹಾಗೂ ಜಗದೀಶ್ ಶೆಟ್ಟರ್ ಅವರಿಗೆ ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ಶಿಕ್ಷಕರ ಬಗ್ಗೆ ಆಸಕ್ತಿ ವಹಿಸಿಲ್ಲ.

ಸಭಾಧ್ಯಕ್ಷರು : ಜಗದೀಶ ಶೆಟ್ಟರ್‌ರವರೇ, ಸಸ್ಪೆಂಡ್ ಮಾಡಿರುವ ಕಾಪಿಯನ್ನು ನಿಮಗೆ ನೀಡುತ್ತೇವೆಂದು ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಧರಂಸಿಂಗ್ : ನಾವು ಸಸ್ಪೆಂಡ್ ಮಾಡಿದ ಮೇಲೆ ಆ ಅಧಿಕಾರಿ ಕೆ.ಎ.ಟಿ.ಗೆ ಹೋಗಿದ್ದಾರೆ, ಆ ಸಸ್ಪೆಂಡ್ ಮಾಡಿರುವ ಕಾಪಿಯನ್ನು ನಿಮಗೆ ನೀಡುತ್ತೇವೆ.

ಸಭಾಧ್ಯಕ್ಷರು : ಶ್ರೀ ಹೆಚ್.ಹಾಲಪ್ಪನವರು ತಮ್ಮ ಪ್ರಶ್ನೆ ಕೇಳಿ.

(ಈ ಹಂತದಲ್ಲಿ ಶ್ರೀ ಹೆಚ್. ಹಾಲಪ್ಪನವರು ಸದನದಲ್ಲಿ ಹಾಜರಿರುವುದಿಲ್ಲ)

ಆಡಳಿತದಲ್ಲಿ ಗಣಕೀಕರಣ

146 (2126) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸರ್ಕಾರದ ವಿವಿಧ ಇಲಾಖೆಗಳ ಆಡಳಿತ ವ್ಯವಹಾರಗಳನ್ನು ಗಣಕೀಕರಣಗೊಳಿಸಲಾಗುತ್ತಿದೆಯೇ;

ಆ. ಹಾಗಿದ್ದಲ್ಲಿ ಈ ಪ್ರಕ್ರಿಯೆ ಯಾವ ಯಾವ ಇಲಾಖೆಗಳಲ್ಲಿ ಯಾವ ಯಾವ ಹಂತದಲ್ಲಿದೆ;

ಇ. ಈ ಪ್ರಕ್ರಿಯೆ ಯಾವಾಗ ಪ್ರಾರಂಭವಾಯಿತು ಹಾಗೂ ಇದಕ್ಕೆ ತಗಲಿರುವ ವೆಚ್ಚವೆಷ್ಟು;

ಈ. ಗಣಕೀಕರಣಕ್ಕೆ ಅವಶ್ಯವಿರುವ ಉಪಕರಣಗಳು, ಸಾಫ್ಟ್‌ವೇರ್ ಕನಸಲ್ಟನ್ಸಿ ಇತ್ಯಾದಿಗಳನ್ನು ಖಾಸಗಿಯವರು ಒದಗಿಸುತ್ತಿದ್ದಾರೆಯೇ;

ಉ. ಹಾಗಿದ್ದಲ್ಲಿ ಯಾವ ಯಾವ ಸಂಸ್ಥೆಗಳು ಈ ಸೇವೆಯನ್ನು ಯಾವ ರೀತಿಯಲ್ಲಿ ಒದಗಿಸುತ್ತಿವೆ;

ಊ. ಈ ಸಂಸ್ಥೆಗಳಿಗೆ ಈವರೆಗೆ ಸರ್ಕಾರ ನೀಡಿರುವ ಒಟ್ಟು ಹಣ ಎಷ್ಟು (ಸಂಸ್ಥೆವಾರು ವಿವರ ನೀಡುವುದು)

ಋ. ಗಣಕೀಕೃತ ಆಡಳಿತವು ಕನ್ನಡದಲ್ಲಿ ಇರುತ್ತದೆಯೇ;

ೠ. ಹಾಗಿದ್ದಲ್ಲಿ ಇದಕ್ಕೆ ಯಾವ ತಂತ್ರಾಂಶಗಳನ್ನು ಬಳಸಲಾಗುತ್ತಿದೆ;

ಎ. ಕರ್ನಾಟಕ ಸರ್ಕಾರವೇ ಹೊಸ ತಂತ್ರಾಂಶವೊಂದನ್ನು ರೂಪಿಸಿದೆಯೇ;

ಏ. ಇದಕ್ಕೆ ತಗಲಿರುವ ವೆಚ್ಚ ಎಷ್ಟು ಮತ್ತು ಇದರ ತಯಾರಕರು ಯಾರು ಮತ್ತು ಆಕರ ಸಂಕೇತಗಳು ಕೋಡ್‌ಸೋರ್ಸ್ ಸಾರ್ವಜನಿಕರಿಗೆ ಲಭ್ಯ ಇದೆಯೇ;

ಐ. ಇಲ್ಲದಿದ್ದಲ್ಲಿ ಕಾರಣಗಳನ್ನು ವಿವರಿಸುವುದು.

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಯವರು):

ಅ. ಹೌದು

ಆ. ಅನುಬಂಧದ ಅಂಕಣ 3 ರಲ್ಲಿ ವಿವರಗಳನ್ನು ನೀಡಲಾಗಿದೆ.

ಇ. ಅನುಬಂಧದ ಅಂಕಣ 4 ಮತ್ತು 5 ರಲ್ಲಿ ವಿವರಗಳನ್ನು ನೀಡಲಾಗಿದೆ.

ಈ. ಹೌದು

ಉ. ಅನುಬಂಧದ ಅಂಕಣ 6 ರಲ್ಲಿ ವಿವರಗಳನ್ನು ನೀಡಲಾಗಿದೆ.

ಊ. ಅನುಬಂಧದ ಅಂಕಣ 6 ರಲ್ಲಿ ವಿವರಗಳನ್ನು ನೀಡಲಾಗಿದೆ.

ಋ. ಹೌದು; ಆದರೆ ಕೆಲವು ಪ್ರಕರಣಗಳಲ್ಲಿ ಆಂಗ್ಲದಲ್ಲಿರುತ್ತದೆ.

ೠ. ಕನ್ನಡ ಗಣಕೀಕರಣದಲ್ಲಿ ವರ್ಣಾಕ್ಷರ ಆಧಾರಿತ ಮತ್ತು 'ಇಸ್ಕೀ' ವರ್ಣಮಾಲೆಗಳನ್ನಾಧರಿಸಿದ ತಂತ್ರಾಂಶ ಬಳಸಲಾಗುತ್ತಿದೆ.

ಎ. ಹೌದು

ಏ. ಇದಕ್ಕೆ 8.46 ಲಕ್ಷ ರೂ.ಗಳ ವೆಚ್ಚ ತಗಲಿದ್ದು, ಕನ್ನಡ ಗಣಕ ಪರಿಷತ್ತು ಈ ತಂತ್ರಾಂಶವನ್ನು ರೂಪಿಸಿದೆ. ಇದರ ಸೋರ್ಸ್‌ಕೋಡ್‌ಗಳು ಸಾರ್ವಜನಿಕರಿಗೆ ಲಭ್ಯವಿರುವುದಿಲ್ಲ.

ಐ. ಇದರ ಸೋರ್ಸ್‌ಕೋಡ್‌ಗಳನ್ನು ಸಾರ್ವಜನಿಕರಿಗೆ ಲಭ್ಯಗೊಳಿಸಿದಲ್ಲಿ ಕೆಲವು ಸಮಾಜಘಾತುಕ ಶಕ್ತಿಗಳು ಇವುಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿ ಮಾರುವುದರಿಂದ ಸಾರ್ವಜನಿಕರಿಗೆ ಮೋಸಗೊಳಿಸಬಹುದಾಗಿದೆ. ಸೂಕ್ತವಲ್ಲದ ಬದಲಾವಣೆ/ಮಾರ್ಪಾಡುಗಳು ಗಣಕ ಯಂತ್ರಗಳ ಕಾರ್ಯನಿರ್ವಹಣೆಯಲ್ಲಿಯೂ ಸಹ ಸಮಸ್ಯೆಗಳನ್ನು ಉಂಟುಮಾಡಬಹುದಾಗಿದೆ.

ವಿಧಾನ ಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂ.2126 ಉತ್ತರಕ್ಕೆ ಅನುಬಂಧ

ಕ್ರ.ಸಂ.	ಇಲಾಖೆ	ಗಣಕೀಕರಣದ ಹಂತ	ಪ್ರಕ್ರಿಯೆ ಪ್ರಾರಂಭಿಸಿದ್ದು	ತಗಲಿರುವ ವೆಚ್ಚ ಲಕ್ಷ ರೂ.ಗಳಲ್ಲಿ	ಕನ್ಸಲ್ಟನ್ಸಿಗಳ ವಿವರ ಮತ್ತು ಸರ್ಕಾರ ನೀಡುತ್ತಿರುವ ಹಣ	ಕನ್ನಡಕ್ಕೆ ಬಳಸುತ್ತಿರುವ ತಂತ್ರಾಂಶಗಳ ವಿವರ
1	ಮೀನುಗಾರಿಕೆ ನಿರ್ದೇಶನಾಲಯ	ಪ್ರಾರಂಭಿಕ	2003–04	4.29	ಹಾರ್ಡ್‌ವೇರ್‌ಗಾಗಿ ವಿಪ್ರೊ ಸಂಸ್ಥೆಗೆ 4.29 ಲಕ್ಷ ರೂ.ಗಳನ್ನು ನೀಡಲಾಗಿದೆ.	–
2	ಗೃಹ ಮತ್ತು ಭೂ ವಿಜ್ಞಾನ ಇಲಾಖೆ	–	–	–	–	ನುಡಿ
3	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ	ಪ್ರಾರಂಭಿಕ	2001–02	41.98	ಸಾಫ್ಟ್‌ವೇರ್ ಎನ್‌ಐಸಿ ನೀಡಿದ್ದು ಯಾವುದೇ ವೆಚ್ಚ ಭರಿಸಿರುವುದಿಲ್ಲ.	–
4	ಸಮಾಜ ಕಲ್ಯಾಣ ಇಲಾಖೆ	ಪ್ರಾರಂಭಿಕ	2003	26.00	–	ಕೈರಾಲಿ ಮತ್ತು ನುಡಿ
5	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ	ಪ್ರಗತಿಯಲ್ಲಿದೆ	1997	48.78	ಸಾಫ್ಟ್‌ವೇರ್‌ಗಾಗಿ ವಿಪ್ರೋ ಇನ್ಫೋಟೆಕ್ ಸಂಸ್ಥೆಗೆ 1,85,765ರೂ.ಗಳು, ಕೃತಿಕಾಮ್ ಪ್ರೈ ಲಿ., ಸಂಸ್ಥೆಗೆ 3,04,096ರೂ.ಗಳು ಮತ್ತು ಕಿಯೋನಿಕ್ಸ್ ಲಿ., ಸಂಸ್ಥೆಗೆ 59,904 ರೂ.ಗಳು ಹೀಗೆ ಒಟ್ಟು 5,49,265ರೂ.ಗಳನ್ನು ನೀಡಲಾಗಿದೆ. ಹಾರ್ಡ್‌ವೇರ್‌ಗಾಗಿ ಹೆಚ್‌ಸಿಎಲ್ ಮತ್ತು ಹೆಚ್‌ಪಿ ಸಂಸ್ಥೆಗೆ 9,25,779 ರೂ.ಗಳು, ವಿಪ್ರೋ ಇನ್ಫೋಟೆಕ್ ಸಂಸ್ಥೆಗೆ 5,90,646ರೂ.ಗಳು, ಸೆರೆಬ್ರಾ ಸಿಸ್ಟಮ್ಸ್ ಇವರಿಗೆ 4,83,100 ರೂ.ಗಳು, ಗೊದ್ರೇಜ್ ಸಂಸ್ಥೆಗೆ 21,62,000ರೂ. ಹೀಗೆ ಒಟ್ಟು 43,29,525 ರೂ.ಗಳನ್ನು ನೀಡಲಾಗಿದೆ.	ನುಡಿ
6	ವಿಮಾ ಇಲಾಖೆ	ಪ್ರಾರಂಭಿಕ	1998	28.43	ಇರುವುದಿಲ್ಲ.	–
7	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	ಪ್ರಾರಂಭಿಕ	2000	1.90	ಸಾಫ್ಟ್‌ವೇರ್‌ಗಾಗಿ ಕನ್ನಡ ಗಣಕ ಪರಿಷತ್ತಿಗೆ 1.00 ಲಕ್ಷ ರೂ.ಗಳನ್ನು ನೀಡಲಾಗಿದೆ.	ನುಡಿ

1	2	3	4	5	6	7
8	ಪ್ರೌಢ ಶಿಕ್ಷಣ ಇಲಾಖೆ	–	–	–	ಸಿಎಂಸಿ ಸಂಸ್ಥೆಗೆ ಹಾರ್ಡ್‌ವೇರ್‌ಗಾಗಿ 3.00 ಲಕ್ಷ ರೂ.ಗಳನ್ನು ಮತ್ತು ಗಣಕಯಂತ್ರಗಳ ವಾರ್ಷಿಕ ಮೇಲ್ವಿಚಾರಣೆಗಾಗಿ 3000 ಲಕ್ಷ ರೂಗಳನ್ನು ನೀಡಲಾಗಿದೆ.	ನುಡಿ
9	ಗ್ಯಜೆಟಿಯರ್ ಇಲಾಖೆ	ಎಲ್ಲಾ ಗ್ಯಾಜೆಟಿಯರ್‌ಗಳನ್ನು ಗಣಕೀಕರಿಸಲಾಗಿದೆ	2001–01	27.04	ಇ. ಡಾಕ್ಯುಮನ್‌ರವರು 2001–02 ರಲ್ಲಿ ಕನ್ಸಲ್ಟೆನ್ಸಿ ನೀಡಿರುತ್ತಾರೆ. ವೆಬ್‌ಹಾಸ್ಟಿಂಗ್ ಮತ್ತು ಕಿಯೋಸ್ಕ್‌ಗಾಗಿ 10.470 ಲಕ್ಷ ರೂ.ಗಳನ್ನು ನೀಡಲಾಗಿದೆ.	ನುಡಿ–4
10	ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ	ಪ್ರಾರಂಭಿಕ	2003–04	10.00	ಇಲ್ಲ	–
11	ನೊಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಇಲಾಖೆ	202 ಉಪ ನೋಂದಣಿ ಕಛೇರಿಗಳ ದಸ್ತಾವೇಜುಗಳ ನೋಂದಣಿಯನ್ನು ಗಣಕೀಕರಿಸಲಾಗಿದೆ. ನೋಂದಣಿಯಾದ ದಾಖಲೆಗಳನ್ನು ದಾಖಲಿಸುವ ಕಾರ್ಯ ಮುಕ್ತಾಯ ಹಂತದಲ್ಲಿದೆ.	16.06.2003	104.43	ಸಾಫ್ಟ್‌ವೇರ್‌ಗಾಗಿ ಸಿ.ಡ್ಯಾಕ್ ಪೂನೆ ಇವರಿಗೆ 104.43 ಲಕ್ಷ ರೂ.ಗಳನ್ನು ನೀಡಲಾಗಿದೆ	–
12	ಪಶುಸಂಗೋಪನೆ ಇಲಾಖೆ	–	1997–98	27.22	ಹಾರ್ಡ್‌ವೇರ್ ಖರೀದಿಗಾಗಿ ಹೆಚ್.ಸಿ. ಎಲ್ ಮತ್ತು ಸೆರೆಬ್ರಾ ಸಂಸ್ಥೆಯವರಿಗೆ ಒಟ್ಟು 31,74,018 ರೂ.ಗಳನ್ನು ನೀಡಲಾಗಿದೆ.	ಬರಹ 20 ಮತ್ತು 60 ಹಾಗೂ ನುಡಿ
13	ಪೋಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರ ಕಛೇರಿ	ಪ್ರಾರಂಭಿಕ	–	43.27	ಹಾರ್ಡ್‌ವೇರ್‌ಗಾಗಿ 'ಇಟಿ & ಟಿ ಕಾರ್ಪೋರೇಷನ್, ಟಿಸಿಎಸ್ ಇಂಡಸ್ಟ್ರೀಸ್ ಮತ್ತು ಸೆರೆಬ್ರಾ ಇಂಟಿಗ್ರೇಟೆಡ್ ಟೆಕ್ನಾಲಜೀಸ್ ಇವರಿಗೆ 12,90,412ರೂ.ಗಳು, ಹೆಚ್.ಸಿ.ಎಲ್ ಇನ್ಫೋಸಿಸ್ಟಂ ಇವರಿಗೆ 30,37,775 ರೂಗಳು ಹೀಗೆ ಒಟ್ಟು 43,28,187 ರೂಗಳನ್ನು ನೀಡಲಾಗಿದೆ.	–

1	2	3	4	5	6	7
14	ವಾಣಿಜ್ಯ ತೆರಿಗೆ ಇಲಾಖೆ	ಪ್ರಗತಿಯಲ್ಲಿದೆ	1995–96	3785–00	ಹಾರ್ಡ್‌ವೇರ್‌ಗಾಗಿ ವಿಪ್ರೋ ಸಂಸ್ಥೆಗೆ 26.00 ಲಕ್ಷ ರೂ.ಗಳು ಹೆಚ್‌ಸಿಎಲ್ ಸಂಸ್ಥೆಗೆ 174.00 ಲಕ್ಷ ರೂ.ಗಳು ಎನ್ ಐಸಿಯವರಿಗೆ 114.00 ಲಕ್ಷ ರೂ.ಗಳು ಮತ್ತು ಸಾಫ್ಟ್‌ವೇರ್‌ಗಾಗಿ ಸಿಎಂಸಿ ಸಂಸ್ಥೆಗೆ 2800.00 ಲಕ್ಷ ರೂ.ಗಳನ್ನು ನೀಡಲಾಗಿದೆ.	–
15	ಬೆಳಗಾವಿ ಮಹಾನಗರ ಸಭೆ	ಸಂಪೂರ್ಣಗೊಂಡಿದೆ	2001	4.94	ಸಾಫ್ಟ್‌ವೇರ್‌ಮತ್ತು ಹಾರ್ಡ್‌ವೇರ್‌ಗಳಿಗಾಗಿ ಸಿ–ಡ್ಯಾಕ್ ಸಂಸ್ಥೆಗೆ 4.94 ಲಕ್ಷ ರೂ.ಗಳನ್ನು ನೀಡಲಾಗಿದೆ.	–
16	ಕೃಷಿ ಇಲಾಖೆ	ಸಂಪೂರ್ಣಗೊಂಡಿದೆ	1989	453.33	ಹಾರ್ಡ್‌ವೇರ್, ಸಾಫ್ಟ್‌ವೇರ್ ಮತ್ತು ಕನ್ಸಲ್ಟೆನ್ಸಿಗಾಗಿ ವಿವಿಧ ಸಂಸ್ಥೆಗಳಿಗೆ 453.33 ಲಕ್ಷ ರೂ.ಗಳನ್ನು ನೀಡಲಾಗಿದೆ.	ನುಡಿ
17	ಉದ್ಯೋಗ ಮತ್ತು ತರಬೇತಿ ಇಲಾಖೆ	ಸಂಪೂರ್ಣಗೊಂಡಿದೆ	2000–01	16.12	ಬಯಾನ್ ಕಂಪ್ಯೂಟರ್ಸ್ ಪ್ರೈ ಲಿ., 5000.00 ರೂ.ಗಳ ವೆಚ್ಚದಲ್ಲಿ ಸಾಫ್ಟ್‌ವೇರ್ ಖರೀದಿಸಲಾಗಿದೆ.	ನುಡಿ ಮತ್ತು ಖೈರಾಲಿ
18	ಜಲಾನಯನ ಅಭಿವೃದ್ಧಿ ಇಲಾಖೆ	ಪ್ರಗತಿಯಲ್ಲಿದೆ	2000	124.80	ಹಾರ್ಡ್‌ವೇರ್‌ಗಾಗಿ ಸಿಎಂಸಿ ಲಿ., ಇವರಿಗೆ 30,32,415.00 ರೂ.ಗಳು ವಿಪ್ರೋ ಲಿ., ಇವರಿಗೆ 31,45,945.00 ರೂ.ಗಳು, ಪಿಸಿಎಸ್ ಇಂಡಸ್ಟ್ರೀಸ್ ಇವರಿಗೆ 5,20,885.00 ರೂ.ಗಳು ಕೆಲ್ಟ್ರಾನ್ ಸಂಸ್ಥೆಯವರಿಗೆ 18,81,960.00 ರೂ.ಗಳು, ಪವರ್ ಒನ್ ಮೈಕ್ರೋ ಸಿಸ್ಟಮ್ಸ್ ಇವರಿಗೆ 2,39,772.00 ರೂ.ಗಳು, ಎಲೆಕ್ಟ್ರಾನಿಕ್ಸ್ ಡೆವಲಪ್ಮೆಂಟ್ ಪವರ್ ಸಿಸ್ಟಂ ಇವರಿಗೆ 3,25,730.00 ರೂ.ಗಳು ಮತ್ತು ಕ್ವಾಂಟಮ್ ಪವರ್ ಸಿಸ್ಟಂ ಇವರಿಗೆ 61,724.00 ರೂ.ಗಳನ್ನು ನೀಡಲಾಗಿದೆ.	ಹೈಲೀಪ್, ಬರಹ ಮತ್ತು ನುಡಿ

1	2	3	4	5	6	7
					ಸಾಫ್ಟ್‌ವೇರ್‌ಗಾಗಿ ಎ.ಎಫ್ ಫರ್ಗೂಸನ್ ಸಂಸ್ಥೆಗೆ 20.00 ಲಕ್ಷ ರೂ.ಗಳು, ರಾಮ್ ವೆಬ್ ಟೆಕ್ನಾಲಜೀಸ್ ಇವರಿಗೆ 78,768.00 ರೂ.ಗಳು, ವಿಪ್ರೋ ಲಿ., ಇವರಿಗೆ 8,69,480.00 ರೂ.ಗಳು, ಇನ್‌ಸೈಟ್ ಟೆಕ್ನಾಲಜೀಸ್ ಇವರಿಗೆ 1,88,432.00 ರೂ.ಗಳು ಮತ್ತು ಎನ್‌ಐಐಟಿ ಇವರಿಗೆ 1,35,000.00 ರೂ.ಗಳನ್ನು ನೀಡಲಾಗಿದೆ	
19	ಬೆಂಗಳೂರು ಮಹಾನಗರ ಪಾಲಿಕೆ	ಪ್ರಗತಿಯಲ್ಲಿದೆ	2001	233.05	ಇಸ್ರೋ ಹೈದರಾಬಾದ್ ಇವರಿಗೆ 24.50 ಲಕ್ಷ ರೂ.ಗಳು, ಸಿಡ್ಯಾಕ್ ಇವರಿಗೆ 90.00 ಲಕ್ಷ ರೂ. ಗಳು, ಸಿಎಂಸಿ ಸಂಸ್ಥೆ ಇವರಿಗೆ 15.80 ಲಕ್ಷ ರೂ. ಗಳು, ಹೆಚ್.ಸಿ.ಎಲ್ ಪೆರಿಫೆರಲ್ಸ್ ಇವರಿಗೆ 6.86 ಲಕ್ಷ ರೂ.ಗಳು, ರೇಡಿಯಂಟ್ ಇನ್ಫೋ ಸಿಸ್ಟಮ್ಸ್ ಪ್ರೈ ಲಿ., ಇವರಿಗೆ 6.89 ಲಕ್ಷ ರೂ.ಗಳು ಕ್ರಾಸ್ ಡೊಮೈನ್ ಇವರಿಗೆ 6.00 ಲಕ್ಷ ರೂ.ಗಳು, ಬ್ಯಾಕ್ ಎಂಡ್ ಬೆಂ., ಪ್ರೈ ಲಿ., ಇವರಿಗೆ 11.00 ಲಕ್ಷ ರೂ.ಗಳು, ಫ್ರಾಂಟಿಯರ್ ಬಿಸಿನೆಸ್ ಸಿಸ್ಟಮ್ಸ್ ಪ್ರೈ ಲಿ., ಇವರಿಗೆ 49.00 ಲಕ್ಷ ರೂ.ಗಳು, ವಿವಿಧ ಸಂಸ್ಥೆಗಳಿಗೆ 23.00 ಲಕ್ಷ ರೂ.ಗಳನ್ನು ನೀಡಲಾಗಿದೆ.	ನುಡಿ
20	ಧಾರ್ಮಿಕ ದತ್ತಿ ಇಲಾಖೆ	ಮುಗಿಯುವ ಹಂತದಲ್ಲಿದೆ	2004	5.67	ಗಣಕ ಜಾಲ ತಾಣ ಅಳವಡಿಸುವುದಕ್ಕಾಗಿ ಕಿಯೋನಿಕ್ಸ್ ಸಂಸ್ಥೆಯವರಿಗೆ 5.67 ಲಕ್ಷ ರೂ.ಗಳನ್ನು ನೀಡಲಾಗಿದೆ.	ನುಡಿ

1	2	3	4	5	6	7
21	ಪೌರಾಡಳಿತ ನಿರ್ದೇಶನಾಲಯ	ಪ್ರಗತಿಯಲ್ಲಿದೆ	2003	6.00	ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದೆ.	–
22	ಕಾರ್ಮಿಕ ಇಲಾಖೆ	ಸಂಪೂರ್ಣಗೊಂಡಿದೆ	1997	27.64	ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳಿಗಾಗಿ ಹೆಚ್‌ಸಿಎಲ್ ಸಂಸ್ಥೆ, ಹೆಚ್‌ಪಿ, ವಿಪ್ರೋ ಮತ್ತು ರೇಡಿಯಂಟ್ ಇನ್ಫೋ ಸಿಸ್ಟಂ ಸಂಸ್ಥೆಗಳಿಗೆ ಒಟ್ಟು 27,63,508 ಚಲಕ್ಷ ರೂ.ಗಳನ್ನು ನೀಡಲಾಗಿದೆ.	ನುಡಿ–3 ಮತ್ತು 4
23	ಕರ್ನಾಟಕ ನಗರ ಮೂಲಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ	ಪ್ರಗತಿಯಲ್ಲಿದೆ	1998	332.86	ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗಳಿಗಾಗಿ ಸೋಬೀಸ್ ಸಾಫ್ಟ್‌ವೇರ್ ಇಂಡಿಯಾ ಮತ್ತಿತರ ಸಂಸ್ಥೆಗಳಿಗೆ ಒಟ್ಟು 332.86 ಲಕ್ಷ ರೂ.ಗಳನ್ನು ನೀಡಲಾಗಿದೆ.	
24	ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ	ಪ್ರಾರಂಭಿಕ ಹಂತದಲ್ಲಿದೆ		7.35	ಹಾರ್ಡ್‌ವೇರ್‌ಗಳಿಗಾಗಿ 7.35ಲಕ್ಷ ರೂ.ಗಳನ್ನು ನೀಡಲಾಗಿದೆ.	ಐಎಸ್‌ಎಂ
25	ಲೋಕೋಪಯೋಗಿ ಇಲಾಖೆ	ಸಂಪೂರ್ಣಗೊಂಡಿದೆ	1997	309.00	ಹಾರ್ಡ್‌ವೇರ್‌ಗಾಗಿ ಜೆನಿತ್ ಕಂಪ್ಯೂಟರ್ಸ್ ಇವರಿಗೆ 95.00 ಲಕ್ಷ ರೂ.ಗಳು, ಟೆಕ್ಸಾರ್ ಪವರ್ ಸಲ್ಯೂಷನ್ಸ್‌ರವರಿಗೆ 47.00 ಲಕ್ಷ ರೂ.ಗಳು, ವಿಪ್ರೋ ಲಿ:, ಸಂಸ್ಥೆಯವರಿಗೆ 20.00 ಲಕ್ಷ ರೂ.ಗಳು ಮತ್ತು ತಕರಾಲ್ ಕಂಪ್ಯೂಟರ್ಸ್ ಇವರಿಗೆ 15.00 ಲಕ್ಷ ರೂ.ಗಳನ್ನು ನೀಡಲಾಗಿದೆ. ಸಾಫ್ಟ್‌ವೇರ್‌ಗಾಗಿ ಮೈಕ್ರೋಮೆನ್ ಸಿಸ್ಟಮ್ಸ್ ಇವರಿಗೆ 5.00 ಲಕ್ಷ ರೂ.ಗಳನ್ನು, ಆಪಲ್ ಸಾಫ್ಟ್ ಇವರಿಗೆ	ಸುರಭಿ ಮತ್ತು ಆಂಗ್ಲ ಆಡಳಿತ ಎಂ.ಎಸ್

1	2	3	4	5	6	7
					2.00 ಲಕ್ಷ ರೂ.ಗಳನ್ನು, ಆಪ್ಟೆಕ್ ಲಿ., ಇವರಿಗೆ 15.0 ಲಕ್ಷ ರೂ.ಗಳನ್ನು, ಸಿಎಂಸಿ ಲಿ., ಇವರಿಗೆ 5.00 ಲಕ್ಷ ರೂ.ಗಳನ್ನು, ಟಿಸಿಎಸ್ ಇವರಿಗೆ 75.00 ಲಕ್ಷ ರೂ.ಗಳನ್ನು ಮತ್ತು ಪಿಕ್ಸೆಲ್ ಇನ್ಫೋಟೆಕ್ ಇವರಿಗೆ 30.00 ಲಕ್ಷ ರೂ.ಗಳನ್ನು ನೀಡಲಾಗಿದೆ.	
26	ಅಡ್ವೊಕೇಟ್ ಜನರಲ್ ಕಛೇರಿ	ಪ್ರಗತಿಯಲ್ಲಿದೆ	2002–03	11.46	ಹಾರ್ಡ್‌ವೇರ್‌ಗಾಗಿ ಹೆಚ್‌ಸಿಎಲ್ ಇನ್ಫೋಸಿಸ್ಟಂ ಇವರಿಗೆ 10.74 ಲಕ್ಷ ರೂ.ಗಳನ್ನು ಮತ್ತು ವಾರ್ಷಿಕ ನಿರ್ವಹಣೆಗಾಗಿ 0.72 ಲಕ್ಷ ರೂ.ಗಳನ್ನು ನೀಡಲಾಗಿದೆ.	ಇಲ್ಲ
27	ವಾರ್ತಾ ಇಲಾಖೆ	ಪೂರ್ಣಗೊಂಡಿದೆ	1999	102.00	–	ನುಡಿ
28	ಸಾರ್ವಜನಿಕ ಗ್ರಂಥಾಲಯ ಇಲಾಖೆ	ಪ್ರಗತಿಯಲ್ಲಿದೆ	1998–99	128.67	ಹಾರ್ಡ್‌ವೇರ್‌ಗಾಗಿ ಹೆಚ್‌ಸಿಎಲ್ ಸಂಸ್ಥೆಗೆ 35,03,419.00 ರೂ.ಗಳು, ಕಿಯೋನಿಕ್ಸ್ ರವರಿಗೆ 36,76,821.00 ರೂ.ಗಳು, ಪಿಸಿಎಸ್ ಸಂಸ್ಥೆಯ ವರಿಗೆ 13,69,584.00 ರೂ.ಗಳು, ಇಟಿ&ಟಿರವರಿಗೆ 2,95,390.00 ರೂ.ಗಳು, ಮೆ. ಕಂಪ್ಯೂಟರ್ಸ್ ಲಿ., ಇವರಿಗೆ 91,720.00 ರೂ.ಗಳನ್ನು ನೀಡಲಾಗಿದೆ. ಡಾಟಾ ಪ್ರಿಪರೇಷನ್‌ಗಾಗಿ ವರ್ಷ ಎಂಟರ್‌ಪ್ರೈಸಸ್ ಇವರಿಗೆ 27,85,447.00 ರೂಗಳನ್ನು, ಎಂ.ಜೆ. ಎಕ್ಸೆಲ್‌ಟಿಕ್ ಇವರಿಗೆ 8,44,161.00 ರೂ.ಗಳನ್ನು ಕೆ.ಐ.ಸಿ ಮಂಡ್ಯ ಇವರಿಗೆ 1,35,683.00 ರೂ.ಗಳನ್ನು ಎಸ್‌ಎಲ್‌ಆರ್	

1	2	3	4	5	6	7
					ತುಮಕೂರು ಇವರಿಗೆ 65,000.00 ರೂ.ಗಳನ್ನು, ಮೆ.ವೀಣಾ ತುಮಕೂರು ಇವರಿಗೆ 27,800.00 ರೂ.ಗಳನ್ನು ಮತ್ತು ಸೈಬರ್ ಸಲ್ಯೂಷನ್ಸ್ ಇವರಿಗೆ 77,963.00 ರೂ.ಗಳನ್ನು ನೀಡಲಾಗಿದೆ.	
29	ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ	ಪ್ರಗತಿಯಲ್ಲಿದೆ	–	51.24	ಸಾಫ್ಟ್‌ವೇರ್‌ಗಾಗಿ ಎಕ್ಸೆಲ್ ಸಾಫ್ಟ್ ಮೈಸೂರುಕ ಇವರಿಗೆ 9.78 ಲಕ್ಷ ರೂ.ಗಳು, ಫರ್ಗೂಸನ್ ಅಂಡ್ ಕಂ., ನವ ದೆಹಲಿ ಇವರಿಗೆ 17.00 ಲಕ್ಷ ರೂ.ಗಳು, ಇನ್‌ರಿಮ್ಸ್ಟ್ ಸಂಸ್ಥೆ ಇವರಿಗೆ 14.17 ಲಕ್ಷ ರೂ.ಗಳು, ಸ್ಪಿನ್‌ಪ್ರೋ ಇವರಿಗೆ 9.95 ಲಕ್ಷ ರೂ.ಗಳು ಮತ್ತು ಇನ್ಫೋಲಿಂಕ್ ಸಂಸ್ಥೆ ಇವರಿಗೆ 0.34 ಲಕ್ಷ ರೂ.ಗಳನ್ನು ನೀಡಲಾಗಿದೆ. ಹಾರ್ಡ್‌ವೇರ್‌ಗಳಿಗಾಗಿ ವಿವಿಧ ಸಂಸೆಗಳಿಗೆ 16.09 ಲಕ್ಷ ರೂ.ಗಳನ್ನು ನೀಡಲಾಗಿದೆ.	ನುಡಿ
30	ಹುಬ್ಬಳ್ಳಿ ಮತ್ತು ಧಾರವಾಡ ನಗರ ಪಾಲಿಕೆ	ಪ್ರಗತಿಯಲ್ಲಿದೆ	2001–02	34.74	ಸಿಡ್ಯಾಕ್ ಸಂಸ್ಥೆಯವರಿಂದ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳಿಗಾಗಿ 34.74 ಲಕ್ಷ ರೂ.ಗಳನ್ನು ನೀಡಲಾಗಿದೆ.	ನುಡಿ–4
31	ಆಡಳಿತ ತರಬೇತಿ ಸಂಸ್ಥೆ	ಸಂಪೂರ್ಣವಾಗಿದೆ	–	48.65	ವಿವಿಧ ಸಂಸ್ಥೆಗಳಿಂದ ಸಾಫ್ಟ್‌ವೇರ್‌ಗಳಿಗಾಗಿ ನುಡಿ ಮತ್ತು ಬರಹ 6,42,450.00 ರೂ.ಗಳನ್ನು ಮತ್ತು ಹಾರ್ಡ್‌ವೇರ್‌ಗಾಗಿ 42,23,392.00 ರೂ.ಗಳನ್ನು ನೀಡಲಾಗಿದೆ.	

1	2	3	4	5	6	7
32	ಕಂದಾಯ ಇಲಾಖೆ(ಭೂಮಿ)	ಮುಕ್ತಾಯದ ಹಂತದಲ್ಲಿದೆ	2002	2020.00	ಸಾಫ್ಟ್‌ವೇರ್‌ಗಾಗಿ 67,26,000.00 ರೂ. ಗಳನ್ನು ಪ್ರಿಮಿಯರ್ ಕಂಪ್ಯೂಟರ್ಸ್ ಸಂಸ್ಥೆಗೆ ನೀಡಲಾಗಿದೆ. ಹಾರ್ಡ್‌ವೇರ್‌ಗಾಗಿ 11,59,35,000.00 ರೂ.ಗಳನ್ನು ವಿವಿಧ ಸಂಸ್ಥೆಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ ನೀಡಲಾಗಿದೆ. ಡಾಟಾ ಎಂಟ್ರಿ ಮಾಡಿಸುವುದಕ್ಕಾಗಿ ಜಿಲ್ಲಾಧಿಕಾರಿಗಳಿಂದ ಒಟ್ಟು 793,08,000.00 ರೂ.ಗಳನ್ನು ವಿವಿಧ ಸಂಸ್ಥೆಗಳಿಗೆ ನೀಡಲಾಗಿದೆ.	ಇಲ್ಲ
33	ಮಂಗಳೂರು ನಗರ ಪಾಲಿಕೆ	ಪ್ರಗತಿಯಲ್ಲಿದೆ	–	1.88	ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳಿಗಾಗಿ ಬೈನರಿ ಸಿಸ್ಟಮ್ಸ್ ಪ್ರೈ ಲಿ., ಮಂಗಳೂರು, ಅಲೈಡ್ ಎಲೆಕ್ಟ್ರಾನಿಕ್ಸ್ ಮಂಗಳೂರು, ಪಾರ್ಟೆಕ್ ಕಂಪ್ಯೂಟರ್ಸ್ ಮಂಗಳೂರು, ಸ್ಪ್ರಿನ್‌ಟೇಕ್ ಇ ಪೆರಿಫೆರಲ್ಸ್ ಬೆಂ., ಎನ್‌ಡೀಸ್ ಮಂಗಳೂರು, ಟೆಕ್ಸಾರ್ ಪ್ರೈ ಲಿ., ಮಂಗಳೂರು ಇವರಿಗೆ 1.88,06.00 ರೂ.ಗಳನ್ನು ನೀಡಲಾಗಿದೆ.	ಬರಹ &ನುಡಿ
34	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ	ಪ್ರಗತಿಯಲ್ಲಿದೆ	2000	3,500.00	ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗಳಿಗಾಗಿ ಟಿಸಿಎಸ್ ಲಿ., ಸಂಸ್ಥೆಯವರಿಗೆ 55.30 ಲಕ್ಷ ರೂ.ಗಳು, ಎನ್‌ಸಾಫ್ಟ್ ಸಂಸ್ಥೆಯವರಿಗೆ ಲಕ್ಷ ರೂ.ಗಳು 14.00 ಲಕ್ಷ ರೂ.ಗಳು, ರೇಡಿಯಂಟ್ ಇನ್ಫೋಸಿಸ್ಟಮ್ಸ್ ಇವರಿಗೆ 12.20 ಲಕ್ಷ ರೂ.ಗಳು, ಮತ್ತು ಕಿಯೋನಿಕ್ಸ್ ಸಂಸ್ಥೆಯವರಿಗೆ 14.00 ಲಕ್ಷ ರೂ.ಗಳನ್ನು ನೀಡಲಾಗಿದೆ.	ಲೀಪ್

1	2	3	4	5	6	7
35	ಹಿಂದುಳಿದ ವರ್ಗಗಳ ಇಲಾಖೆ	ಪೂರ್ಣಗೊಂಡಿದೆ	–	2.32	ಹಾರ್ಡ್‌ವೇರ್‌ಗಾಗಿ ಹೆಚ್‌ಪಿ ಲಿ., ಇವರಿಗೆ 74,165.00 ಸಾಫ್ಟ್‌ಏಯ್ಡ್ ಸರ್ವೀಸಸ್ ಇವರಿಗೆ 6,200.00 ರೂ.ಗಳು, ಮತ್ತು ಪಿಸಿಎಸ್ ಇಂಡಸ್ಟ್ರೀಸ್ ಇವರಿಗೆ 1,51,500.00ರೂ. ಗಳನ್ನು ನೀಡಲಾಗಿದೆ.	ನುಡಿ
36	ಅಬಕಾರಿ ಇಲಾಖೆ	ಪ್ರಗತಿಯಲ್ಲಿದೆ	1993	365.00	ಹಾರ್ಡ್‌ವೇರ್ ಮತ್ತು ಫೆಸಿಲಿಟಿ ಮ್ಯಾನೇಜ್‌ಮೆಂಟ್‌ಗಾಗಿ ಐಎಸ್‌ಎಂ ಸಿಎಂಸಿ ಸಂಸ್ಥೆಗೆ 126.00 ಲಕ್ಷ ರೂ.ಗಳನ್ನು ಮತ್ತು ಸಾಫ್ಟ್‌ವೇರ್‌ಗಾಗಿ 4.89 ಲಕ್ಷ ರೂ.ಗಳನ್ನು ನೀಡಲಾಗಿದೆ.	
37	ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ನಿರ್ದೇಶನಾಲಯ	ಸಂಪೂರ್ಣಗೊಂಡಿದೆ	2000–01	17.00	–	ನುಡಿ ಮತ್ತು ಖೈರಾಲಿ
38	ಕರ್ನಾಟಕ ಲೋಕ ಸೇವಾ ಆಯೋಗ	ಪ್ರಗತಿಯಲ್ಲಿದೆ	1984–85	42.09	ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಗಳಿಗಾಗಿ ಕ್ವೆಸ್ಟ್ ಟೆಕ್ನಾಲಜೀಸ್ ಇವರಿಗೆ 1,50,450.00 ರೂ.ಗಳು, ಸ್ಕ್ರಿನ್ ಟೆಕ್ ಸರ್ವೀಸಸ್ ಇವರಿಗೆ 4,40,350.00 ರೂ.ಗಳು, ಸಿಡ್ಯಾಕ್ ಸಂಸ್ಥೆಗೆ 11,62,656.00 ರೂ.ಗಳು, ವಿಪ್ರೋ ಲಿ., ಇವರಿಗೆ 3,03,000.00 ರೂ.ಗಳು ಹಾಗೂ ಮತ್ತಿತರ ಸಂಸ್ಥೆಗಳಿಗೆ ಸೇರಿ ಒಟ್ಟು 42,08,714 ರೂ.ಗಳನ್ನು ನೀಡಲಾಗಿದೆ.	ನುಡಿ

1	2	3	4	5	6	7
39	ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆ	ಪೂರ್ಣವಾಗಿದೆ	2001–02	9.52	ಹಾರ್ಡ್‌ವೇರ್‌ಗಳಿಗಾಗಿ ವಿಪ್ರೋ ಲಿ., ಸಂಸ್ಥೆಯವರಿಗೆ 9,51,211.00 ರೂ.ಗಳನ್ನು ನೀಡಲಾಗಿದೆ.	ನುಡಿ ಮತ್ತು ಬರಹ
40	ಸಿ. ಆ. ಸು. ಇಲಾಖೆ (ಇ–ಆಡಳಿತ)	ಪ್ರಗತಿಯಲ್ಲಿದೆ.	1997	732.78	ಸಾಫ್ಟ್‌ವೇರ್‌ಗಾಗಿ ಹೆಚ್. ಸಿ. ಎಲ್ ಕಾಮ್ನೆಟ್ ಲಿ. ಸಂಸ್ಥೆಗೆ 65,63,322 ರೂ.ಗಳನ್ನು ಮತ್ತು ವಿಪ್ರೋ ಐ ಎಸ್ ಎಂ ಸಂಸ್ಥೆಯವರಿಗೆ 190,00,000.00 ರೂ.ಗಳನ್ನು ನೀಡಲಾಗಿದೆ. ನೆಟ್‌ವರ್ಕಿಂಗ್‌ಗಾಗಿ ಹೆಚ್‌ಸಿಎಲ್ ಕಾಮ್ನೆಟ್ ಲಿ., ಇವರಿಗೆ 133,60,714.00 ರೂ.ಗಳನ್ನು ಹಾರ್ಡ್‌ವೇರ್‌ಗಾಗಿ ಕಾಂಪ್ಯಾಕ್ ಕಂಪ್ಯೂಟರ್ಸ್ ಲಿ. ಸಂಸ್ಥೆಗೆ 17,30,300.00 ರೂ.ಗಳನ್ನು, ವಿಪ್ರೋ ಸಂಸ್ಥೆಗೆ 240,53,500.00 ರೂ.ಗಳನ್ನು, ಎಸರ್ ಇಂಡಿಯಾ ಪ್ರೈ.ಲಿ., ಇವರಿಗೆ 53,28,486.00 ರೂ.ಗಳನ್ನು, ಸಾಫ್ಟ್‌ಏಯ್ಡ್ ಕಂಪ್ಯೂಟರ್ಸ್ ಇವರಿಗೆ 5,00,650.00 ರೂ.ಗಳನ್ನು, ಚಾಯ್ಸ್ ಸಲ್ಯೂಷನ್ಸ್ ಇವರಿಗೆ 2,36,000.00 ರೂ.ಗಳನ್ನು ಕ್ವಾಂಟಮ್ ಪವರ್ ಸಿಸ್ಟಂ. ಇವರಿಗೆ ನ್ಯಾಷನಲ್ ಲಿ., ಇವರಿಗೆ 61,000.00 ರೂ.ಗಳನ್ನು ನೀಡಲಾಗಿದೆ.	ನುಡಿ, ಸುರಭಿ.

1	2	3	4	5	6	7
40	ರಾಜ್ಯ ಲೆಕ್ಕ ಪತ್ರ ಇಲಾಖೆ	ಪ್ರಗತಿಯಲ್ಲಿದೆ	–	6.48	–	ನುಡಿ
41	ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ ಮೈಸೂರು	ಪೂರ್ಣಗೊಂಡಿದೆ	1996–97	8.65	ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳನ್ನು ಸರ್ಕಾರದಿಂದ ಅನುಮೋದಿಸಲ್ಪಟ್ಟ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆ.	ನುಡಿ
42	ಸಾರಿಗೆ ಇಲಾಖೆ	ಪಲ್ರಗತಿಯಲ್ಲಿದೆ	2000	613.00	–	ವೇತನ, ನುಡಿ ಮತ್ತು ಬರಹ
43	ಕರ್ನಾಟಕ ರಾಜ್ಯ ಮಹಿಳಾ ಆಯೋಗ	ಪ್ರಗತಿಯಲ್ಲಿದೆ	2001	1.46	ಹಾರ್ಡ್‌ವೇರ್‌ಗಾಗಿ ಹೆಚ್‌ಸಿಎಲ್ ಸಂಸ್ಥೆಗೆ 1,45,205.00 ರೂ.ಗಳನ್ನು ನೀಡಲಾಗಿದೆ	ನುಡಿ
44	ರೇಷ್ಮೆ ಇಲಾಖೆ	ಪ್ರಗತಿಯಲ್ಲಿದೆ	–	16.15	ಹಾರ್ಡ್‌ವೇರ್‌ಗಾಗಿ ಐಸಿಎಂ ಬೆಂ., ಸಂಸ್ಥೆಯವರಿಗೆ 99,989.00 ರೂ.ಗಳು, ಕಿಯೋನಿಕ್ಸ್ ಸಂಸ್ಥೆಗೆ 2,20,460.00 ರೂ.ಗಳು, ಹೆಚ್‌ಸಿಎಲ್ ಸಂಸ್ಥೆಗೆ 99,625.00 ರೂ.ಗಳು, ಎಲೆಕ್ಟ್ರಾನಿಕ್ಸ್ ಟ್ರೇಡ್ ಅಂಡ್ ಟೆಕ್ನಾಲಜಿ ಡೆವಲಪ್ಮೆಂಟ್ ಕಾರ್ಪೋರೇಷನ್ ಇವರಿಗೆ 1,50,000.00 ರೂಗಳು, ಜೆನಿತ್ ಕಂಪ್ಯೂಟರ್ಸ್ ಇವರಿಗೆ 1,67,462.00 ರೂ.ಗಳು, ಭಾರತ್ ಎಲೆಕ್ಟ್ರಾನಿಕ್ಸ್ ಇವರಿಗೆ 1,35,320.00 ರೂ.ಗಳು, ಎಸಿಸಿಇಎಲ್ ಐಸಿಎಂ ಇವರಿಗೆ 1,35,000.00 ರೂ.ಗಳು, ಸನ್‌ರೈಸ್ ಕಂಪ್ಯೂಟರ್ಸ್ ಅಂಡ್ ನೆಟ್‌ವರ್ಕ್ಸ್ ಇವರಿಗೆ 97,200.00 ರೂ.ಗಳು ಹಾಗೂ ಇತರ ಹಲವಾರು ಸಂಸ್ಥೆಗಳಿಗೆ ಸೇರಿ 15,50,194.00	ನುಡಿ

1	2	3	4	5	6	7
					ರೂ.ಗಳನ್ನು ನೀಡಲಾಗಿದೆ ಮತ್ತು ಕನ್ಸಲ್ಟೆನ್ಸಿಗಾಗಿ ಎಸಿಇಎಸ್ ಕನ್ಸಲ್ಟೆನ್ಸಿಗೆ 12,000.00 ರೂ.ಗಳು ಸಾಫ್ಟ್‌ವೇರ್ ರಿಸರ್ಚ್ ಗ್ರೂಪ್ ಇವರಿಗೆ 5,000.00 ರ.ಗಳು ಮತ್ತು ಟ್ಯಾಲಿ ಸಲ್ಯೂಷನ್ಸ್ ಸಂಸ್ಥೆಗೆ 46,800.00 ರೂಗಳನ್ನು ನೀಡಲಾಗಿದೆ.	
45	ಮೈಸೂರು ಮಹಾನಗರ ಪಾಲಿಕೆ	ಪ್ರಗತಿಯಲ್ಲಿದೆ	1997	3.00	ಹಾರ್ಡ್‌ವೇರ್‌ಗಳಿಗಾಗಿ 2,79,500.00ರೂ.ಗಳನ್ನು ನೀಡಲಾಗಿದೆ.	–
46	ತೋಟಗಾರಿಕೆ ಇಲಾಖೆ	ಪ್ರಗತಿಯಲ್ಲಿದೆ	1998–99	91.84	ಹಾರ್ಡ್‌ವೇರ್ ಉಪಕರಣಗಳನ್ನು ಹಲವಾರು ಸಂಸ್ಥೆಗಳಿಂದ ಖರೀದಿಸಲಾಗಿದ್ದು, ಸಾಫ್ಟ್‌ವೇರ್ ಮತ್ತು ಕನ್ಸಲ್ಟೆನ್ಸಿ ಮುಂತಾದವುಗಳನ್ನು ಸರ್ಕಾರ ಅನುಮೋದಿಸಿರುವ ಸಂಸ್ಥೆಗಳಿಂದ, ಎನ್‌ಐಸಿ ಮತ್ತು ಇಸ್ರೋ ಇವರಿಂದ ಪಡೆಯಲಾಗುತ್ತಿದೆ.	ನುಡಿ
47	ಗೃಹ ರಕ್ಷಕ ದಳ, ಪೌರ ರಕ್ಷಣೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ನಿರ್ದೇಶನಾಲಯ	ಪ್ರಾರಂಭಿಕ ಹಂತದಲ್ಲಿದೆ	2004–05	0.98	–	ನುಡಿ
48	ಭಾಷಾಂತರ ನಿರ್ದೇಶನಾಲಯ	ಪ್ರಗತಿಯಲ್ಲಿದೆ	2001	13.10	ವಿಎಕ್ಸ್‌ಎಲ್ ಸಂಸ್ಥೆಯಿಂದ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಾಗಿ 13,09,805.00 ರೂ.ಗಳನ್ನು ನೀಡಲಾಗಿದೆ.	ಆಕೃತಿ ಮತ್ತು ಕನ್ನಡ ಪದ್ಮ
49	ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ	ಪೂರ್ಣಗೊಂಡಿದೆ	1998	17.75	ಹಾರ್ಡ್‌ವೇರ್‌ಗಾಗಿ ಜೆನಿತ್ ಕಂಪ್ಯೂಟರ್ಸ್ ಇವರಿಗೆ 2,35,014.00 ರೂ.ಗಳು, ಬೈನರಿ ಸಿಸ್ಟಮ್ಸ್ ಇವರಿಗೆ 9,03,416.00 ರೂ.ಗಳು,	ಸುರಭಿ

1	2	3	4	5	6	7
			-		ಟ್ರೆಷರ್ ಪವರ್ ಸಲ್ಯೂಷನ್ಸ್ ಇವರಿಗೆ 5,20,000.00 ರೂ ಗಳು, ಆಪ್ಟೆಕ್ ಕಂಪ್ಯೂಟರ್ಸ್ ಇವರಿಗೆ 30,000.00 ರೂ.ಗಳು ಹಾಗೂ ಮತ್ತಿತರಿಗೆ ಸೇರಿ ಒಟ್ಟು 17,70,430.00 ರೂ.ಗಳನ್ನು ನೀಡಲಾಗಿದೆ.	
50	ಸಹಕಾರ ಸಂಘಗಳ ಇಲಾಖೆ	ಪ್ರಗತಿಯಲ್ಲಿದೆ	1995	37.26	–	ನುಡಿ
51	ಅರಣ್ಯ ಇಲಾಖೆ	ಪ್ರಗತಿಯಲ್ಲಿದೆ	1997–98	577.96	ಗಣಕೀಕರಣಕ್ಕಾಗಿ ರಾಜ್ಯ ವಲಯ ಯೋಜನೆ ಯಡಿಯಲ್ಲಿ 9,43,000.00 ರೂ.ಗಳನ್ನು ನೀಡಲಾಗಿದೆ.ಇತರ ಕಛೇರಿಗಳಲ್ಲಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಾಗಿ ಪಿಸಿಎಸ್ ಲಿ., ಇವರಿಗೆ 100,80,400.00 ರೂ.ಗಳನ್ನು, ಹೆಚ್ ಸಿ ಎಲ್ ಸಂಸ್ಥೆಗೆ 24,34,040.00 ರೂ.ಗಳು, ಸೆರೆಬ್ರಾ ಕಂಪೆನಿಗೆ 45,63,150.00 ರೂ.ಗಳು, ಕಿಯೋನಿಕ್ಸ್ ಸಂಸ್ಥೆಗೆ 14,63,251.00 ರೂ.ಗಳು, ವಿಪ್ರೋ ಇನ್ಫೋಟೆಕ್ ಸಂಸ್ಥೆಗೆ 304,53,002.00 ರೂ.ಗಳು ಸ್ವಿಚಿಂಗ್ ಪ್ರೈ ಲಿ. ಇವರಿಗೆ 2,08,390.00 ರೂ.ಗಳು, ನ್ಯೂಮರಿಕ್ ಪ್ರೈ.ಲಿ., ಇವರಿಗೆ 1,13,850.00 ರೂ.ಗಳು, ಟೋಟಲ್ ಪವರ್ ಕಂಡೀಷನರ್ ಇವರಿಗೆ 83,200.00 ರೂ.ಗಳು, ಫ್ರೇಮ್‌ಟೆಕ್ ಅಕ್ಯುಮಲೇಟರ್	ಸುರಭಿ, ನುಡಿ, ಬರಹ ಮತ್ತು ಶ್ರೀಲಿಪಿ

1	2	3	4	5	6	7
					ಇವರಿಗೆ 56,700.00 ರೂ.ಗಳು, ಟಕ್ಸಾರ್ ಪ್ರೈ ಲಿ., ಇವರಿಗೆ 56,15,620.00 ರೂ.ಗಳು, ಪ್ಲಸ್ ಬಿಜಿನೆಸ್ ಪ್ರೈ ಲಿ., ಇವರಿಗೆ 7,49,000.00 ರೂ.ಗಳು, ಮತ್ತು ಸಿಎಂಸಿ ಪ್ರೈ ಲಿ., ಇವರಿಗೆ 10,50,000.00 ರೂ.ಗಳನ್ನು ನೀಡಲಾಗಿದೆ.	
52	ಬಂಡವಾಳಹಿಂತೆಗೆಯುವಿಕೆ ಮತ್ತು ರಾಜ್ಯ ಸಾರ್ವಜನಿಕ ಉದ್ದಿಮೆಗಳ ಸುಧಾರಣಾ ಇಲಾಖೆ ,	ಪ್ರಗತಿಯಲ್ಲಿದೆ	1999–2000	6.05	–	ನುಡಿ
53	ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ	ಪೂರ್ಣಗೊಂಡಿದೆ	1997–98	16.68	–	ನುಡಿ
54	ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ	ಪೂರ್ಣಗೊಂಡಿದೆ	2000	93.53	–	ನುಡಿ
55	ಖಜಾನೆ ನಿರ್ದೇಶನಾಲಯ	ಪೂರ್ಣಗೊಂಡಿದೆ	2001	3105.05	ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳಿಗಾಗಿ ಸಿಎಂಸಿ ಲಿ., ಬೆಂ., ಇವರಿಗೆ 17.62.00 ಲಕ್ಷ ರೂ.ಗಳನ್ನು ಮತ್ತು ಎಸ್‌ಟಿಪಿಐ, ಬೆಂ., ಇವರಿಗೆ 1343.00 ಲಕ್ಷ ರೂ.ಗಳನ್ನು ನೀಡಲಾಗಿದೆ.	–
56	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	–	–	530.77	ಎನ್‌ಸಾಫ್ಟ್ ಸಂಸ್ಥೆಗೆ 29,18,000.00 ರೂ.ಗಳು, ಕಂಪ್ಯೂಟರ್ಸ್ ಆನ್ ಲಿ., ಸಂಸ್ಥೆಗೆ 228,09,000.00 ರೂ.ಗಳನ್ನು ನೀಡಲಾಗಿದೆ.	

1	2	3	4	5	6	7
57	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ	–	–	3.84	ಹಾರ್ಡ್‌ವೇರ್‌ಗಾಗಿ 3,64,906.00 ರೂ.ಗಳನ್ನು ಮತ್ತು ಸಾಫ್ಟ್‌ವೇರ್‌ಗಾಗಿ 18,500.00 ರೂ.ಗಳನ್ನು ನೀಡಲಾಗಿದೆ.	ನುಡಿ ಮತ್ತು ಐಎಸ್‌ಎಂ
58	ಕರ್ನಾಟಕ ಉಚ್ಚ ನ್ಯಾಯಾಲಯ	ಮುಕ್ತಾಯದ ಹಂತದಲ್ಲಿದೆ	1993	16.50	ಉಚ್ಚ ನ್ಯಾಯಾಲಯಕ್ಕಾಗಿ ಮತ್ತು ಅಧೀನ ನ್ಯಾಯಾಲಯಗಳಿಗಾಗಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಾಗಿ ವಿಪ್ರೋ ಇನ್ಫೋಟೆಕ್, ಐಬಿಎಂ, ಸೆರೆಬ್ರಾ ಇಂಟಿಗ್ರೇಟೆಡ್ ಟೆಕ್ನಾಲಜೀಸ್, ವಿಎಕ್ಸ್‌ಎಲ್ ಇನ್‌ಸ್ಟ್ರುಮೆಂಟ್ಸ್ ಲಿ., ಮತ್ತು ಸಿಎಂಸಿ ಲಿ.,ರವರಿಗೆ ಒಟ್ಟು 1550.00 ಲಕ್ಷ ರೂ.ಗಳನ್ನು ನೀಡಲಾಗಿದೆ.	ಸುರಭಿ
59	ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ	–	–	–	ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳಿಗಾಗಿ ಹೆಚ್‌ಸಿಎಲ್‌ರವರಿಗೆ 82,710.00 ರೂ.ಗಳನ್ನು, ವಿಪ್ರೋ ಸಂಸ್ಥೆಯವರಿಗೆ 89,000.00 ರೂ.ಗಳನ್ನು ಮತ್ತು ಸೆರೆಬ್ರಾ ಸಂಸ್ಥೆಯವರಿಗೆ 89,000.00 ರೂ.ಗಳನ್ನು ಹೀಗೆ ಒಟ್ಟು 2,60.710.00 ರೂ.ಗಳನ್ನು ನೀಡಲಾಗಿದೆ.	ಸುರಭಿ ಮತ್ತು ಶ್ರೀಲಿಪಿ
60	ಗುಲ್ಬರ್ಗಾ ಮಹಾನಗರ ಪಾಲಿಕೆ	ಸಂಪೂರ್ಣಗೊಂಡಿದೆ	2002	–	–	ಲಿಪಿ
61	ಕಾಲೇಜು ಶಿಕ್ಷಣ ನಿರ್ದೇಶನಾಲಯ	ಪ್ರಗತಿಯಲ್ಲಿದೆ	2003–04	25.92	ಹಾರ್ಡ್‌ವೇರ್ ಮತ್ತು ನೆಟ್‌ವರ್ಕ್‌ಗಳಿಗಾಗಿ ಸೆರೆಬ್ರಾ ಇಂಟಿಗ್ರೇಟೆಡ್ ಟೆಕ್ನಾಲಜೀಸ್ ಲಿ., ಇವರಿಗೆ 14,78,200.00 ರೂ.ಗಳನ್ನು ಮತ್ತು ಹೆಚ್‌ಸಿಎಲ್ ಸಂಸ್ಥೆಯವರಿಗೆ 11,13,100.00 ರೂ.ಗಳನ್ನು ನೀಡಲಾಗಿದೆ.	ನುಡಿ

1	2	3	4	5	6	7
62	ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶನಾಲಯ	ಪ್ರಗತಿಯಲ್ಲಿದೆ	2001	71.19	ಸಾಫ್ಟ್‌ವೇರ್‌ಗಾಗಿ ಇಂಡೆಸ್ ವ್ಯಾಲಿ ಸಂಸ್ಥೆಗೆ 7.35 ಲಕ್ಷ ರೂ.ಗಳು, ಇಟಿ&ಟಿ ಸಂಸ್ಥೆಗೆ 13.79 ಲಕ್ಷ ರೂ.ಗಳು, ಎಸ್‌ಆರ್‌ಜಿ ಸಂಸ್ಥೆಗೆ 1.05 ಲಕ್ಷ ರೂ.ಗಳನ್ನು ನೀಡಲಾಗಿದೆ. ಹಾರ್ಡ್‌ವೇರ್‌ಗಾಗಿ ಹೆಚ್‌ಸಿಎಲ್ ಇನ್ಫೋಸಿಸ್ಟಮ್ಸ್ ಇವರಿಗೆ 13.91 ಲಕ್ಷ ರೂ.ಗಳು, ಪಿಸಿಎಸ್ ಇಂಡಸ್ಟ್ರೀಸ್ ಇವರಿಗೆ 21.66 ಲಕ್ಷ ರೂ.ಗಳು, ಟೆಕ್ಸಾರ್ ಪವರ್ ಸಲ್ಯೂಷನ್ಸ್ ಇವರಿಗೆ 2.73 ಲಕ್ಷ ರೂ.ಗಳು, ಬೆನ್‌ಸನ್ ಪವರ್ ಅಂಡ್ ಕಂಟ್ರೋಲ್ಸ್ ಇವರಿಗೆ 1.42 ಲಕ್ಷ ರೂ.ಗಳು, ಪ್ರೋಲೈನ್ ಪವರ್ ಸಿಸ್ಟಮ್ಸ್ ಇವರಿಗೆ 1.42 ಲಕ್ಷ ರೂ.ಗಳು, ಎಂ ಎಕ್ಸ್ ಸಾಫ್ಟ್‌ವೇರ್ ಸರ್ವೀಸಸ್ ಇವರಿಗೆ 0.20 ಲಕ್ಷ ರೂ.ಗಳು, ಕ್ರಾಂಪ್ಟನ್ ಗ್ರೀವ್ಸ್ ಇವರಿಗೆ 3.20 ಲಕ್ಷ ರೂ.ಗಳು ಮತ್ತು ಇನ್ಫೋಟೆಕ್ ಎಕ್ಸ್‌ಪ್ಲೋರರ್ ಇಂಡಿಯಾ ಪ್ರೈ ಲಿ., ಇವರಿಗೆ 0.53 ಲಕ್ಷ ರೂ.ಗಳನ್ನು ನೀಡಲಾಗಿದೆ.	–
			ಒಟ್ಟು		**17993.61**	

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಬಹಳ ವಿಸ್ತೃತವಾಗಿದೆ, ಹಾಗಾಗಿ ಇದರಲ್ಲಿ ಮೂರು ಭಾಗಗಳಿವೆ, ಮೊದಲನೆಯದಾಗಿ ಎಲ್ಲಾ ಇಲಾಖೆಗಳಿಗೆ ಗಣಕೀಕರಣ ಮಾಡುವಂತಹದು, ಎರಡನೆಯದಾಗಿ ಸಾಫ್ಟ್‌ವೇರ್ ಕನ್ಸಲ್‌ಟೆನ್ಸಿ ಕೊಟ್ಟಿರುವಂತಹ ಕಂಪನಿಗಳು ಮಾಡುತ್ತಿರುವ ವಿಷಯ, ಮೂರನೆಯದಾಗಿ ಕನ್ನಡ ಸಾಫ್ಟ್‌ವೇರ್ ಏನಿದೆ ಇದು ಒಂದು ಫೇಲ್ಯೂರ್ ಸಾಫ್ಟ್‌ವೇರ್ ಎಂದು ಮಾಡಲು ಪ್ರಯತ್ನಿಸುತ್ತಿರುವ ವಿಷಯ. ಹಾಗಾಗಿ ಈ ಉಪ ಪ್ರಶ್ನೆಗಳಲ್ಲಿ ಒಂದೆರಡು ಅವಕಾಶ ಜಾಸ್ತಿ ಕೊಡಬೇಕಾಗಿ ಪ್ರಾರಂಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಟ್ಟು 62 ಇಲಾಖೆಗಳಲ್ಲಿ ಈಗಾಗಲೇ ಗಣಕೀಕರಣ ಮಾಡುವಂತಹ ಪ್ರಕ್ರಿಯೆ ಪ್ರಾರಂಭವಾಗಿದೆ; ಆದರೆ 15 ಮಾತ್ರ ಈವರೆಗೆ ಮುಗಿದಿದೆ, ನಾನು ಮುಖ್ಯಮಂತ್ರಿಗಳಲ್ಲಿ ಕೇಳಬಯಸುವುದೇನೆಂದರೆ, 1984–85 ಇಸವಿಯಲ್ಲಿ ಲೋಕಸೇವಾ ಆಯೋಗದವರು ಶುರು ಮಾಡಿದರು. ಅದು ಇನ್ನೂ ಮುಗಿದಿಲ್ಲ, 1993 ರಲ್ಲಿ ಅಬಕಾರಿ ಇಲಾಖೆಯವರು ಶುರು ಮಾಡಿದರು, ಅದು ಮುಗಿದಿಲ್ಲ, 1995–96 ರಲ್ಲಿ ವಾಣಿಜ್ಯ ತೆರಿಗೆ ಇಲಾಖೆಯವರು ಆರಂಭಿಸಿದ್ದರೂ ಅದು ಇನ್ನೂ ಮುಗಿದಿಲ್ಲ, 1997–98ರಲ್ಲಿ ಅರಣ್ಯ ಇಲಾಖೆಯವರು ಆರಂಭಿಸಿದ್ದರೂ ಅದು ಇನ್ನು ಮುಗಿದಿಲ್ಲ. ಅವರು ಗಣಕೀಕರಣ ಮಾಡುವಂತಹ ಪ್ರಕ್ರಿಯೆಯನ್ನು ಯಾವಾಗ ಮುಗಿಸುತ್ತಾರೆ? ಹಾಗೆ ಯಾವಾಗ ಮುಗಿಸಬೇಕೆನ್ನುವುದಕ್ಕೆ ಆ ಇಲಾಖೆಗಳು ಯಾವ ಕಾಲಮಿತಿಯನ್ನು ಹಾಕಿಕೊಂಡಿದ್ದಾರೆ ಎಂದು ತಿಳಿಸಬೇಕು ಮತ್ತು ವಿಳಂಬವಾಗುತ್ತಿರುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಬಹಳ ವಿಳಂಬವಾಗಿದೆ, ಈ ರೀತಿಯ ಗಣಕೀಕರಣ ಪ್ರಕ್ರಿಯೆ ವಿಳಂಬದಿಂದಾಗಿ ಕೆಲಸಗಳಲ್ಲಿ ಕೆಲವು ತೊಂದರೆಯಾಗಿದೆ. ಹಾಗಾಗಿ ಯಾವ ಕಾಲಮಿತಿಯೊಳಗೆ ಈ ಇಲಾಖೆಗಳು ಕೆಲಸವನ್ನು ಪೂರ್ಣಗೊಳಿಸುತ್ತವೆ ಹಾಗೂ ಇನ್ನು ಯಾವ್ಯಾವ ಇಲಾಖೆ ಗಣಕೀಕರಣ ಪ್ರಕ್ರಿಯೆ ಪ್ರಾರಂಭಿಸಿಲ್ಲ? ಅವರು ಯಾವಾಗ ಈ ಗಣಕೀಕರಣ ಪ್ರಕ್ರಿಯೆ ಪ್ರಾರಂಭಿಸುತ್ತಾರೆಂದು ತಾವು ಹೇಳಬೇಕು.

ಶ್ರೀ ಧರಂಸಿಂಗ್: ಇದು ಬಹಳ ಮಹತ್ವವಾದಂಥ ಪ್ರಶ್ನೆ. ಈಗಾಗಲೇ 62 ಇಲಾಖೆಗಳಲ್ಲಿ ಈ ತರಹ ಕೆಲಸವಾಗಿದೆ. ಅಬಕಾರಿ ಮತ್ತು ಬೇರೆ ಬೇರೆ ಇಲಾಖೆಗಳಲ್ಲಿ ಈ ಕೆಲಸ ಆಗಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈಗಾಗಲೇ ಭೂಮಿ ಕಾರ್ಯಕ್ರಮ ಲ್ಯಾಂಡ್ ರೆಕಾರ್ಡ್ ಮತ್ತು ರೈಟ್ಸ್ ಕಂದಾಯ ಇಲಾಖೆಯಲ್ಲಿ ಆಗುತ್ತಿದೆ. ಕಾವೇರಿಯಲ್ಲಿಯೂ ಕೂಡ ಪ್ರಾರಂಭ ಮಾಡಿದ್ದೇವೆ. ರಿಜಿಸ್ಟ್ರೇಷನ್ ಮಾಡತಕ್ಕಂತಹ ರೀತಿಯಲ್ಲಿ ಇಮ್ಮೀಡಿಯೇಟ್ ಆಗಿ ಸಿಗುವಂಥದು. ನುಡಿ ಎಂದು ಹೇಳಿ ಕನ್ನಡ ಲಿಪಿ ತಂತ್ರಾಂಶಗಳ ಟೆಕ್ನಾಲಜಿ ಅಭಿವೃದ್ಧಿ ಪಡಿಸಲಾಗಿದೆ. ಈ ಲಿಪಿ ಉಚಿತವಾಗಿ ಲಭ್ಯವಿದೆ. ಇದನ್ನು ಮಾಡತಕ್ಕಂತಹ ಕಾಲದಲ್ಲಿ ಸ್ವಲ್ಪ ನಿಧಾನವಾಗಿದೆಯೆಂಬ ಮಾತು ಇದೆ. ಕರ್ನಾಟಕದಲ್ಲಿ ಕನ್ನಡದಲ್ಲೇ ಇದನ್ನು ಮಾಡಬೇಕೆಂದು ಇ–ಗವರ್ನನ್ಸ್ ಪ್ರಾಜೆಕ್ಟ್ ಏನಿದೆ, ಟೆಕ್ನಾಲಜಿ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ವರೆಗೂ ಅಳವಡಿಸಬೇಕೆಂದು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಪ್ರಕ್ರಿಯೆ ಸರಿಯಾದ ಮಟ್ಟದಲ್ಲಿ ಆಗುತ್ತಿಲ್ಲ, ಅದನ್ನು ಸರಿಪಡಿಸಬೇಕೆಂದು ಹೇಳಿದರು, ಹಾಗಾಗಿ ಇದನ್ನು ಸರಿಯಾದ ರೀತಿಯಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತಹ ರೀತಿಯಲ್ಲಿ ಇದರ ಏನು ಕನ್ಸೆಪ್ಟ್ ಏನಿದೆ, ಫಿಲಾಸಫಿ ಏನಿದೆ, ನಿಜವಾದ ರೀತಿಯಲ್ಲಿ ಅದನ್ನು ಅನುಷ್ಠಾನಗೊಳಿಸಲು ಸರ್ಕಾರ ಪೂರ್ಣವಾದ ಕ್ರಮ ಕೈಗೊಳ್ಳುತ್ತದೆಂದು ಭರವಸೆಯನ್ನು ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : 2000 ನೇ ಇಸವಿಯಲ್ಲಿ ನುಡಿ ಪ್ರಾರಂಭವಾಯಿತು, ಈ ಕನ್ನಡ ತಂತ್ರಾಂಶ ಏನಿದೆ ಇದು ಫೇಲ್ಯೂರ್ ಆಯಿತು ಎಂದು ಮಾಡುವುದಕ್ಕಿಂತ ಕೆಲವು ಕಂಪೆನಿಗಳು ಸರ್ಕಾರದಲ್ಲಿ ಒಳಹೊಕ್ಕು ಫೇಲ್ಯೂರ್ ಆಗುತ್ತಿದೆ ಎಂದು ಪ್ರಚಾರ ಪಡಿಸುತ್ತಿದ್ದಾರೆ. ಈ ಸಾಫ್ಟ್‌ವೇರ್ ಡೆವಲಪ್ ಮಾಡಿರುವ ಸುರಭಿ, ಬರಹ, ಶ್ರೀ ಲಿಪಿ ಕೈರಾಲಿಯವರು ಇರಬಹುದು. ಇವರೆಲ್ಲಾ ಏನು ಮಾಡುತ್ತಾರೆಂದರೆ ಒಂದು ಸಾಫ್ಟ್‌ವೇರ್‌ಗೆ ನಮ್ಮಲ್ಲಿ 5.00 ಲಕ್ಷ ರೂಪಾಯಿಗಳಷ್ಟು ದುಡ್ಡು ತೆಗೆದುಕೊಳ್ಳುತ್ತಾರೆ. ಮತ್ತೊಂದು ಇಲಾಖೆಗೆ ಅದೇ ಸಾಫ್ಟ್‌ವೇರ್‌ಗೆ ಮತ್ತು 5.00 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ, ಫ್ಲಾಪಿಗೆ ಮಾತ್ರ ದುಡ್ಡು-ಖರ್ಚಾಗುವುದು. ಆದರೆ ಸರ್ಕಾರವನ್ನು ಮೋಸಗೊಳಿಸುವಂತಹ ಪ್ರಯತ್ನಗಳು ಕೆಲವು ಹಿತಾಶಕ್ತಿಗಳು ಈ ಕ್ಷೇತ್ರದಲ್ಲಿರುವುದು ಗಮನದಲ್ಲಿದೆ. ಈಗ ಗಣಕ ಪರಿಷತ್ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ ಅದಕ್ಕೆ ಮಹತ್ವ ಕೊಡದೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ, ನಾನು ಆ ವಿಷಯಕ್ಕೆ ಹೋಗುವುದಿಲ್ಲ. ಆದರೆ ಈಗಾಗಲೇ ಸಾಫ್ಟ್‌ವೇರ್ ಡೆವಲಪ್‌ಗೆಂದು ಬೇರೆ ಬೇರೆ ಕಂಪೆನಿಗಳಿಗೆ ಈಗಾಗಲೇ ಕೊಟ್ಟಿದ್ದೀರಿ ಅವರು ಕನ್ನಡ ಸಾಫ್ಟ್‌ವೇರ್ ಫೇಲ್ಯೂರ್ ಎಂದು ಮಾಡುತ್ತಿದ್ದಾರೆ. ನುಡಿ ಲಿಪಿಯಲ್ಲಿ ಟೈಪ್ ಮಾಡಿದರೆ ಕನ್ನಡ ಅಕ್ಷರ ಬರುತ್ತದೆ, ಅಷ್ಟಕ್ಕೆ ಸೀಮಿತವಾಗಿಲ್ಲ, ಈಗ ವಿಜ್ಞಾನ ಬಹಳ ಮುಂದುವರೆದಿದೆ. ಈಗ ಅಪ್ಲಿಕೇಷನ್ ಸಾಫ್ಟ್‌ವೇರ್ಸ್ ಇದೆ, ಅಥವಾ ಮಲ್ಟಿಮೀಡಿಯಾ ಸಾಫ್ಟ್‌ವೇರ್ ಡೆವಲಪ್ ಮಾಡಬೇಕು, ಕನ್ನಡದಲ್ಲಿ ಇದು ಸಾಧ್ಯವಿದೆ. ಆದರೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ಈ ಅಪ್ಲಿಕೇಷನ್ ಸಾಫ್ಟ್‌ವೇರ್ ಆಗಲಿ ಮಲ್ಟಿ ಮೀಡಿಯಾ ಸಾಫ್ಟ್‌ವೇರ್ ಆಗಲಿ ಅದು ಕನ್ನಡದಲ್ಲೂ ಮಾಡಲಿಕ್ಕೆ ಅವಕಾಶ ಇದೆ ಇಲ್ಲಿ ಏನು ಮಾಡಿದ್ದಾರೆಂದರೆ ಟೈಪ್ ಮಾಡಿದರೆ ಕನ್ನಡ ಅಕ್ಷರ ಬರುತ್ತದೆ, ಅಷ್ಟಕ್ಕೆ ಸೀಮಿತ ಮಾಡುತ್ತಿದ್ದಾರೆ. ಹಾಗಾಗಿ ಇಲ್ಲಿ ಅನೇಕ ಇಲಾಖೆಗಳ, ಕಂಪನಿಗಳ ಸ್ವಹಿತಾಸಕ್ತಿ ಇದೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ ಕನ್ನಡ ಸಾಫ್ಟ್‌ವೇರ್ ಕೂಡ ಒಂದು ಸಕ್ಸೆಸ್‌ಫುಲ್ ಸಾಫ್ಟ್‌ವೇರ್ ಆಗುವ ಸಾಧ್ಯತೆಯಿದೆ. ಗಣಕ ಪರಿಷತ್ತಿನಲ್ಲಿ ಸಹ ಅನೇಕ ತಜ್ಞರು ಇದ್ದಾರೆ. ಅವರ ಸೇವೆಯನ್ನು ಸದ್ಬಳಕೆ ಮಾಡಿಕೊಂಡು ಈ ಕನ್ನಡ ತಂತ್ರಾಂಶಕ್ಕೆ ಮಹತ್ವವನ್ನು ಕೊಡಬೇಕೆನ್ನುವ ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎನ್.ಯೋಗಿಶ್‌ಭಟ್ : ಈ ನುಡಿ ಸಾಫ್ಟವೇರ್‌ಗೆ ಸಂಬಂಧಿಸಿದಂತೆ ಗಣಕ ಪರಿಷತ್ತಿನ ಸಂಶೋಧನೆ, ಅಥವಾ ಅವರಿಗೆ ಸಂಬಂಧಪಟ್ಟವರು ಮಾಡಿರುವಂತಹ ಹಿನ್ನೆಲೆಯಲ್ಲಿ 30.00 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ, ವಿಷಯ ಸಮಿತಿಯಲ್ಲಿ ಚರ್ಚೆಗೆ ಬಂದಿತ್ತು. ಇದನ್ನು ಡೆವಲಪ್ ಮಾಡಿದವರು ಎಸ್.ಆರ್.ಜೆ. ಮತ್ತು ನನಗೆ ಸಿಕ್ಕಿದ ಮಾಹಿತಿ ಪ್ರಕಾರ ಫಾಂಟ್ಸನ್ನು ಮಾಡುತ್ತೇವೆ. ಆಕೃತಿ ಎಂಬ ಸಂಸ್ಥೆಗಳು ಆ ಸಂಸ್ಥೆಗಳ ಕಡೆಯಿಂದ ಮಾಹಿತಿಯನ್ನು ಸಂಗ್ರಹ ಮಾಡಿ, ಕೋ ಆರ್ಡಿನೇಟ್ ಮಾಡುತ್ತೇವೆಂದು ಹೇಳುವ ನಿಟ್ಟಿನಲ್ಲಿ, ಅದನ್ನು ತೆಗೆದುಕೊಂಡು ಕೊನೆಗೆ, ಆ ಫಾಂಟ್ಸನ್ನು ಕದ್ದು ಇಲ್ಲಿ ಡೆಲವಲಪ್ ಆಗಿದೆ ಎನ್ನುವಂಥ ಆರೋಪ ಇದೆ. ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕೆಂದು ವಿಷಯ ಸಮಿತಿಯಲ್ಲಿ ಶಿಫಾರಸ್ ಆಗಿದೆ. ಆದರೆ, ಇದುವರೆಗೆ ಏನೂ ಆಗಿಲ್ಲ. 30 ಲಕ್ಷ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ. ಗಣಕ ಪರಿಷತ್ತಿನಿಂದ 8 ಲಕ್ಷ ರೂ ಮಾತ್ರ ಕೊಟ್ಟಿರುವಂಥಾದ್ದು. , ಇಲ್ಲಿ ಉಲ್ಲೇಖವಾಗಿರುವಂಥಾದ್ದು ಕನ್ನಡ ಸಂಸ್ಕೃತಿ ಇಲಾಖೆಯಿಂದ ಒಂದು ಲಕ್ಷ ರೂ ಎಂಬುದಾಗಿ ಇದೆ. ಇದರ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ,

ಯಾರೋ ಮಾಡಿದ್ದನ್ನು ಯಾರೋ ಕ್ಲೈಮ್ ಮಾಡುವುದಕ್ಕೆ ಅವಕಾಶ ಕೊಡಬೇಡಿ ಎಂಬುದು ನನ್ನ ವಿನಂತಿ. ಇವರು ಮಾಡಿರುವಂತಹ 10 ವರ್ಷಗಳ ಹಿಂದಿನಿಂದಲೂ ಅದು ಚಾಲನೆಯಲ್ಲಿತ್ತು. ಅದರ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ವಿಶ್ವೇಶ್ವರ ಹೆಗಡೆಯವರು ಕನ್ನಡ ಗಣಕ ಪರಿಷತ್ತಿಗೆ ಹೆಚ್ಚಿನ ಮಹತ್ವ ಕೊಡಬೇಕೆಂದು ಹೇಳಿದ್ದಾರೆ. ನಾವು ಅವರಿಗೇ ಕೊಟ್ಟಿದ್ದೇವೆ. ನುಡಿ ಕೊಟ್ಟಿದ್ದೇ ಅವರಿಗೆ. ಬೇರೆ ಕೆಲವು ಕಡೆ ಖಾಸಗಿ ಹಿತಾಸಕ್ತಿಗಳು ಪ್ರೈವೇಟ್ ಏಜನ್ಸಿಗಳೇನಿವೆ, ಅವರೂ ಸಹ ತಪ್ಪು ಮಾಡುತ್ತಿದ್ದಾರೆ, ಬೇರೆ ದೃಷ್ಟಿಯಿಂದ ಕೂಡ, vested interests are there. I agree. ನಾನು ಒಪ್ಪುತ್ತೇನೆ. ನಮ್ಮ ಇ–ಗವರ್ನನ್ಸ್ ಪ್ರಾಜೆಕ್ಟ್ ಏನಿದೆ, ಪ್ರತಿಯೊಂದು ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕಿನಲ್ಲೂ ಮುಟ್ಟಿಸತಕ್ಕಂಥ ಒಂದು ಕಾಂಪ್ರಹೆನ್ಸೀವ್ ಪ್ರೋಗ್ರಾಮ್ ಮಾಡಿದ್ದೇವೆ. ಈಗಾಗಲೇ ಕೇಂದ್ರ ಸರ್ಕಾರ ಕೂಡ ಒಂದು ನೂರು ಕೋಟಿ ರೂ ಕೊಡತಕ್ಕ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ, ನಾವು ಹೇಳತಕ್ಕಂಥಾದ್ದು ಏನೆಂದರೆ, ಇದಕ್ಕೆ ಇನ್ನೂ ಹೆಚ್ಚಿನ ಶಕ್ತಿ ಕೊಡಬೇಕು ಮತ್ತು ಎಲ್ಲಾ ಕಡೆ ಲಿಪಿಗಳು ಉಚಿತವಾಗಿ ಲಭ್ಯವಿರುಬೇಕು. ಈ ಟೆಕ್ನಾಲಜಿಗೆ Intellectual Property Rights ಏನಿದೆ, ಸಾರ್ವಜನಿಕ ಕ್ಷೇತ್ರದಲ್ಲಿ ಬಿಡುಗಡೆ ಮಾಡುವುದು ಸೂಕ್ತವಲ್ಲ, ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ನಮ್ಮ ಶಾಸಕ ಮಿತ್ರರು ಹೇಳಿದ್ದಾರೆ, ಎಲ್ಲೋ 30 ಲಕ್ಷ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆಂದು ಹೇಳಿದ್ದಾರೆ. ಅದರ ಬಗ್ಗೆ ಕೂಡ ಸರ್ಕಾರ ಗಮನ ಕೊಡುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಯಾವ ಯಾವ ಇಲಾಖೆಗಳಿಗೆ ಈ ಸಾಫ್ಟ್‌ವೇರ್ ಕನ್ಸಲ್‌ಟೆನ್ಸಿಯನ್ನು ಕೊಟ್ಟಿದೆ, ಆ ಇಲಾಖೆಗಳ ವಿವರ ಇದೆ ಮತ್ತು ಅವರಿಗೆ ಕೊಟ್ಟಿರುವಂಥ ಹಣ ಇದೆ. ಇದರಲ್ಲಿ ಪಾರದರ್ಶಕತೆ ನಿರ್ಮಾಣವಾಗುವಂಥ ಅಗತ್ಯ ಇದೆ. ಆ ಕಂಪನಿಗಳಿಗೆ ಯಾವ ಆಧಾರದ ಮೇಲೆ, ಆ ಕೆಲಸವನ್ನು ಆ ಕನ್ಸಲ್‌ಟೆನ್ಸಿಗೆ ಕೊಟ್ಟಿದೆ. ಅವರಿಗೆ ಕ್ರೆಡಿಬಲಿಟಿ ಕೊಡುವಂಥ ಅಥವಾ ಅವರಿಗೆ ಟೈಂಬಾಂಡ್ ಪ್ರೋಗ್ರಾಮನ್ನು ಮಾಡಿಕೊಡುವಂಥ ಆಗ್ರಹವನ್ನು ಮಾಡದೇ ಹೋದರೆ ಅವರೂ ಸಹ ವಿಳಂಬವನ್ನು ಮಾಡುತ್ತಾರೆ. ಇದರಿಂದ ಈ ತಂತ್ರಾಂಶಗಳಲ್ಲಿ ಸಾಫ್ಟ್‌ವೇರ್‌ಗಳಲ್ಲಿ ಬದಲಾವಣೆಗಳು ದಿನದಿಂದ ದಿನಕ್ಕೆ ಆಗುತ್ತಿರುತ್ತದೆ. ಅದರ ಲಾಭವನ್ನು ತೆಗೆದುಕೊಂಡು ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಬರುವಂಥ ರೀತಿಯಲ್ಲಿ ಅವರು ಪ್ರಯತ್ನ ಮಾಡಬಹುದು. ಈ ಕಂಪನಿಗಳ ಮೇಲೆ ಇಲಾಖೆಯವರು ಆ ರೀತಿಯ ಹಿಡಿತವನ್ನು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಕರ್ನಾಟಕದಲ್ಲಿ "ಭೂಮಿ" ಎಂಬ ಕಾರ್ಯಕ್ರಮ ಇಡೀ ದೇಶದಲ್ಲೇ ಮಾದರಿಯಾಗಿದೆ. ನಾನು ಸರ್ಕಾರವನ್ನು ಮೆಚ್ಚುತ್ತೇನೆ, ಬಹಳ ಚೆನ್ನಾಗಿ ಇದೆ. ಆದರೆ, ಉಳಿದಿದ್ದು ಇಲಾಖೆಗಳಲ್ಲಿ ಆಗುತ್ತಾ ಇರುವುದು, ಬಹಳ ತೊಂದರೆಯಾಗಿದೆ.

ಶ್ರೀ ಧರ್ಮಸಿಂಗ್ : ಒಟ್ಟಾರೆ ವಿಶ್ವೇಶ್ವರ ಹೆಗಡೆಯವರು ಪ್ರಸ್ತಾಪ ಮಾಡಿದಂಥ ಭಾವನೆಗಳು ನಮಗೆ ಮನದಟ್ಟಾಗಿವೆ. ಇದರ ಬಗ್ಗೆ ನಾವು ಹೆಚ್ಚಿನ ಕ್ರಮ ತೆಗೆದುಕೊಳ್ಳುತ್ತೇವೆ. ಎನ್ನತಕ್ಕಂಥ ಭರವಸೆಯನ್ನು ಕೊಡುತ್ತೇನೆ.

ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಯೋಜನೆ.

147 (2105) ಶ್ರೀ.ರವಿ.ಸಿ.ಟಿ. ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1. ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಯಗಚಿ ನದಿಗೆ ಚಿಕ್ಕಮಗಳೂರು ಒಳಚರಂಡಿ ಮತ್ತು ಕೊಳಚೆ ನೀರು ಸೇರ್ಪಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ;

3. ಇದರ ಅಂದಾಜು ಮೊತ್ತ ಎಷ್ಟು ಮತ್ತು ಎಂದಿನಿಂದ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ;

4. ಯಗಚಿ ನದಿಗೆ ಕೊಳಚೆ ನೀರು ಹರಿಯದಂತೆ ಸದ್ಯಕ್ಕೆ ಯಾವ ಕ್ರಮ ಕೈಗೊಂಡಿದೆ?

1. ಬಂದಿದೆ.

2. ಒಳಚರಂಡಿ ಯೋಜನೆಯ ಶುದ್ಧೀಕರಣ ಘಟಕವು 1995ರಲ್ಲಿ ನಿರ್ಮಾಣಗೊಂಡಿದ್ದು, ಈ ವ್ಯವಸ್ಥೆಯನ್ನು ಚಿಕ್ಕಮಗಳೂರು ನಗರಸಭೆಯವರೇ ನಿರ್ವಹಿಸುತ್ತಿರುತ್ತಾರೆ. ಈ ಘಟಕದಲ್ಲಿರುವ ಏರೆಯೇಟೆಡ್ ಲಗೂನ್ಸ್‌ಗಳು ಕೆಲಸ ಮಾಡದೇ ಕೆಟ್ಟು ಹೋಗಿರುತ್ತವೆ. ಇವುಗಳನ್ನು ದುರಸ್ಥಿ ಮಾಡಬೇಕಾಗಿದೆ, ಚಿಕ್ಕಮಗಳೂರಿನಿಂದ ಹರಿದು ಬಂದ ಕೊಳಚೆ ನೀರನ್ನು ಬೇಸಿಗೆಯಲ್ಲಿ ಮಧ್ಯದಲ್ಲಿಯೇ ರೈತರು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿದ್ದಾರೆ, ಚಿಕ್ಕಮಗಳೂರು ನಗರಕ್ಕೆ ಸರಬರಾಜು ಆಗುವ ಯಗಚಿ ಜಲಾಶಯಕ್ಕೆ ಬೇಸಿಗೆಯಲ್ಲಿ ಕೊಳಚೆ ನೀರು ಸೇರುತ್ತಿಲ್ಲ. ಆದರೆ, ಮಳೆಗಾಲದಲ್ಲಿ ಸೇರುತ್ತದೆ. ಯಗಚಿ ಜಲಾಶಯದಿಂದ ನೀರನ್ನು ಶಿದ್ಧೀಕರಿಸಿ ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ.

3. ದುರಸ್ಥಿ ಕೆಲಸಕ್ಕೆ ಸುಮಾರು ರೂ.25.00 ಲಕ್ಷ ಬೇಕಾಗುತ್ತದೆ. ಈ ಹಣವನ್ನು ನಗರಸಭೆಯವರು ಮಂಡಳಿಗೆ ಪಾವತಿಸಿದ ಕೂಡಲೇ ದುರಸ್ಥಿ ಕಾರ್ಯ ಕೈಗೊಳ್ಳಲಾಗುವುದು.

4. ದುರಸ್ಥಿ ಕಾರ್ಯವನ್ನು ಕೂಡಲೇ ತೆಗೆದುಕೊಳ್ಳಲು ನಗರಸಭೆಗೆ ಸೂಚಿಸಲಾಗುತ್ತದೆ.

ಶ್ರೀ ಸಿ.ಟಿ.ರವಿ : ಮಾನ್ಯ ಸಭಾಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಗೆ ಉತ್ತರ "ಬಂದಿದೆ" ಎಂದು ಹೇಳಿದ್ದಾರೆ ಮತ್ತು ಎರಡನೇ ಪ್ರಶ್ನೆಗೆ ಎರಿಯೇಟೆಡ್ ಲಗೂನ್ಸ್‌ಗಳು ಕೆಟ್ಟುಹೋಗಿವೆ ಹಾಗಾಗಿ ಮಳೆಗಾಲದಲ್ಲಿ ಕೊಳಚೆ ನೀರು ಸೇರುತ್ತೆ, ಬೇಸಿಗೆಯಲ್ಲಿ ಸೇರುವುದಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಬೇಸಿಗೆಯಲ್ಲಿ ಏಕೆ ಸೇರುವುದಿಲ್ಲ, ಕೆಟ್ಟು ಎಷ್ಟು ವರ್ಷವಾಯಿತು ಎಂಬ ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಏರಿಯೇಟೆಡ್ ಲಗೂನ್ಸ್‌ಗಳು ಒಳಚರಂಡಿ ನೀರನ್ನು ಶಿದ್ಧೀಕರಣ ಮಾಡಿ, ಆ ನಾಲೆಗೆ ಬಿಡುವ ಕೆಲಸ ಮಾಡಬೇಕು. ಅದು ಸುಮಾರು 3–4 ತಿಂಗಳಿಂದ ಕೆಟ್ಟು ಹೋಗಿದೆ. ಆದರೆ, ಅದರ ನಿರ್ವಹಣೆಯ ಕೆಲಸವನ್ನು ಅಲ್ಲಿಯ ಸ್ಥಳೀಯ ಸಂಸ್ಥೆಗಳಾದ ಮುನಿಸಿಪಾಲಿಟಿಯವರು ಅಥವಾ ಪುರಸಭೆಯವರು ಮಾಡಬೇಕಾಗಿತ್ತು. ಆದರೆ, ಅವರು ಇನ್ನೂ ಮಾಡಿಲ್ಲ. ಇದು ಸರ್ಕಾರದ ಗಮನಕ್ಕೂ ಬಂದಿದೆ. ಆ ಪುರಸಭೆಗೆ ನಾವು ಮುರು ತಿಂಗಳು ಕಾಲಾವಕಾಶವನ್ನು ಕೊಟ್ಟಿದ್ದೇವೆ. ಅವರು ಮೂರು ತಿಂಗಳಲ್ಲಿ ಮಾಡದೇ ಇದ್ದರೆ, ನಾವು ಹೊಸ ಗ್ರಾಂಟನ್ನು ಕೊಟ್ಟು, ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಸಿ.ಟಿ.ರವಿ : ಮಾನ್ಯ ಮಂತ್ರಿಗಳು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಅವು ಕೆಟ್ಟು ಹೋಗಿ ಈಗಾಗಲೇ ನಾಲ್ಕು ವರ್ಷಗಳಾಗಿವೆ. ನಾಲ್ಕು ವರ್ಷದಿಂದ ಒಂದು ಮತ್ತು ಎರಡನ್ನೂ ಸೇರಿಸಿ ತೀರ್ಥ ಪ್ರಸಾದದ ರೂಪದಲ್ಲಿ ಮತ್ತೆ ಅದನ್ನು ವಾಪಸ್ ಕೊಡತಕ್ಕ ಕೆಲಸ ಕುಡಿಯುವ

ನೀರಿನ ಜೊತೆಗೇ ನಡೆಯುತ್ತಾ ಇದೆ. ಮುರಾರ್ಜಿ ದೇಸಾಯಿಯವರು ಸ್ವಮುತ್ರಪಾನ ಮಾಡುವುದರಿಂದ ಆರೋಗ್ಯಕ್ಕೆ ಒಳ್ಳೆಯದಾಗುತ್ತದೆ ಎನ್ನುವುದನ್ನು ಪ್ರಯೋಗ ಮಾಡಿ ಕಂಡುಕೊಂಡು, ಅವರ ಪುಸ್ತಕದಲ್ಲಿ ಬರೆದಿದ್ದರು. ಬಹುಶಃ ಅದರಿಂದ ಪ್ರೇರಣೆ ಪಡೆದೇ ಏನೋ ಎಲ್ಲರ ಮೂತ್ರವನ್ನೂ ಒಟ್ಟು ಸೇರಿಸಿ ಚಿಕ್ಕಮಗಳೂರು ನಗರದ ಒಂದು ಲಕ್ಷ ಜನರಿಗೆ ಕುಡಿಸತಕ್ಕ ಕೆಲಸವನ್ನು ಈ ಸರ್ಕಾರ ಮಾಡುತ್ತಾ ಇದೆ. ಹಾಗಾಗಿ, ನಮಗೆ ಈ ಮುರಾರ್ಜಿ ದೇಸಾಯಿಯವರ ಮಾದರಿಯನ್ನು ಅನುಸರಿಸಿದರೆ, ಹಾನಿ ಅಥವಾ ಲಾಭ ಅವರವರಿಗೇ ಆಗುತ್ತದೆ. ಆದರೆ, ಎಲ್ಲರ ಮೂತ್ರವನ್ನೂ ಕುಡಿಸುವುದರಿಂದ ಆರೋಗ್ಯ ಕೆಟ್ಟುಹೋಗುವುದು ಗ್ಯಾರಂಟಿ. ಹಾಗಾಗಿ ಸಬೂಬು ಹೇಳದೇ, ಇದು ಸರ್ಕಾರದ ಕರ್ತವ್ಯ ಇದೆ. ಒಳ್ಳೆಯ ಶುದ್ಧೀಕರಣವಾದ ನೀರನ್ನು ಕೊಡತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಇವತ್ತು ಎಲ್ಲಾ ನಗರಸಭೆಗಳ ಸ್ಥಿತಿ ಏನಿದೆ ಎಂದರೆ, ಅವರು ಇಂತಹ ಎಲ್ಲಾ ಕೆಲಸಗಳನ್ನು ಮೆಯಿನ್‌ಟೇನ್ ಮಾಡುವ ಸ್ಥಿತಿಯಲ್ಲಿ ಅವರು ಇಲ್ಲ. ಹಾಗಾಗಿ ಚಿಕ್ಕಮಗಳೂರು ನಗರಸಭೆಯವರು 25 ಲಕ್ಷ ರೂ ಕಟ್ಟುವುದಿಲ್ಲ, ಇವರು ಎಲ್ಲರ ಮೂತ್ರ ಕುಡಿಸುವುದು ಬಿಡುವುದಿಲ್ಲ. ಹಾಗಾಗಿ, ಇವರೇ ನೇರವಾಗಿ ಕೈಗೆತ್ತಿಕೊಂಡು ಕಾರ್ಯ ಮಾಡುವುದಕ್ಕೆ ನಿರ್ದೇಶನ ಕೊಡಬೇಕೆಂದು ನನ್ನ ವಿನಂತಿ.

ಶ್ರೀ ಆರಗ ಜ್ಞಾನೇಂದ್ರ : ಚಿಕ್ಕಮಗಳೂರಿನವರಿಗೆ ಸ್ವಮೂತ್ರ ಇಲ್ಲ, ಪರ ಮೂತ್ರ ಕುಡಿಸುತ್ತಾ ಇದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಏರಿಯೇಟೆಡ್ ಲಗೂನ್ಸ್ ಕೆಟ್ಟು ಹೋಗಿರುವುದರಿಂದ, ಅದರ ನಿರ್ವಹಣೆ ಕೆಲಸ ಮುನಿಸಿಪಾಲಿಟಿಯವರದು ಎಂದು ನಾನು ಆಗಲೇ ಹೇಲಿದೆ. ಅಲ್ಲಿ ನೀರು ಬೇಸಿಗೆಯಲ್ಲಿ ಮಾತ್ರ ನಾಲೆಯಲ್ಲಿ ಬಿಡುತ್ತಾರೆ, ಅದನ್ನು ರೈತರು ಉಪಯೋಗ ಮಾಡುವುದರಿಂದ, ನದಿಯಲ್ಲಿ ಅಥವಾ ಆ ಜಲಾಶಯದಲ್ಲಿ ಸಂಪೂರ್ಣವಾಗಿ ಹೋಗುತ್ತಾ ಇಲ್ಲ. ಆದರೂ ಕೂಡ ಸರ್ಕಾರದವರು ಒಂದು ಹೊಸ ಯೋಜನೆಗೆ ರೂಪುರೇಷೆ ಮಾಡುತ್ತಾ ಇದ್ದೇವೆ. ಅಂದರೆ, ಚಿಕ್ಕಮಗಳೂರಿನಲ್ಲಿರತಕ್ಕ ಹೊಸ ಬಡಾವಣೆ ಮತ್ತು ಇಲ್ಲಿ ಈಗ ಇರತಕ್ಕಂಥಾದ್ದು ಒಳಚರಂಡಿ ಭಾಗಶಃ ಇವೆ. ಅದನ್ನು ಸಂಪೂರ್ಣವಾಗಿ ಮುಗಿಸುವುದಕ್ಕೆ ಹೊಸ ರೂಪುರೇಷೆಯನ್ನು ಮಾಡಿದ್ದೇವೆ, ಇದನ್ನು ಎರಡು ವರ್ಷಗಳಲ್ಲಿ ಸಂಪೂರ್ಣವಾಗಿ ಮುಗಿಸಿಕೊಡುತ್ತೇವೆಂದು ಹೇಳುತ್ತೇನೆ.

ನರಸಿಂಹರಾಜಪುರ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆ.

148 (2189) ಶ್ರೀ ಜೀವರಾಜ್ ಡಿ ಎನ್ (ಶೃಂಗೇರಿ) ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ನರಸಿಂಹರಾಜಪುರ ಪಟ್ಟಣಕ್ಕೆ ಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;
2. ಇದ್ದಲ್ಲಿ, ಈ ಯೋಜನೆಯ ಅಂದಾಜು ವೆಚ್ಚವೆಷ್ಟು;
3. ಈ ಯೋಜನೆಗೆ ಕೇಂದ್ರ ಸರ್ಕಾರದ ನೆರವು ಮಂಜೂರು ಆಗಿದೆಯೇ;
4. ಈ ಯೋಜನೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಆರ್.ಮೋರೆ : (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು)

1. ಇದೆ.

2. ಈ ಯೋಜನೆಯ ಅಂದಾಜು ಮೊತ್ತವು ರೂ.605.00 ಲಕ್ಷಗಳು.

3. ಹೌದು.

4. ಕಾಮಗಾರಿಯನ್ನು ಮಂಜೂರಾತಿ ಪಡೆದ ನಂತರ ಪ್ರಾರಂಭಿಸಲಾಗುವುದು.

ಶ್ರೀ ಡಿ.ಎನ್.ಜೀವರಾಜ್ : ಸಭಾಧ್ಯಕ್ಷರೆ, ನನ್ನ ಮೊದಲ ಪ್ರಶ್ನೆಗೆ ಉತ್ತರವಾಗಿ "ಇದೆ" ಎಂದೂ, ಎರಡನೇ ಪ್ರಶ್ನೆಗೆ ಈ ಯೋಜನೆಗೆ ಅಂದಾಜು ವೆಚ್ಚ 605 ಲಕ್ಷಗಳು ರೂ ಮತ್ತು ಮೂರನೇ ಪ್ರಶ್ನೆಗೆ ಕೇಂದ್ರ ಸರ್ಕಾರದ ನೆರವು ಮಂಜೂರಾಗಿದೆ ಎಂದು ಹೇಳಿದ್ದಾರೆ. ನಾಲ್ಕನೇ ಪ್ರಶ್ನೆಗೆ, ಮತ್ತೆ "ಮಂಜೂರಾತಿ ಪಡೆದ ಮೇಲೆ ಕಾಮಗಾರಿ ಪ್ರಾರಂಭಿಸಲಾಗುವುದು" ಎಂಬ ಆಶ್ಚರ್ಯಕರ ಉತ್ತರವನ್ನು ಹೇಳುತ್ತಾರೆ. ಒಂದು ಕಡೆ ಮಂಜುರಾಗಿದೆ ಎಂದು ಇವರೇ ಉತ್ತರ ಕೊಟ್ಟು, ನಾಲ್ಕನೇ ಪ್ರಶ್ನೆಗೆ ಮಂಜುರಾದ ಮೇಲೆ ಪ್ರಾರಂಭಿಸುತ್ತೇವೆಂದು ಹೇಳುವುದು ಆಶ್ಚರ್ಯ. ಜೊತೆಗೆ, ಎನ್ ಆರ್.ಪುರದಲ್ಲಿ ಭದ್ರಾ ಮುಳುಗಡೆ ನಿರು ಏನಿದೆ 1947ನೇ ಇಸವಿಗಿಂತ ಮುಂಚೆ ನಮ್ಮ ಎನ್.ಆರ್.ಪುರಕ್ಕೆ ರೈಲು ಬರುತ್ತಾ ಇತ್ತು. ಈ ಭದ್ರಾ ಡ್ಯಾಮ್ ಕಟ್ಟಿದ್ದರಿಂದ ಈಗ ರೈಲೂ ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲದಂಥ ಪರಿಸ್ಥಿತಿ ಆಗಿದೆ. ಕಡೇಪಕ್ಷ ಈ ಡ್ಯಾಮಿನಿಂದಲಾದರೂ ಆ ನೀರು ತೆಗೆಯುವುದಕ್ಕೆ ಶೀಘ್ರಗತಿಯಲ್ಲಿ ಸಚಿವರು ಚಾಲನೆ ಕೊಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ದಯಮಾಡಿ ಇದಕ್ಕೆ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಇದು ಕೇಂದ್ರ ಸರ್ಕಾರದ ತ್ವರಿತ ನೀರು ಸರಬರಾಜು ಯೋಜನೆಯಡಿಯಲ್ಲಿ ನಮ್ಮ ರಾಜ್ಯಕ್ಕೆ ಸುಮಾರು 8 ಊರುಗಳಿಗೆ ಈಗಾಗಲೇ ಹಣ ಬಿಡುಗಡೆ ಮಾಡಿದ್ದಾರೆ. ಇದು ನಮಗೆ ಹೋದ ಡಿಸೆಂಬರ್‌ಗೆ ಗೊತ್ತಾಗಿದೆ. ಆದ್ದರಿಂದ, ಬರುವ ವರ್ಷ ಈ ತ್ವರಿತ ನೀರು ಸರಬರಾಜಿಗೆ ನಮ್ಮ ಗ್ರಾಂಟ್ ಮತ್ತು ಕೇಂದ್ರ ಸರ್ಕಾರ ಏನು ಬಿಡುಗಡೆ ಮಾಡಿದ ಎರಡೂ ಸೇರಿ, ಬರುವ ವರ್ಷದಲ್ಲಿ ಸಂಪೂರ್ಣವಾಗಿ ಅದನ್ನು ಮುಗಿಸಿಕೊಡುತ್ತೇವೆಂದು ಈ ಸದನದಲ್ಲಿ ಹೇಳುತ್ತೇನೆ.

ಮಾಹಿತಿ ತಂತ್ರಜ್ಞಾನ ಪಾರ್ಕ್ ಸ್ಥಾಪಿಸುವುದು.

149(2032) ಶ್ರೀ.ರಾಜೇಂದ್ರನ್ ಎಸ್.(ಕೆ.ಜಿ.ಎಫ್) ಮಾನ್ಯ ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಕೋಲಾರ ಜಿಲ್ಲೆಗೆ ಮಾಹಿತಿ ತಂತ್ರಜ್ಞಾನ ಪಾರ್ಕನ್ನು ಸ್ಥಾಪಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಆ. ಇಂದಿನ ವಿಜ್ಞಾನ ಯುಗದಲ್ಲಿ ಹಿಂದುಳಿದ ಪ್ರದೇಶವಾದ ಕೋಲಾರಕ್ಕೆ ಅದರಲ್ಲೂ ಮುಖ್ಯವಾಗಿ ಕೆ.ಜಿ.ಎಫ್.ನಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕನ್ನು ತೆರೆಯುವುದಕ್ಕೆ ಸರ್ಕಾರ ಯೋಚಿಸಿದೆಯೇ;

ಇ. ಹಾಗಿದ್ದಲ್ಲಿ, ಯಾವಾಗ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಯವರು) ಶ್ರೀ ಪಿ.ಜಿ.ಆರ್.ಸಿಂಧ್ಯ (ಮಾನ್ಯ ಮುಖ್ಯ ಮಂತ್ರಿಯ ಪರವಾಗಿ)

ಅ. ಕೋಲಾರ ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕನ್ನು ಸ್ಥಾಪಿಸಲು ಯಾವುದೇ ಮಾಹಿತಿ ತಂತ್ರಜ್ಞಾನ ಉದ್ದಿಮೆಗಳು, ಉದ್ಯಮಶೀಲರು ಅಥವಾ ಸಾಕಷ್ಟು ಸಂಸ್ಥೆಗಳು ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳ ಸ್ಥಾಪನೆ ಬಗ್ಗೆ ಆಸಕ್ತಿ ತೋರಿಸಿ ಮುಂದೆ ಬಂದಿರುವುದಿಲ್ಲ.

ಮಾಹಿತಿ ತಂತ್ರಜ್ಞಾನ ಪಾರ್ಕನ್ನು ಸ್ಥಾಪಿಸಲು ಮೂಲಭೂತ ಸೌಕರ್ಯಗಳಾದ ಮತ್ತು ಭೂ ಕೇಂದ್ರ ಹಾಗೂ ಪರಿಪೋಷಣಾ ಕೇಂದ್ರಗಳ ಸ್ಥಾಪನೆಗಾಗಿ ಕೇಂದ್ರ ಸರ್ಕಾರದ ಸಂಸ್ಥೆಯಾದ ಎಸ್.ಟಿ.ಪಿ.ಐ ನಿಂದ ಅನುಮತಿ ದೊರೆತಿರುವುದಿಲ್ಲ.

ಆ. ಕೆ.ಜಿ.ಎಫ್ ನಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಶ್ರೀ ಎಸ್ ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ನಾನು ವೆರಿ ಸಿಂಪಲ್ ಕ್ವೆಶ್ಚನ್ ಕೇಳಿದ್ದೇನೆ. ಆದರೆ ನಾವು ಬಹಳ ಕಷ್ಟದಲ್ಲಿದ್ದೇವೆ. ನಮ್ಮ ಕೋಲಾರ್ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಆಗಿಲ್ಲ. ಜೊತೆಗೆ ಕೆ.ಜಿ.ಎಫ್.ನಲ್ಲಿರುವ ನಾಲ್ಕು ಸಾವಿರ ಜನ ಬೀದಿ ಪಾಲಾಗಿದ್ದಾರೆ. ಅವರಿಗೆ ಒಂದು ಇಂಡಸ್ಟ್ರೀಯಲ್ ಪಾರ್ಕ್, ಐ.ಟಿ.ಪಾರ್ಕ್ ಏನಾದರೊಂದು ಮಾಡೀ ಅವರಿಗೆ ಒಂದು ಎಂಪ್ಲಾಯ್‌ಮೆಂಟ್ ವ್ಯವಸ್ತೆ ಮಾಡಬೇಕೆಂದು ನಾನು ಕೇಳಿದ್ದೇನೆ. ಅದಕ್ಕೆ ಉತ್ತರ ಇಲ್ಲ ಎಂದು ಹೇಳಿದ್ದಾರೆ. ಆದರೆ ಬಜೆಟ್‌ನಲ್ಲಿ ಬಹಳ ಗಮನ ಕೊಟ್ಟಿದ್ದಾರೆ. ನಮಗೆ ಬಹಳ ಸಂತೋಷ. ಸರ್ಕಾರದ ಮೇಲೆ ನಮಗೆ ಅಪಾರ ಗೌರವ ಇದೆ. ಸರ್ಕಾರದ ಮೇಲೆ, ರವೀಂದ್ರನಾಥ ಠಾಗೋರ್‌ರವರನ್ನು ಮೈಂಡ್‌ನಲ್ಲಿಟ್ಟುಕೊಂಡು ಕ್ಯಾಸ್ಟ್‌ಲೆಸ್, ಫೀಡಲೆಸ್, ಪೂರ್‌ಲೆಸ್, ಇಕ್ವಲ್ ಆಗಿರಬೇಕೆಂದು ಏನು ನೀವು ಹೇಳುತ್ತೀರಿ, ನಮ್ಮ ಊರಿನಲ್ಲಿ ಇಕ್ವಲ್ ಇಲ್ಲ. ಪೂರ್ ಕ್ಲಾಸಸ್ ಇರುವುದು. ಅವರನ್ನು ಯಾವಾಗ ಇಕ್ವಲ್ ಮಾಡುತ್ತಾರೋ ನನಗೆ ಗೊತ್ತಿಲ್ಲ. ಆದ್ದರಿಂದ ನಮ್ಮ ಊರಿಗೆ ಒಂದು ಐ.ಟಿ. ಪಾರ್ಕ್ ಮಾಡಿಕೊಡಿ. ಐ.ಟಿ.ಪಾರ್ಕ್ ಮಾಡಿದರೆ ಹೊರಗಡೆಯಿಂದ ಬರುವುದಿಲ್ಲವೆಂದರೆ ತಾವು ಏನಾದರೂ ಒಂದು ವ್ಯವಸ್ಥೆ ಮಾಡಿ ನಮ್ಮ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಪಿ ಜಿ ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥಾದ್ದು ಐ.ಟಿ.ಪಾರ್ಕನ್ನು ಕೋಲಾರ ಜಿಲ್ಲೆಯಲ್ಲಿ ಮಾಹಿತಿ ತಂತ್ರ ಜ್ಞಾನದ ಬಗ್ಗೆ ಸರ್ಕಾರ ತೆಗೆದುಕೊಂಡಿರತಕ್ಕಂಥ ಕ್ರಮಗಳು ಏನು ಎಂದು ಕೇಳಿದ್ದಾರೆ. ಅವರ ಉಪ ಪ್ರಶ್ನೆಯಲ್ಲಿ ಕೈಗಾರಿಕಾ ಬಗ್ಗೆ ಸಹ ಕೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಐ.ಟಿ.ಪಾರ್ಕನ್ನು ನಾವು ಮಂಜೂರು ಮಾಡಬೇಕಾದರೆ ಈಗ ಕರ್ನಾಟಕದಲ್ಲಿ 4 ಕಡೆಗಳಲ್ಲಿ ಎರಡು ಕಡೆಗಳಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ಎರಡು ಪಾರ್ಕ್‌ಗಳು ಇವೆ. ಎಲೆಕ್ಟ್ರಾನಿಕ್ ಸಿಟಿಯಲ್ಲಿ ಐ ಟಿ ಪಾರ್ಕ್; ಇನ್ನೊಂದು ಎಕ್ಸ್‌ಪೋರ್ಟ್ ಪ್ರಮೋಶನ್ ಪಾರ್ಕ್ ಎಂದು ಇಟ್ಟಿದ್ದೇವೆ. ಈಗ ಈ ಐಟಿ ಪಾರ್ಕ್‌ಗಳನ್ನು ಇಟ್ಟುಕೊಳ್ಳಬೇಕಾದರೆ ಟೆಲಿಕಮ್ಯುನಿಕೇಶನ್ ಲಿಂಕ್ ಬಹಳ ಮುಖ್ಯವಾಗಿರತಕ್ಕಂಥಾದ್ದು, ಟೆಲಿಕಮ್ಯುನಿಕೇಶನ್ ಲಿಂಕನ್ನು ನಾವು ಕೊಡುವುದಕ್ಕೆ ಆಗುವುದಿಲ್ಲ. ಅದನ್ನು ಕೊಡುವುದು ಗೌರ್ನಮೆಂಟ್ ಆಫ್ ಇಂಡಿಯ. ಎಸ್.ಟಿ.ಪಿ.ಐ ಎನ್ನುವಂತಹ ಒಂದು ಸಂಸ್ಥೆ ಇದೆ. ಅವರು ಅದನ್ನು ಮಂಜೂರು ಮಾಡಬೇಕಾಗುತ್ತದೆ. ನಾವು ನಾಲ್ಕು ಕಡೆಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಈ ಎಸ್.ಟಿ.ಪಿ.ಐ ನವರು ಈ ಟೆಲಿಕಮ್ಯುನಿಕೇಶನ್ ಲಿಂಕನ್ನು ಕೊಟ್ಟಿದ್ದಾರೆ. ಒಂದು ಮಂಗಳೂರಿಗೆ ಕೊಟ್ಟಿದ್ದಾರೆ. ಇನ್ನೊಂದು ಧಾರವಾಡಕ್ಕೆ ಕೊಟ್ಟಿದ್ದಾರೆ. ಮತ್ತೊಂದು ಮೈಸೂರಿಗೆ ಕೊಟ್ಟಿದ್ದಾರೆ. ಬೆಂಗಳೂರಿಗೆ ಕೊಟ್ಟಿದ್ದಾರೆ. ಈ ನಾಲ್ಕಕ್ಕೆ ಕೊಟ್ಟಿರತಕ್ಕಂಥಾದ್ದು. ನಾವು ಗುಲ್ಬರ್ಗಕ್ಕೆ ಎಂದು ಪ್ರಸ್ತಾವನೆಯನ್ನು ಕಳೆದ ತಿಂಗಳು ಈ ಎಸ್ ಟಿ ಪಿ ಐ ನವರು ಟೆಲಿಕಮ್ಯುನಿಕೇಶನ್

ಲಿಂಕ್ ಕೊಡಬೇಕು ಎಂದು ನಾವು ಅವರನ್ನು ಕೇಳಿಕೊಂಡಿದ್ದೇವೆ. ಅದನ್ನು ಅವರು ಪರಿಶೀಲನೆ ಮಾಡುತ್ತಿದ್ದಾರೆ. ಎನ್ನತಕ್ಕಂಥ ವಿಶ್ವಾಸ ನನ್ನದಾಗಿದೆ. ಈ ಮಧ್ಯದಲ್ಲಿ ನೀವು ಸಹ ಈ ಪ್ರಶ್ನೆ ಕೇಳಿದ್ದೀರಿ ಮತ್ತು ನಮ್ಮ ಕೋಲಾರ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿರತಕ್ಕಂಥ ಮಾನ್ಯ ಶ್ರೀನಿವಾಸ ಗೌಡರು ಸಹ ಮುಖ್ಯಮಂತ್ರಿಗಳಿಗೆ ಈಗಾಗಲೇ ಒಂದು ಪತ್ರವನ್ನು ಬರೆದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಾನು ಎಸ್ ಟಿ ಪಿ ಐ ಡೈರೆಕ್ಟರ್‌ನ್ನು ಕರೆಸಿ ಇಲ್ಲಿ ಒಬ್ಬರು ಇದ್ದಾರೆ. ಅದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳು ಅವರನ್ನು ಕರೆಸಿ ಕೋಲಾರ ಮತ್ತು ಚಿಕ್ಕಬಳ್ಳಾಪುರಕ್ಕೆ ಸಂಬಂಧಪಟ್ಟ ಹಾಗೆ ಹ್ಯೂಮನ್ ರಿಸೋರ್ಸ್‌ಸ್ ಇರುವುದರಿಂದ ಅಂದರೆ ಇಲ್ಲಿ ಒಂದು ಐ ಟಿ ಪಾರ್ಕ್ ಮಾಡುವುದರಿಂದಾಗಿ ಐ ಟಿ ಓದಿರತಕ್ಕಂಥ ವಿದ್ಯಾರ್ಥಿಗಳಿಗೂ ಕೆಲಸ ಸಿಗುತ್ತದೆ. ಮತ್ತು ಸರ್ವೀಸ್ ಸೆಕ್ಟರ್‌ನಲ್ಲಿಯೂ ಸಹ ಎಂಪ್ಲಾಯ್‌ಮೆಂಟ್ ಜನರೇಶನ್ ಆಗುತ್ತದೆ. ಆದ್ದರಿಂದ ನಾನು ನಿಮಗೆ ಭರವಸೆ ಕೊಡುತ್ತೇನೆ. ನಾನು ಆ ನಾಯ್ಡುರವರನ್ನು ಕರೆದು ಇದು ಕೋಲಾರವನ್ನು ಸಹ ಕನ್ಸಿಡರ್ ಮಾಡಬೇಕು ಈ ವರ್ಷವೇ ಎನ್ನತಕ್ಕಂಥ ಒತ್ತಾಯವನ್ನು ಸಹ ಮಾಡುತ್ತೇನೆ. ಟೆಲಿಕಮ್ಯುನಿಕೇಶನ್ ಲಿಂಕನ್ನು ಕೊಡಲಿಕ್ಕೆ. ಇನ್ನು ಎರಡನೇಯದಾಗಿ ತಾವು ಏನು ಕೇಳಿದ್ದೀರಿ ಅಂದರೆ ಕೆ.ಜಿ.ಎಫ್‌ನ್ನು ನೆಗ್ಲೆಕ್ಟ್ ಮಾಡಿದ್ದೀರಿ ಕೆ ಜಿ ಎಫ್‌ಗೋಸ್ಕರ ನೀವು ಏನೂ ಮಾಡುತ್ತಿಲ್ಲ ಎನ್ನತಕ್ಕಂಥಾದ್ದನ್ನು ಇನ್‌ಡೈರೆಕ್ಟ್ ಆಗಿ ಹೇಳಿದ್ದೀರಿ. ನಾನು ಖಂಡಿತವಾಗಿಯು ನಿಮಗೆ ಭರವಸೆ ಕೊಟ್ಟಿದ್ದೇನೆ ಒಂದು ಸ್ಪಾಂಜ್ ಐರನ್ ಯುನಿಟನ್ನು ಮಂಜೂರು ಮಾಡಿರತಕ್ಕಂಥಾದ್ದು ತಮಗೆ ಗೊತ್ತಿದೆ. ಅದರ ಜೊತೆಗೆ ಈ ಸಾರಿ ಒಂದು ಗೌರ್ನಮೆಂಟ್ ಟೂಲ್ ರೂಮ್ ಟ್ರೈನಿಂಗ್ ಸೆಂಟರ್‌ನ್ನು ಕೋಲಾರ ಜಿಲ್ಲೆಗೆ ಮಂಜೂರು ಮಾಡುತ್ತಿದ್ದೇವೆ ಎನ್ನತಕ್ಕಂಥಾದ್ದನ್ನು ಮಾನ್ಯ ಹಣಕಾಸಿನ ಸಚಿವರು ಬಜೆಟ್‌ನಲ್ಲಿ ಸೇರಿಸಿಲ್ಲ ಅಷ್ಟೇ. ಆದರೆ ಅದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಸಹ ಒದಗಿಸಿ ಕೊಟ್ಟಿದ್ದಾರೆ. ಈ ಜಿ ಟಿ ಟಿ ಸಿ ಎಂಧು ರಾಜಾಜಿನಗರದಲ್ಲಿದೆ. ಯಾರ್‍ಯಾರು ಜಿ ಟಿ ಸಿ ಟಿ ಸರ್ಟಿಫಿಕೇಟನ್ನು ತೆಗೆದುಕೊಳ್ಳುತ್ತಾರೆ ಅವರೆಲ್ಲರಿಗೂ ಸಹ ಡೆಫನೇಟ್‌ಲಿ ಒಂದು ತಿಂಗಳಲ್ಲಿ ಕೆಲಸ ಸಿಗುತ್ತದೆ. It has got lot of patentiatly. ಆದ್ದರಿಂದ ಒಂದು ಜಿ ಟಿ ಟಿ ಸಿ ಸಬ್ ಸೆಂಟರ್‌ನ್ನು ಕೋಲಾರದಲ್ಲಿ ಈ ವರ್ಷವೇ ಸಹ ನಾವು ಮಂಜೂರು ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಮತ್ತೆ ಬಿ ಜಿ ಎಂ ಎಲ್ ನಲ್ಲಿರತಕ್ಕಂಥ ಲ್ಯಾಂಡ್ ಏನಿದೆ ನಾನು ಯಾವ ಯಾವ ಇಂಡಸ್ಟ್ರಿಯಲಿಸ್ಟ್ ಅನ್ನು ಡೆಲ್ಲಿಯಲ್ಲಿ ಭೇಟಿ ಮಾಡಲಿ, ಬೆಂಗಳೂರಿನಲ್ಲಿ ಭೇಟಿ ಮಾಡಲಿ ಕೆ ಜಿ ಎಫ್ ನಲ್ಲಿ ಮತ್ತು ಕೋಲಾರ ಜಿಲ್ಲೆಯಲ್ಲಿರತಕ್ಕಂಥ ಪೊಟೆನ್‌ಷಿಯಾಲಿಟಿ ಬಗ್ಗೆ ಮತ್ತು ಪರ್ಟಿಕ್ಯುಲರ್ ಆಗಿ ಕೆ ಜಿ ಎಫ್ ನ ಬಿ ಜಿ ಎಂ ಎಲ್ ಲ್ಯಾಂಡ್ ಮತ್ತು ಅಲ್ಲಿರತಕ್ಕಂಥ ಅಂಡರ್‌ಗ್ರೌಂಡ್ ವಾಟರ್‌ನ್ನು ಉಪಯೋಗಿಸಿಕೊಂಡು ಅದನ್ನು Industralise ಮಾಡಲಿಕ್ಕೆ ನಾನು ಕ್ರಮ ತೆಗೆದುಕೊಂಡಿದ್ದೇನೆ. ತಮಗೆ ಇನ್ನೊಂದು ಹೇಳಬೇಕು ಅಂದರೆ ಒಂದು 4–5 ಸಿಟಿಗಳು ನಮ್ಮ ರಾಜ್ಯದಲ್ಲಿ ಧಾಂಡೇಲಿ, ತುಮಕೂರು, ಹರಿಹರ, ಕೆ ಜಿ ಎಫ್ ಇವೆಲ್ಲಾ ಇಂಡಸ್ಟ್ರಿಯಲಿ ಗ್ರೋತ್ ಆಗಿದ್ದಿದ್ದು ಮತ್ತೆ ಈಗ ಒಂದು ರೀತಿಯಲ್ಲಿ ಇಂಡಸ್ಟ್ರಿಯಲೈಜೇಶನ್ ಕಡಿಮೆಯಾಗಿದೆ. ಕೆಲವು ಕಡೆಗಳಲ್ಲಿ ಸಂಪೂರ್ಣವಾಗಿ ನಿಂತು ಹೋಗಿದೆ. ಅದನ್ನು ಮತ್ತೆ ರಿವೈವ್ ಮಾಡಲಿಕ್ಕೆ ಏನು ಮಾಡಬೇಕು ಎನ್ನತಕ್ಕಂಥಾದ್ದಕ್ಕೆ ಒಂದು ಟೆಸ್‌ಕಾಕ್‌ನಿಂದ ಒಂದು ರಿಪೋರ್ಟ್‌ನ್ನು ಮಾಡಿಸಿದ್ದೇನೆ. ಆ ರಿಪೋರ್ಟ್ ಸಹ ನನ್ನ ಹತ್ತಿರ ಬಂದಿದೆ. ಅದರ ಪ್ರಕಾರವಾಗಿ ನಾನು ಈ ವರ್ಷ ಕ್ರಮ ತೆಗೆದುಕೊಳ್ಳುತ್ತಿದ್ದೇನೆ. And all that I assure you as far as K.G.F is concerned.

ನಾನು ನಿಮಗೆ ಮಾತು ಕೊಡುತ್ತೇನೆ. ಖಂಡಿತವಾಗಿ ಇಂಡಸ್ಟ್ರಿಯಲೈಜ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್ ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಬಹಳ ಸಂತೋಷ. ನಾವು ಯಾವಾಗಲೂ ನಿಮ್ಮ ಜೊತೆಯಲ್ಲಿರುವವರು. Thank you very much for your kind senstiments.

ಶ್ರೀ ಜಿ ವಿ ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ತಾವು ಹಿಂದೆ ಸಾರಿಗೆ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಕೆ ಜಿ ಎಫ್‌ಗೆ ಸಂಬಂಧಪಟ್ಟ ಹಾಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಿರಿ. ಈ ಕೆ ಎಸ್ ಆರ್ ಟಿ ಸಿ ಬಸ್ಸುಗಳ ಬಾಡಿಬಿಲ್ಡ್ ಮಾಡತಕ್ಕಂಥ ಕಾರ್ಖಾನೆಯನ್ನು ಹಿಂದೆ ತಾವು ಸಾರಿಗೆ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಕೆ ಜಿ ಎಫ್‌ಗೆ ನಾನು ಖಂಡಿತವಾಗಿ ಮಾಡಿಸಿಕೊಡುತ್ತೇನೆಂದು ಹೇಳಿದ್ದಿರಿ. ಏಕೆಂದರೆ ಅದರ ಪರಿಸ್ಥಿತಿ ನಿಮಗೆ ಗೊತ್ತಿದೆ. ನಾನು ಮತ್ತೆ ವಿತರಣೆ ಕೊಡಬೇಕಾಗಿಲ್ಲ. ಈಗ ಬಿ ಜಿ ಎಂ ಎಲ್ ಮುಚ್ಚಿದ ಮೇಲೆ ಅಲ್ಲಿನ ಕಾರ್ಮಿಕರು ದಿನಕ್ಕೆ 500 ರಿಂದ 600 ಜನ ಬೆಂಗಳೂರಿಗೆ ಬರುತ್ತಾರೆ ಕೆಲಸ ಹುಡುಕಿಕೊಂಡು, ಅಂದರೆ ಅದೇನು ಡೆಪನೇಟ್ ಆಗಿ ಕೆಲಸ ಇದೆ ಎಂದು ಬರುವುದಿಲ್ಲ. ಟ್ರೈನ್‌ನಲ್ಲಿ ಬಂದು ಬಿಡುತ್ತಾರೆ ಯಾರಾದರೂ ಕರೆದರೆ ಕೆಲಸಕ್ಕೆ ಹೋಗುವುದು, ಇಲ್ಲ ಅಂದರೆ ಉಪವಾಸ ಇದ್ದು ಮತ್ತೇ ಅದೇ ಟ್ರೈನ್‌ನಲ್ಲಿ ಕೆ.ಜಿ.ಎಫ್‌ಗೆ ವಾಪಸ್ಸು ಹೋಗುವುದು. ಇಂತಹ ಪರಿಸ್ಥಿತಿ ಇದೆ. ಹಿಂದೆ ಬಿ.ಜಿ.ಎಂ.ಎಲ್ ನಲ್ಲಿ ಕೆಲಸ ಮಾಡುತ್ತಿದ್ದರು, ಅದು ಮುಚ್ಚಿಬಿಟ್ಟಿದ್ದಾರೆ. ಸುಮಾರು ಸಲ ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳಿಗೂ ಸಹ ಹೇಳಿದ್ದೇನೆ. ಕನಿಷ್ಠ ಅವರ ವೇತನ ಬಾಕಿ ಏನಿದೆ ಅದನ್ನಾದರೂ ಕೊಡಿಸಿಬಿಡಿ ನೀವು, ವೇತನ ಬಾಕಿ ಕೊಟ್ಟಿಲ್ಲ. 500–600 ಜನ ದಿನ ಬೆಂಗಳೂರಿಗೆ ಬರುತ್ತಾರೆ. ಸ್ವರ್ಣ ಎಕ್ಸ್ ಪ್ರೆಸ್‌ನಲ್ಲಿ. ಮತ್ತೆ ವಾಪಸ್ಸು ಬರುತ್ತಾರೆ. ಡೆಫನೇಟ್ ಕೆಲಸ ಇಲ್ಲ. ಅಂತಹ ಪೊಟೆನ್‌ಷಿಯಲ್ ಇರತಕ್ಕಂಥ ಟ್ರೈನ್ಡ್ ವರ್ಕರ್ಸ್ ಅವರು. ಅವರು ಅನ್‌ಸ್ಕಿಲ್ಡ್ ವರ್ಕರ್ಸ್ ಅಲ್ಲ. ಅವರಿಗೆ ನೀವು ಆಶ್ವಾಸನೆ ಕೊಟ್ಟಿದ್ದಿರಲ್ಲಾ ಬಸ್ಸುಗಳ ಬಾಡಿ ಬಿಲ್ಡ್ ಮಾಡತಕ್ಕಂಥ ಫ್ಯಾಕ್ಟರಿ ಕೆ ಜಿ ಎಫ್‌ನಲ್ಲಿ ಮಾಡಿಕೊಡುತ್ತೇವೆ ಎಂದು ಅಂಥದ್ದನ್ನು ತಕ್ಷಣ ಒಂದೆರಡು ಯುನಿಟ್‌ಗಳನ್ನು ಮಾಡಿದರೆ ಅವರು ಬೆಂಗಳೂರಿಗೆ ಬಂದು ಇಲ್ಲಿ ಕೆಲಸ ಹುಡುಕಿ ಹೋಗತಕ್ಕಂಥ ಕಷ್ಟ ತಪ್ಪಿ ಹೋಗುತ್ತದೆ. ದಯವಿಟ್ಟು ಹಿಂದೆ ನೀವು ಏನು ಆಶ್ವಾಸನೆ ಕೊಟ್ಟಿದ್ದಿರಿ ಅದನ್ನು ಜಾರಿ ಮಾಡಲಿಕ್ಕೆ ತಕ್ಷಣ ಕ್ರಮ ತೆಗೆದುಕೊಂಡರೆ ನೀವು ಈ ಐ ಟಿ ಪಾರ್ಕ್ ಮತ್ತೆ ಬೇರೆ ಬೇರೆ ಏನೆಲ್ಲಾ ಮಾಡಬೇಕೆಂದು ಆಲೋಚನೆ ಮಾಡಿದ್ದೀರಿ ಅದಕ್ಕೆ ನಮ್ಮ ಬೆಂಬಲ ಇದೆ, ಸ್ವಾಗತ ಇದೆ. ಆದರೆ ತಕ್ಷಣ ಪರಿಹಾರ ಮಾಡುವ ರೀತಿಯಲ್ಲಿ ಹಿಂದೆ ಏನು ಆಶ್ವಾಸನೆ ಕೊಟ್ಟಿದ್ದೀರಿ ಅದನ್ನು ತಕ್ಷಣ ಮಾಡಿ ಕೊಡಿ ಕೆ.ಜಿ.ಎಫ್‌ಗೆ.

ಶ್ರೀ ಪಿ ಜಿ ಆರ್ ಸಿಂಧ್ಯ : ನೇರವಾಗಿ ನನ್ನ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ ಅದು ಈಗ ಆಗುವುದಿಲ್ಲ. ಆದರೆ ನಾನು ಕೊಟ್ಟಿರತಕ್ಕಂಥ ಆಶ್ವಾಸನೆ ನನಗೆ ಜ್ಞಾಪಕ ಇದೆ. Alternative to that, ಜಾಬ್ ಕ್ರಿಯೇಶನ್‌ಗೆ ಏನು ಸಾಧ್ಯವಿದೆ ಆ ಎಲ್ಲಾ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ನೀವು ಆಶ್ವಾಸನೆ ಕೊಟ್ಟ ಮೇಲೆ ಬಸ್ ಸ್ಟ್ಯಾಂಡ್ ಆಗಿದೆ. ಮೊದಲು ಬಸ್ಸು ಸ್ಟ್ಯಾಂಡ್ ಇರಲಿಲ್ಲ. Any moment it is about to open.

ಶ್ರೀ ಪಿ ಜಿ ಆರ್ ಸಿಂಧ್ಯ : ಈಗ ಪ್ರಶ್ನೆ ಏನಿದೆ ಅಂದರೆ ಕೆ ಎಸ್ ಆರ್ ಟಿ ಸಿ ಗೆ ಸಂಬಂಧಪಟ್ಟ ಹಾಗೆ ನಾನು ಮಾನ್ಯ ಸಾರಿಗೆ ಮಂತ್ರಿಗಳು ಬಂದ ಮೇಲೆ ಇವತ್ತಿನ ಪರಿಸ್ಥಿತಿ ಏನಿದೆ

ಎನ್ನುವುದನ್ನು ಮಾನ್ಯ ಶ್ರೀರಾಮರೆಡ್ಡಿಯವರಿಗೆ ನಾನು ಅದಕ್ಕೆ ಬೇಕಾಗಿರತಕ್ಕಂಥ ಮಾಹಿತಿಯನ್ನು ಒದಗಿಸಿಕೊಡುತ್ತೇನೆ. But as far as, ಅವರು ಕೇಳಿರತಕ್ಕಂಥ ಪ್ರಶ್ನೆ ಇಂಡಸ್ಟ್ರಿಯಲೈಜೇಶನ್ ಮಾಡಬೇಕು ಎನ್ನತಕ್ಕಂಥಾದ್ದನ್ನು ಫಸ್ಟ್ ಪ್ರೆಯಾರಿಟಿಯಲ್ಲಿ ಕೋಲಾರ ಡಿಸ್ಟ್ರಿಕ್ಟ್ ಇದೆ ಎನ್ನುವುದನ್ನು ಹೇಳಿದ್ದೇನೆ. ಮತ್ತೊಂದು ತಾವು ಗಮನಿಸಿರಬಹುದು, ಪರ್ಟಿಕ್ಯುಲರ್‌ಲೀ ಬಾಗೇಪಲ್ಲಿ ನಮ್ಮ ಹಣಕಾಸಿನ ಸಚಿವರು ಮೊದಲನೇ ಸಲ ನಮ್ಮ ಕೈಗಾರಿಕಾ ವಿಕಾಸ ಎನ್ನತಕ್ಕಂಥ ಒಂದು ಕಾರ್ಯಕ್ರಮಕ್ಕೆ ನಂಜುಂಡಪ್ಪ ವರದಿಯನ್ನು ಅನುಷ್ಠಾನಗೊಳಿಸಲಿಕ್ಕೆ ಅತ್ಯಂತ ಪ್ರಾಮಾಣಿಕವಾದ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿದೆ. ಮೋಸ್ಟ್ ಬ್ಯಾಕ್‌ವರ್ಡ್, ಮೋರ್ ಬ್ಯಾಕ್‌ವರ್ಡ್ ತಾಲ್ಲೂಕುಗಳು 77 ತಾಲ್ಲೂಕುಗಳು ಏನಿವೆ. to start with this year most backward taluk ಗಳಲ್ಲಿ ಇಂಡಸ್ಟ್ರಿಯಲೈಜ್ ಮಾಡಲಿಕ್ಕೆ ಎಂದು ಹೇಳಿ ಅವರು 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೆ ನಾವು ಒಂದು ಸಲ ಪ್ರಾಜೆಕ್ಟ್ ಮಾಡಿದ ಮೇಲೆ ನಮಗೆ ಸುಮಾರು 1200 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಅದು, ಮತ್ತೆ ನಾವು ಕೇಂದ್ರ ಸರ್ಕಾರದ ಮುಂದೆ ಹೋಗಿದ್ದೇವೆ. ಪ್ಲಾನಿಂಗ್ ಕಮೀಷನ್ ಮುಂದೆ ಸಹ ಪ್ಲೀಡ್ ಮಾಡಿದ್ದೇವೆ. ಈ ರೀಜನಲ್ ಇಂಬ್ಯಾಲೆನ್ಸ್‌ನ್ನು ಸರಿಪಡಿಸಬೇಕಾದರೆ ನೀವು ಇದಕ್ಕೆ ದುಡ್ಡು ಕೊಡಬೇಕು ಎನ್ನತಕ್ಕಂಥಾದ್ದನ್ನು ಸಹ ಹೇಳಿದ್ದೇವೆ. ಆದ್ದರಿಂದ ಕೋಲಾರ ಜಿಲ್ಲೆಯಲ್ಲಿ ಬರತಕ್ಕಂಥ ಮೋಸ್ಟ್ ಬ್ಯಾಕ್‌ವರ್ಡ್ ಒಂದೆರಡು ತಾಲ್ಲೂಕುಗಳು ಏನಿವೆ other than K.G.F., ಆ ತಾಲ್ಲೂಕುಗಳನ್ನು ಸಹ ಇಂಡಸ್ಟ್ರಿಯಲೈಜ್ ಮಾಡಲಿಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ ನಾಗರಾಜ ಶೆಟ್ಟಿ : ಮಾನ್ಯ ಅಧ್ಯಕ್ಷರೇ.....

ಧನ್ಯವಾದಗಳು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ ಆದರೆ ಒಂದು ತಾವು ಹೇಳಿದ ಹಾಗೆ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಲ್ಲ. ಬಾಗೇಪಲ್ಲಿಯಲ್ಲಿ ಏನೇನು ಮಾಡಬೇಕು ಎನ್ನುವುದರ ಬಗ್ಗೆ ಒಂದು ಬ್ಲೂಪ್ರಿಂಟ್ ತಯಾರು ಮಾಡಿ ಅದಕ್ಕೆ ಬೇಕಾಗಿರತಕ್ಕಂಥ ಬಜೆಟ್‌ನ್ನು ಒದಗಿಸಿಲ್ಲ. ಜನರಲ್ ಆಗಿ 10 ಕೋಟಿ ರೂ ಮೋಸ್ಟ್ ಬ್ಯಾಕ್‌ವರ್ಡ್ ತಾಲ್ಲೂಕುಗಳಿಗೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಬಜೆಟ್ ಸಂದರ್ಭದಲ್ಲಿ ಚರ್ಚೆ ಮಾಡೋಣ. ಆದರೆ ಅದಕ್ಕೆ ಬೇಕಾಗಿರತಕ್ಕಂಥ ಬಜೆಟ್ ಇಡದಿದ್ದರೆ ಕಷ್ಟವಾಗುತ್ತದೆ.

ಅಧ್ಯಕ್ಷರು : ನಮ್ಮ ನೂತನ ಸದಸ್ಯರು ಏನೋ ಒಂದು ಪ್ರಶ್ನೆ ಕೇಳಲು ನಿಂತಿದ್ದಾರೆ ತಾವು ಅವಕಾಶ ಮಾಡಿಕೊಡದಿದ್ದರೆ ಹೇಗೆ?

ಶ್ರೀ ಬಿ ನಾಗರಾಜ್ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಮ್ಮ ಕೈಗಾರಿಕಾ ಮಂತ್ರಿಗಳು ಮಂಗಳೂರು ಜಿಲ್ಲೆಯಲ್ಲಿ ಐ ಟಿ ಪಾರ್ಕ್ ಮಾಡಲಿಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ ಅದಕ್ಕೆ ಧನ್ಯವಾದಗಳು. ಆದರೆ ಐ ಟಿ ಪಾರ್ಕ್‌ಗೆ ಜಾಗ ಅಕ್ವೈರ್ ಆಗಿದೆ. ಅದರ ಕೆಲಸ ಯಾವಾಗ ಪ್ರಾರಂಭವಾಗುತ್ತದೆ? ಅದರ ಯೋಜನೆಗಳು ಏನಿವೆ? ಅದರ ಬಗ್ಗೆ ಮಾಹಿತಿ ಕೊಡಬೇಕಾಗಿ ನಾನು ತಮ್ಮ ಮುಖೇನ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ ಜಿ ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಕಳೆದ ತಿಂಗಳು ಮಂಗಳೂರಿಗೆ ಹೋದಂತಹ ಸಂದರ್ಭದಲ್ಲಿ ಗೌರವಾನ್ವಿತ ಶಾಸಕರು ಸಹ ನನ್ನ ಜೊತೆಯಲ್ಲಿ ಬಂದಿದ್ದಾರೆ ಏರ್‌ಪೋರ್ಟ್ ಪಕ್ಕದಲ್ಲಿ ಐ ಟಿ ಪಾರ್ಕ್ ಮಾಡಲಿಕ್ಕೆ, ಮಾನ್ಯ ಯೋಗೀಶ್ ಭಟ್‌ರವರೂ ಸಹ ನನ್ನ

ಜೊತೆ ಬಂದಿದ್ದರು. ಅವರಿಬ್ಬರೂ ಸಹ ನನಗೆ ಸಹಕಾರ ಕೊಟ್ಟರು ಅಲ್ಲೆಲ್ಲಾ ಬರಲಿಕ್ಕೆ ಅಲ್ಲಿ ಜಾಗ ತೆಗೆದುಕೊಳ್ಳುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಅಕ್ವಿಜೇಶನ್ ಪ್ರೊಸೀಡಿಂಗ್ಸ್‌ನ್ನು ಪ್ರಾರಂಭ ಮಾಡಿದ್ದೇವೆ. ಈ ಮಧ್ಯೆ ಕೇಂದ್ರ ಸರ್ಕಾರದವರು ಪ್ರಾಡಕ್ಟ್ ಸ್ಪೆಸಿಫಿಕ್ ಎಕನಾಮಿಕ್ ಜೋನ್ ಮಾಡಲಿಕ್ಕೆ ಮಂಗಳೂರಿಗೆ ಐ ಟಿ ಪಾರ್ಕ್ ಮಾಡಲಿಕ್ಕೆ ನಮಗೆ ಪರವಾನಿಗೆಯನ್ನು ಕೊಟ್ಟಿದ್ದಾರೆ ಎನ್ನತಕ್ಕಂಥಾದ್ದನ್ನು ಸಹ ಸಂತೋಷದಿಂದ ಹೇಳುತ್ತೇನೆ.

ಶ್ರೀ.ಬಿ.ನಾಗರಾಜ ಶೆಟ್ಟಿ : ರಾಜ್ಯ ಸರ್ಕಾರದ ಯೋಜನೆಯೇ ಬೇರೆ, ಕೇಂದ್ರ ಸರ್ಕಾರದ ಯೋಜನೆಯೇ ಬೇರೆ, ರಾಜ್ಯ ಸರ್ಕಾರದ 290 ಎಕರೆ ಭೂಮಿಯನ್ನು ನಾವು ಈಗಾಗಲೇ ವಶೀಕರಣ ಮಾಡಿ ಆಗಿದೆ, ಅಕ್ವೈರ್ ಮಾಡಿ ಆಗಿದೆ, ಅದರಲ್ಲಿ ಆದಷ್ಟು ಬೇಗ ಕೆಲಸ ಪ್ರಾರಂಭ ಮಾಡಿದರೆ ಒಳ್ಳೆಯಯದೆಂದು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ.ಪಿ.ಜಿ.ಆರ್.ಸಿಂಧ್ಯ : ಮಾನ್ಯ ಸದಸ್ಯರ ಅವಸರವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ, ಈಗ ಕಾನೂನುಬದ್ಧವಾಗಿ ಜಮೀನು ತೆಗೆದುಕೊಳ್ಳಬೇಕೆಂದರೆ ಸೆಕ್ಷನ್ 28 (1)ಅನ್ನು ಮೊದಲು ಹೊರಡಿಸಬೇಕು, ಇಲ್ಲವೆಂದರೆ ಅಲ್ಲಿಯ ರೈತರು ಬಂದು ಗಲಾಟೆ ಮಾಡುತ್ತಾರೆ ಸೆಕ್ಷನ್ 28 (1)ಅನ್ನು ಹೊರಡಿಸಿದ್ದೇವೆ. ಸೆಕ್ಷನ್ 28(4)ಅನ್ನು ಇನ್ನು 15-20 ದಿವಸಗಳೊಳಗೆ ಹೊರಡಿಸುತ್ತೇವೆ, ಅದಾದ ಮೇಲೆ ಪರಿಹಾರವನ್ನೆಲ್ಲಾ ಕೊಟ್ಟು ಆ ಜಮೀನನ್ನು ತೆಗೆದುಕೊಂಡು, ಸ್ಪೆಷಲ್ ಎಕನಾಮಿಕ್ ಜೋನ್‌ಗೂ ಕೂಡ ಕೇಂದ್ರ ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದಾರೆ, ಈ ವರ್ಷ ಐಟಿ ಪಾರ್ಕ್ ಪ್ರಾರಂಭ ಮಾಡುವುದಕ್ಕೆ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಅಧ್ಯಕ್ಷರು : ಕೃಷ್ಣಪಾಲೇಮಾರ್‌ರವರೆ, ನಿಮ್ಮ 2122 ಪ್ರಶ್ನೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾವಣೆಯಾಗಿದೆ, ಆ ಸಚಿವರು ಉತ್ತರ ಕೊಡುವ ದಿವಸ ಉತ್ತರವನ್ನು ಕೊಡಿಸುತ್ತೇನೆ; ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ.ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 15.3.2005ರ 10ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 131 ಪ್ರಶ್ನೆಗಳ ಪೈಕಿ 105 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ-1)

ಅಧ್ಯಕ್ಷರು : ಮಂಡಿಸಲಾಯಿತು.

ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

3) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ.ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, 2004-05ನೇ ಸಾಲಿನ ರಾಜ್ಯ ಹಣಕಾಸು ಪರಿಸ್ಥಿತಿಯ ಮಧ್ಯಮಾವಧಿ ಪರಿಶೀಲನಾ ವರದಿಯನ್ನು ತಮ್ಮ ಅನುಮತಿಯೊಡನೆ ಸದನದ ಮುಂದಿಡುತ್ತಿದ್ದೇನೆ.

(ಅನುಬಂಧ-2)

ಅಧ್ಯಕ್ಷರು : ಮಂಡಿಸಲಾಯಿತು.

4) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :(ಅ) ಹಕ್ಕುಚ್ಯುತಿ ಸೂಚನೆಯನ್ನು ವಾಪಸ್ಸು ತೆಗೆದು ಕೊಳ್ಳುವ ಬಗ್ಗೆ.

ಶ್ರೀ.ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಮತ್ತು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ತಮಗೆ ಪ್ರಿಮಿಲೇಜ್ ನೋಟಿಸ್ ಕೊಟ್ಟಿದ್ದೆವು, ಅದನ್ನು ನಾನು ವಿತ್‌ಡ್ರಾ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು. ಈಗ ಜಗದೀಶ್ ಶೆಟ್ಟರ್‌ರವರೇ ಮಾತನಾಡಿ.

(ಆ) **ವಿಷಯ : ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಬೆಂಚ್ ಸ್ಥಾಪನೆ ಬಗ್ಗೆ.**

ಶ್ರೀ.ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಹೈಕೋರ್ಟಿನ ಸರ್ಕ್ಯೂಟ್ ಬೆಂಚ್ ಸ್ಥಾಪನೆ ಮಾಡುವ ಬಗ್ಗೆ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ಈ ಸರ್ಕ್ಯೂಟ್ ಬೆಂಚನ್ನು ಧಾರವಾಡ, ಗುಲ್ಬರ್ಗಾಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ಹೈಕೋರ್ಟ್‌ನವರು ಒಪ್ಪಿಕೊಂಡರು. ಸರ್ಕಾರವು ಒಪ್ಪಿಕೊಂಡು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಆದರೆ ಹಿಂದಿನ ಸದನದಲ್ಲಿ ಈ ಬಗ್ಗೆ ಚರ್ಚೆ ಆಯಿತು. ಆದರೆ ಇವತ್ತಿನವರೆವಿಗೂ ಆ ಕಮಿಟಿಯಲ್ಲಿರುವ ನ್ಯಾಯಾಧೀಶರುಗಳಾದ, ನ್ಯಾಯಮೂರ್ತಿಗಳಾದ ನಾಯಕ್‌ರವರು ಪಾಟೀಲ್‌ರವರು, ಇನ್ನೊಬ್ಬರು ಸೇರಿ, ಮೂರು ನ್ಯಾಯಧೀಶರ ಸಮಿತಿ ಇವತ್ತು ಗುಲ್ಬರ್ಗಾಕ್ಕಾಗಲಿ ಅಥವಾ ಧಾರವಾಡಕ್ಕಾಗಲಿ ಬಂದು ಆ ಕಟ್ಟಡವನ್ನು ಎಲ್ಲಿ ನಿಗದಿ ಮಾಡಬೇಕು, ಎಲ್ಲಿ ಅದನ್ನು ಪ್ರಾರಂಭ ಮಾಡಬೇಕು, ಪ್ರಿಲಿಮಿನರಿಯಾಗಿ ಇವನ್ನೆಲ್ಲಾ ಮಾಡಬೇಕಾಗಿತ್ತು ಇದುವರೆವಿಗೂ ಅದನ್ನು ಮಾಡಿಲ್ಲ. ಅದು ಅನುಷ್ಠಾನವಾಗದಿದ್ದರೆ, ಹಿಂದೆ ನ್ಯಾಯಮೂರ್ತಿಗಳಾದ ಶ್ರೀ ಚಂದ್ರಶೇಖರ್‌ರವರು 1979 ರಲ್ಲಿ ಹೈಕೋರ್ಟ್ ಪೀಠ ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದರು, ಆದರೆ ಮುಂದೆ ಅದನ್ನು ಪ್ರೋಸೆಸ್ ಮಾಡದಿದ್ದುದಕ್ಕೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದವರು ಮುಂದೆ ಯಾವುದೇ ಕಾರ್ಯಾಚರಣೆ ಮಾಡದಿದ್ದುದ್ದರಿಂದ, ಇವತ್ತು ಹೈಕೋರ್ಟ್ ಬೆಂಚ್ ಆಗಲಿಲ್ಲ. ಹೈಕೋರ್ಟ್ ಸರ್ಕ್ಯೂಟ್ ಬೆಂಚ್ ಮಾಡಲು ಎಲ್ಲಾ ನಿರ್ಧಾರವಾದರೂ ಇದುವರೆವಿಗೂ ನ್ಯಾಯಮೂರ್ತಿಗಳು ಬಂದು ವೀಕ್ಷಣೆ ಮಾಡಿ ಮುಂದಿನ ಕಾರ್ಯಯೋಜನೆಯನ್ನು ಮಾಡುತ್ತಿಲ್ಲ. ಇವತ್ತು ಧಾರವಾಡದಲ್ಲಿ ಅಲ್ಲಿನ ಬಾರ್ ಅಸೋಸಿಯೇಷನ್ ಅಧ್ಯಕ್ಷರಾದ ಬಿ.ಡಿ ಹಿರೇಮಠ್‌ರವರು ಮತ್ತು ಪ್ರಫುಲ್ಲ ನಾಯಕ್‌ರವರು ಅಮರಣಾಂತ ಉಪವಾಸವನ್ನು ಕಳೆದ 8 ದಿವಸಗಳಿಂದ ಕುಳಿತಿದ್ದಾರೆ. ಅವರು ಬಹಳ ಚಿಂತಾಜನಕ ಪರಿಸ್ಥಿತಿಯಲ್ಲಿದ್ದು ಅವರ ಆರೋಗ್ಯ ಹದಗೆಡುತ್ತಿದೆ. ಈ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವೇನು? ಇವತ್ತು ಮುಖ್ಯ ನ್ಯಾಯಮೂರ್ತಿಗಳನ್ನು ಹೋಗಿ ಭೇಟಿ ಮಾಡಿದರೋ ಹೇಗೆ, ಕಾನೂನು ಸಚಿವರು ಭೇಟಿಯಾದರೋ ಹೇಗೆ, ಅವರು ಯಾವಾಗ ಭೇಟಿ ಮಾಡುತ್ತಾರೆ, ಇದಕ್ಕೆ ಒಂದು ಕಾಲ ಮಿತಿಯನ್ನು ಫಿಕ್ಸ್ ಮಾಡುತ್ತೀರೋ ಹೇಗೆ, ಅದು ಆದರೆ ಸರಿಯಾದ ರೀತಿಯಲ್ಲಿ ನಿಮ್ಮ ಬೊನಫೈಡ್ ತೋರಿಸುವುದಕ್ಕೆ ಸಾಧ್ಯವಿದೆ, ಇಲ್ಲದಿದ್ದರೆ, ಇವತ್ತು ಹೈಕೋರ್ಟ್ ಸರ್ಕ್ಯೂಟ್ ಬೆಂಚ್ ಮಾಡುವ ನಿರ್ಣಯವಾಗಿದ್ದು, ಮುಂದೆ ಅದು ಅನುಷ್ಠಾನವಾಗದಿದ್ದರೆ, ಇದೆ ರೀತಿಯಾಗಿ ಒಂದು, ಎರಡು ವರ್ಷ ಹೋದರೆ ಮುಂದೆ ಮತ್ತೊಂದು ದಿವಸ ಹೈಕೋರ್ಟ್‌ನವರು ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ಡಿನೈ ಮಾಡುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು, ಹಾಗೂ ಕಾನೂನು ಸಚಿವರು ಈ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು ಇದಕ್ಕೆ ಕಾಲಮಿತಿಯನ್ನು ನಿಗದಿ ಮಾಡಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಅಲ್ಲಿನ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಮೋರೆಯವರು ಸದನದಲ್ಲೆ ಇದ್ದಾರೆ, ಅವರ ಕ್ಷೇತ್ರದಲ್ಲಿ ಇವತ್ತು ಅಮರಣಾಂತರ ಉಪವಾಸ

ನಡೆಯುತ್ತಿದೆ, ಇನ್ನುವರೆವಿಗೂ ಹೋಗಿ ಭೇಟಿಯಾಗಿಲ್ಲ, ಮೂರು ಜನ ಸಚಿವರಿದ್ದಾರೆ, ಕಾನೂನು ಸಚಿವರು ಹೋಗಿ ಭೇಟಿಯಾಗಿಲ್ಲ, ಆ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಕೊಟ್ಟು ಆ ಅಮರಣಾಂತರ ಉಪವಾಸವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲವೆಂದರೆ, ನಾಳೆ ಕಾನೂನು ಸುವ್ಯವಸ್ಥೆ ಹದಗೆಟ್ಟರೆ, ಅದರ ಜವಾಬ್ದಾರಿ ನಾಳೆ ಮುಖ್ಯಮಂತ್ರಿಗಳ, ರಾಜ್ಯ ಸರ್ಕಾರದ ಮೇಲೆ ಬರುತ್ತದೆ, ಆ ಬಗ್ಗೆ ಸ್ಪಷ್ಟವಾದ ಭರವಸೆ ನೀಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಧರ್ಮ್‌ಸಿಂಗ್(ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಅಲ್ಲಿ ಅಮರಣಾಂತರ ಉಪವಾಸ ನಡೆಯುತ್ತಿರುವ ಬಗ್ಗೆ ಮಾನ್ಯ ಸದಸ್ಯರಾದ ಜಗದೀಶ್‌ಶೆಟ್ಟರ್‌ರವರು ಹೇಳಿದ್ದಾರೆ, ಪತ್ರಿಕೆಯಲ್ಲೂ ಬಂದಿದೆ, ನಾನು ಅನೇಕರ ಜೊತೆಯಲ್ಲಿ ಮಾತನಾಡಿದ್ದೇನೆ. ಹೈಕೋರ್ಟ್ ಸರ್ಕ್ಯೂಟ್ ಬೆಂಚ್ ಮಾಡುವುದರಲ್ಲಿ ನಾವು ಪದೇ ಪದೇ ಡೆಲಿಗೇಷನ್ ಹೋಗಿ ಹಿಂದಿನ ಮುಖ್ಯ ನ್ಯಾಯಾಮೂರ್ತಿಗಳನ್ನು ಭೇಟಿ ಮಾಡಿದ್ದೆವು. ಈಗ ಹೈಕೋರ್ಟ್ ಸರ್ಕ್ಯೂಟ್ ಬೆಂಚ್ ಆಗಬೇಕೆನ್ನುವ ಒಂದು ನಿರ್ಣಯ ಈಗ ಆಗಿದೆ. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇದೆ ಎನ್ನುವ ಆಧಾರದ ಮೇಲೆ ಇವತ್ತು ಗುಲ್ಬರ್ಗಾ ಮತ್ತು ಧಾರವಾಡದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಬೆಂಚ್ ಮಾಡಲೇಬೇಕೆನ್ನುವ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ. ಅದಕ್ಕೆ ಈ ಆಯವ್ಯಯದಲ್ಲೂ ಕೂಡ 20 ಕೋಟಿ ರೂಪಾಯಿಗಳನ್ನು ಇಡಲಾಗಿದೆ, ಇನ್ನು ಹೆಚ್ಚಿನ ಹಣದ ಅವಶ್ಯಕತೆ ಇದ್ದರೆ ಅದನ್ನು ಕೊಡುವುದು ಸರ್ಕಾರದ ತೀರ್ಮಾನವಾಗಿದೆ. ಅವರನ್ನು ನಾನು ಪದೆ ಪದೆ ಹಿರೇಮಠ್‌ರವರನ್ನು ಭೇಟಿಯಾಗಿದ್ದೇನೆ, ಅವರು ಸ್ವಲ್ಪ ಇಂಪೇಷೆಂಟ್, ಅವರು ತೀವ್ರವಾಗಿ ಆರಂಭವಾಗಬೇಕೆಂದು ಅದರ ಬಗ್ಗೆ ಹೋರಾಟ ಮಾಡಿದ್ದಾರೆ. ಅದಕ್ಕೆ ನಾನು ಹೆಚ್.ಕೆ.ಪಾಟೀಲರ ಜೊತೆ ಮಾತನಾಡಿ ಖುದ್ದಾಗಿ ಹೋಗಿ ಮಾತನಾಡಿ, ನೀವು ಮುಖ್ಯ ನ್ಯಾಯಮೂರ್ತಿಗಳೊಡನೆ ಮಾತನಾಡಬೇಕೆಂದು ಹೇಳಿದ್ದೇನೆ, ಅವರು ಹೋಗಿ ಮಾತನಾಡಿ ಬಂದಿದ್ದಾರೆ, ಮೊನ್ನೆ ಒಂದು ವಾರದ ಹಿಂದೆ ಮುಖ್ಯ ನ್ಯಾಯಾಮೂರ್ತಿಗಳನ್ನು ಭೇಟಿಯಾಗಿದ್ದೇನೆ. ನ್ಯಾಯಮೂರ್ತಿಗಳ ಒಂದು ಕಮಿಟಿಯನ್ನು ರಚನೆ ಮಾಡಿದ್ದಾರೆ, ಬಹಳ ತ್ವರಿತಗತಿಯಿಂದ ಎರಡು ಭಾಗಕ್ಕೆ ಹೋಗಿ ರಿಪೋರ್ಟ್ ಕೊಟ್ಟು ಪ್ರಾರಂಭ ಮಾಡಬೇಕೆಂದು ಹೇಳಿದ್ದಾರೆ, ಮಾಡುತ್ತೇನೆಂದು ಹೇಳಿದ್ದಾರೆ. ಇವತ್ತು ಸರ್ಕ್ಯೂಟ್ ಬೆಂಚ್ ಕೊಡುವ ರೀತಿಯಲ್ಲಿ ಎಲ್ಲಾ ರೀತಿಯ ವರದಿ ಬಂದ ಮೇಲೆ, ಪೂರ್ಣಪ್ರಮಾಣದಲ್ಲಿ ಸರ್ಕಾರ ವಿಚಾರ ಮಾಡಿ, ಸರ್ಕಾರ, ರಾಜ್ಯಪಾಲರು, ಆಗಿನ ಮುಖ್ಯನ್ಯಾಯಾಧೀಶರೆಲ್ಲಾ ಸೇರಿ ನಿರ್ಣಯ ತೆಗೆದುಕೊಂಡಿದ್ದಾರೆ. ಮತ್ತೆ ಹಿಂದಕ್ಕೆ ಹೋಗುವುದಿಲ್ಲ. ಜಗದೀಶ್‌ಶೆಟ್ಟರ್‌ರವರು ಹೇಳಿದ್ದಾರೆ, ನಾನು ಈ ಸಭೆಯ ಮುಖಾಂತರ ಹಿರೇಮಠ್‌ರವರಿಗೆ ಹಾಗೂ ಪ್ರಫುಲ್ಲ ನಾಯಕರವರು ಅಮರಣಾಂತರ ಉಪವಾಸವನ್ನು ಕುಳಿತಿದ್ದಾರೆ, ಅವರಿಗೆ ನಾನು ಸದನದ ಮುಖೇನ ವಿನಂತಿ ಮಾಡುತ್ತಿದ್ದೇನೆ, ಆ ಕ್ಷೇತ್ರಕ್ಕೆ ಸಂಬಂಧಪಟ್ಟವರಾದ ಮೋರೆಯವರಾಗಲಿ, ಜಬ್ಬಾರ್ ಖಾನ್‌ರವರಾಗಲಿ, ಹೊರಟ್ಟಿಯವರಾಗಲಿ ಯಾರಾದರೊಬ್ಬರಾದರೂ ಹೋಗಿ ಹೇಳಲಿ, ಸರ್ಕಾರ ಇದನ್ನು ಅನುಷ್ಠಾನಕ್ಕೆ ತರುವಲ್ಲಿ ಯಾವುದೇ ರೀತಿಯ ಸಂಶಯವಿಲ್ಲ, ಮಾಡಲೇ ಬೇಕಾಗುತ್ತದೆ. ನಾನೂ ಕೂಡ ಮುಖ್ಯ ನ್ಯಾಯಮೂರ್ತಿಗಳ ಜೊತೆ ಮಾತನಾಡಿದ್ದೇನೆ, ಅವರು ನಿರಶನವನ್ನು ಬಿಡಬೇಕು, ಏಕೆಂದರೆ 8 ದಿವಸಗಳಿಂದ ಕುಳಿತಿದ್ದಾರೆ, ಅವರ ಸ್ಥಿತಿ ಕೆಡುತ್ತಿದೆ ಎನ್ನುವ ಸುದ್ಧಿಯನ್ನು ನಮ್ಮ ಪೋಲಿಸ್‌ನವರೂ ಕೂಡ ಕೊಟ್ಟಿದ್ದಾರೆ, ಹೆಚ್ ಕೆ.ಪಾಟೀಲ್‌ರವರು ಹೋಗಿ ನಿರಶನ ಕೊನೆಗೊಳ್ಳುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ.ಜಗದೀಶ್ ಶೆಟ್ಟರ್ : ಹೆಚ್.ಕೆ.ಪಾಟೀಲ್‌ರವರು ಹಾಗೂ ತಾವು ಮುಖ್ಯ ನ್ಯಾಯಮೂರ್ತಿಗಳನ್ನು ಭೇಟಿ ಮಾಡಿ ಬಂದಿದ್ದೀರಿ, ಅದಕ್ಕೆ ಏನಾದರೂ ಕಾಲಮಿತಿ ಫಿಕ್ಸ್ ಮಾಡಿ, ವಿಸಿಟ್ ಮಾಡಿ, ಕಟ್ಟಡ ಫಿಕ್ಸ್ ಮಾಡುವುದು ಇದೆಲ್ಲಾ ಆದರೆ ಒಳ್ಳೆಯದು, ಇಲ್ಲವೆಂದರೆ ಜನರಲ್ಲಿ ಗೊಂದಲ ಮೂಡುತ್ತದೆ. ಕಳೆದ ಸಾರಿಯೂ ನಾನು ಕೇಳಿದೆ, ತಾವು ಆಗುತ್ತದೆಂದು ಹೇಳಿದಿರಿ, ತಾವು ಅಧಿಸೂಚನೆ ಹೊರಡಿಸಿ ನಾಲ್ಕೈದು ತಿಂಗಳಾಯಿತು, ಇದುವರೆವಿಗೂ ರಿಸಲ್ಟ್ ಇಲ್ಲ, ಪ್ರೋಗ್ರೆಸ್ ಇಲ್ಲ, ನ್ಯಾಯಾಧೀಶರು ವಿಸಿಟ್ ಮಾಡುವುದಕ್ಕೆ ಏತಕ್ಕೆ ಹಿಂದೇಟು ಹಾಕುತ್ತಿದ್ದಾರೆ, ಅಲ್ಲೇನಾದರೂ ತೊಂದರೆ ಇದೆಯಾ ಹೇಗೆ ಅದನ್ನು ಸ್ಪಷ್ಟಪಡಿಸಬೇಕು.

ಶ್ರೀ.ಹೆಚ್.ಕೆ.ಪಾಟೀಲರು(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದರು, ನಾನು ಸನ್ಮಾನ್ಯ ಮುಖ್ಯ ನ್ಯಾಯಾಧೀಶರನ್ನು ಭೇಟಿಯಾಗಿದ್ದೆ, ಸನ್ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅವರನ್ನು ಭೇಟಿಯಾಗಿದ್ದರು ನಂತರ ಒಂದು ಕಾಗದ ಬೇಕೆನ್ನುವ ಅಭಿಪ್ರಾಯ ಮೂಡಿರಬೇಕು, ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ವಿವರವಾದ ಕಾಗದವನ್ನೂ ಬರೆದಿದ್ದಾರೆ. ನಾನು ಸನ್ಮಾನ್ಯ ಮುಖ್ಯ ನ್ಯಾಯಾಧೀಶರನ್ನು ಭೇಟಿಯಾದಾಗ ಒಂದು ರೀತಿಯ ಸಕರಾತ್ಮಕವಾದ ಸ್ಪಂದನೆ ಅವರದಾಗಿತ್ತು. ಆದರೆ ತಾವು ಹೇಳಿದಂತೆ ಆ ಭಾಗದ ಜನರಿಗೆ ಬಹಳ ವಿಳಂಬ ಆಯಿತು ಎಂಬ ಭಾವನೆ ಬಂದಿದೆ. ನನ್ನ ವೈಯಕ್ತಿಕ ಅನಿಸಿಕೆ ಪ್ರಕಾರ ಹೈಕೋರ್ಟಿನವರು ಸಕಾರಾತ್ಮಕವಾಗಿರುವುದರಿಂದ ಆದಷ್ಟು ತೀವ್ರವಾಗಿ ಅವರು ಕಾರ್ಯಕ್ರಮ ನಡೆಸುತ್ತಾ ಇದ್ದಾರೆ ಕೆಲಸ ಮಾಡುತ್ತಿದ್ದಾರೆ ಎಂದು ನಾವು ಭಾವಿಸಿಕೊಂಡು ವಿಶ್ವಾಸ ಹೊಂದಿ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಅದರಂತೆ ಅವರು ನಿರಶನ ಬಿಡಲಿ ಹಾಗೂ ಆದಷ್ಟು ಬೇಗ ಹೈಕೋರ್ಟಿನವರು ಆ ಕೋರ್ಟ್ ಕೆಲಸ ಪ್ರಾರಂಭಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಮತ್ತು ಅದು ಆಗಬೇಕು ಎಂದು ಸರ್ಕಾರವಾಗಿ ಬಯಸುತ್ತೇನೆ.

ಮಹಾರಾಷ್ಟ್ರ ರಾಜ್ಯಪಾಲರಾದ ಶ್ರೀ ಎಸ್.ಎಂ.ಕೃಷ್ಣ ಅವರು ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಮಹಾಜನ್ ವರದಿ ಬಗ್ಗೆ ವಿಶ್ಲೇಷಣೆ ಮಾಡಿರುವ ಕುರಿತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ಈ ಸದನದಲ್ಲಿ ಮಹಾಜನ ವರದಿ ಅಂತಿಮ ಅದನ್ನು ಬಿಟ್ಟು ಬೇರೆ ಮಾತಿಲ್ಲ, ಗಡಿ ಸಮಸ್ಯೆ ಬಗ್ಗೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ ಈ ಸಭೆಯಲ್ಲಿ. ಆ ಪೀಠದಲ್ಲಿ ಕುಳಿತ ಎಲ್ಲಾ ಅಧ್ಯಕ್ಷರ ನೇತೃತ್ವದಲ್ಲೂ ನಿರ್ಣಯಗಳಾಗಿವೆ. ಈ ಸದನಕ್ಕೆ ಬಂದ ಮುಖ್ಯಮಂತ್ರಿಗಳಿಂದಲೂ ನಿರ್ಣಯವಾಗಿವೆ. ಸದನದ ಎಲ್ಲಾ ಸದಸ್ಯರೂ ಸೇರಿದ ಒಮ್ಮತದ ನಿರ್ಣಯವಾಗಿದೆ. ಹಿಂದೆ ಈ ಸದನದ ಅಧ್ಯಕ್ಷರಾಗಿದ್ದವರು ನಮ್ಮೆಲ್ಲರಿಗೂ ಹಿರಿಯರಾದಂತಹ ಶ್ರೀಮಾನ್ ಎಸ್ ಎಂ ಕೃಷ್ಣ ಅವರು ಇಲ್ಲಿ ನಿರ್ಣಯವಾದಾಗ ಅವರು ಸಂಪೂರ್ಣ ಬೆಂಬಲ ಕೊಟ್ಟು ಮಹಾಜನ ವರದಿ ಬಿಟ್ಟು ಬೇರೆ ಮಾತಿಲ್ಲ, ಉಪ ಮುಖ್ಯಮಂತ್ರಿಯಾಗಿದ್ದಾಗ ಅವರ ಮಾತು, ಮಹಾಜನ ವರದಿ ಅಂತಿಮ, ಮುಖ್ಯಮಂತ್ರಿಗಳಾಗಿದ್ದಾಗ ಮಹಾಜನ ವರದಿ ಅಂತಿಮ ಅವರ ನಿಯೋಗ ಕೇಂದ್ರಕ್ಕೆ ಹೋದಾಗ ಮಹಾಜನ ವರದಿ ಅಂತಿಮ ಎಂದು ಸ್ಪಷ್ಟವಾಗಿ ಎಲ್ಲಾ ನೇರವಾಗಿ ಹೇಳಿರುವ ಮಾತು. ನಿನ್ನೆ ಅವರು ರಾಜ್ಯಪಾಲರಾಗಿ ಭಾಷಣ ಮಾಡಿ ಮಹಾರಾಷ್ಟ್ರದ ಪರವಾಗಿ (ಎಂಇಎಸ್‌ನ ಮಾನ್ಯ ಶಾಸಕರು

ಮಾತನಾಡತೊಡಗುವರು–ಗೊಂದಲ) ಅವರು ಆಡಿರುವ ಮಾತು ತೀವ್ರ ಖಂಡನೀಯ. ಅದು ಒಳ್ಳೆಯದಲ್ಲ. ಅದು ಈ ರಾಜ್ಯದ ಜನತೆಗೆ ಮಾಡಿರುವ ದ್ರೋಹ. ಐದು ಕೋಟಿ ಕನ್ನಡಿಗರಿಗೆ ಮಾಡಿದ ಮಹಾದ್ರೋಹ. ಅತ್ಯಂತ ಅಪರಾಧ ಅನ್ಯಾಯ ಮಾಡಿದ್ದಾರೆ. ಇಲ್ಲಿ ನಾವು ಆ ರಾಜ್ಯಪಾಲರ ಬಗ್ಗೆ ಖಂಡನಾ ನಿರ್ಣಯವನ್ನು ಈ ಸಭೆಯಲ್ಲಿ ಮಾಡಬೇಕು. ಅವರು ರಾಜೀನಾಮೆ ಕೊಡಬೇಕು. ಅವರು ಇಲ್ಲಿಗೆ ವಾಪಸ್ಸು ಬರಬೇಕು. ಅವರು ಕರ್ನಾಟಕದವರಲ್ಲವೇ ಅವರು ಕನ್ನಡಿಗರಾ ಎಂದು ಕೇಳಬೇಕಾಗಿದೆ. ಅವರು ಮಾಡಿರುವುದು ಈ ನಾಡಿಗೆ ಮಾಡಿದ ದ್ರೋಹ. ಅಪರಾಧ, ಅನ್ಯಾಯ.

ಅಧ್ಯಕ್ಷರು : ಈಗ ಎಲ್ಲರು ದಯಮಾಡಿ ಕುಳಿತುಕೊಳ್ಳಿ. ಸಭಾನಿಯಮಗಳೇ ಗೊತ್ತಿಲ್ಲದಿದ್ದರೆ ಹೇಗೆ, ವಾಟಾಳ್ ನಾಗರಾಜ್‌ರವರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಒಂದು ನೋವಿನ ಸಂಗತಿ ಅಂದರೆ ಅವರು ಅವರದೇ ಆದ ಭಾಷಣ ಮಾಡಿಲ್ಲ. ವಿರೋಧಪಕ್ಷಗಳ ಒತ್ತಾಯಕ್ಕೆ ಕಟ್ಟುಬಿದ್ದು ಗವರ್ನರ್ ಒಬ್ಬರು ಇಲ್ಲ, ಅದು ಮಹಾರಾಷ್ಟ್ರದ ಪರವಾಗಿ ಸೆಟಲ್ ಆಗುತ್ತದೆ ಎಂದು ಗವರ್ನರ್ ಅಡ್ರೆಸಿನಲ್ಲಿ ಹೇಳುತ್ತಾರೆ ಎಂದರೆ ನೋವಾಗುತ್ತದೆ. ಇದು ಸಂವಿಧಾನಕ್ಕೆ ಕೂಡ ತಕ್ಕದಾದುದಲ್ಲ. ನಾನು ಓದಿದ ಪ್ರಕಾರ ಮಹಾರಾಷ್ಟ್ರ ಸರ್ಕಾರವೇನರ ಅ ಭಾಷಣ ಅವರಿಗೆ ತಯಾರಿಸಿ ಕೊಟ್ಟಿಲ್ಲ. ವಿರೋಧ ಪಕ್ಷಗಳ ಒತ್ತಾಯಕ್ಕೆ ಕಟ್ಟುಬಿದ್ದು ಒಬ್ಬ ಗವರ್ನರ್ it will be settled in favour of Maharastra ಎಂದು ನಮ್ಮವರೇ ಒಬ್ಬರು, ಹೇಳಿದ್ದಾರೆ ಅವರು ಗವರ್ನರ್ ಆದ ದಿವಸವೇ ನಾವಿದನ್ನು ಯೋಚನೆ ಮಾಡಿ ಮಾತನಾಡಿದ್ದೆವು. ನಾಳೆ ಈ ಸ್ಥಿತಿ ನಮ್ಮ ರಾಜ್ಯಕ್ಕೆ ನಿರ್ಮಾಣವಾಗುತ್ತದೆ. ನಮ್ಮ ನಿಲುವೇನು? ಈಗ ನಾವು ಕೇಳುವುದು ಎಸ್ ಎಂ ಕೃಷ್ಣ ಹೇಳಿದ್ದಾರೋ ಮತ್ತೊಬ್ಬರು ಹೇಳಿದ್ದಾರೋ ಗೊತ್ತಿಲ್ಲ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಡಿಸ್‌ಪ್ಯೂಟ್‌ನಲ್ಲಿರುವ ವಿಷಯವನ್ನು ಚರ್ಚೆಗೆ ಗ್ರಾಸ ಮಾಡುವ ರೀತಿಯಲ್ಲಿ ವಿರೋಧ ಪಕ್ಷಗಳ ಒತ್ತಡಕ್ಕೆ ಅವರು ಒಪ್ಪಿಕೊಂಡು ಹೇಳಿದ್ದಾರೆ ಅಂದರೆ ಈ ಸದನದ ಅಥವಾ ಈ ಸರ್ಕಾರದ ನಿಲುವೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಮಾಧುಸ್ವಾಮಿಯವರು ವಿರೋಧ ಪಕ್ಷದವರ ಒತ್ತಡಕ್ಕೆ ಮಣಿದು ಎಂದು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪುವುದಿಲ್ಲ. ಅದು ವಿರೋಧ ಪಕ್ಷದವರದ್ದಲ್ಲ, ಆಡಳಿತ ಪಕ್ಷದವರು ಅವರು ರಾಜ್ಯಪಾಲರ ಭಾಷಣ ಹೇಗಿರಬೇಕು ಎಂದು ಹೇಳುತ್ತಾರೆ ವಿರೋಧ ಪಕ್ಷದವರ ಒತ್ತಡಕ್ಕೆ ಒತ್ತಡಕ್ಕೆ ಎಂದರೆ ಸದಸ್ಯರಾದ ಶ್ರೀ ಮಾಧುಸ್ವಾಮಿ ಮೂರು ಸಾರಿ ಆ ಶಬ್ದ ಬಳಿಸದಿರಿ ಎಂದು ಹೇಳುವುದು ಸರಿ ಹೋಗುವುದಿಲ್ಲ....

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕೂತುಕೊಳ್ಳಬೇಕು. ಕಾನೂನು ಸಚಿವರು ಏನು ಹೇಳುತ್ತಾರೋ ಅದನ್ನು ದಯಮಾಡಿ ಕೇಳಿ.

ಶ್ರೀ ಎಚ್ ಕೆ ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಮಾಧುಸ್ವಾಮಿ, ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ ಮಾಡಿದರು ಅದು ಮಹಾರಾಷ್ಟ್ರದ ರಾಜ್ಯಪಾಲರ ಭಾಷಣದ ವಿಚಾರ. ಮತ್ತೊಂದು ರಾಜ್ಯದ ರಾಜ್ಯಪಾಲರ ಭಾಷಣದ ಬಗ್ಗೆ ಈ ಸದನದಲ್ಲಿ ನಾವು ಚರ್ಚೆಗೆ ಹೋಗಬಾರದು ಎಂಬ ಬಗ್ಗೆ ಸಾಕಷ್ಟು ಸಂಸದೀಯ ವ್ಯವಹಾರಗಳ ನಡವಳಿಕೆಗಳು ಪದ್ಧತಿ, ನೀತಿಗಳು ಇರುವುದರಿಂದ ಯಾವುದೇ ಕಾರಣಕ್ಕೆ ಮತ್ತೊಂದು ರಾಜ್ಯದ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮಾಡುವುದು ಬೇಡ ಎಂಬ ಒಂದು ಸಲಹೆಯನ್ನು ಹಾಗೂ

ಅದು ಸರಿಯಾದ ಪರಂಪರೆಯಾಗುತ್ತದೆ ಎಂದು ತಮ್ಮ ಗಮನಕ್ಕೆ ತರುತ್ತಾ ನಮ್ಮ ಕರ್ನಾಟಕದ ಗಡಿ ವಿಚಾರವಾಗಿ ಚರ್ಚೆ ಮಾಡಲು ಬೇಕಾದಷ್ಟು ಸಮಯ ಇಲ್ಲಿ ನಾವು ಕಳೆಯೋಣ. ಈಗ ಅದು ಚರ್ಚೆ ಮಾಡುವ ವಿಷಯ ಇಲ್ಲ, ನಾನು ಒಪ್ಪುತ್ತೇನೆ. ಚರ್ಚೆ ಮಾಡುವ ವಿಷಯವಿಲ್ಲ ಎಂದು ಈ ಸದನ ಆ ಸದನ ಸರ್ಕಾರ ಕರ್ನಾಟಕ ಜನತೆ ಒಕ್ಕೊರಲಿನಿಂದ ಹೇಳಿದೆ. ಮಹಾಜನ ವರದಿ ಬಿಟ್ಟು ಇನ್ನೊಂದಿಲ್ಲ ಯಾರೇನಾದರೂ ಗಲಾಟೆ ಮಾಡುತ್ತಿದ್ದರೆ ಅದು ಕೇವಲ ರಾಜಕೀಯವಾಗಿ ಕುತಂತ್ರ ಮಾಡುವುದಕ್ಕೆ ಅಥವಾ ಏನಾದರೂ ಲಾಭ ಪಡೆಯುವುದಕ್ಕೆ ಮಾಡುತ್ತಿದ್ದಾರೆಯೇ ಹೊರತು ಕರ್ನಾಟಕ ಈಗಾಗಲೇ ಸ್ಪಷ್ಟಪಡಿಸಿದೆ. ಮಹಾಜನ ವರದಿ ಅಂತಿಮ, ಅದೇ ಪರಿಹಾರ. ಅದು ಬಿಟ್ಟು ಯಾರೇ ಏನೇ ಪ್ರಯತ್ನ ಮಾಡಿದರೂ ಸಹಿತ ಅದಕ್ಕೆ ನಾವು ಎಡೆಗೊಡುವುದಿಲ್ಲ. ಅದಕ್ಕೆ ಕಿವಿಗೊಡುವ ಅವಶ್ಯಕತೆ ಇಲ್ಲ ಅಂತ ನಾನು ಭಾವಿಸಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಅವರೇನು ಸುಪ್ರೀಂ ಕೋರ್ಟಿನಲ್ಲಿ ಏನು ವಿಷಯ ಎತ್ತಿದ್ದಾರೆ ಅದಕ್ಕೂ ಸಹಿತ ಕಾನೂನು ಸಮರಕ್ಕೆ ಏನೇನು ಸಿದ್ಧತೆ ಬೇಕೋ ಅದೆಲ್ಲಾ ನಾವೂ ಮಾಡಿಕೊಂಡಿದ್ದೇವೆ. ಆ ಕಾನೂನು ಸಮರ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನಾನು ಒಪ್ಪುವುದಿಲ್ಲ, ಮಹಾರಾಷ್ಟ್ರ ರಾಜ್ಯಪಾಲರು ಹೇಳಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತೀರಿ? ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಅಂದರೆ ಕರ್ನಾಟಕ ರಾಜ್ಯವನ್ನು ಮಹಾರಾಷ್ಟ್ರಕ್ಕೆ ಮಾರಿದ್ದೇವೆ ಅಂದರೂ ನಾವೇನೂ ಮಾತನಾಡುವ ಹಾಗಿಲ್ಲವೇ? ಬೆಳಗಾಂ ಮಹಾರಾಷ್ಟ್ರಕ್ಕೆ ಕೊಡುತ್ತೇವೆ ಅಂದರೆ ಮಾತಾಡುವ ಹಾಗಿಲ್ಲವೇ? ಹೇಳಿ ನಾವು ಸುಮ್ಮನೆ ಕೂತಿರುವುದಕ್ಕಾಗುತ್ತದೆಯೇ? ನಮ್ಮ ರಾಜ್ಯದ ಹಿತ ಬಲಿಯಾದಾಗ ನಾವು ಸುಮ್ಮನೆ ಕುಳಿತಿರಲು ಆಗುತ್ತದೆಯೇ?

ಅಧ್ಯಕ್ಷರು : ಸರ್ಕಾರದ ನಿಲುವನ್ನು ಮಾನ್ಯ ಕಾನೂನು ಸಚಿವರು ಹೇಳಿದ್ದಾರಲ್ಲ.

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :ವಾಟಾಳ್ ನಾಗರಾಜ್‌ರವರು ಯಾವಾಗಲೂ ಈ ಪ್ರಶ್ನೆ ಬಂದಾಗ ಕನ್ನಡದ ಬಗ್ಗೆ ಕನ್ನಡನಾಡಿನ ಬಗ್ಗೆ ಕೇಳುವುದು ಸ್ವಾಭಾವಿಕ. ಈಗಾಗಲೇ ಕಾನೂನು ಸಚಿವರೂ ಕೂಡ ಹೇಳಿದ್ದಾರೆ. ಬೇರೆ ರಾಜ್ಯದ ಸದನದಲ್ಲಿ ಮಾಡುವ ಭಾಷಣದ ಬಗ್ಗೆ ನಾವಿಲ್ಲಿ ಪ್ರಸ್ತಾಪ ಮಾಡುವುದು ಉಚಿತವಲ್ಲ. ಇವತ್ತು ಪ್ರಜಾಪ್ರಭುತ್ವದಲ್ಲಿ ಯಾವ ತರಹ ಸರ್ಕಾರ, ಅವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಇಲ್ಲೇ ನಿಂತು ಹೇಳಿದ್ದಾರೆ, ಕನ್ನಡದ ಬಗ್ಗೆ ಮಹಾಜನ ವರದಿ ಬಗ್ಗೆ ಸ್ಪಷ್ಟವಾದ ನಿಲುವು ತಮಗೆ ಕೂಡ ಗೊತ್ತು. ಅವರು ಇವತ್ತು ಮಹಾರಾಷ್ಟ್ರದ ರಾಜ್ಯಪಾಲರಾಗಿ ಕೆಲಸ ಮಾಡುತ್ತಿದ್ದಾರೆ. ಆ ರಾಜ್ಯದ ಸಂಪುಟ ತಯಾರಿಸಿದಂತೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡುತ್ತಾರೆ. ಇಷ್ಟೇ ಹೇಳಿದ್ದಾರೆ ಮಹಾರಾಷ್ಟ್ರದ ಗಡಿ ವಿವಾದದ ಸಮಸ್ಯೆ ಏನಿದೆ ಅದೆಲ್ಲಾ ನನ್ನ ಗಮನದಲ್ಲಿದೆ ಎಂದು. ಇಷ್ಟಕ್ಕೇ ಇವತ್ತು ನಮ್ಮ ರಾಜ್ಯದ ನಾಯಕರು ಇಲ್ಲಿ ಮುಖ್ಯಮಂತ್ರಿಗಳಾಗಿ ಅಲ್ಲಿ ರಾಜ್ಯಪಾಲರಾಗಿ ಹೋಗಿರುವ ರೀತಿಯಲ್ಲಿ ಆಕ್ಷೇಪಣೆ ಮಾಡುವಂಥದ್ದಲ್ಲ. ಇಲ್ಲಿ ಉಪಮುಖ್ಯಮಂತ್ರಿಗಳೂ ಇದ್ದಾರೆ. ಮಹಾಜನ ವರದಿ ಬಗ್ಗೆ ನಮ್ಮ ರಾಜ್ಯದ ನಿಲುವಿದೆ. ನಾವೇನು ಮಹಾಜನ ವರದಿ ಒಪ್ಪಿದ್ದೇವೆ ಅದರಲ್ಲಿ ಯಾವ ತರಹದ ಬದಲಾವಣೆ ಇಲ್ಲ. ಚುನಾವಣೆ ಸಮಯದಲ್ಲಿ ಶಿವಸೇನಾದವರು ಸುಪ್ರೀಂಕೋರ್ಟಿಗೆ ಹೋದರು. ನಾವು ಕುಡ ಸುಪ್ರೀಂ ಕೋರ್ಟಿಗೆ ಅಫಿಡೆವಿಟ್ ಹಾಕಿದ್ದೇವೆ. ನಮ್ಮ ಗಡಿ ಬಗ್ಗೆ ನಮ್ಮ ಹಕ್ಕು ನಮಗೆ ಸಿಗಬೇಕೆಂಬ ಬಗ್ಗೆ ಕರ್ನಾಟಕ ಸುಮ್ಮನೆ ಕೂತಿಲ್ಲ ಅದರ ಬಗ್ಗೆ ನಾವು ಎಲ್ಲಾ ಪ್ರತಿಪಾದನೆ ಮಾಡುತ್ತೇವೆ.

ನಾವು ಎಚ್ಚರದಿಂದ ಇದ್ದೇವೆ. ಇವತ್ತು ಅವರು ಹೇಳಿದಾಕ್ಷಣಕ್ಕೇ ಇವತ್ತೇನೋ ಆಗಿಬಿಡುತ್ತದೆ ಎಂದು ಅಲ್ಲ, ಅಲ್ಲಿನ ರಾಜ್ಯಪಾಲರ ಭಾಷಣ ಇಲ್ಲಿ ಪ್ರಸ್ತಾಪ ಮಾಡುವುದು ಉಚಿತವಲ್ಲ, ನಮ್ಮ ಹಕ್ಕೇನಿದೆ ಈಗಾಗಲೇ ಏನು ತೀರ್ಮಾನವಾಗಿದೆ ಅದಕ್ಕೆ ಕರ್ನಾಟಕ ಸರ್ಕಾರ ಬದ್ಧವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ತಮಗೆ ನಾನೇನು ಹೇಳುತ್ತಿದ್ದೇನೆಂದರೆ.....

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಅವರು ಸ್ಪಷ್ಟವಾಗಿ ಹೇಳಿದ್ದಾರಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಹಾರಾಷ್ಟ್ರದ ರಾಜ್ಯಪಾಲರ ನಿಲುವನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

(ಗೊಂದಲ)

Sri Manohar Thinekar : are also boycotting.

(ಈ ಹಂತದಲ್ಲಿ ಎಂ.ಇ.ಎಸ್.ಸದಸ್ಯರುಗಳೂ ಕೂಡ ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಇವರೂ ಸಹ ಎಂಇಎಸ್ ಸದಸ್ಯರೂ ಈ ರಾಜ್ಯಪಾಲರ ಭಾಷಣವನ್ನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿದ್ದಾರೆ.

ಉಡುಪಿಯಲ್ಲಿ ತಂದೆ-ಮಗ ಇಬ್ಬರನ್ನು ಬೆತ್ತಲೆ ಮಾಡಿ ಹಿಂಸಿಸಿದ್ದರ ಬಗ್ಗೆ :-

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಇವತ್ತು ಪತ್ರಿಕೆಯಲ್ಲಿ ಬಂದಿರುವ ಸುದ್ದಿ ಎಲ್ಲರನ್ನೂ ಮೈ ನಡುಗಿಸುವ ಸುದ್ದಿಯೊಂದು ಕನ್ನಡ ಪ್ರಭ ಪತ್ರಿಕೆಯಲ್ಲಿ ಬಂದಿದೆ. ಇದು ಇರಾಕ್‌ನಲ್ಲಿ ಅಲ್ಲ, ಇರಾನ್‌ನಲ್ಲಿ ಅಲ್ಲ. ಇರಾಕ್‌ನಲ್ಲಿ ಅಮೇರಿಕಾದ ಸೈನಿಕರು ಇರಾಕಿನ ಖೈದಿಗಳನ್ನು ಹೇಗೆ ಬೆತ್ತಲೆ ಮಾಡಿ ಜೈಲಿನಲ್ಲಿ ಕೂಡಿಸುತ್ತಿದ್ದರು, ಆ ರೀತಿಯಾದ ಘಟನೆ ನಮ್ಮ ರಾಜ್ಯದ ಉಡುಪಿಯಲ್ಲಿ ನಡೆದಿದೆ. ಇದು ಯಾವುದೇ ನಾಗರೀಕ ಸಮಾಜ ಒಪ್ಪತಕ್ಕ ವಿಚಾರವಲ್ಲ. ಯಾವುದೇ ನಾಗರೀಕ ಸಮಾಜ ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿರತಕ್ಕ ಒಂದು ಘಟನೆ ಉಡುಪಿಯಲ್ಲಿ ನಡೆದಿದೆ. ಇಲ್ಲಿ ಬಂದಿರತಕ್ಕ ಸುದ್ದಿ ಪ್ರಕಾರ ಹಸನಬ್ಬ ಮತ್ತೆ ಹಾಜರಪ್ಪ ತಂದೆ, ಮಗ ಇಬ್ಬರನ್ನು ಯಾವುದೋ ಒಂದು ಗ್ಯಾಂಗ್ ನೀವು ದನಕರುಗಳನ್ನು ಮಾಂಸಕ್ಕೋಸ್ಕರ ಮಾರಾಟ ಮಾಡುತ್ತಿದ್ದೀರಿ ಎಂದು ಹಿಡಿದುಕೊಂಡು ಹೋಗಿ ಯಾವುದೋ ಒಂದು ನಿಗೂಢವಾದ ಸ್ಥಳದಲ್ಲಿ ಅವರನ್ನು ಬೆತ್ತಲೆ ಮಾಡಿ ಇಡೀ ರಾತ್ರಿ ಅವರನ್ನು ಹಿಂಸೆ ಮಾಡಿರತಕ್ಕಂಥದ್ದು ಫೋಟೊ ಸಮೇತ ಪತ್ರಿಕೆಯಲ್ಲಿ ಬಂದಿದೆ. ಇದು ಕರ್ನಾಟಕ ರಾಜ್ಯದಲ್ಲಿ ನಡೆದಿದೆ ಎನ್ನತಕ್ಕಂಥದ್ದೇ ಮಾನ್ಯ ಮುಖ್ಯಮಂತ್ರಿಗಳು ಬಹುಶಃ ದಯವಿಟ್ಟು ಇದರ ಬಗ್ಗೆ ಗಮನವನ್ನು ಕೊಡಬೇಕು. ಕರ್ನಾಟಕ ರಾಜ್ಯದಲ್ಲಿ ಇಂಥ ಒಂದು ಘಟನೆ ನಡೆದಿದೆ ಎಂದು ಹೇಳಿದರೆ ಇಡೀ ಕರ್ನಾಟಕ ರಾಜ್ಯದ ಜನತೆಗೆ ಅವಮಾನ ಆಗತಕ್ಕ ಕೆಲಸ, ತಲೆ ತಗ್ಗಿಸತಕ್ಕ ಕೆಲಸ, ಅಮಾನವೀಯವಾದ ಕೆಲಸ ನಡೆದಿದೆ. ಇದಕ್ಕೆ ಯಾರು ಕಾರಣರು ಎಂದು ಹೇಳತಕ್ಕದ್ದನ್ನು ಪತ್ತೆ ಹಚ್ಚಬೇಕಾಗಿದೆ. ಈ ಘಟನೆಗೆ ಕಾರಣವಾಗಿರುವವರು ಬಹುಶಃ ಯಾರೋ ಕೋಮುವಾದಿ ಶಕ್ತಿಗಳು ಎಂದು ಹೇಳುವಂಥ ಬಲವಾದ ನಂಬಿಕೆ ನನಗೆ

ಇದೆ. ಏಕೆಂದರೆ ದನಕರುಗಳನ್ನು ಮಾಂಸಕ್ಕೋಸ್ಕರ ಮಾರಾಟ ಮಾಡುತ್ತಿದ್ದಾರೆ ಎನ್ನತಕ್ಕ ವಿಚಾರ ಇಲ್ಲಿ ಬಂದಿರುವ ಕಾರಣಕ್ಕೋಸ್ಕರ ಇದು ಯಾರು ಮಾಡಿರತಕ್ಕ ಕೆಲಸ ಎಂದು ಹೇಳತಕ್ಕಂಥದ್ದನ್ನು ಪತ್ತೆ ಹಚ್ಚಬೇಕಾಗಿದೆ. ಹಾಗಾಗಿ ಇದು ಬಹಳ ಗಂಭೀರವಾದ ವಿಚಾರ. ಇದು ಯಾರೂ ಕೂಡ ಇದನ್ನು ತಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕ ಘಟನೆ ಕರ್ನಾಟಕ ರಾಜ್ಯದಲ್ಲಿ ನಡೆದಿದೆ. ತಕ್ಷಣ ಸರ್ಕಾರ ಯಾರು ಇದಕ್ಕೆ ಸಂಬಂಧಪಟ್ಟಿದ್ದಾರೆ, ಯಾವ ಗ್ಯಾಂಗ್ ಈ ಕೆಲಸವನ್ನು ಮಾಡಿದೆ, ಇದನ್ನು ಪೋಲೀಸ್‌ನವರು ಮಾಡಿರುವುದಿಲ್ಲ. ಇಷ್ಟು ದಿವಸ ಪೋಲಿಸ್‌ನವರು ಮಾಡುತ್ತಾರೆ, ಎನ್ನುವ ಅಪವಾದ ಅವರ ಮೇಲೆ ಇತ್ತು. ಇದು ಪೋಲೀಸ್‌ನವರು ಮಾಡಿರತಕ್ಕ ಕೆಲಸವಲ್ಲ. ಯಾರೋ ಖಾಸಗಿ ಗುಂಪಿನವರು ಈ ಕೆಲಸವನ್ನು ಮಾಡಿರತಕ್ಕಂಥದ್ದು. ಇಂಥ ಸಮಾಜಘಾತುಕ ಶಕ್ತಿಗಳು, ಇಂಥ ಜನ ವಿರೋಧಿ ಶಕ್ತಿಗಳು ಈ ರೀತಿ ಅಮಾನವೀಯ ಕೆಲಸ ಮಾಡಿರತಕ್ಕಂಥವರನ್ನು ತಕ್ಷಣ ಪೋಲೀಸ್‌ನವರು ಇಷ್ಟೊತ್ತಿಗೆ ಹಿಡಿದು ಅರೆಸ್ಟ್ ಮಾಡಬೇಕಾಗಿತ್ತು. ಇನ್ನೂ ಆ ಕೆಲಸವನ್ನು ಮಾಡಿಲ್ಲ. ಅವರನ್ನು ತಕ್ಷಣ ಬಂಧನ ಮಾಡಿ ಈ ರೀತಿಯಾದಂಥ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಅದೇನಾದರೂ ಕಾನೂನು ಬಾಹಿರವಾಗಿದ್ದರೆ ಮಾಂಸಕ್ಕೋಸ್ಕರ ದನಗಳನ್ನು ಮಾರಾಟ ಮಾಡತಕ್ಕದ್ದು ಕಾನೂನು ಬಾಹಿರ ಎಂದು ಈ ರಾಜ್ಯದಲ್ಲೇನಾದರೂ ಇದ್ದರೆ ಪೋಲೀಸ್‌ನವರು ಕ್ರಮವನ್ನು ತೆಗೆದುಕೊಳ್ಳಬಹುದಾಗಿತ್ತು. ಆದರೆ ಯಾವುದೋ ಖಾಸಗಿ ಗುಂಪೊಂದು ಈ ಕೆಲಸವನ್ನು ಮಾಡಿದೆ ಎಂದು ಹೇಳಿದರೆ ಇವತ್ತು ಆ ಶಕ್ತಿಗಳು, ಆ ಶಕ್ತಿಗಳ ಹಿಂದೆ ಇರತಕ್ಕಂಥವರು ಯಾರು? ಯಾರೋ ಇದ್ದಾರೆ. ಅವರಿಗೆ ರಾಜಕೀಯ ಬೆಂಬಲ ಇದೆ. ಇಲ್ಲದಿದ್ದರೆ ಈ ರೀತಿ ಅವ್ಯಾಹತವಾಗಿ ನಡೆಯಲಿಕ್ಕೆ ಸಾಧ್ಯ ಇಲ್ಲ. ಅದನ್ನು ಪತ್ತೆ ಹಚ್ಚಬೇಕು. ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಅವರನ್ನು ತಕ್ಷಣ ಬಂಧಿಸಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ನಾನು ಕೇಳುತ್ತಿದ್ದೇನೆ.

ಶ್ರೀ.ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನೂ ಸಹ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೇಳಿದ್ದೇನೆ. ನನಗೆ ಎಲ್ಲೋ ಒಂದು ಕಡೆ ನಾವು ನಾಗರೀಕ ಸಮಾಜದಲ್ಲಿದ್ದೇವಾ ಎನ್ನುವ ಭಾವನೆ ಬರುತ್ತಿದೆ. ಈಗ ದನಕರುಗಳನ್ನು ಒಂದು ವಾಹನದಲ್ಲಿ ತೆಗೆದುಕೊಂಡು ಹೋಗಿದ್ದಾರೆ. ತೆಗೆದುಕೊಂಡ ಹೋದ ಕೂಡಲೇ ಅವನ್ನು ಗೋಹತ್ಯೆಗೆ ತೆಗೆದುಕೊಂಡು ಹೋಗಿದ್ದು ಎನ್ನುವ ಅಭಿಪ್ರಾಯ ಬರುತ್ತದೆಯೇ ನಿಮ್ಮ ಅಥವಾ ಪೋಲೀಸ್ ಇಲಾಖೆಯವರೇನಾದರೂ ಇದನ್ನು ಹಿಡಿಯಲಿಕ್ಕೆ ಅಥವಾ ಅವರಿಗೆ ಶಿಕ್ಷೆ ಕೊಡುವುದಕ್ಕೆ ತೆಗೆದುಕೊಂಡು ಹೋದವರಿಗೆ ಶಿಕ್ಷೆ ಕೊಡಲಿಕ್ಕೆ ಪವರನ್ನು ಏನಾದರೂ ಡೆಲಿಗೇಟ್ ಮಾಡಿದ್ದಾರಾ? ಈ ಪೋಲೀಸ್ ವ್ಯವಸ್ಥೆ ಇದ್ದೂ ಸಹಾ ಯಾರಾದರೂ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಇಂಥ ಕ್ರಮವನ್ನು ತೆಗೆದುಕೊಳ್ಳುವುದಾದರೆ ಹೇಗೆ? ಇದು ಕೇವಲ ಒಂದು ಘಟನೆ ಪತ್ರಿಕೆಯಲ್ಲಿ ಬಂದಿದ್ದು. ಏಕೆಂದರೆ ಬಟ್ಟೆಯನ್ನು ಬಿಚ್ಚಿ ನಗ್ನರಾಗಿ ಥಳಿಸಿರುವುದಕ್ಕೆ ಪತ್ರಿಕೆಯಲ್ಲಿ ಬಂದಿದೆ. ಇಂಥ ಎಷ್ಟೋ ಘಟನೆಗಳು ನಡೆದಿದೆ. ಒಬ್ಬ ಅಲ್ಪ ಸಂಖ್ಯಾತ ಅವರ ಮನೆಯಲ್ಲಿ ಒಂದು ಗೋವನ್ನು ಇಟ್ಟುಕೊಳ್ಳುವುದಕ್ಕೆ ಆಗದಿದ್ದರೆ ಹೇಗೆ? ಅದನ್ನು ನಾವು ಕೇಳಿದ್ದೇವೆ. ಮನೆಯಲ್ಲಿ ಇಟ್ಟುಕೊಂಡಿದ್ದಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಅವರು ಯಾರೊ ವಾಹನದಲ್ಲಿ ತೆಗೆದುಕೊಂಡು ಹೋಗಿರುವುದು ಒಂದು ವೇಳೆ ಅವನು ತಪ್ಪು ಮಾಡಿದ್ದರೆ ಶಿಕ್ಷೆಯನ್ನು ಕೊಡಲಿ. ನಮ್ಮ ಅಭ್ಯಂತರವಿಲ್ಲ. ಸರ್ಕಾರ ಇದೆ. ಪೋಲೀಸ್ ಇಲಾಖೆ ಇದೆ. ಕಾನೂನಿನಡಿಯಲ್ಲಿ ಕ್ರಮವನ್ನು ಕೈಗೊಳ್ಳಿ. ಆದರೆ ಯಾವುದೇ

ಸಂಬಂಧ ಇಲ್ಲದಿದ್ದವರು ಅವರಿಗೊಂದು ವೇಳೆ ಇಂಥ ಘಟನೆ ಬಗ್ಗೆ ಗೊತ್ತಿದ್ದರೆ ಪೋಲೀಸ್ ಇಲಾಖೆಗೆ ಹೋಗಿ ವರದಿಯನ್ನು ಕೊಡುವಂಥದ್ದು ಮಾತ್ರ ಅವರಿಗೆ ಸಂಬಂಧಪಟ್ಟಿದ್ದು ಬಿಟ್ಟರೆ ಕಾನೂನನ್ನು ಕೈಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ. ದಯವಿಟ್ಟು ಇಂಥ ಘಟನೆಗಳು ನಾನು ಚುನಾವಣೆ ಸಂದರ್ಭದಲ್ಲಿ ನಾನು ಮನೆ ಮನೆಗೆ ಹೋದಾಗ ಒಬ್ಬ ಹಿಂದೂ ಮಹಿಳೆ ನನ್ನ ಹತ್ತಿರ ಹೇಳಿದಳು. ನೀವು ಇಂಥ ಪಕ್ಷದಲ್ಲಿದ್ದೀರಿ, ನಿಮಗೆ ಮತ ಕೊಡುವುದಿಲ್ಲವೆಂದು ಹೇಳಿದಳು. ನಾನು ಏಕೆ ನಾನು ಯಾವ ಪಕ್ಷದಲ್ಲೂ ಇಲ್ಲ ಕೇಳಿದ್ದಕ್ಕೆ ಅವರ ಪಕ್ಕದ ಮನೆಯಲ್ಲಿ ಯಾರೋ ಆಕಳನ್ನು ತಂದು ಮಾರಾಟ ಮಾಡುತ್ತಾನಂತೆ, ಇವರ ಮನೆಯಲ್ಲಿ ಹಾಲು ಕರೆಯುವ ಹಸುವನ್ನು ತೆಗೆದುಕೊಂಡು ಹೋಗಿದ್ದಾರೆ. ಅವರೇ ಕ್ರಮವನ್ನು ಕೈಗೊಳ್ಳುವಂಥದ್ದು. ಇದಕ್ಕೆ ಎಲ್ಲೋ ಒಂದು ಕಡೆಯಲ್ಲಿ ಕಡಿವಾಣವನ್ನು ಹಾಕದಿದ್ದರೆ ನಮ್ಮಲ್ಲಿ ನಮ್ಮ ಜಿಲ್ಲೆಯಲ್ಲಿ ಅಥವಾ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗಲಾಟೆ ಜಾಸ್ತಿಯಾಗುವ ಸಂದರ್ಭಗಳು ಇವೆ. ಕೋಮು ಗಲಭೆಗೆ ಪ್ರಚೋದನೆ ಮಾಡುವಂಥದ್ದು ಎಂದು ನಾನು ಭಾವಿಸುತ್ತೇನೆ. ಅದಕ್ಕೋಸ್ಕರ ಸರ್ಕಾರ ಮತ್ತು ಇಲಾಖೆಯವರು ತಕ್ಷಣವೇ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ ನಿನ್ನೆ ರಾತ್ರಿ ಉಡುಪಿ ಜಿಲ್ಲೆಯಲ್ಲಿ ಘಟನೆ ನಡೆದಿದೆ. ಈ ಘಟನೆಯ ಬಗ್ಗೆ ಮಾನ್ಯ ಹಿಂದು ಸದಸ್ಯರುಗಳಾದ ಶ್ರೀರಾಮರೆಡ್ಡಿಯವರು ಮತ್ತು ಜಯಪ್ರಕಾಶ್ ಹೆಗ್ಡೆಯವರು ಹೇಳಿದ್ದಾರೆ. ಅದರಲ್ಲಿ ವಾಸ್ತವಾಂಶ ಇದೆ. ಆದರೆ ಯಾರೂ ಕೂಡ ಈ ತರಹದ ಒಂದು ಹಲ್ಲೆ ಮಾಡತಕ್ಕದ್ದು ಮಾಡಬಾರದು. ಮಾಡಿದ್ದಾರೆ. ನಾನೂ ಕೂಡ ಮುಂಜಾನೆ ಉಡುಪಿಯ ಜಿಲ್ಲಾ ಪೋಲೀಸ್ ಅಧಿಕಾರಿಯಾದ ಮುರುಗನ್ ಜೊತೆ ಮಾತನಾಡಿದ್ದೇನೆ. ನಮಗೆ ವರದಿ ಬಂದಮೇಲೆ ಕನ್ನಡ ಪ್ರಭದಲ್ಲಿ ಮುಖಪುಟದಲ್ಲಿ ಆ ಚಿತ್ರ ಕೂಡ ಬಂದಿದೆ. ಅದಕ್ಕೆ ನಾವು ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕೆ ಹೆಚ್ಚು ಚರ್ಚೆ ಬೇಕಾಗಿಲ್ಲ. ಇದಕ್ಕೆ ಕೇಸ್ ರಿಜಿಸ್ಟರ್ ಕೂಡ ಮಾಡಿದ್ದೇವೆ. ಒಬ್ಬರು ಅರೆಸ್ಟ್ ಕೂಡ ಆಗಿದ್ದಾರೆ. ಇನ್ನೂ ಆರು ಮಂದಿ ಇದ್ದಾರೆ. ಅವರಿಗೂ ಕೂಡ ಎಫ್‌ಐಆರ್ ಎಲ್ಲಾ ಹಾಕಿ ಮಾಡುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು : ಕ್ರಮ ತೆಗೆದುಕೊಂಡಿದ್ದೇವೆ, ಆಗಲೇ ಎಫ್‌ಐಆರ್ ಹಾಕಿದ್ದೇವೆ. ಒಬ್ಬರು ಅರೆಸ್ಟ್ ಆಗಿದ್ದಾರೆಂದ ಮೇಲೆ ಇನ್ನೇನು ಕೇಳುತ್ತೀರಿ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಕೇಸ್ ರಿಜಿಸ್ಟರ್ ಆಗಿದೆ. ಅವರನ್ನು ಬಂಧಿಸಬೇಕು. ಅವರ ಹಿಂದೆ ಯಾವುದೋ ರಾಜಕೀಯ ಶಕ್ತಿ ಅಡಗಿದೆ. ಕೋಮು ಗಲಭೆಗಳನ್ನು ಪ್ರಚೋದನೆ ಮಾಡುವ ರಾಜಕೀಯ ಶಕ್ತಿಗಳ ಬೆಂಬಲ ಇದೆ. ಅದನ್ನು ಪತ್ತೆ ಹಚ್ಚಬೇಕು. ಏಕೆಂದರೆ ಇಂಥ ಘಟನೆಗಳನ್ನು ನಡೆಯುವುದಕ್ಕೆ ಕರ್ನಾಟಕ ರಾಜ್ಯದಲ್ಲಿ ಬಿಡಬಾರದು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರೇ, ನೀವು ಹೇಳಿದ ಹಾಗೆ ನಾನು ರಾಜ್ಯದ ಮುಖ್ಯಮಂತ್ರಿಯಾಗಿ ಹೇಳುವುದಕ್ಕೆ ತಯಾರು ಇಲ್ಲ. ಏನು ಮಾಡಿದ್ದಾರೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಪೋಲೀಸರ ವರದಿ ಇದೆ. ಇದನ್ನು ಬಹಿರಂಗವಾಗಿ ಚರ್ಚೆ ಮಾಡಿದರೆ ಮತ್ತೆ ದೊಡ್ಡದು ಆಗಬಾರದು ಎಂದು ಹೇಳಿ

ಎಲ್ಲಿ ತಪ್ಪಿತಸ್ಥರಿದ್ದಾರೆ, ಅವರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ನಾವು ತಪ್ಪಿತಸ್ಥರನ್ನು ಬಿಡಲಿಕ್ಕೆ ಸಾಧ್ಯ ಇಲ್ಲ. ಸರ್ಕಾರ ಜೀವಂತವಾಗಿದೆ. ಸರ್ಕಾರ ಇಂಥದ್ದು ಆಗುವುದಕ್ಕೆ ಏನೇನು ಎಲ್ಲೆಲ್ಲಿ ಘಟನೆ ನಡೆಯುತ್ತದೆ, ಆ ಘಟನೆಯ ಬಗ್ಗೆ ಸರಿಯಾದ ರೀತಿಯಲ್ಲಿ ನಾವು ಅದನ್ನು ನಿರ್ವಹಿಸುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಈ ಘಟನೆ ನಡೆದಿರುವುದು, ಕಾನೂನನ್ನು ಕೈಗೆ ತೆಗೆದುಕೊಂಡಿರುವುದು, ನಿಜಕ್ಕೂ ಇದು ತಪ್ಪು. ಇದರಲ್ಲೇನೂ ಅನುಮಾನವಿಲ್ಲ. ತಮ್ಮ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತಿದ್ದೇನೆ, ಈ ರೀತಿ ಗೋವುಗಳನ್ನು ಕಳ್ಳತನ ಮಾಡಿ ಆ ಗೋಹತ್ಯೆ ಮಾಡುವ ಜಾಗಗಳಲ್ಲಿ ಮಾರಾಟ ಮಾಡಿ ನೇರವಾಗಿ ಬೀದಿಯಲ್ಲಿ ಮಾರಾಟ ಮಾಡುತ್ತಿರುವುದನ್ನು ಕಣ್ಣಿಂದ ನೋಡುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಸಂಬಂಧಪಟ್ಟ ಪೋಲೀಸ್ ಸ್ಟೇಷನ್‌ಗೆ ಹೋಗಿ ನೇರವಾಗಿ ಇಂಥ ಇಂಥ ವ್ಯಕ್ತಿಗಳು ಮಾಡುತ್ತಿದ್ದಾರೆ, ಇಂಥವರ ಬಗ್ಗೆ ನೀವು ಕ್ರಮವನ್ನು ತೆಗೆದುಕೊಳ್ಳಬೇಕು, ಅವರನ್ನು ಅರೆಸ್ಟ್ ಮಾಡಬೇಕು, ಇವರಿಗೆ ಕೇಸ್ ಹಾಕಬೇಕು ಎಂದು ಹತ್ತಾರು ಬಾರಿ ಹೇಳಿದರೂ ಸಹಾ ಈ ಬಗ್ಗೆ ಗಮನ ಕೊಡುತ್ತಿಲ್ಲ. ನಾನು ಏಕೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆಂದರೆ ಸ್ವಾಭಾವಿಕವಾಗಿ ಹಿಂದೂ ಸಮಾಜದಲ್ಲಿರತಕ್ಕ ಭಾವನೆಯನ್ನು ಅರ್ಥಮಾಡಿಕೊಳ್ಳ ಬೇಕಾಗುತ್ತದೆ. ಈ ಗೋವುಗಳನ್ನು ನಮ್ಮ ತಾಯಿಗಿಂತ ಜಾಸ್ತಿ ನಾವು ಗೌರವ ಕೊಟ್ಟು ಪೂಜೆ ಮಾಡುತ್ತೇವೆ. ಅಂಥ ಗೋವುಗಳನ್ನು ನಮ್ಮ ಎದುರಿನಲ್ಲಿ ತೆಗೆದುಕೊಂಡು ಹೋಗಿ ಕಡಿದು ಮಾರಾಟ ಮಾಡಿ ರಸ್ತೆಯಲ್ಲಿ ಬೀದಿಯಲ್ಲಿ ಗೋಮಾಂಸವನ್ನು ನೇತು ಹಾಕುತ್ತಿದ್ದಾರೆ. ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ, ದಯವಿಟ್ಟು ಅಂಥ ದ್ರೋಹಿಗಳಿಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಅವರ ಬಗ್ಗೆ ಈ ರಾಜ್ಯದಲ್ಲಿ ಕಟ್ಟು ನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುವ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಭರವಸೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಗೋವಿನ ಮಾಂಸವನ್ನು ಮಾರಾಟ ಮಾಡಬಾರದು ಎಂದು ಕರ್ನಾಟಕ ರಾಜ್ಯದಲ್ಲಿ ಏನಾದರೂ ನಿಷೇಧ ಮಾಡಿದ್ದರೆ ಹೇಳಿ. ಕ್ರಮ ತೆಗೆದುಕೊಳ್ಳಿ. ಅದರ ಬಗ್ಗೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಲಿ. ನಮ್ಮದೇನೂ ತಕರಾರಿಲ್ಲ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ಈಶ್ವರಪ್ಪನವರೇ ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಇದರ ಹಿಂದೆ ಯಾರು ಇದ್ದಾರೆ, ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಈ ರಾಜ್ಯದಲ್ಲಿ ಗೋವಿನ ಮಾಂಸ ಮಾರಾಟ ಮಾಡಬಾರದು ಎಂದು ಏನಾದರೂ ಕಾನೂನು ಇದ್ದರೆ, ಆ ರೀತಿ ಕ್ರಮ ತೆಗೆದುಕೊಳ್ಳಿ. ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ನಾನು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ಕ್ರಮ ತೆಗೆದುಕೊಳ್ಳಿ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ : ಹೌದು ಆ ರೀತಿ ಕಾನೂನು ಇದ್ದರೆ ನೀವು ಕ್ರಮ ತೆಗೆದುಕೊಳ್ಳಿ. ಗೋವಿನ ಮಾಂಸ ಮಾರಾಟ ಮಾಡಬಾರದು ಎಂದು ಹೇಳತಕ್ಕ ಕಾನೂನು ಕರ್ನಾಟಕ ರಾಜ್ಯದಲ್ಲಿ ಇದ್ದರೆ ನೀವು ಕ್ರಮ ತೆಗೆದುಕೊಳ್ಳಿ. ನಾವು ಬೇಡ ಎಂದು ಹೇಳುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ರಾಜ್ಯದಲ್ಲಿ ಗೋಹತ್ಯೆಗೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿರಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಆ ರೀತಿಯಾಗಿ ಕಾನೂನು ಇದ್ದರೆ ಕ್ರಮ ತೆಗೆದುಕೊಳ್ಳಿ. ಕಾನೂನು ಬಾಹಿರವಾಗಿರತಕ್ಕ ಕ್ರಮ ತೆಗೆದುಕೊಳ್ಳಲಿಕ್ಕೆ ಯಾರೂ ಬೆಂಬಲ ಕೊಡಲಿಕ್ಕೆ ಸಿದ್ದ ಇಲ್ಲ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರು ಶೂನ್ಯವೇಳೆಯಲ್ಲಿ ಈ ಒಂದು ವಿಷಯವನ್ನು ಎತ್ತಿದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟರು. ಶೂನ್ಯ ವೇಳೆಯಲ್ಲಿ ಎಲ್ಲರೂ ಈ ರೀತಿ ಎದ್ದು ನಿಂತುಕೊಂಡು ಚರ್ಚೆ ಮಾಡಿದರೆ ಹೇಗೆ? ಹೇಗೆ ನಾನು ಈ ಸದನವನ್ನು ನಡೆಸಲು ಸಾಧ್ಯವಾಗುತ್ತದೆ. ಆದ್ದರಿಂದ ಶ್ರೀರಾಮರೆಡ್ಡಿಯವರ ಪ್ರಶ್ನೆಗೆ ಆಗಲೇ ಸಂಬಂಧಪಟ್ಟವರ ಬಗ್ಗೆ ಎಫ್‌ಐಆರ್ ಆಗಿದೆ. ಅರೆಸ್ಟ್ ಆಗಿದೆ ಎಂಬ ವಿಚಾರವನ್ನೆಲ್ಲಾ ಹೇಳಿದ್ದಾರೆ. ಇಲ್ಲಿಗೆ ಈ ವಿಷಯವನ್ನು ಮುಕ್ತಾಯ ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಒಂದು ರೀತಿ ಕಾನೂನು ಕೈಗೆ ತೆಗೆದುಕೊಂಡು ಅನಾಗರೀಕವಾಗಿ ವರ್ತನೆ ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದಂಥದು. ಸರ್ಕಾರ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಹೇಳುತ್ತಿರುವುದು ಸೂಕ್ತವಾದುದು. ಕಾನೂನನ್ನು ಯಾರು ಕೈಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದರೆ ಪ್ರಶ್ನೆ ಇರುವುದು ಮಾನ್ಯ ಶ್ರೀರಾಮರೆಡ್ಡಿಯವರಿಗೆ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಗೋವು ಹಿಂದೂಗಳಿಗೆ ತುಂಬಾ ಪವಿತ್ರವಾದುದು, ಅದನ್ನು ಪೂಜೆ ಮಾಡುತ್ತಾರೆ. ಗೋವಿನ ಮಾಂಸ ಮಾರಾಟ ಮಾಡಬಾರದು ಎಂದು ಕಾನೂನು ನಿಷೇಧ ಇದೆಯೋ ಗೊತ್ತಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಒಂದು ವೇಳೆ ನಿಷೇಧ ಇದ್ದರೆ ಅಧಿಕಾರಿಗಳು ಯಾರನ್ನೋ ತೃಪ್ತಿಪಡಿಸುವುದಕ್ಕೋಸ್ಕರ ರಾತ್ರೋ ರಾತ್ರಿ ಸಾವಿರಾರು ಸಂಖ್ಯೆಯ ಗೋವುಗಳನ್ನು ಹತ್ಯೆ ಮಾಡಿಸುತ್ತಿದ್ದಾರೆ ಎಂಬ ಭಾವನೆ ಬಂದಿದೆ. ರೈತರು ಗ್ರಾಮೀಣ ಪ್ರದೇಶದ ಜನರು ಇದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ. ಕಾನೂನು ಜಾರಿ ಇದ್ದರೆ ಕಟ್ಟುನಿಟ್ಟಾಗಿ ಅದನ್ನು ಪಾಲಿಸಲು ತಾವು ಸೂಚನೆ ಕೊಡಬೇಕು. ವಾಸ್ತವಾಂಶ ಏನು ಇದೆ ಎಂಬ ಬಗ್ಗೆ ಸ್ಪಷ್ಟನೆ ಕೊಟ್ಟರೆ ಜನತೆಗೆ ಗೊತ್ತಾಗುತ್ತದೆ. ಇಲ್ಲದೇ ಇದ್ದರೆ ಒಂದು ರೀತಿ ಗೊಂದಲ ಆಗುತ್ತದೆ. ಜನರ ತಪ್ಪು ಗ್ರಹಿಕೆಗೆ ಅವಕಾಶ ಆಗುತ್ತದೆ.

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) : ರಾಜ್ಯದಲ್ಲಿ ಗೋವಿನ ಮಾಂಸ ಮಾರಾಟ ಮಾಡಬಾರದು ಎಂದು ನಿಷೇಧ ಇದೆ. ಇದರ ಬಗ್ಗೆ ಯಾರು ಉಲ್ಲಂಘನೆ ಮಾಡುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಯಾರು ಅಮಾನವೀಯವಾಗಿ ವರ್ತನೆ ಮಾಡಿದ್ದಾರೆ ಅವರ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ.

(ಉ) ವಿಷಯ : ದಿದ್ದಗಿ ಗ್ರಾಮದಲ್ಲಿ ಆಲಿಕಲ್ಲು ಮಳೆಯಿಂದ ಬೆಳೆ ಹಾನಿ, ಜಾನುವಾರುಗಳ ಸಾವಿನ ಬಗ್ಗೆ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ದಿನಾಂಕ 9.03.2005 ರಂದು ಸಿಂಧನೂರು ತಾಲ್ಲೂಕಿನ ದಿದ್ದಗಿ ಗ್ರಾಮದಲ್ಲಿ 8 ರಾತ್ರಿ ಸತತವಾಗಿ ಒಂದು ಗಂಟೆಗಳ ಕಾಲ ಸುರಿದ ಆಲಿಕಲ್ಲು ಮಳೆಯಿಂದಾಗಿ ಸುಮಾರು ಒಂದು ಸಾವಿರ ಎಕರೆ ಜಮೀನಿನಲ್ಲಿ ಬೆಳೆದ ಬೆಳೆಗಳಿಗೆ ಹಾನಿಯಾಗಿದೆ. ಇದರ ಜೊತೆಗೆ ಮನೆಗಳು, ಗುಡಿಸಲುಗಳು ಕುಸಿದು ಬಿದ್ದು, ಜಾನುವಾರುಗಳು ಸಾವನ್ನಪ್ಪಿ ಜನರಿಗೆ ಕೂಡ ತುಂಬಾ ತೊಂದರೆ ಆಗಿದೆ. ಹಿಂದೆ ಸಹ ಬೆಳೆ ನಾಶವಾಗಿದ್ದ ಸಂದರ್ಭದಲ್ಲಿ ಈ ಸದನದಲ್ಲಿ ವಿಚಾರ ಪ್ರಸ್ತಾಪ ಮಾಡಿದ್ದಾಗ ಕಾನೂನು ಸಚಿವರು ಉತ್ತರ ಕೊಟ್ಟು ಮುನ್ಸೂಚನಾ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದ್ದರು. ದಯಮಾಡಿ ರೈತರಿಗೆ ಪರಿಹಾರವನ್ನು ಕೊಡತಕ್ಕ ಕೆಲಸ ಆಗಬೇಕು ಮತ್ತು ಮನೆಗಳನ್ನು ಕಳೆದುಕೊಂಡಂತ ಜನರಿಗೆ ಮನೆಗಳನ್ನು ಕಟ್ಟಿಸಿ ಕೊಡುವಂತಹ ಕೆಲಸಗಳು ಆಗಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ದಿದ್ದಗಿ ತಾಲ್ಲೂಕಿನಲ್ಲಿ ಆದಂತಹ ಘಟನೆ ಬಗ್ಗೆ ನಾನು ಟಿವಿಯಲ್ಲಿ ನೋಡಿದ್ದೇನೆ. ಸಂಬಂಧ ಪಟ್ಟಂತಹ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅಲ್ಲಿ ಏನೇನು ಲಾಸ್ ಆಗಿದೆ ಎಂಬ ಬಗ್ಗೆ ವರದಿ ಕೊಡಲು ತಿಳಿಸಿದ್ದೇನೆ. ವರದಿ ಬಂದ ಕೂಡಲೇ ಮನೆಗಳು ಬಿದ್ದು ಹೋಗಿದ್ದರೆ ಆಶ್ರಯ, ಅಂಬೇಡ್ಕರ್ ಯೋಜನೆಯಡಿಯಲ್ಲಿ ಮನೆಗಳನ್ನು ಕೊಡುವುದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುವುದರ ಜೊತೆಗೆ ಬೆಳೆ ನಾಶ ಆಗಿದ್ದರೆ ಯಾವ ತರಹ ಪರಿಹಾರ ಕೊಡಬೇಕು ಎಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗೆ ನೇರವಾಗಿ ಸೂಚನೆ ನೀಡುತ್ತೇನೆ. ಮಾನ್ಯ ಶಾಸಕರಿಗೂ ಈ ಬಗ್ಗೆ ವಿಚಾರ ತಿಳಿಸುತ್ತೇನೆಂದು ತಮ್ಮ ಮೂಲಕ ತಿಳಿಸಲು ಇಷ್ಟಪಡುತ್ತೇನೆ.

(ಊ) ವಿಷಯ : 'ಮಹಿಳೆಯರ ಮೇಲಿನ ದೌರ್ಜನ್ಯ'

†ಶ್ರೀಮತಿ ಟಿ ಶಕುಂತಲಾ ಶೆಟ್ಟಿ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಗೋಹತ್ಯೆಯನ್ನು ವಿರೋಧಿಸಿ ಹಲವಾರು ಸದಸ್ಯರುಗಳು ಮಾತನಾಡಿದ್ದಾರೆ. ಅದಕ್ಕೆ ಹೆಚ್ಚಿನ ಮಹತ್ವವನ್ನು ಸಹ ನೀಡಿದ್ದಾರೆ. ಆದರೆ ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯ, ಶೋಷಣೆ ನಡೆದಾಗ ಅದಕ್ಕೆ ಮಾತನಾಡುವವರು ಯಾರೂ ಇಲ್ಲವೇ ಎಂದಾಗ ಬೇಸರ ಆಗುತ್ತದೆ. ಮಹಿಳೆಯರ ಮೇಲೆ ದೌರ್ಜನ್ಯ, ಶೋಷಣೆ, ಅತ್ಯಾಚಾರ, ಅನಾಚಾರಗಳು ನಡೆಯುತ್ತಿವೆ. ಇಡೀ ಕರ್ನಾಟಕ ರಾಜ್ಯದಲ್ಲಿ 6617 ಒಂದು ವರ್ಷದಲ್ಲಿ ಅತ್ಯಾಚಾರ ಪ್ರಕರಣಗಳು ದಾಖಲು ಆಗಿದೆ. ಇಡೀ ರಾಷ್ಟ್ರದಲ್ಲಿ ಜನವರಿಯಿಂದ ಸೆಪ್ಟೆಂಬರ್‌ವರೆಗೆ 12,414 ಅತ್ಯಾಚಾರ ಕೇಸುಗಳು ದಾಖಲು ಆಗಿವೆ. ದಾಖಲು ಆಗದೇ ಎಷ್ಟೋ ಕೇಸುಗಳು ಬಾಕಿ ಉಳಿದಿವೆ ಗೊತ್ತಿಲ್ಲ. 14 ಲಕ್ಷ 50 ಸಾವಿರ ಕೇಸುಗಳು ನ್ಯಾಯಾಲಯದಲ್ಲಿ ಮಹಿಳೆಯರ ಬಗ್ಗೆ ಕೇಸುಗಳಿದೆ. ಎಲ್ಲಾ ಕೇಸುಗಳು ದಾಖಲು ಆಗಿವೆಯೇ ವಿನಹ ಒಂದು ಪರ್ಸೆಂಟ್‌ನಷ್ಟು ಸಹ ಯಾರಿಗೂ ಶಿಕ್ಷೆ ಆಗಿದ್ದು ಇಲ್ಲ.. ಇತ್ತೀಚೆಗೆ ನಮ್ಮ ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ಆಗಿರುವ ಘಟನೆ ಪೇಪರಿನಲ್ಲಿ ಬಂದಿದೆ. 6ನೇ ಕ್ಲಾಸ್‌ನ ಹುಡುಗಿಯನ್ನು ಗೋಣಿ ಚೀಲದಲ್ಲಿ ತುರುಕಿ ಕೊಲೆ ಮಾಡಲಾಗಿದೆ. ಅದೇ ರೀತಿ ನನ್ನ ಕ್ಷೇತ್ರದಲ್ಲಿ ಮಾರ್ಚ್ 1 ರಂದು ಶಾಲೆ ಬಿಟ್ಟು ಮನೆಗೆ ಹೋಗುತ್ತಿದ್ದ 6ನೇ ತರಗತಿ ವಿದ್ಯಾರ್ಥಿನಿಯನ್ನು ಅತ್ಯಾಚಾರ ಮಾಡಿದ್ದಾನೆ.

† ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ.

ಕೇಸು ದಾಖಲಾಗಿದೆ. ಆರೋಪಿಯನ್ನು ಬಂಧಿಸಲಾಗಿದೆ. ಆದರೆ ಅದೇ ದಿನ ಇನ್ನೊಂದು ನವ ವಿವಾಹಿತೆ ಜನವರಿ 30 ರಂದು ವಿವಾಹವಾದ ಮುಸ್ಲಿಂ ಹುಡುಗಿ ಅಪ್ಸಾಳ ಸಾವು ಸಂಭವಿಸಿದೆ. ಅಪ್ಸಾಳ ಹೆತ್ತವರು ಅದು ಕೊಲೆ ಎಂದು ದೂರು ಕೊಟ್ಟಿದ್ದಾರೆ. ಪೋಲೀಸ್ ಸ್ಟೇಷನ್‌ನಲ್ಲಿ ದೂರು ದಾಖಲಾಗಿಲ್ಲ. ಅವರು ಆತ್ಮಹತ್ಯೆ ಎನ್ನುತ್ತಾರೆ. ಅಪ್ಸಾಳ ಊರಿನ ಜಮಾತೆಯವರು ನನಗೆ ದೂರು ನೀಡಿ ಇದನ್ನು ಅಧಿವೇಶನದಲ್ಲಿ ಪ್ರಸ್ತಾಪ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ತುಂಬಾ ಸೀರಿಯಸ್ ಆದಂತಹ ಸಬ್ಜೆಕ್ಟನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ. ಮಾನ್ಯ ಗೃಹ ಸಚಿವರು ಇಲ್ಲ. ಯಾವ ಸಚಿವರೂ ಕೇಳುತ್ತಿಲ್ಲವೆಂದು ನನ್ನ ಭಾವನೆ. ಬಹಳ ಸೀರಿಯಸ್ ಆದಂತಹ ಸಬ್ಜೆಕ್ಟನ್ನು ಒಬ್ಬ ಮಹಿಳಾ ಸದಸ್ಯರು ಮಾತನಾಡುತ್ತಿರುವಾಗ ಅದರ ಬಗ್ಗೆ ಗಮನ ಕೊಡಬೇಕು.

ಶ್ರೀ ಟಿ.ಶಕುಂತಲಾ ಶೆಟ್ಟಿ : ಮದುವೆ ಆದಂತಹ ಹೆಣ್ಣು ಮಕ್ಕಳು ಸತ್ತಾಗ ಅದನ್ನು ಪೋಲೀಸ್‌ನವರು ಆತ್ಮಹತ್ಯೆ ಎಂದು ಬರೆಯುತ್ತಾರೆ. ಪುತ್ತೂರು ಕ್ಷೇತ್ರದಲ್ಲಿ ಕೊಲೆ ಪ್ರಕರಣದಲ್ಲಿ ಯಾರು ಪೋಸ್ಟ್ ಮಾರ್ಟಮ್ ಮಾಡಿದ್ದಾರೆ, ಆ ಡಾಕ್ಟರ್‌ಗೆ ಡಿಎಚ್‌ಓ ಮೆಮೋ ಕೊಟ್ಟಿದ್ದಾರೆ. ಹೆಣ್ಣು ಮಕ್ಕಳು ಸತ್ತಾಗ ಅದು ಕೊಲೆ ಅಲ್ಲ, ಆತ್ಮಹತ್ಯೆ ಎಂದು ಬರೆಯುವ ವಿಷಯ ಮಾಮೂಲು ಆಗಿದೆ. ವಿವಾಹಿತ ಹೆಣ್ಣು ಮಕ್ಕಳ ಆತ್ಮಹತ್ಯೆ ಯಾವ ಕಾರಣಕ್ಕೆ ಆಗಿದ್ದರೂ, ಅದನ್ನು 'ಆತ್ಮಹತ್ಯೆ' ಎಂಬ ಹಣೆ ಪಟ್ಟಿ ಅಂಟಿಸಲಾಗುತ್ತಿದೆ. ಹಾಗಾದರೆ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಅವರ ಗಂಡ, ಮೈದುನ ಏಕೆ ಪರಾರಿ ಆಗುತ್ತಾರೆ? ಪೋಲೀಸರು ಏಕೆ ಮೃತಳ ಅತ್ತೆ–ನಾದಿನಿಯನ್ನು ವಿಚಾರಣೆಗೆ ಒಳಪಡಿಸುವುದಿಲ್ಲ? ನನಗೆ ಏನು ಅನಿಸುತ್ತಿದೆ ಎಂದರೆ ಓಟು ಮತ್ತು ನೋಟು ಇವುಗಳ ಮಧ್ಯೆ ಹೆಣ್ಣು ಮಕ್ಕಳು ಸತ್ತು ಹೋಗಿದ್ದಾರೆ, ನಲುಗಿ ಹೋಗಿದ್ದಾರೆ. ನನ್ನ ಕ್ಷೇತ್ರದಲ್ಲಿಯೇ ಇತ್ತೀಚೆಗೆ ವರದಕ್ಷಿಣೆ ಕಿರುಕುಳಕ್ಕೆ ಒಬ್ಬ ಹೆಣ್ಣು ಮಗಳು ಬಲಿಯಾಗಿದ್ದಾರೆ. ಸಾರಾಸಗಟಾಗಿ ಹೇಳಬೇಕೆಂದರೆ ಓಟು–ನೋಟುಗಳ ಮಧ್ಯೆ ನಲುಗಿ ಹೋಗುತ್ತಿರುವ ಹೆಣ್ಣು ಮಕ್ಕಳು ತಮ್ಮ ಮೇಲಿನ ದೌರ್ಜನ್ಯದ ವಿರುದ್ಧ ಸಮರ್ಥವಾಗಿ ಹೋರಾಟ ನಡೆಸುವ ದೃಷ್ಟಿಯಿಂದ ಮಾನ್ಯ ಹಣಕಾಸಿನ ಸಚಿವರು ತಮ್ಮ ಬಜೆಟ್‌ನಲ್ಲಿ ಎಲ್ಲಾ ಹೆಣ್ಣು ಮಕ್ಕಳಿಗೆ ಕೈಗೆ ಒಂದು ಗನ್ ಕೊಡಬೇಕೆಂದು ಮನವಿ ಮಾಡಿಕೊಂಡು ಇಷ್ಟು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆ ಸಲ್ಲಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಹಣಕಾಸು ಹಾಗೂ ಉಪಮುಖ್ಯ ಮಂತ್ರಿಗಳು) : ಬಹಳ ಗಂಭೀರವಾದಂತಹ ವಿಚಾರವನ್ನು ಮಾನ್ಯ ಸದಸ್ಯಣಿಯವರು ಪ್ರಸ್ತಾಪ ಮಾಡಿದ್ದಾರೆ. ಎಲ್ಲಾ ಮಹಿಳೆಯರಿಗೂ ಗನ್ ಕೊಡಬೇಕೆಂದು ಹೇಳಿದ್ದಾರೆ. ಗನ್ ಮೂಲಕ ಯಾವುದೇ ರೀತಿ ಸಮಸ್ಯೆ ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ. ಇದು ನಿಮಗೂ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಅವರ ಸಮಸ್ಯೆಯನ್ನು ಕಾನೂನು ರೀತಿಯಿಂದ ಪರಿಹಾರ ಮಾಡಲು ಪ್ರಯತ್ನ ಮಾಡೋಣ. ಒಂದು ವೇಳೆ ಹೆಣ್ಣು ಮಕ್ಕಳಿಗೆ ಗನ್ ಕೊಟ್ಟರೆ ಗಂಡಸರಿಗೆ ಏನು ಮಾಡುವುದು? ಸಮಸ್ಯೆ ಗಂಭೀರವಾಗಿರುವುದರಿಂದ ಕಾನೂನು ರೀತಿಯಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಈ ಕುರಿತಂತೆ ಒಂದು ಮಸೂದೆ ತೆಗೆದುಕೊಂಡು ಬನ್ನಿ. ಗಂಡು ಮಕ್ಕಳು ಅಡುಗೆ ಮನೆಗೆ ಮತ್ತು ಹೆಣ್ಣು ಮಕ್ಕಳು ಬೀದಿಗೆ ಬರಲಿ. ನಾವೆಲ್ಲರೂ ಆ ಮಸೂದೆಗೆ ಬೆಂಬಲ ನೀಡೋಣ. ನಮಗಂತೂ ಹೊರಗೆ ಬಂದು ಸಾಕಾಗಿ ಹೋಗಿದೆ!

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಇದು ಮಹಾನ್ ಸುಳ್ಳುಗಳಲ್ಲಿ ಒಂದು ಸುಳ್ಳಾಗಿದೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಏನು ಹೇಳಿದ್ದಾರೆ, ಖಂಡಿತವಾಗಿಯೂ ಇವರು ಮನೆಯಲ್ಲಿ ಸೌಟು ಹಿಡಿದುಕೊಂಡಿರುವುದಿಲ್ಲ. ಅವರು ಲೇವಡಿ ಮಾಡುವುದಕ್ಕೋಸ್ಕರ ಆ ರೀತಿ ಹೇಳುತ್ತಿದ್ದಾರಷ್ಟೆ. ಇದು ಗಂಭೀರ ವಿಚಾರವಾಗಿದೆ. ಮಾನ್ಯ ಮಹಿಳಾ ಸದಸ್ಯರು ಗಂಭೀರವಾದ ವಿಚಾರ ಪ್ರಸ್ತಾಪಿಸುತ್ತಿದ್ದು, ಹೆಣ್ಣು ಮಕ್ಕಳ ಮೇಲೆ ಜರುಗಿರುವ ದೌರ್ಜನ್ಯ ಪ್ರಕರಣ ಕುರಿತು ಸದನದಲ್ಲಿ ಯಾರೂ ಚರ್ಚಿಸಿಲ್ಲವೆಂದು ಹೇಳಿದ್ದಾರೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಪ್ರಸ್ತಾಪಿಸಿರುವ ಗಂಭೀರ ವಿಚಾರಗಳ ಬಗ್ಗೆ ಸರ್ಕಾರ ಸ್ಪಂದಿಸಿ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. ಮಹಿಳೆಯರು ಮೇಲೆ ನಿರಂತರವಾಗಿ ನಡೆಯುತ್ತಿರುವ ಶೋಷಣೆ ಕುರಿತು ಸರ್ಕಾರ ಹೇಳಿಕೆ ನೀಡಬೇಕು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಮಾತನಾಡುತಯ್ತಾ, 'ಈ ಸದನದಲ್ಲಿ ವಾಟಾಳ್ ನಾಗರಾಜ್‌ರವರು ಸುಳ್ಳು ಹೇಳಿದರು' ಎಂದು ತಿಳಿಸಿದ್ದಾರೆ.

ಅಧ್ಯಕ್ಷರು : ನೀವು ಅಕ್ಕಪಕ್ಕದಲ್ಲಿ ಕುಳಿತುಕೊಂಡು ಏನೇನು ಮಾತನಾಡಿಕೊಳ್ಳುತ್ತೀರೋ, ನನಗೊಂದೂ ಅರ್ಥವಾಗುವುದಿಲ್ಲ.

(ನಗು)

ಖ. ವಿಷಯ : ಬೆಂಗಳೂರು ಸುತ್ತಮುತ್ತಲಿನ ನಗರಸಭೆಗಳ ವ್ಯಾಪ್ತಿಯಲ್ಲಿರುವ ರೆವಿನ್ಯೂ ನಿವೇಶನಗಳಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿಕೊಂಡಿರುವವರಿಂದ ಅಭಿವೃದ್ಧಿ ಶುಲ್ಕ ವಸೂಲು ಮಾಡುವ ಮೂಲಕ ಸಕ್ರಮಗೊಳಿಸುವ ಕುರಿತು.

....

ಶ್ರೀ ಆರ್.ಅಶೋಕ್(ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಸುತ್ತಮುತ್ತಲಿರುವ ರೆವಿನ್ಯೂ ನಿವೇಶನ ಕುರಿತಂತೆ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳಾಗಿರುವ ಸಿದ್ದರಾಮಯ್ಯನವರು ತಮ್ಮ ಆಯವ್ಯಯ ಪತ್ರದ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಇದರ ಬಗ್ಗೆ ಈ ಹಿಂದೆ ಸಾಕಷ್ಟು ಸಲ ಹೇಳಿದ್ದಾರೆ, ನಾವೂ ಕೂಡ ಸಾಕಷ್ಟು ಸಲ ಕೇಳಿದ್ದೇವೆ. ಹಿಂದೆ ಮಾನ್ಯ ಹೆಚ್.ಡಿ.ದೇವೇಗೌಡರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಬೆಂಗಳೂರು ಸುತ್ತಮುತ್ತಲಿರುವ ನಗರಸಭೆಗಳ ವ್ಯಾಪ್ತಿಗೊಳಪಡುವ ಪ್ರದೇಶಗಳಲ್ಲಿ ರೆವಿನ್ಯೂ ನಿವೇಶನಗಳಲ್ಲಿ ಅನಧಿಕೃತವಾಗಿ ನಿರ್ಮಿಸಿಕೊಂಡಿದ್ದ ಸುಮಾರು 5-6 ಲಕ್ಷ ಮನೆಗಳನ್ನು ಉರುಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಕಾರ್ಪೋರೇಷನ್ ಕ್ರಮ ಕೈಗೊಂಡ ಹಿನ್ನೆಲೆಯಲ್ಲಿ ಆ ಮನೆಗಳಲ್ಲಿ ವಾಸಿಸುತ್ತಿದ್ದವರಿಗೆ ತೀವ್ರ ತೊಂದರೆಯುಂಟಾದಾಗ, ದೇವೇಗೌಡರು ಬಿನ್ನಿಪೇಟೆ ಹಾಗೂ ಇನ್ನಿತರ ಕ್ಷೇತ್ರಗಳಿಗೆ ಭೇಟಿ ಕೊಡುವ ಮೂಲಕ ಅನಧಿಕೃತವಾಗಿ ನಿರ್ಮಿಸಿಕೊಂಡಿದ್ದ ಮನೆಗಳನ್ನು ಸಕ್ರಮಗೊಳಿಸುವ ಸಲುವಾಗಿ ಅವರುಗಳಿಂದ 14 ಲಕ್ಷ ರೂಪಾಯಿಗಳ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು ಅನಧಿಕೃತವಾಗಿ ನಿರ್ಮಿಸಿಕೊಂಡಿದ್ದ ಎಲ್ಲಾ ಮನೆಗಳನ್ನು ಸಕ್ರಮಗೊಳಿಸಿ ಅವರಿಗೆ ಖಾತೆಗಳನ್ನೂ ಮಾಡಿಸಿಕೊಟ್ಟಿರುವುದನ್ನು ನೋಡಿದ್ದೇವೆ. . ಇದಾದ ಬಳಿಕವೂ ಇತರೆಡೆಗಳಲ್ಲಿ ಇದೇ ರೀತಿ ಅನಧಿಕೃತವಾಗಿ ನಿರ್ಮಿಸಿಕೊಂಡಿದ್ದ ಮನೆಗಳನ್ನು ಸಕ್ರಮಗೊಳಿಸಿದ ಹಿನ್ನೆಲೆಯಲ್ಲಿ ಸರ್ಕಾರದ ಬೊಕ್ಕಸಕ್ಕೆ

ಸುಮಾರು 350 ರಿಂದ 400 ಕೋಟಿ ರೂಪಾಯಿಗಳನ್ನು ಹಣ ಸಂಗ್ರಹವಾಗಿದೆ. ಇದರಿಂದಾಗಿ ಬಹಳಷ್ಟು ಅಭಿವೃದ್ಧಿ ಕೆಲಸ-ಕಾರ್ಯಗಳಾಗಿವೆ. ಆದರೆ, ಇತ್ತೀಚೆಗೆ ಏನಾಗಿದೆಯೆಂದರೆ, ಕಳೆದ ವರ್ಷ ನೂತನವಾಗಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಚಿತಾವಣೆಯಿಂದಲೋ ಅಥವಾ ಮತ್ಯಾರೋ ಏನು ಚಿತಾವಣೆ ಮಾಡಿದರೋ ಗೊತ್ತಿಲ್ಲ. ಈ ರೀತಿ ಅನಧಿಕೃತವಾಗಿ ನಿರ್ಮಿಸಿಕೊಂಡಿದ್ದ ಮನೆಗಳ ಸಂಬಂಧ ವಸೂಲು ಮಾಡುತ್ತಿದ್ದ ಅಭಿವೃದ್ಧಿ ಶುಲ್ಕವನ್ನು ಏಕಾಏಕಿ ತಡೆಹಿಡಿಯಲಾಯಿತು. ಇದರಿಂದಾಗಿ ಯಾವುದೇ ಅಭಿವೃದ್ಧಿ ಕೆಲಸ-ಕಾರ್ಯಗಳು ಸಾಗುತ್ತಿಲ್ಲ. ಈ ಸಂಬಂಧ ಇವೊತ್ತು ನ್ಯಾಯಾಲಯದಲ್ಲಿ ಸಾವಿರಾರು ಪ್ರಕರಣಗಳು ದಾಖಲಾಗಿವೆ. ಒಂದೊಂದು ಪೋಲೀಸ್ ಠಾಣೆಗಳಲ್ಲೂ ನೂರಾರು ಮೊಕದ್ದಮೆಗಳು ದಾಖಲಾಗಿ, ಮನೆಗಳ ವಿವಾದ ಕುರಿತಂತೆ ಹೊಡೆದಾಟ, ಬಡಿದಾಟ, ಜಗಳ ನಿರಂತರವಾಗಿ ನಡೆಯುತ್ತಿದೆ. ಯಾರದೋ ಮನೆಗೆ ಯಾರಿಗೋ ಹಕ್ಕುಪತ್ರ ನೀಡಿದ್ದಾರೆ, ಯಾರಿಗೋ G.P.A. ಮಾಡಿಕೊಟ್ಟಿದ್ದಾರೆ. ಇವೊತ್ತು ಅವರ ಮಕ್ಕಳು ಬಂದು 'ಈ ನಿವೇಶನವನ್ನು ನಮ್ಮ ತಂದೆ ಕೊಂಡುಕೊಂಡಿದ್ದು, ಇದು ನಮಗೇ ಸೇರಬೇಕು' ಎಂದು ತಕರಾರು ಎತ್ತುತ್ತಿರುವದರಿಂದ ಅಂತಹ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವವರೆಲ್ಲರೂ ನಿರಾಶ್ರಿತರಾಗಬೇಕಾದ ಪರಿಸ್ಥಿತಿ ಬಂದಿದೆ. ಇದರಿಂದ ಹೊಡೆದಾಟ, ಜಗಳವುಂಟಾಗಿ ಬೆಂಗಳೂರಿನ ಏಳೂ ಜಿಲ್ಲೆಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ. ಹಿಂದೆ ಒಂದೊಂದು ರೆವಿನ್ಯೂ ನಿವೇಶನದ ಬೆಲೆ ಐವತ್ತು ಸಾವಿರ ರೂಪಾಯಿಗಳಿದ್ದರೆ ಇಂದು ಅದರ ಬೆಲೆ ಮೂರು ಪಟ್ಟು, ನಾಲ್ಕು ಪಟ್ಟು ಹೆಚ್ಚಾಗಿ ತೀವ್ರಗತಿಯಲ್ಲಿ ಏರುತ್ತಿರುವುದರಿಂದ, ರೌಡಿಗಳನ್ನು ನೇಮಿಸಿಕೊಳ್ಳುವ ಮೂಲಕ ಅವರಿಂದ ಡೀಲ್ ಮಾಡಿಸಲಾಗುತ್ತಿದೆ. ತನ್ಮೂಲಕ ರೆವಿನ್ಯೂ ನಿವೇಶನಗಳ ಹಳೆಯ ಮಾಲೀಕರುಗಳು ಅದನ್ನು ವಶಪಡಿಸಿಕೊಳ್ಳುತ್ತಿದ್ದಾರೆ. ಅಂತಹ ನಿವೇಶನಗಳಲ್ಲಿ ವಾಸಿಸುತ್ತಿರುವ ಬಡವರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನ ದೊರಕಿಸಿ ಕೊಡುವುದಕ್ಕಾಗಿಲ್ಲ. ನಿವೇಶನ ದೊರಕುತ್ತದೆಂಬ ಆಶಾಭಾವನೆಯಿಂದ ರೆವಿನ್ಯೂ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುವುದರಿಂದ ಈಗ ಅವರೆಲ್ಲರೂ ನಿರ್ಗತಿಕರಾಗಿ ಹೊರಗೆ ಬರುತ್ತಿದ್ದಾರೆ. ಹೀಗಾಗಿ, ಬೆಂಗಳೂರಿನಲ್ಲಿ ಕಾನೂನು ಹಾಗು ಸುವ್ಯವಸ್ಥೆ ಹದಗೆಡುತ್ತಿದೆ.

ಬೆಂಗಳೂರು ಸುತ್ತಮುತ್ತಲಿರುವ ನಗರಸಭೆಗಳ ವ್ಯಾಪ್ತಿಗೊಳಪಡುವ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳು ಜರುಗುತ್ತಿಲ್ಲ. ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗುತ್ತಿಲ್ಲ, ಬೀದಿ ದೀಪಗಳನ್ನು ಅಳವಡಿಸುವುದಕ್ಕಾಗುತ್ತಿಲ್ಲ, ನೈರ್ಮಲ್ಯವೂ ಇಲ್ಲ. ನೌಕರರಿಗೆ ತಿಂಗಳಿಗೆ 30 ರಿಂದ 40 ಲಕ್ಷ ರೂಪಾಯಿಗಳಷ್ಟು ಸಂಬಳ ನೀಡಬೇಕಾಗಿದೆ. ಈಗ ಸಂಬಳವೂ ನೀಡದಿರುವ ಪರಿಸ್ಥಿತಿಯುಂಟಾಗಿದೆ. ಅದಕ್ಕೋಸ್ಕರ, ಈ ಸಂಬಂಧ ಹಿಂದೆ ಹೊರಡಿಸಲಾಗಿದ್ದ ಆದೇಶವನ್ನು ಜಾರಿಗೆ ತರಬೇಕು. ಒಂದೇ ಕಾನೂನಿದ್ದರೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿ ಶುಲ್ಕ ಸಂಗ್ರಹಿಸುತ್ತಿದ್ದರೆ, ಸದರಿ ಶುಲ್ಕ ಸಂಗ್ರಹಿಸದಿರುವಂತೆ ನಗರಸಭೆಗಳಿಗೆ ಏಕೆ ತಡೆಹಿಡಿಯಲಾಗಿದೆ? ಹಿಂದಿನ ಮುಖ್ಯಮಂತ್ರಿಗಳ ಬಳಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಖಾತೆ ಇತ್ತು, ಅದರ ಉಸ್ತುವಾರಿ ನೋಡಿಕೊಂಡಿದ್ದರಿಂದ ಅದನ್ನು ಉಳಿಸಿಕೊಂಡಿದ್ದರು. ಆದರೆ, ಬದಲಾದ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನಗರಸಭೆ ಖಾತೆಯನ್ನು ಬೇರೆ ಮಂತ್ರಿಗಳಿಗೆ ವಹಿಸಿರುವುದರಿಂದ ಅಭಿವೃದ್ಧಿ ಶುಲ್ಕ ಸಂಗ್ರಹಿಸುವ ಪ್ರಕ್ರಿಯೆಯನ್ನು ತಡೆಹಿಡಿಯುವ ಮೂಲಕ ಏಕೆ ತಾರತಮ್ಯ

ಅಭಿವೃದ್ಧಿ ಶುಲ್ಕ ಸಂಗ್ರಹಿಸುವ ಪ್ರಕ್ರಿಯೆಯನ್ನು ತಡೆಹಿಡಿಯುವ ಮೂಲಕ ಏಕೆ ತಾರತಮ್ಯ ಎಸಗುತ್ತಿದ್ದೀರಿ? ಅಭಿವೃದ್ಧಿ ಶುಲ್ಕ ವಸೂಲು ಮಾಡುವಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಒಂದು ಕಾನೂನು, ನಗರ ಸಭೆಗಳಿಗೆ ಒಂದು ಕಾನೂನು ಎಂದು ಏಕೆ ವ್ಯತ್ಯಾಸ ಮಾಡುತ್ತಿದ್ದೀರಿ? ಇದನ್ನು ತಪ್ಪಿಸಬೇಕು. ಹಿಂದೆ ಜನತಾ ದಳ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಇಂತಹ ಕಾನೂನನ್ನು ಜಾರಿಗೆ ತಂದಿದೆ. ಇದನ್ನು ಏಕೆ ತಡೆಗಟ್ಟಿದ್ದೀರಿ? ಆದುದರಿಂದ, ಕೂಡಲೇ ಇದರ ಬಗ್ಗೆ ಕ್ರಮ ಕೈಗೊಂಡು ಅಭಿವೃದ್ಧಿ ಶುಲ್ಕವನ್ನು ವಸೂಲು ಮಾಡಿದರೆ ನಗರಸಭೆಗಳಿಗೆ ಆದಾಯ ಬರುತ್ತದೆ. ಇಲ್ಲದಿದ್ದರೆ, ಸರ್ಕಾರದ ಅನುದಾನಕ್ಕಾಗಿ ಕಾಯುವ ಪರಿಸ್ಥಿತಿ ಉಂಟಾಗುತ್ತದೆ. ಅಲ್ಲದೆ, ಅಭಿವೃದ್ಧಿ ಕಾರ್ಯಗಳೂ ಸಹ ಕುಂಠಿತಗೊಂಡಿರುವುದರಿಂದ, ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂದು ಸರ್ಕಾರದಲ್ಲಿ ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ಈ ಬಗ್ಗೆ ಸರ್ಕಾರ ನ್ಯಾಯಯುತ ತೀರ್ಮಾನ ಕೈಗೊಂಡರೆ ನಗರಸಭೆಗಳು ಉದ್ಧಾರವಾಗುತ್ತವೆ. ಅಷ್ಟೇ ಅಲ್ಲದೆ, ಬೆಂಗಳೂರು ಹೊರವಲಯವೂ ಅಭಿವೃದ್ಧಿಯಾಗಬೇಕು. ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವಂತೆ ರೆವಿನ್ಯೂ ನಿವೇಶನಗಳಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವವರಿಗೆ ದಂಡ ವಿಧಿಸುವ ಮೂಲಕ ಸಕ್ರಮಗೊಳಿಸುವ ಕಾರ್ಯ ಜರಗುತ್ತಿದೆ. ಈ ಕುರಿತಂತೆ ಹಿಂದೆ ಒಂದು ಸಂಪುಟ ಉಪ ಸಮಿತಿ ರಚನೆಯಾಗಿ, ಮಧ್ಯೆ ನಿಂತುಹೋಯಿತು. ಬೆಂಗಳೂರು ಮಾತ್ರವಲ್ಲದೆ ಮೈಸೂರು ಹಾಗೂ ಇನ್ನಿತರ ಅನೇಕ ಪಟ್ಟಣ ಪ್ರದೇಶಗಳಲ್ಲಿ ಈ ಕುರಿತಾದ ಕಾನೂನು ತೊಡಕಿದೆ. ಕಾನೂನಿಗೆ ತಿದ್ದುಪಡಿಯಾಗಬೇಕೆಂಬ ಕಾರಣವೂ ಇತ್ತು. ಈ ಕಾನೂನನ್ನು ಪರಿಶೀಲಿಸುವ ಮೂಲಕ ಕಾನೂನು ರೀತ್ಯ ಸರ್ಕಾರ ಕ್ರಮ ಕೈಗೊಳ್ಳುತ್ತದೆಂದು ತಮಗೆ ಹೇಳಬಯಸುತ್ತಿದ್ದೇನೆ. ಅಲ್ಲದೆ, ಒಂದೇ ಕಾನೂನಿದ್ದು, ಕಾರ್ಪೊರೇಷನ್‌ಗೆ ಮಾತ್ರ ಅನ್ವಯವಾಗಿ, ಸಿಟಿ ಮುನಿಸಿಪಾಲಿಟಿ ಕಾರ್ಪೊರೇಷನ್‌ಗಳಿಗೆ ಅನ್ವಯವಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕಾನೂನು ಒಂದೇ, ಅದು ಎಲ್ಲಾದಕ್ಕೂ ಅನ್ವಯವಾಗಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಏಕೆ ಅನ್ವಯವಾಗುವುದಿಲ್ಲವೆಂಬ ಅಂಶವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಋ) ವಿಷಯ: ಕಾರ್ಕಳದಲ್ಲಿ ಜನತಾ ದಳ ಕಾರ್ಯಕರ್ತನ ಹತ್ಯೆ ಸಂಬಂಧ ಆರೋಪಿಗಳನ್ನು ಬಂಧಿಸುವ ಕುರಿತು.

....

ಶ್ರೀವಿ.ಸುನೀಲ್‌ಕುಮಾರ್(ಕಾರ್ಕಳ): ಮಾನ್ಯ ಅಧ್ಯಕ್ಷರೆ, ಕಳೆದ ಫೆಬ್ರವರಿ ತಿಂಗಳ 23ನೇ ತಾರೀಖಿನಂದು ರಾತ್ರಿ ಕಾರ್ಕಳದ ಪಂಚಾಯಿತಿ ಚುನಾವಣೆಗೆ ಜನತಾದಳ ಪಕ್ಷದಿಂದ ಸ್ಪರ್ಧಿಸಿದ್ದ ದಿವಾಕರ ಶೆಟ್ಟಿ ಎಂಬುವವರ ಕೊಲೆಯಾಗಿದೆ. ಸುಮಾರು 10-12 ಜನರಿದ್ದ ಗುಂಪೊಂದು ತಲವಾರ್‌ಗಳನ್ನು ಹಿಡಿದುಕೊಂಡು ಬಂದು ಅವರ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿದೆ. ಈ ಸಂಬಂಧ 22 ಜನರ ಮೇಲೆ ಪೊಲೀಸ್ ಇಲಾಖೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ. ಇದಾಗಿ 20 ದಿವಸಗಳು ಕಳೆದಿದ್ದರೂ ಸರ್ಕಾರ ಇದುವರೆಗೂ ಒಬ್ಬ ಆರೋಪಿಯನ್ನೂ ಸಹ ಬಂಧಿಸಿರುವುದಿಲ್ಲ. ಜನತಾದಳದ ಒಬ್ಬ ಕಾರ್ಯಕರ್ತನ ಕೊಲೆ ಇಷ್ಟು ದೊಡ್ಡ ಪ್ರಮಾಣದಲ್ಲಿ

ಪ್ರಕರಣದಲ್ಲಿ ಪೊಲೀಸ್ ಇಲಾಖೆ ಶಾಮೀಲಾಗಿದೆಯೆಂದು ಕಾರ್ಕಳದ ಇಡೀ ಜನರು ಮಾತನಾಡುತ್ತಿದ್ದಾರೆ. ಕೊಲೆ ಆರೋಪಿಗಳು ಎರಡು ದಿವಸಗಳ ಕಾಲ ಕ್ಷೇತ್ರ ಬಿಟ್ಟು ಹೋಗಲಿಲ್ಲ. ಅವರು ತಮ್ಮ ಮನೆಗಳಲ್ಲೇ ಉಳಿದುಕೊಂಡಿದ್ದಾರೆ. ಕೊಲೆ ಮಾಡಿದ ಆರೋಪಿಗಳು ಯಾರೆಂಬುದು ಇಡೀ ಕ್ಷೇತ್ರದ ಜನತೆಗೆ ಗೊತ್ತಿದೆ. ಒಂಭತ್ತು ಜನರ ತಂಡ ಪದೇ ಪದೇ ಕಾರ್ಕಳ ಕ್ಷೇತ್ರದಲ್ಲಿ ವಿವಿಧ ರೀತಿಯ ಚಟುವಟಿಕೆಗಳನ್ನು ನಡೆಸುತ್ತಾ ಅಶಾಂತಿ ವಾತಾವರಣ ನಿರ್ಮಿಸುತ್ತಿದ್ದರೂ ಸರ್ಕಾರವಾಗಲಿ, ಪೊಲೀಸ್ ಇಲಾಖೆಯಾಗಲಿ ಇದುವರೆಗೂ ಯಾವುದೇ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಕೊಲೆ ಜರಗಿರುವ ಸಂಬಂಧ ಪೊಲೀಸ್ ಇಲಾಖೆಯೂ ಶಾಮೀಲಾಗಿದೆಯೆಂದು ಜನರು ಇಲಾಖೆ ಮೇಲೆ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಆದಕಾರಣ, ಈ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಸರ್ಕಾರ ತಕ್ಷಣವೇ ಕೊಲೆ ಆರೋಪಿಗಳನ್ನು ಬಂಧಿಸುವ ಮೂಲಕ ಈ ಪ್ರಕರಣದಲ್ಲಿ ಪೊಲೀಸ್ ಇಲಾಖೆ ಬಗ್ಗೆ ಜನರು ಅನುಮಾನಪಡುತ್ತಿರುವುದರಿಂದ ಆ ಬಗ್ಗೆಯೂ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಗೃಹ ಇಲಾಖೆಯ ಕಾರ್ಯದರ್ಶಿಯವರೊಂದಿಗೆ ಮಾತನಾಡಿ, ಈ ಕೊಲೆ ಪ್ರಕರಣ ಸಂಬಂಧದಲ್ಲಿ ಯಾವ ಕಾರಣಕ್ಕಾಗಿ ಆರೋಪಿಗಳನ್ನು ಪೊಲೀಸರು ಇನ್ನೂ ದಸ್ತಗಿರಿ ಮಾಡುವುದಕ್ಕಾಗಿಲ್ಲವೆಂಬ ಬಗ್ಗೆ ಸರ್ಕಾರದ ಬಳಿ ಮಾಹಿತಿ ಇಲ್ಲ. ಆರೋಪಿಗಳನ್ನು ಬಂಧಿಸಲು ಏಕೆ ತಡವಾಗಿದೆ ಎಂಬ ಮಾಹಿತಿಯನ್ನು ತರಿಸಿಕೊಂಡು, ಆರೋಪಿಗಳನ್ನು ಬಂಧಿಸುವುದಕ್ಕೆ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸರ್ಕಾರದ ಪರವಾಗಿ ನಾನು ಮಾನ್ಯ ಸದಸ್ಯರಿಗೆ ಭರವಸೆ ನೀಡುತ್ತೇನೆ.

(ಎ) ವಿಷಯ: ಸದನದ ಅಧಿಕಾರಿಗಳ ಗ್ಯಾಲರಿಯಲ್ಲಿ ಇಲಾಖಾಧಿಕಾರಿಗಳು ಉಪಸ್ಥಿತರಿಲ್ಲದಿರುವ ಕುರಿತು.

....

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸಾಧ್ಯವಾದರೆ ಸದನವನ್ನು ಈಗ ಹತ್ತು ನಿಮಿಷಗಳ ಕಾಲ ಮುಂದೂಡಬೇಕು. ನೀವು ನಮ್ಮ ರಕ್ಷಣೆಗೆ ಬರಬೇಕು. ಆಡಳಿತ ಪಕ್ಷದ ಮೊದಲ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಿಲ್ಲ, ಉಪ ಮುಖ್ಯಮಂತ್ರಿಗಳೂ ಹೊರಟು ಹೋದರು, ತೊಂದರೆಯಿಲ್ಲ. ಅವರಿಗೆ ಕೆಲಸ ಕಾರ್ಯಗಳಿರುತ್ತದೆ, ಹೋಗುತ್ತಾರೆ. ಆದರೆ, ಇಲ್ಲಿ ಜವಾಬ್ದಾರಿ ಇರುವವರು ಯಾರಿದ್ದಾರೆ? ಶೂನ್ಯ ವೇಳೆಯಲ್ಲಿ ಇಷ್ಟು ಮಹತ್ವವಾದ ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪಿಸುತ್ತರುವಾಗ ಸಂಬಂಧಪಟ್ಟ ಉನ್ನತಾಧಿಕಾರಿಗಳು ಅದನ್ನು ಗಮನಕ್ಕೆ ತಂದುಕೊಂಡು ಕಾರ್ಯರೂಪಕ್ಕೆ ತರುವಂಥ ವ್ಯವಸ್ಥೆ ಇದೆಯೆಂದು ನಾವು ತಿಳಿದುಕೊಂಡಿದ್ದೇವೆ. ಅಪರೂಪಕ್ಕೆ ಸದನದಲ್ಲಿ ಇಂತಹ ಪ್ರಮುಖ ವಿಷಯಗಳು ಪ್ರಸ್ತಾವಾದಾಗ ಅಧಿಕಾರಿಗಳ ಗ್ಯಾಲರಿಯಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಇಲ್ಲವೆಂದರೆ ಹೇಗೆ?... ಸಿಂಧ್ಯಾರವರೆ, ಇವರಿಗೇನು ಧಾಡಿ? ಅಧಿಕಾರಿಗಳು ಎಲ್ಲಿಗೆ ಹೋಗುತ್ತಾರೆ? ಅವರಿಗೆ ಪುರುಸೊತ್ತು ಇಲ್ಲವೇ? ಮುಖ್ಯಮಂತ್ರಿಗಳಾದವರು ಅಧಿಕಾರಿಗಳ ದಂಡು ಕಟ್ಟಿಕೊಂಡು ಬಂದು

ಹೋಗುತ್ತಾರೆಯೇ ? ಇಲಾಖಾ ಕಾರ್ಯ ದರ್ಶಿಗಳಾದವರು ಮುಖ್ಯಮಂತ್ರಿಗಳೊಂದಿಗೆ ಹೋಗುತ್ತಾರೆ. ಆದರೆ, ಉಳಿದ ಅಧಿಕಾರಿಗಳು ಇಲ್ಲಿ ಹಾಜರಿರುವುದಕ್ಕೆ ಅವರಿಗೇನು ಧಾಡಿಯಾಗಿದೆ? ಇಲ್ಲಿ ಸರ್ಕಾರದ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಆದುದರಿಂದ, ತಾವು ಸದನವನ್ನು ಮುಂದಕ್ಕೆ ಹಾಕಿ. ನಿಮಗೆ ನಾವು ಸಹಕಾರ ಕೊಡುತ್ತೇವೆ.

ಅಧ್ಯಕ್ಷರು : ಈಗ ತಾವೆಲ್ಲರೂ ನನ್ನ ಮಾತನ್ನು ಕೇಳಬೇಕು. ಪ್ರಶ್ನೋತ್ತರ ವೇಳೆ, ಶೂನ್ಯ ವೇಳೆ...

(ವಿರೋಧ ಪಕ್ಷದ ನಾಯಕರಾದಿಯಾಗಿ ಭಾರತೀಯ ಜನತಾ ಪಕ್ಷದ ಸದಸ್ಯರು, ವಾಟಾಳ್ ನಾಗರಾಜ್ ಹಾಗೂ ಜೆ.ಸಿ.ಮಾಧುಸ್ವಾಮಿಯವರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ನೀವು ನನ್ನ ಮಾತನ್ನು ಕೇಳಿ. ಇಲ್ಲದಿದ್ದರೆ...

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಸಭೆಯನ್ನು ಮುಂದಕ್ಕೆ ಹಾಕಿ, ಮಧ್ಯಾಹ್ನ ತೆಗೆದುಕೊಳ್ಳಿ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯ ನಂತರ ಶೂನ್ಯವೇಳೆ, ಇದರಲ್ಲಿ ಹಲವಾರು ಪ್ರಮುಖ ವಿಚಾರಗಳನ್ನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡುತ್ತಾರೆ. ಪ್ರಶ್ನೋತ್ತರ ವೇಳೆಯ ರೀತಿಯೇ ಶೂನ್ಯ ವೇಳೆಯಲ್ಲೂ ಎಲ್ಲಾ ಅಧಿಕಾರಿಗಳು...

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು) : ಅಧಿಕಾರಿಗಳು ಉತ್ತರ ಕೊಡುವುದಿಲ್ಲ, ಸರ್ಕಾರ ಉತತರ ಕೊಡುತ್ತದೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ಇದು ಸರಿಯಲ್ಲ, ಈ ಧೋರಣೆ ಸರಿಯಲ್ಲ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಹಾಗಾದರೆ ಅಧಿಕಾರಿಗಳ್ಯಾರೂ ಸಭೆಗೆ ಬರತಕ್ಕದ್ದು ಬೇಡ. ಎಲ್ಲದಕ್ಕೂ ಶ್ರೀನಿವಾಸಗೌಡರೇ ಉತ್ತರ ಕೊಡಬೇಕು. ಯಾವ ಅಧಿಕಾರಿಯೂ ಬರತಕ್ಕದ್ದು ಬೇಡ. ಅವರು ಸಭೆಗೆ ಬರುವುದನ್ನು ರದ್ದುಮಾಡಿ..........ಅಧಿಕಾರಿಗಳು ಸಭೆಗೆ ಬರತಕ್ಕದ್ದು ಬೇಡ ಎಂದು ಹೇಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಎಲ್ಲರ ಪರವಾಗಿ ತಾವೇ ಮಾತನಾಡಿ. ತಾವು ಜವಾಬ್ದಾರಿಯುತವಾಗಿ ಮಾತನಾಡಬೇಕು.

ಶ್ರೀ ಕೆ.ಶ್ರೀನಿವಾಸಗೌಡ : ನಾನು ಜವಾಬ್ದಾರಿ ಇಟ್ಟುಕೊಂಡೇ ಮಾತನಾಡುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ತಾವು ಅಧಿಕಾರಿಗಳ ಪರವಾಗಿ ಮಾತನಾಡುತ್ತೀರಲ್ಲಾ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಇದನ್ನು ವಿರೋಧಿಸಿ ನಾವೆಲ್ಲರೂ ಸಭಾತ್ಯಾಗ ಮಾಡು ತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಈ ರೀತಿಯ ಧೋರಣೆಗೆ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಭಾರತೀಯ ಜನತಾಪಕ್ಷದ ಸದಸ್ಯರುಗಳು, ವಾಟಾಳ್ ಪಕ್ಷ ಹಾಗೂ ಸಂಯುಕ್ತ ಜನತಾದಳ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ನನ್ನ ಮಾತನ್ನು ಕೇಳಿ.

(ಗೊಂದಲ)

† ಶ್ರೀ ಪಿ.ಜಿ.ಆರ್. ಸಿಂಧ್ಯಾ : **(ಭಾರಿ ಮಧ್ಯಮ, ಹಾಗೂ ಸಣ್ಣ ಕೈಗಾರಿಕೆ ಸಚಿವರು)** ಮಾನ್ಯ ಅಧ್ಯಕ್ಷರೆ, ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಮ್ಮ ಕಾರ್ಯಾಂಗಕ್ಕೆ ಬಹಳ ದೊಡ್ಡ ಜವಾಬ್ದಾರಿ ಇದೆಯೆಂದು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಶಾಸಕಾಂಗಕ್ಕೆ ಪೂರಕವಾಗಿ ಕಾರ್ಯಾಂಗ ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತು ಸದನ ನಡೆಯತಕ್ಕ ಸಂದರ್ಭದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು, ಸಂಬಂಧಪಟ್ಟ ಮಂತ್ರಿಗಳಾದ ನಾವು, ಅದು ವಿಧಾನಸಭೆ ಇರಬೇಕು, ವಿಧಾನ ಪರಿಷತ್ತಿನಲ್ಲಿ ಇರಬೇಕು, ಆ ರೀತಿ ಜವಾಬ್ದಾರಿ ಇರತಕ್ಕ ಒಬ್ಬೊಬ್ಬ ಅಧಿಕಾರಿಗಳು ಇರಬೇಕು ಎನ್ನತಕ್ಕ ಸೂಚನೆಯನ್ನು ಕೊಟ್ಟಿದ್ದೇವೆ. ಯಾವುದೇ ಸಂದರ್ಭದಲ್ಲು ಕೂಡ, ಅದು ನನ್ನ ಇಲಾಖೆ ಇರಬಹುದು, ಕೃಷಿ, ಹಣಕಾಸು, ವೆಟರ್ನರಿ ಇಲಾಖೆ, ಕಂದಾಯ ಇಲಾಖೆ ಇರಬಹುದು, ನಾವು ಎಲ್ಲರಿಗೂ ಸೂಚನೆ ಕೊಟ್ಟಿರುತ್ತೇವೆ. ಅದರ ಪ್ರಕಾರ ಅವರುಗಳು ಇರಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ಯಾರಾದರು ಇರದಿದ್ದರೆ, ವಿರೋಧ ಪಕ್ಷದ ನಾಯಕರು ಮತ್ತು ಇತರೆ ಗೌರವಾನ್ವಿತ ಸದಸ್ಯರುಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದನ್ನು ನಾನು ಡಿಫೆಂಡ್ ಮಾಡಿಕೊಳ್ಳಲು ನಿಂತುಕೊಳ್ಳಲಿಲ್ಲ. ಯಾವುದೇ ಕಾರಣಕ್ಕೂ ಸರ್ಕಾರದ ಅಧಿಕಾರಿಗಳು ಅದರಲ್ಲೂ ಜವಾಬ್ದಾರಿ ಹೊಂದಿರುವ ಅಧಿಕಾರಿಗಳು ಅವರ ಇಲಾಖೆಯಿಂದ ಒಬ್ಬೊಬ್ಬರು ಚರ್ಚೆಯಾಗತಕ್ಕ ಸಂದರ್ಭದಲ್ಲಿ ಇರಲೇ ಬೇಕಾಗುತ್ತದೆ. ಇದರ ಬಗ್ಗೆ ಮುಖ್ಯಕಾರ್ಯದರ್ಶಿಯವರ ಜೊತೆ ಮಾತನಾಡುತ್ತೇನೆ. ಮತ್ತು ಎಲ್ಲಾ ಇಲಾಖೆಯ ಅಧಿಕಾರಿಗಳು ಈ ಸಂದರ್ಭದಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಇರುವಂತೆ ಮಾಡುತ್ತೇನೆ. ಮಾನ್ಯ ಗೌರವಾನ್ವಿತ ಶಾಸಕರುಗಳು ಮತ್ತು ವಿರೋಧ ಪಕ್ಷದ ನಾಯಕರೇನು ಅವರ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ ಅದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ನಾವು ಆ ಕಡೇ ಕುಳಿತಿದ್ದಾಗ ಇದೇ ರೀತಿ ಮಾಡಿರತಕ್ಕದ್ದು ಇದೆ. ಅಲ್ಲೊಂದು ಇಲ್ಲೊಂದು ನಾವು ಮಾತನಾಡಲು ಆಗುವುದಿಲ್ಲ. ಮತ್ತು ನಿಮ್ಮ ಭಾವನೆಯನ್ನು ನಾವು ಅರ್ಥಮಾಡಿಕೊಂಡು ಸರ್ಕಾರದ ಪರವಾಗಿ ಅವರಿಗೆ ಭರವಸೆ ಕೊಡುತ್ತೇನೆ, ಇವತ್ತೇ ಮತ್ತೊಂದು ಸಲ ಸುತ್ತೋಲೆಯನ್ನು ಮುಖ್ಯಕಾರ್ಯದರ್ಶಿಯವರ ಮೂಲಕ ಕಳುಹಿಸಿ ಎಲ್ಲಾ ಸಂದರ್ಭದಲ್ಲು ಅಧಿಕಾರಿಗಳು ಇರತಕ್ಕ ಕೆಲಸವನ್ನು ಮಾಡುತ್ತೇವೆ.

(ಏ) ಬೆಳಗಾವಿ ತಾಲ್ಲೂಕಿನ ಹುತ್ಯೇಕ ಗ್ರಾಮದ ಬಳಿಯಿರುವ ಕೋಟೆ ಪ್ರದೇಶದ ಬಗ್ಗೆ.

SRI MANOHAR KALLAPPA KINEKAR (Uchagaon): Sir, In Belgaum taluka near Yadyur village Raj hansagad historical Fort is there. It was constructed by great Sri Chatrapati Shivaji Maharaj about 350 years back. After the independence this Rajgad fort property has been merged with the government property. But because of some mistake,

† ಈ ಭಾಷಣವು ಮಾನ್ಯ ಸಚಿವರಿಂದ ಪರಿಶೀಲಿಸಲ್ಪಟ್ಟಿದೆ.

this fort is in the name of one Samsthani called Patwardhan. This Patwardhan on 4-3-05 has given one notice in newspapers saying that this fort is for sale. Being a historical place and fort, this should be the property of the government and such activity of selling the fort is not good becauce people's emotions are related with this fort. At present, there ils a shiva temple also which is being worshipped by the public every day. The total extent of the land and the fort is 1 acre 17 guntas. So, I request the Government that this property should be acquired and declared it as a government property and it should be developed as a tourism centre. Otherwise, if such properties are going to be sold, then people will not remain calm. Law and order problem will be created. It is the duty of the government to protect the historical places. So, I request the government to acquire this land and declare it as a tourism centre and develop it.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಭಾರಿ ಮಧ್ಯಮ ಮತ್ತು ಸಣ್ಣ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಹೇಳುವುದಾದರೆ, ಬೆಳಗಾವಿ ಜಿಲ್ಲೆಯ ಕೆಲವು ಕೋಟೆಗಳಲ್ಲಿರುವ ಪ್ರದೇಶವನ್ನು ಕೆಲವು ಖಾಸಗಿಯವರು ನಮ್ಮದು ಎಂದು ಹೇಳಿ ಬೇರೆಯವರಿಗೆ ಕೊಡುತ್ತಿರತಕ್ಕದನ್ನು ನಾನು ಈಗಾಗಲೇ ಮಾಧ್ಯಮಗಳಲ್ಲಿ ಓದಿದ್ದೇನೆ. ಗೌರವಾನ್ವಿತ ಸದಸ್ಯರು ಸಹ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಬಹಳ ಪ್ರಮುಖವಾಗಿ ಈ ಪ್ರದೇಶದಲ್ಲಿ ಕೆಲವು ಅಮೂಲ್ಯವಾದ ಖನಿಜ ಸಂಪತ್ತು ಇದೆಯೆಂದು ಇದನ್ನು ಮಾರಾಟ ಮಾಡಲು ಹೊರಟಿದ್ದಾರೆಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಅದು ಏನೇ ಇರಲಿ ಈ ಇಶ್ಯೂವನ್ನು ಡೈವರ್ಟ್ ಮಾಡಲು ನಾನು ತಯಾರಿಲ್ಲ. ಅಲ್ಲಿನ ಜಿಲ್ಲಾಧಿಕಾರಿಯವರಿಂದ ವರದಿಯನ್ನು ತರಿಸಿ ವಸ್ತು ಸ್ಥಿತಿಯನ್ನು ನೋಡಿಕೊಂಡು ಕಾನೂನಿನ ಪ್ರಕಾರ ಅದು ಸರ್ಕಾರದ ಆಸ್ತಿಯಾಗಿದ್ದರೆ ಇದನ್ನು ಯಾವ ರೀತಿಯಾಗಿ ರಕ್ಷಣೆ ಮಾಡಬೇಕು ಎಂಬುದು ಒಂದು ಭಾಗ, ಮತ್ತು ಚಾರಿತ್ರಾರ್ಹವಾಗಿರತಕ್ಕ ಒಂದು ವಿಚಾರವಾಗಿರುವುದರಿಂದ Historical importance ಇರುವುದರಿಂದ ಇದನ್ನು ಉಳಿಸಿಕೊಳ್ಳತಕ್ಕಂಥದ್ದು ಸರ್ಕಾರದ ಕರ್ತವ್ಯವಾಗುತ್ತದೆ. ಆದ್ದರಿಂದ ತಕ್ಷಣ ಬೆಳಗಾವಿ ಜಿಲ್ಲಾಧಿಕಾರಿಯವರಿಂದ ವರದಿಯನ್ನು ತರಿಸಿಕೊಂಡು ಅದರ ಆಧಾರದ ಮೇಲೆ ಕೆಲಸ ಮಾಡುತ್ತೇನೆಂದು ಭರವಸೆಯನ್ನು ಗೌರವಾನ್ವಿತ ಸದಸ್ಯರಿಗೆ ಕೊಡುತ್ತೇನೆ.

ಐ) ವಿಷಯ: ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ವಸತಿ ಸಮುಚ್ಚಯಮಾಡುತ್ತಿರುವ ಬಗ್ಗೆ.

ಶ್ರೀ ನೆ.ಲ.ನರೇಂದ್ರಬಾಬು(ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಯಾವುದೇ ಒಂದು ಖಾಸಗಿ ಗೃಹ ನಿರ್ಮಾಣ ಸಂಸ್ಥೆಯವರು ನಿವೇಶನಗಳನ್ನು ಮಾಡಬೇಕಾದರೆ ಬಿಡಿಎ ನಲ್ಲಿ ಸುಮಾರು ಕಾಲುಭಾಗದಷ್ಟು civic amenities ಸೈಟು, ಶೇಕಡ ನಲವತ್ತು ಭಾಗ ರೋಡ್, civic amenities ಸೈಟು ಇವನ್ನೆಲ್ಲಾ ಮಾಡಬೇಕಾದ ನಿಯಮಾವಳಿ ಇದೆ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕ ಕಿರ್ಲೋಸ್ಕರ್ ಕಾರ್ಖಾನೆಯ 52 ಎಕರೆಯಲ್ಲಿ ಇವತ್ತು ಗೃಹಸಮುಚ್ಚಯ

ಬರುತ್ತಿದೆ, ಎಂಟು ಫ್ಲೋರ್ ಬಿಲ್ಡಿಂಗ್‌ನಲ್ಲಿ ಈಗಾಗಲೇ ಇನ್ನೂರೈವತ್ತು ಮನೆಗಳು ಬಂದಿದೆ. ಇತ್ತೀಚೆಗೆ ಕಿರ್ಲೋಸ್ಕರ್ ಕಾರ್ಖಾನೆಯ ಹತ್ತಿರ ಬೆಂಕಿಯ ಅನಾಹುತವಾಯಿತು. ಪಕ್ಕದಲ್ಲೇ ಮಿಲ್ಕ್ ಕಾಲೋನಿ ಎಂದು ಇದೆ, ಆ ಮಿಲ್ಕ್ ಕಾಲೋನಿಗೆ ಹೊಂದಿಕೊಂಡಿರುವಂಥ ಮನೆಗಳಿಗೆ ಬೆಂಕಿ ತಾಕಿ ಅಲ್ಲಿರತಕ್ಕ ವಾಟರ್ ಟ್ಯಾಂಕುಗಳೆಲ್ಲಾ ಡ್ಯಾಮೇಜ್ ಆಯಿತು. ನಾನು ಕೇಳಿಕೊಳ್ಳುವುದೇನೆಂದರೆ 52 ಎಕರೆ ಜಮೀನಿನಲ್ಲಿ ಗೃಹ ಸಮುಚ್ಚಯವನ್ನು ಮಾಡಲು ಹೊರಟಿರುವ ಕಾರ್ಖಾನೆಯವರಿಗೆ ಯಾವ ರೀತಿ ಲೇಔಟ್ ಅಪ್ರೂವಲ್ ಕೊಡುತ್ತಾರೆ? ಕಾರ್ಖಾನೆಯ ಸಮುಚ್ಚಯದಲ್ಲಿ ಗೃಹ ನಿರ್ಮಾಣಕ್ಕೆ ಕೊಟ್ಟಿರತಕ್ಕದ್ದು ನಿಜವಾಗಿಯೂ ಆತಂಕಕಾರಿ, ಇದಕ್ಕೆ ಸುಪ್ರೀಮ್ ಕೋರ್ಟ್ ಹೈಕೋರ್ಟ್ ಆದೇಶ ಕೊಟ್ಟಿದೆಯೆಂದು ಹೇಳಬಹುದು, ಆದರೆ 52 ಎಕರೆಗೆ ಶೇಕಡ ನಲವತ್ತು ಪರ್‌ಸೆಂಟ್ ರಸ್ತೆ ಮತ್ತು civic amenities ಸೈಟು, ಅಲ್ಲಿಂಥ ಪ್ಲೇಗ್ರೌಂಡ್ ಮತ್ತು ಪಾರ್ಕ್ ಎಂದು ನಮೂದಿಸಿದ್ದ ಜಾಗದಲ್ಲಿ ಇವತ್ತು ಮೆಟ್ರೋ ಬಂದಿದೆ. ನಾವು ಚಿಕ್ಕಂದಿನಿಂದ ನೋಡಿದಂಥ ಅಂದಿನ ಕಿರ್ಲೋಸ್ಕರ್ ಕಾರ್ಖಾನೆ ಇವತ್ತು ಪೀಸ್ ಪೀಸ್ ಆಗಿ ಮಾರಾಟ ಮಾಡುತ್ತಿದ್ದಾರೆ, ಈ ರೀತಿ ಮಾಡಲು ಯಾರು ಅನುಮತಿ ಕೊಟ್ಟಿದ್ದಾರೆ? ಇಲ್ಲಿ ಗೃಹ ಸಮುಚ್ಚಯ ಬರುವುದು ನಿಜವೇ? ಇದರಲ್ಲಿ ಎಷ್ಟು civic amenities ಸೈಟುಗಳನ್ನು ವಿಂಗಡಿಸಿದ್ದಾರೆ ಎಂಬ ಬಗ್ಗೆ ದಯವಿಟ್ಟು ಸರ್ಕಾರ ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆ ಸಚಿವ) : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ನರೇಂದ್ರಬಾಬುರವರು ಈಗ ಶಾಸಕರಾಗಿದ್ದಾರೆ. ಅವರ ಕ್ಷೇತ್ರದಲ್ಲೇ ಈ ಒಂದು ಕಿರ್ಲೋಸ್ಕರ್‌ನವರು ಕಟ್ಟುತ್ತಿರುವಂತಹ ಹೌಸಿಂಗ್ ಕಾಂಪ್ಲೆಕ್ಸ್ ಬಂದಿದೆ. ಮಾನ್ಯ ನರೇಂದ್ರಬಾಬುರವರು ಹಿಂದೆ ಮಹಾನಗರಪಾಲಿಕೆಯ ಸದಸ್ಯರಾಗಿ ಕೆಲಸ ಮಾಡಿರತಕ್ಕವರಾಗಿದ್ದಾರೆ. ಇದಕ್ಕೆಲ್ಲಾ ಕಾರ್ಪೋರೇಷನ್‌ನವರು, ಬಿ.ಡಿ.ಎ.ನವರು ಯಾವ ರೀತಿ ಪರ್ಮಿಷನ್ ಕೊಡುತ್ತಾರೆ ಎಂಬುದು ಅವರಿಗೆ ಬಹಳ ಚೆನ್ನಾಗಿ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರ್ಯಾರು ಕಟ್ಟುತ್ತಿದ್ದಾರೋ ಅವರು, ಅವರ ಇಂಡಸ್ಟ್ರೀಸ್ ಅನ್ನು ಶಿಫ್ಟ್ ಮಾಡಿ, ಯಾವ ಸಂದರ್ಭದಲ್ಲಿ ಅವರಿಗೆ ಕಾಂಪ್ಲೆಕ್ಸ್ ಕಟ್ಟಲು ಪರ್ಮಿಷನ್ ಕೊಟ್ಟಿದ್ದಾರೆ ಎಂಬುದನ್ನು ವಿಚಾರಿಸಬೇಕಾಗುತ್ತದೆ. ಆ ರೀತಿ ಪರ್ಮಿಷನ್ ಕೊಟ್ಟಿರತಕ್ಕಂಥದ್ದು ಸರಿಯೋ, ತಪ್ಪೋ ಎಂಬುದನ್ನೂ ಸಹಿತ ನಾವು ಪರಿಗಣಿಸಬೇಕಾಗುತ್ತದೆ.

ಮಾನ್ಯ ಸದಸ್ಯರು ಇದನ್ನೆಲ್ಲಾ ಸರ್ಕಾರದ ಗಮನಕ್ಕೆ ಶೂನ್ಯ ವೇಳೆಯಲ್ಲಿ ತಂದಿರುವುದರಿಂದಾಗಿ, ನಾನು ಇದರ ಬಗ್ಗೆ ಸವಿಸ್ತಾರವಾಗಿ ಉತ್ತರವನ್ನು ಕೊಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಆದರೆ ಆ ವಿಷಯಗಳ ಬಗ್ಗೆ ತಿಳಿದುಕೊಂಡು, ಖಂಡಿತವಾಗಿ ಸಹಿತ ಅವರಿಗೆ ಉತ್ತರವನ್ನು ಕೊಡುತ್ತೇವೆ. ಅವರೇನಾದರೂ ಅಕ್ರಮವಾಗಿ ಅಥವಾ ಕೋರ್ಟಿನ, ಅದು ಹೈಕೋರ್ಟ್ ಇರಬಹುದು, ಸುಪ್ರೀಂ ಕೋರ್ಟ್ ಇರಬಹುದು ಅಥವಾ ಇತರೆ ಕೋರ್ಟ್‌ಗಳು ಇರಬಹುದು, ಆ ನ್ಯಾಯಾಲಯಗಳ ತೀರ್ಪಿನ ವಿರುದ್ಧವಾಗಿ ಅವರೇನಾದರೂ ಕೆಲಸ ಮಾಡಿದ್ದಾರೆ, ಖಂಡಿತವಾಗಿಯೂ ಸಹಿತ ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ಭರವಸೆಯನ್ನು ನಾನು ಕೊಡುತ್ತೇನೆ.

ಶ್ರೀ ನೆ.ಲ.ನರೇಂದ್ರ ಬಾಬು : ಮಾನ್ಯ ಅಧ್ಯಕ್ಷರೆ, ನಾನು ಕೇಳಿದ್ದ ಒಂದು ವಿಷಯವೇನೆಂದರೆ, ಗೃಹ ಸಮುಚ್ಚಯ ಬರಲಿಕ್ಕೆ ಕಾರ್ಪೋರೇಷನ್ ಅಥವಾ ಇನ್ನಿತರ ಪ್ರಾಧಿಕಾರದಿಂದ ಪರ್ಮಿಷನ್ ಪಡೆಯುವುದು ಒಂದು ವಿಚಾರವಾಯಿತು, 40% ಸೈಟುಗಳನ್ನು ಇವರು civic amenities ಗಾಗಿ ಎಂದು ಬಿಡಬೇಕಾಗಿತ್ತು. ಅದನ್ನು ಇವರು ಏಕೆ ಬಿಡುತ್ತಿಲ್ಲ? ಸಾಮಾನ್ಯವಾಗಿ ಒಂದು ಎಕರೆ

ಜಾಗವನ್ನು ಸೈಟುಗಳನ್ನಾಗಿ ವಿಂಗಡಿಸಬೇಕೆಂದರೆ, ಅದರಲ್ಲಿ 40% ಸೈಟುಗಳನ್ನು CA ಗೆಂದು ಬಿಡಬೇಕು. ಹೀಗಿರುವಾಗ 52 ಎಕರೆಗೆ ಅವರು ಬಹಳಷ್ಟು ಸೈಟುಗಳನ್ನು ಬಿಡ ಬೇಕಾಗಿತ್ತು. ಇವತ್ತು ಅದು ಆಗುತ್ತಿಲ್ಲ.

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಸರ್ಕಾರದ ಗಮನಕ್ಕೆ ವಿಚಾರವನ್ನು ಈಗ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು, ಮಹಾನಗರ ಪಾಲಿಕೆಯ ಕಮಿಷನರ್ ಮತ್ತು ಬಿ.ಡಿ.ಎ. ಕಮಿಷನರ್‌ರವರಿಂದ ಇದರ ಬಗ್ಗೆ ವರದಿಯೊಂದನ್ನು ತರಿಸುತ್ತೇನೆ. ತಾವು ಹೇಳುವ ರೀತಿಯಲ್ಲಿ ಅಲ್ಲಿ ಅಕ್ರಮವಾಗಿ ಏನಾದರೂ ಮಾಡಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಫೈನ್ ಹಾಕಿ ಸಕ್ರಮಗೊಳಿಸಲಿಕ್ಕೆ ಅವಕಾಶ ಇದ್ದರೆ ಆ ರೀತಿ ಮಾಡೋಣ. ಅದಕ್ಕೆ ಅವಕಾಶ ಇಲ್ಲದಿದ್ದರೆ, ಅವರ ಮೇಲೆ ಕ್ರಮವನ್ನು ಕಾನೂನು ಬದ್ಧವಾಗಿ ತೆಗೆದುಕೊಳ್ಳೋಣ.

ಅಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ 2.30 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 1 ಗಂಟೆ 12 ನಿಮಿಷಗಳಿಗೆ ಮುಂದೂಡಲ್ಪಟ್ಟಿತು)

5. (ಸದನವು ಮಧ್ಯಾಹ್ನ 2.57ಕ್ಕೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ರಾಜ್ಯದಲ್ಲಿ ನಕ್ಸಲೀಯರ ಚಟುವಟಿಕೆ ಮತ್ತು ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.

ಶ್ರೀ ಡಿ.ಎನ್.ಜೀವರಾಜ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ಶೃಂಗೇರಿ ಕ್ಷೇತ್ರ ಇಡೀ ರಾಜ್ಯದಲ್ಲೆ ಶಾಂತಿ ಕ್ಷೇತ್ರವಾಗಿತ್ತು. ಇಡೀ ರಾಜ್ಯದ ಜನ ಶೃಂಗೇರಿಗೆ ಬರುವುದೇಕೆಂದರೆ ಅವರ ಮನಸ್ಸಿಗೆ ಸಮಾಧಾನ ತೆಗೆದುಕೊಳ್ಳುವುದಕ್ಕೆ, ಅವರ ಕಷ್ಟವನ್ನು ಹೋಗಲಾಡಿಸಬೇಕೆಂದು ದೇವರಲ್ಲಿ ಕೇಳಿಕೊಳ್ಳುವುದಕ್ಕೆ ಎಂದು ಯೋಚನೆ ಇದ್ದಂತಹ ಕಾಲವೊಂದಿತ್ತು. ಆದರೆ ಇವತ್ತಿನ ಪರಿಸ್ಥಿತಿ ಹೇಗಿದೆ ಎಂದರೆ ಶೃಂಗೇರಿಗೆ ಬರಬೇಕಾದರೆ ಎಲ್ಲಿ ದಾರಿಯಲ್ಲಿ ಏನಾಗುತ್ತದೋ ಎನ್ನುವಂತಹ ಚಿಂತೆಯಲ್ಲಿ ಶೃಂಗೇರಿ ತಲುಪಿದೆ. ಅಮರನಾಥ ಯಾತ್ರೆಗೆ ಹೋದ ಹಾಗೆ ಶೃಂಗೇರಿಗೆ ಬರುವಂತಹ ಭಕ್ತರೂ ಕೂಡ ಪೋಲೀಸರ ಪರ್ಮಿಷನ್ ತೆಗೆದುಕೊಂಡು ಪೋಲೀಸರ ರಕ್ಷಣೆಯಲ್ಲಿ ಬರಬೇಕಾದಂತಹ ಸ್ಥಿತಿಯಲ್ಲಿ, ಬಹಳ ಹತ್ತಿರದ ದಿನಗಳಲ್ಲಿ ಶೃಂಗೇರಿ ಬಂದು ನಿಲ್ಲುತ್ತದೆ ಎಂದು ಇತ್ತೀಚಿನ ದಿನಗಳಲ್ಲಿ ಎಲ್ಲರಿಗೂ ಗೊತ್ತಿರುವ ವಿಷಯ. ಶೃಂಗೇರಿ ಜನ ಯಾವತ್ತು ನಕ್ಸಲ್ ಚಟುವಟಿಕೆಗೆ ಬೆಂಬಲಿಸಿದವರಲ್ಲ. ನಕ್ಸಲ್ ಚಟುವಟಿಕೆ ನಮಗೆ ಬೇಕಾಗಿಯೇ ಇರಲಿಲ್ಲ. ಆದರೆ ಶೃಂಗೇರಿಗೆ ಎಲ್ಲಿಂದಲೋ ಬೇರೆ ಬೇರೆ ಕಡೆಯಿಂದ ಬಂದಂತಹ ಜನ ಶೃಂಗೇರಿಯ ಕಾಡಿನಲ್ಲಿ ಸೇರಿಕೊಂಡು ನಕ್ಸಲ್ ಚಟುವಟಿಕೆ ಮಾಡುತ್ತಿರುವುದನ್ನು ಇತ್ತೀಚಿನ ದಿನಗಳಲ್ಲಿ ನಾವು ನೋಡಿದ್ದೇವೆ. ಬಹಳ ದಿವಸಗಳ ಮೊದಲು, ಈ ನಕ್ಸಲ್ ಚಟುವಟಿಕೆ ಕಾಲದಲ್ಲಿ, ಅಲ್ಲಿರುವಂತಹ ಗಿರಿ ಜನರಿಗೆ ಹಕ್ಕುಪತ್ರ ಕೊಡಿಸಿದರೆ ನಕ್ಸಲ್ ಚಟುವಟಿಕೆ ನಿಲ್ಲುತ್ತದೆ ಎಂದು ಹೇಳುತ್ತಿದ್ದರು. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ನನ್ನ ಕೈಯಲ್ಲ ಮೆಣಸಿನ ಹಾಡ್ಯ ಮತ್ತು ಕೆರೆಕಟ್ಟಿನಲ್ಲಿ ತುಂಬಾ ಹಕ್ಕುಪತ್ರಗಳನ್ನು ಅಲ್ಲಿರುವ ಗಿರಿಜನರಿಗೆ ಕೊಟ್ಟಿದೆ. ನಾನು ಮತ್ತು ಎ.ಸಿ.ಯವರು ಒಟ್ಟಿಗೆ ಇದ್ದಂತಹ ಸಮಾರಂಭದಲ್ಲಿ ಹಕ್ಕುಪತ್ರ ವಿತರಣೆ ಮಾಡಿದ ಮೇಲೆ ಅಲ್ಲಿರುವಂತಹ ನಕ್ಸಲರು ಎಂದು ಹೇಳಿಕೊಂಡಿರುವವರು,

ಪತ್ರಿಕೆಯಲ್ಲಿ ಹೇಳಿಕೆ ಕೊಡುತ್ತಾರೆ, 'ಹಕ್ಕುಪತ್ರದ ಬಗ್ಗೆ ಮಾತ್ರ ಹೋರಾಟ ಅಲ್ಲ, ನಮ್ಮ ಹೋರಾಟ ಬಜರಂಗದಳ ವಿರುದ್ಧ ಇದೆ; ಬಿ.ಜೆ.ಪಿ ವಿರುದ್ಧ ಇದೆ ' ಎನ್ನುವುದನ್ನು ನಾವು ಪತ್ರಿಕೆಯಲ್ಲಿ ನೋಡುತ್ತಿದ್ದೇವೆ. ಇನ್ನೊಂದು ಆಶ್ಚರ್ಯಕರ ವಿಷಯ ಎಂದರೆ ಸರ್ಕಾರದ ಹೇಳಿಕೆಗಳು ಬರುವುದೇನೆಂದರೆ ಗಿರಿಜನರು ಎಂದು ಬರುವುದು ಬಿಟ್ಟರೆ ಆ ಭಾಗದ ರೈತರು; ರೈತ ಕಾರ್ಮಿಕರು ಎನ್ನುವ ಹೆಸರಿನಲ್ಲಿ ಬರುವುದಿಲ್ಲ. ಅಲ್ಲಿ ಗಿರಿಜನರು ಮಾತ್ರ ವಾಸ ಮಾಡುತ್ತಿಲ್ಲ. ಅಲ್ಲಿ ಗಿರಿಜನರ ಜೊತೆಯಲ್ಲಿ ಎಲ್ಲಾ ಜಾತಿಯವರು ವಾಸ ಮಾಡುತ್ತಿದ್ದಾರೆ. ರೈತರು ಇದ್ದಾರೆ, ಬ್ರಾಹ್ಮಣರು ಇದ್ದಾರೆ, ಒಕ್ಕಲಿಗರು ಇದ್ದಾರೆ, ಪೂಜಾರರು ಇದ್ದಾರೆ, ಶೆಟ್ಟರು ಇದ್ದಾರೆ, ಅಲ್ಲಿ ಹರಿಜನರು ಇದ್ದಾರೆ, ಗಿರಿಜನರು ಇದ್ದಾರೆ. ಆದರೆ ಏಕೋ ಇತ್ತೀಚೆಗೆ ಒಂದು ಫ್ಯಾಷನ್ ಸ್ಟಾರ್ಟ್ ಆಗಿದೆ. ಗಿರಿಜನರ ಅಭಿವೃದ್ಧಿಗಾಗಿ ಯೋಜನೆಗಳು ಎಂದು. ಅಲ್ಲಿ ಕೇವಲ ಗಿರಿಜನರು ಮಾತ್ರ ಅಲ್ಲಿ ಇಲ್ಲ. ಅಲ್ಲಿ ಎಲ್ಲಾ ಜನಾಂಗದವರು ಇದ್ದಾರೆ. ಅಲ್ಲಿರುವಂತಹ ರೈತರಿಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಗಿರಿಜನರ ಹೆಸರಿನಲ್ಲಿ ಕಾರ್ಯಕ್ರಮ ಮಾಡುವಂಥದ್ದು ಕಾಂಪಿಟೇಷನ್‌ನಲ್ಲಿ ಎಲ್ಲಿ ಎನ್‌ಕೌಂಟರ್ ಆಗುತ್ತದೆ, ಎಲ್ಲಿ ಕೂಂಬಿಂಗ್ ಅಪರೇಷನ್ ಆಗುತ್ತದೆ ಅಲ್ಲಿ ನಕ್ಸಲರಿಗೆ ಅನುಕೂಲವಾಗುವ ರೀತಿಯಲ್ಲಿ ಸರ್ಕಾರದ ಹೇಳಿಕೆಗಳು ಬರುತ್ತವೆ. ಸರ್ಕಾರದ ಹೇಳಿಕೆಗಳು ಯಾವ ರೀತಿ ಬರುತ್ತದೆ ಎಂದರೆ ಮೆಣಸಿನ ಹಾಡ್ಯದಲ್ಲಿ ಎನ್‌ಕೌಂಟರ್ ಆಯಿತು, ಅಲ್ಲಿ ಸೋಲಾರ್ ಲೈಟ್‌ನ ವ್ಯವಸ್ಥೆ ಮಾಡುತ್ತಿದ್ದೇವೆ ಎಂದು ಹೇಳಿಕೆಯನ್ನು ಕೊಟ್ಟರು. ಇದನ್ನು ಹೇಳಿದ ಕೂಡಲೆ ಅಲ್ಲಿರುವಂತಹ ನಕ್ಸಲೀಯರು, ಅಲ್ಲಿರುವಂತಹ ಜನರ ತಲೆಗೆ ತುಂಬುತ್ತಾರೆ, ನಾವು ಇಲ್ಲಿಗೆ ಬಂದಿದ್ದರಿಂದ ನಿಮಗೆ ಈ ಸೋಲಾರ್ ಲೈಟ್ ಬರುತ್ತಿದೆ. ಇಲ್ಲದೆ ಇದ್ದರೆ ಸೋಲಾರ್ ಲೈಟ್ ಬರುತ್ತಿರಲಿಲ್ಲ. ಈ ರೀತಿಯ ಅಭಿಪ್ರಾಯಗಳನ್ನು ಅಲ್ಲಿರುವ ಜನರ ಮನಸ್ಸಿನಲ್ಲಿ ಮೂಡಿಸುವಂತಹ ಪ್ರಯತ್ನವನ್ನು ನಕ್ಸಲೀಯರು ಮಾಡುತ್ತಾರೆ. ಹಾಗಾಗಿ ನಾನು ಒತ್ತಾಯ ಮಾಡುತ್ತೇನೆ. ಸರ್ಕಾರ ಯಾವುದೇ ಕಾರಣಕ್ಕೂ, ತಾವು ಈಗ ಪ್ಯಾಕೇಜ್ ಎಂದು ಏನು ಹೇಳುತ್ತಿದ್ದೀರಿ, ಅದನ್ನು ಪ್ಯಾಕ್ ಮಾಡಿ ಇಡುವ ಬದಲು, ಆ ಪ್ಯಾಕೇಜ್ ಏನು ಇದೆ, ಅದನ್ನು ಘೋಷಣೆ ಮಾಡಿ, ಇದು ಬರೀ ನಕ್ಸಲೀಯರು ಇರುವಂತಹ ಏರಿಯಾವೆಂದು ಅಲ್ಲ. ಆ ಭಾಗದಲ್ಲಿರುವಂತಹ ಕೆರೆ – ಕಟ್ಟೆಗಳು, ರಾಷ್ಟ್ರೀಯ ಉದ್ಯಾನವನದೊಳಗೆ ಇರುವಂತಹ ರೈತರಿಗೆ, ಮತ್ತು ಅಲ್ಲಿ ಇರುವಂತಹ ಗಿರಿಜನರಿಗೆ, ಎಲ್ಲಾ ಜನಾಂಗದವರಿಗೂ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಮಾಡುವುದರಿಂದ ಮಾತ್ರ, ಅಲ್ಲಿರುವಂತಹ ನಾಗರೀಕರು ನಮ್ಮ ಜೊತೆಗೆ ಬರುವುದಕ್ಕೆ ಸಾಧ್ಯವಾಗುತ್ತದೆಂಬ ಮಾತನ್ನು, ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಕ್ಸಲರು ಇದ್ದಾರೆಂಬ ವಿಚಾರ ಇವತ್ತು, ನಿನ್ನೆ ಗೊತ್ತಾದದ್ದು ಅಲ್ಲ. ಈ 4–5ವರ್ಷಗಳ ಹಿಂದೆಯೆ ಜೈಪುರ ಕಾಡಿನಲ್ಲಿ ನಕ್ಸಲರು ಟ್ರೈನಿಂಗ್ ಕೊಡುವಂತಹ ಸಂದರ್ಭದಲ್ಲಿ, ಚೀರಮ್ಮ ಎನ್ನುವವರಿಗೆ ಗುಂಡಿನ ಏಟು ತಗುಲಿ, ನಕ್ಸಲರ ಗುಂಡೇಟು ಏಟು ತಗುಲಿ, ನಕ್ಸಲರ ಗುಂಡೇಟು ತಗುಲಿದೆಯೆಂದು ಆಸ್ಪತ್ರೆಯಲ್ಲಿ ಈ ಅಮ್ಮ ಇದ್ದಾಗ ನಾವು ಹೇಳಿಕೆಯನ್ನು ಕೊಟ್ಟರೆ, ಆಗ ಪೋಲೀಸ್ ಅಧಿಕಾರಿಗಳು ನಮ್ಮನ್ನೇ ಕರೆದು ಮಾತನಾಡುವಂತಹ ಸ್ಥಿತಿಯನ್ನು ಮಾಡಿದರು. ಇವರು ನಮಗೆ ತಪ್ಪು ಹೇಳಿಕೆಯನ್ನು ನೀವು ಕೊಡುತ್ತೀರೆಂದು ಹೇಳಿ, ಇದನ್ನು ಪೇಪರ್‌ನಲ್ಲಿ ಬರಬೇಕೆಂಬ ಉದ್ದೇಶದಿಂದ ಈ ರೀತಿಯ ಹೇಳಿಕೆಯನ್ನು ಕೊಡಬೇಡಿ. ಅವರು ನಕ್ಸಲೀಯರಲ್ಲ, ಯಾರೋ ಶಿಕಾರಿಗೆ ಹೋದವರು ಗುಂಡು ಹಾರಿಸಿದ್ದಾರೆಂಬ ಪದವನ್ನು ಉಪಯೋಗಿಸಿದರು. ಆ ದಿವಸ ಚೀರಮ್ಮನ ಘಟನೆಯಾದಾಗ

ಸರ್ಕಾರವೂ ಎಚ್ಚೆತ್ತುಕೊಂಡಿದ್ದರೆ, ಅವತ್ತಿನ ಅಧಿಕಾರಿಗಳು ಸರಿಯಾದಂತಹ ರೀತಿಯಲ್ಲಿ ಕ್ರಮವನ್ನು ತೆಗೆದುಕೊಂಡಿದ್ದರೆ, ಇವತ್ತು ಈ ಸ್ಥಿತಿಗೆ ಬಂದು ತಲುಪುತ್ತಾ ಇರಲಿಲ್ಲ. ಇವತ್ತಿನ ನಮ್ಮ ಸ್ಥಿತಿ ಹೇಗಿದೆಯೆಂದರೆ, ಈಗ ನನ್ನ ಬಳಿ ಒಂದು ಫೋಟೊ ಇದೆ. ಈತನ ಹೆಸರು ಚಂದ್ರಶೇಖರ್, ಇವನು ಮಲಗಿರುವಂಥಾದ್ದನ್ನು, ಇವನ ಕಾಲುಗಳು ಯಾವ ರೀತಿಯಲ್ಲಿ ತುಂಡು, ತುಂಡು ಆಗಿದೆಯೆಂಬುದನ್ನು ಸರ್ಕಾರ ನೋಡಬೇಕಾಗುತ್ತದೆ. ಈ ನಕ್ಸಲರು ಚಂದ್ರಶೇಖರನನ್ನು ಯಾವ ರೀತಿಯಾಗಿ ಹೊಡೆಯುತ್ತಾರೆಂದರೆ, ಮನೆಯಲ್ಲಿದ್ದವನನ್ನು ಬೆಳಿಗ್ಗೆ ಹೊರಗೆ ಕರೆದುಕೊಂಡು ಹೋಗಿ, ಅವನ ಮನೆಯಲ್ಲಿ ಹಿಂದುಗಡೆ ಇದ್ದಂತಹ ಕಲ್ಲಿನ ಮೇಲೆ, ಅವನ ಎರಡು ಕಾಲುಗಳನ್ನು ಇಟ್ಟುಕೊಂಡು, ಅವನ ತಾಯಿಯನ್ನು ಇಬ್ಬರು ಹಿಡಿದುಕೊಂಡು ನಿಲ್ಲಿಸಿಕೊಂಡು, ತೋರಿಸುತ್ತಾ ಹೊಡೆಯುತ್ತಾರೆ. ನಿಮ್ಮ ಮಗ ಪೋಲೀಸ್‌ನವರಿಗೆ ಸುದ್ದಿಯನ್ನು ಹೇಳುತ್ತಾನೆ. ಇವನು ಸುದ್ದಿ ಹೇಳುತ್ತಿರುವುದಕ್ಕೆ ನಾವು ಈ ಕೆಲಸವನ್ನು ಮಾಡುತ್ತಿದ್ದೇವೆಂದು ಹೇಳಿ, ಅವರ ಅಮ್ಮನ ಎದುರುಗಡೆಯೆ ಅವನ ಕಾಲುಗಳನ್ನು ರಿಪೇರಿ ಮಾಡುವುದಕ್ಕೆ ಆಗದ ರೀತಿಯಲ್ಲಿ ತುಂಡು ತುಂಡು ಮಾಡಿ ಹಾಕಿದ್ದಾರೆ. ಇವತ್ತು ಅವನು ಮಣಿಪಾಲ್ ಆಸ್ಪತ್ರೆಯಲ್ಲಿ ಮಲಗಿದ್ದಾನೆ, ಇವರು ಇವನನ್ನು ಬರೀ ಹೊಡೆದು ಮಲಗಿಸಿ ಹೋಗಲಿಲ್ಲ. ಅವನಿಗೆ ಇವರು ಹೇಳಿ ಹೋಗುತ್ತಾರೆ, ನಿಮ್ಮ ಮಗ ಸಾಯುವುದಿಲ್ಲ, ಬದುಕುತ್ತಾನೆ, ತೆಗೆದುಕೊಂಡು ಹೋಗಿ ಆಸ್ಪತ್ರೆಗೆ ಹಾಕು ಬದುಕುತ್ತಾನೆ ಎಂದು ಅವರ ತಾಯಿಗೆ ಹೇಳಿದ್ದಾರೆ, ಈ ರೀತಿಯ ಪ್ರಯತ್ನವನ್ನು ಅವರು ಮಾಡಿದ್ದಾರೆ. ಯಾರು ಮಾಡುತ್ತಾರೆ? ಪೋಲಿಸ್‌ನವರಿಗೆ ಬಹಳ ಸರಿಯಾಗಿ ಗೊತ್ತಾಗುತ್ತದೆ, ಅವತ್ತು ಅವರು ಬಿಟ್ಟು ಹೋದಂತಹ ಡೈರಿಯಲ್ಲಿ, ಅಲ್ಲಿ ಬಿದ್ದಂತಹ ವಿಸಿಟಿಂಗ್ ಕಾರ್ಡ್‌ನಲ್ಲಿ ಒಬ್ಬ ವಕೀಲರು ಕೃಷ್ಣಮೂರ್ತಿ ಎನ್ನುವವರ ಐಡೆಂಟಿ ಕಾರ್ಡ್ ಅಲ್ಲಿ ಬಿದ್ದು ಹೋಗಿದೆ. ಇಲ್ಲಿ ಪೋಲಿಸ್‌ನವರಿಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಅವರು ಸರಿಯಾದಂತಹ ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡುವುದಿಲ್ಲ. ಚಂದ್ರಕಾಂತನನ್ನು ಆಸ್ಪತ್ರೆಗೆ ಕರೆದುಕೊಂಡು ಬರಲು ಯಾವುದೇ ರೀತಿಯಾದಂತಹ ವಾಹನಗಳ ವ್ಯವಸ್ಥೆ ಇಲ್ಲದಿರುವಂತಹ ಜಾಗದಲ್ಲಿ ಈ ಹೆವ್ಮಿಗೆ ಇದೆ. ಅವನನ್ನು ಕಷ್ಟಪಟ್ಟು ಆಸ್ಪತ್ರೆಗೆ ತಂದು ಹಾಕಿದರೆ, ಒಬ್ಬ ಜಿಲ್ಲಾಧಿಕಾರಿಯಾಗಲಿ, ಡಿ.ಸಿ.ಆಗಲಿ ಎಸ್.ಪಿ ಆಗಲಿ ಹೋಗಿ ನೋಡಲಿಲ್ಲ. ನಾನು ಎಸ್.ಪಿ.ಯವರಿಗೆ ಫೋನ್ ಮಾಡಿ ಚಂದ್ರಕಾಂತನಿಗೆ ಈ ಸ್ಥಿತಿ ಆಗಿದೆ. ಇವನು ಪೋಲಿಸ್‌ನವರಿಗೆ ಇನ್‌ಫರ್‌ಮೇಶನ್ ಕೊಟ್ಟನೆಂಬ ಕಾರಣಕ್ಕೆ ಈ ಸ್ಥಿತಿಯಾಗಿದೆ. ದಯಮಾಡಿ, ನೀವು ಅವನನ್ನು ಹೋಗಿ ನೋಡುವಂತಹ ಸೌಜನ್ಯವನ್ನಾದರೂ ತೋರಿಸಿ ಎಂದು ಹೇಳಿದೆ. ಅದಕ್ಕೆ ಅವರು ಇವತ್ತು ಭಾರತ್ ಬಂದ್ ಇದೆ, ಆದುದರಿಂದ ನಾವು ಜಿಲ್ಲಾ ಕೇಂದ್ರವನ್ನು ಬಿಡುವುದಕ್ಕೆ ಆಗುತ್ತಾ ಇಲ್ಲವೆಂಬ ಪದವನ್ನು ಉಪಯೋಗಿಸಿದರು. ಭಾರತ್ ಬಂದ್ ಇದೆ, ಜಿಲ್ಲಾಧಿಕಾರಿಗಳು ಸ್ಥಳ ಬಿಡುವುದಕ್ಕೆ ಆಗುವುದಿಲ್ಲ, ಎಸ್.ಪಿ.ಬಿಡುವುದಕ್ಕೆ ಆಗುವುದಿಲ್ಲ. ಆದರೆ ಅಡಿಷನಲ್ ಎಸ್.ಪಿ. ಬರಬಹುದಾಗಿತ್ತು. ಎ.ಸಿ.ನೋಡಬಹುದ್ದಾಗಿತ್ತು. ಆ ಪೋಲಿಸ್‌ನವರಿಗೆ ಮಾಹಿತಿಯನ್ನು ಕೊಟ್ಟ ಎಂಬ ಕಾರಣಕ್ಕೆ, ಇಷ್ಟು ಸುಂದರವಾದ ಯುವಕ, ಇವನ ಪರಿಸ್ಥಿತಿ ಈ ರೀತಿಯಾದರೆ, ಯಾರು ಪೋಲಿಸರಿಗೆ ಮಾಹಿತಿಯನ್ನು ಕೊಡುತ್ತಾರೆ? ಯಾರು ಇದಕ್ಕಾಗಿ ಹೆಚ್ಚಿಗೆ ಜೀವ ಕೊಡುತ್ತಾರೆ? ನಾನು ಅವನ ಮನೆಗೆ ಹೋಗಿದ್ದೆ. ನಾನು ಹೋಗುವ ಸಂದರ್ಭದಲ್ಲಿ ಪೋಲಿಸರು ನನಗೆ ನೀವು ಹಾಗೆ ಹೋಗಬೇಡಿ, ನಾನು ಬರುವವರೆಗೂ ಕಾಯಬೇಕೆಂದು ಹೇಳುತ್ತಾರೆ. ಏಕೆಂದರೆ ನಮ್ಮನ್ನು

ಕರೆದುಕೊಂಡು ಹೋಗಲು ನಮ್ಮ ಹಿಂದುಗಡೆ ಒಂದು ಪೋಲೀಸ್ ವ್ಯಾನ್, ಇಲ್ಲಿ ನಮಗೊಂದು ರಕ್ಷಣೆ. ನಾನು ಇನ್ನು ಮುಂದೆ ಇದೇ ರೀತಿಯಲ್ಲಿ ರಕ್ಷಣೆ ಸಿಗುತ್ತದೆಂದು ತಿಳಿದುಕೊಂಡಿದ್ದೆ. ನಾನು ಅವರ ಮನೆಗೆ ಹೋದಂತಹ ಸಂದರ್ಭದಲ್ಲಿ ಅವರ ತಾಯಿ ನಿಮಗೂ ಬೇಡ ಸಾರ್, ದಯಮಾಡಿ ನಕ್ಸಲರ ಬಗ್ಗೆ ಮಾತನಾಡಬೇಡಿ, ನಿಮಗೂ ಯಾವತ್ತು ಒಂದು ದಿನ ಈ ರೀತಿಯಾಗುತ್ತದೆಂಬ ಪದವನ್ನು ಆಕೆ ಹೇಳಿದಳು. ಅಂದರೆ ಅವರಿಗೆ ಅವರ ಮಗನ ಬಗ್ಗೆ ದುಃಖವಾದಂತಹ ಸಂದರ್ಭಧಲ್ಲೂ, ಅವರು ನನ್ನನ್ನು ಅವರ ಮಗನ ರೀತಿಯಲ್ಲಿ ನೋಡಿ, ನನಗೆ ಹೇಳುವಂತಹ ದೊಡ್ಡ ಮನಸ್ಸಿನ ತಾಯಿ ಅವರು, ಆ ಚಂದ್ರಕಾಂತನ ಚಿಕಿತ್ಸೆಗೆಂದು ಇದುವರೆಗೂ ಸರ್ಕಾರದಿಂದ ಒಂದು ರೂಪಾಯಿಯನ್ನು ಚಿಕಿತ್ಸೆಗಾಗಿ ಕೊಡಲಿಲ್ಲ. ನಾನು ಅಲ್ಲಿಂದ ಬಂದು ಮಾನ್ಯ ಮುಖ್ಯಮಂತ್ರಿಯವರ ಮನೆಗೆ ಹೋದೆ. ಅಲ್ಲಿ ನಾನು ಅವರಿಗೆ ಪೋಲೀಸ್‌ನವರಿಗೆ ಮಾಹಿತಿಯನ್ನು ಕೊಟ್ಟಿದ್ದಕ್ಕಾಗಿ ಇವನ ಪರಿಸ್ಥಿತಿ ಈ ರೀತಿಯಾಗಿದೆ. ದಯಮಾಡಿ ಅವನಿಗೆ 5 ಲಕ್ಷ ರೂಪಾಯಿಗಳನ್ನು ಕೊಡಿ. ಸರ್ಕಾರದಿಂದ ಹಣವನ್ನು ಕೊಟ್ಟರೆ, ಅವನ ಚಿಕಿತ್ಸೆಗೆ ಆಗುತ್ತದೆಂದು ಹೇಳಿದೆ. ಆದರೆ ಸರ್ಕಾರ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇಲ್ಲಿ ಮಣಿಪಾಲ್ ಆಸ್ಪತ್ರೆಯಲ್ಲಿ ದಾಖಲೆಯನ್ನು ಕೊಡುತ್ತಾರೆ. ಅವನ ಟ್ರೀಟ್‌ಮೆಂಟ್‌ಗೆ ತಕ್ಷಣ ಇಷ್ಟು ಹಣವನ್ನು ಕೊಟ್ಟರೆ ಆಪರೇಷನ್ ಮಾಡುತ್ತೇವೆ, ಇಲ್ಲವೆಂದರೆ ಇಲ್ಲ. ಎಂದು 20ಸಾವಿರ ರೂಪಾಯಿಗಳನ್ನು ಬರೆದು ಕಳುಹಿಸಿದ್ದಾರೆ. ಅವನ ಹತ್ತಿರ 20ಸಾವಿರ ರೂಪಾಯಿಗಳನ್ನು ಕಟ್ಟುವುದಕ್ಕೆ ಹಣವಿಲ್ಲ. ಅವರ ಮನೆಯವರು ನನಗೆ, ನನ್ನ ಮಗ ಚಂದ್ರಕಾಂತನಿಗೆ ಚಿಕಿತ್ಸೆಗೆ ಏನಾದರೂ ಮಾಡಿ ಹಣವನ್ನು ಕೊಡಿಯೆಂದು ಬರೆದು ಕೊಡುತ್ತಾರೆ. ನಾನು ನನ್ನ ಕೈಯಲ್ಲಿ ಸಾಧ್ಯವಾದಷ್ಟು ಹಣವನ್ನು ಕೊಟ್ಟಿದ್ದೇನೆ. ಆದರೆ ನಾನು ಅವರ ಪೂರ್ತಿ ಟ್ರೀಟ್‌ಮೆಂಟ್‌ಗೆ ಹಣವನ್ನು ಭರಿಸುವಂತಹ ಶಕ್ತಿ ಇಲ್ಲ. ಇದನ್ನು ಸರ್ಕಾರ ಮಾಡಿಕೊಡಬೇಕಾಗಿದೆ. ಇವನು ಪೋಲೀಸ್‌ನವರಿಗೆ ಮಾಹಿತಿಯನ್ನು ಒದಗಿಸಿದನೆಂಬ ಒಂದೇ ಒಂದು ಕಾರಣಕ್ಕಾಗಿ, ಚಂದ್ರಕಾಂತನ ಸ್ಥಿತಿ ಈ ರೀತಿಯಾದರೆ, ಅಲ್ಲೇ ಪಕ್ಕದಲ್ಲಿ ಇರುವಂತಹ ಮಗೆಬಯಲು ಚಂದ್ರಶೇಖರ್‌ರವರು ಮನೆಯಿಂದ, ಚಂದ್ರಶೇಖರನ ಮನೆಗೆ ಕಾವಲಿಗೆಂದು ಹಾಕಿದಂತಹ ಪೋಲೀಸ್‌ನವರನ್ನೇ ನಕ್ಸಲರು ಹೊತ್ತುಕೊಂಡು ಹೋದರು. ಅವರು ಶರ್ಟ್, ಬಟ್ಟೆ ಬಿಚ್ಚಿ, ಬರೀ ಅಂಡರ್‌ವೇರ್‌ನಲ್ಲಿ ಅವನ ಗನ್ ಅನ್ನು ಕಿತ್ತುಕೊಂಡು ವಾಪಸ್ಸು ಕಳುಹಿಸುತ್ತಾರೆ. ಆ ಹತ್ತು ನಿಮಿಷದ ಒಳಗೆ ಇಡೀ ಪೋಲೀಸ್ ಪಡೆ, ಎಸ್.ಪಿ.ಸಹಿತ ಪೋಲೀಸ್‌ನನ್ನು ಎತ್ತುಕೊಂಡು ಹೋಗಿದ್ದಂಥಾದ್ದನ್ನು ನೋಡುವುದಕ್ಕೆ ಹೋಗುತ್ತಾರೆ. ಅಂದರೆ ಪೋಲೀಸ್‌ನವರನ್ನು ಹೊತ್ತುಕೊಂಡು ಹೋಗಿದ್ದ ಕೂಡಲೇ, ನೋಡಲು ಹೋಗುವಂತಹ ಈ ವ್ಯವಸ್ಥೆ ಅಲ್ಲೆ ಇರುವಂತಹ ಒಬ್ಬ ನಾಗರೀಕನ ಕಾಲನ್ನು ಕತ್ತರಿಸಿದಾಗ ಅವನನ್ನು ಹೋಗಿ ನೋಡುವುದಕ್ಕೆ ಏಕೆ ಸಾಧ್ಯವಿಲ್ಲ? ಇದನ್ನೆಲ್ಲಾ ನೋಡಿದಂತಹ ಜನರು ನನ್ನನ್ನು ಕೇಳುತ್ತಾರೆ. ಏಕೆ ಸಾರ್ ಈ ಹೋರಾಟ ನಾವು ನಕ್ಸಲೀಯರ ಜೊತೆಗೆ ಸೇರಿಕೊಂಡು ಬಿಡೋಣ. ಈ ಸರ್ಕಾರದ ವ್ಯವಸ್ಥೆಯನ್ನು ನೋಡಿದರೆ ಬೇಜಾರು ಬರುವಂತಹ ಸ್ಥಿತಿ ಇದೆಯೆಂಬುದರ ಬಗ್ಗೆ, ಆ ಭಾಗದ ನಕ್ಸಲೀಯರ ಬಗ್ಗೆ ಯೋಚನೆ ಮಾಡುತ್ತಿರುವಂತಹ ಜನರು ಮಾತನಾಡುತ್ತಿದ್ದಾರೆ. ಈ ರಿತಿಯಾದ ವ್ಯವಸ್ಥೆ ಮುಂದುವರೆಯುತ್ತಾ ಹೋದರೆ, ಅವರದೇ ಮೇಲುಗೈ ಆಗುವಂತಹ ಸ್ಥಿತಿ ಬಂದು ತಲುಪಿಬಿಡಬಹುದು. ಸರ್ಕಾರ ಇದರ ಬಗ್ಗೆ ದಯಮಾಡಿ ಗಮನಹರಿಸಬೇಕೆಂದು ಒತ್ತಾಯವನ್ನು ನಾನು ಮಾಡುತ್ತೇನೆ. ಇಲ್ಲಿ ಇರುವಂತಹ ಗಿರಿಜನರಿಗೆ

ಅನುಕೂಲವನ್ನು ಮಾಡಿಕೊಡುತ್ತೇವೆನ್ನುವಂತಹ ಉದ್ದೇಶ ಅಲ್ಲವೇ ಅಲ್ಲ. ಇದು ಬಹಳ ಸ್ಪಷ್ಟವಾಗಿ ಆಗಿದೆ. ನಾವು ಸಾಗುವಳಿ ಚೀಟಿಯನ್ನು ಕೊಟ್ಟ ಕುಡಲೇ ಹೇಳಿದರು. ಇದು ಭಜರಂಗ ಬಿ.ಜೆ.ಪಿ.ಯ ವಿರುದ್ಧವೆಂದು ಹೇಳಿದರು. ಅವರು ಭಜರಂಗ, ಬಿ.ಜೆ.ಪಿ.ವಿರುದ್ದವೆಂದು ಅಷ್ಟೇ ಹೇಳಿ ಹೋಗಿಲ್ಲ. ಅವರು ಬಿ.ಜೆ.ಪಿ.ಯ ನಾಯಕರೊಬ್ಬರ ಮನೆಗೆ ಬಂದು ಅವರನ್ನು ಕಾಡಿಗೆ ಕರೆದುಕೊಂಡು ಹೋಗಿ ಕೂಡಿಸಿಕೊಂಡು ಹೇಳಿದ್ದಾರೆ. ನಿಮ್ಮ ಶಾಸಕರುಗಳಿಗೆ ಹೇಳಿ, ಎಸ್.ಟಿ.ಎಫ್. ಪಡೆಗೆ ಒತ್ತಾಯ ಮಾಡಿದರೆ, ಮುಂದೆ ಪರಿಸ್ಥಿತಿ ಸರಿಯಾಗುವುದಿಲ್ಲವೆನ್ನುವಂತಹ ಪದವನ್ನು ಉಪಯೋಗಿಸಿ ಹೋಗಿದ್ದಾರೆ. ನಾನು ಈ ಎಚ್ಚರಿಕೆಯನ್ನು ಕಳುಹಿಸಿದರೆ, ಇವತ್ತಿನವರೆಗೆ ಸರ್ಕಾರದ ಕಡೆಯಿಂದ ಆ ನಕ್ಸಲಿಯ ಏರಿಯಾ ಇರಬಹುದು, ಎಲ್ಲಿಗೆ ಹೋದರೂ, ಹಿಂದೆ ಒಬ್ಬ ಪೊಲೀಸ್ ಕೂಡ ಬರುವುದಿಲ್ಲ. ಇದು ನಾನು ಹೋದರೆ ಹೋಗಲಿ ಎನ್ನುವ ಚಿಂತೆ ಇರಬಹುದು. ನಾವು ಪೊಲೀಸ್‌ನವರ ಬಗ್ಗೆ ಯಾವ ರೀತಿಯಾಗಿ ನಡೆದುಕೊಂಡಿದ್ದೇವೆ. ಅಲ್ಲಿ ಎನ್‌ಕೌಂಟರ್ ನಡೆದ ಕೂಡಲೇ, ನನಗೂ ಆ ಡಿ.ವೈ.ಎಸ್.ಪಿಗೂ ಏನೇ ಇರಬಹುದು, ವಿಚಾರದಲ್ಲಿ ಭಿನ್ನತೆ ಇರಬಹುದು. ಆದರೆ ಈ ನಕ್ಸಲರ ವಿಚಾರದಲ್ಲಿ ಎನ್‌ಕೌಂಟರ್ ಆಗಿದೆಯೆಂದ ಕೂಡಲೇ ನಾನು ಪತ್ರಿಕೆಗೆ ಹೇಳಿಕೆಯನ್ನು ಕೊಟ್ಟಿದ್ದೇನೆ. ನಾನು ಡಿ.ವೈ.ಎಸ್.ಪಿ. ಶಿವಕುಮಾರ್‌ರವರು ಮಾಡಿದಂತಹ ಕಾರ್ಯವನ್ನು ಸ್ವಾಗತಿಸುತ್ತೇನೆ. ಅವರಿಗೆ ನಾವು ಪೂರ್ಣ ನೈತಿಕ ಬೆಂಬಲವನ್ನು ಕೊಡುತ್ತೇವೆಂಬ ಮಾತನ್ನು ಹೇಳುತ್ತೇನೆ. ನಾನು ಆ ಕ್ಷೇತ್ರದ ಶಾಸಕನಾಗಿ ಅದರ ಅನಿವಾರ್ಯತೆ ಇತ್ತೆಂದು ನಾನು ಭಾವಿಸಿದ್ದೆ. ಆದರೆ ಅದೇ ಪೊಲೀಸರು ನಮಗೆ ರಕ್ಷಣೆಯನ್ನು ಕೊಡಬೇಕೆಂದು ಒಂದು ದಿನವೂ ನಮ್ಮ ಹಿಂದೆ ಬಂದದ್ದು ಇಲ್ಲ. ಹೋದರೆ ನಮ್ಮ ಎಂ.ಎಲ್.ಎ. ಹೋಗಲಿ ಎಂಬ ಭಾವನೆ ಇರಬಹುದೂ ಏನೋ? ಇಲ್ಲಿ ನಾನು ನನ್ನ ರಕ್ಷಣೆಯ ಬಗ್ಗೆ ಹೇಳುತ್ತಾ ಇಲ್ಲ. ಆದರೆ ಈ ವ್ಯವಸ್ಥೆ ಯಾವ ರೀತಿ ಇದೆಯೆಂದರೆ, ಒಬ್ಬ ಶಾಸಕನಿಗೆ ರಕ್ಷಣೆ ಕೊಡುವುದಕ್ಕೆ ಆಗದಂತಹ ರೀತಿಯ ದ್ವೇಷ ಪೊಲೀಸರ ಮನಸ್ಸಿನಲ್ಲಿ ಇದೆಯಾ ಎಂಬ ಬಗ್ಗೆ ನಾವು ಯೋಚನೆ ಮಾಡುವಂತಹ ಕಾಲದಲ್ಲಿ ಇದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸಭೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಇದ್ದಾರೆ. ಮಾನ್ಯ ಸದಸ್ಯರು ಮಾತನಾಡುವಂತಹ ಕಾಲದಲ್ಲಿ ಒಂದು ಮಾತನ್ನು ಹೇಳಿದರು. ಶ್ರೀ ಜೀವರಾಜರ್‌ರವರು ಸೇರಿ ಚಿಕ್ಕಮಗಳೂರು ಜಿಲ್ಲೆಯ ಶಾಸಕರು, ಬಹಳ ಆತಂಕದಲ್ಲಿ ಜೀವನವನ್ನು ನಡೆಸುತ್ತಿದ್ದಾರೆ. ಅದು ತಮಗೂ ಗೊತ್ತಿದೆ. ಮಾನ್ಯ ಶಾಸಕರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಇವತ್ತು ಆ ಭಾಗದಲ್ಲಿ ಓಡಾಡುವುದಕ್ಕೆ ಯಾವುದೇ ರೀತಿಯ ಪೊಲೀಸರ ರಕ್ಷಣೆ ಇಲ್ಲ. ತಮಗೂ ಅಲ್ಲಿ ಯಾವ ಪರಿಸ್ಥಿತಿ ಇದೆ, ಯಾವ ಮಟ್ಟದಲ್ಲಿ ಇದೆಯೆಂಬುದು ಗೊತ್ತಿದೆ. ನಾನೇ ಮಂಗಳೂರಿಗೆ ಮೊನ್ನೆ ಹೋಗಿದ್ದಾಗ ಒಂದು ನೂರು ಕಿಲೋ ಮೀಟರುಗಳನ್ನು ಬಳಸಿಕೊಂಡು, ರಾತ್ರಿ ಪ್ರಯಾಣ ಮಾಡುವುದು, ಬೇಡವೆಂದು ಎಸ್ಕಾರ್ಟ್‌ನವರು ನನ್ನನ್ನು ಶಿವಮೊಗ್ಗಕ್ಕೆ ಬಿಟ್ಟು ಹೋದರು. ಇದು ಪರಿಸ್ಥಿತಿ ಇರುವಂಥಾದ್ದು. ಇಲ್ಲಿ ಪರಿಸ್ಥಿತಿ ಕೈ ಮೀರಿ ಹೋಗುವುದಕ್ಕಿಂತ ಮುಂಚೆ ಅವರು ನಿರ್ಭೀತಿಯಿಂದ ಕೆಲಸ ಮಾಡುವುದಕ್ಕೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ರೀತಿಯ ಆತಂಕವಿರುವಂತಹ ಶಾಸಕರುಗಳಿಗೆ, ಬಂದೋಬಸ್ತು ರಕ್ಷಣೆಯನ್ನು ಕೊಡುವಂಥದ್ದರ ಬಗ್ಗೆ, ಪೊಲೀಸ್ ರಕ್ಷಣೆಯನ್ನು ಕೊಡುವಂತಹ

ವ್ಯವಸ್ಥೆಯನ್ನು ತಾವು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿ ಪರಿಸ್ಥಿತಿ ಮೀರಿದಾಗ ಇಡು ಹಾಗೆ ಆಗಬಾರದಾಗಿತ್ತು, ಎಚ್ಚರ ವಹಿಸಲಿಲ್ಲವೆನ್ನುವಂಥಾದ್ದು ಬೇಡ. ಈಗ ಶಾಸಕರ ಬಾಯಲ್ಲಿ ಆತಂಕದ ಮಾತುಗಳು ಬರುತ್ತಿರುವಾಗ, ಮತ್ತೆ ಈ ವಿಚಾರವಾಗಿ ಪತ್ರಗಳನ್ನು ಬರೆದಿರುವುದರಿಂದ, ತಕ್ಷಣ ಈ ಕಡೆಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತಹ ಎಸ್.ಪಿ ಮತ್ತು ಡಿ.ಸಿ.ಯವರ ಜೊತೆಗೆಮಾತನಾಡಿ, ಅವರಿಗೆ ಏನು ರಕ್ಷಣೆಗೆ ವ್ಯವಸ್ತೆಯನ್ನು ಮಾಡಬೇಕೊ ಅದನ್ನು ಮಾಡುತ್ತೇವೆ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ನಮಗೆ ರಕ್ಷಣೆ ಕೊಡಲಿಲ್ಲ ಎಂದು ಹೇಳಿದರೆ, ನಾವು ಯಾವುದೇ ಕಾರ್ಯಕ್ರಮಕ್ಕೆ ಹೋದರೂ, ಅಲ್ಲಿಗೆ ಪೋಲೀಸ್ ಜೀಪ್ ಇರುವುದಿಲ್ಲ, ಪೋಲೀಸ್‌ನವರು ಒಬ್ಬರೂ ಬರುವಂತಹ ಪರಿಸ್ಥಿತಿ ಅಲ್ಲಿ ಇಲ್ಲ. ನಾನು ಒಂದು ದಿವಸ ಇದ್ದಕ್ಕಿದ್ದ ಹಾಗೆ ನಮ್ಮ ಮನೆಗೆ ಹೋದಾಗ, ನನಗಿಂತ ಉದ್ದವಾಗಿರುವ ಕೋವಿಯನ್ನು ತೆಗೆದುಕೊಂಡು ಪೋಲೀಸ್ ಒಬ್ಬರು ಬಂದರು. ನಾನು ಅವರನ್ನು ಏನಪ್ಪಾ, ಎಂದು ಕೇಳಿದೆ. ಅದಕ್ಕೆ ಅವರು ನನ್ನನ್ನು ನಿಮ್ಮ ಸೆಕ್ಯೂರಿಟಿಗೆ ಕಳುಹಿಸಿದ್ದಾರೆಂದು ಹೇಳಿದರು. ಆ ಕೋವಿಯನ್ನು ಅವರು ಹಿಡಿದುಕೊಂಡು ನನ್ನ ಕಾರಲ್ಲಿ ಹತ್ತುವುದಕ್ಕೆ ಆಗುವುದಿಲ್ಲ. ಆ ಕೋವಿ ಅಷ್ಟು ಉದ್ದವಾಗಿದೆ. ನಾನು ಎಸ್.ಪಿ.ಯವರಿಗೆ ಈ ವಿಚಾರವಾಗಿ ಪತ್ರವನ್ನು ಬರೆದು ಕಳುಹಿಸಿದ್ದೇನೆ. ನೀವು ಕೊಟ್ಟಿರುವಂತಹ ಈ ಕೋವಿಯನ್ನು ಹಿಡಿದುಕೊಂಡು ಈ ಪೋಲೀಸ್ ನನ್ನ ಕಾರಲ್ಲಿ ಕೂಡುವುದಕ್ಕೆ ಆಗದಂತಹ ಪರಿಸ್ಥಿತಿ ಇರುವುದರಿಂದ, ನನ್ನ ಹತ್ತಿರ ಇರುವ ವ್ಯವಸ್ಥೆಯಲ್ಲಿ ಈ ಪೋಲೀಸ್ ಅನ್ನು ಕರೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲವಾದ್ದರಿಂದ ಅವರನ್ನು ವಾಪಸ್ಸು ಕಳುಹಿಸಿದ್ದೆ ಅವರು ಕೊಟ್ಟು ಕಳುಹಿಸಿರುವಂತಹ ಕೋವಿ, ಅವನು ಅದನ್ನು ತೆಗೆಯುವುದಕ್ಕೆ ಮುಂಚೆ ಏನಾಗಬಹುದೋ, ನಮ್ಮ ಊರಿನಲ್ಲಿ ಇದ್ದಂತಹ ಹಳೆಯ ಕೆಪಿನ್ ಕೋವಿ ಇತ್ತು, ಅದಕ್ಕಿಂತ ಕೆಟ್ಟ ಕೋವಿಯನ್ನು ಕೊಟ್ಟು ಕಳುಹಿಸಿದ್ದರು. ಈ ರೀತಿಯ ವ್ಯವಸ್ಥೆ, ಅದು ಸೆಕ್ಯೂರಿಟಿಯ ವಿಚಾರದಲ್ಲಿ ಬಂದಾಗ, ಡಿ.ಸಿ, ಎಸ್.ಪಿ.ಯವರ ಮನೆಗಳಿವೆಯೆಂಬ ಕಾರಣಕ್ಕಾಗಿ, ರಾತ್ರಿ 8ಗಂಟೆಯಿಂದ, ಅಂದರೆ ಇಲ್ಲಿ ಲ್ಯಾಂಡ್ ಆರ್ಡರ್ ಬಗ್ಗೆ ಎಷ್ಟರ ಮಟ್ಟಿಗೆ ಲಾ ಅಂಡ್ ಆರ್ಡರ್ ಕೊಲಾಪ್ಸ್ ಆಗಿದೆಯೆಂಬ ಬಗ್ಗೆ ನಾನು ಹೇಳುತ್ತಿದ್ದೇನೆ. ರಾತ್ರಿ 8ಗಂಟೆಯಿಂದ ಬೆಳಿಗ್ಗೆ 8ಗಂಟೆಯವರೆಗೆ ಚಿಕ್ಕಮಗಳೂರು ಡಿ.ಸಿ, ಎಸ್.ಪಿ.ಗಳ ಮನೆಗಳ ಮುಂದೆ ವಾಹನಗಳು ಮಾತ್ರವಲ್ಲ ನಡೆದುಕೊಂಡು ಹೋಗುವವರೂ ಕೂಡ, ಹೋಗಬಾರದೆಂದು ಆದೇಶವಾಗಿದೆ. ಇಲ್ಲಿ ನಡೆದುಕೊಂಡು ಹೋಗುವವರೂ ಸಹಿತ ಹೋಗುವ ಹಾಗೆ ಇಲ್ಲ. ಇದು ಆಸ್ಪತ್ರೆಗೆ ಬರುವಂತಹ ದಾರಿಯಾಗಿದೆ, ಈ ಜಿಲ್ಲಾ ಆಸ್ಪತ್ರೆಗೆ ಹೋಗುವಂತಹ ದಾರಿಯನ್ನು ಡಿ.ಸಿ.ಯವರು ಮುಚ್ಚಿದ್ದಾರೆ. ಈ ಡಿ.ಸಿ.ಯವರ ಜೀವದ ಬಗ್ಗೆ ಬಹಳ ಕಾಳಜಿ, ಇದೆ. ಅದನ್ನು ನಾನು ತಪ್ಪು ಎಂದು ಹೇಳುತ್ತಾ ಇಲ್ಲ. ಆದರೆ ಇವರಿಗೆ ಸ್ಪಷ್ಟವಾಗಿ ಗೊತ್ತಿದೆ. ಈ ನಕ್ಸಲೀಯರ ಚಟುವಟಿಕೆ ಜಾಸ್ತಿ ಇದೆ, ಆ ಕಾರಣಕ್ಕಾಗಿ ಇದನ್ನು ಬಂದ್ ಮಾಡುತ್ತೇವೆಂಬುದು ಗೊತ್ತಿದೆ. ಆದರೆ ಇದೇ ವಿಚಾರದಲ್ಲಿ ಸಾರ್ವಜನಿಕರ ವಿಷಯ ಬಂದಾಗ, ಶಾಸಕರ ವಿಷಯ ಬಂದಾಗ ಅವರಿಗೆ ಬಹಳ ಹಗುರವಾಗಿ ಕಾಣಿಸುತ್ತದೆ. ನಮ್ಮ ಪೋಲೀಸರಿಗೆ ಬಿಜೆಪಿ ಶಾಸಕರು ಹೋದ ಕಾರ್ಯಕ್ರಮಕ್ಕೆ ಬರುವಂಥ ಮನಸ್ಥಿತಿಯೇ ಇಲ್ಲ. ಏಕೆಂದರೆ ಅವರ ಮನಸ್ಸಿನಲ್ಲಿ ಬೇರೆ

ಏನೋ ಯೋಚನೆಗಳು ಇದ್ದಿರಬಹುದು. ಆದರೆ ನಾವು ವಿಚಾರದ ಮೇಲೆ ಅವರಿಗೆ ಬೆಂಬಲ ಕೊಟ್ಟಿದ್ದೇವೆ. ಇದನ್ನು ಸರ್ಕಾರ ಗಮನಿಸಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಪರಿಸ್ಥಿತಿಗಳು ಎಷ್ಟು ಕೆಟ್ಟ ಸ್ಥಿತಿಯಲ್ಲಿವೆ ಎಂದರೆ ಹೆಚ್ಚು ಕಡಿಮೆ ಯಾರಾದರೂ ನಕ್ಸಲರ ಬಗ್ಗೆ ಮಾತನಾಡುವಂಥ ಪ್ರಯತ್ನ ಮಾಡಿದರೆ, 'ನಿನಗೇಕೆ ಬೇಕು, ಚಂದ್ರಕಾಂತನ ಪರಿಸ್ಥಿತಿಯಂತೆ ನಿನಗೂ ಆಗಬೇಕೇನು' ಎಂದು ಪಕ್ಕದಲ್ಲಿರುವವನು ಹೇಳುತ್ತಾನೆ. ಆ ಮಗೆಬೈಲು ಚಂದ್ರಶೇಖರಯ್ಯನವರ ಬಗ್ಗೆ 'ಚಂದ್ರಶೇಖರಯ್ಯನವರು ಬಹಳ ದೊಡ್ಡ ರೈತರು, ಬಹಳ ದೊಡ್ಡ ಪ್ಲಾಂಟರು, ಅವರಿಂದ ಶೋಷಣೆ ನಡೆಯುತ್ತಿದೆ' ಎಂದು ಪತ್ರಿಕೆಗಳಲ್ಲಿ ಬರೆದಿರುವುದನ್ನು ನಾನು ನೋಡಿದೆ. ಈ ಶೋಷಣೆ ಎನ್ನುವ ಪದ ಬಂದಾಗ ನನಗೊಂದು ಆಶ್ಚರ್ಯ ಕಾಣುತ್ತದೆ. ಇಡೀ ಶೃಂಗೇರಿ ತಾಲ್ಲೂಕಿನಲ್ಲಿ 4 ಎಕರೆ 28 ಗುಂಟೆಗಿಂತ ಕಡಿಮೆ ಇರುವ ಜಮೀನಿನವರು 85 ಭಾಗ ಇದ್ದಾರೆ. 4 ಎಕರೆಯಿಂದ 9 ಎಕರೆ 10 ಎಕರೆ ಜಮೀನು ಇರುವವರು ಸುಮಾರು 10 ಭಾಗ ಇದ್ದಾರೆ. ಒಟ್ಟು 18 ಜನ ಮಾತ್ರ ಶೃಂಗೇರಿಯಲ್ಲಿ 10 ಎಕರೆಗಿಂತ ಜಾಸ್ತಿ ಜಮೀನು ಹೊಂದಿದ್ದಾರೆ. ಇದರ ಬಗ್ಗೆ ಸರ್ಕಾರದ ಅಧಿಕೃತ ದಾಖಲೆ ಇದೆ. 10 ಎಕರೆಗಿಂತ ಹೆಚ್ಚು ಜಮೀನು ಇರತಕ್ಕಂಥವರ ಸಂಖ್ಯೆ 18 ಆದರೆ ಇಲ್ಲಿ ಭೂಮಾಲೀಕರು ಎಂದು ಹೇಳುವಂಥವರು ಹೇಗೆ ಬರುತ್ತಾರೆ? ಅಲ್ಲಿರುವಂಥ ಶೃಂಗೇರಿ ಜನ ಬಹಳ ಚಂದದ ಬಟ್ಟೆ ಹಾಕಿಕೊಂಡು ಓಡಾಡುತ್ತಾರೆಂದರೆ ಇರುವ ಮೂರು ಎಕರೆ ನಾಲ್ಕು ಎಕರೆ ಜಾಗದಲ್ಲಿ ಒಳ್ಳೆಯ ವೆನಿಲಾ ಬೆಳೆದಿದ್ದಾರೆ, ಒಳ್ಳೆಯ ಮೆಣಸು ಬೆಳೆಯುತ್ತಾರೆ, ಒಳ್ಳೆಯ ಎಲೆ ಬೆಳೆಸುತ್ತಾರೆ, ಹೀಗೆ ಎಲ್ಲಾ ಬೆಳೆಗಳನ್ನು ಅವರು ಬೆಳೆಯುತ್ತಿರುವುದರಿಂದ ಏನಾಗಿದೆ ಎಂದರೆ ಅವರು ಕೆಲಸ ಮಾಡುವುದಕ್ಕೆ ಕೂಲಿಯವರನ್ನು ನೇಮಿಸಿಕೊಳ್ಳುತ್ತಿಲ್ಲ. ಹಾಗಾಗಿ ಅವರು ಬೆಳೆದಂಥದ್ದಕ್ಕೆ ಒಳ್ಳೆಯ ಬೆಲೆ ಸಿಗುತ್ತಿದೆ. ಅವರ ಬದುಕನ್ನು ಚಂದ ಮಾಡಿ ಅವರ ಕೆಲಸವನ್ನು ಅವರೇ ಮಾಡಿಕೊಂಡಿದ್ದರಿಂದ ಪೇಟೆಗೆ ಬರುವಷ್ಟೊತ್ತಿಗೆ ಚಂದವಾಗಿ ಬರುತ್ತಾರೆ. ಇದನ್ನು ನೋಡಿದವರೆಲ್ಲಾ ಇವರು ಬಹಳ ದೊಡ್ಡ ಸಾಹುಕಾರರು ಎನ್ನುವ ತೀರ್ಮಾನಕ್ಕೆ ಬಂದಿದ್ದರೆ ಅದಕ್ಕೆ ಶೃಂಗೇರಿ ಜನ ಹೊಣೆಯಲ್ಲ. ಶೃಂಗೇರಿ ಜನ ಯಾವತ್ತೂ ಈ ಭೂಮಾಲಿಕತ್ವದ ಅಡಿಯಲ್ಲಿ ಇಲ್ಲ. ಭೂಮಾಲಿಕತ್ವ ಎನ್ನುವಂಥದ್ದು ಅಲ್ಲಿ ಇಲ್ಲವೇ ಇಲ್ಲ. ಅಲ್ಲಿ ಗಿರಿಜನರನ್ನು ಶೋಷಣೆ ಮಾಡುತ್ತಾರೆ ಸಂಬಳ ಕೊಡುವುದಿಲ್ಲವೆನ್ನುವ ಇನ್ನೊಂದು ಮಾತನ್ನು ಯಾರೋ ಕೆಲವರು ಹೇಳುತ್ತಿದ್ದಾರೆ. ಆದರೆ ಅಲ್ಲಿ 5 ಪರ್ಸೆಂಟ್‌ಗಿಂತ ಕಡಿಮೆ ಗಿರಿಜನರು ಮಾತ್ರ ಯಾರಾದರೂ ಮನೆಗೆ ಕೆಲಸಕ್ಕೆ ಹೋಗುವುದನ್ನು ಬಿಟ್ಟರೆ ಇನ್ನುಳಿದ ಗಿರಿಜನರು ಪೂರ್ತಿ ಅಲ್ಲಿರುವಂಥ ಕಾಡಿನ ಉತ್ಪತ್ತಿ ಏನಿದೆ, ಸೀಗೆಕಾಯಿ ಇರಬಹುದು, ಅಂಟುವಾಳ ಇರಬಹುದು, ಜೇನು ಇರಬಹುದು, ಈ ತರಹ ಅರಣ್ಯ ಉತ್ಪನ್ನಗಳನ್ನು ಕಲೆಕ್ಟ್ ಮಾಡಿ ಅದರಲ್ಲಿ ಜೀವನ ಸಾಗಿಸುತ್ತಿರುವವರು ಬಿಟ್ಟರೆ ಯಾರದೋ ಮನೆ ಕೂಲಿ ಮಾಡುತ್ತಿರುವವರು ಅಲ್ಲ. ಒಟ್ಟಾರೆ ಸರ್ಕಾರದ ಯೋಜನೆಗಳು ತಪ್ಪಾಗಿರುವುದರಿಂದ ಈ ರೀತಿ ಸಮಸ್ಯೆಗಳು ನಮ್ಮ ಕಣ್ಣೆದುರು ಬಂದು ನಿಂತಿವೆ. ನನ್ನ ಕ್ಷೇತ್ರದ ಒಳಗಡೆ ಈ ಸಮಸ್ಯೆ ಮೇಜರ್ ಇರುವುದರಿಂದ ಇದನ್ನು ಹೇಳುವುದು ಅನಿವಾರ್ಯವೆಂದು ಹೇಳುತ್ತಿದ್ದೇನೆ. ಈ ತರಹದ ಸಮಸ್ಯೆ ಇರುವುದರಿಂದ ದಯಮಾಡಿ ಸರ್ಕಾರ ಇದರ ಕಡೆಗೆ ಗಮನಹರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಮ್ಮ ಸ್ಥಿತಿ ಹೇಗಿದೆ ಎಂದರೆ, encounter ನಡೆದ ಕೂಡಲೇ ನಾವು ಬೆನ್ನು ತಟ್ಟುತ್ತಿದ್ದರೂ ಸರ್ಕಾರ ತನಿಖೆಗೆ ಆದೇಶ ಕೊಡುತ್ತದೆ. ತನಿಖೆ ಮಾಡುವುದಕ್ಕೆ ಆದೇಶ ಏಕೆ

ಕೊಡುತ್ತಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ. ಅವನು AK-47 ಇಟ್ಟುಕೊಂಡು ಏಕೆ ಅಲ್ಲಿ ಓಡಾಡುತ್ತಿದ್ದ ಎನ್ನುವಂಥದ್ದನ್ನು ಯೋಚನೆ ಮಾಡಿದರೆ ಸಾಕಾಗುತ್ತದೆ. ಇದರ ಬಗ್ಗೆ ತನಿಖೆ ಮಾಡುತ್ತೇವೆಂದು ಶ್ರೀ ಚಿರಂಜೀವಿ ಸಿಂಗ್‌ರವರು ನಿನ್ನೆ ಕ್ಷೇತ್ರದ ತುಂಬಾ ಓಡಾಟ ಮಾಡುತ್ತಿದ್ದರು. ಆದರೆ ಈ ತನಿಖೆಯ ಅವಶ್ಯಕತೆಯೇ ಇರಲಿಲ್ಲ. ಸರ್ಕಾರ ಈ ರೀತಿ ಮಾಡಿದ್ದರಿಂದ ಅಲ್ಲಿರುವ ಅಧಿಕಾರಿಗಳ ಮಾನಸಿಕ ಸ್ಥೈರ್ಯವನ್ನು ಹಾಳು ಮಾಡಿದಂತಾಗಿದೆ. ಸರ್ಕಾರ ಒಂದು ಕಡೆಯಿಂದ ಅವರನ್ನು ಹದ್ದುಬಸ್ತಿಗೆ ತರುತ್ತೇವೆಂದು ಹೇಳುವಂಥದ್ದು, ಇನ್ನೊಂದು ಕಡೆ ಅವರನ್ನು encounter ಮಾಡಿದ್ದು ಏಕೆ ಆ ಬಗ್ಗೆ ತನಿಖೆ ಮಾಡುತ್ತೇವೆಂದು ಹೇಳಿ ತನಿಖೆ ಮಾಡಿಸುವುದು ಸೂಕ್ತವಲ್ಲ. ಈ ರೀತಿ ಮಾಡಬಾರದೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಾ, ಅಲ್ಲಿರುವಂಥ intelligence totally failure ಆಗಿದೆ. ಅಲ್ಲಿ intelligence ರವರ ಜೊತೆ ನಾನು ಮಾತನಾಡುತ್ತಿದ್ದೆ. 'ಏನ್ರೀ, ಇದು ಯಾವುದೂ ನಿಮಗೆ ಗೊತ್ತಾಗುತ್ತಿಲ್ಲವಲ್ಲ, ಏಕೆ? ಎಂದು ಕೇಳಿದರೆ, 'ಸರ್, ನಮಗೂ ಕೆಲವೊಂದು ವ್ಯವಸ್ಥೆಗಳು ಸರಿಯಾಗಬೇಕಿದೆ, ಎಲ್ಲಿಂದಲೊ ಏನಾದರೂ ಮೆಸೇಜ್ ತೆಗೆದುಕೊಳ್ಳಲಿಕ್ಕೂ ಈ ಆಧುನಿಕ ವ್ಯವಸ್ಥೆಯಲ್ಲಿ ಕಡೆಯ ಪಕ್ಷ ನಮಗೊಂದು ಮೊಬೈಲ್ ಕೊಡಿಸುವಂತೆ ಆಗಲಿ' ಎಂದು ಕೊಪ್ಪ intelligence ನವರು ನನ್ನ ಹತ್ತಿರ ಹೇಳುತ್ತಾರೆ. ಅವರಿಗೆ ಮೊಬೈಲ್‌ನ ಅವಶ್ಯಕತೆ ಇದೆಯೆಂದು ಹೇಳಿರುವುದು ಅದು ಸರಿ ಎಂದು ನನಗೂ ಅನಿಸಿತು. ಏಕೆಂದರೆ ಎಲ್ಲಿಂದಲಾದರೂ information ಕೊಡುವವರಿದ್ದರೆ ಕಡೆಯ ಪಕ್ಷ ಅವರ ಮೊಬೈಲ್ ನಂಬರನ್ನು ಪೇಪರಿಗಾದರೂ ಹಾಕಿದರೆ ಅದರಿಂದ ಸುದ್ಧಿಯನ್ನು ತಲುಪಿಸಲಿಕ್ಕೆ ಅನುಕೂಲವಾಗಬಹುದೆಂದು ನನ್ನ ಅಭಿಪ್ರಾಯವಾಗಿದೆ. ಈ ಕಾರಣಕ್ಕಾಗಿ ನಕ್ಸಲ್ ಚಟುವಟಿಕೆ ಇರುವಂಥ ನಮ್ಮ ಪರಿಸ್ಥಿತಿಯನ್ನು ತಮ್ಮ ಮುಂದಿಟ್ಟಿದ್ದೇನೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾದಂಥ ಸ್ಥಿತಿ ಇದೆಯೆಂದು ಹೇಳುತ್ತಾ, ಎಲ್ಲ ವಿಚಾರಗಳಲ್ಲಿ ಸರ್ಕಾರದ ವೈಫಲ್ಯತೆ ಕಾಣುತ್ತದೆ ಎನ್ನುವುದನ್ನು ನಾನು ಹೇಳುತ್ತೇನೆ. ಇದನ್ನು ಏಕೆ ಹೇಳುತ್ತೇನೆಂದರೆ, ಮರಳು ಲಾಬಿ, ಅಲ್ಲಿರುವಂಥ ಮರಳಿಗೆ ಟೆಂಡರ್ ಆಗುವುದಿಲ್ಲ. ನೀರಿನಿಂದ ಪೈಪು ಹಾಕಿ ಮರಳು ಎತ್ತುತ್ತಿದ್ದಾರೆ. ಇದನ್ನು ಎತ್ತಬೇಡಿ ಎಂದು ಹೇಳಿ ಎಂದರೆ, ಯಾರು ಬೇಡ ಎಂದು ಹೇಳುತ್ತಾನೋ ಅವನ ಮೈಮೇಲೆ ಹೋಗುವಂಥ ಪರಿಸ್ಥಿತಿ ಇದೆ. ಪೊಲೀಸರು ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಿಲ್ಲ. ಕಾನೂನಿನ ಪ್ರಕಾರ ಅಲ್ಲಿ ಏನೂ ನಡೆಯುವಂಥ ಸ್ಥಿತಿ ಇಲ್ಲ. ಈ ರೀತಿಯ ಸ್ಥಿತಿಯಲ್ಲಿ ನಮ್ಮ ಕ್ಷೇತ್ರ ಇದೆ. ಇಲ್ಲಿ ಬಂದು ಬೆಂಗಳೂರಿನಲ್ಲಿ ಇಳಿಯುತ್ತಿದ್ದ ಹಾಗೆ ಆಟೋದವರು ಹೊಡೆದಾಟವನ್ನು ಮಾಡುವುದಿಲ್ಲವಷ್ಟೆ. ಒಂದು ಆಟೋಗೆ ಸಹ ಮೀಟರ್ ಚೆನ್ನಾಗಿರುವುದಿಲ್ಲ. ಯಾವ ಆಟೋದಲ್ಲಿ ಸಹ ಹತ್ತಿ ಕುಳಿತುಕೊಂಡರೂ ಡಬಲ್ ಚಾರ್ಜ್ ಎಂದು ಹೇಳುತ್ತಾನೆ. ವಿಧಾನಸೌಧಕ್ಕೆ ಬರುವಾಗ ಡಬಲ್ ಚಾರ್ಜ್ ಎಂದರೆ ಆ ಮೀಟರ್‌ನಲ್ಲಿ 12ರೂಪಾಯಿ 90 ಪೈಸೆಯಷ್ಟು ಅಥವಾ 13 ರೂಪಾಯಿ ಆಗಬೇಕು. ಆದರೆ ಕೆಲವು ಮೀಟರುಗಳಲ್ಲಿ ಅದು 45 ರೂಪಾಯಿಗಳನ್ನು ತೋರಿಸುತ್ತಿರುತ್ತದೆ. ನಾವು ಎಂಎಲ್‌ಎಗಳು ಎಂದು ಹೇಳಿದರೆ, 'ಎಂಎಲ್‌ಎಗಳು ಕೊಡದೆ ಇನ್ಯಾರು ಕೊಡಬೇಕು, ಕೊಡ್ರೀ' ಎಂದು ಹೇಳುತ್ತಾರೆ. ನಮ್ಮ ಪರಿಸ್ಥಿತಿಯೇ ಹೀಗಾದರೆ ಇನ್ಯಾರೋ ಜಯನಗರಕ್ಕೋ ಅಥವಾ ಸುತ್ತಮುತ್ತ ಹೋಗುವಂಥ ಸಾಧಾರಣ ಪ್ರಜೆಯ ಪರಿಸ್ಥಿತಿ ಏನಾಗಬೇಕು? ಪೊಲೀಸರು ಒಬ್ಬರೂ ಸಹ ರಾತ್ರಿ ಹೊತ್ತು ಬಸ್‌ಸ್ಟ್ಯಾಂಡಿನಲ್ಲಿರುವುದಿಲ್ಲ. ಎಲ್ಲಾ ವ್ಯವಸ್ಥೆಗಳು ಬೆಳಗಿನ ಜಾವ ಇರುತ್ತದೆ. ಕರೆಕ್ಟಾಗಿ ಎಲ್ಲಾ ವ್ಯವಸ್ಥೆಗನ್ನು ಮಾಡಿಕೊಂಡು

ಅವರವರು ಆರಾಮವಾಗಿರುತ್ತಾರೆಂದು ಅನಿಸುತ್ತದೆ. ಎಲ್ಲಾ ದಿಕ್ಕುಗಳಲ್ಲಿ ವ್ಯವಸ್ಥೆಗಳು ಕೆಟ್ಟುಹೋಗಿವೆ. ನನ್ನ ಕ್ಷೇತ್ರದಲ್ಲಿ ನಾನು ಬೊಂಬಡ ಹೊಡೆಯುತ್ತಿದ್ದೇನೆ. ಆ ಕ್ಲಬ್‌ಗಳು ಸಿಕ್ಕಾಬಟ್ಟೆ ಜಾಸ್ತಿಯಾಗಿವೆ. 'ಸ್ವಾಮಿ, ನಮ್ಮ ಮನೆಯಲ್ಲಿ ತಾಳಿಯೊಂದನ್ನು ಬಿಟ್ಟು ಮಿಕ್ಕಿದನ್ನೆಲ್ಲಾ ನಮ್ಮ ಯಜಮಾನರು ಕಿತ್ತುಕೊಂಡು ಹೋದರೆಂದು ಕೆಲವು ತಾಯಂದಿರು ಮನೆಗೆ ಫೋನ್ ಮಾಡಿ ಹೇಳುತ್ತಾರೆ'. ಇಸ್ಪೀಟ್, ತ್ರಿ ಕಾರ್ಡ್ಸ್, ಅಂದರ್‌ಬಾಹರ್, ಮಟ್ಕಾ, ಇವುಗಳನ್ನೆಲ್ಲಾ ಪೊಲೀಸರೇ ನಿಂತು ನಡೆಸುವಂಥ ವ್ಯವಸ್ಥೆ ನನ್ನ ಕ್ಷೇತ್ರದಲ್ಲಿದೆ. ಹಿಂದಿನ ಅಧಿವೇಶನದಲ್ಲಿ ಇದನ್ನು ನಾನು ಹೇಳಿ ಹೋದ ಎರಡು ದಿನ ನನ್ನ ಕ್ಷೇತ್ರದಲ್ಲಿ ಕ್ಲಬ್‌ಗಳು ಸ್ಥಗಿತಗೊಂಡಿದ್ದವು. ಮೂರನೇ ದಿನ ಪುನಃ ಮಾಮೂಲಿನಂತೆ ಕ್ಲಬ್‌ಗಳು ಓಪನ್ ಆದವು. ಈ ಪರಿಸ್ಥಿತಿ ಆದರೆ, ವ್ಯವಸ್ಥೆಗಳೇ ಕೆಟ್ಟುಹೋದರೆ law and order ಸರಿಯಿದೆ ಎಂದು ಎಲ್ಲೂ ಹೇಳುವುದಕ್ಕೆ ಸಾಧ್ಯವಿಲ್ಲದಿರುವಂಥ ಪರಿಸ್ಥಿತಿ ಇದೆ. ಸರ್ಕಾರ ಇದನ್ನು ಗಂಭೀರವಾಗಿ ಯೋಚನೆ ಮಾಡಿ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಾ, ತಾವು ಈ ಬಗ್ಗೆ ಈ ರೀತಿಯ ವ್ಯವಸ್ಥೆಗಳನ್ನು ಮಾಡಬೇಕೆಂದು ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಡುತ್ತೀರಿ ಎಂದು ನಾನು ಅಂದುಕೊಳ್ಳುತ್ತಾ, ಪೊಲೀಸ್ ವ್ಯವಸ್ಥೆಗೆ ನನ್ನ ಕ್ಷೇತ್ರದಲ್ಲಿ ಬೇಕಾಗಿರುವಂಥ ಆಧುನಿಕ ಶಸ್ತ್ರಾಸ್ತ್ರಗಳನ್ನು ಕೊಡಬೇಕು. ಶೃಂಗೇರಿಯಲ್ಲಿ 23 ಜನ ಪೊಲೀಸರು ಇದ್ದಾರೆ. ಅವರ ಕೈಯಲ್ಲಿ ಈ ನಕ್ಸಲರನ್ನು ಹದಕ್ಕೆ ತರುವುದಕ್ಕೆ ಆಗುವುದಿಲ್ಲ. ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ನಿಯೋಜನೆ ಮಾಡಬೇಕು. ಅಲ್ಲಿಗೆ ನೇಮಿಸುವಂಥ ಸಬ್‌ಇನ್ಸ್‌ಪೆಕ್ಟರ್‌ಗಳನ್ನೆಲ್ಲಾ ವಯಸ್ಸು ಇರುವಂಥ ವರರನ್ನು ನಿಯೋಜನೆ ಮಾಡಿ ಎಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಾ, ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಂಥ ತಮಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದು ಸಾವದಿ (ಜಮಖಂಡಿ) : ಮಾನ್ಯ ಸಭಾಧ್ಯಕ್ಷರೆ, ನಮ್ಮ ಜಮಖಂಡಿ ತಾಲ್ಲೂಕಿನಲ್ಲಿ law and order ಯಾವ ರೀತಿ ಕಾರ್ಯ ನಿರ್ವಹಿಸುತ್ತಿದೆ ಎನ್ನುವ ಬಗ್ಗೆ ತಿಳಿಸುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ, ನನ್ನ ಕ್ಷೇತ್ರದಲ್ಲಿ, ನಮ್ಮ ನಗರಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ದರೋಡೆ ನಡೆದರೆ ಅಲ್ಲಿರತಕ್ಕಂಥ ಜನ "ನೀವು ಗಸ್ತು ತಿರುಗಿರಿ, ಅಲ್ಲಿಗೆ ಪೊಲೀಸರನ್ನು ನಿಯೋಜಿಸಿ ಎಂದು ಕೇಳಿದಾಗ, ಅಲ್ಲಿರತಕ್ಕಂಥ ಸಬ್‌ಇನ್ಸ್‌ಪೆಕ್ಟರ್ ಆಗಲಿ, ಸ್ವಾಮಿ, ನಮ್ಮಲ್ಲಿ ಸಿಬ್ಬಂದಿ ಇಲ್ಲ, ಸಿಬ್ಬಂದಿ ಕೊರತೆ ಇದೆ, ಅಲ್ಲಿ ಯಾವುದೋ ಸಭೆ ಇದೆ, ಅಲ್ಲಿಗೆ ಇರುವವರನ್ನು ಕಳುಹಿಸಿಕೊಡಲಾಗಿದೆ ಎಂದು" ಈ ರೀತಿ ಅಲ್ಲಿ ಸಿಬ್ಬಂದಿ ಕೊರತೆ ಇದೆಯೆನ್ನುವಂಥ ಒಂದು ಸಬೂಬು ಹೇಳಿ ಯಾವುದೇ ರೀತಿಯ ಪೊಲೀಸರ ಕಾವಲು ಇಲ್ಲದೆಯೇ ಆ ಕಳ್ಳರು ರಾಜಾರೋಷವಾಗಿ ಇವತ್ತು ಈ ಗಲ್ಲಿಯಲ್ಲಿ ದರೋಡೆ ಆಗಿದ್ದರೆ ನಂತರ ಮರುದಿವಸವೇ ಮತ್ತೊಂದು ಗಲ್ಲಿಯಲ್ಲಿ ದರೋಡೆಯನ್ನು ಜನರು ಕಕ್ಕಾಬಿಕ್ಕಿ ಆಗುವ ಹಾಗೆ ಅಲ್ಲಿರುವಂಥ ವ್ಯವಸ್ಥೆ ನಿರ್ಮಾಣವಾಗಿದೆ. ಈ ರೀತಿ ಸಬೂಬು ಹೇಳುವಂಥ ಪೊಲೀಸರು, ಅಲ್ಲಿ ಜನಸಾಮಾನ್ಯರು ರೈತರು ಸಾಮಾನ್ಯರು ಆ ಪಟ್ಟಣಕ್ಕೆ ತಮ್ಮ ಉದ್ಯೋಗದ ಸಲುವಾಗಿ ತಮ್ಮ ಸೈಕಲು ಮೋಟಾರುಗಳನ್ನು ತೆಗೆದುಕೊಂಡು ಬಂದಾಗ ಅದೇ ಪೊಲೀಸರು ಸರ್ಕಲ್‌ವಾರು ತಡೆದು ಆ ವಾಹನಗಳನ್ನು ತಪಾಸಣೆ ಮಾಡುವುದು, ಅಲ್ಲಿರತಕ್ಕಂಥವರ ಹತ್ತಿರ ಲೈಸೆನ್ಸ್ ಕೇಳುವುದು, ಅವನು ಲೈಸೆನ್ಸ್ ತೋರಿಸಿದರೆ ಇನ್ನಿತರ ಕಾಗದಪತ್ರಗಳನ್ನು ಕೇಳುವುದು, ಆ ಕಾಗದ ಪತ್ರ ಕೊಟ್ಟರೆ ಹೆಡ್‌ಲೈಟ್‌ಗೆ ವಾರ್ನಿಶ್ ಮಾಡಿಲ್ಲ, ಪೊಲ್ಯೂಷನ್ ಸರ್ಟಿಫಿಕೇಟ್ ಪಡೆದಿಲ್ಲ, ಈ ರೀತಿ ನೂರಾರು

ಸಬೂಬುಗಳನ್ನು ಹೇಳಿ ಅಲ್ಲಿ ಸಾವಿರಾರು ರೂಪಾಯಿಗಳನ್ನು ದಂಡ ಕಟ್ಟುವುದು, ಇಲ್ಲದಿದ್ದರೆ ಅವರು ಐದಾರು ನೂರು ರೂಪಾಯಿ ಕೊಟ್ಟರೆ ಅವನನ್ನು ಬಿಟ್ಟು ಕಳುಹಿಸುವುದು, ಅಕಸ್ಮಾತ್ ಅವನು ಕೊಡಲು ನಿರಾಕರಿಸಿದರೆ ಅವನ ಮೇಲೆ ಕೇಸ್ ಹಾಕಿ ಕೋರ್ಟ್‌ನಲ್ಲಿ ಎರಡೆರಡು ಸಾವಿರ ರೂಪಾಯಿಗಳ ದಂಡ ಕಟ್ಟುವಂಥ ವ್ಯವಸ್ಥೆ ನಮ್ಮ ತಾಲ್ಲೂಕಿನಲ್ಲಿ ನಿರ್ಮಾಣವಾಗಿದೆ. ಅದಲ್ಲದೆ ಪೊಲೀಸ್ ವ್ಯವಸ್ಥೆಯಲ್ಲಿ ನಾನು ಒಬ್ಬ ಶಾಸಕನಾಗಿದ್ದು ನನ್ನ ಸ್ವಂತ ಊರಿನಲ್ಲಿ ನನ್ನ ಒಬ್ಬ ಹತ್ತಿರದ ಸಂಬಂಧಿ ರಾತ್ರಿ ವೇಳೆ ಅವನು ತನ್ನ ಅಂಗಡಿಯ ಮುಂದೆ ಕಟ್ಟೆಗೆ ಮೇಲೆ ಮಲಗಿದ್ದಾಗ ಸಾರ್ವಜನಿಕವಾಗಿ ಅವನ ಹತ್ಯೆಯಾಯಿತು. ಆ ಹತ್ಯೆಯಾಗಿದ್ದಕ್ಕಾಗಿ ಅಲ್ಲಿರುವಂಥ ಎಸ್.ಪಿಗೆ ನಾನು ಪತ್ರ ಬರೆದು ಅದರ ಬಗ್ಗೆ ಯೋಗ್ಯವಾಗಿ ವಿಚಾರಣೆಯಾಗಬೇಕು, ಯಾರು ಅದರ ಹಿಂದೆ ಇದ್ದಾರೆ ಅವರೆಲ್ಲರನ್ನೂ ದಂಡಿಸಬೇಕೆನ್ನುವಂಥ ಒಂದು ಒತ್ತಾಯದ ಪತ್ರವನ್ನು ಬರೆದಾಗ, ಅದರ ಹಿಂದೆ ಯಾರೂ ಇಲ್ಲ, ಕೇವಲ ಒಬ್ಬನೇ ಹೋಗಿ ಹೊಡೆದು ಸಾಯಿಸಿದ್ದಾನೆ ಎನ್ನುವಂಥ ವರದಿಯನ್ನು ನನಗೆ ಕೊಟ್ಟು ನನ್ನಿಂದ ಸಹಿ ತೆಗೆದುಕೊಳ್ಳಲಿಕ್ಕೆ ಬಂದರು. ನಾನು ಅದಕ್ಕೆ ಸಹಿ ಮಾಡದೆ ವಾಪಸ್ಸು ಕಳುಹಿಸಿದ್ದೇನೆ. ಏಕೆಂದರೆ ಆವತ್ತು ರಾತ್ರಿ ಆ ಊರಿನಲ್ಲಿರತಕ್ಕಂಥ ಲೈನ್ ತೆಗೆದು ಪಾರ್ಟಿ ಮಾಡಿ ಹತ್ತಾರು ಜನ ಬಂದು ಅಲ್ಲಿ 18–20 ವರ್ಷದ ಪರಸಪ್ಪ ಬೆಳಿಗೇರಿ ಎನ್ನುವ ಯುವಕನನ್ನು ಬಡಿಗೆಯಿಂದ ಹೊಡೆದು ಕೊಲೆ ಮಾಡಿದಾಗ ಅದು ಒಬ್ಬನೇ ಒಬ್ಬನಿಂದ ಮಾಡಲಿಕ್ಕೆ ಸಾಧ್ಯವಿಲ್ಲ. ಇದರ ಹಿಂದೆ ಇರತಕ್ಕಂಥ ವ್ಯಕ್ತಿಗಳನ್ನು ಬಂಧಿಸಬೇಕೆನ್ನುವಂಥ ಒತ್ತಾಯವನ್ನು ನಾವು ಮಾಡಿದಾಗ ಸುಮಾರು 2–5 ತಿಂಗಳಿನಿಂದ ಅದರ ಬಗ್ಗೆ ಚಕಾರ ಶಬ್ದವಿಲ್ಲ. ನಾನು ಎರಡು ಮೂರು ಪತ್ರಗಳನ್ನು ಎಸ್‌ಪಿಗೆ ಬರೆದರೂ ಸಹ ಆ ಬಗ್ಗೆ ಉತ್ತರವನ್ನು ಬರೆಯುವಂಥ ಸೌಜನ್ಯವನ್ನು ಸಹ ನನಗೆ ಇಲ್ಲಿಯವರೆಗೆ ತೋರಿಸಿಲ್ಲ. ಆ ರೀತಿಯ ಪೊಲೀಸ್ ವ್ಯವಸ್ಥೆ ನಮ್ಮಲ್ಲಿದೆ. ಅದೇ ಪ್ರಕಾರ ಎರಡು ತಿಂಗಳ ಹಿಂದೆ ಒಂದು ಕೋಮಿನ ಹಬ್ಬದಲ್ಲಿ ಗೋವುಗಳನ್ನು ತೆಗೆದುಕೊಂಡು ಹೋಗುವಾಗ ಸಣ್ಣಸಣ್ಣ ಗೋವುಗಳನ್ನು ಹತ್ಯೆ ಮಾಡುತ್ತಾರೆ, ಅದನ್ನು ತಡೆಯಬೇಕೆಂದು ಆ ಸುದ್ದಿಯನ್ನು ಹೇಳಲು ಪೊಲೀಸ್ ಸ್ಟೇಷನ್‌ಗೆ ಒಬ್ಬ ಯುವಕ ಬಂದಾಗ ಅಲ್ಲಿರತಕ್ಕ ಗೂಂಡಾಗಳು ಯಾರೋ ಬಂದು ಹೊಡೆದಿದ್ದಾರೆಂದು ಇಲ್ಲಿ ಯಾರೋ ಹೇಳಿದರು. ಇದು ತಪ್ಪು. ಅದೇ ಪ್ರಕಾರ ಆ ಯುವಕ ಪೊಲೀಸ್ ಸ್ಟೇಷನ್‌ಗೆ ಬಂದಾಗ, ಆ ಯುವಕನನ್ನು ಬೆತ್ತಲೆಗೊಳಿಸಿ ಅಮಾನುಷವಾಗಿ ಹೊಡೆದು, ಅವನು 15 ದಿವಸ ಸರ್ಕಾರಿ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ಪಡೆಯುವ ವ್ಯವಸ್ಥೆಯಾಗಿತ್ತು. ಜಾಮೀನು ರಹಿತ ವಾರಂಟ್ ಹೊರಡಿಸಿ, ಬಂಧಿಸಿ, ಅವನು 15 ದಿವಸಗಳವರೆಗೆ ಜೈಲಿನಲ್ಲಿ ಕೊಳೆಯುವ ಹಾಗೆ ಮಾಡಿದರು. ಈ ರೀತಿಯ ಪೊಲೀಸ್ ವ್ಯವಸ್ತೆ ನಮ್ಮಲ್ಲಿ ನಿರ್ಮಾಣವಾಗಿದೆ. ಅದಲ್ಲದೆ, ನಮ್ಮ ಮಿತ್ರರಾದ ಶಾಸಕರು ಹೇಳಿದ ಪ್ರಕಾರ, ನಮ್ಮಲ್ಲೂ ಸಹ ಸಾಕಷ್ಟು ಕ್ಲಬ್‌ಗಳು ನಡೆಯುತ್ತಿವೆ. ಅಲ್ಲಿ ಸಾಮಾನ್ಯ ಜನ ಬಂದು ದಿನವೂ ಹತ್ತಾರು ಲಕ್ಷ ರೂಪಾಯಿ ಹಣವನ್ನು ಕಳೆದುಕೊಂಡು ಬೀದಿ ಪಾಲಾಗುವ ಭಯಾನಕ ಸ್ಥಿತಿ ನಿರ್ಮಾಣವಾಗಿದೆ. ಅದರ ಬಗ್ಗೆ, ಆ ಕ್ಲಬ್‌ಗಳನ್ನು ತಡೆಯಿರಿ ಎನ್ನುವ ಸೂಚನೆ ಕೊಟ್ಟರೂ ಸಹ ಅದು ಇನ್ನೂ ಯಾವುದೇ ಕಾರ್ಯರೂಢಕ್ಕೆ ಬಂದಿಲ್ಲ. ಅದಲ್ಲದೆ, ಮಟ್ಕಾ ಅಂತೂ ರಾಜಾರೋಷವಾಗಿ ನಡೆಯುತ್ತಿದೆ. ಈ ರೀತಿ ಯಾವುದೇ ಒಂದು ಅನೈತಿಕ ಚಟುವಟಿಕೆಗಳು ನಮ್ಮ ಕ್ಷೇತ್ರದಲ್ಲಿ ರಾಜಾರೋಷವಾಗಿ ನಡೆಯುತ್ತಿವೆ. ನ್ಯಾಯಯುತವಾದ ಚಟುವಟಿಕೆಗಳು ಏನು ಆಗಬೇಕಾಗಿತ್ತು ಅದಕ್ಕೆ ಮಾತ್ರ ಪೊಲೀಸರು ಬಂದು ತಡೆಯುವ ವ್ಯವಸ್ಥೆಯನ್ನು ಮಾಡುತ್ತಾರೆಯೇ

ವಿನಃ ಯಾವುದೇ ರೀತಿ ಕಳ್ಳತನವಾಗಲಿ, ಮಟ್ಕಾ ಆಗಲಿ, ಕ್ಲಬ್‌ಗಳನ್ನಾಗಲಿ, ಕಳ್ಳಭಟ್ಟಿಯನ್ನಾಗಲಿ ತಡೆಯುವ ಬಗ್ಗೆ ಪೋಲೀಸರು ಸರಿಯಾಗಿ ಮಾಡುತ್ತಿಲ್ಲ. ಆದರೆ, ಯಾರು ಅಮಾಯಕ ರೈತರಿದ್ದಾರೆ, ಅವರನ್ನು ಹೆರಾಸ್‌ಮೆಂಟ್ ಮಾಡಿ, ಅವರ ವಾಹನವನ್ನು ತಡೆದು, ಹತ್ತಾರು ಸಾವಿರ ರೂಪಾಯಿ ಕಿತ್ತುಕೊಂಡು, ದಿನವೂ ಇದೇ ದಂಧೆಯಲ್ಲಿ ಅಲ್ಲಿರುವ ವ್ಯವಸ್ಥೆ ತೊಡಗಿದೆಯೋ ವಿನಃ ನ್ಯಾಯಯುತವಾಗಿ, ಗೌರವಯುತವಾಗಿ ಯಾವುದೇ ಒಬ್ಬ ರೈತ, ಒಬ್ಬ ಸಾಮಾನ್ಯ ಜನ ಪಟ್ಟಣಕ್ಕೆ ಬಂದು, ಉದ್ಯೋಗ ಮಾಡಿ ಹೋಗುವ ವ್ಯವಸ್ಥೆ ಇಲ್ಲ. ಈ ರೀತಿ ನಮ್ಮ ತಾಲ್ಲೂಕಿನಲ್ಲಿರುವ ಒಂದು ವ್ಯವಸ್ಥೆ ಹದಗೆಟ್ಟಿದ್ದು, ಅದನ್ನು ಈ ಕೂಡಲೇ ಸರಿಪಡಿಸಬೇಕೆನ್ನುವ ಒಂದು ಸೂಚನೆಯನ್ನು ತಮ್ಮ ಮೂಲಕ ಸರ್ಕಾರಕ್ಕೆ ನಾನು ಕೊಡಬಯಸುತ್ತೇನೆ. ನನಗೆ ಈ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಈಗಾಗಲೇ ನನ್ನ ಬಹಳಷ್ಟು ಸ್ನೇಹಿತರು ಕರ್ನಾಟಕದಲ್ಲಿನ ನಕ್ಸಲೈಟ್ ಸಮಸ್ಯೆ ಬಗ್ಗೆ ಮಾತನಾಡಿದ್ದಾರೆ. ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಮುಂಬೈಯನ್ನು ಮೀರಿಸುವ ಒಂದು ವ್ಯವಸ್ಥೆ ಇವತ್ತು ಬೆಂಗಳೂರಿನಲ್ಲಾಗುತ್ತಿದೆ. ನಿಧಾನ ನಿಧಾನವಾಗಿ ಬೆಂಗಳೂರಿನಲ್ಲಿರುವ ಭೂಗತ ಜಗತ್ತಿನ ದೊರೆಗಳೆಲ್ಲಾ ಇವತ್ತು ಬೆಂಗಳೂರಿನಲ್ಲಿ ಆಸ್ತಿ ಮಾಡಿರುವುದು ಈಗಾಗಲೇ ಸಾಕಷ್ಟು ಸಮೀಕ್ಷೆಯಿಂದ, ನಮಗೆಲ್ಲಾ ತಿಳಿದು ಬಂದಿದೆ. ಮೊನ್ನೆ ರೈಲ್ವೆ ಸ್ಟೇಷನ್‌ನಲ್ಲಿ ಸಿಕ್ಕಿದ ವೆಪನ್ಸ್ ಇರಬಹುದು, ಭೂಗತ ಜಗತ್ತಿನ ದೊರೆಗಳು ಇಲ್ಲಿ ಮಾಡಿರುವ ಆಸ್ತಿ ಇರಬಹುದು ಮತ್ತು ಅವರು ಮಾಡುತ್ತಿರುವ ಭೂ ವ್ಯವಹಾರಗಳು ಇವೆಲ್ಲ ಇವತ್ತು ಬೆಂಗಳೂರು ಮತ್ತೊಂದು ಬಾಂಬೆ ಆಗುತ್ತಿದೆ ಎನ್ನುವುದಕ್ಕೆ ಯಾವುದೇ ಸಂದೇಹ ಬೇಡ. ಇನ್ನೊಂದು 5 ವರ್ಷಗಳಲ್ಲಿ ಅದನ್ನು ಮಿರಿ ಹೋಗುವ ಪರಿಸ್ಥಿತಿಗೆ ಬೆಂಗಳೂರು ಬೆಳೆಯುತ್ತಿದೆ. ವಿಶೇಷವಾಗಿ ಬೆಂಗಳೂರಿನ ಗ್ರಾಮಾಂತರ ಪ್ರದೇಶದ ಏನು ರೆವಿನ್ಯೂ ಬೆಲ್ಟ್ಸ್ ಇದೆ, ಈ ಗ್ರಾಮಾಂತರ ಇವೆಲ್ಲಾ ಇವತ್ತು ಪಟ್ಟಣವಾಗಿ ಪರಿವರ್ತನೆಯಾಗುವ ವ್ಯವಸ್ಥೆಯನ್ನು ನಾವು ಕಾಣುತ್ತಿದ್ದೇವೆ. ದಿನೇ ದಿನೇ ಬೆಂಗಳೂರಿನಲ್ಲಿ ಆಸ್ತಿ ಬೆಲೆ ಜಾಸ್ತಿಯಾಗಿರುವುದರಿಂದ ಇವಕ್ಕೆಲ್ಲಾ ಈ ಭೂಗತ ಜಗತ್ತಿನ ದೊರೆಗಳು ಇಲ್ಲಿ ಎಲ್ಲ ಅಡಗುತಾಣಗಳನ್ನಾಗಿ ಮಾಡಿಕೊಂಡಿದ್ದಾರೆ. ಮೊದಲು ಬೆಂಗಳೂರಿನಲ್ಲಿ, ನಿವೃತ್ತಿ ಹೊಂದಿದ್ದ ಐಎಎಸ್ ಅಧಿಕಾರಿ ಇರಬಹುದು, ರಾಜಕಾರಣಿಗಳಿರಬಹುದು, ಇವರೆಲ್ಲಾ ಬಹಳ ಸಂತೋಷದಿಂದ, ನೆಮ್ಮದಿಯಿಂದ ಬಾಳುವ ವಾತಾವರಣ ಇತ್ತು. ಯಾರಾದರೂ ರಿಟೈರ್ಡ್ ಆದರೆ, ನಾನು ಬೆಂಗಳೂರಿಗೆ ಹೋಗಿ ಬಹಳ ಸಂತೋಷದಿಂದ ಇರಬಹುದೆಂದು ಹೇಳುತ್ತಿದ್ದರು. ಆದರೆ ಇವತ್ತು ಯಾರಾದರೂ ಒಟಿಯಾಗಿ ಬೆಂಗಳೂರಿನಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿಯನ್ನು ಈ ಸರ್ಕಾರ ತಂದಿದೆ. ಕಳೆದ 5 ವರ್ಷಗಳಿಂದ ಇವತ್ತು ಯಾರಾದರೂ ಒಂದೇ ಒಂದು ಮನೆಯಲ್ಲಿ ರಿಟೈರ್ಡ್ ಆದ ಗಂಡ-ಹೆಂಡತಿ ಇದ್ದರೆ, ಬೆಳಿಗ್ಗೆ ಗಂಡ ಏನಾದರೂ ವಾಕಿಂಗ್ ಹೋಗುವುದನ್ನು ಕಾಯುತ್ತಿರುತ್ತಾರೆ. ಗಂಡ ಲಾಲ್‌ಬಾಗ್‌ಗೆಂದು ವಾಕಿಂಗ್‌ಗೆ ಹೋದ ಎಂದರೆ, ಹೆಂಡತಿ ಅಷ್ಟು ಹೊತ್ತಿಗೆ ಇರುವುದೇ ಇಲ್ಲ. ಅವಳನ್ನು ಕೊಲೆ ಮಾಡಿ, ಅವರ ಮನೆಯಲ್ಲಿರುವ ಆಸ್ತಿಯನ್ನು ಲೂಟಿ ಮಾಡುವ ವ್ಯವಸ್ಥೆ ನಡೆಯುತ್ತಿದೆ. ಇದಕ್ಕೆ ಸರಿಯಾದ ಕ್ರಮ ಬೆಂಗಳೂರು ಪೋಲೀಸರಲ್ಲಿ

ಅದು ಏನಿದೆಯೋ ಗೊತ್ತಿಲ್ಲ. ನಾವೇನಾದರೂ ಪೋಲೀಸರನ್ನು ಕೇಳಿದರೆ ನಮಗೆ ಸರ್ಕಾರ ನೀವು ಎಂದು ನಮ್ಮನ್ನೇ ತೋರಿಸುತ್ತಾರೆ. ನಾವು ಪೋಲೀಸ್ ಕಮಿಷನರ್ ಆಫೀಸ್‌ಗೆ ಹೋಗಿ ಕೇಳಿದರೆ, ಏನ್ ಸಾರ್, ಹೀಗೆಲ್ಲಾ ಆಗುತ್ತಿದೆ ಎಂದು ಕೇಳಿದರೆ, ನೀವೇ ಕಾನೂನು ಮಾಡುವವರು, ನೀವು ಜನ ಕೊಡಿ ನಮಗೆ ಎಂದು ಹೇಳುತ್ತಾರೆ. ನಮ್ಮ ಪೋಲೀಸ್ ಸ್ಟೇಷನ್‌ನಲ್ಲಿ ಜನರು ಇಲ್ಲವೆಂದು ಹೇಳುತ್ತಾರೆ. ರಾತ್ರಿ ಗಸ್ತಿಗೆ 30 ಜನರು ಬೇಕು, ಬೆಳಿಗ್ಗೆ ಗಸ್ತಿಗೆ 40 ಜನರು ಬೇಕು, ಸ್ಪೆಷಲ್ ಡ್ಯೂಟಿಗೆ 10 ಜನರು ಹೋಗುತ್ತಾರೆ. ನಮ್ಮಲ್ಲಿ ಅಷ್ಟು ಜನ ಇಲ್ಲ. ನಮ್ಮಲ್ಲಿ ಟೋಟಲ್ ಸೇರಿಸಿದರೆ 30 ಜನರು ಇರುವುದೆಂದು ಹೇಳುತ್ತಾರೆ. ರಾತ್ರಿ ಎನ್ನದೆ, ಬೆಳಿಗ್ಗೆ ಎನ್ನದೆ ಕಾವಲು ಕಾಯುತ್ತೇವೆ ಎಂದು ಹೇಳುತ್ತಾರೆ. ಇನ್ನೂ ಜಾಸ್ತಿ ಮಾತನಾಡಿದರೆ, ಏನ್ರೀ, ಕಳ್ಳತನವಾಗುತ್ತದೆಂದು ನಮಗೆ ಕನಸು ಬೀಳುತ್ತದೆಯೇ ಎಂದು ಬೇರೆಯವರ ಹತ್ತಿರ ಕೇಳುತ್ತಾರೆ. ಕಳ್ಳತನವಾಗುತ್ತದೆಂದು ನಮಗೇನು ಕನಸು ಬಿದ್ದಿತ್ತೇ? ನಾವು ಹೇಗೆ ಕಾಪಾಡುವುದಕ್ಕೆ ಆಗುತ್ತದೆ ಎನ್ನುವ ಪರಿಸ್ಥಿತಿ ಬೆಂಗಳೂರಿನಲ್ಲಿದೆ. ಅಂದರೆ ಪೋಲೀಸರು ವಿಶೇಷವಾಗಿ ಬೆಂಗಳೂರಿನಲ್ಲಿ ಯಾವುದೇ ಕಾನೂನು ವ್ಯವಸ್ಥೆ ಇವತ್ತು ಇದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಇವತ್ತು ಮಕ್ಕಳನ್ನು ಕಿಡ್ನ್ಯಾಪ್ ಮಾಡುವುದಿದೆ. ವಿಶೇಷವಾಗಿ ಶಾಲಾ ಮಕ್ಕಳನ್ನು ಕಿಡ್ನ್ಯಾಪ್ ಮಾಡುತ್ತಾರೆ. ಹತ್ತಾರು ಘಟನೆಗಳು ಇವತ್ತು ನಡೆದು ಹೋಗಿವೆ. ಶಾಲೆಗೆ ಹೋದವರು ವಾಪಸ್ಸು ಬರುತ್ತಾರೆ ಎನ್ನುವ ನಂಬಿಕೆ ಇವತ್ತು ಬೆಂಗಳೂರಿನ ಜನತೆಗೆ ಇಲ್ಲ. ಆ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಹಿಂದೆ ಇದು ಗಾರ್ಡನ್ ಸಿಟಿ, ಬಹಳ ನೆಮ್ಮದಿಯಿಂದ ಇಲ್ಲಿ ವಾಸ ಮಾಡಬಹುದು, ಬೆಂಗಳೂರಿನಲ್ಲಿ ನನಗೆ ಒಂದು ಸೈಟ್ ಇದ್ದರೆ ಒಳ್ಳೆಯದೆಂದು ಸಂತೋಷದಿಂದ ಹೇಳುತ್ತಿದ್ದವರು, ಇವತ್ತು ಬೆಂಗಳೂರು ಬಿಡಬೇಕು, ಇಲ್ಲಿ ನೆಮ್ಮದಿ ಇಲ್ಲ, ಇಲ್ಲಿ ಕಾನೂನು ಸುವ್ಯವಸ್ಥೆ ಪಾಲನೆ ಇಲ್ಲ ಎನ್ನುವ ಪರಿಸ್ಥಿತಿ ಇವತ್ತು ಬೆಂಗಳೂರಿನಲ್ಲಿ ಆಗುತ್ತಿರುವ ಘಟನೆಗಳನ್ನು ನೋಡಿದಾಗ ಇದೊಂದು ಭೂಗತ ದೊರೆಗಳ ನೆಲೆತಾಣ ಆಗಬಹುದು ಎನ್ನುವ ಶಂಕೆ ಜನರಲ್ಲಿ ಮೂಡಿದೆ. ಆ ದೃಷ್ಟಿಯಿಂದ ವಿಶೇಷವಾಗಿ ಬೆಂಗಳೂರಿನಲ್ಲಿ ರೌಡಿ ಕಾಳಗದ ಬಗ್ಗೆ ದಿನ ನಿತ್ಯ ಪತ್ರಿಕೆಯಲ್ಲಿ ನೋಡಿ ಅಧ್ಯಕ್ಷರೆ. ದಿನ ನಿತ್ಯ ರೌಡಿಗಳು ಬಾರ್ಡರ್ ಫಿಕ್ಸ್ ಮಾಡಿದ್ದಾರೆ. ಪೋಲೀಸ್ ಸ್ಟೇಷನ್‌ಗೆ ಒಂದೊಂದು ಬಾರ್ಡರ್ ಇರುವುದನ್ನು ನಾವೆಲ್ಲಾ ಕೇಳಿದ್ದೇವೆ. ಪೋಲೀಸ್ ಸ್ಟೇಷನ್‌ಗೆ ಅವರದೇ ಒಂದು ಜ್ಯೂರಿಸ್‌ಡಿಕ್ಷನ್ ಇರುತ್ತದೆ. ಪೋಲೀಸ್‌ನವರು ಬೋರ್ಡ್ ಹಾಕಿರುತ್ತಾರೆ. ಅಘೋಷಿತವಾಗಿ ಬೆಂಗಳೂರಿನಲ್ಲಿ ಶ್ರೀರಾಂಪುರ ಆ ಏರಿಯಾಗೆ ಒಂದು ಜ್ಯೂರಿಸಡಿಕ್ಷನ್, ಚಿಕ್ಕಪೇಟೆ ಆ ಏರಿಯಾಗೆ ಒಂದು ಜ್ಯೂರಿಸಡಿಕ್ಷನ್, ಶಿವಾಜಿನಗರ ಇಲ್ಲಿರುವ ರೌಡಿಗಳು ವಸೂಲಿ ಮಾಡುವುದಕ್ಕೆ. ಇನ್ನೊಂದು ಕಡೆ ಹೋದರೆ ಅವರು ಅಲ್ಲೇ ಬೀದಿಯಲ್ಲೇ ಮಚ್ಚು ಹಿಡಿದುಕೊಂಡು ಕತ್ತರಿಸಿ ಹಾಕುವ ಘಟನೆಯನ್ನು ನಾವು ನೋಡುತ್ತಿದ್ದೇವೆ. ನಮ್ಮ ವಿಧಾನಸಸೌಧದ ಪಕ್ಕದಲ್ಲಿ, ವಿಧಾನಸೌಧದ 100 ಮೀಟರ್ ದೂರದಲ್ಲಿ ರೌಡಿ ಕೊಲೆಯಾಗಿರುವುದನ್ನು ನೋಡುತ್ತಿದ್ದೇವೆ. ಕಾನೂನು ಸುವ್ಯವಸ್ಥೆ ಹೇಗಿದೆಯೆನ್ನುವುದಕ್ಕೆ ಅದೊಂದು ಜ್ವಲಂತ ಉದಾಹರಣೆ. ಬೀದಿ ಕಾಳಗ ನಡೆಯುತ್ತಿದೆ. ವ್ಯವಸ್ಥಿತವಾಗಿ ಪೋಲೀಸರು ಯಾವ ರೀತಿಯ ಆಕ್ಷನ್ ತೆಗೆದುಕೊಳ್ಳುತ್ತಾರೆಂದು ಗೊತ್ತಾಗುವುದಿಲ್ಲ. ನಾವು ಪತ್ರಿಕೆಯಲ್ಲಿ ಓದುತ್ತೇವೆ. ಪತ್ರಿಕೆಯಲ್ಲಿ ಒಂದು ದಿನ ಪೂರ್ತಿ ಅದೇ ಚಿತ್ರ ಬರುತ್ತದೆ. ಮಾರನೇ ದಿನ ಅದರ ಬಗ್ಗೆ ಯಾರೂ ಗಮನ ಹರಿಸುವುದಿಲ್ಲವೆಂದು ಅನ್ನಿಸುತ್ತದೆ. ಅದು ಎಲ್ಲಿಯೂ, ಯಾರಿಗೂ ಕಾಣಿಸುವುದಿಲ್ಲ. ಅದು

ಏನಾಯಿತು? ಅವರನ್ನು ಹಿಡಿದರೆ, ಹಿಡಿಯಲಿಲ್ಲವೇ? ಎಂದು ಗೊತ್ತಾಗುವುದಿಲ್ಲ. ಬೆಂಗಳೂರಿನಲ್ಲಿ ಅಪರಾಧಿಗಳು ಎಷ್ಟು ಸಂಖ್ಯೆಯಲ್ಲಿ ಸಿಗುತ್ತಾರೆ? ಅಪರಾಧಿಗಳು 100 ಜನ ಸಿಕ್ಕಿದರೆ, ಅವರಲ್ಲಿ ಒಬ್ಬರಿಗೆ ಶಿಕ್ಷೆಯಾದರೆ ಹೆಚ್ಚು. ಆ ರೀತಿ ಪೊಲೀಸ್ ವ್ಯವಸ್ಥೆ ಇದೆ. ಪೊಲೀಸ್ ವ್ಯವಸ್ಥೆ ಸರಿಯಾದ ಸಾಕ್ಷ್ಯಾಧಾರಗಳನ್ನು ಕೊಡದೆ, ಇವತ್ತು ಬಹಳಷ್ಟು ಭೂಗತ ದೊರೆಗಳು ರಾಜಾರೋಷವಾಗಿ ಬೆಂಗಳೂರಿನಲ್ಲಿ ಓಡಾಡುತ್ತಿರುವುದು, ನಾನು ಸಜ್ಜನನಾಗಿದ್ದೇನೆ, ಬಹಳ ಒಳ್ಳೆಯವನಾಗಿದ್ದೇನೆ, ನಾನು ಸಮಾಜ ಸೇವಕನಾಗಿದ್ದೇನೆಂದು ಹೇಳಿಕೊಂಡು ಬ್ಯಾನರ್‌ಗಳನ್ನು ಹಾಕಿಕೊಂಡು ಓಡಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅಂದರೆ ಪೋಲೀಸರು ಯಾವ ರೀತಿ ವ್ಯವಸ್ಥೆಯನ್ನು ಕಟ್ಟುನಿಟ್ಟು ಮಾಡಿಲ್ಲವೆನ್ನುವುದಕ್ಕೆ ಇದೊಂದು ಜ್ವಲಂತ ಉದಾಹರಣೆ ಎಂದು ನಾನು ಹೇಳುತ್ತಿದ್ದೇನೆ. ವಿಶೇಷವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕಳೆದ ಸದನದಲ್ಲಿ ಹೇಳಿದರು. ಲೈವ್ ಬ್ಯಾಂಡ್ ಬಗ್ಗೆ ಮಾತನಾಡಲು ನನಗೆ ಅವಕಾಶ ಸಿಗಬೇಕಾಗಿತ್ತು. ತಮ್ಮನ್ನು ಕೇಳಿದ್ದೆ, ನನಗೆ ಅವಕಾಶ ಕೊಡಲಿಲ್ಲ. ವಿಧಾನ ಪರಿಷತ್ತಿನಲ್ಲಿ ಕ್ವೆಶ್ಚನ್ ಹವರ್‌ನಲ್ಲಿ ಪ್ರಸ್ತಾಪವಾಯಿತು. ನಾನು ಒಂದು ಪತ್ರಿಕೆಯಲ್ಲಿ ನೋಡಿದೆ. ಅದರಲ್ಲಿ, ಲೈವ್ ಬ್ಯಾಂಡ್ ಮೇಲೆ ಮುಖ್ಯಮಂತ್ರಿಗಳ ಗದಾ ಪ್ರಹಾರ ಎಂದು ಇತ್ತು. ಗದೆಯಲ್ಲಿ ಹೊಡೆದರೆ ನನ್ನ ಪ್ರಕಾರ ಯಾರೂ ಉಳಿಯುವುದಿಲ್ಲ. ಬೆಂಗಳೂರು ಸಿಟಿ, ಬೆಂಗಳೂರು ಅರ್ಬನ್‌ನಲ್ಲಿ ಸುಮಾರು 230 ಲೈವ್ ಬ್ಯಾಂಡ್‌ಗಳಿವೆ. ಇವರ ಗದೆಗೆ, ಅವರು ಹೊಡೆದ ಏಟಿಗೆ ಒಂದೇ ಒಂದು ಲೈವ್ ಬ್ಯಾಂಡ್ ಉದುರಿದ್ದರೆ, ನೀವು ಹೇಳಿದ್ದನ್ನು ಒಪ್ಪುತ್ತೇನೆ. ಅವರ ಗದಾ ಪ್ರಹಾರಕ್ಕೆ ಒಂದೇ ಒಂದು ಲೈವ್ ಬ್ಯಾಂಡ್ ಉದುರಲಿಲ್ಲ. ಮತ್ತೆ ನಾನು ಇಲ್ಲಿ ಯಾವುದೋ ಸಂದರ್ಭದಲ್ಲಿ ಸಣ್ಣ ಪ್ರಶ್ನೆಯನ್ನು ಕೇಳಿದಾಗ, ಯಾವ ಕಾರಣಕ್ಕೂ ಲೈವ್ ಬ್ಯಾಂಡ್ ಉಳಿಯುವುದಕ್ಕೆ ಬಿಡುವುದಿಲ್ಲ, ನಾವು ಅದನ್ನು ತೆಗೆದು ಹಾಕುತ್ತೇವೆ ಎಂದು ಹೇಳಿದ್ದರು. ಆದರೆ, ಅದನ್ನು ತೆಗೆದು ಹಾಕಲಿಲ್ಲ. ಇವತ್ತು ನಾವು ಕೆಲವರು ಹೇಳಿದಾಗ, ಬಹಳ ಶಿಸ್ತನ್ನು ಪಾಲನೆ ಮಾಡಿ ಸಾಯಂಕಾಲ 7 ರಿಂದ 10–30, 11 ಗಂಟೆಗೆ ಮುಗಿಸುತ್ತಿದ್ದೇವೆಂದು ಹೇಳಿದರು. ಇವತ್ತು ಬೀದಿ ಬೀದಿಯಲ್ಲಿ ನೀವು 2 ಗಂಟೆಗೆ, 3 ಗಂಟೆಗೆ ಹೋಗಿ ಲೈವ್ ಬ್ಯಾಂಡ್ ನಿರಂತರವಾಗಿ ನಡೆಯುತ್ತಿದೆ. ಯಾರು ಈ ಭೂಗತ ಜಗತ್ತಿನ ದೊರೆಗಳು ಇದ್ದಾರೆ, ಇವರೇ ಅದರ ಯಜಮಾನರು. ನೀವು ಒಂದನ್ನು ಅರ್ಥ ಮಾಡಿಕೊಳ್ಳಿ.. ಕರ್ನಾಟಕ ರಾಜ್ಯದ ಸೌಭಾಗ್ಯ. ದೌರ್ಭಾಗ್ಯ ಎನ್ನುವುದು ಬೇಡ. ಆ ತರಹದ್ದು ನಮ್ಮ ಕೆಲಸ ಬೇಡ. ನಡೆಸುವವರು ಯಾರ್‍ಯಾರು? ಲೈವ್ ಬ್ಯಾಂಡ್ ನಡೆಸುವವರು ನಮ್ಮ ರಾಜ್ಯದವರಲ್ಲ. ನೂರಕ್ಕೆ 99 ಭಾಗ ನಮ್ಮ ರಾಜ್ಯದವರಲ್ಲ. ಅಮಾಯಕ ಹೆಣ್ಣು ಮಕ್ಕಳನ್ನು ಕರೆದುಕೊಂಡು ಬರುತ್ತಾರೆ. ಆ ಹುಡುಗಿಯರು ನಮ್ಮ ರಾಜ್ಯದವರಲ್ಲ. ಬೇರೆ ರಾಜ್ಯದವರು ಇಲ್ಲಿಗೆ ಬರುವುದು, ಬೇರೆ ಹುಡುಗಿಯರು ಬರುವುದು, ಇಲ್ಲಿ ನಮ್ಮ ಜನರನ್ನು ಬೋಳಿಸುವುದು. ಲೂಟಿ ಮಾಡುವುದು. ಯಾರು ಈ ಭೂಗತ ಜಗತ್ತಿನ ದೊರೆಗಳು ಇದ್ದಾರೆ, ಇವರೆಲ್ಲರ ಅಡಗುತಾಣವಾಗಿದೆ. ಸಾಯಂಕಾಲವಾದ ಮೇಲೆ ಇವರೆಲ್ಲ ಸೇರುತ್ತಾರೆ. ಇವರೆಲ್ಲಾ ಸೇರಿ, ಇಲ್ಲಿಂದಲೇ ಎಲ್ಲಾ ಪ್ಲಾನ್ ಮಾಡುವುದು, ಸ್ಕೆಚ್ ಮಾಡುವುದು ಎಲ್ಲ. ಇದಲ್ಲದೆ, ಸ್ಕಿಲ್ ಗೇಮ್ಸ್, ಮಟ್ಕಾ ಇವೆಲ್ಲಾ ನಡೆದು, ಅಡಗು ತಾಣವಾಗಿ ಲೈವ್ ಬ್ಯಾಂಡ್ ಬೆಂಗಳೂರಿನಲ್ಲಿ ಉಳಿದಿದೆ. ಮುಖ್ಯಮಂತ್ರಿಗಳು ಎಷ್ಟು ಸಲ ಗದಾ ಪ್ರಹಾರ ಮಾಡುತ್ತಾರೋ ನನಗೆ ಗೊತ್ತಿಲ್ಲ. ಈಗ ಗದೆ ಪ್ರಹಾರ ಮಾಡಿದ್ದಾರೆ. ನೆಕ್ಸ್ಟ್ ಕತ್ತಿಯನ್ನು ಏನಾದರೂ ಪ್ರಹಾರ ಮಾಡಿದರೆ ಹೊರಟು ಹೋಗುತ್ತಾರೋ ಗೊತ್ತಿಲ್ಲ. ಇನ್ನು

ಯಾವುದರಿಂದ ಪ್ರಹಾರ ಮಾಡಿದರೆ ಹೊರಟು ಹೋಗುತ್ತಾರೋ ಗೊತ್ತಿಲ್ಲ. ಆದರೆ, ವಿಶೇಷವಾಗಿ ಬೆಂಗಳೂರಿನ ಜನರಿಗೆ ಇದೊಂದು ಶಾಪವಾಗಿದೆ. ಬೆಂಗಳೂರನ್ನು ಗಾರ್ಡನ್ ಸಿಟಿ ಎಂದು ಹೇಳುತ್ತಾ ಇದ್ದಿರಿ. ಅದು ಗಾರ್ಡನ್ ಸಿಟಿಯಾಗಿ ಉಳಿಯುತ್ತಿಲ್ಲ. ಇವತ್ತು ಲೈವ್ ಬ್ಯಾಂಡ್ ಸಿಟಿಯಾಗಿದೆ. ಇದರ ಬಗ್ಗೆ ಕಳೆದ ವಿಧಾನ ಸಭೆಯಲ್ಲಿ ಸಣ್ಣದಾಗಿ ಹೇಳಿದ್ದೆ. ಈಗ ನಾವು ಬೆಳಿಗ್ಗೆ ವಾಕಿಂಗ್ ಹೋಗುವುದು ತಪ್ಪಾಗಿದೆ. ಬೆಳಿಗ್ಗೆ ನಾನು ವಾಕಿಂಗ್ ಹೋದರೆ ನಮ್ಮ ಮನೆಯವರಿಗೆ ಡೌಟು. ಕೋರಮಂಗಲದಲ್ಲಿ ಒಂದು ಇದೆ, ಅಲ್ಲಿ ರಾತ್ರಿ ಎಲ್ಲಾ ಮುಗಿಸಿಕೊಂಡು ಬಂದು ನಂತರ ಬೆಳಿಗ್ಗೆ 5 ಗಂಟೆಗೆ ಅಲ್ಲಿ ಪ್ರಾರಂಭವಾಗುತ್ತದೆ. ಬೆಳಿಗ್ಗೆ 7 ಗಂಟೆಯವರೆವಿಗೆ ನಡೆಯುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ನನಗೆ ಒಂದು ಅರ್ಥವಾಗಲಿಲ್ಲ. ಭೂಗತ ದೊರೆ ಎಂದರೇನು? ಆ ಶಬ್ದ ಏಕೆ ಅವರಿಗೆ ಬರುತ್ತದೆ? ಅವರು ಯಾವ ರೀತಿಯ ದೊರೆಗಳು ಎಂದು ಸ್ವಲ್ಪ ಹೇಳುತ್ತೀರಾ? ಅವರಿಗೆ ಪುನಃ ಮೇಲೆ ಕೂರಿಸುವ ಪ್ರಯತ್ನ ನಾವು ಏಕೆ ಮಾಡುತ್ತಿದ್ದೇವೆ? ಅವರನ್ನು ವೈಭವೀಕರಣ ಏಕೆ ಮಾಡುತ್ತೀರಿ? ಬೇರೆ ಏನಾದರೂ ಕೆಟ್ಟ ಶಬ್ದ ಉಪಯೋಗ ಮಾಡಿ. ದಯವಿಟ್ಟು ದೊರೆಗಳು ಎಂದು ಹೇಳಬೇಡಿ, ಪತ್ರಿಕೆಯವರು ದಯಮಾಡಿ ದೊರೆಗಳು ಎಂದು ಬರೆಯಬೇಡಿ. ಅವರು ಆ ರೀತಿ ಬರೆದಿದ್ದರಿಂದಲೇ ನಾವು ಆ ಪದ ಉಪಯೋಗ ಮಾಡುತ್ತಿರುವುದು.

ಶ್ರೀ ಆರ್.ಅಶೋಕ್ : ಮಾನ್ಯ ಜಯಪ್ರಕಾಶ್‌ರವರು ದೊರೆ ಎಂದು ಹೇಳಬೇಡಿ ಎಂದು ಹೇಳುತ್ತಿದ್ದಾರೆ. ದೊರೆ ಎಂದರೆ ಏನು? ಕಾನೂನು ಅವರ ಕೈಗೆ ಇರತಕ್ಕಂಥದ್ದು, ಮತ್ತೆ ಅವನು ಆದೇಶ ಮಾಡಿದರೆ ಎಲ್ಲಾ ಅವನಂತೆ ನಡೆಯತಕ್ಕಂಥದ್ದು, ಯಥೇಚ್ಚವಾದಂಥ ಹಣ, ಇವೆಲ್ಲಾ ಇದ್ದರೆ ದೊರೆಯಲ್ಲವೆ?

ಶ್ರೀ ಜೆ.ವಿ.ಶ್ರೀರಾಮರೆಡ್ಡಿ : ದೊರೆ ಯಾವತ್ತಿಗೂ ಕಾನೂನನ್ನು ಕೈಗೆ ತೆಗೆದುಕೊಳ್ಳುತ್ತಿರಲಿಲ್ಲ, ಕಾನೂನು ಮಾಡುವುದೇ ಅವನ ಕೆಲಸ.

ಶ್ರೀ ಜೆ.ಸಿ.ಮಾಧುಸ್ವಾಮಿ : ದೊರೆ ಎಂದರೆ ದರಿದ್ರರಿಗೆ ರಕ್ಷಣೆ ಕೊಡುವವನು, the very meaning of ದೊರೆ ದರಿದ್ರರಿಗೆ ರಕ್ಷಣೆ ಕೊಡುವವನು.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ : ದೊರೆ ಎಂದರೆ ಕಾನೂನು ಕೈಗೆತ್ತಿಕೊಳ್ಳುವುದಿಲ್ಲ ಕಾನೂನು ಮಾಡಿ ದರಿದ್ರರಿಗೆ, ಬಡವರಿಗೆ, ಪ್ರಜೆಗಳಿಗೆ ರಕ್ಷಣೆ ಕೊಡುವವನು ದೊರೆ. ನೀವು ಇವರನ್ನು ಏಕೆ ದೊರೆಗಳನ್ನಾಗಿ ಮಾಡುತ್ತೀರಿ?

ಶ್ರೀ ಆರ್.ಅಶೋಕ್ : ಇವರಿಗೂ ಎಲ್ಲಾ ಅಧಿಕಾರ ಇದೆ ಅಲ್ಲವೆ? ರಾಜನಿಗೆ ಏನೇನು ಅಧಿಕಾರ ಇದೆ ಅವೆಲ್ಲವೂ ಇದ್ದು ಕಾನೂನು ಮಾಡುವ ಒಂದು ಅಧಿಕಾರಿ ಮಾತ್ರ ಇಲ್ಲ.

ಅಧ್ಯಕ್ಷರು : ಭೂಗತ ದೊರೆ ಎಂದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ, ಆಗ ತಾನೇ ಆ ಪದಗಳು ಬಳಕೆಗೆ ಬರುವುದು, ಯಾರೋ ಕಾಯಿನ್ ಮಾಡುತ್ತಾರೆ ಅದನ್ನು ಬಳಸುತ್ತಾರೆ ಆ ರೀತಿಯಾಗಿ ಇವರು ಬಳಸುತ್ತಿದ್ದಾರೆ.

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ಅದು ರೂಢಿಯಲ್ಲಿರುವ ಪದ. ಈ ಲೈವ್ ಬ್ಯಾಂಡ್ ಕ್ಲಬ್‌ಗಳು ಏನು ಇವೆ, ಇವು ಬೆಂಗಳೂರನ್ನು ಒಂದು ರೀತಿಯಲ್ಲಿ ಸರ್ವನಾಶ ಮಾಡುತ್ತಿವೆ. ಅದರಲ್ಲೂ ವಿಶೇಷವಾಗಿ ಯುವಕರಿಗೆ, ಕಾಲೇಜಿಗೆ ಹೋಗುವಂಥ ಯುವಕರಿಗೆ, ಎಂಪ್ಲಾಯೀಸ್

ಏನು ಇದ್ದಾರೆ, ಇವರಿಗೆಲ್ಲ ನಿಜಕ್ಕೂ ಇದು ಮಾರಕವಾಗಿದೆ. ಬೆಳಿಗ್ಗೆ ನಾನು ಹೇಳಿದೆ, ಇದೇನೂ ನಾನು ಯಾವುದೇ ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ನಾನು ಸ್ವತಃ ಒಬ್ಬ ಪೊಲೀಸ್ ಅಧಿಕಾರಿಯಿಂದ ಕೇಳಿ ತಿಳಿದುಕೊಂಡು ನೋಡಿರುವುದನ್ನೇ ನಾನು ಹೇಳುತ್ತಿರುವುದು. ನಾನು ಅದರ ಬಗ್ಗೆ ತನಿಖೆಯನ್ನು ಮಾಡಿಸಿದ್ದೇನೆ. ಬೆಳಿಗ್ಗೆ ಟ್ರಾಕ್‌ಸೂಟ್ ಹಾಕಿಕೊಂಡು ಹೊರಡುತ್ತಾರೆ, ಇವರು ಹೊರಟಾಗ ಮನೆಯಲ್ಲಿರುವವರು ಏನು ತಿಳಿದುಕೊಳ್ಳಬೇಕು? ನಮ್ಮ ಯಜಮಾನರು ಬಹಳ ಆರೋಗ್ಯದ ಬಗ್ಗೆ ಕಾಳಜಿ ಇದೆ, ಬ್ಲಡ್ ಪ್ಲಷರ್ ಶುಗರ್ ಎಲ್ಲಾ ಕಡಿಮೆ ಮಾಡಿಕೊಳ್ಳಲಿಕ್ಕೆ ಹೋಗುತ್ತಿದ್ದಾರೆಂದು ಬಹಳ ಆಶೆಯಿಂದ ಹೋಗಿ ಹೋಗಿ ಎಂದು ಬೆಳಿಗ್ಗೆ ಎಬ್ಬಿಸಿ ಎಕ್ಸ್‌ಕ್ರೇಜ್ ಮಾಡಿ ಕಳುಹಿಸಿಕೊಡುತ್ತಾರೆ. ಬೆಳಿಗ್ಗೆ ಹೋದವರು ಪುನಃ 7 ಗಂಟೆಗೆ ವಾಪಸ್ ಬರುತ್ತಾರೆ, ಪ್ರತಿದಿನ ತಪ್ಪದೇ ಇವರು ಹೋಗುವುದಕ್ಕೆ ಶುರು ಮಾಡಿದರು, ಹೀಗಿರುವಾಗ ಹೆಂಡತಿಗೆ ಡೌಟ್ ಬರುವುದಕ್ಕೆ ಶುರುವಾಯಿತು. ನಾನು ಮೊದಲು ವಾರಕ್ಕೆ ನಾಲ್ಕು ಸಲ ಎಬ್ಬಿಸಿದರೂ ಒಂದು ಸಲ ವಾಕಿಂಗ್ ಹೋಗುತ್ತಿರಲಿಲ್ಲ ಈಗೇನು ಪ್ರತಿದಿನ ಹೋಗುತ್ತಾರೆಂದು ಅವರು ಇವರನ್ನು ಫಾಲೋ ಮಾಡಿದಾಗ ಒಂದು ಸಲ ಈ ಮನುಷ್ಯ ಸಿಕ್ಕಿಹಾಕಿಕೊಳ್ಳುತ್ತಾನೆ. ಈ ವಿಷಯವನ್ನು ಒಬ್ಬ ಪೋಲಿಸ್ ಅಧಿಕಾರಿಯೇ ಹೇಳಿದರು. ಯಾವಾಗ ಪ್ರತಿದಿನ ಇವನು ಟ್ರ್ಯಾಕ್‌ಸೂಟ್ ಹಾಕಿಕೊಂಡು ಸೆಂಟ್ ಹಾಕಿಕೊಂಡು ಹೋಗುವುದಕ್ಕೆ ಶುರು ಮಾಡಿದ ಆಗಲೇ ಹೆಂಡತಿಗೆ ಡೌಟ್ ಬರುವುದಕ್ಕೆ ಶುರುವಾಯಿತು. ಬೆಳಿಗ್ಗೆ 5 ರಿಂದ 7 ಗಂಟೆಯವರೆಗೆ ನಡೆಯತಕ್ಕಂಥ ಈ ರೀತಿ ಡಿಸ್ಕೋ ಕ್ಲಬ್‌ಗಳನ್ನು ಬೆಂಗಳೂರಿನಲ್ಲಿ ನಾವು ಯಥೇಚ್ಛವಾಗಿ ಕಾಣಿತ್ತಿದ್ದೇವೆ, ಕೋರಮಂಗಲ, ಎಂಜಿ ರೋಡ್, ಇಲ್ಲೆಲ್ಲಾ ಬೆಳಿಗ್ಗೆ ಕೂಡ ನಡೆಯುತ್ತಿದೆ. ಅಂದರೆ ಇಲ್ಲಿ ಕಾನೂನು ಎಲ್ಲಿದೆ? ಕಾನೂನಿನ ಪರಿಮಿತಿ ಏನು ಹೇಳುತ್ತಿದೆ? ಈ ಕ್ಲಬ್‌ಗಳಲ್ಲಿ ಎಲ್ಲಿ ಹೆಣ್ಣು ಇರುತ್ತಾಳೆ ಅಲ್ಲಿ ಈ ಮದ್ಯವನ್ನು ಸಪ್ಲೈ ಮಾಡಬಾರದು ಎಂದು ಹೇಳುತ್ತದೆ. ಆದರೆ ಅಲ್ಲಿ ಮದ್ಯ, ಹೆಣ್ಣು ಹಾಗೂ ಅಶ್ಲೀಲವಾದ ನೃತ್ಯ ಕೂಡ ಇರುತ್ತದೆ. ಇವೆಲ್ಲವೂ ಇದ್ದಾಗಲೂ ಕಾನೂನು ಬಹಳ ಸುವ್ಯವಸ್ಥೆಯಿಂದ ಇದೆ ಎಂದು ಹೇಳಿದರೆ ಅದು ಎಷ್ಟರಮಟ್ಟಿಗೆ ಸರಿ? ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಏನು ಹೇಳುತ್ತೀರಿ? ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಟ್ಟುನಿಟ್ಟಾಗಿ ಮಾತನಾಡಿದ್ದಾರೆಂದರೆ ಅದನ್ನು ಕಾನೂನು ರೀತಿ ಟ್ರೀಟ್ ಮಾಡಬೇಕು, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಅವು ಯಾವುದು ಕಾನೂನು ಆಗಿಲ್ಲ, ಅದಕ್ಕೆ ಅಧಿಕಾರಿಗಳು ಕಿಮ್ಮತ್ತು ಕೊಡುವುದಿಲ್ಲ. ಇವತ್ತು ಲೈವ್‌ಬ್ಯಾಂಡ್ ಬಗ್ಗೆ ಅವರು ಪದೇ ಪದೇ ಹೇಳಿದ್ದಾರೆ. ಇಲ್ಲಿ ಅಲ್ಲ ಮೇಲ್ಮನೆಯಲ್ಲಿ, ಅಸೆಂಬ್ಲಿಯಲ್ಲಿ, ಅದನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಮಟ್ಟ ಹಾಕುತ್ತೇನೆ, ಗದಾ ಪ್ರಹಾರ ಮಾಡುತ್ತೇನೆಂದು ಹೇಳಿದ್ದಾರೆ. ಕಳೆದ ಒಂದು ತಿಂಗಳಿನಿಂದ ನೋಡುತ್ತಿದ್ದೇನೆ, ಯಾವುದೇ ರೀತಿಯಲ್ಲೂ ಅದರ ಬಗ್ಗೆ ಒಂದು ಚೂರೂನೂ ಅದರ ಬಗ್ಗೆ ಗಂಭೀರವಾಗಿ ಪರಿಗಣಿಸದೇ ಒಂದೇ ಒಂದು ಲೈವ್ ಬ್ಯಾಂಡ್ ಮುಚ್ಚಿಸಲಿಕ್ಕೆ ಒಂದೇ ಒಂದು ಪ್ರಯತ್ನ ಕೂಡ ಈ ಸರ್ಕಾರದ ಕೈಯಿಂದ ಆಗಲ್ಲಿಲ್ಲ ಎಂದರೆ ಈ ಸರ್ಕಾರ ಕಾನೂನನ್ನು ಎಷ್ಟರ ಮಟ್ಟಿಗೆ ಪರಿಪಾಲನೆ ಮಾಡುತ್ತಿದೆ ಎನ್ನುವುದು ಸಾರ್ವಜನಿಕರಿಗೆ ಇವತ್ತು ತಿಳಿಯುತ್ತಿದೆ. ಆ ದೃಷ್ಟಿಯಿಂದ ಇವತ್ತು ಬೆಂಗಳೂರಿನಲ್ಲಿ, ವಿಶೇಷವಾಗಿ ಬೆಂಗಳೂರಿನ ಜನ ಇದರ ಬಗ್ಗೆ ಬೇಸರ ವ್ಯಕ್ತಪಡಿಸತಕ್ಕಂಥ ಒಂದು ವಿಚಾರ ಎಂದರೆ, ಕಾನೂನು ಸುವ್ಯವಸ್ಥೆ ಇವತ್ತು ಸರ್ಕಾರದ ಕೈಯಲ್ಲಿ ಇಲ್ಲ, ಪೊಲೀಸ್ ಇಲಾಖೆಯಲ್ಲಿ ಇಲ್ಲ, ಪೊಲೀಸ್ ಇಲಾಖೆಯವರು ಬೇರೆಯವರ ಮೇಲೆ

ಹಾಕುವುದು, ಅವರನ್ನು ಕೇಳಿದರೆ ನಮ್ಮ ಹತ್ತಿರ ಸ್ಟ್ಯಾಫ್ ಇಲ್ಲ, ನಮ್ಮ ಹತ್ತಿರ ಅಧಿಕಾರ ವರ್ಗ ಇಲ್ಲ, ಈ ರೀತಿಯಾಗಿ ಒಂದು ರೀತಿ ಅಪಪ್ರಚಾರ, ನಮ್ಮದೇನೂ ಇಲ್ಲ, ಎಲ್ಲಾ ಸರ್ಕಾರದ್ದೇ, ಸರ್ಕಾರವೇ ಸರಿ ಇಲ್ಲ ಎನ್ನುವ ರೀತಿ ಅಧಿಕಾರಿಗಳು ಇವತ್ತು ಜನಗಳ ಮುಂದೆ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಇಲ್ಲಿ ಈಗ ಬಹಳ ಉತ್ತಮವಾಗಿ ಚರ್ಚೆ ನಡೆಯುತ್ತಿದೆ. ಇರತಕ್ಕಂಥ 21 ಜನರಲ್ಲಿ ಬಹಳ ಜನ ಜನತಾ ದಳ (ಸಂಯುಕ್ತ) ದವರೇ ಸಚಿವರೇ ಇದ್ದೀರಿ, ಅಲ್ಲ ಅಲ್ಲ ಜಾತ್ಯಾತೀತ ಜನತಾ ದಳದವರೇ ಜಾಸ್ತಿ ಜನ ಇದ್ದಾರೆ, ಕಾಂಗ್ರೆಸ್‌ನವರು ಬಹಳ ಕಡಿಮೆ ಇದ್ದಾರೆ, ಏನು ಪರಿಸ್ಥಿತಿ? ಒಳಗೆ ಏನಾದರೂ ಪಿತೂರಿ ನಡೆಯುತ್ತಿದೆಯೇ ಅಥವಾ ಏನು ನಡೆಯುತ್ತಿದೆ ಎಂಬುದೇ ಅರ್ಥವಾಗುತ್ತಿಲ್ಲ ಏಕೆಂದರೆ ಅವರ್‍ಯಾರು ಬರುತ್ತಲೇ ಇಲ್ಲ. ಇಲ್ಲಿ ಮಾನ್ಯ ಸಿದ್ದರಾಮಯ್ಯನವರು, ಸಿಂಧ್ಯಾರವರು, ಮಾನ್ಯ ಆಹಾರ ಸಚಿವರು ಹಾಗೂ ಮಾನ್ಯ ಆರೋಗ್ಯ ಸಚಿವರು ಇಲ್ಲಿಯೇ ಕುಳಿತಿದ್ದಾರೆ. ಇದನ್ನು ನೋಡಿದರೆ ಏನು ಅನ್ನಿಸುತ್ತದೆ? ಬೆಳಿಗ್ಗೆ ಅಧಿಕಾರಿಗಳು ಇಲ್ಲ ಎಂದು ನಾವು ಬಹಳ ತೀವ್ರವಾಗಿ, ತೀಕ್ಷ್ಣವಾಗಿ ಸಭಾತ್ಯಾಗ ಮಾಡಿದೆವು. ಆದರೆ ಇಲ್ಲಿರುವ ಪರಿಸ್ಥಿತಿ ಏನು? ಏನು ನಡೆಯುತ್ತದೆ? ಸರ್ಕಾರ ಹೊಂದಾಣಿಕೆ ಇದಿಯೋ ಇಲ್ಲವೆ, ಏನಾಗಿದೆ, ಅಥವಾ ನಿಮ್ಮ ನಿಮ್ಮ ಪಕ್ಷದಲ್ಲಿ ಏನಾದರೂ ಗೊಂದಲ ಇದೆಯೇ? ಸರ್ಕಾರದ ಪರಿಸ್ಥಿತಿ ಏನಾಗಿದೆ, ಈ ಬಗ್ಗೆ ನಾವು ಎಲ್ಲಾ ಸ್ವಲ್ಪ ತಿಳಿದುಕೊಳ್ಳಬೇಕಾಗಿದೆ. ಇದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ತಾವು ಆದರೂ ಉತ್ತರ ಕೊಡಬಹುದು. ಒಂದು ರೀತಿ ನೀರಸವಾಗಿದೆ, ಸಭೆಯಲ್ಲಿ ನಿಮ್ಮವರು ಯಾರೂ ಬರುತ್ತಿಲ್ಲ. ಕೆಲವೊಮ್ಮೆ ನಾವು ಇಲ್ಲಿ ಎದ್ದು ಯಾರಾದರೂ ಹೆಸರು ಎತ್ತಿದ ತಕ್ಷಣ ಕೊನೆಯ ಮೂಲೆಯಲ್ಲಿ ಕುಳಿತಿರತಕ್ಕಂಥವರು ಬಹಳ ಮೇಲೆ ಎದ್ದೇಳುತ್ತಿದ್ದರು ಆದರೆ ಈಗ ಅವರ್‍ಯಾರು ಪತ್ತೆ ಇಲ್ಲ, ಎಲ್ಲಿದ್ದಾರೆ, ಎಲ್ಲಿಗೆ ಹೋಗಿದ್ದಾರೆ, ಯಾವ ಕಡೆಗೆ ಹೋದರು? ಇದೇನೂ ನನಗೆ ಅರ್ಥವಾಗುತ್ತಿಲ್ಲ. ಕಾಂಗ್ರೆಸ್‌ನಲ್ಲಿ ಏನಾದರೂ ಗುಂಪು ಆಗಿದೆಯೇ ಅಥವಾ ಜಾತ್ಯಾತೀತ ಜನತಾ ದಳದಲ್ಲಿ ಏನಾದರೂ ಬಿರುಕು ಆಗಿದೆಯೇ? ಇದೇನೂ ನನಗೆ ಅರ್ಥವಾಗುತ್ತಿಲ್ಲ. ನಮ್ಮ ಕಡೆ ನೋಡಿ ನಾವು ಎಷ್ಟು ಜನ ಇದ್ದೇವೆ, ಈಗ ನೀವು ಏನಾದರೂ ಒಂದು ಮಸೂದೆಯನ್ನು ಮತಕ್ಕೆ ಹಾಕಿದರೆ ಖಂಡಿತವಾಗಿ ಅದು ಬಿದ್ದು ಹೋಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನನಗೆ ಅರ್ಥವಾಗುತ್ತಿಲ್ಲ. ಅದಕ್ಕೆ ಮಾನ್ಯ ಸಿದ್ದರಾಮಯ್ಯನವರು, ಸಿಂಧ್ಯಾರವರು ಹಾಗೂ ಪ್ರಕಾಶ್‌ರವರು ಕುಳಿತುಕೊಂಡು ಬಹಳ ಗಂಭೀರವಾಗಿ ಅದರ ಬಗ್ಗೆ ಚಿಂತನೆ ಮಾಡುತ್ತಿದ್ದಾರೆ.. ಅದನ್ನು ಇವರು ನೋಡಲಿಲ್ಲ, ಬಹುಶಃ ಇವರು ಅದನ್ನು ನೋಡಿದರೆ ಆ ರೀತಿ ಹೇಳುತಿರಲಿಲ್ಲ, ಬಹಳ ಗಂಭೀರವಾಗಿ .. ಒಂದು ನಿಮಿಷ ಮಾನ್ಯ ಸಿಂಧ್ಯಾರವರೇ ನಾನು ಮಾತನಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಎಲ್ಲಾ ಕಟ್ಟುಕಥೆ ...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾವು ಗಮನಿಸುತ್ತಿದ್ದೇವೆ. ಮಾನ್ಯ ಸಿಂಧ್ಯಾರವರು ಮಾನ್ಯ ಪ್ರಕಾಶ್‌ರವರು, ಮಾನ್ಯ ಸಿದ್ದರಾಮಯ್ಯನವರು, ಬಹಳ ಗಂಭೀರವಾಗಿ ಚರ್ಚೆ ಮಾಡುತ್ತಿದ್ದರು, ನಾನು ಏನು ಗಂಭೀರವಾಗಿ ಚರ್ಚೆ ನಡೆದಿದೆ ಎಂದು ಕೇಳಿದೆ, ಅದಕ್ಕೋಸ್ಕರ ನಮಗೆ ಅನುಮಾನ ಬರುತ್ತಿರುವುದು. ಒಂದು ಕಡೆಯವರು ಮಾತ್ರ ಗಂಭಿರವಾಗಿ ಚಿಂತನೆ ಮಾಢುತ್ತಿದ್ದಾರೆ. ಇನ್ನೊಂದು ಕಡೆಯವರು ಇಲ್ಲಿ ಇಲ್ಲ, ಏನೋ ಬಹಳ ಗುಮಾನಿ ಬರತಕ್ಕಂಥ ಅಂಶ ಇದರಲ್ಲಿ ಇದೆ. ಅದುದರಿಂದ, ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಬೇಕಾಗುತ್ತದೆ.. ನಮ್ಮ ಸಲಹೆ ಕೇಳುವುದಕ್ಕೆ

ಅಲ್ಲಿಗೆ ಹೋದರೆ ಯಾರು ಸಿಗುತ್ತಾರೆ? ನಾವು ಇಲ್ಲಿ ಇದ್ದೇವೆ. ನೀವು ಇಲ್ಲಿ ಸಮಾಲೋಚನೆ ಮಾಡುತ್ತಿದ್ದೀರಿ, ಅದುದರಿಂದ ನೀವು ಏನು ಸಮಾಲೋಚನೆ ಮಾಡುತ್ತಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ನಿಮ್ಮ ಸಮಸ್ಯೆ ಏನು ಎಂಬುದು ನಮಗೆ ಅರ್ಥವಾಗಲಿಲ್ಲ. ನಿಮ್ಮ ಸಮಸ್ಯೆ ಏನು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಸಮಸ್ಯೆ ಏನೆಂದರೆ ನೀವು ಮಾತ್ರ ಇದ್ದೀರಲ್ಲಾ ಅದೇ ಸಮಸ್ಯೆ.

ಶ್ರೀ ಸಿದ್ದರಾಮಯ್ಯ : ನಮಗೆ ನಿಮ್ಮ ಸಮಸ್ಯೆ ಬಗೆಹರಿಸಬೇಕಾದರೆ, ನಿಮ್ಮ ಸಮಸ್ಯೆ ಏನು ಎಂಬುದು ನಮಗೆ ಗೊತ್ತಾಗಬೇಕು ಅಲ್ಲವೆ? what is your problem?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಮ್ಮ ಸಮಸ್ಯೆ ಇದೇನೆ. ಇದೇ ನಮ್ಮ ಸಮಸ್ಯೆ.

ಶ್ರೀ ವಾಟಾಳ್ ನಾಗರಾಜ್ : ಸಮಸ್ಯೆ ಇದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಮ್ಮ ಸಮಸ್ಯೆ ಏನೆಂದರೆ, ನೀವು ಮಾತ್ರ ಇಲ್ಲಿ ಜೆಡಿ (ಎಸ್) ನವರು ಕುಳಿತಿದ್ದೀರಿ, ಕಾಂಗ್ರೆಸ್‌ನವರು ಇಲ್ಲಿ ಯಾರೂ ಇಲ್ಲ, ಅದರ ಜೊತೆಗೆ ನೀವು ಮೂರು ಜನ ಕುಳಿತುಕೊಂಡು ಏನೋ ಗಂಭೀರವಾಗಿ ಚರ್ಚೆ ಮಾಡುತ್ತಿದ್ದೀರಿ ಅದಕ್ಕೇ ನಾನು ಕೇಳಿದ್ದು.

ಶ್ರೀ ಸಿದ್ದರಾಮಯ್ಯ : ಈಗ ನೀವು ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ಮಾನ್ಯ ಮಾಧುಸ್ವಾಮಿಯವರು ಮೂರುಜನ ಮೂರೂ ಪಕ್ಷಕ್ಕೆ ಸೇರಿದವರು, ನೀವು ಬೆಳಿಗ್ಗೆಯಿಂದ ಸಂಜೆಯವರೆವಿಗೂ ಒಂದೇ ಸಮನೆ ಮಾತನಾಡುತ್ತೀರಿ, ಹೀಗಿರುವಾಗ ನಾವು ಏನಾದರೂ ನಿಮ್ಮ ಬಗ್ಗೆ ಮಾತನಾಡಿದ್ದೇವೆಯೇ? ನಾವು ಮಾತನಾಡುವಾಗ ನೀವು ಏಕೆ ಮಾತನಾಡುತ್ತೀರಿ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾವು ಮಾತನಾಡಲಿಕ್ಕೇ ಈ ಕಡೆ ಕುಳಿತಿರುವುದು.

ಶ್ರೀ ಸಿದ್ದರಾಮಯ್ಯ : ನಾವು ಏನಾದರೂ ಇವರ ಬಗ್ಗೆ ಕಲ್ಪನೆಗಳನ್ನು ಮಾಡಿ ಕೊಂಡಿದ್ದೇವೆಯೇ? ಯಾವ ಕಲ್ಪನೆಯನ್ನು ಮಾಡಿಕೊಂಡಿಲ್ಲ, ಯಾವ ಊಹಾಪೋಹನೂ ಮಾಡಿಕೊಂಡಿಲ್ಲ. ನಿಮಗ್ಯಾಕೆ ಈ ತರಹ ಕೆಟ್ಟ ಮನಸ್ಸು ?

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವೂ ಕೂಡ ಎರಡು ಪಾರ್ಟಿಯವರು ಮಾತನಾಡುತ್ತಿದ್ದರೆ ನಾವು ಕೇಳುತ್ತಿರಲಿಲ್ಲ. ಆ ಪಾರ್ಟಿಯವರನ್ನೂ ನೀವು ಕೂರಿಸಿಕೊಳ್ಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾವು ಮೂರು ಪಾರ್ಟಿಯವರು ಒಂದು ಕಡೆ ಇದ್ದೇವೆ, ನೀವು ಎರಡು ಪಾರ್ಟಿಯವರು ಒಂದು ಕಡೆ ಇಲ್ಲವಲ್ಲಾ?

ಶ್ರೀ ಸಿದ್ದರಾಮಯ್ಯ : ಹುನ್ನಾರಗಳನ್ನು ಮಾಡುವವರಿಗೆ ಯಾವಾಗಲೂ ಈ ಹುನ್ನಾರಗಳ ಬಗ್ಗೆ ಯೋಚನೆಗಳು ಇರುತ್ತವೆ. ನಮಗೆ ಹುನ್ನಾರ ಮಾಡುವುದು ಗೊತ್ತಿಲ್ಲ, ಕಿತಾಪತಿ ಮಾಡುವುದು ಗೊತ್ತಿಲ್ಲ, ಆದರೂ ನಮಗೆ ಈ ತರಹದ್ದು ಹೊಳೆಯದೇ ಇಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾವು ಮೂರು ಪಕ್ಷದವರೂ ಬೆಳಿಗ್ಗೆಯಿಂದ ಸಂಜೆಯವರೆಗೆ ಒಟ್ಟಿಗೆ ಇರುತ್ತೇವೆ, ನೀವು ಎರಡು ಪಕ್ಷದವರಾದರೂ ಒಟ್ಟಿಗೆ ಇಲ್ಲವಲ್ಲಾ, ನೀವು ಮೂರೇ ಜನ ಆಗಲೇ ಮಾತನಾಡಿಕೊಳ್ಳುತ್ತಿದ್ದೀರಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಈ ಹುನ್ನಾರದಿಂದ ನಮಗೇನೂ ಪ್ರಯೋಜನವಿಲ್ಲ. ಪಿತೂರಿ ಮಾಡುವುದಕ್ಕೆ ನಮಗೆ ಶಕ್ತಿ ಇಲ್ಲ.

ಶ್ರೀ ಸಿದ್ದರಾಮಯ್ಯ : ತಾವು ಆ ರೀತಿ ಏಕೆ ಊಹೆ ಮಾಡುತ್ತೀರಿ?

ಶ್ರೀ ಜೆ.ಸಿ.ಮಾಧುಸ್ವಾಮಿ : ಏಕೆಂದರೆ ನೀವು ಎಲ್ಲಾ ಒಂದೇ ಪಾರ್ಟಿಯವರು ಇದ್ದೀರಲ್ಲಾ ಅದಕ್ಕೆ ನಾವು ಕೇಳಿದ್ದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾವೇನೂ ಹುನ್ನಾರ ಮಾಡಿ ಆ ಕಡೆ ಬರುವ ಹಾಗೆ ಇಲ್ಲ, ಸರ್ಕಾರ ರಚನೆ ಮಾಡುವ ಹಾಗೆ ಇಲ್ಲ. ನಮಗೇನು? ನಾವು ಏಕೆ ಹುನ್ನಾರ ಮಾಡುತ್ತೇವೆ? ಹುನ್ನಾರ ಮಾಡುವುದರಿಂದ ನಮಗೆ ಏನಾದರೂ ಆಗುವ ಹಾಗೆ ಇದೆಯೇ?

ಶ್ರೀ ವಾಟಾಳ್ ನಾಗರಾಜ್ : ರಾಜ್ಯ ಸರ್ಕಾರದ ಭದ್ರತೆಯ ಬಗ್ಗೆ ಚಿಂತನೆ ಹೊರತು ಬೇರೆ ಮಾತೇ ಇಲ್ಲ. ನಮಗೆ ಸಮ್ಮಿಶ್ರ ಸರಕಾರ ಐದು ವರ್ಷ ಹೇಗೆ? ಏನು? ಇದರ ಬಗ್ಗೆ ನಮ್ಮ ಚಿಂತನೆ.

ಶ್ರೀ ಸಿದ್ದರಾಮಯ್ಯ : ಸಮ್ಮಿಶ್ರ ಸರಕಾರ ಸುಭದ್ರವಾಗಿರುವುದರಿಂದಲೇ ನಾವು ಇಂಥ ಒಂದು ಒಳ್ಳೆಯ ಆಯವ್ಯಯವನ್ನು ಮಂಡಿಸಿರುವುದು, ನಿಮಗೆ ಗೊತ್ತಾಯಿತಾ?

ಶ್ರೀ ವಾಟಾಳ್ ನಾಗರಾಜ್: ಅದರ ಬಗ್ಗೆ ಇನ್ನೂ ಚರ್ಚೆಯಾಗಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಚರ್ಚೆ ಮಾಡಿದ ಮೇಲೆ ನಾವು ಉತ್ತರ ಕೊಡುವುದಕ್ಕೇ ಅಲ್ಲವೇ ಇಲ್ಲಿ ಕುಳಿತಿರುವುದು. ಉತ್ತರ ಕೊಡುವುದಕ್ಕೆ ನಾವು ಎಲ್ಲಾ ತಯಾರಾಗಿ ಕುಳಿತಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಇನ್ನೂ ಬಜೆಟ್ ಚರ್ಚೆಯಾಗಲಿಲ್ಲ. ನೀವು ಮೂರು ಜನ ಕುಳಿತು ಏನೋ ಮಾತನಾಡುತ್ತಿದ್ದೀರಿ. ನಮಗೆ ಅನುಮಾನ ಬಂದಿದೆ. ಅದರ ಜೊತೆಗೆ ಅವರ್‍ಯಾರೂ ಇಲ್ಲಿ ಇಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಏನು ಮಾತನಾಡಿದರೂ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ;

ಅಧ್ಯಕ್ಷರು : ಈಗ ಅಡ್ಡಮಾತು ಬೇಡ, ಮಾನ್ಯ ಅಶೋಕ್‌ರವರೇ, ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಅವರು ಯಾವಾಗಲೂ ಇಂಥದ್ದೇ ಯೋಚನೆ ಮಾಡುವುದು ನೀವು ಏಕೆ ಅವರಿಗೆ ಅವಕಾಶ ಕೊಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ನಾವು ಅತ್ಯಂತ ಪ್ರಾಮುಖ್ಯತೆಯಿಂದ ಕೇಳುತ್ತಿದ್ದೇವೆ. ಇಲ್ಲಿ ಕೇವಲ ಜಾತ್ಯಾತೀತ ಜನತಾದಳದ ಸದಸ್ಯರು ಮಾತ್ರ ಇದ್ದಾರೆ. ಆದರೆ, ಕಾಂಗ್ರೆಸ್ ಸದಸ್ಯರಾರೂ ಇಲ್ಲ. ಬೇಕಾದರೆ ಮಾನ್ಯ ಉಪ ಮುಖ್ಯಮಂತ್ರಿಯವರು ನೋಡಬಹುದು.

ಅಧ್ಯಕ್ಷರು : ಇನ್ನು ಬಹಳಷ್ಟು ಜನ ಮಾತನಾಡುವವರು ಇದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಮತ್ತೆ ಇದಕ್ಕೆ ಸರ್ಕಾರದ ಕಡೆಯಿಂದ ಉತ್ತರ ಕೊಡಿಸಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಬಹಳಷ್ಟು ಜನ ಇಲ್ಲದಿದ್ದರೆ ನಮದೇನೂ ತಕರಾರು ಇಲ್ಲ. ಇಲ್ಲಿ ಮಾನ್ಯ ಎಂ.ಪಿ.ಪ್ರಕಾಶ್‌ರವರು ಮತ್ತು ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಇದ್ದಾರೆ. ಆದ್ದರಿಂದ ನಿಮ್ಮ ನಿಲುವೇನು ಎಂಬುದನ್ನು ತಾವು ಸ್ಪಷ್ಟಪಡಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ನಾವು ಮೂರು ಜನ ಇಲ್ಲಿ ಕುಳಿತುಕೊಂಡು ಏನು ಮಾತನಾಡಿದ್ದೇವೆಂದರೆ, ಮಾನ್ಯ ಅಶೋಕ್‌ನವರು ಗಂಭೀರವಾಗಿ ಮಾತನಾಡುತ್ತಾ ಬೆಂಗಳೂರಿನಲ್ಲಿರುವ ಲೈವ್‌ಬ್ಯಾಂಡ್ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಗದಾಪ್ರಹಾರ ಮಾಡಿದ್ದೇವೆಂದು ಹೇಳಿದರು. ಆದರೆ

ಇದು ಇನ್ನು ನಿಂತಿಲ್ಲವೆಂಬ ಮಾತನ್ನು ಅವರು ಹೇಳಿದರು. ನಾನು ಹಿಂದೆ ಗೃಹ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ ಮತ್ತೆ ಅವರೂ ಕೂಡ ಉಪಮುಖ್ಯಮಂತ್ರಿಯಾಗಿದ್ದವರು ಮತ್ತು ಎಂ.ಪಿ.ಪ್ರಕಾಶ್ ರವರೂ ಕೂಡ ಸಚಿವರಾಗಿದ್ದರು. ಇದನ್ನು ನಿಲ್ಲಿಸುವುದಕ್ಕೆ ಏನು ಮಾಡಬೇಕು ಮತ್ತು ಇದು ಹೇಗೆ ಇರುತ್ತದೆ ಎಂಬುದರ ಬಗ್ಗೆ ನಾವು ಮೂರು ಜನ ಇಲ್ಲಿ ಕುಳಿತುಕೊಂಡು ಚರ್ಚೆ ಮಾಡುತ್ತಿದ್ದೆವು. ಈ ವಿಷಯವನ್ನು ಬಹಳ ಪ್ರಾಮಾಣಿಕವಾಗಿ ನಾನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಒಳಜಗಳದ ಬಗ್ಗೆ ತಾವು ಮಾತನಾಡುತ್ತಿದ್ದೀರಿ ಎಂಬುದು ನಮ್ಮ ದೃಷ್ಟಿಯಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಮೊದಲನೆಯದಾಗಿ ಒಳಜಗಳ ಇಲ್ಲ. ಇಡೀ ಪಕ್ಷದವರೆಲ್ಲರೂ ಒಟ್ಟಿಗೆ ಇದ್ದೇವೆ. ಮತ್ತೆ ನಮ್ಮ ಜೊತೆ ಕಾಂಗ್ರೆಸ್‌ನ ಮೈತ್ರಿ ಕೂಡ ಚೆನ್ನಾಗಿದೆ. ಲೈವ್‌ಬ್ಯಾಂಡ್ ಹೇಗೆ ನಿಲ್ಲಿಸುವುದೆಂಬುದರ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಅವರಲ್ಲಿ ಒಳಜಗಳ ಇಲ್ಲವೆಂಬುದು ನಮಗೆ ಗ್ಯಾರಂಟಿ ಗೊತ್ತಿದೆ. ಆದರೆ, ಇವರು ಹೊರಗಡೆನೇ ಜಗಳ ಮಾಡುತ್ತಾರೆ. ಆದ್ದರಿಂದ ಒಳಗಡೆ ಜಗಳ ಮಾಡತಕ್ಕಂಥ ಪ್ರಶ್ನೆ ಬರುವುದಿಲ್ಲ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ಇನ್ನು ಬಹಳಷ್ಟು ಜನ ಮಾತನಾಡುವವರು ಇದ್ದಾರೆ. ಆದ್ದರಿಂದ ತಾವು ಕುಳಿತುಕೊಳ್ಳಿ. ಮಾನ್ಯ ಅಶೋಕ್‌ನವರೆ ತಮ್ಮ ಮಾತನ್ನು ಮುಂದುವರಿಸಿ.

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ಈ ಗದಾಪ್ರಹಾರ ವಿಷಯವಲ್ಲದೆ ಕಳೆದ ಬಾರಿ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಒದು ಪ್ರಶ್ನೆ ಕೇಳಿದ್ದೆ. ಅದೇನೆಂದರೆ, ಪೋಲೀಸ್ ಇಲಾಖೆಯ ಬಹಳ ಉನ್ನತ ಅಧಿಕಾರಿಗಳು ಲೈವ್‌ಬ್ಯಾಂಡ್‌ಗೆ ಹೋಗುವುದಲ್ಲದೆ ಅಲ್ಲಿರತಕ್ಕಂಥವರಿಗೆ ಅವರೇ ಕಿರುಕುಳ ಕೊಡುತ್ತಿರುವುದಲ್ಲದೆ ಬಹಳ ಅಶ್ಲೀಲವಾಗಿ ನಡೆದು ಕೊಳ್ಳು ತ್ತಿದ್ದಾರೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಹೇಳಿದೆ. ಇದನ್ನು ಸಿ.ಓ.ಡಿ.ತನಿಖೆಗೆ ವಹಿಸಿ ದ್ದೇನೆಂದು ತಕ್ಷಣ ಹೇಳಿದರು. ಬೆಳಿಗ್ಗೆ ಎದ್ದು ಪತ್ರಿಕೆ ನೋಡಿದರೆ ಲೈವ್‌ಬ್ಯಾಂಡ್ ಬಗ್ಗೆ ಸಿ.ಓ.ಡಿ. ತನಿಖೆಗೆ ಆದೇಶ ಮಾಡಲಾಗಿದೆ ಎಂದು ಪತ್ರಿಕೆಯಲ್ಲಿ ಬಂದಿತ್ತು. ಲೈವ್‌ಬ್ಯಾಂಡ್‌ಗೆ ಉನ್ನತ ಪೋಲೀಸ್ ಅಧಿಕಾರಿಗಳು ಹೋಗುತ್ತಿದ್ದಾರೆಂದು ಹೇಳಿದ್ದಕ್ಕೆ ಇದನ್ನು ಸಿ.ಓ.ಡಿ ತನಿಖೆಗೆ ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಯಾವ ಲೈವ್‌ಬ್ಯಾಂಡ್ ಎಂಬುದನ್ನು ಕಳೆದ ಸಾರಿಯೆ ಹೇಳಿದ್ದೇನೆ. ಎಂ.ಜಿ. ರೋಡ್‌ನಲ್ಲಿರತಕ್ಕಂಥದ್ದು ಇದರ ಹೆಸರು ಕಳೆದ ಸಾರಿ ಹೇಳಿದ್ದೇನೆ. ಇದರ ಡೀಟೇಲ್ಸ್ ನನ್ನ ಹತ್ತಿರ ಇದೆ. ಬೇಕಾದರೆ ತಮಗೆ ಕೊಡುತ್ತೇನೆ. ಆರ್.ಅಶೋಕ್‌ರವರು ಲೈವ್‌ಬ್ಯಾಂಡ್ ಬಗ್ಗೆ ಕೇಳಿದ್ದಕ್ಕೆ ಇದನ್ನು ಸಿ.ಓ.ಡಿ.ತನಿಖೆಗೆ ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದರೆಂದು ಪತ್ರಿಕೆಗಳಲ್ಲಿ ಬಂತು. ಆದರೆ ಇದುವರೆಗೂ ಕೂಡ ಗದಾಪ್ರಹಾರವಾಗಲಿ ಅಥವಾ ಸಿ.ಓ.ಡಿ.ತನಿಖೆ ಕೂಡ ಆಗಿಲ್ಲ. ಆದ್ದರಿಂದ, ಕಾನೂನು ಸುವ್ಯವಸ್ಥೆ ತರುವುದರಲ್ಲಿ ಸರ್ಕಾರ ವಿಫಲವಾಗಿದೆ ಮತ್ತು ಸರಿಯಾದ ಕ್ರಮ ಕೈಗೊಳ್ಳುತ್ತಿಲ್ಲ ಮತ್ತೆ ಮಾತಿನಂತೆ ನಡೆಯುತ್ತಿಲ್ಲ. ಮತ್ತೊಂದು ಕೃತಿಯೊಂದಾಗಿದೆ. ಅವರು ಏನು ಮಾತನಾಡುತ್ತಾರೆ ಅದು ಕೃತಿಗೆ ಬರುವುದಿಲ್ಲ. ಮತ್ತೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಸಿ.ಓ.ಡಿ.ಗೆ ಬರತಕ್ಕಂಥ ಅಧಿಕಾರಿಗಳು ಯಾರು? ಕೆಲಸಕ್ಕೆ ಬಾರದೇ ಇರತಕ್ಕಂಥವರು ಅಥವಾ ಹೆಲ್ತ್ ತೊಂದರೆ

ಇರತಕ್ಕಂಥವರು ಅಥವಾ ಯಾರಾದರನ್ನೂ ಒಂದು ಶೆಡ್‌ಗೆ ಹಾಕಬೇಕೆಂದರೆ ಅವರೆಲ್ಲರನ್ನೂ ತಂದು ಸಿ.ಓ.ಡಿ.ಗೆ ಹಾಕತಕ್ಕಂಥ ಕೆಲಸ ಆಗುತ್ತಿದೆ. ಹಾಗೆಯೇ ಕೆಲಸಕ್ಕೆ ಬಾರದೇ ಇರತಕ್ಕಂಥವರು ಅಥವಾ ಬೆಂಗಳೂರಿನಲ್ಲಿ ಎಲ್ಲಿಯೂ ಜಾಗ ಸಿಗದೇ ಇರತಕ್ಕಂಥವರನ್ನು ತೆಗೆದುಕೊಂಡು ಹೋಗಿ ಇಂಟಲಿಜೆನ್ಸಿ ಡಿಪಾರ್ಟ್‌ಮೆಂಟ್‌ಗೆ ಹಾಕುತ್ತಾರೆ. ಒಂದೆರಡು ವರ್ಷ ಇಲ್ಲಿಯೇ ಇರು. ಅನಂತರ ಏನಾದರೂ ಮಾಡಿ ಚಿಕ್ಕಪೇಟೆ ಅಥವಾ ಕಮರ್ಷಿಯಲ್ ಸ್ಟ್ರೀಟ್ ಅಥವಾ ಚಾಮರಾಜಪೇಟೆಗೆ ಕೊಡಿಸುತ್ತೇನೆ ಅಲ್ಲಿಯವರೆಗೆ ಇಲ್ಲಿಯೇ ಇರು ಎಂದು ಮಂತ್ರಿಗಳು ಹೇಳಿರುತ್ತಾರೆಯೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಅಂದರೆ, ಈ ಪೋಲೀಸ್ ವ್ಯವಸ್ಥೆಯಲ್ಲಿ ಜವಾಬ್ದಾರಿಯನ್ನು ಹೊರತಕ್ಕಂಥ ಮತ್ತು ಸಾಮರ್ಥ್ಯ ಇರತಕ್ಕಂಥವರನ್ನು ಆ ಜಾಗಗಳಿಗೆ ಹಾಕುವಂಥ ಪ್ರಯತ್ನವನ್ನು ಸರ್ಕಾರ ಇವತ್ತಿನ ದಿವಸ ಮಾಡುತ್ತಿಲ್ಲ. ಸರ್ಕಾರದ ಮುಲಾಜಿಗೋಸ್ಕರ ಮತ್ತು ಅವರ ಕಾರ್ಯಗಳನ್ನು ಚೆನ್ನಾಗಿ ನೋಡಿಕೊಳ್ಳುವಂಥವರನ್ನು ಮತ್ತು ಮಂತ್ರಿಗಳ ಸಂಬಂಧಿಗಳು ಮತ್ತು ಕಾರ್ಯಕರ್ತರು ಯಾರನ್ನು ಹೇಳುತ್ತಾರೆಯೋ ಅಂಥವರನ್ನು ಬೆಂಗಳೂರಿನ ಒಳ್ಳೆಯ ಸ್ಥಳಗಳಿಗೆ ಅಂದರೆ ಅವರು ಹೇಳಿದಂಥ ಸ್ಥಳಗಳಿಗೆ ಹಾಕುವುದರಿಂದ ಕಾನೂನಿನ ಸುವ್ಯವಸ್ಥೆ ಪಾಲನೆ ಮಾಡುವುದಕ್ಕೆ ಆಗುವುದಿಲ್ಲ. ರೀತಿಯಿರುವುದರಿಂದ ಯಾವುದೇ ಕಾರಣಕ್ಕೂ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು) : ಮಾನ್ಯ ಅಶೋಕ್‌ರವರು ಒಂದು ನಿಮಿಷ ಯೀಲ್ಡ್ ಆಗಬೇಕು. ತಾವು ವಿರೋಧಪಕ್ಷದ ಸ್ಥಾನದಲ್ಲಿರುವವರು ಮತ್ತು ಜವಾಬ್ದಾರಿ ಸ್ಥಾನದಲ್ಲಿದ್ದು ತಾವು ಲೈವ್‌ಬ್ಯಾಂಡ್ ಬಗ್ಗೆ ಮಾತನಾಡಿ ನಾನು ಬೇಡವೆಂದು ಹೇಳುವುದಿಲ್ಲ. ಆದರೆ, ನಿಮ್ಮ ಹತ್ತಿರ ಇದಕ್ಕೆ ಸಂಬಂಧಪಟ್ಟಂತೆ ಜನರಲ್ ಆದ ಮಾಹಿತಿ ಇದ್ದರೆ ಈ ಹೌಸ್ ಮುಂದೆ ಇಡಿ. ಮಂತ್ರಿಗಳ ಸಂಬಂಧಿಕರೆಲ್ಲಾ ಲೈವ್‌ಬ್ಯಾಂಡ್ ನಡೆಸತಕ್ಕಂಥ ಏರಿಯಾದಲ್ಲಿರುವ ಆಫೀಸರ್ಸ್ ಅವರು ಆಪಾದನೆ ಮಾಡುತ್ತಿರುವುದು at so be secinse. ನಾಳೆ ದಿವಸ ಪತ್ರಿಕೆಯಲ್ಲಿ ಈ ವಿಷಯ ದೊಡ್ಡದಾಗಿ ಬರುತ್ತದೆ. ಮಂತ್ರಿಗಳ ಸಂಬಂಧಿಕರು ಲೈವ್‌ಬ್ಯಾಂಡ್ ನಡೆಸುತ್ತಿರುವ ಆ ಏರಿಯಾಗಳಲ್ಲಿ ಇರುವ ಪೋಲೀಸ್ ಅಧಿಕಾರಿಗಳ ಮೇಲೆ ಅವರು ಅಲಿಗೇಶನ್ ಮಾಡುತ್ತಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಇಂಥಿಂಥ ಡಿ.ಸಿ.ಪಿ., ಎ.ಸಿ.ಪಿ. ಅಥವಾ ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಬೆಂಗಳೂರಿನಲ್ಲಿ ಇಂಥಿಂಥ ಮಂತ್ರಿಗಳ ಸಂಬಂಧಿಕರು ಇದ್ದಾರೆಂದು ತಾವು ಸ್ಪಿಸಿಫಿಕ್ ಆಗಿ ಹೇಳಬೇಕು. ಏಕೆಂದರೆ, ನಮಗೂ ಕೂಡ ಮಾನ ಮರ್ಯಾದೆ ಎನ್ನತಕ್ಕಂಥದ್ದು ಇರುತ್ತದೆಯಲ್ಲವೆ? ಮತ್ತೆ ನಾವು ಹೊರಗಡೆ ತಲೆ ಎತ್ತಿಕೊಂಡು ಓಡಾಡಬೇಕಾಗುತ್ತದೆ. ಆದ್ದರಿಂದ ಆ ಮಂತ್ರಿಗಳು ಯಾರು ಎಂಬುದು ನಮಗೆ ಖಚಿತವಾಗಿ ಗೊತ್ತಾಗಬೇಕಾಗಿದೆ. ಆದರೆ, ಈ ರೀತಿಯಾಗಿ ಬೀದಿಯಲ್ಲಿ ಮಾತನಾಡುತ್ತಾರೆಂದು ಮಾನ್ಯ ಯಡಿಯೂರಪ್ಪನವರು ಹೇಳುತ್ತಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ತಮ್ಮ ಹತ್ತಿರ ಖಚಿತವಾದ ಮಾಹಿತಿ ಇದ್ದರೆ ಅದನ್ನು ದಯವಿಟ್ಟು ಹೇಳಬೇಕು.

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂಥ ಬಹಳಷ್ಟು ಮಾಹಿತಿಗಳು ಅವರ ಹತ್ತಿರವೇ ಇದೆ. ನಾನೇನೂ ಕೊಡುವಷ್ಟಿಲ್ಲ. ತಾವು ಮಂತ್ರಿಗಳಾಗಿರುವುದರಿಂದ ಈ ಮಾಹಿತಿಗಳನ್ನು ತರಿಸಿಕೊಳ್ಳಬಹುದು. ನಾವು ಈ ಮಾಹಿತಿಯನ್ನು ತಂದು ಕೊಡಬೇಕೆಂದು ಹೇಳಿದರೆ ಖಂಡಿತ ಮಾಹಿತಿಯನ್ನು ತಂದು ಕೊಡುತ್ತೇವೆ. ನಮಗೇನೂ ಬೇಜಾರು ಇಲ್ಲ.

ನನ್ನ ಹತ್ತಿರ ಬಹಳಷ್ಟು ಮಾಹಿತಿ ಇದೆ. ಆದರೆ, ಇದನ್ನು ಸದನದಲ್ಲಿ ಹೇಳಬಾರದೆಂದು ನಾನು ಸುಮ್ಮನೆ ಇದ್ದೇನೆ. ಇಲ್ಲಿ ವೈಯಕ್ತಿಕವಾಗಿ ಯಾರ ಬಗ್ಗೆಯೂ ಕೂಡ ಮಾತನಾಡತಕ್ಕಂಥದು ಸರಿಯಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ, ವೈಯಕ್ತಿಕವಾಗಿ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಈಗ ಇರತಕ್ಕಂಥ ಪೋಲೀಸ್ ವ್ಯವಸ್ಥೆ ಸರಿಯಿಲ್ಲ. ಹಿಂದೆ ಮಾನ್ಯ ಗೋವಿಂದೇಗೌಡರು ಶಿಕ್ಷಣ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಶಿಕ್ಷಕರು ವರ್ಗಾವಣೆ ಮಾಡಿಸಿ ಅಥವಾ ಪತ್ರ ಕೊಡಿ ಎಂದು ಯಾರೂ ಕೂಡ ಶಾಸಕರ ಹತ್ತಿರ ಹೋಗುತ್ತಿರಲಿಲ್ಲ. ನಮ್ಮ ಬಿ.ಜೆ.ಪಿ. ಶಾಸಕರ ಹತ್ತಿರ ಒಂದೇ ಅಲ್ಲ, ಬೇರೆ ಪಕ್ಷದ ಶಾಸಕರ ಹತ್ತಿರ ಕೂಡ ಯಾರೂ ಹೋಗುತ್ತಿರಲಿಲ್ಲ. ಮಾನ್ಯ ಗೋವಿಂದೇಗೌಡರು ಶಿಕ್ಷಣ ಮಂತ್ರಿಯಾಗಿದ್ದರು ಮತ್ತು ಇವರು ಜನತಾದಳ ಪಕ್ಷದವರು ಕೂಡ ಆಗಿದ್ದರು. ಆ ಸಂದರ್ಭದಲ್ಲಿ ಯಾವುದೇ ಶಿಕ್ಷಣ ಇಲಾಖೆಯ ಅಧಿಕಾರಿಗಳು ವರ್ಗಾವಣೆಗೋಸ್ಕರ ಯಾವುದೇ ಎಂ.ಎಲ್.ಎ.ಅಥವಾ ಯಾವುದೇ ಸಚಿವರ ಹತ್ತಿರ ಹೋಗುತ್ತಿರಲಿಲ್ಲ. ಆಗ ನಮಗೂ ಕೂಡ ಬಹಳ ಸಂತೋಷವಾಗುತ್ತಿತ್ತು. ಏಕೆಂದರೆ, ನಮ್ಮ ಹತ್ತಿರ ವರ್ಗಾವಣೆ ವಿಷಯಕ್ಕೆ ಸಂಬಂಧಪಟ್ಟಂತೆ ಯಾರು ಬರದೇ ಇದ್ದರೆ ನಾವು ಬೇರೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಹಾಗೆಯೇ ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾವು ಮಂತ್ರಿಗಳು ಅಥವಾ ಇನ್ನ್ಯಾರೋ ಮುಂದೆ ಹೋಗಿ ನಮ್ಮ ಸಮಯ ವೇಸ್ಟ್ ಆಗುವ ಬದಲು ಈ ಸಮಯ ಉಪಯೋಗ ಮಾಡಿಕೊಂಡು ಜನಪರ ಕಾರ್ಯಕ್ರಮ ಮಾಡಬಹುದಾಗಿತ್ತು. ಈ ರೀತಿಯಾದ ಒಂದು ವ್ಯವಸ್ಥೆ ಪೋಲೀಸ್ ಇಲಾಖೆಯಲ್ಲಿ ಬರಬೇಕು. ವರ್ಗಾವಣೆಗೆ ಸಂಬಂಧಪಟ್ಟಂತೆ ಯಾವುದೇ ಮಂತ್ರಿಯ ಪ್ರೆಷರ್ ಇಲ್ಲದೆ ಅಧಿಕಾರಿಗಳನ್ನು ಡೆಪ್ಯುಟೇಶನ್ ಮಾಡಿದರೆ ಬೆಂಗಳೂರಿನಲ್ಲಿ ನಿಜಕ್ಕೂ ಕೂಡ ಕಾನೂನು ಸುವ್ಯವಸ್ಥೆ ಒಂದು ಹದಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ. ಸರಿಯಾದಂಥ ದಕ್ಷ ಅಧಿಕಾರಿಗಳು ಒಳ್ಳೆಯ ಜಾಗಕ್ಕೆ ಅಥವಾ ಒಳ್ಳೆಯ ಸ್ಥಾನಕ್ಕೆ ಬಂದರೆ ಆ ರೀತಿಯಾದ ಕೆಲಸ ಆಗುತ್ತದೆ ಎಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಸಿ.ಓ.ಡಿ. ಮತ್ತು ಇಂಟೆಲಿಜೆನ್ಸಿ ಡಿಪಾರ್ಟ್‌ಮೆಂಟ್ ಫೇಲ್ಯೂರ್ ಆಗಿವೆ. ನಕ್ಸಲೈಟ್ಸ್ ಸಮಸ್ಯೆ ಬಗ್ಗೆ ಅಥವಾ 7 ಜನ ಪೊಲೀಸ್‌ನವರು ಹತ್ಯೆ ಪ್ರಕರಣ ನೋಡಿದಾಗ ನಮ್ಮಲ್ಲಿರುವ ಇಂಟಲಿಜೆನ್ಸಿ ಫೇಲ್ಯೂರ್ ಆಗಿರತಕ್ಕಂಥದು ತಿಳಿಯುತ್ತದೆ. ಇಂಥ ಕಡೆಯಲ್ಲಿ ಒಳ್ಳೆಯ ಅಧಿಕಾರಿಗಳನ್ನು ಹಾಕಬೇಕು. ಒಬ್ಬ ಅಧಿಕಾರಿಗೆ ಎಲ್ಲಿಯೂ ಸ್ಟೇಷನ್ ಸಿಗದಿದ್ದರೆ ಅಂಥವರನ್ನು ತೆಗೆದುಕೊಂಡು ಇಲ್ಲಿಗೆ ಪೋಸ್ಟ್ ಮಾಡುತ್ತೀರಿ. ಈ ರೀತಿಯಾದರೆ ಆತ ಏನು ಮಾಡುವುದಕ್ಕೆ ಸಾಧ್ಯ? ಆತನ ದೃಷ್ಟಿಯಲ್ಲಿ ಏನು ಇರುತ್ತದೆ ಎಂದರೆ, ಮಂತ್ರಿಗಳು ಅತವಾ ಇನ್ನ್ಯಾರೋ ವರ್ಗಾವಣೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಇನ್ನು ಒಂದು ವರ್ಷದಲ್ಲಿ ಚಿಕ್ಕಪೇಟೆ ಅಥವಾ ಚಾಮರಾಜಪೇಟೆ ಅಥವಾ ಬೇರೆ ಕಡೆಯಿರುವವರು ಯಾವಾಗ ಖಾಲಿ ಆಗುತ್ತಾರೆ ಎನ್ನುತಕ್ಕಂಥದ್ದು ಆತನ ಮನಸ್ಸಿನಲ್ಲಿರುತ್ತದೆ. ನಾನು ಯಾವ ಸ್ಟೇಷನ್‌ಗೆ ಹೋಗಬೇಕೆಂಬುದು ಆತನ ತಲೆಯಲ್ಲಿರುತ್ತದೆಯೇ ಹೊರತು ಇಂಟಲಿಜೆನ್ಸಿನಲ್ಲಿರತಕ್ಕಂಥ ಕೆಲಸದ ಬಗ್ಗೆ ಆತ ಗಮನಹರಿಸುವುದಿಲ್ಲ. ಆದ್ದರಿಂದ ಪೋಲೀಸ್ ಇಲಾಖೆಯಲ್ಲಿ ಯಾವ್ಯಾವ ಸ್ಥಳದಲ್ಲಿ ಯಾವ್ಯಾವ ಅಧಿಕಾರಿಗಳು ಇರಬೇಕೆಂಬುದನ್ನು ಪೋಲೀಸ್ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಬಿಡಬೇಕು. ಆದರೆ, ಈ ಒಂದು ಕೆಲಸ ಟ್ರಾನ್ಸ್‌ಸ್ಪೆರೆಂಟಾಗಿ ಮಾಡಬೇಕು. ಹಿಂದೆ ಮಾನ್ಯ ಗೋವಿಂದೇಗೌಡರು ಯಾವ ರೀತಿಯಲ್ಲಿ ಇದನ್ನು ಮಾಡಿದ್ದರೋ ಅದೇ ರೀತಿಯಲ್ಲಿ ಪೋಲೀಸ್ ಇಲಾಖೆಯಲ್ಲಿ

ಕೂಡ ಆಗಬೇಕು. ಟ್ರಾನ್ಸ್‌ಪೆರೆಂಟಾಗಿ ಮಾಡಿದ್ದೇ ಆದಲ್ಲಿ ಈ ರಾಜ್ಯದಲ್ಲಿ ಒಂದು ರೀತಿಯ ಸುವ್ಯವಸ್ಥೆ ಬರುವುದಕ್ಕೆ ಮೊದಲ ಹೆಜ್ಜೆಯಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಇವತ್ತಿನ ದಿವಸ ಪೋಲೀಸ್ ಇಲಾಖೆಯ ಬಿಲ್ಡಿಂಗ್ಸನ್ನು ಬೆಂಗಳೂರಿನಲ್ಲಿ ಮಾಡುತ್ತಿದ್ದಾರೆ. ಇದನ್ನು ಮಾಡುವುದಕ್ಕೆ ನಮಗೂ ಕೂಡ ಸಂತೋಷವಾಗಿದೆ. ಇವತ್ತಿನ ದಿವಸ ಪೋಲೀಸ್‌ನವರಿಗೆ ಹೊಸ ಹೊಸ ಕಟ್ಟಡಗಳನ್ನು ಕಟ್ಟಿಸಿಕೊಡುವುದರಿಂದ ಅಷ್ಟೇನೂ ಉಪಯೋಗವಾಗುವುದಿಲ್ಲ. ಆದರೆ, ಇದರ ಜೊತೆಗೆ ಪೋಲೀಸ್‌ನವರಲ್ಲಿ ದಕ್ಷತೆ ಹೆಚ್ಚಿಸಬೇಕು ಮತ್ತು ಅವರಿಗೆ ವೆಪನ್ಸ್ ಕೊಡಬೇಕಾಗುತ್ತದೆ. ಹಾಗೆಯೇ, ಹೆಚ್ಚಿನ ಸ್ಟಾಫ್ ಕೊಡಬೇಕಾಗುತ್ತದೆ. ಇವತ್ತಿನ ದಿವಸ ನಾವು ಯಾವುದೇ ಪೋಲೀಸ್ ಸ್ಟೇಷನಲ್ಲಿ ಕೇಳಿದರೂ ಕೂಡ ನಮ್ಮ ಹತ್ತಿರ ಸ್ಟಾಫ್ ಕಡಿಮೆ ಇದೆ ಎಂದು ಹೇಳುತ್ತಾರೆ. ಮೊನ್ನೆದಿವಸ ಪೀಣ್ಯದಲ್ಲಿ ಒಂದು ಗಲಾಟೆ ಆಯಿತು. ಅಲ್ಲಿ ಸುಮಾರು ಮೂರು ಲಕ್ಷ ಕಾರ್ಮಿಕರು ಇದ್ದಾರೆ. ಇದರಲ್ಲಿ ಸುಮಾರು ಒಂದು ಲಕ್ಷ ಜನ ಮಹಿಳಾ ಕಾರ್ಮಿಕರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ, ಪೀಣ್ಯ ಪೋಲೀಸ್ ಸ್ಟೇಷನ್‌ನಲ್ಲಿ ಒಬ್ಬ ಮಹಿಳಾ ಕಾನ್ಸ್ ಟೇಬಲ್ ಇಲ್ಲ. ಇವತ್ತಿನ ದಿವಸ ಒಂದು ಲಕ್ಷ ಜನ ಮಹಿಳೆಯರು ಕೆಲಸ ಮಾಡತಕ್ಕಂಥ ಏರಿಯಾದಲ್ಲಿ ಒಬ್ಬ ಮಹಿಳಾ ಕಾನ್ಸ್‌ಟೇಬಲ್ ಇಲ್ಲವೆಂದರೆ ಹೇಗೆ? ಮೊನ್ನೆ ದಿವಸ ಗಲಾಟೆಯಾದಾಗ ಅಲ್ಲಿದ್ದಂಥ ಮಹಿಳೆಯರೆಲ್ಲರನ್ನೂ ಹಿಡಿದುಕೊಂಡು ಬಾರಿಸಿಹಾಕಿದರು. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಅವತ್ತೂ ಕೂಡ ಪ್ರಸ್ತಾಪ ಮಾಡಿದ್ದೇನೆ. ನಮ್ಮಲ್ಲಿರುವ ಪೋಲೀಸ್ ವ್ಯವಸ್ಥೆಯನ್ನು ಸರಿಪಡಿಸುವುದರ ಬಗ್ಗೆ ನಾನು ಸಲಹೆ ಕೊಡುತ್ತಿದ್ದೇನೆ. ಈ ಸಲಹೆಯನ್ನು ತೆಗೆದುಕೊಂಡು ದಯವಿಟ್ಟು ಸರ್ಕಾರ ಈ ಕಡೆ ಗಮನಹರಿಸಿದರೆ ನಿಜಕ್ಕೂ ಕೂಡ ಈ ಇಲಾಖೆಗೆ ಒಳ್ಳೆಯದಾಗುತ್ತದೆ. ಮತ್ತೆ ಇವತ್ತಿನ ದಿವಸ ಭೂಗತ ಜಗತ್ತಿನ ದೊರೆಗಳು ಬೆಂಗಳೂರಿಗೆ ಬಂದು ನೆಲೆಸುವುದಕ್ಕೆ ಬರುತ್ತಿದ್ದಾರೆ. ಆದರೆ, ಈಗಲೇ ಅವರನ್ನು ಇಲ್ಲಿಂದ ಓಡಿಸಿದರೆ ಬೆಂಗಳೂರು ನಿಜಕ್ಕೂ ಚೆನ್ನಾಗಿರುತ್ತದೆ. ಮತ್ತೆ ಇಲ್ಲಿರತಕ್ಕಂಥ ಐ.ಟಿ.ಸಿಟಿ ಮತ್ತು ಗಾರ್ಡನ್ ಸಿಟಿ ಎಂದು ನಿವೃತ್ತಿಯಾಗಿದ್ದಂಥ ಬಹಳಷ್ಟು ಜನ ಇಲ್ಲಿ ನೆಮ್ಮದಿಯಿಂದ ವಾಸ ಮಾಡಬಹುದೆಂದು ಬೆಂಗಳೂರಿಗೆ ಬರುತ್ತಿದ್ದಾರೆ. ಈ ಒಂದು ಕಾರಣದಿಂದ ಬೆಂಗಳೂರಿಗೆ ಒಂದು ವಿಶೇಷವಾದ ಸ್ಥಾನ ಇದೆ. ಇವೆಲ್ಲವನ್ನೂ ಓಡಿಸತಕ್ಕಂಥ ಅಪಕೀರ್ತಿಗೆ ಈ ಸರ್ಕಾರ ಗುರಿಯಾಗಬಾರದೆಂದು ನನ್ನ ಸಲಹೆ. ಈ ಅಪಕೀರ್ತಿ ನಿಮ್ಮ ಮೇಲೆ ಬರಬಾರದು. ಆದರೆ, ಬೇರೆಯಾರಾದರೂ ಇದನ್ನು ಮಾಡಿಕೊಳ್ಳಲಿ. ನೀವು ಮಾತ್ರ ಈ ಅಪಕೀರ್ತಿಗೆ ಗುರಿಯಾಗಬೇಡಿ. ಇವತ್ತಿನ ದಿವಸ ಪೋಲೀಸ್ ಇಲಾಖೆಯನ್ನು ಬಂದೋಬಸ್ತು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದರ ಜೊತೆಗೆ ನನ್ನ ಸಲಹೆ ಮತ್ತು ಆಪಾದನೆಗಳನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ತಿಳಿಸಿದ್ದೇನೆ. ದಯವಿಟ್ಟು ಸರ್ಕಾರ ಈ ಕಡೆ ಗಮನಹರಿಸಬೇಕೆಂದು ಹೇಳುತ್ತಾ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಗೋಪಾಲ ಕೃಷ್ಣ ಬೇಲೂರುರವರು ಬಂದಿಲ್ಲವೆಂದು ಕಾಣುತ್ತದೆ. ಹಾಗಾದರೆ, ಈಗ ಮಾನ್ಯ ಅನಿಲ್ ಹೆಚ್. ಲಾಡ್‌ರವರು ಮಾತನಾಡಿ. ಅವರೂ ಕೂಡ ಬಂದಿಲ್ಲವೆಂದು ಕಾಣುತ್ತದೆ. ಈಗ ಮಾನ್ಯ ಈಶ್ವರಪ್ಪನವರು ಮಾತನಾಡಿ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಈ ರೀತಿ ನಕ್ಸಲ್‌ವಾದಿಗಳ ಉಗ್ರಗಾಮಿ ವ್ಯವಸ್ಥೆ ಇಡೀ ರಾಜ್ಯವನ್ನು ತಲ್ಲಣಗೊಳ್ಳುವಂತೆ ಮಾಡಿದೆ.

ಪ್ರಾರಂಭದಲ್ಲಿಯೇ ರಾಜ್ಯ ಸರ್ಕಾರ ಈ ನಕ್ಸಲ್‌ವಾದಿಗಳಿಗೆ ಸರಿಯಾದ ಬುದ್ಧಿಯನ್ನು ನಾವು ಕಲಿಸುತ್ತೇವೆ. ಈ ತೀರ್ಮಾನವನ್ನು ತೆಗೆದುಕೊಂಡಿದ್ದಿದ್ದರೆ ಇವತ್ತು ರಾಜ್ಯದಲ್ಲಿ ಈ ರೀತಿಯ ಭಯಾನಕವಾದ ವಾತಾವರಣ ನಿರ್ಮಾಣವಾಗುತ್ತಿರಲಿಲ್ಲ. ಈ ನಕ್ಸಲ್‌ವಾದಿಗಳ ಬಗ್ಗೆ ಒಂದು ರೀತಿಯಾದ ಬೇರೆ ಯಾರ ಮೇಲೋ ಇರುವ ಸಿಟ್ಟನ್ನು ತೀರಿಸಿಕೊಳ್ಳುವುದಕ್ಕೆ ನಕ್ಸಲ್‌ವಾದಿಗಳಿಗೆ ಬೆಂಬಲವನ್ನು ಕೊಟ್ಟುಕೊಂಡು ಬಂದರು. ನಮ್ಮ ರಾಜ್ಯದ ಇತಿಹಾಸದಲ್ಲಿ ಈ ರೀತಿಯ ಚಟುವಟಿಕೆಗಳಿಗೆ ಬೆಂಬಲವನ್ನು ಕೊಟ್ಟಂಥ ಸರ್ಕಾರ ಇವತ್ತು ರಾಜ್ಯದ ಜನತೆ ನೋವನ್ನು ಅನುಭವಿಸಬೇಕು ಎನ್ನುವ ಸ್ಥಿತಿ ಬಂದಿರುವುದಕ್ಕೆ ಈ ಸರ್ಕಾರವೇ ಕಾರಣವೆಂದು ಹೇಳಿ ನೇರವಾಗಿ ಆರೋಪ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ.

(ಈ ಹಂತದಲ್ಲಿ ಶ್ರೀ ಎನ್.ಯೋಗೀಶ್‌ಭಟ್‌ರವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಪ್ರಾರಂಭದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ರೀತಿಯ ವಿಚಾರಗಳು ಬಂದಾಗ ಸ್ಪಷ್ಟವಾಗಿ ಭಾರತೀಯ ಜನತಾ ಪಕ್ಷದವರಾದ ನಾವು ಹೇಳಿರುತ್ತೇವೆ, ಇಂತಹ ವ್ಯಕ್ತಿಗಳು ಈ ಜಿಲ್ಲೆಯಲ್ಲಿ ಜನರ ಮನಸ್ಸಿನಲ್ಲಿ ಭಯದ ಒಂದು ವಾತಾವರಣವನ್ನು ನಿರ್ಮಾಣ ಮಾಡುತ್ತಿದ್ದಾರೆ. ಇವರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದಾಗ ಸರ್ಕಾರ ಆಗಮನ ಕೊಡಲಿಲ್ಲ.

ಈ ರೀತಿಯ ವಾತಾರಣವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಮೇಲ್ವರ್ಗ ಮತ್ತು ಕೆಳವರ್ಗ ಎನ್ನುವುದನ್ನು ಸೃಷ್ಟಿಮಾಡಿ ಯಾರು ದುಡಿದು ತಮ್ಮ ಆಸ್ತಿಪಾಸ್ತಿಯನ್ನು ಮಾಡಿದ್ದರೋ ಆ ದುಡಿದವರ ವಿರುದ್ಧವಾಗಿ ಬುದ್ಧಿಜೀವಿಗಳು ಎಂದು ಹೇಳಿಕೊಳ್ಳುವ ಕೆಲವೊಂದು ವ್ಯಕ್ತಿಗಳು ಅಮಾಯಕ ಯುವಕರನ್ನು ಅವರ ವಿರುದ್ಧವಾಗಿ ಎತ್ತಿಕಟ್ಟಿದರು. ಅವತ್ತೆ ಇದರ ಬಗ್ಗೆ ಸರ್ಕಾರ ಸೂಕ್ತವಾದ ಬಿಗಿ ಕ್ರಮವನ್ನು ಕೈಗೊಂಡಿದ್ದಿದ್ದರೆ ಖಂಡಿತವಾಗಿ ಇವತ್ತು ಈ ಸ್ಥಿತಿ ಬರುತ್ತಿರಲಿಲ್ಲ. ಈ ನಕ್ಸಲ್‌ವಾದಿಗಳ ಈ ಪ್ರಯತ್ನ ಬರುತ್ತಾ ಬರುತ್ತಾ ಏನಾಯಿತು ಎಂದರೆ, ತಾವು ಗಮನಿಸಿರಬಹುದು. ಮೊನ್ನೆ ಸನ್ಮಾನ್ಯ ಮುಖ್ಯ ಮಂತ್ರಿಗಳು ನೇರವಾಗಿ ಹೇಳಬೇಕಾಗಿತ್ತು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಅನೇಕ ಪ್ರೊಫೆಸರ್‌ಗಳು ಈ ನಕ್ಸಲ್‌ವಾದಿ ವಿಚಾರಗಳಿಗೆ ಬೆಂಬಲ ಕೊಡುವಂಥ ಸ್ಥಿತಿ ನಮ್ಮ ಗಮನಕ್ಕೆ ಬಂದಿದೆ. ಇದನ್ನು ಮುಂಚೆ ನಾವು ಹೇಳಿದ್ದೆವು. ನಾವು ಹೇಳಿದಾಗ ಗಮನವನ್ನು ಕೊಟ್ಟಿದ್ದರೆ ರಾಜ್ಯದಲ್ಲಿ ಖಂಡಿತವಾಗಿ ಇವತ್ತು ಇಷ್ಟರ ಮಟ್ಟಿಗೆ ಭಯದ ವಾತಾವರಣ ನಿರ್ಮಾಣವಾಗುತ್ತಿರಲಿಲ್ಲ. ಅನೇಕ ಅಮಾಯಕರ ಪೋಲೀಸರ ಆದಿಯಾಗಿ ಜೀವ ಉಳಿಯುತ್ತಿತ್ತು. ಇವತ್ತು ನಾನು ನೇರವಾಗಿ ರಾಜ್ಯ ಸರ್ಕಾರದ ಮೇಲೆ ಆರೋಪವನ್ನು ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಈ ರೀತಿ ಅಮಾಯಕ ಪೋಲೀಸರ ಹತ್ಯೆಗೆ ಈ ರಾಜ್ಯ ಸರ್ಕಾರವೇ ಕಾರಣವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಕಳೆದ ವಿಧಾನ ಮಂಡಲದ ಅಧಿವೇಶನದಲ್ಲಿ ನಮ್ಮ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು ನೇರವಾಗಿ ಒಂದು ರೀತಿಯ ಧೈರ್ಯವಾದ ತೀರ್ಮಾನವನ್ನು ತೆಗೆದುಕೊಂಡಿದ್ದರು. ಆ ಉಗ್ರಗಾಮಿ ನಕ್ಸಲೇಟ್ಸನ್ನು ಸದೆ ಬಡಿಯುವುದಕ್ಕೋಸ್ಕರ ಎಸ್.ಟಿ.ಎಫ್.ನ್ನು ಬಳಸುತ್ತೇವೆಂದು ಹೇಳಿದ್ದರು. ಆದರೆ ಅವರಿಗೆ ಯಾರ್‍ಯಾರ ಒತ್ತಡ ಬಂತೋ ಗೊತ್ತಿಲ್ಲ, ಯಾವ್ಯಾವ ಕಡೆಯಿಂದ ಅವರಿಗೆ, ಸರ್ಕಾರವನ್ನು ಉಳಿಸಿ ಕೊಳ್ಳಬೇಕು ಎನ್ನುವ ಭಯ ನಿರ್ಮಾಣವನ್ನು ಮಾಡಿದರೋ ಗೊತ್ತಿಲ್ಲ. ಒಟ್ಟಾರೆ ಎರಡೇ ದಿವಸದಲ್ಲಿ ಅವರ ಹೇಳಿಕೆ ಬದಲಾವಣೆಯಾಯಿತು. ನಾವು ಅವರನ್ನು ಕಳುಹಿಸುವುದಿಲ್ಲವೆಂದು. ಆ ಇಬ್ಬರು ಉಗ್ರಗಾಮಿಗಳ ಕೊಲೆಯಾದಾಗ ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು

ಕೊಟ್ಟರು. ಆ ಶವವನ್ನು ಒಂದು ಸಂಘಟನೆಗೆ ಒಪ್ಪಿಸಿ ಎಂದು; ಮಾನ್ಯ ಛೇರ್ಮನ್‌ರೆ, ತುಂಬಾ ಆಶ್ಚರ್ಯಕರವಾದ ಸ್ಥಿತಿಯನ್ನು ರಾಜ್ಯದ ಜನತೆ ನೋಡುತ್ತಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳ ಆಜ್ಞೆ ಈ ರಾಜ್ಯದಲ್ಲಿ ಪರಿಪಾಲನೆ ಆಗದಂಥ ಸ್ಥಿತಿ ಈ ದೇಶದ ಇತಿಹಾಸದಲ್ಲಿಯೇ ಎಲ್ಲಿಯೂ ಆಗುವುದಕ್ಕೆ ಸಾಧ್ಯವಿಲ್ಲ. ಸ್ವತಃ ಒಬ್ಬ ಮುಖ್ಯಮಂತ್ರಿಗಳು ಆ ಒಂದು ಡೆಡ್ ಬಾಡಿಯನ್ನು ಇಂತಹವರ ಕಡೆ ಕೊಡಿ ಎಂದು ಹೇಳಿದ್ದರೂ ಕೂಡ ಅವರು ಅದನ್ನು ಪರಿಪಾಲನೆ ಮಾಡಿಲ್ಲವೆಂದರೆ ನಾನು ಇವತ್ತು ನೇರವಾಗಿ ತಮ್ಮ ಮುಖ್ಯಾಂತರ ಮಾನ್ಯ ಮುಖ್ಯಮತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಮಗೆ ಈ ಸರ್ಕಾರದಲ್ಲಿ ಕಿಂಚಿತ್ತೂ ಕವಡೆಕಾಸಿನ ಬೆಲೆ ಇಲ್ಲ, ತಾವು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಒಬ್ಬ ಮುಖ್ಯಮಂತ್ರಿಗಳಾಗಿ ಸಂಬಂಧಪಟ್ಟ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುವುದಿಲ್ಲವೆಂದರೆ, ನಿಮ್ಮನ್ನು ಮುಖ್ಯಮಂತ್ರಿಗಳೆಂದು ನಾವು ಹೇಗೆ ಕರೆಯಬೇಕು. ಯಾವ ನಂಬಿಕೆಯ ಮೇಲೆ ನಿಮ್ಮನ್ನು ಮುಖ್ಯಮಂತ್ರಿಗಳೆಂದು ಕರೆಯಬೇಕು. ಒಂದು ವಿಶ್ವವಿದ್ಯಾನಿಲಯದಲ್ಲಿ ನಕ್ಸಲೇಟ್ಸ್ ಚಟುವಟಿಕೆ ನಡೆಯುತ್ತಿದೆ ಎನ್ನುವ ಬಗ್ಗೆ ನನ್ನ ಹತ್ತಿರ ಮಾನ್ಯ ಮುಖ್ಯಮಂತ್ರಿಗಳೇ ವರದಿ ಇದೆ, ಎಂದು ಹೇಳಿದ ಮೇಲೆ, ನಾನು ತಮ್ಮ ಮೂಲಕ ಇಡೀ ರಾಜ್ಯದ ಪರವಾಗಿ ಕೇಳುವುದಕ್ಕೆ ಇಷ್ಟಪಡುತ್ತೇನೆ, ಆ ಕುವೆಂಪು ವಿಶ್ವ ವಿದ್ಯಾನಿಲಯದಲ್ಲಿ ಯಾವ್ಯಾವ ಪ್ರೊಫೆಸರ್‌ಗಳನ್ನು ನೀವು ಬಂಧನ ಮಾಡಿದ್ದೀರಾ? ಅಮಾಯಕ ವಿದ್ಯಾರ್ಥಿಗಳು ಕಾಲೇಜಿಗೆ ಹೋಗುತ್ತಿದ್ದಾರೆ, ಆ ವಿದ್ಯಾರ್ಥಿಗಳಲ್ಲಿ ಈ ರೀತಿಯ ಉಗ್ರಗಾಮಿ ಭಾವನೆ ತುಂಬಿ ಆ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನೂ ಕೂಡ ಹಾಳು ಮಾಡಿ ಇಡೀ ಚಿಕ್ಕಮಗಳೂರು ಜಿಲ್ಲೆ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಈ ರೀತಿಯ ನಕ್ಸಲೇಟ್ಸ್ ಚಟುವಟಿಕೆ ಬೆಳೆಯುವುದಕ್ಕೆ ಅವಕಾಶ ಮಾಡುತ್ತೀರೆಂದು ಅಲ್ಲಿರುವ ಪ್ರೊಫೆಸರ್‌ಗಳನ್ನು ನೀವು ಇಲ್ಲಿಯವರೆಗೆ ಅರೆಸ್ಟ್ ಮಾಡಿಲ್ಲವೆಂದರೆ ಅದರ ಅರ್ಥ ಅಂತಹ ಪ್ರೊಫೆಸರ್‌ಗಳಿಗೆ ಈ ಸರ್ಕಾರ ರಕ್ಷಣೆ ಕೊಡುತ್ತದೆ ಎಂದು ಅರ್ಥವಾಗುತ್ತದೆ. ಆದರೂ ಕೂಡ ನಾನು ಈ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಛೇರ್ಮನ್‌ರೆ, ಒಂದು ದುರಂತವೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಅಲಿಗೇಶನ್ ಮಾಡುತ್ತಾರೆ, ಸನ್ಮಾನ್ಯ ಶಿಕ್ಷಣ ಮಂತ್ರಿಗಳು ಏನೂ ಇಲ್ಲ ಅದರ ಬಗ್ಗೆ ನಾನು ಮಾಹಿತಿ ತರಿಸಿಕೊಂಡಿದ್ದೇನೆಂದು ಡಿಫೆಂಡ್ ಮಾಡಿಕೊಳ್ಳುತ್ತಾರೆ. ನಿನ್ನೆ ಸ್ಟೇಟ್‌ಮೆಂಟ್ ಮಾಡಿದರು, ನಿನ್ನೆ ಅಸೆಂಬ್ಲಿಯಲ್ಲಿ ಅಂಥದ್ದು ಏನೂ ಇಲ್ಲವೆಂದು ಎನ್‌ಕ್ವಾಯರಿ ಮಾಡಿದ್ದೇನೆಂದು ಹೇಳಿದರು, ಸನ್ಮಾನ್ಯ ಮುಖ್ಯಮಂತ್ರಿಗಳನ್ನೇ ಅಲೀಜ್ ಮಾಡಿ ಎಜ್ಯುಕೇಶನ್ ಮಿನಿಸ್ಟರ್‌ರವರು ಡಿಫೆಂಡ್ ಮಾಡುವ ಸ್ಥಿತಿಗೆ ಸರ್ಕಾರ ಬಂದರೆ ಹೇಗೆ?

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಛೇರ್ಮನ್‌ರೆ, ಇದಕ್ಕೆ ಉತ್ತರ ಕೊಡುವಂಥ ಸಂದರ್ಭದಲ್ಲಿ ದಯವಿಟ್ಟು ಉತ್ತರವನ್ನು ಕೊಡಬೇಕು, ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಮಾಧುಸ್ವಾಮಿಯವರು ಹೇಳಿರುವ ವಿಷಯವನ್ನು ನಾನು ಹೇಳುವುದಕ್ಕೆ ಹೋಗುತ್ತಿದ್ದೆ, ಮುಖ್ಯಮಂತ್ರಿಗಳು ಹೇಳುವ ಮಾತನ್ನು ಅಧಿಕಾರಿಗಳು ಕೇಳುವುದಿಲ್ಲ. ಮುಖ್ಯಮಂತ್ರಿಗಳು ಹೇಳಿರುವ ಮಾತನ್ನು ಇನ್ನೊಬ್ಬರು ಮಂತ್ರಿಗಳು ಅದು ಸುಳ್ಳು ಎಂದು ಹೇಳುತ್ತಾರೆ. ಹಾಗಾದರೆ ಇದರಲ್ಲಿ ಯಾವುದು ಸತ್ಯ? ನಿಮ್ಮ ಮಾತನ್ನು ಅಧಿಕಾರಿಗಳು ಕೇಳುವುದಿಲ್ಲ, ನೀವು

ಹೇಳುವುದು ಸುಳ್ಳು ಎಂದು ನಿಮ್ಮ ಮಂತ್ರಿ ಮಂಡಲದ ಮಂತ್ರಿಗಳೇ ಹೇಳುತ್ತಾರೆ, ಹೀಗೆ ಇರಬೇಕಾದರೆ ತಾವು ಮುಖ್ಯಮಂತ್ರಿಯಾಗಿ ಮುಂದುವರೆಯುವುದಕ್ಕೆ ಒಂದು ದಿವಸವಾದರೂ ನಿಮಗೆ ಅಧಿಕಾರ ಇದೆಯೇ? ನೈತಿಕ ಹೊಣೆ ಹೊತ್ತು ನೀವು ರಾಜೀನಾಮೆಯನ್ನು ಕೊಡಲೇಬೇಕಲ್ಲವೆ? ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆಯನ್ನು ಮಾಡುತ್ತೇನೆ. ಇದು ನನ್ನ ಭಾವನೆ ಅಷ್ಟೇ ಅಲ್ಲ, ಇಡೀ ರಾಜ್ಯದ ಜನತೆಯ ಮನಸ್ಸಿನ ಭಾವನೆಯನ್ನು ಇವತ್ತು ನಾನು ಪ್ರಕಟಣೆ ಮಾಡುತ್ತಿದ್ದೇನೆ. ಅಲ್ಲಿಯ ಪರಿಸ್ಥಿತಿ ತಮಗೆ ಗೊತ್ತಿದೆ, ಉಗ್ರಗಾಮಿಗಳು ಎ.ಕೆ.47 ಅನ್ನು ಇಟ್ಟುಕೊಂಡು ಓಡಾಟವನ್ನು ಮಾಡುತ್ತಿದ್ದಾರೆ. ಪ್ರಾಣದ ಹಂಗನ್ನು ತೊರೆದು ಪೋಲೀಸರು ನಕ್ಸಲೇಟ್ಸ್‌ಗಳನ್ನು ಸದೆ ಬಡಿಯುತ್ತೇವೆಂದು ತೀರ್ಮಾನ ಮಾಡಿಕೊಂಡು ಹೋಗುವಂಥ ಸಂದರ್ಭದಲ್ಲಿ ಅವರಿಗೆ ಇರುವ ಬಂದೂಕು ಯಾವುದು, ಅವರಿಗೆ ಅವರ ಜೀವನವನ್ನು ರಕ್ಷಣೆ ಮಾಡಿಕೊಳ್ಳಲಿಕ್ಕಾಗದ ಓಬಿರಾಯನ ಕಾಲದ ಬಂದೂಕು, ಅವು ಗುಬ್ಬಿ ಹೊಡೆಯುವಂಥ ಬಂದೂಕುಗಳಾಗಿವೆ. ಆದರೆ ಉಗ್ರಗಾಮಿಗಳ ಕೈಯಲ್ಲಿ ಎ.ಕೆ-47 ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಇವೆ. ಹೀಗೆ ಇವತ್ತು ರಾಜ್ಯದಲ್ಲಿ, ಕರ್ನಾಟಕ ರಾಜ್ಯ ಶಾಂತಿಯ ಬೀಡು, ಕರ್ನಾಟಕ ರಾಜ್ಯ ಬಾಂಧವ್ಯಕ್ಕೆ ಬಹಳ ಹೆಸರಾಗಿರುವಂಥ ರಾಜ್ಯ. ಇಂತಹ ರಾಜ್ಯವನ್ನು ನಿಮ್ಮ ಕಾಲದಲ್ಲಿ ಇದನ್ನು ಕೊಲೆ ಗಡುಕರ ನಾಡನ್ನಾಗಿ ಮಾಡಿದ್ದೀರಿ. ಭಯೋತ್ಪಾದಕರ ನಾಡನ್ನು ಮಾಡಿದ್ದೀರಿ. ಅಮಾಯಕರ ಕೊಲೆಗಳಾಗುತ್ತಿವೆ, ಕೊಲೆಗಡುಕರ ನಾಡನ್ನಾಗಿ ಮಾಡಿರುತ್ತೀರಿ, ಹಾಗಾದರೆ ರಾಜ್ಯಸರ್ಕಾರಕ್ಕೆ ಯಾವುದೇ ಜವಾಬ್ದಾರಿ ಇಲ್ಲವೇ? ಇತ್ತೀಚೆಗೆ ರಾಜ್ಯದಲ್ಲಿ ಸ್ವಯಂಘೋಷಿತ ಬುದ್ಧಿಜೀವಿಗಳು ಎಂದು ಅನೇಕರು ಹುಟ್ಟಿಕೊಂಡು ಬಿಟ್ಟಿದ್ದಾರೆ. ಅವರೆ ತೀರ್ಮಾನ ಮಾಡಿಕೊಂಡು ಬಿಟ್ಟಿದ್ದಾರೆ. ನಾವು ಬುದ್ಧಿಜೀವಿಗಳು, ಏನು ಇವರ ಕೆಲಸ, ಅಮಾಯಕ ವಿದ್ಯಾರ್ಥಿಗಳನ್ನು ದೇಶದ್ರೋಹಿ ಮಾಡುವುದು, ವಿದ್ಯಾರ್ಥಿಗಳ ಮನಸ್ಸಿನಲ್ಲಿ ದೇಶದ ಬಗ್ಗೆ ಧರ್ಮದ ಬಗ್ಗೆ ವಿರೋಧ ಭಾವನೆ ತುಂಬುವುದು ಈ ದೇಶದಲ್ಲಿ ಇವರು ಬುದ್ಧಿಜೀವಿಗಳು. ಹೀಗಾಗಿ ನಾನು ನೇರವಾಗಿ ನಿಮ್ಮ ಮುಖಾಂತರ ಈ ರಾಜ್ಯದ ಮುಖ್ಯಮಂತ್ರಿಗಳಿಗೆ ನಾನು ಹೇಳುವುದು ಇಷ್ಟೆ. ವಿಧಾನಮಂಡಲದಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಮಾಡುವಂತಹ ಸ್ಥಿತಿಯನ್ನು ತಂದುಕೊಟ್ಟಿರಲ್ಲಾ, ನಕ್ಸಲಿಯರು ಈ ರಾಜ್ಯದಲ್ಲಿ ಬೆಳೆದಿದ್ದಾರೆಂಬ ಸ್ಥಿತಿಯನ್ನು ತಂದುಕೊಟ್ಟಿದ್ದಿರಲ್ಲಾ ಯಾವ ಕಡುಬಡವರು, ಯಾವ ರೈತರು ಯಾವ ನಿರುದ್ಯೋಗಿ ಯುವಕರ ಅವರ ಬಗ್ಗೆ ಈ ವಿಧಾನಮಂಡಲದಲ್ಲಿ ಚರ್ಚೆಯಾಗಬೇಕಾಗಿತ್ತೋ, ಉಗ್ರಗಾಮಿಗಳ ಬಗ್ಗೆ, ನಕ್ಸಲೈಟ್ಸ್ ಬಗ್ಗೆ ಅವರ ಬಗ್ಗೆ ಚರ್ಚೆ ಮಾಡುವಂತಹ ಸ್ಥಿತಿಯನ್ನು ತಂದುಕೊಟ್ಟಂತಹ ಈ ಸರ್ಕಾರ ಈ ರಾಜ್ಯದಲ್ಲಿ ಇರಬೇಕಾದರೆ ಇದು ಸಾಮಾನ್ಯ ಜನರ ಮತ್ತು ರೈತರ ನಿರುದ್ಯೋಗಿ ಯುವಕರ ಪರವಾಗಿ ಇರುವಂತಹ ಸರ್ಕಾರವೋ, ಇದನ್ನು ರಾಜ್ಯದ ಜನರು ಪ್ರಶ್ನೆ ಮಾಡುತ್ತಿದ್ದಾರೆ. ನಾನು ಹೇಳುವುದು ಇಷ್ಟೆ, ಮೊದಲನೆಯದಾಗಿ ಯಾವ ಬುದ್ಧಿಜೀವಿಗಳು ಎಂದು ಅಂದುಕೊಂಡು ಆ ಒಂದು ವಿಶ್ವವಿದ್ಯಾನಿಲಯದಲ್ಲಿ ನಕ್ಸಲೇಟ್ ಚಟುವಟಿಕೆಗಳಿಗೆ ಬೆಂಬಲವನ್ನು ಕೊಡುತ್ತಿದ್ದಾರೆಂದು ಗುಪ್ತಚಾರ ಇಲಾಖೆಯು ಹೇಳುತ್ತಿರುವಂತಹ ಸಂದರ್ಭದಲ್ಲಿ ಹಾಗೂ ಮಾನ್ಯ ಮುಖ್ಯಮಂತ್ರಿಗಳೇ ಹೇಳುತ್ತಿರುವಂತಹ ಈ ಸಂದರ್ಭದಲ್ಲಿ ಸಂಬಂಧಪಟ್ಟಂತಹ ವ್ಯಕ್ತಿಗಳ ಬಗ್ಗೆ ನಿಮ್ಮ ಇಲಾಖೆಯಿಂದ ಬಂದಿರುವಂತಹ ವರದಿಗಳ ಪ್ರಕಾರ ತಕ್ಷಣ ಅಂತಹ ಬುದ್ದಿಜೀವಿಗಳನ್ನು ಬಂಧಿಸಿ ಅವರಿಗೆ ಮುಂಚೆ ಶಿಕ್ಷೆ ಕೊಡಿಸಿ ಜೈಲಿಗೆ ಕಳುಹಿಸಬೇಕು.

ನಿಮ್ಮ ರಿಪೋರ್ಟ್ ಪ್ರಕಾರವೇ ಈ ರೀತಿಯಾಗಿ ಬಂದಿರುವಂತಹ ಸಂದರ್ಭದಲ್ಲಿ ನೀವು ಅವರಿಗೆ ಸದರವನ್ನು ಕೊಟ್ಟು ಅವರ ಬಗ್ಗೆ ಎಲ್ಲರಿಗೂ ಮಂಚಿವಾಳ್ಳು ಎನ್ನುವಂತಹ ಪ್ರಯತ್ನದಲ್ಲಿ ತಾವು ಮುಂದುವರಿಸಿದರೆ ರಾಜ್ಯದ ಜನರು ಅಂದುಕೊಳ್ಳುತ್ತಾರೆ, ಇದು ಷಂಡ ಸರ್ಕಾರ, ಈ ಸರ್ಕಾರಕ್ಕೆ ಏನೂ ಶಕ್ತಿ ಇಲ್ಲ, ಇದರ ಬಗ್ಗೆ ಜನರು ತೀರ್ಮಾನ ಮಾಡುವಂತಹ ಸ್ಥಿತಿಗೆ ಬರುತ್ತದೆ. ಇವತ್ತು ಹಗುರವಾಗಿ ....

ಶ್ರೀ ವಾಟಾಳ್ ನಾಗರಾಜ್ : ಷಂಡ ಸರ್ಕಾರ ಎನ್ನುವ ಪದಕ್ಕೆ ನೀವು ಉತ್ತರವನ್ನು ಕೊಡದೇ ಇದ್ದರೆ ನೀವು ಒಪ್ಪಿಕೊಂಡಂತೆ ಆಗುತ್ತದೆ. ಆದ್ದರಿಂದ ಷಂಡ ಸರ್ಕಾರವೆಂದಾಗ ನಾನು ಅವರು ಒಪ್ಪಿಕೊಂಡಿದ್ದಾರೆಂದು ಅಂದುಕೊಂಡಿಲ್ಲ. ನೀವು ಒಪ್ಪಿಕೊಂಡಿದ್ದೀರಾ? ಮಾನ್ಯ ಈಶ್ವರಪ್ಪನವರು ಬಹಳ ಗುರುತರವಾದಂತಹ ಆರೋಪವನ್ನು ನಿಮ್ಮ ಮೇಲೆ ಮಾಡಿದ್ದಾರೆ. ಇದು ಷಂಡ ಸರ್ಕಾರವೆಂದು ಹೇಳಿದ್ದಾರೆ. ನೀವು ಯಾರೂ ಅದರ ಬಗ್ಗೆ ಉತ್ತರವನ್ನು ಕೊಡುತ್ತಿಲ್ಲ. ಅದರ ಅರ್ಥವೇನು? ಹೌದು ಎಂದಾಗುತ್ತದೆ. ತಾವು ಸಂಸದೀಯ ಸಚಿವರು ... ಇದ ಗುರುತರವಾದಂತಹ ಆರೋಪಣೆಯಾಗಿದೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಸದಸ್ಯರಾದ ಈಶ್ವರಪ್ಪನವರು ಷಂಡ ಸರ್ಕಾರ ಎಂದಾಕ್ಷಣ ನಾವು ಅವರನ್ನು ಬೈಯಬೇಕಾ? ಅವರು ಹೇಳಿದ ತಕ್ಷಣವೇ ಸರ್ಕಾರ ಹಾಗೇ ಆಗುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ : ನೀವು ಬೈಯಿರಿ ಎಂದು ಹೇಳಲಿಲ್ಲ. ನಾನು ಹೇಳುವುದೇನೆಂದರೆ, ಇಷ್ಟೇ ಬಹಳ ಸುಲಭವಾಗಿ ಹೇಳಿದರು, ಇದು ಷಂಡ ಸರ್ಕಾರ ಇಲ್ಲ ಅಥವಾ ಉಂಟು ಅಷ್ಟು ಹೇಳಿ, ತೀರಾ ನೀವು ಬೈಯುವುದಕ್ಕೆ ಹೋಗಬೇಡಿ. ಉಂಟು ಅಥವಾ ಇಲ್ಲ ಎಂದು ಹೇಳಿ.

ಶ್ರೀ ಗೋವಿಂದ ಎಂ ಕಾರಜೋಳ : ಇದನ್ನು ಯಾವ ಪಕ್ಷದವರು ಹೇಳಬೇಕು?

ಶ್ರೀ ವಾಟಾಳ್ ನಾಗರಾಜ್ : ಈಗ ತಾವು ಸೌಮ್ಯವಾಗಿ ಕುಳಿತುಕೊಂಡರೆ ಅದನ್ನು ಒಪ್ಪಿಕೊಂಡ ಹಾಗೆ ಆಗುತ್ತದೆ.

ಶ್ರೀ ಸಿದ್ದರಾಮಯ್ಯ : ಒಂದು ಗಟ್ಟಿಯ ಸರ್ಕಾರ ಗಂಡಸ್ತನ ಇರುವಂತಹ ಸರ್ಕಾರ ಪದೇ ಪದೇ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಗಂಡಸ್ತನ ಎಂಬ ಪದಕ್ಕೆ ಬಹಳ ವ್ಯಾಖ್ಯಾನ ಆಗುತ್ತದೆ.

ಶ್ರೀ ಸಿದ್ದರಾಮಯ್ಯ : ಷಂಡತನದ ಸರ್ಕಾರ ಎಂದರೆ ಅದಕ್ಕೂ ಕೂಡ ಬಹಳ ವ್ಯಾಖ್ಯಾನ ಮಾಡಬೇಕಾಗುತ್ತದೆ. ಷಂಡತನ ಮತ್ತು ಗಂಡಸ್ತನ ಇದೆಯಲ್ಲಾ ಅದಕ್ಕೆ ಬಹಳ ವ್ಯಾಖ್ಯಾನ ಇದೆ. ಅದರ ಬಗ್ಗೆ ಚರ್ಚೆಯನ್ನು ಬೇಕಾದರೆ ಮಾಡೋಣ. ಗಂಡಸ್ತನ ಏಕೆ ಹೇಳಿದೆ ಎಂದರೆ, ಅವರು ಷಂಡತನ ಎಂದು ಹೇಳಿದರಲ್ಲಾ ಅದಕ್ಕಾಗಿ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ನೀವು ತಾವು ಗಂಡಸರು ಎಂದು ಹೇಳಿಕೊಳ್ಳುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ಯಾರು?

ಶ್ರೀ ವಾಟಾಳ್ ನಾಗರಾಜ್ : ನಾವು ಇದ್ದೇವೆ, ನೀವು ಸುಮ್ಮನೆ ಷಂಡರು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ನಾವು ಗಂಡಸರಾಗಿದ್ದೇವೆ, ಗಂಡು ಸರ್ಕಾರ ಎಂದು ಹೇಳಿ.

ಶ್ರೀ ಸಿದ್ದರಾಮಯ್ಯ : ನಿಮ್ಮನ್ನು ಗಂಡಸರು ಎಂದರೆ ಮಾತ್ರ ನೀವು ಗಂಡಸರಾಗುತ್ತೀರಾ, ನಿಮ್ಮನ್ನು ಷಂಡರು ಎಂದರೆ ನೀವು ಷಂಡರಾಗುತ್ತೀರಾ? ಏನು ಇಲ್ಲ ಹಾಗೆಯೇ ಇದೂ ಆಗುತ್ತದೆ. ಅವರು ಹೇಳಿದಾಕ್ಷಣ ಷಂಡರಾಗುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್: ಷಂಡರು ಎಂದು ಇಲ್ಲಿ ತೀರ್ಮಾನವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಯಾವುದು?

ಶ್ರೀ ಗೋವಿಂದ ಎಂ ಕಾರಜೋಳ : ಇನ್ನೂ ತೀರ್ಮಾನವಾಗಲಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ಇದಕ್ಕಿಂತ ಗುರುತರವಾದಂತಹ ಆಪಾದನೆಯನ್ನು ಮಾನ್ಯ ಈಶ್ವರಪ್ಪನವರು ಮಾಡಿದ್ದಾರೆ, ನೀವು ಯಾರಾಗೂ ಕೂಡ ಕೇಳಲಿಲ್ಲ. ಇದಕ್ಕಿಂತ ಗುರುತರವಾದಂತಹ ಆಪಾದನೆಯನ್ನು ಮಾಡಿದ್ದಾರೆ. ಮಾನ್ಯ ಈಶ್ವರಪ್ಪನವರು ಹಿರಿಯ ಸದಸ್ಯರಾಗಿದ್ದಾರೆ ನೀವು ಅವರುಗಳನ್ನು ಕೊಲೆಗಡುಕರನ್ನಾಗಿ ಮಾಡುತ್ತಿದ್ದೀರಿ ಎಂದು ಹೇಳಿದ್ದಾರೆ. ಕೊಲೆ ಗಡುಕರು ಆಗುತ್ತಿದ್ದಾರೆಂದು ಹೇಳುವುದು ಬೇರೆ, ಕೊಲೆ ಗಡುಕರನ್ನು ಮಾಡುತ್ತಿದ್ದೀರಿ ಎಂಬ ಆರೋಪವನ್ನು ಸರ್ಕಾರದ ಮೇಲೆ ಮಾಡುತ್ತಿದ್ದಾರೆ ಅದು ಸರಿಯಲ್ಲ.

ಶ್ರೀ ಎಸ್.ರಾಘವೇಂದ್ರನ್ : ಶಕ್ತಿಯಿಲ್ಲ ಸರ್ಕಾರದಲ್ಲಿ ಎಂದು ಹೇಳಿದ್ದಾರೆ. ತಾವು ಸೈಲೆಂಟಾಗಿರುವುದರಿಂದ ನನಗೆ ಏನೆಂದರೆ ನಿಮಗೆ ಅಪಾರವಾದ ಶಕ್ತಿ ಇದ್ದರೂ ಕೂಡ ಅದಕ್ಕೆ ಉತ್ತರ ಕೊಟ್ಟಿಲ್ಲ ಎಂದು.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಛೇರ್ಮನ್‌ರವರೆ, ನಾನು ಬಹಳ ಜವಾಬ್ದಾರಿಯಿಂದ ಆ ಪದವನ್ನು ಬಳಸಿದ್ದೇನೆ. ತುಂಬಾ ನೊಂದು ಆ ಪದವನ್ನು ಬಳಸಿದ್ದೇನೆ. ಕೇವಲ ಈ ಸರ್ಕಾರವನ್ನು ಟೀಕೆ ಮಾಡಬೇಕೆಂದು ನಾನು ಹೇಳುತ್ತಿಲ್ಲ. ತುಂಬಾ ಮನನೊಂದು ಆ ಭಾಷೆಯನ್ನು ಬಳಸಿದ್ದೇನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ವರದಿ ಇದೆ, ಕುವೆಂಪು ವಿಶ್ವವಿದ್ಯಾನಿಲಯ ನಕ್ಸಲೀಯರ ತಾಣವಾಗಿದೆ. ಇದನ್ನು ವಿರೋಧ ಪಕ್ಷದವರು ಮಾಡಿರುವಂತಹ ಆಪಾದನೆಯಲ್ಲ. ಸ್ವತಃ ಮುಖ್ಯ ಮಂತ್ರಿಗಳು ಕೊಟ್ಟಂತಹ ಹೇಳಿಕೆಯಾಗಿದೆ. ನಿಮ್ಮ ಗುಪ್ತಚಾರ ಇಲಾಖೆಯು ಕೊಟ್ಟಂತಹ ಹೇಳಿಕೆಯಾಗಿದೆ. ಈ ರೀತಿಯಾದ ಹೇಳಿಕೆಯನ್ನು ಕೊಟ್ಟ ನಂತರ ಇವತ್ತಿನವರೆವಿಗೂ ಕೂಡ ನೀವು ಕ್ರಮವನ್ನು ತೆಗೆದುಕೊಳ್ಳಲಿಲ್ಲವೆಂದರೆ ಯಾವ ಭಾಷೆಯಲ್ಲಿ ಕರೆಯಬೇಕು ಹಾಗಾದರೆ, ಇದೊಂದು ಉದ್ದೇಶಕ್ಕಾಗಿ ನಾನು ಆ ಭಾಷೆಯಲ್ಲಿ ಕರೆದಿರುವುದು, ಬೇರೆ ಇನ್ನಾವ ಉದ್ದೇಶವಿಲ್ಲ. ನಮ್ಮ ಕೈಯಲ್ಲಿ ಶಕ್ತಿ ಇಲ್ಲ ಅಂದಾಕ್ಷಣ ಅರ್ಥವೇನು?

ಶ್ರೀ ಎಸ್.ಕುಮಾರ್‌ಬಂಗಾರಪ್ಪ (ಸೊರಬ) : ಮಾನ್ಯ ಛೇರ್ಮನ್‌ರವರೆ, ಮಾನ್ಯ ಈಶ್ವರಪ್ಪನವರೇ, ಒಂದು ನಿಮಿಷ ತಾಳಿ. ಇಂಟಲಿಜೆನ್ಸಿ ರಿಪೋರ್ಟ್ ಏನು ಕೊಟ್ಟಿದೆ, ತಾವು ಏನು ಪ್ರಸ್ತಾಪವನ್ನು ಮಾಡುತ್ತಿದ್ದೀರಿ, ಇಡೀ ಕುವೆಂಪು ಯೂನಿವರ್ಸಿಟಿಯೇ ನೀವು ಒಂದು ಬ್ಲಾಕ್ ಫಿಗರಾಗಿ ಮಾಡತಕ್ಕಂಥದ್ದನ್ನು ಮಾಡುತ್ತಿದ್ದೀರಿ. ನೀವು ಮಾತನಾಡತಕ್ಕಂತಹ ಪದವೆಂದರೆ, 'ಇಡೀ ಕುವೆಂಪು ಯೂನಿವರ್ಸಿಟಿಯೇ ಒಂದು ನಕ್ಸಲೀಯರ ತಾಣವಾಗಿದೆ' ಎನ್ನುವಂತಹ ಮಾತನ್ನು ಪ್ರತಿಬಿಂಬಿಸುವುದಾದರೆ ಇದು ಎಲ್ಲಾ ಯೂನಿವರ್ಸಿಟಿಗಳಿಗೂ ಸಂಬಂಧಪಡುವಂತಹ ಮಾತುಗಳಾಗುತ್ತದೆ; ತಾವು ಅಲ್ಲಿರತಕ್ಕಂತಹ ಒಂದೆರಡು ಜನರ ಮೇಲೆ ಇಂಟಲಿಜೆನ್ಸಿ ರಿಪೋರ್ಟ್ ಇದೆ ಅದರ ಮೇಲೆ ಅದಕ್ಕೆ ಸಂಬಂಧಪಟ್ಟಂಥವರ ಬಗ್ಗೆ ಮಾತನಾಡಬೇಕೇ ಹೊರತು 'ಇಡೀ

ವಾತಾವರಣವನ್ನೇ ನೀವು ತೆಗೆದುಕೊಂಡು ಮಾತನಾಡುವಂತಹ ವಿಚಾರದಲ್ಲಿ ನಾಳೆ ದಿನ ವಿದ್ಯಾರ್ಥಿಗಳಿದ್ದಾರೆ, ಅಲ್ಲಿ ಉಪನ್ಯಾಸಕರು ಇದ್ದಾರೆ, ಅಲ್ಲಿ ಒಂದು ಒಳ್ಳೆಯ ವಾತಾರಣವಿದೆ, ಆ ಒಂದು ವಿದ್ಯಾಸಂಸ್ಥೆಯ ಮೇಲೆ ತಾವು ಮಾತನಾಡತಕ್ಕಂಥದ್ದು ಇಲ್ಲಿ ಏನು ತೀರ್ಮಾನವನ್ನು ಮಾಡುತ್ತೀರಿ ಅದು ಇಡೀ ರಾಜ್ಯಕ್ಕೂ ಕೂಡ ಒಂದು ಬಹಳ ಕೆಟ್ಟ ಸಂದೇಶವನ್ನು ಕಳುಹಿಸಿ ದಂತಾಗುತ್ತದೆ. ಕುವೆಂಪು ಯೂನಿವರ್ಸಿಟಿ ಹೆಸರನ್ನು ತೆಗೆದುಕೊಳ್ಳುವುದಕ್ಕಿಂತ ಅಲ್ಲಿ ಸೂಕ್ತ ವಾಗಿರುವಂತಹ ಯಾರೋ ಒಂದೆರಡು ಇಂಟಲಿಜೆನ್ಸಿ ರಿಪೋರ್ಟ್‌ನಲ್ಲಿ ಅದರ ಬಗ್ಗೆ ಇದೆ, ಅಲ್ಲಿ ಹೆಸರುಗಳು ಇವೆ ಎಂದು ಗೊತ್ತಿದೆ. ಅದರ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ನಿರ್ದಿಷ್ಟವಾಗಿ ಇಂಥದ್ದೇ ಆ್ಯಕ್ಷನ್ ತೆಗೆದುಕೊಳ್ಳುತ್ತೇವೆನ್ನುವಂತಹ ಮಾತನ್ನು ಅದರ ಬಗ್ಗೆ ಮತ್ತೊಂದು ವರದಿ ಬಂದ ಮೇಲೆ ಅದರ ಬಗ್ಗೆ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತನಾಡಿದ ಮೇಲೆ ತೆಗೆದುಕೊಳ್ಳುತ್ತೇವೆ. ಅವರ ಜೊತೆಯೂ ಕೂಡ ಸಂಪರ್ಕ ಮಾಡಿಕೊಂಡೆ ನಿನ್ನೆಯೂ ಕೂಡ ಸ್ಟೇಟ್‌ಮೆಂಟ್ ಮಾಡಿರುವುದು. ಅದು ಎರಡನ್ನು ಒಳಗೊಂಡಿದೆ. ಅದನ್ನು ಸಾರಾಸಗಟಾಗಿ ಕುವೆಂಪು ಯೂನಿವರ್ಸಿಟಿ ಎಂದು ಹೇಳಿದರೆ ನಾಳೇ ದಿವಸ ನಮ್ಮ ಕುವೆಂಪು ಯೂನಿವರ್ಸಿಟಿಗೆ ಇಲ್ಲಿ ಯಾವುದೋ ಒಂದು ಸಣ್ಣಪುಟ್ಟ ಉದ್ದೇಶಕ್ಕಾಗಿ ತಾವು ದೊಡ್ಡ ಸಮಸ್ಯೆಯನ್ನು ಮಾಡಿ ಅದಕ್ಕೆ ಮಸಿ ಬಳಿದಂತೆ ಆಗುತ್ತದೆ. ದಯಮಾಡಿ ತಾವು ಮಾತನಾಡಿದಂತಹ ಸಂದರ್ಭದಲ್ಲಿ ಕುವೆಂಪು ಯೂನಿವರ್ಸಿಟಿ ಎಂದು ಸಾರಾಸಗಟಾಗಿ ಮಾತ್ರ ಮಾತನಾಡುವುದಕ್ಕೆ ಹೋಗಬಾರದು.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಛೇರ್ಮನ್‌ರವರೆ, ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗಲಿಂದಲೂ ಕೂಡ ಸನ್ಮಾನ್ಯ ಕುಮಾರ್‌ಬಂಗಾರಪ್ಪನವರು ಇಲ್ಲಿ ಇದ್ದಾರೆಂದು ಭಾವಿಸುತ್ತೇನೆ. ನಾನು ತುಂಬಾ ಸ್ಪಷ್ಟವಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತಹ ಮಾತನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ನಾನು ಏನು ಹೇಳಿದೆ ಎಂದರೆ, ಕುವೆಂಪು ವಿಶ್ವವಿದ್ಯಾನಿಲಯ ಅಲ್ಲಿ ಕೆಲವು ಪ್ರೊಫೆಸರ್‌ಗಳು ಬಗ್ಗೆ–ನಾನು ಇಡೀ ಯೂನಿವರ್ಸಿಟಿ ಎಂದು ಹೇಳಲಿಲ್ಲ, ನಮ್ಮ ಅಕ್ಕತಂಗಿಯರು ನಮ್ಮ ಅಣ್ಣತಮ್ಮಂದಿರು, ನಮ್ಮ ಫ್ಯಾಮಿಲಿಯವರು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾರೆ. ಆ ಯೂನಿವರ್ಸಿಟಿಯ ಬಗ್ಗೆ ನನಗೆ ಪೂರ್ಣ ಗೌರವವಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ತಾವು ಹೇಳಿರುವಂತಹ ಪದ ಏನೆಂದರೆ, ಕುವೆಂಪು ಯೂನಿವರ್ಸಿಟಿಯನ್ನು ನಕ್ಸಲೈಟರ ತಾಣವಾಗಿ ಮಾಡುತ್ತಿದ್ದೀರಿ ಎನ್ನುವಂತಹ ಮಾತನ್ನು ಆಡಿದ್ದೀರಿ, it sends a wrong message to entire Karnataka state:
ತಾವು ತಾಣ ಎಂಬ ಪದವನ್ನು ಬಳಸಬಾರದು. ಅಲ್ಲಿ ಒಳ್ಳೆಯ ಉಪನ್ಯಾಸಕರು ಇದ್ದಾರೆ, ಕೆಲವರು ಯಾರೋ ಒಬ್ಬರ ಮೇಲೆ ಅಲಿಗೇಷನ್ಸ್ ಇದೆ, ಅವರಿಗೆ ಸಂಬಂಧಪಟ್ಟ ಹಾಗೆ ಮಾತನಾಡಬೇಕೇ ಹೊರತು ಕುವೆಂಪು ವಿಶ್ವವಿದ್ಯಾನಿಲಯ ತಾವಾಗಿದೆ ಎಂದು ಮಾತನಾಡಿದರೆ ತಪ್ಪಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ : ನಾನು ಹೇಳುವುದಕ್ಕಿಂತಲೂ ತಾವು ಆ ಮಾತನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ನೇರವಾಗಿ ಹೇಳಬೇಕಾಗಿತ್ತು. ಸನ್ಮಾನ್ಯ ಮುಖ್ಯ ಮಂತ್ರಿಗಳು ಏನು ಆಪಾದನೆ ಯನ್ನು ಮಾಡಿದ್ದಾರೆ, ಏನು ನೇರವಾಗಿ ಒಪ್ಪಿಕೊಂಡಿದ್ದಾರೆ ಅದರ ಬಗ್ಗೆ ಏತಕ್ಕಾಗಿ ಕ್ರಮ ತೆಗೆದು ಕೊಂಡಿಲ್ಲವೆಂದು ನಾನು ಹೇಳುತ್ತಿರುವುದು. ಕುವೆಂಪು ಯೂನಿವರ್ಸಿಟಿಯ ಎಲ್ಲಾ ಪ್ರೊಫೆಸರ್‌ಗಳು, ಅಲ್ಲಿಯ ಎಲ್ಲಾ ವಿದ್ಯಾರ್ಥಿಗಳು ಈ ನಕ್ಸಲೀಯ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ, ಎನ್ನುವಂತಹ

ಮಾತನ್ನು ನಾನು ಹೇಳುವುದಿಲ್ಲ, ಅದು ಸಾಧ್ಯವೂ ಇಲ್ಲ. ಕುವೆಂಪುರವರ ಹೆಸರನ್ನು ಹೇಳಿದರೆ ಇಡೀ ರಾಜ್ಯಕ್ಕೆ, ದೇಶಕ್ಕೆ ಮೈ ರೋಮಾಂಚನವಾಗುತ್ತದೆ. ಆ ಯೂನಿವರ್ಸಿಟಿಯ ಹೆಸರನ್ನು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಈ ಯೂನಿವರ್ಸಿಟಿಯಿಂದ ಅನೇಕ ವಿದ್ಯಾರ್ಥಿಗಳು ದೇಶಕ್ಕೆ ಆಸ್ತಿಯಾಗುವಂತಹವರು ಹೊರಗೆ ಬರುತ್ತಿದ್ದಾರೆ. ನಾನೇನಾದರೂ ವ್ಯತ್ಯಾಸ ಮಾಡಿದ್ದೇನಾ, ನಿಮ್ಮ ಮಾತಿಗೂ ನನ್ನ ಮಾತಿಗೂ ಏನೇನೂ ವ್ಯತ್ಯಾಸವಿಲ್ಲ. ಇಡೀ ಕುವೆಂಪು ಯೂನಿವರ್ಸಿಟಿ ಈ ರೀತಿ ಮಾಡುತ್ತಿದೆ ಎಂದು ಹೇಳುತ್ತಿಲ್ಲ. ಆ ಯೂನಿವರ್ಸಿಟಿಯ ಕೆಲವು ಪ್ರೊಫೆಸರ್‌ಗಳು ತಾವೇ ಬಹಳ ಬುದ್ಧಿವಂತರು ಅಂದಕೊಂಡು ಅಮಾಯಕ ಬಡ ವಿದ್ಯಾರ್ಥಿಗಳನ್ನು ಶ್ರೀಮಂತವರ್ಗದ ವಿರುದ್ಧ ಎತ್ತಿ ಕಟ್ಟುವಂಥದ್ದು ಅಲ್ಲಿ ಗಲಭೆಯನ್ನು ಮಾಡಿ ಉಗ್ರಗಾಮಿಗಳನ್ನು ನಿರ್ಮಾಣ ಮಾಡುತ್ತಾರೆಂಬ ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೋ ನಾನು ಅದರ ಬಗ್ಗೆ ಹೇಳುತ್ತಾ ಈ ರೀತಿಯಾಗಿ ಬರೀ ಹೇಳಿಕೆಯನ್ನು ಕೊಡುವುದಲ್ಲ ಏತಕ್ಕಾಗಿ ಆ್ಯಕ್ಷನ್‌ನನ್ನು ತೆಗೆದುಕೊಂಡಿಲ್ಲವೆಂಬುದರ ಬಗ್ಗೆ ನಾನು ಹೇಳಿದೆ. ನಾನು ಅದಕ್ಕೋಸ್ಕರವಾಗಿಯೇ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನೇರವಾಗಿ ನಿಮ್ಮೆದುರಿಗೆ ಆರೋಪವನ್ನು ಮಾಡಿದ್ದು, ನೀವು ಮುಖ್ಯಮಂತ್ರಿಯಾಗಿರುವುದಕ್ಕೆ ಎಷ್ಟರ ಮಟ್ಟಿಗೆ ಸರಿ ಎಂದು ಯೋಚನೆಯನ್ನು ಮಾಡಿ, ಇಲ್ಲದಿದ್ದರೆ ರಾಜೀನಾಮೆಯನ್ನು ಕೊಡಿ ಎಂದು ನಾನು ನಿಮ್ಮೆದುರಿಗೆ ಹೇಳಿರುವುದು ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಸುಮ್ಮಸುಮ್ಮನೆ ಕೇಳುವುದಕ್ಕೆ ಆಗುತ್ತದೆಯಾ? ಇದು ಮುಖ್ಯಮಂತ್ರಿಗಳು ಮಾಡಿರುವಂತಹ ಹೇಳಿಕೆ, ಗುಪ್ತಚಾರ ಇಲಾಖೆ ಅವರ ಕೈಯಲ್ಲಿ ಇಲ್ಲಾ. ಆ ಗುಪ್ತಚಾರ ಇಲಾಖೆಯಿಂದ ಬಂದಂತಹ ವರದಿಯನ್ನು ಇಡೀ ರಾಜ್ಯದ ಜನರ ಗಮನಕ್ಕೆ ತಂದಿರುವುದರ ಬಗ್ಗೆ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು ಹಿಂದೆಮುಂದೆ ನೋಡಲಿಲ್ಲ, ಇದರ ಬಗ್ಗೆ ಇವತ್ತು ತೀರ್ಮಾನವಾಗಬೇಕಾಗಿದೆ, ಆ ಬುದ್ಧಿಜೀವಿಗಳು ಎಂದು ಹೇಳಿಕೊಂಡಿರುವಂತಹ ವ್ಯಕ್ತಿಗಳು, ನಾವೇ ಬಹಳ ವಿದ್ಯಾವಂತರು, ಪ್ರೊಫೆಸರ್‌ಗಳು ಅಂದುಕೊಂಡ ನಕ್ಸಲೈಟ್ಸ್ ಚಟುವಟಿಕೆಯನ್ನು ಮಾಡುವಂತಹ ಸಂದರ್ಭದಲ್ಲಿ ಅವರನ್ನು ತಕ್ಷಣ ಅರೆಸ್ಟ್ ಮಾಡಿ ಬಂಧಿಸಿ ಜೈಲಿಗೆ ಕಳುಹಿಸಬೇಕು, ಅವರಿಗೆ ಉಗ್ರವಾದಂತಹ ಶಿಕ್ಷೆಯನ್ನು ಕೊಟ್ಟ ನಂತರ ಹೌದು-ಈ ರಾಜ್ಯದ ಮುಖ್ಯಮಂತ್ರಿಗಳು ಸರಿಯಾದ ದಿಟ್ಟ ಹೆಜ್ಜೆಯನ್ನು ಇಟ್ಟಿದ್ದಾರೆ ಎಂದು ನಾವೆಲ್ಲರೂ ಅಭಿನಂದಿಸುತ್ತೇವೆ. ಆಗಲೇ ಶುರುವಾಯಿತು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ ತಕ್ಷಣ ಮಾನ್ಯ ಮಂಜುನಾಥ ಸಚಿವರು ಏನು ಹೇಳಿದರು, ನಾವು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ಸರಿ ಎನ್ನಬೇಕೋ? ಸಚಿವರು ಶ್ರೀ ಮಂಜುನಾಥ್ ಹೇಳಿದ್ದು ಸರಿ ಎನ್ನಬೇಕೋ? ಅಥವಾ ಕಾಂಗ್ರೆಸ್, ಜನತಾದಳದ ಬೇರೆ ಬೇರೆ ಭಾವನೆ ಇದೆಯೆಂದು ಹೇಳಬೇಕೋ. ಇಡೀ ಮಂತ್ರಿಮಂಡಲ ಒಂದು ಎಂದು ನಾವು ಯೋಚನೆ ಮಾಡಿಕೊಂಡಿದ್ದೇವೆ. ನೀವೂ ಅದೇ ರೀತಿ ಯೋಚನೆ ಮಾಡಿದ್ದೀರಿ. ಹೀಗಾಗಿ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡುವುದೇನೆಂದರೆ, ತಾವು ನಕ್ಸಲೀಯರನ್ನು ಸದೆಬಡಿಯಲಿಕ್ಕೆ ಏನು ದಿಟ್ಟವಾದ ಹೆಜ್ಜೆಯನ್ನು ಇಡುವ ತೀರ್ಮಾನ ಕೈಗೊಂಡಿದ್ದೀರಿ, ಹಾಗೆ ಪೋಲೀಸ್ ಇಲಾಖೆಯ ವ್ಯಕ್ತಿಗಳಿಗೆ ಸರಿಯಾದ ಶಸ್ತ್ರಾಸ್ತ್ರಗಳನ್ನು ತಾವು ದಯವಿಟ್ಟು ಕೊಡಿ, ಉಗ್ರಗಾಮಿಗಳ ಹತ್ತಿರವಿರುವಂತಹ ಶಸ್ತ್ರಾಸ್ತ್ರ ಎ.ಕೆ.47 ನಕ್ಸಲೈಟ್ಸ್ ಬಳಿಯಿದೆ, ತಮ್ಮ ಜೀವದ ಹಂಗು ತೊರೆದು ಹೋಗುವಂತಹ ಪೋಲೀಸ್ ವ್ಯಕ್ತಿಗಳಿಗೆ ಹಳೆಯ ಕಾಲದ ಟಿಪ್ಪು ಸುಲ್ತಾನ್ ಕಾಲದ ಹಳೆಯ ಬಂದೂಕುಗಳು ಇವೆ. ಇದರ

ಪರಿಣಾಮವೇನಾಯಿತು? ಇಬ್ಬರು ನಕ್ಸಲೈಟ್ಸ್ ಕೊಲೆಯಾದ ತಕ್ಷಣ ನಕ್ಸಲೈಟ್ಸ್ ತಮ್ಮ ಬಳಿ ಶಕ್ತಿ ಇಲ್ಲವೆಂದು ತಿಳಿಯದೆ ಮುಖ್ಯಮಂತ್ರಿಗಳ ಮನೆಯ ಬಳಿ ಬಂದರು. ಅಲ್ಲಿ ಆ ಗದ್ದರ್, ವರವರ್‌ರಾವ್ ಅವರೆಲ್ಲಾ ಏನು ಹೇಳಿದರು, ನೇರವಾಗಿ ಹೇಳಿಕೆ ಕೊಟ್ಟರು, ಕೊಲೆಗೆ ಕೊಲೆಯಿಂದ ಉತ್ತರ, ಬಂದೂಕಿನಿಂದ ನಾವು ಉತ್ತರವನ್ನು ಕೊಟ್ಟು ತೋರಿಸುತ್ತೇವೆ. ಮಾನ್ಯ ಮುಖ್ಯಮಂತ್ರಿಗಳ ಮನೆಯ ಮುಂದೆ ಬಂದು ಸ್ವತಃ ಕೂತು ಭಯದ ಮಾತುಗಳನ್ನಾಡಿದಾಗ ಅಂಥ ರಾಷ್ಟ್ರದ್ರೋಹಿಗಳನ್ನು ಕಾನೂನಿನ ಪ್ರಕಾರ ಅವರನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕಬೇಕಾಗಿತ್ತು. ಅಂದರೆ ಯಾರೂ ಏನೂ ಬೇಕಾದರೂ ಮಾತನಾಡಬಹುದೇನೋ? ಈ ಕರ್ನಾಟಕ ರಾಜ್ಯ ಶಾಂತಿಯ ಧಾಮ ಎಂದು ತೀರ್ಮಾನ ಮಾಡಿಕೊಂಡಿರುವ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳು ಇಬ್ಬರು ನಕ್ಸಲೈಟ್ಸ್ ಅನ್ನು ಕೊಲೆ ಮಾಡಿದಾಗ, ಮಾನ್ಯ ಮುಖ್ಯಮಂತ್ರಿಗಳ ಮನೆ ಮುಂದೆ ಬಂದು ಅವರು ಹೇಳಿಕೆ ಕೊಡುತ್ತಾರೆ ಏನೆಂದರೆ ಬಂದೂಕಿನಿಂದ ಉತ್ತರ ಕೊಡುತ್ತೇವೆಂದು ಹೇಳಿದಂತಹ ವ್ಯಕ್ತಿಗಳು ಇನ್ನೂ ಜೀವಂತವಾಗಿದ್ದಾರಲ್ಲಾ ಅವರ ಹೇಳಿಕೆಯನ್ನು ಇಡೀ ರಾಜ್ಯದ ಯುವಕರು ಯೋಚನೆ ಮಾಡಬೇಕು. ಏನು ಬೇಕಾದರೂ ಹೇಳಬಹುದು ಎಂದು ತೀರ್ಮಾನ ಮಾಡಿ ನಿಮ್ಮ ಮನೆಯ ಮುಂದೆ ಬಂದು ನಿಮಗೆ ಸವಾಲು ಹಾಕಿ ರಾಜ್ಯದಲ್ಲಿ ಇವತ್ತು ನಮ್ಮನ್ನು ಏನೂ ಮಾಡಿಕೊಳ್ಳಲು ಆಗುವುದಿಲವೆಂಬ ಭಾವನೆ ನಿರ್ಮಾಣ ಮಾಡುತ್ತಿರುವ ಈ ನಕ್ಸಲೈಟ್ಸ್ ಬಗ್ಗೆ ನೀವು ಏನು ತೀರ್ಮಾನ ತೆಗೆದುಕೊಂಡಿದ್ದೀರಿ? ಅಲ್ಲಿ ಇಬ್ಬರು ನಕ್ಸಲೈಟ್ಸ್ ಕೊಲೆಯಾದ ತಕ್ಷಣ ಇಲ್ಲಿ ಪಾವಗಡದಲ್ಲಿ ಇಬ್ಬರು ಪೋಲೀಸರು ಏನು ತಪ್ಪು ಮಾಡಿದರು, ಅವರು ಕೊಲೆಯಾದರು, ಸತ್ತ ಮನೆಗೆ ಪರಿಹಾರ, ಎಷ್ಟು ಪರಿಹಾರ? ಒಂದು ವ್ಯಕ್ತಿಗೆ 2.00 ಲಕ್ಷ, 5.00,ಲಕ್ಷ ರೂಪಾಯಿ; 10.00 ಲಕ್ಷ ರೂಪಾಯಿ ಕೊಟ್ಟುಬಿಟ್ಟರೆ ಪರಿಹಾರವೇ ಅದು? ಈ ರೀತಿಯ ನಕ್ಸಲೈಟ್ಸ್‌ಗೆ ಸರಿಯಾದ ಉತ್ತರವನ್ನು ಈ ರಾಜ್ಯದಲ್ಲಿ ಕೊಡುತ್ತಿದ್ದಾರೆಂದು ತೀರ್ಮಾನವಾಗಬೇಕಾದರೆ ಯಾರು ನಿಮ್ಮ ಮನೆಯ ಮುಂದೆ ಬಂದು ಸವಾಲನ್ನು ಹಾಕುತ್ತಿರುವಂಥ ವ್ಯಕ್ತಿಗಳಿದ್ದಾರೆ ಇವತ್ತೇ ಅವರುಗಳನ್ನು ಅರೆಸ್ಟ್ ಮಾಡಿ. ಸರಿಯಾದ ಶಿಕ್ಷೆಯನ್ನು ಕೊಟ್ಟಾಗ ಭಲೇ ಕರ್ನಾಟಕ ರಾಜ್ಯದಲ್ಲಿ ಕೂಡ ಸರಿಯಾದ ಸರ್ಕಾರ ಇದೆಯೆಂದು ಜನ ನಿಮ್ಮನ್ನು ಮೆಚ್ಚುತ್ತಾರೆ. ಕುವೆಂಪು ವಿಶ್ವವಿದ್ಯಾನಿಲಯ ಇವತ್ತು ಉಗ್ರವಾದಿಗಳ, ನಕ್ಸಲ್‌ವಾದಿಗಳ ಕೇಂದ್ರವಾಗಿದೆಯೆಂದು ಹೇಳಿಕೆ ಕೊಡುವುದು ಈ ರೀತಿಯ ಗದ್ದರ್, ವರವರ್‌ರಾವ್ ಅಂತಹವರು ರಾಜ್ಯದ ಮುಖ್ಯ ಮಂತ್ರಿಗಳಿಗೆ ಸವಾಲು ಹಾಕಿ ಹೋಗುವುದು, ಇಷ್ಟೆಲ್ಲಾ ಕರ್ನಾಟಕ ರಾಜ್ಯದಲ್ಲಿ ಆಗುತ್ತಿದ್ದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ ಅಂದರೆ ನಿಮ್ಮ ಬಗ್ಗೆ ಯಾವ ವಿಶ್ವಾಸ ಬರುತ್ತದೆ. ಮಾನ್ಯ ಅಧ್ಯಕ್ಷರೇ ನಿಮ್ಮ ಮುಖಾಂತರ ರಾಜ್ಯದ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ, ಏನೆಂದರೆ ರಾಜ್ಯದ ಜಿಲ್ಲಾಧಿಕಾರಿಯೊಬ್ಬರು ಈ ರೀತಿಯ ನಕ್ಸಲ್‌ವಾದಿಗಳ ಚಟುವಟಿಕೆ ನಡೆಯುತ್ತಿರುವ ಸಂದರ್ಭದಲ್ಲಿ ಅವರಿಗೆ ಈ ಚಟುವಟಿಕೆ ಬಗ್ಗೆ ಎಷ್ಟರಮಟ್ಟಿಗೆ ನಕ್ಸಲ್‌ವಾದಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಕಳಕಳಿ ಇದೆ ಎಂಬ ಬಗ್ಗೆ ತೋರಿಸಲಿಕ್ಕೆ ನಾನು ನಿಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಫೋಟೋ ಕಳುಹಿಸಲಿಕ್ಕೆ ಇಚ್ಛಿಸುತ್ತೇನೆ. ಇದನ್ನು ತಾವು ಗಮನಿಸಬೇಕು ಜಿಲ್ಲಾಧಿಕಾರಿಗಳು ಜಿಲ್ಲಾ ಪರಿಷತ್ತಿನ ಕಚೇರಿಯಲ್ಲಿ ಡ್ಯಾನ್ಸ್ ಮಾಡುತ್ತಿದ್ದಾರೆ. ಹೆಂಗಸರ ಜೊತೆ ಸೇರಿ ಡ್ಯಾನ್ಸ್ ಮಾಡುತ್ತಿರುವ ಫೋಟೋ ನಿಮಗೆ ಕೊಡುತ್ತಿದ್ದೇನೆ. ದಯವಿಟ್ಟು ಗಮನಿಸಬೇಕು.

ಶ್ರೀ ಸಿ.ಟಿ.ರವಿ : ಕಚೇರಿಗಳಿಗೆ ಒಂದೊಂದು ಲೈವ್‌ಬ್ಯಾಂಡ್ ಲೈಸೆನ್ಸ್ ಕೊಡಬೇಕು, ಏಕೆಂದರೆ ಡ್ಯಾನ್ಸ್ ಮಾಡಲಿಕ್ಕೆ ಪರ್ಮಿಷನ್ ಸಿಕ್ಕಿದ ಹಾಗೆ ಆಗಿದೆಯಲ್ಲಾ. ಇನ್ನು ಇವರು ಲೈವ್‌ಬ್ಯಾಂಡ್ ನಿಲ್ಲಿಸೋದು ಎಲ್ಲಿ ಬಂತು? ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗಾಂಧಿ, ಅಂಬೇಡ್ಕರ್, ನಜೀರ್‌ಸಾಬ್ ಇವರ ಫೋಟೋ ಇಟ್ಕೊಂಡು ಅದರ ಕೆಳಗೆ ಚಿಕ್ಕಮಗಳೂರು ಜಿಲ್ಲೆ ಜಿಲ್ಲಾಧಿಕಾರಿಯವರು ಡ್ಯಾನ್ಸ್ ಮಾಡಿದ್ದಾರೆ. ಇವರನ್ನು ಮಾನ್ಯ ಮುಖ್ಯಮಂತ್ರಿಗಳು ಬಹಳ ಒಳ್ಳೆಯವರು ಎಂದು ಸಮರ್ಥಿಸಿಕೊಳ್ಳುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ದುರ್ದೈವ ಎಂದರೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಈ ಡಿ.ಸಿ.ಬಗ್ಗೆ ಬಹಳ ಗೌರವವಿದೆ. ನಾವು ಯಾರೂ ಏನೂ ಹೇಳಿದರೂ ಒಪ್ಪುವುದಿಲ್ಲ. ಸ್ವಲ್ಪ ಫೋಟೋ ನೋಡಿ; ಆ ಫೋಟೋ ನೋಡಿ ಮಾತನಾಡಿ.

ಶ್ರೀ ಧರಂಸಿಂಗ್ : ಈಶ್ವರಪ್ಪನವರೇ ಸದನದಲ್ಲಿ ತಾವಿದ್ದೀರಿ, ತಾವು ಡಿ.ಸಿ.ಬಗ್ಗೆ ಹೇಳುತ್ತಿದ್ದೀರಿ ಹಾಗೆಯೇ ಚಿಕ್ಕಮಗಳೂರು ಡಿ.ಸಿ.ಏನು ಕೆಲಸ ಮಾಡಿದ್ದಾರೆ ಅದನ್ನು ನಾನು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಶಂಸೆ ಮಾಡಬೇಕಾಗುತ್ತದೆ. ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ. ನಾವು ಫೋಟೋ ನೋಡಿದ್ದೇವೆ. ಕೌನ್ಸಿಲ್‌ನಲ್ಲಿ ಈ ಫೋಟೋ ಬಗ್ಗೆ ಚರ್ಚೆ ಬಂತು, ನಾವೆಲ್ಲಾ ವರದಿಯನ್ನು ತರಿಸಿದ್ದೇವೆ. ಅಲ್ಲಿ ಕೂಡ ಈ ವಿಚಾರ ಚರ್ಚೆಯಾಗಿದೆ, ಆ ಬಗ್ಗೆ ಉತ್ತರದಲ್ಲಿ ಹೇಳುತ್ತೇನೆ.

ಶ್ರೀ ಎಸ್.ರಾಜೇಂದ್ರನ್ : ಈಗ ಫೋಟೋದಲ್ಲಿ ಡಿ.ಸಿ. ಡ್ಯಾನ್ಸ್ ಮಾಡುತ್ತಿದ್ದಾರೆ. ಅವರು ಮನುಷ್ಯರು ತಾನೇ ಯಾಕೆ ಡ್ಯಾನ್ಸ್ ಮಾಡಬಾರದು? ಅವರಿಗೂ ಹೃದಯ ಇದೆ, ಅವರಿಗೂ ಖುಷಿ ಇದೆ ಅವರು ಮನುಷ್ಯರು ಅಲ್ಲವೇ ಹ್ಯಾಪಿಯಾಗಿ ಇರಲಿಬಿಡಿ.

ಶ್ರೀ ಸಿ.ಟಿ.ರವಿ : ಅವರು ಬೇರೆ ಕಡೆ ಡ್ಯಾನ್ಸ್ ಮಾಡಿದ್ದಾರೆ ನಾನು ಪ್ರಶ್ನೆ ಮಾಡುತ್ತಿರಲಿಲ್ಲ, ಅವರು ಡ್ಯಾನ್ಸ್ ಮಾಡಿರುವುದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ, ನಾಳೆ ವಿಧಾನಸೌಧ ಸಭಾಂಗಣದಲ್ಲಿ ಡಾನ್ಸ್ ಮಾಡಲಿಕ್ಕೆ ಅವಕಾಶ ಇದೆ ಎಂದಾದರೆ ಅವರು ಮಾಡಿದ್ದು ಸರಿ ಎಂದು ಸರ್ಟಿಫಿಕೇಟ್ ಕೊಡಲಿ, ಯಾವ ಸಂದರ್ಭದಲ್ಲಾದರೂ ಅವರು ಡಾನ್ಸ್ ಮಾಡಬಹುದು.

ಶ್ರೀ ಕೆ.ಎಸ್.ಈಶ್ವರಪ್ಪ : ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಈ ರೀತಿಯಾದ ಉತ್ತರವನ್ನು ನಿರೀಕ್ಷಿಸಿರಲಿಲ್ಲ. ಇನ್ನು ನಾನು ಮಾತನಾಡುವುದಿಲ್ಲ, ನಮಸ್ಕಾರ.

ಶ್ರೀ ಧರಂಸಿಂಗ್ : ಈಶ್ವರಪ್ಪನವರು ಯಾಕೆ ತಮ್ಮ ಭಾಷಣವನ್ನು ಮೊಟಕುಗೊಳಿಸಿದಿರಿ.

ಶ್ರೀ ಕೆ.ಎಸ್.ಈಶ್ವರಪ್ಪ : ಅಂತಹ ಬಗ್ಗೆ ತಾವು ಪ್ರಶಂಸೆ ಮಾತನಾಡುತ್ತೀರಿ, ಅವರ ಪರವಾಗಿ ಮಾತನಾಡುತ್ತೀರಿ, ಇದನ್ನು ಹೇಳಲಿಕ್ಕೆ ವಿಧಾನಸಭೆ ಬೇಕೇ?

(ಗೊಂದಲ)

ಶ್ರೀ ಧರಂಸಿಂಗ್ : ನೀವು ಒಬ್ಬ ಜಿಲ್ಲಾಧಿಕಾರಿಯನ್ನು ಹೇಗೆ ಎಂದು ಕರೆದು ಮಾತನಾಡುತ್ತೀರಿ?

ಶ್ರೀ ಕೆ.ಎಸ್.ಈಶ್ವರಪ್ಪ : ಮತ್ತೆ ಅವರನ್ನು ಏನಂತ ಕರೆಯಬೇಕು? ಜಿಲ್ಲಾಧಿಕಾರಿ ಮಾಡುವಂತಹ ವೃತ್ತಿಯೇ ಇದು, ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಡ್ಯಾನ್ಸ್ ಮಾಡುವುದು ಎಷ್ಟರ ಮಟ್ಟಿಗೆ ಸರಿ? ನಾವು ಮಾತನಾಡುವುದಿಲ್ಲ, ನೀವೇ ಮಾತನಾಡಿ.

(ಗೊಂದಲ)

ಶ್ರೀ ಧರಂಸಿಂಗ್ : ಈ ತರಹ ವಾದವಿವಾದ ಮಾಡಿದರೆ ಅದಕ್ಕೆ ಏನೂ ಪರಿಹಾರವಿಲ್ಲ, ನೀವು ಏನಾದರೂ ಹೇಳಿ, ಒಬ್ಬ ಜಿಲ್ಲಾಧಿಕಾರಿ ಕೆಲಸ ಮಾಡುತ್ತಿದ್ದಾರೆ, ಯಾವುದೋ ಒಂದು ಚಿತ್ರ ತಂದು ಅವರ ಮೇಲೆ ಕ್ರಮ ತೆಗೆದುಕೊಳ್ಳಿ, ಆತ ಎಂದು ಹೇಳಿದರೆ It is very unfair ನೀವು ವಿರೋಧಪಕ್ಷದ ನಾಯಕರಾಗಿ ಬಹಳ ದಿವಸ ಕೆಲಸ ಮಾಡಿದ್ದೀರಿ, ಸ್ವಲ್ಪ ಮಾತನಾಡುವಾಗ ಸಂಯಮದಿಂದ ಸಂಸದೀಯ ಪದವನ್ನು ಬಳಸಬೇಕು ಅನ್ನುವುದು ಇಲ್ಲದಿದ್ದರೆ ನೀವು ಮಾತನಾಡುವುದರಲ್ಲಿ ಏನರ್ಥ ಇದೆ?

ಶ್ರೀ ಕೆ.ಎಸ್.ಈಶ್ವರಪ್ಪ : ನಾನು ಪದ ಬಳಸಿದ್ದೇನೆ, ಆದರೆ ಆತ ಅದೇ ರೀತಿ ವ್ಯವಹಾರ ಮಾಡಿದ್ದಾನೆ, ಒಬ್ಬ ಜಿಲ್ಲಾಧಿಕಾರಿ ಮಾಡುತ್ತಿರುವ ದ್ರೋಹದ ಬಗ್ಗೆ ನೂರು ಭಾರಿ ಹೇಳಿದ್ದೇವೆ. ಶಾಸಕರಿಗೆ ಆಗುತ್ತಿರುವ ಅವಮಾನದ ಬಗ್ಗೆ ನೂರು ಭಾರಿ ನಿಮಗೆ ಹೇಳುತ್ತೇವೆ. ನೀವು ಕೇಳುತ್ತಲೇ ಇರುತ್ತೀರಿ ಎಂದು ನಾವು ಅವರ ದ್ರೋಹದ ಬಗ್ಗೆ ಹೇಳಲಿಕ್ಕೆ ಎಂದು ವಿಧಾನಸೌಧಕ್ಕೆ ಬರಬೇಕೆ? ಈ ಬಗ್ಗೆ ನಿಮಗೆ ಗೊತ್ತಿಲ್ಲವೇ? ನಾನು ಎರಡು ವಿಚಾರಗಳ ಬಗ್ಗೆ ಹೋದಲ್ಲೆಲ್ಲಾ ಅಭಿನಂದನೆ ಸಲ್ಲಿಸಿದೆ. ಏಕೆಂದರೆ, ತಾವು ಇಲ್ಲಿ ಬಹಳ ಬಲವಾದ, ಧೈರ್ಯವಾಗಿ ಒಂದು ಹೇಳಿಕೆ ಕೊಟ್ಟಿರಿ. ಎಸ್.ಟಿ.ಎಫ್.ನ್ನು ಬಳಸಿ ಆ ನಕ್ಸಲ್‌ವಾದಿಗಳು, ಯಾರು ಉಗ್ರವಾದಿಗಳು ಇದ್ದಾರೆ, ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಇಡೀ ನಮ್ಮ ಜಿಲ್ಲೆಯಲ್ಲಿ ಹೇಳಿಕೊಳ್ಳುತ್ತಾ ಬಂದೆವು. ನಮ್ಮ ಮುಖ್ಯಮಂತ್ರಿ ಅಷ್ಟು ಸುಲಭವಾಗಿ ಬಿಡುವುದಿಲ್ಲ, ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳಿಕೊಂಡು ಬಂದೆವು. ಆದರೆ, ಎರಡು ದಿನಕ್ಕೆ ಬದಲಾವಣೆಯಾಯಿತು ಯೂನಿವರ್ಸಿಟಿಯಲ್ಲಿ ಕೆಲವು ಪ್ರೊಫೆಸರುಗಳು, ಬುದ್ಧಿಜೀವಿಗಳು ಎಂದುಕೊಂಡಿರುವಂಥ ವ್ಯಕ್ತಿಗಳು ಆ ಬಡ ವಿದ್ಯಾರ್ಥಿಗಳನ್ನು, ಅವರ ಬಡತನವನ್ನು ದುರುಪಯೋಗ ಮಾಡಿಕೊಂಡು ನಕ್ಸಲ್‌ವಾದಿಗಳನ್ನು ಅವರು ಮಾಡುತ್ತಾ ಇದ್ದಾರೆ. ತಾವು ಹೇಳಿಕೆ ಕೊಟ್ಟಿರಿ. ಇಲ್ಲಿ ನಕ್ಸಲ್‌ವಾದಿಗಳ ತಾಣ ಆಗುತ್ತಾ ಇದೆ, ಇದರ ಬಗ್ಗೆ ನಾವು ಬಿಡುವುದಿಲ್ಲ ಎಂದು. ಇವತ್ತಿನ ತನಕ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ನಮ್ಮ ಶಾಸಕ ರವಿಯವರು ಅವತ್ತಿನಿಂದ ಇವತ್ತಿನ ತನಕ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಜಿಲ್ಲಾಧಿಕಾರಿಗಳು ಪ್ರತಿ ಬಾರಿಯೂ ಏನೇನು ತೊಂದರೆ ಕೊಟ್ಟಿದ್ದಾರೆಂದು ನಿಮ್ಮ ಗಮನಕ್ಕೆ ಮೇಲಿಂದ ಮೇಲೆ ತಂದಿದ್ದೇವೆ. ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಬರೀ ಹೇಳಿಕೆಯನ್ನೇ ಕೊಡುವುದೇ? ಕೊನೆಗೆ ಎಲ್ಲಿಯತನಕ ಬಂತು. ತಾವು ಕೊಟ್ಟಂಥ ಹೇಳಿಕೆಯ ನಂತರ, ಮಾನ್ಯ ಮಂಜುನಾಥರವರು ಸ್ಟೇಟ್‌ಮೆಂಟ್ ಕೊಟ್ಟರು ಅಲ್ಲೇನೂ ಚಟುವಟಿಕೆ ಇಲ್ಲ ಎಂದು ನಾವು ಯಾರದನ್ನು ನಂಬೋಣ. ನಿಮ್ಮ ಸ್ಟೇಟ್‌ಮೆಂಟ್ ಅನ್ನು ನಂಬೋಣವೇ? ಮಾನ್ಯ ಸಚಿವರಾದ ಮಂಜುನಾಥ ಸ್ಟೇಟ್‌ಮೆಂಟ್‌ಅನ್ನು ನಂಬೋಣವೇ? ಇವತ್ತು ಸನ್ಮಾನ್ಯ ಅಧ್ಯಕ್ಷರ ಮುಖಾಂತರ, ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇವೆ. ಈ ನಕ್ಸಲ್‌ವಾದಿಗಳ ವಿರುದ್ಧವಾಗಿ ಸರ್ಕಾರ ಯಾವುದೇ ದಿಟ್ಟ ಹೆಜ್ಜೆ ಇಟ್ಟಾಗ, ಭಾರತೀಯ ಜನತಾ ಪಕ್ಷ ಸಂಪೂರ್ಣವಾಗಿ ನಿಮ್ಮ ಜೊತೆಗೆ ಇರುತ್ತೆ. ಪಕ್ಷ ಬೇಧ ಮರೆತು ನಾವು ನಿಮಗೆ ಸಹಕಾರ ಕೊಡುತ್ತೇವೆ. ಆದರೆ, ಈ ನಕ್ಸಲ್‌ವಾದಿಗಳ ಪ್ರಯತ್ನ ಏನಿದೆ ಆ ಗದ್ದರ್ ಇರಬಹುದು, ವರವರ್‌ರಾವ್ ಇರಬಹುದು, ಬೆಂಗಳೂರಿನಲ್ಲಿರತಕ್ಕ ಕೆಲವು ವ್ಯಕ್ತಿಗಳು ಪತ್ರಿಕಾ ಕ್ಷೇತ್ರ, ಪವಿತ್ರವಾದ ಕ್ಷೇತ್ರ. ಆ ಪವಿತ್ರವಾದ ಕ್ಷೇತ್ರದಲ್ಲಿ ಸಾವಿರಾರು ಜನ ಪತ್ರಕರ್ತರು, ಆ ಪವಿತ್ರವಾದ ಕ್ಷೇತ್ರವನ್ನು ಪೂಜೆ ಮಾಡುವಂಥ ದೇವಸ್ಥಾನದ ಸ್ಥಾನದಲ್ಲಿಟ್ಟಿದ್ದಾರೆ: ಎಲ್ಲಾ ಪತ್ರಕರ್ತರೂ ಇದೇ

ರೀತಿಯಲ್ಲಿದ್ದಾರೆ ಎಂದಲ್ಲ. ಕೆಲವು ಪತ್ರಕರ್ತರು, ಆ ನಕ್ಸಲ್‌ವಾದಿಗಳ ಕೃತ್ಯವನ್ನು ವೈಭವೀಕರಿಸಿದರು. ಸರ್ಕಾರದಿಂದ ಏನೂ ಹೇಳಿಕೆ ಬರಲಿಲ್ಲ. ನಾನು ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದು ಇಷ್ಟೆ; ಆ ವಿಚಾರದಲ್ಲಿ ರಾಜಕಾರಣ ಮಾಡುವುದಕ್ಕೆ ನಾವು ತಯಾರಿಲ್ಲ. ಯಾವ ಜಿಲ್ಲಾಧಿಕಾರಿಗಳು ತಪ್ಪು ಮಾಡಿದ್ದಾರೆ, ನೇರವಾಗಿ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಿ. ನಮ್ಮ ಶಾಸಕರು ತಪ್ಪು ಮಾಡಿದ್ದರೆ ಹೇಳಿ, ನಾವು ನಮ್ಮ ಶಾಸಕರನ್ನು ತಿದ್ದುತ್ತೇವೆ. ಜನಸಾಮಾನ್ಯರಿಂದ ಚುನಾವಣೆಯಲ್ಲಿ ಗೆದ್ದುಬಂದಂಥ ಸಿ.ಟಿ.ರವಿಯವರು ಹಗಲು ರಾತ್ರಿ ಹೋರಾಟ ಮಾಡಿದರೆ ಅವರ ಬಗ್ಗೆ ಹಗುರವಾಗಿ ಯೋಚನೆ ಮಾಡುತ್ತಾರೆ ಸನ್ಮಾನ್ಯ ಜಿಲ್ಲಾಧಿಕಾರಿಯವರು. ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ನಡೆದಿರುವುದನ್ನು ಫೋಟೋ ಸಮೇತ ಕೊಟ್ಟರೂ ಸಹಿತ, ಅದರ ಬಗ್ಗೆ ಇವರು ಈ ರೀತಿ ಹೇಳುತ್ತಿದ್ದಾರೆ. ಅದಕ್ಕೋಸ್ಕರ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದು ಇಷ್ಟೆ. ನಿಮ್ಮ ಬಗ್ಗೆ ಸಂಪೂರ್ಣ ಗೌರವ ನಮಗಿದೆ. ತಾವು ಅನೇಕಬಾರಿ ದಿಟ್ಟ ಹೆಜ್ಜೆ ಇಟ್ಟನಂತರವೂ ಕೂಡ ಯಾರೋ ನಿಮ್ಮನ್ನು ದಾರಿ ತಪ್ಪಿಸುವಂಥ ಪ್ರಯತ್ನ ನಡೆಸುತ್ತಿದ್ದಾರೆ. ಇದನ್ನು ತಾವು ದಯವಿಟ್ಟು ಬಹಳ ಸೀರಿಯಸ್ಸಾಗಿ ಯೋಚನೆ ಮಾಡಿ. ತಾವು ತೆಗೆದುಕೊಂಡಂಥ ದಿಟ್ಟ ಹೆಜ್ಜೆಗಳು ಒಂದು ದಿನಕ್ಕೆ, ಎರಡು ದಿನಕ್ಕೆ ಏಕೆ ಬದಲಾವಣೆಯಾಗುತ್ತೆ? ಶಿವಮೊಗ್ಗ ಚಿಕ್ಕಮಗಳೂರು, ಉಡುಪಿ ಮತ್ತು ಮಂಗಳೂರು ಜಿಲ್ಲೆಯ ಸುತ್ತಮುತ್ತಲೂ ಕೂಡ ನೀವು ಕೊಟ್ಟಂಥ ಹೇಳಿಕೆಗೆ ಎಲ್ಲರೂ ಮೆಚ್ಚುಗೆ ವ್ಯಕ್ತಮಾಡಿದರು. ಮುಖ್ಯಮಂತ್ರಿಗಳು ಬಹಳ ಒಳ್ಳೆಯ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದರು. ಆದರೆ, ನಿಮ್ಮ ಹೇಳಿಕೆ ಎರಡು ದಿನಕ್ಕೆ ಬದಲಾವಣೆಯಾಗುತ್ತೆ. ಕುವೆಂಪು ಯೂನಿವರ್ಸಿಟಿಯಲ್ಲಿ ಯಾವ ವ್ಯಕ್ತಿಗಳು ಇಡೀ ಯೂನಿವರ್ಸಿಟಿಯಲ್ಲ, ಬುದ್ಧಿಜೀವಿಗಳು ಎಂದು ಮಾಡುತ್ತಿರುವ ಪ್ರಯತ್ನಕ್ಕೆ ಸರಿಯಾದ ದಿಟ್ಟ ಕ್ರಮವನ್ನು ತೆಗೆದುಕೊಳ್ಳಬೇಕು. ನಕ್ಸಲ್‌ವಾದಿಗಳು ಎಂದು ಹೇಳಿಕೊಳ್ಳುತ್ತಿರುವಂಥ ಈ ಗದ್ದರ್ ಇರಬಹುದು, ವರವರ್‌ರಾವ್ ಇರಬಹುದು ಇಂತಹ ವ್ಯಕ್ತಿಗಳ ಬಗ್ಗೆ . . . . .

ಚೇರ್ಮನ್: ಮಾನ್ಯ ಈಶ್ವರಪ್ಪನವರೆ, ನೀವು ಕೇವಲ ಕುವೆಂಪು ಯೂನಿವರ್ಸಿಟಿಯನ್ನು ಮಾತ್ರ ಉಲ್ಲೇಖ ಮಾಡುತ್ತೀರೋ ಅಥವಾ ಬೇರೆ ಕಡೆಯಲ್ಲೂ ಉಲ್ಲೇಖ ಮಾಡುತ್ತೀರೋ?

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳು ಕುವೆಂಪು ಯೂನಿವರ್ಸಿಟಿ ಬಗ್ಗೆ ಮಾತ್ರ ಹೇಳಿದ್ದರು, ಅದಕ್ಕಾಗಿ ಅದರ ಬಗ್ಗೆ ಮಾತ್ರ ಹೇಳಿದೆ. ಉಳಿದಂತೆ ಅನೇಕ ಕಡೆ ನಡೆಯುತ್ತಾ ಇದೆ. ಹೀಗಾಗಿ, ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿಕೆ ಕೊಟ್ಟಿದ್ದರೋ ಆ ಹೇಳಿಕೆಗಳ ಬಗ್ಗೆ ಇಡೀ ರಾಜ್ಯದಲ್ಲಿ ಚರ್ಚೆಯಾಗುತ್ತಾ ಇದೆ. ಇವತ್ತು ಎಲ್ಲಾ ವಿರೋಧ ಪಕ್ಷಗಳೂ ಸೇರಿ, ನಕ್ಸಲ್‌ವಾದಿಗಳ ಈ ದುಷ್ಕೃತ್ಯದ ಬಗ್ಗೆ, ಯುವಕರನ್ನು ದಾರಿ ತಪ್ಪಿಸುತ್ತಿರುವ ಬಗ್ಗೆ ಈ ವಿಧಾನ ಮಂಡಲದ ಸಮಯವನ್ನು ತೆಗೆದುಕೊಳ್ಳುತ್ತಿರುವ ಉದ್ದೇಶ ಈ ಸರ್ಕಾರದ ಗಮನವನ್ನು ಸೆಳೆಯಬೇಕು, ಕರ್ನಾಟಕ ರಾಜ್ಯದಲ್ಲಿ ಈ ನಕ್ಸಲ್‌ವಾದಿಗಳ ಶಕ್ತಿ ಅಡಗಿಹೋಗಬೇಕೆಂಬ ಒಂದೇ ಒಂದು ಉದ್ದೇಶದಿಂದ ನಾವು ಇವತ್ತು ವಿಧಾನ ಮಂಡಲವನ್ನು ಬಳಸಿಕೊಳ್ಳುತ್ತಿದ್ದೇವೆ. ಹೀಗಾಗಿ, ನಾನು ತಮ್ಮ ಮುಖಾಂತರ ಈ ರಾಜ್ಯಸರ್ಕಾರಕ್ಕೆ ಹೇಳುವುದು ಇಷ್ಟೆ. ಇಡೀ ರಾಜ್ಯದ ಜನ ನಿಮ್ಮನ್ನು ನೋಡುತ್ತಾ ಇದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತೇನು ಉತ್ತರ ಕೊಡುತ್ತಾರೋ, ಈ ಉತ್ತರವನ್ನು ಇಡೀ ಕರ್ನಾಟಕ ರಾಜ್ಯ ನೋಡುತ್ತಾ ಇದೆ. ಬರುವಂಥ ದಿನಗಳಲ್ಲಿ ಈ ರಾಜ್ಯದಲ್ಲಿ ನಕ್ಸಲ್‌ವಾದಿಗಳ ದುಷ್ಕೃತ್ಯವನ್ನು ದಮನ ಮಾಡುತ್ತೇವೆ ಎನ್ನುವ ದಿಟ್ಟ ಉತ್ತರವನ್ನು ಈ ರಾಜ್ಯದ ಜನತೆಗೆ ಕೊಟ್ಟು, ಜನತೆಯ ಪ್ರಶಂಸೆಯನ್ನು

ಮಾನ್ಯ ಮುಖ್ಯಮಂತ್ರಿಗಳು ಪಡೆಯಬೇಕು ಎಂಬ ಆಸೆ ನಮ್ಮದಿದೆ. ಪೋಲೀಸ್ ಇಲಾಖೆಗೆ ಏನೇನು ಬೇಕು ಅದು ಆತ್ಮಸ್ಥೈರ್ಯ ತುಂಬುವುದು ಇರಬಹುದು, ಶಸ್ತ್ರಾಸ್ತ್ರಗಳನ್ನು ಕೊಡುವುದು ಇರಬಹುದು ಇವೆಲ್ಲವನ್ನೂ ನಾವು ಕೊಡುತ್ತೇವೆಂಬ ಮಾತನ್ನು ಹೇಳುವುದು ಇರಬಹುದು. ಮಾನ್ಯ ಮುಖ್ಯ ಮಂತ್ರಿಗಳೇ ತಿಳಿಸಿದ ಹಾಗೆ ಯಾವ ಯಾವ ಯೂನಿವರ್ಸಿಟಿಗಳಲ್ಲಿ ಈ ನಕಲಿ ಬುದ್ಧಿಜೀವಿಗಳೆಂಬ ವ್ಯಕ್ತಿಗಳು ನಕ್ಸಲ್‌ವಾದಿಗಳ ಪ್ರಯತ್ನಗಳಿಗೆ ಬೆಂಬಲ ಕೊಡುತ್ತಾರೋ ಅಂತಹವರ ಬಗ್ಗೆ ಉಗ್ರ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆಂಬ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳಿಂದ ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಆ ಗದ್ದರ್, ರವರವರಾವ್‌ರಂಥ ವ್ಯಕ್ತಿಗಳು ಯಾರಿದ್ದಾರೆ, ಅವರು ಎಲ್ಲೇ ಅಡಗಿಕೊಂಡಿದ್ದರೂ ಕೂಡ ಅಂತಹವರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಉತ್ತರವನ್ನು ಮುಖ್ಯಮಂತ್ರಿಗಳಿಂದ ನಿರೀಕ್ಷೆ ಮಾಡುತ್ತಾ ಇದ್ದೇವೆ. ಹುಡುಗಾಟ ಅಡಿಕೊಂಡಿರುವಂಥ ಜಿಲ್ಲಾಧಿಕಾರಿಗಳಂಥ ವ್ಯಕ್ತಿಗಳ ಬಗ್ಗೆ ಹುಷಾರ್ ಇರುವಂಥ ಉತ್ತರವನ್ನು ಜಿಲ್ಲಾಧಿಕಾರಿಗಳಿಗೆ ಕೊಡುತ್ತಾರೆಂಬ ನಿರೀಕ್ಷೆಯಲ್ಲಿದ್ದೇವೆ. ಹೀಗಾಗಿ ಇವತ್ತಿನ ಸನ್ಮಾನ್ಯ ಮುಖ್ಯಮಂತ್ರಿಗಳ ಉತ್ತರ ಮುಂದೆ ಕರ್ನಾಟಕ ರಾಜ್ಯದಲ್ಲಿ ಶಾಂತಿಯನ್ನು ನೆಲೆಸುವುದಕ್ಕೆ, ಒಂದು ರೀತಿಯ ರಣಕಹಳೆಯನ್ನು ಮಾನ್ಯ ಮುಖ್ಯಮಂತ್ರಿಗಳು ಊದಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್.ಪಾಟೀಲ್ (ಅಳಂದ್) : ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ನಾನೂ ಒಂದೆರಡು ವಿಚಾರಗಳನ್ನು ಮಾನ್ಯಸದಸ್ಯರ ಜೊತೆಗೆ ಹಂಚಿಕೊಳ್ಳಬೇಕೆಂದು ಬಯಸುತ್ತೇನೆ. ನಿನ್ನೆಯಿಂದ ಈ ಗಂಭೀರ ಸಮಸ್ಯೆ ಬಗ್ಗೆ ಮಾನ್ಯಸದಸ್ಯರೆಲ್ಲರೂ ತಮ್ಮದೇ ಆದಂಥ ವಿಚಾರಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ನಕ್ಸಲ್‌ವಾದಿಗಳ ಸಮಸ್ಯೆಯಂತು ಕರ್ನಾಟಕದಲ್ಲಿದೆ, ವಾಸ್ತವಿಕತೆಯನ್ನು ಯಾರೂ ಕೂಡ ಅಲ್ಲಗಳೆಯುವಂತಿಲ್ಲ.

ಚೇರ್ಮನ್ : ಮಾನ್ಯ ಸದಸ್ಯರೆ, ಐದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಬಿ.ಆರ್.ಪಾಟೀಲ್ : ಕೆಲವರು ಈ ವ್ಯವಸ್ಥೆಯಿಂದ ರೋಸಿ ಹೋಗಿ ಮತ್ತು ಈ ಸಂವಿಧಾನದ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಂಡು, ಅವರು ಬೇರೆ ಮಾರ್ಗವನ್ನು ಹಿಡಿದು ಹೊರಟಿದ್ದಾರೆ. ಅದಕ್ಕೆ ನಮ್ಮ ಯಾರದೂ ಒಪ್ಪಿಗೆ ಇಲ್ಲ. ಆದರೆ, ಈ ನಕ್ಸಲ್‌ವಾದಿಗಳ ಫಿಲಾಸಫಿ ಇದೆಯೆನ್ನುವುದನ್ನು ನಾವು ಯಾರೂ ಕೂಡ ಅಲ್ಲಗಳೆಯುವಂತಿಲ್ಲ. ಆದರೆ ನಾವು ಒಪ್ಪಲಿಕ್ಕಿಲ್ಲ. ಒಂದು ಫಿಲಾಸಫಿಯಂತೂ ಇದೆ. ಈಗ ಪ್ರಜಾಪ್ರಭುತ್ವ ಇರತಕ್ಕಂಥ ನಮ್ಮ ವ್ಯವಸ್ಥೆಯಲ್ಲಿ ಆ ಜನರನ್ನೂ ನಮ್ಮ ಜೊತೆಗೆ ತೆಗೆದುಕೊಂಡು ಹೋಗಬೇಕೆಂಬುದನ್ನು ಒಂದು ಪಾಸಿಟಿವ್ ದೃಷ್ಟಿಯಿಂದ ಯೋಚನೆ ಮಾಡಬೇಕೇ ಹೊರತಾಗಿ, ಅವರನ್ನು ಪ್ರಚೋದಿಸಿ, ಮತ್ತಷ್ಟು ಹಿಂಸೆಗೆ ನಾವು ದಾರಿ ಮಾಡಿಕೊಡಬಾರದು ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಈಗ ಸಂವಿಧಾನದಲ್ಲಿ ನಂಬಿಕೆ ಇಟ್ಟಂಥವರು ಧರ್ಮದ ಹೆಸರಿನಲ್ಲೂ ಕೂಡ ಈ ದೇಶದಲ್ಲಿ ಬಹಳ ಗೊಂದಲ ಉಂಟು ಮಾಡಿದ್ದಾರೆ. ಸಮಾಜದಲ್ಲಿ ಗೊಂದಲವನ್ನು ಉಂಟು ಮಾಡಿದ್ದಾರೆ. ಅದರ ಬಗ್ಗೆಯೂ ಕೂಡ ಸರ್ಕಾರ ಗಮನಿಸಬೇಕಾಗುತ್ತದೆ ಮತ್ತು ಸರ್ಕಾರ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹೀಗಾಗಿ, ಸಂವಿಧಾನದಲ್ಲಿ ನಂಬಿಕೆ ಇದ್ದು, ಸಂವಿಧಾನದಲ್ಲಿ ವಿಶ್ವಾಸ ಇಟ್ಟಿದ್ದೇವೆಂದು ಹೇಳಿಕೊಂಡು, ಸಂವಿಧಾನದ ವಿರುದ್ಧ ನಡೆದವರೂ ಕೂಡ ಇವತ್ತು ನಮ್ಮ ದೇಶದಲ್ಲಿ ಇದ್ದಾರೆ. ಹಾಗಾಗಿ, ಈ ನಕ್ಸಲ್‌ವಾದಿಗಳ ಸಮಸ್ಯೆ ಏನಿದೆ, ಇದನ್ನು ನಾವು ಬಹಳ

ಪಾಸಿಟಿವ್ ಆಗಿ ತೆಗೆದುಕೊಂಡು, ಇದಕ್ಕೆ ಯಾವ ತರಹ ಪರಿಹಾರ ಕಂಡುಹಿಡಿಯಬೇಕೆಂಬುದನ್ನು ವಿಚಾರ ಮಾಡಬೇಕೇ ಹೊರತಾಗಿ, ಯಾವುದೇ ಒಂದು ವಿಚಾರವನ್ನು ಸಪ್ರೆಸ್ ಮಾಡಿದರೆ ಆ ವಿಚಾರಕ್ಕೆ ಇನ್ನೂ ಜಾಸ್ತಿ ಸ್ಫೂರ್ತಿ ಸಿಗುತ್ತದೆ. ಯಾವುದೇ ಸಪ್ರೆಸ್ ಮಾಡದೇ ಅವರ ಜೊತೆಗೆ ಸಮಾಲೋಚನೆ ಮಾಡಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಬೇಡಿಕೆಗಳನ್ನು ಇಟ್ಟುಕೊಂಡು, ಆ ಸಮಸ್ಯೆಗೆ ಪರಿಹಾರ ಕಂಡುಹಿಡಿದರೆ ಬಹುಶಃ ಈ ಸಮಸ್ಯೆಗೆ ಸಂಪೂರ್ಣವಾದ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನಾನು ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ನಿಯಮ 69ರ ಮೇಲೆ ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ನಕ್ಸಲಿಯ ಚಟುವಟುಕೆಗಳ ಬಗ್ಗೆ ನನಗನ್ನಿಸುತ್ತಿದೆ ಮೊಟ್ಟ ಮೊದಲನೆಯದಾಗಿ ಈ ನಮ್ಮ ಕರ್ನಾಟಕ ವಿಧಾನ ಸಭೆಯಲ್ಲಿ ಬಹಳ ವಿವರವಾದ ಚರ್ಚೆಯಾಗಿದೆ. ನಮ್ಮ ವಾಟಾಳ್ ನಾಗರಾಜ್‌ರವರು ಮತ್ತು ಈಶ್ವರಪ್ಪನವರು, ಮಾಧುಸ್ವಾಮಿಯವರು ಮತ್ತು ಬೇರೆಯವರೂ ಕೂಡ ಸದಸ್ಯರು ಏನು ಸದನದಲ್ಲಿದ್ದಾರೆ ಅವರುಗಳು ಈ ಒಂದು ವಿಷಯದ ಬಗ್ಗೆ ಹೆಚ್ಚು ಬೆಳಕು ಚೆಲ್ಲತಕ್ಕಂಥ ಒಂದು ಸಂದರ್ಭ ಬಂದಿದೆ. ಪ್ರಪ್ರಥಮವಾಗಿ ನಕ್ಸಲಿಯರ ಚಟುವಟಿಕೆಗಳ ಬಗ್ಗೆ ಪೂರ್ವಭಾವಿಯಾಗಿ ಏಕೆ ಇದು ಬೆಳೆಯುತ್ತಿದೆ ಎನ್ನತಕ್ಕಂಥ ರೀತಿಯಲ್ಲಿ ಕೂಡ ವಿಚಾರ ಮಾಡತಕ್ಕಂಥಾದ್ದು ಬಹಳ ಅತ್ಯಂತ ಗಂಭೀರವಾದ ವಿಷಯ. ಮಾನ್ಯ ವಿರೋಧಪಕ್ಷದ ನಾಯಕರು ನಿನ್ನೆ ಹೇಳಿದರು. ವಿಧಾನಸಭೆಯ ಹೊರಗಡೆ ಬಹಳ ಭಯದ ವಾತಾವರಣವಿದೆ, ಬಹಳ ಮಟ್ಟಿಗೆ ಒಂದು ಹೆದರಿಕೆ ಉಂಟಾಗಿದೆ ಇವತ್ತು ಸರ್ಕಾರ ಕೂಡ ಈ ಪೋಲೀಸ್ ಇಲಾಖೆ ವ್ಯವಸ್ಥೆ ನೋಡಿದರೆ ನಮಗೆ ಗೊತ್ತಾಗುತ್ತದೆ ಕಾನೂನು ವ್ಯವಸ್ಥೆ ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಕುಸಿದು ಹೋಗಿದೆ ಎಂದು. ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದ ನಾಯಕರಿಗೆ ಮತ್ತು ಇತರೇ ನಾಯಕರುಗಳಿಗೆ ಹೇಳಬಯಸುತ್ತಿದ್ದೇನೆ ಇವತ್ತು ಸರ್ಕಾರ ನಡೆಸತಕ್ಕಂಥ ವಿಶೇಷವಾಗಿ ಗೃಹ ಇಲಾಖೆ ಕೂಡ ನನಗೆ ಇದ್ದ ಕಾರಣ ಪ್ರತಿಯೊಬ್ಬ ಶಾಸಕರ ವಿಚಾರವಾಗಿ ಅವರ ಸಂರಕ್ಷಣೆ ಮಾಡುವುದು ನನ್ನ ಆದ್ಯ ಕರ್ತವ್ಯ. ಇತ್ತೀಚಿನ ದಿನಗಳಲ್ಲಿ ಇವತ್ತಿನ ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಮಾನ್ಯ ಅಡ್ವಾನಿಯವರು ಈ ರಾಷ್ಟ್ರದ ಗೃಹ ಮಂತ್ರಿಗಳಾಗಿದ್ದರು, ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದ ಪ್ರಧಾನ ಮಂತ್ರಿಗಳಾದಾಗ ಯಾವ ರೀತಿಯಾಗಿ ಉಗ್ರರು ಪಾರ್ಲಿಮೆಂಟ್ ಮೇಲೆ ಧಾಳಿ ಮಾಡಿದರು ಎನ್ನತಕ್ಕಂಥಾದ್ದು, ಶ್ರೀಮತಿ ಇಂದಿರಾಗಾಂಧೀಯವರು ಈ ದೇಶದ 14 ವರ್ಷಗಳ ಕಾಲ ಪ್ರಧಾನ ಮಂತ್ರಿಗಳಾಗಿ ಕೆಲಸ ಮಾಡಿದರು. ಅವರಿಗೆ ಕೂಡ 32 ಗುಂಡೇಟಿನಿಂದ ಯಾವ ರೀತಿಯಾಗಿ ಕೊಲೆಯಾಯಿತು, ಒಬ್ಬ ದೇಶದ ಮಾಜಿ ಪ್ರಧಾನಿ ಯುವ ನಾಯಕ ಈ ನಮ್ಮ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದಂತಹ ಶ್ರೀ ರಾಜೀವ್ ಗಾಂಧೀಯವರು ಈ ದೇಶದಲ್ಲಿ ಚುನಾವಣೆ ಪ್ರಚಾರಕ್ಕೆ ಹೊರಟಾಗ ಕೂಡ ಯಾವ ರೀತಿಯಾಗಿ ಹತ್ಯೆಯಾಯಿತು ಇವೆಲ್ಲಾ ಪ್ರಸಂಗಗಳು ಇತಿಹಾಸದ ಎಲ್ಲಾ ನಮಗೆ ನೆನಪು ಮಾಡುತ್ತವೆ. ಇವತ್ತು ಏನು ವಿಧಾನ ಸಭೆ ನಡೆಯುತ್ತಿದೆ ನಾವೆಲ್ಲರೂ ವಿಧಾನ ಸಭೆಯಲ್ಲಿ ಕುಳಿತಿದ್ದೇವೆ. ಕೇವಲ ಮುಖ್ಯಮಂತ್ರಿಗಳು ಮತ್ತೆ ವಿರೋಧಪಕ್ಷದ ನಾಯಕರು ಅಲ್ಲ. We are all the property of the entire state. ನಾವು ರಾಜ್ಯದ ಆಸ್ತಿಗಳಾಗಿದ್ದೇವೆ. ಈ ರಾಜ್ಯದ ಜನರಿಂದ ಆರಿಸಿ

ಜನತೆಯ ಸಮಸ್ಯೆಗಳನ್ನು ಪ್ರಾಮಾಣಿಕತೆಯಿಂದ ಬಗೆಹರಿಸತಕ್ಕಂಥ ರೀತಿಯಲ್ಲಿ ಇವತ್ತು ನಾವೆಲ್ಲರೂ ಕೂಡ ವಿಧಾನ ಸಭೆಯಲ್ಲಿ ನಾವಿದ್ದೇವೆ. ಇವತ್ತು ಸಂದರ್ಭ ಕರ್ನಾಟಕ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅದರ ಮುಖ್ಯಮಂತ್ರಿಯಾಗಿ ನಾನು ಕೆಲಸ ಮಾಡುತ್ತಿದ್ದೇನೆ. ಒಂದು ವೇಳೆ ಏನಾದರೂ ಕೂಡ ಘಟನೆ ನಡೆದಿದ್ದರೆ ಶಾಸಕರ ಭವನದಲ್ಲಿ ಮತ್ತು ಇಲ್ಲಿ ಸರ್ಕಾರ ಏನು ಮಾಡುತ್ತಿದೆ? ಗೃಹ ಇಲಾಖೆ ಏನು ಮಾಡುತ್ತಿದೆ? ಪೋಲೀಸ್ ಇಲಾಖೆ ಏನು ಮಾಡುತ್ತಿದೆ ಎನ್ನತಕ್ಕಂಥ ಶಬ್ದ ಭಯದ ವಾತಾವರಣದಲ್ಲಿ ಇಲ್ಲ. It is my duty. ಇದೆಲ್ಲಾ ಕಡೆಗೆ ಪಾರ್ಲಿಮೆಂಟ್‌ನಲ್ಲಿ ಘಾತಕ ಶಕ್ತಿಗಳು ಧಾಳಿ ಮಾಡಲು ಹೊರಟಾಗ ಇವತ್ತು ರಾಜ್ಯದಲ್ಲಿ ಕೂಡ ನಾವು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದಕ್ಕೆ ನಾವು ವ್ಯವಸ್ಥಿತ ರೀತಿಯಲ್ಲಿ ಮಾಡಿದ್ದೇವೆ. ನಮಗೆ ಭಯದ ವಾತಾವರಣ ಇಲ್ಲ. ಮೊನ್ನೆ ಮಾನ್ಯ ಯಡಿಯೂರಪ್ಪನವರು ಅವರ ಸ್ನೇಹಿತರ ಜೊತೆಯಲ್ಲಿ ಮಂಗಳೂರಿಗೆ ಹೋಗಿದ್ದರು. ಈ ರಾಷ್ಟ್ರದ ಸ್ವಯಂ ಸೇವಕ ಸಂಚಾಲಕರಾದಂತಹ ಡಾಕ್ಟರ್ ಸುದರ್ಶನ್‌ರವರು ಇದ್ದರು. ಅಡ್ವಾನಿಯವರೂ ಕೂಡ ಬಂದು ಹೋಗಿದ್ದಾರೆ. ತಾವೆಲ್ಲರೂ ಕೂಡ ಇದ್ದೀರಿ ರಾಜ್ಯದ ಹಿರಿಯ ನಾಯಕರು. ಬಹಳ ಒಳ್ಳೆಯದಾಗಿ ವ್ಯವಸ್ಥಿತ ರೀತಿಯಲ್ಲಿ ಆ ಒಂದು ಸಮಾವೇಶ ನಡೆದಿದೆ. ಈಗ ರಾಜ್ಯದಲ್ಲಿ ಸುವ್ಯವಸ್ಥೆ ಹೇಗಿದೆ ಎಂದು ನಿಮಗೆ ಕೇಳಬೇಕೇ ಅಥವಾ ಡಾಕ್ಟರ್ ಸುದರ್ಶನ್‌ರವರಿಗೆ ಕೇಳಬೇಕೇ. ಅವರು ಹೇಳುತ್ತಾರೆ ಎಷ್ಟು ಒಳ್ಳೆಯ ರೀತಿಯಲ್ಲಿ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ ರಾಷ್ಟ್ರೀಯ ಸ್ವಯಂ ಸೇವಕದ ರಾಷ್ಟ್ರೀಯ ಸಮಾವೇಶ ಮಂಗಳೂರಿನಲ್ಲಿ ಎಂದು. ತಾವು ಅಲ್ಲಿನ ಶಾಸಕರಾಗಿದ್ದೀರಿ. ಎಲ್ಲಿ ಇವತ್ತು ನಕ್ಸಲೀಯ ಆಕ್ಟಿವಿಟೀಸ್ ನಡೆಯುತ್ತಿದೆ ಚಿಕ್ಕಮಗಳೂರು ಇದೆ, ಉಡುಪಿ ಇದೆ, ಮಂಗಳೂರು ಇದೆ, ಶಿವಮೊಗ್ಗ ಇದೆ. ಆ ಪ್ರಾಂತ್ಯದಲ್ಲಿ ಇವತ್ತು ಭಯದ ವಾತಾವರಣದಲ್ಲಿ ಒಂದು ಅಥವಾ ಎರಡು ಘಟನೆ ಚಿಕ್ಕಮಗಳೂರಿನಲ್ಲಿ ಮತ್ತು ಪಾವಗಡದಲ್ಲಿ ಆಗಿದೆ. ನೀವು ಬೇರೆ ವಿಚಾರದಲ್ಲಿ ಪ್ರಶಂಸೆ ಮಾಡಬೇಡಿ ಆದರೆ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ, ಪ್ರಜಾಪ್ರಭುತ್ವದಲ್ಲಿ ಎಷ್ಟೊಂದು ವ್ಯವಸ್ಥಿತ ರೀತಿಯಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿ ನಡೆಯತಕ್ಕಂಥ ರೀತಿಯಲ್ಲೂ ಕೂಡ ಅದು ಬರಬೇಕು ತಮ್ಮ ಬಾಯಿಂದ, ಆದರೆ ಮೂರು ದಿವಸಗಳ ಕಾಲ ನನ್ನ ಒಂದು ಅಭ್ಯಾಸ, ವಾಟಾಳ್ ನಾಗರಾಜ್‌ರವರಿಗೆ ಮತ್ತು ಬೇರೆ ಸ್ನೇಹಿತರಿಗೆ ಮುಂಜಾನೆ 6 ಗಂಟೆ ಮೇಲೆ ಎಲ್ಲಾ ಕಡೆ ಫೋನ್ ಮಾಡುವುದು ಇವತ್ತು ಮುರುಗನ್‌ಗೆ ಫೋನ್ ಮಾಡಿದೆ. ಆ ಮುರುಗನ್‌ಗೆ ಗೊತ್ತಾಗಲಿಲ್ಲ. ಕನ್ನಡ ಪ್ರಭಾದಲ್ಲಿ ರಾತ್ರಿ ಬಂದಿದೆ. Murgan you know what happened he said no,no,sir I have no .... ಅದಕ್ಕೆ ನಾನು ಈ ತರಹದ್ದು ಒಂದು ಅಭ್ಯಾಸದಿಂದ ಪ್ರತಿಯೊಂದು ಹಂತ ಹಂತದಲ್ಲಿ ವಿಚಾರಿಸುತ್ತಾ ಇರುತ್ತೇನೆ. ಇವತ್ತು ಯಡಿಯೂರಪ್ಪನವರು ಹೋಗುತ್ತಾರೆ, ಜಗದೀಶ ಶೆಟ್ಟರು ಹೋಗುತ್ತಾರೆ ಈಶ್ವರಪ್ಪನವರು ಹೋಗುತ್ತಾರೆ ಅಡ್ವಾನಿ ಬರುತ್ತಾರೆ ಯಾವ ರೀತಿಯಾಗಿ ಅಂತ ಹೇಳಿ ಪ್ರತಿಯೊಂದನ್ನೂ ನಾನು ಐ.ಜಿ. ಆಗಲಿ ಎಸ್, ಪಿ ಗೆ ಆಗಲಿ ಅವರ ಜೊತೆ ಸಮಾಲೋಚಿಸಿ ಕ್ರಮ ತೆಗೆದುಕೊಳ್ಳುತ್ತಾ ಇದ್ದೇನೆ. ಇವತ್ತು ಎಲ್ಲಾ ಕಡೆಗೆ ನೋಡಿದ್ದೇನೆ, ರಾಜ್ಯದ ಗೃಹ ಮಂತ್ರಿಯಾಗಿ ಶಿವರಾಸನ್ ಎಲ್ ಟಿ ಟಿ ಇ ಆಕ್ಟಿವಿಟೀಸ್‌ಗಳು ಇಡೀ ರಾಷ್ಟ್ರದಲ್ಲಿ ನಡೆಯತಕ್ಕಂಥ ಕಾಲದಲ್ಲಿ ಕರ್ನಾಟಕದಲ್ಲಿ ಕೋಣನಕುಂಟೆಯಲ್ಲಿ ಯಾವಾಗ ನಮ್ಮ ರಾಮಲಿಂಗಂ ಇದ್ದರು, ಆಗ ನಮ್ಮ ಪೋಲೀಸ್ ಇಲಾಖೆ ಎಲ್ಲಾ ಕಡೆ ಅಂಟಿಸಿಪೇಟ್ ಮಾಡತಕ್ಕಂಥಾದ್ದು, ಪೂರ್ವಭಾವಿಯಾಗಿ ವಿಚಾರ ಮಾಡತಕ್ಕಂಥಾದ್ದು ಮಾಡಿದ್ದೇವೆ. ರಾಜ್ಯದಲ್ಲಿ

ಪಂಚಾಯತ್ ಚುನಾವಣೆ ನಡೆಯಿತು, 85 ಸಾವಿರ ಪಂಚಾಯಿತಿ ಸದಸ್ಯರ ಚುನಾವಣೆ ರಾಜ್ಯದಲ್ಲಿ ನಡೆಯಿತು. ಎಲ್ಲಿಯಾದರೂ ಕೊಲೆಯಾಯಿತಾ? ಏನಾದರೂ ಫೈರಿಂಗ್ ಆಗಿದೆಯೇ? ಸಮ್ಮಿಶ್ರ ಸರ್ಕಾರ ಕರ್ನಾಟಕ ರಾಜ್ಯದಲ್ಲಿ 85 ಸಾವಿರ ಪಂಚಾಯಿತಿ ಸದಸ್ಯರ ಚುನಾವಣೆಯನ್ನು ಎಷ್ಟು ಯಶಸ್ವಿಯಾಗಿ ಮಾಡಿದೆ ಎಲ್ಲಿದೆ ಎಲ್ಲಿದೆ ಲಾ ಅಂಡ್ ಆರ್ಡರ್ ಹಾಗೂ ಹದಗೆಟ್ಟಿದೆ ಎನ್ನತಕ್ಕಂಥ ರೀತಿಯಲ್ಲಿ ತಾವು ಮಾತನಾಡಿದರೆ ಅದು ನಮಗೆ ಅಸಮಾಧಾನವಾಗುತ್ತದೆ. ಇವತ್ತು ಹತ್ತು ತಿಂಗಳ ಅವಧಿಯಲ್ಲಿ ಎಷ್ಟು ಗೋಲಿಬಾರ್ ಆಗಿದ್ದಿವೆ? ಶ್ರೀ ವಾಟಾಳ್ ನಾಗರಾಜ್‌ರವರೂ ಕೂಡ ಮೊದಲು ಸದಸ್ಯರಾಗಿದ್ದವರು, ಹಿರಿಯ ಸದಸ್ಯರಾಗಿದ್ದೀರಿ, ಹಿಂದಿದ್ದ ಮುಖ್ಯಮಂತ್ರಿಗಳ ಕಾಲದಲ್ಲಿ ಆದ ಶ್ರೀ ಎಂ ವಿ ರಾಮರಾವ್ ಕಾಲದಿಂದ ಹಿಡಿದುಕೊಂಡು, ಗುಂಡೂರಾವ್ ಕಾಲದವರೆಗೆ ಹಾಗೂ ಬೇರೆ ಬೇರೆ ಕಾಲದಲ್ಲಿ ಆಗಿದೆ, ಆದರೆ ನಮ್ಮ ಕಾಲದಲ್ಲಿ ಆಗಿಲ್ಲ ಅದಕ್ಕೆ ನಾನು ದೊಡ್ಡವನು ಎಂದು ಅಲ್ಲ. ಅದಕ್ಕೆ ನಾನು ಕಂಪೇರ್ ಮಾಡುತ್ತಿಲ್ಲ. 10 ತಿಂಗಳ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತಿದ್ದೇನೆ, ಒಂದೂ ಪೋಲೀಸ್ ಫೈರಿಂಗ್ ಕರ್ನಾಟಕ ರಾಜ್ಯದಲ್ಲಿ ನಡೆದಿಲ್ಲ. ಇದು ಒಂದು ಐತಿಹಾಸಿಕವಾದಂತಹ ವ್ಯವಸ್ಥಿತ ರೀತಿಯಲ್ಲಿ ನಾವು ಸರ್ಕಾರ ನಡೆಸುತ್ತಿದ್ದೇವೆ. ಇವತ್ತು ಈ ಸಂದರ್ಭದಲ್ಲಿ ಬಹಳಷ್ಟು ಇವತ್ತು ಚಟುವಟಿಕೆ ಆಗುತ್ತಿದೆ. ಶ್ರೀ ಅಶೋಕ್‌ರವರು ಮಾತನಾಡುವಾಗ ನಾನು ಇರಲಿಲ್ಲ. ಅಲ್ಲಿ ಕುಳಿತಿದ್ದೆ. ಬೆಂಗಳೂರಿಗೆ ಸಂಬಂಧಪಟ್ಟಿದ್ದು. ಇವತ್ತು ವಾಟಾಳ್ ನಾಗರಾಜ್‌ರವರು ವಿಧಾನ ಸೌಧದ ಎದುರುಗಡೆ ವಾಕಿಂಗ್ ಮಾಡುತ್ತಾರೆ. ಏನು ಕಾಲ ಇತ್ತು ಅದು ಗತವೈಭವ, ಈಗ ಈ ಕಾಲ ಬಂದಿದೆ. 1940 ರಲ್ಲಿ ಬೆಂಗಳೂರಿನ ಪಾಪ್ಯುಲೇಶನ್ 3 ಲಕ್ಷ ಇದ್ದರೆ ಈಗ ಅದು 85 ಲಕ್ಷಕ್ಕೆ ಹೋಗಿದೆ. ಬೆಂಗಳೂರು ಬೆಳೆಯುತ್ತಿದೆ. ಐ ಟಿ ಬಿ ಟಿ ಆಗಿದೆ. 35 ಪರ್ಸೆಂಟ್ ಎಕ್ಸ್‌ಪೋರ್ಟ್ ನಾವು ಬೆಂಗಳೂರಿನಿಂದ ಮಾಡುತ್ತಿದ್ದೇವೆ. ಇವತ್ತು ಬೆಂಗಳೂರು ಬೆಳೆಯುತ್ತಿದೆ. ಬೆಳೆಯುತ್ತಿರತಕ್ಕಂಥ ಬೆಂಗಳೂರು ಇವತ್ತು ಬಾಂಬೆ ಆದ ನಂತರ ಅಲ್ಲ ಡೆಲ್ಲಿ ಆದ ನಂತರ, Bangalore is the only city in the country. ಇವೆಲ್ಲಾ ಆಕ್ಟಿವಿಟೀಸ್ ಆಗುತ್ತಿದೆ. ಆಕ್ಟಿವಿಟೀಸ್ ಆಗುತ್ತಿಲ್ಲ ಬೇರೆ ತರಹದ ಕ್ರಿಮಿನಲ್ಸ್ ಬರುತ್ತಿಲ್ಲ ಎಂದು ನಾನು ಹೇಳುತ್ತಿಲ್ಲ. ನಾವು ಬಹಳ ಸಶಕ್ತರಾಗಿದ್ದೇವೆ. ನಾನು ಎರಡು ಮೂರು ನಿದರ್ಶನ ಕೊಡುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ ಪೋಲೀಸ್ ಇಲಾಖೆಯ ಇಂಟಲಿಜನ್ಸ್ ಏನು ಕೆಲಸ ಮಾಡುತ್ತಿದೆ ಎಂಬ ಬಗ್ಗೆ ವೆಸ್ಟ್ ಬೆಂಗಾಲ್‌ನಿಂದ ಶಸ್ತ್ರಾಸ್ತ್ರ ತೆಗೆದುಕೊಂಡು ಮದ್ರಾಸ್ ಮುಖಾಂತರ ಬರತಕ್ಕಂಥ ಜನರನ್ನು ರಾತ್ರಿ 1-45 ಗಂಟೆಗಳಲ್ಲಿ ಮುಂಜಾನೆ ಪೋಲೀಸರು ರೈಲ್ವೆ ಪೋಲೀಸರು ರೈಡ್ ಮಾಡಿ ಅವನ ಸೂಟ್‌ಕೇಸ್ ವಶಪಡಿಸಿಕೊಂಡಿದ್ದಾರೆ. ಪತ್ರಿಕೆಯಲ್ಲಿ ಬಂತು, ಟಿವಿಯಲ್ಲಿ ಬಂತು ಒಂದು ಲೇಟೆಸ್ಟ್ ಗನ್ ಏನೋ ಕಾರ್ಪರೇಟ್‌ಗೆ ಹೊಡೆಯುವುದಕ್ಕೆ ಬಂದಿತ್ತು ಏನೋ ಬಂದಿತ್ತು ಇವನ್ನೆಲ್ಲಾ ಮಾಡತಕ್ಕಂಥ ರೀತಿಯಲ್ಲಿ ನಮ್ಮ ಇಂಟೆಲಿಜೆನ್ಸಿ ನೆಟ್‌ವರ್ಕ್, ಹಿಡಿಯತಕ್ಕಂಥ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಎಷ್ಟು ಯಶಸ್ವಿಯಾಗಿ ಕೆಲಸ ಮಾಡಿದ್ದೇವೆ. ಇವತ್ತು ಬೆಂಗಳೂರು ನಗರದಲ್ಲಿರತಕ್ಕಂಥ ಐಟಿಬಿಟಿ ಮೇಲೆ ಕಣ್ಣಿದೆ, ದೆಹಲಿಯಲ್ಲಿ ಸಭೆಯಾಗಿದೆ, ಎಲ್ಲಾ ಕಡೆಯಲ್ಲಿ ಸತತವಾಗಿ ಪೋಲೀಸರು ಕೆಲಸ ಮಾಡುತ್ತಿದ್ದಾರೆ, I have to compliment. ಚಿತ್ತರಂಜನ್‌ರವರ ಕೊಲೆಯಾಯಿತು, ಸಿಬಿಐ ಸಿಬಿಐ ಎಂದು ಸಿಬಿಐಗೆ ವಹಿಸಿ ಕೊಟ್ಟರು, ನಾನು 34 ವರ್ಷದಿಂದ ಇದ್ದೇನೆ, ಆದರೆ ನಾನು ಮಾತನಾಡುತ್ತಿರಲಿಲ್ಲ, ಸುಮ್ಮನೆ ಕುಳಿತು ಕೇಳುತ್ತಿದ್ದೆ. ಆವಾಗ ಸಿಬಿಐ ತನಿಖೆ ಏನಾಯಿತು? ಅಸ್ನೋಟಿಕರ್ ಕೊಲೆ

ಕೇಸ್‌ನಲ್ಲಿ, Mirji went to Dubai. ಮಿರ್ಜಿಯವರು ದುಬೈನ ಅಂಡರ್‌ವರ್ಲ್ಡ್‌ನ ಒಳಗೆ ಹೋಗಿ ಯಾರು ಕೊಲೆ ಮಾಡಿದ್ದನೊ ಅವನನ್ನು ಹಿಡಿದು ತಂದಿದ್ದಾರೆ, This is the record of the Karnataka Police. ನಾನು ವೀರಪ್ಪನ ಹತ್ಯೆ, ಬೇರೆ ಕಡೆಗೆ ಹೋಗುವುದಿಲ್ಲ, ಅದು ಪ್ರಾಸಂಗಿಕವಾಗಿ ಆಯಿತು, I was a also the Home Minister. ಒಂದು ಘಟನೆಯನ್ನು ಹೇಳುತ್ತಿದ್ದೇನೆ, ರಾಂಪುರ ಪೋಲಿಸ್ ಠಾಣೆಗೆ ನಾವು ಹೋಗಿದ್ದೆವು, ರಾಂಪುರ ಪೋಲಿಸ್ ಠಾಣೆಗೆ ಹೋಗಿ ಬಂದ ಅರ್ಧ ಗಂಟೆಯಲ್ಲಿ ಒಂಭತ್ತು ಪೋಲಿಸರಿಗೆ ವೀರಪ್ಪನ್ ತಂಡ ಬಂದು ಹೊಡೆದರು, ನಮಗೆ ಹೊಡೆಯುವುದಕ್ಕೆ ಬಂದರೋ ಯಾರಿಗೆ ಹೊಡೆಯಲು ಬಂದರೋ ಇವೆಲ್ಲಾ ನಡೆದ ಘಟನೆಗಳು. ಕೊನೆಗೆ ವೀರಪ್ಪನ್ ಸತ್ತುಹೋದ, ಆ ಒಂದು ಭಯದ ವಾತಾವರಣ ಏನಿತ್ತು ಅದೆಲ್ಲಾ ಹೋಗಿದೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಏನಾಗಿದೆ, ನಕ್ಸಲೈಟ್ ಚಟುವಟಿಕೆ ನಡೆಯುತ್ತಿದೆ. 1950 ರಲ್ಲಿ ತೆಲಂಗಾಣ ಮೂವ್‌ಮೆಂಟ್ ಬಂತು ಏಕೆಂದರೆ, ನಾವು ಗುಲ್ಬರ್ಗಾದಿಂದ ಹೈದರಾಬಾದ್‌ಗೆ ಹೋಗಿ ನಾವೆಲ್ಲಾ ವಿದ್ಯಾಭ್ಯಾಸ ಮಾಡಿದವರು, ಅಲ್ಲಿ ನಾನು 9 ವರ್ಷವಿದ್ದೆ. ಶ್ರೀರಾಮರೆಡ್ಡಿ ಗೊತ್ತು ರಾಘಭದ್ರಗೌಡರು ಗೊತ್ತು, ಮೊಹಿದ್ದೀನ್ ಗೊತ್ತು, ಬಿ.ಸುಂದರರಾಯರು ಎಂಬ ಲೀಡರ್, ಬಸವಪುನ್ನಯ್ಯ ಇವೆಲ್ಲಾ ರಾಜಕೀಯ ಮುತ್ಸದ್ಧಿಗಳಿದ್ದರು. ತೆಲಂಗಾಣ ಮೂವ್‌ಮೆಂಟ್, between land less and land lords. Ravinarayana Reddy was first time elected to the Parliament from Nallagunda District. ಬಹಳ ಅತ್ಯಂತ ಬಹುಮತದಿಂದ ಆರಿಸಿ ಹೋಗಿದ್ದಾರೆ. ನಾನು ಸಮರ್ಥನೆ ಮಾಡತಕ್ಕಂಥ ರೀತಿಯಲ್ಲಿ ಹೇಳುತ್ತಿದ್ದೇನೆಂದು ಭಾವಿಸಬಾರದು. ಈ ಒಂದು ವಾದ, ಇಸಂ ದೇಶದಲ್ಲೇನು ಇದೆ, ಈ ರಾಜ್ಯದಲ್ಲಿರುವ ರಾಜಕೀಯ, ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಏನಿದೆ, ನಮ್ಮ ಸಿಸ್ಟಂ ಏನಿದೆ, ಏನು ವಿದ್ಯಾರ್ಥಿಗಳಿದ್ದಾರೆ, they have become frustrated. ಯಡಿಯೂರಪ್ಪನವರೆ, ತೆಲಂಗಾಣ ಮೂವ್‌ಮೆಂಟ್ 6 ತಿಂಗಳು ನಡೆಯಿತು, ಕುಚಂಪಳ್ಳಿಯವರು ಕ್ರಾಂತಿಯಾಗಿ ವಿನೋಭಾವ ಬಳಿ ಬಂದರು. ಭೂದಾನ ಪ್ರಾರಂಭವಾಗಿದ್ದೆ ಕುಚಂಪಳ್ಳಿ ತೆಲಂಗಾಣದಿಂದ. ಅದಕ್ಕೆ ನಕ್ಸಲೈಟ್ ಮೂವ್‌ಮೆಂಟ್ ಏನಿದೆ, ನಾನು ರಾಜ್ಯದ ಮುಖ್ಯಮಂತ್ರಿಯಾಗಿ, ``This is a socio-economic problem,'' ಎಂದು ಹೇಳಿದೆ, ಮಾತುಕತೆಯಿಂದ ಬಗೆಹರಿಸಿಕೊಳ್ಳಬೇಕು. ಪರ್ಟಿಕ್ಯುಲರ್ ಪ್ಲೇಸ್‌ನಲ್ಲಿ ಪ್ರಿವೇಲಿಂಗ್ ಪ್ರಾಬ್ಲಂ ಏನಿದೆ ಅದರ ಒಂದು ಎಕ್ಸ್‌ಪ್ಲಾಯ್ಟ್ ಮಾಡಿ ನಕ್ಸಲೈಟ್ ಚಟುವಟಿಕೆ ಏನು ನಡೆಯುತ್ತಿದೆ, ದಲಿತರ ಸಮಸ್ಯೆ ಇದೆ, ವಿದ್ಯಾರ್ಥಿಗಳ ಸಮಸ್ಯೆ ಇದೆ, ಫಾರೆಸ್ಟ್‌ನಲ್ಲಿ ಟ್ರೈಬಲ್ ಸಮಸ್ಯೆ ಇದೆ,. ಈ ಬಗ್ಗೆ ಅಭಿವೃದ್ಧಿ ಕೆಲಸ ಮಾಡಿದರೆ ಸರಿ ಎನ್ನುವುದು ನನ್ನ ವಾದ. ದೇಶದ ಜನರ ಸಂರಕ್ಷಣೆ ಮಾಡುವುದೂ ಕೂಡ ನಮ್ಮ ಆದ್ಯ ಕರ್ತವ್ಯ. ಚಿಕ್ಕಮಗಳೂರಿನಲ್ಲಿ ಸೆಂಟ್ರಲ್ ಫಾರೆಸ್ಟ್, ನ್ಯಾಷನಲ್ ಪಾರ್ಕ್ ಇದೆ, ನಮ್ಮ ದೇಶದ ಶೇಕಡ 15 ರಷ್ಟು richest ಫಾರೆಸ್ಟ್ ಆ ಭಾಗದಲ್ಲಿದೆ. ಎಷ್ಟೋ ಸಾರಿ ನಾವು ಬೆಂಗಳೂರಿನಲ್ಲಿರಲಿ, ದೆಹಲಿಯಲ್ಲಿರಲಿ, ಸಂಡೆ, ಸಾಟರ್ಡೆ ನಾವು ಊರಿಗೆ ಹೋಗುತ್ತೇವೆ, ಅದು ಸೆಂಟಿಮೆಂಟಲ್ ಅಟ್ಯಾಚ್‌ಮೆಂಟ್, ಭಾವನಾತ್ಮಕವಾದುದು; ನೀವು ಬೇಕಾದಷ್ಟು ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಟ್ಟರೂ ಕೂಡ ಟ್ರೈಬಲ್ ಜನರು ಅಲ್ಲಿ ಬಿಡುವುದಕ್ಕೆ ತಯಾರಿಲ್ಲ. ನಾನು ಎಲ್ಲಿಯವರೆಗೆ ಹೋಗಿದ್ದೇನೆಂದರೆ, ನಮ್ಮ ವಿಠಲ್ ಎನ್ನತಕ್ಕಂಥ ಅಲ್ಲಿನ ಟ್ರೈಬಲ್ ಲೀಡರ್ ಜೊತೆ ಕೂಡ ಮಾತು ಕಥೆ ಆಡಿ ಬಂದಿದ್ದೇನೆ. ನಾನು ಒಪ್ಪುತ್ತೇನೆ, ಕೆಲವೇ ಇಂಟಲೆಕ್ಚುಯಲ್ಸ್

ಜೊತೆ ಮಾತನಾಡಿ, ಈ ಒಂದು ಪಾದ ಬೆಳವಣಿಗೆ ಇವತ್ತು ನಡೆಯುತ್ತಿದೆ, ಅದರ ಬಗ್ಗೆ ಹೆಚ್ಚಿನ ಪ್ರಸ್ತಾಪ ಮಾಡಿದರೆ ನಿಮ್ಮ ಮನಸ್ಸಿನಲ್ಲಿ ಏನಾದರೂ ಬರಬಹುದು, ಇದರ ಎಲ್ಲಾ ಹಿನ್ನೆಲೆಯಲ್ಲೂ ಕೂಡ ಇವತ್ತು ಕೆಲಸ ಮಾಡಬೇಕಾಗಿದೆ. ಸನ್ಮಾನ್ಯ ಎಸ್.ಎಂ.ಕೃಷ್ಣರವರು ರಾಜ್ಯದ ಮುಖ್ಯ ಮಂತ್ರಿಯಾಗಿದ್ದಾಗ 60 ಕೋಟಿ ರೂಪಾಯಿಗಳ ಅಭಿವೃದ್ಧಿ ಕೆಲಸ ಮಾಡತಕ್ಕಂಥದ್ದಕ್ಕೆ ಕ್ರಮ ತೆಗೆದುಕೊಂಡಿದ್ದೆವು, ಇನ್ನೂ ಕೂಡ ಆ ಪ್ಯಾಕೇಜ್ ಬಂದಿಲ್ಲವೆಂದು ತಾವು ಪ್ರಸ್ತಾಪ ಮಾಡಿದ್ದಿರಿ. ಇವತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಿಂದ ಎನ್ವಿರಾನ್‌ಮೆಂಟ್ ಕ್ಲಿಯರ್ ಆಗಿಲ್ಲ. ನಾವು ಬಂದ ಮೇಲೆ, the Development Commissioner, now he is there. RDPR Secretary Baligar ಇವರೆಲ್ಲಾ ಸ್ಥಳದಲ್ಲೇ ಚಿಕ್ಕಮಗಳೂರಿನಲ್ಲಿ ಮೂರು ದಿವಸದಿಂದ ಇದ್ದಾರೆ, ಅವರು ನಾಳೆ ಬರುವವರಿದ್ದಾರೆ. ಮೊನ್ನೆ ನಾವು ಸಚಿವಸಂಪುಟದಲ್ಲಿ, ಇವತ್ತು ಪಟ್ಟಾ ಕೊಡುವ ರೀತಿಯಲ್ಲಿ ಸೀಮಿತವಾಗಿ ಆ ಭಾಗದಲ್ಲಿ ಏನು ಸಮಸ್ಯೆಗಳಾದ ರಸ್ತೆ ಮಾಡುವುದು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅದನ್ನು ಮಾಡಿಕೊಡುವ ಬಗ್ಗೆ ನಾವು ಈಗಾಗಲೇ ಕ್ರಮವನ್ನು ಕೂಡ ತೆಗೆದುಕೊಂಡಿದ್ದೇವೆ. ಒಂದು ಘಟನೆ ನಡೆಯಿತು, ಅದು ಆಗಬಾರದು ಮಾನ್ಯ ಸದಸ್ಯರಾದ ರಮೇಶ್ ಕುಮಾರ್‌ರವರು ಸದನದಲ್ಲಿ ಇಲ್ಲ, ಸಾಕೇತ್ ರಾಜನ್, ಶಿವಲಿಂಗ್‌ರವರ ಹತ್ಯೆ. ಸಾಕೇತ್ ರಾಜನ್‌ರವರು 21 ವರ್ಷಗಳ ಹಿದೆಯೇ ಮನೆಯನ್ನು ಬಿಟ್ಟಿದ್ದಾರೆ, ಅವರು ರಾಷ್ಟ್ರಮಟ್ಟದಲ್ಲಿ ಹಾಗೂ ಆಂಧ್ರಪ್ರದೇಶದಲ್ಲಿ ನಕ್ಸಲೈಟ್ ಮೂವ್‌ಮೆಂಟ್‌ನಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಅವರ ಪತ್ನಿಯೂ ಕೂಡ ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಹತ್ಯೆಯಾಗಿದ್ದಾಳೆಂದು ವರ್ತಮಾನವಿದೆ. ಅವರು ಎಲ್ಲೆಲ್ಲಿ ಇಂತಹ ಸಮಸ್ಯೆ ಬಂದಾಗ, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ ಇವನ್ನು ಕೇಂದ್ರವಾಗಿಟ್ಟುಕೊಂಡು ಚಟುವಟಿಕೆ ಮಾಡುತ್ತಿದ್ದರು. ಇವತ್ತು ರಾಜ್ಯದಲ್ಲಿ ನೆಕ್ಸಲೈಟರ ಚಟುವಟಿಕೆ ಏನು ನಡೆಯುತ್ತಿದೆ, ಅದು ನೆರೆರಾಜ್ಯದಲ್ಲೂ ಕೂಡ ನಡೆಯುತ್ತಿದೆ, ಅದು ಎಷ್ಟರ ಮಟ್ಟಿಗೆ, you are going to appreciate the action of the Police Inspector...... ರಾತ್ರಿ ನಾಲ್ಕು ಗಂಟೆಗೆ ಶ್ರೀನಿಧಿ ಎಂಬ ಇನ್‌ಸ್ಪೆಕ್ಟರ್, ಅವರು ಬ್ಯಾಟರಿ ಹಾಕಿ ಹೋಗತಕ್ಕಂಥ ಕಾಲದಲ್ಲಿ ಹಿಡಿದಿದ್ದಾನೆ ಆಕಸ್ಮಾತ್ತಾಗಿ ಸಾಕೇತ್‌ರಾಜನ್ ಹಾಗೂ ಶಿವಲಿಂಗು ಹೋದರು. ಆದರೆ You are not appreciating the police action. ರಾತ್ರಿ ನಾಲ್ಕು ಗಂಟೆಯಲ್ಲೂ ಪೋಲಿಸ್ ಡಿಪಾರ್ಟ್ ಎಷ್ಟು ಸತತವಾಗಿ ಎಚ್ಚರಿಕೆಯಿಂದಿದ್ದಾರೆ, ಬ್ಯಾಟರಿ ಟಾರ್ಚ್‌ಲೈಟ್ ನೋಡಿ ಆ ಘಟನೆಯಾಯಿತು ಇಲ್ಲಿಗೆ ಬಂದರು, ಅವರು ಬಂದ ಮೇಲೆ ರಾಜ್ಯದ ಮುಖ್ಯಮಂತ್ರಿಯಾಗಿ, ನಾನು ಚಿಕ್ಕಂದಿನಿಂದಲೂ, ವಿದ್ಯಾರ್ಥಿ ಜೀವನದಿಂದಲೂ ವಿದ್ಯಾರ್ಥಿ ಹೋರಾಟದಿಂದ ಬಂದವನು. ರಾಷ್ಟ್ರಮಟ್ಟದ ಯಾವ್ಯಾವ ಎಲ್ಲಾ ಪೋಗ್ರೆಸಿವ್ ಪಾರ್ಟಿಸ್ ಇವೆ. ನಾನು ಅವರ ಜೊತೆಯಲ್ಲಿದ್ದವನು. ಆದರೂ ಕೂಡ ರಾಜ್ಯದ ಮುಖ್ಯಮಂತ್ರಿಯಾಗಿರುವುದರಿಂದ ಇವತ್ತು ಕೆಲವು ಜನ ಪ್ರೊಫೆಸರ್ಸ್ ಬಂದರು, Prof. Ramakrishna has met me. ಬಂದರು, ಅವರು, ಏನ್ರಿ ಸಾಕೇತ್ ರಾಜನ್ ಇಂಟಲೆಕ್ಚುಯಲ್ ಎಂದರು. ನೋಡ್ರಿ ಇಂಟಲೆಕ್ಚುಯಲ್ ಅನ್ನು ಯಾರು ನೋಡುತ್ತಾರೆ, forensic science ನಲ್ಲಿ faesilites ಇಲ್ಲ I have ordered. ಅದರ ಬಗ್ಗೆ ಕಳಕಳಿ ಇರಬೇಕಾಗುತ್ತದೆ ಅದು ಯಾರೂ ನಾಚಿಕೆ ಪಡತಕ್ಕಂಥದ್ದಲ್ಲ, ಅದನ್ನು ನಾವು day to day ಅಡ್ಮಿನ್ಸ್ಟ್ರೇಷನ್‌ನಲ್ಲಿ I have ordered to bring the body. I have instructed the poba officers, ಅವರ ತಾಯಿ ವಿಜಯಲಕ್ಷ್ಮಿ

ಏನಿದ್ದಾರೆ ಅವರನ್ನು ನಿಮ್ಮ ಮಗ ಸತ್ತಿದ್ದಾನೆ, ಏನು ಮಾಡಬೇಕೆಂದು ಕೇಳಿ ಎಂದು ಹೇಳಿದೆ. ಇಲ್ಲ ನನ್ನ ಮಗ 21 ವರ್ಷಗಳ ಹಿಂದೆಯೇ ನಮ್ಮ ಮನೆಯನ್ನು ಬಿಟ್ಟು ಹೋಗಿದ್ದಾನೆ ನಮಗೇನೂ ಸಂಬಂಧವಿಲ್ಲ, ಪೋಲೀಸ್‌ನವರೇ ಮಾಡಬಹುದು ಎಂದಿದ್ದಾರೆ, I have instructed the police officer. ಪೇರೆಂಟ್ಸ್ ಒಂದು ಪತ್ರವನ್ನು ಕೊಟ್ಟ ಮೇಲೆ ನಾವು ಅದನ್ನೇ ಆಧಾರವಾಗಿಟ್ಟುಕೊಂಡು ಮಾಡಬೇಕಾಗುತ್ತದೆ. ಕೆಲವು ಮಂದಿ, ನಮಗೆ ಹ್ಯಾಂಡ್ ಓವರ್ ಮಾಡಬೇಕೆಂದು ಕೇಳಿದರು. ಅದರ ಮಧ್ಯೆ ಪೋಲಿಸ್‌ನವರು ಆ ಲೆಟರ್ ತೆಗೆದುಕೊಂಡು ಬಂದರು, ಆ ಪ್ರಕಾರ ಅಂತಿಮ ಸಂಸ್ಕಾರವಾಯಿತು. ವರರಾವ್ ಗದ್ದರ್ ಬಂದರು, ಎಲ್ಲಾ ಕಡೆಗೆ ಬಂದು, ನನ್ನ ಕಡೆಗೂ ಬಂದರು. ಏನ್ರೀ ಈ ತರಹದ ಒಂದು ಹತ್ಯೆಯಾಗಿದೆ ಅಂದರು. ನಾನು ಹೇಳಿದೆ ನೋಡಪ್ಪ ಅದರ ಬಗ್ಗೆ ಏನೂ ಇಲ್ಲ. ಇವೆಲ್ಲಾ ಮಾತುಕತೆ ನಡೆದವು. ಯಾಕೆ ಈ ಮಾತು ಹೇಳುತ್ತೇನೆ ಅಂದರೆ ಅವತ್ತೇ ಅವರು ಹೇಳಿದರು ಪ್ರತೀಕಾರ ಎಂದು.. ಈ ತರಹ ಎಲ್ಲಾ ಕಡೆ ಬರುತ್ತದೆ. ಮನುಷ್ಯನ ರಾಜಕೀಯ ಜೀವನದಲ್ಲಿ ಇವೆಲ್ಲಾ ಘಟನೆಗಳು ಬರುತ್ತವೆ. ನಾವು ಎದುರಿಸಬೇಕಾಗುತ್ತದೆ. ಮತ್ತು ವಿರೋಧಪಕ್ಷದ ನಾಯಕರಾಗಿ ನೀವು ಕೇವಲ ಒಂದು ಪಕ್ಷಕ್ಕಲ್ಲ. ಯಾವ ರೀತಿಯಾಗಿ ನಾವು ಎಲ್ಲಾ ಪಕ್ಷಗಳಿಗೆ ಮುಖ್ಯಮಂತ್ರಿಯಾಗಿದ್ದೇವೆ ಅದೇ ರೀತಿ ಅವರೂ ರಾಜ್ಯದ ವಿರೋಧ ಪಕ್ಷಗಳ ನಾಯಕರು ಇವತ್ತು ಪ್ರತಿಯೊಂದು ವಿಚಾರಧಾರೆ ಇರುವ ಜನರ ಭಾವನೆಗಳನ್ನು ತಿಳಿಯುವಂತಹ ಅರ್ಥಮಾಡಿಕೊಳ್ಳುವಂತಹ ಪ್ರಯತ್ನ ಈ ಸಮಾಜದಲ್ಲಿ ಮಾಡಬೇಕಾಗುತ್ತದೆ. ಆದ ಮೇಲೆ ಪೋಲೀಸ್ ಇಲಾಖೆ ಆಜ್ಞೆ ಉಲ್ಲಂಘಿಸಿದರು ಎಂದು. ಈ ಸರ್ಕಾರ ಹತ್ತು ತಿಂಗಳ ಕಾಲ ಸರಿಯಾದ ರೀತಿಯಲ್ಲಿ ಆಡಳಿತ ನಡೆಸಿಕೊಂಡು ಬಂದಿದ್ದೇವೆ. we have created the public opinion. ಕಿಂಚಿತ್ ಮಾತ್ರ ನಾವು ಎಡವಿಲ್ಲ. ಸರಿಯಾದ ರೀತಿಯಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಕೆಲಸ ನಾವು ಮಾಡಿದ್ದೇವೆ. ಅದಾದ ಮೇಲೆ ಪಾವಗಡದಲ್ಲಿ ಘಟನೆ ನಡೆಯಿತು. ತಮಗೆ ಗೊತ್ತಿದೆ. ಬೀದರ್‌ನಿಂದ ಆಂಧ್ರ ಬಾರ್ಡರ್ ಏನಿದೆ, ಅಲ್ಲಿಗೆ ಬಂದು ರಾತ್ರಿ ಹತ್ಯೆಯಾಯಿತು. ನಾನು ಹೋಲಿಕೆ ಮಾಡುವುದಿಲ್ಲ. ರಾಷ್ಟ್ರಮಟ್ಟದಲ್ಲಿ ಎಷ್ಟಾಗಿದೆ ಅನ್ನುವುದಲ್ಲ. ಮೊನ್ನೆ ಕರೀಂನಗರದಲ್ಲಿ ಹತ್ಯೆಯಾಯಿತು. ಗುಂಟೂರಿನಲ್ಲಿ ಆಯಿತು. ಮೆಹಬೂಬ ನಗರದಲ್ಲಿ ಬರುವ ಐದು ಬಸ್‌ಗಳ ಪೈಕಿ ಒಂದು ಬಸ್ ಕರ್ನಾಟಕದ್ದು ಹೋಯಿತು. ಎಲ್ಲಾ ಕಡೆ ದಿನೇ ದಿನೇ ಈ ತರಹದ ಒಂದು ಭಾವನೆ, ಪ್ರವೃತ್ತಿ ಬೆಳೆಯುತ್ತಿದೆ. ಶ್ರೀ ರಾಜಶೇಖರರೆಡ್ಡಿ we is the first chief minister ಅವರನ್ನು ಅಭಿನಂದಿಸಬೇಕಾಗುತ್ತದೆ, ಮಾಸಾಗಿ ಎಲ್ಲಾ ಕಡೆಯಿಂದ ನಕ್ಸಲೈಟರನ್ನು ಕರೆಸಿದರು. ಮಾತುಕತೆ ಮಾಡಿದರು, ಮಾತುಕಥೆ ಮುಖಾಂತರ ಅವರ ಬೇಡಿಕೆಗಳು ಏನು ಏನಿವೆ ಅವನ್ನು ಪೂರೈಸತಕ್ಕಂಥ ರೀತಿಯಲ್ಲಿ ಅದು ಕೂಡ ಆಗಲಿಲ್ಲ. ನಮ್ಮ ದೇಶದ ಗೃಹಮಂತ್ರಿಯಾದಂತಹ ಶಿವರಾಜಪಾಟೀಲರೂ ಕೂಡ ಆಂಧ್ರಪ್ರದೇಶಕ್ಕೆ ಹೋಗಿಬಂದರು. ಶ್ರೀ ಹೆಚ್ ಕೆ ಪಾಟೀಲರು ಹೋಗಿದ್ದರು, ಮೊನ್ನೆ ನನ್ನ ಜೊತೆ ಕಂದಾಯ ಸಚಿವರು ಇದ್ದರು. ಮಾನ್ಯ ಶಿವರಾಜಪಾಟೀಲರ ಜೊತೆ ನಾವು ಮಾತನಾಡಿದೆವು. ಅವರಿಗೆ ಈ ನಕ್ಸಲೈಟ್ಸ್ ಹಾವಳಿ ಹೆಚ್ಚಾಗುತ್ತಿದೆ ಎಂದು ಹೇಳಿದೆವು ರಾಷ್ಟ್ರಮಟ್ಟದಲ್ಲಿ ಇತರ ಕಡೆಯಲ್ಲಿ ಏನು ನಡೆಯುತ್ತಿದೆ, ಆ ರೀತಿ ನಿಮ್ಮ ಕರ್ನಾಟಕದಲ್ಲಿ ಇಲ್ಲ ಅಂದರು. with all that i have requested Mr.Shivaraj Patel. ಸರ್ ಒಮ್ಮೆ ಬನ್ನಿರಿ, ಬೆಂಗಳೂರಿಗೆ ಬಂದರೆ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರನ್ನೂ ಕರೆಸುವೆವು, ಸಮಾಜದ

ಬಗ್ಗೆ ಚಿಂತನೆ ಮಾಡುವ ಎಲ್ಲರನ್ನೂ ಕರೆಸೋಣ, ಮಾತುಕತೆ ಆಡೋಣ ಎಂದು ಹೇಳಿದೆ. ಯಾವ ತರಹವಾಗಿ ಇದಕ್ಕೆ ನಾವು ಪರಿಹಾರ ಹುಡುಕುವ ದಿಸೆಯಲ್ಲಿ ನಾನು ಹೇಳುತ್ತಿದ್ದೇನೆಂದರೆ ಈ ರಾಜ್ಯದ ಮುಖ್ಯಮಂತ್ರಿಯಾಗಿ ಈ ಒಂದು ಸೂಕ್ಷ್ಮತೆಯ ಸಮಸ್ಯೆಗಳ ಬಗ್ಗೆ ಪರಿಹಾರ ಕಂಡುಹಿಡಿಯುವಲ್ಲಿ ನಮ್ಮದೇ ಆದ ಪ್ರಯತ್ನ ಇವತ್ತು ಮಾಡಿದ್ದೇವೆ. ಇವತ್ತು ವಿಧಾನಸೌಧ, ಪಾರ್ಲಿಮೆಂಟ್‌ಗಳ ಸಂರಕ್ಷಣೆ. ವೆಂಕಯ್ಯನಾಯ್ಡುರವರು ಪ್ರಚಾರಕ್ಕೆ ಹೋದಾಗ ಏನಾಯಿತು. ಎಲ್ಲಾ ಕಡೆ ನಾವು ನಂಬಲಾರದಂತಹ ಊಹಿಸಲಾರದಂತಹ ಘಟನೆ ಈ ಒಂದು ರಾಷ್ಟ್ರದಲ್ಲಿ ನಡೆಯುತ್ತಿದೆ. ನಾನು ಶಿವಮೊಗ್ಗಕ್ಕೆ ಹೋದೆ. ಸಿಂಧ್ಯಾ ಅವರು ಬರಬೇಕಾಗಿತ್ತು, ಬಹಳ ಇಂಟರೆಸ್ಟಾಗಿರುತ್ತಿತ್ತು. ಅವರೂ ಬರಲಿಲ್ಲ. ಒಂದು ಕಡೆ ಬಂಗಾರಪ್ಪ, ಲೋಕಸಭಾ ಸದಸ್ಯರು, ಬಿಟ್ಟುಹೋದರು. ಒಂದು ಕಡೆ ಯಡಿಯೂರಪ್ಪನವರು ಈಶ್ವರಪ್ಪನವರು; ಒಂದು ಕಡೆ ಕಾಗೋಡು ತಿಮ್ಮಪ್ಪನವರು – ನಮ್ಮ ಗತಿ ಏನಾಗಿತ್ತು? ವಾಟಾಳ್ ನಾಗರಾಜ್ ನೀವೂ ಇರಬೇಕಾಗಿತ್ತು. ನಾನು ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪರವರಿಗೆ ಮತ್ತು ಈಶ್ವರಪ್ಪನವರಿಗೆ ನಾನು ಅಭಿನಂದಿಸಬೇಕಾಗಿದೆ. ಆ ಜಿಲ್ಲೆಗೆ ಮೆಡಿಕಲ್ ಕಾಲೇಜ್ ಕೊಡುವ ಬಗ್ಗೆ ಮೊದಲ ಐದರಲ್ಲಿ ಬರಲಿಲ್ಲ. ಆರನೇದರಲ್ಲಿ ಬಂತು. ಯಡಿಯೂರಪ್ಪನವರ ನೇತೃತ್ವದಲ್ಲಿ ಅಲ್ಲಿರತಕ್ಕವರೆಲ್ಲ ಬಂದರು. ಒಳ್ಳೆಯ ಕಾರ್ಯಕ್ರಮ ಆಯಿತು. ಅಲ್ಲಿ ನಡೆದ ಪತ್ರಕರ್ತರ ಸಮ್ಮೇಳನದಲ್ಲಿ ಏನು ಹೇಳಿದೆ ಎಂಬುದನ್ನು ಹೇಳುತ್ತೇನೆ ಸಾರ್. ಎಲ್ಲಾ ಕಡೆ ವಿಶ್ವವಿದ್ಯಾನಿಲಯಗಳಿವೆ, ಪತ್ರಕರ್ತರೂ ನಮ್ಮ ಭಾವನೆಗಳನ್ನು ಹೇಳುವ ರೀತಿಯಲ್ಲಿ ಏನೆಂದರೆ ಇದೊಂದು ಇಜಂ ಇದೆ, ವಾದ ಇದೆ, ವಾದದ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ಕಡೆಗೆ ಬುದ್ಧಿಜೀವಿಗಳ ಮಟ್ಟದಲ್ಲಿ ಚರ್ಚೆಯಾಗುತ್ತಾ ಇದೆ. ಎಲ್ಲೆಲ್ಲಿ ನಡೆಯುತ್ತಿದೆ ಎಂಬುದು ನಿಮ್ಮ ಗಮನಕ್ಕೆ ಬಂದಿದೆಯೇ ಎಂದರು, ನಾನು ಹೋಂ ಮಿನಿಸ್ಟರ್ ಇದ್ದೇನೆ, ಮೊದಲು ಸಿಂಧ್ಯಾ ಇದ್ದರು ಕೇಳಿರಿ; ಎಲ್ಲಾ ವಿಚಾರಗಳೂ ಗೃಹಮಂತ್ರಿಗಳ ಗಮನದಲ್ಲಿರುತ್ತದೆ. ನಾನು ಕುವೆಂಪುದಲ್ಲೇ ಇದೆ ಎಂದು ಹೇಳಲಿಲ್ಲ; ಅವಹೇಳನ ಮಾಡತಕ್ಕಂಥ ರೀತಿಯಲ್ಲಿ ಅಲ್ಲ. ಏಕೆಂದರೆ ಯಾರೇ ಇರಲಿ ರಾಜಕೀಯ ಪಕ್ಷ, ಅವರದೇ ಆದ ಒಂದು ಸಿದ್ಧಾಂತ ಇದೆ. ತಮ್ಮ ಜೀವನದಲ್ಲಿ ಪ್ರತಿಪಾದನೆ ಮಾಡುವ ವಿಚಾರಧಾರೆಗಳಿವೆ, ಅದರ ಬಗ್ಗೆ ಏನಿಲ್ಲ, ಪರ್ಟಿಕಲರ್ ಆಗಿ ವಿಶ್ವವಿದ್ಯಾಲಯ ಎಂದು ಇಲ್ಲ, ನಮ್ಮ ಶಿಕ್ಷಣ ಸಚಿವರು ಹೋಗಿ ಏನೋ ಹೇಳಿದರು, ಇದೆಲ್ಲಾ ಬರುತ್ತದೆ. ನನ್ನದೇನು ಅಂದರೆ ಎಲ್ಲಾ ಕಡೆಗೆ ಕೌಂಟರ್ ಮಾಡಲು ಹೋಗುವ ಪ್ರವೃತ್ತಿ ಇಲ್ಲ. ತಾಳ್ಮೆಯಿಂದ ಸಹೃದಯತೆಯಿಂದ ಹೋಗುತ್ತೇನೆ, ಅದಕ್ಕೇ ಇಲ್ಲಿ ಕೂತಿದ್ದೇನೆ, ಈಗ ಕೊಯಲಿಷನ್‌ನಲ್ಲಿ ಸಿಂಧ್ಯಾ ಮತ್ತು ಪ್ರಕಾಶ್‌ರವರು ಕೂಡಿ ಹೋಗಬೇಕಲ್ಲಾ ಅಂದರು. ಅದಕ್ಕೇ ಒಂದು ಮಾತು ಹೇಳುತ್ತಿದ್ದೇನೆ ಬೇರೆ ಸಂದರ್ಭದಲ್ಲಿ ನಾನು ಮಾತನಾಡುತ್ತೇನೆ. ಸೆಂಟ್ರಲ್ ಫಾರೆಸ್ಟ್ ಬಗ್ಗೆ ಹೇಳಿದ್ದೇನೆ, ಮೊನ್ನೆ ಮೈನ್ಸ್ ಬಗ್ಗೆ ಇಂಟರ್‌ನ್ಯಾಷನಲ್ ಸಮ್ಮೇಳನ ಇತ್ತು. ಶ್ರೀ ಸಿಸ್ ರಾಮ್ ಓಲಾ ಕೇಂದ್ರದ ಮಂತ್ರಿಗಳು ಬಂದಿದ್ದರು, ಒಡಾ ಎಂದು ಹೇಳಿ ಸಂಬಂಧಪಟ್ಟ ಸೆಕ್ರೆಟರಿ ಮೊನ್ನೆ ಪ್ರಧಾನಮಂತ್ರಿಗಳು ರಿವ್ಯೂ ಮಾಡುವ ಕಾಲದಲ್ಲಿ ಯಾಕೆ ತಡವಾಗುತ್ತದೆ ಎಂಬ ಬಗ್ಗೆ ಚರ್ಚೆ ಆಯಿತು. ಇವತ್ತು ಭದ್ರಾ ಪ್ರಾಜೆಕ್ಟ್ 2800 ಕೋಟಿ ರೂ ಜೆ ಎಚ್ ಪಟೇಲರ ಕಾಲದಲ್ಲೇ ಹೇಳಿದ್ದರು. ಇನ್ನೂ ಕೂಡ 8000 ಎಕರೆ ಫಾರೆಸ್ಟದ್ದು ಕ್ಲಿಯರೆನ್ಸ್ ಇಲ್ಲ ಮೊನ್ನೆ ನಾನು ಜೆ ಎಚ್ ಪಟೇಲರ ಕ್ಷೇತ್ರಕ್ಕೆ ಹೋಗಿದ್ದೆ ನಮ್ಮ ಮಹಿಮಾ ಪಟೇಲ್ ಇಲ್ಲ. ಅಲ್ಲಿ ಉಮ್ರಾಣಿ ಅಮದ್‌ಪುರದಲ್ಲಿ 96 ಕೋಟರೂ ಗಳಿಗೆ ನಾವು ಬಂದ ಮೇಲೆ ಅದಕ್ಕೆ ಒಪ್ಪಿಗೆ ಕೊಡಿಸಿದ್ದೇವೆ. ನೀರಾವರಿಗಾಗಿ ಎಲ್ಲಾ ಕಡೆಗೆ ಫಾರೆಸ್ಟ್

ಕ್ಲಿಯರೆನ್ಸ್‌ಏನಿದೆ ಅದನ್ನು ಪಡೆದುಕೊಳ್ಳಲು ನಾವು ಬಹಳ ಪ್ರಯತ್ನ ಪಟ್ಟಿದ್ದೇವೆ. ಮೊನ್ನೆ ಸಿಂಧ್ಯಾ ಹಾಗೂ ನಾವು ಕೂತು ಕುದುರೆಮುಖದ ಗಣಿಗಾರಿಕೆ ಬಗ್ಗೆ ಚರ್ಚೆ ಮಾಡಿದೆವು 10 ಸಾವಿರ ನೌಕರರು, ಅಲ್ಲಿ ಇದ್ದಾರೆ ಮುಚ್ಚತಕ್ಕಂತಹ ಕಾಲದಲ್ಲಿ ಅವೆಲ್ಲಾ ಸಮಸ್ಯೆಗಳು ಅಂದರೆ ಇಂಟರ್‌ಡಿಪೆಂಡೆಂಟ್, ಅದರ ಬಗ್ಗೆ ಕೂಡ ನಾವು ಮಾಡಬೇಕಾಗಿದೆ. ನೀವೂ ಪ್ರಸ್ತಾಪ ಮಾಡಿದ್ದೀರಿ. ಈ ಭಾಗದ ಚಾಮರಾಜನಗರ ಜಿಲ್ಲೆಯಲ್ಲಿ ಆಗುತ್ತಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಒಟ್ಟಾರೆ ಅಂದರೆ ಸರ್ಕಾರ ಇದರ ಬಗ್ಗೆ ಬಹಳ ಸಶಕ್ತವಾಗಿದೆ. ನಕ್ಸಲಿಯ ಚಟುವಟಿಕೆ ಏನು ಬೆಳಿಯುತ್ತಿದೆ ಅದನ್ನು ನಿಯಂತ್ರಿಸುವ ರೀತಿಯಲ್ಲಿ ಇವತ್ತು ಅಭಿವೃದ್ಧಿ ಕೆಲಸಕಾರ್ಯಗಳು ಮಾಡಲೇಬೇಕು. ಅಭಿವೃದ್ಧಿ ಕೆಲಸಗಳಿಗಾಗಿ ಈಗಾಗಲೇ 25 ಕೋಟಿ ರೂ ಇಟ್ಟಿದ್ದೇವೆ. ನಮ್ಮ ಅಭಿವೃದ್ಧಿ ಆಯುಕ್ತರು ಈಗ ಅಲ್ಲೇ ಇದ್ದಾರೆ, ಅವರೂ ಕೂಡ ಬರುತ್ತಾ ಇದ್ದಾರೆ. ಪಾವಗಡದ ಘಟನೆ ಬಗ್ಗೆ ಅವತ್ತೇ ಮುಂಜಾನೆ ನಾನು ಮಾನ್ಯ ರಾಜಶೇಖರರೆಡ್ಡಿ ಜೊತೆ ಮಾತನಾಡಿದೆ ಏನ್ರೀ ಆಂಧ್ರದಿಂದ ಎಲ್ಲಾ ಕಡೆಗೆ ಬರುತ್ತಾ ಇದ್ದಾರೆ ಎಂದು. ನಿಮಗೆ ಗೊತ್ತಿರಬಹುದು. ಪಾವಗಡ, ಅನಂತರಪುರ ಜಿಲ್ಲೆ, ಪೆರಿಕರ್ ರವಿ ಹತ್ಯೆಯಾಯಿತು. ಅವರ ತಂದೆ ಕೂಡ ನಕ್ಸಲಿಯ ಚಟುವಟಿಕೆಯಲ್ಲಿದ್ದರು. ಎಲ್ಲಾ ಕಡೆ ಒಂದೊಂದಿದೆ ಅದರಲ್ಲಿ ರಾತ್ರಿಗೆ ಮಾಸ್ಕ್‌ನಲ್ಲಿ ಬಂದು ಅಮಾಯಕವಾಗಿ ಆಗಿದೆ. ಅದಾದಮೇಲೆ ಯಾವ ಒಂದು ಘಟನೆಯೂ ಆಗಿಲ್ಲ. ಅದು ಆಗಬಾರದು. ಪ್ರತಿಯೊಂದರಲ್ಲೂ ನಾವು ಸಶಕ್ತರಾಗಿರಬೇಕೆಂಬ ರೀತಿಯಲ್ಲಿ ಮಾಡುತ್ತಾ ಇದ್ದೇವೆ. ಇವತ್ತು ಆಂಧ್ರ ಕರ್ನಾಟಕ ಬಾರ್ಡರ್ ಪ್ರದೇಶಕ್ಕೆ ಪೋಲಿಸ್ ಇಲಾಖೆಗೆ ಹೆಚ್ಚಿನ ಸಿಬ್ಬಂದಿ ಕೊಡುವ ರೀತಿಯಲ್ಲಿ ಎಲ್ಲಾ ಕಡೆಗೆ ನಾವು ವ್ಯವಸ್ಥೆ ಮಾಡಿದ್ದೇವೆ. ಪ್ರತಿಯೊಂದು ಹಂತದಲ್ಲಿ ಸರ್ಕಾರ ಇದರ ಬಗ್ಗೆ ವಿಚಾರ ಮಾಡುತ್ತದೆ. ಇದರ ಬಗ್ಗೆ ಹೆಚ್ಚಿನ ಕಾಳಜಿವಹಿಸಿ ನಾವು ಕೆಲಸ ಕಾರ್ಯಗಳು ಮಾಡುತ್ತಾ ಇದ್ದೇವೆ. ಕರ್ನಾಟಕ ರಾಜ್ಯದಲ್ಲಿ ಈ ಚಟುವಟಿಕೆಗಳು ಹೆಚ್ಚಿನ ರೀತಿಯಲ್ಲಿ ಬೆಳೆಯಲು ಅವಕಾಶ ಇಲ್ಲ. We have taken all the precautions. ಮತ್ತು ದಟ್ಟ ಅರಣ್ಯದಲ್ಲಿ ಯಾವ ರೀತಿಯಾಗಿ ನಾವು ಇವತ್ತು ಮಾಡಿದ್ದೇವೆ, ಮತ್ತು ಸಂರಕ್ಷಣೆ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಚಿಕ್ಕಮಗಳೂರು ಘಟನೆಯ ಬಗ್ಗೆ ಹೇಳಿದ್ದಾರೆ. ನಾನು ಹೇಳಿದೆ, ಸಿಂಧ್ಯಾರವರು ಬರಲಿಲ್ಲ. ಪಂಚಾಯತ್ ರಾಜ್ ಚುನಾವಣೆಯನ್ನು ಯಶಸ್ವಿಯಾಗಿ ಮಾಡಿದೆವು. 85 ಸಾವಿರ ಜನರನ್ನು ಚುನಾಯಿಸಲು ಚುನಾವಣೆಯಾಯಿತು. ನಮ್ಮ ಸರ್ಕಾರ ಬಂದಮೇಲೆ ಒಂದು ಕೂಡ ಫೈರಿಂಗ್ ಆಗಲಿಲ್ಲ. ಸಿಂಧ್ಯಾರವರು ಗೃಹಸಚಿವರಾಗಿದ್ದಾಗ ಫೈರಿಂಗ್ ಆಗಿತ್ತೋ ಏನೋ ಗೊತ್ತಿಲ್ಲ. ಈಗ ಸಮ್ಮಿಶ್ರ ಸರ್ಕಾರದಲ್ಲಿ ಒಂದು ಫೈರಿಂಗ್ ಆಗಲಿಲ್ಲ. ಮತ್ತೆ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳು ಒಳ್ಳೆಯ ದಕ್ಷರಾದ ಜಿಲ್ಲಾಧಿಕಾರಿಗಳು. I have to run the administration. ಆಡಳಿತವನ್ನು ನಡೆಸಬೇಕಾಗಿದೆ. ಉತ್ತಮ ಜಿಲ್ಲಾಧಿಕಾರಿಗಳು ಸಿಗುವುದೇ ಬಹಳ ಕಷ್ಟ ಕಮಿಟ್‌ಮೆಂಟ್ ಇರತಕ್ಕಂಥವರು. ಸಿಕ್ಕಿದರೆ ಅದನ್ನು ನಾವು ಪ್ರಶಂಸೆ ಮಾಡಬೇಕಾಗುತ್ತದೆ. ಬಾಬಾ ಬುಡನ್‌ಗಿರಿ ದತ್ತಪೀಠದ ಬಗ್ಗೆ ನಾವು ಎಷ್ಟು ಚೆನ್ನಾಗಿ ಮಾಡಿದ್ದೇವೆ. ದತ್ತಪೀಠಕ್ಕೆ ಹೋಗಲಿಕ್ಕೆ ನಾವು ಯಾರಿಗೂ ಕೂಡ ನಿರ್ಬಂಧವನ್ನು ಹಾಕಲಿಲ್ಲ. ಶೋಭಾ ಯಾತ್ರೆ ಬಗ್ಗೆ ಹೇಳಿದರು. ಶೋಭಾಯಾತ್ರೆಗೆ ಶ್ರೀ ಯಡಿಯೂರಪ್ಪನವರು ಹೋಗುತ್ತಿದ್ದರು. ಶ್ರೀ ರವಿಯವರು ಹೋಗುತ್ತಿದ್ದರು. ಶೋಭಾ ಯಾತ್ರಗೆ ಹೋಗಬೇಡಿ, ಅದರಿಂದ ಎಲ್ಲಾ ಕಡೆಗೆ ಒಂದು ಕೆಟ್ಟ ವಾತಾವರಣ ಬರುತ್ತದೆಂದು ಹೇಳಿದ್ದೆವು. ತಪ್ಪೇನಲ್ಲ. ರಾಜ್ಯದ ಹಿತದೃಷ್ಟಿಯಿಂದ ಹೇಳಿದ್ದೇವೆ, ಒಂದು ಕಡೆಯಾದರೆ ಎಲ್ಲಾ ಕಡೆಗೆ

ಆಗುತ್ತದೆ. ಇಡೀ ನಮ್ಮ ರಾಜ್ಯದಲ್ಲಿ ಎಲ್ಲಾದರೂ ಒಂದು ಕಡೆ ಗಲಭೆಯಾದರೆ ಇಡೀ ರಾಷ್ಟ್ರದಲ್ಲಿಯೇ ಹಬ್ಬುತ್ತದೆ. ಅದಕ್ಕೆ ನಾವು ಯಶಸ್ವಿಯಾಗಿ ಬಾಬಾಬುಡನ್ ಗಿರಿ ಸಮಸ್ಯೆಯನ್ನು ಬಗೆ ಹರಿಸಿದ್ದೇವೆ. He is also one of the best deputy commissioner ಆಗತಕ್ಕ ರೀತಿಯಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದೆ. ನಾನು ಹೇಳಿದೆ, ಚಂದ್ರಬಾಬು ನಾಯ್ಡು ಅವರು ಇದ್ದಾಗ 148 ಮುನಿಸಿಪಾಲಿಟೀಸ್‌ಗಳಿಗೆ ಏನು ಮಾಡಿದರು ಎಂಬುದನ್ನು ಹೇಳುತ್ತೇವೆ. ಆಗ ನಾನು ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿ ಅವರ ಜೊತೆಗೆ ಮಾತುಕತೆಯಾಡಿದ್ದೇನೆ. ಹೈದರಾಬಾದನ್ನು ನೀವು ನೋಡಿದ್ದೀರಿ. ಅಲ್ಲಿ ಮದೀನಾ ಹೋಟೆಲ್ ಎಂದು ಇದೆ. ನಯಾಪುರ್ ಧಾಟಿದ ಮೇಲೆ ಅದು ಸಿಗುತ್ತದೆ. ಅದೆಲ್ಲಾ ಡಬೀರ್‌ಪುರ, ಚಾರ್ಮಿನಾರ್, ಇವೆಲ್ಲಾ ಕಡೆ ರೋಡುಗಳು ವೈಡನಿಂಗ್ ಆಗಿದೆ. ನೀವು ರಾಯಚೂರಿನಿಂದ ಹೈದರಾಬಾದ್‌ಗೆ ಹೋಗಬೇಕಾದರೆ ಮೆಹಬೂಬ್ ನಗರ ಸಿಟಿಯನ್ನು ನೋಡಿ. ಮೆಹಬೂಬ್ ನಗರ್ ಡಿಸ್ಟ್ರಿಕ್ಟ್. ಎಷ್ಟು ಚೆನ್ನಾಗಿ ವೈಡನಿಂಗ್ ಆಗಿದೆ. ಇವುಗಳನ್ನು ವೈಡನಿಂಗ್ ಮಾಡಬೇಕಾದರೆ ಕೆಲವು ಅಂಶಗಳನ್ನು ನೋಡಲೇ ಬೇಕಾಗುತ್ತದೆ. ಪರಿಹಾರ ವನ್ನು ಕೊಡುವುದು ಏನಿದೆ, ಅದು ಬೇರೆ. ಏಕೆಂದರೆ ಮಾನ್ಯ ಶಂಕರಮೂರ್ತಿಯವರು ಮಾತನಾಡು ತ್ತಿದ್ದರು, ಆಗ ನಾನು ವಿಧಾನಪರಿಷತ್ತಿನಲ್ಲಿದ್ದೆ. ಅಲ್ಲಿ ಒಳ್ಳೆಯ ಜಿಲ್ಲಾಧಿಕಾರಿಗಳಿದ್ದಾರೆ. ಎಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ಅದನ್ನು ಪ್ರಶಂಸೆ ಮಾಡಲೇಬೇಕು. ಅವರು ಒಳ್ಳೆಯ ದಕ್ಷರಿದ್ದಾರೆ. ಅವರೂ ಕೂಡ ಫೋಟೊ ತೋರಿಸಿ ಹೇಳಿದರು, ಮತ್ತೆ ಈಶ್ವರಪ್ಪನವರೂ ಕೂಡ ಫೋಟೊ ತೋರಿಸಿದರು. ಆ ಫೋಟೊ ಬಗ್ಗೆ ನಾನು ಈಗಾಗಲೇ ಡೆವಲಪ್‌ಮೆಂಟ್ ಕಮೀಷನರ್‌ಗೆ ಹೇಳಿದ್ದೇನೆ. ಇದರ ಬಗ್ಗೆ ತನಿಖೆ ಮಾಡಿ ವರದಿಯನ್ನು ಕೊಡಿ ಎಂದು ಹೇಳಿದ್ದೇನೆ. ತನಿಖೆ ಏನೆಂದರೆ ಅಲ್ಲಿ ಒಂದು ಯೂತ್ ಡೆಲಿಗೇಷನ್ ಬಂದಿತ್ತು. ಮುಂಜಾನೆ ಇನಾಗ್ಯುರೇಷನನ್ನು ರವಿಯೇ ಮಾಡಿದ್ದಾರೆ. ಇನ್ಯಾಗುರೇಟ್ ಮಾಡಿದಮೇಲೆ ಸಾಯಂಕಾಲ ಅವರೆಲ್ಲಾ ಯುವಕರು ಕುಣಿದಿದ್ದಾರೆ. ಇವರೂ ಅವರ ಜೊತೆ ಸೇರಿ ಕುಣಿಯುತ್ತಾರೆ ಎಂದು ಹೇಳಿದ್ದಾರೆ. ಆದರೂ ಕೂಡ ಇದನ್ನು ಈ ಒಂದು ಸದನದಲ್ಲಿ ಪ್ರಸ್ತಾಪ ಮಾಡಿದ ಕಾರಣ ಇದರ ಬಗ್ಗೆ ಕೂಡ ನಾವು ತನಿಖೆಯನ್ನು ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಎಲ್ಲಿಯಾದರೂ ತಪ್ಪಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ. ಒಳ್ಳೆಯ ಕೆಲಸ ಎಂದರೆ ಇಲ್ಲಿ ಎರಡು ಪಾರ್ಟಿ ಇದೆ. ಎಲ್ಲಿ ಕೆಲಸ ಮಾಡುತ್ತಾನೆ, ಅಲ್ಲಿ ಪ್ರಶಂಸೆ ಮಾಡುತ್ತೇವೆ. ಎಲ್ಲಿ ಏನಾದರೂ ಮಾಡಿ ಎಡವಿದ್ದರೆ ಅದರ ಬಗ್ಗೆ ಕೂಡ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಒಂದು ಮಾತನ್ನು ವಿರೋಧಪಕ್ಷದ ನಾಯಕರಿಗೆ, ವಿರೋಧ ಪಕ್ಷದ ಇತರ ಬೇರೆ ಪಕ್ಷದ ನಾಯಕರುಗಳಿಗೆ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ನಕ್ಸಲೀಯ ಹಾವಳಿಯಾಗಲಿ, ಕಾನೂನಿನ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡಿದ್ದೇವೆ. ಜನ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಮಾನ್ಯ ನಾಗರಾಜ್‌ರವರು, ಸಿಂಧ್ಯಾರವರು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದಿದ್ದಾರೆ. ಬೆಂಗಳೂರಿನ ಅವಸ್ಥೆ ನೋಡಿದರೆ ಏನ್ರೀ? ನಾವೇ 1972 ರಲ್ಲಿ ಆರಿಸಿಬಂದಮೇಲೆ ಮೇ ನಲ್ಲಿ ನಾವು ರಗ್ ಹಾಕಿಕೊಂಡು ಮಲಗುತ್ತಿದ್ದೆವು. ಈಗ ಎಷ್ಟು ಸೆಖೆಯಾಗಿದೆ. ಮೊನ್ನೆ ನಿಮ್ಮ ಅನಂತ ಕುಮಾರ್ ಜಾರ್ಖಂಡ್‌ನಿಂದ ಬಂದರು. ಜಾರ್ಖಂಡ್‌ನಿಂದ ಬಂದ ಮೇಲೆ ಬೆಂಗಳೂರು ಸ್ವರ್ಗವಾಗಿ ಕಂಡಿತು ಎಂದು ಹೇಳುತ್ತಾರೆ. ಬೇರೆ ರಾಜ್ಯದಿಂದ ಬಂದ ಜನರಿಗೆ ಬೆಂಗಳೂರು ಸ್ವರ್ಗವಾಗಿದೆ ಬೆಂಗಳೂರಿನವರು

ಇಲ್ಲಿ ಹೆಚ್ಚಿನ ಸಂಖ್ಯೆ ಬೆಳೆದು ಈ ರೀತಿ ಗತಿ ಆಗಿ ಕೂತಿದೆ ಎನ್ನುತ್ತಾರೆ. ಆದರೂ ಕೂಡ ಕಂಪಾರಿಟೀವ್ ಆಗಿ ನಾವು ತುಲನೆಯನ್ನು ಮಾಡಿದಾಗ ಬೇರೆ ರಾಜ್ಯಗಳಿಂದ ಕೂಡ ಬೆಂಗಳೂರು ಫಾರ್ ಸೂಪರ್ ಬಹಳ ಹೆಚ್ಚಿನ ರೀತಿಯಲ್ಲಿ ಆಗಿದೆ. ಇವತ್ತೇನು ಒಂದು ವಾತಾವರಣ ಇದೆ ಕರ್ನಾಟಕ ರಾಜ್ಯದಲ್ಲಿ ಅದು ಬಹಳ ಚೆನ್ನಾಗಿದೆ. ನಾವು ರಾಜಕೀಯವಾಗಿ ಬೇರೆ ಬೇರೆ ಭಿನ್ನಾಭಿಪ್ರಾಯಗಳಿರಬಹುದು. ಚುನಾವಣೆಗೆ ಹೋದಾಗ ನಮ್ಮ ಪರಸ್ಪರ ವಿಚಾರಗಳನ್ನು ಪ್ರಸ್ತಾಪಮಾಡೋಣ. ರಾಜ್ಯದ ಗೌರವ, ಬೆಂಗಳೂರಿನ ಗೌರವ ಇಲ್ಲಿ ಶಾಂತಿ ಕಾಪಾಡತಕ್ಕ ರೀತಿಯಲ್ಲಿ ಒಂದಾಗಿ ಕೆಲಸ ಮಾಡೋಣ. ಅದಕ್ಕೆ ತಮ್ಮೆಲ್ಲರ ಸಹಕಾರ ಬೇಕು ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಮಾತು. ಬೆಂಗಳೂರು ಸ್ವರ್ಗ ಅಲ್ಲ, ಈಗ ನರಕವಾಗಿದೆ. ಕಳೆದ ಎರಡು ದಿವಸದಿಂದ ವಿಧಾನಮಂಡಲದ ಸುತ್ತಮುತ್ತ ಏನು ವಾತಾವರಣ ಇದೆ, ಯಾವ ಪರಿಸ್ಥಿತಿಯಲ್ಲಿ ನಾವು ಒಳಗಡೆ ಬರುತ್ತಿದ್ದೇವೆ, ಎನ್ನುವುದು ನಿಮಗೆಲ್ಲರಿಗೂ ಗೊತ್ತಿರುವಂಥ ಸಂಗತಿ. ಗುಜರಾತ್‌ಗೂ ಹೋಗೋಣ ಸಾರ್. ಚರ್ಚೆ ಮಾಡೋಣ. ಇದನ್ನು ಇನ್ನೊಂದು ಬಿಹಾರ್ ರೀತಿ ಮಾಡಬೇಕೆಂದರೆ ನನ್ನದೇನೂ ಅಭ್ಯಂತರವಿಲ್ಲ. ನನ್ನದೇನು ಎಂದರೆ ನಿಮ್ಮಿಂದ ಒಂದು ದಿವಸ ಪೂರ್ತಿ ನಮ್ಮೆಲ್ಲಾ ಕಲಾಪಗಳನ್ನು ಬದಿಗೊತ್ತಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎನ್ನುವ ಬಗ್ಗೆ ಯಾವ ಮಟ್ಟದ ಒಂದು ವಿಚಾರವನ್ನು ನಿಮ್ಮ ಮುಂದೆ ಇಟ್ಟು ಅದಕ್ಕೆ ಪರಿಹಾರವನ್ನು ಹುಡುಕುವಂಥ ಪ್ರಯತ್ನವನ್ನು ಮಾಡಿದೆವೋ ಅದಕ್ಕೆ ಯಾವುದೇ ಒಂದು ಸ್ಪಷ್ಟವಾದ ಉತ್ತರ ನಿಮ್ಮಿಂದ ಬಂದಿಲ್ಲ. ಲೈವ್‌ಬ್ಯಾಂಡನ್ನು ರದ್ದುಮಾಡುವ ಬಗ್ಗೆ, ಅದರ ಬಗ್ಗೆ ನಿಮ್ಮದೇನೂ ಇಲ್ಲ. ನಕ್ಸಲೈಟ್ಸ್ ಚಟುವಟಿಕೆ ಒಂದು ರೀತಿ ಅದನ್ನು ವೈಭವೀಕರಣ ಮಾಡಿ ಅದೇ ಸರಿ ಅನ್ನುವ ಅರ್ಥ ಬರುವ ರೀತಿಯಲ್ಲಿ ನೀವೇನಾದರೂ ಮಾತನಾಡಿಬಿಟ್ಟರೆ ಅದರ ಪರಿಣಾಮ ಏನಾಗಬಹುದು ಎನ್ನುವಂಥದ್ದು ಸಹ ನಮಗೆ ಇವತ್ತು ಅರ್ಥವಾಗಲಿಲ್ಲ. ನಿಮ್ಮ ಉತ್ತರವನ್ನು ಒಂದು ರೀತಿ ಜನರಲೈಜ್ ಮಾಡಿಬಿಟ್ಟು ಯಾವುದೇ ಇದರ ಬಗ್ಗೆ ಸೀರಿಯಸ್‌ನೆಸ್ ಇಲ್ಲದೆಯೇ ಎಲ್ಲಾ ನಮ್ಮ ರಾಜ್ಯ ಸುವ್ಯವಸ್ಥಿತವಾಗಿದೆ, ಶಾಂತವಾಗಿದೆ ಎನ್ನುವ ರೀತಿಯಲ್ಲಿ ತಾವು ಉತ್ತರವನ್ನು ಕೊಡುವಂಥ ಪ್ರಯತ್ನವನ್ನು ಮಾಡಿದ್ದೀರಿ ಬಹುಶಃ ನಿಮ್ಮ ಇವತ್ತಿನ ಉತ್ತರ ಸರಿಯಿಲ್ಲ ಎಂದು ನಿಮಗೇ ಮನವರಿಕೆಯಾಗುತ್ತದೆ. ಏಕೆಂದರೆ ಒಬ್ಬ ರಾಜ್ಯದ ಮುಖ್ಯಮಂತ್ರಿಗಳಾಗಿ ಗೃಹಸಚಿವರಾಗಿ ಇಲಾಖೆಯನ್ನು ನೋಡಿಕೊಳ್ಳತಕ್ಕಂಥವರು ಇವತ್ತು ಈ ರೀತಿ ಮಾತನಾಡುವಂಥದ್ದು ಅಥವಾ ವರವರರಾವ್ ಗದ್ದರ್ ಬಗ್ಗೆ ಸ್ಪಷ್ಟವಾದ ಒಂದು ನಿಲುವನ್ನು ತೆಗೆದುಕೊಳ್ಳದೇ ಇರುವಂಥದ್ದು ಮತ್ತು ಯಾರು ಈ ನಕ್ಸಲೈಟ್ಸ್ ಬಗ್ಗೆ ಕೈಜೋಡಿಸುತ್ತಿದ್ದಾರೆ, ಅವರ ಬಗ್ಗೆ ಕ್ರಮ ತೆಗೆದುಕೊಳುತ್ತೇವೆ ಎನ್ನುವಂಥದ್ದು ಮತ್ತು ಪೋಲೀಸ್ ಬಂದೋಬಸ್ತನ್ನು ಮಾಡುತ್ತೇವೆ, ಆಧುನಿಕ ಶಸ್ತ್ರಾಸ್ತ್ರವನ್ನು ಕೊಡುತ್ತೇವೆ, ಬಿಗಿ ಮಾಡುತ್ತೇವೆ ಎಂಬ ಬಗ್ಗೆ ಸ್ಪಷ್ಟವಾದ ಉತ್ತರ ನಿಮ್ಮಿಂದ ಬರಲಿಲ್ಲ. ನಾನು ಗ್ರಾಮಪಂಚಾಯಿತಿ ಚುನಾವಣೆಯನ್ನು ಮಾಡಿದೆ ಯಡಿಯೂರಪ್ಪನವರೇ, 85 ಸಾವಿರ ಜನರು ಆಯ್ಕೆಯಾದರು ಒಂದು ಕೊಲೆಯಾಗಲಿಲ್ಲ. ಒಂದು ಸುಲಿಗೆಯಾಗಲಿಲ್ಲ. ಬಂದೂಕವನ್ನು ಉಪಯೋಗ ಮಾಡಲಿಲ್ಲ. ಈ ರೀತಿ ಒಂದು ಫೈರಿಂಗನ್ನು ನಾವು ಮಾಡಲಿಲ್ಲ, ಈ ರೀತಿ ನೀವು ನಿಮ್ಮ ಭುಜವನ್ನು ತಟ್ಟಿಕೊಳ್ಳುವ ಪ್ರಯತ್ನವನ್ನೇನು ಮಾಡಿದ್ದೀರಿ, ಇದರಿಂದ

ಬಹುಶಃ ಈ ರಾಜ್ಯವನ್ನು ಶಾಂತಿ ಸುವ್ಯವಸ್ಥೆ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ನಿಮಗೆ ಇಚ್ಛೆಇಲ್ಲವೆಂದು ಕಾಣುತ್ತದೆ. ರಾಜ್ಯ ಸರ್ಕಾರದ ಮೊದಲನೇ ಕರ್ತವ್ಯ ಈ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದನ್ನು ಸರಿ ಮಾಡುವಂಥದ್ದು. ಆ ಕರ್ತವ್ಯವನ್ನು ಮಾಡದೇ ಉಳಿದೆಲ್ಲಾ ಉತ್ತರ ಕೊಡುವಂಥ ಪ್ರಯತ್ನನವನ್ನು ಮಾಡಿದ್ದೀರಿ. ಬಹಶಃ ನಿಮ್ಮ ಉತ್ತರ ನಮಗೆ ಯಾವುದೇ ರೀತಿ ಯಾರಿಗೂ ಸಮಾಧಾನವಾಗಿಲ್ಲ. ಗೊತ್ತಿಲ್ಲ, ನಮ್ಮ ಮಿಡಿಯಾ ಸ್ನೇಹಿತರು ನಾಳೆ ಈ ರೀತಿ ನೀವು ಉತ್ತರ ಕೊಟ್ಟದ್ದನ್ನು ಕಳೆದ ಅನೇಕ ದಿನಗಳಿಂದ ಯಾವ ರೀತಿ ಅವರು ತೆಗೆದುಕೊಳ್ಳುತ್ತಾರೋ ನೋಡೋಣ. ನೀವು ಹೇಳಿದರಲ್ಲಾ, ರಾಜ್ಯದ ಜನರು ನಮ್ಮನ್ನು ಬಹಳ ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡಿದ್ದಾರೆ ಯಡಿಯೂರಪ್ಪನವರೇ ಎಂದರೆ ಬಹುಶಃ ಇದೇ ಸುಧಾರಣೆ ಎಂದು ನಿಮ್ಮ ಮನಸ್ಸಿನಲ್ಲಿ ಇದ್ದರೆ ನಾವು ಮತ್ತೆ ನಿಮ್ಮನ್ನು ಕ್ಲಾರಿಫಿಕೇಷನ್ ಕೇಳುವುದು, ಪ್ರಶ್ನೆ ಕೇಳುವುದು, ಇದರಿಂದ ಏನೂ ಉಪಯೋಗವಾಗುತ್ತೆ ಎಂದು ನನಗೇನೂ ಅನಿಸುವುದಿಲ್ಲ. ಮತ್ತೆ ನಿಮಗೆ ಆ ಕಳಕಳಿಯೂ ಸಹ ಆ ಒಂದು ಶಬ್ದ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದನ್ನು ಸರಿಪಡಿಸಬೇಕು ಎನ್ನುವ ಯಾವುದೂ ನಿಮಗೆ ಕಾಣುತ್ತಿಲ್ಲ ಎನ್ನುವುದು ಸ್ಪಷ್ಟವಾಗಿ ನಿಮ್ಮ ಉತ್ತರದಿಂದ ಗೊತ್ತಾಗಿದೆ. ನಿಮ್ಮ ಉತ್ತರದಿಂದ ನಮಗ್ಯಾರಿಗೂ ತೃಪ್ತಿಯಾಗಿಲ್ಲ. ಅಷ್ಟೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ವೆಂಕಟಮ್ಮನಹಳ್ಳಿ ಸಮಸ್ಯೆ ಬಗ್ಗೆ ಮಾತನಾಡಬೇಕಾದರೆ ಅಲ್ಲಿರುವ ಎರಡು–ಮೂರು ಮೂಲಭೂತ ಸಮಸ್ಯೆಗಳ ಬಗ್ಗೆ ಮಾತನಾಡಿದೆ. ಅವರ ಜಮೀನು ಆಂಧ್ರದಲ್ಲಿದೆ, ಮನೆ ಕರ್ನಾಟಕದಲ್ಲಿದೆ, ಅವರಿಗೆ ಪಾಪ ಸಾಲ ತೆಗೆದುಕೊಳ್ಳುವುದಕ್ಕೂ ಆಗುತ್ತಿಲ್ಲ ಎಂಬುದನ್ನು ಗಮನಕ್ಕೆ ತಂದೆ. ಮುಖ್ಯಮಂತ್ರಿಗಳು ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಅಲ್ಲಿ ಪೋಲೀಸರಿಗೆ ಯಾವುದೇ ಅನುಕೂಲಗಳನ್ನು ನೀವು ಕೊಟ್ಟಿಲ್ಲ. ಇವತ್ತೂ ಕೂಡ ಅದೇ ಸ್ಥಿತಿಯಲ್ಲಿದ್ದಾರೆ. ಅವರಿಗೇನಾದರೂ ಮಾಡಬೇಕಾಗಿತ್ತು ಎಂದು ಹೇಳಿದ್ದೆ. ಮತ್ತೆ ಬೆಂಗಳೂರಿನ ಬಗ್ಗೆ ನಾನು ಮಾತನಾಡಬೇಕಾದರೆ ಅನೇಕ ಮಾಹಿತಿಗಳನ್ನು ಕೊಡುತ್ತಾ ಹೇಳಿದೆ. ಪೋಲೀಸರನ್ನು ನೀವು ಸಶಸ್ತ್ರಧಾರಿಗಳನ್ನೇನು ಮಾಡಿದ್ದೀರಿ, ಅವರನ್ನು ಈಗಿನ ಕಾಲಕ್ಕೆ ಕರೆದುಕೊಂಡು ಬನ್ನಿ ಎಂದು ಹೇಳಿದ್ದೆ. ಜೊತೆಗೆ ವೆಂಕಟಮ್ಮನಹಳ್ಳಿ ಬಗ್ಗೆ ಸರ್ಕಾರದ ವತಿಯಿಂದ ಒಬ್ಬರೇ ಒಬ್ಬರು ಮಂತ್ರಿ ಹೋಗಿಲ್ಲ, ನೋಡಲಿಲ್ಲ, ಅಲ್ಲಿನ ಜನರನ್ನು ಸಂತೈಸಲಿಲ್ಲ. ಸತ್ತುಹೋದ ಪೋಲೀಸ್ ಕುಟುಂಬದವರಿಗೂ ಒಂದು ಸಮಾಧಾನದ ಮಾತನ್ನು ಆಡಿಲ್ಲ ಎಂದು ನಾನು ಕೇಳಿದೆ. ಇದು ಯಾವುದರ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿಲ್ಲ. ನಮಗೆ ಗೊತ್ತು. ಅವರು ನಿನ್ನೆ ಎರಡು ಕಿವಿಯನ್ನು ಕಳೆದುಕೊಂಡು ಬಿಟ್ಟಿದ್ದರು. ಆ ಕಡೆ ಈ ಕಡೆ ನಿಂತುಕೊಂಡು ಮಾತನಾಡುವಾಗಲೇ ನಾನು ಹೇಳಿದೆ. ಅವರಿಗೆ 4 ಕಿವಿ ಅಥವಾ 8 ಕಿವಿ ಇಲ್ಲ ಎಂದು ಹೇಳಿ. ಬರೆದುಕೊಂಡಿರುತ್ತಾರೆ ಎಂದು ತಿಳಿದುಕೊಂಡಿದ್ದೆ. ಕನಿಷ್ಟ ಒಂದು ಸದನದ ಸಮಿತಿಯನ್ನು ಮಾಡಿ ಅಲ್ಲಿಗೆ ಹೋಗಿ ಏನು ನಡೆಯಿತು, ಏಕೆ ನಡೆಯಿತು ಅಂತಲಾದರೂ ಒಂದು ಮಾಹಿತಿಯನ್ನು ತರಿಸಿಕೊಳ್ಳುವಷ್ಟೇನಾದರೂ ಸೌಜನ್ಯದ ಒಂದು ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಈಗಲಾದರೂ ಹೇಳುತ್ತಾರಾ ಎಂದು ನಾನು ತಮ್ಮೂಲಕ ಕೇಳುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಎರಡು ವಿಚಾರಗಳನ್ನು ಪ್ರಸ್ತಾಪಮಾಡಿದರು. ಸಮಗ್ರ ಪೋಲೀಸ್ ಇಲಾಖೆಯನ್ನು ಪುನರ್ ನಿರ್ಮಾಣ

ಮಾಡಬೇಕೆನ್ನುವ ಬಗ್ಗೆ ನಾನು ಮಾತನಾಡಿದೆ. ಯಾವುದೋ ಒಂದು ಹಳೆಯ ಕಾಲದಲ್ಲಿ ಇದ್ದಂಥದ್ದು ಇದೆ. ಅದಕ್ಕೇನು ವ್ಯವಸ್ಥೆ ಬೇಕು, ಅದಕ್ಕೆ ವಿಶೇಷವಾದ ಗಮನವನ್ನು ಕೊಡಬೇಕೆನ್ನುವುದು ಒಂದು. ಮತ್ತು ಪೋಲೀಸರಲ್ಲೇ ಅಸಮಾಧಾನ ಇದೆ. ಪೋಲೀಸ್ ಇಲಾಖೆಯಲ್ಲಿ 20–25 ವರ್ಷದಿಂದ ಬಡ್ತಿ ಸಿಕ್ಕಿಲ್ಲವೆಂದು ಅವರಲ್ಲಿಯೇ ಅಸಮಾಧಾನ ಇರತಕ್ಕದ್ದು. ಇವುಗಳು ಪೋಲೀಸ್ ಇಲಾಖೆಯಲ್ಲಿ ಬಹಳ ಪ್ರಾಮುಖ್ಯವಾಗಿ ಇರತಕ್ಕದ್ದು. ಈ ಬಗ್ಗೆ ತಾವು ಧರ್ಮವೀರ ಸಮಿತಿಯ ವರದಿಯನ್ನು ತರಿಸಿಕೊಂಡಿದ್ದೀರಿ. ತಾವು ಯಾವ ರೀತಿ ಹೊಸ ವಿಧಾನದಲ್ಲಿ ಬಿಲ್ಡಫ್ ಮಾಡಬೇಕು? ಪೋಲೀಸ್ ಇಲಾಖೆಯನ್ನು, ಪೋಲೀಸ್ ಸ್ಟೇಷನ್‌ಗಳನ್ನು ಯಾವ ರೀತಿ ಬಿಲ್ಡಫ್ ಮಾಡಬೇಕು? ತಾವೇ ಹೇಳಿದ್ದೀರಿ ಬೆಂಗಳೂರಿನ ಜನಸಂಖ್ಯೆ ಇವತ್ತು 85 ಲಕ್ಷ ಇದೆ ಎಂದು ಹೇಳಿದ್ದೀರಿ. 85 ಲಕ್ಷಕ್ಕೆ ತಕ್ಕಂತೆ ಇಲ್ಲಿ ಪೋಲೀಸ್ ವ್ಯವಸ್ಥೆ ಇಲ್ಲ. ಮತ್ತೆ 85 ಲಕ್ಷ ಜನ ಬೆಂಗಳೂರು ನಗರಕ್ಕೆ ಬಂದಿದ್ದಾರೆ. ಇವರು ಯಾರ್‍ಯಾರು ಬಂದಿದ್ದಾರೆ? ಹೇಗೆ ಬಂದಿದ್ದಾರೆ? ನಾನು ಮಾತನಾಡುವಾಗ ಹೇಳಿದೆ. ಕೋಣನಕುಂಟೆಯಲ್ಲಿ ಶಿವರಾಸನ್ ಬಂದು ಎರಡೂವರೆ ತಿಂಗಳಾದರೂ ನಮಗ್ಯಾರಿಗೂ ಗೊತ್ತಿರಲಿಲ್ಲ. ಎರಡೂವರೆ ತಿಂಗಳಾದ ಮೇಲೆ ಶಿವರಾಸನ್ ಬಂದಿದ್ದು ಗೊತ್ತಾಯಿತು. ಪೋಲೀಸ್‌ನವರು ಈ ರಾಜ್ಯಕ್ಕೆ ಯಾರ್‍ಯಾರು ಬರುತ್ತಿದ್ದಾರೆ? ಹೇಗೆ ಬರುತ್ತಿದ್ದಾರೆ ಎನ್ನತಕ್ಕ ವ್ಯವಸ್ಥೆ, ಮಾಹಿತಿ ಪಡೆಯತಕ್ಕದ್ದು ಇಲ್ಲ. ದಿನಾ ಬೆಂಗಳೂರು ಬೆಳೆಯುತ್ತಿದೆ. ತಾವು ಹೇಳಿದಿರಿ. ಮೊನ್ನೆ ಒಂದು ಸಣ್ಣ ಹುಡುಗಿಯನ್ನು ಅಪಹರಣ ಮಾಡಿಕೊಂಡು ಹೋಗಿ ಕೊಂದಿದ್ದಾರೆ. ಇದು ನಿಜವಾಗಿಯೂ ಕರುಳು ಮರುಗತಕ್ಕ ಪರಿಸ್ಥಿತಿ. ಇಂತಹ ಪರಿಸ್ಥಿತಿ ಬೆಂಗಳೂರು ನಗರದಲ್ಲಿ ಇರುವ ಈ ಸಂದರ್ಭದಲ್ಲಿ, ಬೆಂಗಳೂರು ನಗರದಲ್ಲಿಯೇ ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರ, 85 ಲಕ್ಷ ಜನಸಂಖ್ಯೆ ಆದರೆ, ಇನ್ನು ಸ್ವಲ್ಪ ದಿವಸ ಆದರೆ ಬಾಂಬೆ, ದೆಹಲಿಯನ್ನು ಮೀರಿಸುತ್ತದೆ ಎಂದು ತಾವೇ ಹೇಳುತ್ತಿದ್ದೀರಿ. ಒಂದು ಕೋಟಿ ಆಗುತ್ತದೆ. ಇದೇ ರಾಜ್ಯದ ರಾಜಧಾನಿ ರಾಜ್ಯ ಆಗುತ್ತದೆ. ಅಂದರೆ ಇದಕ್ಕೆ ವಿಶೇಷವಾದಂತಹ ಪೋಲೀಸ್ ವ್ಯವಸ್ಥೆ, ಪೋಲೀಸ್‌ನ ಭದ್ರತೆ ಇವೆಲ್ಲವನ್ನೂ ನಾವು ಮಾಡಬೇಕಾಗುತ್ತದೆ. ಇವೆಲ್ಲಕ್ಕೂ ಕಾರಣ 1956ರಿಂದ ಇಲ್ಲಿಯವರೆಗೆ ಎರಡು ಕೋಟಿ ಜನ ಹೊರಗಡೆಯಿಂದ ವಲಸೆ ಬಂದಿದ್ದಾರೆ. ಬಹುಶಃ ಬೆಂಗಳೂರಿನಲ್ಲಿ ಹೊರಗಡೆಯಿಂದ ಬಂದಿರತಕ್ಕ ಜನರಿಂದಲೇ ಈ ಕೃತ್ಯಗಳು ನಡೆಯುತ್ತಿರುವುದು ಭಯೋತ್ಪಾದನೆ, ಭೂಧಾಳಿ, ಏನೇನು ಈ ಎಲ್ಲಾ ಕ್ರೈಮ್‌ಗಳು ನಡೆಯುತ್ತಿವೆ? ಇವೆಲ್ಲವೂ ಸಂಪೂರ್ಣವಾಗಿ ಹೊರಗಡೆಯಿಂದ ಬಂದಿರತಕ್ಕಂಥವರಿಂದ ನಡೆಯುತ್ತಿದೆ. ಇದರ ಬಗ್ಗೆ ಒಂದು ಮಾಹಿತಿಯನ್ನು ಸಮಗ್ರವಾಗಿ ಕೊಡತಕ್ಕಂಥದು ಆಗಬೇಕು. ಬೆಂಗಳೂರಿನಲ್ಲಿ ಬದುಕುವುದೇ ಕಷ್ಟ ಎಂಬ ಪರಿಸ್ಥಿತಿ ನಿರ್ಮಾಣ ಆಗಿದೆ, ಆದ್ದರಿಂದ ಇದನ್ನು ತಾವು ಸ್ಪಷ್ಟವಾಗಿ ಹೇಳಬೇಕು. ಇದೊಂದು ವಿಚಾರ. ಮತ್ತೆ ಎರಡನೇ ವಿಚಾರ ಎಂದರೆ ಈ ಪಾವಗಡದಲ್ಲಿ ಸತ್ತ ಬಗ್ಗೆ ಮತ್ತು ನಕ್ಸಲೈಟ್ ವಿಚಾರ. ಇವೆರಡರ ಬಗ್ಗೆಯೂ ಸಹ ತಾವು ಒಂದು ನ್ಯಾಯಾಂಗ ತನಿಖೆ ಮಾಡಬೇಕು. ತಪ್ಪೇನಿದೆ? ಈಗ ನೀವು ಹೇಳುವ ಪ್ರಕಾರ ನಮ್ಮದೇನೂ ಆಗಿಲ್ಲ ಎನ್ನುತ್ತೀರಿ. ಒಂದು ನ್ಯಾಯಾಂಗ ತನಿಖೆ ಮಾಡಿ. ಸಮಗ್ರವಾಗಿ ಅದರಿಂದ ಹೊರಗಡೆ ಬರತಕ್ಕಂಥ ತೀರ್ಪು ಏನು ಇದೆ, ಅದಕ್ಕೆ ನಾವೆಲ್ಲಾ ಭಾಗಿ ಆಗೋಣ. ಅದನ್ನು ಮಾಡತಕ್ಕಂಥದ್ದು. ಮತ್ತು ಎಸ್‌ಟಿಎಫ್‌ನವರನ್ನು ಅಲ್ಲಿ ಹಾಕಬೇಕು ಎಂಬ ಉದ್ದೇಶ ಇತ್ತಲ್ಲಾ ಮತ್ತು ನಿಮ್ಮದೇ ಒಂದು ಪಡೆ, ನೀವು ತಕ್ಷಣ ವಿಶೇಷವಾದಂತಹ ಒಂದು ಪಡೆ ಮಾಡಿದ್ದೀರಿ.

ಯಾವ ಪಡೆ ಏನು ಎಂಬ ಬಗ್ಗೆ ತಾವು ಹೇಳಲಿಲ್ಲ–ಎನ್ನತಕ್ಕಂಥದ್ದು ನಮ್ಮ ಭಾವನೆ ಇದೆ. ದಯಮಾಡಿ ತಾವು ಅದರ ಬಗ್ಗೆ ಸವಿಸ್ತಾರವಾಗಿ ಹೇಳಬೇಕು ಎಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಾನು ಬಹಳ ಪ್ರಮುಖವಾದಂತಹ 2–3 ವಿಚಾರಗಳನ್ನು ಪ್ರಸ್ತಾಪ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳಿಗೆ ಗಮನ ಕೊಡಿ, ಗಮನ ಕೊಡಿ ಎಂದು ಹೇಳಿದ್ದೆ. ಅವರು ಗಮನ ಕೊಡಲಿಲ್ಲ. ಈಗ ಉತ್ತರದಲ್ಲೂ ಇಲ್ಲ. ಒಂದು ಪ್ಯಾಕೇಜನ್ನು ಅನೌನ್ಸ್ ಮಾನ್ಯ ಮುಖ್ಯಮಂತ್ರಿಗಳು ಮಾಡಿದರು. ನಕ್ಸಲೀಯ ಪ್ರದೇಶಗಳಲ್ಲಿರತಕ್ಕ ಸಮಸ್ಯೆ ಪರಿಹಾರ ಮಾಡಲಿಕ್ಕೆ ಪ್ಯಾಕೇಜ್ ಅನೌನ್ಸ್ ಮಾಡಿದರು. ಆ ಪ್ಯಾಕೇಜ್ ಬಗ್ಗೆ ನಾನು ಮಾತನಾಡುತ್ತಾ ಹೇಳಿದೆ. ಅಲ್ಲಿ ಮೂಲಭೂತವಾಗಿ ಆ ಬುಡಕಟ್ಟಿನ ಜನಾಂಗವನ್ನು , ಅವರು ನಕ್ಸಲೀಯರು ಎಂದು ಹೇಳಿಕೊಳ್ಳತಕ್ಕಂಥವರು ಸಂಘಟನೆ ಮಾಡಿದ್ದೇ ಆ ಭೂಮಿ ಪ್ರಶ್ನೆ ಆಧಾರದ ಮೇಲೆ. ಒಂದು ಒಕ್ಕಲು ಎಬ್ಬಿಸುವುದು ಮತ್ತು ಉಳುಮೆ ಮಾಡುವವರಿಗೆ ಭೂಮಿ ಕೊಡಬೇಕು ಎನ್ನತಕ್ಕ ಪ್ರಶ್ನೆಯ ಆಧಾರದ ಮೇಲೆಯೇ ಆ ಮುಗ್ಧ ಜನರನ್ನೆಲ್ಲಾ ಅವರು ಸಂಘಟನೆ ಮಾಡಿರತಕ್ಕದ್ದು. ಆ ಭೂಮಿ ಹಂಚಿಕೆಯ ಪ್ರಶ್ನೆ ಬಗ್ಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಭೂಮಿ ಹಂಚಬೇಕು ಮತ್ತು ಒಕ್ಕಲು ಎಬ್ಬಿಸತಕ್ಕ ಕೆಲಸವನ್ನು ನಿಲ್ಲಿಸಬೇಕು ಎಂದು ಹೇಳತಕ್ಕ ಕೆಲಸವನ್ನು ಮಾಡಬೇಕು ಎಂದು ಹೇಳಿ ನಾನು ಪ್ರಸ್ತಾಪ ಮಾಡಿದ್ದೆ. ಆದರೆ ಈಗ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಹೇಳಲಿಲ್ಲ. ಇದೊಂದು. ಎರಡನೆಯದು ವಿಶ್ವವಿದ್ಯಾನಿಲಯಗಳಲ್ಲಿ ಪ್ರೊಫೆಸರ್‌ಗಳು ಇದ್ದಾರೆ ಎಂದು ಹೇಳಿದರು. ಅದಕ್ಕೆ ನಾನು ಭಾರೀಕ್ಲಿಯರ್ ಆಗಿ ಹೇಳಿದ್ದೇನೆ. ನಾವು ಡೆಮಾಕ್ರಸಿಯಲ್ಲಿದ್ದೇವೆ. Everybody is having a right to hold and conviction towards any idealogy. ಅದನ್ನು ಎಲ್ಲೂ ಬ್ಯಾನ್ ಮಾಡಿಲ್ಲ. ಮತ್ತು ಅವರದೇ ಆದಂತಹ ಅಭಿಪ್ರಾಯವನ್ನು ಹೊಂದಲಿಕ್ಕೆ ಹಕ್ಕು ಇದೆ. ಅವರು ಪ್ರೊಫೆಸರ್ ಆದ ತಕ್ಷಣ ಅವರು ಹಕ್ಕನ್ನು ಕಳೆದುಕೊಳ್ಳುವುದಿಲ್ಲ. ಆದರೆ ಅವರು ಯಾವ ಐಡಿಯಾಲಜಿಗೆ ಕನ್ – ವಿಕ್ಷನ್ ಆಗಿದ್ದಾರೋ, ಆ ಐಡಿಯಾಲಜಿ ಮುಖಾಂತರ ಕಾರಣದಿಂದಾಗಿ ಯಾರಾದರೂ ಪ್ರಾಣಹಾನಿ, ಆಸ್ತಿ ನಷ್ಟ ಮಾಡಿದರೆ ಮಾತ್ರ ಅದು ಅಪರಾಧ ಆಗುತ್ತದೆಯೇ ಹೊರತು ಯಾರೋ ಒಬ್ಬರು ಒಂದು ಐಡಿಯಾಲಜಿಗೆ ಕನ್‌ವಿಕ್ಷನ್ ಇದ್ದಾರೆ ಎನ್ನುವ ಕಾರಣಕ್ಕೋಸ್ಕರ ಅವರನ್ನು ಅಪರಾಧಿಗಳು ಎಂದು ಟ್ರೀಟ್ ಮಾಡತಕ್ಕಂಥದ್ದು. ಇನ್‌ಡಿಸ್ಕ್ರಿಮಿನೇಟ್ ಆಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಆಗಬಾರದು ಎಂದು ಹೇಳತಕ್ಕಂಥ ವಿಚಾರವನ್ನು ನಾನು ಹೇಳಿದೆ. ಅದಕ್ಕೂ ತಾವು ಉತ್ತರವನ್ನು ಹೇಳಲಿಲ್ಲ. ಮೂರನೆಯದು ನಾನು ಹೇಳಿದ್ದು ಇಂಟಲಿಜೆನ್ಸಿ ಸಂಪೂರ್ಣ ಫೇಲ್ಯೂರ್ ರಾಜ್ಯದಲ್ಲಿ ಆಗಿದೆ. ಇವತ್ತಿನದ್ದು ಅಲ್ಲ. ಶಿವರಾಸನ್‌ನಿಂದ ಅಲ್ಲ. ನೀವೇ ಹೇಳಿದಿರಿ. ಬೋರ್ಕರ್‌ರವರಿಗೆ ಫೋನ್ ಮಾಡಿ ನಾನೇನೋ ತಮ್ಮ ಹತ್ತಿರ ಒಂದು ವಿಚಾರಕ್ಕೆ ಬಂದಿದ್ದಾಗ ಎಡಿಯೂರು ಹತ್ತಿರ ಯಾವುದೋ ಒಂದು ಹಳ್ಳಿಯಲ್ಲಿ ಗಲಾಟೆ ಆಗಿದೆ, ನೋಡಿ ಎಂದು ತಾವೇ ಹೇಳಿದಿರಿ. ಹಾಗೆ ತಾವೇ ಹೇಳಿದಾಗ ಆ ಹಳ್ಳಿ ಎಲ್ಲಿದೆ ಎಂದು ಹೇಳಿ ನಿಮ್ಮ ಡಿಜಿ ನಿಮ್ಮನ್ನೇ ಕೇಳುತ್ತಾರೆ. ಆ ಹಳ್ಳಿ ಎಲ್ಲಿ ಎಂದು ಹೇಳಿ ಆ ಡಿಜಿ ನಿಮ್ಮನ್ನೇ ಕೇಳುತ್ತಾರೆ. What for he is there? He is the Chief for maintaining law and order and knowing the places. ಮಾನ್ಯ ಮುಖ್ಯಮಂತ್ರಿಗಳನ್ನೇ ಆ ಹಳ್ಳಿ ಎಲ್ಲಿದೆ ಎಂದು ಕೇಳಿದರೆ what is this? ಈ

ತರಹದ ಸ್ಥಿತಿಯಲ್ಲಿ ಇಂಟೆಲಿಜೆನ್ಸಿ ಫೇಲ್ಯೂರ್ ಆಗಿದೆ. ಇಂಟೆಲಿಜೆನ್ಸ್ ಫೇಲ್ಯೂರ್‌ನಿಂದಲೇ ಎಲ್ಲಾ ತರಹದ ಅನಾಹುತಗಳು ಈ ರಾಜ್ಯದಲ್ಲಿ ನಡೆಯುತ್ತಿರತಕ್ಕಂಥದ್ದು ಎಂದು ನಾವು ಹೇಳಿದೆವು. ಆ ಇಂಟೆಲಿಜೆನ್ಸ್ ಫೇಲ್ಯೂರ್‌ಗೆ ಕಾರಣವೇನು ಎನ್ನತಕ್ಕದ್ದನ್ನು ತಾವು ತಮ್ಮ ಉತ್ತರದಲ್ಲಿ ಹೇಳಲಿಲ್ಲ. ಮತ್ತೆ ಬಹಳ ಪ್ರಮುಖವಾಗಿ ಅದೊಂದು ವಿಷಯ ಪ್ರಸ್ತಾಪ ಮಾಡಿದಿರಿ. ಸೋಷಿಯೋ ಎಕನಾಮಿಕ್ ಪ್ರಾಬ್ಲಮ್ ಎಂದು ಹೇಳಿದಿರಿ. ಕರೆಕ್ಟ್ ಅದನ್ನು ನಾವು ಒಪ್ಪುತ್ತೇವೆ. ಆದರೆ ಆ ಸೋಷಿಯೋ-ಎಕನಾಮಿಕ್ ಪ್ರಾಬ್ಲಮ್ ಬಂದಂತಹ ಸಂದರ್ಭದಲ್ಲಿ ನಮಗೆ ಯಾವ ರೀತಿಯಲ್ಲಿ ನಿಗ್ರಹಿಸಬೇಕು? ಅದಕ್ಕೆ ಏನು ಕಾರ್ಯಕ್ರಮ ಹಾಕಿದ್ದೀರಿ? ಆ ಕಾರ್ಯಕ್ರಮವನ್ನು ಹಾಕದೇ ಬರೇ ಸೋಷಿಯೋ-ಎಕನಾಮಿಕ್ ಪ್ರಾಬ್ಲಮ್ ಎಂದು ಹೇಳಿ ಬಿಟ್ಟರೆ ಅದು ಆಗುವುದಿಲ್ಲ. ಅದಕ್ಕೆ ನಿರ್ದಿಷ್ಟವಾದಂತಹ ಕಾರ್ಯಕ್ರಮ ಹಾಕಬೇಕು. ಮತ್ತು ವೆಂಕಟಮ್ಮನಹಳ್ಳಿ ಪ್ರಕರಣಕ್ಕೆ ನಾವೆಲ್ಲರೂ ಒತ್ತಾಯ ಮಾಡಿ ಹೇಳಿದ್ದೇವೆ. ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ, ನಾನೂ ಹೇಳಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್ ಅವರೂ ಹೇಳಿದರು. ವೆಂಕಟಮ್ಮನಹಳ್ಳಿ ಪ್ರಕರಣಕ್ಕೆ ಪ್ರತ್ಯೇಕವಾಗಿ ಸದನ ಸಮಿತಿ ರಚನೆ ಆಗಬೇಕು. ನೀವು ನಿರ್ವೀಯರನ್ನಾಗಿ ಅಲ್ಲಿ ಪೋಲೀಸ್‌ನವರನ್ನು ಇಟ್ಟು ಅವರಿಗೆ ಏನೂ ಅಸ್ತ್ರ ಕೊಡದೇನೇ ಬೀದಿಯಲ್ಲಿ ಅವರನ್ನು ನಿಲ್ಲಿಸಿ ಬಿಟ್ಟಿರಿ. ನಿಶಸ್ತ್ರರಾಗಿ ಬೀದಿಯಲ್ಲಿದ್ದಂತಹ ಏಳು ಜನ ಅಮಾಯಕ ಪೋಲೀಸರು ಬಲಿಯಾದರು. ಅದಕ್ಕೆ ಯಾರು ಕಾರಣ? ಅದನ್ನು ತನಿಖೆ ಮಾಡಬೇಕು. ಸದನ ಸಮಿತಿ ರಚನೆ ಮಾಡಿ ಎಂದು ಹೇಳಿ ನಾವು ನಿರ್ದಿಷ್ಟವಾಗಿ ಒತ್ತಾಯ ಮಾಡಿದೆವು. ಅದರ ಬಗ್ಗೆನೂ ಏನೂ ಪ್ರಸ್ತಾಪ ಮಾಡಲಿಲ್ಲ. ಆದ್ದರಿಂದ ನಾವು ಯಾವ ವಿಚಾರವನ್ನು ನಿನ್ನೆಯಿಂದ ಚರ್ಚೆ ಮಾಡಿದ್ದೇವೆ ಆ ವಿಚಾರಕ್ಕೆ ಸಮರ್ಪಕವಾದಂತಹ, ಸರಿಯಾದಂಥ ರೀತಿಯಲ್ಲಿ ಉತ್ತರ ಬರಲಿಲ್ಲ ಎಂದು ಹೇಳತಕ್ಕಂಥದ್ದು ನಮ್ಮ ಅಭಿಪ್ರಾಯ. ಅದಕ್ಕೆ ಉತ್ತರ ಕೊಡಬೇಕೆಂದು ನಾವು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಿಮ್ಮ ಲಕ್ಷ್ಯವೇ ಬೇರೆ ಕಡೆ ಇದ್ದ ಹಾಗೆ ಕಾಣುತ್ತದೆ. ನಮಗೆ ಗೊತ್ತಿಲ್ಲ ಏಕೆ ಎಂದು? ನಾವು ಹಿಂದೆ ನಿಮ್ಮ ಅನುಭವ ಇಷ್ಟು ವರ್ಷದ ರಾಜಕೀಯ ಅನುಭವ ಆಧಾರದ ಮೇಲೆ ನಾವು ಅಂದುಕೊಂಡಿದ್ದೆವು ಈ ಚರ್ಚೆಯನ್ನು ತಾವು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತೀರಿ ಎಂದು ಭಾವಿಸಿದ್ದೆ. ಕಾರಣ ಏನು ಎಂಬುದು ನನಗೆ ಗೊತ್ತಿಲ್ಲ. ಬಹುಶಃ ಈ ರಾಜ್ಯದ ಜನರನ್ನು ದೇವರೇ ಕಾಪಾಡಬೇಕು ಎಂದು ಕಾಣುತ್ತದೆ. ಬರುವ ದಿವಸಗಳು ಹೇಗೆ ಮಾಡಬೇಕು ಎಂದು ಹೇಳಿ ಅವರವರೇ ಅವರ ರಕ್ಷಣೆ ಮಾಡಿಕೊಳ್ಳುವ ಜವಾಬ್ದಾರಿ ಹೆಚ್ಚಿರುವಂತಹ ದುಸ್ಥಿತಿ ಬರಬಹುದೇನೋ ಗೊತ್ತಿಲ್ಲ. ಚಿಕ್ಕಮಗಳೂರಿನ ಡಿಸಿ, ಎಸ್‌ಪಿ ಅವರಿಗೆ ಏನಾದರೂ ಪ್ರತಿಪಕ್ಷಗಳನ್ನು ಹತ್ತಿಕ್ಕುವುದಕ್ಕೋಸ್ಕರ ಅವರಿಗೆ ಜವಾಬ್ದಾರಿ ಕೊಟ್ಟಿದ್ದೀರೇನೋ ಗೊತ್ತಿಲ್ಲ. ಅವರಿಗೆ ನೀವು ಸರ್ಟಿಫಿಕೇಟ್ ಕೊಡುವಂತಹ ಪ್ರಯತ್ನ ಮಾಡಿಬಿಟ್ಟಿರಿ. ದತ್ತ ಜಯಂತಿಗೆ ನೀವೇ ಕೆಲವರು ಹೋಗಿಕೊಂಡು, ಮಾಡಿಕೊಂಡು, ಬೇರೆ ಬಹು ಸಂಖ್ಯಾತ ಹಿಂದೂಗಳನ್ನು ಹತ್ತಿಕ್ಕಿ, ಅವರ ಭಾವನೆಗಳಿಗೆ ಧಕ್ಕೆ ತಂದು, ಈಗ ಅವರಿಗೆ ಸರ್ಟಿಫಿಕೇಟ್ ಕೊಡುವಂತಹ ಮಹತ್ಕಾರ್ಯ ಮಾಡಿದ್ದೇನೆಂದು ಹೇಳುವಂತಹ ಪ್ರಯತ್ನವನ್ನು ಮಾಡಿದಿರಿ. ಅದರಿಂದ ಈ ಕಾನೂನು ಸುವ್ಯವಸ್ಥೆ, ರಾಜ್ಯ ಸರ್ಕಾರದ ದೊಡ್ಡ ಜವಾಬ್ದಾರಿ. ಆ ಕೆಲಸ ಮಾಡಿದೇನೇ ಮಾನ್ಯ ಸಿಂಧ್ಯಾ ಅವರೇ, ನಿಮ್ಮ ಕಾಲದಲ್ಲಿ ಎಷ್ಟು ಫೈರಿಂಗ್ ಆಗಿತ್ತೋ ಗೊತ್ತಿಲ್ಲ. ನನ್ನ ಕಾಲದಲ್ಲಿ ಏನೂ ಆಗಲಿಲ್ಲ ಎಂದು ಹೇಳಿ

ಅದೇ ಸರ್ಟಿಫಿಕೇಟ್ ತೆಗೆದುಕೊಳ್ಳುವುದಾದರೆ ಬಹುಶಃ ಈ ಉತ್ತರದಿಂದ ನಮಗ್ಯಾರಿಗೂ ತೃಪ್ತಿ ಆಗಿಲ್ಲ. ಚರ್ಚೆ, ಕ್ಲಾರಿಫಿಕೇಶನ್ ಕೇಳುವುದರಿಂದ, ಅದಕ್ಕೆ ಉತ್ತರ ಕೊಡುವಂತಹ ಮನಸ್ಥಿತಿಯಲ್ಲೂ ಸಹ ನೀವು ಇಲ್ಲ. ಈ ನೀತಿ ಈ ಕಾನೂನು ಸುವ್ಯವಸ್ಥೆ ಹದಗೆಟ್ಟುತ್ತಿದ್ದರೂ ನೀವು ಕೈಕಟ್ಟಿ ಕುಳಿತಿರುವುದನ್ನು ನಾವು ಪ್ರತಿಭಟನೆ ಮಾಡು ನಾವು ವಾಕೌಟ್ ಮಾಡಿ ಹೋಗುತ್ತೇವೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ತಾವುಗಳು walkout ಮಾಡಲಿಕ್ಕೇ ಬಂದಿರುವುದು ಎಂಬುದು ನನಗೆ ಗೊತ್ತಿತ್ತು. ರಾಜ್ಯದ ನಕ್ಸಲೀಯ ಚಟುವಟಿಕೆಗಳ ಬಗ್ಗೆ, ಲಾ ಅಂಡ್ ಆರ್ಡರ್ ಬಗ್ಗೆ ಇದಕ್ಕಿಂತ ಹೆಚ್ಚು ಏನೂ ಉತ್ತರ ಬೇಕಿಲ್ಲ. ನಾನು ಏನು ನಿಮಗೆ ಹೇಳಿದೆ? ರಾಜ್ಯದಲ್ಲಿ ಸುವ್ಯವಸ್ಥೆ ಚೆನ್ನಾಗಿದೆ. ಪಂಚಾಯಿತಿ ಚುನಾವಣೆ ನಡೆದಿದೆ. ಎಲ್ಲಾ ಕಡೆಗೂ ವ್ಯವಸ್ಥೆ ಮಾಡುತ್ತಿದ್ದೇವೆ. ಡಾ. ಸುದರ್ಶನ್ ಅವರು ಬಂದಿದ್ದಾಗ ಕೂಡ ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದ್ದೇವೆ. ಡಾ. ಸುದರ್ಶನ್ ಅವರೇ ಒಳ್ಳೆಯ ಸರ್ಟಿಫಿಕೇಟ್ ಕೊಟ್ಟಿದ್ದಾರೆಂದು ನಾವು ಹೇಳಿದ್ದೇವೆ.

(ಗೊಂದಲ)

ಶ್ರೀ ಜಿ.ಶಿವಣ್ಣ : ಅಲ್ಲ ಸಾಹೇಬರೇ, ಒಂದೇ ಒಂದು ನಿಮಿಷ. ಏಳು ಜನ ಪೋಲೀಸ್‌ನವರು ಸತ್ತು ಹೋದರೆ ಅದರ ಬಗ್ಗೆ ಸ್ವಲ್ಪವೂ ಕನಿಕರ ಇಲ್ಲದೆ, ನನ್ನ ಆಡಳಿತ ಚೆನ್ನಾಗಿದೆ ಎಂದು ಹೇಳಿಕೊಳ್ಳುತ್ತೀರಲ್ಲಾ, ಇದು ಯಾವ ನ್ಯಾಯ ಸ್ವಾಮಿ? ಇದು ಯಾವ ನ್ಯಾಯ ಹೇಳಿ?

ಶ್ರೀ ಧರ್ಮಸಿಂಗ್ : ಈಗ ಕೇಳಿ. ಏನಾಗಿದೆ ಎಂದರೆ . . .

ಶ್ರೀ ಜಗದೀಶ್ ಶೆಟ್ಟರ್ : ಮಂತ್ರಿಗಳೂ ಹೋಗಲಿಲ್ಲ, ಯಾರೂ ಹೋಗಲಿಲ್ಲ. ಆ ಕುಟುಂಬಕ್ಕೆ ಸಮಾಧಾನ ಮಾಡುವಂತಹ ವ್ಯವಧಾನವೂ ಇಲ್ಲ ತಮಗೆ. ಮಾನ್ಯ ಮುಖ್ಯ ಮಂತ್ರಿಗಳು ಹೋಗಬೇಕಾಗಿತ್ತು. ಏಳು ಜನ ಪೋಲೀಸರು ಸತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋಗಬೇಕಾಗಿತ್ತು. ಆ ಕುಟುಂಬದವರನ್ನು ಭೇಟಿ ಆಗಿ ಬರಬಹುದಾಗಿತ್ತು. ಅಲ್ಲಿಗೆ ಒಬ್ಬ ಮಂತ್ರಿ ಸಹಿತ ಹೋಗಿಲ್ಲ.

ಶ್ರೀ ಜಿ.ಶಿವಣ್ಣ : ಪಾವಗಡಕ್ಕೆ ಹೋದರೆ ಗೊತ್ತಾಗುತ್ತದೆ. ಏಕೆಂದರೆ ......

(ಗೊಂದಲ)

ಶ್ರೀ ಧರ್ಮಸಿಂಗ್ : ಜಿಲ್ಲಾ ಉಸ್ತುವಾರಿ ಸಚಿವರು ಹೋಗಿ ಬಂದಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ : ತಾವು ಮೂರು ಉದಾಹರಣೆ ಕೊಟ್ಟಿರಿ. ಮಾನ್ಯ ಲಾಲ್‌ಕೃಷ್ಣ ಅಡ್ವಾನಿಯವರ ಬಗ್ಗೆ ಹೇಳಿದಿರಿ. ಇಂದಿರಾ ಗಾಂಧಿ ಹತ್ಯೆ ಸಂದರ್ಭ ಹೇಳಿದಿರಿ. ರಾಜೀವ್ ಗಾಂಧಿ ಹತ್ಯೆ ಸಂದರ್ಭ ಹೇಳಿದಿರಿ.

ಶ್ರೀ ಧರ್ಮಸಿಂಗ್ : ಅದಾದ ಮೇಲೆ ಹೇಳುತ್ತೇನೆ. ಹೇಳಿ. ನಿಮಗೆ ಬೇರೆ ಉತ್ತರ ಹೇಳಬೇಕಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ : ಅವರೆಲ್ಲರದ್ದೂ ಕೂಡ ನಿರ್ನಾಮ ಆಗಿ ಹೋಯಿತು. ಯಾರ್‍ಯಾರು ಅನ್ಯಾಯ ಮಾಡಿದರೋ ಅವರೆಲ್ಲಾ ನಿರ್ನಾಮ ಆಗಿ ಹೋದರು. ನಾನು ಅವರನ್ನು ನಿರ್ನಾಮ ಮಾಡುತ್ತೇನೆಂದು ಒಂದು ಮಾತು ನಿಮ್ಮ ಬಾಯಿಂದ ಬರಲಿಲ್ಲ. ತಾವು ದಯವಿಟ್ಟು ಕೇಳಿ.

(ಗೊಂದಲ)

ಶ್ರೀ ಧರ್ಮಸಿಂಗ್ : ಮಾನ್ಯ ಈಶ್ವರಪ್ಪನವರೆ ಕೇಳಿ . .

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಸಾರ್, ದಯವಿಟ್ಟು ಕೇಳಿ.

ಶ್ರೀ ಧರ್ಮಸಿಂಗ್ : ನಾನು ಈ ರಾಜ್ಯದ ಮುಖ್ಯಮಂತ್ರಿ. ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. ನಾವು ನಿಯಂತ್ರಣ ಮಾಡಿದ್ದೇವೆ. ಸಾಕೇತ್ ರಾಜ್‌ರವರನ್ನು ನೀವು ಮಾಡಿದಿರಾ? ಯಾವ ನಿಮ್ಮ ರಾಜ್ಯದಲ್ಲಿ ಮಾಡಿದ್ದೀರಿ? ಈಗ ನವೀನ್ ಪಾಟ್ನಾಯಕ್‌ಗೆ ಬೆಂಬಲ ಕೊಡುತ್ತಿದ್ದೀರಿ. ಶ್ರೀ ವೆಂಕಯ್ಯ ನಾಯ್ಡು ಅವರು ಅಲ್ಲಿ ಬಿದ್ದು ಬಿಟ್ಟರು. ಎಲ್ಲಿ ಸಂರಕ್ಷಣೆ ಇದೆ?

ಶ್ರೀ ಕೆ.ಎಸ್.ಈಶ್ವರಪ್ಪ : ಹದ್ದು ಮೀರಿ ಮಾತನಾಡಬಾರದು.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ದತ್ತ ಪೀಠದ ಬಗ್ಗೆ ಹೇಳಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಹಿಂದೂಗಳ ಮೆರವಣಿಗೆಯನ್ನು ತಾವು ನಿಲ್ಲಿಸಿ ದೊಡ್ಡ ಕೆಲಸ ಮಾಡಿದ್ದೀರಿ. ನೀವು ಮುಸಲ್ಮಾನರ ಮೆರವಣಿಗೆ ನಿಲ್ಲಿಸುವ ಕೆಲಸ ಮಾಡಿ.

ಶ್ರೀ ಧರ್ಮಸಿಂಗ್ : ನೀವು ಆರ್‌ಎಸ್‌ಎಸ್ ಕ್ಯಾಂಪ್ ಮಾಡಿದ್ದೇ ಬೇರೆ ಉದ್ದೇಶಕ್ಕೋಸ್ಕರ. ನೀವು ಆರ್‌ಎಸ್‌ಎಸ್ ಕ್ಯಾಂಪ್ ಮಾಡಿದ್ದೇ ಬೇರೆ ಉದ್ದೇಶಕ್ಕೋಸ್ಕರ ಮಾಡಿದ್ದು.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ನಕ್ಸಲೀಯರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಒಂದು ಮಾತನ್ನು ಹೇಳಲಿಲ್ಲ. ಇದೊಂದು ಸರ್ಕಾರವೇ? ನಿಮ್ಮನ್ನು ಮುಖ್ಯ ಮಂತ್ರಿ ಎಂದು ಹೇಳಬೇಕೇ?

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ ನಾಯಕ್ : ಅವರಿಗೆ ಬೇಕೆ ಕೆಲಸ ಇಲ್ಲ. ವಾಕ್‌ಔಟ್ ಮಾಡುವುದೇ ಅವರ ಕೆಲಸ. ವಾಕ್‌ಔಟ್ ಮಾಡಲಿ ಬಿಡಿ

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ...ಕಳಕಳಿ ಇಲ್ಲ. ಈ ವಿಷಯವನ್ನು ರಾಜಕೀಯ ಗೊಳಿಸಲು ನಾನು ಸಿದ್ಧನಿಲ್ಲ. ನಿಮ್ಮ ಒಂಭತ್ತು ತಿಂಗಳ ಅಧಿಕಾರಾವಧಿಯಲ್ಲಿ ನಾಡಿನ ಜನರು ಧೈರ್ಯ ಮತ್ತು ಗೌರವದಿಂದ ರಸ್ತೆಗಳಲ್ಲಿ ಓಡಾಡಲು ಸಾಧ್ಯವಾಗದಂಥ ವಿಚಿತ್ರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ನಿಮ್ಮ ಪೊಲೀಸ್ ಇಲಾಖೆಯ ಬಹಳ ಪ್ರಮುಖರು ಈ ಚಟುವಟಿಕೆಯಲ್ಲಿ ಕೈ ಜೋಡಿಸಿದ್ದಾರೆ. ಸರ್ಕಾರದ ಇಂತಹ ನೀತಿಯನ್ನು ಖಂಡಿಸಿ ... ತಾವು ಇವೊತ್ತು ಅಂತಹ ಜಿಲ್ಲಾಧಿಕಾರಿಗಳಿಗೆ ಸರ್ಟಿಫಿಕೇಟ್ ಕೊಡುತ್ತಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ನಕ್ಸಲೀಯರಿಗೆ, ಕೊಲೆಗಾರರಿಗೆ ಆಶ್ರಯ ನೀಡುತ್ತಿರುವ ಸರ್ಕಾರ ಇದಾಗಿದೆ.

ಶ್ರೀ ಧರ್ಮಸಿಂಗ್ : ಚುನಾವಣೆಯಲ್ಲಿ ತೋರಿಸಿ. ಇಲ್ಲಿ ಬೇಡ ಚಿಕ್ಕಮಗಳೂರಿನಲ್ಲಿ ಹೋಗಿ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ವಿರೋಧ ಪಕ್ಷದ ನಾಯಕರಾದ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದಲ್ಲಿ ಸಭಾತ್ಯಾಗ ನಡೆಸಿದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಮಗೆ ಉತ್ತರ ಹೇಳಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಛೇರ್ಮನ್‌ರವರೆ, ...

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಸ್ಪಷ್ಟೀಕರಣ ಕೇಳಿದ್ದೇವೆ. ಮುಖ್ಯಮಂತ್ರಿಗಳು ಭಾಷಣ ಮಾಡಿದ ನಂತರವೂ ಮತ್ತೆ ಭಾಷಣ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಭಾಷಣವನ್ನು ಮತ್ತೆ ಕೇಳುವುದಕ್ಕಾಗುವುದಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರಾದ ಸಿ.ಟಿ.ರವಿಯವರು placard ಹಿಡಿದುಕೊಂಡು ಸದನದ ಬಾವಿಯೊಳಗೆ ಬಂದರು. ಕಾನೂನು ಮತ್ತು ನಿಯಮಾವಳಿಯ ಚೌಕಟ್ಟಿನಲ್ಲಿ ಸಂವಿಧಾನಬದ್ಧವಾಗಿ ವಿಷಯಗಳನ್ನು ಪ್ರಸ್ತಾಪಿಸಲು ಕರೆದಿರುವ ಈ ಸಭೆಯಲ್ಲಿ placards ಹಿಡಿದುಕೊಂಡು ಬಂದು ಪ್ರತಿಭಟಿಸುವುದು, that is below the dignity of this House. ಅವರು ಹೊಸ ಸದಸ್ಯರಾಗಿದ್ದು, ಬಹುಶಃ ಅವರಿಗೆ ಇಲ್ಲಿನ ಕಾನೂನು ಸಂಪ್ರದಾಯದ ಪರಿಚಯವಿಲ್ಲ. ಛೇರ್ಮನ್ ಆಗಿರುವ ತಾವು ಇದನ್ನು ತೀವ್ರವಾಗಿ ಗಣನೆಗೆ ತೆಗೆದುಕೊಳ್ಳುವ ಮೂಲಕ ಅವರನ್ನು ಕರೆದು ಅವರಿಗೆ ಮತ್ತು ಇತರರಿಗೆ ಅಧ್ಯಕ್ಷ ಪೀಠದಿಂದ warning ಕೊಡಬೇಕಾಗುತ್ತದೆ. ಈ ರೀತಿಯಲ್ಲಿ ಇದೆಲ್ಲವನ್ನೂ ಮಾಡುತ್ತಾ ಹೋದರೆ ಇದು ವಿಧಾನಸಭೆಯಾಗುವುದಿಲ್ಲ, ಬಹಿರಂಗ ಸಭೆಯಾದಂತಾಗುತ್ತದೆ. ಆದುದರಿಂದ, ತಾವು ದಯಮಾಡಿ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ನಮ್ರತೆಯಿಂದ ಬೇಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಮಾತನಾಡುತ್ತಾ ಸದನ ಸಮಿತಿ ರಚಿಸಬೇಕೆಂದರು. ಈ ಸಂಬಂಧ ನಾನು ಆ ಸ್ಥಳಕ್ಕೆ ಭೇಟಿ ನೀಡುತ್ತೇನೆ. ತಮ್ಮನ್ನೂ ಒಳಗೊಂಡಂತೆ ಅಲ್ಲಿನ ಶಾಸಕರುಗಳೆಲ್ಲರನ್ನೂ ಕರೆದುಕೊಂಡು ಅತಿ ಶೀಘ್ರದಲ್ಲೇ ಪಾವಗಡದಲ್ಲಿರುವ ವೆಂಕಟಮ್ಮನಹಳ್ಳಿಗೆ ಭೇಟಿ ಕೊಡುವ ಕಾರ್ಯಕ್ರಮ ಹಮ್ಮಿಕೊಳ್ಳೋಣ. ಪೊಲೀಸ್ ಇಲಾಖೆ ಸುಧಾರಣೆ ಕುರಿತಂತೆ ಧರ್ಮವೀರ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತಂದಿದ್ದೇವೆ. ಪೊಲೀಸ್ ಇಲಾಖೆಯನ್ನು ಆಧುನೀಕರಣಗೊಳಿಸುವ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ. ಇವೊತ್ತು ಬೆಂಗಳೂರಿನ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಅಪರಾಧ ಪ್ರಕರಣಗಳೂ ಸಹ ಹೆಚ್ಚಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ನಮ್ಮ ಇಂಟೆಲಿಜೆನ್ಸ್ ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇಂಟೆಲಿಜೆನ್ಸ್ ಸರಿಯಾಗಿ ಕಾರ್ಯ ನಿರ್ವಹಿಸುತ್ತಿರುವುದಕ್ಕೆ ಸಮರ್ಥನೆ ಏನೆಂದರೆ, ಮಧ್ಯರಾತ್ರಿ 1 ಗಂಟೆ 45 ನಿಮಿಷದಲ್ಲಿ ಕಂಟೋನ್ಮೆಂಟ್ ರೈಲ್ವೆ ಪೊಲೀಸರು ಅಪರಾಧಿಗಳನ್ನು ಹಿಂಬಾಲಿಸಿ ಹಿಡಿದು ಅವರಿಂದ ಸೂಟ್‌ಕೇಸ್ ಹಾಗೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ಅದೇ ರೀತಿ ಬೆಳಗಾಂನಲ್ಲೂ ಕೂಡ ಅಪರಾಧಿಗಳನ್ನು ಹಿಡಿದರು. ಅದಕ್ಕೋಸ್ಕರ, ನಾನು ಹೇಳುವುದೇನೆಂದರೆ, our intelligence is very good. With all that, ಸಾಲದು, ಬೆಂಗಳೂರಿನ ಜನಸಂಖ್ಯೆಗನುಗುಣವಾಗಿ ಪೊಲೀಸ್ ಬಲವನ್ನು ಇನ್ನೂ ಹೆಚ್ಚಿಸುವುದಕ್ಕೆ ಗಮನಹರಿಸುತ್ತೇವೆ.

ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಒಂದು ವಿಚಾರ ಪ್ರಸ್ತಾಪಿಸಿದರು. ನೀವು ಗಮನಿಸಿದ್ದೀರೋ? ಇಲ್ಲವೋ? ಈಗ ನಮ್ಮ ಅಭಿವೃದ್ಧಿ ಆಯುಕ್ತರು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಹಾಗೂ ಇನ್ನಿತರ ಅಧಿಕಾರಿಗಳು ಮೇಣಸಿನ

ಹಾಡ್ಯಕ್ಕೆ ಭೇಟಿ ಕೊಟ್ಟಿದ್ದು, ನಾಳೆ ವಾಪಸ್ಸು ಬರುತ್ತಿದ್ದಾರೆ. ಅಲ್ಲದೆ, ಈ ಕುರಿತಂತೆ ಈಗಾಗಲೇ ಕ್ಯಾಬಿನೆಟ್ ಸಹ we have taken a decision, ಒಂದು ತೀರ್ಮಾನ ಕೈಗೊಂಡು, ಅಲ್ಲಿನ ಬುಡಕಟ್ಟು ಜನಾಂಗದವರಿಗೆ ಜಮೀನು ಮಂಜೂರು ಮಾಡುವ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲು 25 ಕೋಟಿ ರೂಪಾಯಿಗಳ ಯೋಜನೆ ಹಮ್ಮಿಕೊಂಡಿದ್ದೇವೆ. ಅಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಯಿಂದುಂಟಾಗುವ ಸನ್ನಿವೇಶಗಳು, ಮತ್ತು ದಲಿತರ ಸಮಸ್ಯೆಯೂ ಇದೆ. ಇನ್ನೂ ಪಾವಗಾಡದ ವೆಂಕಟಮ್ಮನಹಳ್ಳಿಯಲ್ಲಿ ಪೊಲೀಸರು ತಂಗಿದ್ದಾಗ ಅವರ ಮೇಲೆ ನಕ್ಸಲೀಯರು ಫೈರ್ ಮಾಡುವ ಕಾಲದಲ್ಲಿ ಅಲ್ಲಿರುವ ಬಡವರೆಲ್ಲರೂ ಏನು ಹೀಗಾಗುತ್ತಿದೆಯೆಂದು ಮೂಕಪ್ರೇಕ್ಷಕರಾಗಿ ನೋಡುತ್ತಿದ್ದರು. ಅವರಿಗೆ ಆ ಭಾವನೆಗಳು ಏಕೆ ಬರುತ್ತದೆಂದರೆ, 'ಸರ್ಕಾರ ನಮ್ಮ ಬಗ್ಗೆ ಏನಾದರೂ ಮಾಡುತ್ತದೆಯೇ? ಇಲ್ಲವೇ?' ಎಂಬ ಬಗ್ಗೆ ಅವರಿಗೆ ನಿರಾಶೆಯುಂಟಾಗಿರಬೇಕು. ಅದರ ಬಗ್ಗೆ ನಾವು ಕ್ರಮ ಕೈಗೊಳ್ಳುತ್ತೇವೆ. ಈ ಸಂಬಂಧ ಸುಮಾರು ಅರವತ್ತು ಕೋಟಿ ರೂಪಾಯಿಗಳ ಪ್ಯಾಕೇಜ್ ಏನಿದೆ, ಹಿಂದಿನ ಮುಖ್ಯಮಂತ್ರಿಗಳು ಈ ಕುರಿತಾದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರು. ಸದರಿ ಪ್ರಸ್ತಾವನೆಗೆ ಕೇಂದ್ರ ಸರ್ಕಾರದಿಂದ ಇನ್ನೂ ಮಂಜೂರಾತಿ ಸಿಕ್ಕಿಲ್ಲ. ಇದರ ಬಗ್ಗೆ ಮೊನ್ನೆ ದೆಹಲಿಗೆ ಹೋಗಿದ್ದಾಗಲೂ ಮಂಜೂರು ಮಾಡಿಕೊಡಬೇಕೆಂದು ಕೇಳಿದ್ದೇವೆ. ಪ್ರಸ್ತಾವನೆಗೆ forest and environment clearance ಸಿಗದೇ ಹಾಗೆಯೇ ಉಳಿದುಕೊಂಡಿರುವುದರಿಂದ ಅದರ ಬಗ್ಗೆ ಗಮನಹರಿಸುತ್ತೇವೆ. ಇನ್ನು ವಿಶ್ವವಿದ್ಯಾಲಯಗಳಲ್ಲಿರುವ ಪ್ರೊಫಸರುಗಳ ಕುರಿತು ಹೇಳುವುದಾದರೆ, ಇವೊತ್ತು ಜವಹರಲಾಲ್ ನೆಹರೂ ಯೂನಿವರ್ಸಿಟಿ, that is one of the prestigious Universities in the country. ಇದರ ಬಗ್ಗೆ ಅವರು 'ಇಸಂ' ಮೇಲೆ ಮಾತನಾಡುತ್ತಾರೆ, ರಾಜಕೀಯ ಉದ್ದೇಶಗಳ ಬಗ್ಗೆ ಮಾತನಾಡುತ್ತಾರೆ. ಪೊಲಿಟಿಕಲ್ ಪಾರ್ಟೀಸ್ ಯಾವ ರೀತಿಯಾಗಿ ಅವರ ಪ್ರೋಗ್ರಾಮ್ ಇವೆ ಎಂಬ ಬಗ್ಗೆ ಮಾತನಾಡುತ್ತಾರೆ. ಆದರೆ, ಇವರಿಗೆ ಇದೆಲ್ಲಾ ಅರ್ಥವಾಗುವುದಿಲ್ಲ. ಇವರಿಗೆ ಬಾಬಾಬುಡನ್‌ಗಿರಿ ಒಂದೇ ಅರ್ಥವಾಗುವುದು, ಬೇರೆ ವಿಚಾರ ಅರ್ಥವಾಗುವುದಿಲ್ಲ ! ಅಂತಹವರಿಗೆ ನಾನೇನು ಹೇಳಬೇಕು? That is also one of the problems. ಅದಕ್ಕೋಸ್ಕರ, ಯಾವ್ಯಾವ ವಿಶ್ವವಿದ್ಯಾಲಯಗಳಲ್ಲಿ ಯಾವ್ಯಾವ ಪ್ರೊಫೆಸರುಗಳು ಮಾಡುತ್ತಾ ಇದ್ದಾರೆ, ಅದು ನಮ್ಮ ಗಮನದಲ್ಲಿರುತ್ತದೆ. ಅದು ಬಹಿರಂಗವಾಗಿ ಹೇಳತಕ್ಕಂಥದ್ದಲ್ಲ. ಅವರ ಮೇಲೆ ಹೆದರಿಕೆ ಮಾಡತಕ್ಕಂಥದ್ದಲ್ಲ. ಅವರೆಲ್ಲರಿಗೂ ಕೂಡ ಫಂಡಮೆಂಟಲ್ ರೈಟ್ಸ್ ಇವೆ. ಅದನ್ನು ಹೇಗೆ ಹತ್ತಿಕ್ಕಲು ಸಾಧ್ಯವಾಗುತ್ತದೆ. ರಾಜ್ಯ ಸರ್ಕಾರ ನಕ್ಸಲೈಟ್ಸ್‌ರನ್ನು ಬಗ್ಗು ಬಡಿಯತಕ್ಕ ರೀತಿಯಲ್ಲಿ ಕ್ರಮ ಕೈಗೊಂಡಿದೆ. ಈವತ್ತು ನಾವು ಹಿಡಿದು ಹಾಕಿದ ಆ ಇಬ್ಬರೂ They are the Capains. At the same time, ಇದಕ್ಕಿಂತಲೂ ಇನ್ನೇನು ಬೇಕು? ಅವರು ಇದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಚಿಕ್ಕಮಗಳೂರಿನಲ್ಲಿ ನಡೆಯುತ್ತಿರುವ ಆಕ್ಟಿವಿಟೀಸ್‌ಗೆ ಮುಂಜಾನೆ ನಾಲ್ಕು ಗಂಟೆಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಶ್ರೀನಿಧಿಯವರಿಗೆ 32 ಗುಂಡೇಟುಗಳು ತಗುಲಿವೆ. ಅವರ ತಲೆ ಸಂಪೂರ್ಣ ನಾಶವಾಗಿದೆ. ಈ ತರಹ ಪೊಲೀಸರ ಮೇಲೆ ಧಾಳಿ ನಡೆಸಲಾಗಿದೆ. ಒಂದೆಡೆ ರಾಜ್ಯದ ಜನರನ್ನು ಸಂರಕ್ಷಿಸುವ ರೀತಿಯಲ್ಲಿ ಪೊಲೀಸರಾದವರು ಆ ಭಾಗದಲ್ಲಿ ವಿಶೇಷ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು. ಜೊತೆಗೆ, ಕಾನೂನು ಮತ್ತು ಸುವ್ಯವಸ್ಥೆಯನ್ನೂ ಕಾಪಾಡಬೇಕು. ಇದೆಲ್ಲವನ್ನೂ ನಾವು ಮಾಡುತ್ತಿದ್ದೇವೆಂಬ ಮಾತನ್ನು ಹೇಳಿದ್ದೇವೆ. ರಾಷ್ಟ್ರೀಯ

ಸ್ವಯಂ ಸೇವಕ ಸಂಘದ ಅಧ್ಯಕ್ಷರಾದ ಡಾ. ಸುದರ್ಶನ್‌ರವರು ಮಂಗಳೂರಿಗೆ ಬಂದು ಎರಡು ಗಂಟೆಗಳ ಕಾಲ ಭಾಷಣ ಮಾಡಿದರು. ಅಲ್ಲಿ ಸುಮಾರು ಮೂರು ಸಾವಿರದಷ್ಟು ಸಂಖ್ಯೆಯಲ್ಲಿ ಸ್ವಯಂ ಸೇವಕರಿದ್ದರು. ಲಾಲ್‌ಕೃಷ್ಣ ಅಡ್ವಾಣಿಯವರೂ ಇದ್ದರು. ಇವರೆಲ್ಲರೂ (ಭಾರತೀಯ ಜನತಾ ಪಕ್ಷದ ಸದಸ್ಯರು) ಹೋಗಿದ್ದರು. ಅಲ್ಲಿ ಏನಾದರೂ ಅಹಿತಕರ ಘಟನೆ ಜರುಗಿತೇ? ಏನೂ ಆಗಿಲ್ಲ. ಅವರು ಸಮಾವೇಶವನ್ನು ಎಲ್ಲಿ ನಡೆಸಿದ್ದಾರೆಂದರೆ, ನಕ್ಸಲೀಯ ಚಟುವಟಿಕೆ ಜರಗುವ ಪ್ರದೇಶದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಮಾವೇಶ ಜರುಗಿಸಿದ್ದಾರೆ. ಇದರ ಬಗ್ಗೆ ಡಾ. ಸುದರ್ಶನ್‌ರವರೇ ``A good arrangement you have made'' ಎಂದು ಸರ್ಟಿಫಿಕೇಟ್ ಕೊಟ್ಟು, ಸರ್ಕಾರಕ್ಕೂ ಮತ್ತು ಪೊಲೀಸರಿಗೂ ಶಹಭಾಷ್‌ಗಿರಿ ನೀಡಿದ್ದಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಛೇರ್ಮನ್‌ರವರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಇದೊಂದು ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆ ಎಂಬುದಾಗಿ ಒಪ್ಪಿಕೊಂಡಿದ್ದಾರೆ. ಮತ್ತು ಅಲ್ಲಿನ ಸ್ಥಳೀಯರ ಅಭಿವೃದ್ಧಿಗಾಗಿ ಪ್ಯಾಕೇಜ್ ಒದಗಿಸಿಕೊಡುವುದಾಗಿ ತಿಳಿಸಿದ್ದಾರೆ. ಪ್ಯಾಕೇಜ್ ಅನ್ನು ಕೆಲವೇ ಭಾಗಗಳಿಗೆ ಒದಗಿಸಿದರೆ ಸಾಕಾಗುವುದಿಲ್ಲ. ಅಲ್ಲಿರುವ ಇಡೀ ಭಾಗಕ್ಕೆ ಪ್ಯಾಕೇಜಿನ ವ್ಯವಸ್ಥೆಯಾಗಬೇಕು. ಕಂದಾಯ ಸಚಿವರಾದ ಮಾನ್ಯ ಎಂ.ಪಿ.ಪ್ರಕಾಶ್‌ರವರು ನಿನ್ನೆ ಪ್ರಶ್ನೆಯೊಂದಕ್ಕೆ ಉತ್ತರಿಸುವಾಗ ಅಲ್ಲಿರುವವರನ್ನು ಒಕ್ಕಲೆಬ್ಬಿಸುವುದಿಲ್ಲವೆಂದು ತಿಳಿಸಿರುವ ವಿಚಾರವನ್ನು ನಾನು ಸ್ವಾಗತಿಸುತ್ತೇನೆ. ಈಗ ಸದನದಲ್ಲಿ ಅರಣ್ಯ ಸಚಿವರು ಇಲ್ಲ. ಆದರೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿದ್ದಾರೆ. ಅವರ ಮೂಲಕ ಅಲ್ಲಿನ ಸ್ಥಳೀಯ ಅಧಿಕಾರಿಗಳಿಗೆ ಮಾಹಿತಿ ನೀಡಿ. ಇಲ್ಲಿ ತಾವು ಹೇಳಿಕೆ ನೀಡುತ್ತೀರಿ. ಆದರೆ, ಅಲ್ಲಿ 'ನಮಗೆ ಸರ್ಕಾರದಿಂದ ಆದೇಶ ಬಂದಿಲ್ಲ' ಎನ್ನುತ್ತಾರೆ. ಅವರುಗಳನ್ನು ಅಲ್ಲಿಂದ ಒಕ್ಕಲೆಬ್ಬಿಸುವ ಕೆಲಸವನ್ನು ನಿಲ್ಲಿಸಿದರೆ ಸಮಸ್ಯೆಗೆ ಅರ್ಧ ಪರಿಹಾರ ಕಂಡುಕೊಂಡಂತಾಗುತ್ತದೆ. ದಯವಿಟ್ಟು ಅವರುಗಳನ್ನು ಆ ಸ್ಥಳದಿಂದ ಒಕ್ಕಲೆಬ್ಬಿಸುವ ಪ್ರಯತ್ನ ಮಾಡಬಾರದು. ಒಕ್ಕಲೆಬ್ಬಿಸಿದರೆ ಉಳಿದ ಭಾಗಗಳಲ್ಲೂ ಈ ಸಮಸ್ಯೆ ಹಬ್ಬುತ್ತದೆ.

ನಿನ್ನೆ ರಾತ್ರಿ ನಡೆದ ಘಟನೆ ಇಂದಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಪ್ರಸ್ತಾಪಿಸಿರುವುದರ ಬಗ್ಗೆ ತಿಳಿಸಿದ್ದೀರಿ. ತಾವು ಎಸ್.ಪಿ.ಯವರಿಗೆ ಫೋನ್ ಮಾಡಿದಾಗಲೂ ಏನು ಘಟನೆ ನಡೆಯಿತೆಂಬ ಬಗ್ಗೆ ಅವರಿಗೆ ಗೊತ್ತಿಲ್ಲವೆಂದರೆ, Dose he deserve to continue as head of the police wing in the district?. ಸೂಪರಿಂಟೆಂಡೆಂಟ್ ಆಫ್ ಪೋಲೀಸಿಗೆ ತಮ್ಮ ಜಿಲ್ಲೆಯಲ್ಲಿ ಏನು ಘಟನೆ ಜರುಗಿದೆ ಎಂಬ ಬಗ್ಗೆ ತಾವು ಅವರಿಗೆ ಫೋನ್ ಮಾಡುವವರೆಗೂ ಗೊತ್ತಿರಲಿಲ್ಲವೆಂದರೆ, ಅದು ದುರಂತವೇ ಸರಿ. ಮಾನ್ಯ ಮುಖ್ಯಮಂತ್ರಿಗಳು, You must take it very seriously. ಮೇಲಿನ ಒಬ್ಬ ಅಧಿಕಾರಿ ಸರಿ ಇಲ್ಲದಿದ್ದರೆ ಅವರ ಅಧೀನದಲ್ಲಿ ಕಾರ್ಯ ನಿರ್ವಹಿಸುವವರೂ ಕೂಡ ಸರಿಯಿರುವುದಿಲ್ಲವೆಂದು ಅದಕ್ಕೋಸ್ಕರವೇ ನಾನು ನಿನ್ನೆ ಹೇಳಿದ್ದು. ಮುಖ್ಯಸ್ಥರು ಸರಿ ಇಲ್ಲದಿದ್ದರೆ ಅವರ ಅಧೀನದಲ್ಲಿ ಕೆಲಸ ಮಾಡುವವರ್‍ಯಾರೂ ಸರಿಯಾಗಿರುವುದಿಲ್ಲ. ಅದರಿಂದಾಗಿಯೇ ಎಲ್ಲಾ ರೀತಿಯ ಅನರ್ಥಗಳು, ಲೈವ್‌ಬ್ಯಾಂಡ್, ಮಟಕಾ, ಪ್ರೈವೇಟ್ ಚಿಟ್ ಫಂಡ್ಸ್, ಮುಂತಾದವೆಲ್ಲವೂ ಹುಟ್ಟಿಕೊಂಡು ಸಮಸ್ಯೆಗಳುಂಟಾಗುತ್ತದೆ. ಆದುದರಿಂದ, ಇದರ ಬಗ್ಗೆ ತಾವು ಕಠಿಣ ಕ್ರಮ ಕೈಗೊಳ್ಳಬೇಕು. ವೆಂಕಟಮ್ಮನಹಳ್ಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾವು ಸಭಾತ್ಯಾಗ ನಡೆಸುವುದಿಲ್ಲ. ಈ ಕುರಿತು

ಸದನ ಸಮಿತಿ ರಚನೆಯಾಗಿ ತನಿಖೆಯಾಗಬೇಕು. ಈ ಘಟನೆ ಹೇಗೆ ಜರುಗಿತು? ನಿಶಸ್ತ್ರರಾಗಿದ್ದ ಪೊಲೀಸ್ ಅಧಿಕಾರಿಗಳ ಮೇಲೆ ನಕ್ಸಲೀಯರು ಧಾಳಿ ನಡೆಸಿರುವುದು ಮತ್ತು ಮೆಣಸಿನ ಹಾಡ್ಯದಲ್ಲಿ ಸಾಕೇತ್ ರಾಜನ್ ಅವರನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿರುವುದು. ಈ ಎರಡೂ ಪ್ರಕರಣ ಬಗ್ಗೆ ತನಿಖೆಯಾಗಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳೆ, ಈ ಸದನವನ್ನು ತಾವು ಗೌರವಿಸುವುದಾದರೆ, ಚಿಕ್ಕಮಗಳೂರಿನ ಮೆಣಸಿನ ಹಾಡ್ಯ ಮತ್ತು ಪಾವಗಡ ತಾಲ್ಲೂಕಿನ ವೆಂಕಟಮ್ಮನಹಳ್ಳಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಎರಡೂ ಸದನಗಳ ಸದಸ್ಯರುಗಳನ್ನೊಳಗೊಂಡ ಒಂದು ಸದನ ಸಮಿತಿ ರಚಿಸುವುದಕ್ಕೆ ತಾವು ಒಪ್ಪಿಗೆ ನೀಡಬೇಕು. ನಿಮಗೆ 15 ದಿವಸಗಳಲ್ಲಿ ಆ ಕುರಿತಾದ ವರದಿ ಸಲ್ಲಿಸುತ್ತೇವೆ. ದಯಮಾಡಿ ಸದನ ಸಮಿತಿ ರಚಿಸುವುದಕ್ಕೆ ಒಪ್ಪಬೇಕು. ಈ ಹಿಂದೆ ಅನೇಕ ಸಂದರ್ಭಗಳಲ್ಲಿ ಸದನ ಸಮಿತಿ ರಚಿಸಿರುವ ನಿದರ್ಶನಗಳಿವೆ. ತಾವು ದಯಮಾಡಿ ಉತ್ತರಿಸಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ನಮ್ಮನ್ನೆಲ್ಲ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದರು. ಆದರೆ ನಾವುಗಳೆಲ್ಲಾ ಅಲ್ಲಿಗೆ ಈಗಾಗಲೇ ಹೋಗಿ ಬಂದುಬಿಟ್ಟಿದ್ದೇವೆ. ಆದರೆ ವಾಸ್ತವವಾಗಿ ಅಲ್ಲಿ ಏನು ನಡೆಯಿತು ಎಂಬುದು ಮಾನ್ಯ ಮುಖ್ಯಮಂತ್ರಿಯವರ ಜೊತೆ ಹೋದ ತಕ್ಷಣ ಮಾಹಿತಿ ಲಭ್ಯವಾಗುವುದಿಲ್ಲ. ಅವರಿಗೆ ಗೊತ್ತಿತ್ತಾ, ಗೊತ್ತಿರಲಿಲ್ಲವೇ, ಸ್ಥಳೀಯರು ಏಕೆ ಸಹಕರಿಸಲಿಲ್ಲ, ಇಷ್ಟೊಂದು ಜನರೆಲ್ಲಾ ಹೊಡೆದು ದೀಪಾವಳಿಯಲ್ಲಿ ಪಟಾಕಿ, ಮದ್ದುಗುಂಡು ಸುಟ್ಟಂತೆ ಹೊಡೆದಾಗ ಅವರು ಏಕೆ ಪ್ರತಿಕ್ರಿಯಿಸಲಿಲ್ಲ? ಮೂಲಭೂತವಾದ ಸಮಸ್ಯೆ ಏನು ಎಂದು ಜಗತ್ತಿಗೇ ಗೊತ್ತಾಗಬೇಕಾದದ್ದು ಗೌರವವೆಂದು ಭಾವಿಸಿದ್ದೇವೆ, ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಒಂದು ಸದನದ ಸಮಿತಿಯನ್ನು ಮಾಡಲು ಒಪ್ಪಿಕೊಳ್ಳಬೇಕು. ಅಲ್ಲಿ ಬೇಕಾದಷ್ಟು ಸಾಮಾಜಿಕ ಸಮಸ್ಯೆಗಳು ಇದ್ದಾವೆ, ಅದನ್ನೆಲ್ಲಾ ಆಚೆಗೆ ತರಲು ತಾವು ಒಂದು ಅವಕಾಶವನ್ನು ನಮಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ ತಾವು ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ನಾವುಗಳು ನಿಮ್ಮ ಜೊತೆ ಬರಲು ಆಗುತ್ತದೆಯೆ? ತಾವು ಬರುತ್ತಿದ್ದಂತೆ ಅಲ್ಲೆಲ್ಲಾ ದೊಡ್ಡ ಸಂತೆಯಾಗಿಬಿಡುತ್ತದೆ, ಅಲ್ಲಿ ಯಾವ ಫ್ಯಾಕ್ಟ್‌ನ್ನು ಕಂಡುಹಿಡಿಯುತ್ತೀರಿ? ಮುಖ್ಯಮಂತ್ರಿಗಳು ಬಂದರೆ ಯಾವುದಾದರೂ ವಿಷಯ ಆಚೆಗೆ ಬರುತ್ತದೆಯೆ? ನೀವು ಬರುತ್ತೀರಿ ಎಂದರೆ ಅಲ್ಲಿ ದೊಡ್ಡ ಜಾತ್ರೆಯಾಗಿಬಿಡುತ್ತದೆ. ಆದ್ದರಿಂದ ಯಾವ ವಿಷಯವೂ ಆಚೆಗೆ ಬರುವುದಿಲ್ಲ. ಆದ್ದರಿಂದ ತಾವು ದಯಮಾಡಿ ಈ ವಿಷಯದಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿ, ಈ ಸಭೆಯವರನ್ನಾದರೂ ಹಾಕಿ ಅಥವಾ ಆ ಸಭೆಯವರನ್ನಾದರೂ ಹಾಕಿ, ಒಂದು ಸದನದ ಸಮಿತಿಯನ್ನು ಮಾಡಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇವೆ. ಅದಕ್ಕೆ ತಾವು ಉತ್ತರ ಕೊಡಬೇಕು.

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, I just bring to the Chief Minister's notice ತಮ್ಮ ಕಛೇರಿಯಿಂದ, ತಮ್ಮ office ನಿಂದ, ತಮ್ಮ ಮುಖಾಂತರ ಏನಾದರೂ order ಹೋದರೆ whether he is IPS or IAS officer, they must obey the order. If they reject the order, if they are not obeying your

instructions, you must take serious action. When the Cheif Minister is the first man, he is having the elected power ನಾವೇ ಆರ್ಡರ್ ತೆಗೆದುಕೊಂಡು ಹೋಗಿ ಮುಖ್ಯಮಂತ್ರಿಗಳ ಆರ್ಡರ್ ಎಂದು ಹೇಳಿದರೂ ಕೂಡ ಅದನ್ನು ignore ಮಾಡಿದರೆ whoever he is, you must take serious action on him ತಾವು ಇದಕ್ಕೆ ಉತ್ತರ ಕೊಡಲೇಬೇಕು It becuase hurt us. ಅದು ನಮಗೆ ನೋವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಸದನದ ಸಮಿತಿಯನ್ನು ಒಪ್ಪಿಕೊಳ್ಳಬೇಕು. ಇದರಲ್ಲಿ ರಾಜಕೀಯವೇನಿಲ್ಲ, ಆದ್ದರಿಂದ ದಯವಿಟ್ಟು ಸದನದ ಸಮಿತಿಯನ್ನು ಒಪ್ಪಬೇಕೆಂದು ಒತ್ತಾಯ ಮಾಡಿ ನಾವು ಧರಣಿ ಮಾಡುತ್ತೇವೆ. ಬಹಳ ಪ್ರಾಮುಖ್ಯವಾಗಿ ಸದನದ ಸಮಿತಿಯನ್ನು ದಯಮಾಡಿ ಒಪ್ಪಿಕೊಳ್ಳಬೇಕು. ಸದನದ ಸಮಿತಿಯನ್ನು ಮಾಡುವುದರಲ್ಲಿ ತಪ್ಪೇನಾಗುತ್ತದೆ? ಈ ಸದನದ ಬಗ್ಗೆ ತಮಗೆ ನಂಬಿಕೆ ಇದೆ, ಸದನದ ಎಲ್ಲಾ ಪಕ್ಷದವರೂ ಸೇರುತ್ತಾರೆ, ಎಲ್ಲರೂ ಇರುತ್ತಾರೆ.

(ಮಾನ್ಯ ವಾಟಾಳ್‌ನಾಗರಾಜ್‌ರವರು ಧರಣಿ ಮಾಡಲು ಬಾವಿಗೆ ಬಂದರು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಮಾನ್ಯ ಮಾಧುಸ್ವಾಮಿಯವರು, ವಾಟಾಳ್‌ನಾಗರಾಜ್‌ರವರು, ಶ್ರೀರಾಮರೆಡ್ಡಿಯುವರು, ಜಯುಪ್ರಕಾಶ್ ಹೆಗ್ಡೆಯುವರು, ರಾಜೇಂದ್ರನ್‌ರವರೆಲ್ಲರೂ ಹೇಳಿದ್ದಾರೆ. ನಿನ್ನೆ ಸಹ ತಾವು ಮಾತನಾಡತಕ್ಕ ಕಾಲದಲ್ಲಿ ಮಾನ್ಯ ಪ್ರಕಾಶ್‌ರವರು ಮಧ್ಯೆ ಪ್ರವೇಶ ಮಾಡಿ ಹೇಳಿದ್ದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರನ್ನು ಒಕ್ಕಲೆಬ್ಬಿಸುವುದಿಲ್ಲವೆಂದು.

ಶ್ರೀ ಧರ್ಮಸಿಂಗ್ : ಅದರ ಬಗ್ಗೆ ಈಗಾಗಲೇ ನಾವೆಲ್ಲರೂ ವಿಚಾರ ಮಾಡುತ್ತಿದ್ದೇವೆ. ತಾವು ಎಸ್.ಪಿ.ಯವರ ಬಗ್ಗೆ ಹೇಳಿದ್ದೀರಿ, ನಾವು ಯಾವ ದೃಷ್ಟಿಕೋನದಿಂದ ಹೇಳಿದೆ ಎಂದರೆ, ನಾವು ಎಷ್ಟು ಅಲರ್ಟ್ ಆಗಿದ್ದೇವೆ, ಅಂದರೆ ಖುದ್ದಾಗಿ ಮುಖ್ಯಮಂತ್ರಿನೇ ಕನ್ನಡ ಪ್ರಭ ನೋಡಿದ ಮೇಲೆ ಕೇಳಿ, ಹೇಳಿ ಮಾಡುವಂಥ ಮಾತನ್ನು ಹೇಳಿದ್ದೇವೆ. ಪಾಪ ಎಸ್.ಪಿ.ಯವರು ಆ ಕೆಲಸವನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ಸಹ ನಾವು ವಿಚಾರ ಮಾಡಿ ನೋಡುತ್ತೇವೆ. ಸದನದ ಸಮಿತಿಯ ಅವಶ್ಯಕತೆ ಇಲ್ಲ. ಏಕೆಂದರೆ ಪೊಲೀಸ್‌ನವರು ಈಗಾಗಲೇ ವಿಚಾರಣೆ ಮಾಡುತ್ತಿದ್ದಾರೆ. ಈಗಾಗಲೇ ಇಲಾಖೆಯ ಅಧಿಕಾರಿಗಳ ಸಭೆ ಕರೆಸಿ ಮಾತನಾಡಿದ್ದೇವೆ.

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿದ್ದು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಪೊಲೀಸ್‌ನವರಿಗೆ ಅನ್ಯಾಯವಾಗಿದೆ ಎಂದರೆ, ಪೊಲೀಸ್‌ನವರು ಸತ್ತಿರುವುದು ಏಕೆ ಎಂದು ಕೇಳಬಾರದೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಸದನದ ಸಮಿತಿ ಮಾಡುವುದರಿಂದ ತಮಗೆ ತೊಂದರೆ ಏನು?

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿದ್ದು ಮಾತನಾಡುತ್ತಿದ್ದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಸದನದ ಸಮಿತಿ ಮಾಡುವುದರಿಂದ ತನಿಖೆಗೆ ಸಹಾಯವಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಪೊಲೀಸ್‌ನವರು ಜನಗಳ ಮಧ್ಯೆದಲ್ಲಿ ಹೋಗುವ ಸ್ಥಿತಿ ವೆಂಕಟಮ್ಮನಹಳ್ಳಿಯಲ್ಲಿ ಇಲ್ಲ.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು) : ಏನೇನಾಗಿದೆ ಏನೇನೂ ಆಗಿಲ್ಲ ಎಂಬುದನ್ನು ಹಿಂದಿನ ವರದಿಗಳನ್ನು ನೋಡಿದಾಗ ಇದರ ಅಗತ್ಯ ಇದೆಯೇ ಎಂಬ ಬಗ್ಗೆ ತಾವುಗಳೇ ಯೋಚನೆ ಮಾಡಬೇಕು, ನಾನು ಹೇಳುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾವು ಯೋಚನೆ ಮಾಡಿಯೇ ಹೇಳುತ್ತಿರುವುದು. ನಾವು ಅದನ್ನು ನೋಡಿಯೇ ಹೇಳುತ್ತಿರುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ : ಇವತ್ತು ಪೋಲೀಸ್‌ನವರು ಪುನಃ ಅಲ್ಲಿಗೆ ಹೋಗುವ ಸ್ಥಿತಿಯಲ್ಲಿ ಇಲ್ಲ. ಅವರು ನಮ್ಮ ಜೊತೆ ಬರುವುದಿಲ್ಲ, ಹೆದರಿಕೊಂಡು ನಿಂತುಕೊಳ್ಳುತ್ತಾರೆ. ಆ ಬಾರ್ಡರ್ ದಾಟುವುದಿಲ್ಲ, ನಮ್ಮನ್ನು ಹೊಡೆದು ಹಾಕುತ್ತಾರೆಂದು ಹೇಳಿ ಹೆದರಿ ನಿಂತುಕೊಳ್ಳುತ್ತಾರೆ. ಆದ್ದರಿಂದ ಇಲ್ಲಿ ಒಂದು ಸದನದ ಸಮಿತಿ ಆಗಬೇಕಾದ ಅಗತ್ಯವಿದೆ. ಇವತ್ತು ಅಲ್ಲಿನ ಜನಗಳ ಮಧ್ಯೆ ಪೋಲೀಸ್‌ನವರು ಹೋಗಿಲ್ಲ. ಸಮಿತಿ ಹೋಗಿ ಒಂದು ವರದಿಯನ್ನು ಕೊಡಲು ತಮಗೇನು ಕಷ್ಟ?

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿದ್ದು ಮಾತನಾಡುತ್ತಿದ್ದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಸದನದ ಸಮಿತಿ ಮಾಡುವುದರಿಂದ ತಮಗೇನು ತೊಂದರೆ ಯಾಗುತ್ತದೆ? ಅದನ್ನಾದರೂ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವೂ ಹೋಗಲಿಲ್ಲ, ಯಾರಾದರೂ ಹೋಗಿ ಅದನ್ನು ನೋಡಿಕೊಂಡು ಬರುತ್ತೇವೆಂದರೆ ಅದಕ್ಕೂ ಬೇಡ ಎಂದಿರಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಇದನ್ನು ಮಾಡುವುದರಿಂದ ಆ ತನಿಖೆಗೇನೂ ತೊಂದರೆಯಾಗುವುದಿಲ್ಲ, ನಿಮಗೆ ಇನ್ನೂ ಇದರಿಂದ ಸಹಾಯವಾಗುತ್ತದೆ, ತಮಗೂ ಗೌರವ ಬರುತ್ತದೆ, ನಿಮಗೇ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಕೇವಲ ಪ್ರತಿ ಸಲ ಶಾಸನಸಭೆಯಲ್ಲಿ ಹೇಳುವುದಷ್ಟೇ ಆಗುತ್ತಿದೆ,

ಛೇರ್ಮನ್ : ಈಗ ಪ್ರಕಟಣೆಯನ್ನು ಹೇಳಲು ಇಚ್ಛಿಸುತ್ತಿದ್ದೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಈಗಾಗಲೇ ಸಭೆಯನ್ನು ಮುಂದೂಡಲು ಸೂಚನೆ ಕಳುಹಿಸುತ್ತಿದ್ದೀರಿ, ನಾವು ಧರಣಿ ಮಾಡಬೇಕಾಗುತ್ತದಷ್ಟೆ.

ಶ್ರೀಪಿ.ಜಿ.ಆರ್.ಸಿಂಧ್ಯಾ : ಆ ರೀತಿ ಏನೂ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು adjourn ಮಾಡಿ ಎಂದು ಹೇಳುತ್ತಿದ್ದಾರೆ, ಪ್ರತಿ ಶಾಸನ ಸಭೆಯಲ್ಲೂ ಇದೇ ರೀತಿ adjourn ಆಗಬೇಕಾಗಿದ್ದರೆ ನಾವು ಕೇಳತಕ್ಕದ್ದೇನು? ನಾವೇನೋ ಕೇಳುವುದು ಅದಕ್ಕೆ ತಾವೇನೋ ಹೇಳುವುದು, ಬಿಡುವುದು, ಅವರು adjourn ಮಾಡಿ ಎಂದು ಸೂಚನೆ ಕೊಡುವುದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಯಾರು ಹೇಳಿದ್ದು?

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಓಂಪ್ರಕಾಶ್‌ರವರು ಅಲ್ಲಿಗೆ ಹೋಗಿ ಸೂಚನೆ ಕೊಟ್ಟರು.

ಛೇರ್ಮನ್ : ಇಲ್ಲ. ಪ್ರಕಟಣೆ ಬಗ್ಗೆ ಅವರು ಕೊಟ್ಟಿದ್ದು.

ಶ್ರೀ ಜೆ.ಸಿ.ಮಾಧುಸ್ವಾಮಿ : ನನಗೆ ಅದು ಗೊತ್ತು. ತಾವು ಹೀಗೆ ಮಾಡುವುದಾದರೆ...

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಎಲ್ಲಾ ಕಾರ್ಯಕ್ರಮಗಳನ್ನು ಸರ್ಕಾರದ ಪರವಾಗಿ ತೆಗೆದುಕೊಳ್ಳುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಎಲ್ಲಾ ಭರವಸೆ ಕೊಟ್ಟಮೇಲೆ ಸದನದ ಸಮಿತಿಯ ಅವಶ್ಯಕತೆ ಇಲ್ಲ, ಅದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಈ ಕಾರ್ಯಕ್ರಮ ಮಾಡುವುದರಿಂದಲೇ ಅದು ಅಡೆತಡೆಯಾಗಬಾರದು ಎಂಬ ದೃಷ್ಟಿಯಿಂದ ತಾವು ದಯಮಾಡಿ ಈ ಪರಿಸ್ಥಿತಿ ಹಾಗೂ ಸೂಕ್ಷ್ಮತೆಯ ಹಿನ್ನೆಲೆಯೊಳಗೆ ಒಪ್ಪಿಕೊಳ್ಳಬೇಕು, ಮಾನ್ಯ ಮುಖ್ಯಮಂತ್ರಿಯವರು ಭರವಸೆ ಕೊಟ್ಟಿದ್ದಾರೆ, ಅದರ ಮೇಲೆ ತಾವುಗಳು ವಿಶ್ವಾಸದಿಂದ ಸಹಕರಿಸಬೇಕೆಂದು ಕೋರುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅದನ್ನು ಮಾಡುವುದರಿಂದ ತಮಗೆ ಆಗುವ ತೊಂದರೆ ಯೇನು?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ನಕ್ಸಲ್ ಸಮಸ್ಯೆಗೆ ಮೂಲ ಕಾರಣವೇನೆಂದು ನೀವು ನೋಡಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಸಚಿವರು) : ನಾವೂ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಅನೇಕ ಸಂದರ್ಭದಲ್ಲಿ ಈ ವಿಚಾರವನ್ನೆಲ್ಲಾ ಪ್ರಸ್ತಾಪ ಮಾಡಿದ್ದೇವೆ. ಸದನದ ಸಮಿತಿ ಆಗಬೇಕೆಂದು ಒತ್ತಾಯವನ್ನು ಮಾಡಿದ್ದೇವೆ. ಪ್ರಶ್ನೆ ಇರತಕ್ಕಂಥದ್ದು what is the terms of reference ಯಾವುದರ ಬಗ್ಗೆ ನೀವು enquiry ಮಾಡುತ್ತೀರಾ ಎಂಬುದನ್ನು ದಯವಿಟ್ಟು ನೀವು ಹೇಳಿ. ಯಾವುದನ್ನು referr ಮಾಡುತ್ತೀರಾ?

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿದ್ದು ಮಾತನಾಡುತ್ತಿದ್ದರು)

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಎಲ್ಲವನ್ನೂ ತಾವು ಹೇಳುವುದಷ್ಟೆ. ಯಾವುದರ ಬಗ್ಗೆ? ಏನು?

(ಗೊಂದಲ)

Sri. J.C.Madhuswamy : The terms of reference is ಚಿಕ್ಕಮಗಳೂರಿನಲ್ಲಿ ಪೊಲೀಸ್‌ನವರು encounter ಮಾಡಿ..

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಪೊಲೀಸ್‌ನವರು ಪಾವಗಡದಲ್ಲಿ ಹಳ್ಳಿಗೆ ಹೋಗುವುದಿಲ್ಲವೆಂದು ಹೇಳುತ್ತೀರಾ ಇನ್ನೊಂದು ಕಡೆ ಪೊಲೀಸ್‌ನವರ ಮನೆಗೆ ಮುಖ್ಯಮಂತ್ರಿಯವರು, ಮಂತ್ರಿಗಳು ಹೋಗಲಿಲ್ಲವೆಂದು ಹೇಳುತ್ತೀರಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ತಾವು ನನಗೆ ಮಾತನಾಡಲು ಬಿಡಿ. ತಾವು ಟರ್ಮ್ಸ್‌ನ್ನು ಕೇಳಿದ್ದೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ತಾವು sufficient ಆಗಿ ಮಾತನಾಡಿದ್ದೀರಿ. ತಾವು ದಯಪಟ್ಟು ನಮ್ಮ ರೂಲಿಂಗ್ ಪಾರ್ಟಿಯಿಂದಲೂ ಕೇಳಿ.

Sri.J.C.Madhuswamy : Terms of reference ಹೇಳಿ ಎಂದು ತಾವು ಹೇಳಿದ್ದೀರಿ. ನಮಗೆ ಹೇಳಲು ಬಿಡಿ.

Sri.P.G.R.Shindhya : I am on my feet. I have not completed. ನಾನು ಏನು ಹೇಳುತ್ತೇನೆಂದರೆ, ಸದನದ ಸಮಿತಿಯನ್ನು ಮಾಡುವುದರಿಂದ ಏನಾದರೂ ಉಪಯೋಗವಾಗುತ್ತದೆ, ಇಂಥ Terms of reference specific ಆಗಿ ಈ ರೀತಿ ಒಂದು incident ಇದೆ ನಾವು ಮಾಡುತ್ತೇವೆ ಎಂಬ ಸಂದರ್ಭದಲ್ಲಿ ಸದನದ ಸಮಿತಿ ಮಾಡಿರತಕ್ಕ ಉದಾಹರಣೆಗಳು ಒಂದಲ್ಲ ಹತ್ತಾರು ಇರತಕ್ಕಂಥದ್ದು ತಮ್ಮ ಗಮನದಲ್ಲಿದೆ. ರೈತರ ಆತ್ಮಹತ್ಯೆ ಎಲ್ಲಾ ಕಡೆ ಆಗುತಿತ್ತು. ಆ ಸಂದರ್ಭದಲ್ಲಿ ನಾವೇನು ಹೇಳಿದ್ದೆವು, ಮಂಡ್ಯದ ಶಿವಕುಮಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸದನದ ಸಮಿತಿಯನ್ನು ಮಾಡಿದೆವು, ಅವರು ಹೋಗಿ ಅದನ್ನೆಲ್ಲಾ ತಿಳಿದುಕೊಂಡು ಬಂದರು. ಇಲ್ಲಿ ಪ್ರಶ್ನೆ ಏನಿದೆ? ಶ್ರೀರಾಮರೆಡ್ಡಿಯವರು, ತಾವು, ವಾಟಾಳ್‌ನಾಗರಾಜ್‌ರವರು ನಕ್ಸಲೀಯರ ಸಮಸ್ಯೆಯ ಬಗ್ಗೆ ಬಹಳ ಜವಾಬ್ದಾರಿಯಿಂದ ಮಾತನಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ಇದು ಸೋಶಿಯೋ ಎಕನಾಮಿಕ್ ಪ್ರಾಬ್ಲಮ್, ಇದು ತಮಗೇ ಗೊತ್ತಿದೆ, ಲಾ ಅಂಡ್ ಆರ್ಡರನ್ನು ಮೇನ್‌ಟೇನ್ ಮಾಡಬೇಕೆಂದು ನಾವು ಹೇಳಿದರೆ, ಮುಖ್ಯಮಂತ್ರಿಗಳು, ಹೋಮ್ ಮಿನಿಸ್ಟರ್ ಮಂತ್ರಿಗಳು ಹೋಗಿ ಮಾಡಲು ಆಗುತ್ತದೆಯೆ? We have to maintain through our police force only. ಪೊಲೀಸ್ ಫೋರ್ಸ್‌ನ್ನು ಯಾವ ರೀತಿ ಇಟ್ಟುಕೊಳ್ಳಬೇಕು ಎನ್ನತಕ್ಕಂಥದ್ದು Have confidence in us. ಅವರೂ demoralise ಆಗದಿರುವ ಹಾಗೆ ಅವರಲ್ಲೂ bad elements ಇದೆ good elements ಇದೆ. ಅವರು demoralise ಆಗಬಾರದು. ಪಾಪ ಆ ಕುಟುಂಬದವರು ರೋಧನೆ ಮಾಡುತ್ತಿದ್ದಾರೆ, ನಾವು ಹೋಗಿದ್ದೇ ತಪ್ಪಾಯಿತು ಎಂದು ಬೀದರ್‌ನಿಂದ ಹಿಡಿದು ಪಾವಗಡದವರೆಗೆ ಇರತಕ್ಕಂಥ ಪ್ರಶ್ನೆ ಮಲೆನಾಡಿನಲ್ಲಿರತಕ್ಕ ಪ್ರಶ್ನೆ, ಇದೇ ನಮ್ಮ ಪೋಲೀಸರನ್ನು ವೀರಪ್ಪನ್ ಬದುಕಿದ್ದ ಸಂದರ್ಭದಲ್ಲಿ ಅಪಹಾಸ್ಯ ಮಾಡಿದೆವು, ವೀರಪ್ಪನ್‌ನನ್ನು ಇಬ್ಬರೂ ಪೊಲೀಸ್‌ನವರು ಸೇರಿಕೊಂಡು ಹೊಡೆದು ಹಾಕಿದಮೇಲೆ ಪೊಲೀಸ್‌ನವರನ್ನು ಅಪ್ರೀಶಿಯೇಟ್ ಮಾಡತಕ್ಕದ್ದು ಜನ ಇದ್ದೇವೆ? ನಾಲ್ಕೈದು ಜನರಿಗೆ ನಾವು ಅಪ್ರೀಶಿಯೆಟ್ ಮಾಡಿದ್ದೇವೆ. ನಿಮ್ಮದಲ್ಲ ನಾನು ಹೇಳುತ್ತಿರುವುದು ನಮ್ಮ ಸಮಾಜದ್ದು ನಾನು ಹೇಳುತ್ತಿದ್ದೇನೆ. ಆದ್ದರಿಂದ ನಾನು ವಿರೋಧ ಪಕ್ಷದವರಲ್ಲಿ ಮನವಿ ಮಾಡಿಕೊಳ್ಳತಕ್ಕದ್ದು Please have a confidence in the Chief Minister. ಅವರು ಸ್ಪೆಸಿಫಿಕ್ ಆಗಿ ಹೇಳಿದ್ದಾರೆ, Home department is such a delicate department, ಪ್ರೊಫೆಸರ್ ರಾಮಕೃಷ್ಣರವರು ಇದ್ದಾರೆ, ಅವರನ್ನು ವೈಚಾರಿಕವಾಗಿ ನಾವು ಒಪ್ಪದಿರಬಹುದು, ಆದರೆ ಅವರ integrity and commitment ನ್ನು ಯಾರೂ question ಮಾಡುವುದಕ್ಕಾಗುವುದಿಲ್ಲ. ಅನೇಕ ಜನ ಪ್ರೊಫೆಸರ್‌ಗಳು ಇದ್ದಾರೆ. ಶ್ರೀರಾಮರೆಡ್ಡಿಯವರೇ, ತಾವೇ ಇದು democractic set up. They can have their own views. ಅವರ ಅಭಿಪ್ರಾಯಗಳನ್ನು ಇಟ್ಟುಕೊಳ್ಳಬಹುದು ಎಂದು ಹೇಳಿದ್ದೀರಿ. ಆದ್ದರಿಂದ ಇದು ಬಹಳ ಡೆಲಿಕೇಟ್ ಆಗಿರತಕ್ಕ ವಿಚಾರ. ಲಾ ಅಂಡ್ ಆರ್ಡರ್‌ನ್ನು ಮೇನ್‌ಟೇನ್ ಮಾಡತಕ್ಕದ್ದು, senstitiveness ನಮಗೆ ಅರ್ಥವಾಗುತ್ತದೆ. Investors' point of view, development point of view, security of everyboy-

ಇವೆಲ್ಲಾ point of view ನಿಂದ ಇರಬಹುದು. ರಾಜ್ಯದಲ್ಲಿ ಕಾನೂನು ಕುಸಿದುಹೋಗಿದೆ, ಎಲ್ಲಿ ಕುಸಿದುಹೋಗಿದೆ?

ಶ್ರೀ ಜೆ.ಸಿ.ಮಾಧುಸ್ವಾಮಿ : ಇಲ್ಲಿ ಭಾಷಣ ಪ್ರಾರಂಭ ಮಾಡಿದರೆ ಏನು ಮಾಡುವುದಕ್ಕಾಗುತ್ತದೆ?

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಗ್ರಾಮಪಂಚಾಯಿತಿ ಚುನಾವಣೆಯಾಯಿತು, ಸುದರ್ಶನ್‌ರವರು ಆರ್.ಎಸ್.ಎಸ್.ನ chief ನವರು ಇಲ್ಲಿ ಬಂದು ಭಾಷಣ ಮಾಡಿದ್ದಾರೆ ಎನ್ನತಕ್ಕದ್ದು ಆಯಿತು, ದತ್ತಾತ್ರೇಯ ಪೀಠದ್ದು ಆಯಿತು, ಎಲ್ಲಾ ಉದಾಹರಣೆಗಳನ್ನು ಹೇಳಿ ಈ ಸರ್ಕಾರ ಬಂದು ಎಂಟು ತಿಂಗಳು ಆದಮೇಲೆ ಎಲ್ಲಾ ಆದವು ಎಂದು ಹೇಳಿದ ಮೇಲೆ ಏತಕ್ಕೆ ಸದನದ ಸಮಿತಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. I appreciate ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ, ಮಾಧುಸ್ವಾಮಿ. ಅಟ್‌ಲೀಸ್ಟ್ ಇವರೆಲ್ಲಾ ಸಮಾಧಾನವಾಗಿ ಕುಳಿತು ನಮ್ಮ ಮಾತುಗಳನ್ನು ಕೇಳುತ್ತಿದ್ದಾರೆ. ನಮ್ಮ ಬಿ.ಜೆ.ಪಿ.ಮಿತ್ರರು ನಿನ್ನೆಯಿಂದ ಅಷ್ಟೆಲ್ಲಾ ಮಾತನಾಡಿ, ಸರ್ಕಾರದ ಉತ್ತರ ಕೇಳುವಂತಹ ಸಮಾಧಾನವೂ ಸಹ ಅವರಲ್ಲಿ ಇಲ್ಲವಲ್ಲಾ. Democracy ನಲ್ಲಿ ಉತ್ತರ ಕೇಳುವ ಸಮಾಧಾನವನ್ನಾದರೂ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಉತ್ತರ ಕೇಳುವುದಕ್ಕೂ ಸಹಿತ ಅವರು ನಾವು ಹೇಳಿದಂತೆಯೇ ಆಗಬೇಕು ಎನ್ನುತ್ತಾರೆ. ಅದು ಹೇಗೆ ಆಗುತ್ತದೆ? ....

ಶ್ರೀ ಜೆ.ಸಿ.ಮಾಧುಸ್ವಾಮಿ : .... ಸಂಜೆಯವರೆಗೂ ಮಾತನಾಡಿ ನಂತರ House adjourn ಮಾಡಿಸಬೇಕು ಎಂದು ತೀರ್ಮಾನ ಮಾಡಿಕೊಂಡು ನೀವು ಮಾತನಾಡುತ್ತಿರುವಂತೆ ಕಾಣುತ್ತದೆ ...

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : .... ಸುದರ್ಶನ್ ಸರ್ಕಾರಕ್ಕೆ ಸರ್ಟಿಫಿಕೇಟ್ ಕೊಟ್ಟು ಬಿಟ್ಟರೆ ಸಾಕೇ? ಬೇರೆ ಯಾರದ್ದೂ ಬೇಕಾಗಿಲ್ಲವೇ? ಸುದರ್ಶನ್ ಹಿನ್ನೆಲೆ ನಿಮಗೆ ಗೊತ್ತಿಲ್ಲ ಪಾಪ ! ಅದೇ ಇಲ್ಲಿ ಬಂದಿರುವ ಸಮಸ್ಯೆಯಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ನಾನೊಂದು ಉದಾಹರಣೆ ಕೊಟ್ಟೆ ಅಷ್ಟೇ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಸರ್ಕಾರಕ್ಕೆ ಸ್ಪಷ್ಟವಾಗಿ ಕೇಳುತ್ತಿದ್ದೇವೆ. ವೆಂಕಟಮ್ಮನಹಳ್ಳಿಯಲ್ಲಿ ಫೈರಿಂಗ್ ಆದ ಹಿನ್ನೆಲೆಯಲ್ಲಿ, ಆ ಎರಡು ದಿವಸದಲ್ಲಿ ಇದ್ದಂತಹ ಪರಿಸ್ಥಿತಿ ಏನು? ಪೊಲೀಸ್‌ನವರನ್ನು ಸಾರಾಸಗಟಾಗಿ ಹೊಡೆಯುತ್ತಿದ್ದರೂ ಕೂಡ ಜನ ಆಚೆಗೆ ಬರಲಾರದಂತಹ ಸ್ಥಿತಿ ಏಕೆ ನಿರ್ಮಾಣವಾಗಿತ್ತು? ವೆಂಕಟಮ್ಮನಹಳ್ಳಿಯಲ್ಲಿ ಅಥವಾ ರಾಜ್ಯದ ಆಂಧ್ರ ಪ್ರದೇಶದ ಗಡಿಯಲ್ಲಿ ಮುಂದೆ ನಕ್ಸಲೈಟ್ ಹಾವಳಿ ಕಡಿಮೆ ಮಾಡಲಿಕ್ಕೆ ಏನಾದರೂ ಕ್ರಮಗಳನ್ನು ಜರುಗಿಸಲಿಕ್ಕೆ ಆಗುತ್ತದೆಯೇ ಎಂಬ ಬಗ್ಗೆ ಮಾಹಿತಿಗಳನ್ನು ಸಂಗ್ರಹಣೆ ಮಾಡಲಿಕ್ಕೆ ಮತ್ತು ಆ ಜನಗಳು ನೆಮ್ಮದಿಯಿಂದ ಜೀವನ ಮಾಡಲಿಕ್ಕೆ ಅನುಕೂಲವಾಗುವಂತಹ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಲಿಕ್ಕೆ ಒಂದು ಸಮಿತಿ ಮಾಡಿ ಎಂದರೆ, ಅದಕ್ಕೆ ತಾವು ಆಗುವುದಿಲ್ಲ ಎಂದರೆ ನಾವೇನು ಉತ್ತರ ಹೇಳುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ, ಸಚಿವರು) : ಮಾನ್ಯ ಸಭಾಧ್ಯಕ್ಷರೆ, ನಾವು ಬಹಳ ಮುಖ್ಯವಾಗಿ ಗಮನಿಸಬೇಕಾಗಿರತಕ್ಕಂಥದ್ದು, ಒಂದು ಸರ್ಕಾರ ಆಡಳಿತವನ್ನು ನಡೆಸುತ್ತದೆ. ಆಡಳಿತ

ನಡೆಸುವಂತಹ ಸಂದರ್ಭಗಳಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳತಕ್ಕಂಥದ್ದು ಅದರ ಆದ್ಯ ಕರ್ತವ್ಯವಾಗುತ್ತದೆ. ಇದರ ಬಗ್ಗೆ ಹೌಸ್ ಕಮಿಟಿಯೊಂದನ್ನು ರಚಿಸಬೇಕೆಂದರೆ, ಅದಕ್ಕೆ ಯಾವ ತರಹದ terms of reference ಅನ್ನು ಕೊಡುತ್ತೀರಿ? ಅದನ್ನು ನಾವು ನೋಡಬೇಕಾಗುತ್ತದೆಯಲ್ಲವೇ? ಹೌಸ್ ಕಮಿಟಿ ಮಾಡಬೇಕೆಂದಿದ್ದರೆ, ಅದಕ್ಕೆ ನಿರ್ದಿಷ್ಟವಾದಂತಹ ಪ್ರಕರಣವನ್ನು ವಹಿಸಬೇಕಾಗುತ್ತದೆ. ಇದಕ್ಕೆ ಬಹು ಮುಖ್ಯವಾದಂತಹ ಅನೇಕ ಸಮಸ್ಯೆಗಳಿವೆ, ಅನೇಕ ಆಯಾಮಗಳಿವೆ. ಇದರ ಬಗ್ಗೆ ನೀವು ಅನೇಕ ಸಲಹೆಗಳನ್ನು ಕೊಟ್ಟಿದ್ದೀರಿ. ಇವತ್ತು ಪ್ರಶ್ನೋತ್ತರ ವೇಳೆಯಲ್ಲಿ, ಹಿಂದೆ ಬೇರೆ ಬೇರೆ ಸಂದರ್ಭಗಳಲ್ಲಿ ಮಾತನಾಡುವಾಗ ನೀವು ಹೇಳಿದ್ದೀರಿ. ಈ ಎಲ್ಲಾ ಹಿನ್ನೆಲೆಗಳ ಸಮಗ್ರವಾದಂತಹ ಚಿತ್ರಣವನ್ನು ಇಟ್ಟುಕೊಂಡಾಗ, ಹೌಸ್ ಕಮಿಟಿಗೆ ಕೊಡತಕ್ಕಂಥದ್ದು ಸರಿಯಲ್ಲ. ನಿರ್ಣಯ ಇದಕ್ಕೇ ಬದ್ಧವಾಗಿರುತ್ತದೆ ಎಂದಲ್ಲ. ಯಾವುದಾದರೂ ಒಂದು ನಿಖರವಾದ ಪ್ರಕರಣಕ್ಕಾಗಿದ್ದರೆ ಹೌಸ್ ಕಮಿಟಿ ರಚಿಸಿ, ಅದು ಅದರ ಬಗ್ಗೆ ತನಿಖೆ ಮಾಡಿ ವರದಿ ಕೊಟ್ಟಿರತಕ್ಕಂಥದ್ದು ಇರಬಹುದು. ಆದರೆ ವೆಂಕಟಮ್ಮನಹಳ್ಳಿಯಲ್ಲಿ ಆಗಿರತಕ್ಕಂಥ .....

ಶ್ರೀ ಕೆ.ಆರ್.ರಮೇಶ್ ಕುಮಾರ್ : ಪ್ರಕಾಶ್ ಸಾಹೇಬರೇ, ಅಷ್ಟೇ ಅಲ್ಲ. ವೆಂಕಟಮ್ಮನಹಳ್ಳಿ ಘಟನೆಯಾಗಿ ಸ್ವಲ್ಪ ದಿವಸ ಕಳೆದ ಮೇಲೆ ಕೆಲವು organisations ನವರು ಇದನ್ನು ನಾವು ಮಾಡಿದ್ದೇವೆ ಎಂದು claim ಮಾಡಿದ್ದಾರೆ. ಅವರು ನಾಳೆ ನಿಮ್ಮ House Committee ಮುಂದೆ appear ಆಗತಕ್ಕಂಥವರಲ್ಲ ಮತ್ತು depose ಮಾಡತಕ್ಕಂಥವರೂ ಸಹ ಅಲ್ಲ. ಆಗ ನೀವು ಏನು ಮಾಡುತ್ತೀರಿ? ನಕ್ಸಲೈಟ್‌ಗೆ can you summon them to appear before the House Committee? I am not opposed to House Committee.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಏನು ಮಾಡಲಿಕ್ಕಾಗದಿದ್ದರೂ ಅಂತಹ ಭಾಗದಲ್ಲಿ ಸಾರ್ವಜನಿಕರನ್ನೇನಾದರೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆಯೇ ಎಂದು ವಿಶ್ಲೇಷಣೆ ಮಾಡಲಿಕ್ಕೆ ನಾವು ಹೋಗಬೇಕಾಗುತ್ತದೆ. When entire Police force was under shoot ಏತಕ್ಕೆ ಜನ ಎದ್ದು ಆಚೆಗೆ ಬರಲಿಲ್ಲ ಎಂಬುದನ್ನು ವಿಚಾರ ಮಾಡಲಿಕ್ಕಾಗಿ ನಾವು ಹೌಸ್ ಕಮಿಟಿ ಮಾಡಿ ಎಂದು ಕೇಳುತ್ತಿದ್ದೇವೆ. What prevented the public from coming out. ಏತಕ್ಕೆ ಆ ಜನ ಆಚೆಗೆ ಬರಲಿಲ್ಲ. ಅವರ depose ತೆಗೆದುಕೊಂಡು ನಮಗೇನೂ ಆಗಬೇಕಾಗಿಲ್ಲ. ....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : .... ಅವರು ನಮ್ಮ ಮುಂದೆ depose ಮಾಡಬೇಕು ಎನ್ನತಕ್ಕಂಥದ್ದು ಏನೂ ಇಲ್ಲ. ನಾವು ಅವರನ್ನು depose ಮಾಡಿ ಎಂದೂ ಕೇಳುವುದಿಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ..... ಹಾಗೆಯೇ ತೀರ್ಮಾನಕ್ಕೆ ಬರುತ್ತೀರಾ?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ....ಪೊಲೀಸಿನವರ ಸ್ಥಿತಿಯೇ ಈ ರೀತಿಯಾದರೆ ನಮ್ಮಗಳ ಸ್ಥಿತಿಯೇನು ಎಂದು ಇವತ್ತು ಜನ ಕೇಳುತ್ತಿದ್ದಾರೆ. ಅದಕ್ಕೆ ನಾವು ಇವತ್ತು ಒಂದು ಉತ್ತರ ಹೇಳಬೇಕಾಗಿದೆ ...

Sri G.V. Sriram reddy : .....anonymous letter ಬರೆದಿರುವವರಿಗೆಲ್ಲಾ ಮತ್ತು ಅಡ್ರೆಸ್ ಇಲ್ಲದಿರುವವರಿಗೆಲ್ಲಾ depose ಮಾಡಿ ಎಂದು ಕರೆಯಲಿಕ್ಕಾಗುತ್ತದೆಯೇ?

ಶ್ರೀ ಕೆ.ಆರ್.ರಮೇಶ್ ಕುಮಾರ್ : .... ಅಡ್ರೆಸ್ ಇಲ್ಲದಿರುವುದರಿಂದಲೇ ಅವರು ಇವತ್ತು ಇಷ್ಟೆಲ್ಲಾ ಮಾಡಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಯಾರು?

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಶ್ರೀರಾಮರೆಡ್ಡಿಯವರು ಅಡ್ರೆಸ್ ಇಲ್ಲದಿರುವವರೆಲ್ಲಾ ಬಂದು depose ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. That is your party line? I am not prepared to accept it .....

Sri J.C.Madhuswamy : Whether you accept it not ,We will demand to the Chief Minister.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು claim ಮಾಡುತ್ತಿದ್ದಾರೆ ಅನ್ನತಕ್ಕಂಥ ......

Sri K.R.Ramesh Kumar : Can you summon them? Can you call them before your Committee? ......

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವು ಒಂದೊಂದು ಸಲ ಒಂದೊಂದು ನಿಲುವು ತೆಗೆದುಕೊಂಡು ಬಿಟ್ಟರೆ ಹೇಗೆ ಸಾರ್? ....

ಶ್ರೀ ಎಂ.ಪಿ.ಪ್ರಕಾಶ್ : ಈಗ ಪ್ರಶ್ನೆ ಅದಲ್ಲ .....

ಶ್ರೀ ಜೆ.ಸಿ.ಮಾಧುಸ್ವಾಮಿ : ... ವೆಂಕಟಮ್ಮನಹಳ್ಳಿಯಲ್ಲಿ ನಡೆದಿರುವಂತಹ ಘಟನೆ ಪೂರ್ವ ನಿಯೋಜಿತವೋ? ಅಥವಾ ಆಕಸ್ಮಿಕವೋ ಎಂಬುದು ನಮಗೆ ಗೊತ್ತಾಗಬೇಕು. ವೆಂಕಟಮ್ಮನ ಹಳ್ಳಿಯ ಜನ ಇಷ್ಟೆಲ್ಲಾ ಆದರೂ ಸಹ ಈಚೆಗೆ ಏಕೆ ಬರಲಿಲ್ಲ ಎಂಬುದು ನಮಗೆ ಗೊತ್ತಾಗಬೇಕು.

Sri M.P.Prakash : I call this as the tyranny of the minority. ತಾವೊಂದು ನಾಲ್ಕು ಜನ ' ಇದು ಆಗಿಯೇ ತೀರಬೇಕು ' ಎಂದು ಒತ್ತಾಯ ಮಾಡುವುದಾಗಿದ್ದರೆ, ... ಸಂಸದೀಯ ನಡವಳಿಕೆಗಳಲ್ಲಿ ತಾವೊಂದು ಅಭಿಪ್ರಾಯವನ್ನು ವ್ಯಕ್ತ ಮಾಡುತ್ತೀರಿ. ಆ ಅಭಿಪ್ರಾಯವನ್ನು ಸರ್ಕಾರದವರು ಒಪ್ಪಲಿಲ್ಲ ಎಂದಾಗ, ಅದರ ಮನವೊಲಿಸುವಂತಹ ಪ್ರಯತ್ನವನ್ನೂ ಸಹ ತಾವು ಮಾಡಿದ್ದೀರಿ. ಆದರೆ ಇದರಲ್ಲಿ ಸರ್ಕಾರ ನಿರ್ವಹಿಸಬೇಕಾದಂತಹ ಕರ್ತವ್ಯಗಳಲ್ಲಿ, ತಾವು ಇದರ ಬಗ್ಗೆ ಸದನ ಸಮಿತಿ ಮಾಡಿ ಎಂದು ಒತ್ತಡ ತರತಕ್ಕಂಥದ್ದು ಏನಿದೆ, ಇದು ತೀರಾ ಒತ್ತಡ ಆಗುತ್ತದೆ. It is a tyranny of the minority.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ ಹಾಗೂ ಜೆ.ಡಿ.(ಯು) ಪಕ್ಷದ ಸದಸ್ಯರು ಪಕ್ಷದ ಶಾಸಕಾಂಗದ ನಾಯಕರಾದ ಮಾನ್ಯ ಮಾಧುಸ್ವಾಮಿಯವರ ನೇತೃತ್ವದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾದರು)

ತಾವು ಹೇಳಬೇಕಾದಂತಹ ಅಭಿಪ್ರಾಯವನ್ನು ಸರ್ಕಾರಕ್ಕೆ ಹೇಳಿದ್ದೀರಿ. ಆದರೆ ಅದನ್ನು ಸರ್ಕಾರ ಒಪ್ಪಿಯೇ ತೀರಬೇಕು ಎನ್ನತಕ್ಕಂಥದ್ದು ಏನೂ ಇಲ್ಲ. ಹೇಳಿದ್ದೆಲ್ಲವನ್ನೂ ಕೂಡ ಒಪ್ಪುವುದಾದರೆ, ಸರ್ಕಾರ ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲ. It is a tyranny. You can't impose a minority opinion. It cannot be imposed upon the government. ಇದು ಕೇವಲ ಒಂದು ಅಭಿಪ್ರಾಯ. ಅಭಿಪ್ರಾಯ ಭೇದ ಇಲ್ಲಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು) ಅದಲ್ಲ ಇದು. You cannot do that.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ನಕ್ಸಲೈಟ್ ವಿಷಯದಲ್ಲಿ ಬಹಳ ಬೆಳಕು ಚೆಲ್ಲಿದರು. ....

ವಾಟಾಳ್‌ರವರೇ, ನೀವಲ್ಲ ಪರ್ಮಿಷನ್ ಕೊಡುವವರು. ನಾನು ನಿಮ್ಮ ಪರ್ಮಿಷನ್ ಕೇಳಬೇಕಾಗಿಲ್ಲ. ನಾನು ಅಧ್ಯಕ್ಷರ ಪರ್ಮಿಷನ್ ಕೇಳಿ ಮಾತನಾಡುತ್ತಿದ್ದೇನೆ. ....

(ಗೊಂದಲ)

ಛೇರ್ಮನ್ : ಇಲ್ಲಿಗೆ ಚರ್ಚೆ ಸಾಕು. ನಾನೀಗ ಘೋಷಣೆಯೊಂದನ್ನು ಮಾಡುತ್ತಿದ್ದೇನೆ.

(ಗೊಂದಲ)

ಛೇರ್ಮನ್ : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ : .... ನನ್ನ ಅನಿಸಿಕೆಗಳೂ ಸಹ ಇವೆ. ಅದನ್ನು ನಾನು ಹೇಳಬೇಕಾಗುತ್ತದೆ ......

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ : ..... ನಾಳೆ ನಕ್ಸಲೈಟ್ ಮೇಲೆ ಕ್ರಮ ಜರುಗಿಸಲು ಆಗುವುದಿಲ್ಲ, ಕಷ್ಟವಾಗುತ್ತದೆ. ಪೊಲೀಸರಿಗೂ ಸಹ ಕಷ್ಟವಾಗುತ್ತದೆ ....

(ಗೊಂದಲ)

ಛೇರ್ಮನ್ : ಮಾನ್ಯ ಪ್ರತಿ ಪಕ್ಷದ ನಾಯಕರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಹೇಳುವುದೇನಾದರೂ ಇದ್ದರೆ ಹೇಳಬೇಕು.

(ಧರಣಿ ನಿರತ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಜೆ.ಸಿ.ಮಾಧುಸ್ವಾಮಿ : ಸರ್ಕಾರದಿಂದ ಉತ್ತರ ಬಂದಿಲ್ಲ, ಮಾನ್ಯ ಮುಖ್ಯ ಮಂತ್ರಿಯವರಿಂದ ತಾವು ಉತ್ತರ ಕೊಡಿಸಬೇಕು.

ಛೇರ್ಮನ್ : ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ. ಅವರು ಉತ್ತರ ಕೊಡಲಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ : ಉತ್ತರ ಏನೂ ಇಲ್ಲ.

(ಗೊಂದಲ)

ಛೇರ್ಮನ್ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಎಲ್ಲಾ ಹಿರಿಯ ಸದಸ್ಯರು ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ ಸಮಗ್ರವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಇದು ಸರ್ಕಾರಕ್ಕೆ ಬಿಡಿ, ಇದು ಬಹಳ ಸೂಕ್ಷ್ಮವಾದುದು. ಬೇರೆ ವಿಚಾರದಲ್ಲಿ ಸದನ ಸಮಿತಿ ಮಾಡಲಿಕ್ಕೆ ನಾನು ತಯಾರಾಗುತ್ತಿದ್ದೆ. It is the inter state matter. ಇವತ್ತು ಆಂಧ್ರ

ಬಾರ್ಡರ್‌ನಲ್ಲಿ ಇರತಕ್ಕಂಥ, ನಮ್ಮಲ್ಲಿ ಇರತಕ್ಕಂಥ, ಅಲ್ಲಿ ಬರತಕ್ಕಂಥ .... ಕೇಳಿ. ಶ್ರೀರಾಮರೆಡ್ಡಿಯವರೇ ಇದಕ್ಕೆ ಸರಿ ಹೋಗುವುದಿಲ್ಲ. ಏಕೆಂದರೆ ನಕ್ಸಲೈಟ್ activities ಕೇವಲ it is not confined to Karnataka State. ಪಾವಗಡದ ವೆಂಕಟಮ್ಮನ ಹಳ್ಳಿಯಲ್ಲೇನು ಆಗಿದೆ, ಆಂಧ್ರದಿಂದ ಬಂದವರು ಅಲ್ಲಿ ಆ ರೀತಿಯಾಗಿ ಹತ್ಯೆ ಮಾಡಿದ್ದಾರೆ ಎಂದು ಗೊತ್ತಾಗಿದೆ. ಆದ್ದರಿಂದ ನಾನು ಹೇಳುವುದೇನೆಂದರೆ, It is a very important and sensitive issue. ಆದ್ದರಿಂದ ಈ ವಿಚಾರವನ್ನು ನಮಗೆ ಬಿಡಿ. ನಮ್ಮ ಮೇಲೆ ವಿಶ್ವಾಸ ಇಡಿ. ನಾವು ಸರಿಯಾದ ರೀತಿಯಲ್ಲಿ ......

(ಧರಣಿ ನಿರತರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಒಂದು ವಿಷಯವನ್ನು ಹೇಳಲು ಮರೆತೆ. ಆ ಘಟನೆಯಾದ ಮೇಲೆ ನಮ್ಮ ಎಲ್ಲಾ ಉನ್ನತ ಮಟ್ಟದ ಅಧಿಕಾರಿಗಳು ಆಂಧ್ರ ಪ್ರದೇಶಕ್ಕೆ ಹೋಗಿದ್ದರು. ಅಲ್ಲಿನ ಮುಖ್ಯಮಂತ್ರಿಗಳನ್ನೂ ಸಹ ಭೇಟಿಯಾಗಿ ಬಂದರು. ನಾನೂ ಸಹ ಅಲ್ಲಿನ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ್ದೇನೆ. ಮಾನ್ಯ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಎಂದರೆ, ನೀವು ಆ ಭಾಗದಲ್ಲಿ ಹೋದರೆ ಪ್ರತಿಕ್ರಿಯೆ ಬೇರೆ ರೀತಿಯಲ್ಲಿ ಬರುತ್ತದೆ, ಇದನ್ನು ಸಂಯಮದಿಂದ ನಾವು ಮತ್ತು ನೀವು ಕುಳಿತುಕೊಂಡು ಬಗೆಹರಿಸೋಣ.

(ಧರಣಿ ನಿರತರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ನಾನು ಹೇಳುತ್ತೇನೆ, ಕೇಳಿ. ಬೇಕಾದರೆ ನಿಮ್ಮೆಲ್ಲರನ್ನೂ ಕೂಡ ಕರೆದುಕೊಂಡು ಹೋಗುತ್ತೇನೆ, ಆಂಧ್ರ ಪ್ರದೇಶದ ಮಾನ್ಯ ಮುಖ್ಯಮಂತ್ರಿಗಳಾದ ರಾಜಶೇಖರ ರೆಡ್ಡಿಯವರ ಜೊತೆಗೆ ಭೇಟಿ ಮಾಡಿ ಮಾತನಾಡೋಣ. ಇದು ಸೂಕ್ಷ್ಮವಾದ ವಿಚಾರವಾಗಿದೆ. ಇದನ್ನು ನೀವು ನನಗೆ ಬಿಡಿ. ನಾನು ಇದರ ಬಗ್ಗೆ ತನಿಖೆ ಮಾಡಿ ತಮಗೆ ತಿಳಿಸುತ್ತೇನೆ.

(ಧರಣಿ ನಿರತರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಛೇರ್‌ಮನ್ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಚರ್ಚೆ ಮುಗಿಯಿತು.

ಪ್ರಕಟಣೆ

ಇಂದು ಸಂಜೆ 6.00 ಗಂಟೆಗೆ ಕೋರಮಂಗಲದ ಪಿವಿಆರ್ ಫೋರಂನಲ್ಲಿ ಬ್ಲ್ಯಾಕ್ ಚಿತ್ರವನ್ನು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರ ವೀಕ್ಷಣೆಗಾಗಿ ಏರ್ಪಡಿಸಲಾಗಿದೆ. ಎಂದು ಕಾಮನ್‌ವೆಲ್ತ್ ಸಂಸದೀಯ ಸಂಘ ಕರ್ನಾಟಕ ಶಾಖೆ ವತಿಯಿಂದ ಘೋಷಣೆಯಾಗಿದೆ.

ಛೇರ್ಮನ್ : ಸದನವನ್ನು ನಾಳೆ ಬೆಳಿಗ್ಗೆ 11-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6.00 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ : 16ನೇ ಮಾರ್ಚ್ 2005 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ- I

1536(2107) ಶ್ರೀ ಅಂಗಾರ.ಎಸ್(ಸುಳ್ಯ) ಮಾನ್ಯ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಸುಳ್ಯ ನಗರ ಪಂಚಾಯತ್‌ಗೆ ಒಳಚರಂಡಿ ಯೋಜನೆ ಮಂಜೂರಾಗಿದ್ದು, ಶುದ್ಧೀಕರಣ ಘಟಕಕ್ಕೆ, ಮತ್ತು ತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡಲು ಸ್ಥಳವು ನಿಗದಿಯಾಗದೆ ಕಾಮಗಾರಿ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಬಂದಿದ್ದಲ್ಲಿ, ಸ್ಥಳ ನಿಗದಿಗೊಳಿಸಿ ಕಾಮಗಾರಿ ಪೂರ್ಣಗೊಳಿಸಲು ಇರುವ ತೊಂದರೆಗಳೇನು;

3. ಸ್ಥಳ ನಿಗದಿಗೊಳಿಸಿ ಕಾಮಗಾರಿ ಪರ್ಣಗೊಳಿಸುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ.ಸಚಿವರು):

1. ಬಂದಿದೆ.

2. ಒಳಚರಂಡಿ ನೀರಿನ ಶುದ್ಧೀಕರಣ ಘಟಕ ನಿರ್ಮಿಸಲು 3 ಎಕರೆ ಜಾಗವನ್ನು ಈಗಾಗಲೇ ಗೊತ್ತುಪಡಿಸಲಾಗಿದ್ದು, ತೋಟಗಾರಿಕೆ ಇಲಾಖೆಯಿಂದ ಹಸ್ತಾಂತರಗೊಳಿಸಬೇಕಾಗಿದೆ.

3. ತೋಟಗಾರಿಕೆ ಇಲಾಖೆಯಿಂದ 3 ಎಕರೆ ಜಾಗವನ್ನು ಖರೀದಿಸಲು ರೂ.4.76 ಲಕ್ಷವನ್ನು ದಿನಾಂಕ 9.3.2005 ರಂದು ಪಾವತಿ ಮಾಡಲಾಗಿದೆ. ತೋಟಗಾರಿಕೆಯ ಇಲಾಖೆಯು ಜಾಗವನ್ನು ಹಸ್ತಾಂತರಿಸಿದ ನಂತರ, ಒಳಚರಂಡಿ ಶುದ್ಧೀಕರಣ ಘಟಕವನ್ನು ಕೈಗೆತ್ತಿಕೊಳ್ಳಲಾಗುವುದು.

1537(2108) ಶ್ರೀ ಅಂಗಾರ. ಎಸ್.(ಸುಳ್ಯ)ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಸುಳ್ಯ-ಕೊಡಿಯಾಲ್ ಬೈಲು-ದುಗ್ಗಲಡಕ ರಸ್ತೆ ಅಭಿವೃದ್ಧಿಗೆ ಹುಡ್ಕೋ ನೆರವಿನಿಂದ ಹಣ ಪಡೆದಿರುವುದು ನಿಜವೇ;

2. ಪಡೆದಿರುವ ನೆರವಿನ ಮೊತ್ತ ಎಷ್ಟು ;

3. ಈ ಹಣದಿಂದ ಇದುವರೆಗೂ ವೆಚ್ಚ ಮಾಡಿರುವ ಹಣ ಎಷ್ಟು ; ರಸ್ತೆ ಕಾಮಗಾರಿಗಳು ಯಾವ ಹಂತದಲ್ಲಿವೆ ;

4. ರಸ್ತೆ ಕಾಮಗಾರಿಯನ್ನು ಪಡೆದಿರುವ ಗುತ್ತಿಗೆದಾರರು ಯಾರು ಕಾಮಗಾರಿ ಯಾವಾಗ ಪೂರ್ಣಗೊಳ್ಳಲಿದೆ?

ಶ್ರೀ ಎಸ್.ಆರ್.ಮೋರೆ (ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

1. ಇಲ್ಲ.

2. ಉದ್ಭವಿಸುವುದಿಲ್ಲ.

3. ಉದ್ಭವಿಸುವುದಿಲ್ಲ.

4. ಉದ್ಭವಿಸುವುದಿಲ್ಲ.

1538 (2109) ಶ್ರೀ ಅಂಗಾರ್.ಎಸ್. (ಸುಳ್ಯ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಸೂಳ್ಯ ನಗರಕ್ಕೆ ಒಳಚರಂಡಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಮಂಜೂರಾಗಿರುವ ಹಣ ಎಷ್ಟು ;

2. ಯೋಜನೆಗೆ ಅಂದಾಜು ವೆಚ್ಚ ಎಷ್ಟು ;

3. ಯೋಜನೆಗೆ ಬಿಡುಗಡೆಯಾಗಿರುವ ಹಣ ಮತ್ತು ಈವರೆಗೂ ಆಗಿರುವ ವೆಚ್ಚ ಎಷ್ಟು;

4. ಒಳಚರಂಡಿ ಯೋಜನೆಯಿಂದ ದೊರಕುವ ಸೌಲಭ್ಯಗಳಾವುವು ;

5. ಯೋಜನೆಯನ್ನು ಗುತ್ತಿಗೆ ಪಡೆದಿರುವವರು ಯಾರು;

6. ಯೋಜನೆ ಪ್ರಾರಂಭವಾಗಿದ್ದು ಯಾವಾಗ ಹಾಗೂ ಯಾವಾಗ ಪೂರ್ಣಗೊಳ್ಳಲಿದೆ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಸ್.ಸಿ. ಸಚಿವರು)

1. ರೂ. 200.00 ಲಕ್ಷಗಳು.

2. ರೂ. 287.07 ಲಕ್ಷಗಳು.

3. ಇದುವರೆವಿಗೂ ರೂ.179.46 ಲಕ್ಷಗಳು ಬಿಡುಗಡೆಯಾಗಿದೆ. ಫೆಬ್ರವರಿ 2005 ರವರೆಗೆ ಒಟ್ಟು ರೂ.65.86 ಲಕ್ಷಗಳು ಖರ್ಚಾಗಿರುತ್ತದೆ.

4. ಒಳಚರಂಡಿ ಯೋಜನೆಯಿಂದ ದೊರಕುವ ಸೌಲಭ್ಯಗಳು ಈ ಕೆಳಕಂಡಂತೆ ಇವೆ.

ಅ) ನಗರದಲ್ಲಿ ನೈರ್ಮಲೀಕರಣ ಹಾಗೂ ಸ್ವಚ್ಛತೆ.

ಆ) ಶುದ್ಧೀಕರಿಸಿದ ಒಳಚರಂಡಿ ನೀರನ್ನು ತೋಟಗಾರಿಕೆ ಹಾಗೂ ಕೃಷಿಗೆ ಉಪಯೋಗಿಸ ಬಹುದಾಗಿರುತ್ತದೆ.

ಇ) ಶುದ್ಧೀಕರಣ ಹೊಂಡಗಳಲ್ಲಿ ಶೇಖರಣೆಯಾದ ಗೊಬ್ಬರವನ್ನು ಹರಾಜು ಮಾಡುವುದರ ಮೂಲಕ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ಲಾಭ ಉಂಟಾಗುತ್ತದೆ.

5. ಶ್ರೀ.ಎಂ.ಎನ್.ಜಯಂತ್, ಗುತ್ತಿಗೆದಾರರು, ಬೆಂಗಳೂರು ಇವರಿಗೆ ವಹಿಸಲಾಗಿರುತ್ತದೆ.

6. 5.2.2003 ರಲ್ಲಿ ಪ್ರಾರಂಭವಾಗಿದ್ದು, ಏಪ್ರಿಲ್ 2005ರಲ್ಲಿ ಪೂರ್ಣಗೊಳಿಸಲಾಗುವುದು ಒಳಚರಂಡಿ ಶುದ್ಧೀಕರಣ ಘಟಕಕ್ಕೆ ತೋಟಗಾರಿಕೆ ಇಲಾಖೆಯ ಫಾರಂನಲ್ಲಿ ಸ್ಥಳ ನಿಗದಿಯಾಗಿದ್ದು, ಸದರಿ ಜಮೀನನನ್ನು ಮಂಡಳಿಗೆ ಹಸ್ತಾಂತರಿಸಿದ ಮೇಲೆ ಒಳಚರಂಡಿ ಶುದ್ಧೀಕರಣ ಘಟಕದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

1539 (2110) ಶ್ರೀ ಅಂಗಾರ ಎಸ್. ಮಾನ್ಯಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸೂಳ್ಯ ಬಸ್ ನಿಲ್ದಾಣ ನಿರ್ಮಾಣಕ್ಕೆ ಬಿಡುಗಡೆಯಾಗಿರುವ ಹಣ ಎಷ್ಟು;

ಆ. ಕಾಮಗಾರಿ ಗುತ್ತಿಗೆ ಪಡೆದಿರುವವರು ಯಾರು;

ಇ. ಕಾಮಗಾರಿ ಪ್ರಾರಂಭ ಮಾಡಿದ್ದು ಯಾವಾಗ;

ಈ. ಬಸ್ ನಿಲ್ದಾಣಕ್ಕೆ ವಶಪಡಿಸಿಕೊಳ್ಳಸಲಾದ ಭೂಮಿ ಎಷ್ಟು;

ಉ. ಅಗತ್ಯವಿರುವ ಭೂಮಿ ಖರೀದಿಗೆ ಕೈಗೊಂಡಿರುವ ಕ್ರಮಗಳೇನು;

ಊ. ಕಾಮಗಾರಿ ಮುಕ್ತಾಯಗೊಳಿಸಲು ಕಾಲಮಿತಿ ಏನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ. ರೂ.48.90 ಲಕ್ಷ

ಆ. ಶ್ರೀ ಹೆಚ್.ಭಾಸ್ಕರ್ ಆಚಾರ್, ಗುತ್ತಿಗೆದಾರರು, ಮುಂಡೂರು ಗ್ರಾಮ, ಪುತ್ತೂರು ತಾ; ದಕ್ಷಿಣ ಕನ್ನಡ ಜಿಲ್ಲೆ.

ಇ. ಮಾಡಿಲ್ಲ.

ಈ. 99 ಸೆಂಟ್ಸ್.

ಉ. ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತೆ 40 ಸೆಂಟ್ಸ್ ಹೆಚ್ಚುವರಿ ಜಾಗವನ್ನು ಸಂಸ್ಥೆಯ ವಶಕ್ಕೆ ಪಡೆಯಲು ಕ್ರಮ ಜರುಗಿಸಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಊ. 6 ತಿಂಗಳು (ಮಳೆಗಾಲ ಹೊರತುಪಡಿಸಿ)

1540(2111) ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಪುತ್ತೂರು ಡಿಪೋದಿಂದ ಹಾಲಿ ಸೂಳ್ಯ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ ಸಂಚಾರ ವ್ಯವಸ್ಥೆ ಮಾಡಲಾಗಿದ್ದು, ಈ ವ್ಯವಸ್ಥೆಯಡಿ ಗ್ರಾಮಾಂತರ ಪ್ರದೇಶಕ್ಕೆ ಪೂರ್ಣ ಪ್ರಮಾಣದಲ್ಲಿ ಸಂಚಾರ ವ್ಯವಸ್ಥೆ ಮಾಡಲಾಗಿದ್ದು, ಈ ವ್ಯವಸ್ಥೆಯಡಿ ಗ್ರಾಮಾಂತರ ಪ್ರದೇಶಕ್ಕೆ ಪೂರ್ಣ ಪ್ರಮಾಣದಲ್ಲಿ ಸಂಚಾರ ವ್ಯವಸ್ಥೆಗೊಳಿಸಲು ಅಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಇದರಿಂದ ಸಾರ್ವಜನಿಕರು ಬಸ್‌ಗಳಿಗೆ ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ

ಇ. ಸೂಳ್ಯಕ್ಕೆ ಪ್ರತ್ಯೇಕ ಬಸ್ ಡಿಪೋ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ. ಸೂಳ್ಯಕ್ಕೆ ಪ್ರತ್ಯೇಕ ಬಸ್ ಡಿಪೋ ಮಂಜೂರು ಮಾಡಿಕೊಡುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ಇಲ್ಲ.

ಆ. ಇಲ್ಲ.

ಇ. ಹೌದು.

ಈ. ಸೂಳ್ಯದಲ್ಲಿ ಖಾಸಗಿಯವರ 2.17 ಎಕರೆ ಜಮೀನನ್ನು ಘಟಕ ನಿರ್ಮಿಸುವ ಸಲುವಾಗಿ ವಶಪಡಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

1541 (2183) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ವಿಧಾನಸೌಧ ಹಾಗೂ ಬಹುಮಹಡಿ ಕಟ್ಟಡಗಳಲ್ಲಿ ನೌಕರರಿಗೆ ಪಂಚಿಂಗ್ ವಿಧಾನ ಅಳವಡಿಸಿದ ನಂತರ ಇದುವರೆಗೆ ಕಛೇರಿಗೆ ಬೆಳಿಗ್ಗೆ ತಡವಾಗಿ ಹಾಗೂ ಸಾಯಂಕಾಲ ಬೇಗನೆ ಕಛೇರಿಯಿಂದ ತೆರಳುತ್ತಿರುವ ನೌಕರರ ಸಂಖ್ಯೆ ಎಷ್ಟು (ಇಲಾಖಾವಾರು, ತಿಂಗಳವಾರು ವಿವರ ನೀಡುವುದು);

ಆ. ಇಂತಹ ನೌಕರರ ಮೇಲೆ ಶಿಸ್ತು ಕ್ರಮ ಜರುಗಿಸಲಾಗಿದೆಯೇ;

ಇ. ಇದುವರೆಗೆ ಕ್ರಮ ಜರುಗಿಸಲಾಗದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಈ. ನೌಕರರು ಕಛೇರಿ ವೇಳೆಯಲ್ಲಿ ಮಧ್ಯದಲ್ಲಿ ತಮ್ಮ ಸ್ಥಳ ಬಿಡುವಾಗ ಮೂವ್‌ಮೆಂಟ್ ರಿಜಿಸ್ಟಾರ್‌ನಲ್ಲಿ ವಿವರ ದಾಖಲಿಸುವಂತೆ ಸರ್ಕಾರದ ಆದೇಶವಿದೆಯೇ; ಇದ್ದಲ್ಲಿ, ಇದರ ಪಾಲನೆಯಾಗುತ್ತಿದೆಯೇ?

ಶ್ರೀ ಧರ್ಮ ಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) :

ಅ. 'ಸಿ' ಮತ್ತು 'ಡಿ' ಗುಂಪಿನ ನೌಕರರ ಜನವರಿ ಮತ್ತು ಫೆಬ್ರವರಿ 2005ರ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿದೆ. ಅಧಿಕಾರಿಗಳಿಗೆ ಮಿದು ಸಮಯ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಜುಲೈ–2003ರ ನಂತರದ ಅವಧಿಯ ಎಲ್ಲಾ ನೌಕರರ ಸಂಪೂರ್ಣ ಮಾಹಿತಿಯು– www.karnataka.gov.in/KIOSK ವೆಬ್ ಸೈಟ್‌ನಲ್ಲಿ ಲಭ್ಯವಿದೆ.

ಆ. ಶಾಖಾಧಿಕಾರಿ ಮತ್ತು ಮೇಲ್ಪಟ್ಟ ಎಲ್ಲಾ ಅಧಿಕಾರಿಗಳಿಗೂ ಅನ್ವಯವಾಗುವಂತೆ ಹಾಜರಾತಿಯನ್ನು ಮಿದುಸಮಯ ಯೋಜನೆಗೆ ಒಳಪಡಿಸಿದ್ದು, ತಿಂಗಳಲ್ಲಿ ಆಯಾ ಅಧಿಕಾರಿಗಳು ಕಾರ್ಯನಿರ್ವಹಿಸಿದ ಅವಧಿ ಕಡಿಮೆಯಾದಲ್ಲಿ, ಅವರ ಲೆಕ್ಕದಲ್ಲಿರುವ ಸಾಂದರ್ಭಿಕ ರಜೆ ಅಥವಾ ಬಂದಿದೆಯೆ; ಇತರ ರಜೆಗಳನ್ನು ಕಡಿತಗೊಳಿಸಲು ಗಣಕಯಂತ್ರದ ಮೂಲಕ ವ್ಯವಸ್ಥೆಯನ್ನು ಮಾಡಲಾಗಿದೆ. ಮಿದು ಸಮಯದ ಯೋಜನೆಗೆ ಒಳಪಡದ ಸಚಿವಾಲಯ ಸಿಬ್ಬಂದಿಗಳ ಪ್ರತಿ ದಿನದ ಹಾಜರಾತಿಯನ್ನು ನಿಯಂತ್ರಿಸಿ, ಸಮಯನಿಷ್ಠೆ ಪಾಲಿಸದೇ ಇರುವವರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ.

ಇ. 'ಆ' ದಲ್ಲಿ ನೀಡಿದ ಉತ್ತರದ ಉದ್ಭವಿಸುವುದಿಲ್ಲ.

ಈ. ಪ್ರತಿಯೊಬ್ಬ ಅಧಿಕಾರಿ ಹಾಗೂ ಸಿಬ್ಬಂದಿ ಕಛೇರಿಯಿಂದ ಹೊರಗೆ ಹೋಗಬೇಕಾದ ಸಂದರ್ಭದಲ್ಲಿ ಮೇಲಾಧಿಕಾರಿಗಳ ಪೂರ್ವಾನುಮತಿಯೊಡನೆ ಚಲನವಲನ ಪುಸ್ತಕದಲ್ಲಿ ವಿವರಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

'ಸಿ' ಮತ್ತು 'ಡಿ' ಗುಂಪಿನ ನೌಕರರು ಕಛೇರಿಗೆ ತಡವಾಗಿ ಬಂದಿರುವ ಮತ್ತು ಮುಂಚಿತವಾಗಿ ಹೋಗಿರುವ ವಿವರಗಳು.

ಕ್ರ. ಸಂ.	ಇಲಾಖೆಗಳು	ತಡವಾಗಿ ಬಂದಿರುವ		ಮುಂಚಿತವಾಗಿ ಹೋಗಿರುವ	
		ಜನವರಿ–05	ಫೆಬ್ರವರಿ–05	ಜನವರಿ–05	ಫೆಬ್ರವರಿ–05
01	ಅಪರ ಮುಖ್ಯ ಕಾರ್ಯದರ್ಶಿಹಾಗೂ ಅಭಿವೃದ್ಧಿ ಆಯುಕ್ತರ ಕಛೇರಿ	04	05	03	05
02	ಅಪರ ಮುಖ್ಯ ಕಾರ್ಯದರ್ಶಿಯವರ ಕಛೇರಿ	00	00	00	00
03	ಕೃಷಿ ಮತ್ತು ತೋಟಗಾರಿಕೆ ಇಲಾಖೆ	52	50	36	37
04	ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ	22	19	16	16
05	ಮುಖ್ಯ ಮಂತ್ರಿಗಳ ಸಚಿವಾಲಯ	42	41	18	24
06	ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ	56	60	39	45
07	ಸಹಕಾರ ಇಲಾಖೆ	38	39	25	29
08	ಸಂಸದೀಯ ವ್ಯವಹಾರಗಳು	34	42	39	40
09	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	225	251	218	248
10	ಸಿಆಸುಇ (ಆಡಳಿತ ಸುಧಾರಣೆ)	46	48	37	41
11	ಶಿಕ್ಷಣ ಇಲಾಖೆ	98	95	56	66
12	ಇಂಧನ ಇಲಾಖೆ	21	21	30	14
13	ಆರ್ಥಿಕ ಇಲಾಖೆ	162	164	135	146
14	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ	21	21	10	14
15	ಅರಣ್ಯ ಮತ್ತು ಪರಿಸರ ಇಲಾಖೆ	73	75	57	62

16	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	48	57	30	28
17	ಒಳಾಡಳಿತ ಮತ್ತು ಸಾರಿಗೆ ಇಲಾಖೆ	70	74	62	71
18	ವಸತಿ ಇಲಾಖೆ	13	13	08	11
19	ವಾರ್ತಾ ಮತ್ತು ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಇಲಾಖೆ	28	30	26	29
20	ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ	06	10	04	03
21	ನೀರಾವರಿ ಇಲಾಖೆ	01	01	00	00
22	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	21	21	20	18
23	ಕಾರ್ಮಿಕ ಇಲಾಖೆ	18	17	17	14
24	ಕಾನೂನು ಇಲಾಖೆ	75	78	72	74
25	ವೈದ್ಯಕೀಯ ಶಿಕ್ಷಣ ಇಲಾಖೆ	11	11	05	08
26	ಯೋಜನೆ ಮತ್ತು ಸಾಂಖ್ಯಿಕ ಇಲಾಖೆ	75	79	71	73
27	ಲೋಕೋಪಯೋಗಿ ಇಲಾಖೆ	50	50	31	34
28	ಕಂದಾಯ ಇಲಾಖೆ	117	119	84	87
29	ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್.ಇಲಾಖೆ	84	84	61	65
30	ಸಮಾಜ ಕಲ್ಯಾಣ ಇಲಾಖೆ	37	37	27	28
31	ಸಾರಿಗೆ ಇಲಾಖೆ	21	21	17	17
32	ನಗರಾಭಿವೃದ್ಧಿ ಇಲಾಖೆ	74	75	51	53
33	ಜಲ ಸಂಪನ್ಮೂಲ ಇಲಾಖೆ	67	68	40	45
34	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ	26	26	23	19
	ಒಟ್ಟು	1736	1802	1368	1469

1542 (2184) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ದಿನನಿತ್ಯ ಎಷ್ಟು ಬಸ್‌ಗಳನ್ನು ಓಡಿಸುತ್ತಿದೆ; ಒಟ್ಟು ಸುತ್ತುವಳಿಗಳು ಎಷ್ಟು;

ಆ. ದಿನನಿತ್ಯ ಎಷ್ಟು ಸುತ್ತುವಳಿಗಳಲ್ಲಿ ಟಿಕೆಟ್ ರಹಿತ ಪ್ರಯಾಣಿಕರ ಶೋಧಕ್ಕಾಗಿ ತಪಾಸಣೆ ನಡೆಸಲಾಗುತ್ತಿದೆ;

ಇ. ಕಳೆದ ಒಂದು ವರ್ಷದಲ್ಲಿ ಪತ್ತೆ ಮಾಡಿದ ಟಿಕೆಟ್ ರಹಿತ ಪ್ರಯಾಣಿಕರ ಸಂಖ್ಯೆ ಎಷ್ಟು; ಇವರಿಂದ ವಸೂಲಿ ಮಾಡಿದ ದಂಡವೆಷ್ಟು;

ಈ. ತಪಾಸಣಾ ಸಿಬ್ಬಂದಿಗೆ ಮಾಸಿಕ ತಪಾಸಣಾ ಗುರಿ ನಿಗದಿ ಪಡಿಸಲಾಗಿದೆಯೇ; ನಿಗಿ ಪಡಿಸಿದ್ದಲ್ಲಿ, ಎಷ್ಟು;

ಉ. ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ತಪಾಸಣಾ ಸಿಬ್ಬಂದಿ ಎಷ್ಟು; (ಹುದ್ದೆವಾರು, ಘಟಕವಾರು ವಿವರ ನೀಡುವುದು)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. 3823 ಬಸ್‌ಗಳು 60000 ಸುತ್ತುವಳಿಗಳು

ಆ. 750 ಸುತ್ತುವಳಿಗಳು.

ಇ. 91801 ರೂ. 47,86,657/-

ಈ. ಹೌದು. 480

ಉ. 42

ಸಂಚಾರ ನಿರೀಕ್ಷಕರು-08,

ಸಹಾಯಕ ಸಂಚಾರ ನಿರೀಕ್ಷಕರು-34

ತನಿಖಾ ಸಿಬ್ಬಂದಿ ಘಟಕವಾರು ಇರುವುದಿಲ್ಲ.

1543(2185) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಪಾಂಕ ಪ್ರಕರಣದಲ್ಲಿ ನೌಕರಿ ಕಳೆದುಕೊಂಡವರ ಸಂಖ್ಯೆ ಎಷ್ಟು ; (ಇಲಾಖಾವಾರು ವಿವರ ನೀಡುವುದು);

ಆ) ಈಗಾಗಲೇ ವಿಶೇಷ ನಿಯಮದಡಿಯಲ್ಲಿ ಮರುನೇಮಕ ಮಾಡಿಕೊಂಡಿರುವ ನೌಕರರ ಸಂಖ್ಯೆ ಎಷ್ಟು; (ಇಲಾಖಾವಾರು ವಿವರ ನೀಡುವುದು);

ಇ) ಕೆಲವು ಇಲಾಖೆಗಳು ಸರ್ಕಾರ ರಚಿಸಿರುವ ವಿಶೇಷ ನಿಯಮದ ಪ್ರಕಾರ ನೇಮಕಾತಿ ಆದೇಶ ಕಳುಹಿಸದಿರಲು ಕಾರಣಗಳೇನು; (ನೇಮಕಾತಿ ಪ್ರಕ್ರಿಯೆ ಜಾರಿಗೊಳಿಸದಿರುವ ಇಲಾಖೆ, ನೌಕರರ ವಿವರ ನೀಡುವುದು);

ಈ) ಈಗಾಗಲೇ ನೇಮಕಗೊಂಡಿರುವವರು ಯಾವುದೇ ಆಡಳಿತಾತ್ಮಕ ಮತ್ತು ಕಾನೂನು ಸಮಸ್ಯೆ ಎದುರಿಸದಂತೆ ಏನು ಕ್ರಮಗಳನ್ನು ಅನುಸರಿಸಲಾಗಿದೆ; (ವಿವರ ನೀಡುವುದು) ?

ಶ್ರೀ ಧರ್ಮ್‌ಸಿಂಗ್ (ಮುಖ್ಯ ಮಂತ್ರಿ) :

ಅ) ಸುಮಾರು 5,000.

ಆ) ಸುಮಾರು 4,400.

ಇ) ಕೆಲವು ಇಲಾಖೆಗಳಲ್ಲಿ ವಿಶೇಷ ನಿಯಮದನ್ವಯ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಮುನ್ನ ವಿಶೇಷ ನಿಯಮಗಳಿಗೆ ಸುಪ್ರೀಂ ಕೋರ್ಟಿನಿಂದ ತಡೆಯಾಜ್ಞೆ ಬಂದಿದ್ದರಿಂದ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಲಿಲ್ಲ. ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳ ಪ್ರಾಥಮಿಕ ಶಿಕ್ಷಕರು ಮತ್ತು ಕೆಲವು ಇಲಾಖೆಗಳ ನೌಕರರಿಗೆ ಸಂಬಂಧಿಸಿದಂತೆ ಹೀಗೆ ಆಗಿರುತ್ತದೆ.

ಈ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 12–12–2003ರ ತನ್ನ ಆದೇಶದಲ್ಲಿ ಮೇಲ್ಕಂಡ ನಿಯಮಗಳನ್ನು ಜಾರಿಗೊಳಿಸಲು ತಡೆಯಾಜ್ಞೆ ನೀಡಿದೆ. ಸರ್ವೋಚ್ಚ ನ್ಯಾಯಾಲಯದ ದಿನಾಂಕ 17–12–2004ರ ಆದೇಶದಲ್ಲಿ ಗ್ರಾಮೀಣ ಕೃಪಾಂಕ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಪ್ರಕರಣಗಳನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ವರ್ಗಾಯಿಸಿದೆ. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡುವ ಆದೇಶವನ್ನು ನಿರೀಕ್ಷಿಸಲಾಗಿದೆ.

1544(2178) ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಸಿಂಧಗಿ ಪಟ್ಟಣದಲ್ಲಿರುವ ರಸ್ತೆಗಳು (ಪುರಸಭೆ ವ್ಯಾಪ್ತಿಯಲ್ಲಿ) ಸಂಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
2. ಹಾಗಿದ್ದರೆ, ಸದರಿ, ರಸ್ತೆಗಳ ದುರಸ್ತಿಗೆ ಕೈಗೊಂಡಿರುವ ಕ್ರಮಗಳೇನು ;
3. ಬಿಡುಗಡೆಗೊಳಿಸಿರುವ ಅನುದಾನವೆಷ್ಟು ;
4. ರಸ್ತೆಗಳ ಸಂಪೂರ್ಣ ದುರಸ್ತಿ ಕಾರ್ಯ ಪೂರೈಸಲು ರೂಪಿಸಿರುವ ಕಾರ್ಯ ಯೋಜನೆಯೇನು ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು)

1. ಬಂದಿದೆ.
2. ಸರ್ಕಾರವು ರಸ್ತೆಗಳ ಅಭಿವೃದ್ಧಿಗಾಗಿ ಧನಸಹಾಯ ನೀಡಿದೆ.
3. 1) ಹುಡ್ಕೋ ನೆರವಿನ ಸಾಲ ಯೋಜನೆ ಅಡಿಯಿಂದ ರೂ. 50.00 ಲಕ್ಷಗಳು.

   2) 11ನೇ ಹಣಕಾಸು ಯೋಜನೆಯಡಿಯಿಂದ ರೂ. 60.00 ಲಕ್ಷಗಳು.
4. 1) ಹುಡ್ಕೋ ನೆರವಿನ ಸಾಲ ಯೋಜನೆ ಅಡಿಯಿಂದ ರೂ.50.00 ಲಕ್ಷಗಳಲ್ಲಿ 3.ಕಿ.ಮೀ.ರಿಂಗ್ ರಸ್ತೆಯನ್ನು ಹಾಗೂ ಬೀದಿ ದೀಪಗಳನ್ನು ಅಭಿವೃದ್ಧಿಪಡಿಸಲಾಗಿದೆ.

   2) 11ನೇ ಹಣಕಾಸು ಯೋಜನೆಯಡಿ ರೂ.60.00 ಲಕ್ಷಗಳ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಜೊತೆಗೆ 4.ಕಿ.ಮೀ.ನಷ್ಟು ರಸ್ತೆ ಅಭಿವೃದ್ಧಿ ಕೆಲಸವನ್ನು ಕೂಡಾ ಕೈಗೊಳ್ಳಲಾಗುತ್ತಿದೆ.

   3) ಅಭಾವ ಪರಿಹಾರ ಕಾಮಗಾರಿಗಳಡಿಯಲ್ಲಿ 25 ಕಿ.ಮೀ.ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿದೆ.

   4) ಪುರಸಭೆ ನಿದಿಯಲ್ಲಿ 2001–02, 2002–03 ಮತ್ತು 2003–04ನೇ ಸಾಲಿನಲ್ಲಿ 16 ಕಿ.ಮೀ.ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ.

1545 (2179) ಶ್ರೀ ಅಶೋಕ್ ಗುರಪ್ಪ ಶಾಬಾದಿ (ಸಿಂಧಗಿ) ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸಿಂಧಗಿ ಸಾರಿಗೆ ಡಿಪೋದಲ್ಲಿ ಹಾಲಿ ಓಡಾಡುತ್ತಿರುವ ಬಸ್ಸುಗಳ ಸಂಖ್ಯೆಯೆಷ್ಟು ;

ಆ) ಯಾವ ಯಾವ ಮಾರ್ಗಗಳಲ್ಲಿ ಸದರಿ ಬಸ್ಸುಗಳು ಓಡಾಡುತ್ತಿವೆ ;

ಇ) ಗ್ರಾಮೀಣ ಪ್ರದೇಶ ಜನರಿಗೆ ಇನ್ನೂ ಸಾರಿಗೆ ಸೌಲಭ್ಯ ಒದಗಿಸದೇ ಇರುವುದು (ಸಿಂಧಗಿ ವಿ.ಸ.ಕ್ಷೇತ್ರದಲ್ಲಿ) ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದರೆ ಸದರಿ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸೌಲಭ್ಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಉ) ಸಿಂಧಗಿ ಡಿಪೋದಲ್ಲಿ ಈಗಿರುವ ಬಸ್ಸುಗಳ ಜೊತೆಗೆ ಇನ್ನು ಹೆಚ್ಚಿನ ಬಸ್ಸುಗಳನ್ನು ಕೊಳ್ಳಲು ಉದ್ದೇಶಿಸಿದೆಯೇ;

ಊ) ಹಾಗಿದ್ದರೆ ಎಷ್ಟು ಬಸ್ಸುಗಳನ್ನು ಸದರಿ ಘಟಕಕ್ಕೆ ಸೇರ್ಪಡೆ ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) 55.

ಆ) ಅನುಬಂಧದಲ್ಲಿ ನೀಡಲಾಗಿದೆ.

ಇ) ಬಂದಿದೆ.

ಈ) ಪ್ರಸ್ತುತ 5 ಅನುಸೂಚಿಗಳು ಗ್ರಾಮೀಣ ಪ್ರದೇಶದ ಪ್ರಯಾಣಿಕರ ಅನುಕೂಲಕ್ಕಾಗಿ ಪ್ರಾರಂಭಿಸಿದ್ದು, ಇನ್ನು 15 ಅನುಸೂಚಿಗಳನ್ನು ಪ್ರಾರಂಭಿಸುವ ಯೋಜನೆಯಿದೆ.

ಉ) ಹೌದು.

ಊ) 6.

Sch No.	Total Sch.Kms.	Trip Kms.	Rouna Trip	Route From	Route To	Type
1	402	402		Sindagi	Ratanagiri	EXP
2	402	402		Ratanagiri	Sindagi	EXP
3	534	534	1	Sindagi	Kollapur	EXP
4	534	534	1	Sindagi	Kollapur	EXP
5	450	450	1	Sindagi	Sangali	EXP
6	450	450	1	Sindagi	Sangali	EXP
7	426	426	1	Sindagi	Miraj	EXP
8	414	414	3	Sindagi	Bijapur	EXP
9	344	172	1	Sindagi	Tulajapur	EXP
12	466	466		Sindagi	Srishelam	EXP
13	466	466		Srishelam	Sindagi	EXP
14	483	483		Sindagi	Vasco	EXP
15	483	483		Vasco	Sindagi	EXP
18	598	598		Sindagi	Bangalore	EXP
19	598	598		Bangalore	Sindagi	EXP
22	775	775		Sindagi	Dharmastal	EXP
23	775	775		Dharmstal	Sindagi	EXP
24	414	414	5	Sindagi	Bijapur	EXP
25	318	318	3	Sindagi	Indi	EXP

26	280	280	5	Gwwarwgundagi	Sindagi	EXP
27AB	292	88	1	Tavarked	Sindagi	ORD
		72	2	Sindagi	Gutturagi	ORD
		38	1	Sindagi	Somajal	ORD
		50	1	Sindagi	Kakalmel	ORD
		40	1	Sindagi	Bammanjogi	ORD
		24	1	Sindagi	Yaragal	ORD
28AB	362	188	1	Yalagoda	Sindagi	ORD
		40	1	Sindagi	Bammanjogi	ORD
		34	1	Sindagi	Madari	ORD
		120	1	Sindagi	Yadrammi	ORD
30AB	344	244	2	Binjabavi	Sindagi	ORD
		61		Sindagi	Binjabavi	ORD
31AB	332	180	1	Talkoti	Sindagi	ORD
		152	2	Sindagi	Handinur	ORD
34AB	298	108	3	Boragi	Sindagi	ORD
		132	2	Sindagi	Bammanhalli	ORD
		34	1	Sindagi	Somajal	ORD
		24	1	Sindagi	Mangalore	ORD
35	296	100	1	Gangahalli	Sindagi	ORD
		34	1	Sindagi	Madari	ORD

		30	1	Sindagi	Chandakote	ORD
		72	1	Sindagi	Kadlawal	ORD
		80	1	Sindagi	Chatarakki	ORD
38	314	66	1	Bammanhalli	Sindagi	ORD
		68	2	Sindagi	Asngihal	ORD
		48	2	Sindagi	Anari	ORD
		132	2	Sindagi	Kunesagi	ORD
38	370	276	2	Sindagi	Bijapur	ORD
		89		Sindagi	Bijapur	ORD
		25		Bijapur	Aheri/LP	ORD
40	310	25		Aheri-LP	Bijapur	ORD
		216	1	Bijapur	Aheri	ORD
		89		Bijapur	Sindagi	ORD
41	298	230	6	Balgnur	Sindagi	EXP
		88	2	Sindagi	Hikkangutti	ORD
43	220	36	1	Kunesagi	Alamel	ORD
		56	2	Alamel	Nagarahalli	ORD
		40	2	Alamel	Tharupur	ORD
		48	2	Alamel	Sindagi	ORD
		40	1	Alamel	Sindagi	ORD
44	280	38	1	Sommajal	Sindagi	ORD

		34	1	Sindagi	Haranal	ORD
		180	3	Sindagi	Mumasagi	ORD
		28	1	Sindagi	Malagan	ORD
45	316	50	1	Chatargi	D.Hippargi	ORD
		98	3	D.Hippargi	Othihal	ORD
		44	2	D.Hippargi	Mulasavalgi	ORD
		80	2	D.Hippargi	Ibrahimpur	ORD
		50	1	D.Hippargi	Sindagi	ORD
		18	1	D.Hippargi	Padganur	ORD
46	292	216	3	Kadakol	Sindagi	ORD
		76	1	Sindagi	Yadrami	ORD
47	326	180	3	Kainur	Sindagi	ORD
		30		Kainur	Sindagi	ORD
		28	1	Sindagi	Madabal	ORD
		58	1	Sindagi	Alamel	ORD
		30		Sindagi	Alamel	ORD
48	336	134	1	Tukkenkeri	Sindagi	ORD
		102	1	Sindagi	Kalakeri	ORD
		100	1	Sindagi	Sindagi	ORD
49	386	122	1	Chatarhalli	Sindagi	ORD
		144	1	Sindagi	Sindagi	ORD

139-53

		120	1	Sindagi	Asantapur	ORD
50	340	282	3	Yalgoad	Sindagi	ORD
		24	1	Sindagi	Hikkangutti	ORD
		34	1	Sindagi	Haranal	ORD
51	377	50	1	Kakkalmel	Sindagi	ORD
		95		Kakkalmel	Bijapur	ORD
		138	1	Bijapur	Sindagi	ORD
		69		Bijapur	Sindagi	ORD
		26		Sindagi	Kakkarmel	ORD
52	298	240	3	Thamba	Sindagi	ORD
		56	2	Sindagi	madabal	ORD
55	284	50	1	Sindagi	D.Hippargi	ORD
		198	3	D.Hippargi	Padaganur	ORD
		38	2	D.Hippargi	Padaganur	ORD
56	348	324	3	Sundagi	India	ORD
		24	1	Sindagi	Somapur	ORD
57	388			Sindagi	Pune	ORD
58	338	57	1	Sindagi	D.Hippargi	ORD
		282	3	D.Hippargi	Indi	ORD
61	324	324	3	Sindagi	Budihal	EXP
63	254	24	1	Sindagi	Somapur	ORD
		230	5	Sindagi	Balganur	ORD
64	607	607		Sindagi	Bangalore	ORD
68	360	360	3	Sindagi	Jewargi	ORD

1546(2152) ಶ್ರೀ ಅಶೋಕ್. ಆರ್.(ಉತ್ತರ ಹಳ್ಳಿ) ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಉತ್ತರಹಳ್ಳಿನ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬೊಮ್ಮನಹಳ್ಳಿ ನಗರಸಭೆಯಿಂದ ಎಷ್ಟು ಬಹುಮಹಡಿ ಕಟ್ಟಡಗಳಿಗೆ (ಅಪಾರ್ಟ್‌ಮೆಂಟ್) ಅನುಮತಿ ನೀಡಿದೆ (ವಿವರ ನೀಡುವುದು);

2. ಅದರಲ್ಲಿ ಎಷ್ಟು ಬಹುಮಹಡಿ ಕಟ್ಟಡಗಳು (ಅಪಾರ್ಟ್‌ಮೆಂಟ್) ನಕ್ಷೆ ಮಂಜೂರಾತಿಗೆ ವಿರುದ್ಧವಾಗಿ ಕಟ್ಟಡಗಳನ್ನು ಕಟ್ಟಿವೆ (ವಿವರಗಳನ್ನು ನೀಡುವುದು) ;

3. ಈ ಬಗ್ಗೆ ತೆಗೆದುಕೊಂಡಿರುವ ಕಾನೂನು ಕ್ರಮವೇನು ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.ಸಚಿವರು.)

1. 209

2. 2003–04 ರಲ್ಲಿ 7 ಕಟ್ಟಡಗಳು

   2004–05 ರಲ್ಲಿ 13 ಕಟ್ಟಡಗಳು

3. ಈ ಬಗ್ಗೆ ಸಂಬಂಧಪಟ್ಟವರ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ.

1547(2153) ಶ್ರೀ ಅಶೋಕ್. ಆರ್. (ಉತ್ತರಹಳ್ಳಿ) ಮಾನ್ಯ ಪ್ರೌಡಾಡಳಿತ ಹಾಗೂ ಕೆ.ಯು.ಐ.ಡಿ.ಎಸ್.ಸಿ.ಸಚಿವರು)

1. ಉತ್ತರಹಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರತಕ್ಕಂತ ಬೊಮ್ಮನಹಳ್ಳಿ ನಗರಸಭೆಗೊಳಪಡುವ ಜೆ.ಪಿ.ನಗರ 7ನೇ ಫೇಸ್ 24ನೇ ಮೈನ್ ಮುಖ್ಯ ರಸ್ತೆಯಲ್ಲಿ ಕಟ್ಟಲಾಗಿರುವ ಮಹಾವೀರ, ಶ್ರೇಯಸ್, ರಾಜಲಕ್ಷ್ಮಿ ಮತ್ತು ಬಿಂದಿಯಾ ಅಪಾರ್ಟ್‌ಮೆಂಟ್‌ಗಳಿಗೆ ನಕ್ಷೆ ಯಾವಾಗ ಮಂಜೂರು ಮಾಡಲಾಗಿದೆ ;

2. ಈ ಅಪಾರ್ಟ್‌ಮೆಂಟ್‌ಗಳು ಕಾನೂನಿಗೆ ವಿರುದ್ಧವಾಗಿ ಹಾಗೂ ನಕ್ಷೆಗೆ ವಿರುದ್ಧವಾಗಿ ಕಟ್ಟಡವನ್ನು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

3. ಹಾಗಿದ್ದಲ್ಲಿ, ಮಂಜೂರಾದ ನಕ್ಷೆಗಳಲ್ಲಿ ಎಷ್ಟು ಶೇಕಡಾವಾರು ಬದಲಾಯಿಸಿ ಅಕ್ರಮವಾಗಿ ಕಟ್ಟಡಗಳು ನಿರ್ಮಾಣವಾಗಿವೆ ;

4. ಅಕ್ರಮವಾಗಿ ಕಟ್ಟಿರುವುದನ್ನು ತೆರವುಗೊಳಿಸಲು ಕೈಗೊಂಡ ಕಾನೂನು ಕ್ರಮವೇನು ?

ಶ್ರೀ ಎಸ್.ಆರ್.ಮೋರೆ (ಪ್ರೌಡಾಡಳಿತ ಹಾಗೂ ಕೆ.ಯು.ಐ.ಡಿ.ಎಸ್.ಸಿ.ಸಚಿವರು)

1. 1. ಮಹಾವೀರ ಅಪಾರ್ಟ್‌ಮೆಂಟ್ 2003–04 ರಲ್ಲಿ.

   2. ಶ್ರೇಯಸ್ ಅಪಾರ್ಟ್‌ಮೆಂಟ್ 2004–05 ರಲ್ಲಿ ನಕ್ಷೆ ಅನುಮೋದನೆ ನೀಡಲಾಗಿದೆ.

   3. ರಾಜಲಕ್ಷ್ಮಿ ಅಪಾರ್ಟ್‌ಮೆಂಟ್ ಮತ್ತು ಬಿಂದಿಯಾ ಅಪಾರ್ಟ್‌ಮೆಂಟ್‌ಗಳು ಬಿ.ಡಿ.ಎ.ಯಿಂದ ನಕ್ಷೆ ಮಂಜೂರಾತಿ ಪಡೆದಿರುತ್ತವೆ.

2. ಹೌದು.

3. ಸುಮಾರು ಶೇಕಡ 15 ರಿಂದ 20.

4. ಸಂಬಂಧಪಟ್ಟವರಿಗೆ ನೋಟೀಸನ್ನು ಜಾರಿ ಮಾಡಿದೆ.

1548(2154) ಶ್ರೀ ಆರ್.ಅಶೋಕ್.ಎಂಎಲ್ಎ (ಉತ್ತರಹಳ್ಳಿ) ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ರಿಂಗ್ ರಸ್ತೆ ಮತ್ತು ನ್ಯಾಷನಲ್

ಹೈವೇ ಪಕ್ಕದಲ್ಲಿ ಕಟ್ಟಡದ ಅವಶೇಷ (ಡೆಬ್ರಿಸ್)ಗಳನ್ನು ಲಾರಿಗಳಲ್ಲಿ ತಂದು ಫುಟ್‌ಪಾತ್‌ಗಳಲ್ಲಿ ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಇದರಿಂದ ಸಾರ್ವಜನಿಕರಿಗೆ ಆಗಿರತಕ್ಕಂತ ತೊಂದರೆ ನಿವಾರಣೆ ಮಾಡಲು ನಗರ ಪಾಲಿಕೆ ಮತ್ತು ನಗರ ಸಭೆಗಳು ತೆಗೆದುಕೊಂಡ ಕಾನೂನು ಕ್ರಮಗಳೇನು ;

ಇ. ಈ ವಿಷಯಕ್ಕೆ ಸಂಬಂಧಿಸಿದಂತೆ ಎಷ್ಟು ಲಾರಿ ಮಾಲೀಕರುಗಳ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ (ಪೂರ್ಣ ವಿವರಗಳನ್ನೊದಗಿಸುವುದು) ?

ಶ್ರೀ ಧರ್ಮಸಿಂಗ್ ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಹೌದು

ಆ. ಎಲ್ಲೆಂದರಲ್ಲಿ ಡೆಬ್ರಿಸ್‌ನ್ನು ಹಾಕದಿರಲು ನಿಗಾ ವಹಿಸುವಂತೆ ನಗರ ಪಾಲಿಕೆ ಸಿಬ್ಬಂದಿಗೆ ಹಾಗೂ ನಗರ ಸಭೆಗಳ ಆಯುಕ್ತರುಗಳಿಗೆ ತಿಳಿಸಿದೆ.

ಇ. ಮಧ್ಯರಾತ್ರಿ ವೇಳೆಯಲ್ಲಿ ಹಾಗೂ ನಗರ ಪಾಲಿಕೆ ಸಿಬ್ಬಂದಿಗಳ ಗಮನಕ್ಕೆ ಬಾರದೆ ತ್ಯಾಜ್ಯ ವಸ್ತುಗಳನ್ನು ಸುರಿದು ಹೋಗುವುದರಿಂದ ಅಂತಹ ಲಾರಿಗಳನ್ನು ಕಂಡುಹಿಡಿಯಲು ಸಾಧ್ಯವಾಗಿರುವುದಿಲ್ಲ.

1549(2155) ಶ್ರೀ ಅಶೋಕ್ ಆರ್. ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಉತ್ತರಹಳ್ಳಿ ಕ್ಷೇತ್ರ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಮಲ್ಲಸಂದ್ರ ಗ್ರಾಮದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಅಕ್ರಮವಾಗಿ ಗಣಿಗಾರಿಕೆ ಮಾಡುವವರ ವಿರುದ್ಧ ತೆಗೆದುಕೊಂಡ ಕಾನೂನು ಕ್ರಮಗಳೇನು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಹೌದು.

ಆ. ಅಕ್ರಮ ಕಟ್ಟಡ ಕಲ್ಲು ಗಣಿಗಾರಿಕೆಯನ್ನು ತಡೆಗಟ್ಟಲು ಕಂದಾಯ ಇಲಾಖೆ ಮತ್ತು ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ಕ್ರಮ ಕೈಗೊಳ್ಳಲಾಗಿದೆ. ಹಾಗೂ 2004-05ರವರೆಗೆ 6 ಅಕ್ರಮ ಕಲ್ಲು ಗಣಿಗಾರಿಕೆ ಪ್ರಕರಣಗಳಿಂದ ರೂ.84,000-00 ದಂಡ ವಸೂಲು ಮಾಡಿದೆ.

1550 (2156) ಶ್ರೀ ಆರ್.ಅಶೋಕ್.ಎಂಎಲ್ಎ ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬರುವಂತ ವೃಷಭಾವತಿ ನಾಲೆಗೆ ಅಮರ ಜ್ಯೋತಿನಗರ ಮತ್ತು ಮೂಡಲ ಪಾಳ್ಯ ವಾರ್ಡ್‌ಗಳಲ್ಲಿ ಕಟ್ಟಲು ಯೋಜಿಸಿರುವ ಸೇತುವೆಗಳ ಸಂಖ್ಯೆ ಎಷ್ಟು ಮತ್ತು ಅದರ ಅಂದಾಜು ವೆಚ್ಚ ಎಷ್ಟು ;

ಆ. ಯಾವಾಗ ಈ ಕಾಮಗಾರಿ ಪ್ರಾರಂಭ ಮಾಡಲಾಗುವುದು ;

ಇ. ಈ ಸೇತುವೆ ನಿರ್ಮಾಣ ಮಾಡಲು ವಿಳಂಬವಾಗಿರಲು ಕಾರಣವೇನು ;

ಶ್ರೀ ಧರಂಸಿಂಗ್(ಮುಖ್ಯಮಂತ್ರಿಯವರು) :

ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬರುವಂತಹ ವೃಷಭಾವತಿ ನಾಲೆಗೆ ಅಮರ ಜ್ಯೋತಿನಗರ (ವಾರ್ಡ್–37) ಮತ್ತು ಮೂಡಲಪಾಳ್ಯ (ವಾರ್ಡ್–38) ಈ ವಾರ್ಡ್‌ಗಳಲ್ಲಿ ಕಟ್ಟಲು ಯೋಜಿಸಿರುವ ಸೇತುವೆಗಳ ಸಂಖ್ಯೆ 4. ಇವುಗಳ ಅಂದಾಜು ವೆಚ್ಚ 280.00 ಲಕ್ಷ ರೂ.ಗಳು.

1. ಮಂಜೂರಾಗಿರುವ 02 ಸೇತುವೆಗಳ ಪೈಕಿ 37ನೇ ವಾರ್ಡಿನ ಒಂದು ಸೇತುವೆಗೆ ದಿನಾಂಕ 28.12.2004 ರಂದು ಕಾರ್ಯಾದೇಶ ನೀಡಲಾಗಿದೆ. ಈ ಮಧ್ಯೆ ಈ ಸೇತುವೆಯನ್ನು ಅಗಲವಾಗಿ ಕಟ್ಟಲು ಬಂದ ಕೋರಿಕೆಯ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಂಡು ಕೆಲಸವನ್ನು ಪ್ರಾರಂಭಿಸಿದ್ದು, ಒಂದು ಕಡೆ ಆಸರೆ ಗೋಡೆಯ ನಿರ್ಮಾಣ ಪ್ರಗತಿಯಲ್ಲಿರುತ್ತದೆ.

2. ಮಂಜೂರಾಗಿರುವ ವಾರ್ಡ್ 38ರ 2ನೇ ಸೇತುವೆಗೆ ರೂ.80.00 ಲಕ್ಷಗಳ ಟೆಂಡರ್ ದಿನಾಂಕ 09.12.2004 ರಂದು ಮಂಜೂರಾತಿಯಾಗಿದ್ದು, ಗುತ್ತಿಗೆದಾರರ ಜೊತೆ ಕರಾರು ಮಾಡಿಕೊಂಡು ಕಾರ್ಯಾದೇಶ ನೀಡಿ ಕಾಮಗಾರಿಯನ್ನು ಇಷ್ಟರಲ್ಲೇ ಪ್ರಾರಂಭಿಸಲಾಗುವುದು.

ವಾರ್ಡ್ 38 ರಲ್ಲಿ ಕಾರ್ಯಾದೇಶ ನೀಡಿರುವ ಸೇತುವೆಗಳ ಪ್ರಾರಂಭದ ಸಮಯದಲ್ಲಿ ಸ್ಥಳೀಯ ನಗರ ಪಾಲಿಕೆ ಸದಸ್ಯರು ಈ ಮಂಜೂರಾಗಿರುವ ಸ್ಥಳದಲ್ಲಿ ಕಟ್ಟುವ ಬದಲು ಬೇರೆ ಸ್ಥಳದಲ್ಲಿ ಕಟ್ಟಲು ಹಾಗೂ ವಾರ್ಡ್ 37 ರಲ್ಲಿ ಸೇತುವೆ ಅಗಲಗೊಳಿಸುವ ಬಗ್ಗೆ ಕೋರಿರುವುದರಿಂದ ಈ ಕೋರಿಕೆಯನ್ನು ಪರಿಶೀಲಿಸಲಾಗುತ್ತಿದೆ.

1551(2170) ಶ್ರೀ ಬಸವರಾಜ್‌ರಾಯರೆಡ್ಡಿ (ಯಲ್‌ಬುರ್ಗ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಹೈಕೋರ್ಟ್ ಸಂಚಾರಿ ಪೀಠಗಳನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭ ಮಾಡಲು ಸರ್ಕಾರವು ಉದ್ದೇಶಿಸಿದೆ.

ಆ. ಈ ಸಂಚಾರಿ ಹೈಕೋರ್ಟ್ ಪೀಠಗಳನ್ನು ಯಾವ ವರ್ಷದಿಂದ ಪ್ರಾರಂಭ ಮಾಡಲಾಗುವುದು;

ಇ. ಈ ಸಂಚಾರಿ ಹೈಕೋರ್ಟ್ ಪೀಠಗಳನ್ನು ಪ್ರಾರಂಭ ಮಾಡಲು ಎಷ್ಟು ಹಣವನ್ನು ಸರ್ಕಾರ ಕಾಯ್ದಿರಿಸಿದೆ ಹಾಗೂ ಪ್ರತಿ ವರ್ಷ ಈ ಸಂಚಾರಿ ನ್ಯಾಯ ಪೀಠಗಳ ಕಾರ್ಯ ನಿರ್ವಹಣೆಗೆ ತಗಲುವ ವೆಚ್ಚವೆಷ್ಟು ಹಾಗೂ ಸಿಬ್ಬಂದಿ ವೆಚ್ಚ ಎಷ್ಟು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಸರ್ಕಾರವು ಉದ್ದೇಶಿಸಿದಂತೆ ಧಾರವಾಡ ಮತ್ತು ಗುಲ್ಬರ್ಗಾದಲ್ಲಿ ಸಂಚಾರಿ ಪೀಠಗಳನ್ನು ಸ್ಥಾಪಿಸಲು ಉಚ್ಚ ನ್ಯಾಯಾಲಯವು ಅಧಿಸೂಚನೆ ಸಂಖ್ಯೆ ಆರ್‌ಪಿಎಸ್ :117 :2004, ದಿನಾಂಕ : 19–10–2004 ರಲ್ಲಿ ಅಧಿಸೂಚಿಸಿದೆ.

ಆ. ಈ ಸಂಚಾರಿ ಪೀಠಗಳ ಕಾರ್ಯಾರಂಭ ಕುರಿತು ಕರ್ನಾಟಕ ಉಚ್ಚ ನ್ಯಾಯಾಲಯವು ಅಧಿಸೂಚನೆಯನ್ನು ಹೊರಡಿಸಲಿದೆ.

ಇ. ಈ ಸಂಚಾರಿ ಹೈಕೋರ್ಟ್ ಪೀಠ ಕಾರ್ಯಾರಂಭ ಮಾಡಲು ಸರ್ಕಾರವು ರೂ. 20.00 ಕೋಟಿ ಹಣವನ್ನು ಕಾಯ್ದಿರಿಸಿದೆ. ಈ ಪೀಠಗಳ ಕಾರ್ಯ ನಿರ್ವಹಣೆ ಮತ್ತು ಸಿಬ್ಬಂದಿ ವೆಚ್ಚ ಅಂಕಿ ಅಂಶಗಳನ್ನು ಅಂದಾಜು ಮಾಡಲಾಗುತ್ತಿದೆ.

1552(2171) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ) ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಒಂದಂಕಿ ಲಾಟರಿಯನ್ನು ಸಂಪೂರ್ಣವಾಗಿ ನಿಲ್ಲಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಏನಾದರೂ ಇದೆಯೇ?

ಆ. ಹಾಗಿದ್ದಲ್ಲಿ, ಯಾವ ವರ್ಷದಿಂದ ನಿಲ್ಲಿಸಲಾಗುವುದು?

ಇ. ಒಂದಂಕಿ ಲಾಟರಿಯನ್ನು ಅಧಿಕೃತವಾಗಿ ಮಾರಾಟ ಮಾಡಲು ಅನುಮತಿ ನೀಡಲಾಗಿರುವ ಏಜೆನ್ಸಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಏಜೆನ್ಸಿಗಳ ವಿವರ ನೀಡುವುದು)

ಈ. ಒಂದಂಕಿ ಲಾಟರಿ ಅಂಗಡಿಗಳು ಶಾಲೆಯ, ಸರ್ಕಾರಿ ಕಛೇರಿಗಳ ಬಳಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ. ಹಾಗಿದ್ದಲ್ಲಿ, ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ. ಲಾಟರಿ ರೆಗ್ಯುಲೇಷನ್ ಆಕ್ಟ್ 98ರಲ್ಲಿ ರಾಷ್ಟ್ರಾದ್ಯಂತ ಒಂದಂಕಿ ಲಾಟರಿಯನ್ನು ನಿಷೇಧಿಸಲಾಗಿದೆ. ಆದ್ದರಿಂದ ರಾಜ್ಯದಲ್ಲಿ ಒಂದಂಕಿ ಲಾಟರಿಯನ್ನು ಪ್ರತ್ಯೇಕವಾಗಿ ನಿಷೇಧಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಒಂದಂಕಿ ಲಾಟರಿ ಮಾರಾಟ, ಲಾಟರಿ ರೆಗ್ಯುಲೇಷನ್ ಆಕ್ಟ್ 98ರಲ್ಲಿ ನಿಷೇದಿಸ ಲಾಗಿರುವುದರಿಂದ ಒಂದಂಕಿ ಲಾಟರಿ ಮಾರಾಟಕ್ಕೆ ರಾಜ್ಯದಲ್ಲಿ ಅಧಿಕೃತವಾಗಿ ಏಜನ್ಸಿ ನೀಡಿರುವುದಿಲ್ಲ.

ಈ. ಇಲ್ಲ.

ಉ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

1553 (2172) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ) ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. 2002-03, 2003-04, 2004-05ನೇ ಸಾಲಿನಲ್ಲಿ ರಾಜ್ಯದಲ್ಲಿ ಆದ ರಸ್ತೆ ಅಪಘಾತಗಳ ಸಂಖ್ಯೆ ಎಷ್ಟು ಹಾಗೂ ಮೃತಪಟ್ಟವರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

ಆ. ಬೆಂಗಳೂರು ಮಹಾನಗರದಲ್ಲಿ 2002 ರಿಂದ 2005ರ ವರೆಗೆ ಪ್ರತಿ ವರ್ಷ ಸಂಭವಿಸಿರುವ ವಾಹನಗಳ ಅಪಘಾತಗಳೆಷ್ಟು ;

ಇ. ಈ ಪೈಕಿ ಮೃತಪಟ್ಟವರು ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು ;

ಈ. ಬೆಂಗಳೂರು ಮಹಾನಗರದಲ್ಲಿ ರಸ್ತೆ ಅಪಘಾತಗಳನ್ನು ತಡೆಯಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

ಉ. ಈ ಅಪಘಾತದಲ್ಲಿ ಮೃತಪಟ್ಟವರಿಗೆ ಹಾಗೂ ಗಾಯಗೊಂಡವರಿಗೆ ನೀಡಿರುವ ಪರಿಹಾರ ಧನವೆಷ್ಟು ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಯವರು) :

ಅ. ಲಗತ್ತಿಸಿದೆ.

ಆ.

ವರ್ಷ	ಮಾರಣಾಂತಿಕ ಅಪಘಾತಗಳು	ಮಾರಣಾಂತಿಕವಲ್ಲದ ಅಪಘಾತಗಳು
2002	783	9073
2003	843	9662
2004	875	8226
2005 (ಫೆಬ್ರವರಿಯ ವರೆಗೆ)	153	1180

ಇ.

ವರ್ಷ	ಮಾರಣಾಂತಿಕ ಅಪಘಾತಗಳು	ಮಾರಣಾಂತಿಕವಲ್ಲದ ಅಪಘಾತಗಳು
2002	820	7577
2003	883	7980
2004	903	6921
2005 (ಫೆಬ್ರವರಿಯ ವರೆಗೆ)	163	1066

ಈ. ಬೆಂಗಳೂರು ಮಹಾನಗರದಲ್ಲಿ ರಸ್ತೆ ಅಪಘಾತಗಳನ್ನು ತಪ್ಪಿಸಲು ಹಾಗೂ ವಾಹನ ಸಂಚಾರವನ್ನು ಸುಗಮಗೊಳಿಸಲು ಏಕಮುಖ ಸಂಚಾರ ವ್ಯವಸ್ಥೆ, ಸಿಗ್ನಲ್ ಲೈಟ್ಸ್‌ಗಳ ಅಳವಡಿಕೆ, ಮೇಲೆ ಸೇತುವೆ ನಿರ್ಮಾಣ, ಆಟೋಮೇಷನ್ ಎನ್‌ಫೋರ್ಸ್‌ಮೆಂಟ್ ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಉ. ಅಪಘಾತದಲ್ಲಿ ಮೃತಪಟ್ಟವರಿಗೆ ಹಾಗೂ ಗಾಯಗೊಂಡವರಿಗೆ ಸಂಚಾರ ವಿಭಾಗದಿಂದ ಯಾವುದೇ ಪರಿಹಾರ ಧನ ನೀಡುವುದಿಲ್ಲ.

ROAD ACCIDENTS AND CASUALITIES IN KARNATAKA FOR THE YEAR-2002

Sl No.	Name of the units	Fatal	Non-Fatal	No. of Kill	Persons Injured
1	Bangalore city	792	9.208	830	7.698
2	Mysore city	88	482	93	563
3	Hubli-Dharwad city	110	739	125	1,054
4	Bangalore District	588	1,928	647	2,866
5	Kolar	222	813	260	1,051
6	K.G.F	37	138	37	164
7	Tumkur	273	1073	342	1,678
8	Mysore District	126	436	142	828
9	Mandya B 13	195	1018	228	2,028
10	Hassan	194	825	222	1,718
11	Madakeri	29	256	34	407
12	D.K	236	1,454	265	2,365
13	U.K	136	656	145	995
14	Chikkamagalur	101	538	114	1,081
15	Belgaum	400	1,560	452	3,251
16	Dharwad	92	310	115	772

17	Bijapur	193	706	215	1,297
18	Gulbarga	185	676	214	903
19	Raichur	108	412	123	784
20	Bidar	126	727	138	1,292
21	Chitradurga	191	1042	254	2,166
22	Shimoga	134	834	146	1,544
23	Bellary	172	861	211	1,678
24	K.Railways	12	111	15	30
25	Bagalkot	171	491	200	1,147
26	Chamarajanagar	56	195	61	554
27	Davanagere	169	773	197	1,383
28	Udupi	132	799	152	1,267
29	Gadag	59	194	84	801
30	Haveri	147	642	173	1,568
31	Koppal	110	303	132	836
	Total	**5584**	**30200**	**6366**	**45769**

ROAD ACCIDENTS AND CASUALITIES IN KARNATAKA
FOR THE YEAR-2003

Sl No.	Year	NO.OF CASES Fatal	Non-Fatal	NO.OF PERSONS Total	Killed	Injured
1	Bangalore City	843	9835	10678	882	8090
2	Mysore city	77	514	591	90	618
3	Hubli-Dharwad city	97	636	733	103	838
4	Bangalore District	562	2231	2793	630	2949
5	Kolar	222	837	1059	260	1129
6	K.G.F.	27	114	141	29	159
7	Tumkur	234	976	1210	268	1437
8	Mysore District	93	402	495	100	705
9	Mandya **13**	216	923	1139	258	1775
10	Hassan	202	944	1146	252	1650
11	Madakeri	36	218	254	42	510
12	D.K	218	1522	1740	242	2433
13	U.K	127	728	855	140	1150
14	Chikkamagalur	88	585	673	107	1151
15	Belgaum	418	1654	2072	476	3071

16	Dharwad	85	305	390	94	662
17	Bijapur	182	657	839	204	1211
18	Gulbarga	222	977	1199	260	1512
19	Raichur	106	420	526	119	874
20	Bidar	145	727	872	169	1154
21	Chitradurga	178	1149	327	220	2139
22	Shimoga	127	838	965	137	1499
23	Bellary	174	1284	1458	196	1905
24	K.Railways	16	131	147	23	55
25	Bagalkot	156	626	782	171	1147
26	Chamaraj nagar	63	174	237	72	361
27	Davanagere	161	708	869	183	1411
28	Udupi	125	852	977	133	1349
29	Gadag	54	206	260	57	476
30	Haveri	136	638	774	164	1676
31	Koppal	103	354	457	114	685
	Total	**5493**	**32165**	**37658**	**6195**	**45781**

ROAD ACCIDENTS AND CASUALITIES IN KARNATAKA FOR THE YEAR-2004

Sl No.	Year	NO.OF CASES Fatal	Non-Fatal	NO.OF PERSONS Total	Killed	Injured
1	Bangalore City	864	8267	9131	897	6958
2	Mysore City	95	614	709	101	773
3	Hubli-Dharwad City	92	576	668	97	657
4	Bangalore District	655	2497	3152	713	3289
5	Kolar	233	797	1030	268	1159
6	K.G.F	28	154	182	32	205
7	Tumkur	272	1170	1442	325	1980
8	Mysore District	126	484	610	134	907
9	Mandya B 13	200	988	188	235	2122
10	Hassan	183	1095	1278	214	2040
11	Madakeri	33	267	300	35	441
12	D.K.	213	1678	1891	235	2592
13	U.K.	154	764	918	164	1222
14	Chikkamagalur	91	634	725	113	1251
15	Belgaum	390	1735	2125	445	3524
16	Dharwad	97	349	446	110	734

17	Bijapur	195	658	853	227	1387
18	Gulbarga	210	951	1161	246	1742
19	Raichur	120	472	592	138	1072
20	Bidar	128	868	996	151	1262
21	Chitradurga	185	1397	1582	226	2653
22	Shimoga	134	917	1051	157	1536
23	Bellary	249	1704	1953	275	2406
24	K.Railways	10	108	118	15	33
25	Bagalkot	185	592	777	207	1202
26	Chamarajnagar	72	239	311	82	560
27	Davangere	131	841	972	142	1735
28	Udupi	149	935	1084	165	1566
29	Gadag	58	265	323	70	677
30	Haveri	124	707	831	156	1885
31	Koppal	110	360	470	122	825
	Total	**5786**	**33083**	**38869**	**6497**	**50395**

1555(2012) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಪಟ್ಟಣ ಯೋಜನಾ ಪ್ರಾಧಿಕಾರಗಳ ವಿವರಗಳೇನು ;

ಆ. ಬಾಗಲಕೋಟೆ ಪಟ್ಟಣ ಯೋಜನಾ ಪ್ರಾಧಿಕಾರ ಮತ್ತು ನಗರ ಯೋಜನಾ ಪ್ರಾಧಿಕಾರಗಳ ಕಾರ್ಯವ್ಯಾಪ್ತಿಗಳ ವಿವರಗಳೇನು ?

ಶ್ರೀ ಎಸ್.ಆರ್.ಮೋರೆ (ಮಾನ್ಯ ಪೌರಾಡಳಿತ ಸಚಿವರು) :

ಅ. ರಾಜ್ಯದಲ್ಲಿ ಬೆಂಗಳೂರು ಸೇರಿಸಿ 28 ನಗರಾಭಿವೃದ್ಧಿ ಪ್ರಾಧಿಕಾರಿಗಳು 25 ನಗರ ಯೋಜನಾ ಪ್ರಾಧಿಕಾರಿಗಳು 25 ನಗರ ಯೋಜನಾ ಪ್ರಾಧಿಕಾರಿಗಳು ಮತ್ತು 46 ಪುರಸಭಾ ಯೋಜನಾ ಪ್ರಾಧಿಕಾರಿಗಳು ಅಸ್ತಿತ್ವದಲ್ಲಿವೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ. ಬಾಗಲಕೋಟೆ ಪಟ್ಟಣ ಯೋಜನಾ ಪ್ರಾಧಿಕಾರ ಸೇರಿದಂತೆ ರಾಜ್ಯದಲ್ಲಿಯ ಇತರೆ ನಗರ ಯೋಜನಾ ಪ್ರಾಧಿಕಾರಿಗಳ ಕಾರ್ಯವ್ಯಾಪ್ತಿಗಳ ವಿವರಗಳನ್ನು ಅನುಬಂಧ II, III ಮತ್ತು IV ರಲ್ಲಿ ಅಡಕಗೊಳಿಸಿದೆ. (ಸ್ಥಳೀಯ ಯೋಜನಾ ಪ್ರದೇಶದ ಘೋಷಣೆ, ದಿನಾಂಕ, ವಿಸ್ತೀರ್ಣ, ಅನುಮೋದಿತ ಅಭಿವೃದ್ಧಿ ಯೋಜನೆ ವಿವರ).

ಅನುಬಂಧ-1

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಯೋಜನಾ ಪ್ರಾಧಿಕಾರಗಳು ಮತ್ತು ಪುರಸಭೆ ಯೋಜನಾ ಪ್ರಾಧಿಕಾರಗಳ ಪಟ್ಟಿ (ದಿನಾಂಕ 9-3-2005 ರಲ್ಲಿದ್ದಂತೆ)

ಕ್ರ.ಸಂ.	ನಗರಾಭಿವೃದ್ಧಿ ಪ್ರಾಧಿಕಾರ	ಯೋಜನಾ ಪ್ರಾಧಿಕಾರ	ಪುರಸಭೆ ಯೋಜನಾ ಪ್ರಾಧಿಕಾರ
1	ಬೆಂಗಳೂರು	ಬಾಗಲಕೋಟೆ	ಅರಸೀಕೆರೆ
2	ಬೆಳಗಾಂ	ಬಿಎಂಐಸಿಎಪಿಎ	ಆನೇಕಲ್
3	ಬೀದರ್	ಚಿಂತಾಮಣಿ	ಬೈಲಹೊಂಗಲ
4	ಬಿಜಾಪುರ	ಬಸವಕಲ್ಯಾಣ	ಭಾಲ್ಕಿ
5	ಬಳ್ಳಾರಿ	ಗಂಗಾವತಿ	ಬಂಟ್ವಾಳ
6	ಹೊಸಪೇಟೆ	ದಾಂಡೇಲಿ	ಭಟ್ಕಳ
7	ಚಿಕ್ಕಮಗಳೂರು	ಗೋಕಾಕ್	ಚಳ್ಳಕೆರೆ
8	ಚಿತ್ರದುರ್ಗ	ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ	ಚಿಕ್ಕಬಳ್ಳಾಪುರ
9	ಅ) ದಾವಣಗೆರೆ ಬಿ)ಹರಿಹರ	ಜಮಖಂಡಿ	ಚಿಟಗುಪ್ಪ
10	ಗುಲ್ಬರ್ಗ	ಮಾಗಡಿ	ಗುಳೇದಗುಡ್ಡ
11	ಹುಬ್ಬಳ್ಳಿ-ಧಾರವಾಡ	ನೆಲಮಂಗಲ	ಹರಪನಹಳ್ಳಿ
12	ಹಾಸನ	ನಿಪ್ಪಾಣಿ	ಹಿರಿಯೂರು
13	ಕೋಲಾರ	ಪುತ್ತೂರು	ಹೊಳೆನರಸೀಪುರ
14	ಕೆ.ಜಿ.ಎಫ್	ರಬಕವಿ-ಬನಹಟ್ಟಿ	ಹುಮ್ನಾಬಾದ್
15	ಕಾರವಾರ	ರಾಣಿಬೆನ್ನೂರು	ಹುಣಸೂರು
16	ಮಂಗಳೂರು	ಶಹಪುರ್	ಇಳಕಲ್
17	ಮಡಿಕೇರಿ	ಸಿರ್ಸಿ	ಕಡೂರು

18	ಮಂಡ್ಯ	ವಾಡಿ–ಶಹಾಬಾದ್	ಕಂಪ್ಲಿ
19	ಮೈಸೂರು	ಯಾದಗೀರ್	ಕೊಳ್ಳೇಗಾಲ
20	ರಾಯಚೂರು	ಕನಕಪುರ	ಕುಮಟಾ
21	ಶಿವಮೊಗ್ಗ	ಸಿಂಧನೂರು	ಲಕ್ಷ್ಮೇಶ್ವರ
22	ತುಮಕೂರು	ಬಾದಾಮಿ	ನವಲಗುಂದ
23	ರಾಮನಗರ–ಚನ್ನಪಟ್ಟಣ	ಕೆ.ಆರ್.ನಗರ	ಮಹಾಲಿಂಗಪುರ
24	ಉಡುಪಿ–ಮಲ್ಪೆ	ಮಾನ್ವಿ	ಮಳವಳ್ಳಿ
25	ಗದಗ–ಬೆಟಗೇರಿ	ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ	ಮುಧೋಳ
26	ರಾಮಸಮುದ್ರ		ಮುದ್ದೇಬಿಹಾಳ್
27	ಕೊಪ್ಪಳ		ಮುಳಬಾಗಿಲು
28	ಹಾವೇರಿ		ನರಗುಂದ
29			ರಾಮದುರ್ಗ
30			ಸಾಗರ
31			ಸವದತ್ತಿ
32			ಸವಣೂರು
33			ಶಿಡ್ಲಘಟ್ಟ
34			ಶಿಕಾರಿಪುರ
35			ಸಿಂಧಗಿ
36			ಸಿರಾ
37			ಸಿರಗುಪ್ಪ

38	ಸುರಪುರ
39	ತಿಪಟೂರು
40	ವಿರಾಜಪೇಟೆ
41	ಜಗಳೂರು
42	ಮಧುಗಿರಿ
43	ತರೀಕೆರೆ
44	ಬೀರೂರು
45	ಸೇಡಂ
46	ಶ್ರೀರಂಗಪಟ್ಟಣ

ಅನುಬಂಧ-II

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ನಗರ ಯೋಜನಾ ಪ್ರಾಧಿಕಾರಗಳ ಕಾರ್ಯವ್ಯಾಪ್ತಿಗಳ ವಿವರಗಳು.

ಕ್ರಮ ಸಂಖ್ಯೆ	ನಗರಾಭಿವೃದ್ಧಿ ಪ್ರಾಧಿಕಾರ	ಯೋಜನಾ ಪ್ರಾಧಿಕಾರದ ಕಾರ್ಯ ವ್ಯಾಪ್ತಿಯ ವಿಸ್ತೀರ್ಣ (ಚ.ಕಿ.ಮೀ.ಗಳಲ್ಲಿ)
1	ಬೆಂಗಳೂರು	1306.00
2	ಬೆಳಗಾಂ	186.48
3	ಬೀದರ್	90.89
4	ಬಿಜಾಪುರ	203.70
5	ಬಳ್ಳಾರಿ	47.11
6	ಹೊಸಪೇಟೆ	20.35
7	ಚಿಕ್ಕಮಗಳೂರು	64.83
8	ಚಿತ್ರದುರ್ಗ	131.23
9	ಅ) ದಾವಣಗೆರೆ –ಹರಿಹರ	380.60
10	ಗುಲ್ಬರ್ಗ	253.0
11	ಹುಬ್ಬಳ್ಳಿ – ಧಾರವಾಡ	413.0
12	ಹಾಸನ	92.27
13	ಕೋಲಾರ	216.0

14	ಕೆ.ಜಿ.ಎಫ್.	69.95
15	ಕಾರವಾರ	96.56
16	ಮಂಗಳೂರು	306
17	ಮಡಿಕೇರಿ	93.47
18	ಮಂಡ್ಯ	99.86
19	ಮೈಸೂರು	495.32
20	ರಾಯಚೂರು	246.63
21	ಶಿವಮೊಗ್ಗ–ಭದ್ರಾವತಿ	256.0
22	ತುಮಕೂರು	75.0
23	ರಾಮನಗರ–ಚನ್ನಪಟ್ಟಣ	60.49
24	ಉಡುಪಿ–ಮಲ್ಪೆ	127.99
25	ಗದಗ–ಬೆಟಗೇರಿ	460.9
26	ಚಾಮರಾಜನಗರ–ರಾಮಸಮುದ್ರ	120.99
27	ಕೊಪ್ಪಳ	15.10
28	ಹಾವೇರಿ	104.04

ಅನುಬಂಧ–III

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ನಗರ ಯೋಜನಾ ಪ್ರಾಧಿಕಾರಗಳ ಕಾರ್ಯವ್ಯಾಪ್ತಿಗಳ ವಿವರಗಳು.

ಕ್ರಮ ಸಂಖ್ಯೆ	ಯೋಜನಾ ಪ್ರಾಧಿಕಾರ	ಯೋಜನಾ ಪ್ರಾಧಿಕಾರದ ಕಾರ್ಯವ್ಯಾಪ್ತಿಯ ವಿಸ್ತೀರ್ಣ (ಚ.ಕಿ.ಮೀ.ಗಳಲ್ಲಿ)
1	ಬಾಗಲಕೋಟೆ	129.47
2	ಬಿಎಂಐಸಿಪಿಎ	701.01
3	ಚಿಂತಾಮಣಿ	16.98
4	ಬಸವಕಲ್ಯಾಣ	23.28
5	ಗಂಗಾವತಿ	26.71
6	ಡಾಂಡೇಲಿ	234.00
7	ಗೋಕಾಕ್	10.30
8	ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ	792.0
9	ಜಮಖಂಡಿ	22.20
10	ಮಾಗಡಿ	582.77
11	ನೆಲಮಂಗಲ	95.4
12	ನಿಪ್ಪಾಣಿ	20.72
13	ಪುತ್ತೂರು	84.99
14	ರಬಕವಿ–ಬನಹಟ್ಟಿ	84.99
15	ರಾಣಿಬೆನ್ನೂರು	196.33

16	ಶಹಪುರ	98.15
17	ಸಿರ್ಸಿ	36.91
18	ವಾಡ್ತಿ–ಶಹಾಬಾದ್	7.8
19	ಯಾದಗೀರ್	30.83
20	ಕನಕಪುರ	72.26
21	ಸಿಂಧನೂರ್	25.5
22	ಬಾದಾಮಿ	15.91
23	ಕೆ.ಆರ್.ನಗರ	8.00
24	ಮಾನ್ವಿ	3.85
25	ಹಂಪಿ ವಿಶ್ವ ಪರಂಪರ ಪ್ರದೇಶ ನಿರ್ವಹಣಾ ಪ್ರಾಧಿಕಾರ	135.66

ಅನುಬಂಧ–IV

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಪುರಸಭೆ ಯೋಜನಾ ಪ್ರಾಧಿಕಾರಗಳ ಕಾರ್ಯವ್ಯಾಪ್ತಿಗಳ ವಿವರಗಳು.

ಕ್ರಮ ಸಂಖ್ಯೆ	ಪುರಸಭೆ ಯೋಜನಾ ಪ್ರಾಧಿಕಾರ	ಯೋಜನಾ ಪ್ರಾಧಿಕಾರ ಕಾರ್ಯವ್ಯಾಪ್ತಿ ವಿಸ್ತೀರ್ಣ ಚ.ಕಿ.ಮೀ
1	ಅರಸೀಕೆರೆ	8.00
2	ಆನೇಕಲ್	5.75
3	ಬೈಲಹೊಂಗಲ	15.0
4	ಭಾಲ್ಕಿ	13.46
5	ಬಂಟ್ವಾಳ	28.04
6	ಭಟ್ಕಳ	55.77
7	ಚಳ್ಳಕೆರೆ	13.72
8	ಚಿಕ್ಕಬಳ್ಳಾಪುರ	8.50
9	ಚಿಟಗುಪ್ಪ	26.46
10	ಗುಳೇದಗುಡ್ಡ	8.16
11	ಹರಪನ ಹಳ್ಳಿ	6.8
12	ಹಿರಿಯೂರು	28.13
13	ಹೊಳೆನರಸೀಪುರ	7.5
14	ಹುಮ್ನಾಬಾದ್	18.66
15	ಹುಣಸೂರು	9.98

16	ಇಳಕಲ	12.98
17	ಕಡೂರು	10.63
18	ಕಂಪ್ಲಿ	23.66
19	ಕೊಳ್ಳೇಗಾಲ	27.03
20	ಕುಮಟಾ	14.86
21	ಲಕ್ಷೇಶ್ವರ	12.00
22	ನವಲಗುಂದ	46.23
23	ಮಹಾಲಿಂಗಪುರ	5.04
24	ಮಳವಳ್ಳಿ	12.31
25	ಮುಧೋಳ್	5.91
26	ಮುದ್ದೇಬಿಹಾಳ್	8.50
27	ಮುಳಬಾಗಿಲು	8.50
28	ನರಗುಂದ	46.57
29	ರಾಮದುರ್ಗ	2.70
30	ಸಾಗರ	17.4
31	ಸವದತ್ತಿ	14.0
32	ಸವಣೂರು	8.35
33	ಶಿಡ್ಲಘಟ್ಟ	2.98
34	ಶಿಕಾರಿಪುರ	19.12
35	ಸಿಂಧಗಿ	8.25
36	ಸಿರಾ	15.3

37	ಸಿರಗುಪ್ಪ	30.06
38	ಸುರಪುರ	13.41
39	ತಿಪಟೂರು	11.6
40	ವಿರಾಜಪೇಟೆ	2.83
41	ಜಗಳೂರು	2.50
42	ಮಧುಗಿರಿ	6.40
43	ತರೀಕೆರೆ	15.01
44	ಬೀರೂರು	7.33
45	ಸೇಡಂ.	21.89
46	ಶ್ರೀರಂಗಪಟ್ಟಣ	11.62

1556(2012) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷ ನ್ಯಾಯಾಲಯಗಳ ಸಂಖ್ಯೆ ಎಷ್ಟು;

ಆ. ಈ ನ್ಯಾಯಾಲಯಗಳನ್ನು ಯಾವ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸ್ಥಾಪಿಸಲಾಗಿದೆ;

ಇ. ಸದರಿ ನ್ಯಾಯಾಲಯಗಳಲ್ಲಿ ಈವರೆಗೂ ದಾಖಲಾದ ಮತ್ತು ಇತ್ಯರ್ಥಗೊಳಿಸಲ್ಪಟ್ಟ ಪ್ರಕರಣಗಳೆಷ್ಟು ;

ಈ. ರಾಜ್ಯದಲ್ಲಿ ಹೊಸದಾಗಿ ವಿಶೇಷ ನ್ಯಾಯಾಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ : ಇದ್ದಲ್ಲಿ ಅದರ ವಿವರಗಳೇನು?

ಶ್ರೀ. ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ. ರಾಜ್ಯದಲ್ಲಿ ಒಟ್ಟು 23 ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲ್ಪಟ್ಟಿದ್ದು, ಅವುಗಳ ಪೈಕಿ 18 ಕಾರ್ಯ ನಿರ್ವಹಿಸುತ್ತಿವೆ.

ಆ. ವಿವರಗಳನ್ನು ಅನುಬಂದ 'ಎ' ರಲ್ಲಿ ನೀಡಲಾಗಿದೆ.

ಇ. ವಿವರಗಳನ್ನು ಅನುಬಂದ 'ಬಿ' ರಲ್ಲಿ ನೀಡಲಾಗಿದೆ.

ಈ. ಹೌದು ಪ್ರಸ್ತಾವನೆಗಳು ಸರ್ಕಾರದ ಮುಂದಿವೆ. ಬೆಂಗಳೂರು, ಬೆಳಗಾಂ ಮತ್ತು ಮೈಸೂರಿನಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯಗಳ ಸ್ಥಾಪನೆ ವರದಕ್ಷಿಣೆ ಸಾವಿನ ಪ್ರಕರಣ ವಿಚಾರಣೆಗಾಗಿ ಬೆಳಗಾಂ ಮತ್ತು ಮೈಸೂರುಗಳಲ್ಲಿ ವಿಶೇಷ ನ್ಯಾಯಾಲಯಗಳ ಸ್ಥಾಪನೆ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಮೇಲಿನ ಅಪರಾದ ಮತ್ತು ದೌರ್ಜನ್ಯ ಪ್ರಕರಣಗಳ ವಿಚಾರಣೆಗಾಗಿ ಮೈಸೂರು ಮತ್ತು ಚಿತ್ರದುರ್ಗದಲ್ಲಿ ವಿಶೇಷ ನ್ಯಾಯಾಲಯಗಳ ಸ್ಥಾಪನೆಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ANNEXURE-A

Following speicial courts have been established in Karnataka state as on 11-3-2005

1. Special Court for trial of communal offences and Atrocities on SC/ST at :

a) Bijapur
b) Belgaum
c) Gulbarga
d) Kolar (Vacant)
c) Mysore
f) Raichur (vacant)
g) Tumkur

2. Special Court for trial of cases relatilng to Prevention of corruption Act at :

a) Dakshin Kannada - Mangalore (vacant)

b) Bangalore

c) Bijapur

d) Mysore.

3. XXI Addl. City Civil and sessions Judge, Bangalore, for trial of CRI casaes

4. XXI I Addl. City civil & Sessions Judge, Bangalore, for trial of Dowry prohibition Act and Atrocities on women.

5. XXXI I Addl. City Civil & Sessions Judge, for trail of CBI cases. (vacant)

6. Addl Chief Metropoliltan Magistrate, Bangalore, for trail of CBI cases (not yet functioning for want of accommodation) (vacant)

7. Special Court at Bangalore for trail of cases under NDPS Act.

8. Special Court for Economic offences at Bangalore.

9. Special-Magistrate court at Bangalore for trial of cases under KST Act.

10. JMFC IV Court, Mangalore, for trial of Commercial Tax cases.

11. JMFC V Court, Mangalore, for trial of cases under Sec.138 of Negotiable Instrument Act and Maintenance Act.

12. Special Court at Bangalore :-

To conduct trail of heinous crimes committed by Notorious Dandupalya Krishna Ganga and bomb blast cases.

13. Special Court at Bangalore :-

To try S.C.No. 9/2001 pending on the file of city civil and Sessions Court, Bangalore, relating to fake stamps and stamp papers.

14. Special Court at Bangalore for trying the criminal cases against Kumari Jayalalitha and others (XXXVI addl. City Civil and Sessions Court).

ANNEXURE-`B'

STATEMENT SHOWING THE NAMBER OF CASES INSTITUTED AND DISPOSE OF DURING THE YEARS 2003 AND 2004 IN THE SPECIAL COURTS OF THE STATE

Sl.	NAME OF THE COURT	2003 Institution	2003 Disposal	2004 Instiltution	2004 Disposal
1	2	3	4	5	6
1.	Spl. Court for trail of commanal offeces and Artrocities on SC/ ST at :				
	i) II-Add11. Dist.& Sessions Judge, Belgaum	45	89	67	73
	ii) III-Addl. Dist & Sessions Judge, Belgaum.	155	102	50	217
	iii) II-Addl. Dist. & Sessions Judge, Kolar			157	96
	iv) II Addl. Dist. & Sessions Judge, Mysore Raichur	90	123	86	56
	v) II Addl. Dist. & Sessions Judge, Raichur	80	120	68	29

	vi) III Addl. Dist. & Sessions Judge, Gulbarga	97	176	274	198
	vii) II Addl. Dist. & Sessions Judge, Tumkur	67	231	74	144
2.	Spl. Court for trial of cases relating to prevention of corruption Act. :				
	i) Prl. Dist. & Sessions Judge, D.K. Mangalore	26	5	1	9
	ii) XXIII Addl. City Civil & Sessions Judge, Bangalore	54	14	67	57
	iii) Prl. Dist. & Sessions Judge, Bijapur.	41	16	12	8
	iv) Prl. Dist. & Sessions Judge, Mysore.	163	48	7	26
3.	XXI Addl. City Civil and Sessions judge, Bangalore for trial of CBI cases :	32	19	18	19
4.	XXII Addl. City Civil and Sessions Judge for trial of Dowry Prohibition Act and Atrovities on women Transferred to XXV Addl.				

	CC & SJ, III Addl. CC & SJ X addl. CC & SJ & XII Addl. Addl. CC & SJ. , Bangalore	90	147	Not readily available	
5.	XXXI Addl. City Civil and Sessions Judge, Bangalore for trail of CBI Cases.	3	4	51	7
6.	Special Court at Bangalore to try NDPS Act - XXXIII Addl. City Civil & Sessions Judge	58	39	61	42
7.	Spl. Courts for Economic offences, Bangalore	1403	1488	1844	1074
8.	Spl. Magistrate Court Bangalore for trial of cases under KST ACT- Spl. JMFC (Sales Tax), Bangalore	1649	2818	1844	2158
9.	JMFC IV Managalore for trial of Commercial Tax cases	128	124	244	161
10.	JMFC -V Court, Mangalore for trial U/s. 138 of N. I. Act.	5493	879	5749	3975

11.	Spl. Court at Bangalore i) To try Dandupalya cases and Bomb Blast cases XXXIV Addl. CC & SJ, Bangalore	87	2	18	64
	ii) To try fake stamp cases XXXV Addl. CC & SJ, Bangalore	1	-	38	23

1557(2014) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಬಾಗಲಕೋಟೆ ಜಿಲ್ಲೆಯಲ್ಲಿ ಎಷ್ಟು ; ಅಗ್ನಿಶಾಮಕ ಠಾಣೆಗಳು ಇವೆ : ಅವುಗಳಿಗೆ ಮಂಜೂರಾದ ಸಿಬ್ಬಂದಿ ವರ್ಗದವರು ಈಗ ಕರ್ತವ್ಯ ನಿರ್ವಹಿಸುತ್ತಿರುವರೇ; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಯಾವಾಗ ತುಂಬಲಾಗುವುದು.

ಆ. ಠಾಣೆಗಳಿಗೆ ಸಮರ್ಪಕ ವ್ಯವಸ್ಥೆ ಮತ್ತು ಸೌಲಭ್ಯಗಳುಳ್ಳ ಕಟ್ಟಡ ಮತ್ತು ವಾಹನಗಳನ್ನು ಒದಗಿಸಿಕೊಡಲಾಗಿದೆಯೇ ; ಇಲ್ಲವಾದಲ್ಲಿ ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು) :

ಅ. ಬಾಗಲಕೋಟೆ ಜಿಲ್ಲೆಯು ಜಿಲ್ಲಾ ಕೇಂದ್ರವಾಗಿದ್ದು ಬಾಗಲಕೋಟೆ ಮತ್ತು ಜಮಖಂಡಿಯಲ್ಲಿ ಒಟ್ಟು ಎರಡು ಅಗ್ನಿಶಾಮಕ ಠಾಣೆಗಳು ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ ಹಾಲಿ ಕರ್ತವ್ಯ ನಿರ್ವಹಿಸುತ್ತಿವೆ. ಅಲ್ಲದೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ಈ ಕೆಳಕಂಡಂತಿರುತ್ತದೆ.

	S	A	V
ಬಾಗಲಕೋಟೆ	26	16	10
ಜಮಖಂಡಿ	27	15	12

ಹೊಸ ಠಾಣೆಗಳಿಗೆ ಹಾಲಿ ಇರುವ ಸಿಬ್ಬಂದಿಗಳನ್ನು ನಿಯೋಜನೆ ಮಾಡಿರುವುದರಿಂದ ಸಿಬ್ಬಂದಿ ಹುದ್ದೆಗಳು ಖಾಲಿ ಇರುತ್ತವೆ. ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಖಾಲಿ ಹುದ್ದೆಗಳನ್ನು ತುಂಬುವ ಅವಶ್ಯಕತೆ ಕಂಡು ಬಂದರೆ ಸಧ್ಯದಲ್ಲೇ ಖಾಲಿ ಹುದ್ದೆಗಳನ್ನು ಭರ್ತಿಮಾಡುವ ಕ್ರಮ ತೆಗೆದುಕೊಳ್ಳಲಾಗುವುದು.

ಆ. ಬಾಗಲ ಕೋಟೆಯಲ್ಲಿ ಲೋಕೋಪಯೋಗಿ ಇಲಾಖೆಯವರು ನೀಡಿರುವ ಅನುದಾನದಿಂದ ಖಾಯಂ ಅಗ್ನಿಶಾಮಕ ಠಾಣೆ ಕಟ್ಟಡ ಹಾಗೂ 10 ವಸತಿ ಗೃಹಗಳನ್ನು ಈಗಾಗಲೇ ಸಿಬ್ಬಂದಿಗಳಿಗೆ ವಂಟನ ಮಾಡಲಾಗಿದೆ.

ಜಮಖಂಡಿ ಪಟ್ಟಣದಲ್ಲಿ 11ನೇ ಹಣಕಾಸು ಆಯೋಗವು ಒದಗಿಸಿರುವ ಅನುದಾನದಿಂದ ಖಾಯಂ ಅಗ್ನಿಶಾಮಕ ಠಾಣೆ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ನಿರ್ಮಿಸುವ ಬಗ್ಗೆ ಅನುದಾನ ಲಭ್ಯತೆಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

1558(2015) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಕ್ರ. ಸಂ.	ಕ.ಗ. ಗುತ್ತಿಗೆಗಳ ಸಂಖ್ಯೆ	ಗುತ್ತಿಗೆದಾರರ ಹೆಸರು	ಜಮೀನಿನ ವಿಧ	ವಿಸ್ತೀರ್ಣ ಎಕರೆಗಳಲ್ಲಿ	ಸರ್ವೆ ಸಂಖ್ಯೆ	ಹಳ್ಳಿ ಮತ್ತು ತಾಲ್ಲೂಕು	ಖನಿಜ	ಮಂಜೂರಾದ ದಿನಾಂಕ	ಅವಧಿ	ಸರ್ಕಾರಿ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9	10	11
1.	11	ಮೆಃ ಸಾಯಿ ಗ್ರಾನೈಟ್ಸ್	ಖಾಸಗಿ	1.00	15/2A	ಸಿರ್ಗಾನ್‌ಕೊಪ್ಪ ಬಾನಾಪುರ	ಗ್ರೇ	03.02.96	05	ಸಿಐ 153 ಎಂಎಂಎನ್ ದಿ. 18.11.95

ಚಿಕ್ಕಮಂಗಳೂರು ಜಿಲ್ಲೆಯ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆಗಳು.

ಕ್ರ. ಸಂ.	ಕ.ಗ. ಗುತ್ತಿಗೆ ಸಂಖ್ಯೆ	ಗುತ್ತಿಗೆದಾರರ ಹೆಸರು	ಜಮೀನಿನ ವಿಧ	ವಿಸ್ತೀರ್ಣ ಎಕರೆಗಳಲ್ಲಿ	ಸರ್ವೆ ಸಂಖ್ಯೆ	ಹಳ್ಳಿ ಮತ್ತು ತಾಲ್ಲೂಕು	ಖನಿಜ	ಮಂಜೂರಾದ ದಿನಾಂಕ	ಅವಧಿ	ಸರ್ಕಾರಿ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
1	2	3	4	5	6		8	9	10	11
1.	320	ಕೆ. ಎನ್.ಸಿದ್ದೇಶ್	ಸರ್ಕಾರಿ	2.00	17	ಲಿಂಗದಹಳ್ಳಿ ತರಿಕೇರೆ	ಗ್ರೀನ್	12.5.2000	10	ಸಿಐ 355 ಎಂಎಂಎನ್ 28.8.99
2.	322	ಬಿ.ಎನ್.ದಿನೇಶ್	ಸರ್ಕಾರಿ	0.20	17	ಲಿಂಗದಹಳ್ಳಿ ತರಿಕೇರೆ	ಗ್ರೀನ್	12.5.2000	10	ಸಿಐ 353 ಎಂಎಂಎನ್ 90 ದಿ. 27.8.99
3.	323	ಆರ್.ಜಿ.ತಿಲಕ್	ಸರ್ಕಾರಿ	0.30	17	ಲಿಂಗದಹಳ್ಳಿ ತರಿಕೇರೆ	ಗ್ರೀನ್	12.5.2000	10	ಸಿಐ 354 ಎಂಎಂಎನ್ 90 ದಿ.26.8.99
4.	324	ಎಂ.ಪಿ.ಸುರೇಶ್	ಸರ್ಕಾರಿ	2.00	17	ಲಿಂಗದಹಳ್ಳಿ ತರಿಕೇರೆ	ಗ್ರೀನ್	12.5.2000	10	ಸಿಐ 356 ಎಂಎಂಎನ್ 90 ದಿ.26.8.99
5.	397	ಮೆಃ ಗೋಲ್ಡನ್ ಗ್ರಾನೈಟ್	ಸರ್ಕಾರಿ	7.20	250	ಕಳಸಾಪುರ ಚಿಕ್ಕಮಗಳೂರು	ಕಪ್ಪು ಗ್ರೀನ್	18.11.2000	10	ಸಿಐ 44 ಎಂಎಂಎನ್ 2000 ದಿ. 19.6.2000
6.	434	ಮೆಃ ನೇಚರ್ ಸ್ಟೋನ್ಸ್	ಪಟ್ಟಾ	0.20	334/4	ಕರಸಂತ, ಕಡೂರು	ಕಾರ್ನೆಟ್	2.5.2001	10	ಸಿಐ/ 128 ಎಂಎಂಎನ್ 97 ದಿ. 24.10.2000

ಮಂಡ್ಯ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆಗಳು.

ಕ್ರ. ಸಂ.	ಕ.ಗ. ಗುತ್ತಿಗೆ ಸಂಖ್ಯೆ	ಗುತ್ತಿಗೆದಾರರ ಹೆಸರು	ಜಮೀನಿನ ವಿಧ	ವಿಸ್ತೀರ್ಣ ಎಕರೆಗಳಲ್ಲಿ	ಸರ್ವೆ ಸಂಖ್ಯೆ	ಹಳ್ಳಿ ಮತ್ತು ತಾಲ್ಲೂಕು	ಖನಿಜ	ಮಂಜೂರಾದ ದಿನಾಂಕ	ಅವಧಿ	ಸರ್ಕಾರಿ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9	10	11
1.	403	ಮೆ: ಸುದರ್ಶನ್ ಎಕ್ಸ್‌ಪೋರ್ಟ್ಸ್	ಸರ್ಕಾರಿ	6.00	73	ಎಂಬನಹಳ್ಳಿ ನಾಗಮಂಗಲ	ಮಲ್ಟಿ ಕಲ್ಲರ್	30.12.2000	10	ಸಿಐ 28 ಎಂಎಂಎನ್ 98 ದಿ. 10.07.98 ಮತ್ತು 21.12.2000
2.	419	ಡಿ. ಪರಶುರಾಮ	ಖಾಸಗಿ	1.00	280	ಬಳ್ಳೆಕೆರೆ ಶ್ರೀರಂಗಪಟ್ಟಣ	ಪಿಂಕ್	2.3.2001	10	ಸಿಐ 280 ಎಂಎಂಎನ್ 2000 ದಿ. 8.2.2001
3.	454	ಮೆ: ಮೈಸೂರು ಮಿನರಲ್ಸ್ ಲಿ.,	ಸರ್ಕಾರಿ	14.20	73	ಎರುಬನ ಹಳ್ಳಿ ನಾಗಮಂಗಲ ತಾ	ಮಲ್ಟಿ ಕಲರ್	3.7.2001	10	ಸಿಐ 32 ಎಂಎಂಎನ್ 98 ದಿ. 16.7.98
4.	479	ಎಸ್. ಎನ್.ಜಿ. ಎಕ್ಸ್ ಪೋರ್ಟ್ಸ್	ಸರ್ಕಾರಿ	10.00	60	ಹಂಡನಹಳ್ಳಿ ಮಳವಳ್ಳಿ	ಬ್ಲಾಕ್	22.11.2001	5	ಸಿಐ 68 ಎಂಎಂಎನ್ 01 ದಿ. 25.4.2001
5.	660	ಪಿ.ಎಲ್ ಆದರ್ಶ	ಸರ್ಕಾರಿ	2.00	89	ಕೋಡಿಯಾಲ ಶ್ರೀರಂಗಪಟ್ಟಣ	ಪಿಂಕ್	23.6.04	10	ಸಿಐ 63 ಎಂಎಂಎನ್ 2004 ದಿ. 4.3.2004
6.	689	ಜಿ.ಕೆ. ಕಾಮಾಕ್ಷಿಯಪ್ಪನ್	ಸರ್ಕಾರಿ	1.00	175/B	ಕಂಚಗಾನಹಳ್ಳಿ ಮಳವಳ್ಳಿ	ಬ್ಲಾಕ್	3.12.04	10	ಸಿಐ 135 ಎಂಎಂಎನ್ 04 ದಿ. 20.7.2004

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆಗಳು.

ಕ್ರ. ಸಂ.	ಕ.ಗ. ಗುತ್ತಿಗೆ ಸಂಖ್ಯೆ	ಗುತ್ತಿಗೆದಾರರ ಹೆಸರು	ಜಮೀನಿನ ವಿಧ	ವಿಸ್ತೀರ್ಣ ಎಕರೆಗಳಲ್ಲಿ	ಸರ್ವೆ ಸಂಖ್ಯೆ	ಹಳ್ಳಿ ಮತ್ತು ತಾಲ್ಲೂಕು	ಖನಿಜ	ಮಂಜೂರಾದ ದಿನಾಂಕ	ಅವಧಿ	ಸರ್ಕಾರಿ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9	10	11
1.	170	ಸಂಜೀವ ಹೆಂಗ್ಸು	ಪಟ್ಟಾ	61 ಸೆಂಟ್ಸ್	5/5D	ಕಿಲಿಂಜಾರು ಮಂಗಳೂರು	ಬ್ಲಾಕ್	17.3.98	05	ಸಿಐ 112 ಎಂಎಂಎನ್ 97 ದಿ. 23.2.97
2.	171	ರಾಜೀವ ಬಂಡಾರಿ	ಪಟ್ಟಾ	0.47 ಸೆಂಟ್ಸ್	13/6A	ಗುರುಪುರ ಮಂಗಳೂರು	ಬ್ಲಾಕ್	17.3.98	05	ಸಿಐ 113 ಎಂಎಂಎನ್ 97 ದಿ. 2.4.97
3.	172	ಪಿ. ಉಸ್‌ಮಾನ್	ಪಟ್ಟಾ	0.50 ಸೆಂಟ್ಸ್	120/1	ಮೊಗಾರು ಬೆಳ್ತಂಗಡಿ	ಮಲ್ಟಿ	31.3.98	10	ಸಿಐ 36 ಎಂಎಂಎನ್ 98 ದಿ. 24.3.98
4.	511	ಬಾಲು ಮಹೇಶ್ವರಿ	ಪಟ್ಟಾ	0.35	35/10A	ಕಿಲಿಂಜಾರು ಮಂಗಳೂರು	ಕಪ್ಪು	11.4.2002	10	ಸಿಐ 37 ಎಂಎಂಎನ್ 2000, 29.12.2001

ಬೆಂಗಳೂರು ಉತ್ತರ ಜಿಲ್ಲೆಯ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆಗಳು.

ಕ್ರ. ಸಂ.	ಕ.ಗ. ಗುತ್ತಿಗೆ ಸಂಖ್ಯೆ	ಗುತ್ತಿಗೆದಾರರ ಹೆಸರು	ಜಮೀನಿನ ವಿಧ	ವಿಸ್ತೀರ್ಣ ಎಕರೆಗಳಲ್ಲಿ	ಸರ್ವೆ ಸಂಖ್ಯೆ	ಹಳ್ಳಿ ಮತ್ತು ತಾಲ್ಲೂಕು	ಖನಿಜ	ಮಂಜೂರಾದ ದಿನಾಂಕ	ಅವಧಿ	ಸರ್ಕಾರಿ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9	10	11
1.	7	ನಸೀರ್ ಅಹಮದ್ ಸ್ವಾಮಿ	ಗೋಮಾಳ	2.24	39	ಮೊದಕದಹಳ್ಳಿ ಕನಕಪುರ	ಗ್ರೇ ನೈಸಸ್	25.09.95	05	ಸಿಐ 154 ಎಂಎಂಎಸ್. 95 ದಿ. 22.5.1995
2.	79	ಮೆಃ ಮಂಡೇಲ ಗ್ರಾನೈಟ್ಸ್	ಗ್ರಾಂಟೆಡ್	1.10	44	ಹಲುಸಬೆಲೆ ಮಾಗಡಿ	ಮಟ್ಟಿ ಕಲರ್	06.06.97	05	ಸಿಐ 170 ಎಂಎಂಎಸ್ 97 ದಿ. 22.3.1997
3.	154	ಬಿ.ಆರ್.ಎಸ್. ಕುಮಾರ್	-do-	2.00	12	ಉಡುಕುಂಟೆ ಮಾಗಡಿ	ಪಿಂಕ್‌ಪಾರ್ಫರಿ	18.01.98	05	ಸಿಐ 616 ಎಂಎಂಎನ್ 97 ದಿ. 27.12.1997
4.	155	ಬಿ.ಆರ್.ಎಸ್. ಕುಮಾರ್	-do-	1.15	12	ಉಡುಕುಂಟೆ ಮಾಗಡಿ	ಪಿಂಕ್‌ಪಾರ್ಫರಿ	18.01.98	05	ಸಿಐ 611 ಎಂಎಂಎನ್ 97 ದಿ. 27.12.1997
5.	178	ಬಿ.ಆರ್.ಎಸ್. ಕುಮಾರ್	-do-	1.15	12	ಉಡುಕುಂಟೆ ಮಾಗಡಿ	ಪಿಂಕ್‌ಪಾರ್ಫರಿ	23.04.98	10	ಸಿಐ 618 ಎಂಎಂಎನ್ 97 ದಿ. 24.03.1998
6.	317	ಮೆಃ ಆನಂದ ಗ್ರಾನೈಟ್ಸ್	ಸರ್ಕಾರಿ ಗೋಮಾಳ	24.00	208	ಗೆಜ್ಜೆಗೆರುಗುಪ್ಪೆ ಮಾಗಡಿ	ಪಿಂಕ್	11.5.2000	10	ಸಿಐ 41 ಎಂಎಂಎನ್ 2000 ದಿ. 13.3.2000
7.	360 TCA	ಬಿ.ಆರ್.ಎಸ್ ಕುಮಾರ್	-do-	5.00	26	ಗಂಗೇನಪುರ ನೆಲಮಂಗಲ	ಪಿಂಕ್‌ಪಾರ್ಫರಿ	8.8.2000	10	ಸಿಐ 88 ಎಂಎಂಎನ್ 2000 ದಿ. 2.6.2000
8.	411	ಎಸ್. ಲಕ್ಷ್ಮಿನಾರಾಯಣ	-do-	2.00	23	ತಮ್ಮನಾಯಕನಹಳ್ಳಿ ಆನೇಕಲ್	ಕಪ್ಪು	23.01.2001	10	ಸಿಐ 184 ಎಂಎಂಎನ್ 99 ದಿ. 25.11.2000

1	2	3	4	5	6	7	8	9	10	11
9.	464	ಪಿ.ಆರ್.ಸತೀಶ್	ಸರ್ಕಾರಿ	4.00	44	ಕೆಂಗಲ್ ನೆಲಮಂಗಲ	ಪಾರ್‌ಫೆರಿ	5.9.01	10	ಸಿಐ 166 ಎಂಎಂಎನ್ 2000 ದಿ. 17.4.01
10.	495	ಪಂಚಾಕ್ಷರಿ	ಸರ್ಕಾರಿ	2.20	34	ವೀರಸಾಗರ ಬೆಂಗಳೂರು ಉತ್ತರ	ಪಿಂಕ್	25.2.2002	10	ಸಿಐ 382 01 9.1.2001
11.	500	ಕೆ.ಬಿ.ಲೀಲಾಂಬಿಕ	ಸರ್ಕಾರಿ	2.20	34	ವೀರಸಾಗರ ಬೆಂಗಳೂರು ಉತ್ತರ	ಪಿಂಕ್	22.3.2002	10	ಸಿಐ 336 01 11.1.2002
12.	501	ಸಪ್ತಗಿರಿ ಗ್ರಾನೈಟ್ಸ್	ಸರ್ಕಾರಿ	6.20	158	ಕಂಬಾಳ್ ಬೆಂಗಳೂರು ಉತ್ತರ	ಪಿಂಕ್	23.3.2002	10	ಸಿಐ 374 01 4.2.2002

1570 (2117) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ಇಲ್ಲಿಯ ಎಷ್ಟು ಮಂದಿ ನೌಕರರಿಗೆ ಎಷ್ಟು ತಿಂಗಳಿನಿಂದ ವೇತನ ಪಾವತಿಸಲು ಬಾಕಿ ಇದೆ ;

ಆ. ವೇತನ ಪಾವತಿಯಾಗದೇ ಸದರಿ ನೌಕರರ ಕುಟುಂಬಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ. ಬಾಕಿ ಇದ್ದಲ್ಲಿ ಎಷ್ಟು ಸಮಯದಿಂದ ಪಾವತಿಸಲು ಬಾಕಿ ಇದೆ ;

ಈ. ಪಾವತಿಸದೇ ಇರಲು ಕಾರಣವೇನು ;

ಉ. ಮೀನುಗಾರಿಕಾ ಅಭಿವೃದ್ಧಿ ನಿಗಮವನ್ನು ಮುಚ್ಚುವ ಇರಾದೆ ಸರ್ಕಾರಕ್ಕೆ ಇದೆಯೇ;

ಊ. ಇದ್ದಲ್ಲಿ ಸದರಿ ನಿಗಮದ ಅವಶ್ಯಕತೆ ಇಲ್ಲವೆಂದು ಸರ್ಕಾರ ಭಾವಿಸಿದೆಯೇ :

ಋ. ಹಾಗಾದಲ್ಲಿ ಕಾರಣವೇನು ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಒಟ್ಟು 216 ನೌಕರರಿದ್ದು, ಇದರಲ್ಲಿ 37 ನೌಕರರನ್ನು ಬೇರೆ ಬೇರೆ ಸಂಸ್ಥೆಗಳಿಗೆ ನಿಯೋಜಿಸಲಾಗಿದೆ. ಹಾಲಿ 179 ನೌಕರರು ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿ ನೌಕರರಿಗೆ 3 ರಿಂದ 10 ತಿಂಗಳ ತನಕ ವೇತನವು ಪಾವತಿಗಾಗಿ ಬಾಕಿ ಇರುತ್ತದೆ.

ಆ. ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಇ. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ನೌಕರರಿಗೆ 3 ರಿಂದ 10 ತಿಂಗಳವರೆಗೆ ವೇತನವನ್ನು ಪಾವತಿಸಲು ಬಾಕಿ ಇದೆ.

ಈ. ನಿಗಮದ ಆರ್ಥಿಕ ಪರಿಸ್ಥಿತಿ ಸಮಾಧಾನಕರವಾಗಿರುವುದಿಲ್ಲ. ನಿಗಮದ ಮಂಜುಗಡ್ಡೆ/ ಶೀಥಲೀಕರಣ ಸ್ಥಾವರಗಳನ್ನು ದುಬಾರಿ ನಿರ್ವಹಣಾ ವೆಚ್ಚದಿಂದಾಗಿ ಮುಚ್ಚಲಾಗಿದೆ. ಮತ್ತು ಸಾಕಷ್ಟು ಮೀನನ್ನು ಒದಗಿಸಲಾಗಿದೆ ಮೀನು ಮಾರಾಟ ಮಳಿಗೆಗಳನ್ನು ಮುಚ್ಚಲಾಗಿದೆ. ಇದರಿಂದ ಆದಾಯದ ಒಳಹರಿವು ಕಡಿಮೆಯಾಗಿದ್ದು, ನೌಕರರಿಗೆ ಸಕಾಲದಲ್ಲಿ ವೇತನವನ್ನು ಪಾವತಿಸಲು ಸಾಧ್ಯವಾಗಿಲ್ಲ.

ಉ. ದಿನಾಂಕ :27–01–2005 ರಂದು ನಡೆದ ಸಚಿವ ಸಂಪುಟದ ಉಪ ಸಮಿತಿಯ 4ನೇ ಸಭೆಯಲ್ಲಿ ಈ ನಿಗಮದ ಭವಿಷ್ಯದ ಬಗ್ಗೆ ವಿವರವಾಗಿ ಚರ್ಚಿಸಲಾಗಿದ್ದು, ಈ ಬಗ್ಗೆ ಸರ್ಕಾರ ಅಂತಿಮ ನಿರ್ಣಯವನ್ನು ಶೀಘ್ರದಲ್ಲಿ ತೆಗೆದುಕೊಳ್ಳುತ್ತದೆ.

ಊ. ಉಪ ಪ್ರಶ್ನೆ (ಉ) ರಲ್ಲಿ ನೀಡಿರುವ ಉತ್ತರದಿಂದ, ಉದ್ಭವಿಸುವುದಿಲ್ಲ.

ಋ. ಉಪ ಪ್ರಶ್ನೆ (ಉ) ರಲ್ಲಿ ನೀಡಿರುವ ಉತ್ತರದಿಂದ, ಉದ್ಭವಿಸುವುದಿಲ್ಲ.

1571 (2118) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಮತ್ಸ್ಯ ಆಶ್ರಯ ಯೋಜನೆಯಡಿ ಕಳೆದ 3 ವರ್ಷಗಳಿಂದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ವಿಧಾನ ಸಭಾ ಕ್ಷೇತ್ರಗಳಿಗೆ ಯಾವ ಕ್ಷೇತ್ರಗಳಿಗೆ ಎಷ್ಟು ಮನೆ ಮಂಜೂರು ಮಾಡಲಾಗಿದೆ (ಕ್ಷೇತ್ರವಾರು ವಿವರ ಒದಗಿಸುವುದು);

ಆ. ಮನೆ ಹಂಚಿಕೆಗಳಲ್ಲಿ ಪಕ್ಷ ರಾಜಕೀಯ ಕಾರಣಗಳಿಂದ ತಾಂತಮ್ಯ ಧೋರಣೆಯನ್ನು ಸರ್ಕಾರ ಅನುಸರಿಸಿದೆಯೇ;

ಇ. ಇಲ್ಲವಾದಲ್ಲಿ 2003–04ನೇ ಸಾಲಿನಲ್ಲಿ ಕುಂದಾಪುರ ವಿಧಾನ ಸಭಾ ಕ್ಷೇತ್ರಕ್ಕೆ ಕಡಿಮೆ ಮನೆಗಳನ್ನು ಮಂಜೂರು ಮಾಡಲು ಕಾರಣವೇನು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಮತ್ಸ್ಯ ಆಶ್ರಯ ಯೋಜನೆಯಡಿ ಕಳೆದ 3 ವರ್ಷಗಳಿಂದ ಉಡುಪಿ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ 523 ಮನೆಗಳನ್ನು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ 145 ಮನೆಗಳನ್ನು ಮಂಜೂರು ಮಾಡಲಾಗಿದೆ. (ಕ್ಷೇತ್ರವಾರು ವಿವರ ಕೆಳಗಿನಂತಿದೆ)

ಉಡುಪಿ ಜಿಲ್ಲೆ

1.	ಕಾಪು ಕ್ಷೇತ್ರ	–	128
2.	ಉಡುಪಿ ಕ್ಷೇತ್ರ	–	95
3.	ಬ್ರಹ್ಮಾವರ ಕ್ಷೇತ್ರ	–	70
4.	ಕುಂದಾಪುರ ಕ್ಷೇತ್ರ	–	90
5.	ಬೈಂದೂರು ಕ್ಷೇತ್ರ	–	100
6.	ಕಾರ್ಕಳ ಕ್ಷೇತ್ರ	–	40
	ಒಟ್ಟು	–	523

ದಕ್ಷಿಣ ಕನ್ನಡ ಜಿಲ್ಲೆ

1.	ಉಳ್ಳಾಲ ಕ್ಷೇತ್ರ	–	56
	ಮಂಗಳೂರು ಕ್ಷೇತ್ರ	–	14
3.	ಸುರತ್ಕಲ್ ಕ್ಷೇತ್ರ	–	30
4.	ಮುಲ್ಕಿ – ಮೂಡಬಿದ್ರಿ ಕ್ಷೇತ್ರ	–	45
	ಒಟ್ಟು	–	145

ಆ. ಇಲ್ಲ.

ಇ. ಬೇಡಿಕೆ ಅನುಸಾರ ಮತ್ತು ಅನುದಾನದ ಲಭ್ಯತೆಗನುಗುಣವಾಗಿ ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಲಾಗಿದೆ. 2003–04ನೇ ಸಾಲಿನಲ್ಲಿ ಕ್ಷೇತ್ರಕ್ಕೆ ನೀಡಿದ 10 ಮನೆಗಳು ಸೇರಿದಂತೆ ಕಳೆದ ಮೂರು ವರ್ಷಗಳಲ್ಲಿ ಈ ಕ್ಷೇತ್ರಕ್ಕೆ 90 ಮನೆಗಳನ್ನು ನೀಡಲಾಗಿದೆ.

1573 (2174) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸಣ್ಣ ನೀರಾವರಿ ಇಲಾಖೆಯಿಂದ ನದಿ ದಂಡೆ ಸಂರಕ್ಷಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಸ್ಥಗಿತಗೊಳಿಸಲಾಗಿದೆಯೇ;

ಆ. ಹೌದಾದಲ್ಲಿ, ಇದರಿಂದ ನದಿ ತೀರದಲ್ಲಿ ವಾಸಿಸುವ ಜನರಿಗೆ ನದಿ ದಂಡೆ ಸಂರಕ್ಷಣೆ ಆಗದೇ ಇದ್ದಲ್ಲಿ ಪ್ರಕೃತಿಕ ವಿಕೋಪ ಸಂದರ್ಭಗಳಲ್ಲಿ ತೊಂದರೆ ಉಂಟಾಗುವುದಿಲ್ಲವೇ ;

ಇ. ಸದರಿ ವರ್ಷದಲ್ಲಿ ನದಿ ದಂಡೆ ಸಂರಕ್ಷಣೆಗೆ ಅನುದಾನ ಬಿಡುಗಡೆ ಮಾಡಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ) :

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಲೆಕ್ಕ ಶೀರ್ಷಿಕೆ 4711-01-ಪ್ರವಾಹ ನಿಯಂತ್ರಣ ಕಾಮಗಾರಿಗಳು ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ.

1574(2175) ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಣಿಬೆನ್ನೂರು ನಗರದಲ್ಲಿ 33 ವರ್ಷ ಒಂದು ಆಸ್ತಿಯನ್ನು ಒಂದು ಸಂಸ್ಥೆಯು ಅನಧಿಕೃತವಾಗಿ ಪುಕ್ಕಟೆಯಾಗಿ ಅನುಭವಿಸುತ್ತಿದ್ದರೆ ಅಕ್ರಮ ಸಕ್ರಮದಲ್ಲಿ ಅವರಿಗೆ ಕೊಡಲು ಬರುತ್ತದೆಯೇ ;

ಆ. ಹಾಗಿದ್ದಲ್ಲಿ, ಆ ಜಾಗಕ್ಕೆ ಚದರ ಅಡಿಗೆ ಸರ್ಕಾರ ಯಾವ ದರದಲ್ಲಿ ನಿಗಧಿಪಡಿಸಲು ಬರುತ್ತದೆ ;

ಇ. ಅಕ್ರಮ ಸಕ್ರಮ ಮಾಡಲು ಬಾರದಿದ್ದಲ್ಲಿ ಮಕ್ಕಟೆಯಾಗಿ ಹೊಂದಿರುವ ಸದರಿ ಆಸ್ತಿಯನ್ನು ಯಾವ ರೀತಿಯಾಗಿ ಯಾವ ಕ್ರಮದಿಂದ ನಗರಸಭೆಯು ಪುನಃ ವಾಪಸ್ಸು ಪಡೆಯಬೇಕು ?

ಶ್ರೀ ಎಸ್. ಆರ್.ಮೋರೆ (ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

ಅ. ಇಲ್ಲ

ಆ. ಅನಧಿಕೃತ ಅನುಭೋಗದಲ್ಲಿರುವ ಜಾಗಕ್ಕೆ ದರ ನಿಗದಿ ಪಡಿಸುವುದು ಉದ್ಭವಿಸುವುದಿಲ್ಲ.

ಇ. ಎವಿಕ್ಷನ್ ಆಫ್ ಅನ್ ಆಥರೈಸ್ಡ್ ಆಕ್ಯುಪೆಂಟ್ಸ್ ಆಕ್ಟ್ (ಕರ್ನಾಟಕ ಪಬ್ಲಿಕ್ ಪ್ರಿಮೈಸಸ್ ಆಕ್ಟ್ 1974 ರ ಪ್ರಕಾರ) ನಗರಸಭೆಯು ವಾಪಸ್ಸು ಪಡೆಯಬಹುದು.

1575(2020)ಶ್ರೀ ಹಾಲಪ್ಪ ಹೆಚ್. (ಹೊಸನಗರ) ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

1. ಶಿವಮೊಗ್ಗ ನಗರದ 35ನೇ ವಾರ್ಡ್ ಆಲ್ಕೊಳದಲ್ಲಿ ಸುಮಾರು 2000 ಜನ ಸಂಖ್ಯೆ ಇದ್ದು, ಓವರ್ ಹೆಡ್ ಟ್ಯಾಂಕ್ ಇಲ್ಲದೆ ಕುಡಿಯುವ ನೀರಿನ ಸಮಸ್ಯೆ ಇರುವುದು ಸಕಾಗಮನಕ್ಕೆ

2. ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ ;

3. ಹಾಗಿದ್ದಲ್ಲಿ, ಸರ್ಕಾರವು ಏನು ಕ್ರಮ ಕೈಗೊಳ್ಳಲಿದೆ?

ಶ್ರೀ ಎಸ್. ಆರ್.ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು)

1. ಬಂದಿದೆ.

2. ಇದೆ.

3. ಶಿವಮೊಗ್ಗ ನಗರಕ್ಕೆ ಸಮಗ್ರ ನೀರು ಸರಬರಾಜು ಅಭಿವೃದ್ಧಿ ಪಡಿಸಲು ಸರಬರಾಜು ಅಭಿವೃದ್ದಿ ಪಡಿಸಲು ರೂ.28.00 ಕೋಟಿಗಳ ಯೋಜನೆ ತಯಾರಿಸಲಾಗಿದ್ದು, ಈ ಯೋಜನೆಯಲ್ಲಿ

ಸೇರಿಸಲಾಗಿದೆ. ಈ ಯೋಜನೆಯು ಮಂಜೂರಾತಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ. ಮಂಜೂರಾತಿ ನೀಡಿದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

1576 (2022) ಶ್ರೀ ಹಾಲಪ್ಪ. ಹೆಚ್ (ಹೊಸನಗರ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಶಿವಮೊಗ್ಗ ಜಿಲ್ಲೆಯಲ್ಲಿರುವ ವಿವಿದ ನ್ಯಾಯಾಲಯಗಳಿಗೆ ಸ್ವಂತ ಕಟ್ಟಡ ಇದೆಯೇ;

ಆ. ಸ್ವಂತ ಕಟ್ಟಡವಿಲ್ಲದೆ ಬೇರೆ ಬೇರೆ ಕಟ್ಟಡಗಳಲ್ಲಿ ನಡೆಯುತ್ತಿರುವ ನ್ಯಾಯಾಲಯಗಳಾವುವು (ತಾಲ್ಲೂಕುವಾರು ವಿವರ ನೀಡುವುದು)

ಇ. ನ್ಯಾಯಾಲಯದ ಹೊಸ ಕಟ್ಟಡಕ್ಕಾಗಿ ಪ್ರತ್ಯೇಕ ಸ್ಥಳವನ್ನು ಗುರುತಿಸಲಾಗಿದೆಯೇ?

ಈ. ಹಾಗಿದ್ದಲ್ಲಿ ಈಗ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ. ಶಿವಮೊಗ್ಗ ಜಿಲ್ಲೆಯಲ್ಲಿ ಸೊರಬ ಮತ್ತು ಹೊಸನಗರ ನ್ಯಾಯಾಲಯಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ನ್ಯಾಯಾಲಯಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆ. ಸೊರಬ ಮತ್ತು ಹೊಸನಗರದಲ್ಲಿನ ಸಿವಿಲ್ ನ್ಯಾಯಾದೀಶರು (ಕಿ.ವಿ) ಮತ್ತು ಜೆ ಎಂಎಫ್ ಸಿ ನ್ಯಾಯಾಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇ. ಮ. ಸೊರಬದಲ್ಲಿ ನ್ಯಾಯಾಲಯದ ಸ್ವಂತ ಕಟ್ಟಡ ನಿರ್ಮಾಣವಾಗುತ್ತಿದೆ. ಹೊಸನಗ[illegible] ನ್ಯಾಯಾಲಯ ಕಟ್ಟಡ ನಿರ್ಮಿಸಲು 2.10 ಎಕರೆ ಜಮೀನನ್ನು ಹೊಂದಲಾಗಿದೆ.

ಈ. ಹೊಸ ನಗರದಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಿಸುವ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ.

1577(2023) ಶ್ರೀ ಹಾಲಪ್ಪ. ಹೆಚ್. (ಹೊಸನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ. ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಪೊಲೀಸ್ ಠಾಣೆಗಳಿವೆ, ಪುರುಷ ಪೋಲಿಸ್ ಕಾನ್ಸ್ಟೇಬಲ್‌ಗಳ, ಹಾಗೂ ಮಹಿಳಾ ಕಾನ್ಸ್ಟೇಬಲ್‌ಗಳ ಸಬ್ ಇನ್ಸ್‌ಪೆಕ್ಟರುಗಳ, ಸಂಖ್ಯೆ ಎಷ್ಟು ;

ಆ. ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್ಸ್ಟೇಬಲ್‌ಗಳ ಕೊರತೆ ಇದೆಯೇ ;

ಇ. ಕೊರತೆಯನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮವೇನು ;

ಈ. ಜಿಲ್ಲೆಯಲ್ಲಿ 2000ದಿಂದ 2004ನೇ ಸಾಲಿನವರೆಗೆ ಒಟ್ಟು ಎಷ್ಟು ದೌರ್ಜನ್ಯ ಪ್ರಕರಣಗಳು ನೊಂದಾಯಿಸಲಾಗಿದೆ ; ಇತ್ಯರ್ಥವಾದ ಪ್ರಕರಣಗಳೆಷ್ಟು ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಶಿವಮೊಗ್ಗ ಜಿಲ್ಲೆಯಲ್ಲಿ ಟ್ಟು 25 ಪೊಲೀಸ್ ಠಾಣೆಗಳಿವೆ. ಜಿಲ್ಲೆಯ ಸಿಬ್ಬಂದಿ ಬಲ ಇಂತಿದೆ.

ಸಿಬ್ಬಂದಿ ವಿವರ	ಪಿಎಸ್‌ಐ	ಎಎಸ್‌ಐ	ಸಿಹೆಚ್‌ಸಿ	ಸಿಪಿಸಿ	ಒಟ್ಟು
ಪುರುಷ	41	59	268	651	1019

ಮಹಿಳಾ	01	04	25	37	67
ಒಟ್ಟು	42	63	293	688	1086

ಆ. ಇದೆ.

ಇ. ನೇಮಕಾತಿ/ಬಡ್ತಿ ಮೂಲಕ ಸಿಬ್ಬಂದಿ ಕೊರತೆಯನ್ನು ತುಂಬಲಾಗುವುದು.

ಈ.ಶಿವಮೊಗ್ಗ ಜಿಲ್ಲೆಯಲ್ಲಿ 2000 ರಿಂದ 2004ನೇ ಸಾಲಿನಲ್ಲಿ ವರದಿಯಾದ/ ಇತ್ಯರ್ಥವಾದ ದೌರ್ಜನ್ಯ ಪ್ರಕರಣಗಳ ವಿವರ.

ಸಾಲು	ವರದಿ ಮಾಡಿರುವ	ಪೆಂಡಿಂಗ್ ಟ್ರೆಯಲ್	ಇತ್ಯರ್ಥ	ವಿಚಾರಣೆಯಲ್ಲಿರುವ	ಬಿ ವರದಿ	ಬೇರೆ ಇತ್ಯರ್ಥ ಪ್ರಕರಣ
2000	24	12	–	–	10	2
2001	24	14	–	–	8	2
2002	17	13	–	–	2	2
2003	26	18	–	–	6	2
2004	33	22	–	–	6	5
2005 (7/3/05)	5	2	–	1	2	–

1578 (2128) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ದಯವಿಟ್ಟು ಉತ್ತಿರಸುವರೇ?

ಅ. ಕಳಸಾ – ಬಂಡೂರಿ ನಾಲಾ ಯೋಜನೆಯು ಈಗ ಯಾವ ಹಂತದಲ್ಲಿದೆ ;

ಆ. ಈ ಯೋಜನೆಯ ಮಂಜೂರಾತಿಗಾಗಿ ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ ಹೋಗಿದೆಯೇ ಹೋಗಿದ್ದಲ್ಲಿ ಯಾವಾಗ ಹೋಗಿದೆ ;

ಇ. ಈ ಯೋಜನೆಯ ಜಾರಿಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ರಾಜ್ಯ ಸರ್ಕಾರ ತೆಗೆದುಕೊಂಡ ಕ್ರಮಗಳನ್ನು ವಿವರಿಸುವುದು ;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ) :

ಅ. ರಾಜ್ಯದ ಬೇಡಿಕೆಯಂತೆ ಹುಬ್ಬಳ್ಳಿ–ಧಾರವಾಡ ನಗರಗಳ ಕುಡಿಯುವ ನೀರು ಪೂರೈಕೆಯ ಸಲುವಾಗಿ ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಇಲಾಖೆಯ ಪತ್ರ ದಿನಾಂಕ 30.04.02 ರಲ್ಲಿ ಮಹಾದಾಯಿ ಕಣಿವೆಯಿಂದ 7.56 ಟಿ.ಎಂ.ಸಿ. ನೀರನ್ನು ಮಲಪ್ರಭಾ ನದಿಗೆ ತಿರುಗಿಸಲು ಕೆಲವು ಷರತ್ತುಗಳೊಡನೆ ತಾತ್ವಿಕ ಒಪ್ಪಿಗೆಯನ್ನು ನೀಡಲಾಗಿತ್ತು. ಗೋವಾ ರಾಜ್ಯವು ಈ ತಾತ್ವಿಕ ಒಪ್ಪಿಗೆಯನ್ನು ವಿರೋಧಿಸಿದ್ದರಿಂದ ಕೇಂದ್ರ ಸರ್ಕಾರವು ದಿನಾಂಕ 30.04.02 ರಲ್ಲಿ ನೀಡಿದ್ದ ಒಪ್ಪಿಗೆಯನ್ನು ದಿನಾಂಕ 19–09–02 ರಂದು ತಡೆಹಿಡಿದಿರುತ್ತದೆ.

ಆ. ಕೇಂದ್ರ ಸರ್ಕಾರದೊಂದಿಗೆ ಮಹದಾಯಿ ತಿರುವು ಯೋಜನೆಯ ಕುರಿತು ಪತ್ರ ವ್ಯವಹಾರವು 1988 ರಿಂದ ಜರುಗಿರುತ್ತದೆ. ಕಳಸಾನಾಲಾ ಮತ್ತು ಬಂಡೂರು ನಾಲಾ ಯೋಜನೆಗಳ

ಅರಣ್ಯ ಭೂಮಿಯ ಬಿಡುಗಡೆಯ ಕುರಿತು ರಾಜ್ಯ ಸರ್ಕಾರದ ಅರಣ್ಯ ಇಲಾಖೆಯಿಂದ ದಿನಾಂಕ 06.07.01 ರಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯು ಮೊದಲ ಬಾರಿಗೆ ಹೋಗಿರುತ್ತದೆ.

ಇ. ಗೋವಾ ರಾಜ್ಯವು ಮಹಾದಾಯಿ ನದಿ ವಿವಾದ ಮಂಡಳಿಯ ರಚನೆ ಕುರಿತು ಕೇಂದ್ರ ಸರ್ಕಾರಕ್ಕೆ ಮಾಡಿದ್ದ ಮನವಿಯ ಬಗ್ಗೆ ಮತ್ತು ಅಂತರ ರಾಜ್ಯ ವಿಷಯಗಳಂತೆ ಸಂಬಂಧಿಸಿದ ರಾಜ್ಯಗಳೊಂದಿಗೆ ಚರ್ಚಿಸಿ ನಿರ್ಧಾರಕ್ಕೆ ಬರಲು ದಿನಾಂಕ 20.12.02 ರಂದು ಕೇಂದ್ರ ಸರ್ಕಾರದ ಮಾನ್ಯ ಜಲ ಸಂಪನ್ಮೂಲ ಸಚಿವರು ನವದೆಹಲಿಯಲ್ಲಿ ಸಭೆಯನ್ನು ಜರುಗಿಸಿರುತ್ತಾರೆ. ಈ ಸಭೆಯಲ್ಲಿ ಮಹಾದಾಯಿ ಕಣಿವೆಯಲ್ಲಿ ದೊರಕುವ ಒಟ್ಟು ನೀರಿನ ಪ್ರಮಾಣದ ಬಗ್ಗೆ ಕೇಂದ್ರ ಜಲ ಆಯೋಗದಿಂದ ಯೀಲ್ಡ್ ಸೀರೀಸ್ ಅಧ್ಯಯನವನ್ನು (Yield series studies) ಮಾರ್ಚ್ 2003 ರೊಳಗೆ ಪೂರ್ಣಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ರಾಜ್ಯ ಸರ್ಕಾರದ ಅಧಿಕಾರಿಗಳು ನವದೆಹಲಿಯ ಕೇಂದ್ರ ಜಲ ಆಯೋಗ ಕಚೇರಿಗೆ ಹೋಗಿ ಸದರಿ ಅಧ್ಯಯನದಲ್ಲಿ ಭಾಗವಹಿಸಿ ಬಂದಿರುತ್ತಾರೆ. ಅಧ್ಯಯನ ಕಾರ್ಯವು ಪೂರ್ಣಗೊಂಡಿರುವುದಾಗಿ ತಿಳಿದು ಬಂದಿದ್ದು ಮುಂದಿನ ನಿರ್ದೇಶನವನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಿಸಲಾಗಿದೆ.

ಗೋವಾ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ತೀರ್ಮಾನಕ್ಕೆ ಬರಲು ದಿನಾಂಕ 03–01–05 ರಂದು ನವದೆಹಲಿಯಲ್ಲಿ ಕರೆಯಲಾಗಿದ್ದ ಸಭೆಯನ್ನು ಕಾರಣಾಂತರಗಳಿಂದ ದಿನಾಂಕ 15–02–05 ಕ್ಕೆ ಮುಂದೂಡಲಾಗಿದ್ದು ಈ ಸಭೆಯನ್ನೂ ಸಹ ಮುಂದೂಡಲಾಗಿರುತ್ತದೆ.

ಅಕ್ಟೋಬರ್ 2002 ರಿಂದ ಇಲ್ಲಿಯವರೆಗೆ ಮಾನ್ಯ ಮುಖ್ಯಮಂತ್ರಿಗಳು, ಜಲ ಸಂಪನ್ಮೂಲ ಸಚಿವರು ಮತ್ತು ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳಿಂದ ಕೇಂದ್ರ ಸರ್ಕಾರಕ್ಕೆ ಹಲವಾರು ಪತ್ರಗಳನ್ನು ಬರೆದು ದಿನಾಂಕ 19–09–02 ರ ತಡೆ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹ ಪಡಿಸಲಾಗಿದೆ.

ದಿನಾಂಕ 11–02–05 ರಂದು ರಾಜ್ಯಕ್ಕೆ ಭೇಟಿಯನ್ನಿತ್ತ ಮಾನ್ಯ ಪ್ರಧಾನ ಮಂತ್ರಿಗಳಿಗೆ ಮಾನ್ಯ ಮುಖ್ಯಮಂತ್ರಿಗಳಿಂದ ಈ ವಿಷಯದ ಕುರಿತು ಭಿನ್ನವತ್ತಳೆಯನ್ನು ಸಲ್ಲಿಸಲಾಗಿದೆ.

1579 (2168) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕದಲ್ಲಿದ್ದ ಯಾವುದೇ ಐ.ಎ.ಎಸ್. ಅಧಿಕಾರಿಯೊಬ್ಬರು ದೇಶದ ಮಾಜಿ ಪ್ರಧಾನಿಗಳು ತಮ್ಮ ಮೇಲೆ ಆರೋಪ ಮಾಡಿರುವ ಹಿನ್ನೆಲೆಯಲ್ಲಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಸರ್ಕಾರದ ಅನುಮತಿಯನ್ನು ಕೇಳಿದ್ದರೆ (ವಿವರವಾಗಿ ತಿಳಿಸುವುದು) :

ಆ. ಹಾಗಿದ್ದಲ್ಲಿ ಯಾವ ಅಧಿಕಾರಿ ಯಾರ ಮೇಲೆ ಮೊಕದ್ದಮೆ ಹೂಡಲು ಅನುಮತಿಯನ್ನು ಕೇಳಿರುತ್ತಾರೆ (ವಿವರ ನೀಡುವುದು) ;

ಇ. ಅನುಮತಿ ನೀಡಲಾಗಿದೆಯೇ ಅಥವಾ ನಿರಾಕರಿಸಲಾಗಿದೆಯೇ ;

ಈ. ನೀಡಿದ್ದಲ್ಲಿ ಅಥವಾ ನಿರಾಕರಿಸಿದ್ದಲ್ಲಿ ಯಾವ ಆಧಾರದ ಮೇಲೆ ಇದನ್ನು ಮಾಡಲಾಗಿದೆ?

ಶ್ರೀ ಧರಂಸಿಂಗ್ (ಮಾನ್ಯ ಮುಖ್ಯ ಮಂತ್ರಿಗಳು) :

ಅ. ಹೌದು ; ಕರ್ನಾಟಕ ವೃಂದಕ್ಕೆ ಸೇರಿದ ಅಖಿಲ ಭಾರತ ಸೇವಾ ಅಧಿಕಾರಿಯೊಬ್ಬರು ಮಾಜಿ ಪ್ರಧಾನಿಯವರನ್ನು ಅಭಿಯೋಗಗೊಳಿಸಲು ಅನುಮತಿ ಕೋರಿದ್ದಾರೆ.

ಆ. ಮಾಜಿ ಪ್ರಧಾನಿಯವರಾದ ಶ್ರೀ ಹೆಚ್.ಡಿ.ದೇವೇಗೌಡ, ಇವರನ್ನು ಅಭಿಯೋಗಗೊಳಿಸಲು ಕರ್ನಾಟಕ ವೃಂದದ ಭಾರತೀಯ ಆಡಳಿತ ಸೇವೆಗೆ ಸೇರಿದ ಶ್ರೀ ಜಯಕರ್ ಜೆರೋಮ್, ಇವರು ಅನುಮತಿ ಕೇಳಿರುತ್ತಾರೆ.

ಇ. ನಿರಾಕರಿಸಲಾಗಿದೆ.

ಈ. ಸಮರ್ಥನೀಯ ದಾಖಲೆಗಳನ್ನು ಒದಗಿಸಲು ವಿಫಲರಾದ್ದರಿಂದ, ಅನುಮತಿಯನ್ನು ನಿರಾಕರಿಸಲಾಗಿರುತ್ತದೆ.

1580 (1892) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ. (ಬ್ರಹ್ಮಾವರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸಿ.ಐ.ಟಿ.ಬಿ. ಮತ್ತು ಬಿ.ಡಿ.ಎ. ಇದುವರೆವಿಗೂ ಹಂಚಿಕೆ ಮಾಡಿರುವ ನಿವೇಶನಗಳು ಎಷ್ಟು ;

ಆ. ಲೋಕಸಭಾ, ರಾಜ್ಯಸಭಾ ಹಾಗೂ ಶಾಸಕರಿಗೆ ನೀಡಿರುವ ನಿವೇಶನಗಳು ಎಷ್ಟು, ಯಾರು ಯಾರಿಗೆ ನೀಡಲಾಗಿದೆ ಪ್ರತ್ಯೇಕವಾದ ವಿವರ ಪಟ್ಟಿ ನೀಡುವುದು) ;

ಇ. ನಿವೇಶನ ಹಂಚಿಕೆ ವಿಷಯದಲ್ಲಿ ಶಾಸಕರು ಹಾಗೂ ಲೋಕಸಭಾ ಸದಸ್ಯರಿಗೆ ಎಷ್ಟು ಬಾರಿ ನಿವೇಶನ ನೀಡಲಾಗುವುದು ;

ಈ. ಇದುವರೆವಿಗೆ ಎಷ್ಟು ಮಂದಿಗೆ ಒಂದಕ್ಕಿಂತ ಹೆಚ್ಚು ನಿವೇಶನ ಮಂಜೂರಾತಿ ಆಗಿದೆ ವಿವರ ನೀಡುವುದು ;

ಉ. ಇದುವರೆವಿಗೆ ಶಾಸಕರ "ಗೃಹ ನಿರ್ಮಾಣ ಸಂಘ" ಹಾಗೂ ಬಿ.ಡಿ.ಎ. ಎರಡರಿಂದಲೂ ನಿವೇಶನ ಹಂಚಿಕೆಯಾದವರ ವಿವರ ನೀಡುವುದು ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು)

ಅ. 1,26,449

ಆ. 811 ಲೋಕಸಭಾ, ರಾಜ್ಯಸಭಾ ಹಾಗೂ ಶಾಸಕರುಗಳಿಗೆ ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಮತ್ತು ಸರ್ಕಾರದ ಆದೇಶದನ್ವಯ ಜಿ ಪ್ರವರ್ಗದಲ್ಲಿ ಬಿಡಿ ನಿವೇಶನವನ್ನು ಹಂಚಿಕೆ ಮಾಡಲಾಗಿರುತ್ತದೆ. (ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು)

ಇ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳು, 1984 ರನ್ವಯ ಒಬ್ಬ ವ್ಯಕ್ತಿಗೆ ಒಂದೇ ಬಾರಿ ಮಾತ್ರ ನಿವೇಶನ ಹಂಚಿಕೆ ಮಾಡಲು ಅವಕಾಶವಿರುತ್ತದೆ.

ಈ. ಶ್ರೀ ಹೆಚ್.ಎನ್. ನಂಜೇಗೌಡ, ಮಾಜಿ ಶಾಸಕರು, ಶ್ರೀ ವಿನ್‌ಫ್ರೆಡ್ ಫರ್ನಾಂಡೀಸ್, ಮಾಜಿ ವಿಧಾನ ಪರಿಷತ್ ಸದಸ್ಯರು, ಶ್ರೀ ಎಸ್.ಜಿ. ನಂಜಯ್ಯನಮಠ, ಮಾಜಿ ಶಾಸಕರು.

ಉ. ಮೇಲಿನ ಉಪ ಪ್ರಶ್ನೆ (ಈ) ಗೆ ನೀಡಿದ ಉತ್ತರ ಅನ್ವಯಿಸುತ್ತದೆ.

1581 (1893) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಯೋಜನೆಯಲ್ಲಿ ಎಷ್ಟು ಕೆರೆಗಳನ್ನು ಗುರುತಿಸಲಾಗಿದೆ ;

ಆ. ಇದುವರೆವಿಗೆ ಈ ಯೋಜನೆಯಡಿ ನೀಡಿರುವ ಅನುದಾನ ಎಷ್ಟು ;

ಇ. ಈ ವರ್ಷ ಈ ಯೋಜನೆಯಡಿ ಆಗಿರುವ ಪ್ರಗತಿಯ ವರ ನೀಡುವುದು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ) :

ಅ. ಯಾವುದೂ ಇಲ್ಲ.

ಆ. ಕಾರ್ಯಾಯೋಜನೆ ಇಲ್ಲದ ಕಾರಣ ಅನುದಾನದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

1582 (1894)ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ. ಎಂ ಎಲ್ ಎ (ಬ್ರಹ್ಮಾವರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಮೇಲುಸೇತುವೆಗಳು ಎಷ್ಟು ; (ಸಂಪೂರ್ಣ ವಿವರ ನೀಡುವುದು)

ಆ. ಕೆಲವು ಮೇಲುಸೇತುವೆಗಳ ನಿರ್ಮಾಣ ಕಾರ್ಯ ವಿಳಂಬದಿಂದಾಗಿ ಆಗಿರುವ ಅವ್ಯವಸ್ಥೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ. ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳು ಯಾವುವು ;

ಈ. ಮೇಲುಸೇತುವೆ ನಿರ್ಮಾಣ ಕಾರ್ಯಕ್ಕೆ ನೀಡಿರುವ ಹಣ ಎಷ್ಟು; ಕೆಲವು ಮೇಲುಸೇತುವೆಗಳ ನಿರ್ಮಾಣ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಯವರು) :

ಅ. 1. ಬೆಂಗಳೂರು ಮಹಾನಗರ ಪಾಲಿಕೆಯು ಕೈಗೆತ್ತಿಕೊಂಡಿರುವ ಈ ಕೆಳಕಂಡ ಮೇಲು ಸೇತುವೆಗಳು / ಗ್ರೇಡ್ ಸೆಪರೇಟರ್‌ಗಳು ನಿರ್ಮಾಣದ ಹಂತದಲ್ಲಿರುತ್ತವೆ.

1. ರಾಜಾಜಿನಗರ ಗ್ರೇಡ್ ಸೆಪರೇಟರ್
2. ಮೋದಿ ರಸ್ತೆ ಕಾರ್ಡ್ ರಸ್ತೆ ಗ್ರೇಡ್ ಸೆಪರೇಟರ್
3. ಬಾಣಸವಾಡಿ ರೈಲ್ವೆ ಮೇಲು ಸೇತುವೆ
4. ನ್ಯಾಷನಲ್ ಕಾಲೇಜ್ ಮೇಲು ಸೇತುವೆ

2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೆತ್ತಿಕೊಂಡಿರುವ ಈ ಕೆಳಕಂಡ ಮೇಲು ಸೇತುವೆಗಳು/ ಗ್ರೇಡ್ ಸೆಪರೇಟರ್‌ಗಳು ನಿರ್ಮಾಣದ ಹಂತದಲ್ಲಿರುತ್ತವೆ.

1. ಏರ್‌ಪೋರ್ಟ್ ರಸ್ತೆಯಲ್ಲಿ ಮೇಲು ಸೇತುವೆ,
2. ಜಯದೇವ ಹೃದ್ರೋಗ ಕೇಂದ್ರ ಬಳಿ ಮೇಲು ಸೇತುವೆ,
3. ಆನಂದ್‌ರಾವ್ ವೃತ್ತದಲ್ಲಿ ಮೇಲು ಸೇತುವೆ.

ಆ. ಹೌದು

ಇ. ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಬದಲಿ ಸಂಚಾರ ವ್ಯವಸ್ಥೆ ಸಹ ಮಾಡಲಾಗಿದೆ.

ಅಲ್ಲದೆ, ಗುತ್ತಿಗೆದಾರರ ವೈಫಲ್ಯದಿಂದಾಗಿ ಏರ್‌ಪೋರ್ಟ್ ರಸ್ತೆ ಮತ್ತು ಜಯದೇವ ಹೃದ್ರೋಗ ಕೇಂದ್ರದ ಬಳಿಯ ಮೇಲು ಸೇತುವೆ ನಿರ್ಮಾಣ ಗುತ್ತಿಗೆಯನ್ನು ರದ್ದುಪಡಿಸಲಾಗಿದೆ. ಮತ್ತು ಬಾಕಿ ಕಾಮಗಾರಿಗಳಿಗೆ ಮರು ಗುತ್ತಿಗೆಗಳನ್ನು ಆಹ್ವಾನಿಸಲಾಗಿದೆ.

ಈ. ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಪ್ರಾಧಿಕಾರವು ಕೈಗೆತ್ತಿಕೊಂಡಿರುವ ಕೆಳಕಂಡ ಕಾಮಗಾರಿಗಳನ್ನು ಮಾಡಿರುವ ಹಣದ ವಿವರ ಈ ಕೆಳಕಂಡಂತಿರುತ್ತದೆ;

1. ರಾಜಾಜಿನಗರ ಗ್ರೇಡ್ ಸಪರೇಟರ್ ರೂ. 707.00 ಲಕ್ಷಗಳು
2. ಮೋದಿ ರಸ್ತೆ ಕಾರ್ಡ್ ರಸ್ತೆ ಗ್ರೇಡ್ ರೂ. 600.00 ಲಕ್ಷಗಳು ಸೆಪರೇಟರ್
3. ಬಾಣಸವಾಡಿ ರೈಲ್ವೆ ಮೇಲು ಸೇತುವೆ ರೂ. 790.00 ಲಕ್ಷಗಳು
4. ನ್ಯಾಷನಲ್ ಕಾಲೇಜ್ ಮೇಲು ಸೇತುವೆ ರೂ.452.74 ಲಕ್ಷಗಳು
5. ಏರ್‌ಪೋರ್ಟ್ ರಸ್ತೆಯಲ್ಲಿ ಮೇಲು ರೂ.1253.00 ಲಕ್ಷಗಳು ಸೇತುವೆ
6. ಜಯದೇವ ಹೃದ್ರೋಗ ಕೇಂದ್ರದ ಬಳಿ ರೂ.1652.00 ಮೇಲು ಸೇತುವೆ ಲಕ್ಷಗಳು
7. ಆನಂದ್‌ರಾವ್ ವೃತ್ತದಲ್ಲಿ ಮೇಲು ರೂ.677.00 ಲಕ್ಷಗಳು ಸೇತುವೆ.

ಭೂಸ್ವಾಧೀನ ಪ್ರಕ್ರಿಯೆ, ವಿದ್ಯುತ್, ಕುಡಿಯುವ ನೀರಿನ ಕೊಳವೆ, ಒಳಚರಂಡಿ ವ್ಯವಸ್ಥೆ ಮಾರ್ಗಗಳನ್ನು ಸ್ಥಳಾಂತರಿಸುವುದು ಮತ್ತು ಮರಗಳನ್ನು ಕಡಿಯಲು ಅನುಮತಿ ಪಡೆಯಬೇಕಾಗಿರುವುದರಿಂದ ವಿಳಂಬವಾಗಿರುತ್ತದೆ.

ಗುತ್ತಿಗೆದಾರರ ವೈಫಲ್ಯದಿಂದಾಗಿ ಏರ್‌ಪೋರ್ಟ್ ರಸ್ತೆ ಮತ್ತು ಜಯದೇವ ಹೃದ್ರೋಗ ಕೇಂದ್ರದ ಬಳಿಯ ಮೇಲು ಸೇತುವೆ ಕಾರ್ಯಗಳು ವಿಳಂಬವಾಗಿರುತ್ತವೆ.

1583(1895) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೀನುಗಾರಿಕೆ ರಸ್ತೆ ಅಭಿವೃದ್ಧಿಗಾಗಿ ಎಷ್ಟು ಅನುದಾನವನ್ನು ಈ ಸಾಲಿನಲ್ಲಿ ನೀಡಲಾಗಿದೆ;

ಆ. ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಇಂತಹ ಎಷ್ಟು ಮೀನುಗಾರಿಕೆ ರಸ್ತೆಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗಿದೆ ;

ಇ. ಈ ನಿಟ್ಟಿನಲ್ಲಿ ಬಿಡುಗಡೆ ಮಾಡಿರುವ ಅನುದಾನ ಎಷ್ಟು ;

ಈ. ಈ ನಿಟ್ಟಿನಲ್ಲಿ ಇದುವರೆಗಿನ ಪ್ರಗತಿಯ ವಿವರ ನೀಡುವುದು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು):

ಅ. ಈ ಸಾಲಿನಲ್ಲಿ ಮೀನುಗಾರಿಕೆ ರಸ್ತೆ ಅಭಿವೃದ್ಧಿಗಾಗಿ ಮೀನುಗಾರಿಕೆ ಇಲಾಖೆಯಿಂದ ರೂ. 5.00 ಲಕ್ಷಗಳ ಅನುದಾನವನ್ನು ನೀಡಲಾಗಿದ್ದು, ಹೆಚ್ಚುವರಿ ಅನುದಾನ ರೂ. 95.00 ಲಕ್ಷಗಳನ್ನು ಒದಗಿಸಲಾಗಿದೆ.

ಆ. ಪ್ರಸಕ್ತ ಸಾಲಿನಲ್ಲಿ ಇತ್ತೀಚೆಗೆ ಬಿಡುಗಡೆ ಮಾಡಿರುವ ಹೆಚ್ಚುವರಿ ಅನುದಾನದಲ್ಲಿ ಬ್ರಹ್ಮಾವರ ವಿಧಾನಸಭಾ ಕ್ಷೇತ್ರದ 18 ಮೀನುಗಾರಿಕಾ ರಸ್ತೆಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು.

ಇ. ಪ್ರಸಕ್ತ ಸಾಲಿನಲ್ಲಿ ಮೀನುಗಾರಿಕೆ ರಸ್ತೆಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ಹೆಚ್ಚುವರಿ ಅನುದಾನ ಸೇರಿದಂತೆ ಒಟ್ಟು ರೂ.32.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಈ. ಗುರುತಿಸಿದ 18 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜು ವೆಚ್ಚಗಳನ್ನು ತಯಾರಿಸಲಾಗಿದ್ದು, ಶೀಘ್ರದಲ್ಲಿ ಈ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

1585 (2187) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಎನ್.ಆರ್.ಪುರ, ಕೊಪ್ಪ ಹಾಗೂ ಶೃಂಗೇರಿ ತಾಲ್ಲೂಕುಗಳಲ್ಲಿ ಅಕ್ರಮವಾಗಿ ಮರಳು ಸಾಗಾಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ. ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

ಇ. ಅಧಿಕೃತ ಮರಳು ಗುತ್ತಿಗೆ ಪಡೆದವರೂ ಸಹ ಮಿತಿ ಮೀರಿ ಲಾರಿಗಳಲ್ಲಿ ಲೋಡ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಇಲಾಖೆಯಲ್ಲಿ ಸಿಬ್ಬಂದಿ ಸಂಖ್ಯೆ ಕಡಿಮೆ ಇರುವುದರಿಂದ ತಪಾಸಣೆ ನಡೆಸಲು ಸಾಧ್ಯವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ. ಇರುವ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಇಲಾಖೆಗೆ ಅನುಮತಿ ನೀಡುವುದೇ;

ಊ. ಹೌದಾದಲ್ಲಿ, ಯಾವಾಗ ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು)

ಅ. ಬಂದಿದೆ.

ಆ. ಅಕ್ರಮ ಮರಳು ಗಣಿಗಾರಿಕೆ ತಡೆಗಟ್ಟಲು ಈ ಕೆಳಗಿನಂತೆ ಕ್ರಮವಹಿಸಿದೆ.

1. 31 ಮರಳು ನಿಕ್ಷೇಪಗಳನ್ನು ಗುರ್ತಿಸಿ ಹರಾಜು ಮಾಡಲು ಅಧಿಸೂಚನೆ ಜಾರಿ ಮಾಡಿದೆ.

2. ಈ ಪೈಕಿ 22 ಮರಳು ನಿಕ್ಷೇಪಗಳ 52–00 ಎಕರೆ ಪ್ರದೇಶವನ್ನು ಹರಾಜು ಮಾಡಲಾಗಿದ್ದು ಇದರಿಂದ 4.64 ಲಕ್ಷ ಹರಾಜು ಮೊತ್ತ ಸಂಗ್ರಹಿಸಲಾಗಿದೆ.

ಇ. ಹೌದು, 2004–05ನೇ ಸಾಲಿನಲ್ಲಿ ಮಿತಿಮೀರಿದ ಲೋಡ್ ಸಾಗಾಣಿಕೆಯ 8 ಪ್ರಕರಣಗಳನ್ನು ಪತ್ತೆಹಚ್ಚಿ, ರೂ.8,500 00 ದಂಡ ವಸೂಲು ಮಾಡಿದೆ.

ಈ. ಲಭ್ಯವಿರುವ ಸಿಬ್ಬಂದಿಯಿಂದಲೇ ಸತತವಾಗಿ ತಪಾಸಣೆ ಮಾಡುವ ಕಾರ್ಯ ನಿರ್ವಹಿಸಲಾಗುತ್ತಿದೆ.

ಉ. ಹೌದು, 28 ಭೂವಿಜ್ಞಾನಿಗಳ ಹುದ್ದೆಗಳ ಆಯ್ಕೆಗಾಗಿ ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಲಾಗಿದೆ.

ಊ. ಕರ್ನಾಟಕ ಲೋಕಸೇವಾ ಆಯೋಗಕ್ಕೆ ದಿನಾಂಕ : 11–01–2005 ರಲ್ಲಿ ಬರೆಯಲಾಗಿದೆ.

1586 (2188) ಶ್ರೀ ಜೀವರಾಜ್ ಡಿ.ಎನ್. ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಶೃಂಗೇರಿಯಿಂದ ಬೆಂಗಳೂರಿಗೆ ರಾತ್ರಿ ಹತ್ತೂವರೆ ಗಂಟೆಗೆ ಹೊರಟು ಕೊಪ್ಪ ಎನ್.ಆರ್.ಪುರ, ತರೀಕೆರೆ ಮಾರ್ಗವಾಗಿ ಬೆಂಗಳೂರು ತಲುಪುವಂತೆ ಒಂದು ರಾಜಹಂಸ ಸೇವೆಯನ್ನು ಒದಗಿಸಲು ಆ ಭಾಗದ ಜನತೆ ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ. ಈ ಮಾರ್ಗವಾಗಿ ಬಸ್ ಸಂಚಾರ ಆರಂಭಿಸಲಾಗುವುದೇ ;

ಇ. ಹೌದಾದಲ್ಲಿ, ಯಾವಾಗ ಆರಂಭವಾಗುವುದು;

ಈ. ಶೃಂಗೇರಿ ಬಸ್ ನಿಲ್ದಾಣದ ಸಂಸ್ಥೆಯ ಮಾನ್ಯುಯಲ್ ಕೌಂಟರ್‌ನಲ್ಲಿ ಬೆಂಗಳೂರಿಗೆ ರಾತ್ರಿ ಹೊರಡುವ ಬಸ್‌ಗಳಿಗೆ ಕೇವಲ ನಾಲ್ಕು ಆಸನಗಳನ್ನು ಕಾಯ್ದಿರಿಸಲು ನಿಗದಿಪಡಿಸಿ ಉಳಿದ ಆಸನಗಳನ್ನು ಬೆಂಗಳೂರಿನ ಕಂಪ್ಯೂಟರ್ ಕೌಂಟರ್‌ಗೆ ನಿಗದಿಪಡಿಸಿರುವುದರಿಂದ, ಶೃಂಗೇರಿಯಿಂದ ಬೆಂಗಳೂರಿಗೆ ಬರುವ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ. ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

ಊ. ಶೃಂಗೇರಿಯಲ್ಲಿ ಕಂಪ್ಯೂಟರ್ ಮೂಲಕ ಮುಂಗಡ ಟಿಕೇಟ್ ಕಾಯ್ದಿರಿಸಲು ಕ್ರಮ ಕೈಗೊಳ್ಳಲಾಗಿದೆಯೇ ;

ಋ. ಹೌದಾದಲ್ಲಿ, ಯಾವಾಗಿನಿಂದ ಜಾರಿ ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ. ಇಲ್ಲ.

ಆ. ಹೌದು.

ಇ. ಮೇ 2005

ಈ. ಇಲ್ಲ.

ಉ. ಉದ್ಭವಿಸುವುದಿಲ್ಲ.

ಊ. ಹೌದು

ಋ. 2005–06ರ ಸಾಲಿನಲ್ಲಿ.

1587 (1887) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, ಎಂ ಎಲ್ ಎ (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೆಂಗಳೂರು ನಗರದಲ್ಲಿ ಪ್ರತಿದಿನ ಸಂಚರಿಸುವ ಸರಾಸರಿ ವಾಹನಗಳೆಷ್ಟು ;

ಆ. ಬೆಂಗಳೂರು ಮಹಾನಗರ ಪಾಲಿಕೆ ಪ್ರತಿ ವರ್ಷ ಮೂಲಭೂತ ಸೆಸ್ ಅನ್ನು ದ್ವಿಚಕ್ರ, ತ್ರಿಚಕ್ರ, ನಾಲ್ಕು ಚಕ್ರ ಹಾಗೂ ಇತರ ವಾಹನಗಳಿಗೆ ವಿಧಿಸಲು ತೀರ್ಮಾನಿಸಿದೆಯೇ ;

ಇ. ಈ ಮೂಲಭೂತ ಸೆಸ್ ಅನ್ನು ಯಾವ ರೀತಿ ವಸೂಲು ಮಾಡಲಾಗುವುದು;

ಈ. ಇದರಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತಿ ವರ್ಷ ಬರತಕ್ಕ ವರಮಾನವೆಷ್ಟು;

ಉ. ಈ ತೆರಿಗೆ ಅಥವಾ ಸೆಸ್ ವಿಧಿಸುವ ಉದ್ದೇಶವೇನು ;

ಊ. ಪ್ರತಿ ವರ್ಷ ವಾಹನ ತೆರಿಗೆ, ಆಕ್ಟ್ರಾಯ್ ವಸೂಲಿಯಲ್ಲಿ ಕಿರುಕುಳವಾಗುತ್ತಿದ್ದರಿಂದ ಇವುಗಳನ್ನು ರದ್ದುಗೊಳಿಸಿ, ವಾಹನ ತೆರಿಗೆಯನ್ನು ಲೈಫ್ ಟೈಮ್ ತೆರಿಗೆಯಾಗಿ ಪರಿವರ್ತಿಸಿರುವುದು ನಿಜವಲ್ಲವೇ ;

ಋ. ಪ್ರತಿದಿನ ನಗರಕ್ಕೆ ಲಕ್ಷಾಂತರ ವಾಹನಗಳು ಬೇರೆ ರಾಜ್ಯಗಳಿಂದ, ಬೇರೆ ಜಿಲ್ಲೆಗಳಿಂದ ಬರುತ್ತಿದ್ದು ಅವುಗಳಿಗೂ ಈ ಸೆಸ್ ವಿಧಿಸಲಾಗುವುದೇ;

ೠ. ಈ ಸೆಸ್ ವಿಧಿಸುವುದರಿಂದ ನಾಗರೀಕರಿಗೆ ಕಿರುಕುಳವಾಗುವುದರಿಂದ ಇದನ್ನು ರದ್ದುಗೊಳಿಸಲು ಸರ್ಕಾರ ಆಲೋಚಿಸುತ್ತದೆಯೇ ?

ಶ್ರೀ ಧರಂಸಿಂಗ್ (ಮಾನ್ಯ ಮುಖ್ಯಮಂತ್ರಿಯವರು) :

ಅ. ಹಾಲಿ ಬೆಂಗಳೂರು ನಗರದಲ್ಲಿ 20,94,537 ವಿವಿಧ ವರ್ಗದ ವಾಹನಗಳು ನೊಂದಣಿಯಾಗಿ ಬಳಕೆಯಲ್ಲಿವೆ.

ಆ. ಹೌದು.

ಇ. ಈ ಉಪಕರವನ್ನು ದಿನಾಂಕ 01.04.2005 ರಿಂದ ಜಾರಿಗೆ ಬರುವಂತೆ, ಜಾರಿಗೆ ತರಲು ಉದ್ದೇಶಿಸಿದ್ದು, ಈ ಉಪಕರವನ್ನು ವಾಹನ ಮಾಲೀಕರಿಂದ ವಸೂಲಿ ಮಾಡಲು ಅಗತ್ಯ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ.

ಈ. ರೂ. 15.00 ಕೋಟಿಗಳ ವಾರ್ಷಿಕ ವರಮಾನವನ್ನು ನಿರೀಕ್ಷಿಸಲಾಗಿದೆ.

ಉ. ಈ ವರಮಾನದಿಂದ ನಗರದಲ್ಲಿ ಮೂಲಭೂತ ಸೌಲಭ್ಯವನ್ನು ಉನ್ನತೀಕರಿಸುವ ಉದ್ದೇಶವಿದೆ.

ಊ. ವಾಹನ ತೆರಿಗೆಯನ್ನು ತ್ರೈಮಾಸಿಕ, ಅರ್ಧವಾರ್ಷಿಕ ಹಾಗೂ ವಾರ್ಷಿಕವಾಗಿ ಸಂಗ್ರಹಿಸುವಲ್ಲಿ ತೊಂದರೆ ಉಂಟಾಗುತ್ತಿದ್ದುದರಿಂದ ಹಾಗೂ ವಾಹನ ಮಾಲೀಕರುಗಳು ತೆರಿಗೆ ಪಾವತಿಸುವುದಕ್ಕಾಗಿ ಮಾತ್ರವೇ ಆಗಿಂದಾಗ್ಗೆ ಕಛೇರಿಗಳಿಗೆ ಭೇಟಿ ನೀಡುವುದನ್ನು ತಪ್ಪಿಸುವ ಸಲುವಾಗಿ, ಸಾರಿಗೇತರ ವಾಹನಗಳಿಗೆ ಲೈಫ್‌ಟೈಮ್ ತೆರಿಗೆ ವಿಧಿಸಲಾಗುತ್ತಿದೆ.

ಋ. ನಗರ ಪಾಲಿಕೆ ವ್ಯಾಪ್ತಿಯಲ್ಲಿ ನೊಂದಾವಣೆಗೊಂಡ ವಾಹನಗಳಿಗೆ ಮಾತ್ರವೇ, ಈ ಉಪಕರವನ್ನು ವಿಧಿಸಲಾಗುವುದು.

ೠ. ಈ ಸಸ್ ವಿಧಿಸಿರುವುದರಿಂದ ನಾಗರೀಕರಿಗೆ ಯಾವುದೇ ಕಿರುಕುಳವಾಗುತ್ತಿಲ್ಲ.

(ಉ) ನಲ್ಲಿನ ಉತ್ತರವನ್ನೂ ದಯವಿಟ್ಟು ಗಮನಿಸಿ.

1588 (1896) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಸರಾಸರಿ ಪ್ರತಿದಿನ ನೋಂದಣಿಯಾಗುವ ಹೊಸ ವಾಹನಗಳ ಸಂಖ್ಯೆ ಎಷ್ಟು ;

ಆ. ಹಾಲಿ ಬೆಂಗಳೂರು ನಗರದಲ್ಲಿ ಪ್ರತಿದಿನ ರಸ್ತೆಗಳಲ್ಲಿ ಸಂಚರಿಸುತ್ತಿರುವ ಎಲ್ಲಾ ವಿಧವಾದ ವಾಹನಗಳ ಸಂಖ್ಯೆ ಎಷ್ಟು ;

ಇ. ಬೆಂಗಳೂರು ನಗರದಲ್ಲಿ ವಾಹನಗಳ ನೋಂದಣಿಯನ್ನು ಸ್ಥಗಿತಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

ಈ. 2003–04 ರಲ್ಲಿ ಬೆಂಗಳೂರು ನಗರದಲ್ಲಿ ವಾಹನಗಳ ನೋಂದಣಿಯಿಂದ ಸರ್ಕಾರಕ್ಕೆ ಬಂದ ವರಮಾನವೆಷ್ಟು ;

ಉ. ಇದರಲ್ಲಿ ರಸ್ತೆಗಳ ರಿಪೇರಿ ಹಾಗೂ ಅಭಿವೃದ್ಧಿಗಾಗಿ ಸರ್ಕಾರ ಬೆಂಗಳೂರು ಮಹಾನಗರ ಪಾಲಿಕೆಗೆ ನೀಡಿದ ಹಣವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. 820

ಆ. 20,94,537

ಇ. ಇಲ್ಲ.

ಈ. ರೂ. 946.92 ಲಕ್ಷಗಳು

ಉ. ಈ ಹಣದಿಂದ ಪ್ರತ್ಯೇಕವಾಗಿ ರಸ್ತೆ ರಿಪೇರಿ ಹಾಗೂ ಅಭಿವೃದ್ಧಿಗಾಗಿ ಬೆಂಗಳೂರು ಮಹಾನಗರ ಪಾಲಿಕೆಗೆ ಹಣ ಬಿಡುಗಡೆಮಾಡುವ ಪದ್ಧತಿ ಇರುವುದಿಲ್ಲ.

1590 (1898) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರಿನಲ್ಲಿ ಮೆಟ್ರೋ ರೈಲು ಯೋಜನೆಯನ್ನು ಖಾಸಗೀ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರ ನಿರ್ಧಾರಿಸಿದೆಯೇ?

ಆ. ಹಾಗಿದ್ದಲ್ಲಿ, ಈ ಯೋಜನೆಗೆ ಮುಂದೆ ಬಂದಿರುವ ಖಾಸಗೀ ಕಂಪನಿಗಳ ವಿವರ ನೀಡುವುದು.

ಇ. ಈ ಯೋಜನೆಯಲ್ಲಿ ದಿಲ್ಲಿ ಮೆಟ್ರೋ ರೈಲು ಮಾದರಿಯಲ್ಲಿ ಜಪಾನ್ ಬ್ಯಾಂಕ್ ಹಾಗೂ ರೈಲ್ವೆ ಇಲಾಖೆ ಹಣಕಾಸಿನ ನೆರವಿನಿಂದ ಕೈಗೊಳ್ಳದೇ ಇರಲು ಕಾರಣವೇನು ?

ಈ. ಈ ಯೋಜನೆಗೆ ಖಾಸಗೀ ಸಹಭಾಗಿತ್ವದ ಪಾಲು ಎಷ್ಟು ?

ಉ. ಈ ಯೋಜನೆಗೆ ಸರ್ಕಾರ ಜಪಾನ್ ಬ್ಯಾಂಕಿನಿಂದ ಹಣಕಾಸಿನ ನೆರವು ಕೋರಲು ನಿರ್ಧರಿಸಿದೆಯೇ?

ಊ. ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಋ. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅಗತ್ಯ ಅನುಮತಿ ಪಡೆಯಲು ರಾಜ್ಯ ಸರ್ಕಾರ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು?

ೠ. ಈ ಯೋಜನೆ ಯಾವಾಗ ಪ್ರಾರಂಭವಾಗುವ ನಿರೀಕ್ಷೆ ಇದೆ ತಿಳಿಸುವುದು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಯವರು):

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಬೆಂಗಳೂರು ಸಮೂಹ ತ್ವರಿತ ಸಾರಿಗೆ ನಿಯಮಿತ ಸಂಸ್ಥೆಯು ಜಪಾನ್ ಬ್ಯಾಂಕ್ ಫಾರ್ ಇಂಟರ್‌ನ್ಯಾಷನಲ್, ಕೋ–ಆಪರೇಷನ್ ಅವರಿಂದ ಸಾಲವನ್ನು ಕೋರಿದೆ. ಈ ಯೋಜನೆಗೆ ಸೂಕ್ತವಾದ ಸಾಲದ ಸಮ್ಮಿಶ್ರ ವಿನ್ಯಾಸವನ್ನು ರೂಪಿಸಲಾಗುವುದು. ಭಾರತೀಯ ರೈಲ್ವೆಯು ಯಾವುದೇ ಮೆಟ್ರೋ ರೈಲು ಯೋಜನೆಗೆ ಹಣತೊಡಗಿಸುವ ನೀತಿಯನ್ನು ರೂಪಿಸಿಲ್ಲ.

ಈ. ಉದ್ಭವಿಸುವುದಿಲ್ಲ.

ಉ. ಹೌದು

ಊ. ಬೆಂಗಳೂರು ಸಮೂಹ ತ್ವರಿತ ಸಾರಿಗೆ ನಿಯಮಿತ ಈಗಾಗಲೇ ಜೆಬಿಐಸಿಯಿಂದ ಸಾಲ ಪಡೆಯಲು ಭಾರತ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯಕ್ಕೆ ಮನವಿಯನ್ನು ಸಲ್ಲಿಸಿದೆ.

ಋ. ಭಾರತದ ಯೋಜನಾ ಆಯೋಗ ಹಾಗೂ ಯೋಜನಾ ಹೂಡಿಕೆಯ ಮಂಡಳಿಯ ಪೂರ್ವ ಸಭೆಯು ಈಗಾಗಲೇ ತಮ್ಮ ಒಪ್ಪಿಗೆಯನ್ನು ನೀಡಿವೆ. ಯೋಜನಾ ಹೂಡಿಕೆ ಮಂಡಳಿ ಮತ್ತು ಆರ್ಥಿಕ ವಿಷಯದ ಮೇಲಿನ ಸಂಪುಟ ಸಮಿತಿ ಒಪ್ಪಿಗೆಯನ್ನು ಕಾಯಲಾಗುತ್ತಿದೆ.

ೠ. ಪೂರ್ವ ಭಾವಿ ಸಿದ್ಧತೆಗಳು ಈಗಾಗಲೇ ನಡೆದಿದ್ದು, ಯೋಜನೆಯ ಕೆಲಸಗಳನ್ನು 2005ರ ಜೂನ್ ಮಾಹೆಯಲ್ಲಿ ಪ್ರಾರಂಭಿಸಲಾಗುವುದು.

1591(1899) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತಿರಸುವರೇ :

ಅ. ಬೆಂಗಳೂರು ನಗರದಲ್ಲಿ ವಾಸಿಸುವ ಪ್ರತಿಯೊಬ್ಬ ನಾಗರೀಕನೂ ಪ್ರತಿದಿನ ನೀಡಬೇಕಾದ ತಲಾವಾರು ನೀರಿನ ಪ್ರಮಾಣವೆಷ್ಟು ?

ಆ. ಈಗ ಒದಗಿಸುತ್ತಿರುವ ನೀರಿನ ಪ್ರಮಾಣವೆಷ್ಟು.

ಇ. ಬೆಂಗಳೂರು ನಗರದ ಪ್ರತಿದಿನದ ನೀರಿನ ಬೇಡಿಕೆಯ ಪ್ರಮಾಣವೆಷ್ಟು ಹಾಗೂ ಈಗ ಪ್ರತಿದಿನ ಸರಬರಾಜು ಮಾಡುತ್ತಿರುವ ನೀರಿನ ಪ್ರಮಾಣವೆಷ್ಟು ?

ಈ. ಈಗಾಗಲೇ ಅನುಷ್ಠಾನಗೊಳಿಸಿರುವ ವಿವಿಧ ಹಂತಗಳ ಕಾವೇರಿ ನೀರಿನ ಯೋಜನೆಗಳ ವಿವರ ನೀಡುವುದು.

ಉ. ಹೆಸರುಘಟ್ಟ ಹಾಗೂ ಟಿ.ಜಿ.ಹಳ್ಳಿಗಳಿಂದ ಪ್ರತಿದಿನ ನಗರಕ್ಕೆ ಬರುತ್ತಿರುವ ನೀರಿನ ಪ್ರಮಾಣವೆಷ್ಟು ?

ಊ. ಹೆಚ್ಚುತ್ತಿರುವ ಜನಸಂಖ್ಯೆಗೆ ಕುಡಿಯುವ ನೀರನ್ನು ಒದಗಿಸಲು ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಗಳು ಯಾವುವು?

ಋ. 2005 ರಲ್ಲಿ ಈ ಯೋಜನೆಗಳಿಂದ ನಗರಕ್ಕೆ ಬರತಕ್ಕ ನೀರಿನ ಪ್ರಮಾಣವೆಷ್ಟು ?

ೠ. ಕಾವೇರಿ ನೀರನ್ನು ಕೇವಲ ಕುಡಿಯುವ ನೀರಿಗಾಗಿ ಪ್ರತ್ಯೇಕ ಲೈನ್ ಅಳವಡಿಸಲು ಸರ್ಕಾರ ನಿರ್ಧರಿಸಿದೆಯೆ

ಎ. ಕಾವೇರಿಯಿಂದ ಬರತಕ್ಕ ನೀರಿನ ಸೋರುವಿಕೆ ಪ್ರಮಾಣವೆಷ್ಟು ? ಹಾಗೂ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಧರಂಸಿಂಗ್(ಮುಖ್ಯ ಮಂತ್ರಿಯವರು) :

ಅ. ಸಿ.ಪಿ.ಹೆಚ್.ಇ.ಇ.ಓ ಪ್ರಕಾರ ಬೆಂಗಳೂರು ನಗರದಲ್ಲಿ ವಾಸಿಸುವ ಪ್ರತಿಯೊಬ್ಬ ನಾಗರೀಕನಿಗೆ ದಿನಂಪ್ರತಿ 150 ಲೀಟರ್‌ನಷ್ಟು ನೀರಿನ ಪ್ರಮಾಣ ನೀಡಬೇಕಾಗಿರುತ್ತದೆ.

ಆ. ಸುಮಾರು 100 ಲೀಟರ್‌ನಷ್ಟು ನೀರನ್ನು ದಿನಂಪ್ರತಿ ಪ್ರತಿ ಸಾರ್ವಜನಿಕರಿಗೆ ಒದಗಿಸಲಾಗುತ್ತಿದೆ.

ಇ. ಬೆಂಗಳೂರು ನಗರದ ಪ್ರತಿದಿನದ ನೀರಿನ ಬೇಡಿಕೆಯು ಪ್ರಮಾಣ 1050 ದಶಲಕ್ಷ ಲೀಟರ್‌ನಷ್ಟು ಇರುತ್ತದೆ. ಪ್ರತಿಯಾಗಿ ದಿನಂಪ್ರತಿ ನಗರಕ್ಕೆ 805 ದಶಲಕ್ಷ ಲೀಟರ್ ಪ್ರಮಾಣದ ನೀರಿನ ಸರಬರಾಜು ಮಾಡಲಾಗುತ್ತಿದೆ.

ಈ. ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡಲು ಬೆಂಗಳೂರು ಜಲಮಂಡಲಿಯು ಕಾವೇರಿ 1,2,3 ಹಾಗೂ 4ನೇ ಹಂತ 1ನೇ ಘಟ್ಟಗಳ ಯೋಜನೆಗಳಿಂದ ಸುಮಾರು 810 ದಶಲಕ್ಷ ಲೀಟರ್ ನೀರು ದಿನಂಪ್ರತಿ ಒದಗಿಸಲಾಗುತ್ತಿದೆ. ಈ ಯೋಜನೆಗಳು ಕ್ರಮವಾಗಿ 1973, 1982,1993 ಹಾಗೂ 2002ರಲ್ಲಿ ಕಾರ್ಯಗತವಾಗಿರುತ್ತವೆ.

ಉ. ಮಳೆಯ ವೈಫಲ್ಯದಿಂದ ಹೆಸರುಘಟ್ಟದಲ್ಲಿ ನೀರಿನ ಶೇಖರಣೆ ಇಲ್ಲದಿರುವುದರಿಂದ ನಗರಕ್ಕೆ ಈ ಮೂಲದಿಂದ ನೀರು ಒದಗಿಸಲಾಗುತ್ತಿಲ್ಲ. ಅದರಂತೆ, ಟಿ. ಜಿ.ಹಳ್ಳಿ ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ದಿನಂಪ್ರತಿ ಸುಮಾರು ಇಪ್ಪತ್ತು ದಶ ಲಕ್ಷ ಲೀಟರ್ ನೀರು ಮಾತ್ರ ಸರಬರಾಜು ಮಾಡಲಾಗುತ್ತಿದೆ.

ಊ. ಬೆಂಗಳೂರು ನಗರದ ಹೆಚ್ಚುತ್ತಿರುವ ಜನಸಂಖ್ಯೆಯ ನೀರಿನ ಬೇಡಿಕೆಯನ್ನು ಪೂರೈಸಲು ಬೆಂಗಳೂರು ಜಲಮಂಡಲಿಯು ಕಾವೇರಿ ನಾಲ್ಕನೇ ಹಂತ-2ನೇ ಘಟ್ಟದ ಯೋಜನೆಯನ್ನು ಜಪಾನ್ ಅಂತರರಾಷ್ಟ್ರೀಯ ಬ್ಯಾಂಕ್ ಸಹಕಾರದೊಂದಿಗೆ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಯೋಜನೆಯ ಅಂದಾಜು ವೆಚ್ಚ ರೂ. 3383.70 ಕೋಟಿಗಳು. ಈ ಯೋಜನೆಯಿಂದ ನಗರಕ್ಕೆ ದಿನಂಪ್ರತಿ 500 ದಶಲಕ್ಷ ಲೀಟರ್ ಹೆಚ್ಚುವರಿ ನೀರು ಲಭಿಸುತ್ತಿದೆ.

ಋ. ಇಸವಿ 2005ರಲ್ಲಿ ಬೆಂಗಳೂರು ನಗರಕ್ಕೆ ಯಾವುದೇ ಹೆಚ್ಚುವರಿ ನೀರು ಬರುವ ಯೋಜನೆಗಳು ಇಲ್ಲ.

ಋೂ. ' ಇಲ್ಲ.

ಎ. ಕಾವೇರಿಯಿಂದ ಬರತಕ್ಕ ನೀರಿನ ಸೋರುವಿಕೆಯ ಪ್ರಮಾಣ ಶೇ. ಸರಾಸರಿ 32 ರಿಂದ 34 ಷ್ಟು ಇರುತ್ತದೆ. ಇದನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಉದಾ: ಶಾಶ್ವತವಾಗಿ ನೀರು ಸೋರುವಿಕೆಯನ್ನು ತಡೆಗಟ್ಟಲು ಮೆಕ್ಯಾನಿಕಲ್ ಕ್ಲಾಂಪ್ಸ್ ಅಳವಡಿಸುವುದು, ವಾಹನ ದಟ್ಟಣೆ ಇರುವ ಸ್ಥಳಗಳಲ್ಲಿ ಮೆದು ಉಕ್ಕಿನ ಕೊಳವೆಗಳನ್ನು ಬೆಸುಗೆ ಮಾಡಿ ಅಳವಡಿಸುವುದು, ದೋಷಪೂರಿತ ಮಾಪನಗಳ ಬದಲಾವಣೆ ಅನಧಿಕೃತ ಸಮಪರ್ಕಗಳನ್ನು ನಿಯಂತ್ರಿಸುವುದು ಹಾಗೂ ಸಕ್ರಮಗೊಳಿಸುವುದು ಮುಂತಾದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣ ತಗ್ಗಿಸುವ ದಿಶೆಯಲ್ಲಿ ಕಿರು ಯೋಜನೆಯನ್ನು ಕೈಗೊಂಡಿದ್ದು ಅಧ್ಯಯನಕ್ಕಾಗಿ ಒಂದು ವಿಭಾಗವನ್ನು ನಿಯೋಜಿಸಲಾಗಿದೆ.

1592(2119) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬರಪ್ರದೇಶಗಳಲ್ಲಿ ಹೆಚ್ಚು ನೀರು ಬಳಕೆಯಾಗುವ ಕಬ್ಬು, ಭತ್ತ ಮುಂತಾದ ಬೆಳೆಗಳ ನಿಷೇದ ಪಡಿಸುವ ವಿಚಾರ ಸರ್ಕಾರದ ಮುಂದಿದೆಯೇ ;

ಆ. ರೈತರು ನೀರಿನ ಅಭಾವ, ಬೆಳೆ ಹಾನಿ, ಬೆಲೆ ಇಳಿತ ಮುಂತಾದ ಸಂಕಷ್ಟದಲ್ಲಿರುವಾಗ ಇಂಥ ಕ್ರಮ ಜರುಗಿಸುವ ವಿಚಾರ ನ್ಯಾಯಸಮ್ಮತವೇ ;

ಇ. ಬರಪೀಡಿತ ಪ್ರದೇಶಗಳಲ್ಲಿ ಜಲಮೂಲ ಸಂವರ್ಧನೆಗೆ ತುರ್ತು ಮತ್ತು ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತರಲು ಸರ್ಕಾರ ಚಿಂತಿಸುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ಸದ್ಯಕ್ಕೆ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಆ. ಪ್ರಶ್ನೆ 'ಅ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಪ್ರಶ್ನೆ 'ಅ' , 'ಆ'ಗೆ ನೀಡಿರುವ ಉತ್ತರಗಳಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

1593 (2120) ಶ್ರೀ ಕೃಷ್ಣಪಾಲೇಮಾರ್. ಜೆ, ಎಂಎಲ್ಎ (ಸುರತ್ಕಲ್) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ. ಮಂಗಳೂರು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಇರುವ ಮಹಾನಗರ ಪಾಲಿಕೆಯ ಆಟದ ಮೈದಾನಗಳೆಷ್ಟು ಹಾಗೂ ಉದ್ಯಾನವನಗಳೆಷ್ಟು ;

ಆ. ಈ ಆಟದ ಮೈದಾನ ಮತ್ತು ಉದ್ಯಾನವನಗಳಿಗೆ ಕಳೆದ 3 ವರ್ಷಗಳಿಂದ ಅಭಿವೃದ್ಧಿಗಾಗಿ ಖರ್ಚು ಮಾಡಿದ ಹಣ ಎಷ್ಟು ;

ಇ. ಎಷ್ಟು ಆಟದ ಮೈದಾನ ಮತ್ತು ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಸಮಯಂ ಸೇವಾ ಸಂಸ್ಥೆಗಳು ಹಾಗೂ ನಿವಾಸಿಗರ ಸಂಘಗಳು ಮುಂದೆ ಬಂದಿವೆ ;

ಈ. ಅಂತಹವರಲ್ಲಿ ಎಷ್ಟು ಸಂಸ್ಥೆಗಳಿಗೆ ನಿರ್ವಹಣಾ ಜವಾಬ್ದಾರಿ ನೀಡಲಾಗಿದೆ ?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಯವರು) :

ಅ. ಆಟದ ಮೈದಾನಗಳು – 9

ಉದ್ಯಾನವನಗಳು – 12

ಆ. ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಕಳೆದ 3 ವರ್ಷಗಳಲ್ಲಿ ಒಟ್ಟು ರೂ. 7,42,643–00 ನ್ನು ಖರ್ಚು ಮಾಡಲಾಗಿದೆ.

ಇ. ಕಾರ್ಪೊರೇಷನ್ ಬ್ಯಾಂಕ್ ಪಾರ್ಕ್‌ನ್ನು ಮಾತ್ರ ಖಾಸಗಿಯವರಿಗೆ ನೀಡಲಾಗಿದೆ. ಉಳಿದ ಮೈದಾನ ಹಾಗು ಉದ್ಯಾನವನಗಳು ಮಹಾನಗರ ಪಾಲಿಕೆಯಿಂದ ನಿರ್ವಹಿಸಲ್ಪಡುತ್ತಿವೆ.

1594 (2121) ಶ್ರೀ ಕೃಷ್ಣ ಪಾಲೇಮರ್. ಜೆ. (ಸುರತ್ಕಲ್) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಹಬ್ಬುತ್ತಿರುವ ನಕ್ಸಲೀಯ ಚಟುವಟಿಕೆಗಳ ಕುರಿತಾದ ಸರ್ಕಾರದ ನಿಗ್ರಹದ ಕಾರ್ಯಕ್ರಮಗಳೇನು ?

ಆ. ನಕ್ಸಲ್ ವಾದದ ಛಾಯೆಯು ಶಾಲಾ ಕಾಲೇಜುಗಳಿಗೂ ವಿಸ್ತರಣೆಯಾಗುತ್ತಿರುವುದು ನಿಜವೇ?

ಇ. ನಿಜವಾಗಿದ್ದಲ್ಲಿ ಆ ಕುರಿತಾದ ಸರ್ಕಾರದ ಮುಂಜಾಗ್ರತಾ ಕ್ರಮಗಳೇನು ?

ಈ. ನಕ್ಸಲ್ ವಾದಕ್ಕೆ ಪ್ರತ್ಯಕ್ಷ–ಪರೋಕ್ಷ ಬೆಂಬಲ ನೀಡುತ್ತಿರುವ ಅಧಿಕಾರಿಗಳು, ಆಧ್ಯಾಪಕರುಗಳು ಇದ್ದಾರೆಂಬ ವಿಚಾರವನ್ನು ಸರ್ಕಾರ ಗಮನಿಸಿದೆಯೇ?

ಉ. ಗಮನಿಸಿದ್ದಲ್ಲಿ ಈ ಕುರಿತಾದ ಕಟ್ಟುನಿಟ್ಟಿನ ಕ್ರಮ ನಿಯಮಗಳೇನು ?

ಊ. ಬಹಿರಂಗವಾಗಿ ನಕ್ಸಲ್ ವಾದವನ್ನು ಬೆಂಬಲಿಸಿ ಪ್ರೋತ್ಸಾಹಿಸುತ್ತಿರುವ ಕೆಲವು ಜನರ ಕುರಿತು ಸರ್ಕಾರ ಯಾವ ಕ್ರಮವನ್ನು ಜರುಗಿಸಿದೆ ?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಯವರು) :

ಅ. ರಾಜ್ಯದಲ್ಲಿ ಹಬ್ಬುತ್ತಿರುವ ನಕ್ಸಲೀಯ ಚಟುವಟಿಕೆಗಳ ಸಮಸ್ಯೆಗಳನ್ನು ನಿಗ್ರಹಿಸಲು ಸರ್ಕಾರವು ಎರಡು ವಿಧಾನಗಳಲ್ಲಿ ಕ್ರಮ ಕೈಗೊಂಡಿರುತ್ತದೆ. ನಕ್ಸಲ್ ಸಮಸ್ಯೆವಿರುವ ಜಾಗಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಲ್ಲದೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಪೊಲೀಸ್ ದಳವನ್ನು ಬಲಪಡಿಸಲಾಗಿದೆ. ನಕ್ಸಲೀಯ ಚಟುವಟಿಕೆವಿರುವ ಮಲೆನಾಡು ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ 23 ಕೋಟಿ ರೂಪಾಯಿ ಪ್ಯಾಕೇಜನ್ನು ಸರ್ಕಾರವು ನೀಡಿರುತ್ತದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಗುಪ್ತ ಮಾಹಿತಿಗಳನ್ನು ಸಂಗ್ರಹಿಸುವಿಕೆಯನ್ನು ಬಲಪಡಿಸಿದ್ದು ನಕ್ಸಲೀಯರ ಶೋಧನಾ ಕಾರ್ಯಾಚರಣೆ ಮುಂದುವರೆದಿದೆ.

ಆ. ಗುಪ್ತ ಮಾಹಿತಿ ವರದಿಗಳನ್ವಯ ಕೆಲವು ವ್ಯಕ್ತಿಗಳು ನಕ್ಸಲೀಯ ಸಿದ್ಧಾಂತಗಳಿಗೆ ಆಕರ್ಷಿಸಲು ಶಾಲಾ, ಕಾಲೇಜು, ಮತ್ತು ವಿದ್ಯಾರ್ಥಿ ವಸತಿ ನಿಲಯಗಳಿಗೆ ಭೇಟಿ ನೀಡುತ್ತಿರುವ ಬಗ್ಗೆ ಮಾಹಿತಿ ಲಭ್ಯವಾಗಿರುತ್ತದೆ.

ಇ. ಇಂತಹ ಸ್ಥಳ ಮತ್ತು ವ್ಯಕ್ತಿಗಳ ಮೇಲೆ ನಿಗಾ ವಹಿಸಲಾಗಿದೆ.

ಈ. ಹೌದು.

ಉ. ಅಗತ್ಯವಾದ ಶಿಸ್ತಿನ ಮತ್ತು ಕಾನೂನಿನ ಅನ್ವಯ ಕ್ರಮಕ್ಕೈಗೊಳ್ಳಲು ಅಗತ್ಯವಾದ ಶಾಸನಬದ್ಧ ಮಾಹಿತಿಗಳನ್ನು ಸಂಗ್ರಹಿಸಲು ಕ್ರಮಕ್ಕೈಗೊಳ್ಳಲಾಗಿದೆ.

ಊ. ನಕ್ಸಲೀಯ ಚಟುವಟಿಕೆಗಳಲ್ಲಿ ಬಹಿರಂಗವಾಗಿ ದುಷ್ಕಾರ್ಯ ಮಾಡುವವರಿಗೆ ಒತ್ತಾಸೆ ಕೊಡುವಂತಹ ವ್ಯಕ್ತಿಗಳ ವಿರುದ್ಧ ಕಾನೂನಿನ ಅನ್ವಯ ಕ್ರಮ ಕೈಗೊಳ್ಳಲಾಗಿದೆ. (The Unlawful Acitivities (Prevention) Amendment Act, 2004 ಪ್ರಕಾರ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.

1595 (1885) ಶ್ರೀ ಕೃಷ್ಣಮೂರ್ತಿ ಕೆ. ಎಂ. (ಕಡೂರು) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ. ಚಿಕ್ಕಮಗಳೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿನ "ಕಡೂರು ಬಸ್ಸು ಡಿಪೋಗೆ" ಯಾವುದೇ ಸಾರಿಗೆ ನೀಡಿರುವುದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ. ಡಿಪೋ ಪ್ರಾರಂಭವಾದ ನಂತರ ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಹೊಸ ಮಾರ್ಗ ಮಾಡಲಾಗಿದೆ ;

ಇ. ಈ ಮಾರ್ಗದಲ್ಲಿ ಎಷ್ಟು ಬಸ್ಸುಗಳು ಓಡಾಡುತ್ತಿವೆ, ಎಷ್ಟು ಮಾರ್ಗಗಳು ನಿಲುಗಡೆಯಾಗಿವೆ, ಬಸ್ಸುಗಳು ನಿಲುಗಡೆ ಆಗಿರುವುದಕ್ಕೆ ಕಾರಣವೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ಇಲ್ಲ.

ಆ. 23.

ಇ. 23 ಅನುಸೂಚಿಗಳು (ಬಸ್ಸುಗಳು) ಕಾರ್ಯಾಚರಣೆಯಾಗುತ್ತಿವೆ. ಇವುಗಳ ಪೈಕಿ 7 ಅನುಸೂಚಿಗಳನ್ನು (ಬಸ್ಸುಗಳನ್ನು) ಸಾರಿಗೆಯ ಆದಾಯದ ಕೊರತೆಯಿಂದಾಗಿ ರದ್ದುಗೊಳಿಸಲಾಗಿದೆ.

1596 (1886) ಶ್ರೀ ಕೃಷ್ಣಮೂರ್ತಿ ಕೆ. ಎಂ. (ಕಡೂರು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಹೆಬ್ಬೆ ಜಲಪಾತ ಯೋಜನೆಗೆ 2005–06 ನೇ ಸಾಲಿನ ಆಯವ್ಯದಲ್ಲಿ ಎಷ್ಟು ಹಣ ನೀಡಲು ಸರ್ಕಾರ ತೀರ್ಮಾನಿಸಿದೆ ?

ಆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ತಾಂತ್ರಿಕವಾಗಿ ಒಪ್ಪಿಗೆ ನೀಡಲಾಗಿದೆಯೆ?

ಅ. ಹೆಬ್ಬೆ ಜಲಪಾತ ಯೋಜನೆಗೆ 2005–06 ನೇ ಸಾಲಿನ ಆಯವ್ಯಯದಲ್ಲಿ ಹಣವನ್ನು ಒದಗಿಸಿರುವುದಿಲ್ಲ.

ಆ. ತಾಂತ್ರಿಕ ಸಲಹಾ ಸಮಿತಿಯು ದಿನಾಂಕ : 2–12–2004 ರಂದು ನಡೆದ 79ನೇ ಸಭೆ ಹಾಗೂ 21–2–2005ರಂದು ನಡೆದ 80ಸನೇ ಸಭೆಯಲ್ಲಿ ಯೋಜನಾ ವರದಿಯನ್ನು ಪರಿಶೀಲಿಸಿದೆ. ತಾಂತ್ರಿಕ ಸಲಹಾ ಸಮಿತಿಯು ನೀಡಿರುವ ಮಾರ್ಗ ಸೂಚಿಗಳನುಸಾರ ವರದಿಯನ್ನು ಪರಿಷ್ಕರಿಸಿ ಎಂ.ಐ.ಪಿ.ಸಿ. ಬೋರ್ಡ್ ಮುಂದೆ ಮಂಡಿಸಲು ಕ್ರಮ ಜರುಗಿಸಲಾಗುತ್ತಿದೆ. ಅಂಗೀಕೃತವಾದ ವಿಧಿ ವಿಧಾನಗಳನ್ನು ಪೂರೈಸಿದ ನಂತರ ಯೋಜನೆಗೆ ಸಕ್ಷಮ ಪ್ರಾಧಿಕಾರವು ತಾಂತ್ರಿಕ ಒಪ್ಪಿಗೆ ನೀಡಬೇಕಾಗಿರುತ್ತದೆ.

1597 (2033) ಶ್ರೀ ಎಂ.ಟಿ.ಕೃಷ್ಣಪ್ಪ ಎಂಎಲ್ ಎ (ತುರುವೇಕೆರೆ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಗಂಗಾರಾಮ್ ಕಟ್ಟಡ ದುರಂತದಲ್ಲಿ ಸತ್ತವರ ಸಂಖ್ಯೆ ಎಷ್ಟು ; (ವಿವರ ನೀಡುವುದು);

ಆ. ಈ ದುರಂತದಲ್ಲಿ ಮಡಿದ ವಾರುಸದಾರರಿಗೆಲ್ಲ ಪರಿಹಾರ ನೀಡಲಾಗಿದೆಯೇ ;

ಇ. ಇದುವರೆಗೆ ನೀಡಲಾಗಿರುವ ಪರಿಹಾರದ ಮೊತ್ತವೆಷ್ಟು (ವ್ಯಕ್ತಿವಾರು ಮತ್ತು ಮೊತ್ತವಾರು ವಿವರಗಳನ್ನು ನೀಡುವುದು) ;

ಈ. ಇನ್ನು ಎಷ್ಟು ಜನರಿಗೆ ಪರಿಹಾರ ನೀಡಬೇಕಾಗಿದೆ ;

ಉ. ಇದನ್ನು ಯಾವ ರೀತಿ ವಿತರಿಸಲಾಗುವುದು ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ. 118.

(ಮಡಿದ ವ್ಯಕ್ತಿಗಳ ಪಟ್ಟಿಯನ್ನು ಅನುಬಂಧ– 'ಅ' ನಲ್ಲಿ ಲಗತ್ತಿಸಿದೆ).

ಆ. ಹೌದು

ಇ. ಮರಣ ಹೊಂದಿದ ವ್ಯಕ್ತಿಗಳಿಗೆ ರೂ. 2,000/– ರಂತೆ ಮತ್ತು ಗಾಯಗೊಂಡವರಿಗೆ ರೂ.500/– ರಂತೆ ಹಾಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪ್ರತಿಯೊಬ್ಬ ಮರಣ ಹೊಂದಿದ ವ್ಯಕ್ತಿಯ ವಾರಸ್ಸುದಾರರಿಗೆ ರೂ.5,000/– ಗಳನ್ನು ಮತ್ತು ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ ರೂ.2,500/– ಗಳನ್ನು ನೀಡಲಾಗಿದ್ದು, ಒಟ್ಟು ರೂ.2,91,500/– ಗಳನ್ನು ಪರಿಹಾರವಾಗಿ ನೀಡಲಾಗಿದೆ.

ಈ. ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ 16.17 ಲಕ್ಷ ರೂ.ಗಳನ್ನು ಮೃತರ ವಾರಸುದಾರರಿಗೆ ಹಾಗೂ ಗಾಯಗೊಂಡವರಿಗೆ ಕ್ರಮವಾಗಿ ತಲಾ 12,000 ರೂ. ಹಾಗೂ 3,000 ರೂ. ಗಳಂತೆ ನೀಡಬೇಕಾಗಿರುತ್ತದೆ.

ಉ. ದುರಂತ 20 ವರ್ಷಗಳ ಹಿಂದೆ ಆಗಿದ್ದು, ದುರಂತಕ್ಕೆ ಈಡಾದವರ ಮತ್ತು ವಾರಸುದಾರರ ವಿವರಗಳನ್ನು ಪಡೆಯಲು ಪತ್ರಿಕಾ ಪ್ರಕಟಣೆ ಹೊರಡಿಸಿ, ವಿವರಗಳನ್ನು ಸಂಗ್ರಹಿಸಿದ ನಂತರ ಕರ್ನಾಟಕ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್‌ರವರ ಮೂಲಕ ಪರಿಹಾರವನ್ನು ವಿತರಿಸಲು ಕ್ರಮವಹಿಸಲಾಗುತ್ತಿದೆ.

ANNEXURE-1

Sl.No.	Name	Sex	Age/Years	Date of P.M
1.	Smt. Basamma	F	50	13.09.1983
2.	Chandrappa	M	25	"
3.	Nazaeer	M	20	"
4.	Venugopala Naidu	M	60	"
5.	Rajagopalachary	M	45	"
6.	Jana	M	22	"
7.	A. Narayanamurthy	M	18	14.09.1983
8.	Hanumantharaju	M	48	"
9.	Muniswamy	M	17	"
10.	K. Ravi	M	20	"
11.	Not Known	M	30to35	15.09.1983
12.	Ramalingam	M	48	"
13.	Notknown	M	40	"
14.	K.S.Harish	M	33	16.09.1983
15.	Irichammal	F	40	"
16.	Hakeem	M	42	"
17.	Nataraju	M	19	17.09.1983
18.	Not Known	M	30	"
19.	Not Known	M	28	"
20.	Ala Naik	M	33	18.09.1983

1	2	3	4	5
21.	Saroja	F	40	"
22.	Lalithamma	F	19	19.09.1983
23.	Jali Ramesh	F	26	18.09.1983
24.	Doreraju	M	25	19.09.1983
25.	Chakravarthi	M	18	20.09.1983
26.	P. Ayyakan	M	45	21.09.1983
27.	Shankar	M	25	"
28.		F	25	"
29.	Unknown	F	35	22.09.1983
30.	Markandan	M	25	22.09.1983
31.	Unknown	M	25	25.09.1983
32.	Unknown	M	26	28.09.1983
33.	J. Puttaswamy	M	24	25.09.1983
34.	Mohamud Osman	M	45	26.09.1983
35.	Siddamma	F	50	"
36.	Gangamma	F	35	22.09.1983
37.	Unknown	M	24	"
38.	R.Dayalan	M	17	"
39.	Francis Lavicer	M	26	23.09.1983
40.	Puttaswamy	M	25	"

1.	2	3	4	5
41.	Unknown	M	30	27.09.1983
42.	Unknown	F	35 to 40	"
43.	Lakshmi	F	18	"
44.	Rajamani	M	17	28.09.1983
45.	Venkataramana	M	24	"
46.	Ramamurthy	M	18	"
47.	Annamalai	M	16	"
48.	Mallappa	M	50	"
49.	Kannan	M	35	"
50.	Shantha	F	21	"
51.	Lalithamma	F	22	29.09.1983
52.	Janaki Kumair	F	25	"
53.		F	19	"
54.		M	20	"
55.	Maneyamma	F	25	"
56.	Neelamma Jabkappa	F	30	"
57.		M	50	"
58.	Unknown	M	9 days	"
59.	E.Murthy	M	23	"
60.	Devamma	F	32	"

1	2	3	4	5
61.	Thamarakshan	M	22	30.09.1983
62.	Ganesh	M	60	"
63.	Ravi	M	18	30.09.1983
64.	Yashodamma	F	58	"
65.	Sharanswamy	M	26	"
66.	Unknown	F	35	"
67.	Kalpana	F	24	"
68.	Muniswamy	M	30	01.10.1983
69.	Banaiyamma	F	16	"
70.	Gangamma	F	30	"
71.	Kariyamma	F	21	"
72.	Tangavelu	M	20	"
73.	Unknown	F	20	"
74.	Unknown	-	-	"
75.	Chaluvaiah	M	22	"
76.	Fhakruddin	M	22	22.10.1983
77.		M	40	01.10.1983
78.	B.K.Hemalatha	F	17	03.10.1983
79.	K. Darid Mani	M	27	"
80.	... @ Harnathunissa	F	20	05.10.1983

1	2	3	4	5
81.	E. Ganeash	M	22	"
82.	Unknown	M	30	"
83.	Unknown	M	25to30	"
84.	Nataraja	M	35	"
85.	Jayalakshmi	F	21	"
86.	-	F	18	"
87.	Unknown	M	22to25	"
88.	Mahendra Rao	M	32	06.10.1983
89.	Muniswamy Naidu	M	40	07.10.1983
90.	Mani	M	24	"
91.	R. Anand	M	22	"
92.	C.V. Chandrashekar	M	27	"
93.	Vibhakar	M	48	"
94.	Vijay Ramu S.R	M	27	"
95.	Unknown	M	24	08.10.1983
96.	Unknown	F	20	08.10.1983
97.	H.K.Padmavathamma	F	26	"
98.	Vasanatha	F	22	09.10.1983
99.	Unknown	M	25	08.10.1983
100.	Mani	M	27	"

1	2	3	4	5
101	Unknown	M	25	"
102	B.N.Jayakumar	M	24	09.10.1983
103	L. Lalitha	F	27	"
104	K.G. Hemalatha	F	24	"
105	Padma	F	23	10.10.1983
106	Muniyamma	F	28	"
107	Prakash Babu	M	22	10.10.1983
108	Basamma	F	40	"
109	Devamma	F	35	"
110	Geneshan K	M	20	"
111	K. Selvam	M	27	"
112	Alageshan	M	6 months	"
113	Devi Prasad	M	33	11.10.1983
114	K.M.Medappa	M	50	"
115	Ashok Chabria	M	22	"
116	Subhadramma	F	24	12.10.1983
117	Nataraju	M	30	13.10.1983
118	Parvathamma	F	20	08.10.1983

1598(2034) ಶ್ರೀ ಕೃಷ್ಣಪ್ಪ. ಎಂ.ಟಿ. (ತುರುವೇಕೆರೆ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಟೌನ್ ಮುನಿಸಿಪಾಲಿಟಿ ಮತ್ತು ಪಟ್ಟಣ ಪಂಚಾಯತಿ ಪ್ರದೇಶಗಳ ಅಭಿವೃದ್ಧಿಗಾಗಿ ಕೈಗೊಂಡಿರುವ ವಿಶೇಷ ಕ್ರಮಗಳೇನು ;

2. ಈ ಉದ್ದೇಶಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ, ವೆಚ್ಚ ಮಾಡಿದ ಹಣವೆಷ್ಟು ;

3. ಈ ಎಲ್ಲಾ ಪ್ರದೇಶಗಳನ್ನು ಒಳಚರಂಡಿ ವ್ಯವಸ್ಥೆಗೆ ಒಳಪಡಿಸಲು ಬೇಕಾಗುವ ಹಣವೆಷ್ಟು ಹಾಗೂ ಯಾವಾಗ ಈ ಕಾರ್ಯವನ್ನು ಮಾಡಲಾಗುವುದು ?

ಶ್ರೀ. ಎಸ್. ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.):

1. 11 ನೇ ಹಣಕಾಸು ಯೋಜನೆಯಡಿಯಲ್ಲಿ ಪ್ರತಿವರ್ಷ ಪ್ರತಿ ಟೌನ್ ಮುನಿಸಿಪಾಲಿಟಿಗೆ ರೂ. 18.00 ಲಕ್ಷ ಮತ್ತು ಪಟ್ಟಣ ಪಂಚಾಯತಿಗೆ ರೂ.11.03 ಲಕ್ಷ ವಿಶೇಷ ಯೋಜನೆಗಳಿಗಾಗಿ 5 ವರ್ಷಗಳ ಕಾಲ ಒದಗಿಸಲಾಗುತ್ತಿದೆ.

ವಿಶೇಷ ಯೋಜನೆಗಳು ಈ ಕೆಳಕಂಡಂತಿವೆ.

1. ರಸ್ತೆ ರಿಪೇರಿ
2. ನೀರಿನ ಸೌಕರ್ಯ ಕಲ್ಪಿಸುವುದು
3. ಆರೋಗ್ಯ ಸುಧಾರಣೆ, ಇತ್ಯಾದಿ.

2. ಪ್ರತಿ ಟೌನ್ ಮುನಿಸಿಪಾಲಿಟಿಗೆ ರೂ. 54.00 ಲಕ್ಷ ಪ್ರತಿ ಪಟ್ಟಣ ಪಂಚಾಯತಿಗೆ ರೂ. 33.09 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

3. ಪ್ರತಿ ನಗರ ಸ್ಥಳೀಯ ಸಂಸ್ಥೆಗೆ ಅಂದಾಜು ರೂ. 2.50 ರಿಂದ 3.00 ಕೋಟಿಗಳು ಬೇಕಾಗುತ್ತದೆ.

ಸಮರ್ಪಕ ನೀರು ಸರಬರಾಜು ವ್ಯವಸ್ಥೆ ಇರುವ ಕಡೆ ಮಾತ್ರ ಈ ಯೋಜನೆ ಯಶಸ್ವಿಯಾಗುತ್ತದೆ. ಒಳಚರಂಡಿ ವ್ಯವಸ್ಥೆಯನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಂತ ಹಂತವಾಗಿ ಹಮ್ಮಿಕೊಳ್ಳಲಾಗುವುದು.

1599(2007) ಶ್ರೀ. ಕ್ಯಾತ್‌ಸಂದ್ರ ಎನ್.ರಾಜಣ್ಣ (ಬೆಳ್ಳಾವಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಕಾವೇರಿ ನೀರಾವರಿ ನಿಗಮದ ವತಿಯಿಂದ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ತೆಗೆದು ಕೊಂಡಿರುವ ಕಾಮಗಾರಿಗಳ ಬಾಕಿ ಬಿಲ್ಲುಗಳ ಮೊತ್ತವೆಷ್ಟು; (ಕಳೆದ ಮೂರು ವರ್ಷವಾರು ವಿವರ ನೀಡುವುದು) ;

ಆ. ತುಮಕೂರು ಜಿಲ್ಲೆಯಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ತೆಗೆದು ಕೊಂಡಿರುವ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಸ್ಥಗಿತಗೊಂಡಿರುವ ಕಾಮಗಾರಿಗಳನ್ನು ಮುಗಿಸಲು ಸರ್ಕಾರಕ್ಕೆ ಬೇಕಿರುವ ಕಾಲಾವಕಾಶವೆಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. ಕಾವೇರಿ ನೀರಾವರಿ ನಿಗಮದಡಿ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳ ವರ್ಷಾವಾರು (ಕಳೆದ ಮೂರು ವರ್ಷಗಳ) ಬಾಕಿ ಬಿಲ್ಲುಗಳ

ಮೊತ್ತದ ವಿವರಗಳು ಕೆಳಕಂಡಂತಿವೆ. (ರೂ. ಲಕ್ಷಗಳಲ್ಲಿ)

ಆರ್ಥಿಕ ವರ್ಷ	ಬಾಕಿ ಬಿಲ್ಲು
2002-03	ರೂ. 2182.46
2003-04	ರೂ. 3367.43
2004-05	ರೂ. 3921.58

ಆ. ನೀರಾವರಿ ಸಾಮರ್ಥ್ಯ ಕಲ್ಪಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಲೈನಿಂಗ್ ಇತ್ಯಾದಿ ಕಾಮಗಾರಿಗಳನ್ನು ಅನುದಾನ ಲಭ್ಯತೆಗೆ ಅನುಗುಣವಾಗಿ ಆದ್ಯತೆ ಮೇಲೆ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಇ. ಈ ವಲಯದ ಯೋಜನಾ ಕಾಮಗಾರಿಗಳನ್ನು ಅನುದಾನ ಲಭ್ಯತೆಗೆ ಅನುಗುಣವಾಗಿ ಪೂರ್ಣಗೊಳಿಸಲಾಗುವುದು. ಪ್ರಸ್ತುತ ಎಲ್ಲಾ ಯೋಜನಾ ಕಾಮಗಾರಿಗಳನ್ನು 2010-11 ನೇ ಸಾಲಿಗೆ ಪೂರ್ಣಗೊಳಿಸುವ ಕಾರ್ಯಕ್ರಮವಿರುತ್ತದೆ.

1600(2008) ಶ್ರೀ ಕ್ಯಾತ್‌ಸಂದ್ರ ಎನ್.ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಜನಸಂದಣಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ಹೆಚ್ಚುತ್ತಿರುವ ಜನಸಂದಣಿ ತಡೆಗಟ್ಟಲು ನಗರದ ಹೊರವಲಯಗಳಲ್ಲಿ ಉಪನಗರಗಳನ್ನು ನಿರ್ಮಿಸುವ ಯೋಜನೆಗಳು ಸರ್ಕಾರದ ಮುಂದೆ ಇದೆಯೇ? ಹಾಗಿದ್ದಲ್ಲಿ, ಎಲ್ಲೆಲ್ಲಿ ಉಪನಗರಗಳನ್ನು ನಿರ್ಮಿಸಲಾಗುವುದು?

ಇ. ಈ ಉಪನಗರಗಳ ನಿರ್ಮಾಣಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವ ಯಾವ ಹಂತದಲ್ಲಿವೆ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಯವರು) :

ಅ. ಹೌದು

ಆ. ಇಲ್ಲಿ ಆದಕಾರಣ ಉಪನಗರಗಳ ನಿರ್ಮಾಣದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

1601 (2009) ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ತುಮಕೂರು ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆಗಾಗಿ ಗುರುತಿಸಲಾದ ಕೆರೆಗಳಾವುವು;

ಆ. ಇವುಗಳಲ್ಲಿ ಎಷ್ಟು ಕೆರೆಗಳನ್ನು ಮೀನುಗಾರಿಕೆಗೆ ಗುತ್ತಿಗೆ ನೀಡಲಾಗಿದೆ; ವಿಧಾನಸಭಾ ಕ್ಷೇತ್ರವಾರು ಗುತ್ತಿಗೆದಾರರ ವಿವರ ನೀಡುವುದು?

ಶ್ರೀ ಧರ್ಮ್‌ಸಿಂಗ್ (ಮುಖ್ಯ ಮಂತ್ರಿಗಳು) :

ಅ. ತುಮಕೂರು ಜಿಲ್ಲೆಯಲ್ಲಿ ಮೀನುಗಾರಿಕೆಗಾಗಿ ಗುರುತಿಸಿದ ಕೆರೆಗಳು 451 (ವಿವರಗಳನ್ನು ಅನುಬಂಧ-I ರಲ್ಲಿ ನೀಡಲಾಗಿದೆ.

ಆ. 20 ಕೆರೆಗಳನ್ನು ಗುತ್ತಿಗೆಗೆ ನೀಡಲಾಗಿದ್ದು ವಿವರಗಳನ್ನು ಅನುಬಂಧ-II ರಲ್ಲಿ ನೀಡಲಾಗಿದೆ.

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ, ವಿಧಾನ ಸಭಾ ಸದಸ್ಯರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. 2009ಕ್ಕೆ.

ಅನುಬಂಧ-1

ತುಮಕೂರು ಜಿಲ್ಲೆಯಲ್ಲಿ ಮೀನುಗಾರಿಕೆಗೆ ಗುರುತಿಸಲಾದ 40 ಹೆ ಅಚ್ಚುಕಟ್ಟು ಮೇಲ್ಪಟ್ಟ ಇಲಾಖಾ ಕೆರೆಗಳ ವಿವರ

ತಿಪಟೂರು ತಾಲ್ಲೂಕು ಚಿಕ್ಕನಾಯಕನಹಳ್ಳಿ ತಾಲ್ಲುಕು

ಕ್ರ.ಸಂ	ಕೆರೆಯ ಹೆಸರು	ಕ್ರ.ಸಂ	ಕೆರೆಯ ಹೆಸರು	ಕ್ರ.ಸಂ	ಕೆರೆಯ ಹೆಸರು
1	ಅನಿವಾಳ ಕೆರೆ	17	ಶಿವರದೊಡ್ಡಕೆರೆ	33	ಚಿಕ್ಕಣ್ಣಗೆರೆ ಊರಮುಂದಿನ ಕೆರೆ
2	ಬಡಗಿ ಹೊನ್ನವಳ್ಳಿ ಕೆರೆ	18	ತಡಸೂರು ಕೆರೆ	34	ಪಂಕಜನಹಳ್ಳಿ ಕೆರೆ
3	ಬಜಗೂರು ಕೆರೆ	19	ತಿಪಟೂರು ಕೆರೆ	35	ಹೊಸಹಳ್ಳಿ ಸೀಡ್ಯಾಕೆರೆ
4	ಬೆಸಗಿಗೌಡನ ಕಟ್ಟೆ	20	ವಿಘ್ನಸಂತೆ ಕೆರೆ	36	ಶೆಟ್ಟಿಕೆರೆ ದೊಡ್ಡಕೆರೆ
5	ಈಚನೂರು ಕೆರೆ	21	ಬೆಸಗಿಗೌಡನಕಟ್ಟೆ ಕೆರೆ	37	ನವಿಲೆ ಕೆರೆ
6	ಗಂಗನಘಟ್ಟ ದೊಡ್ಡಕೆರೆ	22	ಜಾಬಘಟ್ಟ ಕೆರೆ	38	ಸೋರಲಯಾವು ದೊಡ್ಡಕೆರೆ
7	ಹೊನ್ನವಳ್ಳಿ ಹೊಸಕೆರೆ	23	ಗಂಗನಘಟ್ಟ ಚಿಕ್ಕಕೆರೆ	39	ಹಂದನಕೆರೆ ಕೆರೆ
8	ಹೊನ್ನವಳ್ಳಿ ಹಿರೇಕೆರೆ	24	ಆಲೂರು ಕೆರೆ	40	ಗೋಪಾಲಪುರ ಅದರಗಲ್ ದೊಡ್ಡಕೆರೆ
9	ಹಾಲ್ಕುರಿಕೆ ಕೆರೆ	25	ಬೆಳಗರಹಳ್ಳಿ ಕೆರೆ	41	ಹುಳಿಯಾರು ಅಮಾನಿಕೆರೆ
10	ಕನ್ನಘಟ್ಟ ದೊಡ್ಡಕೆರೆ	26	ಚೆನ್ನಾಯಕನಹಳ್ಳಿ ಕೆರೆ	42	ಭಾವನಹಳ್ಳಿ ದುರ್ಗದಕೆರೆ
11	ಕರಡಾಳು ದೊಡ್ಡಕೆರೆ	27	ಚೌಡ್ಲಾಪುರ ಕೆರೆ	43	ಮುದ್ದೇನಹಳ್ಳಿ ಮೇಲಿನ ಕೆರೆ
12	ಕರಡಿಕೆರೆ	28	ಗಂಜಲಘಟ್ಟ ಕೆರೆ	44	ಹೊಸಕೆರೆ ಕೆರೆ
13	ಕೈದಾಳು ಕೆರೆ	29	ಕೆರೆಗೋಡಿದೊಡ್ಡ ಕೆರೆ	45	ಬೆಳಗುಲಿ ಊರಮುಂದಿನ ಕೆರೆ
14	ಮೇಲಾಪುರ ಕೆರೆ	30	ಮಸವನಘಟ್ಟ ಕೋಣನ ಕೆಂ	46	ಚಿಕ್ಕಬಿದರೆ ಕೆರೆ
15	ನೊಣವಿನ ಕೆರೆ	31	ಹಿಂಡಸ್ಗರೆ ಕೆರೆ	47	ಸಾಲ್ಕಟ್ಟೆ ಸಾಗರ ಕೆರೆ
16	ಸಾಸಲುಹಳ್ಳಿ ಕೆರೆ	32	ನಡುವಿನಹಳ್ಳಿ ಬನ್ನಿಕೆರೆ	48	ಕಂದೀಕೆರೆ ಹಿರೇಕೆರೆ

1	2	3	4
49	ಕಂದೀಕೆರೆ ನೊಣವಿನಕೆರೆ	70	ಸಾರಿಗೆಹಳ್ಳಿ ಕೆರೆ
50	ಸೋಮನಹಳ್ಳಿ ಗಾಣದಾಳ ಕೆರೆ	71	ಕಂಡಗಕೆರೆ
51	ಸಿಂಗದಹಳ್ಳಿ ಕೆರೆ	72	ಕಿಣಶೂರು
52	ಜೋಡಿತಿಮ್ಮಲಾಪುರ ಕೆರೆ	73	ವಡವನಘಟ್ಟ ಕೆರೆ
53	ದೇವರಮರಡಿ ಕೆರೆ	74	ಸೂಳೆಕೆರೆ ಕೆರೆ
54	ಗಂಚೇನಹಳ್ಳಿ ಕೆರೆ	75	ಸಂಪಿಗೆ ಕೆರೆ
55	ಸಿದ್ಧನಕಟ್ಟೆ ಕೆರೆ	76	ವೀರಸಾಗರ ಕೆರೆ
56	ಬೆಳವಾಡಿ ಚಿಕ್ಕಕೆರೆ	77	ಅಮ್ಮಸಂದ್ರ ಕೆರೆ
57	ಪೆಮ್ಮಲದೇವನಹಳ್ಳಿ ಕೆರೆ	78	ಕೊಂಡಜ್ಜಿಕೆರೆ
58	ಎಳೆಹಳ್ಳಿ ಹೊಸಕೆರೆ	79	ರಾಜನಾಯಕನ ಕೆರೆ
59	ಬಂಗಾರಕೆರೆ ಕೆರೆ	80	ತುಯ್ಯಲಹಳ್ಳಿ ಕೆರೆ
60	ಮಲ್ಲಿಗೆರೆ ಕೆರೆ	81	ಕುರುಬರಹಳ್ಳಿ ಕೊಪ್ಪಕೆರೆ
61	ಬೆಳ್ಳಾರ ಕೆರೆ	82	ಕುಣಿಕೇನಹಳ್ಳೀ ಕೆರೆ
62	ವೀರಶೆಟ್ಟಿ ಮಂದಿಹಳ್ಳಿ ಕೆರೆ	83	ಹೊಸಹಳ್ಳಿ ಕೆರೆ
63	ಮುದ್ದೇನಹಳ್ಳಿ ಊರಮುಂದಿನ ಕೆರೆ	84	ದೊಡ್ಡಶೆಟ್ಟಿ ಕೆರೆ
	ತುರುವೇಕೆರೆ ತಾಲ್ಲೂಕು	85	ಕೋಳಾಲ ಕೆರೆ
64	ಮಾಯಸಂದ್ರ ಕೆರೆ	86	ಬೊಮ್ಮನಹಳ್ಳಿಕೆರೆ (ಬಾಣಸಂದ್ರ)
65	ಜಡೆಯಾ ಕೆರೆ	87	ಸಂಪಿಗೆ ಹೊಸಹಳ್ಳಿ ಕೆರೆ
66	ಗೊಟ್ಟಿಕೆರೆ ಕೆರೆ		
67	ನಾಗಲಾಪುರ ದೊಡ್ಡಕೆರೆ		
68	ಮಲ್ಲಾಘಟ್ಟ ಕೆರೆ		
69	ತುರುವೇಕೆರೆ ಕೆರೆ		

ಗುಬ್ಬಿ ತಾಲ್ಲೂಕು				ಕೊರಟಗೆರೆ ತಾಲ್ಲೂಕು	
ಕ್ರ.ಸಂ	ಕೆರೆಯ ಹೆಸರು	ಕ್ರ.ಸಂ	ಕೆರೆಯ ಹೆಸರು	ಕ್ರ.ಸಂ.	ಕೆರೆಯ ಹೆಸರು
88	ಮಾವಿನಹಳ್ಳಿ ಕೆರೆ	107	ಬೆಲವತ್ತಕೆರೆ	127	ಕೊಪ್ಪಕೆರೆ
89	ಚಂಗಾವಿ ಕೆರೆ	108	ಮೂಕನಹಳ್ಳಿ ಪಟ್ಟಣಕೆರೆ	128	ಮಠದಹಳ್ಳಿ ಕೆರೆ
90	ಗುಡ್ಡೇನಹಳ್ಳಿ ಕೆರೆ	109	ದೊಡ್ಡನಿಟ್ಟೆ ಗುಟ್ಟೆಕೆರೆ	129	ಬ್ಯಾಡಕೆರೆ
91	ಹೂವಿನಕಟ್ಟೆ ಕೆರೆ	110	ಲಕ್ಕೇನಹಳ್ಳಿ ಕೆರೆ	130	ಅಮ್ಮನಹಳ್ಳಿ ಕೆರೆ
92	ಸಿ.ಎಸ್. ಪುರ ಕೆರೆ	111	ಅಡಿಕೆ ಕೆರೆ	131	ಶೆಟ್ಟಿಹಳ್ಳಿ ಚಿಕ್ಕಕೆರೆ
93	ಕಲ್ಲೂರು ಕೆರೆ	112	ನಿಟ್ಟೂರು ಅಮಾನಿಕೆರೆ	132	ಹೇಮಾದ್ರಿ ಕೆರೆ
94	ಪ್ರಭುವನಹಳ್ಳಿ ಕೆರೆ	113	ಬೆಣ್ಣೂರು ಅಮಾನಿಕೆರೆ	133	ಜೆ. ಹೊಸಹಳ್ಳಿ ಕೆರೆ
95	ಹೊನ್ನಶೆಟ್ಟಿಹಳ್ಳಿ ಕೆರೆ	114	ಕಗ್ಗೆರೆ ಕೆರೆ	134	ನೆಟ್ಟೆಕೆರೆ
96	ಇಡಗೂರು ಕೆರೆ	115	ತ್ಯಾಗಟೂರು ಅಮಾನಿಕೆರೆ	135	ಗುಡಿಕೆರೆ ಕೆರೆ
97	ಹಾಗಲವಾಡಿ ಕೆರೆ	116	ಅದಲಗೆರೆ ಕೆರೆ	136	ಕಟ್ಟೆಗೇನಹಳ್ಳಿ ಗರವನಕೆರೆ
98	ಚೇಳೂರು ಅಮಾನಿಕೆರೆ	117	ಗುಬ್ಬಿ ಹೆರೂರು ಕೆರೆ	137	ಬಿಳಿಗೆರೆ ಕೆರೆ
99	ಚೇಳೂರು ಅಲಸಿನಕೆರೆ	118	ಬಿದರೆ ಅಮಾನಿಕೆರೆ	138	ಅಡಗೂರು ಕೆರೆ
100	ಹೊಸಕೆರೆ ದೊಡ್ಡಕೆರೆ	119	ಗಳಗಬೆಟ್ಟ ಕೆರೆ	139	ಗಳಿಗೆ ಕೆರೆ
101	ಕಡಬ ಅಮಾನಿಕೆರೆ	120	ಅರೆಮಾರನಹಳ್ಳಿ ಕೆರೆ	140	ಹಿಂಡಸ್ಗೆರೆ ಕೆರೆ
102	ಗುಬ್ಬಿ ಅಮಾನಿಕೆರೆ	121	ಅಮ್ಮನಘಟ್ಟ ಕೆರೆ	141	ಕುರುಬರಹಳ್ಳಿ ಕೆರೆ
103	ಭೋಗಸಂದ್ರಕೆರೆ	122	ಅಳಲುಘಟ್ಟ ಅಮ್ಮನಕೆರೆ	142	ಅಮ್ಮನಘಟ್ಟ ಚಿಕ್ಕಕೆರೆ
104	ಅಳಲುಘಟ್ಟ	123	ಶೇಷೇನಹಳ್ಳಿ ಕೆರೆ	143	ಗಿಡದಮುದ್ದನಹಳ್ಳಿ ಕೆರೆ
	ಊರಮುಂದಿನಕೆರೆ	124	ವಡ್ಡರಕಟ್ಟೆ ಕೆರೆ	144	ನಾಗಸಂದ್ರ ಕೆರೆ
105	ಎಸ್. ಕೊಡಗಿನಹಳ್ಳಿ ಕೆರೆ	125	ಯಲಚಿಹಳ್ಳಿ ಕೆರೆ	145	ಮತ್ತಿಕೆರೆ ಕೆರೆ
106	ಗಳಗ ದೊಡ್ಡಕೆರೆ	126	ದೊಡ್ಡಕುನ್ನಾಲ ಕೆರೆ	146	ತ್ಯಾಗಟೂರು ಚಿಕ್ಕನಹಳ್ಳಿ ಕೆರೆ

1	2	3	4
148	ತಿಪ್ಪೂರು ದೊಡ್ಡಕೆರೆ	169	ಭೈರೇನಹಳ್ಳಿ ಹೊಸಕೆರೆ
149	ವದೆಲೂರು ಕೆರೆ	170	ಚಿಕ್ಕನಹಳ್ಳಿ ಕೆರೆ
150	ಮಲ್ಲೇಶ್ವರ ದೊಡ್ಡಕೆರೆ	171	ವಜ್ಜಿನಕುರಿಕೆ
151	ಮಾವತ್ತೂರು ಕೆರೆ	172	ಪಾತಗಾನಹಳ್ಳಿ ಕೆರೆ
152	ತಿಮ್ಮನಾಯಕನ ಹಳ್ಳಿ ಕೆರೆ	173	ಮೂಡಲಕೆರೆಪಾಳ್ಯ ಕೆರೆ
153	ಇರಕಸಂದ್ರಕಾಲೋನಿ ಕೆರೆ	174	ಹೊಸಕೋಟೆ ಕೆರೆ
154	ವೆಂಕಟಾಪುರ ಕೆರೆ	175	ಚನ್ನಪಟ್ಟಣದೊಡ್ಡನರಸಯ್ಯನಪಾಳ್ಯಕೆರೆ
155	ಯಲಚಿಗೆರೆ ಕೆರೆ	176	ನವಿಲುಕುದಿಕೆ ಕೆರೆ
156	ಕಾಟೇನಹಳ್ಳಿ ಹೊಸಕೆರೆ	177	ಬುಕ್ಕಾಪಟ್ಟಣ ನಾಗೇನಹಳ್ಳಿ ಕೆರೆ
157	ಮಾರಗೊಂಡನಹಳ್ಳಿ ಭಕ್ತರ ಕಟ್ಟೆಕೆರೆ	178	ತೋವಿನಕೆರೆ ಚಿಕ್ಕಕೆರೆ
158	ಅಗ್ರಹಾರ ಕೆರೆ	179	ಎತ್ತಗಾನಹಳ್ಳಿ ಹೊಸಕೆರೆ
159	ಗಟ್ಟಿಹಳ್ಳಿ ಕೆರೆ	180	ಬೈಚಾಪುರ ಕೆರೆ
160	ಮಣುವಿನಕುರಿಕೆ ಕೆರೆ	181	ಸೂರೇನಹಳ್ಳಿ ಕೆರೆ
161	ದಾಸಾಲುಕುಂಟೆ ಕೆರೆ		
162	ಕುರಿಹಳ್ಳಿ ಕೆರೆ		
163	ಮಲ್ಲೇಕಾವುಕೆರೆ		
164	ತುಂಬಾಡಿ ಹೊಸಕೆರೆ		
165	ಹುಲಿಕುಂಟೆ ದೊಡ್ಡಕೆರೆ		
166	ಚಿಕ್ಕವಳ್ಳಿ ಧರ್ಮಸಾಗರ ಕೆರೆ		
167	ಅಕ್ಕಿರಾಂಪುರ ಕೆರೆ		

ಕುಣಿಗಲ್ ತಾಲ್ಲೂಕು

ತುಮಕೂರು ತಾಲ್ಲೂಕು

ಕ್ರ.ಸಂ	ಕೆರೆಯ ಹೆಸರು	ಕ್ರ.ಸಂ	ಕೆರೆಯ ಹೆಸರು	ಕ್ರ.ಸಂ	ಕೆರೆಯ ಹೆಸರು
182	ದೀಪಾಂಬುದಿ ಕೆರೆ	201	ನೀಲತ್ತಹಳ್ಳಿ ಕಲ್ಯಾಣಿಕೆರೆ	219	ನಿಡಸಾಲೆ ಊರಮುಂದಿನಕೆರೆ
183	ಮುತ್ತುರಾಯನಕೆರೆ	202	ಕುಣಿಗಲ್ ಚಿಕ್ಕಕೆರೆ	220	ಸಂತೆಮಾವತ್ತೂರು ಕೆರೆ
184	ನಿಡಸಾರೆ ಹೊಸಕೆರೆ	203	ಕೊಡಗೀಹಳ್ಳಿ ಕೆರೆ	221	ಭಕ್ತರಹಳ್ಳಿ ಕೆರೆ
185	ಕೆ. ಹೊನ್ನಮಾಚನಹಳ್ಳಿ ಕೆರೆ	204	ಹಾಲಗೆರೆ ಕೆರೆ	222	ಕುರಡಿಹಳ್ಳಿ ಕೆರೆ
186	ಸಣಬಕೆರೆ	205	ಹುಲಿಯೂರು ದುರ್ಗ ಹೊಸಕೆರೆ	223	ಚಿಕ್ಕಮಳಲವಾಡಿಕೆರೆ
187	ಹೊಸಕೆರೆ ಕೆರೆ			224	ಹೊಸಹಟ್ಟಿ ಆಲನಕೆರೆ ಕೆರೆ
188	ಕೀಲಾರ ಕೆರೆ	206	ಹುತ್ರಿಕೆರೆ	225	ತಾವರೆಕೆರೆ ಕೆರೆ
189	ಹಳೇವೂರು ಕೆರೆ	207	ಹೊಸೂರು ಕೆರೆ	226	ನಾಗಲಾಪುರ ಕೆರೆ
190	ಅಮೃತೂರು ಕೆರೆ	208	ಅವರಗೆರೆ ಕೆರೆ	227	ಜಲಧಿಗೆರೆ ಕೆರೆ
191	ಬೇಗೂರು ಕೆರೆ	209	ಬೋರಸಂದ್ರ ಕೆರೆ		**ತುಮಕೂರು ತಾಲ್ಲೂಕು**
192	ಕಿನ್ನಾರಮಂಗಲ ಕೆರೆ	210	ಬಂಡಿಹಳ್ಳಿ ಊರಮುಂದಿನಕೆರೆ	228	ಗೌಡಿಹಳ್ಳಿ ಕೆರೆ
193	ಕುಣಿಗಲ್ ದೊಡ್ಡಕೆರೆ	211	ಮಾದಿಹಳ್ಳಿ ಹೊಸಕೆರೆ	229	ಹೊಸಕೆರೆ ಕೆರೆ
194	ಚೆನ್ನಾಗರ ಕೆರೆ	212	ಮನವಳ್ಳಿ ಕೆರೆ	230	ಮರಳೂರು ಅಮಾನಿಕೆರೆ
195	ಕೊತ್ತಗೆರೆ ಅಮಾನಿಕೆರೆ	213	ಕೊಪ್ಪಕೆರೆ	231	ಹೆಬ್ಬಾಕ ಅಮಾನಿಕೆರೆ
196	ಕಂದನಹಳ್ಳಿ ಅಮಾನಿಕೆರೆ	214	ನಾಗನಹಳ್ಳಿ ಕೆರೆ	232	ಊರುಕೆರೆ ಕೆರೆ
197	ಯಲಿಯೂರು ಕೆರೆ	215	ವಡಾಘಟ್ಟ ಕೆರೆ	233	ಅರಕೆರೆ ಕೆರೆ
198	ಬಂಡಿಹಳ್ಳಿಮಾನಾಯಕನ ಕೊಪ್ಪಲುಕೆರೆ	216	ನೆಟೆಮಾವನಪುರ ಕೆರೆ	234	ಕುಚ್ಚಂಗಿ ಕೆರೆ
199	ದೊಡ್ಡಮಧುರೆ ಕೆರೆ	217	ಚಿನವಾರ ಕೆರೆ	235	ಅದಲಾಪುರ ಕೆರೆ
200	ಅಮೃತೂರು ದೊಡ್ಡಕೆರೆ	218	ತೂಗನೂರು ಕೆರೆ	236	ಮೆಳೆಕೋಟೆ ಕೆರೆ

1	2	3	4	5	6
237	ಹೆಬ್ಬೂರು ಅಮಾನಿಕೆರೆ	257	ಸಾಸಲು ಕೆರೆ	277	ಚನ್ನೇನಹಳ್ಳಿ ಕೆರೆ
238	ಗೂಳೂರು ಅಮಾನಿಕೆರೆ	258	ನಾಗವಲ್ಲಿ ಅಮಾನಿಕೆರೆ	278	ಎಂ. ಗೊಲ್ಲಹಳ್ಳಿ ಕೆರೆ
239	ಮೈದಾಳ ಕೆರೆ	259	ಹೊನಸಗೆರೆ ಕೆರೆ	279	ಹೆತ್ತೇನಹಳ್ಳಿ ದೊಡ್ಡಕೆರೆ
240	ಕೆಸ್ತೂರು ಅಮಾನಿಕೆರೆ	260	ದೇವರಾಯ ಪಟ್ಟಣಕೆರೆ		
241	ನಾರವಂಗಲ ಅಮಾನಿಕೆರೆ	261	ಶೆಟ್ಟಿಹಳ್ಳಿ ಉತ್ತರಕಟ್ಟೆ		
242	ಬುಗುಡನಹಳ್ಳಿ ಅಮಾನಿಕೆರೆ	262	ಬೆಳಧರ ಕೆರೆ		
243	ಮಲ್ಲಸಂದ್ರ ಕೆರೆ	263	ಚಿಕ್ಕಗುಂಡಗಲ್ ಕೆರೆ		
244	ತುಮಕೂರು ಅಮಾನಿಕೆರೆ	264	ಕೆಸರುಮಡು ಜೋಗಿಕಟ್ಟೆ		
245	ಒಳಕಲ್ ಕಂಚುಗಲ್ ಕೆರೆ	265	ಕೋಳಿಹಳ್ಳಿ ಹೊಸಕೆರೆ		
246	ಕುಪ್ಪೂರು ಕೆರೆ	266	ಕೆಂಬಳಲು ಅಮಾನಿಕೆರೆ		
247	ಭೀಮಸಂದ್ರ ಕೆರೆ	267	ದುರ್ಗದಹಳ್ಳಿ ಹೊಸಕೆರೆ		
248	ಬೆಳ್ಳಾವಿ ಅಮಾನಿಕೆರೆ	268	ವೀರನಾಯ್ಕನಹಳ್ಳಿ ಕೆರೆ		
249	ಮುದಿಗೆರೆ ಕೆರೆ	269	ಕಣಕುಪ್ಪೆಕೆರೆ		
250	ಕೋರಾ ಅಮಾನಿಕೆರೆ	270	ಬಳ್ಳಗೆರೆ ಕೆರೆ		
251	ಬ್ರಹ್ಮಸಂದ್ರ ದೊಡ್ಡಕೆರೆ	271	ಬೇಗೂರು ಕೆರೆ		
252	ಚಿಕ್ಕತೊಟ್ಲುಕೆರೆ	272	ಗೂಳರಿವೆ ಕೆರೆ		
253	ಮಾವುಕೆರೆ ಕೆರೆ	273	ನೆಲಹಾಳ್ ಹೊಸಕೆರೆ		
254	ಹಿರೇಕೊಟ್ಲುಕೆರೆ	274	ಲಕ್ಷ್ಮಣಸಂದ್ರ ಅರಳಿಕಟ್ಟೆಕೆರೆ		
255	ದೇವರ ಅಮಾನಿಕೆರೆ	275	ಹೆಗ್ಗೆರೆ ಊರಮುಂದಿನಕೆರೆ		
256	ಹೊನ್ನುಡಿಕೆ ದೊಡ್ಡಕೆರೆ	276	ಟಿ. ಗೊಲ್ಲಹಳ್ಳಿಕೆರೆ		

ಮಧುಗಿರಿ ತಾಲ್ಲೂಕು

ಕ್ರ.ಸಂ	ಕೆರೆಯ ಹೆಸರು	ಕ್ರ.ಸಂ	ಕೆರೆಯ ಹೆಸರು	ಕ್ರ.ಸಂ	ಕೆರೆಯ ಹೆಸರು
280	ದೊಡ್ಡೇರಿಕೆರೆ	300	ಐ.ಡಿ.ಹಳ್ಳಿ ಕೆರೆ	320	ನಾಗೇನಹಳ್ಳಿ ಕೆರೆ
281	ರಂಗಾಪುರ ಕೆರೆ	301	ಕಡಗತ್ತೂರು ಕೆರೆ	321	ಕೂನಹಳ್ಳಿ ಕೆರೆ
282	ಕೆ.ಟಿ. ಹಳ್ಳಿಕೆರೆ	302	ತಿಪ್ಪಾಪುರ ಕೆರೆ	322	ಕಿತ್ತಗಳಿಕೆರೆ
283	ಸಿದ್ಧಾಪುರ ಕೆರೆ	303	ಓಬಳಾಪುರ ಕೆರೆ	323	ಗೂಬಲಗುಟ್ಟೆ ಕೆರೆ
284	ಚೋಳೇನಹಳ್ಳಿ ಕೆರೆ	304	ದೊಡ್ಡದಾಳವಟ್ಟಕೆರೆ	324	ಕವಣದಾಲ ಕೆರೆ
285	ಬಿಜವರ ಕೆರೆ	305	ತೊಂಡೋಟಿ ಕೆರೆ	325	ಕಂಬದಹಳ್ಳಿ ಕೆರೆ
286	ಅಗ್ರಹಾರ ದೊಡ್ಡಕೆರೆ	306	ನೇರಳೇಕರೆ ದೊಡ್ಡಕೆರೆ	326	ವಡೇರಹಳ್ಳಿ ಕೆರೆ
287	ಬಾಲ್ಯ ದೊಡ್ಡಕೆರೆ	307	ಹೊಸಕೆರೆ ದೊಡ್ಡಕೆರೆ	327	ಚಿನಕವಜ್ರ ಕೆರೆ
288	ಕೋಡ್ಲಾಪುರ ಚಿಕ್ಕಕೆರೆ	308	ಕಲಿದೇವಪುರ ದೊಡ್ಡಕೆರೆ	328	ಪುಟ್ಟೇನಹಳ್ಳಿ ಕೆರೆ
289	ಕೋಡ್ಲಾಪುರ ದೊಡ್ಡಕೆರೆ	309	ತಿಂಗಳೂರು ದೊಡ್ಡಕೆರೆ	329	ಕೋಡಗದಾಲ ದೊಡ್ಡಕೆರೆ
290	ಚಿಕ್ಕಮಾಲೂರು ಕೆರೆ	310	ಪೋಲೇನಹಳ್ಳಿ ಕೆರೆ	330	ನಿಟ್ರಹಳ್ಳಿ ಕೆರೆ
291	ದೊಡ್ಡಮಾಲೂರು ಕೆರೆ	311	ತೆರಿಯೂರು ದೊಡ್ಡಕೆರೆ	331	ಪುರವರ ಕೆರೆ
292	ಕೊಡಿಗೇನಹಳ್ಳಿ ಕೆರೆ	312	ಮೈದುನಹಳ್ಳಿ ದೊಡ್ಡಕೆರೆ	332	ದೊಡ್ಡಹೊಸಹಳ್ಳಿ ಕೆರೆ
293	ಸಿಂಗನಹಳ್ಳಿ ಕೆರೆ	313	ಬೇಡತ್ತೂರು ಕೆರೆ	333	ಗಂಜಲಗುಂಟೆ ಕೆರೆ
294	ಕೊಡಿಗೇನಹಳ್ಳಿ ದೊಡ್ಡಕೆರೆ	314	ಬಿದರಕೆರೆ ದೊಡ್ಡಕೆರೆ	334	ಮಲ್ಲೇನಹಳ್ಳಿ ಕೆರೆ
295	ಬೆಟ್ಟಗೆರೆ ಕೆರೆ	315	ಗುಂಡಗಲ್ ದೊಡ್ಡಕೆರೆ	335	ದೊಡ್ಡಮಾಲೂರು ಕೆರೆ
296	ಹುಣಸವಾಡಿ ದೊಡ್ಡಕೆರೆ	316	ರೆಡ್ಡಿಹಳ್ಳಿ ಕೆರೆ	336	ಅಕ್ಕಲಾಪುರ ಕೆರೆ
297	ಕೊಂಡವಾಡಿ ದೊಡ್ಡಕೆರೆ	317	ರಂಟವಳಲು ಕೆರೆ	337	ಪುಲಮಾಚಿ ದೊಡ್ಡಕೆರೆ
298	ಗರಣಿಕೆರ	318	ದೊಡ್ಡೇನಹಳ್ಳಿ ಕೆರೆ	338	ಪುಲಮಾಚಿ ಚಿಕ್ಕಕೆರೆ
299	ತಾಡಿ ಚಿಕ್ಕಕೆರ	319	ಅಡವಿನಾಗೇನಹಳ್ಳಿ ಕೆರೆ	339	ತಾಡಿ ದೊಡ್ಡಕೆರೆ

1	2	3.	4
340	ಯಕಾರ್ಲಹಳ್ಳಿ ಕೆರೆ	361	ಕಿತ್ತಗಳಿ ಕೆರೆ
341	ಲಕ್ಷ್ಮೀಪುರ ಕೆರೆ	362	ಶಿವನಗೆರೆ ಕೆರೆ
342	ದಾಸಪ್ಪನಪಾಳ್ಯ ಕೆರೆ	363	ಬೆಲ್ಲದಮಡು ಕೆಂ
343	ದಾಸಗೊಂಡನಹಳ್ಳಿ ಕೆರೆ		
344	ಹೂವಿನಹಳ್ಳಿ ಕೆರೆ		
345	ಚಿಕ್ಕ ಯಲ್ಲೂರು ಕೆರೆ		
346	ಜನಕಲೋಟಿ ಕೆರೆ		
347	ಹೊಸ ಇಟಕಲೋಟ ಕೆರೆ		
348	ದೊಡ್ಡದಾಳವಾಟಿ ಕೆರೆ		
349	ಅಬ್ಬೇನಹಳ್ಳಿ ಕೆರೆ		
350	ನೇರಳೇಕೆರೆ ಕೆರೆ		
351	ಹೊಸಕೆರೆ ಚಿಕ್ಕಕೆರೆ		
352	ಬಡವನಹಳ್ಳಿ ಕೆರೆ		
353	ಪುಲಮಘಟ್ಟಕೆರೆ		
354	ಗುಂಡಗಲ್ ಕೊಡಗಿ ಕೆರೆ		
355	ಸುದ್ದೇಕುಂಟೆ ಕೆರೆ		
356	ಸುದ್ದೇಕುಂಟೆಕೋಲಾಟಗುಂಟೆ ಕೆರೆ		
357	ನೀರಕಲ್ ಭೀಮೇಗೌಡನಕೆರೆ		
358	ಮಿಡಿಗೇಶಿ ಚಿಕ್ಕಕೆಂ		
359	ಅಯ್ಯನಹಳ್ಳಿ ಕೆರೆ		
360	ಬಂಡೇನಹಳ್ಳಿ ಕೆರೆ		

ಶಿರಾ ತಾಲ್ಲೂಕು				ಪಾವಗಡ ತಾಲ್ಲೂಕು	
ಕ್ರ.ಸಂ	ಕೆರೆಯ ಹೆಸರು	ಕ್ರ.ಸಂ	ಕೆರೆಯ ಹೆಸರು	ಕ್ರ.ಸಂ	ಕೆರೆಯ ಹೆಸರು
364	ಲಕ್ಷ್ಮೀಸಾಗರ ಕೆರೆ	383	ತಡಕಲೂರು ಕೆರೆ	401	ಯಲದಬಾಗಿ ಕೆರೆ
365	ಚಿಕ್ಕಸಂದ್ರ ಕೆರೆ	384	ಹೊಸೂರು ಕೆರೆ	402	ಗುಮ್ಮನಹಳ್ಳಿ ವೀರಾಪುರ ಕೆರೆ
366	ಶಿರಾ ದೊಡ್ಡಕೆರೆ	385	ನಾದೂರು ದೊಡ್ಡಕೆರೆ	403	ಕಲ್ಲುಕೋಟೆಕೆರೆ
367	ಶಿರಾ ಚಿಕ್ಕಕೆರೆ	386	ಎಂ. ದೊರೆ ದೊಡ್ಡಕೆರೆ	404	ಗಿರಿನಾಥನಹಳ್ಳಿ ಕೆರೆ
368	ಮೇಲ್ಕುಂಟೆ ಜೋಡಿಕೆರೆ	387	ಎಂ. ದೊರೆ ಚಿಕ್ಕಕೆರೆ	405	ಬೋರಸಂದ್ರ ಪೂಜಾರಹಳ್ಳಿ ಕೆರೆ
369	ಮೊದಲೂರು ಚಿಕ್ಕಕೆರೆ	388	ಚಂಗಾವರ ಕೆರೆ	406	ಬೇವಿನಹಳ್ಳಿ ಹಳೇಕೆರೆ
370	ಹೊನಗೊಂಡನಹಳ್ಳಿ	389	ಕಗ್ಗಲಡು ಕೆರೆ	407	ದೇವರಹಳ್ಳಿ ಕೆರೆ
371	ಕೊಟ್ಟದೊಡ್ಡಕೆರೆ	390	ಮೇಲುಕೋಟೆ ಕೆರೆ	408	ಗಾಣದಹುಣಸೆ ಹಳೇಕೆರೆ
372	ಮೊದಲೂರು ದೊಡ್ಡಕೆರೆ	391	ರಾಮಲಿಂಗಾಪುರ ಕೆರೆ	409	ಯರದಕಟ್ಟೆ ಹೊಸಕೆರೆ
373	ಮಾಗೋಡು ಕೆರೆ	392	ಬುಕ್ಕಾಪಟ್ಟಣಕೆರೆ	410	ಗಾಣದಹುಣಸೆ ಹೊಸಕೆರೆ
374	ಹಲ್ಕೂರು ಕೆರೆ	393	ಅಗ್ರಹಾರ ದೊಡ್ಡಕೆರೆ	411	ಬಿದರೆ ಕೆರೆ
375	ಯಲಿಯೂರು ಗಂಗೇರ ಒಡ್ಡುಕೆರೆ	394	ಕಳ್ಳಂಬೆಳ್ಳ ಕೆರೆ	412	ಮದಲೂರು ಗಿಡಗನಹಳ್ಳಿ ಕೆರೆ
376	ಭೂಪನಹಳ್ಳಿ ಹೊಸಕೆರೆ	395	ತರೂರು ಲಕ್ಷ್ಮೀಸಾಗರ ಕೆರೆ	413	ಮಾಗೋಡು ದೊಡ್ಡನಹಳ್ಳಿ ಕೆರೆ
377	ದೊಡ್ಡಬಾಣಗೆರೆ ದೊಡ್ಡಕೆರೆ	396	ತರೂರು ಊರಮುಂದಿನ ಕೆರೆ.	440	ಸಿ.ಕೆ.ಪುರ ಹನುಮಂತದೇವರಕೆರೆ
378	ಹಂದಿಕುಂಟೆ ಕೆರೆ	397	ಭೂಪಸಂದ್ರ ಕೆರೆ	441	ಬ್ಯಾಡನೂರು ಶಂಕರಲಿಂಗನಕೆರೆ
379	ಬರಗೂರು ದೊಡ್ಡಕೆರೆ	398	ಬ್ರಹ್ಮಸಂದ್ರ ಕೊಡಗೇಕೆರೆ	442	ಗುಂಡ್ಲಹಳ್ಳಿ ಮೊಹಿದ್ದೀನ್ ಬಂಡೆಕೆರೆ
380	ಚಿಕ್ಕಬಾಣಗೆರೆ ಕೆರೆ	399	ಬ್ರಹ್ಮಸಂದ್ರ ಊರಮುಂದಿನಕೆರೆ	443	ಹೊನ್ನಸಮುದ್ರನಾಗರಬಾವಿ ಕೆರೆ
381	ನಿಡಗಟ್ಟೆ ಸಣ್ಣಕೆರೆ	400	ಸೀಬಿ ಅಗ್ರಹಾರ ಕೆರೆ	414	ರತ್ನಸಂದ್ರ ಕೆರೆ
382	ಹುಲಿಕುಂಟೆ ದೊಡ್ಡಕೆರೆ			415	ಮುದಿಗೆರೆ ಊರಮುಂದಿನಕೆರೆ

1	2	3	4
416	ಭೂವನಹಳ್ಳಿ ತಿಮ್ಮಣ್ಣಕಟ್ಟೆ ಕೆರೆ	436	ಕೆಂಪಮಡುಗು ಕಂಕಲ್ಲಮ್ಮನಕೆರೆ
417	ಚರತಹಳ್ಳಿ ಕೆರೆ	437	ಅರಳೀಕುಂಟೆ ಕೃಷ್ಣಾಂಬುದಿ ಕೆರೆ
	ಪಾವಗಡ ತಾಲ್ಲೂಕು	438	ಕನ್ನಮೇಡಿವಡಸಲ್ಲಮ್ಮನಕೆರೆ
418	ರಂಗಸಮುದ್ರಕೆರೆ	439	ಹರಿಹರಪುರ ಮುತ್ತರಾಯನಕೆರೆ
419	ಗೊಲ್ಲನಕುಂಟೆ ಕರೀಕಲ್ ಕೆರೆ	440	ಸಿ.ಕೆ.ಪುರ ಹನುಮಂತದೇವರಕೆರೆ
420	ಅರಸೀಕೆರೆ ಜಂಪೇನಕೆರೆ	441	ಬ್ಯಾಡನೂರು ಶಂಕರಲಿಂಗನಕೆರೆ
421	ಮಂಗಳವಾಡ ಅಕ್ಕಗಾರ್ಲು ಕೆರೆ	442	ಗುಂಡ್ಲಹಳ್ಳಿ ಮೊಹಿದ್ದೀನ್ ಬಂಡೆಕೆರೆ
422	ತೂಮಕುಂಟೆ ಆಂಜನೇಯಸ್ವಾಮಿಕೆರೆ	443	ಹೊನ್ನಸಮುದ್ರನಾಗರಬಾವಿ ಕೆರೆ
423	ಅರಳೀಕೆರೆ ಗುಜ್ಜಾರಪ್ಪನಕೆರೆ	444	ಕ್ಯಾತಗಾನಕೆರೆ ಹೊಸಕೆರೆ
424	ರಾಯಚರ್ಲುಊರಮುಂದಿನಕೆರೆ	445	ನಾಗಲಾಪುರ ಸಾಗಜ್ಜಾಕೆರೆ
425	ತಿರುಮಣಿಹನುಮಂತದೇವರಕೆರೆ	446	ಜಾಲೋಡುಗೋಪಾಲಸ್ವಾಮಿ ಕೆರೆ
426	ವಳ್ಳೂರು ಊರಮುಂದಿನಕೆರೆ	447	ಪಳವಳ್ಳಿ ಪಲ್ಲವರಾಯನಕೆರೆ
427	ಕ್ಯಾತಗಾನಚರ್ಲುಊರಮುಂದಿನ ಕೆರೆ	448	ಬೊಮ್ಮಗಾನಹಳ್ಳಿ ಕೆರೆ
428	ರ್‍ಯಾಪ್ಟೆ ಮರಗದ ಕೆರೆ	449	ಕೊತ್ತೂರು ಕೆರೆ
429	ವಿರೂಪಸಮುದ್ರಭಾಸ್ಕರಾಯನಕೆರೆ	450	ಮದ್ದೇಗಿರಿಗೌಡನಕಟ್ಟೆ
430	ಕನಕಾಪುರ ಚಾಳಕುಂಟೆ	451	ಕನ್ನಮೇಡಿಕರಿಗಲ್ಲಮ್ಮನಕೆರೆ
431	ಗುಮ್ಮಗಟ್ಟ ದುರ್ಗಮ್ಮನಕೆರೆ		
432	ದೊಮ್ಮತಿಮರಿಮುರಾರಾಯನಕೆರೆ		
433	ದೊಮ್ಮತಿಮರಿನಾಗರ ಕಲ್ಲು ಕೆರೆ		
434	ವೆಂಕಟಾಪುರ ದೊಡ್ಡಕೆರೆ		
435	ವೆಂಕಟಾಪುರ ಅಣ್ಣೇನಹಳ್ಳಿ ಕೆರೆ		

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ, ವಿಧಾನಸಭಾ ಸದಸ್ಯರ ಚುಕ್ಕೆ ಗುರುತಿಲ್ಲದ ಸಂಖ್ಯೆ. 2009ಕ್ಕೆ

ಅನುಬಂಧ–II

2004–05ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ವಿಧಾನಸಭಾ ಕ್ಷೇತ್ರವಾರು ಗುತ್ತಿಗೆ ನೀಡಲಾದ ಕೆರೆಗಳ ವಿವರಗಳು

ಕ್ರ.ಸಂ.	ವಿಧಾನಸಭಾ ಕ್ಷೇತ್ರ	ಕೆರೆಯ ಹೆಸರು	ಗುತ್ತಿಗೆದಾರರ ವಿವರಗಳು
1	ಕುಣಿಗಲ್	ಕುಣಿಗಲ್ ಚಿಕ್ಕಕೆರೆ	ಕುಣಿಗಲ್ ಟೌನ್ ಮೀನುಗಾರರ ಸಹಕಾರ ಸಂಘ (ನಿ). ಕೊತ್ತೀಪುರ
2	ಕುಣಿಗಲ್	ಕುಣಿಗಲ್ ದೊಡ್ಡಕೆರೆ	ಕುಣಿಗಲ್ ಟೌನ್ ಮೀನುಗಾರರ ಸಹಕಾರ ಸಂಘ (ನಿ). ಕೊತ್ತೀಪುರ
3	ಹುಲಿಯೂರುದುರ್ಗ	ಅಮೃತೂರು ಚಿಕ್ಕಕೆರೆ	ಬೆಸ್ತರ ಮೀನುಗಾರರ ಕ್ಷೇಮಾಭಿವೃದ್ಧಿ ಸಂಘ (ನಿ) ಅಮೃತೂರು
4	ಹುಲಿಯೂರುದುರ್ಗ	ಕೀಲಾರಕೆರೆ	ಮಾರಮ್ಮದೇವಿ ಮೀನುಕೃಷಿಕರ ಸಂಘ ಕೀಲಾರ
5	ಹುಲಿಯೂರುದುರ್ಗ	ಕಿಳಾಂಕಾವಲ್ ಕೆರೆ (ಕತ್ತರಿಘಟ್ಟ)	ಮುತ್ತುರಾಯಸ್ವಾಮಿ ಗ್ರಾಮಾಭಿವೃದ್ಧಿ ಸಂಸ್ಥೆ, ಕತ್ತರಿಘಟ್ಟ
6	ಹುಲಿಯೂರುದುರ್ಗ	ಚಿನ್ನಾಗರ ಕೆರೆ	ಹೊಸಕೆರೆ ಮೀನುಗಾರರ ಸಹಕಾರ ಸಂಘ, ಚಿನ್ನಾಗರ
7	ಹುಲಿಯೂರುದುರ್ಗ	ದೀಪಾಂಬುದಿ ಕೆರೆ	ವಿನಾಯಕ ಗ್ರಾಮೀಣಾಭಿವೃದ್ಧಿ ಯುವಕ ಸಂಘ, ಯಲಗಲವಾಡಿ
8	ಕುಣಿಗಲ್	ಹೆಬ್ಬೂರುಕೆರೆ	ಗ್ರಾಮಪಂಚಾಯತಿ, ಹೆಬ್ಬೂರು
9	ಗುಬ್ಬಿ	ಕಡಬಅಮಾನಿಕೆರೆ	ಕರ್ನಾಟಕಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ) ಮೈಸೂರು
10	ಗುಬ್ಬಿ	ಅಮ್ಮನಘಟ್ಟದೊಡ್ಡಕೆರೆ	ನೀರುಬಳಕೆದಾರರ ಸಹಕಾರ ಸಂಘ, ಅಮ್ಮನಘಟ್ಟ
11	ಗುಬ್ಬಿ	ಹೇರೂರು ಕೆರೆ	ಮೀನುಉತ್ಪಾದನಾ ಮತ್ತು ಮಾರಾಟಗಾರರ ಸಹಕಾರಸಂಘಃ (ನಿ) ಗುಬ್ಬಿ

12	ಗುಬ್ಬಿ	ಬೆಲವತ್ತಕೆರೆ	ಗ್ರಾಮಪಂಚಾಯತಿ, ಬೆಲವತ್ತ
13	ತುಮಕೂರು	ತುಮಕೂರು ಅಮಾನಿಕೆರೆ	ಮೀನು ಉತ್ಪಾದಕರ ಹಾಗೂ ಮಾರಾಟಗಾರರ ಅಭಿವೃದ್ಧಿ ಸಹಕಾರ ಸಂಘ (ನಿ) ಗುಬ್ಬಿ
14	ತುಮಕೂರು	ಮಲ್ಲಸಂದ್ರ ಅಮಾನಿಕೆರೆ	ಡಾ. ಅಂಬೇಡ್ಕರ್ ಮಹಿಳಾ ಸಂಘ, ತುಮಕೂರು
15	ಚಿ.ನಾ.ಹಳ್ಳಿ	ಬೋರನಕಣಿವೆ ಜಲಾಶಯ	ಮೀನು ಉತ್ಪಾದಕರ ಹಾಗೂ ವಿತರಕರ ಸಹಕಾರ ಸಂಘ, ಚಿ.ನಾ.ಹಳ್ಳಿ
16	ತುರುವೇಕೆರೆ	ಸಾರಿಗೆಹಳ್ಳಿ ಕೆರೆ	ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿ (ನಿ) ಮೈಸೂರು
17	ತಿಪಟೂರು	ನೊಣವಿನಕೆರೆ	ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ) ಮೈಸೂರು
18	ತಿಪಟೂರು	ಹಾಲ್ಕುರಕೆ ಕೆರೆ	ಗ್ರಾಮಪಂಚಾಯತಿ, ಹಾಲ್ಕುರಕೆ
19	ಶಿರಾ	ಮಾಗೋಡು ಕೆರೆ	ಜಲಸಂವರ್ಧನೆ ನೀರು ಬಳಕೆದಾರರ ಸಹಕಾರ ಸಂಘ, ಮಾಗೋಡು
20	ಬೆಳ್ಳಾವಿ	ಕೆ.ಟಿ. ಹಳ್ಳಿ ಕೆರೆ	ಶ್ರೀ. ಆಂಜನೇಯ ಸ್ವಾಮಿ ಕೆರೆ ಅಭಿವೃದ್ಧಿ ಸಂಘ, ಕೆ.ಟಿ. ಹ

1602(2010) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಯಾವುವು; ಅವುಗಳಲ್ಲಿ ಲಾಭದಲ್ಲಿ ನಡೆಯುತ್ತಿರುವ ಸಂಸ್ಥೆಗಳು ಯಾವುವು;

ಆ. ನಷ್ಟದಲ್ಲಿ ನಡೆಯುತ್ತಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳನ್ನು ಲಾಭದಾಯಕವಾಗಿ ಮಾಡಲು ಹಾಕಿಕೊಂಡಿರುವ ಕಾರ್ಯ ಕ್ರಮಗಳೇನು;

ಇ. ಗ್ರಾಮೀಣ ಭಾಗದ ಜನರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. 1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ. ಬೆಂಗಳೂರು.
2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು.
3. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ.
4. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗಾ.

ಲಾಭದಲ್ಲಿ ನಡೆಯುತ್ತಿರುವ ಸಂಸ್ಥೆಗಳು:

1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು.
2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು.

ಆ. 1. ವೋಲ್ವೋ, ಮಯೂರ (ಎ.ಸಿ.), ರಾಜಹಂಸ ವಾಹನಗಳ ಕಾರ್ಯಾಚರಣೆ ಮಾಡುವುದು.
2. ವಾಹನಗಳನ್ನು ಮೇಲ್ದರ್ಜೆಗೇರಿಸುವುದು.
3. ಉತ್ತೇಜಕ ಬಸ್ ದರಗಳನ್ನು ಅಳವಡಿಸುವುದು.
4. ಬಸ್ ನಿಲ್ದಾಣಗಳಲ್ಲಿ ಉತ್ತಮ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
5. ಪರಿಣಾಮಕಾರಿಯಾಗಿ ಅನುಸೂಚಿಗಳ ಕಾರ್ಯಾಚರಣೆ ಮಾಡುವುದು
6. ಸಂಸ್ಥೆಯ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡುವುದು.
7. ಲೋ ಫ್ಲೋರ್ ಮಾದರಿಯ ಬಸ್ಸುಗಳ ಕಾರ್ಯಾಚರಣೆ ಮಾಡುವುದು, ಇತ್ಯಾದಿ.

ಇ. ಸಂಚಾರಕ್ಕೆ ಯೋಗ್ಯವಾದ ರಸ್ತೆಗಳು ಇರುವ ಹಳ್ಳಿಗಳಿಗೆ ಬಸ್ ಸಂಚಾರವನ್ನು ಒದಗಿಸುವುದು. ಜೊತೆಗೆ ಮಿನಿ ಬಸ್‌ಗಳು ಮತ್ತು ಗ್ರಾಮೀಣ ಸಾರಿಗೆ ಬಸ್ಸುಗಳನ್ನು ಗ್ರಾಮೀಣ ಪ್ರದೇಶದ ಪ್ರಯಾಣಿಕರ ಅನುಕೂಲಕ್ಕಾಗಿ ಪ್ರಾರಂಭಿಸುವುದು, ಕಡಿಮೆ ದೂರ ಪ್ರಯಾಣಿಸುವ ಗ್ರಾಮಾಂತರದ ಪ್ರಯಾಣಿಕರಿಗೆ ಮಿತವ್ಯಯಕರ ಪ್ರಯಾಣ ದರ ವಿಧಿಸಲು ಉಪಹಂತ ಪ್ರಯಾಣದರ ಪದ್ಧತಿಯನ್ನು ಜಾರಿಗೆ ತರುವುದು.

1603(2011) ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಮಟ್ಕ, ಜೂಜು ಮತ್ತು ಒಂದಂಕಿ ಲಾಟರಿ ಇತ್ಯಾದಿ ದಂಧೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ದಂಧೆಯಲ್ಲಿ ಗ್ರಾಮೀಣ ಪ್ರದೇಶದ ಜನರು ಮತ್ತು ಕೂಲಿ ಕಾರ್ಮಿಕರು ತೊಡಗಿ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ಹಾಗಿದ್ದಲ್ಲಿ, ಈ ದಂಧೆಯನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು? ವಿವರ ನೀಡುವುದು ;

ಶ್ರೀ ಬಸವರಾಜ್. ಎಸ್. ಹೊರಟ್ಟಿ (ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ. ಹೌದು. ಮಟ್ಕ ದಂಧೆ/ಜೂಜು ಒಂದಂಕಿ ಲಾಟರಿ ಚಾಲ್ತಿಯಲ್ಲಿರುವ ದೃಷ್ಟಾಂತಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ. ಹೌದು. ಗ್ರಾಮೀಣ ಪ್ರದೇಶದಲ್ಲಿರುವ ಹಾಗೂ ಕೂಲಿ ಕಾರ್ಮಿಕರ ಕೆಲವರು ಈ ದಂಧೆಯಲ್ಲಿ ನಿರತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ. ಈ ದಂಧೆಯನ್ನು ತಡೆಗಟ್ಟುವ ಸಲುವಾಗಿ ``Flying Squad'' ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದರ ಜೊತೆಗೆ ಈ ದಂಧೆಯ ಬಗ್ಗೆ ಯಾವುದಾದರೂ ದೂರು ಇದ್ದಲ್ಲಿ ಕೂಡಲೇ ಸಂಬಂಧಪಟ್ಟ ಪ್ರದೇಶದ ಪೋಲಿಸ್ ಅಧಿಕಾರಿಗಳಿಗೆ ಈ ದಂಧೆಯಲ್ಲಿ ತೊಡಗಿಸಿಕೊಂಡಿರುವವರ ಮೇಲೆ ಕ್ರಮ ಕೈಗೊಳ್ಳಲು ಕೋರಲಾಗುತ್ತದೆ.

1604 (1901) ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬ (ಬಸವಕಲ್ಯಾಣ) ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳ ಸಂಖ್ಯೆ ಎಷ್ಟು ;

ಆ. ಇನ್ನೂ ಹೊಸದಾಗಿ ಅಸ್ತಿತ್ವಕ್ಕೆ ತರಬೇಕಾದ ಪ್ರಸ್ತಾವನೆಗಳು ಎಷ್ಟು ;

ಇ. ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು ;

ಈ. ರಾಜ್ಯದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳ ಪ್ರದೇಶ ವ್ಯಾಪ್ತಿ ಎಷ್ಟು (ಪ್ರಾಧಿಕಾರವಾರು ಮಾಹಿತಿ ಒದಗಿಸುವುದು) ;

ಉ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಒಟ್ಟು ವ್ಯಾಪ್ತಿ ಎಷ್ಟು; ಹೊಸದಾಗಿ ಪ್ರಾಧಿಕಾರಕ್ಕಾಗಿ ವಶ ಪಡಿಸಿಕೊಳ್ಳಲಾಗುತ್ತಿರುವ ಒಟ್ಟು ವಿಸ್ತೀರ್ಣವೆಷ್ಟು?

ಶ್ರೀ ಎಸ್. ಆರ್. ಮೋರೆ (ಪೌರಾಡಳಿತ ಸಚಿವರು) :

ಅ. ರಾಜ್ಯದಲ್ಲಿ ಒಟ್ಟು 28 ನಗರಾಭಿವೃದ್ಧಿ ಪ್ರಾಧಿಕಾರಗಳು ಅಸ್ತಿತ್ವದಲ್ಲಿವೆ.

ಆ. ಅಸ್ತಿತ್ವಕ್ಕೆ ತರಬೇಕಾದ ಪ್ರಸ್ತಾವನೆಗಳು ಯಾವುದು ಇರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ.

ಸ್ಥಳೀಯ

	ನಗರಾಭಿವೃದ್ಧಿ ಪ್ರಾಧಿಕಾರಗಳು	ಯೋಜನಾ ಪ್ರದೇಶದ ವಿಸ್ತೀರ್ಣ (ಚ.ಕಿ.ಮೀ.ಗಳಲ್ಲಿ)
1.	ಬೆಂಗಳೂರು	1213.69
2.	ಬೆಳಗಾಂ	186.48
3.	ಬಳ್ಳಾರಿ	47.11
4.	ಬೀದರ್	90.89
5.	ವಿಜಾಪುರ	439.01
6.	ಚಾಮರಾಜನಗರ–ರಾಮಸಮುದ್ರಂ	120.99
7.	ಚಿತ್ರದುರ್ಗ	15.77
8.	ಚಿಕ್ಕಮಗಳೂರು	64.83
9.	ದಾವಣಗೆರೆ–ಹರಿಹರ	380.6
10.	ಗದಗ–ಬೆಟಗೇರಿ	233.71
11.	ಗುಲ್ಬರ್ಗಾ	253.00
12.	ಹಾಸನ	92.27
13.	ಹಾವೇರಿ	104.04
14.	ಹೊಸಪೇಟೆ	20.35
15.	ಕಾರವಾರ	96.56
16.	ಕೋಲಾರ	69.95
17.	ಕೆ.ಜಿ.ಎಫ್.	216.00
18.	ಕೊಪ್ಪಳ	122.96
19.	ಮಡಿಕೇರಿ	93.47
20.	ಮಂಡ್ಯ	100.00
21.	ಮಂಗಳೂರು	306.00
22.	ಮೈಸೂರು	233.00
23.	ರಾಮನಗರ–ಚನ್ನಪಟ್ಟಣ	60.49
24.	ರಾಯಚೂರು	246.63
25.	ಶಿವಮೊಗ್ಗ–ಭದ್ರಾವತಿ	256.00
26.	ತುಮಕೂರು	74.00
27.	ಉಡುಪಿ–ಮಲ್ಪೆ	127.35
28.	ಹುಬ್ಬಳ್ಳಿ–ಧಾರವಾಡ	413.00

ಉ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿಸ್ತೀರ್ಣ 1213.69 ಚ.ಕಿ.ಮೀ. ಪ್ರಸ್ತುತ ಯಾವುದೇ ಪ್ರದೇಶವನ್ನು ಹೊಸದಾಗಿ ಪ್ರಾಧಿಕಾರಕ್ಕಾಗಿ ವಶಪಡಿಸಿಕೊಳ್ಳುವ ಪ್ರಸ್ತಾವನೆ ಇರುವುದಿಲ್ಲ.

1605(1902) ಶ್ರೀ ಮಲ್ಲಿಕಾರ್ಜುನ್‌ಸಿದ್ದರಾಮಪ್ಪ ಖೂಬ (ಬಸವ ಕಲ್ಯಾಣ) ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ರಾಜ್ಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಪೋಲೀಸ್ ಠಾಣೆ ಇರಬೇಕಿತ್ತು ಹಾಗೂ ಸಧ್ಯದಲ್ಲಿ ಅಸ್ತಿತ್ವದಲಿರುವ ಪೋಲೀಸ್ ಠಾಣೆಗಳ ಸಂಖ್ಯೆಗಳು ಎಷ್ಟು ?

ಆ. ಹೊಸದಾಗಿ ಪೋಲೀಸ್ ಠಾಣೆಗಳ ಸ್ಥಾಪನೆಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಇ. ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಜನ ಸಿ.ಪಿ.ಐ.ಗಳು ಡಿ. ವೈ.ಎಸ್.ಸಿ.ಗಳು ಇದ್ದಾರೆ.

ಈ. ಎಷ್ಟು ಕ್ರೈಂ ಬ್ರಾಂಚ್ ಠಾಣೆಗಳು ಇವೆ?

ಉ. ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಜನರಿಗೆ ಒಬ್ಬ ಪೋಲೀಸ್ ಪೇದೆ ಹಾಗೂ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳಿವೆ. (ವಿವರ ಒದಗಿಸುವುದು)

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಯವರು) :

ಅ. ಧರ್ಮವೀರ ರಾಷ್ಟ್ರೀಯ ಪೋಲೀಸ್ ಕಮಿಷನ್ ವರದಿಯ ಪ್ರಕಾರ ಜನಸಂದಣಿ ಪ್ರಮಾಣ 50,000 ದಿಂದ 60000 ಕ್ಕೆ ಒಂದು ಠಾಣೆಯೆಂದು ಸೂಚಿಸಲಾಗಿದೆ. ಈ ಪ್ರಕಾರ ಗಣನೆಗೆ ತೆಗೆದುಕೊಂಡರೆ 2001ರ ಜನಗಣತಿ ಅನುಸಾರ ರಾಜ್ಯದ ಜನಸಂಖ್ಯೆ 5,27,33,958ಗೆ 878 ಠಾಣೆಗಳು ಬೇಕಾಗಿರುತ್ತದೆ.

ಪ್ರಸ್ತುತ ಅಸ್ತಿತ್ವದಲ್ಲಿ ಇರುವ ಠಾಣೆಗಳ ಸಂಖ್ಯೆ 805.

ಆ. ಅಗತ್ಯತೆಗೆ ಅನುಗುಣವಾಗಿ ಪೋಲೀಸ್ ಠಾಣೆಗಳ ಸೃಜನೆಯು ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ. ಜನಸಂಖ್ಯೆಗೆ ಅನುಗುಣವಾಗಿ ಇಂತಿಷ್ಟೇ ಸಿ.ಪಿ.ಐ., ಡಿ.ವೈ.ಎಸ್.ಪಿ. ಮತ್ತು ಎಸ್.ಪಿ.ಗಳು ಇರಬೇಕೆಂಬ ನಿರ್ದಿಷ್ಟ ಅನುಸೂಚಿಯಿರುವುದಿಲ್ಲ.

ಈ. ರಾಜ್ಯದಲ್ಲಿ ಪ್ರತ್ಯೇಕ ಕ್ರೈಂ ಬ್ರಾಂಚ್ ಠಾಣೆಗಳನ್ನು ಸೃಜನೆ ಮಾಡಿರುವುದಿಲ್ಲ.

ಉ. ಜನಸಂಖ್ಯೆಗೆ ಅನುಗುಣವಾಗಿ ಪೋಲೀಸ್ ಸಿಬ್ಬಂದಿ ಇಂತಿಷ್ಟೇ ಇರಬೇಕೆಂಬ ಬಗ್ಗೆ ಯಾವುದೇ ಮಾರ್ಗಸೂಚಿ ಇರುವುದಿಲ್ಲ. ಆದಾಗ್ಯೂ, 2001 ನೇ ಜನಗಣತಿ ಆಧರಿಸಿ, ಪ್ರತಿ 1063 ಜನರಿಗೆ ಒಬ್ಬ ಪೋಲೀಸ್ ಪೇದೆ ಹಾಗೂ 18,172 ಜನರಿಗೆ ಒಬ್ಬ ಪಿ.ಎಸ್.ಐ. ಎಂಬ ಅನುಪಾತವನ್ನು ನಿಗದಿಪಡಿಸಿ ಹುದ್ದೆಯನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

1606(1903) ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪಖೂಬ(ಬಸವಕಲ್ಯಾಣ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ರಾಜ್ಯದಲ್ಲಿ ನೀರಾವರಿ ಕಾಮಗಾರಿ ಗುತ್ತಿಗೆದಾರರಿಗೆ ಇಲ್ಲಿಯುವರೆಗೆ ಪಾವತಿಸಬೇಕಾದ ಒಟ್ಟು ಮೊತ್ತವೆಷ್ಟು :

ಆ. ಇದರಲ್ಲಿ ಎಷ್ಟು ಪಾವತಿ ಮಾಡಲಾಗಿದೆ ಬಾಕಿ ಉಳಿದಿರುವ ಎಲ್.ಓ.ಸಿ. ಹಣ ಎಷ್ಟು :

ಇ. ಗುತ್ತಿಗೆದಾರರ ಬಾಕಿ ಹಣ ಪಾವತಿಯಾಗದೇ ಇರುವುದರಿಂದ ಗುತ್ತಿಗೆದಾರರು ಸಾಲದ ಹೊರೆಯನ್ನು ತಾಳಲಾರದೇ ಆತ್ಮಹತ್ಯೆ ಮಾಡಿಕೊಳ್ಳುವ ಗುರಿ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ. ಬಾರಿ ನೀರಾವರಿ ಯೋಜನೆಯಡಿಯಲ್ಲಿ ಒಟ್ಟು ಎಷ್ಟು ಯೋಜನೆಗಳು ರಾಜ್ಯದಲ್ಲಿ ಅಸ್ತಿತ್ವದಲ್ಲಿರುತ್ತದೆ

ಉ. ಹೊಸದಾಗಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಊ. ಅವುಗಳ ಪ್ರಸ್ತುತ ಹಂತವೇನು

ಋ. ಅವುಗಳು ಪೂರ್ಣಗೊಳ್ಳಲು ಸರ್ಕಾರಕ್ಕೆ ಇನ್ನೂ ಎಷ್ಟು ಕಾಲವಕಾಶ ಬೇಕಾಗಿದೆ

ೠ. ಕುಂಠಿತಗೊಳ್ಳಲು ಕಾರಣವೇನು

ಎ. ಇದರ ಬಗ್ಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ಮಾರ್ಚ್–04ರ ಅಂತ್ಯಕ್ಕೆ ನಿಗಮಗಳಲ್ಲಿನ ಬಿಲ್ಲುಗಳೂ ಸೇರಿದಂತೆ ನೀರಾವರಿ ಕಾಮಗಾರಿ ಗುತ್ತಿಗೆದಾರರ ಒಟ್ಟು ಬಾಕಿ ಬಿಲ್ಲುಗಳ ಮೊತ್ತ ರೂ. 291.75 ಕೋಟಿಗಳು ಇರುತ್ತವೆ.

ಆ. ಏಪ್ರಿಲ್ –04 ರಿಂದ ಫೆಬ್ರವರಿ–05ರ ವರೆಗೆ ನಿಗಮಗಳೂ ಸೇರಿದಂತೆ ರೂ. 679.67 ಕೋಟಿಗಳ ಮೊತ್ತದ ಬಿಲ್ಲುಗಳ ಪಾವತಿಗಾಗಿ ಬಿಡುಗಡೆಯಾಗಿರುತ್ತದೆ. 1.2.2005 ರ ಅಂತ್ಯಕ್ಕೆ ರೂ. 387.44 ಕೋಟಿಗಳ ಮೊತ್ತದಷ್ಟು ಬಾಕಿ ಬಿಲ್ಲುಗಳು ಇರುತ್ತವೆ.

ಇ. ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಈ. ರಾಜ್ಯದಲ್ಲಿ ಒಟ್ಟು 8 ಭಾರಿ ನೀರಾವರಿ ಯೋಜನೆಗಳು ಪೂರ್ಣಗೊಂಡಿವೆ. 23 ಭಾರಿ ನೀರಾವರಿ ಯೋಜನೆಗಳು ಪ್ರಗತಿಯಲ್ಲಿವೆ.

ಉ. ಹೊಸದಾಗಿ ತೆಗ್ಗಿ ಸಿದ್ದಾಪುರ, ರಾಮತಾಳ, ಜವಲಹಳ್ಳ, ಬಿಕ್ರಿಹಳ್ಳ, ರಾಮೇಶ್ವರ, ಬಳ್ಳಾರಿ ನಾಲಾ, ಕೊಲ್ಲೂರು, ಕಾಗಿನ, ಸೊಂತಿ, ಗುಡ್ಡದಮಲ್ಲಾಪುರ ಏತ ನೀರಾವರಿ ಹಾಗೂ ಭದ್ರಾ ಮೇಲ್ದಂಡೆ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಊ. ಹೊಸ ಯೋಜನೆಗಳ ಯೋಜನಾ ವರದಿಗಳು ತಯಾರಿಕಾ ಹಂತದಲ್ಲಿವೆ.

ಋ. ಯೋಜನಾ ವರದಿಗಳು ಅಂತಿಮಗೊಂಡ ನಂತರ ಮಾಹಿತಿ ಲಭ್ಯವಾಗುವುದು.

ೠ. ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಎ. ಯೋಜನಾ ವರದಿಗಳು ಅಂತಿಮಗೊಂಡ ನಂತರ ಕಾಮಗಾರಿಗಳನ್ನು ಶಕ್ಯತೆ ಅನುಸಾರ ಕೈಗೆತ್ತಿಕೊಳ್ಳಲಾಗುವುದು.

1607(2157) ಶ್ರೀ ಮೋಹನ್ ಕೆ. ಶೆಟ್ಟಿ (ಕುಮಟಾ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕುಮಟಾದಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪನೆಗೆ ವರ್ಷಗಳಷ್ಟು ಹಿಂದೆಯೇ ಸರ್ಕಾರ ಮಂಜೂರಾತಿ ನೀಡಿರುವುದು ನಿಜವಲ್ಲವೇ ;

ಆ. ಹಾಗಿದ್ದಲ್ಲಿ ಈವರೆಗೂ ಅಗ್ನಿಶಾಮಕ ಠಾಣೆ ಕಾರ್ಯಾರಂಭ ಮಾಡದಿರಲು ಕಾರಣಗಳೇನು ;

ಇ. ಕೂಡಲೇ ಕುಮಟಾದಲ್ಲಿ ಅಗ್ನಿಶಾಮಕ ಠಾಣೆ ಕಾರ್ಯಾರಂಭ ಮಾಡಲು ಸರ್ಕಾರ ಏನು ಕ್ರಮಕೈಗೊಂಡಿದೆ ;

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಹೌದು

ಆ. ಪ್ರತಿಯೊಂದು ಅಗ್ನಿಶಾಮಕ ಠಾಣೆಯ ನಿರ್ಮಾಣದ ಮೊದಲು ಸಿಬ್ಬಂದಿ ವಾಹನ ಹಾಗೂ ಇತರೆ ಮೂಲಭೂತ ವ್ಯವಸ್ಥೆಗಳ ಅವಶ್ಯಕತೆಯಿದ್ದು ಇವುಗಳನ್ನು ಒದಗಿಸಿಕೊಂಡ ನಂತರ ಠಾಣೆಯನ್ನು ಕಾರ್ಯಾರಂಭ ಮಾಡಲು ಸಾಧ್ಯವಾಗುತ್ತದೆ.

1608 (2158) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನಿರುದ್ಯೋಗ ಸಮಸ್ಯೆ ದಿನೇ ದಿನೇ ಬೆಳೆಯುತ್ತಿದ್ದು ಅಸಂಖ್ಯಾತ ಯುವಕರು ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಕೊಂಡಿರುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಆ. ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸರ್ಕಾರದ ದೀರ್ಘಕಾಲಿಕ ಮತ್ತು ತುರ್ತು ಕ್ರಮಗಳೇನು ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ. ಹೌದು

ಆ. ನಿರುದ್ಯೋಗ ಸಮಸ್ಯೆ ನಿವಾರಣೆಗಾಗಿ ರಾಜ್ಯ ಸರ್ಕಾರವು ಅನೇಕ ಕೇಂದ್ರ ಪುರಸ್ಕೃತ ಹಾಗೂ ರಾಜ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಇವುಗಳಲ್ಲಿ ಮುಖ್ಯವಾಗಿ ಸ್ವರ್ಣ ಜಯಂತಿ ಗ್ರಾಮ ಸಮೃದ್ಧಿ ಯೋಜನೆ, ಸ್ವರ್ಣ ಜಯಂತಿ ಗ್ರಾಮ ಸ್ವ-ರೋಜ್‌ಗಾರ್ ಯೋಜನೆ, ಹಾಗೂ ರಾಜ್ಯ ಯೋಜನಾ ಕಾರ್ಯಕ್ರಮಗಳಾದ ವಿಶ್ವ ಕಾರ್ಯಕ್ರಮ, ಸ್ತ್ರೀ ಶಕ್ತಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಡಿಸೆಂಬರ್ 2004ರ ಅಂತ್ಯಕ್ಕೆ 1 ಲಕ್ಷ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದ್ದು, ಸುಮಾರು 15.03 ಲಕ್ಷ ಸದಸ್ಯರಿರುತ್ತಾರೆ. ಇವರಲ್ಲಿ 3.09 ಲಕ್ಷ ಪ.ಜಾ ಹಾಗೂ 1.20 ಲಕ್ಷ ಪ. ಪಂಗಡಗಳಿಗೆ ಸೇರಿದ ಸದಸ್ಯರಿರುತ್ತಾರೆ. ಈ ಯೋಜನಾ ಕಾರ್ಯಕ್ರಮಗಳಲ್ಲದೆ ಯುವಜನರು ಮುಖ್ಯವಾಗಿ ಪ.ಜಾ/ಪ.ಪಂ ಮತ್ತು ಇತರೆ ಹಿಂದುಳಿದ ಜನಾಂಗಗಳಿಗೆ ಸೇರಿದ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗವಕಾಶ ಒದಗಿಸಲು ಸರ್ಕಾರವು ಸಂಬಂಧಪಟ್ಟ ಅಭಿವೃದ್ಧಿ ಮಂಡಳಿಗಳ ಮೂಲಕ ಸ್ವಯಂ ಉದ್ಯೋಗ ಯೋಜನೆಗಳನ್ನು ಸಹ

ಅನುಷ್ಠಾನಗೊಳಿಸುತ್ತಿದೆ. ಸ್ವಯಂ ಉದ್ಯೋಗ ಕೈಗೆತ್ತಿಕೊಳ್ಳಲು ಅನುಕೂಲವಾಗುವಂತೆ ರಾಜ್ಯ ಸರ್ಕಾರವು ಕುಶಲಕರ್ಮಿಗಳಿಗೆ ತರಬೇತಿ ಹಾಗೂ ಉದ್ಯಮಶೀಲ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಂಡಿದೆ. ಇದರ ಹೊರತಾಗಿ ರಾಜ್ಯ ಸರ್ಕಾರವು ಭಾರಿ ಮತ್ತು ಮಧ್ಯಮ ನೀರಾವರಿ, ಸಣ್ಣ ನೀರಾವರಿ, ರಸ್ತೆ ಮತ್ತು ಸೇತುವೆ, ಕಟ್ಟಡ, ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಿಂದ ದಿನಗೂಲಿ ಉದ್ಯೋಗವನ್ನು ಸೃಜಿಸುತ್ತಿದೆ. ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ 2004–05 ನೇ ಸಾಲಿನಲ್ಲಿ 15.14 ಕೋಟಿ ಮಾನವ ದಿನಗಳನ್ನು ಸೃಜಿಸುವ ಗುರಿ ಹೊಂದಿದೆ. ವಿವಿಧ ಯೋಜನಾ ಕಾರ್ಯಕ್ರಮಗಳ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ದಿನಗೂಲಿ ಹಾಗೂ ಸ್ವಯಂ ಉದ್ಯೋಗ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

1609 (2159)ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಸರ್ಕಾರದ ವಿವಿಧ ಇಲಾಖೆಗಳಲ್ಲಿ 18.20 ವರ್ಷಕ್ಕೂ ಹೆಚ್ಚಿನ ಸಮಯದಿಂದ ಸೇವೆಯಲ್ಲಿರುವ ದಿನಗೂಲಿ ನೌಕರರು ಖಾಯಮಾತಿಯಾಗಿಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ. ಅವರುಗಳನ್ನು ಮಾನವೀಯತೆ ಆಧಾರ ಮೇರೆಗೆ ಖಾಯಮಾತಿ ಮಾಡಲು ಸರ್ಕಾರ ಯೋಚಿಸಿದೆಯೆ;

ಇ. ಹಾಗಿದ್ದಲ್ಲಿ, ಯಾವಾಗ ಖಾಯಮಾತಿ ಮಾಡಲಾಗುವುದು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಯವರು):

ಅ. ಹೌದು.

ಆ. ಮಾನವೀಯತೆಯ ಅಂಶವೂ ಸರ್ಕಾರದ ಆಲೋಚನೆಯಲ್ಲಿ ಸೇರಿದೆ.

ಇ. ಪ್ರಕರಣವು ಈಗ ಸುಪ್ರೀಂಕೋರ್ಟಿನ ಮುಂದಿದೆ.

1610(2097) ಶ್ರೀ. ನಿಂಗಪ್ಪ ಹೆಚ್. (ಕುಣಿಗಲ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ತುಮಕೂರು ಕವಲು ನಾಲಾ (ಹೇಮಾವತಿ ಯೋಜನೆಯ ಟಿ.ಬಿ.ಸಿ) ಅಭಿವೃದ್ಧಿಗೆ ಮತ್ತು ಪೂರ್ಣಗೊಳ್ಳಲು ಬೇಕಾಗುವ ಅವಧಿ ಮತ್ತು ಹಣ ಎಷ್ಟು ;

ಆ. ಯಾವ ಅವಧಿಯೊಳಗಾಗಿ ಹೇಮಾವತಿ ಯೋಜನೆಯ ಟಿ.ಬಿ.ಸಿ ನಾಲಾ ಮಾರ್ಗವನ್ನು ಪೂರ್ಣಗೊಳಿಸಲಾಗುವುದು;

ಇ. ಹಾಗೆ ಪೂರ್ಣಗೊಳಿಸಿ ಕುಣಿಗಲ್ ದೊಡ್ಡಕೆರೆವರೆಗೆ ಸರಾಗವಾಗಿ ನೀರು ಹರಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ತುಮಕೂರು ಶಾಖಾ ನಾಲೆಯ ಅಭಿವೃದ್ಧಿ ಮತ್ತು ಪೂರ್ಣಗೊಳಿಸಲು ರೂ. 923.55 ಕೋಟಿಗಳ ಅವಶ್ಯಕತೆ ಇದ್ದು, ಸರಾಸರಿ ರೂ. 154.00 ಕೋಟಿಗಳ ಅನುದಾನದಂತೆ ತುಮಕೂರು ಶಾಖಾ ನಾಲೆಯ ಎಲ್ಲಾ ಕಾಮಗಾರಿಗಳನ್ನು 2010–11 ಕ್ಕೆ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಂಡಿದೆ.

ಆ. ತುಮಕೂರು ಶಾಖಾ ನಾಲೆಯ ಎಲ್ಲಾ ಕಾಮಗಾರಿಗಳನ್ನು 2010–11ರೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇ. ಕುಣಿಗಲ್ ದೊಡ್ಡಕೆರೆಗೆ ಈಗಾಗಲೇ ನೀರು ಹರಿಸಲಾಗಿದ್ದು, ನೀರನ್ನು ಸರಾಗವಾಗಿ ಹರಿಸಲು ನಾಲೆಯಲ್ಲಿ ನೀರು ಹರಿಯುವಿಕೆಯಲ್ಲಿನ ಸಧ್ಯದ ಸಣ್ಣಪುಟ್ಟ ಅಡತಡೆಗಳಾದ ಹೂಳು ತೆಗೆಯುವುದು ಇತ್ಯಾದಿ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ವಿನ್ಯಾಸದ ಹರಿವನ್ನು ಹರಿಯಬಿಡಲು ತುಮಕೂರಿನಿಂದ ಕುಣಿಗಲ್‌ವರೆಗಿನ ಎಲ್ಲಾ 59 ಕಿ.ಮೀ. ಲೈನಿಂಗ್ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

1611(2098)ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಕುಣಿಗಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದೂರದ ಹಳ್ಳಿಗಳಿಗೆ ಬಸ್ ಸೌಕರ್ಯ ಕಲ್ಪಿಸಲು ಆದಾಯವನ್ನೆ ಆದ್ಯತೆಯನ್ನಾಗಿ ಪರಿಗಣಿಸಿ ಅಧಿಕಾರಿಗಳು ನಿರಾಕರಿಸುತ್ತಿರುವುದರಿಂದ, ಸೇವಾ ದೃಷ್ಟಿಯಿಂದ ಪರಿಗಣಿಸಿ ಸೌಕರ್ಯ ಕಲ್ಪಿಸಲು ಸರ್ಕಾರ ಗಮನ ಹರಿಸುವುದೆ;

ಆ. ಈ ಬಗ್ಗೆ ಸರ್ಕಾರ ಸ್ಪಷ್ಟ ಆದೇಶ ಹೊರಡಿಸುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ನಿರಾಕರಿಸುತ್ತಿಲ್ಲ.

ಆ. ಉದ್ಭವಿಸುವುದಿಲ್ಲ.

1612(2099) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಕುಣಿಗಲ್ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಇಪ್ಪಾಡಿ ಗ್ರಾಮ ಸಮೀಪದ ಮುದ್ದರಂಗನ ಕೆರೆ ಒಡೆದು ಹೋಗಿ ಬಹಳ ವರ್ಷಗಳಾಗಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ಅದರ ಪುನರ್ ನಿರ್ಮಾಣದ ಬಗ್ಗೆ ಸರ್ಕಾರ ಈ ತನಕ ಅವಶ್ಯಕ ಕ್ರಮ ಕೈಗೊಳ್ಳದಿರುವ ಕಾರಣವೇನು;

ಆ. ಪುನರ್ ನಿರ್ಮಾಣದ ಬಗ್ಗೆ ಸರ್ಕಾರ ಶೀಘ್ರ ಗಮನ ಹರಿಸುವುದೇ;

ಇ. ಹಾಗಿದ್ದಲ್ಲಿ, ಯಾವ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. ಸುಮಾರು 100 ವರ್ಷಗಳ ಹಿಂದೆ ಒಡೆದುಹೋಗಿರುವುದು ನಿಜ ಅನುದಾನ ಲಭ್ಯವಿಲ್ಲದ ಕಾರಣ ಮತ್ತು ಅರಣ್ಯ ಇಲಾಖೆಯು ಸುಮಾರು 36 ಎಕರೆ ಜಮೀನು ಪಡೆಯಬೇಕಾಗಿರುವುದರಿಂದ ಪುನರ್ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿಲ್ಲ.

ಆ. ಪುನರ್ ನಿರ್ಮಾಣದ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಪ್ರಯತ್ನಿಸಲಾಗುವುದು.

1613(2100)ಶ್ರೀ ಹೆಚ್. ನಿಂಗಪ್ಪ (ಕುಣಿಗಲ್) ಸನ್ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಗ್ರಾಮೀಣ ಪ್ರದೇಶದಲ್ಲಿ ಜನರಾಡುವ ನಾಟಕಗಳಿಗೆ ಪ್ರೋತ್ಸಾಹ ಧನದ ಮೊತ್ತವನ್ನು ನಿಗದಿಗೊಳಿಸಲಾಗಿದೆಯೇ;

ಆ. ಹಾಗಿದ್ದರೆ, ಯಾವ ಅರ್ಹತೆ ಮತ್ತು ಮಾನದಂಡವನ್ನು ಅನುಸರಿಸಿ ಮೊತ್ತ ನಿದಿಗೊಳಿಸಲಾಗಿದೆ ?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು) :

ಅ. ಹೌದು.

ಒಂದು ನಾಟಕಕ್ಕೆ ರೂ. 5,000/-

ಆ. ರೈತಾಪಿ ಜನರು ಸುಗ್ಗಿ ಕಾಲದಲ್ಲಿ ತಾವೇ ಕೂಡಿಕೊಂಡು ನಾಟಕದ ಮಾಸ್ತರನ್ನು ನೇಮಿಸಿಕೊಂಡು ಕಲಿತು ಪ್ರದರ್ಶಿಸುವ ನಾಟಕಗಳಿಗೆ ಪ್ರೋತ್ಸಾಹಿಸಲು ರಂಗಸುಗ್ಗಿ ಎಂಬ ಯೋಜನೆಯನ್ನು ರೂಪಿಸಲಾಗಿದೆ. ನಾಟಕ ಕಲೆಯ ಸಂರಕ್ಷಣೆಗಾಗಿ ಹಾಗೂ ಅಸಂಘಟಿತ ರೈತಾಪಿ ಜನರಲ್ಲಿರುವ ಕಲೆಯನ್ನು ಉತ್ತೇಜಿಸಲು ಪ್ರೋತ್ಸಾಹದಾಯಕವಾಗಿ ಮೊತ್ತವನ್ನು ನಿಗದಿಪಡಿಸಲಾಗಿದೆ.

1614(2101) ಶ್ರೀ ನಿಂಗಪ್ಪ ಹೆಚ್. (ಕುಣಿಗಲ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಕುಣಿಗಲ್ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ ಕೆರೆಗಳು ದುಸ್ಥಿತಿಯಲ್ಲಿದ್ದು, ಅದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ, ಅವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ. ಯಾವ ಅವಧಿಯೊಳಗಾಗಿ ಅಭಿವೃದ್ಧಿಪಡಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ);

ಅ. ಅಲ್ಲ

ಆ. ಲಭ್ಯವಿರುವ ಅನುದಾನದಲ್ಲಿ ಕೆರೆಗಳನ್ನು ಸುಸ್ಥಿತಿಯಲ್ಲಿಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

1615 (2127)ಶ್ರೀ ನಿರ್ಮಲಾ ಸುರಾನ (ಭಾರತೀನಗರ) ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಪ್ರದೇಶಗಳಲ್ಲಿ ಕೊರೆದಿರುವ ಕೊಳವೆ ಬಾವಿಗಳ ನಿಯಮಿತ ನಿರ್ವಹಣೆ ಯಾರದ್ದು?

ಆ. ನಿರ್ವಹಣೆ ಹಾಗೂ ದುರಸ್ಥಿ ಬಗ್ಗೆ ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಜಲಮಂಡಳಿ ನಡುವೆ ಉದ್ಭವಿಸಿರುವ ಬಿಕ್ಕಟ್ಟಿನ ಅರಿವು ಸರ್ಕಾರಕ್ಕಿದೆಯೇ?

ಇ. ಬಿಕ್ಕಟ್ಟಿನ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡಿ) ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಯವರು) :

ಅ. ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಪ್ರದೇಶದಲ್ಲಿ ಬೆಂಗಳೂರು ಜಲಮಂಡಳಿಯಿಂದ ಕೊರೆದಿರುವ ಕೊಳವೆ ಬಾವಿಗಳನ್ನು ಜಲಮಂಡಳಿಯು ನಿಯಮಿತ ನಿರ್ವಹಣೆ ಮಾಡುತ್ತಿರುತ್ತದೆ.

ಆ. ಕೊಳವೆ ಬಾವಿ ನಿರ್ವಹಣೆ ಹಾಗೂ ದುರಸ್ಥಿಗಳನ್ನು ಬೆಂಗಳೂರು ಜಲಮಂಡಲಿ ನಿರ್ವಹಿಸುತ್ತಿದ್ದು ಇದಕ್ಕೆ ಪ್ರತಿ ವರ್ಷ ಸುಮಾರು ರೂ.200.00 ಲಕ್ಷಗಳನ್ನು ಮಂಡಳಿಯಿಂದ ಭರಿಸಲಾಗುತ್ತಿದೆ. ಇವುಗಳ ಬಗ್ಗೆ ಯಾವುದೇ ಬಿಕ್ಕಟ್ಟಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

1616 (2181) ಶ್ರೀ ಪಾಪರೆಡ್ಡಿ ಎ. (ರಾಯಚೂರು) ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ರಾಯಚೂರು ಮತಕ್ಷೇತ್ರದಲ್ಲಿ ಟ್ರಾಫಿಕ್ ಪೋಲೀಸ್ ಸ್ಟೇಷನ್‌ಗಳು ಎಷ್ಟಿವೆ?

ಆ. ನಗರದಲ್ಲಿ 3.5 ಲಕ್ಷದಿಂದ 4.0 ಲಕ್ಷ ಜನಸಂಖ್ಯೆ ಆಗಿದೆ. ದ್ವಿಚಕ್ರವಾಹನ ಲಾರಿಗಳು, ಟ್ರಾಕ್ಟರ್‌ಗಳು, ತೀವ್ರವಾಗಿ ಹೆಚ್ಚಾಗುತ್ತಿವೆ. ನಗರವೂ ವೇಗವಾಗಿ ಬೆಳೆಯುತ್ತಿದೆ. ಈಗ ಇರುವ ಟ್ರಾಫಿಕ್ ಬಹಳ ಕಂಜೆಸ್ಟೆಡ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ಈಗಿರುವ ಟ್ರಾಫಿಕ್ ಪೋಲೀಸ್ ಸ್ಟೇಷನ್‌ನಿಂದ ಕಂಟ್ರೋಲ್ ಮಾಡಲು ಸಾಧ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ?

ಈ. ಪ್ರತಿದಿನ ಅಪಘಾತಗಳು ಹೆಚ್ಚಾಗುತ್ತಿವೆ. ಮಕ್ಕಳು, ವೃದ್ಧರು ಅಪಘಾತಕ್ಕೆ ತುತ್ತಾಗುತ್ತಿರುವ ವರದಿಗಳಿವೆಯೆ?

ಉ. ಈ ನಿಟ್ಟಿನಲ್ಲಿ ಸರ್ಕಾರ ಸುಧಾರಣೆ ತರಲು ಕೈಗೊಂಡ ಕ್ರಮಗಳಾವುವು?

ಊ. ಟ್ರಾಫಿಕ್ ಪೋಲೀಸ್ ಸ್ಟೇಷನ್ ಹಾಗೂ ಪೋಲೀಸ್ ಸ್ಟೇಷನ್‌ಗಳನ್ನು ಹೆಚ್ಚು ಮಾಡಲು, ಈಗಿರುವ ಸಿಬ್ಬಂದಿ ಹೆಚ್ಚು ಮಾಡಲು ಹಾಗೂ ವಿಶೇಷ ತರಬೇತಿ ಹೊಂದಿರುವ ಪೋಲಿಸರನ್ನು ನೀಡಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು ?

ಋ. ಇನ್ನೊಂದು ಟ್ರಾಫಿಕ್ ಪೋಲಿಸ್ ಸ್ಟೇಷನ್ ಹಾಗೂ ಮಹಿಳಾ ಪೋಲಿಸ್ ಸ್ಟೇಷನ್ ರಾಯಚೂರಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು):

ಅ. ರಾಯಚೂರು ಮತಕ್ಷೇತ್ರದಲ್ಲಿ ಒಂದು ಟ್ರಾಫಿಕ್ ಪೋಲಿಸ್ ಠಾಣೆ ಇದೆ.

ಆ. ಬಂದಿದೆ.

ಇ. ಇಲ್ಲ.

ಈ. ಪ್ರತಿದಿನವು ಅಪಘಾತ ಸಂಭವಿಸಿದೆ ಮಕ್ಕಳು ಮತ್ತು ವೃದ್ಧರು ಅಪಘಾತಕ್ಕೆ ಈಡಾಗುತ್ತಿದ್ದಾರೆ ಎಂಬುವುದು ಸತ್ಯಕ್ಕೆ ದೂರವಾಗಿದ್ದು, ಈ ಬಗ್ಗೆ ವರದಿಗಳಿವೆ.

ಉ. ಈ ನಿಟ್ಟಿನಲ್ಲಿ ನಗರದ ಎಲ್ಲಾ ರಸ್ತೆಗಳನ್ನು ಡಾಂಬರೀಕರಣಗೊಳಿಸಲಾಗಿದೆ. ಅಪಘಾತಗಳನ್ನು ತಡೆಗಟ್ಟುವ ರಸ್ತೆ ಸುರಕ್ಷತಾ ಸಪ್ತಾಹಗಳನ್ನು ಹಮ್ಮಿಕೊಳ್ಳಲಾಗಿದೆ. ರಸ್ತೆಯ ಬದಿಯಲ್ಲಿ ಸೂಚನಾಫಲಕಗಳನ್ನು ತೂಗು ಹಾಕಿ ಚಾಲಕರಿಗೆ ಸೂಚನೆ ನೀಡಲಾಗುತ್ತಿದೆ. ಮತ್ತು ರಾಯಚೂರು ನಗರದಲ್ಲಿ ಸಂಚಾರ ನಿಯಂತ್ರಣಕ್ಕಾಗಿ ನಾಲ್ಕು ಸ್ಥಳಗಳಲ್ಲಿ ಸ್ವಯಂ ಚಾಲಿತ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.

ಊ. ಈ ಬಗ್ಗೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರಿಂದ ಪ್ರಸ್ತಾವನೆ ಬಂದಲ್ಲಿ ಸರ್ಕಾರ ಪರಿಶೀಲಿಸುವುದು.

ಋ. ಸದ್ಯಕ್ಕೆ ಅವಶ್ಯಕತೆ ಕಂಡುಬಂದಿಲ್ಲ.

1618(1829) ಶ್ರೀ ಪರಮೇಶ್ವರ ನಾಯ್ಕ್ ಪಿ.ಟಿ. (ಹರಪನಹಳ್ಳಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಹರಪನಹಳ್ಳಿ ಕೆ.ಎಸ್.ಆರ್. ಟಿ.ಸಿ.ಬಸ್ ಡಿಪೋ ನಿರ್ಮಾಣಕ್ಕಾಗಿ ಭೂಮಿಯನ್ನು ವಶಪಡಿಸಿಕೊಂಡಿದ್ದರೂ ಸಹ ಇದುವರೆವಿಗೂ ಕೆಲಸ ಪ್ರಾರಂಭಿಸದಿರಲು ಕಾರಣವೇನು;

ಆ. ಈ ನಿರ್ಮಾಣಕ್ಕಾಗಿ ಎಷ್ಟು ಹಣವನ್ನು ಸರ್ಕಾರ ನಿಗದಿಗೊಳಿಸಲಾಗಿದೆ ಹಾಗೂ ಖರ್ಚುಮಾಡಲಾಗಿದೆ;

ಇ. ಯಾವಾಗ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದ್ದು, ಆರ್ಥಿಕ ಪರಿಸ್ಥಿತಿಗನುಗುಣವಾಗಿ ಬಸ್ ಘಟಕ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

1619(1830)ಶ್ರೀ ಪರಮೇಶ್ವರ್ ನಾಯ್ಕ ಪಿ.ಟಿ. (ಹರಪನ ಹಳ್ಳಿ) ಮಾನ್ಯ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸಾರಿಗೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು ಯಾವುವು (ಹುದ್ದೆವಾರು ವಿವರಗಳನ್ನು ನೀಡುವುದು);

ಆ. ಆ ಹುದ್ದೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಯಾವುವು;

ಇ. ಈ ಹುದ್ದೆಗಳು ಎಂದಿನಿಂದ ಖಾಲಿ ಇವೆ;

ಈ. ಇದುವರೆವಿಗೂ ತುಂಬದಿರಲು ಕಾರಣವೇನು;

ಉ. ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ.

ಹುದ್ದೆ	ಖಾಲಿ ಹುದ್ದೆಗಳ ಸಂಖ್ಯೆ
ಪ್ರಾದೇಶಿಕ ಸಾರಿಗೆ ಅಧಿಕಾರಿ	03
ಸಹಾಯಕ ಕಾನೂನು ಅಧಿಕಾರಿ	02
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ	10
ತೆರಿಗೆ/ಖಜಾನಿ ಅಧಿಕಾರಿ	01
ಅಧೀಕ್ಷಕರು	17
ಹಿರಿಯ ಮೋಟಾರು ವಾಹನ ನಿರೀಕ್ಷಕರು	04
ಮೋಟಾರು ವಾಹನ ನಿರೀಕ್ಷಕರು	138
ಪ್ರಥಮ ದರ್ಜೆ ಸಹಾಯಕರು	59
ಶೀಘ್ರಲಿಪಿಗಾರರು	05
ದ್ವಿತೀಯ ದರ್ಜೆ ಸಹಾಯಕರು	30
ವಾಹನ ಚಾಲಕರು	13
ಬೆರಳಚ್ಚುಗಾರರು	26

ಗ್ರೂಪ್–ಡಿ 38

ಒಟ್ಟು 346

ಆ. ಸಾರಿಗೆ ಇಲಾಖೆಯಲ್ಲಿ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಖಾಲಿಯಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ

ಈ. ಉದ್ಭವಿಸುವುದಿಲ್ಲ

ಉ. ಉದ್ಭವಿಸುವುದಿಲ್ಲ

1621(1832) ಶ್ರೀ ಪರಮೇಶ್ವರ್ ನಾಯ್ಕ (ಹರಪನಹಳ್ಳಿ) ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಜನತೆಯ ಸಮಸ್ಯೆಗಳನ್ನು ಪರಿಹರಿಸಲು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿದ್ದ ಸರ್ಕಾರದ ಉನ್ನತ ಮಟ್ಟದ ಸಮಿತಿ ಈಗ ಅಸ್ಥಿತ್ವದಲ್ಲಿಲ್ಲದಿರುವುದು ನಿಜವಲ್ಲವೇ;

ಆ. ಹಾಗಿದ್ದಲ್ಲಿ, ಅದನ್ನು ಪುನರ್ ರಚಿಸಲು ಇರುವ ಅಡ್ಡಿ ಆತಂಕಗಳೇನು?

ಇ. ಈ ಸಮಿತಿಯನ್ನು ಪುನರ್ ಅಸ್ಥಿತ್ವಕ್ಕೆ ಯಾವಾಗ ತರಲಾಗುವುದು?

ಡಾ : ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ. ಹೌದು.

ಆ. ಸರ್ಕಾರದ ಮಟ್ಟದ ಉನ್ನತ ಸಮಿತಿಯು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಲು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳು 1995ರ 16 ನೇ ನಿಯಮದಲ್ಲಿ ಅವಕಾಶವಿರುತ್ತದೆ. ಈ ಸಮಿತಿಯಲ್ಲಿ ಗೃಹ, ಆರ್ಥಿಕ ಮತ್ತು ಸಮಾಜ ಕಲ್ಯಾಣ ಸಚಿವರು, ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಕ್ಕೆ ಸೇರಿದ ಚುನಾಯಿತ ಲೋಕಸಭೆ / ರಾಜ್ಯಸಭೆ/ ವಿಧಾನಸಭೆ/ ವಿಧಾನ ಪರಿಷತ್ತಿನ ಸದಸ್ಯರು ಹಾಗೂ ರಾಜ್ಯಮಟ್ಟದ ಇನ್ನಿತರ ಉನ್ನತ ಅಧಿಕಾರಿಗಳು ಸದಸ್ಯರಿರಬೇಕು.

ಸಮಿತಿಯನ್ನು ಪುನರ್ ರಚಿಸಲು ಕ್ರಮಕೈಗೊಳಲಾಗುತ್ತಿದೆ.

ಇ. ಸಮಿತಿಯನ್ನು ಶೀಘ್ರವಾಗಿ ಪುನರ್ ರಚಿಸಲು ಕ್ರಮಕೈಗೊಳ್ಳಲಾಗುತ್ತಿದೆ.

1622(2142) ಶ್ರೀ ಪಾಟೀಲ್ ಬಿ.ಆರ್. (ಆಳಂದ್) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಕರ್ನಾ ಟಕ ರಾಜ್ಯದಲ್ಲಿರುವ ದೊಡ್ಡ ನಗರ ಮಟ್ಟದ ಪಟ್ಟಣಗಳ ಸಂಖ್ಯೆ ಎಷ್ಟು; ಹಾಗೂ ಇವುಗಳಲ್ಲಿ ಪ್ಲಾಸ್ಟಿಕ್ ಸೇರಿದಂತೆ ಪ್ರತಿದಿನ ಶೇಖರವಾಗುವ ಘನತ್ಯಾಜ್ಯ ವಸ್ತುಗಳ ಪ್ರಮಾಣ ಎಷ್ಟು; ವಿವರ ನೀಡುವುದು ;

2. ಈ ಘನತ್ಯಾಜ್ಯ ವಸ್ತುಗಳಿಂದ ಕಾಂಪೋಸ್ಟ್ ಮತ್ತು ಇಂಧನ ಹಾಗೂ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ;

3. ಈ ಕಾರ್ಯವನ್ನು ಟೆಂಡರ್ ಮೂಲಕ ಖಾಸಗಿಯವರಿಗೆ ವಹಿಸುವುದಾಗಲಿ ಅಥವಾ ಪುರಸಭೆ, ಮಹಾನಗರ ಪಾಲಿಕೆಗಳಿಗೆ ಜವಾಬ್ದಾರಿ ವಹಿಸಲಾಗುವುದೇ?

4. ಕೇಂದ್ರ ಸರ್ಕಾರದ ಯಾವುದಾದರೂ ಸಂಸ್ಥೆಗಳೊಡನೆ ಈ ಬಗ್ಗೆ ಸಂಪರ್ಕಿಸಲಾಗಿದೆಯೇ; ಸಂಪರ್ಕಿಸದಿದ್ದರೆ ಅದರ ಪ್ರಗತಿ ಏನು?

ಶ್ರೀ ಎಸ್. ಆರ್.ಮೋರೆ(ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು);

1. ದೊಡ್ಡ ನಗರ ಸಂಖ್ಯೆ ; 47

ಪಟ್ಟಣಗಳ ಸಂಖ್ಯೆ : 179

ಪ್ರತಿ ದಿನ 3892.61 ಟನ್‌ಗಳಾಗಿರುತ್ತದೆ.

2. ಈ ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಕಂಪೋಸ್ಟ್ ಅಥವಾ ಮಿಥೇನ್ ಅನಿಲ ಉತ್ಪಾದಿಸುವ ಯೋಜನೆಯನ್ನು ಬೆಂಗಳೂರು ಹೊರತುಪಡಿಸಿ 8 ಪಟ್ಟಣಗಳಾದ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ತುಮಕೂರು, ಹುಬ್ಬಳ್ಳಿ–ಧಾರವಾಡ, ರಾಯಚೂರು, ಬೆಳಗಾವಿ ಹಾಗೂ ಗುಲ್ಬರ್ಗಾಗಳಲ್ಲಿ ಕೈಗೊಳ್ಳಲಾಗಿದೆ.

3. ಕಾರ್ಯವನ್ನು ನಿರ್ಮಾಣ, ನಿರ್ವಹಣೆ ಹಾಗೂ ವರ್ಗಾವಣೆ ಆಧಾರದ ಮೇಲೆ ಕೈಗೊಳ್ಳಲು ಮೇಲೆ ಗುರುತಿಸಿದ 8 ನಗರಗಳಲ್ಲಿ ಯೋಜಿಸಿದ್ದು, ಟೆಂಡರ್ ಕಾರ್ಯವನ್ನು ನಿರ್ವಹಿಸಲು iDeck (Infrastructure Development Corporation, (Karnataka) Limited) ಸಂಸ್ಥೆಗೆ ವಹಿಸಿಕೊಡಲಾಗಿದ್ದು, ಇದು ಪ್ರಗತಿಯಲ್ಲಿದೆ. ಈ ಯೋಜನೆಯ ಅನುಷ್ಠಾನದ ಅನುಭವ/ಯಶಸ್ಸನ್ನಾಧರಿಸಿ ಇತರ ನಗರ ಸ್ಥಳೀಯ ಸಂಸ್ಥೆಗಳಿಗೆ ವಿಸ್ತರಿಸಲಾಗುವುದು.

4. ಇಲ್ಲ.

1623(2143) ಶ್ರೀ ಪಾಟೀಲ್ ಎ.ಆರ್. (ಅಳಂದ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ರಾಜ್ಯ ಹೆದ್ದಾರಿಗಳ ಕನಿಷ್ಠ ಮತ್ತು ಗರಿಷ್ಟ ಧಾರಣ ಸಾಮರ್ಥ್ಯವೇನು;

ಆ. ಈ ಹೆದ್ದಾರಿಗಳಲ್ಲಿರುವ ಮೋರಿಗಳ ಧಾರಾಣ ಸಾಮರ್ಥ್ಯವೇನು;

ಇ. ಹೊಸಮಾದರಿಯ ಟ್ರೈಲರ್ ಹೊಂದಿದ ವಾಹನಗಳ ಸಂಚಾರಕ್ಕೆ ಎಷ್ಟು ಮಳಿಗೆ ರಸ್ತೆಗಳು ಯೋಗ್ಯವಾಗಿವೆ;

ಈ. ಮಿತಿಮೀರಿದ ಸರಕನ್ನು ಹೇರಿ ಸಂಚರಿಸುವ ವಾಹನಗಳಿಂದ ರಾಜ್ಯ ಹೆದ್ದಾರಿಗಳನ್ನು ಪದೇಪದೇ ದುರಸ್ಥಿ ಮಾಡುವ ಕ್ರಮದಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟ ಎಷ್ಟು;

ಉ. ಮಿತಿಮೀರಿ ಭಾರ ಹೇರಿಕೆಯ ವಾಹನಗಳನ್ನು ನಿಯಂತ್ರಿಸುವಲ್ಲಿ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳ ಪಾತ್ರವೇನು;

ಊ. ಗುಲ್ಬರ್ಗಾ ಜಿಲ್ಲೆ ರಿಬ್ಬನಪಲ್ಲಿ ವಾಗ್ದಾರಿ ರಾಜ್ಯ ಹೆದ್ದಾರಿಗಳಲ್ಲಿ ಸಿಮೆಂಟ್ ಕಾರ್ಖಾನೆಗಳಿಂದ ಅಪಾರ ಪ್ರಮಾಣದ ಬಾರಿ ಭಾರ ಹೊತ್ತು ರಸ್ತೆ ಹಾಳು ಮಾಡುವ ವಾಹನಗಳ ನಿಯಂತ್ರಣದಲ್ಲಿ ಸಾರಿಗೆ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸಿದ, ಸಿಮೆಂಟ್ ಸಾಗಾಣಿಕೆದಾರರೊಡನೆ ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ. ಬಂದಿದ್ದಲ್ಲಿ, ಅವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. 15.24 ಟನ್ ಮತ್ತು 20.00 ಟನ್.

ಆ. 20.00 ಟನ್‌ಗಳು

ಇ. ದ್ವಿಪಥ ಮತ್ತು ಅದಕ್ಕಿಂತಲೂ ಹೆಚ್ಚಿನ ಪಥದ ರಸ್ತೆಗಳು ಯೋಗ್ಯವಾಗಿವೆ.

ಈ. ನಿರ್ಧರಿಸಿರುವುದಿಲ್ಲ.

ಉ. ಮೋಟಾರು ವಾಹನ ಕಾಯ್ದೆಯ ಕಲಂ 194 ರ ಪ್ರಕಾರ ಕ್ರಮವಹಿಸುವುದು.

ಊ. ಇಲ್ಲ.

ಋ. ಉದ್ಭವಿಸುವುದಿಲ್ಲ.

1624(2144) ಶ್ರೀ ಪಾಟೀಲ್ ಪಿ. ಆರ್ (ಆಳಂದ್) ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಮಂತ್ರಿ ಮಂಡಲದಿಂದ ಶಾಸಕರವರೆಗೆ ಸರ್ಕಾರದ ನಡಾವಳಿಯಲ್ಲಿ ಶಿಷ್ಟಾಚಾರದ ಲೋಪ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಲವಾರು ಸಭೆ – ಸಮಾರಂಭಗಳಲ್ಲಿ ಮತ್ತು ಕಚೇರಿಗಳಲ್ಲಿ ಅಧಿಕಾರಿಗಳೊಂದಿಗೆ ಮಂತ್ರಿಗಳು ಮತ್ತು ಶಾಸಕರ ಜೊತೆಯಲ್ಲಿ ಒಂದೇ ವೇದಿಕೆಯ ಮೇಲೆ ಆಸೀನರಾಗುವುದು ಶಿಷ್ಟಾಚಾರವೇ ಅಥವಾ ಶಿಷ್ಟಾಚಾರದ ಅಪರಾರಚಾರವೇ;

ಇ. ಈ ಲೋಪ ಸರಿಪಡಿಸಲು ಹಾಗೂ ಜನಪ್ರತಿನಿಧಿಗಳಿಗೆ ಸಕಾರಿ ಕಚೇರಿಗಳಲ್ಲಿ ಸಿಗಬೇಕಾದ ಗೌರವ ಮತ್ತು ಮಾನ್ಯತೆಯನ್ನು ಕಾಪಾಡಲು ಜನ ಸಾರ್ವಭೌಮತ್ವವನ್ನು ಎತ್ತಿ ಹಿಡಿಯಲು ಸರ್ಕಾರವು ಪ್ರಸಕ್ತ ಶಿಷ್ಟಾಚಾರದ ಪ್ರತಿಯನ್ನು ಎಲ್ಲಾ ಇಲಾಖೆಗಳಿಗೂ ಕಳುಹಿಸಲು ಮತ್ತು ಇದನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶವಿಯ್ಯಲು ಇರುವ ಅಡ್ಡಿ ಆತಂಕಗಳೇನು;

ಈ. ಶಿಷ್ಟಾಚಾರವನ್ನು ಉಲ್ಲಂಘಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಒಂದಿದೆಯೇ ಹಾಗಿದ್ದಲ್ಲಿ ಶಿಷ್ಟಾಚಾರವನ್ನು ಉಲ್ಲಂಘಿಸಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರಂಸಿಂಗ್ (ಮಾನ್ಯ ಮುಖ್ಯ ಮಂತ್ರಿಯವರು):

ಅ. ಸರ್ಕಾರದ ವತಿಯಿಂದ ಏರ್ಪಡಿಸುವಂತಹ ಸಭೆ, ಸಮಾರಂಭಗಳಿಗೆ ಸಂಸತ್ ಸದಸ್ಯರು ಹಾಗೂ ಶಾಸಕರನ್ನು ಕಡ್ಡಾಯವಾಗಿ ಆಹ್ವಾನಿಸಬೇಕು. ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಬೇಕು ಮತ್ತು ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ ಹಾಗೂ ಇತರೆ ಸನ್ನಿವೇಶಗಳನ್ನು ಆಧರಿಸಿ ಸಚಿವರು ರಾಜ್ಯ ಸಂಸತ್ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಅಧ್ಯಕ್ಷರು ಮುಖ್ಯ ಅತಿಥಿ ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕೆಂದು ಹಲವಾರು ಸೂಚನೆಗಳನ್ನು ಸಮಾರಂಭ ಏರ್ಪಡಿಸುವಂತಹ ಅಧಿಕಾರಿಗಳಿಗೆ ನೀಡಲಾಗಿದೆ. ಅಲ್ಲದೆ ಸಚಿವರುಗಳು ಪಾಲ್ಗೊಳ್ಳುವಂತಹ ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸುವ ಪರಿಹಾರವನ್ನು ನಿಲ್ಲಿಸಬೇಕೆಂದು ಸಹ ಸೂಚನೆಗಳನ್ನು ನೀಡಲಾಗಿದೆ. ಆದಾಗ್ಯೂ, ಕೆಲವು ಲೋಪದೋಷಗಳು ಆಗಿವೆ ಎಂಬ ಆರೋಪಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಸಂಬಂಧ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ವರದಿಯನ್ನು ತರಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ. ಮೇಲೆ ಉಲ್ಲೇಖಿಸಿರುವ ಸೂಚನೆಗಳನ್ನು ಮತ್ತೊಮ್ಮೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಪುನರುಚ್ಚರಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

1626(1824) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಗದಗ ಜಿಲ್ಲೆಯ ಹುಲಿಗುಡ್ಡ ಏತ ನೀರಾವರಿ ಯೋಜನೆಗೆ ಖರ್ಚಾದ ಹಣವೆಷ್ಟು ; ಯೋಜನೆ ಪೂರ್ಣಗೊಳಿಸಲು ಪ್ರಸ್ತುತ ಬಜೆಟ್‌ನಲ್ಲಿ ಒದಗಿಸಲಾದ ಹಣ ಎಷ್ಟು;

ಆ. ಕಾಮಗಾರಿಯನ್ನು ಪೂರ್ಣಗೊಳಿಸಿ ರೈತರಿಗೆ ನೀರು ಒದಗಿಸಲು ಕಾಲಮಿತಿ ಏನಾದರೂ ಹಾಕಿಕೊಳ್ಳಲಾಗಿದೆಯೇ ;

ಇ. ಸದರಿ ಯೋಜನೆಯಿಂದ ಹಡಗಲಿ, ಮುಂಡರಗಿ, ಕೊಪ್ಪಳ ಮತ್ತು ಗದಗ ತಾಲ್ಲೂಕುಗಳಿಗೆ ತಾಲ್ಲಕುವಾರು ನೀರಾವರಿ ಆಗುವ ವಿಸ್ತೀರ್ಣವೆಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ. ಗದಗ ಜಿಲ್ಲೆಯ ಸಿಂಗಟಾಲೂರು (ಹುಲಿಗುಡ್ಡ) ಏತ ನೀರಾವರಿ ಯೋಜನೆಗೆ ಪ್ರಾರಂಭದಿಂದ ಡಿಸೆಂಬರ್–2004ರ ಅಂತ್ಯದವರೆಗೆ ಮಾಡಿರುವ ವೆಚ್ಚ ರೂ. 29.12 ಕೋಟಿಗಳು.

ಈ ಯೋಜನೆಗೆ ಕರ್ನಾಟಕ ನೀರಾವರಿ ನಿಗಮ ನಿಯಮಿತದ 2004–05ನೇ ಸಾಲಿನ ಕಾಮಗಾರಿಗಳ ಪಟ್ಟಿಯ ಪ್ರಕಾರ. ರೂ. 18.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

ಆ. ಹೌದು.

ಇ. ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿ ಮತ್ತು ಮಂಡಳಿಯು ಶಿಫಾರಸ್ಸು ಮಾಡಿರುವಂತೆ ಮೊದಲನೆಯ ಹಂತದಲ್ಲಿ 7.64 ಟಿ.ಎಂ.ಸಿ. ನೀರಿನ ಬಳಕೆಯೊಂದಿಗೆ ಯೋಜನೆಯಡಿ ತಾಲ್ಲೂಕುವಾರು ನೀರಾವರಿ ಕ್ಷೇತ್ರದ ಸೌಲಭ್ಯಕ್ಕೆ ಪ್ರಸ್ತಾವನೆಯು ತಯಾರಾಗಿದ್ದು, ವಿವರಗಳು ಕೆಳಕಂಡಂತಿರುತ್ತವೆ.

ತಾಲ್ಲೂಕು	ವಿಸ್ತೀರ್ಣ (ಎಕರೆಗಳಲ್ಲಿ ಭೌತಿಕ ಕ್ಷೇತ್ರ	ಬೆಳೆಕ್ಷೇತ್ರ
ಹಂತ–1		
ಹೂವಿನ ಹಡಗಲಿ	35791	41876
ಮುಂಡರಗಿ	28000	32760
ಕೊಪ್ಪಳ	12390	14496
ಒಟ್ಟು	76181	89132
ಹಂತ–2		
ಮುಂಡರಗಿ	4982	5830
ಗದಗ	39073	45715
ಒಟ್ಟು	44055	51545
ಹಂತ–1 ಮತ್ತು 2	120236	140677

1627(1825) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಡೋಣಿ ಗ್ರಾಮದ ಹತ್ತಿರ ಕಟ್ಟುತ್ತಿರುವ ಹದ್ದಿನಬಂಡಿ ಬಾಂದಾರದ ಯೋಜನೆ ಮಂಜೂರಾದ ಹಣವೆಷ್ಟು?

ಆ. ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗಿದೆ ವಿಳಂಬಕ್ಕೆ ಕಾರಣಗಳೇನು ಹಾಗೂ ಸದರಿ ಯೋಜನೆ ನಿಗದಿಪಡಿಸಿದ ದಿನಾಂಕವನ್ನು ತಿಳಿಸುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. ಯೋಜನೆಯ ಅಂದಾಜು ಮೊತ್ತ ರೂ. 29.95 ಲಕ್ಷ

ಆ. ಈ ಕಾಮಗಾರಿಯನ್ನು ದಿನಾಂಕ: 16.09.2000 ರಂದು ಪ್ರಾರಂಭಿಸಲಾಗಿದೆ. ದಿನಾಂಕ: 16.01.2001ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸ ಬೇಕಾಗಿತ್ತು. ಪ್ರಸ್ತುತ ಕಾಮಗಾರಿಯು ಭೌತಿಕವಾಗಿ ಶೇಕಡಾ 75 ರಷ್ಟು ಪೂರ್ಣಗೊಂಡಿರುತ್ತದೆ. ಅನುದಾನದ ಕೊರತೆಯಿಂದಾಗಿ ನಿಗದಿತ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ.

1628(1889) ಶ್ರೀ ಎಸ್.ಎಸ್.ಪಾಟೀಲ್ (ಮುಂಡರಗಿ) ಸನ್ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಗದಗ ತಾಲ್ಲೂಕು ಲಕ್ಕುಂಡಿ ಉತ್ಸವವನ್ನು ಎಂದು ಉದ್ಘಾಟಿಸಲಾಗುವುದು.

ಆ. -ಹಿಂದಿನಿಂದಲೂ ಲಕ್ಕುಂಡಿ ಉತ್ಸವದಲ್ಲಿ ಅತ್ತಿಮಬ್ಬೆ ಪ್ರಶಸ್ತಿಯನ್ನು ಈ ಭಾರಿಯು ನೀಡಲಾಗುವುದೆ;

ಇ. ಲಕ್ಕುಂಡಿ ಉತ್ಸವ ನಡೆಸುವ ಸಲುವಾಗಿ ಲಕ್ಕುಂಡಿ ಗ್ರಾಮದ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಅನುದಾನವನ್ನೇನಾದರು ಬಿಡುಗಡೆ ಮಾಡುವುದೇ?

ಶ್ರೀ ಧರಂಸಿಂಗ್ (ಸನ್ಮಾನ್ಯ ಮುಖ್ಯಮಂತ್ರಿಗಳು) :

ಅ. ಸುನಾಮಿ ಪ್ರಕೃತಿ ವಿಕೋಪದ ಹಿನ್ನೆಲೆಯಲ್ಲಿ ಸರ್ಕಾರವು ಜಿಲ್ಲಾ ಉತ್ಸವಗಳನ್ನು ಮುಂದೂಡಿರುವ ಪ್ರಯುಕ್ತ ಲಕ್ಕುಂಡಿ ಉತ್ಸವವನ್ನು ಮುಂದೂಡಲಾಗಿದೆ.

ಆ. ದಾನ ಚಿಂತಾಮಣಿ ಅತ್ತಿಮಬ್ಬೆ (ಪ್ರಶಸ್ತಿ) ಆಯ್ಕೆ ಹಾಗೂ ಲಕ್ಕುಂಡಿ ಉತ್ಸವ ಏಕಕಾಲದಲ್ಲಿ ನಡೆದಾಗ ಈ ಪ್ರಶಸ್ತಿಯನ್ನು ಲಕ್ಕುಂಡಿ ಉತ್ಸವದಲ್ಲಿ ಪ್ರಧಾನ ಮಾಡಲಾಗುವುದು. ಇಲ್ಲವಾದಲ್ಲಿ ಪ್ರಶಸ್ತಿಯನ್ನು ಪ್ರತ್ಯೇಕವಾಗಿ ಪ್ರಧಾನ ಮಾಡಲಾಗುತ್ತದೆ.

ಇ. ಸರ್ಕಾರದ ಮುಂದೆ ಪ್ರಸ್ತಾಪ ಇರುವುದಿಲ್ಲ.

1629(2017) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಕೃಷಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಜಲಾನಯನ ಇಲಾಖೆಯವರು ರೂಪಿಸಿರುವ ನೀರು ಬಳಕೆದಾರರ ಸಂಘಗಳೆಷ್ಟು;

ಆ. ಈ ಯೋಜನೆಯಡಿಯಲ್ಲಿ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಯಾವ ಯಾವ ಕಾಮಗಾರಿಗಳು ನಡೆಯುತ್ತಿವೆ (ವಿವರ ನೀಡುವುದು);

ಇ. ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಗೆ ಆರ್ಥಿಕ ವರ್ಷದಲ್ಲಿ ಜಲಾನಯನ ಯೋಜನೆಗಳಿಗೆ ಬಿಡುಗಡೆ ಮಾಡಿದ ಅನುದಾನಗಳೇನು?

ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :

ಅ. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ನೀರು ಬಳಕೆದಾರರ ಸಂಘಗಳನ್ನು ರಚಿಸಿರುವುದಿಲ್ಲ. ಆದರೆ ಇಲಾಖೆಯು ಜಲಾನಯನ ಸಂಘಗಳನ್ನು ರಚಿಸಿದ್ದು ಇಲಾಖೆಯ ಕಾರ್ಯಕ್ರಮಗಳನ್ನು ಜಲಾನಯನ ಸಂಘಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.

ಆ. 2004.05ನೇ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೈಗೊಳ್ಳಲಾಗುತ್ತಿರುವ ವಿವಿಧ ಜಲಾನಯನ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ಯೋಜನೆ	ಕಾಮಗಾರಿ	ಕಾಮಗಾರಿ ಸ್ಥಳ
ಎಸ್.ಜೆ.ಆರ್.ವೈ (ಜಿ.ಪಂ.)	ಕಿಂಡೆ ಅಣೆಕಟ್ಟು	ನಾರಾವಿಯ-1
	ತಡೆಗೋಡೆ	ಕುಕ್ಕಳ-1 ಶಿಶಿಲ ಗಿರಿಜನ
ಎಸ್. ಜೆ.ಆರ್.ವೈ (ತಾ.ಪಂ.)	ಕೆರೆ ಹೊಳೆತ್ತುವುದು	ಪಿತ್ತಲ ಗುರಿ-1
ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	ಕಿಂಡಿ ಅಣೆಕಟ್ಟು	ಕಾಯರ್ ತೋಡಿ-1 ಕಲ್ಲೇರಿ-1

		ಮಂಡೂರು–1
		ಪಾದಮೇಲು–1
		ಬಳಂಜ–1
		ಗೋಳಿದಡಿ–1
		ಕೊಯ್ಯೂರು–1
	ತಡೆ ಅಣೆ	ನಾಮಗುರಿ–1
	ಕೃಷಿ ಹೊಂಡ	ಕಾಯಿರ್‌ತೋಡಿ–4
		ಮಂಡೂರು–9
		ತೆಂಕಕಾರಂದೂರು–2
	ನಾಲಾರಿ ವೀಟ್ ಮೆಂಟ್	ಮಂಡೂರು–2
		ಸಂಪಿಗೆ ತ್ತಾಯ–1
		ಬಳಂಜ–1
ವಿಶೇಷ ಘಟಕ ಯೋಜನೆ	ತಡುಗೋಡೆ ರಚನೆ	ಅಳದಂಗಡಿ–1
ಗಿರಿಜನ ಉಪಯೋಜನೆ	ನಾಲಾರಿವಿಟ್ ಮೆಂಟ್	ಬಂಜಾರು ಮನೆ
ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ	ಕಿಂಡಿ ಅಣೆಕಟ್ಟು	ನಾರಾವಿ–2
	ಕೃಷಿಹೊಂಡ	ನಾರಾವಿ–16

2004–05ನೇ ಆರ್ಥಿಕ ವರ್ಷದಲ್ಲಿ ಬೆಳ್ತಂಗಡಿ ತಾಲ್ಲೂಕಿಗೆ ಜಲಾನಯನ ಅಭಿವೃದ್ಧಿ ಕಾಮಗಾರಿಗಳಿಗಾಗಿ ಒದಗಿಸಲಾಗಿರುವ ಅನುದಾನದ ವಿವರಗಳನ್ನು ಕೆಳಗೆ ನೀಡಲಾಗಿದೆ.

ಯೋಜನೆ	ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ)
ಎಸ್. ಜೆ. ಆರ್.ವೈ.(ಜಿ.ಪ)	2.600
ಎಸ್. ಜಿ.ಆರ್.ವೈ.(ತಾ.ಪ.)	0.30
ಪಶ್ಚಿಮಘಟ್ಟ ಅಭಿವೃದ್ಧಿ ಯೋಜನ	19.000
ವಿಶೇಷ ಘಟಕ ಯೋಜನೆ	0.426
ಗಿರಿಜನ ಉಪಯೋಜನೆ	0.568
ರಾಷ್ಟ್ರೀಯಜಲಾನಯನ ಅಭಿವೃದ್ಧಿ ಯೋಜನೆ	9.990
ಒಟ್ಟು	**32.884**

1630(2018) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಸಣ್ಣ ಮತ್ತು ದೊಡ್ಡ ಕೆರೆ ಜಲಾಶಯಗಳ ವಿವರಗಳೇನು; ಇವುಗಳ ಹೂಳೆತ್ತುವ ಕಾಮಗಾರಿಗಳನ್ನು ಯಾವಾಗ ಕೈಗೊಳ್ಳಲಾಗುವುದು;

ಆ. ಕೆರೆ ಜಲಾಶಯಗಳನ್ನು ಸುವ್ಯವಸ್ಥಿತ ಗೊಳಿಸುವ ಮೂಲಕ ಅಂತರ್ಜಲ ಮಟ್ಟವನ್ನು ವೃದ್ಧಿಸಲು ಸರ್ಕಾರ ಆದ್ಯಾತ ಕ್ರಮಗಳನ್ನು ಕೈಗೊಳ್ಳುವುದೇ;

ಇ. ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೈಗೊಳ್ಳಲಿರುವ ನೂತನ ಕಾಮಗಾರಿಗಳ ವಿವರಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ.ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಿರ್ವಹಿಸಲ್ಪಡುವ ಕೆರೆಗಳು ಇರುವುದಿಲ್ಲ. ಆದುದರಿಂದ, ಇವುಗಳ ಹೂಳೆತ್ತುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ.ಉದ್ಭವಿಸುವುದಿಲ್ಲ.

ಇ.ನಬಾರ್ಡ್ ಯೋಜನೆಯಡಿ ಬೆಳ್ತಂಗಡಿ ತಾಲ್ಲೂಕಿನ ಗಿಳಿಕಾಮು ಎಂಬಲ್ಲಿ ರೂ.50.00 ಲಕ್ಷ ಮೊತ್ತದಲ್ಲಿ ಫಲ್ಗುಣಿ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಾಣ ಹಾಗೂ ಶಿಶಿಲ ಗ್ರಾಮದಲ್ಲಿ ರೂ. 60.00 ಲಕ್ಷ ಮೊತ್ತದಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

1631(2125) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಬೆಳ್ತಂಗಡಿ ತಾಲ್ಲೂಕು ಕೇಂದ್ರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ಏನು ಕ್ರಮ ಕೈಗೊಂಡಿದೆ;

ಇ. ಸಂಸ್ಥೆಯು ರಾತ್ರಿ ಬಸ್ಸುಗಳಲ್ಲಿ ಚಾಲಕ ಮತ್ತು ನಿರ್ವಾಹಕ ಕೆಲಸವು ಒಬ್ಬರಿಂದಲೇ ನಡೆಸುತ್ತಿರುವುದರಿಂದ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಯ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರದ ಕ್ರಮಗಳೇನು;

ಈ. ಹೆಚ್ಚಿನ ಗ್ರಾಮೀಣ ಪ್ರದೇಶಗಳಿಗೆ ಸಂಸ್ಥೆಯ ವತಿಯಿಂದ ಸಾರಿಗೆ ಸಂಪರ್ಕವನ್ನು ಕಲ್ಪಿಸುವ ಸಲುವಾಗಿ ಸಂಸ್ಥೆಯು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ; ಅದರ ವಿವರಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ಹೌದು.

ಆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಾರಿಗೆಗಳು ಪ್ರಸ್ತುತ ಬೆಳ್ತಂಗಡಿಯ ಮುನಿಸಿಪಲ್ ಬಸ್ ನಿಲ್ದಾಣದ ಮುಖೇನ ಆಚರಣೆಗೊಳ್ಳುತ್ತಿವೆ.

ಇ. ಬಂದಿದೆ.

ನಿರ್ವಾಹಕರನ್ನು ನಿಯೋಜಿಸಿದೆ.

ಈ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ರಾಷ್ಟ್ರೀಕೃತವಾದ ವಲಯದಲ್ಲಿ ಬರುವ ಒಟ್ಟು 7,293 ಗ್ರಾಮಗಳ ಪೈಕಿ 6,743 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಿದೆ, ಅಂತೆಯೇ, ರಾಷ್ಟ್ರೀಕೃತವಾಗದ ವಲಯದಲ್ಲಿ ಬರುವ 11,789 ಗ್ರಾಮಗಳ ಪೈಕಿ, 5,158 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಿದೆ.

1632(2169) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಕೆಳಕಂಡ ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸಣ್ಣ ನೀರಾವರಿ ಇಲಾಖೆಯ ಜಲಸಂವರ್ಧನ ಯೋಜನೆ ಕಾರ್ಯಕ್ರಮಕ್ಕಾಗಿ 2002ನೇ ಸಾಲಿನಿಂದ ಇಲ್ಲಿಯವರೆಗೆ ವಿಶ್ವಬ್ಯಾಂಕಿನಿಂದ ಪಡೆದ ನೆರವಿನ ಮೊತ್ತವೆಷ್ಟು;

ಆ. ಈ ಯೋಜನೆಯಡಿಯಲ್ಲಿ ರಾಜ್ಯದ ಎಷ್ಟು ಕೆರೆಗಳ ಸಮಗ್ರ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ;

ಇ. ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಈ ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ರೂ.55.77 ಕೋಟಿ

ಆ. 2005 ಕೆರೆಗಳ ಸಮಗ್ರ ಅಭಿವೃದ್ಧಿಗೆ ಉದ್ದೇಶಿಸಿದ್ದು, ಈ ಪೈಕಿ 1379 ಕೆರೆಗಳ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿವೆ.

ಇ. ಸದರಿ ಜಿಲ್ಲೆಗಳು ಈ ಯೋಜನಾ ವ್ಯಾಪ್ತಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ.

1633(2180) ಶ್ರೀ ರಾಜೇಂದ್ರವರ್ಮ (ಹುಲಸೂರು) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಜಲಸಂವರ್ಧನ ಯೋಜನೆಯನ್ನು ಎಂದು ಪ್ರಾರಂಭಿಸಲಾಯಿತು;

ಆ. ಈ ಯೋಜನೆಯ ಉದ್ದೇಶಗಳೇನು;

ಇ. ಇದಕ್ಕಾಗಿ ಬಜೆಟ್‌ನಲ್ಲಿ ಮೀಸಲಾಗಿಟ್ಟಿರುವ ಹಣವೆಷ್ಟು;

ಈ. ಇಲ್ಲಿಯವರೆಗೆ ಖರ್ಚು ಮಾಡಲಾಗಿರುವ ಹಣವೆಷ್ಟು; (ಜಿಲ್ಲಾವಾರು ಅಂಕಿಅಂಶಗಳನ್ನು ಒದಗಿಸುವುದು);

ಉ. ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಹುಲಸೂರು ಮತಕ್ಷೇತ್ರದಲ್ಲಿ ಎಷ್ಟು ಕೆರೆಗಳ ಹೂಳನ್ನು ಇಲ್ಲಿಯವರೆಗೆ ಎತ್ತಿ ದುರಸ್ತಿ ಮಾಡಲಾಗಿದೆ (ಪೂರ್ಣ ವಿವರ ಒದಗಿಸುವುದು);

ಊ. ಈ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳ ಹೂಳೆತ್ತಲಾಗುವುದು ಹಾಗೂ ಇದಕ್ಕಾಗಿ ಖರ್ಚು ಮಾಡಲಿರುವ ಹಣವೆಷ್ಟು (ಗ್ರಾಮವಾರು ಅಂಕಿಅಂಶಗಳನ್ನು ಒದಗಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ದಿನಾಂಕ 08.07.2002 ರಂದು ಪ್ರಾರಂಭಿಸಲಾಯಿತು.

ಆ. ಸಮುದಾಯ ಆಧಾರಿತ ಸುಸ್ಥಿರ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಕೆರೆಗಳ ಪುನಶ್ಚೇತನ ಹಾಗೂ ನಿರ್ವಹಣಾ ಕಾರ್ಯವನ್ನು ಕೈಗೆತ್ತಿಕೊಂಡು ಗ್ರಾಮೀಣ ಜನರ ಬದುಕನ್ನು ಸುಧಾರಿಸುವ ಮೂಲಕ ಬಡತನವನ್ನು ಕಡಿಮೆಗೊಳಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಇ. ಈ ಯೋಜನೆಯು 2002ನೇ ಸಾಲಿನಿಂದ ಪ್ರಾರಂಭಗೊಂಡು 2008ನೇ ಇಸವಿಯಲ್ಲಿ ಅಂತ್ಯಗೊಳ್ಳಲಿದ್ದು, ಇಲ್ಲಿಯವರೆಗೆ ಬಜೆಟ್‌ನಲ್ಲಿ ಮೀಸಲಿಟ್ಟ ವರ್ಷವಾರು ವಿವರ ಈ ಕೆಳಕಂಡಂತಿದೆ.

ವರ್ಷ	ಬಜೆಟ್‌ನಲ್ಲಿ ಬಿಡುಗಡೆ ಮಾಡಿದ ಹಣ (ಕೋಟಿಗಳಲ್ಲಿ)
2002–03	29.64
2003–04	31.44
2004–05	96.53

ಈ. ಯೋಜನೆಯ ಪ್ರಾರಂಭಿಕ ಹಂತದಿಂದ ಇಲ್ಲಿಯವರೆಗೆ ಅಂದರೆ ಫೆಬ್ರವರಿ 2005ರವರೆಗೆ ಒಟ್ಟು ರೂ.75.21 ಕೋಟಿಗಳನ್ನು ಖರ್ಚು ಮಾಡಲಾಗಿದೆ. (ಜಿಲ್ಲಾವಾರು ಅಂಕಿಅಂಶಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಉ. ಬೀದರ್ ಜಿಲ್ಲೆಯಲ್ಲಿ ಐದು ಕೆರೆಗಳ ಹೂಳನ್ನು ತೆಗೆದು ದುರಸ್ತಿ ಮಾಡಲಾಗಿದ್ದು, ಇವುಗಳ ಪೈಕಿ ಹುಲಸೂರು ಮತಕ್ಷೇತ್ರದಲ್ಲಿ ಶಿಡೋಳ್ ಕೆರೆಯ ಹೂಳನ್ನು ಎತ್ತಿ ದುರಸ್ತಿ ಮಾಡಲಾಗಿದೆ. ಬೀದರ್ ಜಿಲ್ಲೆಯಲ್ಲಿ ಈ ಸಾಲಿಗೆ 14 ಕೆರೆಗಳನ್ನು ಆಯ್ಕೆ ಮಾಡಿದ್ದು, ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಮೂರು ಅಂದರೆ ಚಿನ್‌ಕೇರಾ ಜಲಸಂಗಿ ಮತ್ತು ಹುಣಸೇರಾ ಈ ಕೆರೆಗಳ ದುರಸ್ತಿ ಕಾರ್ಯದ ಬಗ್ಗೆ ಸಮಗ್ರ ಕೆರೆ ಅಭಿವೃದ್ಧಿ ಯೋಜನೆ (ITDP) ಗಳನ್ನು ತಯಾರಿಸಲಾಗುತ್ತಿದೆ. ಈ ಎಲ್ಲಾ 14 ಕೆರೆಗಳಿಗೆ ಸುಮಾರು ರೂ.200ಕೋಟಿ ಖರ್ಚಾಗುವ ನಿರೀಕ್ಷೆ ಇದೆ. ಗ್ರಾಮವಾರು ಅಂಕಿಅಂಶಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಅನುಬಂಧ–1

Payments	Bagalkot	Bidar	Bellary	Chitradurga	Chintamani	Haveri	Kolar	Koppal	Raichur	Tumkur	Total
Tank Restoration	270.49	153.01	66.98	169.75	889.29	236.59	805.62	21.58	325.03	1044.14	3982.48
Total	**270.49**	**153.01**	**66.98**	**169.75**	**889.29**	**236.59**	**805.62**	**21.58**	**325.03**	**1044.14**	**3982.48**

ಅನುಬಂಧ–2

ಕ್ರ.ಸಂ	ಕೆರೆಗಳ ಹೆಸರು	ಐಟಿಡಿಪಿಯ ಒಟ್ಟು ವೆಚ್ಚ	ಷರಾ
1	ಶಡೋಳ	13,75,332.00	ಕಾಮಗಾರಿ ಮುಗಿದಿದೆ
2	ಸೋಲಾಪುರ	13,15,797.00	ಕಾಮಗಾರಿ ಮುಗಿದಿದೆ
3	ಕಟ್ಟೆಳ್ಳಿ	9,16,732.00	ಕಾಮಗಾರಿ ಮುಗಿದಿದೆ
4	ಸಿಂಧನಾಕೇರಾ	14,57,505.00	ಕಾಮಗಾರಿ ಶೇ.90ರಷ್ಟು ಮುಗಿದಿದೆ.
5	ಮಲ್ಲಾಪುರ	12,10,315.00	ಕಾಮಗಾರಿ ಶೇ.90ರಷ್ಟು ಮುಗಿದಿದೆ.
6	ಅಣದೊರೆ	7,95,000.00	ಕಾಮಗಾರಿ ಪ್ರಗತಿಯಲ್ಲಿದೆ
7	ಮಂಗಲಗಿ	10,70,000.00	ಕಾಮಗಾರಿ ಪ್ರಗತಿಯಲ್ಲಿದೆ
8	ಬೆಳಕೇರಾ	11,05,000.00	ಕಾಮಗಾರಿ ಪ್ರಗತಿಯಲ್ಲಿದೆ
9	ಚಿಟ್ನಳ್ಳಿ	15.20,490.00	ಕಾಮಗಾರಿ ಪ್ರಾರಂಭವಾಗಿದೆ
10	ಔರಾದ್ (ಎಸ್)	21,97,760.00	ಕಾಮಗಾರಿ ಪ್ರಾರಂಭವಾಗಿದೆ
11	ಸಿಕಂದರಾಪುರ್	21,39,950.00	ಕಾಮಗಾರಿ ಪ್ರಾರಂಭವಾಗಿದೆ
12	ಚಿನ್‌ಕೇರಾ	15–20 ಲಕ್ಷಗಳು (ಅಂದಾಜು)	ITDPಗಳನ್ನು ತಯಾರಿಸಲಾಗುತ್ತಿದೆ
13	ಜಲಸಂಗಿ	15–20 ಲಕ್ಷಗಳು (ಅಂದಾಜು)	ITDP ಗಳನ್ನು ತಯಾರಿಸಲಾಗುತ್ತಿದೆ
14	ಹುಣಸೆಗೇರಾ	15–20 ಲಕ್ಷಗಳು (ಅಂದಾಜು)	ITDP ಗಳನ್ನು ತಯಾರಿಸಲಾಗುತ್ತಿದೆ

1634(2029) ಶ್ರೀ ರಾಜೇಂದ್ರನ್.ಎಸ್ (ಕೆ.ಜಿ.ಎಫ್) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಈವರೆಗೆ ಎಸ್.ಸಿ/ ಎಸ್.ಟಿ (ದೌರ್ಜನ್ಯ ತಡೆ) ಕಾಯ್ದೆ 1989 ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ;

ಆ. ದೋಷಾರೋಪಣಾ ಪತ್ರ ಸಲ್ಲಿಸಲ್ಪಟ್ಟ ಪ್ರಕರಣಗಳ ಸಂಖ್ಯೆ ;

ಇ. "ಬಿ" ಅಂತಿಮ ವರದಿ ಸಲ್ಲಿಸಲ್ಪಟ್ಟ ಪ್ರಕರಣಗಳ ಸಂಖ್ಯೆ ;

ಈ. "ಬಿ" ಅಂತಿಮ ವರದಿ ಸಲ್ಲಿಸಲು ಕಾರಣಗಳು (ಜಿಲ್ಲಾವಾರು ಮತ್ತು ನಗರವಾರು ಮಾಹಿತಿ);

ಉ. ಅಪರಾಧಿಗಳಿಗೆ ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ ;

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. 2001 : 1070
2002 : 1232
2003 : 1293
2004 : 1232
2005 : 201 (ಫೆಬ್ರವರಿ –2005 ರವರೆಗೆ)

ಆ. 2001 : 846
2002 : 948
2003 : 977
2004 : 1005
2005 : 28 (ಫೆಬ್ರವರಿ –2005 ರವರೆಗೆ)

ಇ. 2001 : 178
2002 : 249
2003 : 272
2004 : 175
2005 : 14 (ಫೆಬ್ರವರಿ –2005 ರವರೆಗೆ)

ಈ. ಪಟ್ಟಿ I ರಿಂದ V (ಕಾಲಂ 7)ರಲ್ಲಿ ಲಗತ್ತಿಸಲಾಗಿದೆ

ಉ. 2001 : 09
2002 : 07
2003 : –
2004 : –
2005 : –

Statement I

Statement showing the details of SCs/STs (PA) Act cases & their disposal with reasons for 'B' report.

2001

Sl.No.	City/District	No.of Cases booked	No.of Chargesheets filed	'B'reports submitted	Convicted cases	Reasons for B report
1	2	3	4	5	6	7
1	Bangalore City	65	26	38	-	Mistake of facts. Lack of evidence, Charges not proved
2	Mysore City	4	4	-	-	
3	Hubli-Dharwad	13	7	6	-	
4	Bangalore District	59	43	15	-	
5	Belgaum	39	39	-	-	
6	Bellary	93	90	1	-	
7	Bijapur	37	36	1	1	
8	Bidar	38	25	13	-	
9	Bagalkot	31	27	-	1	
10	Chikkamagalore	32	21	10	-	
11	Chitradurga	31	25	1	-	
12	Chamaraja nagar	34	25	9	-	
13	Dharwad	20	18	2	-	
14	Dakshina Kannada	8	6	2	3	Lack of evidence, Mistake of facts, charges not proved.
15	Davangere	33	28	2	1	

16	Gadag	5	5		-
17	Gulbarga	84	62	22	1
18	Haveri	25	24	-	-
19	Hassan	33	33	-	-
20	Kolar	57	41	15	-
21	KGF	1	1	-	-
22	Koppal	57	40	-	-
23	Kodagu	12	11	1	-
24	Mandya	36	29	6	-
25	Mysore District	24	24	-	-
26	Raichur	102	80	21	2
27	Shimoga	24	17	7	-
28	Tumkur	48	40	1	-
29	Udupi	15	11	3	-
30	Uttara Kannada	10	8	2	-
	Total	1070	846	178	9

Statement II

Statement showing the details of SCs/STs (PA) Act cases & their disposal with reasons for 'B' report.

2002

Sl.No.	City/District	No.of Cases booked	No.of Chargesheets filed	'B' reports submitted	Convicted cases	Reasons for B report
1	2	3	4	5	6	7
1	Bangalore City	84	34	45	-	Mistake of facts. Lack of
2	Mysore City	7	5	1	-	evidence, Charges not proved
3	Hubli-Dharwad	9	4	5	-	
4	Bangalore District	125	116	9	-	
5	Belgaum	24	23	-	-	
6	Bellary	116	67	45	-	
7	Bijapur	45	33	11	3	
8	Bidar	26	18	8	-	
9	Bagalkot	41	38	1	-	
10	Chikkamagalore	40	22	18	-	
11	Chitradurga	44	31	7	-	
12	Chamaraja nagar	18	18	-	-	
13	Dharwad	24	21	1	1	
14	Dakshina Kannada	21	11	8	2	Lack of evidence, Mistake of
15	Davangere	22	20	1	-	facts, charges not proved.

16	Gadag	7	5	2	-
17	Gulbarga	88	70	17	-
18	Haveri	17	9	5	-
19	Hassan	32	30	2	1
20	Kolar	57	54	3	-
21	KGF	9	5	4	-
22	Koppal	75	58	16	-
23	Kodagu	17	14	2	-
24	Mandya	48	44	4	-
25	Mysore District	29	20	9	-
26	Raichur	110	89	19	-
27	Shimoga	17	14	2	-
28	Tumkur	59	59	-	-
29	Udupi	17	12	4	-
30	Uttara Kannada	4	4	-	-
	Total	1232	948	249	7

Statement III

Statement showing the details of SCs/STs (PA) Act cases & their disposal with reasons for 'B' report. 2003

Sl.No.	City/District	No.of Cases booked	No.of Chargesheets liled	'B'reports submitted	Convicted cases	Reasons for B report
1	2	3	4	5	6	7
1	Bangalore City	108	36	62	-	Mistake of facts. Lack of
2	Mysore City	6	5	1	-	evidence, Charges not proved
3	Hubli-Dharwad	6	2	4	-	
4	Bangalore District	154	117	36	-	
5	Belgaum	21	14	7	-	
6	Bellary	92	63	28	-	
7	Bijapur	44	41	3	-	
8	Bidar	36	27	9	-	
9	Bagalkot	64	50	9	-	
10	Chikkamagalore	34	24	10	-	
11	Chitradurga	45	34	4	-	
12	Chamaraja nagar	11	8	3	-	
13	Dharwad	25	20	4	-	
14	Dakshina Kannada	32	20	8	-	Lack of evidence, Mistake of
15	Davangere	47	36	11	-	facts, charges not proved.

16	Gadag	15	13	1	-
17	Gulbarga	118	94	21	-
18	Haveri	13	13	-	-
19	Hassan	44	37	7	-
20	Kolar	89	80	9	-
21	KGF	15	10	5	-
22	Koppal	39	31	5	-
23	Kodagu	14	13	-	-
24	Mandya	45	40	3	-
25	Mysore District	21	21	-	-
26	Raichur	64	56	8	-
27	Shimoga	25	18	5	-
28	Tumkur	35	32	1	-
29	Udupi	28	20	8	-
30	Uttara Kannada	3	2	-	-
	Total	1293	977	272	0

Statement IV

Statement showing the details of SCs/STs (PA) Act cases & their disposal with reasons for 'B' report.

2004

Sl.No.	City/District	No.of Cases booked	No.of Chargesheets liled	'B'reports submitted	Convicted cases	Reasons for B report
1	2	3	4	5	6	7
1	Bangalore City	50	38	12	-	Mistake of facts. Lack of
2	Mysore City	7	7	-	-	evidence, Charges not proved
3	Hubli-Dharwad	6	4	2	-	
4	Bangalore District	133	92	41	-	
5	Belgaum	24	23	1	-	
6	Bellary	88	68	20	-	
7	Bijapur	57	48	5	-	
8	Bidar	35	30	5	-	
9	Bagalkot	56	40	10	-	
10	Chikkamagalore	47	39	8	-	
11	Chitradurga	45	41	4	-	
12	Chamaraja nagar	24	21	1	-	
13	Dharwad	20	9	6	-	
14	Dakshina Kannada	24	16	5	-	Lack of evidence, Mistake of
15	Davangere	34	28	5	-	facts, charges not proved.

16	Gadag	13	10	2	-
17	Gulbarga	125	114	11	-
18	Haveri	20	11	4	-
19	Hassan	43	40	3	-
20	Kolar	68	61	7	-
21	KGF	4	4	-	-
22	Koppal	45	42	3	-
23	Kodagu	20	17	3	-
24	Mandya	36	34	2	-
25	Mysore District	37	36	-	-
26	Raichur	49	49	-	-
27	Shimoga	33	23	6	-
28	Tumkur	55	29	6	-
29	Udupi	31	29	2	-
30	Uttara Kannada	3	2	1	-
	Total	1232	1005	175	0

Statement V

Statement showing the details of SCs/STs (PA) Act cases & their disposal with reasons for 'B' report. 2005 (Upto February)

Sl.No.	City/District	No.of Cases booked	No.of Chargesheets liled	'B'reports submitted	Convicted cases	Reasons for B report
1	2	3	4	5	6	7
1	Bangalore City	20	-	-	-	
2	Mysore City	Nil	Nil	Nil	Nil	
3	Hubli-Dharwad	Nil	Nil	Nil	Nil	
4	Bangalore District	34	3	5	-	
5	Belgaum	4	4	-	-	
6	Bellary	17	-	-	-	
7	Bijapur	8	2	1	-	
8	Bidar	3	-	-	-	
9	Bagalkot	11	1	-	-	
10	Chikkamagalore	8	-	-	-	
11	Chitradurga	2	-	-	-	
12	Chamaraja nagar	4	3	1	-	
13	Dharwad	1	1	-	-	
14	Dakshina Kannada	4	-	-	-	Lack of evidence, Mistake of
15	Davangere	9	1	2	-	facts, charges not proved.

16	Gadag	4	-	3	-
17	Gulbarga	16	4	-	-
18	Haveri	3	-	-	-
19	Hassan	3	3	-	-
20	Kolar	12	-	-	-
21	KGF	4	2	-	-
22	Koppal	5	1	-	-
23	Kodagu	4	1	-	-
24	Mandya	2	2	-	-
25	Mysore District	6	-	-	-
26	Raichur	4	-	-	-
27	Shimoga	5	-	2	-
28	Tumkur	4	-	-	-
29	Udupi	4	-	-	-
30	Uttara Kannada	Nil	Nil	Nil	Nil
	Total	201	28	14	0

1635 (2030) ಶ್ರೀ ರಾಜೇಂದ್ರನ್.ಎಸ್. (ಕೆ.ಜಿ.ಎಫ್) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಸಚಿವಾಲಯದ ಮಟ್ಟದಿಂದ ತಾಲ್ಲೂಕು ಮಟ್ಟದವರೆಗಿನ ಕಛೇರಿಗಳಲ್ಲಿ ಅಧಿಕಾರಿ : ನೌಕರರುಗಳು ತಮ್ಮ ತಮ್ಮ ಕಡತಗಳನ್ನು ನಿಯಮಗಳ ಪ್ರಕಾರ ತತಕ್ಷಣ ಇತ್ಯರ್ಥಗೊಳಿಸದೆ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಆ ನೀತಿಯನ್ನು ಅನುಸರಿಸುವುದರ ಮೂಲಕ ಸಾರ್ವಜನಿಕರಿಗೆ ನ್ಯಾಯ ದೊರಕಿಸಿಕೊಡದೆ ಕಿರುಕುಳ ಕೊಡುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಮತ್ತು ಕೈಗೊಳ್ಳಲಿರುವ ಕ್ರಮಗಳೇನು?

ಇ. ಇಲಾಖೆಗಳಲ್ಲಿನ ಕಡೆತಗಳ ಸ್ಥಿತಿಗತಿಗಳನ್ನು ಅರಿಯಲು ಮತ್ತು ತ್ವರಿತವಾಗಿ ವಿಲೇವಾರಿ ಮಾಡುವ ದೃಷ್ಟಿಯಿಂದ ವೆಬ್‌ಸೈಟ್‌ನ್ನು ತೆರೆಯಲಾಗುವುದೇ?

ಈ. ಕಾನೂನು ಸಚಿವರು ಈ ದಿಸೆಯಲ್ಲಿ ಈಗಾಗಲೇ ಕೈಗೊಂಡಿರುವ ಕ್ರಮದಂತೆ ಇತರೆ ಎಲ್ಲಾ ಸಚಿವರುಗಳೂ ಕೂಡ ಕ್ರಮ ಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಆದೇಶ ನೀಡುವರೆ?

ಉ. ಎಷ್ಟು ಸಮಯದೊಳಗಾಗಿ ರಾಜ್ಯ ಸರ್ಕಾರಿ ಇಲಾಖೆಗಳಲ್ಲಿರುವ ಎಲ್ಲಾ ಕಡತಗಳನ್ನು ವಲೇವಾರಿ ಮಾಡಲಾಗುವುದು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಲೇವಾರಿ ಆಗದೇ ಇರುವ ಕಡತಗಳ ವಲೇವಾರಿ ಬಗ್ಗೆ ಕಾಲಕಾಲಕ್ಕೆ ಸೂಚನೆಗಳನ್ನು : ಮಾರ್ಗದರ್ಶನಗಳನ್ನು ನೀಡಲಾಗುತ್ತಿದೆ.

ಆ. ಕಡತಗಳ ವಿಲೇವಾರಿಯನ್ನು ತೀವ್ರಗೊಳಿಸುವ ದಿಸೆಯಲ್ಲಿ ಇಲಾಖಾ ಮುಖ್ಯಸ್ಥರು ತಮ್ಮ ಅಧೀನಕ್ಕೆ ಒಳಪಡುವ ಕಛೇರಿಗಳನ್ನು ತಪಾಸಣೆ ನಡೆಸುವಂತೆ ಮತ್ತು ಲೋಪದೋಷಗಳು ಕಂಡು ಬಂದಲ್ಲಿ, ಪ್ರಕರಣಗಳ ಶೀಘ್ರ ವಿಲೇವಾರಿಗೆ ಕ್ರಮವನ್ನು ತೆಗೆದುಕೊಳ್ಳುವಂತೆಯೂ ಮತ್ತು ತಪ್ಪಿತಸ್ಥ ಅಧಿಕಾರಿ : ನೌಕರರ ವಿರುದ್ಧ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳುವಂತೆಯೂ ಈಗಾಗಲೇ ಸೂಚನೆಗಳನ್ನು ನೀಡಲಾಗಿದೆ. ಸಚಿವಾಲಯದ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು : ಕಾರ್ಯದರ್ಶಿಗಳಿಗೆ ಮುಖ್ಯ ಕಾರ್ಯದರ್ಶಿಯವರು ಅವರ ಇಲಾಖೆಗಳಲ್ಲಿನ ಬಾಕಿ ಇರುವ ಕಡತಗಳ ವಿಲೇವಾರಿಯನ್ನು ವಿಮರ್ಶಿಸಲು ನಿರ್ದಿಷ್ಟ ದಿನಾಂಕಗಳನ್ನು ನಿಗಧಿಪಡಿಸಿರುತ್ತಾರೆ.

ಇ. ಕಾನೂನು ಇಲಾಖೆಯ ವೆಬ್‌ಸೈಟ್ ಮಾತ್ರ ಆನ್‌ಲೈನ್‌ನಲ್ಲಿದೆ.

ಈ. ಅಂತರ್ಜಾಲ ಆಧಾರಿತ (ವೆಬ್‌ಬೇಸ್ಡ್) ಮಾಹಿತಿ ಪದ್ಧತಿಗಳನ್ನು ಎಲ್ಲಾ ಇಲಾಖೆಗಳೂ ಅಳವಡಿಸಿಕೊಳ್ಳುವ ಕಾರ್ಯಹಂತದಲ್ಲಿದೆ.

ಉ. ಕಡತ ವಲೇವಾರಿ ಮುಂದುವರೆಯುವ ಪ್ರಕ್ರಿಯೆಯಾಗಿದೆ. ಎಲ್ಲಾ ಕಡತಗಳನ್ನು ವಿಳಂಬವಿಲ್ಲದೇ ನಿರ್ವಹಿಸಲಾಗುತ್ತಿದೆ. ಹಳೆಯ ಕಡತಗಳನ್ನು ಮುಕ್ತಾಯಗೊಳಿಸುವುದರೊಂದಿಗೆ ಹೊಸ ಕಡತಗಳನ್ನು ತೆರೆಯುವುದರಿಂದ, ಕೆಲವು ಕಡತಗಳು ಯಾವಾಗಲೂ ವ್ಯಹರಿಸಲು ಬಾಕಿ ಉಳಿದೇ ಇರುತ್ತವೆ.

1636(2031) ಶ್ರೀ.ಎಸ್.ರಾಜೇಂದ್ರನ್ (ಕೆ.ಜಿ.ಎಫ್) ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಜಲಸಂಪನ್ಮೂಲ ಇಲಾಖೆಯಲ್ಲಿ ಬಹಳ ಸಮಯದಿಂದ ಖಾಲಿಯಿರುವ ಮುಖ್ಯ ಅಭಿಯಂತರರ ಹುದ್ದೆಗಳಿಗೆ ಖಾಯಂ ಆಗಿ ಮುಂಬಡ್ತಿ ನೀಡದಿರಲು ಕಾರಣಗಳೇನು

ಆ. ಹಾಗಿದ್ದಲ್ಲಿ ಅಂತಹ ಸದರಿ ಹುದ್ದೆಗಳಿಗೆ ಮುಂಬಡ್ತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ. ಎಷ್ಟು ಸಮಯದೊಳಗಾಗಿ ಈ ಎಲ್ಲಾ ಖಾಲಿ ಹುದ್ದೆಗಳನ್ನು ತುಂಬಲಾಗುವುದು?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು) :

ಅ. ಅಧೀಕ್ಷಕ ಅಭಿಯಂತರರ ವೃಂದದ ಜೇಷ್ಠತಾ ಪಟ್ಟಿ ವಿಷಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವುದರಿಂದ ಖಾಲಿಯಿರುವ ಮುಖ್ಯ ಅಭಿಯಂತರರ ಹುದ್ದೆಗಳಿಗೆ ಖಾಯಂ ಆಗಿ ಮುಂಬಡ್ತಿ ನೀಡಲು ಸಾಧ್ಯವಾಗಿರುವುದಿಲ್ಲ.

ಆ. ಹೌದು.

ಇ. ಸರ್ವೋಚ್ಚ ನ್ಯಾಯಾಲಯದ ಆದೇಶವಾದ 3 ತಿಂಗಳ ಒಳಗಾಗಿ.

1639 (2104) ಶ್ರೀ ರವಿ .ಸಿ.ಟಿ ಮಾನ್ಯ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ನವೀಕರಣ ಮತ್ತು ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆಯೇ;

2. ರೂಪಿಸಿದ್ದಲ್ಲಿ ಇದರ ಅಂದಾಜು ಮೊತ್ತ ಎಷ್ಟು ;

3. ಇದನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗಿದೆ. ಯಾವಾಗ ಮುಗಿಸಲಾಗುವುದು, ಹಾಲಿ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು):

1. ಸರ್ವೆ ಕೆಲಸ ಮತ್ತು ಯೋಜನೆಯ ವಿನ್ಯಾಸಗೊಳಿಸುವ ಕಾರ್ಯ ಮುಗಿದಿದ್ದು ವಿವರವಾದ ಅಂದಾಜನ್ನು ತಯಾರಿಸಲಾಗುತ್ತಿದೆ.

2. ಅಂದಾಜು ಪಟ್ಟಿ ಇನ್ನೂ ತಯಾರಾಗಿಲ್ಲ.

3. ಉದ್ಭವಿಸುವುದಿಲ್ಲ.

1641 (2137) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್.ಎಂ.ಎಲ್.ಎ (ಚಾಮರಾಜ) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಗರಪಾಲಿಕೆ ವಾರ್ಡ್‌ಗಳ ಪೈಕಿ ಯಾವ ಯಾವ ಪ್ರದೇಶಗಳಿಗೆ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆ.

ಆ. ಯಾವ ಯಾವ ಪ್ರದೇಶಗಳಿಗೆ ಕೊಳವೆ ಬಾವಿ ನೀರು ಸರಬರಾಜು ಮಾಡಲಾಗುತ್ತಿದೆ;

ಇ. ಯಾವ ಯಾವ ಪ್ರದೇಶಗಳಿಗೆ ಕಾವೇರಿ ಮತ್ತು ಕೊಳವೆ ಬಾವಿ ನೀರು ಸರಬರಾಜು ಮಾಡಲಾಗುತ್ತಿದೆ;

ಈ. ಮೇಲಿನಂತೆ ಕುಡಿಯುವ ನೀರನ್ನು ಯಾವ ಯಾವ ಪ್ರದೇಶಗಳಲ್ಲಿ ಯಾವ ಯಾವ ಸಮಯದಿಂದ ಯಾವ ಯಾವ ಸಮಯದವರೆಗೆ ಸರಬರಾಜು ಮಾಡಲಾಗುತ್ತಿದೆ.

ಉ. ಕಾವೇರಿ ನೀರು ಸರಬರಾಜು ಮಾಡಲು ಆಗದ ಪ್ರದೇಶಗಳಿಗೆ ಕಾವೇರಿ ನೀರು ಸರಬರಾಜು ಮಾಡಲು ಯಾವ ಯಾವ ಕ್ರಮ ವಹಿಸಲಾಗಿದೆ; (ನಗರ ಪಾಲಿಕೆ ವಾರ್ಡ್‌ವಾರು ವಿವರಗಳನ್ನು ಯೋಜನಾ ವೆಚ್ಚ ಸಹಿತವಾಗಿ ತಿಳಿಸುವುದು)?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು) :

ಅ. ಆ ಯಿಂದ ಈ ವರೆಗೆ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

